UNIVERSAL
LIBRARY

OU_200780

UNIVERSAL
LIBRARY

OUP—391 29-4-72—10,000.

OSMANIA UNIVERSITY LIBRARY

Call No. K 81.4 Accession No. K1147

Author M19N

Title

This book should be returned on or before the date last marked below.

ಶ್ರೀಮತ್ಕೃಷ್ಣರಾಜಾಷ್ಟಕಂ

ಶ್ರೀಮದ್ಭಾರತರಾಜ್ಯಶಾಸಕನೃಪಶ್ರೇಣ್ಯಾಂ ಪ್ರಭುರ್ಗಣ್ಯತೇ ।
ಯೋವಿಶ್ವೇಸ್ಸಹಜೈಶ್ಶುಭೈರ್ನೃಪಗುಣೈರಾದೌ ಮಹಾನಾಯಕಃ ॥
ಸೋಯಂಶ್ರೀಯದುವಂಶವಾರಿಧಿವಿಧುಃ ಸವ್ಯಕ್ಕಲಾಭೈರ್ಯುತಃ ।
ಜೀಯಾತ್ಕೃಷ್ಣನೃಪಾಲಕಃ ಕುವಲಯಾನಂದಂ ವಿತನ್ವಂಶ್ಚಿರಂ ॥೧॥

ಯದ್ವತ್ತಾಸ್ವವಶ್ರಿತರಕ್ಷಣಾಯ ಸಹತೇ ಮಾರ್ತಂಡತಾಪಂ ದ್ರುಮಃ ।
ತದ್ವಲ್ಲೋಕಹಿತಾಯ ನೀತಿನಿಪುಣಃ ಕ್ಲೇಶ್ನಾತಿ ಯಃ ಸಂತತಂ ॥
ಯೇನಾತ್ರ ಪ್ರಭುಪುಂಗವೇನ ಜನತಾ ಸೌಖ್ಯಂ ಪರಂ ಪ್ರಾಪಿತಾ ।
ಸೋಯಂ ಕೃಷ್ಣಮಹೀಪತಿರ್ವಿಜಯತೇ ಕಾರುಣ್ಯರತ್ನಾಕರಃ ॥೨॥

ಯೋ ರಾಜಯೋಗೀ ಪ್ರಕೃತಿಂ ಸ್ವಕೀಯಾಂ ।
ಜಾನಾತಿ ಸರ್ವಾಂ ಸುತನಿರ್ವಿಶೇಷಂ ॥
ರಾಜನ್ವತೀತಿ ಪ್ರಥಿತಾಭಿಧೇಯಾಂ ।
ಶ್ರೀಕೃಷ್ಣರಾಜಃ ಸ ಧರಾಮಕಾರ್ಷೀತ್ ॥೩॥

ಶ್ರೀಕೃಷ್ಣರಾಜ್ಯಂ ಕಥಯಂತಿ ತುಷ್ಟಾಃ ।
ಸರ್ವಾಃ ಪ್ರಜಾಸ್ತಾ ಇತಿ ರಾಮರಾಜ್ಯಂ ॥
ಚಿತ್ರಂ ಜಗತ್ಯಾಂ ಸುಖಪಾರವಶ್ಯಾಃ ।
ಕಿಂ ಜಾನತೇ ವಿಸ್ಮೃತವಸ್ತುಭೇದಂ ? ॥೪॥

ಶ್ರೀಕೃಷ್ಣರಾಜಸ್ಯ ಯಶೋ ವಿಶಾಲಂ ।
ಭೂಪಾಲನಾತ್ತಂ ಕಕುಬಂತರಾಣಿ ॥
ಸಂಪ್ರಾಪ್ಯ ನೂನಂ ಧವಲೀಕರೋತಿ ।
ಕಾಷ್ಠಾಂಗನಾನಾಂ ಮುಖಮಂಡಲಾನಿ ॥೫॥

ಯಸ್ಯ ಶ್ರೀಗುಣಿವೃಂದಶೇಖರಮಣೇಃ ಕೀರ್ತಿಪ್ರತಿಷ್ಠಾಂ ಪರಾಂ |
ಕೌಶಲ್ಯಾನ್ನಿ ಜರಾಜ್ಯಪಾಲನಜನಿಂ ಶ್ರುತ್ವಾ ಮಹತ್ಕೌತುಕಾಃ ||
ನಾನಾದೇಶನಿವಾಸಿನೋತ್ರ ಸುಮುದಂ ಸಂಪ್ರಾಪ್ನುವಂತ್ಯಾಗತಾಃ |
ಶ್ರೀಕೃಷ್ಣಾಖ್ಯನೃಪಸ್ಯ ತಸ್ಯ ಮಹಿಮಾ ಪಾರೇಗಿರಾಂ ರಾಜತೇ ||೬||

ಸ್ವಾಮಿನ್ ! ಮಂಗನೃಪಾಲಕೇನ ರಚಿತಂ ಶ್ರೀನೇಮಿತೀರ್ಥೇಶಿತುಃ |
ಯತ್ಪುಣ್ಯಂ ಚರಿತಂ ಸುವಿಸ್ತೃತಮಿದಂ ತತ್ ತೋಷಸಂದಾಯಕಂ ||
ಭಕ್ತ್ಯಾ ಪಾಣಿಪುಟೇರ್ಪಣಾಯ ಭವತಾ ದತ್ತಾ ಯಶಃ ಸಮ್ಮತಿಃ |
ಶ್ರೀಕೃಷ್ಣಕ್ಷ್ಮಾಪಾಲಕ ! ಪ್ರಮುದಿತಸ್ತೇಹಂ ಕೃತಜ್ಞಸ್ತತಃ ||೭||

ಸಾರ್ವಃ ಶ್ರೀಜಿನನೇವಿನಾಥಭಗವಾನಾರೋಗ್ಯದೀರ್ಘಾಯುಷೀ |
ದತ್ವಾ ತೇ ಮಹಿತ ಪ್ರಶಸ್ತಚರಿತ ಕ್ಷ್ಮಾಪಾಲಚೂಡಾಮಣೇ ! ||
ಮಿತ್ರಾಮಾತ್ಯಸಮಸ್ತಬಂಧುಸಹಿತಂ ಪಾಯಾದ್ಭವಂತಂ ಚಿರಾತ್ |
ಇತ್ಥಂ ಪಾರ್ಥಯತೇ ಪ್ರಭಕ್ತಿಯುತಶಾಂತೀಶಃ ಪ್ರಭೋ ! ಸಂತತಂ ||೮||

ರಾಜಭಕ್ತಿವಿನತ

ಎ. ಶಾಂತಿರಾಜಶಾಸ್ತ್ರೀ.

ಮೈಸೂರು ಸಂಸ್ಥಾನದ ಮಹಾಪ್ರಭುಗಳಾದ

ಕರ್ನಲ್ ಸರ್

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್

ಬಹಾದುರ್ ಜಿ. ಸಿ. ಎಸ್. ಐ, ಜಿ. ಬಿ. ಇ.

ಮಹಾಸ್ವಾಮಿಯವರಿಗೆ

ಅವರ ಅಪ್ಪಣೆಯನ್ನು ಪಡೆದು

ಈ ಗ್ರಂಥವು ಸಮರ್ಪಿಸಲ್ಪಟ್ಟಿದೆ

ಮುನ್ನುಡಿ

ಕ್ಷತ್ರಿಯರು ರಾಜ್ಯವನ್ನಾಳುತ್ತ ಪ್ರಜಾಪರಿಪಾಲನವನ್ನು ಮಾಡುವುದರಲ್ಲೇ ಅಲ್ಲದೆ ಸಾಹಿತ್ಯಸೇವೆಯಲ್ಲಿಯೂ ಅವರು ಹಿಂದಿಲ್ಲವೆಂಬುದಕ್ಕೆ ಶ್ರೀ ನೇಮಿಜಿನೇಶಸಂಗತಿಯೆಂಬ ಈ ಗ್ರಂಥವೂ ವಿಮರ್ಶಾತ್ಮಕವಾದ ಒಂದು ನಿದರ್ಶನವಾಗಿರುತ್ತದೆ. ಇದರ ಕರ್ತರು ಜೈನಕ್ಷತ್ರಿಯಕುಲೋತ್ಪನ್ನರಾದ ಶ್ರೀ ಮಂಗರಸಕವಿವರ್ಯರು. ಇವರ ವಿಸ್ತೃತವಾದ ಪರಿಚಯವನ್ನು ಮುಂದೆ "ಕವಿಪರಿಚಯ" ವೆಂಬ ಭಾಗದಲ್ಲಿ ಕೊಡಲಾಗುವುದು.

ಈ ಕವಿಯಿಂದಲೇ ರಚಿತವಾಗಿರುವ ಜಯನೃಪಕಾವ್ಯವನ್ನೂ ಸಮ್ಯಕ್ತ್ವ ಕೌಮುದಿಯನ್ನೂ ನಾನು ಓದಿ ನೋಡಿದಮೇಲೆ ನನಗೆ ಈ ಕವಿಯ ವಿಶೇಷವಿಷಯಗಳನ್ನು ತಿಳಿಯಬೇಕೆಂಬ ಕೌತುಕವು ಹುಟ್ಟಿತು. ಆಗ ನಾನು ನಮ್ಮ ಕಲ್ಲಹಳ್ಳಿ ಮೊದಲಾದ ಸ್ಥಳಗಳಲ್ಲಿನ್ದ ಹಳೆಯ ಗ್ರಂಥಗಳನ್ನೂ ಕಾಗದಪತ್ರಗಳನ್ನೂ ಹುಡುಕಿ ತೆಗೆದೆನು. ಆ ಕಾಗದ ಪತ್ರಗಳಿಂದ ನನಗೆ ಶ್ರೀ ಮಂಗರಸರ ವಿಶೇಷಪರಿಚಯವುಂಟಾಗಿ ಅವರಲ್ಲಿ ನನಗೆ ಆತ್ಮೀಯರೆಂಬ ಭಾವನೆಯಿಂದಿದ್ದ ಗೌರವಬುದ್ಧಿಯು ಇಮ್ಮಡಿಯಾಯ್ತು ಮತ್ತು ಕನ್ನಡಗ್ರಂಥಗಳನ್ನೋದಬೇಕೆಂಬ ಅಭಿಲಾಷೆಯು ಹೆಚ್ಚಿತು.

ನಮ್ಮ ಕಲ್ಲಹಳ್ಳಿಯಲ್ಲಿದ್ದ ಗ್ರಂಥಸಂಗ್ರಹದಲ್ಲಿ ಶ್ರೀ ಮಂಗರಸರ ನೇಮಿಜಿನೇಶಸಂಗತಿ—ಹರಿವಂಶಪುರಾಣವೆಂಬೀ ಗ್ರಂಥವು ನನಗೆ ದೊರೆತು ಇದನ್ನು ನಾನು ಓದಿನೋಡಲಾಗಿ ಇದು ಹಾಡುಗಬ್ಬವಾಗಿರುವುದರಿಂದಲೂ ಇದರ ಶೈಲಿಯು ಸುಲಲಿತವಾಗಿರುವುದರಿಂದಲೂ ವಿಷಯವು ಬಹು ಹೃದಯಂಗಮವಾಗಿರುವುದರಿಂದಲೂ ಕವಿಯ ಜೀವಕಳೆಯಂತಿರುವ ಕವಿಯು ಸಜೀವಸ್ಮಾರಕವಾಗಿರುವ ಈ ಗ್ರಂಥವನ್ನು ಪ್ರಕಾಶಕ್ಕೆ ತಂದು ಆ ಕವಿವರ್ಯರಲ್ಲಿ ನನಗಿರುವ ಪೂಜ್ಯಭಾವನೆಯನ್ನು ಸಾರ್ಥಕಗೊಳಿಸಬೇಕೆಂಬ ಇಚ್ಛೆಯು ಆಗಲೇ ಉಂಟಾಗಿದ್ದು ಅದು ಈಗ ನೆರವೇರಿದುದರಿಂದಲೂ ನಮ್ಮನ್ನಾಳುವ ಮಹಾಸ್ವಾಮಿಯವರು ಈ ಪುಸ್ತಕದ ಸಮರ್ಪಣೆಗೆ ತಮ್ಮ ಘನಸಮ್ಮತಿಯನ್ನು ದಯಪಾಲಿಸಿ ಅನುಗ್ರಹಿಸಿರುವುದರಿಂದಲೂ ನಾನು ಅತ್ಯಂತ ಸಂತೋಷವುಳ್ಳವನಾಗಿ ಮಹಾಸ್ವಾಮಿಯವರ ಅನು

ಗ್ರಹಕ್ಕಾಗಿಯೂ ಅವರಿಗಿರುವ ಕರ್ನಾಟಕ ಭಾಷಾಭಿಮಾನಕ್ಕಾಗಿಯೂ ಸಾಹಿತ್ಯ ಸೇವಕರಿಗೆ ಸಮಯೋಚಿತವಾಗಿ ಅವರು ದಯಪಾಲಿಸುತ್ತಿರುವ ಪ್ರೋತ್ಸಾಹಕ್ಕಾಗಿಯೂ ಮಹಾಸ್ವಾಮಿಯವರ ಚರಣಕಮಲಕ್ಕೆ ರಾಜಭಕ್ತಿಕೃತಜ್ಞತಾಪೂರ್ವಕವಾದ ಅನಂತವಂದನೆಗಳನ್ನರ್ಪಿಸುತ್ತೇನೆ.

ಈ ಗ್ರಂಥವನ್ನು ಅರಮನೆಯ ಆಸ್ಥಾನವಿದ್ವಾನ್ ನ್ಯಾಯತೀರ್ಥ ವೇ॥ ಎ. ಶಾಂತಿರಾಜಶಾಸ್ತ್ರಿಗಳವರು ಬಹುಶ್ರಮವಹಿಸಿ ಪರಿಶೋಧಿಸಿ, ಕಥಾಸಾರಾಂಶವನ್ನು ಬರೆದು, ಸುಂದರ್ಭೋಚಿತವಾದ ಭಾವಚಿತ್ರಗಳನ್ನೊದಗಿಸಿಕೊಂಡು ಸರ್ವಾಂಗಸುಂದರವಾಗಿ ತಮ್ಮ ಮುದ್ರಣಾಲಯದಲ್ಲಿ ಮುದ್ರಿಸಿಸಿರುವುದಕ್ಕಾಗಿಯೂ ಧಾರ್ಮಿಕೋದ್ಯೋಗದಲ್ಲಿ ನನಗೆ ಸಹಾಯಕರಾಗುತ್ತಿರುವುದಕ್ಕಾಗಿಯೂ ನಾನು ಅವರಿಗೆ ಒಹಳ ಕೃತಜ್ಞನಾಗಿರುತ್ತೇನೆ.

ಚತುರಂಗ ಬಸವರಾಜ ಅರಸು

ನಿವೇದನೆ

ಕನ್ನಡನಾಡಿನ ಜೈನಸಮಾಜದಲ್ಲಿ ಮಂಗರಸಕವಿಯ ಸಮ್ಯಕ್ತ್ವಕೌಮುದಿಯೂ ನೇಮಿಜಿನೇಶಸಂಗತಿಯೂ ಬಳಕೆಯಾಗಿರುವಷ್ಟು ಬೇರೆ ಕನ್ನಡಗ್ರಂಥಗಳು ಬಳಕೆಯಾಗಿರುವುದು ವಿರಳ. ಅದಕ್ಕೆ ಈ ಗ್ರಂಥಗಳ ಸುಲಭಶೈಲಿಯೂ ಕಥಾಮಾಧುರ್ಯವೂ ಕಾರಣಗಳು.

ನೇಮಿಜಿನೇಶಸಂಗತಿಯು ಬಹು ಪವಿತ್ರಗ್ರಂಥವೆಂದೂ ಇದರ ಪಠನಪಾಠನಾದಿಗಳಿಂದ ಶ್ರೇಯಸ್ಸಾಗುವುದೆಂದೂ ಜೈನರಲ್ಲಿ ರೂಢಮೂಲವಾದ ನಂಬಿಕೆಯಿದೆ. ಈ ಮಾತು ಕವಿಯು ಈ ಪದ್ಯದಿಂದಲೂ ವ್ಯಕ್ತವಾಗುವುದು:—

" ಇಂತಿದನೋದುವ ಪೇಳುವ ಕೇಳುವ | ಸಂತತಿ ಬರೆವ ಜನಗಳು ||
ಮುಂತೆ ಪಡೆವರಮರೇಂದ್ರಪದವ ಮುಕ್ತಿ | ಕಾಂತೆಗೆ ವಲ್ಲಭರಹರು || '

ಶುಭಶೋಭನಾದಿಗಳಲ್ಲಿ ಶುಭಾಶುಭನಿಮಿತ್ತಗಳನ್ನು ನೋಡುವುದಕ್ಕಾಗಿ ಈ ಗ್ರಂಥವನ್ನು ಪೂಜಿಸಿ ಚಿಕ್ಕಮಕ್ಕಳಿಂದ ಇದಕ್ಕೆ ಕಡ್ಡಿಯನ್ನು ಹಾಕಿಸಿ ಅಲ್ಲಿ ಬರುವ ಪ್ರಕರಣವನ್ನು ನೋಡಿ ಇಷ್ಟಾನಿಷ್ಟಫಲಗಳನ್ನು ನಿಶ್ಚಯಿಸಿಕೊಳ್ಳುವ ರೂಢಿಯೂ ಜೈನರಲ್ಲಿರುವುದು. ಇಂತಹ ಉದ್ಗ್ರಂಥವು ಈವರೆಗೆ ಮುದ್ರಣವಾಗದೆ ಇದರ ಪಠನಪಾಠನಾದಿಗಳು ಯಥೇಷ್ಟವಾಗಿ ನಡೆಯಲು ತಡೆಯಾಗಿದ್ದಿತು. ವೈಸೂರಿನ ರಾಜಬಂಧುಗಳಾದ **ಶ್ರೀಮಾನ್ ಕೆ. ಬಸವರಾಜ ಅರಸ್** ಎಂ. ಎ., ಎಲ್ ಎಲ್. ಬಿ. ಯವರು ಇದನ್ನು ಪರಿಶೋಧಿಸಿ ಮುದ್ರಣಮಾಡಿಸಬೇಕಾಗಿ ನನ್ನಲ್ಲಿ ಪ್ರಸ್ತಾವಿಸಲು ನಾನು ಇದರ ಮುದ್ರಣಕಾರ್ಯವನ್ನು ಕೈಗೊಂಡೆನು. ಈ ಗ್ರಂಥದ ಪ್ರಕಟನೆಗೆ ಶ್ರೀಮಾನ್ ಅರಸರವರ ಉತ್ಸಾಹ ಪ್ರೋತ್ಸಾಹಗಳೇ ಮೂಲಕಾರಣಗಳೆಂದು ಬೇರೆ ಹೇಳಬೇಕಾದುದಿಲ್ಲವು.

ಈ ದೊಡ್ಡಗ್ರಂಥವನ್ನು ನಾನೇ ಬರೆದು ಪರಿಶೋಧಿಸುವುದು ಕಷ್ಟಸಾಧ್ಯವೂ ದೀರ್ಘಕಾಲಸಾಧ್ಯವಾಗುವ ಕೆಲಸವೆಂದು ನಾನು ಯೋಚಿಸುತ್ತಿರಲು ಶಾಲಿಗ್ರಾಮದ ಶ್ರೀಮಾನ್ ಸರಾಫ್ ಪದ್ಮರಾಜಯ್ಯನವರು ಗ್ರಂಥವನ್ನು ತಾವು ಬರೆದು ಪರಿಶೋಧಿಸಿಕೊಡುವುದಾಗಿ ಹೇಳಿ ಅದರಂತೆ ತಮ್ಮ ಸ್ಥಳದಲ್ಲಿ ಐದಾರು ಪ್ರತಿ

ಗಳನ್ನಿಟ್ಟುಕೊಂಡು ಶ್ರಮವಹಿಸಿ ಬರೆದುಕೊಟ್ಟು ಉಪಕರಿಸಿದುದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಗ್ರಂಥವನ್ನು ಮುದ್ರಣಕ್ಕೆ ಕೊಡುವ ಮೊದಲು ನಾನೂ ನಾಲ್ಕು ಓಲೆಯ ಪ್ರತಿಗಳನ್ನಿಟ್ಟುಕೊಂಡು ಪರಿಶೋಧಿಸಿ ಮುದ್ರಿಸಿರುತ್ತೇನೆ. ಈ ನಾಲ್ಕು ಪ್ರತಿಗಳಲ್ಲಿ ಶ್ರೀ. ಬಸವರಾಜ ಅರಸರವರು ಕೊಟ್ಟ ಕಲ್ಲಹಳ್ಳಿಯ ಪ್ರತಿಯು ಬೇರೆ ಪ್ರತಿಗಳಿಗಿಂತ ಶುದ್ಧವಾಗಿದ್ದುದರಿಂದ ಪರಿಶೋಧನೆಗೆ ಹೆಚ್ಚು ಸಹಕಾರಿಯಾಯ್ತು.

ಮೂಲಗ್ರಂಥದಲ್ಲಿರುವ ಕಠಿಣಶಬ್ದಗಳಿಗೆ ಸುಲಭವಾದ ಟಿಪ್ಪಣಿಗಳನ್ನೂ ಪಾಠಾಂತರಗಳನ್ನೂ ಸ್ವಲ್ಪದೂರ ಕೊಡುತ್ತಹೋದೆನು. ಆದರೆ ಅದರಿಂದ ಗ್ರಂಥ ಪ್ರಕಾಶನಕ್ಕೆ ಹೆಚ್ಚುಕಾಲವು ಹಿಡಿಯುವುದೆಂದೂ ಅದರಿಂದ ಮಹತ್ಪ್ರಯೋಜನವಿಲ್ಲ ವೆಂದೂ ಬಗೆದು ಆ ಮೇಲೆ ಟಿಪ್ಪಣಿಗಳನ್ನೂ ಸಂದರ್ಭೋಚಿತವಾದ ಒಳ್ಳೆಯ ಪಾಠ ಗಳನ್ನುಳಿಸಿಕೊಂಡು ಇತರ ಪಾಠಾಂತರಗಳನ್ನೂ ಬಿಟ್ಟುಬಿಟ್ಟೆನು.

ಸಾಮಾನ್ಯವಾಗಿ ಪ್ರಚಾರದಲ್ಲಿ ರಳಕುಳಾಕ್ಷರಗಳ ಕಡೆಗೆ ಲಕ್ಷ್ಯವು ಕೊಡ ಲ್ಪಡದಿರುವುದರಿಂದ ಯಥಾಸ್ಥಾನಗಳಲ್ಲಿ ಆ ಅಕ್ಷರಗಳನ್ನು ಸಂಯೋಜಿಸಲಿಲ್ಲವೆಂದು ಸೂಚಿಸಲಿಚ್ಛಿಸುತ್ತೇನೆ.

ಈ ಮೂಲಗ್ರಂಥವು ಸುಲಭವಾದ ಸಾಂಗತ್ಯದಲ್ಲಿದ್ದು ಆಬಾಲಸ್ತ್ರೀಯರೂ ಓದುವುದಕ್ಕನುಕೂಲವಾಗಿರುವುದಾದರೂ ಇದು ಎಲ್ಲರಿಗೂ ಸುಲಭವಾಗಿ ಅರ್ಥ ವಾಗುವುದು ಸಾಧ್ಯವಲ್ಲವೆಂದು ಬಗೆದು ಸಂಕ್ಷೇಪವಾಗಿ ಇದರ ಕಥಾಸಾರಾಂಶ ವನ್ನು ಬರೆದು ಅದನ್ನೂ ಶ್ರೀ ಮಂಗರಸರ ಭಾವಚಿತ್ರವನ್ನೂ ಕಥೆಗೆ ಸಂಬಂಧಪಟ್ಟ ಚಿತ್ರಗಳನ್ನೂ ಕರ್ಣಾಟಕ ಭಾಷಾಮಾತೆಯ ಪೋಷಕರಾಗ ಶ್ರೀಮನ್ಮಹಾರಾಜ ರವರ, ಶ್ರೀಮದ್ಯುವರಾಜರವರ ಮತ್ತು ಶ್ರೀಮಜ್ಜಯಚಾಮರಾಜ ಒಡೆಯರವರ ಭಾವಚಿತ್ರಗಳನ್ನೂ ಸಂಯೋಜಿಸಿರುತ್ತೇನೆ.

ಈ ಸಂದರ್ಭದಲ್ಲಿ ಓಲೆಗರಿಯ ಪ್ರತಿಗಳನ್ನು ಕೊಟ್ಟು ಉಪಕರಿಸಿದ ಮಹಾ ಶಯರುಗಳಿಗೂ ಕೆಲವು ಭಾವಚಿತ್ರಗಳನ್ನು ಮುದ್ರಿಸಿ ಸಕಾಲದಲ್ಲಿ ಒದಗಿಸಿಕೊಟ್ಟ ಕಲ್ಕತ್ತ ಜಿನವಾಣೀಪ್ರಚಾರಕ ಕಾರ್ಯಾಲಯದವರಿಗೂ ನಾನು ಚಿರಕೃತಜ್ಞ ನಾಗಿದ್ದೇನೆ.

ಮೈಸೂರು,
೨೯—೮—೧೯೩೧.

ಎ. ಶಾಂತಿರಾಜಶಾಸ್ತ್ರೀ.

ಕವಿಪರಿಚಯ

ಮಂಗರಸ—ಈ ಹೆಸರಿನ ಕವಿಗಳು ಮೂರುಮಂದಿಗಳಿದ್ದರು. ಇಲ್ಲಿ ಮಂಗಶಬ್ದವು ಹಿತಾರ್ಥವಾಚಿಯಾಗಿದೆ. ಮಂಗಲಶಬ್ದವೂ ಮಂಗಂ ಲಾತೀತಿ ಮಂಗಲಮೆಂದು ಮಂಗಶಬ್ದದಿಂದಲೇ ನಿಷ್ಪನ್ನವಾಗಿರುವುದು.

ಮೊದಲನೆಯ ಮಂಗ+ಅರಸನು ಹೊಯ್ಸಳದೇಶದ ದೇವಳಿಗೆಯ ನಾಡಿನ ಮೂಗುಳಿಪುರದ ದೊರೆಯು. ಈತನು ಜೈನಕ್ಷತ್ರಿಯಕುಲೋತ್ಪನ್ನನೂ ಶ್ರೀ ಪೂಜ್ಯಪಾದಾಚಾರ್ಯರ ಶಿಷ್ಯನೂ ಆಗಿದ್ದನು. ಈತನು "ಧರೆಗನುರಾಗಮಂ ಹರಿಹರಕ್ಷಿತಿಪಂ ಕುಡುತಿರ್ಪನೊಲ್ಮೆಯಿಂ" ಎಂದು ಹೇಳಿರುವುದರಿಂದ ಈತನು ವಿಜಯನಗರದ ಹರಿಹರರಾಯನ ಸಮಕಾಲದವನೆಂದೂ ಹದಿನಾಲ್ಕನೆಯ ಶತಮಾನದ ಮಧ್ಯಕಾಲದಲ್ಲಿದ್ದವನೆಂದೂ ಗೊತ್ತಾಗುವುದು. ಈತನು ಖಗೇಂದ್ರಮಣಿದರ್ಪಣವೆಂಬ ವಿಷವೈದ್ಯಗ್ರಂಥವನ್ನು ಬರೆದಿರುತ್ತಾನೆ.

ಎರಡನೆಯ ಮಂಗರಸ—ಈತನು ಕಮ್ಮೆಕುಲದ ವಿಶ್ವಾಮಿತ್ರಗೋತ್ರದ ರೆಮ್ಮಾರ್ಯ ರಾಮರಸನ ಮಗನು. ಈತನು ಅಭಿನವಮಂಗರಸನೆಂದೂ ಕರೆಯಲ್ಪಡುತ್ತಿದ್ದನು. ಕ್ರಿಸ್ತಶಕ 1398ರಲ್ಲಿ ಮಂಗರಾಜನಿಘಂಟೆಂಬ ಗ್ರಂಥವನ್ನು ಬರೆದಿರುತ್ತಾನೆ.

ಮೂರನೆಯ ಮಂಗರಸ—ಈತನೇ ಪ್ರಕೃತಗ್ರಂಥದ ಕರ್ತನು. ಈತನು ಶಾಲಿವಾಹನ ಶಕ ೧೪೩೧ ರಲ್ಲಿ ಅಂದರೆ ಕ್ರಿಸ್ತಶಕ 1508 ರಲ್ಲಿ ಸಮ್ಯಕ್ತ್ವಕೌಮುದಿಯೆಂಬ ಗ್ರಂಥವನ್ನು ಬರೆದಿದ್ದಾನೆಂದು ಆ ಗ್ರಂಥದ ಕೊನೆಯ "ಸಾಸಿರದಮೇಲೆ ನಾನೂರಮೂವತ್ತೊಂದು | ಭಾಸುರಂಬಡೆದ ಶಕವರ್ಷದೆಸೆವಾಶ್ವಯುಜ | ಮಾಸ ದಾಶುಕ್ಲಪಕ್ಷದ ಪಾಡ್ಯಮುಂ ಮಂದವಾರದೊಳಗೀಕೃತಿಯ ನು ||" ಈ ಪದ್ಯಭಾಗದಿಂದ ಗೊತ್ತಾಗುವುದು. ಇದರಿಂದಲೂ ಮುಂದೆ ಹೇಳುವ ಬೇರೆ ಕೆಲವು ಆಧಾರಗಳಿಂದಲೂ ಈತನು ಹದಿನೈದನೆಯ ಶತಮಾನದ ಮಧ್ಯಭಾಗದಿಂದ ಹದಿನಾರನೆಯ ಶತಮಾನದ ಮಧ್ಯಭಾಗದವರೆಗೆ ಅಂದರೆ ಸುಮಾರು ನೂರುವರ್ಷಗಳವರೆಗೆ ಜೀವಿಸಿದ್ದನೆಂದು ಊಹೆಯಾಗುವುದು.

ಈ ಕವಿಯ ಸಂಶದರಸುಗಳೂ ಪಿರಿಯಪಟ್ಟಣದರಸುಗಳೂ ಕಳಲೆಯ ಅರಸುಗಳೂ ವಿಜಯನಗರದಿಂದ ಬಂದವರೆಂದು ಈ ಮೂರು ಮನೆತನದವರೂ ಕುರುವಂ

ಶದ ಭಾರದ್ವಾಜಗೋತ್ರದ ಅರಸುಗಳೆಂದೂ ಚಿಕ್ಕದೇವರಾಜ ಒಡೆಯರ ವಂಶಾವಳಿಯಿಂದಲೂ ಶಾಲಿವಾಹನ ಶಕ ೧೫೫೫ನೆಯ ಒಂದು ಶಾಸನದಿಂದಲೂ ಗೊತ್ತಾಗುವುದು. ಮಂಗರಸಕವಿಯು ಚಂಗಾಳ್ವರಾಜರ ಸಚಿವಕುಲದಲ್ಲಿ ಜನಿಸಿ ಹೊಯ್ಸಳ ದೇಶದ ಹೊಸವೃತ್ತಿಯ ನಾಡಿನ ಧಾತುಪುರದರಸನಾಗಿದ್ದನು. ಧಾತುಪುರವೆಂಬುದು ಕಲ್ಲಹಳ್ಳಿಗ್ರಾಮದ ಮೊದಲಿನ ಹೆಸರು. ಇದು ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಚಿಲಕುಂದದ ಹೋಬಳಿಗೆ ಸೇರಿದ ಒಂದು ಗ್ರಾಮವಾಗಿರುತ್ತದೆ. ಇಲ್ಲಿ ಮಂಗರಸರ ಮನೆತನವೂ ಅವರು ಕಟ್ಟಿಸಿರುವ ಶ್ರೀಚಂದ್ರನಾಥದೇವಾಲಯವೂ ಈಗಲೂ ಇವೆ. ಕವಿಯ ಪಿತಾಮಹನ ಹೆಸರು "ಚಂಗನಾಡರಸು ನಾಲ್ವತ್ತುನಾಯಕ ಗಜಸಿಂಗವೆಂದೆನಿಪ ಮಾಧವನು" ಮಾಧವರಾಯ; ತಂದೆಯ ಹೆಸರು ವಿಜಯೇಂದ್ರ. ಈ ವಿಷಯವನ್ನು ಕವಿಯು ಪೀಠಿಕಾಸಂಧಿಯಲ್ಲಿ ೩೮ರಿಂದ ೪೨ರವರೆಗಿನ ಪದ್ಯಗಳಲ್ಲಿಯೂ ಜಯನೃಪಕಾವ್ಯದ ಪ್ರಥಮ ಸಂಧಿಯ ೧೨-೧೩-೧೪-೧೫ನೆಯ ಪದ್ಯಗಳಲ್ಲಿಯೂ ಹೇಳಿರುತ್ತಾನೆ. ಸಮ್ಯಕ್ತ್ವಕೌಮುದಿಯಲ್ಲಿ 'ಕಲ್ಲಹಳ್ಳಿಯ ಮಹಾಪ್ರಭು ವಿಜಯಭೂವಧೂ | ವಲ್ಲಭನ ತನುಜಾತ ಜಿನಪದಾಂಬುಜ ಭೃಂಗ | ನೆಲ್ಲಕಲೆಯಲ್ಲಿ ಬಲ್ಲಿದನು ಮಂಗರಸನಾನೀಕೌಮುದೀಕಥೆಯನು || ಸಲ್ಲಲಿತ ಮಪ್ಪ ಸಕ್ಕದದಿ ಪೂರ್ವಾಚಾರ್ಯ | ರುಲ್ಲಸದಿ ಪೇಳ್ದುದಂ ಕರ್ನಾಟಕೃತಿಬಂಧ | ದಲ್ಲಿ ಯುದ್ದಂಡಷಟ್ಪದಮಾಗಿ ಒರೆದೆನಿಂತಿದನು ಭವ್ಯರು ಕೇಳ್ವುದು ||೪|| " ಎಂದು ಹೇಳಿರುವನು. ಈ ಕವಿಯ ವಿಷಯವಾಗಿ ನಮಗೆ ದೊರೆತಿರುವ ಮುಂದೆ ಹೇಳುವ ಶಾಸನದಿಂದಲೂ ಕಲ್ಲಹಳ್ಳಿಯಲ್ಲಿ ದೊರೆತಿರುವ ಹಳೆಯ ರಿಕಾರ್ಡಿನಿಂದಲೂ ಈತನ ವಿಶೇಷ ಪರಿಚಯವಾಗುವುದು.

ಶಾ ಸ ನ

(ಭಾರದ್ವಾಜ ಗೋತ್ರ, ತ್ರಿಭುವನಸೂತ್ರ, ಪದ್ಮಾಕರಪ್ರವರ, ಸೂರಿಕಾನುಯೋಗ ಶಾಖೆ, ಕುರುವಂಶ)

ನಮಸ್ಸಿದ್ಧೇಭ್ಯಃ

" ಕಂ|| ಶ್ರೀಕರಭಾಸುರಗುಣರ | ತ್ನಾಕರಲೋಕೈಕಮಥನಮಂಜುಳ....||

.....|.....ಗದಾಪಹಾರಿಜಿನೇಶಾ || ||

ವ || ಅಥ ಚಂಗಳದೇಶಾಧಿಪಂ ಮಾಧವರಾಜೇಂದ್ರಂ. ಅವಗೆ ಹೆಂಡತಿ ಕುಸುಮಾಜಮ್ಮಣ್ಣಿ. ಅವರ್ಗೆ ಕುಮಾರನುಂ ವಿಜಯರಾಜಂ. ಅವಂ (ಮಾಧವರಾಜ) ಪಿರಿರಾಜಪಟ್ಟಣವನಾಳ್ವಂ ಎಂಬತ್ತುಲಕ್ಷಸೀಮೆಗೆ ದೊರೆಯುಂ. ಅತಗೆ

ಕುದುರೆ ಕಾಲಾಳು ೧ ಲಕ್ಷ, ಗಜ ೫೦, ಖಜಾನೆ ೪೦ ಸಾವಿರ. ಅವಂ ರಣ ದಲ್ಲಿ ಪರಾಕ್ರಮವುಳ್ಳವಂ. ಅವಗೆ ಜೈನಗುರುಗಳೇ ಗುರುಗಳು. ಜೈನ ಆಚಾ ರವೇ ಆಚಾರ. ಜೈನಾಗಮವೇ ಆಗಮ. ಅವಂ ಘನಶೀಲೋಪವಾಸಮನು ಳ್ಳವಂ. ಯುವಕುಮಾರಕ ವಿಜಯರಾಜನುದಯಕಾಲದಲ್ಲಿ ಮಾಧವರಾಜೇಂದ್ರಂ ಪರರಾಯರಲ್ಲಿ ಯುದ್ಧಮಾಡಿ ಜಯಿಸಿದ ಕಾರಣದಿಂ ಈ ನಾಮ ನಲ್ವುದು. ಆತನುಂ (ವಿಜಯರಾಜ) ಸಮ್ಯಕ್ತ್ವಮನುಳ್ಳವಂ, ಸದಾ ಭಕ್ತಿಯುಳ್ಳವಂ, ಜೈನಾಗಮನಿಚಾರಮುಳ್ಳವಂ, ಅವಗೆ ಹೆಂಡತಿ ಪದ್ಮಾಜಮ್ಮಣ್ಣಿಯವರು, ಅತಿ ರೂಪವುಳ್ಳವರು, ಜಿನಭಕ್ತಿಯುಳ್ಳವರು, ಜೈನಾಗನುಪೌ ್ರಷಕಲಾಪಮುಳ್ಳವರು, ಅವರ್ಗೆ ಕುಮಾರರು ಮಂಗರಾಜ ಅರಸಂ. ಅವಂ ವೀರವಿಕ್ರಮಸುದಾರಗಂಭೀರ ಶೌರ್ಯಮನುಳ್ಳವಂ. ಅರುಹನ ಸನ್ನಿಧಿಭವ್ಯಾತ್ಮನುಂ, ಚೌಸಟ್ಟಿವಿದ್ಯೆಯುಳ್ಳವಂ, ಅವಗೆ ಕುಟುಂಬವಾದಂಥವರು ಕವಿಲಾಜಮ್ಮಣ್ಣಿಯವರು; ಜಿನಧರ್ಮಾಗನುಜಿನ ಭಕ್ತಿಪರಾಯಣರು. ಈ ಮಂಗರಾಜ ಅರಸನೆಸಗಿದ ಪುಸ್ತಕಂ ರಾಮನ ಸಂಗೀ ತಂ, ಹರಿವಂಶಪುರಾಣಂ, (ನೇಮಿಜಿನೇಶಸಂಗತಿ) ಪ್ರಭಾಜನಚರಿತಂ, ಒಯನೃ ಸಕಾವ್ಯಂ, ಸಮ್ಯಕ್ತ್ವಕೌಮುದಿಯುಂ. ಇವಂ ೮ ಲಕ್ಷ ಸೀಮೆಗೆ ಅಧಿಪತಿ ಯಾಗಿರ್ದಂ. ಆತಂಗೆ ಹೆಣ್ಣುಗಳಂ ತರುವಮನೆ ಕೊಡುವನುನೆ—ಚಾಮುಂಡಿ ರಾಯರ ಮನೆ. ಪಂಗಾಳರಾಯರ ಮನೆ. ಇವಂ ಕೋಟೆ ಕಲ್ಲಹಳ್ಳಿ, ಚಿಲು ಕುಂದ, ಮಲ್ಲರಾಜಪಟ್ಟಣ, ಕಟ್ಟಿಮಳಲುವಾಡಿ, ದೊಡ್ಡ ಹುಣಸೂರು, ಹನ ಗೂಡು, ಹೆಬ್ಬಿನಗುಪ್ಪೆ, ತಮ್ಮಡಿಹಳ್ಳಿ, ಪಾಲುಪಾರೆ ಈ ಮುಂತಾದ ಸ್ಥಳಗಳಲ್ಲಿ ಹೂಡ್ಯಗಳಂ ಕಟ್ಟಿಸಿದ್ದನು. ಕೆಲ್ಲ ಇಟ್ಟಿದ್ದನು. ಜಿನಜೈತ್ಯಾಲಯಗಳಂ ಕಟ್ಟಿಸಿ ಜಿನದೇವರ ಪ್ರತಿಷ್ಠೆಯಂ ಮಾಡಿಸಿ ಕೆರೆಗಳಂ ಕಟ್ಟಿಸಿ ಪೂಜೋತ್ಸವ ನಡಿಸುವ ಬಗ್ಗೆ ಸ್ವಾಸ್ತ್ಯವುದುವಟ್ಟು ಸಹ ಬಿಟ್ಟು ಯಂಬಗುಂಬವೆನ್ನುವಲ್ಲಿ ೨೪ ಅಂಕಣದ ದೇವ ಸ್ಥಾನಮಂ ಕಟ್ಟಿಸಿ ಪಾರ್ಶ್ವನಾಥಸ್ವಾಮಿಯವರಂ ಪದ್ಮಾವತಿಯಮ್ಮನವರಂ ಚೆನ್ನಿಗಬ್ರಹ್ಮರಾಯರಂ ಸ್ಥಾಪಿಸಿ ಪೂಜೋತ್ಸವಕ್ಕೆಬೇಕಾದ ಸಾಮಾಸು ವಂತಾ ದುವಂ ಕೊಡಿಸಿಕೊಟ್ಟು ಪಸ್ತೀಕು ಬೆದ್ದಲು ತೋಟ ಭೂಮಿಯನ್ನು ಬಿಟ್ಟು ಇದೆ ಎನ್ನುವ ಶಾಸನ."

ಮೇಲೆ ಹೇಳಿದ ಶಾಸನವು ಮಂಗರಸರ ವರೆಗಿನ ವಿಷಯವನ್ನು ಮಾತ್ರ ತಿಳಿ ಸುತ್ತದೆ. ಅಲ್ಲಿಂದೀಚೆಗೆ ಈವರೆಗೆ ಮಂಗರಸರ ವಂಶಪ್ಯಕ್ಷವು ಈ ಕೆಳಗೆ ವಿವರಿ ಸುವಂತೆ ಬೆಳೆದಿರುವುದೆಂದು ನಮಗೆ ದೊರೆತ ಅನೇಕ ಆಧಾರಗಳಿಂದ ಹೇಳುವೆವು

ಮಂಗರಸರ ಪುತ್ರ ಜಯರಾಜೇಶ್ವರ, ಅವರ ಪುತ್ರ ಜೆಲುವರಾಜ ಅರಸು, ಅವರ ಪುತ್ರ ಪದ್ಮರಾಜ ಅರಸು, ಅವರ ಪುತ್ರ ಅನಂತರಾಜ ಅರಸು, ಅವರ ಪುತ್ರ ದೇವರಾಜ ಅರಸು, ಅವರ ಪುತ್ರ ಕೆಂಪರಾಜ ಅರಸು, ಅವರು ತುಂಗದ ಪದ್ಮರಾಜ ಅರಸರ ಪುತ್ರಿ ಕೆಂಪಾಜಮ್ಮಣ್ಣಿಯವ್ವರನ್ನು ಮದುವೆಯಾಗಿದ್ದರು. ಅವರ ಪುತ್ರ ಚೆನ್ನರಾಜ ಅರಸು. ಅವರು ಚಂಗಾಳರಾಯರ ವಂಶಸ್ಥರಾದ ಆದಿರಾಜ ಅರಸರ ಪುತ್ರಿ ಕೆಂಪಾಜಮ್ಮಣ್ಣಿಯವರನ್ನು ಮದುವೆಯಾಗಿದ್ದರು. ಅವರಿಗೆ ಮಕ್ಕಳಾಗಲಿಲ್ಲ. ಅವರ ದತ್ತದ ಮಗ ದೇವರಾಜ ಅರಸು. ಅವರು ಪಾಳ್ಯದ ಚತುರಂಗ ಬಸವರಾಜ ಅರಸರ ಪುತ್ರಿ ಜೆಲುವಾಜಮ್ಮಣ್ಣಿಯವರನ್ನು ಮದುವೆಯಾಗಿದ್ದರು. ಅವರಿಗೆ ಪದ್ಮರಾಜ ಅರಸೆಂಬ ಒಬ್ಬಪುತ್ರನೂ ಅನಂತಮ್ಮಣ್ಣಿ, ಅಕ್ಕಾಜಮ್ಮಣ್ಣಿ, ಕೆಂಪಮ್ಮಣ್ಣಿ, ಮರುದೇವಮ್ಮಣ್ಣಿಯರೆಂಬ ನಾಲ್ಕುಮಂದಿ ಪುತ್ರಿಯರೂ ಜನಿಸಿದರು. ಈ ಪದ್ಮರಾಜ ಅರಸರಿಗೆ ಗೌರಮ್ಮಣ್ಣಿಯೆಂಬ ಅವರ ಧರ್ಮಪತ್ನಿಯಲ್ಲಿ ಮೂರುಮಂದಿ ಹೆಣ್ಣುಮಕ್ಕಳಾಗಿ ಪದ್ಮರಾಜ ಅರಸರವರು ೧೮೯೭ ನೆಯ ಇಸವಿಯಲ್ಲಿ ದೈವಾಧೀನರಾದರು. ಅವರ ಧರ್ಮಪತ್ನಿಯಾದ ಗೌರಮ್ಮಣ್ಣಿಯವರು ಈಗಲೂ ಕಲ್ಲಹಳ್ಳಿಯಲ್ಲಿ ಶ್ರೀ ಚಂದ್ರನಾಥ ದೇವಾಲಯದಲ್ಲಿ ಜೈನಬ್ರಾಹ್ಮಣರಿಂದ ದೇವಪೂಜೆಯನ್ನೂ ತಾವು ಹೋಸದ ವ್ರತ ಮೊದಲಾದ ಜೈನಾಚಾರ ಪದ್ಧತಿಗಳನ್ನೂ ದಕ್ಷತೆಯಿಂದ ಮನೆತನದ ಎಲ್ಲಾ ಆಡಳಿತವನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ಆಳುವ ಮಹಾಸ್ವಾಮಿಯವರು ಈ ಮನೆತನಕ್ಕೆ ರಾಜ ಬಂಧುವೇತನವನ್ನು ದಯಪಾಲಿಸುತ್ತಿದ್ದಾರೆ. ಇದು ಅವರ ಕೃಪಾದೃಷ್ಟಿಗೆ ಪಾತ್ರವಾಗಿದೆ.

ಮೇಲೆ ಹೇಳಿದ ಪದ್ಮರಾಜ ಅರಸರವರಿಗೆ ಗಂಡುಮಕ್ಕಳಿಲ್ಲದಿರಲು ಅವರ ಸಹೋದರಿಯಾದ ಅನಂತಮ್ಮಣ್ಣಿಯವರ ಪುತ್ರ ದೇವರಾಜ ಅರಸರ ಮಕ್ಕಳು ದೇವರಾಜ ಅರಸು, ಕೆಂಪರಾಜ ಅರಸು ಎಂಬಬ್ಬರಲ್ಲಿ ಜ್ಯೇಷ್ಠಪುತ್ರರಾದ ದೇವರಾಜ ಅರಸರನ್ನು ಕಲ್ಲಹಳ್ಳಿಯ ಮನೆತನಕ್ಕೆ ಗೌರಮ್ಮಣ್ಣಿಯವರು ದತ್ತುಸ್ವೀಕಾರ ಮಾಡಿರುವರು.

ಪದ್ಮರಾಜ ಅರಸರ ನಾಲ್ಕುಮಂದಿ ಸಹೋದರಿಯರಲ್ಲಿ ಕಿರಿಯರಾದ ಮರುದೇವಮ್ಮಣ್ಣಿಯವರು ಚತುರಂಗ ಮುದ್ರಾಜ ಅರಸರವರಿಗೆ ವಿವಾಹಿತರಾಗಿ ಅವರಿಗೆ ಇಬ್ಬರು ಗಂಡುಮಕ್ಕಳೂ ಇಬ್ಬರು ಹೆಮ್ಮಕ್ಕಳೂ ಇದ್ದಾರೆ. ಇವರಲ್ಲಿ ಜ್ಯೇಷ್ಠಪುತ್ರರೇ ಈ ಗ್ರಂಥದ ಪ್ರಕಾಶಕರು.

ಕವಿಯ ಗುಣವಿಚಾರ—ಮೇಲೆ ಹೇಳಿರುವಂತೆ ಕವಿಯ ವಂಶಪರಂಪರೆಯನ್ನು ವಿಚಾರಮಾಡಿ ಆತನು ಮಹಾ ಪವಿತ್ರ ಕ್ಷತ್ರಿಯಕುಲೋತ್ಪನ್ನನೆಂದು ತಿಳಿದ ಬಳಿಕ ನಾವು ಆತನ ಇತರ ಗುಣಗಳನ್ನು ವಿಮರ್ಶೆಮಾಡುವಲ್ಲಿ ಆತನು ತನ್ನ ವಂಶದಲ್ಲಿ ಅಗ್ರಗಣ್ಯನೂ ದಾನಶೂರನೂ ಮಹಾಸುಂದರನೂ ಸಕಲಕಲಾನಿಪುಣನೂ ಉತ್ತಮಗುಣವಂತನೂ ನಿಷ್ಕಳಂಕಚರಿತನೂ ಮಹಾದೈವಭಕ್ತನೂ ಧೀರ ವೀರನೂ ಆಗಿದ್ದನೆಂದು ಸ್ವಾಭಿಮಾನದಿಂದಲೂ ಆತ್ಮವಿಶ್ವಾಸದಿಂದಲೂ ಹೊರಟಿರುವ ಆತನ ಉದ್ಗಾರಗಳಿಂದಲೇ ಗೊತ್ತಾಗುವುದು. ಆತನಿಗೆ ತನ್ನ ಗುಣಗಳಲ್ಲಿ ತನಗೇ ನಂಬುಗೆಯಿಲ್ಲದಿರುತ್ತಿದ್ದರೆ ಹೀಗೆ ನಿರ್ಭೀಕವಾಗಿ ಉದ್ಗರಿಸುವ ಆ ಕೆಚ್ಚೆದೆಯು ಎಲ್ಲಿ ಬರುತ್ತಿತ್ತು? ಕವಿಯು ಗುಣಪ್ರಶಂಸೆಯನ್ನು ಇದೋ ಅವನ ಬಾಯಿಂದಲೇ ಕೇಳಿ:—

" ಇದು ವಿಬುಧಜನವಿನುತವಿದು ವಿಬುಧಜನವಿನತ |
ವಿದು ವಿದಿತಜಿನಸಮಯಶರಧಿಸಂಪೂರ್ಣೇಂದು |
ಸದಮಲಚರಿತ್ರಯದುವಂಶಭೂವರರ ಸಚಿವಾನ್ವಯಾಂಬರಹಂಸನು ||
ಮದನಸಮರೂಪಗುತ್ತಮಗುಣಕರಂಡಕಂ |
ಚದುರಮಂಗರಸನುಸಿರ್ದೀಕೌಮುದೀಕಥೆಯೊ |
ಳೊದವಿರಂಜಿಸಿದುದುದಿತೋದಯನ ಸಮ್ಯಕ್ತ್ವದೇಳ್ಗೆಪನ್ನೆರಡು ಸಂಧಿ ||೪೬|| "
(ಸಮ್ಯಕ್ತ್ವಕೌಮುದೀ ೧೨ ಸಂ)

" ಕಲ್ಲಹಳ್ಳಿಯ ಮಹಾಪ್ರಭುವಿಜಯಭೂವಧೂ |
ವಲ್ಲಭನ ತನುಜಾತ ಜಿನಪದಾಂಬುಜಭೃಂಗ- |
ನೆಲ್ಲಕಲೆಯಲ್ಲಿ ಬಲ್ಲಿದನು ಮಂಗರಸನಾನೀಕೌಮುದೀಕಥೆಯನು || '
(ಸಮ್ಯಕ್ತ್ವಕೌಮುದೀ ೧ ಸಂ. ೯ ಪ.)

' ಅತಿಚತುರಕಲಾಪರಿಪೂರ್ಣಂ ಸದಮಲಚರಿತಂ ಪ್ರಭುರಾಜಂ '
(ಜಯನೃಪಕಾವ್ಯದ ೧೬ ನೆಯ ಸಂಧಿಯ ಕೊನೆಯ ಪದ್ಯದ ಭಾಗ)

" ಆ ಪ್ರಭುವಿನ ತನುಜಾತನು ಸಕಲಕ | ಲಾಸುಪ್ರವೀಣನುತ್ತಮನು ||
ಅಪ್ರತಿಮನು ಗುಣಾನ್ವಿತ ಕಾಮಧೇನುವೆ | ಮಪ್ಪದನೆನೆ ರಂಜಿಸುವನು ||೪೧||
ಜಿನಪದಭಕ್ತಮಂಗರಸನಾನೀಮುಕ್ತಿ | ವನಿತೇಶನೇಮಿತೀರ್ಥಕರ || '
(ನೇಮಿಜಿನೇಶಸಂಗತಿ ೧ ಆ.)

" ಶ್ರೀರಮಣೀಪತಿಭಕ್ತವಿಜಯಭೂ | ನಾರೀಧವನಗ್ರಸೂನು ||

ಧೀರಮಂಗರಸನೊರೆದನಾಸುಮತ | ಕ್ಷೀರವಾರಾಶಿಚಂದ್ರಮನು ||೭೨|| "

(ನೇಮಿಜಿನೇಶಸಂಗತಿ ೩೫ ಆ)

ಕವಿಯ ಮತ, ಸಂಪ್ರದಾಯ—ವೈಸೂರು ಸಂಸ್ಥಾನದಲ್ಲಿರುವ ಅರಸು ಮನೆತನಗಳಲ್ಲಿ ಕೆಲವು ಜೈನಸಂಪ್ರದಾಯದ ಮನೆತನಗಳೂ ಕೆಲವು ವೈಷ್ಣವಸಂಪ್ರದಾಯದ ಮನೆತನಗಳೂ ಕೆಲವು ಶೈವಸಂಪ್ರದಾಯದ ಮನೆತನಗಳೂ ಇರುತ್ತವೆ. ಹೀಗೆ ಸಂಪ್ರದಾಯ ಅಥವಾ ಮತದ ದೃಷ್ಟಿಯಿಂದ ಇಲ್ಲಿಯ ಅರಸರುಗಳಲ್ಲಿ ಮೂರುಭೇದಗಳಿದ್ದರೂ ಆಚಾರವ್ಯವಹಾರಗಳಲ್ಲಿ ಭೇದವಿಲ್ಲ ಅಂದರೆ ಮೂರುಸಂಪ್ರದಾಯದವರಲ್ಲಿಯೂ ಒಂದೇ ವಿಧವಾದ ಶುದ್ಧಾಚಾರವ್ಯವಹಾರಗಳಿರುವುದರಿಂದ ಪರಸ್ಪರ ಭೋಜನ ಪ್ರತಿಭೋಜನವೂ ಹೆಣ್ಣುಕೊಡುವ ಮತ್ತು ತರುವ ಪದ್ಧತಿಯೂ ನಡೆಯುತ್ತಲೇ ಬಂದಿರುವಂತೆ ತಿಳಿದುಬರುತ್ತದೆ. ಇದಕ್ಕೆ ಜೈನಪುರಾಣಗಳಲ್ಲಿಯೂ ಅವಕಾಶವಿರುವುದೆಂದು ಅನೇಕ ಉದಾಹರಣೆಗಳಿಂದ ತಿಳಿದುಬರುತ್ತದೆ. ಅಲ್ಲದೆ ಉತ್ತರಹಿಂದುಸ್ಥಾನದಲ್ಲಿ ಅಗ್ರವಾಲಜಾತಿಯ ಜೈನವೈಷ್ಣವರಲ್ಲಿಯೂ ವೈನಾಡಿನ ಜೈನವೈಷ್ಣವರಲ್ಲಿಯೂ ಈ ಪದ್ಧತಿಯು ಈಗಲೂ ಪ್ರಚಾರದಲ್ಲಿದೆ. ಇದರಿಂದ ಸೂಚಿತವಾಗುವ ಪರಮತಸಹಿಷ್ಣುತೆಯೂ ಹೃದಯವೈಶಾಲ್ಯವೂ ಸ್ತುತ್ಯವಾಗಿವೆ.

ಆಚಾರವ್ಯವಹಾರವು ಶರೀರದ ಧರ್ಮ. ಮತವು ಆತ್ಮನ ಧರ್ಮ. ಇವುಗಳು ಬಾಹ್ಯಾಭ್ಯಂತರಧರ್ಮಗಳೆಂದಾದರೂ ಹೇಳಬಹುದು. ಭೋಜನಪ್ರತಿಭೋಜನವ್ಯವಹಾರವೂ ಹೆಣ್ಣುಕೊಡುವ ತರುವ ವ್ಯವಹಾರವೂ ಬಾಹ್ಯಧರ್ಮಗಳಾಗಿರುತ್ತವೆ. ಇವು ಸಂಪ್ರದಾಯಗಳ ಆಚಾರವ್ಯವಹಾರಗಳಲ್ಲಿ ಪರಸ್ಪರ ವ್ಯತ್ಯಾಸವಿದ್ದರೆ ಮಾತ್ರ ಕೂಡಿಬಾರವು.

ಮತವೆಂಬುದು ಆಯಾ ವ್ಯಕ್ತಿನಿಷ್ಠವಾದ ಮನೋಧರ್ಮ. ಅದು ಶ್ರದ್ಧಾರೂಪವಾದುದು. ಅದು ಬದಲಾಗಲೂ ಬಹುದು. ಅದನ್ನು ನಾವು ಪ್ರಧಾನವಾಗಿಟ್ಟುಕೊಂಡು ವಿಚಾರಮಾಡುವುದಾದರೆ ಒಂದು ಕುಟುಂಬದಲ್ಲಿಯೂ ಬೇರೆ ಬೇರೆ ಮತಾವಲಂಬಿಗಳಿರಬಹುದು. ಅಂದಮೇಲೆ ಅತೀಂದ್ರಿಯವಾದ ಈ ಮತ-ಧರ್ಮದ ಸಾಜಾತ್ಯವನ್ನು ವ್ಯವಹಾರಧರ್ಮಕ್ಕೆ ಗಂಟುಹಾಕಲು ಹೇಗೆ ಸಾಧ್ಯ? ಆದರೆ ಬಾಹ್ಯಾಚರಣೆಯನ್ನು ನೋಡಿ ಅಭ್ಯಂತರಧರ್ಮದ ಅಸ್ತಿತ್ವವನ್ನು ಊಹಿಸಿ ಅದಕ್ಕೂ ವ್ಯವಹಾರಧರ್ಮಕ್ಕೂ ಗಂಟುಹಾಕುವ ಪದ್ಧತಿಯೇ ಪ್ರಚಾರದಲ್ಲಿರುವುದು. ಇದು ಗಾಢ್ಯವಾದುದೆಂದರೆ ಮೇಲೆ ಹೇಳಿದ ಮತ್ತೊಂದು ಪದ್ಧತಿಯು ಅಗಾಢ್ಯವೆಂದು ತಿಳಿಯತಕ್ಕುದಲ್ಲವು.

ಮೇಲೆ ಹೇಳಿದ ಮೂರು ಪುಸ್ತಕಗಳಲ್ಲಿ ಮಂಗರಸಕವಿಯು ಜೈನಮತಕ್ಕೆ ಸೇರಿದವನು. ಈ ಮಾತು, ಆತನು ಕಟ್ಟಿಸಿರುವ ಜಿನದೇವಾಲಯಗಳಿಂದಲೂ ಆತನು ಜೈನಪುರಾಣಕಥೆಗಳ ಆವಲಂಬನದಿಂದಲೇ ಬರೆದಿರುವ ಗ್ರಂಥಗಳಿಂದಲೂ ಆ ಗ್ರಂಥಗಳ ಆದಿಯಲ್ಲಿರುವ ಜಿನದೇವ ಗುರು ಕವಿಪರಂಪರೆಯ ಸ್ತುತಿಗಳಿಂದಲೂ ತನ್ನ ಗ್ರಂಥಗಳಲ್ಲಿ ಪ್ರಯೋಗಿಸಿರುವ "ಜಿನಪದಸರಸಿಜಮದಮುಧುಕರನು" "ಜಿನಮತಕ್ಷೀರವಾರಾಶಿಚಂದ್ರಮನು" "ಜಿನಪದವಾರಿಜಮಧುಕರ" "ತ್ರಿಭುವನಪತಿಜಿನಭಕ್ತಂ" "ಜಿನಪತಿಪದಸರಸಿಜಮದಮುಧುಕರಂ" "ಜಿನಪದಾಂಬುಜಭೃಂಗಂ" ಇತ್ಯಾದಿ ಜಿನಭಕ್ತ್ಯತಿಶಯದ್ಯೋತಕ ಪದಗಳಿಂದಲೂ ಸಿದ್ಧವಾಗುವುದರಿಂದ ಇದಕ್ಕೆ ಬೇರೆ ಪ್ರಮಾಣಗಳು ಬೇಕಾಗಿಯೇ ಇಲ್ಲವು

ಜೈನಮತ—ಜಿನನೆಂದರೆ ಕರ್ಮಶತ್ರುವನ್ನು ಜಯಿಸಿ ಲೋಕವ್ಯಾಪಾರವನ್ನೂ ಪತ್ನೀಪುತ್ರಾದಿಮೋಹವನ್ನೂ ರಾಗದ್ವೇಷಾದಿವಿಕಾರಭಾವಗಳನ್ನೂ ಕ್ಷುಧಾ ತೃಷಾ ಜನ್ಮ ಜರಾ ಮರಣಾದಿದೋಷಗಳನ್ನೂ ದೂರಮಾಡಿ ಪವಿತ್ರಪರಮಾತ್ಮನಾಗಿರುವವನೆಂದೂ ನಿರ್ವಿಕಾರಚಿದಾನಂದೈಕಸ್ವರೂಪನೆಂದೂ ಅವನೇ ದೇವರೆಂದೂ ಅಂತಹ ಜಿನನ ಸಂಬಂಧವಾದ ಅಭಿಪ್ರಾಯವೇ ಜೈನಮತವೆಂದೂ ಇದು ಅಹಿಂಸಾಪ್ರಧಾನವಾಗಿಯೂ ಸಕಲದೋಷದುರ್ವ್ಯಾಪಾರದೂರವಾಗಿಯೂ ಇರುವ ಪವಿತ್ರಮತವೆಂದೂ ಜೈನರ ಹೇಳಿಕೆ ಮತ್ತು ನಂಬಿಕೆ. ಈ ಮತವೇ ಕವಿಗೆ ಅಭೀಷ್ಟವಾದ ಮತವಾಗಿದ್ದಿತು. ಅಲ್ಲದೆ ಚಂಗನಾಡಿನಲ್ಲಿರುವ ಎಲ್ಲಾ ಜೈನದೇವಾಲಯಗಳೂ ಅಂಜನಗಿರಿಯ ಜೈನದೇವಾಲಯವೂ ಹನಸೋಗೆಯ ತ್ರಿಕೂಟಜೈತ್ಯಾಲಯ ವೊದಲಾದ ಆ ಪ್ರಾಂತದಲ್ಲಿರುವ ಜೈನದೇವಾಲಯಗಳೂ ಬಿಳಿಕೆರೆಯ ಸಮೀಪದ ಗುಡ್ಡದಲ್ಲಿರುವ ಗೋಮಟೇಶ್ವರವಿಗ್ರಹವೂ ಜೈನರಾಜವಂಶೀಯರುಗಳಿಂದಲೇ ನಿರ್ಮಿತವಾದುವೆಂದೂ ಈ ಪ್ರಾಂತದಲ್ಲಿದ್ದ ಕ್ಷತ್ರಿಯರೆಲ್ಲರೂ ಜೈನಮತೀಯರೇ ಆಗಿದ್ದರೆಂದೂ ಶಾಸನಗಳಿಂದಲೂ ದೇವಸ್ಥಾನಗಳಲ್ಲಿ ರಾಣಿವಾಸದವರು ಪ್ರದಕ್ಷಿಣೆ ಬರುವುದಕ್ಕಾಗಿ ಮಾಡಿಸಿರುವ ಒಳಭಾಗದ ಪೌಳಿಗಳಿಂದಲೂ ಇತರ ಕುರುಹುಗಳಿಂದಲೂ ಗೊತ್ತಾಗುವುದು. ಈಗಲೂ ಕವಿಯ ವಂಶೀಯರೇ ಅಲ್ಲದೆ ಬೇರೆ ಕೆಲವು ಅರಸುಮನೆತನದವರೂ ಈಮತದ ಶ್ರದ್ಧಾಳುಗಳಾಗಿದ್ದಾರೆ. ಹೀಗೆ ಹಿಂದೆ ಅನೇಕ ರಾಜಾಧಿರಾಜರುಗಳನ್ನು ತನ್ನ ಮಡಲಲಿಟ್ಟುಕೊಂಡು ವೈಭವ ಶಿಖರದಲ್ಲಿ ರಾರಾಜಿಸುತ್ತಿದ್ದ ಮತವಿದು ಇಂದು ಅವನತಿಪಥಗಾಮಿಯಾಗಿರುತ್ತದೆಂದರೆ ಉನ್ನತ್ಯವನತಿಗಳು ಕಾಲಚಕ್ರಕ್ಕಧೀನಗಳಲ್ಲವೇ ?

ಈ ಕವಿಯ ಗ್ರಂಥಗಳು—ಮೇಲೆ ಕೊಟ್ಟಿರುವ ಶಾಸನದಲ್ಲಿ ಈತನ ೧. ಹರಿವಂಶಪುರಾಣ, ೨. ರಾಮನ ಸಂಗೀತ, ೩. ಪ್ರಭಂಜನಚರಿತ, ೪. ಶ್ರೀಪಾಲಚರಿತ, ೫, ಜಯನೃಪಕಾವ್ಯ, ೬. ಸಮ್ಯಕ್ತ್ವಕೌಮುದಿ ಈ ಗ್ರಂಥಗಳು ಉಲ್ಲೇಖಿಸಲ್ಪಟ್ಟಿರುತ್ತವೆ. ಮುದ್ರಿತವಾಗಿರುವ ಜಯನೃಪಕಾವ್ಯದ "ಪೀಠಿಕೆ" ಯಿಂದಲೂ ಸಮ್ಯಕ್ತ್ವಕೌಮುದಿಯ ಮುನ್ನುಡಿಯಿಂದಲೂ ಈತನು "ಪಾಕಶಾಸ್ತ್ರ" ವೆಂಬ ಇನ್ನೊಂದು ಗ್ರಂಥವನ್ನೂ ಬರೆದಿರುವಂತೆ ತಿಳಿದುಬರುತ್ತದೆ. ಹೀಗೆ ಏಳು ಗ್ರಂಥಗಳ ನಾಮನಿರ್ದೇಶವಾಗಿರುವುದಾದರೂ ಅವುಗಳಲ್ಲಿ ಇದುವರೆಗೆ ಮುದ್ರಿತವಾಗಿ ಪ್ರಚಾರಕ್ಕೆ ಬಂದಿರುವ ಗ್ರಂಥಗಳೇನೋ ಜಯನೃಪಕಾವ್ಯ ಸಮ್ಯಕ್ತ್ವಕೌಮುದಿಗಳಿರಡೇ. ಮೂರನೆಯದಿದು ನೇಮಿಜಿನೇಶಸಂಗತಿ.

ಮೇಲೆ ಹೇಳಿದ ಏಳು ಗ್ರಂಥಗಳಲ್ಲಿ ಸಮ್ಯಕ್ತ್ವಕೌಮುದಿಯು ಉದ್ದಂಡಷಟ್ಪದಿಯಲ್ಲಿಯೂ ಜಯನೃಪಕಾವ್ಯವು ಪರಿವರ್ಧಿನಿಷಟ್ಪದಿಯಲ್ಲಿಯೂ ನೇಮಿಜಿನೇಶಸಂಗತಿಯೂ ಶ್ರೀಪಾಲಚರಿತೆಯೂ ಸಾಂಗತ್ಯದಲ್ಲಿಯೂ ಬರೆಯಲ್ಪಟ್ಟಿವೆ. ಸಾಂಗತ್ಯಕ್ಕೆ "ಚುತೆಯ ರಾಗ" ವೆಂದು ರೂಢಿ. ಈತನು ಉಕ್ತಾವಶಿಷ್ಟವಾದ ಇನ್ನಾವ ಗ್ರಂಥಗಳನ್ನು ಬರೆದಿರುವನೋ ತಿಳಿಯದು. ಈತನು ಮೇಲೆ ಹೇಳಿದಂತೆ ಎಂಟುಲಕ್ಷ ಸೀಮೆಗಳಿಗೆ ಅಧಿಪತಿಯಾಗಿ ರಾಜ್ಯಪರಿಪಾಲನಕಾರ್ಯದಲ್ಲಿ ದತ್ತಚಿತ್ತನಾಗಿದ್ದರೂ ತನ್ಮಧ್ಯದಲ್ಲಿ ಅವಕಾಶಮಾಡಿಕೊಂಡು ಈ ಗ್ರಂಥರಾಶಿಯನ್ನು ರಚಿಸಿ ಕರ್ಣಾಟಕ ಭಾಷಾಜನನಿಯ ಸೇವೆಯನ್ನು ಮಾಡಿ ಕೀರ್ತಿಕಾಯನಾಗಿ ಮೆರೆಯುತ್ತಿರುವುದು ಸಾಹಿತ್ಯ ಕವಿತಾಗೋಷ್ಠಿಯಲ್ಲಿ ಈತನ ಅದ್ಭುತಸಾಮರ್ಥ್ಯದ್ಯೋತಕವಾಗಿದೆ. ಅತನು ಸಮಯದ ಬೆಲೆಯನ್ನು ಚೆನ್ನಾಗಿ ಅರಿತಿದ್ದನು. ಅತನು ರಾಜ್ಯಕಾರ್ಯ ಏಶಾಂತಿಸಮಯವನ್ನು ಸಾಹಿತ್ಯಸೇವೆಯಲ್ಲಿ ಕವಿತಾರಸಾಸ್ವಾದನದಲ್ಲಿ ಕಳೆದು ಕ್ಷತ್ರಿಯವೃಂದಕ್ಕೇ ಯಶಸ್ಸನ್ನು ತಂದು ಅನುಕರಣೀಯನಾದನಲ್ಲದೆ ಭೋಗಸುಖ ಮಗ್ನನಾಗಿ ಆಯುಸ್ಯಭಾಗವನ್ನು ಕಳೆದವನಲ್ಲ. ಅತನು ಕ್ಷತ್ರಿಯವೀರನೇ ಆಗಿರಲಿಲ್ಲ, ಧೀರ ಅಂದರೆ ವಿದ್ವಾಂಸನೂ ಆಗಿದ್ದನು. ರತ್ನಾಕರನು ಭರತೇಶವೈಭವದಲ್ಲಿ:—

"ಲೌಕಿಕಜಯವಂತರುಂಟು ಪಲಂಬರಾ | ಲೌಕಿಕಪರಮಾರ್ಥವೆರಡಾ ||
ಭೂಕಾಂತರಲ್ಲಿ ಪಡೆವುದು ದುರ್ಲಭ ನುವಿ | ವೇಕಬೇಕದಕೆ ಚಕ್ರೇಶಾ ||"

ಎಂದು ಹೇಳಿರುವಂತೆ ಸ್ವನಾಮಧನ್ಯನಾದ ಮಂಗರಸನಲ್ಲಿ ವೀರತ್ವ ಧೀರತ್ವಗಳೆರಡೂ ಸಮಾವಿಷ್ಟವಾಗಿದ್ದುವೆಂದರೆ ಎಲ್ಲರಲ್ಲಿಯೂ ಹಾಗಾಗುವುದು ಸಾಧ್ಯವೇ?

ವೀರತ್ವ—ಮಂಗರಸನ ಯುದ್ಧಾನುಭವವನ್ನೂ ಯುದ್ಧಚಾತುರ್ಯವನ್ನೂ ತೋಡಲು ವಾಚಕರನ್ನು ನಾವು ಈ ಗ್ರಂಥದ ೨೭, ೨೮, ೩೦, ೩೧ ನೆಯ ಆಶ್ವಾಸಗಳ ಕಡೆಗೆ ಕರೆದೊಯ್ಯುವೆವು. ಅಲ್ಲಿ ಕವಿಯ ಯುದ್ಧಪಾಂಡಿತ್ಯವು ಚೆನ್ನಾಗಿ ವ್ಯಕ್ತವಾಗುವುದು. ಚಕ್ರವ್ಯೂಹ, ಪದ್ಮವ್ಯೂಹ ಗರುಡವ್ಯೂಹಗಳನ್ನು ಅದೆಷ್ಟು ಅನುಭವದಿಂದ ವರ್ಣಿಸಿರುವನು! ಸ್ವಯಂ ವೀರರಲ್ಲದವರೂ ಸೊಗಸಾಗಿ ಯುದ್ಧವನ್ನು ವರ್ಣಿಸುವುದುಂಟು. ಅದರೆ ಅದಕ್ಕೂ ಸ್ವಯಂ ವೀರನಾದ ಕವಿಯು ತನ್ಮಯನಾಗಿ ಆವೇಶಪೂರಿತನಾಗಿ ವರ್ಣಿಸುವ ವರ್ಣನೆಗೂ ವ್ಯತ್ಯಾಸವುಂಟು. ಅದು ಉತ್ಪ್ರೇಕ್ಷಿತವಾದ ಅತನ ಪದಸರಣಿಯಿಂದ ಧ್ವನಿತವಾಗುವುದು. ಅತನು ಕುದುರೆ ಸವಾರಿಯಲ್ಲಿಯೂ ಜಟ್ಟಿಕಾಳಗದಲ್ಲಿಯೂ ಅಸದೃಶನಾಗಿದ್ದನೆಂದು ಈಗಲೂ ಪ್ರಸಿದ್ಧಿಯಿದೆ.

ವಿದ್ವತ್ವ—ಕ್ಷತ್ರಿಯನಾದ ಮಂಗರಸನಿಗೆ ವೀರತ್ವವು ಸ್ವಭಾವಜನ್ಯವಾದುದೆಂದು ಹೇಳಿದರೂ ವಿದ್ವತ್ವವು ಹಾಗೆಂದು ಹೇಳಲಾಗುವುದಿಲ್ಲ. ಅದು ಪ್ರಯತ್ನಲಬ್ಧವಾದುದು. ಇದು ಅವನ ಗ್ರಂಥಗಳಿಂದ ಗೊತ್ತಾಗುವುದು. ಈ ಗ್ರಂಥವು ಆಬಾಲಸ್ತ್ರೀಯರಿಗೂ ಸುಲಭಗ್ರಾಹ್ಯವಾಗಬೇಕೆಂಬ ಪರಾನುಗ್ರಹಬುದ್ಧಿಯಿಂದ ಕವಿಯು ಇದನ್ನು ಸಾಂಗತ್ಯದಲ್ಲಿ ಒರೆದಿದ್ದಾನೆ. ಇದು ಅತನ ಪ್ರಥಮ ಪ್ರಯತ್ನವೆಂದು ಶೈಲಿಯಿಂದ ಗೊತ್ತಾಗುವುದು. ಸಂಸ್ಕೃತದಲ್ಲಿ ಬಹು ವಿಸ್ತೃತವಾಗಿರುವ ಈ ಪುರಾಣವನ್ನು ಕವಿಯು ಸಂಕ್ಷೇಪಮಾಡಿದ್ದಾನೆ ಈತನು ಜಯಸ್ಫಪಕಾವ್ಯದಲ್ಲಿಯೂ ಸಮ್ಯಕ್ತ್ವಕೌಮುದಿಯಲ್ಲಿಯೂ ತನ್ನ ಪಾಂಡಿತ್ಯವನ್ನು ತೋರಿಸಿರುವಂತೆ ಹಾಡುಗಬ್ಬವಾದ ಈ ಗ್ರಂಥದಲ್ಲಿ ತೋರಿಸಲು ವೃತ್ತ—ಪದ್ಯಗಳ ಕ್ಷೇತ್ರವಿಸ್ತಾರವಿಲ್ಲವಾದರೂ ಇದ್ದುದರಲ್ಲೇ ಅವಕಾಶಮಾಡಿಕೊಂಡು ಅದೆಷ್ಟು ಚೆನ್ನಾಗಿ ವರ್ಣಿಸಿರುವನೆಂಬುದಕ್ಕೆ ಇದೇ ಗ್ರಂಥದ ಕೆಲವೇ ಪದ್ಯಗಳನ್ನು ಇಲ್ಲಿ ಉದಹರಿಸುವೆವು:—

"ಹಾವಿಗೆ ಹಾಲನೆರೆಯಲದರೊಡಲೊಳ | ಗಾವಿಷವೂರಿಸುವಂತೆ ||
ಭಾವಕರಿಗೆಲೇಸಮಾಡಲು ಕಷ್ಟವ | ನೇವೈಸಿಕೊಂಡು ಕೊನೆವರು ||೩೩||
ತಾಸಳಿದುಂಡವರಿಗೆ ಓಕರವಾ | ಳ್ವಾನೊಣದಂತೆ ದುರ್ಜನರು ||
ಹಾನಿತಮಗೆಯಾದೊಡಾಗಲಿಮಾನ್ಯರ | ಮಾನಾಪಹಾರಮಾಡುವರು ||೩೪||
ಕಾಸಲುಕಾಂಚನ ಕಡುರಂಗುವಡೆವಂತೆ | ದೂಸೆಕರಾಸಜ್ಜನರಿಗೆ ||
ಏಸೇಸುಪರಿಸೊಳು ಕಪಟವನೆಸಗಲು | ಲೇಸನವರಿಗೆಸಗುವರು ||೩೫||

ಪಿಸುಣರಸಂಸರ್ಗವನುರೆಮಾಡಿದ | ರಸಿಕರ್ಗೆಕೇಡಾಗದಿಹುದೇ ? ||
ಮಿಸುಗುವಪೊಸಪೊನ್ನ ಗಟ್ಟಿಯೊಳವಲೋಹ | ಮುಸುಕಲಂತದುಕೆಡುವಂತೆ||''

(೮. ೧.)

ಈ ಪದ್ಯಗಳಲ್ಲಿ ಕವಿಯು ಸಜ್ಜನ ದುರ್ಜನರ ಸ್ವಭಾವಗಳನ್ನು ವರ್ಣಿಸುವಾಗ ಉಪಯೋಗಿಸಿರುವ ಉಪಮಾನೋಪಮೇಯಭಾವಗಳೂ ಮುಂದೆ ವಸಂತರ್ತು ವರ್ಣನೆಯಲ್ಲಿ ಬಂದಿರುವ—

'' ಸ್ಮರನೆನ್ನ ಹೂವಿನಮಾರ್ಗಣವಿಂ ಹರಿ | ಹರವಿಧಿಗಳಗೆಲ್ದನೆಂದು ||
ಉರುಗಬ್ಬದಿಂಬಿಬ್ಬನೆಜರಿವಂದದಿ | ಬಿರಿದೊಪ್ಪಿದುವು ಮಲ್ಲಿಗೆಗಳು ||೧೨||''

(೮. ೩೨.)

ಈ ಪದ್ಯದಲ್ಲಿಯ ಉತ್ಪ್ರೇಕ್ಷೆಯೂ ಎಷ್ಟೊಂದು ಸಹೃದಯಹೃದಯಾಹ್ಲಾದಕಗಳಾಗಿರುತ್ತವೆ!

ಶೈಲಿ---ಕವಿಯ ಭಾವದ್ಯೋತಕವಾದ ಪದಗಳ ಸಂಯೋಜನೆಗೆ ಶೈಲಿಯೆಂದು ಹೆಸರು. ಕೆಲವು ಕವಿಗಳು ತಮ್ಮಲ್ಲಿ ಉಚ್ಚಭಾವಗಳಿದ್ದರೂ ಅವುಗಳು ಓದುಗಾರರ ಹೃದಯಪಟಲದಲ್ಲಿ ಚೆನ್ನಾಗಿ ಪ್ರತಿಬಿಂಬಿಸುವಂತೆ ಮಾಡಲು ತಕ್ಕ ಪದಗಳು ಸಕಾಲಕ್ಕೊದಗದೆ ಪೇಚಾಡುವರು. ಇನ್ನು ಕೆಲವರು ಪದಗಳ ಸಂಗ್ರಹವಿದ್ದರೂ ಉಚ್ಚಭಾವಗಳಿಲ್ಲದೆ ಪೇಚಾಡುವರು. ಅವೆರಡೂ ಏಕತ್ರ ಸಮಾವಿಷ್ಟವಾಗುವುದು ಅಪರೂಪ. ಅದಕ್ಕೆ ಪುರುಷಪ್ರಯತ್ನವೊಂದೇ ಸಾಲದು, ಪೂರ್ವಸಂಸ್ಕೃತವೂ ಬೇಕು. ಮಂಗರಸನ ಉಚ್ಚಭಾವಗಳೂ ಅವುಗಳನ್ನು ಅಭಿವ್ಯಕ್ತಗೊಳಿಸುವ ಸಂಸ್ಕೃತ ಬಾಹುಳ್ಯವಿಲ್ಲದ ಸುಲಭ, ಸುಗಮ ಪದಸರಣಿಯೂ ಹೃದಯಂಗಮವಾಗಿವೆಯೆಂದರೆ ಸಾಕಾಗುವುದು. ಈತನ ಕವಿತೆಯು ಮೃದುಪಾಕ, ದಾಕ್ಷಾಪಾಕವೆಂದು ಬೇರೆ ಹೇಳಬೇಕಾಗಿಲ್ಲ. ಕವಿಯು ತನ್ನ ಕವಿತೆಯನ್ನು ಕುರಿತು ಸವ್ಯಕ್ತವಾಮುದಿಯ ಪ್ರಥಮಸಂಧಿಯಲ್ಲಿ ಹೀಗೆ ಹೇಳಿರುತ್ತಾನೆ—

'' ತೆಂಬೆಲರ ಸೋಂಕು ತಕ್ಕರ ಮಾತು ತರುಣಿಯರ | ಬಿಂಬಾಧರಂ ಬೀರುವೊಂದು ರುಚಿ ಪೂವಿನ ತೊ | ಡಂಬಿ ಪೀಯೂಷಪಿಂಡಂ ಜೇನ ಸೋನೆ ಪೊಸಸುಗ್ಗಿರಂಜನೆಯು ಹಡೆದಾ || ಕೆಂಬರಲ ತೊಡವು ಚಂದನದಣ್ಪು ಸಿರಿಪಚ್ಚೆ | ಯೆಂಬಂಬು ಜಾಕಾರ ಕೋಗಿಲೆಯು ನವಪಂಚ | ಮಂಬೊರೆದ ನುಣ್ಣರಂ ಪ್ರಭುರಾಜಮುಂಗರನ ನೊರೆದ ಕೌಮುದಿಯ ಮಾತು||೧೨|| ರಸದಾಳಿಯಂತೆ ರಮಣಿಯರ ಜೆಂದುಟಿಯಂತೆ| ಪೊಸಜೇನ ಕೊಡದಂತೆ ಪೊಣ್ಮುವೆಳಜವ್ವನೆಯು | ರೊಸೆದೀವ ತಾಂಬೂಲದಂತೆ ಕಾ

ದಿಳಪಿಯಾರಿದ ಬಟ್ಟವಾಲಿನಂತೆ || ಅಸಿಯುಳೊಡನಾಟದಂತೆ ಮಾವಿನ ತನಿವಣ್ಣು | ರಸದಂತೆಯನ್ಮೃತದಂತತಿರುಚಿಯು ಪಡೆದುದತಿ | ರಸಿಕನತಿನಿಪುಣ ಮಂಗರಸನೊ ಪ್ಪುವ ವಾಕ್ಪ್ರಗುಂಫನಂ ಭಾವಿಸಿದೊಡೆ ||೧೧|| ''

ಇದೇ ಅಭಿಪ್ರಾಯವನ್ನು ಕವಿಯು ಜಯನೃಪಕಾವ್ಯದಲ್ಲಿ ಪ್ರಥಮಸಂಧಿಯು ೨೪, ೨೫, ೨೬ನೆಯ ಪದ್ಯಗಳಲ್ಲಿಯೂ ತೋರಿಸಿದ್ದಾನೆ. ಈ ಗ್ರಂಥಗಳು ಬೇರೆ ಯಾದರೂ ಕವಿಯು ಬೇರೆಯಲ್ಲ.

ಕವಿಯ ಬಿರುದುಗಳು— ಈತನಿಗೆ '' ಪ್ರಭುರಾಜ '' '' ಪ್ರಭುಕುಲದೀಪ '' ಎಂಬೀ ಬಿರುದುಗಳಿದ್ದುವು. ಇವುಗಳನ್ನು ಕವಿಯು ತನ್ನ ಗ್ರಂಥಗಳಲ್ಲಿ ಉಲ್ಲೇಖಿಸಿರುತ್ತಾನೆ. ಕ್ಷತ್ರಿಯರು ಸಾಹಿತ್ಯಸೇವೆಯಲ್ಲಿ ಕವಿತಾಗೋಷ್ಠಿಯಲ್ಲಿ ಇತರ ವರ್ಣಾಶ್ರಮದವರೊಡನೆ ಹೋರಾಡದೆ ಹಿಂದುಳಿದಿಲ್ಲವೆಂಬ ವಿಷಯವನ್ನು ವಿಶ್ವಕ್ಕೆ ತೋರ್ಪಡಿಸಿ ಕ್ಷತ್ರಿಯಸಮುದಾಯಕ್ಕೇ ಕೀರ್ತಿಪ್ರತಿಷ್ಠೆಯನ್ನು ತಂದಿರುವ ಚಾಮುಂಡರಾಯ, ನೃಪತುಂಗ, ಚಿಕ್ಕದೇವರಾಜ, ಚಾಮರಾಜ, ಸಂಜುಂಡರಸ, ಕವಿಹಂಸರಾಜ ಮೊದಲಾದ ರಾಜಕವಿರತ್ನಮಾಲೆಯಲ್ಲಿ ಶೋಭಿಸುತ್ತಿರುವ ಮಂಗರಸನೂ ಒಂದು ಕವಿರತ್ನವಾದರೂ ಈತನು ರಚಿಸಿರುವ ಗ್ರಂಥಬಾಹುಳ್ಯದೃಷ್ಟಿಯಿಂದಲೂ ಈತನಿಗೆ ಮೇಲೆ ಹೇಳಿದ ಬಿರುದುಗಳು ಅನ್ವರ್ಥಗಳಾಗಿ ಬೆಳಗುತ್ತಿವೆಯೆಂಬಲ್ಲಿಗೆ ಕವಿಪರಿಚಯವನ್ನು ಮುಗಿಸುವೆವು.

ಚಿತ್ರಪರಿಚಯ

ಶ್ರೀಮಚ್ಚಾಮರಾಜೇಂದ್ರ ಒಡೆಯರವರೂ ಶ್ರೀಮನ್ಮಹಾರಾಜರವರೂ ಶ್ರೀ ಮಂಗರಸರೂ ಶ್ರೀಮದ್ಯುವರಾಜರವರೂ ಶ್ರೀಮಜ್ಜಯಚಾಮರಾಜ ಒಡೆಯರವರೂ ಲೋಕಪ್ರಸಿದ್ಧರಾಗಿರುವುದರಿಂದ ನಾವು ಇವರುಗಳ ಪರಿಚಯವನ್ನು ವಾಚಕರಿಗೆ ಮಾಡಿಕೊಡಬೇಕಾದ ಆವಶ್ಯಕತೆಯಿಲ್ಲ. ಕಥಾಸಂದರ್ಭೋಚಿತವಾಗಿ ಅಲ್ಲಲ್ಲಿ ಸೇರಿಸಲ್ಪಟ್ಟಿರುವ ಇತರ ಚಿತ್ರಗಳ ಪರಿಚಯವಾದರೋ ಆಯಾ ಕಥಾಸಂದರ್ಭಗಳಿಂದಲೇ ಗೊತ್ತಾಗುವುದರಿಂದ ಅದನ್ನು ಬರೆಯಬೇಕಾದ ಆವಶ್ಯಕತೆಯೂ ತೋರುವುದಿಲ್ಲ. ಆದುದರಿಂದ ಆ ಭಾವಚಿತ್ರಗಳ ನಾಮನಿರ್ದೇಶವನ್ನು ಮಾಡಿದರೆ ಸಾಕಾಗಬಹುದೆಂದು ಭಾವಿಸಿ ಅದನ್ನು ಯಥಾಕ್ರಮವಾಗಿ ಈ ಕೆಳಗೆ ಕೊಡುವೆವು:—

೧. ಶ್ರೀಮಚ್ಚಾಮರಾಜೇಂದ್ರ ಒಡೆಯರವರು. ೨. ಶ್ರೀಮನ್ಮಹಾರಾಜರವರು. ೩. ಶ್ರೀ ಮಂಗರಸಕವಿಗಳು. ೪. ಚಾರುದತ್ತ ಸೆಟ್ಟಿ ಮತ್ತು ವಸಂತತಿಲಕೆ. ೫. ಗೊರವ ಮತ್ತು ಚಾರುದತ್ತಸೆಟ್ಟಿ. ೬. ದೇವಕೀದೇವಿಯು ನಿದ್ರಿಸುತ್ತ ಬೆಳಗಿನ ಜಾವದಲ್ಲಿ ಸೂರ್ಯ, ಚಂದ್ರ, ಲಕ್ಷ್ಮೀ, ವಿಮಾನ, ಅಗ್ನಿಜ್ವಾಲೆ, ಧ್ವಜ, ರತ್ನರಾಶಿ ಈ ಏಳು ಸ್ವಪ್ನಗಳನ್ನು ಕಾಣುವಳು. ಶ್ರೀ ಮಂಗರಸರು ಸೂರ್ಯ, ಚಂದ್ರ, ಆನೆಯ ಮರಿ, ಸಿಹ್ಮ, ಚಕ್ರ ಈ ಐದು ಸ್ವಪ್ನಗಳನ್ನು ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ೭. ಕೃಷ್ಣನು ಯಮುನಾನದಿಯ ಮಡುವಿಗಿಳಿದು ಸರ್ಪರಕ್ಷಿತವಾದ ಸಹಸ್ರದಳ ಕಮಲವನ್ನು ತರುವುದು. ೮. ಕೃಷ್ಣನು ಕಂಸನ ಸಭೆಯಲ್ಲಿ ಚಾಣೂರಮಲ್ಲನೊಡನೆ ಮಲ್ಲಯುದ್ಧವನ್ನು ಮಾಡಿ ಅವನನ್ನು ನೆಲಕ್ಕಿಕ್ಕಿದುದು. ೯. ದೇವೇಂದ್ರನು ಐರಾವತಗಜದ ಮೇಲೆ ಶ್ರೀನೇಮಿಜಿನಬಾಲಕನನ್ನು ಕುಳ್ಳಿರಿಸಿಕೊಂಡು ದೇವಸಮೂಹದೊಡನೆ ಮೇರುವಿನ ಪಾಂಡುಕಶಿಲೆಗೆ ಪ್ರಯಾಣಮಾಡುವುದು. ೧೦. ದ್ರೌಪದಿಯು ಅರ್ಜುನನಿಗೆ ಸ್ವಯಂವರಮಾಲೆಯನ್ನು ಹಾಕುವುದು. ೧೧. ಧರ್ಮರಾಜನು ಕೌರವನೊಡನೆ ಜೂಜಾಡಿ ಸೋತು ಪಾಂಡವರು ವನವಾಸಕ್ಕೆ ಹೋಗುವುದು. ೧೨. ಶ್ರೀನೇಮಿಕುಮಾರರು ಮದುವೆ ಮೆರವಣಿಗೆ ಹೊರಟು ದಾರಿಯಲ್ಲಿ ಬಂಧಿಸಿದ್ದ ಪಶುಗಳನ್ನು ನೋಡಿ ಅವುಗಳನ್ನೇಕೆ ಬಂಧಿಸಿರುವುದೆಂದು ಸಾರಥಿಯನ್ನು ಕೇಳಲು ಅವನು ಕೈನೀಡಿ ತೋರಿಸಿ ಕಾರಣವನ್ನು ತಿಳಿಸುವುದು. ೧೩. ಶ್ರೀ ನೇಮಿತೀರ್ಥಂಕರರು

ನಿರ್ವಿಕಲ್ಪಪರಮಸಮಾಧಿಯೆಂಬ ಧ್ಯಾನಮಗ್ನರಾಗಿರುವುದು. ೧೪. ಅರಣ್ಯದಲ್ಲಿ ಜರತ್ಕುಮಾರನು ಬಿಟ್ಟ ಬಾಣವು ಕೃಷ್ಣನ ಕಾಲಿಗೆ ತಗುಲಿ ಅವನು ಮಡಿದುದು. ೧೫, ೧೬, ೧೭. ಈ ಮೂರು ಚಿತ್ರಗಳಲ್ಲಿ ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯ, ಆಯುಷ್ಯ, ನಾಮ, ಗೋತ್ರ ವೇದನೀಯವೆಂಬ ಎಂಟು ಕರ್ಮಗಳೂ ನರಕದ ದುಃಖವೂ ಯಥಾಕ್ರಮವಾಗಿ ನಿದರ್ಶನಗಳಿಂದ ತೋರಿಸಲ್ಪಟ್ಟಿವೆ. ಜ್ಞಾನಾವರಣಕರ್ಮವು, ಪ್ರತಿಮೆಯನ್ನು ಪರದೆಯು ಮರೆಮಾಡುವಂತೆ, ಜೀವಾತ್ಮರ ಜ್ಞಾನಗುಣವನ್ನು ಮರೆಮಾಡುವುದು. ದರ್ಶನಾವರಣಕರ್ಮವು, ರಾಜದರ್ಶನಕ್ಕೆ ದ್ವಾರಪಾಲಕನು ಅಡ್ಡಿಮಾಡುವಂತೆ, ದೇವಗುರು ಮೊದಲಾದ ಪೂಜ್ಯರ ಮತ್ತು ಪುಣ್ಯಕರವಾದ ದೃಶ್ಯಗಳ ದರ್ಶನಕ್ಕೆ ಅಡ್ಡಿಮಾಡುವುದು. ಮದ್ಯವು ಮದ್ಯಪಾಯಿಗಳನ್ನು ಆಚಾರವಿಚಾರಶೂನ್ಯರನ್ನಾಗಿಯೂ ವಿಪರೀತವ್ಯಾಪಾರವುಳ್ಳವರನ್ನಾಗಿಯೂ ಮತ್ತರನ್ನಾಗಿಯೂ ಮಾಡುವಂತೆ, ಮೋಹನೀಯಕರ್ಮವು ಜೀವಾತ್ಮರನ್ನು ಸದಸದ್ವಿಷಯಗಳಲ್ಲಿ ವಿವೇಕಶೂನ್ಯರನ್ನಾಗಿ ಮಾಡಿ ಪಾಪಕಾರ್ಯದಲ್ಲಿ ತೊಡಗುವಂತೆ ಮಾಡುವುದು. ಭಿಕ್ಷುಕನಿಗೆ ದಾನಮಾಡಲುದ್ಯುಕ್ತನಾದ ಯಜಮಾನನನ್ನು ಅವನ ಗುಮಾಸ್ತನು ಅಡ್ಡಿಮಾಡುವಂತೆ, ಅಂತರಾಯಕರ್ಮದ ನಿಮಿತ್ತದಿಂದ ಸತ್ಪಾತ್ರದಾನಾದಿ ಸತ್ಕಾರ್ಯಗಳಿಗೆ ವಿಘ್ನಗಳೊದಗುವುವು. ಈ ನಾಲ್ಕು ಕರ್ಮಗಳಿಗೆ ಘಾತಿಕರ್ಮಗಳೆಂದು ಹೆಸರು. ಇವುಗಳ ಸಂಪೂರ್ಣ ನಾಶವಾದರೆ ಜೀವಾತ್ಮನಿಗೆ ಸರ್ವಜ್ಞತ್ವವುಂಟಾಗುವುದು.

ತಪ್ಪುಮಾಡಿ ಶಿಕ್ಷೆಗೊಳಗಾದವನು ಮರದ ಬೇಡಿಗೆ ಕಾಲುಗಳನ್ನು ಕೊಟ್ಟು ಬಂಧನದಲ್ಲಿ ಸಿಕ್ಕಿ ನರಳುವಂತೆ, ಆಯುಷ್ಯಕರ್ಮವು ಜೀವಾತ್ಮನನ್ನು ನರಕ, ತಿರ್ಯಕ್, ಮನುಷ್ಯ, ದೇವಗತಿಗಳಲ್ಲಿ ತಡೆದಿರಿಸುವುದು. ಚಿತ್ರಕಾರನು ನಾನಾಚಿತ್ರಗಳನ್ನು ರಚಿಸುವಂತೆ, ನಾಮಕರ್ಮದಿಂದ ಜೀವಾತ್ಮನಿಗೆ ಎಂಬತ್ತುನಾಲ್ಕುಲಕ್ಷ ಯೋನಿಗಳಲ್ಲಿ ನಾನಾರೂಪಗಳುಂಟಾಗುತ್ತವೆ. ಕುಂಬಾರನು ಮಣ್ಣಿನಿಂದ ಶ್ರೇಷ್ಠ ಮತ್ತು ನಿಕೃಷ್ಟಪಾತ್ರಗಳನ್ನು ಮಾಡುವಂತೆ, ಉಚ್ಚ ನೀಚ ಗೋತ್ರಕರ್ಮಗಳಿಂದ ಜೀವಾತ್ಮನಿಗೆ ಉಚ್ಚನೀಚಕುಲಗಳುಂಟಾಗುತ್ತವೆ. ಕತ್ತಿಯ ಬಾಯಲ್ಲಿರುವ ಜೇನನ್ನು ನೆಕ್ಕುವ ನಾಯಿಗೆ ಅದರ ಸವಿಯಿಂದ ಅಲ್ಪಸುಖವೂ ಕತ್ತಿಯನ್ನು ತೆಗೆಯುವಾಗ ನಾಲಗೆಯು ಕತ್ತರಿಸಿ ಅದರಿಂದ ಅಧಿಕ ದುಃಖವೂ ಉಂಟಾಗುವಂತೆ, ವೇದನೀಯಕರ್ಮದಿಂದ ಸಂಸಾರಿಜೀವನಿಗೆ ಸುಖದುಃಖಗಳುಂಟಾಗುತ್ತವೆ. ಈ ನಾಲ್ಕು ಕರ್ಮಗಳಿಗೆ ಅಘಾತಿಕರ್ಮಗಳೆಂದು ಹೆಸರು. ಈ ಕರ್ಮಗಳೂ ನಾಶವಾದಮೇಲೆ

ಆತ್ಮನು ಮುಕ್ತನಾಗುವನು. ಶ್ರೀ ನೇಮಿತೀರ್ಥಂಕರರು ಮೇಲೆ ಹೇಳಿದ ಅಘಾತಿ ಘಾತಿಕರ್ಮಗಳೆಂಟನ್ನೂ ಧ್ಯಾನ ತಪಸ್ಸುಗಳಿಂದ ನಾಶಮಾಡಿ ಮುಕ್ತರಾದರೆಂದು ಈಗ್ರಂಥದ ಸಂಖ್ಯಾಭಾವವು. ಮೇಲಿನ ಕೊನೆಯ ಚಿತ್ರದ ಕೊನೆಯಭಾಗದಲ್ಲಿ ಘೋರವಾಪದಿಂದ ನರಕಗಾಮಿಗಳಾದ ಜೀವಗಳು ಅನುಭವಿಸುವ ವಿವಿಧ ದುಃಖ ಗಳು ತೋರಿಸಲ್ಪಟ್ಟಿವೆ.

ವೇಲೆ ಹೇಳಿದ ಒಂಬತ್ತು ವಿಷಯಗಳನ್ನೂ ಬೇರೆ ಬೇರೆಯಾಗಿ ವರ್ಣಿಸುವ ಸುಂದರವಾದ ಒಂದೊಂದು ಹಿಂದೀಪದ್ಯಗಳನ್ನು ಈ ಕೆಳಗೆ ಕೊಡುವೆವು:—

ಜೈಸೇ ಪರದಾ ಪಡಾ ಮೂರ್ತಿಪರ್ ಜ್ಞಾನ ನಹೀ ಹೋನೇ ದಾತಾ |
ವೈಸೇ ಜ್ಞಾನಾವರಣಕರ್ಮಸೇ ಜ್ಞಾನ ಜೀವಕಾ ಢಕ್‌ಜಾತಾ ||
ಪ್ರಥಮ ಘಾತಿಯಾ ಕರ್ಮ ಯಹೀ ಹೈ ಚಿದ್ರೋಧಕ ಯಹ ಕಹಲಾತಾ |
ಜಗಕೋ ಇಸ್‌ನೇ ಅಜ್ಞಬನಾಯಾ ಅಜ್ಞಮನುಜ ನಹಿ ಲಖ್‌ಪಾತಾ ||೧||

ಯೇ ಭೂಪತಿ ಹೈ ಸರ್ವಜಗತ್‌ಕೇ ದರ್ಶನಕರ್‌ತೇ ಹೈ ಸಬ್‌ಲೋಗ್ |
ದ್ವಾರಪಾಲಭೀ ಖೂಬ್ ಅಜಬ್ ಹೈ ದೇತಾ ನಹೀ ದರ್ಶನಯೋಗ ||
ಇಸೀ ತರಹ ದರ್ಶನಸೇ ಸಬ್‌ಕೋ ಕರೈ ದರ್ಶನಾವರಣ ನಿರಾಶ |
ಛಕ್ಕೂ ಅವಧೀ ಕೇವಲದರ್ಶನ ಅರು ಅಛಕ್ಕುಕಾ ಸತ್ತಾನಾಶ ||೨||

ಮದಿರಾ ಪೀಕರ್ ಮಸ್ತಹುಯೇ ಹೈ ಭೂಲೇಹೈ ಕುಲಗೌರವಮಾನ |
ಸುಧಿ ಬುಧಿ ಭೂಲ್‌ಗಯೇ ಸಬ್ ತನಕೀ ರಹಾ ನ ಕುಛ್‌ಭೀ ಜ್ಞಾನ ||
ಮೋಹನೀಯಭೀ ಗಹರೀ ಮದಿರಾ ದೂಷಿತಕರ್‌ದೇತೀ ಹೈ ಪ್ರಾಣ |
ಸಮ್ಯಗ್ದರ್ಶನ ಜ್ಞಾನ ಚರಣಪರ್ ತಾನೇ ರಹತೀ ಸದಾ ಕೃಪಾಣ ||೩||

ದೀನವಿಪ್ರ ಕುಛ್ ಮಾಂಗ್‌ರಹಾ ಹೈ ದಾತಾ ದೇನೇ ಲಗಾ ಇನಾಮ್ |
ಪರ್ ಮುನೀಮನೇ ಮನಾಕಿಯಾ ತಬ್ ಹುಆ ನ ಕುಛ್‌ಭೀ ಕಾಮ್ ||
ಠೀಕ್ ಸಮ್‌ಝುಲೋ ಇಸೀ ತರಹ ಹೈ ಅಂತರಾಯಭೀ ಕರ್ಮ ಮಹಾನ್ |
ಅಂತರಾಯ ಯಹ ಕರ್‌ದೇತಾಹೈ ಜೋ ಹೋತಾಹೋ ಶುಭಕಲ್ಯಾಣ ||೪||

ಫಸೇಹುಯೇ ಹೈ ಪೈರ್ ಕಾಷ್ಠಮೇ ಇಧರ್ ಉಧರ್ ನಹಿ ಹೋಸಕ್‌ತೇ |
ನಷ್ಟ ಹುಆ ಸ್ವಾತಂತ್ರ್ಯ ಮನುಜಕಾ ಫಿರ್ ಕುಛ್‌ಭೀ ನಹಿ ಕರ್‌ಸಕ್‌ತೇ ||
ಸಂಸಾರೀಭೀ ಫಸೇ ಹುಯೇಹೈ ಆಯುಜಾಲಕೇ ಬಂಧನಮೇ |
ದೇವ ಮನುಜ ಪಶು ನರಕಯೋನಿಮೇ ಫಿರ್‌ತೇ ಹೈ ಸಬ್‌ಕೇ ತನಮೇ ||೫||

ಚಿತ್ರಕಾರ ಕುರ್ಸೀಪರ್ ಬೈಠೇ ಬನಾರಹೇ ಹೈ ಚಿತ್ರವಿಚಿತ್ರ |
ನಾಮಕರ್ಮಭೀ ವೇಹೋಂಕೋ ಹೈ ರಚಿತಾ ಮಾನೋ ಮೇರೇ ಮಿತ್ರ ||
ಶ್ವೇತ ಕೃಷ್ಣ ಅರು ಹಲ್‌ಕಾ ಭಾರೀ ರೂಪರಸಾದಿಕ ಗಂಧನುಹಾನ್ |
ಯೇಹೀ ವೇಷ್ಟನ ಕರ್ಮಸಂಗತನ ರಚ್‌ದೇತಾ ಹೈ ಕರ್ಮಪ್ರಮಾಣ ||೬||

ಕುಂಭಕಾರ ಜೋ ಚಾಹೇ ಜೈಸೇ ಪ್ಯಾಲೋಂಕಾ ನಿರ್ಮಾಣಕರೇ |
ಗೋತ್ರಕರ್ಮಭೀ ಉಚ್ಚನೀಚಕಾ ಉನ್‌ಮೇ ಜೋ ವ್ಯವಹಾರಕರೇ ||
ಆತ್ಮಪ್ರಶಂಸಾ ಪರನಿಂದಾಸೇ ನೀಚಗೋತ್ರಕರ್ಮಕಾ ಹೋತಾ ಬಂಧ |
ಅನ್ಯಗುಣೋಂಕೇ ಢಕಾನೇಸೇಭೀ ಹೋತಾ ನೀಚಗೋತ್ರಸಂಬಂಧ ||೭||

ಮೂರ್ಖಸಿಪಾಹೀ ಲಗಾ ಚಾಟನೇ ಶಹದ್ ಲಪೇಟೀ ವಹ ತಲ್‌ವಾರ |
ಮಿಲಾ ಸ್ವಾದ್ ಪರ್ ಜೀಭ್ ಕಟ್‌ಗಈ ಬಹನೇ ಲಗೀ ಖೂನ್‌ಕೀ ಧಾರ ||
ಘೋಡೇ ರುಖಿನೇ ಸುಖಕೇ ಕಾರಣ ಸಹತಾಹೈ ದುಃಖೋಂಕಾ ಭಾರ |
ವೇದನೀಯಸೇ ಸುಖ ದುಖ ಮಿಲ್‌ತಾ ವಸಮೇ ಐಸಾ ಕರೋ ವಿಚಾರ ||೮||

ಮಾರ್‌ರಹೇ ಹೈ ಪೀಟ್‌ರಹೇ ಹೈ ಏಕ್ ದೂಸರೇ ಆಪಸ್‌ಮೇ |
ಕಾಟ್‌ರಹೇ ಹೈ ಛೇದ್‌ರಹೇ ಹೈ ಕುಚಲ್‌ರಹೇ ಹೈ ಆಪಸ್‌ಮೇ ||
ವೃಕ್ಷೋಂಕೇ ಪತ್ತೇ ಅಸಿ ಜೈಸೇ ದೇಹ ವಿದಾರೇ ಛೇದೇ ಗಾತ |
ಮುಂಡ ಭೂಮಿಪರ್ ಪಡೇ ಹುಯೇ ಹೈ ನರಕದುಃಖ ಯಹ ದೇಖೋ ಭ್ರಾತ ||೯||

೧೮ ಶ್ರೀಮದ್ಯುವರಾಜ ಕಂಠೀರವನೃಸಿಹ್ಮರಾಜ ಒಡೆಯರವರು.
೧೯ ಶ್ರೀಮಜ್ಜಯಚಾಮರಾಜ ಒಡೆಯರವರು.

ಕಥಾಸಾರಾಂಶ.

೧. ಪೀಠಿಕಾ ಸಂಧಿ

ಕವಿಯು ನೇಮಿಜಿನೇಶ್ವರರನ್ನೂ ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯ ಸಾಧುಗಳೆಂಬ ಪಂಚಪರಮೇಷ್ಠಿಗಳನ್ನೂ ವಾಣಿಯನ್ನೂ ಸರ್ವಾಹ್ಣಯಕ್ಷನನ್ನೂ ಯಕ್ಷೇಶ್ವರಿಯನ್ನೂ ಗಣಧರರನ್ನೂ ಗೃಧ್ರಪಿಂಛಾಚಾರ್ಯರನ್ನೂ ಕವಿಪರಮೇಷ್ಠಿಯನ್ನೂ ಗುಣಭದ್ರರನ್ನೂ ಮಾಘನಂದಿಯನ್ನೂ ದೇವನಂದಿಯನ್ನೂ ಅಕಲಂಕಾಚಾರ್ಯರನ್ನೂ ಪ್ರಭಾಚಂದ್ರಮುನಿಯನ್ನೂ ಶ್ರುತಮುನಿಯನ್ನೂ ವಿಮಲಕೀರ್ತಿಮುನಿಯನ್ನೂ ನವಕೋಟಿಮುನಿಗಳನ್ನೂ ಯಥಾಕ್ರಮವಾಗಿ ವಂದಿಸಿ ಪೂರ್ವಕವೀಶ್ವರರನ್ನೂ ಪಂಪ, ರನ್ನ, ಶ್ರೀವಿಜಯ, ಗುಣವರ್ಮ, ಜನ್ನ, ಪೊನ್ನ, ನಾಗಚಂದ್ರ, ಕಣ್ಣಪ, ನೇಮಿಚಂದ್ರ, ಬಂಧುವರ್ಮ ಮೊದಲಾದ ಜೈನಕವಿಗಳನ್ನೂ ಸ್ಮರಿಸಿ ತನಗೆ ತಿಳಿದಮಟ್ಟಿಗೆ ಹಾಡುಗಬ್ಬದಲ್ಲಿ ನೇಮಿಶಾಚರಿತೆಯನ್ನು ಹೇಳುತ್ತೇನೆನ್ನುತ್ತಾನೆ. ಸುಜನ ದುರ್ಜನರ ನುತ್ತು ತನ್ನ ವಂಶಪರಂಪರೆಯ ವರ್ಣನೆಯನ್ನು ಮಾಡಿ ಮುಂದೆ ಹೀಗೆ ಕಥಾರಂಭವಾಡುತ್ತಾನೆ :—

ಘನೋದಧಿ ಘನಾನಿಲ ತನುವಾತಗಳೆಂಬ ಮೂರು ಗಾಳಿಗಳ ಆಧಾರದಿಂದ ಮೂರು ಲೋಕವು ನಿಂತಿದೆ. ಅದರ ಮಧ್ಯದಲ್ಲಿ ದಂಡಾಕಾರದ ತ್ರಸನಾಳವಿರುವುದು. ಅದರ ಮಧ್ಯದಲ್ಲಿ ನರಲೋಕವು ಅಸಂಖ್ಯಾತ ದ್ವೀಪ ಸಮುದ್ರಗಳಿಂದ ಕೂಡಿದೆ. ಆ ದ್ವೀಪ ಸಮುದ್ರಗಳ ನಡುವಿನಲ್ಲಿ ಮಹಾಲವಣಸಮುದ್ರವೂ ಅದರ ನಡುವಿನಲ್ಲಿ ಜಂಬೂದ್ವೀಪವೂ ಅದರ ನಡುವಿನಲ್ಲಿ ಮಹಾಮೇರುಪರ್ವತವೂ ಶೋಭಿಸುತ್ತಿವೆ. ಆ ಮೇರುಗಿರಿಯ ದಕ್ಷಿಣದಿಕ್ಕಿನಲ್ಲಿ ನಿಷಧಪರ್ವತವಿದೆ. ಅದರ ಮೇಲೆ ಹುಟ್ಟಿದ ಸೀತೋದಾನದಿಯು ಪಶ್ಚಿಮಕ್ಕೆ ಹರಿದು ಸಮುದ್ರವನ್ನು ಸೇರುತ್ತದೆ. ಆ ನದಿಯ ಎಡಬಲಗಳಲ್ಲಿ ಎಂಟೆಂಟು ದೇಶಗಳಿವೆ. ದಕ್ಷಿಣದಿಕ್ಕಿನಲ್ಲಿ ವತ್ಸಕಾವತಿಯೆಂಬ ದೇಶವಿದೆ. ಅದರ ಮಧ್ಯದಲ್ಲಿ ಉದ್ಯಾನವನಗಳಿಂದಲೂ ಸಕಲ ಭೋಗ್ಯವಸ್ತುಗಳಿಂದಲೂ, ಇಂದ್ರನಗರದಂತೆ, ಶೋಭಿಸುವ ಸಿಹ್ಮಪುರವೆಂಬ ಪಟ್ಟಣವಿರುತ್ತದೆ. ಅದನ್ನು ಅರುಹದಾಸನೆಂಬ ದೊರೆಯು, ಅಮರಾವತಿಯನ್ನು ದೇವೇಂದ್ರನಂತೆ, ಆಳುತ್ತಿದ್ದನು.

೨. ಇಭ್ಯಕೇತುಕುಮಾರಾಭ್ಯುದಯ ಸಂಧಿ

ಆ ಅರುಹದ್ದಾಸನಿಗೆ ಜಿನದತ್ತೆಯೆಂಬವಳು ಪತ್ನಿಯಾದಳು. ಆ ದಂಪತಿಗಳಿಗೆ ಅಪರಾಜಿತನೆಂಬ ಮಗನಾದನು. ಆತನು ಚಂದ್ರನಂತೆ ಸಕಲಕಲಾಪರಿಪೂರ್ಣನಾಗಿ ಬೆಳೆಯುತ್ತಿರಲು ಪ್ರೀತಿಮತಿಯೆಂಬ ರಾಜಕನ್ಯೆಯನ್ನು ತಂದು ಆತನಿಗೆ ವಿವಾಹಮಾಡಿದರು. ಅರುಹದ್ದಾಸನು ಪುತ್ರಸಹಿತನಾಗಿ ರಾಜ್ಯವಾಳುತ್ತ ಒಂದು ದಿನ ವಿಮಲವಾಹನರೆಂಬ ತೀರ್ಥಂಕರರ ಸಮವಸರಣಕ್ಕೆ ಹೋಗಿ ಅವರಿಂದ ಧರ್ಮಾಧರ್ಮಸ್ವರೂಪವನ್ನು ಕೇಳಿ ವೈರಾಗ್ಯಪರನಾಗಿ ಪುತ್ರನಿಗೆ ರಾಜ್ಯಭಾರವನ್ನಿತ್ತು ತನ್ನ ಪತ್ನಿಯೊಡನೆ ಸನ್ಯಾಸಾಶ್ರಮವನ್ನು ಸ್ವೀಕರಿಸಿದನು. ಅಪರಾಜಿತನು ಶ್ರಾವಕವ್ರತವನ್ನು ಕೈಕೊಂಡು ನೀತಿಯಿಂದ ರಾಜ್ಯವಾಳುತ್ತಿದ್ದನು.

ಅತ್ತ ಅರುಹದ್ದಾಸಮುನಿಯು ಕಠಿನತಪಸ್ಸನ್ನು ಮಾಡಿ ಸಕಲಕರ್ಮಮೂಲವನ್ನು ನಿರ್ಮೂಲ ಮಾಡಿ ಮೋಕ್ಷವನ್ನು ಪಡೆದನು. ಈ ವಿಚಾರವನ್ನು ತಿಳಿದು ದೇವೇಂದ್ರನು ನಿರ್ವಾಣಪೂಜೆಯನ್ನು ಮಾಡಬೇಕೆಂದು ಬಗೆದು ಸಮಸ್ತ ದೇವತೆಗಳೊಡನೆ ವೈಭವದಿಂದ ಬಂದನು. ಆ ವಾದ್ಯಧ್ವನಿಯನ್ನು ಕೇಳಿ ಅಪರಾಜಿತರಾಜನು ತನ್ನ ತಂದೆಗೆ ಮೋಕ್ಷಪ್ರಾಪ್ತಿಯಾದುದೆಂದು ತಿಳಿದು ಮೂರ್ಛೆಹೋದನು. ಶೈತ್ಯೋಪಚಾರದಿಂದ ಮೂರ್ಛೆಯು ಹೋದ ಮೇಲೆ ಕಣ್ಣ್ತೆರೆದು ನೋಡಿ ದುಃಖಿಸಿ ತನ್ನ ತಂದೆಯೆಲ್ಲಿರುವನೋ, ಅತನನ್ನು ನೋಡುವವರೆಗೂ ಈ ಭೋಗೋಪಭೋಗಗಳೆಲ್ಲ ತ್ಯಾಜ್ಯವಾಗಿರಲೆಂದು ವ್ರತವನ್ನು ಕೈಕೊಂಡು ತಾನು ಮೇರುಪರ್ವತಕ್ಕೂ ಅಲ್ಲಿಂದ ಸ್ವರ್ಗಕ್ಕೂ ಹೋಗಿ ಸರ್ವಾರ್ಥಸಿದ್ಧಿಯ ಮಾರ್ಗವಾಗಿ ಮೋಕ್ಷಕ್ಕೆ ಹೋಗಬೇಕೆಂದು ಯೋಚಿಸಿ ಸನ್ನಾಹಭೇರಿಯನ್ನು ಹೊಯ್ಸಿ ಸಕಲ ಸೈನ್ಯದೊಡನೆ ಉತ್ತರಾಭಿಮುಖನಾಗಿ ಹೊರಟನು. ಅವನ ವಿಪರೀತವ್ಯಾಪಾರವನ್ನು ತಿಳಿದು ದೇವೇಂದ್ರನು ನಮುನಕ್ಕು ಕುಬೇರನನ್ನು ಕರೆದು ಅಪರಾಜಿತನ ಉದ್ಯಮವನ್ನು ಪರಿಹರಿಸೆಂದನು. ಕುಬೇರನು ಹೋಗಿ ಅಪರಾಜಿತನು ಬರುವ ದಾರಿಗೆ ನೇರವಾಗಿ ಆಕಾಶದಲ್ಲಿ ಸಮವಸರಣವನ್ನೂ ಅದರಲ್ಲಿ ವಿಮಲವಾಹನ ತೀರ್ಥಂಕರರನ್ನೂ ಅರುಹದ್ದಾಸಮುನಿಯನ್ನೂ ತನ್ನ ವಿದ್ಯಾಬಲದಿಂದ ತೋರಿಸಿದನು. ಆ ಮಾಯೆಯನ್ನು ನಿಜವೆಂದೇ ಬಗೆದು ಅಪರಾಜಿತನು ವಂದಿಸಿ ತಂದೆಯ ಮುಖವನ್ನು ನೋಡಿದುದರಿಂದ ತನ್ನ ವ್ರತವು ಕೈಗೂಡಿತೆಂದು ಸಂತುಷ್ಟನಾಗಿ ಹಿಂದಿರುಗಿ ಬಂದು ಬಹುಕಾಲ ರಾಜ್ಯವಾಳುತ್ತಿದ್ದನು. ಒಂದು

ದಿನ ಚೈತ್ರಮಾಸದಲ್ಲಿ ವನವಿಹಾರಕ್ಕೆ ಹೋಗಿ ಅಲ್ಲಿ ತನ್ನ ತಂದೆಯು ಮಾಡಿಸಿದ್ದ ಸುವರ್ಣಮಯವಾದ ಬಸದಿಯನ್ನು ಕಂಡು ಜಿನರಿಗೆ ವಂದಿಸಿ ಮಣಿಮಂಟಪಕ್ಕೆ ಬಂದು ನಿಂತನು. ಆಗ ಆಕಾಶಮಾರ್ಗದಿಂದ ಇಬ್ಬರು ಚಾರಣಮುನಿಗಳು ಇಳಿದು ಬಂದು ಬಸದಿಗೆ ಪ್ರದಕ್ಷಿಣೆಮಾಡಿ ದೇವರಿಗೆ ವಂದಿಸಿ ಆ ಮಣಿಮಂಟಪಕ್ಕೆ ಬರಲು ಅಪರಾಜಿತನು ಅವರಿಗೆ ಭಕ್ತಿಪ್ರೀತಿಯಿಂದ ಉನ್ನತಾಸನವನ್ನಿತ್ತು ವಂದಿಸಿದನು. ಆ ಮುನಿಗಳು ಅಪರಾಜಿತನಿಗೆ ಧರ್ಮಾಧರ್ಮಸ್ವರೂಪವನ್ನು ಪದೇಶಿಸಿದರು. ಅದನ್ನು ಕೇಳಿ ಅಪರಾಜಿತನು ಕೈಮುಗಿದು "ಎಲೈ ಮುನಿಗಳಿರಾ! ನಿಮ್ಮಗಳ ಮೇಲೆ ನನಗೆ ಬಹುಮೋಹವಿದೆ ಅದಕ್ಕೆ ಕಾರಣವೇನು?" ಎಂದು ಕೇಳಲು ಅವರಲ್ಲಿ ಮೊದಲನೆಯವರು ಇಂತೆಂದರು:— ರಾಜನೆ! ನಿನ್ನ ಮತ್ತು ನಮ್ಮ ಭವದ ಸ್ಥಿತಿಯನ್ನು ಕೇಳು,— ಪೂರ್ವವಿದೇಹದ ಪುಷ್ಕಳಾವತಿದೇಶದ ಪುಂಡರೀಕಪುರದ ಇಂದ್ರದಿಕ್ಕಿನಲ್ಲಿ ಒಂದು ದೊಡ್ಡ ಕಾಡಿದೆ. ಅದರಲ್ಲಿ ವಿಂಧ್ಯಕನೆಂಬ ಬೇಡರ ದೊರೆಯಿದ್ದನು. ಅವನು ಬಹು ಭಯಂಕರಾಕಾರದವನು. ಅತನ ಹೆಂಡತಿ ವಾಗುರೆಯೆಂಬವಳು. ಒಂದು ದಿನ ವಿಂಧ್ಯಕನು ವಾಗುರೆಯೊಡನೆ ಬೇಟೆಗೆ ಹೋಗಿ ಅನೇಕ ಮೃಗಗಳನ್ನು ಬೇಟೆಯಾಡಿ ಬರುತ್ತಿರುವಾಗ ಒಂದು ಅಶೋಕವೃಕ್ಷದ ಬುಡದಲ್ಲಿ ಕುಳಿತಿದ್ದ ಅಮಲಬುದ್ಧಿ ನಿರ್ಮಲಬುದ್ಧಿಗಳೆಂಬೀರ್ವರು ಮುನಿಗಳನ್ನು ಕಂಡನು. ವಿಂಧ್ಯಕನು "ನಾನೆಂದೂ ಕಾಣದ ಮನುಷ್ಯಾಕಾರದ ಎರಡು ಮೃಗಗಳನ್ನು ಹೊಸದಾಗಿ ಈದಿನ ಕಂಡೆನು" ಎಂದು ಹೇಳಿ ಬಿಲ್ಲಿಗೆ ಬಾಣವನ್ನು ಸೇರಿಸಿ ಅವರಿಗೆ ಗುರಿಯಿಟ್ಟು "ಎಲೈ ವಾಗುರೆ! ಒಂದೇ ಬಾಣದಿಂದ ಈ ಮೃಗಗಳು ಭೂಮಿಗುರುಳುವಂತೆ ಹೊಡೆಯುತ್ತೇನೆ. ನನ್ನ ಕೈಯ ಚಾತುರ್ಯವನ್ನು ನೋಡು" ಎಂದು ಹೇಳಿ ಬಾಣವನ್ನು ಬಿಡುವಷ್ಟರಲ್ಲಿ ವಾಗುರೆಯು ಮುಂದೆ ಬಂದು ಭೀತಿಯಿಂದ "ವಿಂಧ್ಯಕನೆ! ಇವರು ಮನುಷ್ಯಮೃಗಗಳಲ್ಲ, ಮಹಾನುಭಾವರು. ಇವರನ್ನು ಹೊಡೆಯುವುದು ನಮಗೆ ತಕ್ಕುದಲ್ಲ" ಎಂದು ಹೇಳಿದಳು. ಆ ಮಾತನ್ನು ಕೇಳಿ ವಿಂಧ್ಯಕನು "ಇವು ಮೃಗಗಳಲ್ಲವೆಂಬುದನ್ನು ನೀನು ಹೇಗೆ ತಿಳಿದೆ?" ಎಂದು ಕೇಳಲು ವಾಗುರೆಯು "ನೀನು ಬೇಟೆಯಾಡಿದ ಮೃಗತತಿಯ ಮುತ್ತುರತ್ನಗಳನ್ನು ಮಾರಲು ನಾನು ಪಟ್ಟಣಕ್ಕೆ ಕೊಂಡುಹೋಗಿ ವೃಷಭಸೇನನೆಂಬ ದೊಡ್ಡ ವರ್ತಕನಿಗೆ ಮಾರುವಾಗ ಆ ಮನೆಯಲ್ಲಿ ಈ ಪೂಜ್ಯರಿರುವುದನ್ನು ಕಂಡೆನು. ಆ ವೃಷಭಸೇನನು ಇವರಿಗೆ ಉನ್ನತಾಸನವನ್ನಿತ್ತು, ಕಾಲ್ತೊಳೆದು ಸುಗಂಧಫಲಪುಷ್ಪಗಳಿಂದ

ಪೂಜಿಸಿದನು. ಆ ಮೇಲೆ ಪಟ್ಟಣಿಗರೆಲ್ಲ ತಮ್ಮ ಬಳಗದೊಡನೆ ಬಂದು ಇವರ ಕಾಲ್ದೊಳೆದು ಪೂಜಿಸಿ ವಂದಿಸಿ ಏನನ್ನೋ ಕೊಡಿ ಕೊಡಿಯೆಂದು ಕೇಳುತ್ತಿರಲು ಇವರು ನವಿಲ್ಗರಿಯನ್ನು ಅವರ ತಲೆಯಮೇಲಿರಿಸಿ ಇವನ್ನು ಕೊಟ್ಟೆವು ಕೈಕೊಳ್ಳಿ ಎಂದು ಹೇಳುತ್ತಿದ್ದರು. ಆದರಿಂದ ಇವರು ಎಲ್ಲರಿಗೂ ದೊಡ್ಡವರೆಂದು ತಿಳಿದೆನು. ಇವರಿಗೆ ಹೊಡೆದರೆ ನನಗೆ ಪಾಪವು ಬರುವುದು'' ಎಂದು ಹೇಳಿದಳು.

ಆ ಮಾತನ್ನು ಕೇಳಿ ವಿಂಧ್ಯಕನು ತನ್ನ ಬಿಲ್ಲುಬಾಣಗಳನ್ನು ಬಿಸುಟು ವಾಗುರೆಯೊಡನೆ ಹೋಗಿ ಸಂತೋಷದಿಂದ ಆ ಮುನಿಗಳಿಗೆರಗಿದನು. ಅವರು ಕಣ್ದೆರೆದು ''ಧರ್ಮವೃದ್ಧಿರಸ್ತು'' ಎಂದು ಹರಸಿದರು. ಇವರನ್ನು ಹೊಡೆಯಲು ಬಿಲ್ಲಿಗೆ ಬಾಣವನ್ನು ತೊಟ್ಟಿದ್ದ ನನ್ನನ್ನೂ ತಮ್ಮ ಪ್ರಾಣವನ್ನುಳಿಸಿದ ಈ ವಾಗುರೆಯನ್ನೂ ಒಂದೇರೀತಿಯಾಗಿ ಇವರು ಹರಸಿದರು. ಇವರಿಗಿಂತ ಉತ್ತಮರಾರು? ಎಂದು ವಿಂಧ್ಯಕನು ಕೊಂಡಾಡಿ ಕಾಡಿನ ಹೂಗಳನ್ನು ತಂದು ಹರ್ಷದಿಂದ ಅವರ ಪಾದಾರ್ಚನೆಮಾಡಿ ಬಳಿಕ ''ಪಟ್ಟಣದಲ್ಲಿ ಆ ವರ್ತಕರಿಗೆ ಕೊಟ್ಟ ವರವನ್ನು ನನಗೂ ದಯೆಪಾಲಿಸಿ,' ಎಂದು ಕೇಳಿದನು. ಅವನು ಹಿಂದೆ ಮಾಡಿದ ದುಷ್ಕರ್ಮವು ಈಗ ನಾಶವಾಯ್ತೆಂದು ತಿಳಿದು ಆ ಮುನಿಗಳು ''ಎಲೈ ಬೇಡನೆ! ನಿನಗೆ ಕಾಲಲಬ್ಧಿಯಿಂದ ಜೀವಹಿಂಸೆಯು ಆಶೆಯು ತೊಲಗಿತ.. ಎಲೈ ಭವ್ಯನೆ! ಕಳವು, ಹುಸಿ, ಪರಸ್ತ್ರೀಗಮನ, ಕೊಲೆ, ಅತಿಕಾಂಕ್ಷೆ ಇವುಗಳನ್ನು ಬಿಟ್ಟರೆ ನೀನು ಬಯಸಿದ ಫಲವು ನಿನಗೆ ದೊರಕುವುದು. ನಾವು ಕೊಟ್ಟ ಈ ವ್ರತಗಳನ್ನು ನೀನು ಪಾಲಿಸಿದರೆ ನಿನಗೆ ಮೂರುಲೋಕದ ಒಡೆತನವು ದೊರೆಯುವುದು.'' ಎಂದು ಹೇಳಲು ''ಹಾಗಾದರೆ ಆ ವ್ರತಗಳನ್ನು ನನಗೆ ಕೊಡಿ' ಎಂದು ಆ ಬೇಡನು ಮುನಿಗಳ ಪಾದಗಳಿಗೆರಗಿದನು. ಅವರು ಆ ವ್ರತಗಳನ್ನು ಬಿಡದೆ ಪಾಲಿಸುವಂತೆ ಹೇಳಿ ಕೊಟ್ಟರು. ವಾಗುರೆಯು ಆ ವ್ರತಗಳನ್ನು ಕೈಕೊಂಡಳು. ತರುವಾಯ ದಂಪತಿಗಳು ಆ ಮುನಿಗಳಿಗೆರಗಿ ತಮ್ಮ ಸ್ಥಾನಕ್ಕೆ ಹೊರಟುಹೋಗಿ ಬಿಲ್ಲುಬಾಣಗಳನ್ನು ಮುರಿದು ಬಿಸಾಟು ಮೃಗಗಳನ್ನೆಲ್ಲ ಬಿಟ್ಟು ನೆಂಟರಿಷ್ಟರ ಮನೆಯಲ್ಲಿ ತಿನ್ನುವುದನ್ನು ತೊರೆದು ಹಿಂಸೆಯಿಲ್ಲದ ಮತ್ತು ಶುಚಿಯಾದ ಸ್ಥಾನದಲ್ಲಿ ಮನೆಮಾಡಿಕೊಂಡು ಆ ವ್ಯಾಧದಂಪತಿಗಳಿದ್ದರು. ಬಿದಿರಿನ ಅಕ್ಕಿಯನ್ನೂ ಫಲ ಪತ್ರಗಳನ್ನೂ ತಮ್ಮ ಆಹಾರಕ್ಕುಪಯೋಗಿಸುತ್ತಿದ್ದರು. ಉಪ್ಪುಕಾರವಿಲ್ಲದೆ ಸಪ್ಪೆಯನ್ನು ತಿಂದು ಜೀವಿಸುತ್ತಿರಲು ಅವರು ದಿನದಿನಕ್ಕೆ ಕೃಶವಾಗುತ್ತಬಂದರು. ಆದರೂ ವ್ರತಗಳನ್ನು ಬಿಡಲಿಲ್ಲ. ಒಂದು ದಿನ ಬೇರೆ ಬೇಡತಿಯರು ವಾಗುರೆ

ಯನ್ನು ಕುರಿತು "ಹಸುರು ಹುಲ್ಲನ್ನು ತಿಂದ ಜಿಂಕೆಯನ್ನು ತಿಂದರೆ ಕಣ್ಣು ಹಸುರಾಗುವುದೆಂದು ಗಂಡುಜಿಂಕೆಯನ್ನು ತಿನ್ನುವವನಿಗೆ ಹಸುರೆಲೆಯನ್ನು ತಿನ್ನುವಂತಾಯ್ತೇ" ಎಂದು ಹೇಳಲು ಆ ಮಾತನ್ನು ಕೇಳಿ ವಾಗುರೆಯು 'ಅಂದು ನಾನು ಆ ಮುನಿಗಳನ್ನು ಕಂಡುದುದರಿಂದ ಇಂದು ನಮಗೆ ಈ ವಿಧಿಯಾಯ್ತು. ಅವರು ನಮ್ಮನ್ನು ನಂಬಿಸಿ ಬಾಣವನ್ನು ಬಿಡುವ ಕೈಯನ್ನೂ ಮದ್ಯಮಾಂಸವನ್ನು ತಿನ್ನುವ ಬಾಯನ್ನೂ ಕಟ್ಟಿದರು" ಎಂದು ಹೇಳುತ್ತ ಕಣ್ಣೀರು ಬಿಟ್ಟಳು. ಆ ಮಾತನ್ನು ಕೇಳಿ ಆ ಬೇಡತಿಯರು "ತಾನು ಬೇಯಿಸಿ ತಿನ್ನುವುದನ್ನು ವ್ರತಮಾಡಿದ್ದರೆ ನಮ್ಮಗಳ ಮನೆಗೆ ಬಂದು ತಿಂದುಂಡುಹೋಗು" ಎಂದು ಹೇಳಿದರು. ಆ ಮಾತಿಗೆ ವಾಗುರೆಯು "ಮೊದಲು ಮುಂದಾಲೋಚನೆಯಿಲ್ಲದೆ ಕೊಂಡ ವ್ರತವನ್ನು ಬಿಟ್ಟರೆ ದೋಷಬರುತ್ತದೆ. ಇನ್ನೇಕೆ? ಅವನು ಆಚರಿಸಿದ ಆಚಾರವೇ ನನ್ನ ಆಚಾರ" ಎಂದು ಹೇಳಿ ವಾಗುರೆಯು ಪತಿಯಂತೆ ಆಚರಿಸುತ್ತ ಕಾಯಿಹಣ್ಣುಗಳನ್ನು ತಿನ್ನುತ್ತಿದ್ದಳು. ಒಂದು ದಿನ ವಿಂಧ್ಯಕನು ಬಹಳ ಹಸಿವೆಯಿಂದ ಬರುತ್ತ ಒಂದು ಮಾವಿನ ಮರವನ್ನು ಕಂಡು ಅದರ ಮಧುರಫಲಗಳನ್ನೆಲ್ಲ ತಿನ್ನುವೆನೆಂದು ಮರಕ್ಕೇರಿ ಹಣ್ಣನ್ನು ಕಿತ್ತನು. ಅದು ಮರದ ಪೊಟರೆಯೊಳಗೆ ಬಿದ್ದಿತು. ಅದಕ್ಕೆ ಕೈಹಾಕಿ ಹಣ್ಣನ್ನು ತೆಗೆದುಕೊಳ್ಳುವಾಗ ಅದರಲ್ಲಿದ್ದ ಒಂದು ಕಾಳಿಂಗಸರ್ಪವು ಕೈಯನ್ನು ಕಚ್ಚಿತು. ವಿಂಧ್ಯಕನು ಏಷವೇರಿ ಭೂಮಿಗೆ ಬಿದ್ದು ಸತ್ತನು. ವಾಗುರೆಯು ತಾನೂ ಮರವನ್ನು ಹತ್ತಿ ಪೊಟರೆಗೆ ಕೈಯಿಕ್ಕಿ ಹಾವಿನಿಂದ ಕಚ್ಚಿಸಿಕೊಂಡು ಸತ್ತಳು. ವಿಂಧ್ಯಕನು ಸತ್ತು ಅದೇ ನಗರದ ವೃಷಭದತ್ತನೆಂಬ ವೈಶ್ಯನಿಗೆ ಪದ್ಮಶ್ರೀಯೆಂಬ ಪತ್ನಿಯಲ್ಲಿ ಇಭ್ಯಕೇತುವೆಂಬ ಪುತ್ರನಾಗಿ ಜನಿಸಿದನು. ವಾಗುರೆಯು ಸತ್ತು ಅದೇ ಪಟ್ಟಣದಲ್ಲಿ ಒಬ್ಬ ಬೆಸ್ತರವನಿಗೆ ಧೀವರನೆಂಬ ಪುತ್ರನಾಗಿ ಹುಟ್ಟಿ ಆ ಪಂಗಡದವರಿಗೆ ಅವನೇ ಮುಂದಾಳಾದನು. ಆ ಪಟ್ಟಣದಲ್ಲಿರುವ ಪುರುಷರೆಲ್ಲೆಲ್ಲ ಇಭ್ಯಕೇತುವು ವಿದ್ಯಾವಿನಯ ರೂಪ ವಿಕ್ರಮ ವಿತರಣಗಳಲ್ಲಿ ಮೊದಲನೆಯವನಾಗಿ ಪ್ರಖ್ಯಾತನಾದನು. ಆ ನಗರದ ದೊರೆ ನಾಗದತ್ತನಿಗೆ ಸುಪ್ರಭೆಯೆಂಬ ಪತ್ನಿಯಲ್ಲಿ ಜನಿಸಿದ ಬಹುರೂಪವತಿಯಾದ ಸೌಂದರಿಯೆಂಬವಳಿಗೆ ದೊರೆಯು ರತ್ನಮಯವಾದ ಸ್ವಯಂವರಮಂಟಪವನ್ನು ರಚಿಸಿ ರಾಜಕುಮಾರರನ್ನೆಲ್ಲ ಒರುಮಾಡಿದನು. ಅಲ್ಲಿಗೆ ಇಭ್ಯಕೇತುಕುಮಾರನೂ ಬಂದಿರಲು ರಾಜಪುತ್ರಿಯು ಅವನಿಗೆ ಮಾಲೆಯನ್ನು ಹಾಕಿದಳು. ನಾಗದತ್ತನು ಶುಭಲಗ್ನದಲ್ಲಿ ಅವರ ವಿವಾಹವನ್ನು ನೆರವೇರಿಸಿದನು.

ಒಂದು ದಿನ ದೊರೆಯು ತನ್ನ ಕೆನ್ನೆಯಲ್ಲಿ ನರೆಗೂದಲನ್ನು ಕಂಡು ತಾನು ಅಪುತ್ರನಾಗಿದ್ದುದರಿಂದ ತನ್ನ ಅಳಿಯ ಇಭ್ಯಕೇತುವಿಗೆ ರಾಜ್ಯಭಾರವನ್ನು ವಹಿಸಿ ತಾನು ದೀಕ್ಷೆಯನ್ನು ಸ್ವೀಕರಿಸಿದನು. ಮದನಪದ್ಮಶನಾದ ಇಭ್ಯಕೇತುಕುಮಾರನು ಮಾವನ ರಾಜ್ಯಕ್ಕೆ ಪ್ರಭುವಾಗಿ ಸುಖದಿಂದ ರಾಜ್ಯವಾಳುತ್ತಿದ್ದನು

೩. ಚಿಂತಾಗತಿಯ ನಿರ್ವೇಗ ಸಂಧಿ.

ಇಭ್ಯಕೇತುಕುಮಾರನು ಒಂದು ದಿನ ಇಂದ್ರವೈಭವದಿಂದ ಒಡ್ಡೋಲಗದಲ್ಲಿರುವಾಗ ಹಿಂದೆ ಹೇಳಿದ ಧೀವರಪತಿಯು ಮದಗಜದ ಮರಿಯನ್ನೂ ಸಿಹ್ಮದ ಮರಿಯನ್ನೂ ಕಸ್ತೂರಿಮೃಗದ ಮರಿಯನ್ನೂ ಕೈಗಾಣಿಕೆಯಾಗಿ ಕೊಟ್ಟು ಇಭ್ಯಕೇತುರಾಜನನ್ನು ಕಂಡನು. ರಾಜನು ಜನ್ಮಾಂತರದ ಮೋಹದಿಂದ ಧೀವರಪತಿಗೆ ಮಂತ್ರಿಪದವನ್ನು ಕೊಟ್ಟನು. ಆತನು ದೊರೆಗೆ ಪರಮವಿಶ್ವಾಸಿಯಾಗಿರುತ್ತಿರಲು ಒಂದು ದಿನ ದೊರೆಯು ವನಕ್ಕೆ ಹೋಗಿದ್ದು ಅಲ್ಲಿ ಅತಿನಿರ್ಮಲರೆಂಬ ಮುನಿಗಳನ್ನು ಕಂಡು ಅವರನ್ನು ವಂದಿಸಿ ಧರ್ಮಶ್ರವಣವನ್ನು ಮಾಡಿ ತನಗೆ ಆ ಧೀವರಪತಿಯಲ್ಲಿ ಅತಿ ಮಮತೆಯಾಗಲು ಕಾರಣವೇನೆಂದು ಕೇಳಿದನು. ದಿವ್ಯಜ್ಞಾನಿಗಳಾದ ಆ ಮುನಿಗಳು "ಹಿಂದಿನ ಭವದಲ್ಲಿ ನೀನು ವಿಂಧ್ಯಕನಾಗಿದ್ದಾಗ ಈ ಧೀವರನು ನಿನಗೆ ವಾಗುರೆಯೆಂಬ ಪ್ರಿಯಪತ್ನಿಯಾಗಿದ್ದನು. ಆದುದರಿಂದ ಈ ಧೀವರನಲ್ಲಿ ನಿನಗೆ ಮಮತೆಯುಂಟಾಗಿದೆ" ಎಂದು ಹೇಳಿದರು. ಅದನ್ನು ಕೇಳಿ ಸಂಸಾರನಾಟಕವನ್ನು ಭಾವಿಸಿ ಹೇಸಿ ವೈರಾಗ್ಯಪರನಾಗಿ ಸುಕೇತುವೆಂಬ ಪುತ್ರನಿಗೆ ರಾಜ್ಯಭಾರವನ್ನು ವಹಿಸಿ ತಾನು ದೀಕ್ಷೆಯನ್ನು ಪಡೆದನು. ಆತನ ಪತ್ನಿ ಸೌಂದರಿಯೂ ದೀಕ್ಷೆಯನ್ನು ಸ್ವೀಕರಿಸಿದಳು.

ಇಭ್ಯಕೇತುಮುನಿಯು ಬಳಿಯಲ್ಲಿ ಧೀವರನು ಅಣುವ್ರತವನ್ನು ಕೈಕೊಂಡನು. ಇಭ್ಯಕೇತುಮುನಿಯು ಅವಸಾನಕಾಲದಲ್ಲಿ ಸಮಾಧಿವಿಧಿಯಿಂದ ಸತ್ತು ಸೌಧರ್ಮಸ್ವರ್ಗದಲ್ಲಿ ಶ್ರೀದೇವನೆಂಬ ದೇವನಾಗಿಯೂ ಸೌಂದರಿಯು ಅದೇ ಸ್ವರ್ಗದ ಸುಪ್ರಭವಿಮಾನದಲ್ಲಿ ವಿಮಲಪ್ರಭನೆಂಬ ದೇವನಾಗಿಯೂ ಧೀವರನು ವಿದ್ಯುತ್ಪ್ರಭವಿಮಾನದಲ್ಲಿ ಶ್ರುತಪ್ರಭನೆಂಬ ದೇವನಾಗಿಯೂ ಹುಟ್ಟಿದರು. ಆ ಮೂವರೂ ಸುರಲೋಕದ ಸುಖವನ್ನುಂಡು ಬಂದು ಪುಷ್ಕರಾರ್ಧದ್ವೀಪದ ಪಡುದಿಕ್ಕಿನ ಮೇರು ಪರ್ವತದ ಪಶ್ಚಿಮವಿದೇಹದ ಸೀತೋದಾನದಿಯ ಉತ್ತರಭಾಗದಲ್ಲಿರುವ ಗಂಧಿಲದೇಶದ ವಿಜಯಾರ್ಧ್ಯದ ಉತ್ತರಶ್ರೇಣಿಯಲ್ಲಿ ಸೂರ್ಯಪ್ರಭಪುರದ ಸೂರ್ಯಪ್ರಭನೆಂಬ ಖೇಚರನಿಗೆ ಗಾಂಧಾರಿಯೆಂಬ ಪತ್ನಿಯಲ್ಲಿ ಇಭ್ಯಕೇತು—

ಶ್ರೀದೇವನು ಚಿಂತಾಗತಿಯೆಂಬ ಪ್ರಿಯಪುತ್ರನಾಗಿ ಜನಿಸಿದನು. ಆವನು ಸಕಲಕಲಾಪರಿಪೂರ್ಣನಾಗಿ ಬೆಳೆಯುತ್ತಿರಲು ಆ ಸುಪ್ರಭದೇವನು ಚ್ಯುತನಾಗಿ ಬಂದು ಅವನಿಗೆ ಸಹೋದರನಾಗಿ ಜನಿಸಿ ಮನೋಗತಿಯೆಂಬ ಹೆಸರನ್ನು ಪಡೆದು ಬೆಳೆಯುತ್ತಿದ್ದನು. ಒಳಿಕ ಧೀವರನಾಗಿದ್ದ ವಿದ್ಯುತ್ಪ್ರಭದೇವನು ಸ್ವರ್ಗದಿಂದ ಚ್ಯುತನಾಗಿ ಬಂದು ಸೂರ್ಯಪ್ರಭ ಗಾಂಧಾರಿಯರಿಗೆ ಚಪಲಗತಿಯೆಂಬ ಮೂರನೆಯ ಮಗನಾಗಿ ಜನಿಸಿದನು. ೪ ಮೂವರೂ ರತ್ನತ್ರಯದಂತೆ ಶೋಭಿಸುತ್ತಿದ್ದರು. ಆ ಪರ್ವತಶ್ರೇಣಿಯಲ್ಲಿ ಅರಿಂಧರಪುರವೆಂಬುದೊಂದು ಪಟ್ಟಣವಿದೆ. ಅದಕ್ಕೆ ಅರಿಂಜಯನೆಂಬ ಖೇಚರನು ದೊರೆಯಾಗಿದ್ದನು. ಆತನಿಗೆ ಜಿತಸೇನೆಯೆಂಬವಳು ಪತ್ನಿಯಾಗಿದ್ದಳು. ಅವರಿಗೆ ವಿಲಾಸವತಿಯೆಂಬ ಪುತ್ರಿಯು ಜನಿಸಿದಳು. ಐಶ್ವರ್ಯ ರೂಪ ವಿದ್ಯೆಗಳಲ್ಲಿ ಅನುಪಮಳಾಗಿದ್ದ ಆಕೆಯು ಗತಿಯುದ್ಧದಲ್ಲಿ ತನ್ನನ್ನು ಜಯಿಸಿದವನೇ ತನ್ನ ಪತಿಯೆಂದು ಡಂಗುರ ಹೊಯ್ಸಿದಳು. ಎಲ್ಲಾ ವಿದ್ಯಾಧರ ಕುಮಾರರು ಆಕೆಯನ್ನು ವರಿಸಲು ಬಂದುಸೇರಿದರು. ಅಲ್ಲಿಗೆ ಚಿಂತಾಗತಿ ಮನೋಗತಿ ಚಪಲಗತಿಕುಮಾರರೂ ಬಂದರು. ಆಗ ಅರಿಂಜಯನು ತನ್ನ ಪುತ್ರಿ ವಿಲಾಸವತಿಯೊಡನೆ ಆ ಪರ್ವತದ ಜಿನಗೃಹಕ್ಕೆ ಬಂದು ತ್ರಿಃಪ್ರದಕ್ಷಿಣೆ ಮಾಡಿ ಭಕ್ತಿಯಿಂದರ್ಚಿಸಿ ವಿಲಾಸವತಿಯು ರತ್ನಮಂಟಪಕ್ಕೆ ಹೋಗಿ ಅಲ್ಲಿ ಅರ್ಚಿಸಿದನಂತರ ಆಕೆಯ ಗೆಳತಿ ಲಲಿತೆಯೆಂಬವಳು ಗತಿಯುದ್ಧನಿಮಿತ್ತವಾಗಿ ಒಂದು ಹೂವಿನಮಾಲೆಯನ್ನು ತೆಗೆದುಕೊಂಡು "ಈ ಬೆಳ್ಳಿಯ ಬೆಟ್ಟದಲ್ಲಿ ಬಿಟ್ಟ ಈ ಪುಷ್ಪಮಾಲೆಯು ಭೂಮಿಗೆ ಮುಟ್ಟುವ ಮೊದಲು ಮೇರುವಿಗೆ ಹೋಗಿ ಬಸದಿಗೆ ಹೊಕ್ಕಿ ಹಿಂದಿರುಗಿ ಬಂದು ಇದನ್ನು ಹಿಡಿಯುವವರು ಹೊರಡಿ" ಎಂದು ಹೇಳಿದಳು. ಆ ಮಾತನ್ನು ಕೇಳಿ ಈ ಕೆಲಸವು ತಮಗಶಕ್ಯವೆಂದು ಆ ರಾಜರುಗಳು ವಿಮುಖರಾಗಲು ಚಿಂತಾಗತಿಯು 'ಈ ಗತಿಯುದ್ಧವನ್ನು ನಾನೊಮ್ಮೆ ಮಾಡುತ್ತೇನೆ; ನೀವೆಲ್ಲ ನೋಡಿ" ಎಂದು ಹೇಳಿ ಗೊತ್ತಾದ ಸ್ಥಳಕ್ಕೆ ಹೋಗಿ ನಿಂತನು. ಆತನ ಎಡಗಡೆಯಲ್ಲಿ ಆ ವಿದ್ಯಾಧರಕನ್ಯೆಯೂ ಬಂದು ನಿಂತಳು. ಆಕೆಗೆ ಚಿಂತಾಗತಿಯ ಸೌಂದರ್ಯವನ್ನು ನೋಡಿ ಸಾತ್ವಿಕಭಾವವುಂಟಾಯ್ತು. ಸಾವಧಾನವೆಂದು ಹೇಳಿ ಆ ಸಖಿಯು ಹೂವಿನಮಾಲೆಯನ್ನು ಬಿಡಲು ಅವರೀರ್ವರೂ ಆಕಾಶಕ್ಕೆ ಹಾರಿ ಚಿಂತಾಗತಿಯು ವಿಲಾಸವತಿಯನ್ನು ಹಿಂದಿಕ್ಕಿ ಹೂವಿನ ಮಾಲೆಯು ನೆಲಕ್ಕೆ ಬೀಳುವುದರೊಳಗಾಗಿ ಮೊದಲು ಗೊತ್ತುಮಾಡಲ್ಪಟ್ಟಿದ್ದ ಸ್ಥಳಕ್ಕೆ ಹೋಗಿ ಬಂದು ಆ ಮಾಲೆಯನ್ನು ಹಿಡಿದನು. ಆಗ ವಿಲಾಸವತಿಯು ಸ್ವಯಂವರಮಾಲಿಕೆ

ಯನ್ನು ಆತನ ಕೊರಳಿಗೆ ಹಾಕಲು ಬಂದಳು. ಚಿಂತಾಗತಿಯು "ಈಕೆಗೆ ವಿದ್ಯಾಧರರಾಜರೆಲ್ಲ ಆಶಪಟ್ಟರು. ಸಾಹಸಿಗಳಾದ ನನ್ನ ತಮ್ಮಂದಿರೂ ಆಶಪಟ್ಟರು. ಈ ಬಾಲಕಿಯೋರ್ವಳನ್ನು ಅನೇಕರು ಇಚ್ಛಿಸಿದರು. ಇದು ಮನ್ಮಥನ ಗೊಡ್ಡಾಟವಲ್ಲವೇ?" ಎಂದು ಭಾವಿಸುತ್ತ ಹೂವಿನ ಮಾಲೆಯನ್ನು ತರುತ್ತಿದ್ದ ಆ ಬಾಲಕಿಯನ್ನು ಕುರಿತು "ಸ್ವಲ್ಪ ನಿಲ್ಲು" ಎಂದಂದು ಮುಂದೆ ಹೇಳುತ್ತಾನೆ:— "ಕನ್ನೆಯೆ! ನನ್ನ ಗೆಲುವು ನನ್ನ ಪ್ರೀತಿಯು ತಮ್ಮಂದಿರದು. ಅವರಲ್ಲಿ ಬೇಕಾದವನನ್ನು ವರಿಸು' ಎಂದ ಮಾತನ್ನು ಕೇಳಿ ಆಕೆಯು ತಾನೊಂದೆಣಿಸಿದರೆ ತನ್ನ ದುಷ್ಕೃತವು ತಾನೊಂದೆಣಿಸಿತೆಂದು ಚಿಂತಿಸುತ್ತ "ಗತಿಯುದ್ದದಲ್ಲಿ ನನ್ನನ್ನು ಗೆದ್ದವನೇ ಈ ಜನ್ಮದಲ್ಲಿ ನನಗೆ ಪತಿಯೆಂದು ಲೋಕವೆಲ್ಲ ತಿಳಿಯುವಂತೆ ನಾನು ಪ್ರತಿಜ್ಞೆಮಾಡಿದ್ದೇನೆ. ಆದುದರಿಂದ ನೀನೇ ನನಗೆ ಪತಿಯು. ಉಳಿದವರೆಲ್ಲ ನನಗೆ ಸಹೋದರಸಮಾನರು. ಇದಕ್ಕೆನ್ನು ಸಂದೇಹವೇಕೆ?" ಎಂದು ಪ್ರತಿಜ್ಞೆಯನ್ನು ಮಾಡಿ ಅಲ್ಲಿಂದ ಹೊರಟು ದೇವಾಲಯಕ್ಕೆ ಹೋಗಿ ತನ್ನ ಜತೆಯಲ್ಲಿ ಒಂದಿದ್ದ ಸಾವಿರಮಂದಿ ಸ್ತ್ರೀಯರೊಡನೆ ತಾನು ದೀಕ್ಷೆಯನ್ನು ಸ್ವೀಕರಿಸಿದಳು. ಇತ್ತ ಚಿಂತಾಗತಿಯೂ ವೈರಾಗ್ಯಪರನಾಗಿ ತನ್ನ ತಮ್ಮಂದಿರೊಡನೆಯೂ ಎರಡು ಸಾವಿರ ದೊರೆಗಳೊಡನೆಯೂ ದಮವರಮುನಿಗಳಲ್ಲಿ ದೀಕ್ಷೆಯನ್ನು ಪಡೆದು ತಪಸ್ಸುಮಾಡಿ ಆಯುಷ್ಯಾವಸಾನದಲ್ಲಿ ಆ ಮೂವರೂ ಮಾಹೇಂದ್ರವೆಂಬ ನಾಲ್ಕನೆಯ ಸ್ವರ್ಗದಲ್ಲಿ ಸಾಮಾನಿಕರೆಂಬ ದೇವತೆಗಳಾಗಿ ಜನಿಸಿದರು ಅವರಲ್ಲಿ ಮೊದಲನೆಯ ಚಿಂತಾಗತಿಯು ದೇವಸುಖವನ್ನನುಭವಿಸಿ ಬಂದು ನೀನು ಅಪರಾಜಿತನಾಗಿ ಹುಟ್ಟಿರುತ್ತಿ. ಜಂಬೂದ್ವೀಪದ ಪುಷ್ಕಳಾವತಿದೇಶದ ವಿಜಯಾರ್ಧಗಿರಿಯ ಉತ್ತರಶ್ರೇಣಿಯಲ್ಲಿರುವ ಗಗನವಲ್ಲಭಪುರದ ಗಗನಚಂದ್ರನೆಂಬ ದೊರೆಗೆ ಗಗನಸೌಂದರಿಯೆಂಬ ಪತ್ನಿಯಲ್ಲಿ ಚಿಂತಾಗತಿಯ ಸಹೋದರರಾಗಿದ್ದ ದೇವತೆಗಳು ಸ್ವರ್ಗದಾಯುಷ್ಯವು ಪೂರ್ತಿಯಾದಮೇಲೆ ಒಂದು ಜನಿಸಿ ಅಮಿತಗತಿ ಅಮಿತರಾಜನೆಂಬ ಹೆಸರುಗಳನ್ನು ತಳೆದರು. ಯೌವನಾವಸ್ಥೆಯಲ್ಲೇ ವೈರಾಗ್ಯವನ್ನು ಹೊಂದಿ ದೀಕ್ಷೆಯನ್ನು ಪಡೆದು ಚಾರಣತ್ವವನ್ನು ಸಂಪಾದಿಸಿದ ಆ ಮುಮುಕ್ಷುಗಳೇ ನಾವು. ನಿನ್ನನ್ನು ನೋಡಬೇಕೆಂದು ಈ ಭೂಮಿಗಿಳಿದೆವು. ನಿನಗಿನ್ನು ಒಂದೇ ತಿಂಗಳ ಆಯುಷ್ಯವಿರುವುದು. ಸಮಸ್ತಪರಿಗ್ರಹಗಳನ್ನು ತೊರೆದು ಹೆಚ್ಚು ಪುಣ್ಯವನ್ನು ಗಳಿಸು." ಎಂದು ಹೇಳಿ ಧರ್ಮಲಾಭದ ಆಶೀರ್ವಾದವನ್ನು ಮಾಡಿ ಆಕಾಶಮಾರ್ಗವಾಗಿ ಹೊರಟುಹೋದರು.

ಇತ್ತ ಅಪರಾಜಿತನು ತನ್ನ ಪುರಕ್ಕೆ ಬಂದು ಆ ತಪಸ್ವಿಗಳು ಹೇಳಿದಂತೆಯೇ ರಾಜ್ಯಭಾರವನ್ನು ಪ್ರೀತಿಂಕರನೆಂಬ ತನ್ನ ಪುತ್ರನಿಗೆ ವಹಿಸಿ ಎಂಟುದಿನಸ ನಂದೀಶ್ವರದ ನೊಂಪಿಯನ್ನು ಮಾಡಿ ಸಕಲಪರಿಗ್ರಹಗಳನ್ನು ತೊರೆದು ಇಪ್ಪತ್ತೆರಡುದಿವಸ ಪಾಯೋಪಗಮನವೆಂಬ ಸನ್ನ್ಯಸನವಿಧಿಯನ್ನು ನೂಡಿ ಮರಣವನ್ನು ಹೊಂದಿ ಅಚ್ಯುತಸ್ವರ್ಗದಲ್ಲಿ ಅಚ್ಯುತೇಂದ್ರನೆಂಬ ದೇವೇಂದ್ರನಾಗಿ ಹುಟ್ಟಿದನು ಅಲ್ಲಿ ಇಪ್ಪತ್ತೆರಡು ಸಾಗರೋಪಮಕಾಲದವರೆಗೆ ಸುಖವನ್ನುಂಡು ಅಲ್ಲಿಂದ ಬಂದು ಜಂಬೂದ್ವೀಪದ ಭರತಕ್ಷೇತ್ರದ ಕುರುಜಾಂಗಣದೇಶದಲ್ಲಿರುವ ಹಸ್ತಿನಾಪುರದರಸು ಶ್ರೀಚಂದ್ರನೆಂಬನಸಿಗೆ ಶ್ರೀಮತಿಯೆಂಬ ಪತ್ನಿಯಲ್ಲಿ ಸುಪ್ರತಿಷ್ಠನೆಂಬ ಪುತ್ರನಾಗಿ ಜನಿಸಿದನು. ಆತನಿಗೆ ಸುನಂದಾದೇವಿಯೆಂಬ ರಾಜಕನ್ಯೆಯೊಡನೆ ವಿವಾಹವಾಯ್ತು. ಕೆಲವುಕಾಲದವೇಲೆ ಶ್ರೀಚಂದ್ರನಿಗೆ ಸಂಸಾರಭೋಗಗಳಲ್ಲಿ ವೈರಾಗ್ಯವುಂಟಾಗಿ ಪುತ್ರನಿಗೆ ರಾಜ್ಯಭಾರವನ್ನಿತ್ತು ತಾನು ದೀಕ್ಷೆಗೆ ಹೋದನು.

ಇತ್ತ ಸುಪ್ರತಿಷ್ಠರಾಜನಿಗೆ ಸುನಂದೆಯಲ್ಲಿ ಸುದೃಷ್ಟನೆಂಬ ಪುತ್ರನು ಹುಟ್ಟಿದನು. ಒಂದುದಿನ ರಾತ್ರಿ ಸುಪ್ರತಿಷ್ಠನು ಉಪ್ಪರಿಗೆಯಲ್ಲಿ ತನ್ನ ಅಂತಃಪುರ ಸ್ತ್ರೀಜನರೊಡನೆ ವಿನೋದದಿಂದಿರುತ್ತಿರುವಾಗ ಆಕಾಶದಿಂದೊಂದು ಉಳ್ಕಾಪಾತವಾಯ್ತು. ಅದನ್ನು ಕಂಡು ದೊರೆಯು ತನ್ನ ದೇಹವೂ ಹೀಗೇ ಅಳಿಯುವುದೆಂದು ಬಗೆದು ವೈರಾಗ್ಯದಿಂದ ತನ್ನ ಪುತ್ರ ಸುದೃಷ್ಟನಿಗೆ ರಾಜ್ಯಭಾವನ್ನು ವಹಿಸಿ ತಾನು ಸುಮಂದರರೆಂಬ ಕೇವಲಿಗಳಲ್ಲಿ ದೀಕ್ಷೆಯನ್ನು ಪಡೆದು ಏಕವಿಹಾರಿಯಾಗಿ ಕಠಿನತಪಸ್ಸನ್ನು ಮಾಡುತ್ತ ಷೋಡಶಭಾವನೆಗಳನ್ನು ಭಾವಿಸಿ ಮೂರು ತಿಂಗಳ ಸನ್ನ್ಯಸನ—ನಿರಾಹಾರವಿಧಿಯಿಂದ ಮೃತನಾಗಿ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದಲ್ಲಿ ಹುಟ್ಟಿ ಮೂವತ್ತುಮೂರು ಸಾಗರೋಪಮಪರ್ಯಾಯುಷ್ಯವುಳ್ಳವನಾಗಿ ಅನುಪಮಸುಖಕ್ಕೊಡೆಯನಾದನು. ಸುನಂದಾದೇವಿ ಮೊದಲಾದ ಎರಡು ಸಾವಿರ ಅಂತಃಪುರಸ್ತ್ರೀಯರೂ ಒಂದುಸಾವಿರಮಂದಿ ಮಕ್ಕಳೂ ಐನೂರುಮಂದಿ ರಾಜರುಗಳೂ ಆ ಸುಪ್ರತಿಷ್ಠರಾಜನೊಡನೆ ದೀಕ್ಷೆಯನ್ನು ಪಡೆದು ತಪಸ್ಸುಮಾಡಿ ಯಥೋಚಿತವಾದ ಗತಿಗಳನ್ನು ಪಡೆದರು.

———

೪. ಹರಿವಂಶೋದಯದ ಸಂಧಿ

—o:—

ಜಂಬೂದ್ವೀಪದ ಭರತಕ್ಷೇತ್ರದ ಆರ್ಯಖಂಡದ ವತ್ಸದೇಶದಲ್ಲಿ ಕೌಶಂಬಿ ಯೆಂಬ ಪುರವಿದೆ. ಅಲ್ಲಿ ಮಗಧರಾಜನು ರಾಜ್ಯವಾಳುತ್ತಿದ್ದನು. ಅವನಿಗೆ ವನಮಾಲೆಯೆಂಬವಳು ಹೆಂಡತಿ. ಆ ದಂಪತಿಗಳಿಗೆ ರಘುವೆಂಬ ಮಗನು ಹುಟ್ಟಿ ರಾಜ್ಯಕ್ಕೊಡೆಯನಾದನು. ಅವನಿಗೆ ಬಹಳ ಧನಿಕನಾದ ಸುಮುಖನೆಂಬ ರಾಜಶ್ರೇಷ್ಠಿಯಿದ್ದನು. ಆ ಸುಮುಖನಿಗೆ ವೀರದತ್ತನೆಂಬವನೊಬ್ಬ ಬಂಧುವಿದ್ದನು. ಅತನಿಗೆ ವನಮಾಲೆಯೆಂಬ ರೂಪವತಿಯಾದ ಹೆಂಡತಿಯಿದ್ದಳು. ಆಕೆಯ ಸೌಂದರ್ಯವನ್ನು ನೋಡಿ ಸುಮುಖನು ಮೋಹಿತನಾಗಿ ವೀರದತ್ತನನ್ನು ಉಪಾಯಾಂತರದಿಂದ ಹಡಗನ್ನೇರಿಸಿ ವ್ಯಾಪಾರಕ್ಕೆ ಕಳುಹಿ ತಾನು ವನಮಾಲೆಯಲ್ಲಿ ಅನುರಕ್ತನಾಗಿದ್ದನು. ಅತ್ತ ವೀರದತ್ತನು ಹನ್ನೆರಡು ವರುಷಗಳವರೆಗೆ ವ್ಯಾಪಾರ ಮಾಡಿ ಹೇರಳವಾದ ದ್ರವ್ಯವನ್ನು ಸಂಪಾದಿಸಿಕೊಂಡು ಹಿಂದಿರುಗಿಬಂದು ಪುರಜನರಿಂದ ತನ್ನ ಪತ್ನಿಯ ದುರ್ವ್ಯಾಪಾರವನ್ನು ತಿಳಿದು, ಯಾರಿಗೋಸ್ಕರ ತಾನು ಪರದೇಶಕ್ಕೆ ಹೋಗಿ ಕಷ್ಟಪಟ್ಟು ಈ ದ್ರವ್ಯವನ್ನು ಸಂಪಾದಿಸಿದೆನೋ ಆಕೆಯು ಪರಪುರುಷನಲ್ಲಿ ಆಸಕ್ತಳಾದ ಮೇಲೆ ತನಗೇಕೀಬದುಕೆಂದು ವೈರಾಗ್ಯಪರನಾಗಿ ವ್ಯೋಷ್ಠಿಲನೆಂಬ ಮುನಿಯ ಸವಿಾಪದಲ್ಲಿ ತಾಪಸರೂಪವನ್ನು ಧರಿಸಿ ತಪಸ್ಸನ್ನು ಮಾಡಿ ಮಡಿದು ಸೌಧರ್ಮವೆಂಬ ಮೊದಲನೆಯ ಸ್ವರ್ಗದಲ್ಲಿ ಚಿತ್ರಾಂಗದನೆಂಬ ದೇವನಾಗಿ ಹುಟ್ಟಿದನು.

ಇತ್ತ ಸುಮುಖನು ವನಮಾಲೆಯಲ್ಲಿ ಸುಖಿಸುತ್ತಿರುವಾಗ ಒಂದು ದಿನ ಮುನಿಗಳು ಆಹಾರನಿಮಿತ್ತವಾಗಿ ಬರುತ್ತಿರುವುದನ್ನು ಕಂಡು ಅವರನ್ನು ಮನೆಗೆ ಕರೆದೊಯ್ದು ಸುಮುಖನು ಅವರಿಗೆ ಆಹಾರದಾನವನ್ನು ಕೊಟ್ಟನು ಆ ಮುನಿಗಳು "ಅಕ್ಷಯದಾನವಾಗಲಿ" ಎಂದು ಹರಸಿ ಧರ್ಮಾಧರ್ಮಸ್ವರೂಪವನ್ನು ಪದೇಶಿಸಿದರು. ಅದನ್ನು ಕೇಳಿ ಆ ಸುಮುಖವನಮಾಲೆಯರು ನಿರ್ಮಲವಾದ ವ್ರತವನ್ನು ಕೈಕೊಂಡು ಪಾಲಿಸಿ ಮಡಿದು ಸುಮುಖನು ಭರತಕ್ಷೇತ್ರದ ವಿಜಯಾರ್ಧಪರ್ವತದ ತಪ್ಪಲಿನಲ್ಲಿರುವ ಹರಿವರ್ಷದೇಶದ ಭೋಗನಗರಿಯ ದೊರೆಯಾದ ಪ್ರಭಂಜನನೆಂಬ ವಿದ್ಯಾಧರನಿಗೂ ಅತನ ಪತ್ನಿ ಮೃಕಂಡುವೆಂಬವಳಿಗೂ ಹರಿಕೇತುವೆಂಬ ಮಗನಾಗಿ ಹುಟ್ಟಿ ಬೆಳೆಯುತ್ತಿದ್ದನು.

ವನಮಾಲೆಯು ಸತ್ತು ಅದೇ ದೇಶದ ವಿಶಾಖವಲಯವೆಂಬ ಪಟ್ಟಣದ ದೊರೆಯಾದ ವಜ್ರಚಾಪನಿಗೂ ಆತನ ಸತಿ ಸುಭಾಮಾದೇವಿಗೂ ವಿದ್ಯುನ್ಮಾಲೆಯೆಂಬ ಮಗಳಾಗಿ ಜನಿಸಿದಳು. ಆಕೆಯನ್ನು ಹರಿಕೇತುವಿಗೆ ಕೊಟ್ಟು ವಿವಾಹಮಾಡಿ

ದರು. ಅವರೀರ್ವರೂ ಪೂರ್ವಭವಬದ್ಧಮೋಹದಿಂದ ಕೂಡಿದ್ದು ಒಂದು ದಿನ ವಸಂತರ್ತುವಿನಲ್ಲಿ ನಂದನವನಕ್ಕೆ ಹೋಗಿ ಕುಂದಲತಾಮಂಟಪದಲ್ಲಿ ರತಿಕ್ರೀಡೆಯಲ್ಲಿರುವಾಗ ಹಿಂದಿನ ಭವದಲ್ಲಿ ವೀರದತ್ತ—ಪರದನಾಗಿದ್ದ ಚಿತ್ರಾಂಗದ ದೇವನು ಸ್ವರ್ಗದಿಂದಿಳಿದು ಆ ವನಕ್ಕೆ ಬಂದು ಆ ದಂಪತಿಗಳನ್ನು ಕಂಡು ಬಹು ಕೋಪಾವಿಷ್ಟನಾಗಿ ಅವರಿಬ್ಬರನ್ನೂ ಎತ್ತಿಕೊಂಡು ' ನಿಮ್ಮ ಪ್ರಾಣವನ್ನು ಹಿಂಡದೆ ಸುಮ್ಮನಿರುವೆನೇ?!" ಎಂದು ಮೂದಲಿಸಿ ಒಯ್ಯುವ ಸಮಯದಲ್ಲಿ ಹಿಂದಿನ ಭವದಲ್ಲಿ ಸುಮುಖನ ಮಿತ್ರನಾದ ರಘುರಾಜನು ಕೆನ್ನೆಯ ನರೆಗೂದಲನ್ನು ಕಂಡು ವೈರಾಗ್ಯದಿಂದ ದೀಕ್ಷೆಯನ್ನು ತೆಗೆದುಕೊಂಡು ಆಯುಷ್ಯಾವಸಾನದಲ್ಲಿ ಸತ್ಕೃ ಸೌಧರ್ಮ ಸ್ವರ್ಗದಲ್ಲಿ ಸೂರ್ಯಪ್ರಭನೆಂಬ ದೇವನಾಗಿ ಹುಟ್ಟಿ ಈ ಹರಿಕೇತುವಿನ ಪುಣ್ಯವಶದಿಂದ ಆಕಾಶದಲ್ಲಿ ಅದೇ ಮಾರ್ಗವಾಗಿ ಬರುತ್ತ ಇವರನ್ನು ಕಂಡು ಕಾರುಣ್ಯದಿಂದ ಚಿತ್ರಾಂಗದ ದೇವನನ್ನು ಕುರಿತು " ಬಹುಕೋಪದಿಂದ ಇವರನ್ನೇಕೆ ಒಯ್ಯುವೆ ? " ಎಂದು ಕೇಳಿದನು. ಆದಕ್ಕಾ ದೇವನು ಪೂರ್ವಭವದ ವೃತ್ತಾಂತವನ್ನೆಲ್ಲ ತಿಳುಹಿ ಅವರನ್ನು ಕೊಲ್ಲುವುದಕ್ಕಾಗಿ ಒಯ್ಯುತ್ತಿರುವೆನೆನ್ನಲು ಸೂರ್ಯಪ್ರಭದೇವನು " ಇವು ನರಕೀಟಗಳು. ನಾವು ದೇವತೆಗಳು. ಇವುಗಳನ್ನು ನಾವು ಕೈಮುಟ್ಟಿ ಕೊಲ್ಲುವುದು ವಿವೇಕತನವಲ್ಲ. ಇದರಿಂದ ಪಾಪಸಂಭವಿಸುವುದನ್ನು ನೀನು ತಿಳಿಯೆಯೊ ? ನಾವು ವಿಚಾರಮಾಡಿ ನೋಡಿದರೆ ಸ್ಥಾವರಜಂಗಮಜೀವರಾಶಿಯಲ್ಲಿ ನೀನು ತಿಳಿದಹಾಗೆ ಜೀವಕ್ಕೆ ಶತ್ರುಮಿತ್ರರಾಗಿ ಹುಟ್ಟದವರಾರು ? ಶತ್ರುಗಳನ್ನು ಕೊಲ್ಲಬೇಕೆಂಬಾಸೆಯು ನಿನಗಾದರೆ ಜಗತ್ತಿನ ಜೀವಗಳೆಲ್ಲ ನಿನಗೆ ಶತ್ರುಗಳು. ಕೆಲವು ವೇಳೆಗಳಲ್ಲಿ ಅವರೇ ಮಿತ್ರರು. ನೀನು ಯಾರು ? ಯಾರನ್ನು ಕೊಲ್ಲುವೆ ? ಸಂಸಾರದಲ್ಲಿ ಯಾರಿಗೆ ಯಾರು ಶತ್ರುಗಳು ? ಮತ್ತು ಬಂಧುಗಳು ? ಯಾರಿಗೆ ಯಾರು ಪತ್ನಿಯರು ? ಯಾರಿಗೆ ಯಾರು ಅರಸುಗಳು ? ವಿವೇಕಿಯೇ ! ವಿಚಾರಮಾಡಿ ನೋಡು. ಆದುದರಿಂದ ಮನಸ್ಸಿನಲ್ಲಿ ರಾಗದ್ವೇಷಗಳನ್ನಿಟ್ಟುಕೊಳ್ಳುವುದು ಗುಣವಂತರ ಕೆಲಸವಲ್ಲವೆಂಬುದನ್ನು ನೀನೇ ಬಲ್ಲೆ. ಜೀವದಯಾಪರವಾದ ಜಿನಧರ್ಮವನ್ನು ಹಿಡಿದು ಈ ದೇವಗತಿಯನ್ನು ಪಡೆದು ಹೀಗೆ ಮಾಡುವುದು ನಮಗೆ ಯೋಗ್ಯವೇ ? " ಈ ಮೊದಲಾದ ಯುಕ್ತಿವಚನಗಳಿಂದ ಸೂರ್ಯಪ್ರಭನು ಚಿತ್ರಾಂಗದ ದೇವನನ್ನು ಒಡಂಬಡಿಸಿದನು. ತರುವಾಯ ಚಿತ್ರಾಂಗದನು ಸೂರ್ಯಪ್ರಭನನ್ನು ಕುರಿತು " ಎಲೆ ಸೂರ್ಯಪ್ರಭ ! ನಿನ್ನ ಒಳ್ಳೆಮಿಗಳನ್ನು ಮೀರುವುದು ನನಗೆ ಉಚಿತವಲ್ಲವು. " ಎಂದು ಹೇಳಿ ಆ ರಾಜದಂಪತಿಗಳನ್ನು

ಸೂರ್ಯಪ್ರಭದೇವನಿಗೊಪ್ಪಿಸಿದನು. ಅವನು ಅವರನ್ನು ಚಂಪಾನಗರದಲ್ಲಿ ತಂದಿಳಿಸಿ ಹೊರಟುಹೋದನು.

ಇತ್ತಲಾ ಚಂಪಾಪುರದರಸು ಶ್ರೀಚಂದ್ರಕೇತ್ವಿಯೆಂಬವನು ತನುಜಾತರು ಜನಿಸಿದಾನವಿಲ್ಲದೆ ವಿಧಿವಶನಾಗಿರಲು ಅವನ ಮಂತ್ರಿಗಳು ಸೇರಿ ಪಟ್ಟದಾನೆಯನ್ನು ಬಿಡಲು ಅದು ರಾಜಧಾನಿಯ ನಂದನವನಕ್ಕೆ ಹೋಗಿ ಅಲ್ಲಿದ್ದ ಆ ರಾಜದಂಪತಿಗಳಿಗೆ ಸುವರ್ಣಕುಂಭದಿಂದ ಅಭಿಷೇಕಮಾಡಿ ತನ್ನ ಮಸ್ತಕದಲ್ಲಿರಿಸಿಕೊಂಡು ಪಟ್ಟಣಕ್ಕೆ ಬಂದಿತು. ಆ ದಂಪತಿಗಳನ್ನು ನೋಡಿ ಮಂತ್ರಿಗಳು ಸಂತುಷ್ಟರಾಗಿ ಪುರವನ್ನಲಂಕರಿಸಿ ಅರಮನೆಗೆ ವೈಭವದಿಂದ ಪ್ರವೇಶಮಾಡಿಸಿ ಪಟ್ಟಾಭಿಷೇಕವನ್ನು ಮಾಡಿದರು. ತದನಂತರ ಮಂತ್ರಿ, ಸಾಮಂತ, ಮಂಡಳಿಕ, ಸೈನ್ಯಾಧಿಪತಿ ಮೊದಲಾದವರು ಹರಿಕೇತುವಿನ ದೇಶವಾವುದೆಂದು ಕೇಳಲಾಗಿ ಅವನು ತಾನು ಭರತವಿಜಯಾರ್ಧಗಿರಿಯ ಹರಿವರ್ಷದೇಶದ ಭೋಗಪುರದ ಪ್ರಭಂಜನರಾಜನ ಮತ್ತು ಅತನ ಪತ್ನಿ ಮೃಕಂಡುವಿನ ಪುತ್ರನೆಂದು ಹೇಳಿದನು. ಆ ಮಾತನ್ನು ಕೇಳಿ ಮಂತ್ರಿ ಮೊದಲಾದವರು ಹರಿಕೇತುವನ್ನು ಕುರಿತು "ಹತ್ತನೆಯ ಶೀತಳತೀರ್ಥಂಕರರು ಹರಿವಂಶಸಂಭೂತರಾಗಿ ಧರ್ಮವನ್ನುಪದೇಶಮಾಡಿದರು. ನೀನೀಗ ಹರಿವರ್ಷದೇಶದರಸನಾಗಿಯೂ ಹರಿಕೇತುವೆಂಬ ಹೆಸರುಳ್ಳವನಾಗಿಯೂ ಇರುವುದರಿಂದ ಇನ್ನು ನಿನ್ನೀವಂಶಕ್ಕೆ 'ಹರಿವಂಶ' ವೆಂಬ ಹೆಸರಿರಲಿ. ಸ್ತ್ರೀ ಸಮುದಾಯಕ್ಕೆ ಶಿರೋಮಣಿಯಾದ ಮೃಕಂಡುವಿನ ಮಗನಾದುದರಿಂದ ನಿನ್ನ ಹೆಸರು ಲೋಕದಲ್ಲಿ 'ಮಾರ್ಕಂಡೇಯ' ನೆಂದಾಗಲಿ" ಎಂದು ಎಲ್ಲರೂ ಹೇಳಿದರು. ಹರಿ—ಸಿಹ್ಮಕೇತುವು ಪರಾಕ್ರಮದಿಂದ ನಿಷ್ಕಂಟಕನಾಗಿ ರಾಜ್ಯವಾಳುತ್ತಿರುವಾಗ ಆ ಹರಿಕೇತು ವಿದ್ಯುನ್ಮಾಲೆಯರಿಗೆ ಒಬ್ಬ ಪುತ್ರನು ಜನಿಸಿದನು. ಅತನಿಗೆ ಹರಿಯೆಂದು ಹೆಸರನ್ನಿಟ್ಟರು. ಆ ಹರಿಗೆ ಹಿಮಗಿರಿಯೆಂಬ ಮಗನೂ ಅವನಿಗೆ ವಸುಗಿರಿಯೆಂಬ ಮಗನೂ ಹುಟ್ಟಿದರು. ಹೀಗೆ ಆ ವಂಶದಲ್ಲಿ ಅನೇಕ ರಾಜರು ಕ್ರಮವಾಗಿ ಹುಟ್ಟಿದ ಬಳಿಕ ಇಂದ್ರವಂದಿತರಾದ ಮುನಿಸುವ್ರತತೀರ್ಥಂಕರರು ಉದ್ಭವಿಸಿದರು- ಆ ಶ್ರೇಷ್ಠವಂಶದಲ್ಲಿ ಅನೇಕರಾಜರು ಹುಟ್ಟಿದಬಳಿಕ ವಸುವೆಂಬ ರಾಜನೂ ಅವನಿಗೆ ಸುವಸು ಬೃಹದ್ವಸುವೆಂಬ ಮಕ್ಕಳೂ ಅವರಲ್ಲಿ ಸುವಸುವಿಗೆ ಶತಮನ್ಯುವೂ ಅವನಿಗೆ ಬೃಹದ್ರಥನೂ ಯಥಾಕ್ರಮವಾಗಿ ಉದ್ಭವಿಸಿದರು. ಬೃಹದ್ರಥನು ಮಗಧದೇಶದ ರಾಜಗೃಹದಲ್ಲಿ ರಾಜ್ಯವಾಳುತ್ತಿರುವಾಗ ಅತನಿಗೆ ಜರಾಸಂಧನೆಂಬ ಮಗನು ಹುಟ್ಟಿದನು. ಅವನ ಪೂರ್ವಪುಣ್ಯದಿಂದ ಆಯುಧಶಾಲೆಯಲ್ಲಿ

ಚಕ್ರರಕ್ಷನವು ಉದ್ಭವಿಸಿತು. ಅದರಿಂದ ಜರಾಸಂಧನು ಸಕಲರಾಜರನ್ನು ಗೆದ್ದು ಧರಣತ್ರಿಖಂಡಗಳಿಗಧಿಪತಿಯಾಗಿ ಅರ್ಧಚಕ್ರಿಯಾದನು.

ಅತ್ತ ಬೃಹದ್ರಥನಿನ ಪರಂಪರೆಯಲ್ಲಿ ಅನೇಕ ರಾಜರು ಜನಿಸಿ ಕೀರ್ತಿಶಾಲಿಗಳಾದರು. ತರುವಾಯ ಆ ವಂಶದಲ್ಲಿ ಯದುವೆಂಬವನು ಹುಟ್ಟಿ ಮಹಾಪರಾಕ್ರಮಿಯಾಗಿ ರಾಜ್ಯವಾಳುತ್ತಿದ್ದು ಕೀರ್ತಿಯನ್ನು ಪಡೆದನು. ಅಂದಿನಿಂದ ಆ ವಂಶಕ್ಕೆ ಯದುವಂಶವೆಂದು ಹೆಸರಾಯಿತು. ಆ ಯದುರಾಜನ ಮಗ ನರಪತಿಯೆಂಬವನಿಗೆ ಶೂರ ವೀರರೆಂಬಿಬ್ಬರು ಮಕ್ಕಳು ಹುಟ್ಟಿ ಬೆಳೆಯುತ್ತಿದ್ದರು. ನರಪತಿಯು ಕೆನ್ನೆಯ ನರೆಗೂದಲನ್ನು ಕಂಡು ವಿರಕ್ತನಾಗಿ ಮಕ್ಕಳಿಗೆ ರಾಜ್ಯವನ್ನು ವಹಿಸಿ ತಾನು ದೀಕ್ಷೆಯನ್ನು ತೆಗೆದುಕೊಂಡನು. ಶೂರನು ಕೃತಾರ್ಥವೆಂಬ ದೇಶವನ್ನು ಸಾಧಿಸಿ ಅಲ್ಲಿ ಶೌರೀಪುರವೆಂಬ ಹೆಸರಿನ ನಗರವನ್ನು ನಿರ್ಮಿಸಿದನು. ತನ್ನ ತಮ್ಮನಾದ ವೀರನನ್ನು ಮಥುರಾಪುರದಲ್ಲಿರಿಸಿ ತಾವೀರ್ವರೂ ಸುಖದಿಂದ ರಾಜ್ಯಭಾರಮಾಡುತ್ತಿರಲು ಶೂರರಾಜನಿಗೂ ಅತನ ಪತ್ನಿ ಗಾಂಧಾರಿಗೂ ಅಂಧಕವೃಷ್ಟಿಯೆಂಬ ಮಗನೂ ವೀರರಾಜನಿಗೆ ನರಪತಿವೃಷ್ಟಿಯೆಂಬ ಮಗನೂ ಹುಟ್ಟಿ ನವಮನ್ಮಥರಂತೆ ಬೆಳೆಯುತ್ತಿದ್ದರು. ಅಂಧಕವೃಷ್ಟಿಗೆ ಸುಭದ್ರೆಯೆಂಬ ರಾಜಕನ್ಯೆಯನ್ನೂ ನರಪತಿವೃಷ್ಟಿಗೆ ಪದ್ಮಾವತಿಯೆಂಬ ರಾಜಕನ್ಯೆಯನ್ನೂ ತಂದು ಮದುವೆಮಾಡಿದರು. ಅನಂತರಲ್ಲಿ ಮೊದಲನೆಯ ಅಂಧಕವೃಷ್ಟಿಗೆ ಶರಧಿವಿಜಯ, ಆಕ್ಷೋಭ್ಯ, ಸ್ತಿಮಿತಸಾಗರ, ಹಿಮವಂತ, ವಿಜಯ, ಅಚಲ, ಧಾರಣ, ಪೂರಣ, ಅಭಿನಂದನ, ವಸುದೇವರೆಂಬ ಹತ್ತುಮಂದಿ ಗಂಡುಮಕ್ಕಳೂ, ಕೊಂತಿ ಮಾದ್ರಿಯರೆಂಬೀರ್ವರು ಹೆಮ್ಮಕ್ಕಳೂ ಹುಟ್ಟಿದರು. ನರಪತಿವೃಷ್ಟಿಗೂ ಪದ್ಮಾವತಿಗೂ ಉಗ್ರಸೇನ, ದೇವಸೇನ, ಮಹಾಸೇನರೆಂಬ ಮೂರುಮಂದಿ ಗಂಡುಮಕ್ಕಳೂ, ಗಾಂಧಾರಿಯೆಂಬ ಹೆಮ್ಮಕ್ಕಳೂ ಹುಟ್ಟಿದರು. ಯೋಗ್ಯಕಾಲದಲ್ಲಿ ಶರಧಿವಿಜಯನಿಗೆ ಬಹು ರೂಪವತಿಯಾದ ಶಿವದೇವಿಯೆಂಬ ರಾಜಕನ್ಯೆಯನ್ನು ತಂದು ವಿವಾಹಮಾಡಿದರು. ಉಳಿದ ಗಂಡುವರ್ಗಳಿಗೂ ಯಥಾಸಮಯದಲ್ಲಿ ಮದುವೆಮಾಡಿ ಮಕ್ಕಳು ಮೊಮ್ಮಕ್ಕಳೊಡನೆ ಆ ಹತ್ತುವೀರರಾಜರುಗಳು ಸುಖದಿಂದಿರುವಲ್ಲಿ ಒಂದು ದಿನ ಗಂಧಮಾದನಪರ್ವತದ ಬಳಿಗೆ ಸಂಪ್ರತಿಷ್ಠರೆಂಬ ಮುನಿಗಳು ಬಂದಿರುವರೆಂಬ ವಾರ್ತೆಯನ್ನು ಕೇಳಿ ಅ ಹೋಗಿ ಅವರಿಂದ ಧರ್ಮಾಧರ್ಮಸ್ವರೂಪವನ್ನು ತಿಳಿದು ವೈರಾಗ್ಯವನ್ನು ಹೊಂದಿ ತಮ್ಮ ರಾಜಧಾನಿಗೆ ಬಂದು ಒಂದುದಿನ ಶೌರೀಪುರದಲ್ಲಿ ಅಂಧಕವೃಷ್ಟಿಗೂ ಮಥುರೆಯಲ್ಲಿ ನರಪತಿವೃಷ್ಟಿಗೂ ರಾಜ್ಯಾಭಿಷೇಕವನ್ನು ಮಾಡಿ ಶೂರ ವೀರ ರಾಜ

ರುಗಳು ದೀಕ್ಷೆಯನ್ನು ಪಡೆದು ತಪಸ್ಸನ್ನು ಮಾಡಿ ಕರ್ಮಕ್ಷಯಂಗೈದು ಮೋಕ್ಷವನ್ನು ಹೊಂದಿದರು.

೫. ಧೃತರಾಷ್ಟ್ರ ಗಾಂಧಾರಿ ವಿವಾಹಸಂಧಿ

ಒಂದು ದಿನ ಅಂಧಕವೃಷ್ಟಿಯು ಸಭಾಸ್ಥಾನದಲ್ಲಿ ಮಂಡಳಿಕರಿಂದ ಓಲೈಸಲ್ಪಡುತ್ತಿರುವಾಗ ಹಸ್ತಿನಾಪುರದಿಂದ ಅಲ್ಲಿಯ ಮಂತ್ರಿಗಳು ಬಂದು ರಾಜನನ್ನು ಕಂಡು ನಮಸ್ಕರಿಸಿ ಉಚಿತಾಸನದಲ್ಲಿ ಕುಳಿತು ರಾಜನನ್ನು ಕುರಿತು " ರಾಜನ! ಬಿನ್ನಪವು. ಕುರುಕುಲರತ್ನ ದೀಪರಾದ ಭೀಷ್ಮರು ತಮ್ಮಬಳಿಗೆ ನಮ್ಮನ್ನು ಕಳುಹಿದರು " ಎಂದು ಹೇಳಲು ಅಂಧಕವೃಷ್ಟಿಯು " ಏನುಕಾರ್ಯ? " ಎಂದು ಕೇಳಿದನು ಅದಕ್ಕವರು " ಸುಂದರರಾದ ನಮ್ಮದೊರೆಯ ಮಕ್ಕಳಿಗೆ ತಮ್ಮ ತನುಜೆಯರನ್ನು ಕೇಳುವುದಕ್ಕಾಗಿ ನಮ್ಮನ್ನು ತಮ್ಮಬಳಿಗೆ ಕಳುಹಿದರು " ಎಂದು ಹೇಳಿದರು. ಅಂಧಕವೃಷ್ಟಿಯು ತನ್ನ ಮಂತ್ರಿಗಳ ಕಡೆ ನೋಡಿದನು. ಉದ್ದಾಯನನೆಂಬ ಮಂತ್ರಿಯು ಆ ಹಸ್ತಿನಾಪುರದ ಮಂತ್ರಿಗಳ ಮುಖವನ್ನು ನೋಡಿ " ನಿಮ್ಮ ರಾಜರ ವಂಶವರ್ಣನೆಯನ್ನು ಮಾಡಿ " ಎನ್ನಲು ಆ ಮಹತ್ತರರಲ್ಲೊಬ್ಬನು ಗಂಭೀರವಚನದಿಂದ " ಭೂಮಿಗೆ ಸೂತ್ರಧಾರರಂತಿದ್ದ ಆದೀಶ್ವರಸ್ವಾಮಿಯು ಮೊತ್ತಮೊದಲು ವಂಶಭೇದವನ್ನು ನಿರ್ಮಿಸಿದರು. ಆ ವಂಶಗಳಲ್ಲಿ ಕುರುವಂಶವೆಂಬುದೊಂದು. ಅದರಲ್ಲಿ ಸೋಮಪ್ರಭರಾಜನೂ ಅವನ ತಮ್ಮ ಶ್ರೇಯಾಂಸರಾಜನೂ ಪ್ರಸಿದ್ಧರಾಗಿದ್ದರು. ಸೋಮಪ್ರಭನ ಮಗ ಜಯರಾಜನೆಂಬವನು ಭರತಚಕ್ರಿಗೆ ಸೇನಾನಾಯಕನಾಗಿದ್ದು ಕೊನೆಯಲ್ಲಿ ದೀಕ್ಷೆಯನ್ನು ಪಡೆದು ಮುಕ್ತಿಯನ್ನು ಹೊಂದಿದನು. ಆ ವಂಶದಲ್ಲಿ ಸೋಮಪ್ರಭನು ಪ್ರಸಿದ್ಧನಾಗಿದ್ದುದರಿಂದ ಅದಕ್ಕೆ ಸೋಮವಂಶವೆಂದು ಇಂದ್ರನು ಹೆಸರನ್ನಿಟ್ಟನು. ಅದರಲ್ಲಿ ಕ್ರಮವಾಗಿ ಅನೇಕ ರಾಜರುಗಳಾಗಿ ಹೋದಮೇಲೆ ಹಸ್ತಿಯೆಂಬೋರ್ವರಾಜನು ಹುಟ್ಟಿ ತನ್ನ ಹೆಸರಿನಲ್ಲಿ ಹಸ್ತಿನಾಪುರವನ್ನು ಕಟ್ಟಿಸಿದನು. ತರುವಾಯ ಆ ವಂಶದಲ್ಲಿ ಅನೇಕ ರಾಜರುಗಳಾಗಿಹೋದಮೇಲೆ ಶ್ರೀ ಶಾಂತಿತೀರ್ಥಂಕರರು ಜನಿಸಿದರು. ಅನಂತರ ಅರ್ಧಪಲ್ಯಕಾಲವು ಕಳೆದಮೇಲೆ ಶ್ರೀ ಕುಂಥುತೀರ್ಥಂಕರರೂ, ಆ ಮೇಲೆ ಕೆಲವು ಕಾಲಾನಂತರ ಅರತೀರ್ಥಂಕರರೂ, ತರುವಾಯ ಶಕ್ತಿಯೆಂಬೋರ್ವ ರಾಜನೂ ಉದ್ಭವಿಸಿದರು

ಶಕ್ತಿರಾಜನಿಗೆ ಧಾರಿಣಿಯೆಂಬವಳು ಪತ್ನಿಯಾದಳು. ಅವರಿಗೆ ಪರಾಶರ ಶಾಂತನು ವೆಂಬೀರ್ವರು ಮಕ್ಕಳು ಹುಟ್ಟಿದರು. ಅವರಲ್ಲಿ ಶಾಂತನುವಿಗೆ ರಾಜ್ಯಭಾರವನ್ನು ವಹಿಸಿ ಶಕ್ತಿರಾಜನು ಪರಾಶರನೊಡನೆ ತಪಸ್ವಿಯಾದನು.

ಶಾಂತನುರಾಜನು ಒಂದು ದಿನ ವನವಿಹಾರಕ್ಕಾಗಿ ಹೋಗಿದ್ದು ಒಂದು ಸ್ಥಳದಲ್ಲಿ ಓರ್ವ ವಿದ್ಯಾಧರತರುಣಿಯ ಒಂದು ಬಾವಿಯಲ್ಲಿ ತನ್ನ ಆಭರಣಗಳನ್ನು ಹಾಕಿ ಶೋಕಿಸುತ್ತಿರುವುದನ್ನು ಕಂಡು ಆಕೆಯ ಅನುಪಮರೂಪಕ್ಕೆ ಸೋತು " ಎಲೈ ಬಾಲಕಿ! ನೀನೇಕೆ ಅಳುತ್ತಿರುವೆ? ಆ ವಿಷಯವನ್ನು ಹೇಳು " ಎಂದನು. ಆ ಬಾಲಕಿಯು ಶಾಂತನುವಿಗೆ " ಈ ನೀರಿನಲ್ಲಿ ಬಿದ್ದ ನನ್ನ ಆಭರಣಗಳನ್ನು ತೆಗೆದು ಕೊಡುವವರಾರನ್ನೂ ಕಾಣದೆ ದುಃಖಿಸುತ್ತಿರುವೆನು " ಎಂದಳು. ಶಾಂತನುವು ಆ ಆಭರಣಗಳನ್ನು ತಾನು ತೆಗೆದುಕೊಡುವುದಾಗಿ ಹೇಳಿ ದುಃಖವನ್ನು ಸಮಾಧಾನ ಪಡಿಸಿದನು ಆ ಬಾಲೆಯು ಆಭರಣಗಳನ್ನು ತೆಗೆದುಕೊಟ್ಟರೆ ಶಾಂತನುವನ್ನು ಮದುವೆಯಾಗುವುದಾಗಿ ನಾತುಕೊಟ್ಟಳು. ಶಾಂತನುವು ಆಕೆಯ ವೃತ್ತಾಂತವನ್ನು ಕೇಳಲು ಆಕೆಯು ತಾನು ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ಪೃಥ್ವೀತಿಲಕವೆಂಬ ನಗರದ ಮಹೀಧರನ ಮತ್ತು ಆತನ ಸತಿ ಮನೋಹರಿಯ ಲಕ್ಷ್ಮೀಮತಿಯೆಂಬ ಪುತ್ರಿಯೆಂದೂ ತಾನು ಶ್ರೀಪಂಚಮಿಯ ನೋಂಪಿಯನ್ನು ಮಾಡಿ ಮೇರುಪರ್ವತಕ್ಕೆ ಹೋಗಿ ಅಲ್ಲಿಯ ಅಕೃತ್ರಿಮಚೈತ್ಯಾಲಯದಲ್ಲಿ ಸಿದ್ಧರನ್ನು ಪೂಜಿಸುತ್ತಿರಲು ಅಲ್ಲಿಗೆ ಚಾರಣಮುನಿಗಳು ಬರಲು ಅವರಿಗೆ ವಂದಿಸಿ ಅವರಿಂದ ಧರ್ಮಾಧರ್ಮಸ್ವರೂಪವನ್ನು ಕೇಳಿ ವಿರಕ್ತಿಹುಟ್ಟಿ ಊರಿಗೆ ಹೋಗಿ ತಂದೆತಾಯಿಗಳಿಗೆ ಗಂಧೋದಕವನ್ನು ಕೊಟ್ಟು ತಾನು ದೀಕ್ಷೆಯನ್ನು ತೆಗೆದ ಕೊಳ್ಳುವುದಾಗಿ ಹೇಳಿದೆನೆಂದೂ ಅದಕ್ಕವರು ತಮಗೆ ಗಂಡುಮಕ್ಕಳಿಲ್ಲದಿರಲು ಅವಳನ್ನೇ ಗಂಡುಮಗನೆಂದು ತಿಳಿದು ನಿಶ್ಚಿಂತರಾಗಿದ್ದುದರಿಂದ ಆಕೆಯು ಮದುವೆಯಾಗಿ ಗಂಡುಮಕ್ಕಳನ್ನು ಹಡೆದು ಆಮೇಲೆ ದೀಕ್ಷೆಗೆ ಹೋಗೆಂದು ತನ್ನನ್ನು ಬೇಡಿಕೊಳ್ಳಲು ಅವರ ಮಾತನ್ನು ತಿರಸ್ಕರಿಸದೆ ತನಗೆ ಅನುರೂಪನಾದ ಪುರುಷನು ವಿದ್ಯಾಧರಲೋಕದಲ್ಲಿಲ್ಲದಿರಲು ಭೂಚರರಲ್ಲಾದರೂ ಕೂಡುಕುವೆನೆಂದು ಭೂಮಿಗಿಳಿದು ಶಾಂತನುವಿನ ರೂಪ, ಕುಲ ಬಲ, ಚತುರತೆಗಳನ್ನು ಕೇಳಿ ಇತನನ್ನೇ ವರಿಸಬೇಕೆಂದು ಈ ಉಪಾಯವನ್ನು ಮಾಡಿದೆನೆಂದೂ ಹೇಳಲು ಶಾಂತನುವು ಆ ಬಾವಿಯಲ್ಲಿದ್ದ ಆಭರಣಗಳನ್ನು ಬಾಣ ಪ್ರಯೋಗದಿಂದ ತೆಗೆದುಕೊಟ್ಟನು. ಅದನ್ನು ನೋಡಿ ಆ ಲಕ್ಷ್ಮೀಮತಿಯು ಸಂತುಷ್ಟಳಾಗಿ ತನಗೆ ಹುಟ್ಟುವ ಮಕ್ಕಳನ್ನು ಗಂಗೆಯಲ್ಲಿ ಬಿಡುವುದಕ್ಕೂ ಆಮೇಲೆ

ತಾನು ದೀಕ್ಷೆಯನ್ನು ಪಡೆಯುವುದಕ್ಕೂ ಸಮ್ಮತಿಸಬೇಕೆಂದು ಶಾಂತನುವನ್ನು ಕೇಳಿಕೊಂಡಳು. ಶಾಂತನುವು ಅದಕ್ಕೆ ಸಮ್ಮತಿಸಿದನು. ಆ ವಿದ್ಯಾಧರಕುಮಾರಿಯು ಶಾಂತನುವನ್ನು ಕುರಿತು ' ನೀನು ಗಂಗಾನದಿಯ ದಡದಲ್ಲಿರುವ ವನಕ್ಕೆ ಬಾ. ನಾನು ಗಂಗೆಯ ಮಡುವಿನಿಂದ ಉದ್ಭವಿಸಿದಂತೆ ಬರುವೆನು " ಎಂದು ಹೇಳಿ ತಾನು ಬರುವ ದಿವಸ ಸಮಯವನ್ನು ತಿಳಿಸಿ ಹೋಗಿ ಎಲ್ಲಾ ಸಮಾಚಾರವನ್ನು ತಂದೆಗೆ ತಿಳಿಸಲು ಅತನು ಸಂತೋಷಪಟ್ಟನು. ಲಕ್ಷ್ಮೀಮತಿಯು ತಾನು ಹೇಳಿದ್ದವೇಳೆಗೆ ಸರಿಯಾಗಿ ಗಂಗೆಯ ಮಡುವಿನಿಂದೆದ್ದು ಬಂದಳು. ಶಾಂತನುವು ವೈಭವದಿಂದಿದಿರ್ಗೊಂಡು ಕರೆತಂದು ಮದುವೆಯಾಗಿ ಆಕೆಗೆ ಗಂಗೆಯೆಂಬ ಹೆಸರನ್ನಿಟ್ಟು ಸಂತೋಷದಿಂದಿದ್ದನು. ಗಂಗೆಯು ತನಗೆ ಹುಟ್ಟಿದ ಎಂಟುಮಂದಿ ಮಕ್ಕಳನ್ನು ಗಂಗಾನದಿಗೆ ಹಾಕಿದಂತೆ ಮಾಡಿ ವಿದ್ಯಾಸಾಮರ್ಥ್ಯದಿಂದ ತನ್ನತಂದೆಯ ಬಳಿಗೆ ಅವುಗಳನ್ನು ಸಾಗಿಸಿದಳು. ಒಂಬತ್ತನೆಯ ಮಗುವನ್ನೂ ಸಾಗಿಸುತ್ತಿರಲು ಶಾಂತನುವು ತಾನೊಂದು ಮಗುವನ್ನು ಸಾಕುವೆನೆಂದು ಹೇಳಿ ಹಿಂದಿರುಗಿ ತರಿಸಿ ಆಮಗುವಿಗೆ ಭೀಷ್ಮನೆಂದೂ ಆ ಗಂಗೆ (ಲಕ್ಷ್ಮೀಮತಿ) ಯ ಪುತ್ರನಾದುದರಿಂದ ಗಾಂಗೇಯನೆಂದೂ ಹೆಸರನ್ನಿಟ್ಟು ಪ್ರೀತಿಯಿಂದ ಸಲಹುತ್ತಿದ್ದನು. ಗಾಂಗೇಯನು ರೂಪವಿಕ್ರಮಶಾಲಿಯಾಗಿ ಬೆಳೆಯುತ್ತಿರಲು ಲಕ್ಷ್ಮೀಮತಿಯು ತನ್ನ ವಿದ್ಯೆಗಳನ್ನೆಲ್ಲ ಕಲಿಸಿ ತನ್ನ ಪೂರ್ವಸಂಕಲ್ಪದಂತೆ ದೀಕ್ಷೆಯನ್ನು ಪಡೆದು ತಪಸ್ಸನ್ನಾಡಿ ಮಡಿದು ಅತುಲಸುಖವೀವ ಅಚ್ಯುತವೆಂಬ ಹದಿನಾರನೆಯ ಸ್ವರ್ಗದಲ್ಲಿ ದೇವನಾಗಿ ಹುಟ್ಟಿದಳು.

ಇತ್ತ ಶಾಂತನುವು ಒಂದು ದಿನ ರಾಜರುಗಳೊಡನೆ ಗಂಗಾನದೀತೀರಕ್ಕೆ ಹೋಗಿರಲು ಅಲ್ಲಿ ಸುಂದರಳಾದ ಓರ್ವ ತಾಪಸಕನ್ಯೆಯನ್ನು ಕಂಡು ಮೋಹಿತನಾಗಿ ಆಕೆಯನ್ನು ತನಗೆ ವಿವಾಹಮಾಡಿಕೊಡಬೇಕೆಂದು ಆಕೆಯ ತಂದೆ ವಸುವೆಂಬವನನ್ನು ಕೇಳಲಾಗಿ ಅತನು ವಯಸ್ಸು ಕಳೆದವರಿಗೆ ಹೆಣ್ಣನ್ನು ಕೊಡುವುದು ನ್ಯಾಯವಲ್ಲವೆನ್ನಲು ರಾಜನು ಕೇಳಿ ಪಟ್ಟಣಕ್ಕೆ ಬಂದು ವಿರಹತಾಪದಿಂದ ಆಯಾಸಗೊಂಡಿರಲು ಆ ವಿಷಯವನ್ನು ಭೀಷ್ಮನು ತಿಳಿದು ತಾನು ತಾಪಸಿಯಿದ್ದಲ್ಲಿಗೆ ಹೋಗಿ ತನ್ನ ತಂದೆಗೆ ಅತನ ಮಗಳನ್ನು ಕೇಳಿದನು. ಆ ತಾಪಸಿಯು " ಎಲೈ ಸುಕುಮಾರ ಭೀಷ್ಮನೆ! ನಿನ್ನತಂದೆಗೆ ನನ್ನ ಸುತೆಯನ್ನಿತ್ತರೆ ಆಕೆಯ ಮಕ್ಕಳೆಲ್ಲ ವಿಕ್ರಮಿಯಾದ ನಿನಗೆ ಭೃತ್ಯರಾಗುವರು. ಆದುದರಿಂದ ಕೊಡುವುದಿಲ್ಲ " ಎಂದನು. ಆ ಮಾತನ್ನು ಕೇಳಿ ಭೀಷ್ಮನು ತನಗೀಭವಕ್ಕೆ ಬ್ರಹ್ಮಚರ್ಯವಿರಲೆಂದು ವ್ರತವನ್ನು ಕೈಕೊಂಡನು. ಆ ತಾಪಸಿಯು ಸಂತುಷ್ಟನಾಗಿ ತನ್ನ ಮಗಳು ಸತ್ಯವತಿಯನ್ನು

ಶಾಂತನುವಿಗೆ ಕೊಟ್ಟು ಮದುವೆಮಾಡಿದನು. ಆ ದಂಪತಿಗಳಿಗೆ ಚಿತ್ರವೀರ್ಯ ವಿಚಿತ್ರವೀರ್ಯರೆಂಬೀರ್ವರು ಮಕ್ಕಳು ಹುಟ್ಟಿದರು. ಒಂದು ದಿನ ಶಾಂತನುವು ತನ್ನ ಅಲ್ಪಸುಖಕ್ಕಾಗಿ ಭೀಷ್ಮನು ಬ್ರಹ್ಮಚಾರಿಯಾದನೆಂದು ಚಿಂತಿಸಿ ಇನ್ನೇಕೀಬಾಳ್ವೆಯೆಂದು ವೈರಾಗ್ಯದಿಂದ ಜಿನದೀಕ್ಷೆಯನ್ನು ಕೈಕೊಂಡನು.

ಇತ್ತ ಭೀಷ್ಮನು ಅನುಜರೊಡನೆ ಸುಖವಾಗಿರುವಾಗ ಚಿತ್ರವೀರ್ಯನು ಶತ್ರು ರಾಜರಲ್ಲಿ ಕಾದಿ ಮಡಿದನು. ಭೀಷ್ಮನು ವಿಚಿತ್ರವೀರ್ಯನಿಗೆ ಮದುವೆಮಾಡಲೆಳಸಿ ಕಾಶೀರಾಜನ ಅಂಬಿಕೆ, ಅಂಬೆ, ಅಂಬಾಲೆಯೆಂಬ ಪುತ್ರಿಯರನ್ನು ಕೇಳಿಸಿದನು. ಆತನು ಕೊಡಲೊಪ್ಪದಿರಲು ಭೀಷ್ಮನು ದಂಡೆತ್ತಿಹೋಗಿ ಆತನನ್ನು ಸೆಲಕ್ಕಿಕ್ಕಿ ಆ ಮೂವರು ಕನ್ಯೆಯರನ್ನೂ ತಂದು ತಮ್ಮನಿಗೆ ಮದುವೆಮಾಡಿದನು. ಆ ವಿಚಿತ್ರವೀರ್ಯನಿಗೆ ಅಂಬೆಯಲ್ಲಿ ಧೃತರಾಷ್ಟ್ರನೆಂಬ ಹುಟ್ಟುಗುರುಡನೂ, ಅಂಬಿಕೆಗೆ ಪಾಂಡು ಕುಮಾರನೂ, ಅಂಬಾಲಿಕೆಗೆ ವಿದುರನೂ ಹುಟ್ಟಿದ ತರುವಾಯ ವಿಚಿತ್ರವೀರ್ಯನು ರೋಗದಿಂದ ಸತ್ತುಹೋದನು. ಭೀಷ್ಮನು ಆ ಮಕ್ಕಳನ್ನು ಸಾಕಿ ಕೀರ್ತಿಶಾಲಿಯಾದನು " ಎಂದು ಕುರುವಂಶದ ವಿಸ್ತಾರವನ್ನು ಹೇಳಿ ಅಂಧಕವೃಷ್ಟಿಯನ್ನು ಕುರಿತು ಪುನಃ ಆ ಮಂತ್ರಿಯು " ರಾಜನೆ! ವಿಚಿತ್ರವೀರ್ಯನ ಮಕ್ಕಳಿಗೆ ನಿನ್ನ ಪುತ್ರಿಯರನ್ನು ಕೇಳಲು ಭೀಷ್ಮನು ನಮ್ಮನ್ನು ಕಳುಹಿಸಿದನು " ಎಂದನು. ಆ ಮಾತನ್ನು ಕೇಳಿ ಅಂಧಕವೃಷ್ಟಿಯು " ನಿಮ್ಮ ಮೂವರು ರಾಜಕುಮಾರರಲ್ಲಿ ಜ್ಯೇಷ್ಠನಿಗೆ ನಮ್ಮ ಪುತ್ರಿಯರನ್ನು ಕೊಡುವೆವು " ಎಂದನು. ಮಂತ್ರಿಯು " ದೊರೆತನಕ್ಕೆ ಧೃತರಾಷ್ಟ್ರನು ಕರ್ತ, ಅವನೇ ಜ್ಯೇಷ್ಠ " ಎಂದನು. ಆ ಮಾತನ್ನುಕೇಳಿ ಅಂಧಕವೃಷ್ಟಿಯು ಧೃತರಾಷ್ಟ್ರನು ಹುಟ್ಟುಗುರುಡನಾದರೂ ದೊರೆತನಕ್ಕೆ ಅವನೇ ಕರ್ತನಾದುದರಿಂದ ಅವನಿಗೇ ತನ್ನ ಪುತ್ರಿಯರನ್ನು ಕೊಡಬೇಕೆಂದೆಣಿಸಿ ಮಂತ್ರಿಯನ್ನು ಕುರಿತು " ಧೃತರಾಷ್ಟ್ರನಿಗೆ ನರಪತಿವೃಷ್ಟಿಯು ಮಗಳನ್ನು ಕೊಡುವೆನು " ಎಂದನು. ಮಂತ್ರಿಯು ಸಂತುಷ್ಟನಾಗಿ ಹೊರಟುಹೋಗಿ ಭೀಷ್ಮನಿಗೆ ಆ ಸಮಾಚಾರವನ್ನು ಹೇಳಿದನು. ಭೀಷ್ಮನು ಆ ಮಾತನ್ನು ಕೇಳಿ ಸಂತುಷ್ಟನಾಗಿ ಶೌರೀಪುರಕ್ಕೆ ಹೋಗಿ ಧೃತರಾಷ್ಟ್ರನಿಗೆ ಗಾಂಧಾರಿಯನ್ನು ತಂದು ಮದುವೆಮಾಡಿದನು. ಅಂಧಕವೃಷ್ಟಿಯು ಬಳುವಳಿ ಕೊಟ್ಟುಕಳುಹಲು ಭೀಷ್ಮನು ಮದವಕ್ಕಳೊಡನೆ ಹಸ್ತಿನಾಪುರಕ್ಕೆ ಬಂದನು. ಮತ್ತೊಂದು ದಿನ ಭೀಷ್ಮನು ಪಾಂಡುವಿಗೆ ಕೊಂತಿಯನ್ನು ಕೇಳಲು ಮಂತ್ರಿಗಳನ್ನು ಕಳುಹಿಸಿದನು. ಅಂಧಕವೃಷ್ಟಿಯು ನೂತನಪಾಂಡುರೋಗಪೀಡಿತನಿಗೆ ಮಗಳನ್ನು ಕೊಡುವುದುಚಿತವಲ್ಲವೆಂದು ಹೇಳಲು ಅವರು

ಹೋಗಿ ಆ ವಾರ್ತೆಯನ್ನು ತಿಳಿಸಿದರು. ಆ ಮಾತನ್ನು ಕೇಳಿ ಕೊಂತಿಯು ರೂಪ ಲಾವಣ್ಯಕ್ಕೆ ಮೋಹಿತನಾಗಿ ಆ ಪಾಂಡುಕುಮಾರನು ಮರುಗುತ್ತಿದ್ದು ಒಂದು ದಿನ ನಗರದ ಬಹಿರುದ್ಯಾನಕ್ಕೆ ಹೋಗಿ ವಿಹರಿಸುತ್ತಿದ್ದನು. ಅಲ್ಲೊಬ್ಬ ಖೇಚರನು ತನ್ನ ಪತ್ನಿಯೊಡನೆ ಕ್ರೀಡಿಸುತ್ತಿದ್ದು ಕೈಬೆರಳಿನ ಮುದ್ರಿಕೆಯನ್ನು ಮರೆತುಬಿಟ್ಟು ಹೋಗಿದ್ದನು. ಅದನ್ನು ತೆಗೆದು ಪಾಂಡುರಾಜನು ತನ್ನ ಕೈಗಿಟ್ಟುಕೊಂಡಿರಲು ಆ ವಿದ್ಯಾಧರನು ಬಂದು ಅಲ್ಲಿ ಹುಡುಕುತ್ತಿರುವುದನ್ನು ನೋಡಿ ಪಾಂಡುಕುಮಾರನು "ನೀವು ಏನನ್ನು ಹುಡುಕುತ್ತಿರುವಿರಿ?" ಎಂದು ಕೇಳಿದನು. ಆ ವಿದ್ಯಾಧರನು "ಇಲ್ಲಿ ನನ್ನ ಕೈಯ ಮುದ್ರಿಕೆಯನ್ನು ಹುಡುಕುತ್ತಿರುವೆನು" ಎಂದನು. ಅದನ್ನು ಕೇಳಿ ಪಾಂಡುರಾಜನು ಮುದ್ರಿಕೆಯನ್ನು ಕೊಟ್ಟನು. ವಿದ್ಯಾಧರನು ಹರ್ಷಿತನಾಗಿ ಹೊಗಳಿ ಆ ಮುದ್ರಿಕೆಯು ಇಷ್ಟಾರ್ಥವನ್ನೀಯುವ ಶಕ್ತಿಯುಳ್ಳುದೆಂದು ಹೇಳಿ ಮಂತ್ರವನ್ನು ಪದೇಶಿಸಿ ತಾನು ಅಪೇಕ್ಷಿಸಿದವರೆಗೂ ಅದು ನಿನ್ನಲ್ಲಿರಲೆಂದೂ ತಾನು ವಿಜಯಾರ್ಧಗಿರಿಯ ದಕ್ಷಿಣಶ್ರೇಣಿಯ ಕಿನ್ನರಗೀತವೆಂಬ ಪಟ್ಟಣದ ವಜ್ರಮಾಲಿಯೆಂಬ ರಾಜನೆಂದೂ ಹೇಳಿ ಹೊರಟುಹೋದನು.

ಇತ್ತ ಮುದ್ರಿಕೆಯ ಸಾಮರ್ಥ್ಯದಿಂದ ನೀರೋಗಿಯಾದ ಪಾಂಡುವು ಒಂದು ವಿಮಾನವನ್ನು ರಚಿಸಿ ತನ್ನ ಗೆಳೆಯರೊಡನೆ ಆಕಾಶಮಾರ್ಗದಲ್ಲಿ ಶೌರೀಪುರಕ್ಕೆ ಹೋಗಿ ಉದ್ಯಾನದಲ್ಲಿ ವಿಹರಿಸುತ್ತಿದ್ದನು. ಅಲ್ಲಿಗೆ ಕೊಂತಿಯು ನಾಲ್ಕೈದರನ್ನು ಮಿಂದು ಗೆಳತಿಯರೊಡನೆ ವನವಿಹಾರಾರ್ಥವಾಗಿ ಬಂದಿದ್ದು ಈ ಸುಂದರ ಪಾಂಡುಕುಮಾರನನ್ನು ನೋಡಿ ಮನವೊಲಿದು ಈತನಾರೆಂದು ಸಖಿಯರನ್ನು ಕೇಳಿದಳು. ಅವರು ಧೃತರಾಷ್ಟ್ರನ ಮದುವೆಯಲ್ಲಿ ಬಂದಿದ್ದ ಗುರುತಿನಿಂದ ಅತನು ಕೊಂತಿಯ ಭಾವನಾದ ಪಾಂಡುಕುಮಾರನೆಂದರು. ಆ ಮಾತನ್ನು ಕೇಳಿ ಬಹು ಹರ್ಷಿತಳಾಗಿ ಅತ್ಯಾಸಕ್ತಿಯಿಂದ ನೋಡುತ್ತಿರ್ದಳು. ಅತನೂ ಆಕೆಯನ್ನು ನೋಡುತ್ತಿದ್ದನು. ಇವರ ಪರಸ್ಪರಾನುರಾಗವನ್ನು ಕಂಡು ಸಖಿಯರು ಅವರಿಗೆ ಗಾಂಧರ್ವ ವಿವಾಹವನ್ನು ಮಾಡಿದರು. ಇವರಿಬ್ಬರೂ ಏಳೆಂಟು ದಿನಗಳವರೆಗೆ ಗುಪ್ತವಾಗಿ ಅನುರಕ್ತರಾಗಿದ್ದು ತರುವಾಯ ಪಾಂಡುಕುಮಾರನು ತನ್ನೂರಿಗೆ ಹೋದನು.

ಇತ್ತ ಕೊಂತಿಗೆ ಗರ್ಭಚಿಹ್ನೆಯು ತೋರಿ ದಿನದಿನಕ್ಕೆ ಬೆಳೆದು ಶುಭಲಗ್ನದಲ್ಲಿ ಗುಪ್ತವಾಗಿ ಗಂಡುಮಗುವನ್ನು ಹಡೆದಳು. ಆ ಶಿಶುವನ್ನು ಒಂದು ಮಂದಾಸನಲ್ಲಿ ರತ್ನರಾಶಿಯ ಮಧ್ಯದಲ್ಲಿಟ್ಟು ಚಂದ್ರವಂಶದ ಮಗುವೆಂದು ಬರೆದು ಆ ಮಂದಾಸನನ್ನು ಸಖಿಯರು ಕಾಳಿಂದೀನದಿಯಲ್ಲಿ ಬಿಟ್ಟರು. ಅದು ಚಂಪಾಪುರದ

ಒಳಿಯಲ್ಲಿ ಓರ್ವ ಅಂಬಿಗನಿಗೆ ಸಿಕ್ಕಲು ಅವನು ಮನೆಗೊಯ್ದು ನೋಡುವಲ್ಲಿ ಆ ಮಗುವು ರತ್ನರಾಶಿಯ ನಡುವಿನಲ್ಲಿ ತನ್ನ ಎರಡು ಕೈಗಳನ್ನು ಕಿವಿಗಳಿಗಿಟ್ಟು ಬಂಗಾರದ ಪುತ್ಥಳಿಯಂತೆ ಶೋಭಿಸುವುದನ್ನು ಕಂಡು ಸಂತುಷ್ಟನಾಗಿ ಕರ್ಣನೆಂದು ಮಗುವಿಗೆ ಹೆಸರನ್ನಿಟ್ಟು ಸಾಕುತ್ತಿದ್ದನು. ಆ ಸಮಾಚಾರವನ್ನು ಆ ನಗರದ ಸೂರ್ಯನೆಂಬ ರಾಜನು ಕೇಳಿ ತಾನು ಅಪುತ್ರವಂತನಾದುದರಿಂದ ಆ ಮಗುವನ್ನೂ ಮಂದಾಸನ್ನೂ ತರಿಸಿ ಅದರಲ್ಲಿ ಚಂದ್ರವಂಶದವನೆಂದು ಬರೆದಿದ್ದುದನ್ನು ನೋಡಿ ಬಹಳ ಸಂತೋಷಪಟ್ಟು ತನ್ನ ಹೆಂಡತಿ ರಾಧೆಗೆ ಕೊಟ್ಟು ಚೆನ್ನಾಗಿ ಸಾಕುತ್ತಿರಲು ಇದು ಪ್ರಾತಃಸಂಧ್ಯೆಯ ಬೆಳಕಿನಂತೆ ಬೆಳೆಯುತ್ತಿದ್ದಿತು.

೬. ಪಾಂಡು ಕೊಂತಿ ಮಾದ್ರಿವಿವಾಹ ಸಂಧಿ.

ಅತ್ತ ಸೂರ್ಯರಾಜನೂ ರಾಧೆಯೂ ಕರ್ಣನನ್ನು ಸಾಕುತ್ತಿರಲು ಇತ್ತ ಕೊಂತಿಯ ರಹಸ್ಯಕಾರ್ಯವು ಹೊರಬೀಳಲು ತಂದೆ-ಅಂಧಕವೃಷ್ಟಿಯು ಚಿಂತಾಕ್ರಾಂತನಾಗಿ ಯೋಚಿಸಿ ಇನ್ನು ಕೊಂತಿಯನ್ನು ಪಾಂಡುವಿಗೆ ಕೊಟ್ಟು ಮದುವೆ ಮಾಡುವುದೇ ಲೇಸೆಂದೆಣಿಸಿ ಭೀಷ್ಮನಿಗೆ ಹೇಳಿಕಳುಹಿದನು. ಅದನ್ನು ಕೇಳಿ ಪಾಂಡುವು ಮಾದ್ರಿಯನ್ನೂ ಕೊಡುವುದಾದರೆ ಕೊಂತಿಯನ್ನು ಮದುವೆಯಾಗುವುದಾಗಿ ಹೇಳಲು ಹಾಗೆಯೇ ಆಗಲೆಂದು ಅಂಧಕವೃಷ್ಟಿಯು ಇಬ್ಬರನ್ನೂ ಕೊಟ್ಟು ಮದುವೆಮಾಡಿ ಬಳುವಳಿಯನ್ನು ಕೊಟ್ಟು ಕಳುಹಿದನು. ಧೃತರಾಷ್ಟ್ರ ಪಾಂಡು ಕುಮಾರರು ಸುಖದಿಂದಿರುವಾಗ ಒಂದು ದಿನ ಭೀಷ್ಮನು "ರಾಜ್ಯವನ್ನು ಹಿರಿಯನಿಗೆ ಕೊಡಬೇಕೆಂದರೆ ಅತನು ಕುರುಡ; ಹಿರಿಯನಿರುವಾಗ ಕಿರಿಯನಿಗೆ ಕೊಡತಕ್ಕುದೂ ಇಲ್ಲ" ಎಂದು ಸಚಿವರಲ್ಲಿ ಆಲೋಚಿಸಿ ರಾಜ್ಯವನ್ನು ಧೃತರಾಷ್ಟ್ರ, ಪಾಂಡುರಾಜರಿಬ್ಬರಿಗೂ ಹಂಚಿಕೊಟ್ಟು ಬಾಲಕನಾಗಿದ್ದ ವಿದುರನನ್ನು ತಾನು ಸಾಕುತ್ತಿದ್ದನು. ಅವರೀರ್ವರೂ ಸುಖದಿಂದ ರಾಜ್ಯವಾಳುತ್ತ ವಸಂತರ್ತುವಿನಲ್ಲಿ ಒಂದು ದಿನ ಪಾಂಡುವು ಮಾದ್ರಿಯೊಡನೆ ವಿಮಾನವನ್ನೇರಿ ವನಕ್ಕೆ ಹೋಗಿ ದಂಪತಿಗಳು ರತಿಕ್ರೀಡೆಯನ್ನಾಡಿ ಬಳಿಕ ಪಾಂಡುಕುಮಾರನು ದಿಕ್ಕುಗಳನ್ನು ನೋಡುತ್ತಿರುವಾಗ ಮುಂದೆ ಎರಡು ಹುಲ್ಲೆಗಳು ಓಡಾಡುತ್ತಿರುವುದನ್ನು ಕಂಡು ಕೋಪದಿಂದ ಬಾಣಪ್ರಯೋಗವನ್ನು ಮಾಡಿ ಕೊಂದನು. ದಯೆಯಿಲ್ಲದೆ ಆ ಮೃಗಗ

ಳನ್ನು ಕೊಂದುದನ್ನು ನೋಡಿ ಮಾದ್ರಾದೇವಿಯು ಮರುಕದಿಂದ "ನಿರಪರಾಧಿ ಗಳಾದ ಮೃಗಗಳನ್ನು ದಯೆಯಿಲ್ಲದೆ ವಿಪರೀತವ್ಯಾಪಾರದಿಂದ ಕೊಲ್ಲುವುದು ರಾಜರ ಒಳ್ಳೆಯ ನಡತೆಯೇ?' ಎನ್ನಲು ಆ ಮಾತು ಮನಸ್ಸಿಗೆ ನಾಟಿ ಬಿಲ್ಲು ಬಾಣಗಳನ್ನು ಬಿಸಾಟು ಪಾಂಡುವು ದಯಾರ್ದ್ರಹೃದಯನಾಗಿರುವ ವೇಳೆಯಲ್ಲಿ ಅಲ್ಲಿಗೋರ್ವ ದಿವ್ಯಜ್ಞಾನಿಯಾದ ಮುನಿಯು ಬರಲು ಆ ದಂಪತಿಗಳು ಆತನ ಬಳಿಗೆ ಹೋಗಿ ಭಕ್ತಿಯಿಂದ ವಂದಿಸಿ ಕೈಮುಗಿದು ಪಾಂಡುರಾಜನು "ಎಲೆ ಮುನಿ ಪತಿಯೆ! ಎರಡು ಜಿಂಕೆಗಳನ್ನು ಕಂಡು ನನಗೆ ಕೋಪಬರಲು ಕಾರಣವೇನು?" ಎಂದು ಕೇಳಿದನು. ಆ ಮುನಿಯು "ಕುರುಣಿಯೆಂಬ ಅಗ್ರಹಾರದಲ್ಲಿ ವಟುಕ ನೆಂಬ ಬ್ರಾಹ್ಮಣನೂ ಅವನಿಗೆ ಅಗ್ನಿಲೆಯೆಂಬ ಪತ್ನಿಯೂ ಇದ್ದರು. ಅವರಿಗೆ ನೀನು ದಾರಕನೆಂಬ ಮಗನಾಗಿ ಯಾವಾಗಲೂ ವೇದವನ್ನೋದುತ್ತಿರಲು ಜಿನ ಮಾರ್ಗದಲ್ಲಿ ನಿನಗೆ ಆಸಕ್ತಿಯು ಹುಟ್ಟಿತು. ವೇದವೋದುವುದನ್ನು ಬಿಟ್ಟು ಅಹಿಂಸಾದಿ ಪಂಚಾಣುವ್ರತಗಳನ್ನು ಧರಿಸಿ ನಿಶ್ಚಿಂತನಾಗಿ ವಸಂತಮಾಲೆಯೆಂಬೋ ರ್ವ ವನಿತೆಯೊಡನೆ ಕೂಡಿರಲು ಅದು ದ್ವಿಜವಂಶಕ್ಕೆ ಕುಂದಕವಾಯಿತೆಂದು ಕೋಪ ದಿಂದ ವಟುಕನು ಒಂದು ಧಿಕ್ಕರಿಸಿದರೂ ನೀನು ಆ ಸೂಳೆಯೊಡನೆ ಪ್ರೀತಿಯಿಂ ದಿದ್ದು ಒಂದುದಿನ ಆ ಊರಿನ ನಂದನವನಕ್ಕೆ ಹೋಗಿ ರತಿಕ್ರೀಡೆಯನ್ನು ನೂಡು ತ್ತಿರುವಾಗ ಆ ವಟುಕನು ಬಂದು ಕೋಪದಿಂದ ಖಡ್ಗವನ್ನು ತೆಗೆದುಕೊಂಡು ಇರಿದು ಕೊಲ್ಲಲು ನೀನು ಆ ವ್ರತದ ಫಲದಿಂದ ಪಾಂಡುಕುಮಾರನಾಗಿ ಹುಟ್ಟಿದೆ. ಆ ಪಟುಕನು ಮಾಡಿದ ಅನ್ಯಾಯವನ್ನು ತಿಳಿದು ಆ ನಗರದ ಹಾರವರೆಲ್ಲ ಅವನನ್ನು ಬಹಿಷ್ಕರಿಸಲು ಅವನು ಆರ್ತಧ್ಯಾನದಿಂದ ಮಡಿದು ಹರಿಣನಾದನು. ನಿನಗೆ ಅದ ನ್ನು ನೋಡಿದ ಕೂಡಲೆ ಕೋಪಬಂದು ಅದನ್ನು ಕೊಂದುಹಾಕಿದೆ." ಎಂದುಹೇಳಿ ಶ್ರೇಷ್ಠವಾದ ಧರ್ಮೋಪದೇಶವನ್ನೂ ಮಾಡಿದರು. ಅದನ್ನು ಕೇಳಿ ದಂಪತಿಗಳು ಹರ್ಷಿತರಾಗಿ ನಗರಕ್ಕೆ ಬಂದು ಧರ್ಮೋದ್ಯೋಗದಲ್ಲಿ ಆಸಕ್ತರಾಗಿರಲು ಕೊಂತಿ ಯ ಗರ್ಭದಲ್ಲಿ ಅಚ್ಯುತಸ್ವರ್ಗದಿಂದ ದೇವನು ಚ್ಯುತನಾಗಿ ಬಂದು ಶುಭಲಗ್ನದಲ್ಲಿ ಪುತ್ರನಾಗಿ ಹುಟ್ಟಿದನು. ಆಶಿಶುವಿಗೆ ಹತ್ತನೆಯ ದಿವಸ ಯುಧಿಷ್ಠಿರನೆಂದೂ ಧರ್ಮೋ ದ್ಯೋಗದಲ್ಲಿರುವಾಗ ಹುಟ್ಟಿದುದರಿಂದ ಧರ್ಮಜನೆಂದೂ ಹೆಸರನ್ನಿಟ್ಟು ಪಾಂಡು ರಾಜನು ಸಂತೋಷಚಿತ್ತನಾಗಿದ್ದನು. ತರುವಾಯ ಅಚ್ಯುತಸ್ವರ್ಗದಿಂದ ಮತ್ತೋರ್ವ ದೇವನು ಚ್ಯುತನಾಗಿ ಒಂದು ಕೊಂತಿಯ ಗರ್ಭದಲ್ಲಿ ಜನಿಸಿ ಒಂಬತ್ತ ನೆಯ ತಿಂಗಳಲ್ಲಿ ಮೂಲನಕ್ಷತ್ರದಲ್ಲಿ ಹುಟ್ಟಿದನು. ಅದು ಅನಿಷ್ಟನೆಂದು ಬಗೆದು

ಬಂಧುಗಳು ಪಾಂಡುವಿಗೆ ಹೇಳದೆ ಆ ಮಗುವನ್ನು ಸುಡುಗಾಡಿನಲ್ಲಿ ಹಾಕಿಸಿದರು. ಆ ಮಗುವಿನ ಪುಣ್ಯದೇವತೆಯು ಸುಂಟರಗಾಳಿಯ ಆಕಾರದಿಂದ ಅದನ್ನು ಬಳಸಿ ರಕ್ಷಿಸಿದ್ದಿತು. ಆ ವಿಷಯವನ್ನು ಪಾಂಡುರಾಜನು ತಿಳಿದು ಮಸಾಣಕ್ಕೆ ಹೋಗಲು ಆ ಸುಂಟರಗಾಳಿಯು ಬೈಲಾದುದು. ಮಗನ ಪುಣ್ಯಸ್ವಭಾವವನ್ನು ಕಂಡು ಸಂತೋಷಪಟ್ಟು ಅದನ್ನು ಮನೆಗೆ ತೆಗೆದುಕೊಂಡು ಬಂದು ಆ ಮಗುವಿಗೆ ಜಾತಕರ್ಮವನ್ನು ಮಾಡಿದನು. ಭೀಮ—ಭಯಂಕರ ಶ್ಮಶಾನದಲ್ಲಿ ಗಾಳಿಯಿಂದ ಆ ಮಗುವು ರಕ್ಷಿಸಲ್ಪಟ್ಟಿದ್ದುದರಿಂದ ಭೀಮನೆಂದೂ ವಾಯುಕುಮಾರನೆಂದೂ ಹೆಸರನ್ನಿಟ್ಟನು. ತದನಂತರ ಆಚ್ಯುತಸ್ವರ್ಗದಿಂದ ಇನ್ನೊಬ್ಬ ದೇವನು ಚ್ಯುತನಾಗಿ ಬಂದು ಕೊಂತಿಯ ಗರ್ಭದಲ್ಲಿ ಜನಿಸಿ ನವಮಾಸ ತುಂಬಿದಮೇಲೆ ಉತ್ತಮ ಲಗ್ನದಲ್ಲಿ ಇಂದ್ರವೈಭವದಿಂದ ಜನಿಸಿದನು. ಹತ್ತನೆಯ ದಿನದಲ್ಲಿ ಆ ಮಗುವಿಗೆ ಅರ್ಜುನನೆಂದೂ ಇಂದ್ರಸುತನೆಂದೂ ನಾಮಕರಣಮಾಡಿ ಪಾಂಡುರಾಜನು ಸಂತೋಷದಿಂದಿದ್ದನು. ಚರಮ ಶರೀರಿಗಳೂ ಅನುಪಮಶಕ್ತಿಸಂಪನ್ನರೂ ಆದ ಆ ಮೂವರೂ ಬೆಳೆಯುತ್ತಿದ್ದರು. ಮತ್ತೆ ಆ ಆಚ್ಯುತಸ್ವರ್ಗದಿಂದ ಇಬ್ಬರು ದೇವತೆಗಳು ಚ್ಯುತರಾಗಿ ಬಂದು ಪಾಂಡ್ಯವಿನ ಕಿರಿಯ ಹೆಂಡತಿ ಮಾದ್ರಿಯ ಗರ್ಭದಲ್ಲಿ ಜನಿಸಿ ನವಮಾಸತುಂಬಲು ಉತ್ತಮ ಲಗ್ನದಲ್ಲಿ ಅವಳಿಮಕ್ಕಳಾಗಿ ಹುಟ್ಟಿದರು. ಅವರಿಗೆ ನಕುಲ ಸಹದೇವರೆಂದು ನಾಮಕರಣಮಾಡಿದನು. ಅವರೈವರೂ ಮಹಾಬಲಶಾಲಿಗಳಾಗಿ ಬೆಳೆಯುತ್ತಿರಲು ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ಒಬ್ಬಮಗನು ಹುಟ್ಟಿದನು. ಅವನಿಗೆ ದುರ್ಯೋಧನನೆಂದು ನಾಮಕರಣಮಾಡಿದರು. ತರುವಾಯ ದುಶ್ಶಾಸನ, ದುರ್ದರ್ಶನ, ದುರ್ಮರ್ಷಣ ಮೊದಲಾದ ನೂರುಮಂದಿ ಮಕ್ಕಳು ಹುಟ್ಟಿದರು. ಆಮೇಲೆ ದುಶ್ಶಲ್ಯೆಯೆಂಬ ಮಗಳು ಹುಟ್ಟಿದಳು. ಆಕೆಯನ್ನು ಸಿಂಧುದೇಶದ ಸೈಂಧವರಾಜನಿಗೆ ಮದುವೆಮಾಡಿ ಕೊಟ್ಟರು. ಪಾಂಡುವಿನ ಐವರು ಮಕ್ಕಳೂ ಧೃತರಾಷ್ಟ್ರನ ನೂರುಮಂದಿ ಮಕ್ಕಳೂ ಯಾವಾಗಲೂ ಕಾದಾಡುತ್ತಲೇ ಇದ್ದರು.

೭. ಅಂಧಕವೃಷ್ಣಿ ಭವಾವಳಿ ಸಂಧಿ.

ಇತ್ತ ಅಂಧಕವೃಷ್ಣಿಯು ರಾಜ್ಯವಾಳುತ್ತ ಹನ್ನೆರಡು ವರುಷಗಳು ಕಳೆಯುತ್ತಿರಲು ಒಂದುದಿನ ಗಂಧಮಾದನಪರ್ವತದ ತಪ್ಪಲಲ್ಲಿ ಸುಪ್ರತಿಷ್ಠಮುನಿಯು ಯೋಗಾರೂಢನಾಗಿರುವಾಗ ಪೂರ್ವಜನ್ಮದ ವೈರಿಯಾದ ಸುದರ್ಶನನೆಂಬ ದೈತ್ಯ

ನು ಬಂದು ಆ ಮುನಿಗೆ ಉಪಸರ್ಗಮಾಡಿದನು. ಅದರಿಂದ ಮುನಿಯ ಕರ್ಮವು ಸವೆದು ಶುಕ್ಲಧ್ಯಾನವು ಪ್ರಾಪ್ತವಾಯ್ತು. ಆಗ ದೇವತೆಗಳು ಬಂದು ಪೂಜಿಸಿದರು. ಅಂಧಕವೃಷ್ಟಿಯೂ ಆ ಯೋಗಿವರ್ಯನ ಗಂಧಕುಟಿಮಂಟಪಕ್ಕೆ ಬಂದು ಪೂಜಿಸಿ ವಂದಿಸಿ ಆ ಧನುಜನು ಬಾಧೆಪಡಿಸಲು ಕಾರಣವೇನೆಂದು ಕೇಳಿದನು. ಆ ಯೋಗಿಯು ಉತ್ತರವನ್ನು ಹೇಳುತ್ತಾನೆ— ಜಂಬೂದ್ವೀಪದ ಭರತಕ್ಷೇತ್ರದ ಕಾಂಚೀಪುರದಲ್ಲಿ ಸೂರದತ್ತ ಸುದತ್ತರೆಂಬಿಬ್ಬರು ವರ್ತಕರಿದ್ದರು. ಅವರು ವ್ಯಾಪಾರನಿಮಿತ್ತವಾಗಿ ಪರದೇಶಕ್ಕೆ ಹೋಗಿ ವ್ಯಾಪಾರವನ್ನು ಮಾಡಿಕೊಂಡು ಹಿಂದಿರುಗಿ ಬಂದು ತಮ್ಮ ಹೆಚ್ಚು ಸಾಮಾನುಗಳಿಗೆ ಸುಂಕದವರು ಹೆಚ್ಚು ಸುಂಕವನ್ನು ವಸೂಲುಮಾಡುವರೆಂದು ಯೋಚಿಸಿ ಪಟ್ಟಣದ ಹೊರಗೆ ಒಂದು ಪೊದರಿನಲ್ಲಿ ತಾವು ತಂದ ರತ್ನವನ್ನೆಲ್ಲ ಹುಗಿದಿಟ್ಟು ಹೋದರು. ಅಲ್ಲಿಗೊಬ್ಬ ಬೆಸ್ತರವನು ಔಷಧಿಮೂಲಿಕೆಯನ್ನು ಹುಡುಕುವುದಕ್ಕಾಗಿ ಬಂದು ಆ ಪೊದರನ್ನು ಅಗೆದು ನೋಡುವಲ್ಲಿ ಆ ರತ್ನರಾಶಿಯು ದೃಷ್ಟಿಗೋಚರವಾಯ್ತು. ಅದನ್ನೆಲ್ಲ ಮನೆಗೊಯ್ದನು. ಮರುದಿನ ಆ ವರ್ತಕರು ಬಂದು ನೋಡುವಾಗ ತಾವು ಹೂಳಿಟ್ಟಿದ್ದ ದ್ರವ್ಯವಿಲ್ಲದಿರಲು ಪರಸ್ಪರವಾಗಿ ಸಂಶಯಪಟ್ಟು ಕೋಪದಿಂದ ಹೊಡೆದಾಡಿಕೊಂಡು ಸತ್ತು ಮೊದಲನೆಯ ನರಕದಲ್ಲಿ ಹುಟ್ಟಿ ಅಲ್ಲಿಯೂ ಪರಸ್ಪರವಾಗಿ ಕಾದಾಡುತ್ತ ದುಃಖವನ್ನನುಭವಿಸಿ ಸತ್ತು ಕುರಿಯ ಹಿಂಡಿನಲ್ಲಿ ಟಗರುಗಳಾಗಿ ಹುಟ್ಟಿ ಬೆಳೆದು ಪರಸ್ಪರವಾಗಿ ಹೋರಾಡಿ ಮಡಿದು ಗಂಗಾನದೀತೀರದಲ್ಲಿ ಹೋದಿಗಳಾಗಿ ಜನಿಸಿ ಬೆಳೆದು ಕಾದಾಡಿ ಸತ್ತು ಸಮ್ಮೇದಶಿಖರಿಯಲ್ಲಿ ಕಪಿಗಳಾಗಿ ಹುಟ್ಟಿ ಅಲ್ಲಿಯೂ ಒಂದಕ್ಕೊಂದು ಕಚ್ಚಾಡಿ ಅವುಗಳಲ್ಲಿ ಒಂದು ಕಪಿಯು ಸತ್ತುಹೋಯ್ತು. ಮತ್ತೊಂದು ಕಾಶಗತಪ್ರಾಣವಾಗಿರುವಾಗ ಆಕಾಶಮಾರ್ಗದಿಂದ ಸುರಗುರುದೇವಗುರುಗಳೆಂಬ ಚಾರಣಮುನಿಗಳು ಬಂದು ಆ ಕಪಿಯು ಅವನ್ನ ಭವ್ಯಜೀವವೆಂದು ದಿವ್ಯಜ್ಞಾನದಿಂದ ತಿಳಿದು ದಯೆಯಿಂದ ಅದಕ್ಕೆ ತಮ್ಮ ಕಮಂಡಲದ ನೀರನ್ನೆರಚಿ " ಎಲ್ಲೈ ಮರ್ಕಟನೆ! ಧರ್ಮಶೂನ್ಯನಾಗಿ ನೀನು ಕೋಪವನ್ನು ಹೊಂದಿ ದುರ್ಗತಿಗೆ ಹೋಗುವುದನ್ನು ಬಿಟ್ಟು ಸದ್ಗತಿಗೆ ಹೋಗುವ ಸಮತಾಭಾವವನ್ನು ಹೊಂದು. " ಎಂದುಪದೇಶಿಸಿ ಸಸ್ಯಸನವ್ರತವನ್ನು ಕೊಡಲು ಅದು ಕೈಕೊಂಡು ಕಣ್ಣುಬಿಟ್ಟು ನೋಡಿತು. ಆಗ ಮುನಿಗಳು ಅದರ ಕಿವಿಯಲ್ಲಿ " ಓಂ ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಇರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏ ಸವ್ವಸಾಹೂಣಂ ' ಎಂಬೀ ಪಂಚನಮಸ್ಕಾರಮಂತ್ರಗಳನ್ನು ಪದೇ

ಶಿಸಲು ಅದನ್ನು ಆಲಿಸಿ ಕೇಳಿ ಮಡಿದು ಸೌಧರ್ಮವೆಂಬ ಮೊದಲ ಸ್ವರ್ಗದಲ್ಲಿ ಚಿತ್ರಾಂಗದನೆಂಬ ದೇವನಾಗಿ ಹುಟ್ಟಿ ಸುಖವನ್ನನುಭವಿಸಿ ಅಲ್ಲಿಂದ ಬಂದು ಭರತ ಕ್ಷೇತ್ರದ ಕಾಂಚೀಪುರದಲ್ಲಿ ಜಿತಸೇನರಾಜನಿಗೂ, ಸುಭದ್ರಾದೇವಿಗೂ ಸಾಗರಸೇನನೆಂಬ ಮಗನಾಗಿ ಹುಟ್ಟಿ ಬೆಳೆದು ಮಂಡಲಿಕರಾಜನಾಗಿ ಒಂದುದಿನ ವನವಿಹಾರಾರ್ಥವಾಗಿ ಹೋಗಿ ಅಲ್ಲಿ ಕಪಿಗಳು ಜಗಳವಾಡುತ್ತಿರುವುದನ್ನು ಕಂಡು ಭವಸ್ಮರಣೆಯಾಗಲು ವೈರಾಗ್ಯವಿಂದ ದೀಕ್ಷೆಯನ್ನು ಪಡೆದು ತಪಸ್ಸುಮಾಡಿ ಮಡಿದು ಗ್ರೈವೇಯಕವೆಂಬ ಸ್ವರ್ಗದಲ್ಲಿ ಅಹಮಿಂದ್ರನಾಗಿ ಹುಟ್ಟಿ ಸುಖವನ್ನನುಭವಿಸಿ ಬಂದು ಸುರಮ್ಯದೇಶದ ಪೌದನಪುರದ ದೊರೆ ಸುಸ್ಥಿರನಿಗೂ ಲಕ್ಷ್ಮಿಣಿಗೂ ಸುಪ್ರತಿಷ್ಠನೆಂಬ ಮಗನಾಗಿ ಜನಿಸಿ ಬೆಳೆದು ಸೂರ್ಯಾಸ್ತಮಾನವನ್ನು ಕಂಡು ವೈರಾಗ್ಯಗೊಂಡು ದೀಕ್ಷೆಯನ್ನು ಪಡೆದು ಕರ್ಮವನ್ನು ಸಮೆಯಿಸಿದ ನಾನೇ ಆ ಸೂರದತ್ತನೆಂಬ ವರ್ತಕನ ಜೀವವು.

ಅತ್ತ ಆ ಸುದತ್ತನೆಂಬ ವರ್ತಕನು ಕೋತಿ, ನರಿ, ನಾಯಿ, ಹಂದಿ, ಮೊದಲಾದ ಅನೇಕ ಭವಗಳಲ್ಲಿ ತಿರುಗಿ ಬಂದು ಸಿಂಧುನದೀತೀರದ ಋಷಿಗಳ ಹಳ್ಳಿಯಲ್ಲಿ ಮೃಗಾಯಣನಿಗೂ ವಿಶಾಖೆಗೂ ಗೌತಮನೆಂಬ ಮಗನಾಗಿ ಹುಟ್ಟಿ ತಪಸ್ವಿಯಾಗಿ ಸತ್ತು ಸುದರ್ಶನನೆಂಬ ಜ್ಯೋತಿಷ್ಕದೇವನಾಗಿ ಹುಟ್ಟಿ ಈಗ ನಮಗೆ ಈ ಬಾಧೆಯನ್ನು ಕೊಟ್ಟನು ಎಂದು ಸುಪ್ರತಿಷ್ಠಯೋಗೀಶ್ವರರು ಅಂಧಕವೃಷ್ಟಿಗೆ ಹೇಳಲು ಆ ಮಾತನ್ನು ಸುದರ್ಶನನು ಕೇಳಿ ಸೊಂದು ಅವರಲ್ಲಿ ಸುದರ್ಶನವೆಂಬ ವ್ರತವನ್ನು ಕೈಕೊಂಡನು. ತರುವಾಯ ಅಂಧಕವೃಷ್ಟಿಯು ತನ್ನ ಪೂರ್ವಭವವೃತ್ತಾಂತವನ್ನು ಆ ಯೋಗೀಶ್ವರರಲ್ಲಿ ಕೇಳಲು ಅವರು ಇಂತೆಂದರು—

ಕೌಶಲದೇಶದ ಅಯೋಧ್ಯಾನಗರದಲ್ಲಿ ಜಿನೇಂದ್ರದತ್ತನೆಂಬ ವರ್ತಕನು ದಿನಕ್ಕೆ ನೂರು ಹೊನ್ನುಗಳಿಂದ ದೇವಪೂಜೆಮಾಡುತ್ತಿದ್ದನು. ಒಂದು ದಿನ ಹಡಗಿನ ವ್ಯಾಪಾರಕ್ಕೆ ಹೋಗಲೆಳಸಿ ರುದ್ರದತ್ತನೆಂಬ ಹಾರವಸನ್ನು ಕರೆದು ಪ್ರತಿದಿನ ನೂರು ಹೊನ್ನುಗಳಿಂದ ದೇವಪೂಜೆಮಾಡುವಂತೆ ನೇಮಿಸಿ ಹನ್ನೆರಡು ವರುಷಗಳಿಗಾಗುವಷ್ಟು ದ್ರವ್ಯವನ್ನಿತ್ತು ಹಡಗೇರಿಹೋದನು. ಇತ್ತ ರುದ್ರದತ್ತನು ದೇವದ್ರವ್ಯವನ್ನು ದುರ್ವಿನಿಯೋಗಪಡಿಸಬಾರದೆಂದು ಭಾವಿಸದೆ ವೇಶ್ಯಾಲಂಪಟನಾಗಿ ಆ ದ್ರವ್ಯವನ್ನು ವ್ಯಯಮಾಡುತ್ತಿರಲು ಅವನು ಮಹಾಪಾತಕಿಯೆಂದು ರಾಜದೂತರು ಅವನನ್ನು ಊರಿಂದ ತಳ್ಳಿದರು. ಅವನು ಒಂದು ವನದಲ್ಲಿ ಬೇಡರೊಡನೆ ಸೇರಿ ಒಂದುದಿನ ಆ ನಗರದ ದನಗಳನ್ನು ಕದಿಯಲು ಬೇಡರೊಡನೆ ಬಂದು ಪುರನಿವಾಸಿ

ಗಳ ಕೈಗೆ ಸಿಕ್ಕಿ ಅವರಿಂದ ಕೊಲ್ಲಲ್ಪಟ್ಟು ಸಪ್ತಮನರಕದಲ್ಲಿ ಜನಿಸಿ ಮೂವತ್ತ ಮೂರು ಸಾಗರೋಪಮಕಾಲದವರೆಗೆ ದುಃಖವನ್ನನುಭವಿಸಿ ಒಂದು ಲವಣಸಮುದ್ರದಲ್ಲಿ ತಿಮಿಂಗಿಲ---ವಾನಾಗಿ ಹುಟ್ಟಿ ಅಲ್ಲಿ ಸತ್ತು ಆರನೆಯ ನರಕದಲ್ಲಿ ಹುಟ್ಟಿ ಇಪ್ಪತ್ತೈರಡು ಸಾಗರೋಪಮಕಾಲದವರೆಗೆ ದುಃಖವನ್ನುಂಡು ಬಂದು ಅದೇ ಸಮುದ್ರದಲ್ಲಿ ಪುನಃ ವಾನಾಗಿ ಜನಿಸಿ ಅನೇಕ ವಾನುಗಳನ್ನು ತಿಂದು ಆಯುಷ್ಯವು ತೀರಿದವೀಲೆ ಸತ್ತು ಐದನೆಯ ನರಕದಲ್ಲಿ ಹುಟ್ಟಿ ಹದಿನೇಳು ಸಾಗರೋಪಮ ಕಾಲದವರೆಗೆ ದುಃಖವನ್ನುಂಡು ಬಂದು ಸಿಹ್ಮವಾಗಿ ಹುಟ್ಟಿ ಅನೇಕ ಮೃಗಗಳನ್ನು ಕೊಂದು ತಿಂದು ಸತ್ತು ನಾಲ್ಕನೆಯ ನರಕದಲ್ಲಿ ಹುಟ್ಟಿ ಹತ್ತು ಸಾಗರೋಪಮ ಕಾಲದವರೆಗೆ ದುಃಖವನ್ನನುಭವಿಸಿ ಬಂದು ದೃಷ್ಟಿವಿಷದ ಹಾವಾಗಿ ಹುಟ್ಟಿ ಬಹು ಪಾಪವನ್ನು ಸಂಗ್ರಹಿಸಿಕೊಂಡು ಸತ್ತು ಮೂರನೆಯ ನರಕದಲ್ಲಿ ಜನಿಸಿ ಏಳು ಸಾಗರೋಪಮಕಾಲದವರೆಗೆ ದುಃಖವನ್ನುಂಡು ಬಂದು ಶಾರ್ದೂಲನಾಗಿ ಹುಟ್ಟಿ ಅನೇಕ ಪ್ರಾಣಿಗಳನ್ನು ಕೊಂದು ತಿಂದ ಪಾಪದಿಂದ ಸತ್ತು ಎರಡನೆಯ ನರಕದಲ್ಲಿ ಹುಟ್ಟಿ ಮೂರು ಸಾಗರೋಪಮಕಾಲದವರೆಗೆ ದುಃಖವನ್ನುಂಡು ಬಂದು ಗರುಡನಾಗಿ ಹುಟ್ಟಿ ಅನೇಕ ಜೀವಜಂತುಗಳನ್ನು ಕೊಂದು ತಿಂದು ಸತ್ತು ಪಾಪವಶದಿಂದ ಒಂದನೆಯ ನರಕದಲ್ಲಿ ಹುಟ್ಟಿ ಒಂದು ಸಾಗರೋಪಮಕಾಲದವರೆಗೆ ದುಃಖವನ್ನುಂಡು ಬಂದು ಗಂಡಭೇರುಂಡಪಕ್ಷಿಯಾಗಿ ಜನಿಸಿ ಅನೇಕ ಜೀವಗಳನ್ನು ಕೊಂದು ಮಡಿದು ಅನೇಕ ಕುಯೋನಿಗಳಲ್ಲಿ ಹುಟ್ಟಿ ಸತ್ತು ಕೊನೆಯಲ್ಲಿ ಕರ್ಮೋಪಶಮದಿಂದ ಕುರುಜಾಂಗಣದೇಶದ ಹಸ್ತಿನಾಪುರದಲ್ಲಿ ಗೌತಮಕುಲದ ಕೌಶಿಷ್ಟನೆಂಬ ತಾಪಸಿಗೂ ಅತನ ಸೌಂದರಿಯೆಂಬ ಹೆಂಡತಿಗೂ ಸ್ಯುಗೌತಮನೆಂಬ ಮಗನಾಗಿ ಹುಟ್ಟಿ ಬೆಳೆಯುತ್ತಿರುವಾಗ ಅವನ ಪಾಪಫಲದಿಂದ ಅವನ ಮಾತಾಪಿತೃ ಬಂಧುಗಳೆಲ್ಲ ಅಳಿದರು. ಆತನು ಅಶನವಸನಗಳಿಗಿಲ್ಲದೆ ಭಿಕ್ಷೆಯನ್ನು ಬೇಡಿದರೂ ಕರ್ಮವಶದಿಂದ ದೊರೆಯದಿರಲು ಆ ಊರಿನ ತಿಪ್ಪೆಯಲ್ಲಿ ಸುರಿದ ಎಂಜಲನ್ನು ತಿಂದು ಜೀವಿಸಿಕೊಂಡಿದ್ದನು. ಆತನನ್ನು ಜನಗಳು ನೋಡಿ ಮನುಷ್ಯರೂಪಿನ ಹಂದಿಯೆಂದು ಹೀಯಾಳಿಸಿ ಹೊಡೆದೋಡಿಸಲು ಭಯದಿಂದ ಓಡಿಹೋಗುತ್ತಿರುವಾಗ ಸಾಗರಸೇನನೆಂಬ ನಗ್ನಮುನೀಶನೋರ್ವನು ಆಹಾರನಿಮಿತ್ತವಾಗಿ ನಗರಕ್ಕೆ ಬರುತ್ತಿದ್ದನು. ಅವನನ್ನು ನೋಡಿ ಸ್ಯುಗೌತಮನು, ತನಗಿಂತಲೂ ಆ ನಗ್ನಮುನಿಯು ಬಡವನೆಂದೂ ಅವನನ್ನು ನೋಡಿ ಪುರನಿವಾಸಿಗಳು ತನ್ನನ್ನು ಹೊಡೆಯುವಂತೆ ಆ ನಗ್ನಮುನಿಯನ್ನೂ ಹೊಡೆಯುವರೆಂದೂ ಅದನ್ನು ತಾನು ನೋಡ

ಬೇಕೆಂದೂ ಯೋಚಿಸಿ ಆ ಮುನೀಶನ ಹಿಂದೆ ಹೋದನು. ಆ ನಗರದ ವೈಶ್ರವಣ ನೆಂಬ ವೈಶ್ಯನು ಆ ಮುನಿಪತಿಯನ್ನು ಕಂಡು ವಂದಿಸಿ ತನ್ನ ಮನೆಗೆ ಕರೆದೊಯ್ದನು. ಅದನ್ನು ನೋಡಿ ಸುಗೌತಮನು ಆಶ್ಚರ್ಯಪಡುತ್ತಿರಲು ಅವನನ್ನು ನೋಡಿ ಆ ಮುನೀಶನು " ಈತನ ಕರ್ಮವು ಉಪಶಮಕ್ಕೆ ಬಂದಿದೆ " ಎಂದು ದಿವ್ಯಜ್ಞಾನ ದಿಂದ ತಿಳಿದು ಮರುಕದಿಂದ ಅವನನ್ನು ಕರೆದೊಯ್ದು ಊಟಕ್ಕಿಡಿಸಿದನು. ಅಂದಿ ನಿಂದ ಅವನು ಆ ಮುನಿಯನ್ನು ಬೆಂಬಿಡದೆ ಜೀವಿಸುತ್ತಿದ್ದು ಕೊನೆಗೆ ಅವನಿಗೆ ಆ ಉತ್ತಮವಾದ ರೂಪವನ್ನು ತಾನು ಧರಿಸಬೇಕೆಂಬ ಭಾವನೆಯು ಹುಟ್ಟಿತು. ಆ ವಿಷಯವನ್ನು ಮುನೀಶನು ದಿವ್ಯಜ್ಞಾನದಿಂದ ತಿಳಿದು ಕಾರುಣ್ಯದಿಂದ ದೀಕ್ಷೆಯ ನ್ನಿತ್ತು ಅವನಿಗೆ ಶ್ರೀಗೌತಮನೆಂಬ ಹೆಸರನ್ನಿಟ್ಟನು. ಆತನು ನಿರತಿಚಾರವಾಗಿ ಆ ವ್ರತವನ್ನು ಪಾಲಿಸಿ ಮಡಿದು ಗ್ರೈವೇಯಕವೆಂಬ ಸ್ವರ್ಗದಲ್ಲಿ ಅಹಮಿಂದ್ರನಾಗಿ ಹುಟ್ಟಿ ಇಪ್ಪತ್ತೆಂಟು ಸಾಗರೋಪಮಕಾಲದವರೆಗೆ ದಿವ್ಯಸುಖವನ್ನುಂಡು ಅಲ್ಲಿಂದ ಬಂದು ಅಂಧಕವೃಷ್ಟಿಯಾಗಿ ನೀನು ಹುಟ್ಟಿದೆ' ಯೆಂದು ಹೇಳಲು ಅಂಧಕವೃಷ್ಟಿಯು ತನ್ನ ಹತ್ತು ಮುಂದಿ ಮಕ್ಕಳ ಭವಾಂತರಗಳನ್ನೂ ಹೇಳಬೇಕೆಂದು ಪ್ರಾರ್ಥಿಸಲು ಆ ಮುನೀಶನು ಇಂತೆಂದನು.—ಭರತಕ್ಷೇತ್ರದ ಆರ್ಯಖಂಡದ ಮಲಯದೇಶದಲ್ಲಿ ಭದ್ರಿಳವೆಂಬುದೊಂದು ಪೊಳಲು. ಅಲ್ಲಿ ಘನರಥನೆಂಬವನು ರಾಜ್ಯವಾಳುತ್ತಿ ದ್ದನು. ಆ ನಗರದಲ್ಲಿ ಧನದೇವನೆಂಬ ವೈಶ್ಯನಿಗೂ ನಂದೆಯೆಂಬ ಆತನ ಪತ್ನಿಗೂ ಧನದೇವ, ಧನದತ್ತ, ಜಿನದೇವ, ಜಿನಪಾಲ, ಅರ್ಹದ್ದತ್ತ, ಜಿನದತ್ತ, ಅರ್ಹದ್ದಾಸ, ಪ್ರಿಯದತ್ತ, ಮನುಧರ್ಮರುಚಿಯೆಂಬ ಒಂಬತ್ತು ಮಂದಿ ಗಂಡುಮಕ್ಕಳೂ ಪ್ರಿಯದರ್ಶನೆ ಜ್ಯೇಷ್ಠೆಯೆಂಬೀರ್ವರು ಹೆಣ್ಣುಮಕ್ಕಳೂ ಜನಿಸಿ ತಂದೆತಾಯಿಗಳಿಗೆ ಸಂತೋಷವನ್ನುಂಟುಮಾಡುತ್ತಿರುವಾಗ ಒಂದು ದಿನ ಅಲ್ಲಿಯ ವನಕ್ಕೆ ಓರ್ವ ಮುನೀಶನು ಬರಲು ಧನದೇವನು ತನ್ನ ಹೆಂಡತಿಮಕ್ಕಳು ಸಹಿತವಾಗಿ ಅವನಲ್ಲಿಗೆ ಹೋಗಿ ವಂದಿಸಿ ಸದ್ಧರ್ಮೋಪದೇಶವನ್ನು ಕೇಳಿ ವೈರಾಗ್ಯಪರರಾಗಿ ಅವರೆಲ್ಲರೂ ತಪಸ್ವಿಗಳಾದರು. ಅವರಲ್ಲಿ ಧನದೇವನು ಕಠಿನತಪಸ್ಸಿನಿಂದ ಕರ್ಮಕ್ಷಯವನ್ನು ಮಾಡಿ ಮುಕ್ತನಾದನು. ನಂದೆಯು " ಉತ್ತರಭವದಲ್ಲಿಯೂ ಇವರು ನನಗೆ ಮಕ್ಕಳಾಗಲಿ " ಎಂದು ನಿದಾನಶಲ್ಯದಿಂದ ತಪಸ್ಸುಮಾಡಿ ಮಡಿದು ಚಿತವೆಂಬ ಹದಿ ಮೂರನೆಯ ಸ್ವರ್ಗದಲ್ಲಿ ಆಕೆಯೂ ಆ ಮಕ್ಕಳೂ ಹುಟ್ಟಿ ಇಪ್ಪತ್ತು ಸಾಗರೋಪಮಕಾಲದವರೆಗೆ ಸುಖವನ್ನುಂಡು ಅಲ್ಲಿಂದ ಬಂದು ನಂದೆಯು ನಿನಗೆ—ಅಂಧಕವೃಷ್ಟಿಗೆ ಸುಭದ್ರೆಯೆಂಬ ಹೆಂಡತಿಯಾದಳು. ಆ ಒಂಬತ್ತು ಮಂದಿ ಮಕ್ಕಳು

ಸಮುದ್ರವಿಜಯ ಮೊದಲಾದ ಮಕ್ಕಳಾಗಿ ಹುಟ್ಟಿದರು. ಆ ಹೆಣ್ಣುಮಕ್ಕಳು ಕೊಂತಿ ಮಾದ್ರಿಯರೆಂಬ ಸುತೆಯರಾದರು " ಎಂದು ಹೇಳಿ ಮುಂದೆ ವಸುದೇವನ ಜನ್ಮವನ್ನು ಹೇಳುತ್ತಾರೆ.

ಕುರುಭೂಮಿಯ ಪಲಾಶಕೂಟಗ್ರಾಮದಲ್ಲಿ ವೇದಶಾಸ್ತ್ರಗಳನ್ನು ಬಲ್ಲ ಸೋಮಶರ್ಮನೆಂಬ ಬ್ರಾಹ್ಮಣನಿದ್ದನು. ಅವನಿಗೆ ಅಗ್ನಿಲೆಯೆಂಬವಳು ಹೆಂಡತಿ. ಅವರಿಗೆ ಮಹಾಪಾಪಿಯಾದ ನಂದಿಯೆಂಬೋರ್ವ ಮಗನು ಹುಟ್ಟಲು ಅವರು ರೋಗಪೀಡಿತರಾಗಲು ಆ ಮಗುವನ್ನು ಅಗ್ನಿಲೆಯ ಸಹೋದರನಾದ ದೇವ ಶರ್ಮನ ವಶಕ್ಕೆ ಕೊಟ್ಟು ಅವರೀರ್ವರೂ ಮಡಿದರು.

ಇತ್ತ ದೇವಶರ್ಮನು ನಂದಿಗೆ ತನ್ನ ಮಗಳನ್ನು ಕೊಟ್ಟು ಮದುವೆಮಾಡ ಬೇಕೆಂದಿರುವುದನ್ನು ಆತನ ಹೆಂಡತಿಯು ತಿಳಿದು ನಂದಿಯ ಕುರೂಪಕ್ಕೆ ಹೇಸಿ ತನ್ನ ಮಗಳನ್ನು ಗಂಡನಿಗೆ ತಿಳಿಯದಂತೆ ಕರೆದೊಯ್ದು ಇನ್ನೊಬ್ಬ ಸುಂದರ ವರನಿಗೆ ಕೊಟ್ಟು ಮದುವೆಮಾಡಿದಳು. ಆ ವಿಷಯವನ್ನು ನಂದಿಯು ತಿಳಿದು ತನಗೆ ತಾನೇ ಹೇಸಿ ಖಿನ್ನನಾಗಿರಲು ಅದನ್ನು ದೇವಶರ್ಮನು ತಿಳಿದು ಕೆರಿಯ ಮಗಳನ್ನಾದರೂ ಕೊಟ್ಟು ಮದುವೆಮಾಡಿಕೊಡುವೆನೆಂದೊಡಂಬಡಿಸಲು ಅದನ್ನು ತಿಳಿದು ಆ ಹುಡುಗಿಯು ಮದುವೆಯಾದ ಮರುದಿನವೇ ಆತ್ಮಹತ್ಯವನ್ನು ಮಾಡಿಕೊಳ್ಳುವೆ ನೆಂದು ಚಿಂತಿಸುತ್ತಿರಲು ನಂದಿಯು ಒಂದು ದಿನ ಬಿಸಿಲಲ್ಲಿ ಮನೆಗೆ ಬರಲು ಆತನ ವಿಕಾರರೂಪವನ್ನೂ ದುರ್ನಾತವನ್ನೂ ನೋಡಿ ಆ ಹುಡುಗಿಯು ಬಹಳವಾಗಿ ಜುಗುಪ್ಸೆಪಡುತ್ತಿರಲು ತಂದೆಯು ಕಂಡು ಆಕೆಯನ್ನು ಸಮಾಧಾನಗೊಳಿಸಿ ನಂದಿಯ ತಲೆಗೆ ಹಳೇ ಬೆಣ್ಣೆಯನ್ನೂ ಅರಸಿನವನ್ನೂ ಸವರಿ ಬಟ್ಟೆಯನ್ನು ಸುತ್ತಿ ಸ್ನಾನಕ್ಕೆ ಹೊಳೆಗೆ ಹೋಗಿ ಬರುವಂತೆ ಕಳುಹಿದನು. ಈತನು ನದಿಗೆ ಹೋಗುತ್ತಿರುವಾಗ ಬೀದಿಯಲ್ಲಿ ಸೇರಿರುವ ಜನರ ಗುಂಪನ್ನು ನೋಡಿ ಅಲ್ಲಿಗೆ ಹೋಗಲು ಅವರೆಲ್ಲರು ಇವನ ವೇಷವನ್ನು ನೋಡಿ ಓಡಿಸಿಕೊಂಡುಬಂದರು. ಈ ನಂದಿಯು ಓಡಿ ಹೋಗಿ ಒಂದು ಮರವನ್ನೇರಿ ಕುಳಿತನು. ಬಿಸಿಲಿನಿಂದ ಅವನ ತಲೆಯ ಬೆಣ್ಣೆಯು ಕರಗಿ ಕೆಳಗಿರುವವರ ತಲೆಯ ಮೇಲೆ ಸುರಿಯಲು ಅವರು ಹೇಸಿ ಹೊಡೆಯಲಾರಂಭಿಸಲು ಅಲ್ಲಿಂದಿಳಿದು ಲಜ್ಜೆಯಿಂದ ಓಡಿ ತನಗಾರೂ ದಿಕ್ಕಿಲ್ಲವೆಂದು ಬಗೆದು ಒಂದು ಕಲ್ಲು—ಬಂಡೆಯನ್ನೇರಿ ಕೆಳಕ್ಕೆ ನೋಡಿ ಯಮನೂ ಏಕೆ ತನ್ನನ್ನು ಒಯ್ಯುವುದಿಲ್ಲವೆಂದು ಚಿಂತಿಸುತ್ತಿರುವಾಗ ಆ ಬಂಡೆಯ ಕೆಳಗೆ ಶಂಖ ಮತ್ತು ನಿರ್ನಾಮಿಕರೆಂಬ ಇಬ್ಬರು ಮುನಿಗಳು ತಪಸ್ಸುಮಾಡುತ್ತಿದ್ದರು. ಅವರಲ್ಲಿ

ಶಂಖಮುನಿಯು ನಂದಿಯ ನೆರಳನ್ನು ನೋಡಿ ಆತನು ಮುಂದೆ ಮೂರನೆಯ ಭವದಲ್ಲಿ ತಮಗೆ ತಂದೆಯಾಗುವನೆಂದು ಶಿಷ್ಯಮುನಿಗೆ ಹೇಳಿ ಆ ಬಂಡೆಯನ್ನೇರಿ ನಂದಿಯನ್ನು ಕುರಿತು "ಏತಕ್ಕೆಲ್ಲಿ ನಿಂತಿರುವೆ?" ಎಂದು ಕೇಳಿದನು. ನಂದಿಯು ಎಲ್ಲಾ ವಿಷಯವನ್ನು ಹೇಳಲು ಮುನಿಯು ಕೇಳಿ ತಮ್ಮಂತೆ ಮುನಿರೂಪವನ್ನು ಧರಿಸಿದರೆ ಉತ್ತಮ ಸುಖವು ದೊರೆಯುವುದೆಂದು ಹೇಳಲು ನಂದಿಯು ಆ ಮಾತನ್ನು ಕೇಳಿ ಮುನಿವ್ರತವನ್ನು ಕೈಕೊಂಡು ಅದನ್ನು ನಿರತಿಚಾರವಾಗಿ ಪಾಲಿಸಿ ಸಮಾಧಿವಿಧಿಯಿಂದ ಮಡಿದು ಮಹಾಶುಕ್ರವೆಂಬ ಸ್ವರ್ಗದಲ್ಲಿ ಹುಟ್ಟಿ ಹದಿನಾರು ಸಾಗರೋಪಮಕಾಲದವರೆಗೆ ದಿವ್ಯಸುಖವನ್ನುಂಡು ಬಂದು ನಿನಗೆ (ಅಂಧಕವೃಷ್ಟಿಗೆ) ವಸುದೇವನೆಂಬ ಸುಂದರಪುತ್ರನಾಗಿ ಜನಿಸಿದನು" ಎಂದು ಸುಪ್ರತಿಷ್ಠಯೋಗೀಶ್ವರರು ಹೇಳಲು ಆ ಮಾತನ್ನು ಕೇಳಿ ಅಂಧಕವೃಷ್ಟಿಗೆ ವೈರಾಗ್ಯ ಪಂಕುರಿಸಿ ಮನೆಗೆ ಹೋಗಿ ಸಮುದ್ರವಿಜಯನಿಗೆ ರಾಜ್ಯಭಾರವನ್ನಿತ್ತು ಐದು ನೂರು ಮಂದಿ ರಾಜರುಗಳೊಡನೆ ಆ ಸುಪ್ರತಿಷ್ಠಯೋಗೀಶ್ವರರ ಬಳಿಯಲ್ಲಿ ದೀಕ್ಷೆಯನ್ನು ಹೊಂದಿ ಘೋರತಪಸ್ಸನ್ನು ಮಾಡಿ ಮುಕ್ತಿಯನ್ನು ಪಡೆದನು.

೮. ವಸುದೇವ ಶೃಂಗಾರವರ್ಣನಸಂಧಿ

ಶೌರೀಪುರದಲ್ಲಿ ಸಮುದ್ರವಿಜಯನು ಒಂಬತ್ತುಮಂದಿ ಸಹೋದರರೊಡನೆ ರಾಜ್ಯವಾಳುತ್ತ ಸುಖದಿಂದಿರಲು ಕಿರಿಯನಾದ ವಸುದೇವಕುಮಾರನು ಬಹು ಸುಂದರನಾಗಿ ಬೆಳೆಯುತ್ತಿದ್ದನು. ತನ್ನ ವಾರಗೆಯ ಬಾಲಕರೊಡನೆ ಕೇರಿಕೇರಿಗಳಲ್ಲಿ ಸಂಚರಿಸುತ್ತ ಸಮಸ್ತ ಸ್ತ್ರೀಜನರ ಮನಸ್ಸಿಗೆ ಆನಂದವನ್ನುಂಟುಮಾಡುತ್ತಿದ್ದನು. ವಸುದೇವನು ಬೀದಿಯಲ್ಲಿ ಬರುತ್ತಾನೆಂದರೆ ಸ್ತ್ರೀಯರೆಲ್ಲ ತಮ್ಮ ಕೆಲಸಗಳನ್ನು ಬಿಟ್ಟು ಅತ್ತೆಮಾವಂದಿರ ಮತ್ತು ಪತಿಯ ಭಯವಿಲ್ಲದೆ ಒಂದು ನೋಡುತ್ತಿದ್ದರು. ಕೆಲವು ಸ್ತ್ರೀಯರು ಕನಸಿನಲ್ಲಿಯೂ ಆ ವಸುದೇವನ ಸುಂದರರೂಪವನ್ನೇ ನೋಡುತ್ತಿದ್ದರು. ಆ ಭಾವನೆಯಿಂದ ವಸುದೇವನಂತೆ ಅನೇಕ ಮಕ್ಕಳು ಹುಟ್ಟಿದುವು. ಕೆಲವು ಸ್ತ್ರೀಯರು ಅವನ ಚಿತ್ರವನ್ನು ಬರೆದು ಸದಾ ನೋಡುತ್ತಿದ್ದರು. ಹೀಗೆ ಲಜ್ಜಾಶೂನ್ಯರಾಗಿ ಸ್ತ್ರೀಯರು ಮದನಸಿಶಾಚಗ್ರಸ್ತರಾದವರಂತೆ ವರ್ತಿಸಲು ಪುರಜನರೆಲ್ಲ ಸೇರಿ ಒಂದು ದಿನ ಸಮುದ್ರವಿಜಯನ ಆಸ್ಥಾನಕ್ಕೆಹೋಗಿ ವಿಷಯವನ್ನೆಲ್ಲ ನಿವೇದಿಸಿ ತಂತಮ್ಮ ಶಿಶುಗಳನ್ನು ಮುಂದಿಟ್ಟರು. ರಾಜನು ಚಕಿತ

ನಾಗಿ ತಮ್ಮನು ಇಂತಹ ಕೆಲಸಕ್ಕೆ ಹೋಗುನವನಲ್ಲವೆಂದು ಯೋಚಿಸಿ " ನೀವು ಹೆದರಬೇಡಿ " ಎಂದು ಹೇಳಿ ಕಳುಹಿಸಿಕೊಟ್ಟು ತಾನು ಮಂತ್ರಾಲೋಚನಾಸ್ಥಾನಕ್ಕೆ ಹೋಗಿ ಮುಖ್ಯಮಂತ್ರಿಗಳನ್ನು ಕರೆಯಿಸಿ ಆ ಸಮಾಚಾರವನ್ನು ತಿಳಿಸಿದನು. ಆ ಮಾತನ್ನು ಕೇಳಿ ಮಂತ್ರಿಗಳೂ ಪುರನಿವಾಸಿಗಳಂತೆ ಎಲ್ಲಾ ವಿಷಯಗಳನ್ನು ತಿಳುಹಲು ಕೇಳಿ ಸಮುದ್ರವಿಜಯನು ಆವರನ್ನು ಬೀಳ್ಕೊಟ್ಟು ಮರುದಿನದ ಸಭೆಗೆ ತನ್ನ ಅನುಜ ವಸುದೇವನನ್ನು ಬರಮಾಡಿ ಆಲಿಂಗಿಸಿ ಸಿಂಹಾಸದಲ್ಲಿ ಕುಳ್ಳಿರಿಸಿಕೊಂಡು ಮೈದಡವಿ " ಹಸುಳೆಯೆ! ನಿನ್ನ ಸುಕುಮಾರ ಶರೀರವೇಕೆ ಹೊಸೆದ ಹೂವಿನಂತಾಯ್ತು? ನಿನ್ನ ಮುಖವೇಕೆ ಕಳೆಗುಂದಿದುದು? ಬಿಸಲಿನಲ್ಲಿ ತಿರುಗಿದುದರಿಂದಲೂ ಜನರದೃಷ್ಟಿ ಬಿದ್ದುದರಿಂದಲೂ ನಿನ್ನ ಶರೀರವು ಕೃಶವಾಯ್ತು. ಇನ್ನು ಮೇಲೆ ತಿರುಗಿದರೆ ನನಾಣೆ " ಎಂದು ಹೇಳಿ ತಮ್ಮನಿಗೆ ಸ್ವಲ್ಪವೂ ಸಂದೇಹವು ತೋರದಂತೆ ಅವನ ಪತ್ನೀಪರಿವಾರಸಮೇತ ನಗರದ ಉದ್ಯಾನದಲ್ಲಿರಿಸಿ ದಾರುಕ ವಲ್ಲಭೀಕರ ರೆಂಬೀರ್ವರು ಭಟರನ್ನು ಕಾವಲಿರಿಸಿದನು. ಈ ರಹಸ್ಯವನ್ನು ಸ್ವಲ್ಪವೂ ವಸುದೇವನು ತಿಳಿಯಲಿಲ್ಲ. ಒಂದುದಿನ ಸಮುದ್ರವಿಜಯನ ಪತ್ನಿ ಶಿವದೇವಿಯು ವಸುದೇವನ ಪತ್ನಿಯರಿಗೆ ತನ್ನ ದಾಸಿಯ ಕೈಯಲ್ಲಿ ಕೆಲವು ಪರಿಮಳ ವಸ್ತುಗಳನ್ನು ಕಳುಹಿಸಿಕೊಟ್ಟಳು. ಆ ದಾಸಿಯನ್ನು ಕಂಡು ವಸುದೇವನು ಅತ್ತಿಗೆಯ ದಾಸಿಯೆಂದು ಸರಸಕ್ಕಾಗಿ ಓಡಾಡಿಸಲು ಆಕೆಯು ಕೋಪಗೊಂಡು " ಕಪಿಯಂತೆ ಬಂಧನದಲ್ಲಿದ್ದು ಈ ಚೇಷ್ಟೆಯನ್ನು ತೋರುತ್ತಿರುವೆ " ಎಂದಳು. ಆ ಮಾತನ್ನು ಕೇಳಿ ಚಕಿತನಾಗಿ ವಸುದೇವನು ಆಕೆಯ ಕೈಯನ್ನು ಹಿಡಿದು ತನ್ನ ಕೈಯ ಕಂಕಣವನ್ನ ವಳಿಗಿತ್ತು ಆಕೆಯಿಂದ ಆ ಸಮಾಚಾರವನ್ನೆಲ್ಲ ತಿಳಿದು ಬೆರಗಾಗಿ ದುಷ್ಟರ ಮಾತನ್ನು ಕೇಳಿ ತನ್ನ ಅಣ್ಣನು ನಿರ್ದೋಷಿಯಾದ ತನ್ನನ್ನು ಬಂಧನದಲ್ಲಿಡುವುದು ಚಿತವೇ? ಎಂದು ಮನದಲ್ಲಿ ನೊಂದು ಪರದೇಶಕ್ಕೆ ಹೋಗಲೆಳಸಿ ಅರ್ಧರಾತ್ರಿಯಲ್ಲಿ ಹೊರಟು ಭಯಂಕರವಾದ ಶ್ಮಶಾನಕ್ಕೆ ಹೋಗಿ ಅಲ್ಲಿ ಉರಿಯುತ್ತಿರುವ ಅಗ್ನಿಕುಂಡದ ಒಳಿಯಲ್ಲಿ ತನ್ನ ರತ್ನಾಭರಣಗಳನ್ನೆಲ್ಲ ತೆಗೆದಿಟ್ಟು ಒಂದು ಚೀಟಿಯನ್ನು ಬರೆದಿರಿಸಿ ಅಲ್ಲೇ ಸಮೀಪದಲ್ಲಿ ಶೂಲದಲ್ಲಿದ್ದ ಒಬ್ಬ ಮನುಷ್ಯನಿಗೆ ತನ್ನ ಸಮಾಚಾರವನ್ನೆಲ್ಲ ತಿಳುಹಿ ಒಂದು ಹೆಣವನ್ನು ಅಗ್ನಿಕುಂಡಕ್ಕೆ ಎಳೆದು ಹಾಕಿ ಕಣ್ಮರೆಯಾಗಿ ಮುಂದಕ್ಕೆ ಹೋದನು.

ಇತ್ತ ಶ್ಮಶಾನವನ್ನು ಕಾಯುವ ಅಳುಗಳು ಪ್ರಾತಃಕಾಲದಲ್ಲಿ ಆ ಅಗ್ನಿಕುಂಡದ ಬಳಿಗೆ ಬಂದು ನೋಡುವಲ್ಲಿ ಅವರಿಗೆ ಆ ದಿವ್ಯಭೂಷಣವೂ ಕುಂಡದಲ್ಲಿ ಅರೆಬರೆ

ಯಾಗಿ ಬೆಂದ ಹೆಣವೂ ವಸುದೇವನು ಬರೆದಿಟ್ಟಿದ್ದ ಕಾಗದವೂ ಕಾಣಿಸಿದುವು. ಶೂಲದಲ್ಲಿದ್ದ ಆ ಮನುಷ್ಯನೂ ವಸುದೇವನ ವಾರ್ತೆಯನ್ನು ತಿಳಿಸಿದನು. ಆ ಆಳುಗಳು ದುಃಖಪಟ್ಟುಕೊಂಡು ಆ ಕಾಗದವನ್ನೂ ಆಭರಣವನ್ನೂ ತೆಗೆದುಕೊಂಡು ಹೋಗಿ ಸಮುದ್ರವಿಜಯನಿಗೆ ಕೊಟ್ಟು ಸಮಾಚಾರವನ್ನು ತಿಳಿಸಿದರು. ಆ ಕಾಗದವನ್ನು ತೆಗೆದುಕೊಂಡು ಒಬ್ಬ ಓದುಗಾರನು ಓದಿದನು. ಅದರಲ್ಲಿ " ಬಾಲ್ಯದಲ್ಲಿ ನಾನು ಪ್ರೀತಿಯಿಂದ ಊರೊಳಗೆ ತಿರುಗಿದುದೇ ತಪ್ಪೆಂದು ಭಾವಿಸಿದಿರಲ್ಲದೆ ನಾನು ಪರನಾರೀಸಹೋದರನೆಂದು ಭಾವಿಸಲಿಲ್ಲ. ನಿರ್ದೋಷಿಯನ್ನು ದೋಷಿಯೆಂದು ಹೇಳಿದ ಆ ದುಷ್ಟರ ಮಾತನ್ನು ಕೇಳಿ ಮೋಸಮಾಡಿ ಸೆರೆಮನೆಯಲ್ಲಿಟ್ಟಿರಿ. ಈ ಹೀಯಾಳಿಕೆಗಾಗಿ ಅಗ್ನಿಕುಂಡದಲ್ಲಿ ಬಿದ್ದು ದೇಹತ್ಯಾಗಮಾಡಿದ್ದೇನೆ. ಹಿಂದೆ ಯಾರೂ ಮಾಡದ ತಪ್ಪನ್ನು ಇಂದು ನಾನು ಮಾಡಿದೆನು. ಅದರ ಫಲವು ನನ್ನ ನ್ನೀಗ ತುಪ್ಪದಲ್ಲಿ ಬೇಯಿಸಿ ಕೊಂದಿತು. ತಮ್ಮನು ಸತ್ಪನೆಂದು ಅಣ್ಣಂದಿರಾರೂ ಅಳಬೇಡಿ. ನಾನು ಮಾಡಿದ ದೊಡ್ಡ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ದೇಹತ್ಯಾಗವನ್ನು ಮಾಡಿದ್ದೇನೆ " ಎಂದು ಬರೆಯಲ್ಪಟ್ಟಿದ್ದಿತು. ಅದನ್ನು ಓದಿಸಿ ಕೇಳಿದೊಡನೆಯೇ ಸಮುದ್ರವಿಜಯನು ಮೂರ್ಛಿತನಾಗಲು ಶೈತ್ಯೋಪಚಾರದಿಂದೆಚ್ಚತ್ತು " ಹಾ ವಸುದೇವ! ಹಾ ಯದುಕುಲತಿಲಕದೀಪ! ಹಾ ವನಿತಾಜನಮನ್ಮಥ! ಹಾ ವಸುಧಾಲಂಕಾರ! ಎಲ್ಲಿಯ ರಾಜ್ಯ? ಎಲ್ಲಿಯ ಭೋಗಕಾಂಕ್ಷೆ? ಎಲ್ಲಿಯ ಮಹದೈಶ್ವರ್ಯ? ನೀನಿಲ್ಲದಿರಲು ನಮ್ಮ ಬಾಳುವೆ ಹೆಂಗುಸರ ಬಾಳುವೆ " ಎಂದು ದುಃಖಿಸಿ " ಅನುಜನೆ! ನಿನ್ನನ್ನು ಉರಿವ ಅಗ್ನಿಕುಂಡದಲ್ಲಿ ಕೆಡಹಿದ ಪಾಪಿಯಾದ ನನಗೆ ಇನ್ನೇಕೆ ದೊರೆತನದ ಹಂಬಲು? " ಎನ್ನುವಷ್ಟರಲ್ಲಿ ಆ ಓಲಗಕ್ಕೆ ಅರಿಂದಮರೆಂಬ ಮುನೀಶ್ವರು ಬಂದು ತಮಗೆ ನಮಸ್ಕರಿಸಿದ ರಾಜನಿಗೆ " ಎಲೆ ರಾಜನೆ! ವಸುದೇವನು ಅಗ್ನಿಕುಂಡದಲ್ಲಿ ಬಿದ್ದು ಮಡಿದುದು ಸುಳ್ಳು; ಕೆಲವು ದಿನಗಳಲ್ಲಿ ನಿನ್ನ ಒಳಿಗೆ ಬಂದು ಸೇರುವನು " ಎಂದು ಹೇಳಿ ರಾಜನ ಸಂದೇಹವನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡಿ ಹೊರಟುಹೋದರು.

ಇತ್ತ ವಸುದೇವನು ಅನೇಕ ದೇಶಗಳಲ್ಲಿ ಸಂಚರಿಸಿಕೊಂಡು ವಿಜಯಖೇಟವೆಂಬ ನಗರದ ನಂದನವನಕ್ಕೆ ಬಂದು ಅಲ್ಲಿ ತಾವರೆಗೊಳದಲ್ಲಿ ಮಿಂದು ಮಾರ್ಗಾಯಾಸವನ್ನು ನೀಗಿಕೊಂಡು ಪಕ್ಕದಲ್ಲಿ ಎಳೆಮಾವಿನಗಿಡದ ಬುಡದಲ್ಲಿ ಸೇವಂತಿಗೆಯ ಹೂವನ್ನು ಚೆಲ್ಲಿ ಅದರ ಮೇಲೆ ಮಲಗಿ ನಿದ್ರಿಸುತ್ತಿರುವಾಗ ಇಬ್ಬರು ಸುಂದರಿಯರು ತನ್ನ ಕಾಲುಗಳನ್ನೊತ್ತುವ ಕನಸನ್ನು ಕಂಡು ನಿದ್ರೆಯಿಂದೆಚ್ಚತ್ತು ನೋಡು

ವಲ್ಲಿ ನಿಜವಾಗಿಯೂ ಇಬ್ಬರು ವನಿತೆಯರು ವಸುದೇವನ ಪಾದಗಳನ್ನು ತಮ್ಮ ತೊಡೆಗಳ ಮೇಲಿಟ್ಟು ಮೃದುಹಸ್ತಗಳಿಂದೊತ್ತುತ್ತಿದ್ದರು. ವಸುದೇವನು ಕಣ್ದೆರೆದು ನೋಡಿ "ಸ್ತ್ರೀಯರ ದೆಸೆಯಿಂದಲೇ ನಾನು ನಾಡುಬೀಡೆಲ್ಲವನ್ನೂ ಬಿಟ್ಟು ಓಡಿಬಂದರೂ ನನ್ನ ಬೆನ್ನ ಬಿಡದೆ ಬಂದು ಕಾಲನ್ನು ಹಿಡಿದರು" ಎಂದಂದುಕೊಂಡು ಅವರಮೇಲಿನ ದೃಷ್ಟಿಯನ್ನೂ ಮನಸ್ಸನ್ನೂ ತೆಗೆಯದೆ ಕಾಲುಗಳನ್ನು ತೆಗೆದನು. ಆಗ ಆತನ ತಲೆಯ ದೆಸೆಯಲ್ಲಿದ್ದ ಚಿತ್ರಲತೆಯೆಂಬ ಆ ಕನ್ನೆಯರ ಗೆಳತಿಯು ಬೀಸಣಿಗೆಯಿಂದ ಬೀಸುತ್ತ "ಸುಕುಮಾರ! ಇದೇಕೆ ನಾಚಿಕೆ? ಕಾಲ್ದೆಗೆಯುವೆ. ಮದನನು ಈ ಕನ್ನೆಯರ ಕಾಲುಗಳನ್ನು ನಿನ್ನ ಕೈಯಿಂದೊತ್ತಿಸುವನು." ಎಂದಳು. ಆ ಮಾತನ್ನು ಕೇಳಿ ವಸುದೇವನು ತನ್ನ ಕಾಲುಗಳನ್ನು ಆ ಕನ್ನೆಯರೊತ್ತಲೇನು ಕಾರಣವೆಂದು ಕೇಳಲು ಚಿತ್ರಲತೆಯು "ಈ ಪುರದ ಚಿತಶತ್ರುವಿಗೆ ಜಯೆ ವಿಜಯೆಯೆಂಬೀ ಹೆಣ್ಣುಮಕ್ಕಳು ಹುಟ್ಟಿ ಅನುಪಮರೂಪಕಲಾಪರಿಣತೆಯರಾಗಿ ಪ್ರಾಪ್ತವಯಸ್ಕರಾಗಲು ಇವರ ತಂದೆಯು ಒಬ್ಬ ಸೈಮಿತ್ತಿಕನನ್ನು ಕರೆಯಿಸಿ ಈ ಕನ್ನೆಯರಿಗೆ ವರನಾರಾಗುವನೆಂದು ಕೇಳಲು ಅವನು 'ಈ ಊರ ಕೊಳದ ದಡದಲ್ಲಿರುವ ಮಾವಿನಗಿಡದಡಿಯಲ್ಲಿ ಬಂದು ಮಲಗುವ ರಾಜಕುಮಾರನು ಇವರನ್ನು ಸಂಗೀತದಲ್ಲಿ ಗೆದ್ದು ವರಿಸುವನು' ಎಂದು ಹೇಳಿದನು. ಆ ಮಾತನ್ನು ಕೇಳಿ ರಾಜನು ಅಂದಿನಿಂದ ಇಲ್ಲಿ ಕಾವಲಿರಿಸಿದನು. ಶಕುನಿಗನ ನುಡಿಯಂತೆ ನೀನಿಲ್ಲಿಗೆ ಬಂದು ಮಲಗಿರಲು ಕಾವಲುಗಾರರು ಬಂದು ದೊರೆಗೆ ತಿಳಿಸಿದರು. ಈ ಸುಂದರಿಯರು ಶಕುನಿಗನು ಹೇಳಿದಂದಿನಿಂದ ವನಸ್ತ್ರೀಯರಂತೆ ಈ ವನದಲ್ಲಿರುತ್ತಾರೆ. ಈದಿನ ನೀನು ಮಾರ್ಗಾಯಾಸದಿಂದ ಮಲಗಿರಲು ನಿನ್ನ ಶ್ರಮಪರಿಹಾರಾರ್ಥವಾಗಿ ಕಾಲುಗಳನ್ನೊತ್ತುತ್ತಿದ್ದಾರೆ. ಇದಕ್ಕೇಕೆ ಲಜ್ಜೆ? ನಿನ್ನ ಪತ್ನಿಯರಲ್ಲದೆ ಬೇರೆಯಲ್ಲ. ಸಂತೋಷದಿಂದ ಕಾಲುಗಳನ್ನು ನೀಡಿದರೆ ನೋವನ್ನು ಹೋಗಲಾಡಿಸುವರು." ಎಂದು ಹೇಳುವಷ್ಟರಲ್ಲಿ ಚಿತಶತ್ರುರಾಜನು ಬಹು ವೈಭವದಿಂದ ಬಂದು ವಸುದೇವನನ್ನು ಮನೆಗೆ ಕರೆದೊಯ್ದು ಸತ್ಕರಿಸಿ ಅವನಿಂದ ತನ್ನ ಹೆಣ್ಣುಮಕ್ಕಳ ಸಂಗೀತವಿದ್ಯೆಯನ್ನು ಪರೀಕ್ಷೆಮಾಡಿಸಿದನು. ಅದರಲ್ಲಿ ವಸುದೇವನು ಅವರನ್ನು ಸೋಲಿಸಲು ಅವರು ಸಂತುಷ್ಟರಾಗಿ ಅವನಿಗೆ ಪುಷ್ಪಮಾಲೆಯನ್ನು ಹಾಕಿದರು. ದೊರೆಯು ಸುಮುಹೂರ್ತದಲ್ಲಿ ವಿವಾಹವನ್ನು ಮಾಡಿ ಅಳಿಯನಿಗೆ ಅರ್ಧರಾಜ್ಯವನ್ನು ಕೊಟ್ಟನು. ವಸುದೇವನು ಅಲ್ಲಿ ಕೆಲವು ದಿನ ಸುಖದಿಂದಿದ್ದನು.

೯. ವಸುದೇವ ಗಜಾರೋಹಣ ಸಂಧಿ.

ವಸುದೇವನು ಜಯೆ ವಿಜಯೆಯರಲ್ಲಿ ಸುಖದಿಂದಿರುತ್ತಿರಲು ವಿಜಯೆಗೆ ಅಕ್ರೂರನೆಂಬ ವೀರಪುತ್ರನು ಜನಿಸಿದನು. ಒಂದು ದಿನ ವಸುದೇವನು ತಾನು ಸದಾ ಆ ಸ್ತ್ರೀಯರ ಮೋಹದಲ್ಲಿರುವುದು ತಕ್ಕುದಲ್ಲವೆಂದು ಯೋಚಿಸಿ ಆ ರಾತ್ರಿಯಲ್ಲಿ ಯಾರಿಗೂ ಹೇಳದೆ ಹೊರಟು ದುಷ್ಟಮೃಗಗಳಿಂದ ನಿಬಿಡವಾದೊಂದು ಅರಣ್ಯಕ್ಕೆ ಹೋದನು. ಅಲ್ಲಿ ದೊಡ್ಡ ಆನೆಯು ಹಿಂಡಿನಿಂದ ಒಂದು ಮದದಾನೆಯು ವಸುದೇವನ ಕಡೆಗೆ ಬಂದಿತು. ಈ ಮದಗಜವನ್ನೇರಿದರೆ ತಾನೇ ಆನೆಯು ವಿಜ್ಞಾನಿಯಾಗುವೆನೆಂದು ಬಗೆದು ವಸುದೇವನು ಅದನ್ನು ಎದುರಿಸಿ ಧ್ವನಿಮಾಡಿದನು. ಅದನ್ನು ಕೇಳಿ ಸುಂಡಿಲನ್ನೆತ್ತಿಕೊಂಡು ಬಂದು ಕೋಪದಿಂದ ಹೊಡೆಯಲು ವಸುದೇವನು ಬಗ್ಗಿ ನೆಲಕ್ಕುರುಳಿದನು. ಆನೆಯು ದಂತಗಳಿಂದ ತಿವಿಯಲು ವಸುದೇವನು ದಂತಗಳ ಮಧ್ಯಕ್ಕೆ ನುಲಿಚಿಕೊಂಡನು. ಆನೆಯು ಕೋಪಾವೇಶದಿಂದ ಒದರಿ ಕಾಲಿನಿಂದ ಒದೆಯಿತು. ಆ ಏಟನ್ನು ತಪ್ಪಿಸಿಕೊಂಡು ವಸುದೇವನು ಕಾಲುಗಳ ಮಧ್ಯಕ್ಕೆ ಜಾರಿಕೊಂಡನು. ಆನೆ ಬಿಟ್ಟರೂ ತಾನು ಬಿಡದೆ ಮೂವತ್ತೆರಡು ರೀತಿಗಳಿಂದ ಆನೆಯೊಡನೆ ಹೋರಾಡಿ ಅದನ್ನು ಬಳಲಿಸಿ ಅದರ ಬೆನ್ನಿನ ಮೇಲೆ ಹತ್ತಿದನು. ಆಗ ಆಕಾಶಮಾರ್ಗದಿಂದ ಚತುರರಾದ ಇಬ್ಬರು ಖೇಚರರು ಬಂದು ವಸುದೇವನ ಕಾಲುಗಳಿಗೆ ನಮಸ್ಕಾರಮಾಡಿ "ಎಲೆ ರಾಜೋತ್ತಮನೆ! ವಿಜಯಾರ್ಧಗಿರಿಯ ಉತ್ತರಶ್ರೇಣಿಯಲ್ಲಿ ಕುಂಜರಾವರ್ತವೆಂಬುದೊಂದು ಪಟ್ಟಣವಿರುವುದು. ಅಲ್ಲಿಗೆ ಅಶನಿವೇಗನೆಂಬವನು ದೊರೆ. ಆತನಿಗೆ ಶಾಲ್ಮಲಿದತ್ತೆಯೆಂಬ ಮಗಳಿರುವಳು. ಆ ಸುಂದರಿಗೆ ಅನುರೂಪನಾದ ವರನಿಲ್ಲದಿರಲು ತಂದೆಯು ಖಿನ್ನನಾಗಿದ್ದನು. ಅಲ್ಲಿಗೋರ್ವ ಶಕುನಿಗನು ಬಂದು ಈ ಮದಗಜವನ್ನು ಈ ರೀತಿಯಾಗಿ ಹತ್ತುವ ಮಹಾಪುರುಷನೇ ಶಾಲ್ಮಲಿದತ್ತೆಗೆ ಪತಿಯಾಗುವನೆಂದು ಹೇಳಲು ಅಂದಿನಿಂದ ದೊರೆಯು ನಮ್ಮನ್ನಿಲ್ಲಿ ಕಾವಲಿರಿಸಿರುತ್ತಾನೆ. ಇಂದು ನಮ್ಮ ಪುಣ್ಯದಿಂದ ನೀನು ಈ ಮದಗಜವನ್ನೇರಿದೆ. ಇನ್ನು ಸಾವಕಾಶ ಮಾಡದೆ ಶಾಲ್ಮಲಿದತ್ತೆಯೊಡನೆ ಸುಖದಿಂದಿರಲು ಏಳು" ಎಂದು ಹೇಳಿ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೋಗಲು ದೊರೆಯು ಸಂತುಷ್ಟನಾಗಿ ಮಗಳನ್ನು ಕೊಟ್ಟು ಮದುವೆಮಾಡಿದನು. ಆಕೆಯೊಡನೆ ವಸುದೇವನು ಬಹುದಿವಸ ಸುಖದಿಂದಿರಲು ಧ್ರುವನೆಂಬ ಮಗನು ಹುಟ್ಟಿ ಶಕ್ತಿಸಂಪನ್ನನಾಗಿ ಬೆಳೆಯುತ್ತಿದ್ದನು. ಒಂ

ದು ದಿವಸ ಜ್ಯೈತ್ರಮಾಸದಲ್ಲಿ ಉಪ್ಪರಿಗೆಯ ಮೇಲೆ ಆ ದಂಪತಿಗಳು ರತಿಕ್ರೀಡೆಯಿಂದುಂಟಾದ ಬಳಲಿಕೆಯನ್ನು ನೀಗಿಕೊಳ್ಳಲು ಬಾಗಿಲನ್ನು ತೆರೆದು ಪತ್ನಿಯ ತೊಳಿನಮೇಲೆ ತಲೆಯನ್ನಿಟ್ಟು ವಸುದೇವನು ಮಲಗಿರುವಾಗ ಒಬ್ಬ ದುಷ್ಟ ಖೇಚರನು ಆಕಾಶಮಾರ್ಗದಿಂದ ಒಂದು ವಸುದೇವನನ್ನು ಎತ್ತಿಕೊಂಡು ಹೋದನು. ಶಾಲ್ಮಲಿದತ್ತೆಯು ಎಚ್ಚತ್ತು ಪತಿಯನ್ನು ಕಾಣದೆ ಖಿನ್ನಳಾಗಿ ಕಾಸೆಯನ್ನು ಬಿಗಿದು ಖಡ್ಗವನ್ನು ಹಿಡಿದು ವಿಮಾನವನ್ನೇರಿ ಆರ್ಭಟಿಸುತ್ತ ಆ ದುಷ್ಟನನ್ನು ಬೆನ್ನಟ್ಟಿಕೊಂಡು ಹೋದಳು. ಆತನು ಬೆದರಿ ವಸುದೇವನನ್ನು ಬಿಟ್ಟನು. ಶಾಲ್ಮಲಿದತ್ತೆಯು ತನ್ನ ಪ್ರಿಯಪತಿಯನ್ನು ಅಂತು ಅಲಂಗಿಸಿ ಮುತ್ತಿಟ್ಟು ಕರೆದೊಯ್ಯುವಾಗ " ಖೇಚರಿಯೆ! ಈ ರಾಜನನ್ನು ಭೂಮಿಗೆ ಇಳಿಸಿದರೆ ಈತನು ನಿನ್ನೆಡೆಗೆ ಬರುವನು. ನಿನ್ನ ತಂದೆಯ ಮನೋರಥಕ್ಕೆ ಈತನು ಸಾರಥಿಯಾಗುನನು, ಇದು ನಿಶ್ಚಯ ' ಎಂದು ಆಕಾಶವಾಣಿಯಾಯ್ತು. ಅದನ್ನು ಕೇಳಿ ಆಕೆಯು ನುತ್ತಲು ನೋಡಿ ಇದು ದೇವವಚನವೆಂದು ತಿಳಿದು ಪತಿಯನ್ನು ಪರ್ಣಲಘುವೆಂಬ ವಿದ್ಯೆಯಿಂದ ಭೂತಳಕ್ಕೆ ಬಿಟ್ಟಳು. ಅದು ವಸುದೇವನನ್ನು ಮೆಲ್ಲನೆ ತಂದು ಅಂಗದೇಶದ ಚಂಪಾಪುರದ ನಂದನವನದಲ್ಲಿ ಸಿಂಗರಿಸಿದ ಲತಾಮಂಟಪದಲ್ಲಿ ಬಿಟ್ಟಿತು. ಅಲ್ಲಿ ಮಲಗಿದ್ದು ಪ್ರಾತಃಕಾಲದಲ್ಲಿ ಕಣ್ದೆರೆದು ನೋಡಿ ಪತ್ನಿಯನ್ನು ಕಾಣದೆ ಅಚ್ಚರಿವಟ್ಟು ಅಲ್ಲಿಂದೆದ್ದು ಬರುತ್ತ ಪಥಿಕರನ್ನು ಕಂಡು " ಇದೆಲ್ಲಿಯ ದಾರಿ? ಈ ಊರಾವುದು? ಹೇಳಿ " ಎಂದು ಕೇಳಿದನು. " ಇವನು ಆಕಾಶವನ್ನೊಡೆದು ಭೂತಳಕ್ಕೆ ಬಿದ್ದವನಂತೆ ಕೇಳುವುದು ಆಶ್ಚರ್ಯಕರವಾಗಿದೆ " ಎಂದು ಆ ಪಥಿಕರು ಹೇಳುವುದನ್ನು ಕೇಳಿ ನಗುತ್ತ ಮುಂದಕ್ಕೆ ಹೋಗಿ ಕೊಳದಲ್ಲಿ ಮುಖತೊಳೆದು ಅಲ್ಲಿ ವಾಸುಪೂಜ್ಯತೀರ್ಥಂಕರರ ಮಂದಿರವನ್ನು ಕಂಡು ಭಕ್ತಿಯಿಂದ ವಂದಿಸಿ ಸಿದ್ಧಶೇಷೆ—ಪ್ರಸಾದವನ್ನು ತೆಗೆದುಕೊಂಡು ಅಲ್ಲಿದ್ದ ಬೋಧಸಿಂಧುಗಳೆಂಬ ಮುನೀಶ್ವರನ್ನು ಕಂಡು ವಂದಿಸಿ ರಾತ್ರಿಯಲ್ಲಾದ ವಿಷಯವನ್ನು ಕೇಳಿದನು. ಅವರು " ಎಲೆ ರಾಜನೆ! ಶಾಲ್ಮಲಿದತ್ತೆಯ ತಂದೆ ಅಶನಿವೇಗನ ಅಣ್ಣನ ಮಗನಾದ ಅಂಗಾರವೇಗನೆಂಬ ಶತ್ರುವು ಅಶನಿವೇಗನ ರಾಜ್ಯ ಬೊಕ್ಕಸಗಳನ್ನೆಲ್ಲ ಸುಲಿದುಕೊಂಡು ಅತನನ್ನು ಓಡಿಸಲು ಅಶನಿವೇಗನು ಒಂದು ಕಾಡಿನಲ್ಲಿ ಪಟ್ಟಣವನ್ನು ನಿರ್ಮಿಸಿಕೊಂಡಿದ್ದು ಒಂದು ದಿನ ಚಾರಣಮುನಿಗಳನ್ನು ಕಂಡು ತನಗೆ ತನ್ನ ರಾಜ್ಯವು ಯಾವಾಗ ಕೈಸೇರುವುದೆಂದು ಕೇಳಲು ಅವರು ಅತನ ಮಗಳು ಶಾಲ್ಮಲಿದತ್ತೆಗೆ ಭೂಚರನೋರ್ವನು ಪತಿಯಾಗಿ ಅತನಿಗೆ ಹುಟ್ಟುವ ಮಗನಿಂದ ದೇಶವು ಕೈವಶ

ವಾಗುವುದೆಂದು ಹೇಳಲು ಅಶನಿವೇಗನು ಸಂತುಷ್ಟನಾಗಿದ್ದನು. ಆ ವಾರ್ತೆಯನ್ನು ಕೇಳಿ ದುಷ್ಟ ಅಂಗಾರವೇಗನು ಸಮಯವನ್ನು ಕಾದು ನಿನ್ನನ್ನೆತ್ತಿಕೊಂಡುಹೋಗು ತ್ತಿರಲು ನಿನ್ನ ಹೆಂಡತಿಯು ಅವನ ಬೆನ್ನಟ್ಟಿಕೊಂಡುಹೋಗಿ ನಿನ್ನನ್ನು ಬಿಡಿಸಿ ಅಶರೀ ರವಾಕ್ಯವನ್ನು ಕೇಳಿ ಈಸ್ಥಳಕ್ಕೆ ಮೆಲ್ಲನೆ ಬಿಡಿಸಿದಳು ' ಎಂದು ಹೇಳಿದನು. ವಸುದೇ ವನು ಆ ಮುನೀಶ್ವರರನ್ನು ವಂದಿಸಿ ಬೀಳ್ಕೊಂಡು ಮುಂದೆ ಹೋಗುವಾಗ ಸಮೀಪದಲ್ಲೇ ಧನುಷ್ಟಂಕಾರದಂತಹ ಒಂದು ಸಪ್ಪಳವನ್ನು ಕೇಳಿದನು ಅದನ್ನು ನೋಡಲು ಹೋಗಿ ಅಲ್ಲೊಂದು ಅರ್ಹನ್ಮಂದಿರದ ರತ್ನಮಂಟಪವನು ಕಂಡನು. ಅಲ್ಲಿ ಓರ್ವ ಕನ್ಯೆಯು ಅಭಿನವಶಾರದೆಯಂತೆ ವೀಣೆಯನ್ನು ಬಾರಿಸುತ್ತಿದ್ದಳು. ಲೋಕಾತಿಶಯವಾದ ರೂಪವತಿಯಾದ ಆಕೆಯನ್ನು ನೋಡುವ ಕೌತುಕದಿಂದ ವಸುದೇವನು ಒಂದು ಕಂಬದ ಮರೆಯಲ್ಲಿ ನಿಂತನು. ಇವನನ್ನು ಆ ಕನ್ಯೆಗೆ ಪಾಠಹೇಳುವ ಗಾಂಧರ್ವಾಚಾರ್ಯನು ಕಂಡು ಅರಿವನೆಂದು ನೋಡಿ ಅವನ ರೂಪಕ್ಕೆ ಮೆಚ್ಚಿ ತನ್ನ ಬಳಿಗೆ ಕರೆದು ಕುಳ್ಳಿರಿಸಿಕೊಂಡನು. ಆಗ ದೇವಾಲಯದ ಪದ್ಮಾವತೀದೇವಿಯು ಕನ್ಯೆಯು ವೀಣಾವಾದಕ್ಕೆ ಮೆಚ್ಚಿ ತನ್ನ ತಲೆಯ ಹೂವನ್ನು ಪ್ರಸಾದವಾಗಿತ್ತಳು. ಕನ್ಯೆಯು ಇಷ್ಟಾರ್ಥಸಿದ್ಧಿಯಾದುದೆಂದು ಆ ಹೂವನ್ನು ತನ್ನ ಮುಡಿಗಿಟ್ಟು ಮನಸ್ಸನ್ನು ವಸುದೇವನಲ್ಲಿಟ್ಟು ಗುರುವಿಗೆ ವಂದಿಸಿ ಮನೆಗೆ ಹೊರಟುಹೋದಳು ಇತ್ತ ಗಾಂಧರ್ವಾಚಾರ್ಯನು " ಈಸುಂದರನು ಬಂದೊಡನೆಯೇ ಪದ್ಮಾವತೀದೇವಿಯು ತನ್ನ ಒಪ್ಪಿಗೆಯನ್ನು ಕೊಟ್ಟುದುದರಿಂದ ಈ ಕನ್ಯೆಗೆ ಇವನೇ ವರನು " ಎಂದು ಸಂತೋಷಗೊಂಡು ಮುಗುಳ್ನಗೆ ನಕ್ಕನು. ಅದನ್ನರಿತಿದ್ದ ವಸುದೇವನು " ಈ ನಾರೀಮಣಿಯು ಯಾವ ರಾಜನ ಮಗಳು? ಇವಳ ಹೆಸರೇನು? ಏತಕ್ಕಾಗಿ ವೀಣೆಯ ಅಭ್ಯಾಸ? " ಎಂದು ಕೇಳಿದನು. ಅದಕ್ಕವನು " ಈಕೆಯು ಚಾರುದತ್ತನೆಂಬ ವರ್ತಕನ ಮಗಳು. ಈ ಸೌಂದರ್ಯವತಿಯ ಹೆಸರೂ ಗಾಂಧರ್ವದತ್ತೆಯೆಂದು ಈ ವೀಣೆಯಿಂದ ಯಾವನು ತನ್ನನ್ನು ಸೋಲಿಸುವನೋ ಅವನೇ ತನ್ನ ಪತಿಯೆಂದು ಈ ಕೆಯು ಪ್ರತಿಜ್ಞೆಮಾಡಿಕೊಂಡಿರುವುದರಿಂದ ಚಾರುದತ್ತನು ತಿಂಗಳಿಗೊಮ್ಮೆ ವೀಣಾಸ್ವಯಂವರವನ್ನು ಮಾಡುತ್ತಾನೆ. ದೇಶದ ರಾಜಕುಮಾರರು ಬಂದು ಈ ಕಾರ್ಯವು ತಮಗೆ ಸಾಧ್ಯವಾಗದೆ ಹೋಗುತ್ತಿದ್ದಾರೆ " ಎಂದನು. ಆ ಮಾತನ್ನು ಕೇಳಿ ವಸುದೇವನು "ಈಮಾತು, ಈನಡೆ, ಈಸೌಂದರ್ಯ, ಈಶೃಂಗಾರ, ಈಸೊಬಗು ಭೂಚರ ಸ್ತ್ರೀಯರಿಗಿಲ್ಲ ' ಎಂದನು. ಆ ಮಾತನ್ನು ಕೇಳಿ ಗಾಂಧರ್ವಾಚಾರ್ಯನು ವಸುದೇವನಿಗೆ ಚಾರುದತ್ತನ ಕಥೆಯನ್ನೂ ಗಾಂಧರ್ವದತ್ತೆಯ ಕಥೆಯನ್ನೂ ಹೇಳುವನು.

೧೦. ಚಾರುದತ್ತನ ಪ್ರಸಂಗಸಂಧಿ

ಅಂಗದೇಶದ ರಾಜಧಾನಿಯಾದ ಚಂಪಾನಗರದಲ್ಲಿ ವಿಮಲವಾಹನನು ದೊರೆ ಯಾಗಿದ್ದನು. ಆ ನಗರದಲ್ಲಿ ಭಾನುದತ್ತನೆಂಬ ವರ್ತಕನು ಆತನ ಪತ್ನಿ ದೇಯಿಲೆ ಯೆಂಬವಳೊಡನೆ ಸುಖವಾಗಿರುವಾಗ ಒಂದು ದಿನ ದೇಯಿಲೆಯು ನಾಲ್ಕೀರನ್ನು ಮಿಂದು ಆ ರಾತ್ರಿ ಪತಿಯೊಡನೆ ಭೋಗಸುಖದಲ್ಲಿದ್ದು ಬೆಳಗಪ್ಪಜಾವದಲ್ಲಿ ಚಾರಣಮುನಿಗಳು ತನ್ನ ಕೈಯಲ್ಲಿ ಒಂದು ಮಾಣಿಕವನ್ನಿರಿಸಿದ ಸ್ವಪ್ನವನ್ನು ಕಂಡು ಎಚ್ಚತ್ತು ಸುಖವಾಗಿರಲು ಕೆಲವು ದಿನಗಳಲ್ಲಿ ಗರ್ಭೋತ್ಪತ್ತಿಯಾಗಿ ಶುಭ ಲಗ್ನದಲ್ಲಿ ಗಂಡುಮಗುವನ್ನು ಹಡೆದಳು. ದೇಯಿಲೆಯು ಚಾರಣರು ರತ್ನವನ್ನಿತ್ತ ಕನಸನ್ನು ಕಂಡು ಮಗನನ್ನು ಹಡೆದುದರಿಂದ ಆ ಮಗುವಿಗೆ ಚಾರುದತ್ತನೆಂದು ನಾಮಕರಣವನ್ನು ಮಾಡಿದರು. ಆ ದಿನದಲ್ಲಿ ಹುಟ್ಟಿದ ಬೇರೆ ಐದುಮಂದಿ ವರ್ತ ಕರ ಮಕ್ಕಳನ್ನೂ ತಂದು ಭಾನುದತ್ತನು ಹರಿಬಾಂಧವ, ಗೋಮುಖ, ಮರು ಭೂತಿ ಪರಂತಪ, ದೇವದತ್ತ ಎಂದು ಹೆಸರುಗಳನ್ನಿಟ್ಟು ಸಾಕುತ್ತಿದ್ದನು. ಚಾರು ದತ್ತನು ಅವರೊಡನೆ ಸಕಲಕಲಾಪರಿಪೂರ್ಣನಾಗಿ ಯೌವನವನ್ನು ಹೊಂದಿದನು. ಒಂದು ದಿನ ಪಟ್ಟಣದ ಸಮೀಪದಲ್ಲಿರುವ ಹೊಳೆಗೆ ಹೋಗಿ ಸ್ನಾನವನ್ನು ಮಾಡಿ ಕೊಂಡು ಉದ್ಯಾನದಲ್ಲಿ ವಿಹರಿಸಿ ಪಟ್ಟಣಕ್ಕೆ ಹಿಂದಿರುಗುವ ಸಮಯದಲ್ಲಿ ಒಬ್ಬ ಮನುಷ್ಯನು ಶೂಲದಲ್ಲಿ ಅರ್ಧಜೀವವಾಗಿರುವುದನ್ನು ಕಂಡನು. ಆ ಮನುಷ್ಯನ ಕಣ್ಣುಗಳು ಪಕ್ಕದಲ್ಲಿದ್ದ ರತ್ನದ ಗುರಾಣಿಯನ್ನು ನೋಡುತ್ತಿದ್ದುವು. ಚಾರುದ ತ್ತನು ಆ ಭಾವವನ್ನು ತಿಳಿದು ಆ ಗುರಾಣಿಯ ಮಧ್ಯದಲ್ಲಿದ್ದ ಒಂದು ಸರ್ವೌಷಧಿ ಘಟಿಕೆಯನ್ನು ತೆಗೆದುಕೊಂಡು ಆ ಶೂಲದ ಪುರುಷನನ್ನು ಬಿಡಿಸುವುದಕ್ಕಾಗಿ ಮುಟ್ಟಲು ಆ ಘಟಿಕೆಯ ಸಾಮರ್ಥ್ಯದಿಂದ ಆ ಮನುಷ್ಯನು ಶೂಲದಿಂದ ಮುಕ್ತ ನಾಗಿ ಚೇತರಿಸಿಕೊಂಡು ಬಂದು ಚಾರುದತ್ತನನ್ನು ಹೊಗಳಿ ನಮಸ್ಕರಿಸಿ ತನ್ನ ವೃತ್ತಾಂತವನ್ನು ಹೇಳುತ್ತಾನೆ:—

" ನಾನು ವಿಜಯಾರ್ಧಗಿರಿಯ ದಕ್ಷಿಣಶ್ರೇಣಿಯ ಶಿವಂಕರವೆಂಬ ಪಟ್ಟಣದ ಅಮಿತಗತಿಯೆಂಬ ದೊರೆಯು. ನನ್ನ ಪತ್ನಿ ಕಮಲಾವತಿಯೆಂಬವಳೊಡನೆ ನಾನು ಸುಖದಿಂದಿರುತ್ತಿರಲು ಆಕೆಯ ಸೌಂದರ್ಯಕ್ಕೆ ಮೋಹಿಸಿ ಓರ್ವ ಖೇಚರನು ತನ್ನ ರಾಜ್ಯವನ್ನೂ ಬಿಟ್ಟುಬಂದು ನನ್ನಲ್ಲಿ ಕಪಟಸ್ನೇಹವನ್ನು ಮಾಡಿಕೊಂಡಿದ್ದನು. ಒಂದು

ದಿನ ನಾನು ಈ ಚಂಪಾನಗರಿಗೆ ಬಂದು ವಾಸುಪೂಜ್ಯಜಿನರನ್ನು ಭಕ್ತಿಯಿಂದರ್ಚಿಸಿ ಈ ವನದ ಕುಂದಲತಾಮಂಟಪದಲ್ಲಿ ರತಿಕ್ರೀಡೆಯನ್ನಾಡಿ ಆಯಾಸಪರಿಹಾರಾರ್ಥವಾಗಿ ಮಲಗಿರಲು ಆ ದುಷ್ಟನು ಬಂದು ನನ್ನನ್ನು ಶೂಲಕ್ಕೆಹಾಕಿ ನನ್ನ ಹೆಂಡತಿಯನ್ನೆತ್ತಿಕೊಂಡು ಹೋದನು. ಇನ್ನು ನಾನು ಸ್ವಾವಕಾಶಮಾಡಿದರೆ ನನ್ನವಿಪತ್ತನ್ನು ಸೈರಿಸದೆ ನನ್ನ ಪತ್ನಿಯು ಆತ್ಮಹತ್ಯಮಾಡಿಕೊಳ್ಳುವಳು " ಎಂದು ಹೇಳಿ ಆಕಾಶಕ್ಕೆ ಹಾರಿಹೋದನು.

ಇತ್ತ ಚಾರುದತ್ತನು ತನ್ನ ಐದುಮಂದಿ ಗೆಳೆಯರೊಡನೆ ಮನೆಗೆ ಬಂದು ವಿದ್ಯಾಭ್ಯಾಸವನ್ನು ಮಾಡುತ್ತ ಸುಖವಾಗಿರುತ್ತಿರಲು ಭಾನುದತ್ತನು ತನ್ನ ಮೈದುನನಾದ ಸಿದ್ಧಾರ್ಥನ ಮಗಳಾದ ಮಿತ್ರಾವತಿಯೆಂಬ ಬಹುಸುಂದರಳಾದ ಕನ್ಯೆಯನ್ನು ತಂದು ಚಾರುದತ್ತನಿಗೆ ಬಹುವೈಭವದಿಂದ ಮದುವೆಮಾಡಿದನು. ಚಾರುದತ್ತನಾದರೋ ಸದಾ ವಿದ್ಯಾವ್ಯಾಸಂಗದಲ್ಲೇ ಆಸಕ್ತನಾಗಿ ಪತ್ನೀಸುಖವಿಮುಖನಾಗಿದ್ದನು. ಅದರಿಂದ ಮಿತ್ರಾವತಿಯು ಚಿಂತಾಕ್ರಾಂತಳಾಗಿರಲು ಅದನ್ನು ತಿಳಿದು ಆಕೆಯ ತಾಯಿ ಸೌಮಿತ್ರಿಯು ಮಗಳ ಬಳಿಗೆ ಬಂದು ಆಕೆಯ ಬಣ್ಣಗೆಡದ ತುಟಿಯನ್ನೂ ಕೆಡದಿರುವ ನೇತ್ರಾಂಜನವನ್ನೂ ಮಾಸದಿರುವ ಅಂಗರಾಗವನ್ನೂ ಸಡಿಲದ ಮುಡಿಹೂವನ್ನೂ ಕಡುಸೊಗಯಿಪ ತಿಲಕವನ್ನೂ ಗುಜ್ಜುವಡೆಯದ ಕುಡಗಳನ್ನೂ ನೋಡಿ ಈ ಬಾಲೆಗೆ ರತಿಸುಖವಿಲ್ಲವೆಂದು ಬಗೆದು " ಎಲೆ ಮಗಳೆ! ನಿಮ್ಮತ್ತೆಯು ಮಾತನ್ನು ಕೇಳಿದುದರಿಂದ ನಾವು ಮೂರ್ಖರಾದೆವು " ಎಂದು ಹೇಳಿ ದೇಯಿಲೆಯ ಬಳಿಗೆ ಹೋಗಿ " ಎಲೆ ಪಾತಕಿ! ನಪುಂಸಕನಾದ ನಿನ್ನ ಮಗನಿಗೆ ನನ್ನ ಮಗಳನ್ನು ತಂದು ಕೆಡಿಸುವುದುಚಿತವೇ ? " ಎನಲು ದೇಯಿಲೆಯು " ಉತ್ತಮನಾಯಕನಾದ ನನ್ನ ಮಗನು ವಿದ್ಯಾತುರದಿಂದ ರತಿಸುಖಕ್ಕೆಳಸದಿರುವನು. ಒಂದೆರಡು ದಿನಗಳಲ್ಲಿ ಆ ಕೊರತೆಯನ್ನು ಹೋಗಲಾಡಿಸುವೆನು. ನೀನು ನಂಬು " ಎಂದು ಹೇಳಿ ನಾದುನಿಯನ್ನು ಕಳುಹಿಸಿಕೊಟ್ಟು ತನ್ನ ಗಂಡನ ತಮ್ಮನೂ ವೇಶ್ಯಾಲಂಪಟನೂ ಆದ ರುದ್ರದತ್ತನಿಗೆ ಈ ವಿಷಯವನ್ನು ತಿಳಿಸಲು ಅವನು ಚಾರುದತ್ತನ ಬಳಿಗೆ ಹೋಗಿ ಕೆಲವು ದಿವಸ ಒಡನಾಟದಲ್ಲಿದ್ದು , ಊರಿನ ಶೋಭೆಯನ್ನು ನೋಡುವ ನೆವದಿಂದ ಆ ಊರಿನ ಕೇರಿಕೇರಿಗಳಲ್ಲಿ ಕರೆದೊಯ್ದು ಸುಂದರ ರಮಣಿಯರ ರೂಪ ಸೌಂದರ್ಯವನ್ನು ತೋರಿಸುತ್ತಿದ್ದು ಒಂದುದಿನ ಸೂಳೆಗೇರಿಗೆ ಕರೆದೊಯ್ಯಲು ಆ ಸುಂದರ ಸುಕುಮಾರ ಚಾರುದತ್ತನನ್ನು ನೋಡಿ ಅನೇಕ ಸೂಳೆಯರು ಇಂತಹ ಸುಂದರನನ್ನು ತಾವೆಂದೂ ನೋಡಲಿಲ್ಲವೆಂದಂದುಕೊಳ್ಳುತ್ತಿದ್ದರು. ಚಾರುದತ್ತನು

ಮುಂದೆ ನಡೆವಾಗ ಒಂದೆಡೆಯಲ್ಲಿ ರುದ್ರದತ್ತನ ಪ್ರೇರಣೆಯಿಂದ ಒಂದು ಮದಗಜವು ಎದುರಾಗಿ ಬಂದಿತು. ಹಿಂದುಗಡೆಯಿಂದ ಮತ್ತೊಂದು ಮದದಾನೆಯು ಬಂದಿತು. ಆ ಇಕ್ಕಟ್ಟಿನಲ್ಲಿ ವಸಂತತಿಲಕೆಯೆಂಬ ವೇಶ್ಯೆಯ ದಾದಿಯರು ರುದ್ರದತ್ತನ ಸಂಜ್ಞೆಯಿಂದ ಚಾರುದತ್ತನನ್ನು ಆ ಆನೆಗಳು ಹೋಗುವವರೆಗೆ ತಮ್ಮ ಒಡತಿಯ ಮನೆಗೆ ಬರಬೇಕೆಂದು ಹೇಳಿ ಅವರನ್ನು ವಸಂತತಿಲಕೆಯ ಕರುಮಾಡಕ್ಕೆ ಕರೆದೊಯ್ದರು. ರತಿರೂಪವತಿಯಾದ ವಸಂತತಿಲಕೆಯು ಶೃಂಗರಿಸಿಕೊಂಡು ಬಂದು ಚಾರುದತ್ತನ ಪಕ್ಕದಲ್ಲಿ ಕುಳಿತಳು. ಆಕೆಯ ದಾದಿಯರು ಈರ್ವರ ನಡುವಿನಲ್ಲಿ ಪಗಡೆ-ಸೆತ್ತವನ್ನು ತಂದಿರಿಸಿದರು, ರುದ್ರದತ್ತನು ಪ್ರೋತ್ಸಾಹಿಸಿ ಚಾರುದತ್ತನನ್ನು ವಸಂತತಿಲಕೆಯೊಡನೆ ಪಗಡೆಯಾಡಿಸಿದನು. ಕಣ್ಣಸನ್ನೆಯಿಂದ ಚಾರುದತ್ತನ ಐವರು ಗೆಳೆಯರನ್ನು ಕಳುಹಿಸಿ ಕೊನೆಯಲ್ಲಿ ತಾನೂ ಕಣ್ಮರೆಯಾದನು.

ಇತ್ತ ಚಾರುದತ್ತನು ಒಂಬೆರಡಾಟಗಳನ್ನಾಡಿ ಗೆಲ್ಲಲು ತನ್ನ ಸೋಲಿಗೆ ಸೋಲನ್ನು ಕೊಡದೆ ಪೋಗಲಾಗದೆಂದು ವಸಂತತಿಲಕೆಯು ಚಾರುದತ್ತನ ಕೈ ಪಿಡಿದು ಮನೆಯ ಮೇಲ್ಮೆಲೆಗೊಯ್ದು ನಾನಾವಿಧವಾದ ಸರಸಸಲ್ಲಾಪಗಳಿಂದಲೂ ಹಾವಭಾವಗಳಿಂದಲೂ ಪರಿಮಳವಸ್ತುಗಳಿಂದಲೂ ಅವನ ಮನಸ್ಸನ್ನು ಅಂಗಜ ಕೇಳಿಗೆ ಅನುಗೊಳಿಸಿ ಸುರತಸುಖಲೋಲರಾದರು. ಅಂದಿನಿಂದ ಅವರೀರ್ವರೂ ಹಗಲಿರುಳು ಸಮರತಿಯಿಂದ ಸುಖಪರವಶರಾಗಿರಲು ವಸಂತತಿಲಕೆಯ ತಾಯಿಯು ತನ್ನ ದಾದಿಯರನ್ನು ಚಾರುದತ್ತನ ತಾಯಿಯ ಬಳಿಗೆ ಕಳುಹಿಸಿ ದಿನಕ್ಕೆ ಸಾವಿರ ರೂಪಾಯಿಗಳಂತೆಯೂ ಪರ್ವಕ್ಕೆ ಹತ್ತುಸಾವಿರ ರೂಪಾಯಿಗಳಂತೆಯೂ ವೆಚ್ಚಕ್ಕೆ ತರಿಸಲಾರಂಭಿಸಿದಳು. ವಸಂತತಿಲಕೆಗೆ ಗೋಚರವಿಲ್ಲದಂತೆ ಹಲವು ಕಾರಣಗಳಿಂದ ಆರು ವರುಷಗಳವರೆಗೆ ಹದಿನಾರುಕೋಟಿ ದ್ರವ್ಯವನ್ನು ಸೆಳೆದಳು. ಮನೆಯು ಬರಿದಾಗುತ್ತಬರುವುದನ್ನು ಕಂಡು ಚಾರುದತ್ತನ ತಂದೆ—ಭಾನುದತ್ತನು ಮನನೊಂದು ಜಿನದೀಕ್ಷೆಯನ್ನು ತೆಗೆದುಕೊಂಡು ಹೋದನು. ಇತ್ತ ಚಾರುದತ್ತನು ಇತರವಿಷಯಗಳನ್ನೆಲ್ಲ ಮರೆತು ವಸಂತತಿಲಕೆಯ ಪ್ರೀತಿಯೇ ಜೀವವೆಂದು ಬಗೆದು ಮತ್ತೆ ಆರುವರುಷಕಾಲ ವಸಂತತಿಲಕೆಯಲ್ಲಿ ಲಂಪಟನಾಗಿರುತ್ತಿರಲು ಆಕೆಯ ತಾಯಿ ಕುಂಟಣಿಯು ಮೊದಲಿನಂತೆ ಪುನಃ ಹದಿನಾರುಕೋಟಿ ದ್ರವ್ಯವನ್ನು ತರಿಸಿದಳು. ಮನೆಯು ಬರಿದಾಯ್ತು. ದಾದಿಯರು ಮುನ್ನಿನಂತೆ ಆ ಮರುದಿನ ಹೋಗಿ ದ್ರವ್ಯವನ್ನು ಬೇಡಲು ದೇಯಿಲೆಯು ಮನೆಯನ್ನು ಮಾರಿ ಹಣವನ್ನು ಕೊಟ್ಟು ಆ ದಿನವೇ ತನ್ನ ಸಹೋದರ ಸಿದ್ಧಾರ್ಥನ ಮನೆಗೆ ಹೊರಟು

ಹೋದಳು. ಅದರ ಮರುದಿನ ಅಲ್ಲಿಗೂಹೋಗಿ ದಾದಿಯರು ಹಣವನ್ನು ಕೇಳಲು ದೇಯಿಲೆಯು ಲಜ್ಜಿತಳಾಗಿ ತಲೆಬಾಗಿಸಿದಳು. ಅದನ್ನು ಕಂಡು ಚಾರುದತ್ತನ ಹೆಂಡತಿ ಮಿತ್ರಾವತಿಯು ತನ್ನ ಆಭರಣಗಳನ್ನಿತ್ತಳು. ಈ ಎಲ್ಲ ಸಮಾಚಾರವನ್ನು ವಸಂತತಿಲಕೆಯು ಕೇಳಿ ಮನಸೊಂದು " ಜಾತಿನೀಚ್ಯೆಯರು ವಿಟರ ಪತ್ನಿಯರು ತೊಡುವ ಆಭರಣಗಳಿಗೆ ಆಶೆಪಟ್ಟರೆ ಘಾತಕವು ಬರುವುದು" ಎಂದು ತಾಯಿಯನ್ನು ಬೈವುತ ಆ ಪರಿಚಾರಕಿಯರನ್ನು ಕರೆದು " ಇಂದಿನಿಂದ ನೀವು ಹೆಣವನ್ನು ಕೇಳಲು ಆ ಕಡೆಗೆ ಹಜ್ಜೆಯಿಡಬೇಡಿ " ಎಂದು ತಡೆದಳು. ಆ ಮಾತನ್ನು ಕೇಳಿ ಕುಂಟಣಿಯು ಮಗಳ ಬಳಿಗೆ ಹೋಗಿ " ಚಾರುದತ್ತನ ಮನೆಯು ಬರಿದಾಯ್ತು, ಬಡತನವು ಬಂದಿತು, ಅವನನ್ನು ಕಂಡರೆ ಊರೆಲ್ಲ ಹೇಸುವಂತಾಯ್ತು. ಮಗಳೇ ! ಕೇಳು, ಹಣವುಳ್ಳವನೇ ಇಂದ್ರ, ಹಣವುಳ್ಳವನೇ ಚಂದ್ರ, ಹಣವುಳ್ಳವನೇ ಜಯಂತ, ಹಣವುಳ್ಳವನೇ ಕಾಮ, ಹಣವಿಲ್ಲದವನು ಹೆಣಕ್ಕೆ ಸಮಾನನು. ಈ ಊರಲ್ಲಿ ಯೌವನ ರೂಪ ಲಾವಣ್ಯ ಸಂಪತ್ತುಗಳಿಂದ ಚಾರುದತ್ತನನ್ನು ಮಾರಿಸುವವರಿದ್ದಾರೆ. ಅವರನ್ನು ವರಿಸು. ಹಸುವು ಹಾಲುಕೊಡುವುದನ್ನು ಬಿಟ್ಟರೆ ಅದನ್ನು ಮೊದಲಿನಂತೆ ಪೋಷಿಸುವರೇ ? ಹಣವನ್ನು ಸುಲಿದುಕೊಂಡು ವಿಟರನ್ನು ಹೊರನೂಂಕುವುದು ಸೂಳೆಯರ ನೀತಿ. ಚಾರುದತ್ತನನ್ನು ತ್ಯಜಿಸುವುದಕ್ಕೆ ಇದೇ ಸಮಯ." ಎಂದಳು. ಆ ಮಾತನ್ನು ಕೇಳಿ ವಸಂತತಿಲಕೆಯು ಬಹಳವಾಗಿ ನೊಂದು ಹಲವು ಮಾತುಗಳಿಂದ ತಾಯಿಯ ರೀತಿಯನ್ನು ಖಂಡಿಸಿ ಸಮರೂಪ, ಸಮಯೌವನ, ಸಮಚತುರತೆ, ಸಮಭೋಗಬಲ, ಸಮಸೋಲ, ಸಮರತಿ, ಸಮಸುಖವುಳ್ಳ ಅನುಪಮನಾದ ಚಾರುದತ್ತನನ್ನು ಬಿಟ್ಟು ಜೀವಿಸಲಾರೆನೆಂದಳು. ಮಗಳ ಮಾತನ್ನು ಕೇಳಿ ಮನಸೊಂದು ಕುಂಟಣಿಯು ಹಿಂದಿರುಗಿಬಂದು ಒಂದುದಿನ ಎಳೆನೀರಿನಲ್ಲಿ ಮಾದಕ ವಸ್ತುವನ್ನು ಬೆರಸಿ, ಕಳುಹಲು ಅವರೀರ್ವರೂ ಕುಡಿದು ಮತ್ತರಾಗಿ ಬಿದ್ದರು ಇದೇ ಸಮಯವೆಂದು ಬಗೆದು ಕುಂಟಣಿಯು ಚಾರುದತ್ತನನ್ನು ಕಂಬಳಿಯಲ್ಲಿ ಕಟ್ಟಿಸಿ ಆ ಊರಿನ ತಿಪ್ಪೆಯಲ್ಲಿ ಹಾಕಿಸಿದಳು. ಕೆಲವು ಹೊತ್ತಿನಮೇಲೆ ಸೊಕ್ಕಿಳಿದು ಚಾರುದತ್ತನು " ಆ ಕರುಪಾಡದಲ್ಲಿ ಪ್ರಿಯಳ ಸೋಳಿನ ತೆಕ್ಕೆಯಲ್ಲಿ ಸುಖವಾಗಿ ಮಲಗಿದ್ದ ನನ್ನನ್ನು ಇಲ್ಲಿಗೆ ಯಾರು ತಂದುಹಾಕಿದರು ' ಎಂದಂದುಕೊಂಡು ಕಡೆಯ ರಾತ್ರಿಯಲ್ಲಿ ಅಲ್ಲಿಂದೆದ್ದು ತನ್ನ ಮನೆಗೆ ಹೋಗಲು ಆ ಮನೆಯನ್ನು ಕ್ರಯಕ್ಕೆ ಪಡೆದವರು ಆ ಮನೆಯನ್ನು ಏಳೆಂಟುದಿನಗಳ ಹಿಂದೆ ದೇಯಿಲೆಯು ತಮಗೆ ಮಾರಿ ತನ್ನ ತವರ್ಮನೆಗೆ ಹೋದಳೆಂದ ಮಾತನ್ನು ಕೇಳಿ ದುಃಖಿಸಿ ಅಲ್ಲಿಗೆ ಹೋಗಿ

ತಾಯಿಗೂ ಮಾವನಿಗೂ ವಂದಿಸಿ ಧನಹಾನಿಯಾದುದನ್ನೂ ತಂದೆಯು ದೀಕ್ಷೆಗೆ ಹೋದುದನ್ನೂ ಮನೆಯನ್ನು ಮಾರಿದವಿಷಯವನ್ನೂ ಕೇಳಿದನು. ಆಗ ಮಿತ್ರಾವತಿಯು ಬಂದು ಗಂಡನ ಮೈಯಲ್ಲಿ ಅಂಟಿದ್ದ ತಿಪ್ಪೆಯ ಧೂಳನ್ನೊರಸಿ ಬಹು ಆಸಕ್ತಿಯಿಂದ ಮೈಯೊತ್ತಿ ಸ್ನಾನಭೋಜನಗಳನ್ನು ಮಾಡಿಸಿದಳು. ಆಗಿನ ದೃಶ್ಯವು ನೋಡತಕ್ಕದಾಗಿದ್ದಿತು. ನಿಜವಾದ ಪ್ರೀತಿಯು ಎಲ್ಲಿರುವುದೆಂಬುದನ್ನು ಕಂಡು ಚಾರುದತ್ತನು ಸಂತುಷ್ಟನಾಗಿ ತಾಯಿಯ ಮುಖವನ್ನು ನೋಡಿ " ಎಲೆ ತಾಯೆ! ನಿನ್ನಿಂದ ನಿನಗೀ ಪರಿಸ್ಥಿತಿಯಾಯ್ತು; ತಂದೆಯು ದೀಕ್ಷೆಗೆ ಹೋದನು; ಈ ಅಪವಾದವನ್ನು ನಾನೆಂತು ನೀಗುವೆನು! ನಾನು ಹಾಳುಮಾಡಿದಷ್ಟು ದ್ರವ್ಯವನ್ನು ಗಳಿಸದೆ ಮನೆಗೆ ಹೊಕ್ಕೆನು " ಎಂದು ಭಾಷೆತೊಟ್ಟನು. ಈ ವಿಷಯವನ್ನು ಆತನ ಮಾವ—ಸಿದ್ಧಾರ್ಥನು ತಿಳಿದು ಅಳಿಯನ ಬಳಿಗೆ ಬಂದು " ನಾನು ನಿನಗೆ ಬೇರೆಯವನಲ್ಲ, ನಿನ್ನ ಸೋದರಮಾವ. ನನ್ನಲ್ಲಿ ಹದಿನಾರುಕೋಟಿ ದ್ರವ್ಯವಿರುವುದು. ನನಗೆ ಗಂಡುಮಕ್ಕಳಿಲ್ಲ, ಮಿತ್ರಾವತಿಯೊಬ್ಬಳೆ ಮಗಳು. ಆಕೆಯು ನಿನ್ನ ಹೆಂಡತಿ. ಈ ದ್ರವ್ಯಕ್ಕೆಲ್ಲ ನೀನೇ ಒಡೆಯ. ಮೊದಲಿನಂತೆ ಸುಖವಾಗಿರು " ಎಂದನು. ಆ ಮಾತನ್ನು ಕೇಳಿ ಚಾರುದತ್ತನು " ತಂದೆಯ ಆಸ್ತಿಯನ್ನೆಲ್ಲ ಹಾಳುಮಾಡಿ, ಮನೆಯನ್ನು ಮಾರಿ ಬಂದು ಮಾವನ ಮನೆಯ ಸೊತ್ತಿಗೊಡೆಯನಾಗಿದ್ದಾನೆಂಬ ಅಪಕೀರ್ತಿಯನ್ನು ಪಡೆದು ಬದುಕುವವನಲ್ಲವಾದುದರಿಂದ ಪರದೇಶಕ್ಕೆ ಹೋಗಿ ಬಹುದ್ರವ್ಯವನ್ನು ಗಳಿಸಿಕೊಂಡು ಬಂದರೆ ನಾನು ನಿನ್ನ ಅಳಿಯನು; ಇಲ್ಲವಾದರೆ ಭೂಮಿಗೆ ಭಾರನು; ಇದಕ್ಕೇಕೆ ಸಂದೇಹ?" ಎಂದನು. ಆ ಮಾತನ್ನು ಕೇಳಿ ಸಿದ್ಧಾರ್ಥನು "ಹಾಗಾದರೆ ಬಂಡವಾಳವನ್ನು ತೆಗೆದುಕೊಂಡುಹೋಗಿ ವ್ಯಾಪಾರಮಾಡು" ಎನಲು ನಸುನಕ್ಕು " ವ್ಯಾಪಾರಕ್ಕೆ ಬಂಡವಾಳವನ್ನು ಕೇಳುವವನು ವರ್ತಕನ ಮಗನೇ?" ಎಂದು ಸಮಾಧಾನಪಡಿಸಿ ತಾಯಿಯ ಮತ್ತು ಮಾವನ ಕಾಲುಗಳಿಗೆ ನಮಸ್ಕಾರ ಮಾಡಿ ಪ್ರೀತಿಯಿಂದ ಮಿತ್ರಾವತಿಯನ್ನು ಸಂತೈಸಿ ದಕ್ಷಿಣಾಭಿಮುಖನಾಗಿ ಹೊರಟುಹೋದನು. ಮರುಕದಿಂದ ಮರುದಿನ ಸಿದ್ಧಾರ್ಥನೂ ಹೋಗಿ ಚಾರುದತ್ತನೊಡನೆ ಸೇರಿಕೊಳ್ಳಲು ಅವರೀರ್ವರೂ ಒಂದು ವನಕ್ಕೆ ಹೋಗಿ ದಿವ್ಯಮೂಲಿಕೆಗಳನ್ನು ಕಿತ್ತು ಹೊರೆಗಟ್ಟಿ ಪಲಾಶನಗರಕ್ಕೊಯ್ದು ಮಾರುತ್ತಿದ್ದು ಅದರಿಂದ ಬಂದ ಹಣದಿಂದ ಜವಳಿಯನ್ನು ತೆಗೆದುಕೊಂಡು ಒಂದು ಮನೆಯಲ್ಲಿಟ್ಟರು. ಅದು ಅಕಸ್ಮಾತ್ ಬೆಂಕಿಯಿಂದ ಉರಿದುಹೋಗಲು ಅಚ್ಚರಿವಟ್ಟು ಮತ್ತೆ ಕೆಲವು ವರ್ತಕರೊಡನೆ ಅವರು ಒಂದು ಪರ್ವತದ ತುದಿಗೆ ಹೋಗಿ ಒಂದು ಗುಹೆಯನ್ನು ಹೊಕ್ಕು

ಅಲ್ಲಿ ಅಗೆದು ಉತ್ತಮರತ್ನಗಳನ್ನು ದೊರಕಿಸಿ ಹೇರಿಸಿಕೊಂಡು ಬರುವಾಗ ಮಧ್ಯ ಮಾರ್ಗದಲ್ಲಿ ಬೇಡರು ಅಡ್ಡಗಟ್ಟಿ ಅವುಗಳನ್ನು ಕಸಿದುಕೊಳ್ಳಲು ಆ ಸಾಹಸಿಯು ಅವರನ್ನು ಓಡಿಸಿ ಅಲ್ಲಿಂದ ಮತ್ತೊಂದು ಪಟ್ಟಣಕ್ಕೆ ಹೋಗಲು ಅಲ್ಲಿ ವಾಸವದತ್ತ ನೆಂಬೋರ್ವನು ಕಂಡು ಸಂತೋಷದಿಂದ ತನ್ನ ಮನೆಗೆ ಕರೆದೊಯ್ದು ಉಪಚರಿಸಿ ಅವರಿಗೊದಗಿದ ತೊಂದರೆಯನ್ನು ಕೇಳಿ ವಿಷಾದಿಸಿ "ಸದ್ಗುಣಿ ಚಾರುದತ್ತನೆ! ನಿನ್ನ ತಂದೆಯು ನನ್ನಲ್ಲಿ ಭೇದಭಾವವನ್ನಿಟ್ಟರಲಿಲ್ಲವಾದುದರಿಂದ ನನ್ನ ಮನೆಯ ದ್ರವ್ಯವನ್ನು ತೆಗೆದುಕೊ" ಎಂದನು. ಆ ಮಾತನ್ನು ಕೇಳಿ ಚಾರುದತ್ತನು "ಹಡಗಿನ ವ್ಯಾಪಾರಕ್ಕೆ ಹೊರಡಲು ಅನುಕೂಲಪಡಿಸಿಕೊಡು" ಎಂದನು. ಅದರಂತೆ ಅವನು ಸಿದ್ಧಪಡಿಸಿಕೊಡಲು ಹಡಗನ್ನೇರಿ ದ್ವೀಪಾಂತರಕ್ಕೆ ಹೋಗಿ ಹನ್ನೆರಡು ವರುಷಗಳ ವರೆಗೆ ರತ್ನಗಳ ವ್ಯಾಪಾರವನ್ನು ಮಾಡಿ ಮೊದಲು ತಾನು ಹಾಳುಮಾಡಿದ್ದ ದ್ರವ್ಯದಷ್ಟು ಸಂಪಾದಿಸಿಕೊಂಡು ಹಿಂದಿರುಗಿ ಸಮುದ್ರದಲ್ಲಿ ಬರುತ್ತಿರುವಾಗ ಅಶುಭಕರ್ಮೋದಯದಿಂದ ಸುಂಟರಿಗಾಳಿಯು ಬಂದು ಹಡಗನ್ನುರುಳಿಸಲು ಹಡಗೊಡೆದು ಹೋಯ್ತು. ಚಾರುದತ್ತನೂ ಸಿದ್ಧಾರ್ಥನೂ ಅಗಲಿಹೋಗಿ ಒಂದೊಂದು ಹಲಗೆಯ ತುಂಡುಗಳ ಸಹಾಯದಿಂದ ದಡವನ್ನು ಹೊಂದಿದರು. ಚಾರುದತ್ತನು ಒಂದೆಡೆಯಲ್ಲಿ ಮೂರು ದಿನಗಳವರೆಗಿದ್ದು ಗಾಳಿಯು ಕಡಿಮೆಯಾದ ಮೇಲೆ ಮುಂದೆ ನಡೆದು ಶಂಬರಿಯೆಂಬೂರಿಗೆ ಹೋದನು. ಅಲ್ಲಿ ಧನದತ್ತನೆಂಬ ವರ್ತಕನು ಚಾರುದತ್ತನನ್ನು ಮನೆಗೆ ಕರೆದೊಯ್ದು ಉಪಚರಿಸಿ "ಹಿಂದೆ ನಿನ್ನ ತಂದೆಯು ಆಪದ್ಧನವೆಂದು ಹದಿನಾರುಕೋಟಿ ದ್ರವ್ಯವನ್ನು ನನ್ನಲ್ಲಿರಿಸಿದ್ದಾನೆ. ಅದರಲ್ಲಿ ಎಂಟುಕೋಟಿ ದ್ರವ್ಯವನ್ನು ಮೊನ್ನೆಯದಿವಸ ಸಿದ್ಧಾರ್ಥನು ತೆಗೆದುಕೊಂಡು ಚಂಪಾಪುರಕ್ಕೆ ಹೋದನು. ಉಳಿದುದನ್ನು ನೀನು ತೆಗೆದುಕೊಂಡು ಹೋಗು" ಎನಲು ಚಾರುದತ್ತನು ಆ ಹಣವನ್ನೆಲ್ಲ ತೆಗೆದುಕೊಂಡು ಆ ಊರಿನ ಜಿನಮಂದಿರಗಳ ದಾನಶಾಲೆಗಳಿಗೆ ವೆಚ್ಚಮಾಡಿದನು. ಅವನ ದಾನಗುಣವನ್ನು ನಗರನಿವಾಸಿಗಳೆಲ್ಲ ಹೊಗಳುತ್ತಿರಲು ಅದನ್ನು ನೋಡಬೇಕೆಂದು ವೀರಭದ್ರನೆಂಬ ಯಕ್ಷನು ಆ ಊರಹೊರಗೆ ಜಿನಮಂದಿರದ ಮಂಟಪದಲ್ಲಿ ರೂಪವನ್ನು ಬದಲಾಯಿಸಿಕೊಂಡು ಒಂದು ಗ್ರಹವು ಹಿಡಿದ ಮನುಷ್ಯನಂತೆ ಬಿದ್ದಿದ್ದು ಇನ್ನೊಬ್ಬನನ್ನು ನಿರ್ಮಿಸಿ ಊರಿಗೆ ಕಳುಹಿಸಲು ಅವನು ಊರಿನ ಜನರಿಗೆ "ನನ್ನ ಒಡೆಯ ವಿಕ್ರಮಾಂಕನಿಗೆ ನಿಮ್ಮೂರ ಬಸದಿಯ ಬಳಿಯಲ್ಲಿ ಒಂದು ಗ್ರಹವು ಹಿಡಿದು ಮಾನವ ರಕ್ತವನ್ನು ಬೇಡುತ್ತದೆ. ಯಾರಾದರು ರಕ್ತವನ್ನು ಕೊಡುವ ಧೀರರಿದ್ದಾರೆಯೇ?"

ಎಂದು ಕೇಳಿದನು. ಯಾರೂ ಉತ್ತರವನ್ನು ಕೊಡದಿರಲು ಧೀರ ಚಾರುದತ್ತನು ಅವನೊಡನೆ ಹೋಗಿ ದೇವರಿಗೆ ವಂದಿಸಿ ಆ ಗ್ರಹಪೀಡಿತನ ಬಳಿಗೆ ಹೋಗಿ ತನ್ನ ಶರೀರಕ್ಕೆ ತಿವಿದು ರಕ್ತವನ್ನು ಬಸಿದುಕೊಟ್ಟು ತಾನು ಮೂರ್ಛೆಹೋದನು. ಅವನ ತ್ಯಾಗವನ್ನು ನೋಡಿ ಯಕ್ಷನು ಸಂತುಷ್ಟನಾಗಿ ಮೂರ್ಛೆಯನ್ನೂ ವ್ರಣವನ್ನೂ ಹೋಗಲಾಡಿಸಿ ತನ್ನ ನಿಜರೂಪವನ್ನು ತೋರಿ ಚಾರುದತ್ತನನ್ನು ಹೊಗಳಿ ಪುಷ್ಪ ವೃಷ್ಟಿಯನ್ನೂ ಸುವರ್ಣವೃಷ್ಟಿಯನ್ನೂ ಅತನ ಮೇಲೆ ಸುರಿದು ಹೊರಟುಹೋದನು. ಆ ಸುವರ್ಣವನ್ನು ಚಾರುದತ್ತನು ಊರಿನ ಜನರಿಗೆಲ್ಲ ದಾನಮಾಡಿ ಅಲ್ಲಿಂದ ಮುಂದಕ್ಕೆ ಹೊರಟು ಒಂದು ಕಾಡಿಗೆ ಹೋಗಿ ಒಂದು ತಾಪಸಾಶ್ರಮದಲ್ಲಿ ಒಬ್ಬ ತಾಪಸಿಯನ್ನು ಕಂಡನು. ಆ ಗೊರವನು ಚಾರುದತ್ತನನ್ನು ಕಂಡು " ನನ್ನಲ್ಲೊಂದು ರಸವಿದ್ಯೆಯುಂಟು. ಅದನ್ನು ಸಾಧಿಸಲು ಈವರೆಗೆ ಸಹಾಯಕರಾರೂ ದೊರೆಯಲಿಲ್ಲ " ಎಂದನು. ಆ ಮಾತನ್ನು ಕೇಳಿ ಚಾರುದತ್ತನು ತಾನು ಸಹಾಯಕನಾಗುವೆನೆನಲು. ಆ ಗೊರವನು ಸಂತುಷ್ಟನಾಗಿ ಅವನನ್ನು ಒಂದು ಸಿದ್ಧರಸದ ಬಾವಿಯ ಬಳಿಗೆ ಕರೆದೊಯ್ದು " ಈ ಬಾವಿಯಲ್ಲಿ ಸಿದ್ಧರಸವಿದೆ. ಇದಕ್ಕೆ ಪ್ರವೇಶಮಾಡುವುದು ನಿನಗೆ ಸಾಧ್ಯವಲ್ಲ. ನೀನಿಲ್ಲಿರು ನಾನಿಳಿದು ರಸವನ್ನು ತರುವೆನು " ಎನಲು ಕೇಳಿ ಚಾರುದತ್ತನು ನಸುನಕ್ಕು ತಾನೇ ಹೋಗುವೆನೆಂದನು. ಆ ಮಾತನ್ನು ಕೇಳಿ ಆ ವಂಚಕನಾದ ಗೊರವನು ಹರ್ಷಿತನಾಗಿ " ಈ ಹಗ್ಗವನ್ನು ಹಿಡಿದು ಬಾವಿಗಿಳಿದು ರಸಕ್ಕೆ ಕೈಗಳನ್ನು ಸೋಕಿಸದೆ ಈ ಸೋರೆಯ ಬುರುಡೆಯಲ್ಲಿ ತುಂಬಿ ಹಗ್ಗಕ್ಕೆ ಕಟ್ಟಿ ಅಲುಗಾಡಿಸಿದರೆ ಅದನ್ನು ಎಳೆದುಕೊಂಡು ಮತ್ತೊಂದುಸರ್ತಿ ನಿನಗಾಗಿ ಹಗ್ಗವನ್ನು ಬಿಡುವೆನು. ಅದರಿಂದ ನೀನು ಮೇಲಕ್ಕೆ ಬಾ " ಎಂದನು. ಹಾಗೆಯೇ ಆಗಲೆಂದು ಚಾರುದತ್ತನು ಹಗ್ಗವನ್ನು ಹಿಡಿದು ಆ ಭಯಂಕರವಾದ ಬಾವಿಗಿಳಿದು ರಸವನ್ನು ತುಂಬಿ ಹಗ್ಗವನ್ನಲುಗಾಡಿಸಲು ಗೊರವನು ರಸವನ್ನು ಮೇಲಕ್ಕೆಳೆದುಕೊಂಡು ಹೊರಟುಹೋದನು. ಒಂದೆರಡು ಗಳಿಗೆಯಾದರೂ ಹಗ್ಗವು ಬಾರದಿರಲು ಆ ದುಷ್ಟನು ತನ್ನನ್ನು ವಂಚಿಸಿ ಹೊರಟುಹೋದನೆಂದು ತಿಳಿದು ಹೊರಡಲಾಗದ ಈ ಬಾವಿಯಲ್ಲಿ ತನಗೆ ಅಳಿವಲ್ಲದೆ ಉಳಿವಿಲ್ಲವೆಂದು ಬಗೆದು ಎದೆಗುಂದದೆ ಶಾಂತಚಿತ್ತನಾಗಿದ್ದು ಹಿಂದೆ ತಾನು ಮಾಡಿರುವ ದುಷ್ಕರ್ಮದ ಫಲದಿಂದ ಈ ಅವಸ್ಥೆಯೊದಗಿತೆಂದೂ ಮುಂದೆ ಸದ್ಗತಿಯನ್ನು ಸಾಧಿಸುವುದಕ್ಕಾಗಿ ಸನ್ಯಸನವ್ರತವನ್ನು ಧರಿಸುವೆನೆಂದೂ ತನ್ನಲ್ಲಿ ತಾನೇ ಮಾತನಾಡಿಕೊಳ್ಳುತ್ತಿರುವಾಗ ಆ ಬಾವಿಯ ಮತ್ತೊಂದೆಡೆಯಲ್ಲಿ ಬಿದ್ದಿದ್ದ ಓರ್ವ ಮನುಷ್ಯನು " ಅಯ್ಯಾ ! ಈ ಭಯಂಕರ

ವಾದ ಬಾವಿಯಿಂದ ಮೇಲಕ್ಕೆ ಹೋಗುವ ರೀತಿಯನ್ನು ಹೇಳುವೆನು, ಚಿಂತಿಸ ಬೇಡ'' ಎಂದನು ಆ ಮಾತನ್ನು ಕೇಳಿ ಚಾರುದತ್ತನು " ನನಗೆ ಹೇಳುವ ಉಪಾ ಯವನ್ನು ನೀನೇಕೆ ಮಾಡದಿರುವೆ ? " ಎನಲು ಆ ಮನುಷ್ಯನು " ಇಂದಿಗೆ ಮೂರು ದಿನಗಳ ಹಿಂದೆ ನಿನ್ನಂತೆ ನನ್ನನ್ನೂ ಆ ವಂಚಕ ಗೊರವನು ಈ ಬಾವಿಗಳಿಸಿ ಹೋದನು. ನಾನಿಲ್ಲಿ ಬಿದ್ದಿದ್ದು ಸಹಿಸಲಾಗದ ಬಾಯಾರಿಕೆಯಾಗಲು ಈ ನೀರನ್ನು ಕುಡಿಯಲು ನನ್ನ ಕೈಗಳನ್ನು ಹಾಕಿದೆನು. ಈ ರಸವು ಸ್ಪರ್ಶವಾದೊಡನೆಯೇ ನನ್ನ ಕೈಗಳು ಮುರುಟಿದುವು. ಆದುದರಿಂದ ನನಗೆ ಸಾಧ್ಯವಲ್ಲ. ಈ ಸಿದ್ಧರಸ ವನ್ನು ಒಂದು ಉಡುವು ಕುಡಿದು ಹೋಗುತ್ತಿದೆ. ಅದರ ಬಾಲವನ್ನು ಹಿಡಿದು ನೀನು ಮೇಲಕ್ಕೆ ಹೋಗು ' ಎಂದು ಹೇಳಿ ಕಂಠಗತಪ್ರಾಣನಾಗಲು ಚಾರುದ ತ್ತನು ಅವನಿಗೆ ಪಂಚನಮಸ್ಕಾರಮಂತ್ರವನ್ನುಪದೇಶಿಸಿದನು. ಅವನು ಸತ್ತು ಸ್ವರ್ಗದಲ್ಲಿ ದೇವನಾಗಿ ಹುಟ್ಟಿದನು.

ಇತ್ತ ಉಡುವು ಒಂದು ರಸವನ್ನು ಕುಡಿದು ಹಿಂದಿರುಗುವಾಗ ಚಾರುದ ತ್ತನು ಅದರ ಬಾಲವನ್ನು ಹಿಡಿಯಲು ಅದು ರಭಸದಿಂದ ಹತ್ತಿ ಮೇಲಕ್ಕೆ ಸ್ವಲ್ಪ ದೂರದಲ್ಲಿ ಒಂದು ಹುತ್ತದ ಬಿಲಕ್ಕೆ ಹೊಕ್ಕಿತು. ಆ ಹುತ್ತದ ಬಿಲವು ಇಟ್ಟಿಡೆ ಯಾಗಿದ್ದುದರಿಂದ ಬಾಲವು ಕೈತಪ್ಪಿಹೋಯ್ತು. ಇನ್ನೇನು ಗತಿಯೆಂದು ಚಾರು ದತ್ತನು ಚಿಂತಿಸುತ್ತಿರುವಷ್ಟರಲ್ಲಿ ಒಂದು ಆಡು ಬಂದು ಆ ಹುತ್ತದ ಬಿಲದಲ್ಲಿ ಕಾಲಿ ಕ್ಕಲು ಅದನ್ನು ಹಿಡಿದುಕೊಂಡನು. ಆ ಮೇಕೆಯು ಅರಚುತ್ತಿರಲು ಅಡುವೇಯಿ ಸುವ ಬಾಲಕರು ಬಂದು ಆ ಕಾಲನ್ನೆಳೆದರೂ ಬಾರದಿರಲು ಆ ಹುತ್ತದ ಬಾಯನ್ನು ತೆರಪುಮಾಡಿದರು. ಆಗ ಚಾರುದತ್ತನು ಅಲ್ಲಿಂದ ಮೆಲ್ಲನೆ ಪೊರಮಟ್ಟು ಕಾಡಿನಲ್ಲಿ ಬರುತ್ತಿರುವಾಗ ಒಂದು ಭಯಂಕರವಾದ ಕಾಡುಕೋಣವು ಎದುರಿಸಲು ಅವನು ಅಲ್ಲಿ ಬಿದ್ದಿದ್ದ ಹೆಬ್ಬಾವಿನ ಬೆನ್ನನ್ನು ಮೆಟ್ಟಿ ದಾಟಿದನು. ಆ ಅಜಗರವು ಕೋಪಗೊಂಡೆದ್ದು ಎದುರಾಗಿ ಬರುತ್ತಿದ್ದ ಕಾಡುಕೋಣನನ್ನುನುಂಗಿತು. ಹಾಗೆ ಆ ವಿಪತ್ತಿನಿಂದ ಪಾರಾಗಿ ಚಾರುದತ್ತನು ಮುಂದೆ ಹೋಗಿ ಹೊಳೆಯಲ್ಲಿ ಸ್ನಾನ ವನ್ನು ಮಾಡಿಬಂದು ಫಲಭರಿತವಾದ ಒಂದು ಮಾವಿನಮರದಡಿಯಲ್ಲಿ ಕುಳಿತಿರಲು ಅಲ್ಲಿಗೆ ಹರಿಸಖ ಮೊದಲಾದ ಅವನ ಐದುಮಂದಿ ಸ್ನೇಹಿತರೂ ರುದ್ರದತ್ತನೂ ಬಂದು ಸೇರಿದರು. ಅವರಿಗೆ ಯಥೋಚಿತವಾಗಿ ಅಭಿವಂದಿಸಿ ಪರಸ್ಪರ ಕುಶಲ ವಾರ್ತೆಯಾದಮೇಲೆ ಚಾರುದತ್ತನು ತನ್ನ ತಾಯಿಯ ಮತ್ತು ಹೆಂಡತಿ ಮೊದಲಾ ದವರ ಕ್ಷೇಮಸಮಾಚಾರವನ್ನು ಕೇಳಲು ಅವರ ಕ್ಷೇಮವನ್ನು ತಿಳಿಸಿ ರುದ್ರದತ್ತನು

" ಕಮಲಲತೆಯು ಸೂರ್ಯನನ್ನು ನೆನೆವಂತೆ ವಸಂತತಿಲಕೆಯು ನೆನೆದು ನಿನ್ನ ಬರುವಿಕೆ ಯನ್ನೇ ಎದುರು ನೋಡುತ್ತಿದ್ದಾಳೆ " ಎಂದನು. ಅದಕ್ಕೆ ಚಾರುದತ್ತನು " ಎಲೆ ಚಿಕ್ಕಯ್ಯನೆ! ಪ್ರತಿದಿನ ಬಂದು ತನಗೆರಗಿ ಮಕರಂದವನ್ನು ಪಾನಮಾಡುವ ತುಂಬಿ ಯು ಅಗಲಿದರೆ ಕುಮುದಲತೆಯು ಬಳಿಕ ಅದನ್ನು ಬಯಸುವುದೇ ? ವಿಟರ ಅಗಲಿಕೆ ಯಿಂದ ಬೆಲೆವೆಣ್ಣುಗಳಿಗೆ ದುಃಖವಾಗುವುದೆಂಬ ಕುಟಿಲವಚನವನ್ನು ನಂಬಬಹುದೇ?" ಎಂದನು. ಆ ಮಾತನ್ನು ಕೇಳಿ ರುದ್ರದತ್ತನೂ ಹರಿಸಖ ಮೊದಲಾದವರೂ " ನೀನು ತೊಲಗಿದಂದಿನಿಂದ ವಸಂತತಿಲಕೆಯು ಇತರ ವಿಟರನ್ನು ಸಹೋದರರಂತೆ ಭಾವಿಸಿ ಕೊಂಡಿದ್ದು ಆಭರಣಾಲಂಕಾರಗಳನ್ನೂ ಭೋಜನವನ್ನೂ ತೊರೆದು ಮೌನವನ್ನು ಧರಿಸಿ ಪರಪುರುಷರನ್ನು ನೋಡುವುದಿಲ್ಲವೆಂಬ ವ್ರತವನ್ನು ಕೈಕೊಂಡಿರುವಳು" ಎಂದು ಆಕೆಯ ನಿಜಸ್ಥಿತಿಯನ್ನು ಹೇಳಿದರು. ಆ ಸುದ್ದಿಯನ್ನು ಕೇಳಿ ಚಾರುದತ್ತನು ಬಹು ಸಂತುಷ್ಟನಾಗಿ ತನಗೊದಗಿದ ಆಪತ್ತುಗಳನ್ನು ಅವರುಗಳಿಗೆ ಹೇಳುತ್ತ ಅಲ್ಲಿಂ ದೆದ್ದು ಪಶ್ಚಿಮಸಮುದ್ರತೀರಕ್ಕೆ ಹೋಗಿ ಅಲ್ಲಿರುವ ರಜತಪರ್ವತದ ಸಮೀಪದಲ್ಲಿರುವ ಪಾರ್ಶ್ವಕವೆಂಬ ಪಟ್ಟಣಕ್ಕೆ ಪ್ರವೇಶಿಸಿ ರುದ್ರದತ್ತನ ಮೂಲಕ ಓರ್ವ ಪಾರಸಿಕನನ್ನು ಕರೆಯಿಸಿ ರತ್ನದ್ವೀಪಕ್ಕೆ ಹೋಗುವ ದಾರಿಯಾವುದೆಂ ದೂ ಅದು ಯಾವಕಡೆ ಇರುವುದೆಂದೂ ಅಲ್ಲಿಗೆ ಹೋಗುವ ರೀತಿ ಯಾವುದೆಂದೂ ಕೇಳಲು ಅವನು ಆ ರತ್ನದ್ವೀಪವು ಪೂರ್ವಸಮುದ್ರದ ನಟ್ಟನಡುವಿನಲ್ಲಿರುವುದೆಂ ದೂ ಅಲ್ಲಿಗೆ ಹೋಗಲು ನಾಲ್ಕು ಬೆರಳಗಲದ ಕಲ್ಲಿನ ದಾರಿಯಿರುವುದೆಂದೂ ಆ ದಾರಿಯ ಇಕ್ಕೆಲದಲ್ಲೂ ಅಗಾಧವಾದ ನೀರಿರುವುದರಿಂದ ಅಲ್ಲಿಗೆ ಹೋಗ ಲು ಸಾಧ್ಯವಲ್ಲವೆಂದೂ ಆಡಿನ ಬೆನ್ನಿನಮೇಲೆ ಕುಳಿತು ಮನಸ್ಸನ್ನು ಬಿಗಿಹಿ ಡಿದು ಹೋಗಬೇಕೆಂದೂ ಅದು ಸಾಮಾನ್ಯರಿಗಳವಲ್ಲವೆಂದೂ ಹೇಳಿದನು. ಆ ಮಾತನ್ನು ಕೇಳಿ ಚಾರುದತ್ತನು ಏಳು ಆಡುಗಳನ್ನು ತರಿಸಿ ಖಡ್ಗದಮೇಲೆ ಅವು ಗಳಿಗೆ ನಡೆಗಲಿಸಿ ಆ ಏಳುಮಂದಿಗಳೂ ಆಡುಗಳನ್ನೇರಿಕೊಂಡು ಸಮುದ್ರತೀರಕ್ಕೆ ಹೋಗಿ ಚಾರುದತ್ತನು ಮೊದಲೊಮ್ಮೆ ತಾನೊಬ್ಬನೇ ಹೋಗಿ ಆ ರತ್ನದ್ವೀಪವನ್ನು ನೋಡಿಕೊಂಡು ಬಂದು ಆ ಮೇಲೆ ಎಲ್ಲರೂ ಹೋಗುವುದಾಗಿ ನಿರ್ಣಯಿಸಿ ಕೊಂಡು ಚಾರುದತ್ತನು ಹೊರಟುಹೋಗಿ ಘೋರವಾದ ಅರಣ್ಯದ ನಡುವಿನಲ್ಲಿರುವ ಆ ರತ್ನದ್ವೀಪಕ್ಕೆ ಹೋಗಿ ನೋಡಿಕೊಂಡು ಹಿಂದಿರುಗುವುದು ತಡವಾದುದರಿಂದ ರುದ್ರದತ್ತ ಮೊದಲಾದವರು ಚಾರುದತ್ತನಿಗೆ ಇದಿರಾಗಿ ಹೊರಟು ಸಮುದ್ರ ಮಧ್ಯದಲ್ಲಿ ಸಂಧಿಸಲು ಅವರನ್ನು ನೋಡಿ ಚಾರುದತ್ತನು " ನೀವುಗಳು ವಿಚಾರ

ಮಾಡದೆ ಹೀಗೆ ಬರಬಹುದೇ ?" ಎನಲು ರುದ್ರದತ್ತನು "ಗೊತ್ತಾದ ಸಮಯಕ್ಕೆ ನೀನು ಬಾರದಿರಲು ಸಂದೇಹಗೊಂಡು ನಾವು ಬಂದೆವು" ಎಂದನು. ಅದಕ್ಕೆ ಚಾರುದತ್ತನು "ಸಮುದ್ರದ ಈ ಇಕ್ಕಟ್ಟಿನ ದಾರಿಯಲ್ಲಿ ಹಿಂದಿರುಗುವ ಧೀರರುಂಟೇ ? ಆದುದರಿಂದ ನಾನೀ ಸಮುದ್ರದಪಾಲಾಗಿ ನಿಮ್ಮನ್ನು ಕಳುಹುವೆನು" ಎನಲು ಹರಿಸಖ ಮೊದಲಾದವರು "ಲೋಕದಲ್ಲಿ ನಮ್ಮಂಥ ಮನುಷ್ಯರನೇಕರುಂಟು. ಏಕಾಂಗವೀರನಾದ ನಿನ್ನಂಥ ಗುಣಿಗಳು ಅಪರೂಪವಾದುದರಿಂದ ನಾವು ಪ್ರಾಣಗಳನ್ನು ಬಿಡುವೆವು, ನೀನು ಹೋಗು" ಎಂದರು. ಅದಕ್ಕೆ ಚಾರುದತ್ತನು "ನಿಮ್ಮೆಲ್ಲರನ್ನು ಕೊಂದು ಬಂದನೆಂಬ ಅಪಕೀರ್ತಿಯನ್ನು ನಾನು ನೀಗುವುದೆಂತು?" ಎಂದು ಹೇಳಿ ತನ್ನ ಜಾಣ್ಮೆಯನ್ನು ನೋಡುವೆನೆಂದು ಯೋಚಿಸಿ "ನಮಸ್ಸಿದ್ಧೇಭ್ಯಃ" ಎಂಬ ಮಂತ್ರವನ್ನುಚ್ಚರಿಸಿ ಎಡಗಡೆಗೆ ಸರಿದು ಒಂದು ಕಾಲನ್ನು ದಾರಿಯಲ್ಲಿಟ್ಟು ನಿಂದು ಆಡಿಸ ಮುಂಗಾಲುಗಳನ್ನು ರತ್ನದ್ವೀಪದ ಕಡೆಗೆ ತಿರುಗಿಸಿ ದಾರಿಯಲ್ಲಿ ತಂದಿಟ್ಟು ಹಿಂಗಾಲುಗಳನ್ನು ತಿರುಗಿಸಿ ನೆಟ್ಟನೆ ಮಾಡಿ ಹೊರಟನು. ಆ ಚಾತುರ್ಯವನ್ನು ನೋಡಿ ರುದ್ರದತ್ತ ಮೊದಲಾದವರು ಬಹು ಸಂತುಷ್ಟರಾದರು. ತರುವಾಯ ಎಲ್ಲರೂ ರತ್ನದ್ವೀಪಕ್ಕೆ ಹೋಗಿ ಒಂದು ಕೊಳದಲ್ಲಿ ಕೈಕಾಲುಗಳನ್ನು ತೊಳೆದು ಮುಂದೆ ಹೋಗಿ ಚಾರುದತ್ತನು ಒಂದು ಮಾವಿನಮರದಡಿಯಲ್ಲಿ ಮಲಗಿ ನಿದ್ರೆಹೋದನು. ಇತ್ತ ಆ ಕ್ರೂರಕರ್ಮಿಯಾದ ರುದ್ರದತ್ತನು ಅವನಿಗೆ ಮಾದಕಪದಾರ್ಥವನ್ನು ಕೊಟ್ಟು ಹಿಂದೆ ಆ ಪಾರಸಿಕನು ತನ್ನಲ್ಲಿ ಹೇಳಿದ್ದಂತೆ ಆಡುಗಳ ತಲೆಗಳನ್ನು ಕಡಿದು ಚರ್ಮವನ್ನು ಮಗುಚಿ ಏಳು ಚೀಲಗಳನ್ನು ಮಾಡಿ ಒಂದು ಚೀಲದಲ್ಲಿ ಮೈಮರೆತುಬಿದ್ದಿದ್ದ ಚಾರುದತ್ತನನ್ನು ಹೊಗಿಸಿ ಅದರ ಬಾಯಿಯನ್ನು ಕಟ್ಟಿ ಉಳಿದ ಆರು ತಿದಿಗಳಲ್ಲಿ ಆರು ಮಂದಿಗಳು ಹೊಕ್ಕು ಅವುಗಳ ಬಾಯಿಗಳನ್ನು ಕಟ್ಟಿದರು. ಅಲ್ಲಿಗೆ ಎಂಟು ಬೇರುಂಡ ಪಕ್ಷಿಗಳು ಹಾರಿಬಂದು ಅವುಗಳಲ್ಲಿ ಆರುಪಕ್ಷಿಗಳು ಆರು ತಿದಿಗಳನ್ನು ಕಚ್ಚಿಕೊಂಡು ಆಕಾಶಕ್ಕೆ ಹಾರಿದುವು. ಚಾರುದತ್ತನು ಹೊಕ್ಕಿರ್ದ ತಿದಿಯನ್ನು ಒಕ್ಕಣ್ಣಿನ ಒಂದು ಬೇರುಂಡವು ಕಚ್ಚಿಕೊಂಡು ಆಕಾಶಕ್ಕೆ ಹಾರುತ್ತಿರಲು ಮತ್ತೊಂದು ಬೇರುಂಡವು ಅದನ್ನು ಹಿಂಬಾಲಿಸಿಕೊಂಡು ಹೋಗಿ ಕಣ್ಣಿಲ್ಲದ ಕಡೆಯಲ್ಲಿ ಕುಟುಕಿ ಏಳುಸಲ ಬೀಳಿಸಿತು. ಏಳುಸಲವೂ ನೆಲಕ್ಕೆ ಬೀಳಲು ಬಿಡದೆ ಮತ್ತೆ ಮತ್ತೆ ಕಚ್ಚಿಕೊಂಡಿತು. ಹೀಗೆ ಅವೆರಡು ಪಕ್ಷಿಗಳೂ ಕೋಪದಿಂದ ಹೋರಾಡಲು ಆ ತಿದಿಯು ಸಮುದ್ರಕ್ಕೆ ಬಿದ್ದು ತೆರೆಗಳ ಹೊಡೆತದಿಂದ ದಡಕ್ಕೆ ಸೇರಿತು. ಆಗ ಚಾರುದತ್ತನು

ಎಚ್ಚತ್ತು ತಿದಿಯನ್ನು ಹರಿದು ದೇವದೇಗತಿಯೆಂದು ಹೊರಟು ಒಂದು ಸರೋವರಕ್ಕೆ ಹೋಗಿ ಸ್ನಾನಮಾಡಿ ದೇವರನ್ನು ಸ್ಮರಿಸಿ ಕರ್ಮವಶದಿಂದ ತಾನೊಬ್ಬನೇ ಸಮುದ್ರತೀರದಲ್ಲಿ ಸಿಲುಕಿದೆನೆಂದು ಯೋಚಿಸಿ ಅದಕ್ಕಾಗಿ ಚಿಂತಿಸದೆ ಧೈರ್ಯವಾಗಿದ್ದು ಒಂದು ಬಂಡೆಯನ್ನೇರಿ ಸುತ್ತಲು ನೋಡುವಾಗ ಅಲ್ಲೊಂದು ಮಾವಿನ ಮರದಡಿಯಲ್ಲಿದ್ದ ಯತಿರಾಯನನ್ನು ಕಂಡು ತನ್ನ ಚಿಂತೆಯೆಲ್ಲವನ್ನೂ ನೀಗಿಕೊಂಡು ಗುರುಭಕ್ತಿಯಿಂದ ಆ ಮುನಿವರ್ಯರಿಗೆ ನಮಸ್ಕರಿಸಿದನು. ಆ ಚಾರಣ ಮುನಿಗಳು ಕಣ್ಬೆರೆದು ಕೈಯೆತ್ತಿ ಹರಸಿ ಸಂತೈಸುವಾಗ ಆಕಾಶದಿಂದ ಹರಿಕೇತು ವೆಂಬ ಖೇಚರನು ಇಳಿದು ಬಂದು ತಂದೆಯಾದ ಆ ಮುನಿಗಳಿಗೆರಗಲು ಅವರು "ಹರಿಕೇತುವೇ ಕೇಳು, ನಮ್ಮನ್ನು ಚಂಪಾಪುರದ ನದೀತೀರದಲ್ಲಿ ಆ ವೈರಿಯು ಶೂಲದಲ್ಲಿ ಹಾಕಿರಲು ಕರುಣದಿಂದ ಈ ಚಾರುದತ್ತನು ರಕ್ಷಿಸಿದನು. ಆದುದರಿಂದ ನಿನಗೆ ನಮಗಿಂತಲೂ ಹೆಚ್ಚಿನ ಪಿತೃಸ್ಥಾನವು ಈ ಚಾರುದತ್ತನಿಗೆ ಸಲ್ಲತಕ್ಕದಾಗಿದೆ. ಇವನನ್ನು ಕರೆದೊಯ್ದು ನಿನ್ನ ಸಾಮ್ರಾಜ್ಯಪದವಿಯನ್ನಿತ್ತು ಬಾಳು" ಎನಲು "ಹಾಗೆಯೇ ಮಾಡುವೆನು" ಎಂದು ಹರಿಕೇತುವು ಸಮ್ಮತಿಸಿ ಸಂತೋಷದಿಂದ ಚಾರುದತ್ತನ ಚರಣಗಳಿಗೆ ನಮಸ್ಕರಿಸಿ ಕುಳಿತಿರುವಾಗ ಆಕಾಶಮಾರ್ಗದಿಂದಿಳಿದು ಬಂದು ಕುಸುಮಶೇಖರನೆಂಬೋರ್ವ ದೇವನು ಮೊದಲು ಚಾರುದತ್ತನಿಗೆ ನಮಸ್ಕಾರಮಾಡಿ ಬಳಿಕ ಮುನಿಗಳಿಗೆ ನಮಸ್ಕರಿಸಲು ಹರಿಕೇತುವು ನೋಡಿ "ಎಲೆ ದೇವನೆ! ಗುರುಗಳಿರುವಾಗ ಗೃಹಸ್ಥನಿಗೆರಗುವುದುಚಿತವೇ?" ಎಂದನು. ಅದಕ್ಕೆ ಆ ದೇವನು 'ರಸಕೂಪದಲ್ಲಿ ಬಿದ್ದು ಅಜ್ಞಾನದಿಂದ ಸತ್ತು ದುರ್ಗತಿಗೆ ಹೋಗುವವನಿಗೆ ಈ ಚಾರುದತ್ತನು ಕವಿಯಲ್ಲಿ ಪಂಚನಮಸ್ಕಾರಮಂತ್ರವನ್ನುಪದೇಶಿಸಿ ಸದ್ಗತಿಗೆ ಕಳುಹಿದವನೂ ದೇವ ಗುರು ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳ ಸ್ವರೂಪವನ್ನು ತಿಳುಹಿದವನೂ ಆಗಿರುವುದರಿಂದ ಇವನಿಗೆ ಮೊದಲು ವಂದಿಸಿದೆನು" ಎಂದು ಹೇಳಿ ಪುಷ್ಪವೃಷ್ಟಿಯನ್ನು ಮಾಡಿ ವಸ್ತ್ರಾಭರಣಗಳಿಂದ ಲಂಕರಿಸಿ ಹೊಗಳಿ ಚಂಪಾನಗರಕ್ಕೆ ಕರೆದೊಯ್ದುಬಿಡುವೆನೆಂದನು. ಆ ಮಾತನ್ನು ಕೇಳಿ ಮುನೀಶ್ವರರು ಹರಿಕೇತುವಿನೊಡನೆ ಚಾರುದತ್ತನು ತಮ್ಮ ಪಟ್ಟಣಕ್ಕೆ ಹೋಗಬೇಕೆಂದು ತಡೆಯಲು ಆ ದೇವನು ದೇವಲೋಕಕ್ಕೆ ಹೋದನು.

ಇತ್ತ ಹರಿಕೇತುಖೇಚರನು ಮುನೀಶ್ವರರ ಅಪ್ಪಣೆಯನ್ನು ಪಡೆದು ಚಾರುದತ್ತನೊಡನೆ ಪುಷ್ಪಕವಿಮಾನವನ್ನೇರಿ ತನ್ನ ಪಟ್ಟಣಕ್ಕೆ ಹೋಗಿ ತನ್ನ ದೊರೆತನವನ್ನು ಕೊಡಲು ಅದನ್ನು ಚಾರುದತ್ತನು ಸ್ವೀಕರಿಸಲಿಲ್ಲವು. ಆಗ ಹದಿನಾರು

ಮಂದಿ ರಾಜಕನ್ಯೆಯರನ್ನು ತಂದು ಚಾರುದತ್ತನಿಗೆ ಮದುವೆಮಾಡಿದನು. ಆ ಸ್ತ್ರೀಯರೊಡನೆ ಸುಖವಾಗಿದ್ದು ಒಂದು ದಿನ ಹರಿಕೇತುವನ್ನು ಕರೆದು ಆ ಗಂಡ ಬೇರುಂಡಗಳು ರತ್ನದ್ವೀಪಕ್ಕೊಯ್ದ ರುದ್ರದತ್ತ ಹರಿಸಖ ಮೊದಲಾದವರನ್ನು ಕರೆತಂದು ಚಂಪಾನಗರದಲ್ಲಿ ಬಿಡುವಂತೆ ಹೇಳಿದನು. ಹರಿಕೇತುವು ಅದರಂತೆ ಮಾಡಿದನು. ಚಾರುದತ್ತನು ಹರಿಕೇತುವಿನ ಶತ್ರುಗಳನ್ನೆಲ್ಲ ನಿರ್ಮೂಲಮಾಡಿ ಹರಿಕೇತುವನ್ನು ಸಂತೈಸಿ ಒಂದು ದಿನ ತಾನು ತನ್ನ ಊರಿಗೆ ಹೋಗಬೇಕೆಂದನು. ಆಗ ಹರಿಕೇತುವು ತನ್ನ ತಂಗಿಯಾದ ಗಂಧರ್ವದತ್ತೆಯನ್ನು ಚಾರುದತ್ತನ ವಶಪಡಿಸಿ ಆಕೆಯನ್ನು ಭೂಚರರಲ್ಲಿ ಅನುರೂಪನಾದ ವರನಿಗೆ ಕೊಟ್ಟು ಮದುವೆಮಾಡುವಂತೆ ಕೇಳಿಕೊಂಡನು. ಆಗ ಚಾರುದತ್ತನು ಕುಸುಮಶೇಖರ ದೇವನನ್ನು ಸ್ಮರಿಸಲು ಅವನು ಬಂದು ಕೊಂಡಾಡಿ ಕಾಮಧೇನು ಚಿಂತಾರತ್ನಗಳನ್ನಿತ್ತು ಪೂಜಿಸಿದ ಬಳಿಕ ಚಾರುದತ್ತನು ತನ್ನ ಪತ್ನಿಯರೊಡನೆ ವಿಮಾನಾರೂಢನಾಗಿ ದೇವವಿದ್ಯಾಧರ ಸೈನ್ಯಸಮೇತನಾಗಿ ಚಂಪಾನಗರದ ಬಾಹ್ಯೋದ್ಯಾನಕ್ಕೆ ಬಂದು ಬೀಡುಬಿಡಿಸಿದನು. ಆ ವಾರ್ತೆಯನ್ನು ವಿಮಲವಾಹನರಾಜನು ಕೇಳಿ ನಗರವನ್ನು ಶೃಂಗರಿಸಿ ವೈಭವದಿಂದ ಚಾರುದತ್ತನನ್ನು ಪಟ್ಟಣದೊಳಕ್ಕೆ ಕರೆತಂದನು. ಚಾರುದತ್ತನು ರಾಜನಿಗೂ ಗುರುಹಿರಿಯರಿಗೂ ವಂದಿಸಿ ಬಂಧು ಬಳಗದವರಿಗೆ ಮಧುರವಚನವನ್ನೂ ಮಿತ್ರಾವತಿಗೆ ವಿನಯವಚನವನ್ನೂ ನುಡಿದು ತನ್ನ ಮನೆಯನ್ನು ತೆಗೆದುಕೊಂಡಿದ್ದವನಿಗೆ ನೂರ್ಮಡಿಯಾಗಿ ದ್ರವ್ಯವನ್ನು ಕೊಟ್ಟು ಅದನ್ನು ಪಡೆದನು. ಆದಿನ ಕುಸುಮಶೇಖರದೇವನು ಸುವರ್ಣವೃಷ್ಟಿಯನ್ನೂ ರತ್ನವೃಷ್ಟಿಯನ್ನೂ ಕರೆದು ಚಾರುದತ್ತನ ಅಪ್ಪಣೆಯನ್ನು ಪಡೆದು ಹೊರಟುಹೋದನು. ಹರಿಕೇತುವನ್ನು ಹತ್ತೆಂಟು ದಿನಗಳವರೆಗೆ ಇರಿಸಿಕೊಂಡಿದ್ದು ಪ್ರೀತಿಯಿಂದ ಶಿವಮಂದಿರಪುರಕ್ಕೆ ಕಳುಹಿಸಿಕೊಟ್ಟನು. ಬಳಿಕ ವಸಂತತಿಲಕೆಯನ್ನು ತನ್ನ ಮನೆಗೆ ಕರೆಯಿಸಿ ಪಟ್ಟಣದ ಬಹಿರುದ್ಯಾನದಲ್ಲಿ ಹದಿನೆಂಟು ಉಪ್ಪರಿಗೆ ಮನೆಗಳನ್ನು ಕಟ್ಟಿಸಿ ಅಲ್ಲಿ ಮಿತ್ರಾವತಿಯನ್ನೂ ಹದಿನಾರುಮಂದಿ ವಿದ್ಯಾಧರಸ್ತ್ರೀಯರನ್ನೂ ವಸಂತತಿಲಕೆಯನ್ನೂ ಇರಿಸಿ ಅವರೊಡನೆ ಸುಖವಾಗಿರುವನು. ಗಂಧರ್ವದತ್ತೆಗೆ ಸುವರ್ಣದ ಮನೆಯನ್ನು ಕಟ್ಟಿಸಿಕೊಟ್ಟು ಚಾರುದತ್ತನು ಕುಬೇರನಂತೆ ಸಂತುಷ್ಟನಾಗಿರುವನು ''

೧೧. ಗಾಂಧರ್ವದತ್ತೆಯ ವೀಣಾಸ್ವಯಂವರ ಸಂಧಿ.

ಗಾಂಧರ್ವದತ್ತೆಯು ವೀಣಾಗುರುವು ಮೇಲೆ ಹೇಳಿದಂತೆ ವಸುದೇವನಿಗೆ ಚಾರುದತ್ತನ ಮತ್ತು ಗಾಂಧರ್ವದತ್ತೆಯ ವಿಷಯವನ್ನು ತಿಳುಹಲು ವಸುದೇವನು ಸಂತುಷ್ಟನಾಗಿ ತನ್ನ ಕೈಕಡಗವನ್ನು ಆತನಿಗೆ ಕೊಟ್ಟನು. ಅಷ್ಟರಲ್ಲಿ ಸೂರ್ಯಾಸ್ತಮಾನವಾಗಲು ಆ ಮನೋಹರನು ವಸುದೇವನನ್ನು ಮನೆಗೊಯ್ದು ಆ ಮರುದಿನವೇ ನಡೆದ ವೀಣಾಸ್ವಯಂವರಕ್ಕೆ ವಸುದೇವನನ್ನು ಕರೆದೊಯ್ದು ಸಕಲ ರಾಜಕುಮಾರರ ಮಧ್ಯದಲ್ಲಿ ಕುಳ್ಳಿರಿಸಿದನು. ವಸುದೇವನು, ನಕ್ಷತ್ರಗಳ ಮಧ್ಯದಲ್ಲಿ ಚಂದ್ರನಂತೆ, ಶೋಭಿಸಿದನು. ಆಗ ಗಾಂಧರ್ವದತ್ತೆಯು ಸರ್ವಾಭರಣಭೂಷಿತಳಾಗಿ ಸ್ವಯಂವರಮಂಟಪಕ್ಕೆ ಬಂದಳು. ವೀಣಾಗುರುವು ರಾಜಕುಮಾರರನ್ನು ಸಂಬೋಧಿಸಿ ವೀಣಾವಾದನವನ್ನು ಮಾಡುವಂತೆ ಹೇಳಲು ಅವರು ವೀಣೆಯನ್ನು ನುಡಿಸಿದರು. ಗಾಂಧರ್ವದತ್ತೆಯ ಚಿತ್ತವು ವಸುದೇವನಲ್ಲಿ ಆಸಕ್ತವಾಗಿದ್ದಿತು. ಬೇರೆಯವರ ವೀಣಾವಾದನವನ್ನು ಆಕೆಯು ಮೆಚ್ಚಲಿಲ್ಲ. ಕೊನೆಗೆ ವಸುದೇವನಿಗೆ ವೀಣೆಯನ್ನು ತುದುಕೊಡಲು ಆತನು ತಂತಿಯನ್ನು ಮಾಟಿನೋಡಿ ನಿರ್ದೋಷವಾದ ವೀಣೆಯನ್ನು ತಂದುಕೊಡುವಂತೆ ಹೇಳಿದನು. ಆಗ ಹತ್ತೆಂಟು ವೀಣೆಗಳನ್ನು ತಂದು ಮುಂದಿರಿಸಲು ಅವುಗಳಲ್ಲಿ ಉತ್ತಮವಾದೊಂದು ವೀಣೆಯನ್ನು ಆಯ್ದುಕೊಳ್ಳಲು ಆ ವೀಣಾಗುರುವು "ಚಾತುರ್ಯದಿಂದ ನೀನು ಹಿಡಿದ ವೀಣೆಯ ಕುಲವಾವುದು?" ಎಂದು ಕೇಳಿದನು, ಅದಕ್ಕೆ ವಸುದೇವನು.

"ಹಸ್ತಿನಾಪುರದ ಮೇಘರಥನಿಗೂ ಪದ್ಮಾವತಿಗೂ ವಿಷ್ಣುಕುಮಾರ ಪದ್ಮರಥರೆಂಬಿಬ್ಬರು ಮಕ್ಕಳು ಹುಟ್ಟಿದರು. ಒಂದಾನೊಂದು ದಿನ ಮೇಘರಥನು ಮೇಘವನ್ನು ನೋಡಿ ವೈರಾಗ್ಯವನ್ನು ಹೊಂದಿ ಕಿರಿಯಮಗನಾದ ಪದ್ಮರಥನಿಗೆ ರಾಜ್ಯಭಾರವನ್ನು ವಹಿಸಿ ತನ್ನ ಹಿರಿಯಮಗನೊಡನೆ ದೀಕ್ಷೆಯನ್ನು ತೆಗೆದುಕೊಂಡು ತಪಸ್ಸನ್ನು ಮಾಡುತ್ತಿದ್ದನು—

ಇತ್ತ ಉಜ್ಜಯನಿಯ ನಂದನವನದಲ್ಲಿ ಅಕಂಪನರೆಂಬ ಮಹಾಯೋಗಿವರ್ಯರು ಯೋಗಾರೂಢರಾಗಿದ್ದರು. ಅಲ್ಲಿಗೆ ಆ ನಗರದ ದೊರೆಯಾದ ವೃಷಭಸೇನನ ಮಂತ್ರಿಗಳಾದ ಬಲಿ ಬೃಹಸ್ಪತಿ ಶುಕ್ರ ಇವರು ಹೋಗಿ ಅಕಂಪನರೊಡನೆ ಮಿಥ್ಯಾವಾದವನ್ನು ಮಾಡಿ ಸೋತುಹೋದರು. ಬಲಿಯು ಅವರಲ್ಲಿ ಕೋಪಗೊಂಡು ಒಂದುದಿನ ಆ ವನಕ್ಕೆ ಹೋಗಿ ಅಕಂಪನರನ್ನು ಕೊಲ್ಲಬೇಕೆಂದು ಖಡ್ಗ

ವನ್ನೆತ್ತಿದನು. ಆಗ ವಸದೇವತೆಗಳು ಕೋಪದಿಂದ ಅವನನ್ನು ಬಂಧಿಸಿ ಬಾಧೆಪಡಿಸಲು ಅದನ್ನು ತಾಳಲಾರದೆ ಮೊರೆಯಿಟ್ಟನು. ಆಗ ಆ ನಗರದ ದೊರೆಯು ಬಂದು ಮುನೀಶರಿಗೆರಗಿ ಬಲಿಯ ಉಪಸರ್ಗವನ್ನು ದೂರಮಾಡಿ ಆ ಮೂರು ಮಂದಿ ಮಂತ್ರಿಗಳನ್ನೂ ಊರಿಂದಟ್ಟಿದನು. ದೇಶಭ್ರಷ್ಟರಾದ ಆ ಮೂರುಮಂದಿ ಮಂತ್ರಿಗಳೂ ಹಸ್ತಿನಾವುರಕ್ಕೆ ಹೋಗಿ ಪದ್ಮರಥನಲ್ಲಿ ಮಂತ್ರಿಗಳಾಗಿ ಆ ಪದ್ಮರಥನ ಶತ್ರುರಾಜರುಗಳನ್ನು ಗೆದ್ದು ಬಲಿಯು ದೊರೆಯು ಮೆಚ್ಚಿಗೆಗೆ ಪಾತ್ರನಾದನು. ದೊರೆಯು ಮೆಚ್ಚಿಗೆಯನ್ನು ಬೇಡೆನೆಂದು ಬಲಿಯು " ದೊರೆಯೆ! ನೀನು ಕೊಡುವ ಮೆಚ್ಚಿಗೆಯು ಭಂಡಾರದಲ್ಲಿರಲಿ " ಎಂದು ಹೇಳಿ ಸುಖವಾಗಿರುವಾಗ ಒಂದುದಿನ ಆ ಅಕಂಪನಮುನೀಶ್ವರರು ಐದುನೂರು ಮಂದಿ ಮುನಿಗಳೊಡನೆ ಬಂದು ಆ ಊರಿನ ಬಳಿಯಲ್ಲಿರುವ ಸೌಮ್ಯಗಿರಿಯಲ್ಲಿ ಯೋಗಾರೂಢರಾಗಿರಲು ಅದನ್ನು ತಿಳಿದು ಬಲಿಯು ತನ್ನ ಮುಯ್ಯಿಯನ್ನು ತೀರಿಸಿಕೊಳ್ಳಬೇಕೆಂದೆಣಿಸಿ ದೊರೆಯ ಬಳಿಗೆ ಹೋಗಿ ಆ ಮೆಚ್ಚಿಗೆಯನ್ನು ಬೇಡಿದನು. ಪದ್ಮರಥನು ಬಲಿಯ ಇಚ್ಛಾನುಸಾರವಾಗಿ ಏಳು ದಿನಗಳ ದೊರೆತನವನ್ನು ಬಿಟ್ಟುಕೊಟ್ಟು ತಾನು ಮರೆಯಾಗಿದ್ದನು. ಬಲಿಯು ಮುನಿಗಳಿಗೆ ಬಾಧೆಪಡಿಸಬೇಕೆಂಬ ಉದ್ದೇಶದಿಂದ ಆ ಬೆಟ್ಟದಲ್ಲಿ ದೊಡ್ಡ ಹೋಮವನ್ನೂ ಬ್ರಾಹ್ಮಣಭೋಜನವನ್ನೂ ಮಾಡಿಸುವುದಾಗಿ ನೆವವನ್ನು ಹೇಳಿ ಯಜ್ಞದೀಕ್ಷಿತರು ಮೊದಲಾದ ಬ್ರಾಹ್ಮಣರನ್ನು ಬರುಮಾಡಿ ಆ ಮುನಿಗಳು ಯೋಗಾರೂಢರಾಗಿರುವ ಗುಹೆಯ ಬಾಗಿಲಲ್ಲಿ ಕೋಟಿಹೋಮಗಳನ್ನು ಮಾಡಿಸಲಾರಂಭಿಸಿದನು. ಆ ಭಯಂಕರವಾದ ಉರಿಯಿಂದ ಬೆಟ್ಟವು ಕಾದ ಒಲೆಯಂತಾಗಿ ಅಕಂಪನಾದಿಮುನಿಗಳಿಗೆ ಬಹು ಬಾಧೆಯಾಗುತ್ತಿರಲು ಅಲ್ಲಿಗೆ ಬಹುದೂರದಲ್ಲಿರುವ ಒಂದಾನೊಂದು ಬೆಟ್ಟದ ಗುಹೆಯಲ್ಲಿ ತಪಸ್ಸುಮಾಡುತ್ತಿದ್ದ ಸುಗ್ರೀವನೆಂಬ ಮುನಿಯು ರಾತ್ರಿಯಲ್ಲೆದ್ದು ಆಕಾಶದಲ್ಲಿ ಶ್ರವಣನಕ್ಷತ್ರವು ಅದ್ಭುತವಾಗಿ ಕಂಪಿಸುತ್ತಿರುವುದನ್ನು ನೋಡಿ ದಿವ್ಯಜ್ಞಾನದಿಂದ ಅಕಂಪನಾದಿ ಮುನಿಗಳಿಗೆ ಬಲಿಯು ಕೊಡುವ ಉಪಸರ್ಗವನ್ನು ತಿಳಿದು ಮಲುಮಲನೆ ಮರುಗಿ ಈ ಉಪಸರ್ಗವನ್ನು ನಿವಾರಿಸುವವರಾರೆಂದು ಯೋಚಿಸುತ್ತಿರುವಷ್ಟರಲ್ಲಿ ಆತನ ಶಿಷ್ಯರಲ್ಲೊಬ್ಬ ವಿದ್ಯಾಧರಮುನಿಯು ಕೈ ಮುಗಿದು " ಎಲೈ ಮುನಿವರ್ಯನೆ! ನಾನು ಹೋಗಿ ಬಲಿಯನ್ನು ನಾಶಮಾಡಿ ಮುನಿಗಳ ಉಪಸರ್ಗವನ್ನು ಹೋಗಲಾಡಿಸಿ ಬರುವೆನು. ' ಎಂದನು. ಅದಕ್ಕಾ ಸುಗ್ರೀವಮುನಿಯು " ವ್ರತಿಗಳು ಹೀಗೆ ಮಾಡುವುದುಚಿತವಲ್ಲ " ಎಂದು ಹೇಳಿ ಆ ವಿದ್ಯಾಧರಮುನಿಯ ಕೋಪವನ್ನು ಸಮಾಧಾನಪಡಿಸಿ ಆ ಗುಹೆಯ ಮೂಲೆ

ಯಲ್ಲಿ ಮಲಗಿದ್ದ ವಿಷ್ಣುಕುಮಾರಮುನಿಯನ್ನು ಕರೆದು ಆ ಉಪಸರ್ಗವನ್ನು ನಿವಾರಣಮಾಡುವಂತೆ ಹೇಳಲು ಋದ್ಧಿಸಂಪನ್ನನಾದ ವಿಷ್ಣುಮುನಿಯು ಒಪ್ಪಿ ಆಕಾಶ ಚಾರಣತ್ವದಿಂದ ಬಹು ಶೀಘ್ರವಾಗಿ ಹಸ್ತಿನಾಪುರಕ್ಕೆ ಹೋಗಿ ತನ್ನ ತಮ್ಮನಾದ ಪದ್ಮರಥರಾಜನನ್ನು ಕಂಡು ಅಸಮಾಧಾನಗೊಂಡು " ಬಲಿಯು ಮೂಲಕ ಮುನಿಗಳಿಗೆ ಉಪಸರ್ಗ ಮಾಡುವ್ದು ಉಚಿತವೆ ? ' ಎನಲು ಪದ್ಮರಥನು ಚಕಿತನಾಗಿ ಬಲಿಯಮೇಲೆ ಬಹು ಕೋಪಗೊಂಡು ಆತನ ತಲೆಯನ್ನು ಚೆಂಡಾಡುವೆನೆಂದೇಳ್ವಾಗ ವಿಷ್ಣುಮುನಿಯು ದೊರೆಯನ್ನು ಸಮಾಧಾನಗೊಳಿಸಿ ತಾನೇ ಆ ಉಪಸರ್ಗವನ್ನು ಹೋಗಲಾಡಿಸುವುದಾಗಿ ಹೇಳಿ ವಾಮನಾವತಾರವನ್ನು ಧರಿಸಿ ಬಲಿಯಬಳಿಗೆ ಹೋಗಿ ಅವನನ್ನು ಹೊಗಳಿ ಆಶೀರ್ವದಿಸಲು ಬಲಿಯು ಸಂತುಷ್ಟನಾಗಿ ಮುನಿಗೆ ನಮಿಸಿ "ಎಲ್ಮೈವಟುವೆ ! ನಿನ್ನಿಚ್ಛೆಯನ್ನು ಕೇಳು, ಕ್ಷಿಪ್ರವಾಗಿ ಕೊಡುವೆನು. ' ಎಂದನು ಆ ಮಾತನ್ನು ಕೇಳಿ ಮುನಿಯು ತಾನು ಕುಳಿತು ಅನುಷ್ಠಾನಮಾಡುವುದಕ್ಕಾಗಿ ತನ್ನ ಕಾಲಿನಲ್ಲಿ ಮೂರು ಹಜ್ಜೆ ನೆಲವನ್ನು ಕೊಡಬೇಕೆಂದು ಕೇಳಲು ಬಲಿಯು " ಘನತರವಾದ ವಸ್ತುವನ್ನು ಕೇಳದೆ ಈ ಅಲ್ಪವಿಷಯವನ್ನು ಕೇಳಿದೆ, ನೀನು ಕೇಳಿದುದನ್ನು ಕೊಟ್ಟೆನು, ಅಳೆದುಕೊ " ಎಂದನು. ಆಗ ಶುಕ್ರನು ಬಂದು ಆ ವಾಮನನು ಕಪಟರೂಪಿಯೆಂದು ಬಲಿಯನ್ನು ತಡೆಯಲು ಬಲಿಯು " ದಾನಕ್ಕೇಕೆ ಕಂಟಕನಾಗುವೆ ' ಎಂದು ಶುಕ್ರನನ್ನು ನೂಕುವಾಗ ಆತನ ಕೈಯ ದರ್ಭೆಯು ತಗುಲಿ ಶುಕ್ರನ ಒಂದು ಕಣ್ಣು ಕುರುಡಾಯ್ತು. ಬಳಿಕ ಬಲಿಯು ಧಾರಾಪೂರ್ವಕವಾಗಿ ಮೂರಡಿ ಭೂಮಿಯನ್ನು ಕೊಡಲು ಕೃತ್ರಿಮವಾಮನನು ತನ್ನ ತಪಸ್ಸಾಮರ್ಥ್ಯದಿಂದ ಸ್ವಲ್ಪಸ್ವಲ್ಪವಾಗಿ ಬೆಳೆದು ಕೊನೆಗೆ ಆಕಾಶ ಭೂಮಿಗೊಂದಾಗಿ ಬೆಳೆದು ಆ ತ್ರಿವಿಕ್ರಮನು ತನ್ನ ಒಂದು ಹಜ್ಜೆಯಿಂದ ಭೂಮಿಯನ್ನೆಲ್ಲ ಅಳೆದನು. ಮತ್ತೊಂದು ಹಜ್ಜೆಯಿಂದ ಆಕಾಶವನ್ನಳೆದನು. ಹೀಗೆ ವಿಷ್ಣುವಿನ ಪಾದಗಳು ಭೂವ್ಯಾಕಾಶವನ್ನು ವ್ಯಾಪಿಸಲು ದೇವೇಂದ್ರನ ಸಿಹಾಸನವು ಅದಿರಿತು. ಆಗ ಇಂದ್ರನು ಅವಧಿಜ್ಞಾನದಿಂದ ತಿಳಿದು ಹದಿನಾರು ಸ್ವರ್ಗಗಳ ಇಂದ್ರರೂ ಚತುರ್ನಿಕಾಯಾಮರರೂ ಸಮೇತನಾಗಿ ಬಂದು ಆಕಾಶದಲ್ಲಿ ವ್ಯಾಪಿಸಿರುವ ವಿಷ್ಣುಪಾದವನ್ನರ್ಚಿಸಿ ಸ್ತುತಿಸಿ ಕೈಗಳನ್ನು ಮುಗಿದು ತ್ರಿವಿಕ್ರಮನನ್ನು ಉಪಸಂಹರಿಸುವಂತೆ ಪ್ರಾರ್ಥಿಸಿ ಬಲಿಯನ್ನು ಬಂಧನದಲ್ಲಿಡುವಾಗ ಗಾಂಧರ್ವದೇವತೆಗಳು ಗಾಂಧಾರಿ ಸುಘೋಷಣೆಗಳೆಂಬಿರಡು ವೀಣೆಗಳನ್ನು ತಂದು ವಿಷ್ಣುಮುನಿಯ ಮುಂದೆ ಬಾರಿಸಿ ಅವುಗಳನ್ನು ಪದ್ಮರಥನಿಗೆ ಕೊಟ್ಟುಹೋದರು. ವಿಷ್ಣುಮುನಿಯು ಆ ಅಕಂಪನಾದಿ ಮುನಿಗಳ ಉಪಸರ್ಗ

ವನ್ನು ನಿವಾರಣಮಾಡಿ ಬಲಿಗೆ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳೆಂಬ ರತ್ನತ್ರಯು ಗಳನ್ನು ಪದೇಶಿಸಿ ತಮ್ಮಸ್ಥಾನಕ್ಕೆ ಹೊರಟುಹೋದರು. ವಂಶಪರಂಪರೆಯಾಗಿ ಬಂದ ಆ ವೀಣೆಯೇ ಇದು " ಎಂದು ಹೇಳಿ ಅದನ್ನು ವಸುದೇವನು ತನ್ನೆದಿಗಿಟ್ಟು ಬಲು ಸೊಗಸಾಗಿ ಬಾರಿಸಿದನು. ಅವನ ವೀಣಾವಾದನಚಾತುರ್ಯವನ್ನೂ ರೂಪ ಸೌಂದರ್ಯವನ್ನೂ ನೋಡಿ ಮೆಚ್ಚಿ ಗಾಂಧರ್ವದತ್ತೆಯು ಅವನಿಗೆ ವಮಾಲೆಯನ್ನು ಹಾಕಿದಳು. ಚಾರುದತ್ತನು ಬಹುಸಂತುಷ್ಟನಾಗಿ ಆ ರಾತ್ರಿ ಅನುಪಮವೈಭವ ದಿಂದ ವಸುದೇವನಿಗೆ ಗಾಂಧರ್ವದತ್ತೆಯನ್ನು ಕೊಟ್ಟು ಮದುವೆಮಾಡಿದನು. ವಸುದೇವನು ಗಾಂಧರ್ವದತ್ತೆಯೊಡನೆ ಸುಖವಾಗಿದ್ದನು.

---

೧೨. ರೋಹಿಣೀಸ್ವಯಂವರ ಸಂಧಿ

ಒಂದು ದಿನ ವಸಂತಋತುವಿನಲ್ಲಿ ವಸುದೇವ ಗಾಂಧರ್ವದತ್ತೆಯರು ಬಹು ವೈಭವದಿಂದ ವನಕ್ರೀಡೆಗೆ ಹೋಗಿ ನಾನಾವಿಧವಾದ ಕ್ರೀಡಾವಿಲಾಸಗಳಿಂದ ತಣಿ ದು ಸುರತಾಂತಶ್ರಮವನ್ನಾರಿಸಲೆಂದು ವಸುದೇವನು ಬರುತ್ತಿರುವಾಗ ಮುಂಗಡೆ ಯಲ್ಲಿ ಒಂದು ಮಾವಿನಮರದ ನೆರಳಿನಲ್ಲಿ ಓರ್ವ ತರಳಾಕ್ಷಿಯು ತಾಳಮೇಳದೊಡನೆ ಬಹುಮನೋಹರವಾಗಿ ನರ್ತಿಸುತ್ತಿದ್ದಳು. ಆಕೆಯ ಸುಂದರರೂಪವನ್ನು ನೋಡುವ ಕೌತುಕದಿಂದ ವಸುದೇವನು ಒಂದು ಲತೆಯನ್ನೊರಗಿ ನಿಂತನು. ಆಕೆಯ ಹಾವಭಾ ವ ವಿಲಾಸ ವಿಭ್ರಮಯುಕ್ತವಾದ ನರ್ತನವನ್ನೂ ಸೌಂದರ್ಯವನ್ನೂ ನೋಡಿ ವಸು ದೇವನು " ಈಕೆಯು ಯಾರ ಮಗಳು ? " ಎಂದು ಆಕೆಯ ಗೆಳತಿಯನ್ನು ಕೇಳಲು " ಈಕೆಯು ಚಾಂಡಾಲಳು " ಎಂದಳಾ ಗೆಳತಿ. ಆ ಮಾತನ್ನು ಕೇಳಿ ವಸುದೇವನು " ಈ ಚಾಂಡಾಲಿಕೆಗೆ ಈ ರೂಪವಿಲಾಸಗಳಿರುವುದು ಆಶ್ಚರ್ಯ " ವೆಂದು ಹೇಳುವಾಗ ಆಕೆಯು ವಸುದೇವನನ್ನು ನೋಡಿ ಮೂರ್ಛಿತಳಾದಳು. ಆಗ ಆಕೆಯ ಸಖಿಯರು ಶೈತ್ಯೋಪಚಾರವನ್ನು ಮಾಡುತ್ತಿರಲು ಗಾಂಧರ್ವದತ್ತೆಯು ಇನಿಯನ ಬಳಿಗೆ ಬಂ ದು " ನೀನು ಈಕೆಯನ್ನು ನೋಡುವುದುಚಿತವಲ್ಲ ' ವೆಂದು ಹೇಳಿ ಆತನನ್ನು ಪ್ರಣ ಯ ಕಲಹದಿಂದ ಎಳೆದುಕೊಂಡು ಹೋದಳು.

ಇತ್ತ ಆ ಕೃತ್ರಿಮಚಾಂಡಾಲಿಕೆಯ ಸಖಿಯರು ಅಭೀಷ್ಟಪುರುಷನು ದೊರೆತನೆಂದು ಸಂತೋಷದಿಂದ ಆಕೆಯನ್ನು ಪಟ್ಟಣಕ್ಕೆ ಕರೆದೊಯ್ದು ಆಕೆಗಾದ ಅವಸ್ಥೆಯನ್ನು ಅವಳ ತಂದೆ ಸಿಹ್ಮನಾದನೆಂಬ ಖೇಚರನಿಗೆ ಹೇಳಲು ಆತನು ಸಂತು

ಷ್ಟನಾಗಿ ವೈತಾಳಿಯೆಂಬ ದೇವತೆಯನ್ನು ಕರೆದು ವಸುದೇವನನ್ನು ಕರೆದುಕೊಂಡು ಬರುವಂತೆ ಹೇಳಿದನು. ಆ ದೇವತೆಯು ಚಂಪಾಪುರಕ್ಕೆ ಹೋಗಿ ಗಾಂಧರ್ವದತ್ತೆಯೊಡನೆ ನಿದ್ರಿಸುತ್ತಿದ್ದ ವಸುದೇವನನ್ನು ಎತ್ತಿಕೊಂಡು ನಿಜಯಾರ್ಥಪರ್ವತದ ಆ ಮೇಘಪುರಕ್ಕೆ ತಂದಿತು. ಸಿಹ್ಮನಾದನು ವಸುದೇವನನ್ನು ಇದಿರ್ಗೊಂಡು ತನ್ನ ಅರಮನೆಗೆ ಕರೆದೊಯ್ದು ಮಗಳನ್ನು ಕೊಟ್ಟು ಮದುವೆಮಾಡಿದನು. ಆ ನೀಲಾಂಜನೆಯನ್ನು ಮದುವೆಯಾಗಿ ವಸುದೇವನು ಆಕೆಯೊಡನೆ ಕೆಲವುದಿನ ಸುಖಪಡುತ್ತಿದ್ದು ಒಂದುದಿನ ತಾನು ಭೂಮಿಗಿಳಿಯುವೆನೆಂದು ಆ ಸಿಹ್ಮನಾದನಲ್ಲಿ ಹೇಳಲು ಅತನು ಪರ್ಣಲಘುವೆಂಬ ವಿದ್ಯೆಯಿಂದ ಮೆಲ್ಲನೆ ವಸುದೇವನನ್ನು ಭೂಮಿಗಿಳಿಸಿದನು. ವಸುದೇವನು ಭೂಚರ ಖೇಚರ ಕನ್ಯೆಯರಲ್ಲಿ ಕೆಲವರನ್ನು ಸ್ವಯಂವರದಿಂದಲೂ ಕೆಲವರನ್ನು ಗಾಂಧರ್ವವಿವಾಹದಿಂದಲೂ ಕೆಲವರನ್ನು ಶಕುನಗಳ ಮೂಲಕವೂ ಹೀಗೆ ಏಳುನೂರತೊಂಬತ್ತೆಂಟು ಮಂದಿ ಕನ್ಯೆಯರನ್ನು ಪದುವೆಯಾಗಿ ಅಲ್ಲಲ್ಲಿ ಸುರತಸುಖವನ್ನನುಭವಿಸುತ್ತ ಆ ಪತ್ನಿಯರನ್ನು ಅವರವರ ತಂದೆತಾಯಿಗಳ ಬಳಿಯಲ್ಲಿ ಬಿಟ್ಟು ಒಂದುದಿನ ಅರಿಷ್ಟಪುರದ ನಂದನವನಕ್ಕೆ ಹೋದನು. ಆ ನಗರದ ಹಿರಣ್ಯಾಕ್ಷನೆಂಬ ರಾಜನಿಗೂ ಅತನ ಹೆಂಡತಿ ಗುಣವತಿಗೂ ಅತ್ಯಂತರೂಪವತಿಯಾದ ರೋಹಿಣಿಯೆಂಬ ಮಗಳಿದ್ದಳು. ಆಕೆಯನ್ನು ಯಾವ ರಾಜರು ಕೇಳಿದರೂ ಕೊಡದೆ ಹಿರಣ್ಯಾಕ್ಷನು ಸ್ವಯಂವರವನ್ನು ರಚಿಸಿದನು. ಆ ಸ್ವಯಂವರಕ್ಕೆ ಸಮುದ್ರವಿಜಯ ಮೊದಲಾದ ರಾಜರು ಒಂದು ಸೇರಿದರು. ಅಲ್ಲಿಗೆ ಹೋಗಿ ವಸುದೇವನೂ ಒಂದುಕಡೆಯಲ್ಲಿ ಕುಳಿತು ಓರ್ವ ವಾದ್ಯಗಾರನ ವಾದ್ಯವನ್ನು ತೆಗೆದುಕೊಂಡು ತನ್ನ ಕೊರಳಿಗೆ ಹಾಕಿ ವಾದ್ಯಗಾರರೂ ಜೋದ್ಯಪಡುವಂತೆ ಬಹು ಚತುರತೆಯಿಂದ ಬಾರಿಸಿದನು. ರಾಜಕನ್ಯೆಯು ಮಾಲೆಯನ್ನು ಹಿಡಿದುಕೊಂಡು ರಾಜರು ಕುಳಿತಿರುವ ಬಳಿಯಲ್ಲಿ ಸಂಚರಿಸಿ ತನ್ನ ಮನಸಿಗೊಪ್ಪುವ ಸೌಂದರ್ಯವಂತರಾರನ್ನೂ ಕಾಣದೆ ಮುಂದೆ ನಡೆದು ವಸುದೇವನ ಅನುಪಮ ಸೌಂದರ್ಯವನ್ನು ನೋಡಿ ಮೋಹಿತಳಾಗಿ ಅತನ ಕೊರಳಿಗೆ ಪುಷ್ಪಮಾಲೆಯನ್ನು ಹಾಕಿದಳು. ಮಗಳು ವಾದ್ಯಗಾರನಿಗೆ ಮಾಲೆಯನ್ನು ಹಾಕಿದಳೆಂದು ಚಿಂತೆಗೊಳಗಾದ ಹಿರಣ್ಯಾಕ್ಷನು ವಸುದೇವನ ಬಳಿಗೆ ಬಂದು ಅತನ ಸೌಂದರ್ಯಯೌವನ ಲಾವಣ್ಯಾದಿಗಳನ್ನು ನೋಡಿ ಸಂತೋಷಪಟ್ಟು ಅತನು ಉತ್ತಮ ಜಾತಿಯವನೆಂದು ಬಗೆದು ಆ ದಂಪತಿಗಳನ್ನು ರಥದಲ್ಲಿ ಕುಳ್ಳಿರಿಸಿ ನಗರಪ್ರವೇಶಮಾಡಿಸಿದನು. ಅದನ್ನು ಕಂಡು ಇತರ ರಾಜರುಗಳು " ನೀಚಕುಲದವನಿಗೆ ಕನ್ಯೆಯು

ಮಾಲೆಯನ್ನು ಸೂಡಿದಳು. ಅದನ್ನು ನಾವು ವಿಚಾರಿಸದಿದ್ದರೆ ನಮಗೆ ದೋಷವು ಬರುವುದು." ಎಂದು ಒಬ್ಬ ಭೃತ್ಯನನ್ನು ಕರೆದು "ರಾಜಕನ್ಯೆಯನ್ನು ಕ್ಷತ್ರಿಯನಿಗೆ ಕೊಡುವುದನ್ನು ಬಿಟ್ಟು ವಾದ್ಯಗಾರನಿಗೆ ಕೊಡುವುದುಚಿತವೇ? ಮಗಳನ್ನು ಯಾರಿಗೆ ಕೊಡುವುದೆಂದು ಸಂದೇಹಮಾಡದೆ ನಮ್ಮಲ್ಲಿ ಜರಾಸಂಧಚಕ್ರವರ್ತಿಗೆ ಕೊಡು" ಎಂದು ಹಿರಣ್ಯಾಕ್ಷನಿಗೆ ಹೇಳಿಕಳುಹಲು ಆ ಮಾತನ್ನು ಕೇಳಿ ವಸುದೇವನು ಕುಪಿತನಾಗಿ ಆ ರಾಜರು ತನ್ನೊಡನೆ ಯುದ್ಧಮಾಡಿ ಕನ್ಯೆಯನ್ನು ತೆಗೆದು ಕೊಂಡು ಹೋಗಲೆಂದು ಹೇಳಿಕಳುಹಿ ತಾನೂ ಹಿರಣ್ಯಾಕ್ಷನೂ ಯುದ್ಧಸನ್ನದ್ಧರಾದರು. ಆತ್ಮ ರಾಜರು ದೂತನು ಬಂದು ಹೇಳಿದ ಮಾತನ್ನು ಕೇಳಿ ಕೋಪಾರೂಢರಾಗಿ ತಮ್ಮ ಸಕಲಸೈನ್ಯದೊಡನೆ ಆ ನಗರವನ್ನು ಮೂರು ಸುತ್ತು ಮುತ್ತಿದರು. ಆಗ ಹಿರಣ್ಯಾಕ್ಷನೂ ವಸುದೇವನೂ ತಮ್ಮ ಸೈನ್ಯದೊಡನೆ ಎದುರಿಸಿ ವಸುದೇವನು ಅನೇಕ ಯೋಧರನ್ನೂ ಆನೆ ಕುದುರೆಗಳನ್ನೂ ರಥಗಳನ್ನೂ ನಾಶಮಾಡಿದನು. ಅನೇಕ ರಾಜರು ಓಡಿಹೋದರು. ಅದನ್ನು ತಿಳಿದು ಜರಾಸಂಧಚಕ್ರೇಶನು ಸಮುದ್ರವಿಜಯನಿಗೆ ಈ ಯುದ್ಧವು ಸಾಧ್ಯವಲ್ಲದೆ ಬೇರೆ ಯಾರಿಗೆ ಸಾಧ್ಯವಲ್ಲವೆಂದನು. ಆ ಮಾತನ್ನು ಕೇಳಿ ಸಮುದ್ರವಿಜಯನು ವೀರಾವೇಶದಿಂದ ವಸುದೇವನ ರಥಕ್ಕೆದಿರಾಗಿ ತನ್ನ ರಥವನ್ನು ಸೂಂಕಿ ಬಾಣಪ್ರಯೋಗವನ್ನು ಮಾಡಿದನು. ವಸುದೇವನು ಪ್ರತಿಬಾಣಗಳನ್ನು ಬಿಟ್ಟನು. ಸಮುದ್ರವಿಜಯನು ಬಿಟ್ಟ ಬಾಣಗಳು ವಸುದೇವನ ತಲೆಯಮೇಲೂ ವಸುದೇವನು ಬಿಟ್ಟ ಬಾಣಗಳು ಸಮುದ್ರವಿಜಯನ ಕಾಲಿನ ಕೆಳಗೂ ಹಾದುಹೋದುವು. ಈ ವೈಚಿತ್ರ್ಯವನ್ನು ನೋಡಿ ವಸುದೇವನು ಆ ಪ್ರತಿಭಟನಾರೆಂದು ತನ್ನ ಸಾರಥಿಯನ್ನು ಕೇಳಿದನು. ಸಾರಥಿಯು ಸಮುದ್ರವಿಜಯನೆಂದು ಹೇಳಲು ಆ ಮಾತನ್ನು ಕೇಳಿ ವಸುದೇವನು ತನಗೆ ಪಾಪವಶದಿಂದ ಅಣ್ಣನೊಡನೆ ಕಾದುವ ಪಾತಕವು ಒದಗಿತೆಂದು ಭೀತನಾಗಿ ಬಿಲ್ಲುಬಾಣಗಳನ್ನು ಬಿಸಾಟು ಸುಮ್ಮನೆ ನಿಂತಿರಲು ಸಾರಥಿಯು ನೋಡಿ ಹಾಗೆ ಬಿಲ್ಲುಬಾಣಗಳನ್ನು ಬಿಸಾಟು ಸುಮ್ಮನಿರುವುದು ಕೂರತೆಯಾಗುವುದೆಂದನು. ಅದನ್ನು ಕೇಳಿ ವಸುದೇವನು ತಾನು ತಿಳಿಯದೆ ಹಿರಿಯಣ್ಣನಲ್ಲಿ ಕಾದಿದೆನೆಂದೂ ತಾನು ಬರುವ ವಿಷಯವನ್ನು ಮೊದಲು ಹೋಗಿ ಸಾರಥಿಯು ಸಮುದ್ರವಿಜಯನಿಗೆ ತಿಳುಹಬೇಕೆಂದೂ ಹೇಳಿಕಳುಹಿದನು. ಸಾರಥಿಯು ಹೋಗಿ ಅದರಂತೆ ತಿಳುಹಲು ಸಮುದ್ರವಿಜಯನು ಬಹು ಸಂತುಷ್ಟನಾಗಿ ಬಿಲ್ಲನ್ನು ಬಿಸಾಟು ತಾನು ತೊಟ್ಟಿದ್ದ ಉಡುಪನ್ನು ಆ ಸಾರಥಿಗೆ ಬಹುಮಾನವಾಗಿ ಕೊಟ್ಟನು.

ಅಷ್ಟರಲ್ಲಿ ವಸುದೇವನು ರಥವಿಂದಿಳಿದು ಬಂದು ಅಣ್ಣನ ಪಾದಗಳಿಗೆ ನಮಸ್ಕಾರ ಮಾಡಿದನು. ಸಮುದ್ರವಿಜಯನು ತಮ್ಮನನ್ನು ಬಿಗಿದಪ್ಪಿ "ಹರಿವಂಶಸೂರ್ಯನೆ! ನೀನು ನನ್ನನ್ನು ಬಿಟ್ಟು ಸಾಧಾರಣಮನುಷ್ಯನಂತೆ ಹೀಗೆ ಪರದೇಶಕ್ಕೆ ಹೋಗುವುದು ಚಿತವೇ?" ಎಂದು ಕಣ್ಣೀರನ್ನು ಬಿಡುವಾಗ ಅಕ್ರೂಭ ಮೊದಲಾದ ಅಣ್ಣಂದಿರು ಬಂದರು. ಅವರಿಗೂ ವಸುದೇವನು ನಮಸ್ಕರಿಸಲು ಅವರು ಸಂತುಷ್ಟರಾಗಿ ತಮ್ಮನನ್ನು ಆಲಿಂಗಿಸಿ ಹರಸಿದರು. ಈ ವಿಷಯವನ್ನೆಲ್ಲ ಹಿರಣ್ಯಾಕ್ಷನೂ ಅಲ್ಲಿ ಸೇರಿದ್ದ ರಾಜರೂ ತಿಳಿದು ಬಹುಸಂತುಷ್ಟರಾದರು. ಹಿರಣ್ಯಾಕ್ಷನು ಸಮುದ್ರವಿಜಯ ಮೊದಲಾದ ರಾಜರೊಡನೆ ಪುರಪ್ರವೇಶವನ್ನು ಮಾಡಿ ಬಹು ವೈಭವದಿಂದ ವಸುದೇವ ರೋಹಿಣಿಯರ ಮದುವೆಯನ್ನು ಮಾಡಿಸಿದನು. ಬಳಿಕ ವಸುದೇವನು ರೋಹಿಣಿಯಲ್ಲಿ ಸುಖಪಡುತ್ತ ಒಂದುದಿನ ರಾತ್ರಿ ಮಲಗಿ ನಿದ್ರಿಸುತ್ತಿರುವಾಗ ಪೂರ್ವ ಖೇಚರಸ್ತ್ರೀಯು ಬಂದು ವಸುದೇವನನ್ನು ಎತ್ತಿ ತನ್ನ ವಿಮಾನದಲ್ಲಿರಿಸಿ ಕೊಂಡುಹೋಗಿ ಆನಂದಪುರದ ನಂದನವನದಲ್ಲಿರಿಸಿ ಆಕೆಯ ತಂದೆ ಮರುತವೇಗನಿಗೆ ಸೂಚಿಸಲು ಅವನು ಇದಿರ್ವಂದು ವಸುದೇವನನ್ನು ತನ್ನ ಆನಂದಪುರಕ್ಕೆ ಕರೆದೊಯ್ದು ತನ್ನ ಪುತ್ರಿಯಾದ ಆ ಚಂದ್ರಲೇಖೆಯನ್ನು ಕೊಟ್ಟು ಮದುವೆಮಾಡಿದನು. ವಸುದೇವನು ಕೆಲವುಕಾಲ ಆ ಚಂದ್ರಲೇಖೆಯಲ್ಲಿ ಸುಖವನ್ನನುಭವಿಸಿ ಒಂದುದಿನ ಆಕೆಯ ತಂದೆಗೆ ತಾನು ಭೂಮಂಡಲಕ್ಕೆ ಹೋಗುವೆನೆನಲು ಆತನು ಸಮ್ಮತಿಸಿ ಮಗಳಿಗೆ ಬಳುವಳಿಯನ್ನು ಕೊಟ್ಟು ದಂಪತಿಗಳನ್ನು ಕಳುಹಿಸಿದನು. ವಸುದೇವನು ಚಂದ್ರಲೇಖೆಯೊಡನೆ ಅರಿಷ್ಟನಗರಕ್ಕೆ ಬಂದು ಆಕೆಯ ವಿದ್ಯೆಯಿಂದ ತನ್ನ ಎಲ್ಲಾ ಪತ್ನಿಯರನ್ನೂ ಕರೆಯಿಸಿ ರೋಹಿಣಿ ಮೊದಲಾದ ಆ ಪತ್ನಿಯರೊಡನೆ ಆ ನಗರದಿಂದ ಹೊರಟು ಮಹಾವೈಭವದಿಂದ ಶೌರೀಪುರಕ್ಕೆ ಬಂದನು. ಅಲ್ಲಿ ಸಮುದ್ರವಿಜಯನು ನಗರಾಲಂಕಾರವನ್ನು ಮಾಡಿಸಿ ಇದಿರ್ಗೊಂಡು ತನ್ನ ಕಾಲಿಗೆರಗಿದ ತಮ್ಮನನ್ನು ಆಲಿಂಗಿಸಿ ಅವನೊಡನೆ ಪುರಪ್ರವೇಶಮಾಡಿದನು. ತದನಂತರ ವಸುದೇವನು ರೋಹಿಣಿಗೆ ಅಗ್ರಮಹಿಷೀಪಟ್ಟವನ್ನು ಕಟ್ಟಿ ಸುಖದಿಂದಿದ್ದನು.

೧೩. ಕಂಸಪ್ರಸಂಗ ಸಂಧಿ.

ಒಂದುದಿನ ರೋಹಿಣಿಯು ಋತುಮತಿಯಾಗಿ ನಾಲ್ಮೀರನ್ನು ಮಿಂದು ಪತಿಯ ಶಯ್ಯೆಗೆ ಹೋಗಿ ಸುರತಸುಖದೊಳೋಲಾಡಿ ನಿದ್ರಿಸಿ ಬೆಳಗಿನ ಜಾವದಲ್ಲಿ ಚಂದ್ರನನ್ನು ಕನಸುಗಂಡು ಸಂತೋಷದಿಂದೆದ್ದತ್ತು ಪ್ರಾತಃಕಾಲದ ಕ್ರಿಯೆಗ

ಳನ್ನು ತೀರಿಸಿಕೊಂಡು ಪತಿಯೆಡೆಗೈದಿ ತಾನು ಕಂಡ ಕನಸನ್ನು ಹೇಳಿದಳು. ಅದನ್ನು ಕೇಳಿ ವಸುದೇವನು ಆ ಸ್ವಪ್ನದ ಫಲದಿಂದ ರೋಹಿಣಿಗೆ ಮಹಾ ಪುಣ್ಯ ಶಾಲಿಯೂ ಪರಾಕ್ರಮಿಯೂ ಆದ ಪುತ್ರನು ಜನಿಸುವನೆಂದು ಹೇಳಲು ರೋಹಿ ಣಿಯು ಬಹು ಸಂತುಷ್ಟಳಾಗಿದ್ದಳು. ಕ್ರಮದಿಂದ ಗರ್ಭವು ಬೆಳೆದು ರೋಹಿ ಣಿಯು ಪುತ್ರನನ್ನು ಪ್ರಸವಿಸಲು ವಸುದೇವನು ಬಹು ವೈಭವದಿಂದ ಶುಭಮುಹೂ ರ್ತದಲ್ಲಿ ಆ ಶಿಶುವಿಗೆ ಬಲಭದ್ರನೆಂದು ನಾಮಕರಣವನ್ನು ಮಾಡಿದನು. ಮುತ್ತಿನ ಬಣ್ಣವುಳ್ಳವನೂ ವಜ್ರಶರೀರನೂ ಧೀರೋದಾತ್ತನೂ ಸಾಹಸಿಯೂ ಸುಂದರನೂ ಸದ್ಗುಣಿಯೂ ಏಕಕುಂಡಲಿಯೂ ಅಸಹಾಯಶೂರನೂ ಅನೇಕ ಕಲಾಕೋವಿದನೂ ಆದ ಆ ಮಗನೊಡನೆ ವಸುದೇವನು ಸುಖವಾಗಿದ್ದನು. ರೋಹಿಣೀಸ್ವಯಂವರ ದಲ್ಲಿ ವಸುದೇವನ ಧನುರ್ವಿದ್ಯಾಪಾಂಡಿತ್ಯವನ್ನು ನೋಡಿದ ರಾಜಪುತ್ರರು ಧನು ರ್ವಿದ್ಯಾಭ್ಯಾಸಕ್ಕಾಗಿ ವಸುದೇವನ ಬಳಿಗೆ ಬರುತ್ತಿರಲು ಅವರಿಗೆ ವಸುದೇವನು ಧನು ರ್ವಿದ್ಯಾಗುರುವಾಗಿರುವಾಗ ಒಂದು ದಿನ ಅಲ್ಲಿಗೋರ್ವ ಕಂಸನೆಂಬವನು ಬಂದು ವಸುದೇವನಿಗೆ ನಮಸ್ಕರಿಸಿ ತಾನು ಬಿಸ್ತರವನೆಂದೂ ವಸುದೇವನಲ್ಲಿ ಧನುರ್ವಿದ್ಯೆ ಯನ್ನು ಕಲಿಯುವುದಕ್ಕಾಗಿ ಬಂದವನೆಂದೂ ಹೇಳಲು ವಸುದೇವನು ಅವನ ರೂಪ ವನ್ನು ನೋಡಿ ಅವನು ಹೀನಕುಲದವನಲ್ಲವೆಂದು ಬಗೆದು ಆತನಿಗೆ ಧನುರ್ವಿದ್ಯೆ ಯನ್ನು ಕಲಿಸಿದನು. ಮರೆತುದನ್ನು ಜ್ಞಾಪಿಸಿಕೊಳ್ಳುವಂತೆ ಕಂಸನು ಬಹು ಶೀಘ್ರ ವಾಗಿ ಧನುರ್ವಿದ್ಯೆಯನ್ನಭ್ಯಾಸಮಾಡಿ ಗುರುವಿಗೆ—ವಸುದೇವನಿಗೆ ಸಮನೆನಿಸಿ ಲೋಕವಿಖ್ಯಾತನಾಗಿರಲು ಅತ್ತ ಪೌದನಪುರದ ದೊರೆಯು ತನ್ನ ರಥಕ್ಕೆ ಎರಡು ಸಿಹ್ಮಗಳನ್ನು ಕಟ್ಟಿ ಪ್ರಖ್ಯಾತನಾಗಿ ಅದರಿಂದ ಸಿಹ್ಮರಥನೆಂಬ ಹೆಸರನ್ನು ಪಡೆದು ಯುದ್ಧಾಸಕ್ತನಾಗಿ ಜರಾಸಂಧಚಕ್ರಿಗೆ ಎದುರಾಗಿ ಮಾರ್ಮಲೆಯುತ್ತಿದ್ದನು. ಜರಾಸಂಧನು ಆ ಸಿಹ್ಮರಥನಮೇಲೆ ತನ್ನ ಕೆಲವು ದಂಡನ್ನು ಕಳುಹಲು ಅದನ್ನು ಅವನು ಓಡಿಸಿಬಿಟ್ಟನು. ಜರಾಸಂಧನು ಉದ್ರೇಕಗೊಂಡು "ಸಿಹ್ಮರಥನನ್ನು ಸೋಲಿಸುವವನಿಗೆ ತನ್ನ ಮಗಳನ್ನೂ ಅವನು ಬೇಡುವ ರಾಜ್ಯವನ್ನೂ ಕೊಡುವೆನು", ಎಂದು ಡಂಗುರ ಹೊಯ್ಸಿದನು. ಯಾರೂ ಮುಂದೆ ಬಾರದಿರಲು ಆ ಸಿಹ್ಮರಥ ನನ್ನು ಜಯಿಸುವ ಶಕ್ತಿಯು ವಸುದೇವನಿಗಲ್ಲದೆ ಬೇರೆಯವರಿಗಿಲ್ಲವೆಂದು ಬಗೆದು ಜರಾಸಂಧನು ಸಮುದ್ರವಿಜಯನಿಗೆ ಲೇಖನವನ್ನು ಕಳುಹಿಸಿದನು. ಅವನು ಲೇಖ ನವನ್ನು ನೋಡಿ ಸಿಹ್ಮರಥನಮೇಲೆ ದಂಡೆತ್ತಿಹೋಗುವಂತೆ ವಸುದೇವನಿಗೆ ಆಜ್ಞೆ ಮಾಡಲು ಅವನು ಯೋಧರೊಡನೆ ಹೋಗಿ ಸಿಹ್ಮರಥನ ಬಳಿಗೆ ದೂತರನ್ನು ಕಳುಹಿ

ಡನು. ಅವರು ಹೋಗಿ ಸಿಹ್ಮರಥನನ್ನು ಕಂಡು "ನೀನು ಈಗಲೇ ಬಂದು ವಸು ದೇವನನ್ನು ಕಂಡು ಅವನಿಗೆ ನಮಸ್ಕರಿಸಿ ಸುಖವಾಗಿ ಜೀವಿಸುವುದು ಲೇಸು" ಎನಲು ಅವನು ಉದ್ರೇಕಗೊಂಡು ಗರ್ಜಿಸಿ ಆ ದೂತರನ್ನು ಕಳುಹಿಸಿ ತಾನು ಸಮರಸನ್ನದ್ಧನಾಗಿ ಪಟ್ಟಣದಿಂದ ಹೊರಟುಬಂದು ತನ್ನ ಪಡೆಗೆ ಕೈಬೀಸಲು ಅಡು ವಸುದೇವನ ಸೈನ್ಯದಮೇಲೆ ಬಾಣಗಳನ್ನು ಪ್ರಯೋಗಿಸಿತು. ಅದನ್ನು ಕಂಡು ವಸುದೇವನು ತನ್ನ ಪಡೆಯ ಮಹಾರಥಿಕರನ್ನು ಕಳುಹಲು ಅವರು ಶತ್ರುಸೈನ್ಯವನ್ನು ಸಂಹರಿಸಿದರು. ಅದನ್ನು ಕಂಡು ಸಿಹ್ಮರಥನು ತನ್ನ ರಥವನ್ನು ಮುಂದೆ ನೂಕಿ ಧನುಸ್ಸನ್ನು ಹಿಡಿದು ಮಾದವಸೇನೆಯನ್ನು ಹೊಕ್ಕಿ ಮಹಾರಥಿಕರ ಮೇಲೆ ಬಾಣಪ್ರಯೋಗವನ್ನು ಮಾಡಿದನು. ಅದನ್ನು ಕಂಡು ವಸುದೇವನು ಕೋಪಪರವಶನಾಗಿ ತನ್ನ ರಥವನ್ನು ಮುಂದೆ ಚಾಚುವ ಸಮಯದಲ್ಲಿ ಕಂಸನು ಮುಂದೆ ಬಂದು ತನಗೆ ಸಿಹ್ಮರಥನೊಡನೆ ಯುದ್ಧಮಾಡಲು ಅಪ್ಪಣೆಯನ್ನು ಕೊಡಬೇಕೆಂದು ಬಿನ್ನವಿಸಿದನು. ವಸುದೇವನು ಅದಕ್ಕೊಪ್ಪಲು ಕಂಸನು ತನ್ನ ರಥವನ್ನು ಮುಂದೆ ನೂಕಿ ಇದಿರಾದನು. ಅವನನ್ನು ಕಂಡು ಸಿಹ್ಮರಥನು ಹಸಿದ ಹುಲಿಯಂತೆ ಮೇಲೆ ಹಾಯ್ದು ಬರಲು ಕಂಸನು ಅವನ ರಥದ ಸಿಹ್ಮಗಳ ತಲೆಯನ್ನು ಚಿಂಡಾಡಿ ರಥವನ್ನೂ ಬಿಲ್ಲುಬಾಣಗಳನ್ನೂ ಕವಚವನ್ನೂ ಕಡಿದು ವಿರಥನನ್ನಾಗಿ ಮಾಡಿ ಅವನನ್ನು ಹಿಡಿದು ವಸುದೇವನ ಮುಂದೆ ನಿಲ್ಲಿಸಿದನು. ತರುವಾಯ ಅಭಯ ಘೋಷಣೆಯನ್ನು ಮಾಡಿ ಪುರವನ್ನು ಪ್ರವೇಶಿಸಿ ಬಾಹುಬಲಿಸ್ವಾಮಿಯ ಬಸದಿಗೆ ಹೊಕ್ಕು ವಂದಿಸಿ ಅಲ್ಲಿಂದ ಹೊರಟು ಶೌರೀಪುರಕ್ಕೆ ಬಂದು ಸಿಹ್ಮರಥನನ್ನು ಸಮುದ್ರವಿಜಯನ ಕಾಲುಗಳ ಮುಂದಿರಿಸಲು ಅವನು ಜರಾಸಂಧಚಕ್ರೇಶ್ವರನ ಬಳಿಗೆ ಕರೆದೊಯ್ದು ಅವನಿಗೊಪ್ಪಿಸುವಂತೆ ತಮ್ಮನಿಗೆ ಅಪ್ಪಣೆಮಾಡಿದನು. ವಸುದೇವನು ಅಣ್ಣನ ಅಪ್ಪಣೆಯಂತೆ ಮಾಡಲು ಜರಾಸಂಧನು ಸಂತುಷ್ಟನಾಗಿ "ವಸುದೇವನೆ! ಇವನನ್ನು ಗೆದ್ದವನಿಗೆ ನಮ್ಮ ಪುತ್ರಿ ಜೀವಂಜಸೆಯನ್ನೂ ಅವನಿಚ್ಛಿಸಿದ ರಾಜ್ಯವನ್ನೂ ಕೊಡುವೆವೆಂದೆವು. ಕುವರಿಯು ನಿನಗೆ ಶಕ್ಯವಲ್ಲ. ಇವಳನ್ನು ನಿನಗಿಷ್ಟಬಂದವನಿಗೆ ಕೊಟ್ಟು ಮದುವೆಮಾಡು" ಎಂದನು. ವಸುದೇವನು ಕಂಸನನ್ನು ತೋರಿ ಅವನೇ ಸಿಹ್ಮರಥನನ್ನು ಹಿಡಿದನೆಂದನು. ಜರಾಸಂಧನು ಕಂಸನ ವಂಶವನ್ನು ಕೇಳಲು ಕಂಸನು ತಾನು ಕೌಶಂಬಿಯಲ್ಲೋರ್ವ ಬಿಸ್ತರವನ ಮಗನೆನಲು ಅವನ ಭುಜ, ಎದೆ, ಲಕ್ಷಣ, ಸೌಂದರ್ಯ ಮೊದಲಾದುವುಗಳನ್ನು ನೋಡಿ ಅವನು ಉತ್ತಮಕುಲದವನಲ್ಲದೆ ನೀಚಕುಲದವನಲ್ಲವೆಂದು ಬಗೆದು ಆ ಬಿಸ್ತ

ರವನ ಬಳಿಗೆ ದೂತರನ್ನು ಕಳುಹಲು ಅವರು ಹೋಗಿ ಕಂಸನು ಅವನ ಮಗನಹುದೋ ಅಲ್ಲವೋ ಎಂದು ಕೇಳಿದರು. ಅದಕ್ಕವನು ಬೆದರಿ ಕಂಸನು ತನ್ನ ಔರಸಪುತ್ರನಲ್ಲವೆಂದು ಹೇಳಿ ಒಂದು ಮಂದಾಸನನ್ನು ತೆಗೆದುಕೊಂಡು ಜರಾಸಂಧನ ಬಳಿಗೆ ಹೋಗಿ ದೂರದಿಂದ ಸಾಷ್ಟಾಂಗನಮಸ್ಕಾರವನ್ನು ಮಾಡಿ ಮಂದಾಸನನ್ನು ಮುಂದಿಟ್ಟು ಭೀತಿಯಿಂದ "ದೇವ! ಬಿನ್ನಪವು. ಕಾಳಿಂದೀನದಿಯಲ್ಲಿ ಬರುತ್ತಿದ್ದ ಈ ಮಂದಾಸನನ್ನು ತೆಗೆದುಕೊಂಡು ಇವನು ಆ ಕಂಚಿನ ಮಂಚಾಸನಲ್ಲಿದ್ದ ಕಾರಣದಿಂದ ಇವನಿಗೆ ಕಂಸನೆಂದು ಹೆಸರನ್ನಿಟ್ಟು ನನ್ನ ಔರಸಪುತ್ರನಂತೆ ಇವನನ್ನು ಸಾಕುತ್ತಿರಲು ಇವನು ದುಷ್ಟನಾಗಿ ಕಂಡಕಂಡವರಲ್ಲಿ ಜಗಳವಾಡುತ್ತಿರಲು ನಾನು ಬೇಸತ್ತು ನನ್ನಲ್ಲಿರಬೇಡವೆಂದು ಈ ದುಷ್ಟನನ್ನು ಊರಿಂದ ಹೊರಪಡಿಸಿದೆನು." ಎಂದನು. ಆ ಮಾತನ್ನು ಕೇಳಿ ಜರಾಸಂಧನು ಆ ಮಂದಾಸನನ್ನು ತರಿಸಿ ನೋಡಲು ಅದರಲ್ಲಿ ಸೋಮವಂಶಜನಾದ ಉಗ್ರಸೇನನಿಗೂ ಅತನ ಸತಿ ಪದ್ಮಾವತಿಗೂ ಜನಿಸಿದ ಶಿಶುವೆಂದು ಬರೆದಿದ್ದುದನ್ನು ನೋಡಿ ತನ್ನ ತಂಗಿಯಾದ ಪದ್ಮಾವತಿಯ ಮಗನೆಂಬುದನ್ನು ತಿಳಿದು ಬಹು ಸಂತುಷ್ಟನಾಗಿ ಕಂಸನಿಗೆ ಜೀವಂಜಸೆಯನ್ನು ಕೊಟ್ಟು ಮದುವೆಮಾಡಿ "ನಿನಗಿಷ್ಟವಾದ ರಾಜ್ಯವನ್ನು ಕೇಳು, ಕೊಡುವೆನು" ಎಂದನು. ಅದಕ್ಕೆ ಕಂಸನು ತನ್ನ ತಂದೆಯಾದ ಉಗ್ರಸೇನನ ರಾಜ್ಯವನ್ನೇ ಬೇಡಲು ಜರಾಸಂಧನು ತಂದೆಗೂ ಮಗನಿಗೂ ವೈರವು ಬರಲು ಕಾರಣವೇನೆಂಬುದನ್ನು ತಿಳಿಯಬೇಕೆಂದು ಬಗೆದು ದಿವ್ಯಜ್ಞಾನಸಂಪನ್ನರಾದ ಓರ್ವ ಮುನೀಶ್ವರರ ಬಳಿಗೆ ಹೋಗಿ ಕೈಮುಗಿದು ಕಂಸನಿಗೆ ತನ್ನ ತಾಯಿತಂದೆಗಳಲ್ಲಿ ವೈರಕ್ಕೆ ಕಾರಣವೇನೆಂದು ಕೇಳಿದನು. ಅದಕ್ಕಾ ಮುನೀಶ್ವರರಿಂತೆಂದರು:—

ಈ ಪೃಥ್ವಿಯಲ್ಲೊರ್ವ ತಾಪಸಿಯು ಪಂಚಾಗ್ನಿಮಧ್ಯದಲ್ಲಿ ತಪಸ್ಸು ಮಾಡುತ್ತಿರಲು ಅಲ್ಲಿಗೋರ್ವ ವೀರಭದ್ರನೆಂಬ ದಿಗಂಬರಮುನಿಯು ಬಂದು "ಇದು ಹಿಂಸಾರೂಪವಾದ ಕಠಿನತಪಸ್ಸು" ಎನಲು ಅದನ್ನು ಕೇಳಿ ಆ ತಾಪಸಿಯು ಕೋಪದಿಂದ ಕೊಡಲಿಯನ್ನು ತೆಗೆದುಕೊಂಡು "ಇದರಲ್ಲಿ ನೀನು ಹಿಂಸೆಯನ್ನು ತೋರು" ಎಂದನು. ಅದಕ್ಕಾ ವೀರಭದ್ರಮುನಿಯು ಉರಿಯುವ ಬೆಂಕಿ—ಅಗ್ನಿಷ್ಟಿಕೆಯಲ್ಲಿ ಬಿದ್ದು ನಾಶವಾಗುತ್ತಿದ್ದ ಜೀವಗಳನ್ನು ತೋರಲು ಆ ತಾಪಸಿಯು ಬೆರಗಾಗಿ ತಾನು ಮುಂದರಿಯದೆ ಮುನಿಗೆ ಮುನಿದೆನೆಂದು ಕೊಡಲಿಯನ್ನು ಬಿಸುಟು ಆ ಮುನಿಗೆರಗಿ ಅವರಿಂದ ಜಿನದೀಕ್ಷೆಯನ್ನು ಸ್ವೀಕರಿಸಿ ಕಠಿನತಪಸ್ಸನ್ನು ಮಾಡಲು ವನದೇವತೆಗಳು ಅವನ ತಪಸ್ಸಾಮರ್ಥ್ಯಕ್ಕೆ ಮೆಚ್ಚಿ ಕ್ಷೆಮುಗಿದು "ಮುನೀ

ಶನೆ! ಏನಪ್ಪಣೆ?'' ಎಂದು ಕೇಳಿದುವು. ಅದಕ್ಕಾಯತಿಯು '' ನಾನು ಸ್ಮರಿಸಿ ದಾಗ ಬನ್ನಿ '' ಎಂದನು. ಬಳಿಕ ಮಧುರೆಗ ಬಂದು ಮಾಸೋಪವಾಸವನ್ನು ಮಾಡುತ್ತಿರಲು ಒಂದುದಿನ ಉಗ್ರಸೇನರಾಜನು ಬಂದು ಆ ಮುನಿಗೆ ವಂದಿಸಿ ತನ್ನೊಡನೆ ಬಂದಿದ್ದ ಭವ್ಯಜನರನ್ನು ಕುರಿತು '' ಇವರು ಪಾರಣೆಗೆ ಬಂದಾಗ ನಾನೇ ಇವರನ್ನು ನಿಲ್ಲಿಸುವೆನು. ಊರಲ್ಲಿ ಬೇರೆಯಾರೂ ನಿಲ್ಲಿಸಬೇಡಿ' ಎಂದು ಹೇಳಿ ಮುನಿಗೆ ವಂದಿಸಿ ತನ್ನ ಪಟ್ಟಣಕ್ಕೆ ಹೋದನು. ಮರುದಿನ ಆ ಯತಿವರ್ಯರು ಪಾರಣೆಗೆಂದು ನಗರಕ್ಕೆ ಬರುವಾಗ ಉಗ್ರಸೇನನ ಪಟ್ಟ ದಾನೆಯು ಮದಿಸಿ ಕೋಲಾಹಲವನ್ನು ಮಾಡುತ್ತಿರಲು ಆ ಗಲಿಬಿಲಿಯಲ್ಲಿ ಅವನು ಯತಿವರ್ಯರನ್ನು ಪಾರಣೆಗೆ ಕರೆಯಲು ಮರೆತನು. ಯತೀಶರು ನಿರಾಹಾರಿಗಳಾಗಿ ಹಿಂದಿರುಗಿ ಹೋಗಿ ಪುನಃ ಮಾಸೋಪವಾಸವನ್ನು ಮಾಡಿ ಹಸಿವೆಯಿಂದ ಆ ನಗರಕ್ಕೆ ಭಿಕ್ಷೆಗೆ ಬಂದರು. ಆಗ ಅರಮನೆಗೆ ಬೆಂಕಿ ಹತ್ತಿದ್ದುದರಿಂದ ಆ ಸಂಭ್ರಮದಲ್ಲಿ ರಾಜನು ಮುನಿಪತಿಗೆ ಆಹಾರದಾನಮಾಡುವುದನ್ನು ಮರೆತುಬಿಟ್ಟನು. ರಾಜನ ಅಪ್ಪಣೆಯಂತೆ ನಗರವಾಸಿಗಳೂ ಆಹಾರವನ್ನು ಕೊಡಲಾರದಾದರು. ಮುನಿಪತಿಯು ಮೊದಲಿನಂತೆ ಉಪವಾಸವನ್ನು ಕೈಕೊಂಡು ವನಕ್ಕೆ ಹೋಗಿ ಪುನಃ ಪಾರಣೆಗೆ ಬಂದನು. ಆಗ ಒಬ್ಬ ದೊರೆಯು ಆ ಪಟ್ಟಣಕ್ಕೆ ಬರಲು ಅವನನ್ನು ಇದಿರ್ಗೊಳ್ಳುವ ವೈಭವದಲ್ಲಿ ಉಗ್ರಸೇನನು ಈ ಯತಿಪತಿಗೆ ಆಹಾರಕೊಡುವುದನ್ನು ಮರೆತು ಬಿಟ್ಟನು. ಯತೀಶ್ವರನಿಗೆ ಉದರಾಗ್ನಿಯು ಉದ್ದೀಪಿತವಾಗಲು ಬಲಹೀನನಾಗಿ ನಡೆಯಲಾರದೆ ಒಂದು ಗೋಡೆಗೆ ಒರಗಿ ನಿಂತನು. ಅವನನ್ನು ನೋಡಿ ಬೀದಿಯಲ್ಲಿ ತಿರುಗಾಡುವ ಜನರು '' ದೊರೆಯು ಈ ಮುನಿಗೆ ತಾನೂ ಆಹಾರಕೊಡುವುದಿಲ್ಲ; ಬೇರೆಯವರಿಗೂ ಬಿಡುವುದಿಲ್ಲ; ಅವನಿಗೆ ಈ ಮುನಿಯಲ್ಲಿ ಹಟವೋ?'' ಎಂದರು. ಆ ಮಾತನ್ನು ಕೇಳಿದೊಡನೆಯೇ ಮುನಿಪತಿಗೆ ದೊರೆಯಮೇಲೆ ಭಗ್ಗನೆ ಕೋಪವು ಬಂದಿತು. ಆಗ ಆ ಹಿಂದೆ ಹೇಳಿದ ದೇವತೆಗಳು ಬಂದು '' ಏನಪ್ಪಣೆ?'' ಎಂದು ಕೇಳಲು ಯತಿಯು '' ಈಗ ನನಗೆ ಪ್ರಾಣವು ತೊಲಗುವ ವೇಳೆಯಾಯ್ತು. ಮುಂದಿನ ಭವದಲ್ಲಿ ಬಂದೊದಗಿ'' ಎನಲು ಆ ದೇವತೆಗಳು ಹೋದುವು. ಆ ಯತಿಯು ಮಡಿದು ಉಗ್ರಸೇನನ ಮಡದಿಯ ಗರ್ಭದಲ್ಲಿ ಜನಿಸಿದನು. ಆಗ ಆ ಪದ್ಮಾವತಿಗೆ ತನ್ನ ಪತಿಯ ಎದೆಯನ್ನು ಸೀಳಿ ರಕ್ತಪಾನಮಾಡಬೇಕೆಂಬ ಕೆಟ್ಟ ಬಯಕೆಯುಂಟಾಗಲು ಅದನ್ನು ಹೇಳಲಾರದೆ ದಿನದಿನಕ್ಕೆ ಕೃಶವಾಗುತ್ತ ಬಂದಳು. ಹಾಗೆ ಕೃಶವಾಗಲು ಕಾರಣವೇನೆಂದು ಉಗ್ರಸೇನನು ನಿರ್ಬಂಧಿಸಿ ಕೇಳಲು ಆಕೆಯು ಬಯಕೆಯ ಪರಿಯನ್ನು

ಉಸುರಿ ತನ್ನ ಜೀವದಾಸೆಯನ್ನು ಬಿಡುವಂತೆ ಹೇಳಿದಳು. ಆ ಮಾತನ್ನು ಕೇಳಿ ದೊರೆಯು ಆಕೆಯ ಬಸಿರಲ್ಲಿರುವ ಶಿಶುವಿನ ಮುನಿಸಿನ ತೆರನಲ್ಲದೆ ಬೇರೊಂದಲ್ಲವೆಂದು ಆಕೆಗೆ ಹೇಳಿ ಮನೆಯಿಂದ ಹೊರಟು ಮಂತ್ರಾಲೋಚನಾಶಾಲೆಗೆ ಹೋಗಿ ಮಂತ್ರಿಗಳೊಡನೆ ಮಂತ್ರಾಲೋಚನೆಯನ್ನು ಮಾಡಲು ಒಬ್ಬನುಂತ್ರಿಯು ತಂತ್ರದಿಂದ ಆ ಕೆಲಸವನ್ನು ಮಾಡುತ್ತೇನೆಂದು ಹೇಳಿ ಹೋಗಿ ದೊರೆಯ ಒಂದು ಲೆಪ್ಪದ ಪ್ರತಿಕೃತಿಯನ್ನು ಮಾಡಿಸಿ ಅದರಲ್ಲಿ ಅಲಶಗೆಯ ರಸವನ್ನು ತುಂಬಿ ಮರೆಯಲ್ಲಿಟ್ಟು ಅರಸಿಯನ್ನು ಕರೆಸಿ ಆಕೆಯ ಮುಖಕ್ಕೆ ವಸ್ತ್ರವನ್ನು ಮರೆಮಾಡಿ ಆಕೆಯ ಬಯಕೆಯನ್ನು ಪೂರಯಿಸುವಂತೆ ಹೇಳಿದನು. ಆಕೆಯು ಪ್ರತಿಕೃತಿಯು ಎದೆಯನ್ನು ತಿವಿದು ಕೋಪದಿಂದ ಕೆಂಪುನೀರನ್ನು ಹೀರಿ ತನ್ನಿಚ್ಛೆಯು ತೀರಲು ತನ್ನ ನಿಜಪತಿಯೆಂದು ಬಗೆದು ಮೂರ್ಛಿತಳಾದಳು. ಶೈತ್ಯೋಪಚಾರದಿಂದ ಆಕೆಯನ್ನು ಎಚ್ಚರಿಸಿ ಪತಿಯು ಬದುಕಿದ್ದಾನೆಂದು ಹೇಳಿ ಸಂತೈಸಿ ಆತನ ಗಾಯವು ಗುಣವಾಯಿತೆಂದು ಹೇಳಲು ಆಕೆಯ ವ್ಯಸನವು ದೂರವಾಯ್ತು. ಒಳಿಕ ಸಮಯಾಸವು ತುಂಬಿ ಕ್ರೂರ ಲಗ್ನದಲ್ಲಿ ಮಗುವನ್ನು ಹಡೆದಳು. ರಾಜನು ಅದರ ಮುಖವನ್ನು ನೋಡಿದನು. ಅದು ತಂದೆಯ ಮುಖವನ್ನು ನೋಡಿದಕೂಡಲೆ ಕೋಪದಿಂದ ಅದರ ಕಣ್ಣುಗಳು ಕೆಂಪೇರಿದುವು. ಅದರಿಂದ ಆ ಶಿಶುವು ತನಗೆ ವೈರಿಯೆಂದು ಬಗೆದು ರಾಜನು ಮಂತ್ರಿಗೆ ತಿಳುಹಲು ಅವನು ಕಂಚಿನ ಮಂದಾಸಿನಲ್ಲಿ ಮಗುವನ್ನಿರಿಸಿ ಪಕ್ಕದಲ್ಲಿ ರತ್ನವನ್ನು ಸುರಿದು ತಂದೆತಾಯಿಗಳ ಕುಲವನ್ನೂ ಹೆಸರುಗಳನ್ನೂ ಬರೆಯಿಸಿ ಯಮುನಾನದಿಯಲ್ಲಿ ಬಿಡಿಸಲು ಅದು ಪ್ರವಾಹದಲ್ಲಿ ಹರಿದುಬರುತ್ತಿರುವುದನ್ನು ಕೌಶಂಬಿಯ ಬಿಸ್ತರವನೊಬ್ಬನು ಕಂಡು ಸಂತೋಷದಿಂದ ಅದನ್ನು ಕೊಂಡೊಯ್ದು ಸಲಹಿದನು." ಎಂದು ಹೇಳಿದ ಆ ಮುನಿಗೆ ವಂದಿಸಿ ತನ್ನ ಮನೆಗೆ ಹೋಗಿ ಮರುದಿನ ಮಗಳಿಗೆ ಬಳುವಳಿಯನ್ನಿತ್ತು ಕಂಸನನ್ನು ಕರೆದು ತಂದೆತಾಯಿಗಳನ್ನು ಕೊಂದು ರಾಜ್ಯವಾಳಬೇಡವೆಂದು ಹೇಳಿ ಮಧುರೆಗೆ ಕಳುಹಲು ಕಂಸನು ಜರಾಸಂಧನಿಗೆ ವಂದಿಸಿ ಪೊರಮಟ್ಟು ವಸುದೇವನನ್ನು ಕುರಿತು ' ದೇವಾ! ನಿಮ್ಮ ಅನುಗ್ರಹದಿಂದ ನನಗೀ ಮಹದ್ಐಶ್ವರ್ಯವು ಪ್ರಾಪ್ತವಾದುದು. ನೀವು ಮಧುರೆಗೆ ಬಂದು ಅಲ್ಲಿ ನನ್ನನ್ನು ಸ್ಥಾಪಿಸಬೇಕು " ಎಂದನು. ಆ ಮಾತನ್ನು ಕೇಳಿ ವಸುದೇವನು ಕಂಸನೊಡನೆ ಮಧುರೆಗೆ ಹೋದನು. ಕಂಸನು ತನ್ನ ತಂದೆತಾಯಿಗಳನ್ನು ಕೋಪದಿಂದ ಪುರದ್ವಾರದ ಮೇಲೆ ಅಸಿಪಂಜರದಲ್ಲಿ ಸೆರೆಯಿಟ್ಟು ಆ ನಗರಕ್ಕೆ ದೊರೆಯಾಗಿ ವಸುದೇವನಲ್ಲಿ ಸ್ವಾಮಿಭಾವವನ್ನಿಟ್ಟು ಸುಖದಿಂದಿದ್ದನು. ಉಗ್ರಸೇನನ ತಮ್ಮ

ನಾದ ದೇವಸೇನನಿಗೂ ಆತನ ಪತ್ನಿ ಧನದೇವಿಗೂ ಜನಿಸಿದ ಅತಿಮುಕ್ತನೆಂಬವನು ಕಂಸನ ದುಷ್ಟತನವನ್ನು ಕಂಡು ವೈರಾಗ್ಯದಿಂದ ದೀಕ್ಷೆಯನ್ನು ತೆಗೆದುಕೊಂಡನು. ಕಂಸನು ತನ್ನ ತಂಗಿಯಾದ ದೇವಕಿಯೆಂಬ ಬಹು ಸುಂದರಳಾದ ಕನ್ಯೆಯನ್ನು ಗುರುಪೂಜೆಯೆಂದು ವಸುದೇವನಿಗಿತ್ತು ಮದುವೆಮಾಡಿದನು. ಆ ಸ್ತ್ರೀರತ್ನದಲ್ಲಿ ವಸುದೇವನು ಬಹು ಪ್ರೀತಿಯಿಂದ ಸುಖಸಂಕಥಾವಿನೋದದಲ್ಲಿದ್ದನು.

---

೧೪ ಮಂಗಿಯ ಕಥಾಸಂಧಿ

ಕಂಸನ ಪ್ರಖ್ಯಾತಿಯು ದಿನದಿನಕ್ಕೆ ಲೋಕದಲ್ಲಿ ಪಸರಿಸಲು ಅನೇಕ ವೀರ ಭಟರೂ ರಾವುತರೂ ಅರ್ಧರಥ ಸಮರಥ ಅತಿರಥ ಮಹಾರಥರುಗಳೂ ಮುಕುಟ ವರ್ಧನರೂ ಕಂಸನಲ್ಲಿ ಬಂದು ಸೇರಿದರು. ಕಂಸನು ಅಷ್ಟಮದೋಪೇತನೂ ದುಷ್ಟನೂ ಸತ್ಯಸದಾಚಾರದೂರನೂ ಕಪಟಹೃದಯನೂ ಆಗಿ ಮೆರೆಯುತ್ತಿದ್ದನು. ಮುನಿಯಾಗಿದ್ದ, ದೇವಕಿಯ ಅಣ್ಣನಾದ, ಅತಿಮುಕ್ತನು ಮಹಾತಪಸ್ವಿಯಾಗಿ ಅವಧಿಜ್ಞಾನವೆಂಬ ದಿವ್ಯಜ್ಞಾನವನ್ನು ಪಡೆದು ಒಂದು ದಿನ ಆ ಊರಿಗೆ ಪಾರಣೆಗೆಂದು ಬೀದಿಯಲ್ಲಿ ಬರುತ್ತಿರಲು ದೇವಕಿಯು ಕಂಡು ಅನುರಾಗದಿಂದ ನಿಲ್ಲಿಸಿ ಉನ್ನತಾಸನದಲ್ಲಿ ಕುಳ್ಳಿರಿಸಿ ಕಾಲುಗಳನ್ನು ತೊಳೆದು ಅಷ್ಟವಿಧಾರ್ಚನೆಗಳಿಂದರ್ಚಿಸುತ್ತಿರುವಾಗ ಕಂಸನ ಪತ್ನಿ ಜೀವಂಜಸೆಯು ಬಂದು ದೇವಕಿಯ ಮುಟ್ಟಿನ ಬಟ್ಟೆಯನ್ನು ಮುನಿಯ ಮುಂದೆ ಹಿಡಿದು "ಅತಿಮುಕ್ತಭಾವನೆ! ನೀನೇಕೆ ಬೆತ್ತಲೆ ಬಂದಿರುವೆ? ಈ ವಸ್ತ್ರವನ್ನುಟ್ಟ ನಿನ್ನೀತಂಗಿಯು ಎಂತಹ ಮಗನನ್ನು ಹಡೆವಳು ಹೇಳು" ಎನಲು ಆ ಮುನಿವರ್ಯನು ಮುಂದಕ್ಕೆ ತೆರಳಿದನು. ಜೀವಂಜಸೆಯು ಮುಂದೆ ಹೋಗಿ ಅಡ್ಡಕಟ್ಟಿ ಕಾಡಲು ಮುನಿಯು 'ದೇವಕಿಯ ಮಗನು ನಿನ್ನ ಗಂಡನನ್ನೂ ತಂದೆಯನ್ನೂ ಕೊಲ್ಲುವನು. ಇದು ಸತ್ಯ" ಎನಲು ಆ ನುಡಿಯನ್ನು ಕೇಳಿ ದುಃಖದಿಂದ ಮನೆಗೆ ಹೋಗಿ ತನ್ನ ಪತಿಗೆ ತಿಳಿಸಿದಳು. ಅದನ್ನು ಕೇಳಿ ಕಂಸನು ಮುನಿಯ ಮಾತು ಸುಳ್ಳಾಗದೆಂದು ಬಗೆದು ಭೀತನಾಗಿ ಪತ್ನಿಯನ್ನು ಕುರಿತು "ಮತ್ಸಳಾಗಿ ನೀನು ಕಾಡಲು ಆ ಮುನಿಗೆ ಪಿತ್ತೋದ್ರೇಕವಾಗಿ ಒದರಿದರೆ ಅದಕ್ಕೇಕೆ ಚಿಂತೆ? ಅದಕ್ಕೆ ನಾನು ದಾರಿ-ಉಪಾಯವನ್ನು ಕಾಣದಿದ್ದರೆ ನಿನ್ನ ಗಂಡನೇ?" ಎಂದು ಸಮಾಧಾನಪಡಿಸಿದನು. ದೇವಕಿಗೆ ಗರ್ಭೋತ್ಪತ್ತಿಯಾಗಿ ಬೆಳೆದು ಏಳು ತಿಂಗಳಾಗಲು ಕಪಟಹೃದಯನಾದ ಕಂಸನು ವಸುದೇ

ವನ ಬಳಿಗೆ ಬಂದು ಕೈಮುಗಿದು ತನ್ನ ತಂಗಿ ದೇವಕಿಯನ್ನು ಹೆರಿಗೆಗೆ ತನ್ನ ಮನೆಗೆ ಕಳುಹಬೇಕೆಂದು ಕೇಳಲು ವಸುದೇವನು ಸಂದೇಹಪಟ್ಟು ಸುಮ್ಮನಿದ್ದನು. ಕಂಸನು ವಸುದೇವನ ಕಾಲಿಗೆ ಬಿದ್ದು ಸಂದೇಹವೇಕೆಂದು ನಿರ್ಬಂಧಿಸಿ ಅವನಿಂದ ವಾಗ್ದಾನವನ್ನು ತೆಗೆದುಕೊಂಡು ಮನೆಗೆ ಹೋದನು. ಆ ವಿಷಯವನ್ನು ದೇವಕಿಯು ತಿಳಿದು ಭೀತಳಾಗಿ ಪತಿಯ ಬಳಿಗೆ ಹೋಗಿ ಯತಿಯು ಜೀವಂಜಸೆಗೆ ಹೇಳಿದ ಮಾತನ್ನು ಹೇಳಿ ದುಷ್ಟಕಂಸನು ತನ್ನ ಗರ್ಭದ ಶಿಶುವಿಗೆ ಅಪಾಯವನ್ನುಂಟು ಮಾಡದಿರುವವನಲ್ಲವೆನಲು ವಸುದೇವನು ದೇವಕಿಯೊಡನೆ ಆ ಅತಿಮುಕ್ತಯತಿಯ ಬಳಿಗೆ ಹೋಗಿ ಭಕ್ತಿಯಿಂದೆರಗಿ ಕಂಸನಿಂದ ದೇವಕಿಯ ಗರ್ಭಕ್ಕೆ ಕೇಡಾಗುವುದೇ ಎಂದು ಕೇಳಿದನು. ಅದಕ್ಕೆ ಯತಿಯು ಇಂತೆಂದನು:—"ಈ ನಗರದ ದೊರೆಯಾದ ಸೂರಸೇನನ ರಾಜಶ್ರೇಷ್ಠಿ ರವಿದತ್ತನಿಗೂ ಅತನ ಪತ್ನಿ ಋಮುನಾದತ್ತಿಗೂ ಯಥಾಕ್ರಮವಾಗಿ ಭಾನು, ಸುರ, ಸೂರಕೀರ್ತಿ, ಭಾನುಸೇನ, ಅಸುರದೇವ, ಸೂರ, ಸೂರಸೇನರೆಂಬ ಏಳು ಮಂದಿ ಮಕ್ಕಳು ಹುಟ್ಟಿ ಬಹು ದುರಾಚಾರಿಗಳಾಗಿದ್ದರು. ಒಂದು ದಿನ ಆ ಪಟ್ಟಣಕ್ಕೆ ಒಬ್ಬ ಮುನಿಯು ಬರಲು ಅವನ ಬಳಿಗೆ ಆ ನಗರದ ರಾಜನು ರವಿದತ್ತನೊಡನೆ ಹೋಗಿ ಧರ್ಮದ ಸ್ವರೂಪವನ್ನು ಕೇಳಿ ವೈರಾಗ್ಯವನ್ನು ಹೊಂದಿ ಇಬ್ಬರೂ ಜಿನದೀಕ್ಷೆಯನ್ನು ತೆಗೆದುಕೊಂಡರು. ಇತ್ತ ಆ ಏಳುಮಂದಿ ಮಕ್ಕಳು ತಮ್ಮ ತಂದೆಯು ಗಳಿಸಿದ್ದ ಹನ್ನೆರಡು ಕೋಟಿ ದ್ರವ್ಯವನ್ನು ದುರ್ವ್ಯಸನಗಳಿಂದ ಕಳೆದು ಕಳುವಿನಿಂದ ಜೀವಿಸಿಕೊಂಡಿರಲು ಅದನ್ನು ಆ ನಗರದ ದೊರೆಯು ತಿಳಿದು ಅವರನ್ನು ಊರಿಂದ ಹೊರಡಿಸಿದನು. ಅವರು ಕದಿಯುವುದಕ್ಕಾಗಿ ಒಂದು ರಾತ್ರಿಯಲ್ಲಿ ಉಜ್ಜಯನಿಗೆ ಹೋಗಿ ಅಲ್ಲಿಯ ಶ್ಮಶಾನದಲ್ಲಿ ಕಿರಿಯತಮ್ಮನಾದ ಸೂರಸೇನನನ್ನಿರಿಸಿ ಉಳಿದ ಆರುಮಂದಿಗಳೂ ಕದಿಯುವುದಕ್ಕೆ ಹೋದರು. ಆ ನಗರದಲ್ಲಿ ವೃಷಭಕೇತುವೆಂಬ ದೊರೆಗೆ ವಜ್ರಮುಷ್ಟಿಯೆಂಬ ಭೃತ್ಯನಿದ್ದನು. ಇವನಿಗೆ ಕನಕವಲ್ಲರಿ ಮತ್ತು ಮಂಗಿಯೆಂಬ ಈರ್ವರು ಹೆಂಡತಿಯರಿದ್ದರು. ವಜ್ರಮುಷ್ಟಿಯು ಮಂಗಿಯಲ್ಲಿ ಹೆಚ್ಚು ಪ್ರೀತಿಯುಳ್ಳವನಾಗಿದ್ದನು. ಒಂದು ದಿನ ವಜ್ರಮುಷ್ಟಿಯು ಬೇರೊಂದೂರಿಗೆ ಹೋಗಿರಲು ಮಂಗಿಯು ಸವತಿಯಾದ ಕನಕವಲ್ಲರಿಯು ಮಂಗಿಯಲ್ಲಿ ಕಪಟಸ್ನೇಹವನ್ನು ಮಾಡಿ ಆಕೆಯ ಮುಡಿ ಹೂವಿನಮಾಲೆಯಲ್ಲಿ ಒಂದು ಹಾವನ್ನಿರಿಸಿದಳು. ಮಂಗಿಯು ತಿಳಿಯದೆ ಆ ಹೂವಿನಮಾಲೆಗೆ ಕೈಹಾಕಲು ಅಲ್ಲಿದ್ದ ಕಾಳಸರ್ಪವು ಕಚ್ಚಿತು ವಿಷವೇರಿ ಮಂಗಿಯು ಬೀಳಲು ಆಕೆಯನ್ನು ಕನಕವಲ್ಲರಿಯು ಆ ಊರಿನ ಮಸಣದಲ್ಲಿ ಹಾಕಿಸಿ

ರಲು ವಜ್ರಮುಷ್ಟಿಯು ಒಂದು ಆ ಪ್ರಿಯವಲ್ಲಭೆಯೆಲ್ಲಿರುವಳೆಂದು ಕೇಳಿದನು. ಅದಕ್ಕೆ ಕನಕವಲ್ಲರಿಯು "ಮಂಗಿಯು ಹತ್ತಿಲಲ್ಲಿ ಹೂಕೊಯ್ವಾಗ ಒಂದು ಹಾವು ಕಚ್ಚಲು ಸತ್ತುಹೋದಳು. ಅದಕ್ಕಾಗಿ ನಾನು ಅಳುತ್ತಿರಲು ತಳವಾರರು ಬಂದು ರಾಜನಿಗೆ ಪುತ್ರೋತ್ಪತ್ತಿಯಾಗಿರುವುದರಿಂದ ನಗರದಲ್ಲಿ ಯಾರೂ ಅಳಕೂಡದೆಂದೂ ಹರ್ಷದಿಂದಿರಬೇಕೆಂದೂ ಹೇಳಿದುದರಿಂದ ನಾನು ಮಂಗಿಯ ಹೆಣವನ್ನು ಸುಡುಗಾಡಿಗೆ ಕಳುಹಿದೆನು" ಎಂದಳು. ಆ ಮಾತನ್ನು ಕೇಳಿ ವಜ್ರಮುಷ್ಟಿಯು ನೊಂದು ದುಃಖಿತನಾಗಿ ಹೊರಟು ಹೆಂಡತಿಯ ಶವವನ್ನು ಹುಡುಕಿಕೊಂಡು ಆ ಸುಡುಗಾಡಿಗೆ ಬರುತ್ತಿರುವಾಗ ಜಿನಮುನಿಯೋರ್ವನನ್ನು ಕಂಡು ಅವನ ಕಾಲಿಗೆ ನಮಸ್ಕರಿಸಿ ಮಂಗಿಯ ಹೆಣವು ಕಾಣಿಸಿಕೊಂಡರೆ ಆ ಮುನಿಯ ಕಾಲುಗಳಿಗೆ ಸಾವಿರ ಕೆಂದಾವರೆಗಳನ್ನರ್ಚಿಸುವುದಾಗಿ ಪ್ರತಿಜ್ಞೆಮಾಡಿ ಅಲ್ಲಿಂದ ಮುಂದಕ್ಕೆ ಹೋಗಿ ಮಂಗಿಯು ಬಿದ್ದಿರುವುದನ್ನು ಕಂಡು ದುಃಖಿಸಿ ಅವಳನ್ನು ಮುನಿಯ ಬಳಿಗೆ ತಂದಿರಿಸಲು ಸರ್ವೌಷಧಿಋದ್ಧಿಸಂಪನ್ನರಾದ ಆ ಮುನಿಗಳಮೇಲೆ ಬೀಸಿದ ಗಾಳಿಯು ಮಂಗಿಯ ಶರೀರವನ್ನು ಸ್ಪರ್ಶಿಸಿದೊಡನೆಯೇ ವಿಷಹರವಾಗಿ ಮಂಗಿಯು ಕಣ್ದೆರೆದಳು. ವಜ್ರಮುಷ್ಟಿಯು ನೋಡಿ ಬಹು ಸಂತುಷ್ಟನಾಗಿ ಆಕೆಯನ್ನು ಅಲ್ಲಿ ಬಿಟ್ಟು ಕೆಂದಾವರೆಗಳನ್ನು ತರುವುದಕ್ಕಾಗಿ ಓಡಿಹೋದನು.

ಇತ್ತ ಆ ಮಸಣದಲ್ಲಿ ಅಡಗಿರ್ದ ಸೂರಸೇನನು ಮಂಗಿಯ ರೂಪವನ್ನು ನೋಡಬೇಕೆಂದು ಕೊಡದಲ್ಲಿರಿಸಿದ್ದ ದೀಪವನ್ನು ಹೊರಕ್ಕೆ ತೆಗೆದು ಮಂಗಿಯ ಹತ್ತಿರಕ್ಕೆ ಬರಲು ಆಕೆಯು ಆತನ ರೂಪಕ್ಕೆ ಮೆಚ್ಚಿ "ನಾನು ನಿನಗೆ ಒಲಿದೆನು; ಬೇಗನೆ ನನ್ನನ್ನು ಕರೆದುಕೊಂಡು ಹೋಗು" ಎನಲು ಸೂರಸೇನನು "ನಿನ್ನ ಗಂಡನು ಬಹು ಪರಾಕ್ರಮಿಯಾಗಿರುವುದರಿಂದ ನಾನು ಹೆದರುತ್ತೇನೆ" ಎಂದನು. ಆ ಮಾತನ್ನು ಕೇಳಿ ಮಂಗಿಯು "ಅದಕ್ಕೆ ತಕ್ಕುದನ್ನು ನಾನು ಬಲ್ಲೆನು. ಮದನಸದೃಶನೆ! ನೀನು ಮೊದಲಿನಂತೆ ಈ ಮರದಡಿಯಲ್ಲಿರು" ಎಂದಳು. ಆಗ ಸೂರಸೇನನು ತನ್ನ ಮನಸ್ಸಿನಲ್ಲಿ ಹೀಗೆ ಯೋಚಿಸಿದನು:— "ಹೆಂಗುಸರ ಕಪಟವನ್ನು ನಂಬುವ ಮನುಜನು ಹೆಡ್ಡನು. ಪರಪುರುಷರಲ್ಲಿ ತಮ್ಮ ಗಂಡನಿಗಿಂತಲೂ ರೀತಿ ಯೌವನರಸಿಕತೆ ಯೆಚ್ಚಾಗಿದ್ದರೆ ಅವರಮೇಲೆ ತಮ್ಮ ಕಣ್ಣನ್ನೂ ಮನಸ್ಸನ್ನೂ ಇಡುವರು. ದೇಹವೆರಡು, ಪ್ರಾಣವೊಂದೆಂಬಂತೆ ಕೈಪಿಡಿದ ಕಾಂತನನ್ನು ಬಿಟ್ಟು ಬೇರೆಯವರನ್ನು ನೋಡುವರು. ಮಾವಿನಮರವನ್ನು ಹಬ್ಬಿದ ಮಲ್ಲಿಗೆಯ ಬಳ್ಳಿಯು ವಸಂತರ್ತುವನ್ನು ಪ್ರೀತಿಯಿಂದಿಚ್ಛಿಸುವಂತೆ ಪ್ರಾಣೇಶ್ವರನಲ್ಲಿದ್ದುಕೊಂಡು ಪರಪುರುಷರನ್ನಿ

ಚ್ಚಿಸುತ್ತಾರೆ. ನಾನು ಬಡವನೋ ಬಲ್ಲಿದನೋ ದುಷ್ಕುಲದವನೋ ಸತ್ಕುಲದವನೋ ಕುರೂಪಿಯೋ ಎಂಬುದನ್ನರಿಯದೆ ಈಕೆಯು ನನ್ನನ್ನು ಮೋಹಿಸಿದಳು ಈ ಸುಡುಗಾಡಿನಲ್ಲಿ ಸುಡುಸುಣ್ಣವಾಗಿ ಮಡಿದುಹೋಗುವವಳನ್ನು ಕಾಪಾಡಿದ ಪ್ರಾಣಕಾಂತನ ಕ್ಷೇಮವನ್ನು ಮರೆತಿರುವ ಈ ಪಾಪಿಯನ್ನು ನಂಬಬಹುದೇ? ಸುಡುಗಾಡಿನಲ್ಲಿ ಭೂತಪ್ರೇತಗಳು ಭುಂಜಿಸುವುದಕ್ಕೀಡಾಗಿ ಬಿದ್ದಿದ್ದ ಈ ಶರೀರವನ್ನು ರಕ್ಷಿಸಿದ ಪತಿಯನ್ನು ಮರೆತಿರುವ ಈ ಪಾತಕಿಯನ್ನು ನಂಬಬಹುದೇ?" ಹೀಗೆ ಯೋಚಿಸುತ್ತಿರುವಷ್ಟರಲ್ಲಿ ವಜ್ರಮುಷ್ಟಿಯು ಕೆಂದಾವರೆಗಳನ್ನು ಹೊರೆಗಟ್ಟಿ ತಲೆಯ ಮೇಲೆ ಹೊತ್ತುಕೊಂಡು ಬಂದು ಮುನಿಯ ಸನ್ನಿಧಿಯಲ್ಲಿ ನಿಂತು ತನ್ನ ಕೈಯಲ್ಲಿದ್ದ ಖಡ್ಗವನ್ನು ಮಂಗಿಯ ಕೈಗಿತ್ತು ತಾನು ಮುನಿಯ ಪಾದಕ್ಕೆ ತಾವರೆಗಳನ್ನರ್ಚಿಸಿ ಅಡ್ಡಬೀಳುವ ವೇಳೆಯಲ್ಲಿ ಮಂಗಿಯು ತನ್ನ ಕೈಯ ಖಡ್ಗದಿಂದ ಗಂಡನ ತಲೆಯೊಡೆಯಲು ಯತ್ನಿಸಿದಳು. ಆಗ ಸೂರಸೇನನು ಕರುಣದಿಂದ ತನ್ನ ಕೈಯಲ್ಲಿದ್ದ ಕಬ್ಬಿಣದ ಕೋಲನ್ನು ಅಡ್ಡವಾಗಿ ಹಿಡಿಯಲು ಖಡ್ಗವು ಖಣಿಲೆಂದು ಶಬ್ದವಾಗಿ ಕೆಳಕ್ಕೆ ಬೀಳಲು ವಜ್ರಮುಷ್ಟಿಯು ಇದೇನೆಂದು ಕೇಳಿದನು. ಅದಕ್ಕೆ ಆ ದುಷ್ಟೆಯು "ಮರುಳಾಟ" ವೆಂದಳು. ಆಕೆಯ ಕಾಪಟ್ಯವನ್ನರಿಯದೆ ವಜ್ರಮುಷ್ಟಿಯು ಖಡ್ಗವನ್ನು ಎಡಗೈಯಲ್ಲಿ ತೆಗೆದುಕೊಂಡು ಬಲಗೈಯಿಂದ ಆ ಸಾವಿರ ಹೂಗಳನ್ನರ್ಚಿಸಿ ವಂದಿಸಿ ಮಂಗಿಯೊಡನೆ ತನ್ನ ಊರಿಗೆ ಹೋದನು.

ಇತ್ತ ಸೂರಸೇನನು "ನಾವು ಸ್ತ್ರೀಯರ ಕಾಪಟ್ಯವನ್ನು ಯೋಚಿಸದೆ ಉತ್ತಮಾಚರಣೆಯನ್ನು ಬಿಟ್ಟು ನೀಚಕೃತ್ಯದಿಂದ ಕೆಟ್ಟೆವು" ಎಂದು ಭಾವಿಸುತ್ತಿರುವಾಗ ಅವನ ಅಣ್ಣಂದಿರು ಆರುಮಂದಿಗಳು ಆ ಊರಿನ ಅರಸನ ಮನೆಗೆ ಹೊಕ್ಕು ಬಹುವಸ್ತುಗಳನ್ನು ಕದ್ದು ಹೊರೆಗಟ್ಟಿಕೊಂಡು ಆ ಸುಡುಗಾಡಿಗೆ ಬಂದು ಏಳು ಭಾಗಮಾಡಿ ಸೂರಸೇನನ ಮುಂದಿಟ್ಟು ಅವನಿಗಿಷ್ಟವಾದ ಭಾಗವನ್ನು ತೆಗೆದುಕೊಳ್ಳುವಂತೆ ಹೇಳಿದರು. ಸೂರಸೇನನು "ಸ್ತ್ರೀಯರನ್ನು ನಂಬಿ ಪ್ರಾಣದಾತೆಯನ್ನು ಬಿಟ್ಟು ಪರರ ವಸ್ತುಗಳನ್ನು ಕದ್ದು ನರಕಗತಿಗೆ ಹೋಗಬೇಡಿ" ಎಂದು ಇವರಿಗೆ ಮಂಗಿಯ ಕಥೆಯನ್ನು ಸುರಿದನು. ಆ ಮಾತನ್ನು ಕೇಳಿ ಆ ಆರುಮಂದಿಗಳೂ ಅಚ್ಚರಿವಟ್ಟು ಸೂರಸೇನನೊಡನೆ ಆ ಮುನಿಯ ಬಳಿಯಲ್ಲಿ ದೀಕ್ಷೆಯನ್ನು ತೆಗೆದುಕೊಂಡರು. ಅವರುಗಳ ಹೆಂಡತಿಯರೂ ಮಂಗಿಯ ಕಥೆಯನ್ನು ಕೇಳಿ ದೀಕ್ಷೆಯನ್ನು ಪಡೆದರು. ಆ ಭಾನುಮುನಿ ಮೊದಲಾದ ಏಳು ಮಂದಿಗಳು ಪಕ್ಷೋಪವಾಸವನ್ನು ಮಾಡಿ ಬಳಿಕ ಪಾರಣೆಗಾಗಿ ಉಜ್ಜಯನಿಗೆ ಬರುತ್ತಿರಲು ಅವರನ್ನು ವಜ್ರ

ಮುಷ್ಟಿಯು ತಡೆದು ತನ್ನ ಮನೆಗೆ ಕರೆದೊಯ್ದು ಯಥಾವಿಧಿಯಾಗಿ ಭಿಕ್ಷೆ ಮಾಡಿಸಿ ಕೈಮುಗಿದು " ಮನ್ಮಥನನ್ನು ಗೆಲುವ ಸೌಂದರ್ಯವೂ ಯೌವನವೂ ಲಾವಣ್ಯವೂ ಇದ್ದು ನೀವುಗಳು ಯಾವ ಕಾರಣದಿಂದ ಈ ಅಸಿಧಾರಾವ್ರತ—ಕಠಿಸವ್ರತವನ್ನು ಧರಿಸಿರುವಿರಿ ? " ಎಂದು ಕೇಳಿದನು. ಅದಕ್ಕವರು ಮಂಗಿಯು ಕಥೆಯನ್ನು ವಿವರಿಸಲು ಕೇಳಿ ವಿಸ್ಮಿತನಾಗಿ ಪತ್ನಿಯರ ಕಪಟವನ್ನು ನೋಡಿ ನೊಂದು ವೈರಾಗ್ಯದಿಂದ ದೀಕ್ಷೆಯನ್ನು ಪಡೆದನು. ಆ ವಿಷಯಗಳನ್ನೆಲ್ಲ ತಿಳಿದು ಮಂಗಿಯೂ ದೀಕ್ಷೆಯನ್ನು ಹೊಂದಿದಳು.

ಭಾಸುಮುನಿ ಮೊದಲಾದ ಸಪ್ತರ್ಷಿಗಳು ಬಹುದಿನಗಳವರೆಗೆ ತಪಸ್ಸುಮಾಡಿ ಸತ್ಕೃ ಮೊದಲನೆಯ ಸೌಧರ್ಮಕಲ್ಪದಲ್ಲಿ ದೇವತೆಗಳಾಗಿ ಹುಟ್ಟಿ ಒಂದು ಸಾಗರೋಪಮಕಾಲದವರೆಗೆ ದಿವ್ಯಸುಖವನ್ನುಂಡು ಅಲ್ಲಿಂದ ಚ್ಯುತರಾಗಿ ಬಂದು ಇಲ್ಲಿ ಧಾತಕೀಖಂಡದ ಇಂದ್ರದಿಕ್ಕಿನಲ್ಲಿರುವ ಮೇರುಗಿರಿಯ ದಕ್ಷಿಣಭರತಕ್ಷೇತ್ರದ ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯಲ್ಲಿರುವ ಸುಂದರವಾದ ದೇಶದ ನಿತ್ಯಾಲೋಕವೆಂಬ ಪಟ್ಟಣದಲ್ಲಿ ಚಿತ್ರಚೂಳನೆಂಬ ದೊರೆಗೂ ಆತನ ಸತಿ ಮನೋಹರಿಗೂ ಚಿತ್ರಾಂಗದ, ಗರುಡಧ್ವಜ, ಗರುಡವಾಹನ, ಮಣಿಚೂಡ, ಸುರಭಿಚೂಳ, ಗಗನಾನಂದ, ಗಗನೇಚರರೆಂಬ ಮಕ್ಕಳಾಗಿ ಜನಿಸಿ ಬಹು ಸುಂದರರಾಗಿಯೂ ಸಾಹಸಿಗಳಾಗಿಯೂ ಬೆಳೆದು ಯೌವನವನ್ನು ಹೊಂದಿ ಕೀರ್ತಿಶಾಲಿಗಳಾಗಿರಲು ಹರಿವಾಹನನೆಂಬವನಿಗೆ ಓರ್ವ ಕನ್ಯೆಯು ಸ್ವಯಂವರದಲ್ಲಿ ಮಾಲೆಯನ್ನು ಹಾಕಿ ವರಿಸಲು ಅವನನ್ನು ಓರ್ವ ಜಕ್ಕವರ್ತಿಯು ಕೊಂದು ಆ ತರುಣಿಯನ್ನು ಎಳೆದೊಯ್ದನು. ಈ ಸಮಾಚಾರವನ್ನು ಕೇಳಿ ಚಿತ್ರಾಂಗದ ಮೊದಲಾದವರು ಸಂಸಾರಕ್ಕೆ ಭಯಪಟ್ಟು ಉತ್ತಮವಾದ ಜಿನದೀಕ್ಷೆಯನ್ನು ಪಡೆದು ತಪಸ್ಸುಮಾಡಿ ಮಡಿದು ನಾಲ್ಕನೆಯ ಸ್ವರ್ಗದಲ್ಲಿ ಹುಟ್ಟಿ ಏಳು ಸಾಗರೋಪಮಕಾಲದವರೆಗೆ ಸುಖವನ್ನನುಭವಿಸಿ ಆಯುಷ್ಯವು ತೀರಿದ ಬಳಿಕ ಅಲ್ಲಿಂದ ಚ್ಯುತರಾಗಿ ಕುರುಜಾಂಗಣದೇಶದ ಹಸ್ತಿನಾಪುರದಲ್ಲಿ ಸಿತವಾಹನನೆಂಬ ವೈಶ್ಯನಿಗೆ ಬಂಧುಮತಿಯೆಂಬ ಪತ್ನಿಯಲ್ಲಿ ಚಿತ್ರಾಂಗದನಾಗಿದ್ದ ದೇವನು ಶಂಖನೆಂಬ ಪುತ್ರನಾಗಿ ಜನಿಸಿದನು. ಉಳಿದ ಆರುಮಂದಿಗಳು ಆ ಊರಿನ ದೊರೆಯಾದ ಗಂಗದೇವನಿಗೆ ನಂದಯಶೆಯೆಂಬ ಪತ್ನಿಯಲ್ಲಿ ಗಂಗ, ಗಂಗದೇವ, ಗಂಗಾಮಿತ್ರ, ನಂದಿ, ನಂದಿಬಾಂಧವ, ನಂದಿಷೇಣರೆಂಬ ಪುತ್ರರಾಗಿ ಹುಟ್ಟಿದರು. ಅವರನ್ನು ರೇವತಿಯೆಂಬೋರ್ವ ದಾದಿಯು ಸಾಕುತ್ತಿರಲು ಬೆಳೆದು ಅವರು ಶಂಖನಲ್ಲಿ ಪೂರ್ವಜನ್ಮದ ಸಂಸ್ಕಾರದಿಂದ ಬಹು ಸ್ನೇಹವುಳ್ಳವರಾಗಿದ್ದು

ಒಡನುಂಡು ಒಡನಾಡಿಕೊಂಡಿದ್ದರು. ಆ ದೊರೆಯು ಹೆಂಡತಿ ನಂದಯಶೆಯು ಮತ್ತೊಂದು ಮಗುವನ್ನು ಹಡೆದು ಅದನ್ನು ಪೂರ್ವಜನ್ಮದ ವೈರದಿಂದ ಮುನಿದು ಆ ರೇವತಿಯ ಕೈಯಲ್ಲಿ ಕೊಟ್ಟು ಅದನ್ನು ಸಾಕುತ್ತೇವೆನ್ನುವರಿಗೆ ಕೊಟ್ಟುಬಿಡುವಂತೆ ಹೇಳಿಕಳುಹಿದಳು. ಆ ಮಗುವನ್ನೆತ್ತಿಕೊಂಡು ಬರುತ್ತಿರುವ ಕೇರಿಯಲ್ಲಿ ಇದಿರಾಗಿ ಬರುತ್ತಿದ್ದ ಶಂಖನು ಕಾರುಣ್ಯದಿಂದ ಅದು ಯಾರ ಮಗುವೆಂದು ಕೇಳಲು ಆ ದಾದಿಯು ನಿಜಾಂಶವನ್ನು ಹೇಳಿದಳು. ಅದನ್ನು ಕೇಳಿ ಮರುಕದಿಂದ ಶಂಖನು ಮಗುವನ್ನು ತನ್ನ ಕೈಗೆ ತೆಗೆದುಕೊಂಡು ಬಂದು ತನ್ನ ತಾಯಿ ಬಂಧುಮತಿಗೆ ಕೊಟ್ಟನು. ಆಕೆಯು ಆ ಮಗುವಿಗೆ ನಿರ್ವಾಮಿಕನೆಂದು ಹೆಸರನ್ನಿಟ್ಟು ಸಾಕುತ್ತಿದ್ದಳು.

ಇತ್ತ ಗಂಗದೇವನು ಒಂದುದಿನ ಅವಧಿಜ್ಞಾನಸಂಪನ್ನರಾದ ಮುನಿಗಳ ಬಳಿಗೆ ಹೋಗಿ ನಮಸ್ಕರಿಸಿ ನಿರ್ವಾಮಿಕನನ್ನು ಆತನ ತಾಯಿಯು ಮುನಿಯಲು ಕಾರಣವೇನೆಂದು ಕೇಳಿದನು. ಅಡಕ್ಕಾ ಮುನಿಗಳು " ಸೌರಾಷ್ಟ್ರದೇಶದ ಗಿರಿನಗರದ ದೊರೆಯಾದ ಘನರಥನು ತನ್ನ ಪತ್ನಿ ಕನಕಮಾಲೆಯೊಡನೆ ಸುಖವಾಗಿದ್ದನು. ಆತನಿಗೆ ಅಮೃತರಸಾಯನನೆಂಬೋರ್ವ ಬಾಣಸಿಗನಿದ್ದನು. ಒಂದುದಿನ ಆತನು ಮಾಂಸವನ್ನು ಬೇಯಿಸಿ ದೊರೆಗೆ ಬಡಿಸಲು ಅದು ಸವಿಯಾಗಿದ್ದುದರಿಂದ ದೊರೆಯು ಮೆಚ್ಚಿ ಆವನಿಗೊಂದು ಗ್ರಾಮವನ್ನು ಕೊಟ್ಟು ಅವನು ಬೇಯಿಸಿದ ಮಾಂಸದ ಸವಿಯಾದ ಆಹಾರವನ್ನು ಭುಂಜಿಸುತ್ತ ಸುಖವಾಗಿದ್ದನು. ಒಂದು ದಿನ ಅಲ್ಲಿಗೆ ಸುಧರ್ಮರೆಂಬ ಮುನೀಶ್ವರರು ಬಂದು ಆ ದೊರೆಗೆ ಸದ್ಧರ್ಮವನ್ನು ಪದೇಶಿಸಲು ಅವನು ವೈರಾಗ್ಯವನ್ನು ಹೊಂದಿ ತನ್ನ ಮಗನಾದ ಚಿತ್ರರಥನಿಗೆ ರಾಜ್ಯಭಾರವನ್ನು ವಹಿಸಿ ತಾನು ದೀಕ್ಷೆಯನ್ನು ಪಡೆದನು. ಬಳಿಕ ಚಿತ್ರರಥನು ಉತ್ತಮವಾದ ವ್ರತವನ್ನು ಕೈಕೊಂಡು ಆ ಬಾಣಸಿಗನ ಗ್ರಾಮವನ್ನು ಕಿತ್ತುಕೊಂಡನು. ಅವನು " ಈ ಸವಣನ ದೆಸೆಯಿಂದ ನನ್ನ ಉಂಬಳಿಯು ತಪ್ಪಿಹೋಯ್ತು " ಎಂದು ಕಡುನೊಂದು ಕಪಟಭಾವದಿಂದ ಆ ಸುಧರ್ಮಮುನೀಶ್ವರರ ಬಳಿಗೆ ಹೋಗಿ ಕಾಲಿಗೆ ನಮಸ್ಕಾರಮಾಡಿ " ಎಲೈ ಮುನಿಪತಿಯೆ! ಶ್ರೇಷ್ಠವಾದ ವ್ರತವನ್ನು ನನಗೆ ದಯಪಾಲಿಸು " ಎಂದು ಹೇಳಿ ಅಹಿಂಸಾವ್ರತವನ್ನು ಕೈಕೊಂಡನು. ಹೀಗೆ ಕಪಟಾಚರಣೆಯಲ್ಲಿದ್ದ ಬಾಣಸಿಗನು ಒಂದು ದಿನ ಆ ಮುನಿಯು ಪಾರಣೆಗೆ ಬರುತ್ತಿರುವುದನ್ನು ಕಂಡು ಕುಟಿಲಪ್ರೀತಿಯಿಂದ ಅವರನ್ನು ನಿಲ್ಲಿಸಿ ವಿಷಮಿಶ್ರವಾದ ಆಹಾರವನ್ನು ಕೊಟ್ಟನು. ಅದನ್ನುಂಡು ಮುನಿಯು ಕೂಡಲೆ ಮೃತನಾಗಿ ಸ್ವರ್ಗ

ದಲ್ಲಿ ದೀಪನಾದನು. ಮುನಿಯನ್ನು ಕೊಲೆಮಾಡಿದ ವಿಷಯವು ರಾಜನಿಗೆ ತಿಳಿದು ಆತನು ಆ ಬಾಣಸಿಗನನ್ನು ಕೊಲ್ಲಿಸಲು ಸತ್ಯು ಕ್ರಮವಾಗಿ ಎಲ್ಲಾ ನರಕಗಳಲ್ಲಿಯೂ ಹುಟ್ಟಿ ಕಡುಕಷ್ಟವನ್ನನುಭವಿಸಿ ದುರಿತೋಪಶಮದಿಂದ ಆರ್ಯಖಂಡದ ಮಲಯ ದೇಶದ ಪಲಾಶಕೂಟವೆಂಬ ಹಳ್ಳಿಯಲ್ಲಿ ಯಕ್ಷದೇವನೆಂಬ ಶೂದ್ರನಿಗೂ ಆತನ ಪತ್ನಿ ಯಕ್ಷದತ್ತೆಯೆಂಬವಳಿಗೂ ಹುಟ್ಟಿದ ಯಕ್ಷಿಳನೆಂಬವನಿಗೆ ಯಕ್ಷದತ್ತನೆಂಬ ತಮ್ಮನಾಗಿ ಹುಟ್ಟಿದನು. ಆ ಸಹೋದರರೊಂದುದಿನ ಬತ್ತದ ಪೈರನ್ನು ನೋಡುವೆವೆಂದು ಬಂಡಿಯನ್ನೇರಿ ಬರುತ್ತ ಯಕ್ಷದತ್ತನು ತನ್ನ ಬಂಡಿಯನ್ನು ಒಂದು ಹೆಣ್ಣು ಹಾವಿನ ಮೇಲೆ ಹಾಯಿಸಿ ಕೊಂದನು. ಅದು ಸತ್ಯು ಶ್ವೇತಪುರಾಧಿಪತಿಯಾದ ವಾಸವನಿಗೂ ಆತನ ಸತಿ ವಸುದೇವಿಗೂ ನಂದಯಶೆಯೆಂಬ ಮಗಳಾಗಿ ಜನಿಸಿ ನಿನಗೆ—ಗಂಗದೇವನಿಗೆ ಪತ್ನಿಯಾದಳು. ಅತ್ತ ತಮ್ಮನು ಕೋಪದಿಂದ ಹೆಣ್ಣು ಹಾವನ್ನು ಕೊಂದುದನ್ನು ನೋಡಿ ಯಕ್ಷಿಳನು "ಎಲೈ ತಮ್ಮನೆ! ಈದಿನ ನೀನು ನಿರಪರಾಧಿಯಾದ ಹಾವನ್ನು ಕೊಂದುದು ಯೋಗ್ಯವೇ?" ಎಂದು ಕೇಳಿ ಅವನಿಗೆ ಹಿತವನ್ನು ಬೋಧಿಸಲು ಅದನ್ನು ಕೇಳಿ ಯಕ್ಷದತ್ತನು ಕರುಣಾರ್ದ್ರಹೃದಯನಾಗಿ ಕೆಲವು ದಿನವಿದ್ದು ಮರಣವನ್ನು ಹೊಂದಿ ನಿನಗೆ—ಗುಗದೇವನಿಗೆ ಈ ನಂದಯಶೆಯಲ್ಲಿ ನಿರ್ಮಾಮಿಕನೆಂಬ ಮಗನಾಗಿ ಜನಿಸಿದನು. ಈಕೆಯು ಪೂರ್ವಜನ್ಮವೈರದಿಂದ ಆತನಮೇಲೆ ಕೋಪಿಸಿದಳು," ಎಂದು ಹೇಳಲು ಗಂಗದೇವನು ಆ ಮುನಿಯ ಮಾತನ್ನು ಕೇಳಿ ವೈರಾಗ್ಯದಿಂದ ತನ್ನ ಆರುಮಂದಿ ಮಕ್ಕಳೂ ಶಂಖಿನಿರ್ಮಾಮಿಕರೂ ಸಮೇತನಾಗಿ ದೀಕ್ಷೆಯನ್ನು ತೆಗೆದುಕೊಂಡನು. ಇತ್ತ ನಂದಯಶೆಯೂ ರೇವತಿ—ದಾದಿಯೂ ದೀಕ್ಷೆಯನ್ನು ತೆಗೆದುಕೊಂಡು ಮುಂದಿನ ಭವದಲ್ಲಿಯೂ ಆ ಆರುಮಂದಿಗಳು ತನಗೆ ಮಕ್ಕಳಾಗಬೇಕೆಂದು ನಂದಯಶೆಯೂ ಆ ಆರುಮಂದಿಗಳನ್ನು ತಾನು ಆರೈಕೆಮಾಡಬೇಕೆಂದು ರೇವತಿಯೂ ನಿದಾನಶಲ್ಯವನ್ನು ಮಾಡಿ ಸನ್ಯಸನವಿಧಿಯಿಂದ ಮಡಿದು ಹದಿನಾರನೆಯ ಸ್ವರ್ಗದಲ್ಲಿ ಹುಟ್ಟಿ ಉತ್ತಮಸುಖವನ್ನನುಭವಿಸಿ ಬಂದು ನಂದಯಶೆಯು ದೇವಸೇನನ ಮಗಳಾಗಿ ಜನಿಸಿ ಸುಂದರಿಯಾದ ದೇವಕಿಯೆಂಬ ಹೆಸರನ್ನು ಪಡೆದು ವಸುದೇವಾ! ನಿನಗೆ ಪತ್ನಿಯಾದಳು. ರೇವತಿಯೂ ಅದೇ ಸ್ವರ್ಗದಲ್ಲಿ ಹುಟ್ಟಿ ಅಲ್ಲಿಂದ ಬಂದು ಮಲಯದೇಶದ ಭದ್ರಿಳವೆಂಬ ನಗರದಲ್ಲಿ ಸುದೃಷ್ಟಿಯೆಂಬ ವರ್ತಕನಿಗೆ ಅಳಕೆಯೆಂಬ ಪತ್ನಿಯಾದಳು. ಅತ್ತ ಶಂಖಮುನಿಯು ಸತ್ಯು ಮಹಾಶುಕ್ರವೆಂಬ ಸ್ವರ್ಗದಲ್ಲಿ ಹುಟ್ಟಿ ಅಲ್ಲಿಂದ ಬಂದು ಬಲರಾಮನಾಗಿ ಹುಟ್ಟಿದನು. ಆ ಗಂಗದೇವನ ಆರುಮಂದಿ ಮಕ್ಕಳು

ನ್ನು ಮಾಡಿ ಸತ್ತು ಅದೇ ಸ್ವರ್ಗದಲ್ಲಿ ಹುಟ್ಟಿ ಸುಖವನ್ನುಂಡುಬಂದು ನಿನಗೆ (ವಸುದೇವನಿಗೆ) ಮೂರುಸರ್ತಿ ಎರಡೆರಡು—ಆರಳಿ ಮಕ್ಕಳಾಗಿ ಜನಿಸುವರು. ಆ ಮಕ್ಕಳನ್ನು ದೇವೇಂದ್ರನ ಅಪ್ಪಣೆಯಿಂದ ನೈಗಮದೇವನು ಎತ್ತಿಕೊಂಡು ಹೋಗಿ ಅಳಕೆಯ ಬಳಿಯಲ್ಲಿರಿಸುವನು. ಆಕೆಯು ಹೆರುವ ಅರ್ಧಾಯುಷ್ಯದ ಮಕ್ಕಳನ್ನು ದೇವಕಿಯ ಮುಂದಿರಿಸಲು ಅವುಗಳನ್ನು ಕಂಸನು ಕೊಲ್ಲಿಸುವನು. ಅತ್ತ ಆಳಕೆಯು ಸಾಕುವ ಆರು ಮಂದಿ ಮಕ್ಕಳು ದೀಕ್ಷೆಯನ್ನು ಪಡೆದು ಮುಕ್ತರಾಗುವರು ಆ ನಿರ್ಣಾಮಕನಾಗಿದ್ದ ದೇವನು ದೇವಕಿಯ ಗರ್ಭದಲ್ಲಿ ಜನಿಸಿ ಏಳು ತಿಂಗಳಲ್ಲಿ ಹುಟ್ಟಿ ಬೇರೊಂದೆಡೆಯಲ್ಲಿ ಬೆಳೆದು ಅರ್ಧಚಕ್ರಿಯಾಗಿ ಮೆರೆವನು. ಇದು ವೃಷಭತೀರ್ಥಂಕರರು ಭರತಚಕ್ರವರ್ತಿಗೆ ಹೇಳಿದ ಮಾತು. ಇದನ್ನು ನೀನು ನಂಬು" ಎಂಬುದಾಗಿ ಆ ಮುನಿಪತಿಯು ಹೇಳಲು ಮುನಿಗಳು ಸಾರ್ಥಕವಾದ ವಚನವುಳ್ಳವರೆಂದು ವಸುದೇವನು ತನ್ನ ಪತ್ನಿಯೊಡನೆ ಮುನಿಗೆರಗಿ ಬೀಳ್ಕೊಂಡು ಮನೆಗೆಹೋದನು.

೧೫. ಕೃಷ್ಣೋದಯವರ್ಣನೆಸಂಧಿ

ದೇವಕಿಯು ಗರ್ಭವು ಬೆಳೆದು ಏಳುತಿಂಗಳಾದಾಗ ಕಂಸನು ತನ್ನ ಮನೆಗೆ ಕರೆದೊಯ್ದನು. ಒಂಬತ್ತನೆಯ ತಿಂಗಳಲ್ಲಿ ಆಕೆಯು ಅವಳಿಮಕ್ಕಳನ್ನು ಪಡೆದಳು. ಮುನಿವಾಕ್ಯದಂತೆ ನೈಗಮದೇವನು ಬಂದು ದೇವಕಿಗೆ ಮಾಯಾನಿದ್ರೆಯನ್ನು ಬರಿಸಿ ತಾನು ತಂದ ಅಳಕೆಯ ಶಿಶುಗಳನ್ನು ಅಲ್ಲಿರಿಸಿ ಆಕೆಯ ಶಿಶುಗಳನ್ನು ಅಳಕೆಯ ಬಳಿಗೊಯ್ದುಬಿಟ್ಟನು ಆಗ ಕಂಸನು ಬಂದು ಸೂಲಗಿತ್ತಿಗೆ ಗುಟ್ಟಾಗಿ ಹೇಳಿ ಆ ಅರ್ಧಾಯುಷ್ಯದ ಶಿಶುಗಳ ಕೊರಳ್ಗುಗಳನ್ನು ಮುರಿಸಿ ಬಹಿರಂಗದಲ್ಲಿ ದುಃಖವನ್ನು ತೋರಿಸಿ ದೇವಕಿಯನ್ನು ಸಂತೈಸುತ್ತ ಸುಖದಿಂದಿದ್ದನು. ಹೀಗೆ ಮೂರಾವರ್ತಿಯೂ ಅವಳಿಮಕ್ಕಳನ್ನು ಕೊಲ್ಲಿಸಿ ಕಂಸನು ಮುನಿವಚನವನ್ನು ಗೆದ್ದೆನೆಂದು ನಿಶ್ಚಿಂತನಾಗಿದ್ದನು. ಒಂದುದಿನ ದೇವಕಿಯು ಋತುಮತಿಯಾಗಿ ಸ್ನಾನ್ನೀರನ್ನು ವಿಂದು ಅಲಂಕೃತಳಾಗಿ ರಾತ್ರಿಯಲ್ಲಿ ಪತಿಯೆಡೆಗೈದಿ ರತಿಸುಖವನ್ನನುಭವಿಸಿ ನಿದ್ರಾಮುದ್ರಿತಳಾಗಿರಲು ಬೆಳಗಿನ ಜಾವದಲ್ಲಿ ಸೂರ್ಯ, ಚಂದ್ರ, ಆನೆಯುಮರಿ, ಸಿಹ್ಮ, ಚಕ್ರ ಇವುಗಳನ್ನು ಕನಸಿನಲ್ಲಿ ಕಂಡು ಬೆಳಿಗ್ಗೆ ಎದ್ದು ಮುಖಪ್ರಕ್ಷಾಲನಾದಿಗಳನ್ನು ತೀರಿಸಿಕೊಂಡು ಪತಿಯ ಬಳಿಗೆ ಹೋಗಿ ತಾನು ಕಂಡ ಕನಸುಗಳನ್ನು

ಹೇಳಲು ವಸುದೇವನು "ಆ ಕನಸುಗಳನ್ನು ಕಂಡ ಫಲದಿಂದ ನಿನಗೆ ವಿಕ್ರಮಿಯಾದ ಬಾಲಕನು ಜನಿಸುವನು" ಎಂದನು. ಆ ಮಾತನ್ನು ಕೇಳಿ ದೇವಕಿಯು ಸಂತೋಷಚಿತ್ತಳಾಗಿರಲು ಆ ನಿರ್ಜಾಮಿಕನಾಗಿದ್ದ ದೇವನು ಬಂದು ಆಕೆಯ ಗರ್ಭದಲ್ಲಿ ಉದ್ಭವಿಸಿ ದಿನಕ್ರಮದಿಂದ ಬೆಳೆದು ಏಳನೆಯ ತಿಂಗಳಲ್ಲಿ ಉತ್ತಮ ಲಗ್ನದಲ್ಲಿ ಅಷ್ಟಮಿಯ ಅರ್ಧರಾತ್ರಿಯಲ್ಲಿ ಜನಿಸಿದನು. ಆಗ ಆಕಾಶದಲ್ಲಿ ಗುಡುಗಿನ ಧ್ವನಿಯಾಗಿ ಮೋಡವು ಆವರಿಸಿ ಸೋನೆಯು ಸುರಿಯಲಾರಂಭಿಸಿದುದು. ವಸುದೇವನು ಬಂದು ಶಿಶುವನ್ನು ನೋಡಿ ಆ ಪಾಪಿ ಕಂಸನು ಮೊದಲಿನ ಮಕ್ಕಳನ್ನು ಕೊಲ್ಲಿಸಿದಂತೆ ಈ ಶಿಶುವನ್ನೂ ಕೊಲ್ಲಿಸುವನೆಂದು ಬಗೆದು ಮರುಕದಿಂದ ಶಿಶುವನ್ನೆತ್ತಿಕೊಂಡು ಮನೆಯಿಂದ ಹೊರಟು ಬರುವಾಗ ಬಲರಾಮನು ಶಿಶುವಿಗೆ ಕೊಡೆಯನ್ನು ಹಿಡಿದುಕೊಂಡುಬಂದನು. ಈರ್ವರೂ ಪುರದ್ವಾರಕ್ಕೆ ಬಂದು ಬಾಗಿಲು ಮುಚ್ಚಿರುವುದನ್ನು ಕಂಡು, ಮುಂದಕ್ಕೆ ಹೋಗುವ ದಾರಿಯನ್ನು ಕಾಣದೆ ಚಿಂತಿಸುತ್ತಿರಲು ಆ ಪುಣ್ಯಶಿಶುವಿನ ಕಾಲಿನ ಕಾಂತಿಯು ಸೋಂಕಿದೊಡನೆಯೇ ಬಾಗಿಲು ತೆರೆಯಲ್ಪಟ್ಟಿತು. ಮಗುವಿನ ಪುಣ್ಯಪ್ರಭಾವಕ್ಕೆ ಅವರು ಅಚ್ಚರಿವಟ್ಟು ಅಲ್ಲಿಂದ ಹೊರಹೊರಟು ಕತ್ತಲೆಯಲ್ಲಿ ದಾರಿಗಾಣದೆ ಚಿಂತಿಸುತ್ತಿರಲು ಮಗುವಿನ ಪುಣ್ಯದೇವತೆಯು ವೃಷಭಾಕಾರವನ್ನು ಧರಿಸಿ ತನ್ನ ಎರಡು ಕೊಂಬುಗಳಲ್ಲಿ ಪ್ರಜ್ವಲಿಸುವ ದೀವಿಗೆಗಳನ್ನು ನಿರ್ಮಿಸಿಕೊಂಡು ಮುಂದೆ ನಡೆಯಿತು. ಅದನ್ನು ಹಿಂಬಾಲಿಸಿ ವಸುದೇವ ಬಲರಾಮರು ಹೋಗುತ್ತ ಮುಂದೆ ಯಮುನಾನದಿಯು ತುಂಬಿ ಹರಿಯುತ್ತಿರುವುದನ್ನು ಕಂಡು ಅದನ್ನು ಹೇಗೆ ದಾಟುವುದೆಂದು ಚಿಂತಿಸುತ್ತಿರುವಾಗ ಆ ಎತ್ತು ಮುಂದಾಗಿ ಹೊಳೆಗೆ ಇಳಿಯಲು ಕಟ್ಟಿಯನ್ನು ಹಾಕಿದಂತೆ ಎರಡು ಕಡೆಗಳಲ್ಲಿಯೂ ನೀರು ತಡೆಯಲ್ಪಟ್ಟು ಮಧ್ಯದಲ್ಲಿ ದಾರಿಯಾಯ್ತು. ಅದನ್ನು ಬೆಂಬಿಡದೆ ವಸುದೇವ ಬಲರಾಮರು ನದಿಯನ್ನು ದಾಂಟಿ ಕೆಲವು ದೂರ ನಡೆದು ಒಂದು ಯಕ್ಷಿಯ ಮಂದಿರದ ಬಳಿಗೆ ಹೋದರು. ಅಲ್ಲಿ ಆ ವೃಷಭವು ಅದೃಶ್ಯವಾಯ್ತು. ವಸುದೇವ ಬಲರಾಮರು ಆ ಯಕ್ಷಿಯ ಮಂದಿರಕ್ಕೆ ಪ್ರವೇಶಿಸಿದರು. ಆಗ ನಂದನೆಂಬವನು ಕೈದೀವಿಗೆಯನ್ನು ಹಿಡಿದುಕೊಂಡು ಆ ಮಂದಿರಕ್ಕೆ ಬರುತ್ತಿರಲು ಕಂಸನು ಬಂದನೆಂದಂಜಿ ಅವರೀರ್ವರೂ ದೇವಿಯ ವಿಗ್ರಹದ ಹಿಂದೆ ಅಡಗಿಕೊಂಡರು. ಆಗ ನಂದನು ಒಂದು ಹೆಣ್ಣುಗೂಸನ್ನು ತಂದು ದೇವಿಯ ಮುಂದೆ ನಿಂತು ಕೋಪದಿಂದ "ಎಲೆ ದೇವಿ! ನನಗೆ ಗಂಡು ಮಗುವನ್ನು ಕೊಡುವೆನೆಂದು ನಂಬಿಸಿ ಬಹುದಿನಗಳವರೆಗೆ ಹಲವು ಪೂಜೆಗಳನ್ನು ಮಾಡಿಸಿಕೊಂಡು ಹರ

ಕೆಯ ಹಣವನ್ನು ತೆಗೆಯಿಸಿ ಈಗ ನನ್ನ ಹೆಂಡತಿ ಗೋಪಿಗೆ ಗಂಡುಮಕ್ಕಳ ವರವನ್ನು ಕೊಡದೆ ಹೆಣ್ಣು ಮಗುವನ್ನು ನೀನು ಕೊಡಬಹುದೇ? ನೀನು ಕೊಟ್ಟಿರುವ ಪೀಡೆಯನ್ನು ನೀನೇ ತೆಗೆದುಕೊ'' ಎಂದು ಆ ಕೂಸನ್ನಿರಿಸಿ ಹೊರಡುವಾಗ ವಸುದೇವನು ತನ್ನ ಗಂಡುಮಗುವನ್ನು ಅಲ್ಲಿರಿಸಿ ಆ ಹೆಣ್ಣುಗೂಸನ್ನು ತೆಗೆದುಕೊಂಡು ಬಲರಾಮನ ಕೈಗೆ ಕೊಟ್ಟು ಮಂದಿರದ ಬಾಗಿಲಿಗೆ ಹೋಗಿ ''ಎಲೆ ಗೋಪ! ನಿನಗೊಂದು ಗಂಡುಮಗುವನ್ನು ನಾನು ಒಲಿದು ಕೊಡುವೆನು, ಹಿಂದಿರುಗು'' ಎನಲು ಅವನು ತಿರಿಗಿ ಬಂದು ನೀಲದ ಬೊಂಬೆಯಂತಿರುವ ಮಗುವನ್ನೆತ್ತಿಕೊಂಡು ದೇವಿಯು ವರವನ್ನಿತ್ತಳೆಂದು ವಂದಿಸಿ ಮನೆಗೆ ಬಂದು ಗೋಪಿಯನ್ನು ಕುರಿತು ''ಯಕ್ಷಿಯು ಪ್ರತ್ಯಕ್ಷಳಾಗಿ ನನ್ನನ್ನು ಕರೆದು ಈ ಗಂಡುಮಗುವನ್ನು ಕೊಟ್ಟಳು. ಲೋಕದಲ್ಲಿ ನಮ್ಮಂತಹ ಪುಣ್ಯವಂತರುಂಟೇ? ಪ್ರೀತಿಯಿಂದ ಮಗುವನ್ನು ತೆಗೆದುಕೊ'' ಎಂದು ಆನಂದದಿಂದ ಕೊಡಲು ಆಕೆಯು ತೆಗೆದುಕೊಂಡು ಸಂತೋಷ ಪರವಶಳಾದಳು. ಆ ಮಗುವು ಕೃಷ್ಣಯಕ್ಷಿಯ ವರದಿಂದ ಪ್ರಾಪ್ತವಾದುದೆಂದು ಅದಕ್ಕೆ ನಂದನು ''ಕೃಷ್ಣ'' ಎಂದು ಹೆಸರನ್ನಿಟ್ಟನು.

ಇತ್ತ ವಸುದೇವನು ಆ ಹೆಣ್ಣುಮಗುವನ್ನು ತಂದು ದೇವಕಿಗಿತ್ತು ಆ ವಿಷಯವನ್ನೆಲ್ಲ ಹೇಳಿದನು. ಏಳು ತಿಂಗಳಲ್ಲಿ ದೇವಕಿಯು ಹೆಣ್ಣುಮಗುವನ್ನು ಹೆತ್ತಳೆಂದು ಕೇಳಿ ಕಂಸನು ಆ ಹೆಣ್ಣಿನ ಗಂಡನ ದೆಸೆಯಿಂದ ತನಗೆ ಕೇಡೊದಗುವುದೆಂದು ಬಗೆದು ಗುಟ್ಟಾಗಿ ಅದರ ಮೂಗನ್ನೊತ್ತಿಸಿದನು. ಆ ಮಗುವು ಬೆಳೆದು ಯೌವನವಾಂತು ತನ್ನ ವಿಕಾರಕ್ಕೆ ತಾನೇ ಹೇಸಿ ತಾಪಸರೂಪವನ್ನು ಧರಿಸಿ ವಿಂಧ್ಯಪರ್ವತದಲ್ಲಿ ತಪಸ್ಸನ್ನು ಮಾಡಿ ಮಡಿದು ದೇವಲೋಕದಲ್ಲಿ ಹುಟ್ಟಿತು. ವಿಂಧ್ಯನ ವನಚರರು ಆ ತಪಸ್ವಿನಿಯ ರೂಪವನ್ನು ವಿಂಧ್ಯಾದೇವತೆಯೆಂದು ಪೂಜಿಸುತ್ತಾರೆ.

ಇತ್ತ ಕಂಸನ ಮನೆಯಲ್ಲಿ ಕನ್ನೆತ್ತರಿನ ಹನಿಗಳು ಸುರಿದುವು. ಸತ್ತಿಗೆಯು ಮುರಿದುದು, ಗದ್ದುಗೆಯು ಅದುರಿತು. ಹಗಲಿನಲ್ಲಿ ಉಳ್ಕಾಪಾತವಾಯ್ತು, ಮನೆಯ ದೇವತೆಗಳು ಅತ್ತವು, ಖಡ್ಗಗಳ ಮೊನೆಯಲ್ಲಿ ಬೆಂಕಿಯು ಕಿಡಿಗಳು ಸೂಸಿದುವು, ಭೂಕಂಪವಾಯ್ತು. ಆ ಅಪಶಕುನಗಳನ್ನು ಕಂಡು ಕಂಸನು ಭೀತನಾಗಿ ಓರ್ವ ಶಕುನಿಗನನ್ನು ಕರೆಯಿಸಿ ಆ ಉತ್ಪಾತಗಳಿಗೆ ಕಾರಣವೇನೆಂದು ಕೇಳಲು ಅವನು 'ರಾಜನೆ! ಈ ಭೂಮಿಯಲ್ಲಿ ನಿನಗೆ ಬಹು ಪರಾಕ್ರಮಿಯಾದ ಓರ್ವ ಶತ್ರುವು ಬೆಳೆಯುತ್ತಿದ್ದಾನೆ' ಎಂದನು. ಆ ಮಾತನ್ನು ಕೇಳಿ ಚಿಂತೆಯೊಳಿರುವಾಗ ಆ

ಹಿಂದಿನ ಭವದಲ್ಲಿ ಮುನಿಯಾಗಿದ್ದಾಗ ಬಂದೊದಗಿದ್ದ ದೇವತೆಗಳು ಬಂದು ತಮ್ಮಿಂ
ದೇನಾಗಬೇಕೆಂದು ಕೇಳಲು ಕಂಸನು ತನಗೋರ್ವ ಶತ್ರುವು ಬೆಳೆಯುತ್ತಿರುವ
ನೆಂದೂ ಅವನನ್ನು ಕೊಲ್ಲಬೇಕೆಂದೂ ಹೇಳಿದನು. ಆ ಮಾತನ್ನು ಕೇಳಿ ಆ ಏಳು
ದೇವತೆಗಳೂ ವಿಭಂಗವೊಂಬ ಜ್ಞಾನದಿಂದ ಕೃಷ್ಣನಿರುವ ಸ್ಥಳವನ್ನು ತಿಳಿದು ಒಂ
ದೊಂದೇ ದೇವತೆಯು ಹೋಗಿ ಕೊಲ್ಲಬಹುದೆಂದು ಯೋಚಿಸಿ ಮೊದಲು ಪೂತಿನಿ
ಯೆಂಬ ದೇವತೆಯು ಯಶೋದೆಯು ನೀರಿಗೆ ಹೋಗಿರುವ ಸಮಯದಲ್ಲಿ ಆಕೆಯ
ರೂಪವನ್ನು ಪಾರ್ವಡಿಸಿಕೊಂಡು ಹೋಗಿ ವಿಷವನ್ನು ತುಂಬಿದ ತನ್ನ ಮೊಲೆ
ಯನ್ನು ಆ ಮಗುವಿಗೆ ಕೊಡಲು ಅದು ಮೊಲೆಯನ್ನು ಕಚ್ಚಿ ವಿಷವನ್ನೂ ಬಿಸಿಯು
ರಕ್ತವನ್ನೂ ಹೀರಿದರೂ ಅದರ ಹಸಿವು ಹೋಗದೆ ಮತ್ತೆ ಹೀರುತ್ತಿರಲು ಪೂತಿನಿಯು
ಉಬ್ಬಸಗೊಂಡು ಮೊಲೆಯ ತೊಟ್ಟು ಕಿತ್ತು ಹೋಗುವಂತೆ ಎಳೆದು ಓಡಿಹೋದಳು
ಯಶೋದೆಯು ನೀರನ್ನು ತಂದು ಮನೆಯಲ್ಲಿ ರಕ್ತವು ಸುರಿದಿರುವುದನ್ನು ಕಂಡು
ಬೆದರಿ ತೊಟ್ಟಿಲ ಬಳಿಗೆ ಹೋಗಿ ಮಗುವಿನ ಬಾಯಲ್ಲಿದ್ದ ಮೊಲೆದೊಟ್ಟನ್ನೂ ಕೆನ್ನೆಗ
ಳಲ್ಲಿ ಸುರಿದ ರಕ್ತವನ್ನೂ ಕಂಡು ಮಗುವನ್ನೆತ್ತಿಕೊಂಡು ರಕ್ತವನ್ನು ತೊಳೆದು ಮೊಲೆ
ಯುಣಿಸಿ ಮುಖವನ್ನು ನೋಡಿ ಆ ಕೃಷ್ಣಯಕ್ಷಿಗೆ ಹರಕೆಯನ್ನು ಹೇಳಿ ಮಗು
ವನ್ನು ಸಂತೋಷದಿಂದ ಸಾಕುತ್ತಿದ್ದಳು. ಆಗ ಮಾಕಾಳಿಯೆಂಬ ಎರಡನೆಯ
ದೇವತೆಯು ಕಾಗೆಯ ಆಕಾರವನ್ನು ಧರಿಸಿಕೊಂಡು ಬಹುಕೋಪದಿಂದ ಕೃಷ್ಣನ
ಬಳಿಗೆ ಹೋಗಿ ಹರಿತವಾದ ಕೊಕ್ಕಿನಿಂದ ಕಣ್ಣುಗಳನ್ನು ಕುಕ್ಕಿತು. ಆಗ ಮಗುವು
ತನ್ನ ಎಡಗೈಯನ್ನು ಬೀಸಲು ಅದರ ರೆಕ್ಕೆಗಳು ಮುರಿದು ಕಾಕಾ ಎಂದು ಅರಚುತ್ತ ಆ
ರಕ್ಕಸಿಯು ಓಡಿಹೋದಳು. ಯಶೋದೆಯು ಮಗುವಿಗೆ ಎರಡನೆಯ ಕಂಟಕವು
ತಪ್ಪಿತೆಂದು ಸಂತೋಷದಿಂದಿದ್ದಳು. ಮಗುವು ಅಂಬೆಗಾಲಿಟ್ಟು ಹರಿದಾಡುವ ಸಮ
ಯದಲ್ಲಿ ಕೌಶಂಬಿಯೆಂಬ ಮೂರನೆಯ ರಕ್ಕಸಿಯು ಬಹು ಕೋಪದಿಂದ ಬಂದು
ಕತ್ತೆಯ ರೂಪವನ್ನು ಧರಿಸಿ ಮಗುವನ್ನು ಕಚ್ಚಿ ಕೊಲ್ಲುವೆನೆಂದು ಬಾಯನ್ನು
ತೆರೆಯುವಾಗ ಕೃಷ್ಣನು ತನ್ನ ಎರಡು ಕೈಗಳಿಂದ ಅದರ ತುಟಿಗಳನ್ನು ಸೀಳಿ
ಹಾಕಲು ಅದು ಅರಚುತ್ತ ಓಡಿಹೋಯ್ತು. ಮಗುವಿನ ಸಾಹಸವನ್ನು ನೋಡಿ
ಗೋಪಾಲರೆಲ್ಲ ಆಶ್ಚರ್ಯಪಟ್ಟರು. ಒಂದುದಿನ ಕೃಷ್ಣನು ಬಾಲದೊಡಿಗೆಗಳನ್ನು
ಧರಿಸಿಕೊಂಡು ಅಂಗಣದಲ್ಲಿ ಆಡುತ್ತಿರುವಾಗ ಪೃಥುಕೆಯೆಂಬ ನಾಲ್ಕನೆಯ ರಕ್ಕ
ಸಿಯು ಗಾಡಿಯ ಆಕಾರವನ್ನು ಧರಿಸಿಕೊಂಡು ಬಹು ಭಯಂಕರವಾಗಿ ಬಂದು
ಬಾಲಕೃಷ್ಣನನ್ನು ಇಟ್ಟಿಡೆಯಲ್ಲಿ ಸಿಲುಕಿಸಿ ಕೊಲ್ಲಬೇಕೆಂದು ಯತ್ನಿಸಲು ಅದನ್ನು

ಕೃಷ್ಣನು ತನ್ನ ಕಾಲಿನಿಂದ ಒದೆದು ಸುಚ್ಚು ಸೂರಾಗುವಂತೆ ಮಾಡಿದನು. ಆದರಿಂದ ಆ ರಕ್ಕಸಿಯೂ ಬೆಚ್ಚಿ ಮಾಯವಾಯ್ತು.

ದಿನಕ್ರಮದಿಂದ ಕೃಷ್ಣನು ಸುಡಿಗಲಿತು ತನ್ನ ಓರಗೆಯ ಮಕ್ಕಳೊಡನೆ ಮನೆಮನೆಗೆ ನುಗ್ಗಿ ಹಾಲುಬೆಣ್ಣೆಗಳನ್ನು ಮೆದ್ದು ತನ್ನ ಜತೆಗಾರರಿಗೂ ಮೆಲ್ಲಿಸಿ ಹಾವಳಿಯನ್ನು ಮಾಡುತ್ತಿರಲು ಅದನ್ನು ಸಹಿಸಲಾರದೆ ಗೋಪಿಕಾಸ್ತ್ರೀಯರು ಹೋಗಿ ಯಶೋದೆಗೆ ದೂರುಹೇಳಿದರು. ಆಗ ಯಶೋದೆಯು ಮಗುವನ್ನು ಎತ್ತಿಕೊಂಡು ಮುದ್ದಾಡಿ ಮೊಲೆಯುಣಿಸಿ ಬೆಣ್ಣೆಯನ್ನೂ ಕೆನೆಯನ್ನೂ ಕೊಟ್ಟು ಅತ್ತಿತ್ತ ಹೋಗಬೇಡವೆಂದರೂ ಕೇಳದಿರಲು ಹಿಡಿದು ಬೀಸುವ ಕಲ್ಲಿನ ಗೂಟಕ್ಕೆ ಕಟ್ಟಿಹಾಕಿದಳು. ಕೃಷ್ಣನು ಅದನ್ನು ಕಿತ್ತು ಅಂಗಣಕ್ಕೆ ಬರುವಾಗ ಅರ್ಜುನಿಯೆಂಬ ಐದನೆಯ ದೇವತೆಯು ಬಂದು ಒಂದೆಡೆಯಲ್ಲಿ ಎರಡು ಮತ್ತಿಯ ಮರವಾಗಿ ಕೃಷ್ಣನು ಬರುವ ದಾರಿಯ ಇಕ್ಕೆಲದಲ್ಲಿ ಬೆಳೆದು ಅವನನ್ನು ಇರುಂಕಿ ಕೊಲ್ಲಲು ಪ್ರಯತ್ನಿಸಿತು. ಆಗ ಕೃಷ್ಣನು ತನ್ನ ತೋಳುಗಳಿಂದ ಆ ಮರವನ್ನು ಹಿಗ್ಗಿಸಿ ಕಿತ್ತು ಬಿಸಾಡಲು ಆ ರಕ್ಕಸಿಯು ಗೋಳಿಡುತ ಮಾಯವಾಯ್ತು. ಬಳಿಕ ಮೊದಲಿನಂತೆ ಕೃಷ್ಣನು ತನ್ನ ಜತೆಗಾರರೊಡನೆ ಅಂಗಣದಲ್ಲಿ ಆಡುತ್ತಿರಲು ತಾಳಜಂಘೆಯೆಂಬ ಆರನೆಯ ದೇವತೆಯು ತಾಳೆಯ ಮರದ ಆಕಾರವನ್ನು ಧರಿಸಿಕೊಂಡು ಬಂದು ಕೃಷ್ಣನ ಮೇಲೆ ಗುಂಡುಗಳನ್ನು—ಫಲಗಳನ್ನು ಸುರಿಯಲು ಕೃಷ್ಣನು ಕೋಪಗೊಂಡು ಅದನ್ನು ತನ್ನ ಎಡದ ಕಾಲಿನಿಂದ ಒದೆಯಲು ಅದು ಗೋಳಿಡುತ ಓಡಿಹೋಯ್ತು. ಬಳಿಕ ಬಾಲಕೃಷ್ಣನು ಬಾಲಲೀಲೆಯಲ್ಲಿರಲು ಒಂದುದಿನ ಕೇಸರಿಯೆಂಬ ದೇವತೆಯು ಕುದುರೆಯ ರೂಪವನ್ನು ಧರಿಸಿಕೊಂಡು ಬಂದು ಅನೇಕರಿಗೆ ಗಾಯಪಡಿಸಿ ಕೃಷ್ಣನ ಬಳಿಗೆ ಬಂದು ಕಚ್ಚುವುದಕ್ಕೆ ಬಾಯನ್ನು ತೆರೆದಾಗ ತನ್ನ ಕೈಯಿಂದ ಬಾಯೊಳಗೆ ತಿವಿದು ಎರಡು ಕೈಗಳಿಂದ ಬಾಯನ್ನು ಸೀಳಲು ಆ ರಕ್ಕಸಿಯು ಓಡಿಹೋಯ್ತು. ಬಳಿಕ ಒಂದು ದಿನ ಯಶೋದೆಯು ಊರಲ್ಲಿ ಕೃಷ್ಣನ ಕಾಟವನ್ನು ತಡೆಯಲಾರದೆ ಗೋವುಗಳನ್ನು ಕಾಯುವುದಕ್ಕಾಗಿ ಹೋಗೆಂದು ಹೇಳಿ ಕಲಸುಗೂಳನ್ನು ಕಟ್ಟಿಕೊಟ್ಟು ಕಳುಹಿದಳು. ಕೃಷ್ಣನು ತನ್ನ ಓರಗೆಯ ಮಕ್ಕಳೊಡನೆ ಹೋಗಿ ಗೋವುಗಳನ್ನು ಮೇಯಿಸುತ್ತ ಕೊಳಲನ್ನೂದುತ್ತಿದ್ದನು. ದುಷ್ಟಮೃಗಗಳೂ ತಮ್ಮ ವೈರವನ್ನು ಬಿಟ್ಟು ಆ ಕೊಳಲಿನ ಧ್ವನಿಯನ್ನು ಕೇಳುತ್ತಿದ್ದುವು. ಕಾಡೆಮ್ಮೆ ಹುಲಿ ಆನೆ ಮೊದಲಾದ ದುಷ್ಟಮೃಗಗಳ ಲಕ್ಷ್ಯವನ್ನು ಮಾಡದೆ ಅವುಗಳಿಗೆ ಬಾಧೆಗೊಡುತ್ತಿದ್ದನು.

ಒಂದು ದಿನ ಅಲ್ಲಿಗೆ ಆ ಪೂತಿನಿ ಮೊದಲಾದ ಏಳು ದೇವತೆಗಳು ಬಂದು ತಮ್ಮ ಮಾಯೆಯಿಂದ ಮೋಡ ಸಿಡಿಲು ಗುಡುಗು ಮಿಂಚುಗಳನ್ನುಂಟುಮಾಡಿ ಏಳು ದಿನಗಳವರೆಗೆ ಹಗಲಿರುಳಿನ್ನದೆ ಜಲವೃಷ್ಟಿಯನ್ನೂ ಆಲಿಕಲ್ಲನ್ನೂ ಕಲ್ಲುಗುಂಡು ಗಳನ್ನೂ ಸುರಿಯುತ್ತಿರಲು ಕೃಷ್ಣನು ಗೋವರ್ಧನಪರ್ವತವನ್ನು ತನ್ನ ಬಾಹು ಗಳಿಂದೆತ್ತಿ ಎಡಗೈಯಲ್ಲಾಂತು ಗೋವುಗಳನ್ನೂ ಗೋಪಬಾಲಕರನ್ನೂ ರಕ್ಷಿಸಿದನು. ಅದನ್ನು ನೋಡಿ ಆ ದೇವತೆಗಳು ತಾವೇ ಬೀಸತ್ತು ಬಿಟ್ಟು ಹೋದುವು. ಆಕಾಶದಿಂದ ಪುಷ್ಪವೃಷ್ಟಿಯಾಯ್ತು; ದೇವದುಂದುಭಿಯು ಮೊಳ ಗಿದುದು. ಆಗ ಕೇಶವನು ಪರ್ವತವನ್ನು ಇಳುಹಲು ಆ ನಾಡುಬೀಡುಗಳ ಜನ ರೆಲ್ಲ ಬಂದು "ಲೋಕಕ್ಕೆ ನೀನೇ ಪರದೈವವು" ಎಂದು ಕೊಂಡಾಡಿ ಹರಿಯನ್ನು ಪೂಜಿಸಿದರು. "ಮಹಾಬಲಿಷ್ಠನಾದ ಇವನು ಯಾರದೆಸೆಯಿಂದಲೂ ಚ್ಯುತ ನಾಗುವವನಲ್ಲ" ಎಂದು ಆಗ ಲೋಕದ ಜನರು ಅವನಿಗೆ "ಅಚ್ಯುತ" ನೆಂದು ಹೆಸರನ್ನಿಟ್ಟರು.

೧೬. ಕಂಸವಧ ಸಂಧಿ.

ಪುತ್ರನ ಪ್ರಖ್ಯಾತಿಯನ್ನು ಕೇಳಿ ದೇವಕಿಯು ಬಹು ಸಂತೋಷಪಟ್ಟು ಅತನನ್ನು ನೋಡಬೇಕೆಂದು ಗುಪ್ತವಾಗಿ ಪತಿಯಲ್ಲಿಯೂ ಬಲರಾಮನಲ್ಲಿಯೂ ಪ್ರಸ್ತಾವಿಸಲು ಅವರು ದೇವಕಿಯು ಗೋಮುಖಿಯೆಂಬ ನೋಂಪಿಯನ್ನು ಮಾಡ ಬೇಕೆಂದು ನೆವವನ್ನು ಮಾಡಿಕೊಂಡು ಸೈನ್ಯಸಮೇತರಾಗಿ ಹೊರಟು ಗೋಕುಲಕ್ಕೆ ಹೋಗಿ ನಂದಗೋಪನನ್ನು ಕರೆಸಿ "ನಾಳೆ ಬೆಳಿಗ್ಗೆ ನಿನ್ನ ಪತ್ನಿಯರೆಲ್ಲರು ಬಂದು ಪೂಜೆಯನ್ನು ಮಾಡಿಸಬೇಕು" ಎಂದರು. ಅತನು ಸಂತೋಷದಿಂದ ಮನೆಗೆ ಬರಲು ಅತ್ತ ವಿಜಯಾರ್ಧಗಿರಿಯಲ್ಲಿ ಶಾಲ್ಮಲಿದತ್ತೆಯ ತಂದೆಯ ದಾಯಾದನು ಕೃಷ್ಣನಿಂದ ತನಗೆ ಆಪತ್ತುಂಟೆಂಬುದನ್ನು ಶಕುನಿಗರಿಂದ ತಿಳಿದು ಅವನನ್ನು ಕೊಲ್ಲ ಲೋಸುಗ ತನ್ನ ಅರಿಷ್ಟನೆಂಬೋರ್ವ ವೀರಖೇಚರನನ್ನು ಕರೆದು ಗೋಕುಲಕ್ಕೆ ಹೋಗಿ ಕೃಷ್ಣನನ್ನು ಕೊಂದುಬರುವಂತೆ ಹೇಳಿದನು. ಆ ಮಾತನ್ನು ಕೇಳಿ ಅರಿ ಷ್ಟನು ಭಯಂಕರವಾದ ವೃಷಭಾಕಾರವನ್ನು ಧರಿಸಿ ಗೋಪಾಲಕರುಗಳನ್ನು ಹಿಂಸಿ ಸುತ್ತ ಕೋಲಾಹಲವನ್ನು ಮಾಡುತ್ತಿರಲು ಅದನ್ನು ಕಂಡು ಕೃಷ್ಣನು ಇದಿ

ರ್ವಂದು ಎರಡು ಕೊಂಬುಗಳನ್ನು ಹಿಡಿದು ನೆಲಕ್ಕೊತ್ತಲು ಸಹಿಸಲಾರದೆ ಗೋಳಿಟ್ಟು ಆ ವೃಷಭವು ಮಾಯವಾಯ್ತು. ಅದನ್ನು ಕಂಡು ಗೋಪಾಲಕರೂ ನಂದಗೋಪನೂ ಬಹುಸಂತೋಷಪಟ್ಟರು. ಮರುದಿವಸ ದೇವಕೀವಸುದೇವರಿದ್ದ ಕೃಷ್ಣಯಕ್ಷ್ಮಿಯ ದೇವಾಲಯಕ್ಕೆ ಕೃಷ್ಣನು ಗೋಪಿಗೋಪರೊಡಗೂಡಿ ಬಹು ವೈಭವದಿಂದ ಬಂದನು. ಬಳಿಕ ದೇವಕಿಯು ಕೃಷ್ಣಯಕ್ಷ್ಮಿಯ ನೋಂಪಿಯನ್ನು ಮಾಡಿ ಸಂತುಷ್ಟಳಾಗಿ ನಂದಗೋಪನಿಗೆ ಉಡುಗರೆಯನ್ನೂ ಗೋಪಿಗೆ ರತ್ನಾಭರಣಗಳನ್ನೂ ಕೊಟ್ಟಳು. ಅವರ ಪಕ್ಕದಲ್ಲಿದ್ದ ಕೃಷ್ಣನನ್ನು ನೋಡಿ ವಸುದೇವನು "ಇವನು ಯಾರ ಮಗನು?" ಎಂದು ಕೇಳಲು ಅವರು ತಮ್ಮ ಮಗನೆಂದುತ್ತರವನ್ನಿತ್ತರು. ಆಗ ಕೃಷ್ಣನನ್ನು ಸಮೀಪಕ್ಕೆ ಕರೆದು ವಸುದೇವ ದೇವಕಿ ಬಲರಾಮರು ಬಹುಸಂತೋಷಪಟ್ಟು ಮೈದಡವಿ "ನಿಮ್ಮ ಮಗನು ಬಲುಜಾಣನು" ಎಂದು ಹೇಳಿ ವಸ್ತ್ರಾಭರಣಗಳಿಂದ ಅವನನ್ನು ಶೃಂಗರಿಸಿ ದೇವಕಿಯು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅಮರ್ದಪ್ಪಿ ಆನಂದಾಶ್ರುಗಳನ್ನು ಸುರಿದಳು. ತರುವಾಯ ಆ ನಂದಗೋಪನೂ ಗೋಪಿಯೂ ವಸುದೇವ ದೇವಕೀ ಬಲರಾಮರುಗಳಿಗೆ ಪೂತಿನಿ ಮೊದಲಾದ ದೇವತೆಗಳು ಕೃಷ್ಣನನ್ನು ಕೊಲ್ಲಲು ಬಂದಾಗ ಅವನು ಮಾಡಿದ ಸಾಹಸಕೃತ್ಯಗಳ ಗುರುತುಗಳನ್ನು ಒಂದೊಂದಾಗಿ ತೋರಿಸಲು ಅವರು ನೋಡಿ ಸಂತೋಷಪಟ್ಟು ಆ ಗೋಪಗೋಪಿಯರನ್ನು ಬೀಳ್ಕೊಟ್ಟು ತಾವು ಹಿಂದಿರುಗಿ ಹೊರಟರು. ದಾರಿಯಲ್ಲಿ ಬರುತ್ತ ಬಲರಾಮನು ತನ್ನ ಅತುಲಭುಜಬಲದಿಂದ ಒಂದು ದೊಡ್ಡ ಶಿಲೆಯನ್ನುರುಳಿಸಿ ಕೆತ್ತು ಬಿಸಾಟನು. ಆಗ ದೇವತೆಗಳು ಆಕಾಶದಿಂದ ಪುಷ್ಪವೃಷ್ಟಿಯನ್ನು ಮಾಡಿದರು. ಅದನ್ನು ಕಂಡು ಮಾತಾಪಿತೃಗಳು ಬಹಳ ಸಂತೋಷಪಡುತ್ತ ಮಧುರೆಗೆ ಬಂದು ಸುಖವಾಗಿದ್ದರು.

ಅತ್ತ ವಿಜಯಾರ್ಧಗಿರಿಯ ರಥನೂಪುರಚಕ್ರವಾಳವೆಂಬ ನಗರದ ಸುಕೇತುವೆಂಬ ದೊರೆಗೂ ಅತನ ಸತಿ ಸ್ವಯಂಪ್ರಭೆಗೂ ಸತ್ಯಭಾಮೆಯೆಂಬ ಮಗಳು ಹುಟ್ಟಿ ಬಹುರೂಪವತಿಯಾಗಿ ಬೆಳೆದು ಯೌವನದಶೆಯನ್ನು ಹೊಂದಿದಳು. ಒಂದು ದಿನ ತಂದೆಯು ಆಕೆಯ ಅತೀಕಾತಿಶಯವಾದ ಸೌಂದರ್ಯವನ್ನು ನೋಡಿ ಆಕೆಗೆ ಎಂತಹ ಗಂಡನಾಗುವನೆಂದು ಸಂಭಿನ್ನನೆಂಬ ಶಕುನಿಗನನ್ನು ಕೇಳಲು ಅವನು "ನಿನ್ನ ಶಸ್ತ್ರಶಾಲೆಯ ನಾಗಶಯ್ಯೆಯನ್ನು ಹತ್ತಿ ಈಶಾರ್ಜಿತನು ಸ್ಸನ್ನು ಹೆದೆಯೇರಿಸಿ ಈ ಶಂಖವನ್ನೂದುವವನೇ ಭರತಖಂಡಕ್ಕಧಿಪತಿಯಾಗುವನು. ಅವನೇ ನಿನ್ನ ಮಗಳಿಗೆ ಗಂಡನಾಗುವನು" ಎನಲು ಆ ಮಾತನ್ನು

ಕೇಳಿ ಸಂತುಷ್ಟನಾಗಿ ಆ ಜೀಜರನು ಭರತಖಂಡದಲ್ಲಿ ಕಂಸನೇ ಮಹಾವೀರನೆಂದು ಬಗೆದು ಅವನಲ್ಲಿಗೆ ಆ ಸರ್ಪಶಯ್ಯೆಯನ್ನೂ ಧನುಸ್ಸನ್ನೂ ಶಂಖವನ್ನೂ ತನ್ನ ಭೃತ್ಯರ ವಶದಲ್ಲಿ ಕೊಟ್ಟು ಕಳುಹಲು ಅವರು ಆ ದಿವ್ಯವಸ್ತುಗಳನ್ನು ಮಧುರಾ ನಗರದ ನಂದನವನದಲ್ಲಿರುವ ಜಿನಮಂದಿರದ ಮುಂಟಪಕ್ಕೆ ತಂದಿರಿಸಿ ಆ ವಿಷಯವನ್ನು ಕಂಸನಿಗೆ ತಿಳುಹಿದರು. ಅವನು ಓರ್ವ ತಳುನಿಗನನ್ನು ಕರೆಯಿಸಿ ಕೇಳಲು ಅವನು ಆ ವಸ್ತುಗಳನ್ನು ವಶಪಡಿಸಿಕೊಳ್ಳುವವನೇ ಸತ್ಯಭಾಮೆಗೆ ಪತಿಯಾಗುವನೆಂದೂ ಅವನಿಂದಲೇ ಕಂಸನಿಗೆ ಕೇಡಾಗುವುದೆಂದೂ ಹೇಳಿದನು. ಆ ಮಾತನ್ನು ಕೇಳಿ ಕಂಸನು ಸಂದೇಹಪಟ್ಟು ಆ ವಸ್ತುಗಳನ್ನು ಸಾಧಿಸುವವರಿಗೆ ಅವರು ಕೇಳಿದುದನ್ನು ಕೊಡುವೆನೆಂದು ಡಂಗುರ ಹೊಯಿಸಿದನು. ಅದನ್ನು ಗೋಕುಲದಲ್ಲಿ ಕೃಷ್ಣನು ತಡೆದು ತಾನು ಆ ವಸ್ತುಗಳನ್ನು ಸಾಧಿಸುವುದಾಗಿ ಹೇಳಿದನು. ಆ ವಾರ್ತೆಯನ್ನು ಕೇಳಿ ಕಂಸನ ಆಸ್ಥಾನದಲ್ಲಿದ್ದವರು ಕೃಷ್ಣನು ಸ್ತನ್ಯಪಾನಮಾಡುತ್ತಿದ್ದ ಕಾಲದಲ್ಲಿ ಮಾಡಿದ ಸಾಹಸಕಾರ್ಯ ಮೊದಲುಗೊಂಡು ಗೋವರ್ಧನಗಿರಿಯನ್ನೆತ್ತಿದಲ್ಲಿವರೆಗಿನ ಕಾರ್ಯಗಳನ್ನು ವರ್ಣಿಸಿ ಅತನಿಗೆ ಆ ಕಾರ್ಯವು ಅಸಾಧ್ಯವಲ್ಲವೆಂದು ಹೇಳಿದರು. ಕಂಸನು ಆ ಜೀಜರಭೃತ್ಯರನ್ನು ಕರೆದು ಮರುದಿನ ಪ್ರಾತಃಕಾಲದಲ್ಲಿ ಆ ವಸ್ತುಗಳನ್ನು ಸಿದ್ಧಪಡಿಸುವಂತೆ ಹೇಳಲು ಅದರಂತೆ ಅವರು ಸಿದ್ಧಪಡಿಸಿದರು. ಕಂಸನು ಸಾಮಂತರಾಜರುಗಳೊಡನೆ ಅಲ್ಲಿಗೆ ಹೋದನು. ಆ ದೈವಿಕವಾದ ವಾಸುಕಿಯು ಭಯಂಕರವಾಗಿ ಉಸುರಾಡಿ ವಿಷವನ್ನು ಕಾರುತ್ತಿರಲು ಅದನ್ನು ಕಂಡು ಸಭಿಕರೆಲ್ಲ ಹೆದರಿದರು. ಆಗ ಕೃಷ್ಣನು ಹೋಗಿ ಸರ್ಪಶಯ್ಯೆಯನ್ನು ಮೆಟ್ಟಿ ಅದನ್ನು ಹತ್ತಿ ಧನುಸ್ಸನ್ನು ಹೆದೆಯೇರಿಸಿ ಶಂಖವನ್ನೂದಿದನು. ಆ ವಸ್ತುಗಳನ್ನು ರಕ್ಷಿಸುತ್ತಿದ್ದ ದೇವತೆಗಳು ಸಂತೋಷದಿಂದ ಕೃಷ್ಣನನ್ನು ಪೂಜಿಸಿ ಹೊಗಳಿದುವು. ಬಳಿಕ ಕೃಷ್ಣನು ಗೋಕುಲಕ್ಕೆ ಹೋದನು. ಅವನು ಮಾಡಿದ ಸಾಹಸಕಾರ್ಯವನ್ನು ನೋಡಿ ಕಂಸನು ಕರುಬುತ್ತ ಅವನನ್ನು ಕೊಲಿಸಬೇಕೆಂದು ಬಗೆದನು. ಆ ವಿಷಯವನ್ನು ಬಲಭದ್ರನು ತಿಳಿದು ಗೋಕುಲಕ್ಕೆ ಹೋಗಿ ಸದಾ ತಮ್ಮನೊಡನಿದ್ದನು.

ಇತ್ತ ಕಂಸನು ಯಮುನಾನದಿಯ ಮಡುವಿನ ಸಹಸ್ರದಳಕಮಲವನ್ನು ತಂದುಕೊಡಬೇಕೆಂದು ನಂದಗೋಪನಿಗೆ ಹೇಳಿಕಳುಹಲು ಅವನು ಬಹು ಚಿಂತಾಕ್ರಾಂತನಾದನು. ಕೃಷ್ಣನು ನಂದಗೋಪನನ್ನು ನೋಡಿ "ಇದೇಕೆ ಚಿಂತೆ?" ಎಂದು ಕೇಳಲು ಅವನು "ಎಲ್ಮೈ ಮಗನೆ! ನಿನು ಹೇಳಲಿ? ಯಮನ ಮನೆಯಂ

ತಿರುವ ಜಗುನೆಯ ಮಡುವಿನಲ್ಲೊಂದು ತಾವರೆಯು ಹುಟ್ಟಿದೆ. ಅದನ್ನು ಭಯಂಕರವಾದ ಸರ್ಪವು ಕಾಯುತ್ತಿದೆ. ಅದಕ್ಕೆ ತುಂಬಿಗಳು ಮೊಗವಿಕ್ಕವು. ಅದನ್ನು ತಂದುಕೊಡಬೇಕೆಂದು ಕಂಸನು ನನಗೆ ಆಜ್ಞೆಮಾಡಿದ್ದಾನೆ. ಅದರಿಂದ ನನಗೆ ಬಹು ಚಿಂತೆಯಾಗಿದೆ" ಎಂದನು. ಆ ಮಾತನ್ನು ಕೇಳಿ ಹರಿಯು "ಎಲೈ ತಂದೆಯೆ! ಒಳ್ಳೆಯು ಕಾವಲಿರುವ ತಾವರೆಯನ್ನು ತರಲು ಇದೇಕೆ ಚಿಂತೆ?" ಎಂದು ಸಂತೈಸಿ ತಾನು ಆ ಮಡುವಿಗೆ ಹೋಗಿ ತಾವರೆಯನ್ನು ಕೀಳಲು ಆ ಕಾಳಿಂಗ ಸರ್ಪವು ರೇಗಿ ವಿಷವನ್ನು ಗುಳುತ್ತ ಕೃಷ್ಣನ ಮೇಲೆ ಹಾಯ್ದುಬಂದಿತು. ಅದನ್ನು ಕಂಡು ಕೇಶವನು ಎಡಗೈಯಿಂದ ಅದರ ಹೆಡೆಯನ್ನು ಹಿಡಿಯಲು ಅದು ಕೈಯನ್ನು ಸುತ್ತಿಕೊಂಡಿತು. ಅದನ್ನು ಬಿಡಿಸಿಕೊಂಡು ಒಂದು ಕೈಯಲ್ಲಿ ಆ ಹಾವನ್ನೂ ಮತ್ತೊಂದು ಕೈಯಲ್ಲಿ ತಾವರೆಯನ್ನೂ ಹಿಡಿದುಕೊಂಡು ಬಂದು ನಂದಗೋಪನಿಗೊಪ್ಪಿಸಿದನು. ಅವನು ಅವುಗಳನ್ನು ತೆಗೆದುಕೊಂಡು ಹೋಗಿ ಕಂಸನಿಗೊಪ್ಪಿಸಲು ಅವನು ಮೆಚ್ಚಿದಂತೆ ನಟಿಸಿ ಉಡಿಗೆ ತೊಡಿಗೆಗಳನ್ನು ಬಹುಮಾನವಾಗಿ ಕೊಟ್ಟು ಕಳುಹಿಸಿ ಮನಸ್ಸಿನಲ್ಲಿ "ಈ ವೈರಿಯು ಹಲವು ಕೃತಕಗಳಿಂದ ಸಾಯಲಿಲ್ಲ. ಯುದ್ಧದಲ್ಲಿ ಕೊಲ್ಲೋಣವೆಂದರೆ ಬಲಿಷ್ಠರಾದ ವಸುದೇವ ಬಲಭದ್ರರು ಬಂದು ಇವನಿಗೆ ಸಹಾಯಕರಾಗುವರು. ಆದುದರಿಂದ ಈ ಶತ್ರುವನ್ನು ಜಟ್ಟಿಗಳಿಂದ ಕೊಲ್ಲಿಸಿ ನಿಶ್ಚಿಂತನಾಗಿರುವೆನು" ಎಂದು ಬಗೆದು ಮಹಾಭುಜಬಲಶಾಲಿಗಳಾದ ಚಾಣೂರ ಕೇಸರಿ ಮುಷ್ಟಿಗ ವಜ್ರಜಂಘ ಮೊದಲಾದ ಜಗಜಟ್ಟಿಗಳನ್ನು ಕರೆದು "ನಿಮ್ಮಾ ವಿದ್ಯೆಯಿಂದ ನಿಮಗೆ ಗೋಕುಲದಲ್ಲಿರುವ ನಂದನ ಮಗನನ್ನು ನೆಲಕ್ಕಿಕ್ಕುವ ಸಾಮರ್ಥ್ಯವುಂಟೇ?" ಎಂದು ಕೇಳಲು ಅವರು ತಮಗೆ ದಿಗ್ಗಜಗಳು ಕಾಳಗಕ್ಕೆ ಸಮಾನಗಳಲ್ಲದೆ ಗೋಪನ ಮಗನು ಸಮಾನನಲ್ಲವೆಂದೂ ಆದಿಶೇಷನ ಹೆಡೆಯ ಮಣಿಯನ್ನು ತರುವುದಕ್ಕೆ ಹೇಳದೆ ದನಕಾಯುವವನನ್ನು ಇದಿರುಹಾಕುವುದು ಉಚಿತವಲ್ಲವೆಂದೂ ಹೇಳಿದರು. ಆ ಮಾತನ್ನು ಕೇಳಿ ಕಂಸನು ಕೃಷ್ಣ ಬಲರನ್ನು ಕೊಂದರೆ ಆ ಜಟ್ಟಿಗಳು ಬೇಡಿದುದನ್ನು ಕೊಡುವುದಾಗಿ ಹೇಳಿ ಮರುದಿನ ರಂಗಸ್ಥಳವನ್ನು ಮಾಡಿಸಿದನು. ಆ ವಿಷಯವನ್ನು ವಸುದೇವ ಬಲರಾಮರು ತಿಳಿದು ನಂದಗೋಪನನ್ನೂ ಕೃಷ್ಣನನ್ನೂ ಗುಟ್ಟಾಗಿ ಕರೆಯಿಸಿ ಅವರುಗಳಿಗೆ ಕೃಷ್ಣನ ಪೂರ್ವೋತ್ತರವನ್ನೂ ಅತಿಮುಕ್ತಮುನಿವರ್ಯರು ಹೇಳಿದ ವಚನಗಳನ್ನೂ ಹರಿಯಿಂದ ಕಂಸ ಜರಾಸಂಧರಿಗೆ ಮರಣವಾಗುವುದೆಂಬುದನ್ನೂ ಹೇಳಿ ವಸುದೇವನು ಬಲರಾಮಸಹಿತ ಅವರನ್ನು ಕಳುಹಿದನು

ಇತ್ತ ಕಂಸನು ಮಲ್ಲರಂಗಸ್ಥಳಕ್ಕೆ ಬಂದು ಎತ್ತರವಾದ ಜಗಲಿಯನ್ನು ಮಾಡಿಸಿ ಅದರ ಮೇಲೆ ಕುಳಿತು ಸುತ್ತಲು ಸೈನಿಕರನ್ನಿರಿಸಿದನು. ವಸುದೇವನೂ ಯುದ್ಧಸನ್ನದ್ಧನಾಗಿ ತನ್ನ ಸೈನ್ಯದೊಡನೆ ಬಂದು ಮತ್ತೊಂದೆಡೆಯಲ್ಲಿ ಜಗಲಿಯ ಮೇಲೆ ಕುಳಿತನು. ಕಂಸನು ನಂದಗೋಪನ ಬಳಿಗೆ ಭೃತ್ಯರನ್ನು ಕಳುಹಿ "ಈ ದಿವಸ ನಿನ್ನ ಮಗನನ್ನು ಜಟ್ಟಿಗಳೊಡನೆ ಹೋರಾಡಿಸಬೇಕು, ಶೀಘ್ರವಾಗಿ ಕಳುಹಿಸಿಕೊಡು" ಎಂದು ಹೇಳಿಕಳುಹಿದನು. ಅದನ್ನು ಭೃತ್ಯರು ಹೋಗಿ ಹೇಳಲು ಯಶೋದೆಯು "ನನ್ನ ಮಗನು ಯಮುನಿಂದ ಸಾಯನು, ಬೆಂಕಿಯಿಂದ ಬೇಯನು, ಇವನನ್ನು ನೋಯಿಸುವವರುಂಟೆ?" ಎಂದು ಹೇಳಿ ಮಗನನ್ನು ಶೃಂಗರಿಸಿ "ಈ ದಿನ ನಿನ್ನ ಶತ್ರುಗಳನ್ನೆಲ್ಲ ಸಂಹರಿಸು" ಎಂದು ಹರಸಿ ಕಳುಹಲು ಬಲಕೇಶವರು ಕಂಸನನ್ನು ಕೊಲ್ಲುವೆವೆಂದು ನಂದ ಮತ್ತು ಹಲವು ಗೋಪಬಾಲಕರೊಡನೆ ಹೊರಟು ಕೊಂಬು ತಮ್ಮಟೆ ಮೊದಲಾದ ವಾದ್ಯಗಳನ್ನು ಊದಿಸಿಕೊಂಡು ಬಂದರು. ಆಗ ಉನ್ಮತ್ತನಾದ ಕಂಸನು ತನಗೆ ವಿಶ್ವಾಸಪಾತ್ರನಾದ ಕೈಟಭನೆಂಬ ಅಸುರನನ್ನು ತನ್ನೊತ್ತಿಗೆ ಕರೆದು "ಗೋಪನ ಮಗನು ಜಟ್ಟಿಕಾಳಗಕ್ಕೆ ಬರುತ್ತಾನೆ. ನೀನು ನನ್ನವನಾದರೆ ಅವನನ್ನು ಕೊಲ್ಲಬೇಕು" ಎನಲು ಅವನು ತನ್ನ ಪೌರುಷವನ್ನು ಕೊಚ್ಚಿಕೊಂಡು ಹೊರಟು ಕೃಷ್ಣನು ಬರುವ ದಾರಿಯಲ್ಲಿ ಹಲವು ಬಣ್ಣದ ಬಟ್ಟೆಗಳನ್ನು ಹರಡಿ ತಾನು ಬಲಿಷ್ಠನಾದ ಅಗಸನ ರೂಪವನ್ನು ಧರಿಸಿಕೊಂಡು ಯಮುನಾನದಿಯಲ್ಲಿ ಬಟ್ಟೆಗಳನ್ನು ಒಗೆಯುತ್ತಿದ್ದನು. ಕೃಷ್ಣನು ತನ್ನ ಇಕ್ಕೆಲದಲ್ಲಿಯೂ ಬರುತ್ತಿರುವ ಗೋವಳರ ನಡುವಿನಲ್ಲಿ ಬರುತ್ತ "ಎಲೆ ಅಗಸನೆ! ದಾರಿಯಲ್ಲಿ ಹರಡಿರುವ ಬಟ್ಟೆಗಳನ್ನು ತೆಗೆ" ಎನಲು ಅವನು "ಎತ್ತು ಕತ್ತೆ ಕಾಗೆಗಳನ್ನು ಕೊಂದ ಗರ್ವದಿಂದ ಮಾತನಾಡಿ ಕೆಡಬೇಡ, ತೊಲಗು. ಕಂಸನಿಗಾಗಿ ಒಗೆಯುವ ಬಟ್ಟೆಗಳನ್ನು ಯಾರಾದರು ನಿನ್ನವರು ತುಳಿದರೆ ನಿನಗೆ ತಕ್ಕುದನ್ನು ಮಾಡುವೆನು. ನೋಡಿಸಡೆ" ಎಂದನು. ಆ ಮಾತನ್ನು ಕೇಳಿ ಮುಕುಂದನು "ಮುಂದೆ ಬರುವುದನ್ನು ನೋಡಿಕೊಳ್ಳೋಣ. ಬರುವುದು ಬರಲಿ" ಎಂದು ತನ್ನ ಪರಿವಾರಸಮೇತನಾಗಿ ಆ ಬಟ್ಟೆಗಳನ್ನು ಮೆಟ್ಟಿದನು. ಅದನ್ನು ನೋಡಿ ಆ ಅಗಸನು "ಎಲವೋ ದನಕಾಯುವವನೆ! ಎದೆಕೆಚ್ಚಿನಿಂದ ದೊರೆಯ ಬಟ್ಟೆಗಳನ್ನು ಗೋವಳರೊಡನೆ ನೀನು ಮೆಟ್ಟಬಹುದೇ?" ಎಂದು ಕೋಪದಿಂದ ಕೃಷ್ಣನ ಬಳಿಗೆ ಬಂದು "ಕೆನ್ನೆಗೆ ಹೊಡೆದು ಕೆಡಹಿ ಕೊಲ್ಲುವೆನು" ಎಂದು ತನ್ನ ಉದ್ದವಾದ ಕೈಯನ್ನು ಎತ್ತಿಕೊಂಡು ಹತ್ತಿರಕ್ಕೆ ಬರುವವರೆಗೆ ಸುಮ್ಮನಿದ್ದು ನಸುನಕ್ಕು

ಬಿದಿರು ಕಳಿಲೆಯನ್ನು ಮುರಿಯುವಂತೆ ಆ ಮಾಯದ ಮಡಿವಳನನ್ನು ಮುರಿದು ಆಕಾಶಕ್ಕೆ ಸೆದನು. ಅದನ್ನು ಕಂಡು ಗೋವಳರೆಲ್ಲ ಬಹುಸಂತೋಷಪಟ್ಟು ಕೃಷ್ಣನನ್ನು ಹೊಗಳಿ ಆ ಬಟ್ಟೆಗಳನ್ನು ಸೂರೆಮಾಡಿ ತಮ್ಮ ಕೈಯ ಕೋಲುಗಳ ತುದಿಗೆ ಕಟ್ಟಿ ಕುಣಿಕುಣಿದು ಗೋವಿಂದನೊಡನೆ ಹೋದರು. ಒಲಕೇಶವರು ಪಟ್ಟಣಕ್ಕೆ ಬರುವ ದಾರಿಯಲ್ಲಿ ಕಂಸನು ಅಜಿತಂಜಯವೆಂಬ ತನ್ನ ಪಟ್ಟದಾನೆಯನ್ನು ಹೊರಡಿಸಲು ಅದು ಪಟ್ಟಣವನ್ನೆಲ್ಲ ಗಜಿಬಿಜಿಮಾಡಿ ಕೃಷ್ಣನಿಗೆದುರಾಗಿ ಒರುತ್ತಿರಲು ಅವನು ಸಿಹ್ಮನಾದವನ್ನು ಮಾಡಿದನು. ಆ ತನೆಯು ಸೊಂಡಲಿನಿಂದ ಹೊಡೆಯಲು ಕೃಷ್ಣನು ರೇಗಿ ಅದನ್ನು ತನ್ನ ಕಾಲಿನಿಂದ ಒದೆದು ಅದರ ದಂತವನ್ನು ಕಿತ್ತು ಗದೆಯನ್ನಾಗಿ ಮಾಡಿ ಹೆಗಲಿನಲ್ಲಿಟ್ಟುಕೊಂಡು ಬರುತ್ತಿರುವಾಗ ಪಟ್ಟಣಿಗರು ಅವನ ಪರಾಕ್ರಮವನ್ನು ಹೊಗಳುತ್ತಲೂ ಕಂಸನ ಮೂಢತನವನ್ನು ನಿಂದಿಸುತ್ತಲೂ ಇದ್ದರು. ಕಂಸನು ತನ್ನ ಪಟ್ಟದಾನೆಯು ಸತ್ತಿತೆಂಬ ವಾರ್ತೆಯನ್ನು ಕೇಳಿ ಬಹು ಕೋಪಗೊಂಡನು. ಕೃಷ್ಣನು ಬಂದು ವಸುದೇವನ ಪಕ್ಕದಲ್ಲಿ ನಿಂತನು. ಜಟ್ಟಿಗಳೆಲ್ಲ ಸಿದ್ಧರಾಗಿದ್ದರು. ಆಗ ಅಸಮಸಾಹಸಿಯಾದ ಚಾಣೂರಮಲ್ಲನು ಅಖಾಡಕ್ಕಿಳಿದು ಸಭಿಕರೆಲ್ಲ ನೋಡುವಂತೆ "ಇತ್ತ ನೋಡು ಕೃಷ್ಣ" ಎಂದು ತನ್ನ ಭುಜಗಳನ್ನು ತಟ್ಟುತ್ತ ಹತ್ತಿರಕ್ಕೆ ಬಂದು ನಿಲ್ಲಲು ಕೃಷ್ಣನು ತನ್ನ ಎಡಗೈಯನ್ನು ನೀಡಿದನು. ಆ ಮಲ್ಲನು ತನ್ನ ಕೈಗಳಿಂದ ಅದನ್ನು ಬಗ್ಗಿಸಲು ಯತ್ನಿಸಿದನು. ಅದು ಕಗ್ಗಲಿಯ ಒನಕೆಯಂತೆ ಬಗ್ಗದಿರಲು ತನ್ನ ಭುಜಗಳಿಂದ ಹಿಡಿದು ನೋಡಿದನು. ಅದು ಹುಲ್ಲಿನ ಬೊಂಬೆಯು ಉಕ್ಕಿನ ಬೊಂಬೆಯನ್ನು ಹಿಡಿದಂತಾಯ್ತು. ಬಳಿಕ ಕೃಷ್ಣನ ಕಾಲುಗಳನ್ನು ಹಿಡಿದು ನೋಡಲು ಆನೆಯ ಕಾಲನ್ನು ಕಾಡುಹಂದಿ ಹಿಡಿದಂತಾಯ್ತು. ಹೀಗೆ ನಾನಾವಿಧಗಳಿಂದ ನೋಡಿ ಕೃಷ್ಣನು ತನಗೆ ಸಾಧ್ಯನಲ್ಲವೆಂದು ಚಾಣೂರಮಲ್ಲನು ತಿಳಿಯುವಷ್ಟರಲ್ಲಿ ಕೃಷ್ಣನು ನಸುನಗುತ್ತ ತನ್ನೊಡನೆ ಬಗೆಬಗೆಯಾಗಿ ಹೋರಾಡಲು ಅವನಿಗೆ ಎಡೆಗೊಟ್ಟು ಆಟಕ್ಕಾಗಿ ತಾನು ಒಮ್ಮೆ ಸೋಲುವನ್ನೂ ಒಮ್ಮೆ ಗೆಲುವನ್ನೂ ತೋರಿಸುತ್ತಿದ್ದು ಕೃಷ್ಣನು ತನಗೆ ಸಮಸತ್ತ್ವನೆಂದು ತಿಳಿದು ಅವನು ಹೋರಲು ಬಂದಾಗ ಕೃಷ್ಣನು ಅವನನ್ನು ಎತ್ತಿ ಹಿಡಿದು ಕತ್ತನ್ನು ಮುರಿದುಹಾಕಲು ಚಾಣೂರಮಲ್ಲನು ನೆಲಕ್ಕುರುಳಿದನು. ಬಳಿಕ ಒಬ್ಬೊಬ್ಬನಾಗಿ ಕೇಸರಿಯೆಂಬ ಮಲ್ಲನೂ ಮುಷ್ಟಿಗನೂ ವಜ್ರಜಂಘನೂ ಬಂದು ಹೋರಾಡಲು ಅವರನ್ನೂ ಕೃಷ್ಣನು ಯಮಪುರಕ್ಕೆ ಕಳುಹಿಡನು. ಆಗ ಕಂಸನ ಸುತ್ತಲಿದ್ದ ಸಾವಿರಮಂದಿ ಒಟ್ಟಿಗಳು ಒಟ್ಟಾಗಿ ಬಂದು ಕೃಷ್ಣನನ್ನು ಮುತ್ತಿದರು. ಅವರನ್ನೆಲ್ಲ

ಕಂಸನ ಎದೆಯು ಹವ್ವನೆ ಹಾರುವಂತೆ ಪರಿಪರಿವಿಧದಿಂದ ಕೊಂದನು. ಅದನ್ನು ಕಂಡು ಕಂಸನು, ಭಗ್ನಸಿ ಉರಿದು ಕೆಡುವ ದೀಪದಂತೆ, ಕೋಪಗೊಂಡು ತನ್ನ ಸೈನ್ಯಕ್ಕೆ ಕೈವೀಸಲು ಅದು ಮುತ್ತಿತು. ಅದಕ್ಕೆ ವಸುದೇವ ಬಲರಾಮರು ಇದಿರಾಗಲು ಕಂಡು ಕಂಸನು ಕೋಪದಿಂದೆದ್ದನು. ಆಗ ಕೇಶವನು ಓರ್ವ ಜಟ್ಟಿಯ ಕಾಲ್ವಿಡಿದು ಬೀಸಿ ಎಸೆಯಲು ಅವನು ನೆಲಕ್ಕುರುಳಿದನು. ಬಳಿಕ ಕಂಸನನ್ನು ಹಿಡಿದು, ಅಗಸನು ಬಟ್ಟೆಯನ್ನು ಒಗೆವಂತೆ, ನೆಲಕ್ಕಪ್ಪಳಿಸಿ ಕೊಂದನು.

೧೭. ದ್ವಾರಾವತಿಯ ನಿರ್ಮಾಣ ಸಂಧಿ.

ವಸುದೇವ ಬಲಭದ್ರರು ತಮಗಿದಿರಾದ ಸೈನ್ಯವನ್ನು ಸಂಹರಿಸಿ ಬಂದು ಕೃಷ್ಣನೊಡಗೂಡಿ ಅಭಯಘೋಷಣವನ್ನು ಮಾಡಿಸಿ ಅಲ್ಲಿದ್ದ ಸಭಿಕರನ್ನೆಲ್ಲ ಸಂತೈಸಿ ಅಸಿಪಂಜರದಲ್ಲಿದ್ದ ಉಗ್ರಸೇನನನ್ನು ಕರೆಯಿಸಿ ಕಂಸನ ಶವಸಂಸ್ಕಾರ ಮಾಡಿ ಅವನ ಹೆಂಡತಿ ಜೀವಂಜಸೆಯು ಎಲ್ಲಿಗೂ ಹೋಗದಂತೆ ಕಾವಲಿರಿಸಿ ಅಲ್ಲಿರುವಾಗ ಕಂಸನ ಸ್ನೇಹಿತರಾದ ಪಲ್ಲವದೇಶದ ದೊರೆಗಳೂ ಅಸುರರೂ ಮುರ ಮಧು ಕೈಟಭ ಅರಿಷ್ಟ ನರಕಾಸುರ ಮೊದಲಾದವರೂ ತಮ್ಮ ಸೈನ್ಯಸಮೇತರಾಗಿ ಅಲ್ಲಿಗೆ ಬಂದರು. ಆ ವಿಷಯವನ್ನು ಕೇಶವನು ತಿಳಿದು ಅವರ ಸೈನ್ಯವನ್ನೂ ಅವರುಗಳನ್ನೂ ಕೊಂದು ಅವರ ಗದೆ ರಥ ಖಡ್ಗ ಮೊದಲಾದ ವಸ್ತ್ರಗಳನ್ನು ತೆಗೆದು ಕೊಂಡು ವಸುದೇವ ಬಲರಾಮರೊಡನೆ ಮಧುರೆಗೆ ಹೋದನು. ಮಧುಕೈಟಭನ ಮಗ ಹಿರಣ್ಯಾಕ್ಷನು ತನ್ನ ತಂಗಿಯಾದ ರೇವತಿಯನ್ನು ಬಲರಾಮನಿಗೆ ಕೊಟ್ಟು ಮದುವೆಮಾಡಿ ನಿಶ್ಚಿಂತನಾಗಿದ್ದನು. ತರುವಾಯ ಶೌರೀಪುರಕ್ಕೆ ಹೋಗಬೇಕೆಂದು ಯೋಚಿಸಿ ಉಗ್ರಸೇನನನ್ನು ಕರೆಸಿ ವಸುದೇವನು ತನ್ನ ಮಕ್ಕಳೊಡನೆ ಹೊರಟು ಶೌರೀಪುರವನ್ನು ಪ್ರವೇಶಿಸಿ ಸಮುದ್ರವಿಜಯನ ಕಾಲುಗಳಿಗೆ ನಮಸ್ಕರಿಸಲು ಅವನು ಅನುಜ ತನುಜರನ್ನು ಆಲಿಂಗಿಸಿ ಹರಸಿ ಸಂತುಷ್ಟನಾದನು. ಮರುದಿನ ಉಗ್ರಸೇನನಿಗೆ ಉಡುಗರೆಯನ್ನು ಕೊಟ್ಟು ಮಧುರೆಗೆ ಕಳುಹಿದನು. ಅಲ್ಲಿ ಜೀವಂಜಸೆಯು ತನ್ನ ಗಂಡನನ್ನು ಕೊಂದ ಶತ್ರುವನ್ನು ಕೊಲ್ಲದೆ ತುರುಬನ್ನು ಕಟ್ಟೆನೆಂದು ಭಾಷೆಯನ್ನು ತೊಟ್ಟು ಕೂದಲುಗಳನ್ನು ಬಿಟ್ಟು ಉಗ್ರಸೇನನಿಗೆ ತಿಳಿಯದಂತೆ ಆ ಊರಿಂದ ಹೊರಟು ಬಹುದುಃಖದಿಂದ ರಾಜಗೃಹಕ್ಕೆ ಹೋಗಿ ತನ್ನ ತಂದೆಯಾದ ಜರಾಸಂಧ ಚಕ್ರೇಶ್ವರನ ಮುಂದೆ ಬಿದ್ದು ಉರುಳಾಡಿದಳು. ಜರಾಸಂಧನು ವಿಸ್ಮಿತನಾಗಿ

ಮಗಳ ದುಃಖವನ್ನು ಹೋಗಲಾಡಿಸಿ ಬಳಿಕ ದುಃಖದ ಕಾರಣವನ್ನು ಕೇಳಲು ಆಕೆಯು ತನ್ನ ಪತಿಯನ್ನು ಆ ಗೋಪಾಲನು ಕೊಂದನೆಂದು ಹೇಳಿದಳು. ಅದನ್ನು ಕೇಳಿ ಜರಾಸಂಧನು "ಎಲೆ ಮಗಳೆ! ನಿನ್ನ ಗಂಡನನ್ನು ಕೊಂದ ದುಷ್ಟನ ತಲೆಯನ್ನು ಮೆಟ್ಟದಿದ್ದರೆ ನನಗೇಕೆ ಈ ಪೃಥ್ವಿಯ ಆಧಿಪತ್ಯ?" ಎಂದು ರೇಗಿ ಕಾಲವಯನೆಂಬ ತನ್ನ ಮಗನನ್ನು ಕರೆದು "ನೀನು ಈ ದಿನವೇ ಹೋಗಿ ಕೃಷ್ಣನ ತಲೆಯನ್ನು ತಂದು ನಿನ್ನ ಈ ತಂಗಿಯಾದ ಜೀವಂಜಸೆಯ ಪ್ರತಿಜ್ಞೆಯನ್ನು ಪೂರ್ತಿಮಾಡು" ಎನಲು ಅವನು ಬಹುಸೈನ್ಯವನ್ನು ಸೇರಿಸಿಕೊಂಡು ಶೌರೀಪುರಕ್ಕೆ ಹೋದನು. ಆ ವಿಷಯವನ್ನು ತಿಳಿದು ಬಲಕೇಶವರು ತಮ್ಮ ಸೈನ್ಯದೊಡನೆ ಇದಿರಾಗಿ ಕಾಲವಯನ ಪೌಜನ್ನು ಸಂಹರಿಸುತ್ತಿರಲು ಅವನು ಅವರಿಗಿದಿರಾಗಲಾರದೆ ಊರಿಗೆ ಹಿಂದಿರುಗಿದನು. ಬಳಿಕ ಜರಾಸಂಧನು ಅಪರಾಜಿತನೆಂಬ ಅಧೀನರಾಜನನ್ನು ಅಪರಿಮಿತಸೈನ್ಯದೊಡನೆ ಕಳುಹಲು ಅವನೂ ಬಲಕೇಶವರಲ್ಲಿ ಹೋರಲಾರದೆ ಹಿಮ್ಮೆಟ್ಟಿದನು. ಒಂದುದಿನ ಸಮುದ್ರವಿಜಯನು ತನ್ನ ಮಂತ್ರಿಗಳನ್ನು ಕರೆಸಿ ಅವರೊಡನೆ ಆಲೋಚಿಸಲಾಗಿ ಅವರು "ಎಲೈ ರಾಜನೆ! ನಿನ್ನ ಮಕ್ಕಳು ಈ ಕಾಲದ ಬಲದೇವ ವಾಸುದೇವರ್ಕಳು. ಇವರು ಪ್ರತಿವಾಸುದೇವನಾದ ಮಗಧರಾಜನನ್ನು ಯುದ್ಧದಲ್ಲಿ ಕೊಲ್ಲುವರು; ಇದು ನಿಜ. ಆದರೆ ಇವರು ಇನ್ನೂ ಚಿಕ್ಕವರಾಗಿರುವುದರಿಂದ ಈ ಸ್ಥಳದಿಂದ ಹೊರಟು ಬೇರೊಂದೆಡೆಗೆ ಹೋಗಿ ಕಾಲವಂಚನೆಯನ್ನು ಮಾಡಬೇಕು" ಎನಲು ಅದಕ್ಕೆ ಸಮುದ್ರವಿಜಯನು ಒಡಂಬಟ್ಟು ಎಲ್ಲರನ್ನೂ ಪಟ್ಟಣದಿಂದ ಹೊರಡಿಸಿ ಬರಿದುಮಾಡಿ ತಾನು ಬಲಕೇಶವಾದಿಗಳೊಡನೆ ದಕ್ಷಿಣಾಭಿಮುಖನಾಗಿ ಹೊರಟನು.

ಇತ್ತ ಜರಾಸಂಧನು ಅಪರಾಜಿತನ ಅಪಜಯವನ್ನು ಕೇಳಿ ಕುಪಿತನಾಗಿ ಪುನಃ ಕಾಲವಯನನ್ನು ಬಹುಸೈನ್ಯದೊಡನೆ ಕಳುಹಲು ಅವನು ಬಲಕೇಶವರು ಹೋದ ದಾರಿಯನ್ನು ಹಿಡಿದು ಹೋಗಿ ಅವರನ್ನು ತಗುಲಿದನು. ಅವರು ಅವನ ಸೈನ್ಯದೊಡನೆ ಕಾದಿ ಸೋಲಿಸಿ ಬಂದು ತಮ್ಮ ಪಾಳಯವನ್ನು ನಾಲ್ವತ್ತೆಂಟುಗಾವುದ ಪರ್ಯಂತರ ಮುಂದೆ ತೆಗೆದುಕೊಂಡು ಹೋಗಿ ಅಲ್ಲಿರಿಸಿ ಪುನಃ ಹಿಂದಿರುಗಿಬಂದು ಒಂದು ದಿನ ಕಾಲವಯನ ಸೈನ್ಯದೊಡನೆ ಬಹುಪರಾಕ್ರಮದಿಂದ ಕಾದಿ ಅದನ್ನು ಸಂಹರಿಸಿದರು. ಆ ರಾತ್ರಿ ಅವರ ಪುಣ್ಯದೇವತೆಗಳು ಅವರಿಗೆ ಬರುವ ಅಪಾಯವನ್ನು ತಪ್ಪಿಸುವುದಕ್ಕಾಗಿ ಅವರು ಬೀಡುಬಿಟ್ಟುಹೋಗಿದ್ದ ಸ್ಥಳದಲ್ಲಿ ಅನೇಕ ಅಗ್ನಿಕುಂಡಗಳನ್ನು ಮಾಡಿ ಆ ಕುಂಡಗಳ ಬಳಿಯಲ್ಲಿ ದಾದಿಯರಾಗಿ ಓಡಾಡುತ್ತಿರಲು

ಅಲ್ಲಿಗೆ ಪುನಃ ಕಾಲವಯನು ದಂಡೆತ್ತಿಬಂದು ಆ ಮುದುಕಿಯರನ್ನು ಕಂಡು " ಏತಕ್ಕೆ ದುಃಖಿಸುತ್ತಿರುವಿರಿ ? " ಎಂದು ಕೇಳಿದನು. ಅದಕ್ಕವರು ಭರತತ್ರಿಖಂಡಾಧಿಪತಿಯೊಡನೆ ನಮಗೆ ವೈರವು ಸಂಭವಿಸಿತು. ಇನ್ನು ನಮಗೆ ಉಳಿವಿಲ್ಲವೆಂದು ಹರಿವಂಶದ ರಾಜರುಗಳು ಅಗ್ನಿಕುಂಡಗಳನ್ನು ಮಾಡಿಸಿ ಆ ಉರಿಯಲ್ಲಿ ತಂಡತಂಡವಾಗಿ ಬಿದ್ದು ಸತ್ತರು. ಅವರನ್ನು ಬಾಲ್ಯದಲ್ಲಿ ಎತ್ತಿಕೊಂಡು ಆಡಿಸಿದ ದಾದಿಯರು ನಾವು. ಅವರ ಮೇಲಿನ ಪ್ರೀತಿಯಿಂದ ಈ ಕುಂಡಗಳ ಬಳಿಯಲ್ಲಿ ಶೋಕಿಸುತ್ತಿರುವೆವು " ಎನಲು ಆ ಮಾತನ್ನು ಕೇಳಿ ಕಾಲವಯನು ಅವರ ದೊಡ್ಡ ಸೈನ್ಯವು ಎತ್ತವೋದುದೆಂದು ಕೇಳಲು ಆ ದೇವತೆಗಳು " ಈ ಪರ್ವತದ ಕಾಡಿನಲ್ಲಿ ಕಂಡಕಂಡ ಕಡೆಗೆ ಚದರಿಹೋಯ್ತು " ಎಂದುವು. ಆ ಮಾತನ್ನು ಕೇಳಿ ಬಹು ವಿಸ್ಮಿತನಾಗಿ ತಲೆದೂಗಿ ಅಲ್ಲಿಂದ ತನ್ನ ಅವಾರವಾದ ಸೇನೆಯೊಡನೆ ಹಿಂದಿರುಗಿ ಅತಿ ಸಂತೋಷದಿಂದ ರಾಜಗೃಹಕ್ಕೆ ಹೋಗಿ ತಂದೆಗೆ ನಮಸ್ಕಾರಮಾಡಿ ಆ ಸಮಾಚಾರವನ್ನು ಹೇಳಲು ಅವನು ಬಹು ಸಂತೋಷಪಟ್ಟನು.

ಇತ್ತ ಬಲಕೇಶವಾದಿಗಳು ತಮ್ಮ ಬೀಡನ್ನೆತ್ತಿಕೊಂಡು ಊರ್ಜಯಂತ ಗಿರಿಯ ಚೆಲ್ವಿಕೆಯನ್ನು ನೋಡುತ್ತ ಪಶ್ಚಿಮಸಮುದ್ರತೀರಕ್ಕೆ ಹೋಗಿ ಪೂರ್ವ ಭಾಗದಲ್ಲಿ ಬೀಡನ್ನು ಬಿಡಿಸಿ ಸಮುದ್ರವಿಜಯನ ಅನುಮತಿಯಿಂದ ಕೃಷ್ಣನು ಎಂಟು ದಿನಗಳವರೆಗೆ ದರ್ಭಶಯ್ಯೆಯಲ್ಲಿರಲು ಆಗ ಅವನ ಪುಣ್ಯದಿಂದ ನೇಮಿಶ್ವರರು ಅಲ್ಲಿ ಉದಯಿಸುವ ಪುಣ್ಯಪ್ರಭಾವವನ್ನು ದೇವೇಂದ್ರನು ಅವಧಿಜ್ಞಾನದಿಂದ ತಿಳಿದು ನೈಗಮದೇವನನ್ನು ಕಳುಹಿದನು. ಅವನು ಬಂದು ಕುದುರೆಯ ರೂಪವನ್ನು ಧರಿಸಿ ನಿಂತಿರಲು ಅದನ್ನು ಕೃಷ್ಣನು ನೋಡಿ ಸಂತೋಷಪಟ್ಟನು. ಆಗ ಆ ಕುದುರೆಯು ಸಮುದ್ರಕ್ಕೆ ಹಾರಲು ಅಲ್ಲಿ ಹನ್ನೆರಡು ಗಾವುದ ವಿಸ್ತಾರವಾಗಿ ಬಂದು ದಿಣ್ಣೆಯು ಆವಿರ್ಭವಿಸಿ ಸಮುದ್ರವು ತೆರಪಾಯ್ತು ಆಗ ಆ ನೈಗಮದೇವನು ತನ್ನ ನಿಜರೂಪವನ್ನು ತೋರಿ ಪುಷ್ಪವೃಷ್ಟಿಯನ್ನು ಮಾಡಿ ಸ್ವರ್ಗಕ್ಕೆ ಹೊರಟುಹೋದನು. ಬಳಿಕ ದೇವೇಂದ್ರನ ಆಜ್ಞೆಯಿಂದ ಕುಬೇರನು ಬಂದು ಅಲ್ಲಿ ಬಹು ಸುಂದರವಾದ ನಗರವನ್ನು ನಿರ್ಮಿಸಿ ಉದ್ಯಾನವನ್ನೂ ರತ್ನಮಯವಾದ ಪ್ರಾಕಾರವನ್ನೂ ರಚಿಸಿ ಅದರ ಮಧ್ಯದಲ್ಲಿ ಸಮುದ್ರವಿಜಯನಿಗೂ ಎಡಬಲಗಡೆಗಳಲ್ಲಿ ಕೃಷ್ಣ ಬಲರಾಮರಿಗೂ ಪಕ್ಕಗಳಲ್ಲಿ ವಸುದೇವ ಮೊದಲಾದವರಿಗೂ ಅರಮನೆಗಳನ್ನು ರಚಿಸಿ ಅವರುಗಳನ್ನು ಅಲ್ಲಲ್ಲಿರಿಸಿ ಅವರ ಅಂಗಣಗಳಲ್ಲಿ ಸುವರ್ಣವೃಷ್ಟಿಯನ್ನು ಕರೆದು ಕುಬೇರನು ತನ್ನ ಸ್ಥಾನಕ್ಕೆ ಹೊರಟುಹೋದನು. ಇತ್ತ ಸಮುದ್ರವಿಜಯ ಬಲಕೇಶ

ವಾದಿಗಳು ಸುಖದಿಂದಿರುತ್ತಿರಲು ಈ ವಿಷಯವನ್ನು ವಿಜಯಾರ್ಧಪರ್ವತದ ರಥ ನೂಪುರದ ದೊರೆಯಾದ ಸುಕೇತುಖೇಚರನು ತಿಳಿದು ಸಂತುಷ್ಟನಾಗಿ ಬಹು ವೈಭವದಿಂದ ಬಂದು ಭುವನಸುಂದರಿಯಾದ ತನ್ನ ಪುತ್ರಿ ಸತ್ಯಭಾಮೆಯನ್ನು ಕಮಲಲೋಚನ—ಕೃಷ್ಣನಿಗೆ ಕೊಟ್ಟನು. ಕೃಷ್ಣನು ಸತ್ಯಭಾಮೆಯೊಡನೆ ರತಿಸುಖಸಂಕಥಾವಿನೋದದಲ್ಲಿದ್ದನು.

ಒಂದು ದಿನ ಆಕಾಶಮಾರ್ಗದಿಂದ ನಾರದನು ಬರಲು ಕೃಷ್ಣನು ಎದ್ದು ಕೈಮುಗಿದು "ನೀವು ಬಂದ ಕಾರಣವೇನು?" ಎಂದು ಕೇಳಿದನು. ಅದಕ್ಕೆ ನಾರದನು "ವಿದರ್ಭದೇಶದ ಕುಂಡಿನಪುರದ ದೊರೆಯಾದ ವಿಶ್ವಾವಸುಮಂಡಲೇಶ್ವರನಿಗೂ ಆತನ ಸತಿ ಲಕ್ಷ್ಮೀಮತಿಗೂ ಹುಟ್ಟಿದ ಹಿರಿಯಮಗನು ರುಗ್ಮಿಣನು. ಆತನ ತಂಗಿ ರುಗ್ಮಿಣಿಯು ಬಹು ರೂಪವತಿಯಾಗಿರುತ್ತಾಳೆ. ಆಕೆಯನ್ನು ಜವಭೂಪತಿಯು ತನ್ನ ಪುತ್ರನಾದ ಶಿಶುಪಾಲನಿಗೆ ಕೇಳಲು ಬಂದು ಪಟ್ಟಣದ ಹೊರಗೆ ಬೀಡಬಿಟ್ಟಿರುವನು" ಎಂದನು. ಆ ಮಾತನ್ನು ಕೇಳಿದೊಡನೆಯೇ ಕೃಷ್ಣನು ನಾರದನಿಗೆ ಭಕ್ತಿಯಿಂದ ವಂದಿಸಿ ಬೀಳ್ಕೊಟ್ಟು ಆ ವಿಷಯವನ್ನು ಬಲರಾಮನಿಗೆ ತಿಳಿಸಿ ಸಾತ್ಯಕಿಯನ್ನೂ ಅರ್ಜುನನನ್ನೂ ಕರೆಯಿಸಿ ಅವರುಗಳೊಡನೆ ಶೀಘ್ರವಾಗಿ ನಗರದಿಂದ ಹೊರಟು ಕುಂಡಿನಪುರದ ಹೊಳೆಯ ದಡಕ್ಕೆ ಹೋಗಿ ನಿಂತು ಆ ನಾಲ್ವರೂ ಆಚೆಯ ದಡದಲ್ಲಿ ಬಿಟ್ಟಿದ್ದ ಶಿಶುಪಾಲನ ದಂಡನ್ನು ನೋಡಿದರು. ಬಳಿಕ ಸಾತ್ಯಕಿಯೂ ಅರ್ಜುನನೂ ವಿಶ್ವಾವಸುರಾಜನ ಪಟ್ಟಣಕ್ಕೆ ಪ್ರವೇಶಮಾಡಿ ಅಲ್ಲಿ ಅರ್ಹದ್ದೇವದರ್ಶನವನ್ನು ಮಾಡಿ ಮನೆಗೆ ಹೋಗುತ್ತಿದ್ದ ರುಗ್ಮಿಣಿಯನ್ನು ನೋಡಿ ಕಾವಲುಗಾರರನ್ನು ಬೆದರಿಸಿ ಆ ರಾಜಕನ್ಯೆಯನ್ನು ಎತ್ತಿ ಹೆಗಲಮೇಲಿರಿಸಿಕೊಂಡು ಪುರಜನರೆಲ್ಲ ಬೆದರುವಂತೆ ಅರ್ಜುನನು ಸಿಹ್ಮನಾದವನ್ನು ಮಾಡುತ್ತಲೂ ಇದಿರಾದವರನ್ನು ಸದೆಬಡಿಯುತ್ತಲೂ ಹೋಗಿ ಆ ಸುಂದರಿಯನ್ನು ಕೃಷ್ಣನಿಗೊಪ್ಪಿಸಿದರು. ಆ ವಾರ್ತೆಯನ್ನು ಕೇಳಿ ವಿಶ್ವಾವಸುವೂ ಶಿಶುಪಾಲನೂ ತಮ್ಮ ಸೈನ್ಯಸಮೇತರಾಗಿ ಬರುತ್ತಿರಲು ಅವರಿಗಿದಿರಾಗಿ ಬಲಕೇಶವರು ತಮ್ಮ ಬಲವನ್ನು ಅನುಗೊಳಿಸಿದರು. ಅದನ್ನು ಕಂಡು ಶಿಶುಪಾಲ ವಿಶ್ವಾವಸುರಾಜರು ತಮ್ಮ ಸೇನೆಗೆ ಕೈವೀಸಲು ಅದು ಕೃಷ್ಣನ ಸೈನ್ಯದೊಡನೆ ಕದನಕಾರ್ಯಾರಂಭಿಸಿತು. ಆಗ ನಾರಾಯಣನ ಸೈನ್ಯವು ಶಿಶುಪಾಲನ ಸೈನ್ಯವನ್ನು ಸೋಲಿಸಲು ಕಂಡು ಶಿಶುಪಾಲನು ತನ್ನ ಪಟ್ಟದಾನೆಯನ್ನೇರಿ ಕೃಷ್ಣನ ಮುಂದೆ ಬಂದು ಅವನನ್ನು ಬಯ್ದರೂ ಕೃಷ್ಣನು ಸುಮ್ಮನಿರುವುದನ್ನು ನೋಡಿ ಪಕ್ಕದಲ್ಲಿದ್ದ ಅರ್ಜುನನು "ಏಕೆ ಸುಮ್ಮನೆ

ನಿಂತಿರುವಿರಿ?'' ಎಂದು ಕೇಳಿದನು. ಅದಕ್ಕೆ ಕೃಷ್ಣನು '' ಈ ಶಿಶುಪಾಲನು ಹುಟ್ಟಿದಾಗಇವನಿಗೆ ಹಣೆಯಲ್ಲೊಂದು ಕಣ್ಣಿತ್ತು. ಆಗ ಇವನ ತಂದೆಯು ಓರ್ವ ಶಕುನಿಗನನ್ನು ಕೇಳಲು ಅವನು ' ಈ ಮಗುವು ಯಾರ ಮುಖವನ್ನು ನೋಡಿದೊಡನೆಯೇ ಈ ಕಣ್ಣು ನಷ್ಟವಾಗುವುದೋ ಅವನಿಂದ ಇವನಿಗೆ ಮರಣವಾಗುವುದು ' ಎಂದನು. ಆ ಮಾತನ್ನು ಕೇಳಿ ಇವನ ತಂದೆತಾಯಿಗಳು ಮಗುವನ್ನೆತ್ತಿಕೊಂಡು ಅನೇಕ ರಾಜರುಗಳ ಬಳಿಗೆ ಹೋಗಿ ನನ್ನಲ್ಲಿಗೆ ಬಂದರು. ನನ್ನ ಮುಖವನ್ನು ನೋಡಿ ಇವನ ಆ ಮೂರನೆಯ ಕಣ್ಣು ನಷ್ಟವಾಯ್ತು. ಆಗ ಇವನ ತಂದೆತಾಯಿಗಳು ನನ್ನಲ್ಲಿ ಪುತ್ರಭಿಕ್ಷೆಯನ್ನು ಬೇಡಲು ನಾನು ಅವರ ದೈನ್ಯವನ್ನು ನೋಡಿ ಇವನ ನೂರು ತಪ್ಪುಗಳನ್ನು ಸೈರಿಸುವೆನೆಂದು ಹೇಳಿದೆನು. ಆದುದರಿಂದ ಇವನ ಮಾತನ್ನು ಸೈರಿಸಿದೆನು ' ಎಂದನು. ಆ ಮಾತನ್ನು ಕೇಳಿ ಶಿಶುಪಾಲನು ಬಹು ಕೋಪದಿಂದ ನೂರು ಬಯ್ಗಳಗಳನ್ನು ಬಯ್ದು ಕೃಷ್ಣನ ಮೇಲೆ ಬಾಣಗಳನ್ನು ಬಿಟ್ಟನು. ಆ ಬಾಣಗಳನ್ನು ಕೃಷ್ಣನು ಒಂದೇ ಬಾಣದಿಂದ ಕಡಿದು ಬಳಿಕ ಅವನ ತಲೆಯನ್ನು ಚೆಂಡಾಡಿದನು. ಅತ್ತ ಅರ್ಜುನನು ಯವನನ್ನೂ, ಬಲರಾಮನು ವಿಶ್ವಾವಸುವನ್ನೂ ಸಂಹರಿಸಿದರು. ಬಳಿಕ ಸೈನ್ಯಕ್ಕೆ ಅಭಯಘೋಷಣೆಯನ್ನು ಮಾಡಿಸಿ ರುಗ್ಮಿಣನನ್ನು ಸಂತೈಸಿ ಆ ವೃರದಲ್ಲಿರಿಸಿ ತಾವು ದ್ವಾರಾವತಿಗೆ ಹಿಂದಿರುಗಿ ಬಂದು ರುಗ್ಮಿಣಿದೇವಿಗೆ ದೇವತಾಕಾರದ ತೊಡಿಗೆಗಳನ್ನು ತೊಡಿಸಿ ಊರ ಮುಂದಿನದೊಂದು ಮಂಟಪದಲ್ಲಿರಿಸಿ ಕೃಷ್ಣನು ಸತ್ಯಭಾಮೆಗೆ ರಾಜಪುತ್ರಿಯನ್ನು ತೋರಿಸುತ್ತೇನೆಂದು ಆಕೆಯನ್ನು ಕರೆತರುವಾಗ ಆ ಕೃತ್ರಿಮದೇವತೆಯನ್ನು ಕೆಲವರು ಪರಿಚಾರಿಕೆಯರು ಪೂಜಿಸುತ್ತಿದ್ದರು. ಅದನ್ನು ಕಂಡು ಸತ್ಯಭಾಮೆಯು '' ಇವಳು ಯಾವ ದೇವತೆ? '' ಎಂದು ಕೇಳಿದಳು. ಅದಕ್ಕವರು '' ಬೇಡಿದ ವರವನ್ನು ಕೊಡುವಳು ಈ ವನದೇವತೆ '' ಎಂದು ಉತ್ತರವನ್ನಿತ್ತರು. ಆ ಮಾತನ್ನು ಕೇಳಿ ಸತ್ಯಭಾಮೆಯು ಇದನ್ನು ನೋಡುವೆನೆಂದು ಆ ಮಂಟಪಕ್ಕೆ ಬಂದು ನೋಡಿ ಪೂಜಿಸಿ ಕೈಮುಗಿದು ಹಣೆಗಿಟ್ಟು '' ಎಲೈ ದೇವಿ! ಈಗ ತಂದವಳ ಮೇಲೆ ಅಚ್ಯುತನಿಗೆ ಪ್ರೀತಿಯಿಲ್ಲದಂತೆ ಮಾಡಿದರೆ ನಿನಗೆ ಹಲವು ವಿಧವಾದ ಪೂಜೆಗಳನ್ನು ಮಾಡುವೆನು '' ಎಂದಳು. ಆಗ ಕೃಷ್ಣನು ನಗುತ್ತ ಬಂದು '' ಸತ್ಯಭಾಮೆ! ನೀನು ನಿಸ್ಸಂದೇಹವಾಗಿ ರುಗ್ಮಿಣಿಗೆ ನಮಸ್ಕರಿಸುವುದುಚಿತವೇ? '' ಎನಲು ಕೇಳಿ ಕೋಪದಿಂದ ಸತ್ಯಭಾಮೆಯು ತನ್ನ ಸಖಿಯರೊಡನೆ ರುಗ್ಮಿಣಿಯಮೇಲೆ ಬಿದ್ದು ತೊಡಿಗೆಗಳನ್ನು ಸುಲಿದುಕೊಂಡಳು. ಆದರೂ ರುಗ್ಮಿಣಿಯ ಪೂರ್ವಜನ್ಮದ ಪುಣ್ಯದಿಂದ

ಮೊದಲಿನಂತೆಯೇ ಮೈಮೇಲೆ ತೊಡಿಗೆಗಳಿರುವುದನ್ನು ಕಂಡು ಸತ್ಯಭಾಮೆಯು ಕೋಪದಿಂದ ತನ್ನ ಮನೆಗೆ ಹೊರಟುಹೋದಳು. ಕೃಷ್ಣನು ಏಸ್ಮಿತನಾಗಿ ರುಗ್ಮಿಣಿಗೆ ನಮಸ್ಕಾರಮಾಡಿ ಆಕೆಯ ಮನೋವಿಷಾದವನ್ನು ದೂರಮಾಡಿ ದ್ವಾರಾವತಿಯನ್ನು ಪ್ರವೇಶಿಸಿ ಶುಭಲಗ್ನದಲ್ಲಿ ಮದುವೆಯಾಗಿ ಆಕೆಯನ್ನು ಪಟ್ಟಮಹಿಷಿಯನ್ನಾಗಿ ಮಾಡಿ ಸುಖದಲ್ಲಿರುವಾಗ ಒಂದು ದಿನ ನಾರದನು ಆಕಾಶದಿಂದ ಇಳಿದು ಬಂದು ಹರಿಯನ್ನು ಕುರಿತು " ಎಲೈ ಪ್ರಭುವೆ! ವಿಜಯಾರ್ಧಗಿರಿಯ ಉತ್ತರಶ್ರೇಣಿಯಲ್ಲಿರುವ ಜಂಬೂಪುರದ ಜಾಂಬವನೆಂಬ ದೊರೆಗೂ ಅತನ ಸತಿ ಜಂಬೂಷಣಿಗೂ ಜಂಬುಕುಮಾರನೆಂಬ ಪುತ್ರನೂ ಅತನಿಂದ ಕಿರಿಯಳು ಜಾಂಬಾವತಿಯೆಂಬ ಪುತ್ರಿಯೂ ಇರುತ್ತಾರೆ. ಆ ಜಂಬಾವತಿಯನ್ನು ವಿದ್ಯಾಧರದೇಶದ ರಾಜರೆಲ್ಲ ಕೇಳಿದರೂ ಜಾಂಬವನು ಕೊಡದಿರುತ್ತಾನೆ. ಅವಳಿಗೆ ತಕ್ಕವನು ನೀನು, ನಿನಗೆ ತಕ್ಕವಳು ಅವಳು" ಎಂದು ಹೇಳಿ ಆಕಾಶಮಾರ್ಗವಾಗಿ ಹೊರಟುಹೋದನು ಆ ವಿಷಯವನ್ನು ಕೃಷ್ಣನು ಬಲರಾಮನಿಗೆ ತಿಳಿಸಿ ಅವರು ಸೈನ್ಯಸಮೇತರಾಗಿ ಉತ್ತರಾಭಿಮುಖವಾಗಿ ಹೊರಟುಹೋಗಿ ಆ ವಿಜಯಾರ್ಧಗಿರಿಯ ಕೆಳಗೆ ಬೀಡುಬಿಡಿಸಿದರು. ತಾವು ಭೂಚರರಾಗಿರುವುದರಿಂದ ಆ ಗಿರಿಯ ಮೇಲುಭಾಗಕ್ಕೆ ಹೋಗಲಾಗದೆಂದು ಕೃಷ್ಣನು ಮರುದಿನ ಶುಚಿಯಾಗಿ ದರ್ಭಶಯನದಲ್ಲಿರಲು ಆಗ ಅವನ ಪೂರ್ವಜನ್ಮದ ಅಣ್ಣನಾದ ಯಕ್ಷೇಳನು ಸಹಸ್ರಾರವೆಂಬ ಹನ್ನೆರಡನೆಯ ಸ್ವರ್ಗದಲ್ಲಿ ಹುಟ್ಟಿದ್ದು ಅಲ್ಲಿಂದ ಬಂದು ಬಲಕೇಶವರಿಗೆ ಸಿಹ್ಮವಾಹಿನಿ ಗರುಡವಾಹಿನಿಗಳೆಂಬ ಎರಡು ರಥಗಳನ್ನಿತ್ತು ಯಾರಿಗೂ ಸಾಧ್ಯವಲ್ಲದ ಕ್ಷೀರಸಮುದ್ರವನ್ನು ಅವರ ಸುತ್ತಲೂ ನಿರ್ಮಿಸಿ ಭೀಕರವಾದ ಸರ್ಪಶಯ್ಯೆಯಲ್ಲಿ ಅವರನ್ನಿರಿಸಿ "ಈ ವಿಧದಿಂದ ನಿಮ್ಮ ಕೆಲಸವಾಗುವುದು " ಎಂದು ಹೇಳಿ ಆ ದೇವನು ದೇವಲೋಕಕ್ಕೆ ಹೊರಟುಹೋದನು.

ಇತ್ತ ಬಲವಾಸುದೇವರು ನಾಲ್ಕುತಿಂಗಳವರೆಗೆ ಅಲ್ಲಿರಲು ಆಗ ವಿದ್ಯಾದೇವತೆಗಳು ಬಂದು " ಕೆಲಸವನ್ನು ಹೇಳಿ ಹೇಳಿ " ಎನಲು ಅವುಗಳನ್ನು ಅಂಗೀಕರಿಸಿ ಅವುಗಳು ತಂದ ಪುಷ್ಪಕವಿಮಾನವನ್ನೇರಿ ಬಲಕೇಶವರು ವಿಜಯಾರ್ಧಗಿರಿಯ ಕಿನ್ನರಗೀತವೆಂಬ ಪಟ್ಟಣಕ್ಕೆ ಹೋಗಿ ಅಲ್ಲಿ ತಮ್ಮ ತಂದೆ ವಸುದೇವನ ಪತ್ನಿಯಾದ ಶಾಲ್ಮಲಿದತ್ತೆಯ ಮಗ ಧ್ರುವಕುಮಾರನನ್ನು ಕಂಡು ಅಣ್ಣನಾದ ಅವನ ಕಾಲುಗಳಿಗೆ ನಮಸ್ಕಾರಮಾಡಿ " ಈ ದಿನ ನಿಮ್ಮನ್ನು ಕಾಣಬೇಕೆಂಬ ಆತುರದಿಂದ ಬಂದೆವು " ಎಂದು ಹೇಳಿ ನೀತಿವಂತರಾದ ಕೆಲವು ಖೇಚರರನ್ನು ಆ ಜಂಬಾವತಿಯನ್ನು ಕೇಳುವುದಕ್ಕಾಗಿ ಕಳುಹಲು ಅವರು ಹೋಗಿ ಜಾಂಬವನನ್ನು ಕಂಡು

" ದ್ವಾರಾವತಿಯ ಅಧಿಪತಿಯಾದ ನಾರಾಯಣನಿಗೆ ನಿನ್ನ ಮಗಳನ್ನು ಕೊಡು " ಎಂದು ಕೇಳಿದರು. ಆ ಮಾತನ್ನು ಕೇಳಿ ಜಾಂಬವನು " ಒಳ್ಳೆಯದು ಒಳ್ಳೆಯದು, ಮದಗಜದೊಡನೆ ಆಡು ಕೊಳ್ಳುಕೊಡುವನ್ನು ಮಾಡುವುದೆಂಬ ಪೊಳ್ಳುಮಾತೇಕೆ? ಹೋಗಿ " ಎಂದು ಅವರನ್ನು ತಳ್ಳಿಸಲು ಅವರು ಬಂದು ಆ ಸಮಾಚಾರವನ್ನು ಧ್ರುವ ಬಲ ಕೇಶವರಿಗೆ ತಿಳಿಸಿದರು. ಅವರು ಕನಲಿ ಯುದ್ಧಸನ್ನದ್ಧರಾಗಿ ಜಂಬೂ ಪುರಕ್ಕೆ ಬರಲು ಅದನ್ನು ತಿಳಿದು ಜಾಂಬವನು ತನ್ನ ಸೈನ್ಯದೊಡನೆ ಪುರದಿಂದ ಹೊರಟು ಬಂದನು. ಆಗ ಧ್ರುವನು ಬಲಕೇಶವರನ್ನು ಹಿಂದಿಕ್ಕಿ ಹೋಗಿ ಯುದ್ಧ ರಂಗದಲ್ಲಿ ಜಾಂಬವನನ್ನು ಕೊಂದು ಆ ಜಂಬಾವತಿಯನ್ನು ತಂದು ಕೃಷ್ಣನಿಗೆ ಕೊಡಲು. ಅವನು ಆಕೆಯನ್ನು ದ್ವಾರಾವತಿಗೆ ಕರೆತಂದು ಬಹು ವೈಭವದಿಂದ ಮದುವೆಯಾದನು.

ಮತ್ತೊಂದು ದಿನ ನಾರದನು ಬಂದು " ಎಲೈ ಪುರುಷೋತ್ತಮನೆ! ಗಿರಿ ನಗರದ ದೊರೆಯಾದ ಜ್ಯೇಷ್ಠವರ್ಧನನಿಗೂ ಅತನ ಪತಿ ಜ್ಯೇಷ್ಠಾವತಿಗೂ ಸುಸೀಮೆಯೆಂಬ ಬಹು ಸುಂದರಿಯಾದ ಮಗಳಿರುವಳು. ಆಕೆಯು ನಿನಗೆ ತಕ್ಕವಳಾಗಿದ್ದಾಳೆ " ಎಂದು ಹೇಳಿ ಹೋದನು. ಕೃಷ್ಣನು ಆ ಗಿರಿನಗರಕ್ಕೆ ಹೋಗಿ ಯುದ್ಧ ಮುಖಾಂತರ ಆ ಕನ್ಯೆಯನ್ನು ತಂದು ಮದುವೆಯಾದನು. ಹೀಗೆ ಅನೇಕ ರಾಜ ಪುತ್ರಿಯರನ್ನು ತಂದು ಕೃಷ್ಣನು ಮದುವೆಯಾದನು. ಕೃಷ್ಣನಿಗೆ ಸತ್ಯಭಾಮೆ, ರುಗ್ಮಿಣಿ, ಜಂಬಾವತಿ, ಸುಸೀಮೆ, ಲಕ್ಷ್ಮಣೆ, ಗಾಂಧಾರಿ, ಗೌರಿ, ಪದ್ಮಾವತಿ ಈ ಎಂಟುಮಂದಿ ಸ್ತ್ರೀಯರು ಪಟ್ಟಮಹಿಷಿಯರಾಗಿದ್ದರು.

೧೮. ಮನ್ಮಥೋದಯ ಸಂಧಿ.

ಒಂದುದಿನ ದ್ವಾರಾವತಿಯಲ್ಲಿ ಕೃಷ್ಣನು ಇಂದ್ರವೈಭವದಿಂದ ಅನೇಕ ರಾಜರುಗಳ ಮಧ್ಯದಲ್ಲಿ ಸಿಹ್ಮಪೀಠದಲ್ಲಿ ಕುಳಿತು ತನ್ನ ಪತ್ನಿಯರನ್ನು ಓಲಗಶಾಲೆಗೆ ಕರೆಯಿಸಲು ಮೊದಲು ರುಗ್ಮಿಣಿಯು ಬಂದು ಪತಿಯ ಬಲದ ಭಾಗದಲ್ಲಿ ಕುಳಿತಳು. ಬಳಿಕ ಸತ್ಯಭಾಮೆಯು ಬಂದು ಕೋಪದಿಂದ ಮುಂದೆ ನಿಂತಿರಲು ಕಂಡು ಹರಿಯು ' ಎಲೆ ಬಾಲೆ! ನೀನೇಕೆ ಮುಂದೆ ನಿಂತಿರುವೆ? " ಎಂದನು. ಆಕೆಯು ಬಾರದಿರಲು ರುಗ್ಮಿಣಿಯು ಅವಳ ಮನೋಭಾವವನ್ನು ತಿಳಿದು " ಯೋಚಿಸಿ ನೋಡಿದರೆ

ಪತಿಯು ವಾಮಭಾಗವೇ ಸತಿಯರಿಗೆ ಮುಖ್ಯವು'' ಎಂದು ತಾನು ಪತಿಯು ಎಡ ಗಡೆ ಬಂದು ನಿಂತಳು. ಆಗ ಕೃಷ್ಣನು ''ಎಲೆ ಯುವತಿಯರಿರಾ! ನಿಮ್ಮೊಳಗೆ ಯಾವಳು ಮೊದಲು ಪುತ್ರನನ್ನು ಹೆರುವಳೋ ಅವಳು ಶ್ರೇಷ್ಠಳು' ಎಂದನು. ಆ ಮಾತಿಗೆ ಅವರೀರ್ವರೂ ಸಮ್ಮತಿಸಲು ಮತ್ತೆ ಕೃಷ್ಣನು ''ನೀವು ಮೊದಲು ಹಡೆದ ಮಗನ ಮದುವೆಯಲ್ಲಿ ಅತನ ತಾಯಿಯು ಹಿಂದುಳಿದವಳ ತಲೆ—ಮುಡಿ ಯನ್ನು ಮೆಟ್ಟಿ ಮಾಯಬೇಕು' ಎನಲು ಅವರು ಒಪ್ಪಿ ತಂತಮ್ಮ ಮನೆಗೆ ಹೋ ದರು. ಮಾಧವನು ತನ್ನ ಸ್ತ್ರೀಯರಲ್ಲಿ ಅನುದಿನವೂ ರತಿಸುಖವನ್ನನುಭವಿಸುತ್ತಿ ರಲು ಒಂದುದಿನ ರುಗ್ಮಿಣಿಯು ಋತುಮತಿಯಾಗಿ ನಾಲ್ಕೀರನ್ನು ಮಿಂದು ಬಿಳಿಯ ತೊಡಿಗೆಗಳನ್ನು ತೊಟ್ಟು ಪತಿಯ ಶಯ್ಯಾಗೃಹಕ್ಕೆಹೋಗಿ ಹಂಸತೂಲತಲ್ಪದೊಳೊ ರಗಿರ್ದ ಪ್ರಾಣಕಾಂತನೊಡನೆ ಸುರತಸುಖವನ್ನನುಭವಿಸಿ ನಿದ್ರೆಗೈದು ಬೆಳಗಿನಜಾವ ದಲ್ಲಿ ಲಕ್ಷ್ಮಿ ಸಹ್ಯ ಮೊನಸು ಸಮುದ್ರ ಮಥನ ಇವುಗಳನ್ನು ಕನಸಿನಲ್ಲಿ ಕಂಡು ಹರ್ಷ ದಿಂದೆದ್ದು ತನಗಾದ ಕನಸುಗಳನ್ನು ಪತಿಗೆ ಹೇಳಿ ಅವನಿಂದ ಅವುಗಳ ಫಲಗಳನ್ನು ತಿಳಿದು ಸಂತೋಷದಿಂದಿದ್ದಳು. ಬಳಿಕ ರುಗ್ಮಿಣಿಗೆ ಪೃಥಿವೀಮಂಡಲವನ್ನು ನೋ ಡಬೇಕೆಂಬಿಚ್ಛೆಯಾಗಲು ಕೃಷ್ಣನು ದರ್ಭಶಯ್ಯೆಯಲ್ಲಿ ಕುಳಿತು ಧ್ಯಾನಿಸಿದನು. ಆಗ ಗರ್ಭಸ್ಥ ಶಿಶುವಿನ ಪುಣ್ಯದಿಂದ ದೇವೇಂದ್ರನು ಕಳುಹಿದ ವಿಮಾನವನ್ನೇರಿ ಆ ದಂಪ ತಿಗಳು ನರಲೋಕವನ್ನು ನೋಡಿಕೊಂಡು ತಮ್ಮ ಪಟ್ಟಣಕ್ಕೆ ಬಂದು ಸುಖದಲ್ಲಿರು ತ್ತಿರಲು ಒಂಬತ್ತನೆಯ ತಿಂಗಳಲ್ಲಿ ರುಗ್ಮಿಣಿಯು ಶುಭಲಗ್ನದಲ್ಲಿ ಪುತ್ರನನ್ನು ಹಡೆ ದಳು. ಅದನ್ನು ತಿಳಿದು ಕೃಷ್ಣನು ಉತ್ಸವವನ್ನು ಮಾಡಿಸುವಷ್ಟರಲ್ಲಿ ಅತ್ತ ಸತ್ಯ ಭಾಮೆಯು ಗಂಡುಮಗುವನ್ನು ಪ್ರಸವಿಸಿ ಸುಖವಾಗಿದ್ದಳು. ರುಗ್ಮಿಣಿಯ ಮಗನ ಪೂರ್ವಭವದ ಶತ್ರುವಾದ ಧೂಮಕೇತುವೆಂಬ ಜ್ಯೋತಿಷ್ಮದೇವನು ಆಕಾಶಮಾ ರ್ಗದಿಂದಿಳಿದುಬಂದು ಆ ಮಗುವನ್ನೆತ್ತಿಕೊಂಡು ಆಕಾಶಕ್ಕೆ ನೆಗೆದನು. ಇತ್ತ ರುಗ್ಮಿಣಿಯು ತನ್ನ ಮಗುವನ್ನು ಕಾಣದೆ ಬಹು ದುಃಖಿತಳಾಗಿ ಭೂಮಿಯಲ್ಲಿ ಬಿದ್ದು ಉರುಳಾಡುತ್ತಿರಲು ಕೃಷ್ಣನು ಬಂದು ಆಕೆಯನ್ನು ಸಂತೈಸಿ ತನ್ನ ಮಗನು ಎಲ್ಲಿದ್ದರೂ ತಾನು ತಾರದಿದ್ದರೆ ತಾನಿರುವುದೇಕೆನ್ನುವಾಗ '' ಹರಿಯೆ! ಕೇಳು, ಆ ನಿನ್ನ ಕುಮಾರನು ವಿದ್ಯಾಧರದೇಶದಲ್ಲಿ ಚೆನ್ನಾಗಿ ಬಳೆದು ಮಹಾಭುಜಬಲೋಪೇತ ನಾಗಿ ಹದಿನಾರು ವರುಷಕ್ಕೆ ಬರುವನು' ಎಂದು ಆಕಾಶವಾಣಿಯಾಯ್ತು. ಕೃಷ್ಣ ನು ಅದನ್ನು ರುಗ್ಮಿಣಿಗೆ ತಿಳಿಸಿದಬಳಿಕ ಸಮಾಧಾನಪಡಿಸಿ ನಿಶ್ಚಿಂತಿಯಾಗಿರಲು ಅತ್ತ ಆ ಜ್ಯೋತಿಷ್ಮದೇವನು ಶಿಶುವನ್ನೆತ್ತಿಕೊಂಡು ಆಕಾಶದಲ್ಲಿ ಹೋಗುತ್ತ ಕೋಪದಿಂದ

' ಎಲವೋ ನನ್ನ ಶತ್ರುವೆ! ಸತ್ಪೈ, ನನ್ನ ಕೈಯಿಂದ ನಿನ್ನನ್ನು ಬಿಡಿಸಿಕೊಳ್ಳುವ ಶಕ್ತ ನಾರು? ಪೂರ್ವಜನ್ಮದಲ್ಲಿ ನನ್ನ ಹೆಂಡತಿಯನ್ನು ತೆಗೆದುಕೆ ಂಡುಹೋದ ಅನ್ಯಾ ಯಕಾರನೆ! ಕೇಳು, ನಿನ್ನನ್ನೀಗ ಛಿನ್ನ ಭಿನ್ನ ಮಾಡಿದರೆ ನನ್ನನ್ನು ದಂಡಿಸುವವರಿ ದ್ದಾರೆಯೇ?" ಎಂದು ಹೇಳುತ್ತ ಆ ಮಗುವನ್ನು ಒಯ್ಯುವಾಗ ಒಂದು ಕಾಡಿನಲ್ಲಿ ವ್ಯಂತರದೇವತೆಗಳ ಕೃತಕದಿಂದ ಒಂದೆಡೆಯಲ್ಲಿ ಎರಡುಕಲ್ಲುಗಳು ಒಂದಕ್ಕೊಂದು ತಾ ಕಿ ಒಡದಾಡುತ್ತಿದ್ದುವು. ಅದನ್ನು ಕಂಡ ಆ ಧೂಮಕೇತುವು "ಈ ಕಲ್ಲುಗಳ ಮಧ್ಯದ ಲ್ಲಿ ಈವೈರಿಯನ್ನು ಹಾಕಿದರೆ ಸಾಯುವನೆಂದು ಬಗೆದು ಶಿಶುವನ್ನು ಆ ಕಲ್ಲುಗಳಮಧ್ಯ ದಲ್ಲಿ ಹಾಕಿ ಆಕಾಶಕ್ಕೆನೆಗೆದನು. ಇತ್ತ ಆ ಕಲ್ಲುಗುಂಡುಗಳು ಗಂಡುಮಗುವಿನ ಪುಣ್ಯದಿಂದ ತಾಗದಿರಲು ಆಗ ಆಕಾಶದಲ್ಲಿ ವಿಜಯಾರ್ಧಗಿರಿಯ ದಕ್ಷಿಣಶ್ರೇಣಿಯ ಘನಕೂಟವೆಂಬ ಪಟ್ಟಣದ ಕಾಳಶಂಬರನೆಂಬ ವಿದ್ಯಾಧರನು ತನ್ನ ಸತಿ ಕಾಂಚನಮಾ ಲೆಯೊಡನೆ ಬರುತ್ತಿರಲು ಆ ಚರಮೊಂಗನಾದ ಮಗುವಿನಮೇಲೆ ತನ್ನ ವಿಮಾನವು ಮುಂದುವರಿಯದೆ ನಿಂತಿರಲು ಆಖೇಚರನು ಇಳಿದುಬಂದು ಆ ಕಲ್ಲುಗಳ ಮಧ್ಯದಲ್ಲಿ ಹೊಳೆಯುತ್ತಿರುವ ಮಗುವನ್ನೂ ಅದರ ಶುಭಲಕ್ಷಣಗಳನ್ನೂ ನೋಡಿ ಈ ರಾಜಪು ತ್ರನನ್ನು ಅವನೋ ಪೂರ್ವಭವದ ವೈರಿಯು ಹಾಕಿ ಹೋಗಿರುವನೆಂದು ತಿಳಿದು ಆ ಶಿಶುವನ್ನೆತ್ತಿಕೊಂಡು ಎದೆಗಿಟ್ಟು ಆಕಾಶಕ್ಕೆ ಹೋಗಿ ವಿಮಾನದಲ್ಲಿದ್ದ ತನ್ನ ಪತ್ನಿ ಗೆ ಮಗುವನ್ನಿತ್ತು ವಿಷಯವನ್ನು ತಿಳಿಸಿ ಅದನ್ನು ಸಾಕುವಂತೆ ಹೇಳಿದನು. ಆಕೆಗೆ ಪೂರ್ವಭವಸಂಬಂಧದಿಂದ ಆ ಮಗುವಿನ ಮೇಲೆ ದಯೆಯುಂಟಾಗಿ ಪತಿಯನ್ನು ಕುರಿತು "ನಿನ್ನ ಇತರ ಪತ್ನಿಯರಿಗೆ ಮಕ್ಕಳಿರುವಾಗ ನಾನು ಈ ಮಗುವನ್ನು ಸಾಕುವುದರಿಂದೇನು ಫಲ?" ಎನಲು ಆ ಮಾತನ್ನು ಕೇಳಿ ಕಾಳಶಂಬರನು ತನ್ನ ಕೊರಳಲ್ಲಿದ್ದ ಹಾರವನ್ನು ತೆಗೆದು ಮಗುವಿನ ಕೊರಳಿಗೆ ಹಾಕಿ "ಇವನೇ ಯುವ ರಾಜನು" ಎಂದನು. ಆಗ ಕಾಂಚನಮಾಲೆಗೆ ಮೊಲೆಹಾಲು ಸುರಿಯಲು ಸಂತೋ ಷದಿಂದ ಅವರು ತಮ್ಮ ನಗರಕ್ಕೆ ಬಂದು ನಂದನವನದಲ್ಲಿದ್ದು ಕಾಂಚನಮಾಲೆಯು ಗೂಢಗರ್ಭದಿಂದ ಪುತ್ರನನ್ನು ಹಡೆದಳೆಂದು ಕಾಳಶಂಬರನು ಪಟ್ಟಣಕ್ಕೆ ಒಸಗೆ ಯನ್ನು ಕಳುಹಿದನು. ಪುರಜನರು ಸಂತೋಷದಿಂದ ಇದಿರ್ಗೊಂಡರು. ಕಾಳ ಶಂಬರನು ಇಂದ್ರವೈಭವದಿಂದ ಅರಮನೆಗೆ ಬಂದು ಮಗುವಿಗೆ ಜಾತಕರ್ಮವನ್ನೂ ಹತ್ತನೆಯ ದಿವಸದಲ್ಲಿ "ಪ್ರದ್ಯುಮ್ನ" ನೆಂದು ನಾಮಕರಣವನ್ನೂ ಮಾಡಿದನು. ಆ ಮಗುವು ಬಾಲಸೂರ್ಯನಂತೆ ಬೆಳೆದು ಅಕ್ಷರಾದಿ ಸಕಲ ವಿದ್ಯೆಗಳನ್ನು ಕಲಿತು ಯೌವನವನ್ನು ಹೊಂದಿ ಅತ್ಯಂತರೂಪ ಸೌಂದರ್ಯಯುತನಾದನು. ಒಂದುದಿನ

ಪ್ರದ್ಯುಮ್ನನು ಶುಚಿಯಾಗಿ ಹಿಮವತ್ಪರ್ವತದ ಸಿದ್ಧಕೂಟಕ್ಕೆ ಹೋಗಿ ಆರುತಿಂಗಳ ವರೆಗೆ ಅನೇಕ ವಿದ್ಯೆಗಳನ್ನು ಸಾಧಿಸಿಕೊಂಡು ಬಂದನು.

ಕಾಳಶಂಬರನಿಗೆ ಅಗ್ನಿರಾಜನೆಂಬ ಬಲಿಷ್ಠನಾದ ಶತ್ರುವು ಮಾರ್ಮಲೆಯುತ್ತಿದ್ದನು. ಅವನ ಮೇಲೆ ಕಾಳಶಂಬರನು ಯುದ್ಧಕ್ಕೆ ಹೋಗಬೇಕೆಂದಿರುವುದನ್ನು ತಿಳಿದು ಪ್ರದ್ಯುಮ್ನನು ತಂದೆಯ ಬಳಿಗೆ ಹೋಗಿ ಆ ಕೆಲಸವನ್ನು ತನಗೆ ವಹಿಸುವಂತೆ ಕೇಳಿಕೊಂಡು ಅಪ್ಪಣೆ ಪಡೆದು ಬಹುಸೈನ್ಯದೊಡನೆ ಹೋಗಿ ಅಗ್ನಿರಾಜನ ಸೈನ್ಯವನ್ನು ಸೋಲಿಸಿ ಅವನನ್ನು ಸೆರೆಹಿಡಿದು ಅವನ ಉತ್ತಮ ವಸ್ತುಗಳನ್ನು ದೋಚಿಕೊಂಡು ಹಿಂದಿರುಗಿ ಬರಲು ಕಾಳಶಂಬರನು ಇದಿರ್ಗೊಂಡು ತನ್ನ ಕಾಲಿಗೆರಗಿದ ಮನ್ಮಥನನ್ನು ಆಲಿಂಗಿಸಿ ಹರಸಿ ಪಟ್ಟದಾನೆಯಮೇಲೇರಿಸಿ ಬಹು ವೈಭವದಿಂದ ಪುರಪ್ರವೇಶಮಾಡಿಸಿದನು. ಎಲ್ಲಿ ನೋಡಿದರೂ ಸ್ತ್ರೀಯರು ಸುತ್ತು ಮುತ್ತಿ ಮದನಕುಮಾರನನ್ನು ನೋಡುತ್ತಿದ್ದರು. ಅವರ ಮನಸ್ಸಿನಲ್ಲಿ ಮನ್ಮಥನ ರೂಪವು ಖಚಿತವಾಗಿರಲು ಅಂದಿನಿಂದ ಸ್ಮರನಿಗೆ ಚಿತ್ತಜನೆಂದು ಹೆಸರಾಯ್ತು. ಕಾಳಶಂಬರನು ಉತ್ಸಾಹದಿಂದ ಪುತ್ರನನ್ನು ಅರಮನೆಗೆ ಕರೆದೊಯ್ದು ಉತ್ತಮ ಮುಹೂರ್ತದಲ್ಲಿ ಯುವರಾಜಪಟ್ಟವನ್ನು ಕಟ್ಟುವುದಕ್ಕಾಗಿ ತೀರ್ಥಜಲದಿಂದ ಮಜ್ಜನಮಾಡಿಸಿ ಹಾರ ಮುಕುಟ ಕುಂಡಲಾದಿ ಭೂಷಣಗಳಿಂದ ಭೂಷಿಸಿ ಸಿಂಹಾಸನವನ್ನೇರಿಸಿದನು. ಆಗ ಕಾಂಚನಮಾಲೆಯು ಕಂಠಹಾರವನ್ನು ತಂದು ಮಗನ ಕೊರಳಿಗೆ ಹಾಕಿದಳು. ಆಗ ಆ ನವಮನ್ಮಥನ ಅನುಪಮ ರೂಪ ಸೌಂದರ್ಯವನ್ನು ನೋಡಿ ಮೋಹಿತಳಾಗಿ ಕಾಂಚನಮಾಲೆಯು ಅವನಿಗೆ ತಾನು ತಾಯಿಯೆಂಬ ಭಾವವನ್ನು ಬಿಟ್ಟು ಫುಲ್ಲಶರನನ್ನು ಆತುರದಿಂದ ನೋಡಿದಳು. ಆಕೆಯ ಮೈ ನಡುಗಿತು. ಮುಖವು ವಿಕಾರವಾಯ್ತು. ಮೈಬೆಮರಿತು. ಹೀಗೆ ವಿಕಾರ ದೃಷ್ಟಿಯಿಂದ ನೋಡಿ ಒಂದು ಕ್ಷಣಕಾಲದ ಸುಖಕ್ಕೋಸುಗ ತನ್ನ ಧರ್ಮವನ್ನು ಮರೆತು ಅದರಿಂದ ತನಗೆ ಮುಂದೆ ನರಕಗತಿಯಾಗುವುದೆಂಬುದನ್ನೂ ಲೋಕದಲ್ಲಿ ಆಚಂದ್ರಾರ್ಕ ಸ್ಥಾಯಿಯಾದ ದೊಡ್ಡ ಅಪಕೀರ್ತಿಯು ಬರುವುದೆಂಬುದನ್ನೂ ಯೋಚಿಸದೆ ಸದಾಚಾರ, ಧರ್ಮ, ಸ್ವರ್ಗ, ಮೋಕ್ಷಗಳನ್ನು ಮರೆತು ತನ್ನ ಸವತಿಯರೂ ಪತಿಯೂ ತಿಳಿದರೆ ತನಗೆ ಕೆಡಕಾಗುವುದೆಂಬುದನ್ನು ಯೋಚಿಸದೆ ಲಜ್ಜೆಯನ್ನು ತೊರೆದು ತಾನು ಮೊಲೆಯುಣಿಸಿದ ಮಗನಲ್ಲಿ ಕೂಡಬೇಕೆಂದಿಚ್ಛಿಸಿದಳು ಆ ಪಾಪಿ ದುಷ್ಟೆ ದುರಾಚಾರಿಣಿ ಕಾಂಚನಮಾಲೆ. ಅಂತು ಸತ್ಯ ಸದಾಚಾರನಿಷ್ಠನಾದ

ಮನ್ಮಥನಲ್ಲಿ ಮನವಿಟ್ಟು ಅತ್ತ ಕಾಂಚನಮಾಲೆಯು ದಿನದಿನಕ್ಕೆ ವಿರಹಾಗ್ನಿಯಿಂದ ಬಳಲಿ ಬೆಂದು ಬೆಂಡಾಗುತ್ತಿದ್ದಳು.

ಇತ್ತ ಕಾಳಶಂಬರನು ಪ್ರದ್ಯುಮ್ನನಿಗೆ ಯುವರಾಜಪಟ್ಟವನ್ನು ಕಟ್ಟಿ ಬಹು ಸಂತೋಷದಿಂದಿದ್ದನು. ಒಂದುದಿನ ಚಿತ್ರಜನು ಅಗ್ನಿರಾಜನ ಬಂಧನವನ್ನು ಬಿಡಿಸಿ ಅವನನ್ನು ಅವನ ಊರಿಗೆ ಕಳುಹಿಸಿಕೊಟ್ಟು ಬಳಿಕ ತನ್ನ ತಂದೆಗೆ ಶತ್ರುಗಳಾಗಿದ್ದ ರಾಜರುಗಳನ್ನೆಲ್ಲ ಸೋಲಿಸಿ ತಂದೆಗೆರಗಿಸಿ ಸುಖದಿಂದಿರುವಾಗ ಅವನ ಕೀರ್ತಿಯನ್ನೂ ತೇಜಸ್ಸನ್ನೂ ನೀತಿಯನ್ನೂ ಲಾವಣ್ಯವನ್ನೂ ಚೆಲ್ವಿಕೆಯನ್ನೂ ಚಾತುರ್ಯವನ್ನೂ ನೋಡಿ ಸೈರಿಸದೆ ಕಾಳಶಂಬರನ ವಜ್ರದಾಡ ಮೊದಲಾದ ಐದು ಮಂದಿ ಮಕ್ಕಳು ಸ್ಮರನಲ್ಲಿ ಕಪಟಸ್ನೇಹವನ್ನು ಮಾಡಿ ಹೇಗಾದರೂ ಅವನನ್ನು ಕೊಲ್ಲಬೇಕೆಂದು ಹೊಂಚುಕಾಯುತ್ತಿದ್ದರು. ಇತ್ತ ಆ ಪಾತಕಿತ್ತಿ ಕಾಂಚನಮಾಲೆಯು ಮನ್ಮಥನಲ್ಲಿ ಭೋಗಕಾಂಕ್ಷೆಯಿಂದ ಗುಪ್ತವಾಗಿ ಕೊರಗುತ್ತಿದ್ದಳು.

---

೧೯. ಕಾಂಚನಮಾಲೆಯ ವಿರಹವರ್ಣನ ಸಂಧಿ.

ಕಾಂಚನಮಾಲೆಯು ತನಗೆ ವಿರಹವೇದನೆಯಿಂದಾದ ಜ್ವರವನ್ನು ರೋಗದಿಂದಾದ ಜ್ವರವೆಂದು ಪ್ರಕಟಮಾಡುತ್ತಿರಲು ಆ ಸಮಾಚಾರವನ್ನು ಮನ್ಮಥನು ಓರ್ವ ಸ್ತ್ರೀಯ ಮುಖದಿಂದ ಕೇಳಿ ಮರುಕದಿಂದ ತಾಯಿಯ ಬಳಿಗೆ ಹೋಗಿ "ಎಲೈ ತಾಯೆ! ನಿನಗೇಕೀದಾಹಜ್ವರವುಂಟಾಯ್ತು? ಹೇಳು" ಎಂದು ಕೇಳಿದನು. ಆ ಮಾತನ್ನು ಕೇಳಿ ಅಕೆಯು "ಹಿತವಲ್ಲದ ಭೋಜನದಿಂದ ನನಗೆ ಪ್ರಾಣತ್ಯಾಗವಾಗುವಂತಹ ದಾಹಜ್ವರವುಂಟಾಯ್ತು" ಎಂದು ಸುಳ್ಳುಹೇಳಿ "ಇತ್ತ ಬಂದು ನನ್ನ ಕೈಯನ್ನು ಮುಟ್ಟಿನೋಡು" ಎನಲು ಆತನು ಹತ್ತಿರಕ್ಕೆ ಹೋಗಿ ನಿಂತನು. ಆಗ ಅಕೆಯು ಆತನ ಕೈಯನ್ನು ಹಿಡಿದು ತನ್ನ ಘನಕುಚಗಳ ಮಧ್ಯದಲ್ಲಿರಿಸಿ "ಮದನ! ಕೇಳು, ನಿನ್ನಿಂದ ದೊರಕಿತು ನನಗೆ ಪರಿತಾಪ. ನಿನ್ನ ಸುರತಕ್ರೀಡೆಯಿಂದಲ್ಲದೆ ನಾನು ಬದುಕೆನು. ಇನ್ನು ಸಂದೇಹಪಡಬೇಡ" ಎಂದಳು. ಆ ಮಾತನ್ನು ಕೇಳಿ ಉನ್ನತಗುಣಭೂಷಣನಾದ ಮದನನು, ವಿಷವನ್ನು ಕಾರುವ ಸರ್ಪದ ಘಟದಲ್ಲಿ ಕೈಯನ್ನಿರಿಸಿ ಬೆದರಿ ತೆಗೆಯುವಂತೆ, ಆ ದುಷ್ಟಳ ಕುಚಗಳ ಮಧ್ಯದಿಂದ ಕೈಯನ್ನು ತೆಗೆದು ಭಯಕಂಪಿತನಾಗಿ ಅಕೆಯನ್ನು ಕುರಿತು

" ತಾಯೆ! ಕೇಳು, ಮಗಸೊಡನೆ ಹೀಗೆ ಅನ್ಯಾಯದ ನುಡಿಯನ್ನು ನುಡಿಯಬ ಹುದೇ? ತಾಯನ್ನು ವೋಹಿಸಿದರೆ ಲೋಕದಲ್ಲಿ ಅನ್ಯಾಯವಾಗದೇ? ಕಂಡವರು ಚೀ ಎನ್ನಲಿಕ್ಕಿಲ್ಲವೇ? ಆ ಪಾಪಕಾರ್ಯಕ್ಕೆ ಸಮ್ಮತಿಸಿದವರನ್ನು ಭೂಮಿಯು ಬಾಯ್ದೆರೆದು ನುಂಗದಿರುವುದೇ? ಅಪವಾದಕ್ಕಂಜದೆ ಕೊಕ್ಕರಿಸದೆ ಪಾಪಾಚಾರಿಗ ಳಾಗಿರುವವರನ್ನು ಮಾತನಾಡಿಸುವವರ ಬಾಯಲ್ಲಿ ಹುಳುವೀಳದಿರುವುನೇ? ಎತ್ತಿ ಆಡಿಸಿದ ಶರೀರವನ್ನು ಆಲಿಂಗಿಸಿ ತಾಸುಂಡ ಮೊಲೆಯನ್ನು ಹಿಡಿದು ಹೆಂಡತಿಯಂತೆ ತಾಯನ್ನು ಭಾವಿಸಿದರೆ ಭೂಮಂಡಲವು ಬಹಿಷ್ಕರಿಸದಿರುವುದೇ?" ಈ ಮೊದ ಲಾದ ನುಡಿಗಳಿಂದ ಬೋಧಿಸಿದರೂ ಕೇಳದೆ ಆಕೆಯು " ಎಲೈ ಮದನನೆ! ಕೇಳು, ನಾನು ನಿನಗೆ ತಾಯಲ್ಲ. ನಿನ್ನನ್ನು ವನದ ತಸ್ಕರಶಿಲೆಯ ಲ್ಲಿ ಕಾಳಶಂಬರನು ಕಂಡು ಕರುಣದಿಂದ ತಂದು ನನಗೆ ಕೊಡಲು ನಾನು ನಿನ್ನನ್ನು ಮರುಕದಿಂದ ಸಾಕಿದೆನು. ನೀನು ನನಗೆ ಮಗನಲ್ಲವೆಂಬುದಕ್ಕೆ ದೃಷ್ಟಾಂತನನ್ನು ಹೇಳುವೆನು,—ಈ ಕಾಳಶಂ ಬರಖೇಚರನ ಸಂತತಿಯವರಿಗೆ ಪ್ರಜ್ಞಪ್ತಿಯೆಂಬ ವಿದ್ಯೆಯು ಸಿದ್ಧಿಸುವುದಿಲ್ಲ. ಅವರು ಅದನ್ನು ತಮ್ಮ ಪ್ರಿಯಪತ್ನಿಯರ ವಶಮಾಡಿ ಇರಿಸುವರು. ಅದು ನನ್ನ ಕೈ ವಶವಾಗಿದೆ. ಅದನ್ನು ನಿನಗೆ ಕೊಡುವೆನು. ನೀನು ಬೇರೆಯವನಾದರೆ ನಿನಗಾ ವಿದ್ಯೆಯು ಸಾಧ್ಯವಾಗುವುದು. ನೀನು ನನ್ನ ಮಗನಾದರೆ ಅದು ನಿನ್ನನ್ನು ಸೇ ರದು. ನೀನು ನನ್ನ ಮಗನಲ್ಲವೆಂಬುದಕ್ಕೆ ಇದು ಪ್ರತ್ಯಕ್ಷನಿದರ್ಶನವು" ಎಂ ದಳು. ಆ ಮಾತನ್ನು ಕೇಳಿ ಮದನನು ಆ ವಿದ್ಯೆಯನ್ನು ಕಲಿಯಬೇಕೆಂಬ ಅಭಿಲಾ ಷೆಯಿಂದ " ಎಲೈ ತಾಯೆ! ಉತ್ತಮವಾದ ಆ ವಿದ್ಯೆಯನ್ನು ನನಗೆ ಕೊಡು " ಎನಲು ಆಕೆಯು ತನ್ನ ಮಾತಿಗೆ ನಿಮಾನಕೇತನನು ಒಡಂಪಟ್ಟನೆಂದು ಸಂತೋಷ ದಿಂದ ಆ ವಿದ್ಯಾಮಂತ್ರವನ್ನು ಪದೇಶಮಾಡಿ ವಿಜಯಾರ್ಧಗಿರಿಯ ಪೂರ್ವದಿಕ್ಕಿ ನಲ್ಲಿರುವ ಸಿದ್ಧಕೂಟಕ್ಕೆ ಹೋಗಿ ಅದನ್ನು ಸಾಧಿಸುವಂತೆ ಹೇಳಿದಳು. ಪಂಚಶರನು ಅಲ್ಲಿಗೆ ಹೋಗಿ ಆ ಮಂತ್ರದಿಂದ ವಿದ್ಯೆಯನ್ನು ಸಾಧಿಸುತ್ತಿ ರಲು ಇತ್ತ ಕಾಂಚನಮಾಲೆಯು ಉಡಿಗೆ ಊಟಗಳನ್ನೂ ಮರೆತು ಚಿತ್ತಜನು ಎದುರಿಗೆ ಬರುವನೆಂದು ಚಿಂತಿಸುತ್ತಿದ್ದಳು. ಆಕೆಗೆ ಹಿತವನ್ನು ಬೋಧಿಸುವುದ ಕ್ಕಾಗಿ ಸ್ಮರನು ಅವಲೋಕಿನಿಯೆಂಬ ವಿದ್ಯಾದೇವತೆಯನ್ನು ಕಳುಹಲು ಅದು ಕಾಂಚನಮಾಲೆಯ ಸಖಿಯ ರೂಪವನ್ನು ಧರಿಸಿಕೊಂಡು ಆಕೆಯ ಸಮೀಪಕ್ಕೆ ಬಂದು ಆಕೆಯ ಕಂದಿ ಕುಂದಿದ ಅವಯವಗಳನ್ನು ನೋಡಿ ಕೆಲವು ಪರೀಕ್ಷೆಗಳಿಂದ ಅದು ವಿರಹಜ್ವರವಲ್ಲದೆ ದಾಹಜ್ವರವಲ್ಲವೆಂದು ನಿಶ್ಚಯಿಸಿ ಆ ರಹಸ್ಯವನ್ನು ತನ್ನಲ್ಲಿ

ಹೇಳಬೇಕೆಂದು ಕಾಂಚನಮಾಲೆಯನ್ನು ಕಾಡಿ ಬೇಡಲು ಆಕೆಯು ಆ ಸಖಿಯಿಂದ ಭಾಷೆಯನ್ನು ತೆಗೆದುಕೊಂಡು ಮನ್ಮಥನ ಮನೋಹರಾಕಾರವನ್ನು ನೋಡಿದುದರಿಂದ ತನ್ನ ಶರೀರದಲ್ಲಿ ವಿರಹಾಗ್ನಿಯುಂಟಾದುದೆಂದಳು. ಆ ಮಾತನ್ನು ಕೇಳಿ ಸಖಿಯು ಚಕಿತಳಾಗಿ ಕಾಂಚನಮಾಲೆಯನ್ನು ಕುರಿತು " ಸಖಿಯೆ! ರಾಜನ ಪತ್ನಿಯರಲ್ಲಿ ನೀನೇ ಸಲಿಗೆಯವಳು. ಕುಲ ಜಾತಿ ರೂಪ ಯೌವನ ಸರ್ವವಿದ್ಯಾಕಲೆಗಳಲ್ಲಿ ನಿನಗಿಂತ ಹೆಚ್ಚಿನ ಸ್ತ್ರೀಯರು ಈ ಮನೆಯಲ್ಲಿ ನಿನ್ನ ಗಂಡನಿಗೆ ಹಲವರಿದ್ದಾರೆ. ಆದರೂ ಅವನು ತನ್ನ ತನುಮನಗಳನ್ನು ನಿನ್ನಲ್ಲಿಟ್ಟು ನಿನಗೆ ಯಜಮಾನಪಟ್ಟವನ್ನು ಕೊಟ್ಟಿರುವನು. ಗಂಡನು ಯಾವ ಮಡದಿಯನ್ನು ಹೆಚ್ಚಾಗಿ ಪ್ರೀತಿಸುತ್ತಾನೋ ಅದು ಆಕೆಯ ಪೂರ್ವಪುಣ್ಯವೆಂದು ಬಗೆಯದೆ ಸವತಿಯರು ಆಕೆಯು ಗಂಡನಿಗೆ ಮದ್ದು ಹಾಕಿದ್ದಾಳೆಂದು ಹೇಳುತ್ತಾರೆ. ಅವಳು ದೋಷಿಯಾಗುವುದನ್ನೇ ಕಾದಿದ್ದು ಸ್ವಲ್ಪ ದೋಷವು ಸಿಕ್ಕಿದರೆ ಅದನ್ನು ಜನಜನಿತಮಾಡುತ್ತಾರೆ." ಎಂದು ಮೊದಲಾಗಿ ಹಲವು ಪಥಗಳಿಂದ ಬೋಧಿಸಿದರೂ ಕಾಂಚನಮಾಲೆಯು ಕೇಳದಿರಲು ಕೊನೆಗೆ ತಾನು ಅನಲೋಕಿನಿಯೆಂಬ ದೇವತೆಯೆಂದೂ ಆಕೆಗೆ ಹಿತಬೋಧೆಯನ್ನು ಮಾಡುವುದಕ್ಕಾಗಿ ಸ್ಮರನು ತನ್ನನ್ನು ಕಳುಹಿದನೆಂದೂ ಆ ಬೋಧೆಯನ್ನು ಕೇಳದಿರುವುದರಿಂದ ಕಾಂಚನಮಾಲೆಗೆ ಕೇಡಾಗುವುದೆಂದೂ ಹೇಳಿ ಅದೃಶ್ಯವಾದಳು.

ಅತ್ತ ಮದನನು ವಿದ್ಯೆಯನ್ನು ಸಾಧಿಸಿಕೊಂಡು ಜಿನಭವನಕ್ಕೆ ಹೋಗಿ ತ್ರಿಪ್ರದಕ್ಷಿಣೆಯನ್ನು ಮಾಡಿ ಕೈಮುಗಿದು ವಂದಿಸಿ ಅಲ್ಲಿದ್ದ ಜ್ಞಾನಾಂಬುಧಿಚಂದ್ರರೆಂಬ ಮುನಿವರ್ಯರನ್ನು ಕಂಡು ಅವರಿಗೆ ನಮಸ್ಕಾರಮಾಡಿ ಆ ದಿವ್ಯಜ್ಞಾನಿಗಳಿಂದ ತನ್ನ ತಂದೆತಾಯಿಗಳಾರೆಂಬ ವಿವರವನ್ನು ಕೇಳಿ ತಿಳಿದು ಮತ್ತೆ ನಗರಕ್ಕೆ ಬಂದನು. ಅದನ್ನು ತಿಳಿದು ಕಾಂಚನಮಾಲೆಯು ಸರ್ವಾಭರಣಭೂಷಿತೆಯಾಗಿ ಮದನನ ಸದನಕ್ಕೆ ಹೋಗಿ " ನೀನು ಬೇಡಿದ ಇಚ್ಛೆಯನ್ನಿತ್ತೆನು. ನೀನೆನ್ನ ಜೀವವನ್ನುಳಿಸು. ನನ್ನಲ್ಲಿ ಕೂಡು " ಎಂದಳು. ಆ ಮಾತನ್ನು ಕೇಳಿ ತನ್ನ ಕಿವಿಗಳಿಗೆ ಎರಡು ಕೈಗಳನ್ನಿಟ್ಟು ಪರಿಪರಿಯಾಗಿ ಹಿತವಚನಗಳನ್ನು ಹೇಳಿದರೂ ಕೇಳದಿರಲು ಅವನು ತಾನು ಅಲ್ಲಿರುವುದುಚಿತವಲ್ಲವೆಂದು ಬಗೆದು ಏಳ್ವಾಗ " ಪ್ರಾಣವನ್ನುಳಿಸು " ಎಂದು ಆಕೆಯು ಬಂದು ಪಂಚಬಾಣನ ಪಂಚೆಯ ಸೆರಗನ್ನು ಹಿಡಿದಳು. ಆಗ ಮನ್ಮಥನು " ಬಿಡು ಬಿಡು ಸೆರಗನ್ನು " ಎಂದು ಸೆರಗನ್ನು ಎಳೆದು ಬಿಡಿಸಿಕೊಂಡು ಹೊರಡಲು ಹಜ್ಜೆಯಿಡುವಾಗ ಅತನ ಕಾಲುಗಳನ್ನು ಹಿಡಿದುಕೊಂಡಳು. ಮಾರನು ಕಾಲುಗಳನ್ನು ಬಿದರಿ ಬಿಡಿಸಿಕೊಂಡನು. ಆಗ ಆಕೆಯು

ತುರುಬು ಬಿಚ್ಚಿ ಹೋದುದು. ಬಳೆಗಳು ಒಡೆದುವು. ಮುತ್ತು ರತ್ನಗಳ ಹಾರಗಳು ಕಿತ್ತು ಹೋದುವು. ಕಂಕಣಗಳ ಕೀಲುಗಳು ಸಡಿಲಿ ಕಳಚಿದುವು. ಆಗ ಕಾಂಚನ ಮಾಲೆಯು ರೇಗಿ ಎದೆಯನ್ನು ತಟ್ಟಿಕೊಂಡು " ನಿನಗೆ ತಕ್ಕುದನ್ನು ಮಾಡುವೆನು. ಎಲವೋ ನಿನ್ನ ಪ್ರಾಣವನ್ನು ತೆಗೆದುಕೊಳ್ಳದಿದ್ದರೆ ನಾನು ಹೊತ್ತವು ಮೊಲೆಗಳೇ ? ಎಕ್ಕೆಯ ಕಾಯಿಗಳು " ಎಂದು ನುಡಿಯಲು " ಹಾಗೆಯೇ ಮಾಡಿ " ಎಂದು ಹೇಳಿ ಮನ್ಮಥನು ಹೊರಟುಹೋದನು.

ಇತ್ತ ಆ ಕಾಂಚನಮಾಲೆಯು ವಿರಹಾಗ್ನಿಯಲ್ಲಿ ಕೋಪಾಗ್ನಿಯೂ ಬೆರೆತು ಇಮ್ಮಡಿಯಾಗಲು ಆಕೆಯು ಸ್ಮರನಿಗೆ ಕೇಡನ್ನೆಣಿಸಿ ಹಾರವನ್ನು ಹರಿದು ಕೂದಲು ಗಳನ್ನು ಕೆದರಿ ಸೀರೆಯನ್ನು ಹರಿದು ಬಳೆಯೊಡೆದು ಮೈಯನ್ನು ಗೀರಿಕೊಂಡು ಪ್ರದ್ಯುಮ್ನನನ್ನು ಕೊಲ್ಲಿಸದಿದ್ದರೆ ತನಗೇತರ ಬಾಳೆಂದು ಮನೆಯೊಳಗಿರುವಾಗ ಅಲ್ಲಿಗೆ ಕಾಳ ಶಂಬರನು ಬಂದು " ನಿನ್ನ ಕೋಮಲಶರೀರವು ಕೊರಗಿದ ಕಾರಣವೇನು ? ಹೇಳು" ಎನಲು ಆ ಮಾತನ್ನು ಕೇಳಿ ಆಕೆಯು ಗದ್ಗದಕಂಠಳಾಗಿ ಇಂತೆಂದಳು:—

" ಆ ಕಾಡಿನ ತಪ್ಪರಶಿಲೆಯಲ್ಲಿ ಬಿದ್ದು ನರಿ ನಾಯಿಗಳ ಪಾಲಾಗುವನನ್ನು ತಂದು ನನಗೀಯಲು ನಾನು ನನ್ನ ಮಗನಂತೆ ರಕ್ಷಿಸಿದೆನು. ಆತನು ಹೆಚ್ಚಿ ಬೆಳೆದು ನನ್ನ ರೂಪವನ್ನು ನೋಡಿ, ಹಸುವಿನ ಬಸಿರಿಂ ಬಂದ ಕರುವು ಬಲಿತು ಆ ಹಸುವಿನ ಮೇಲ್ವಾಯ್ವಂತೆ, ನನ್ನ ಮೇಲ್ವಾಯುವುದಕ್ಕೆ ಬರಲು ನಾನೊಪ್ಪದೆ ಅವನನ್ನು ಕುರಿತು ಹೀಗಂದೆನು—' ಮಗನೆ! ಬೇಡ, ಹೆತ್ತತಾಯಿಯು ಮೇಲೆ ಕಣ್ಣಿಟ್ಟು ನೋಡಿ ಮೋಹಿಸಿ ಇಹಪರಗಳನ್ನು ಕೆಡಿಸಿ ನನ್ನನ್ನು ಅಪವಾದಕ್ಕೆ ಗುರಿಮಾಡಬೇಡ. ಪಟ್ಟಕ್ಕೆ ಬರತಕ್ಕ ಮಕ್ಕಳನ್ನು ಕೈಬಿಟ್ಟು ನಿನಗೆ ಯುವರಾಜ ಪಟ್ಟವನ್ನು ಕಟ್ಟಿಸಿದೆನು. ತಂದೆಯ ಗೌರವನನ್ನು ಕಾಪಾಡುವ ಪುತ್ರರು ಈ ಕಾರ್ಯವನ್ನೆಣಿಸಿದರೆ ತಾಯಿಯು ರಕ್ಷಿಸಿಯಾದಂತಲ್ಲವೆ ? ಹೆತ್ತಮಗನೇ ! ನೀನೆನ್ನ ಮೋಹಿಸುವುದು ಚಿತವೇ ? ' ಎನಲು ಅವನು ನನ್ನನ್ನು ಒತ್ತಿಹಿಡಿದು ಸೀರೆಯನ್ನು ಹರಿದು ತಲೆಗೂದಲು ಗಳನ್ನು ಕಿತ್ತು ಕೆಡವಿ ಮೈಯನ್ನು ಪರಚಿ ಹಾರವನ್ನು ಕಿತ್ತು ಮೊಲೆಗಳ ಮೇಲಿನ ಸೆರಗನ್ನು ತೆಗೆದು ಉಟ್ಟಸೀರೆಯ ನಿರಿಯನ್ನು ಬಿಚ್ಚುವಾಗ ನಾನು 'ಅಯ್ಯಯ್ಯೋ' ಎಂದು ಕಿರಿಚಿಕೊಳ್ಳಲು ಆ ದುಷ್ಟನು ಓಡಿಹೋದನು. ಈ ಅಪಮಾನವನ್ನು ಹೊತ್ತುಕೊಂಡು ಯಾವ ಮೋರೆಯಿಂದ ನಾನು ಈ ಮನೆಯಲ್ಲಿ ಸವತಿಯರ ಮುಂದೆ ಮೊದಲಿನಂತೆ ನಿನ್ನೊಡನೆ ಮನ್ನಣೆಯಿಂದ ಬಾಳುವುದು ? "

ಕಾಳಶಂಬರನು ಕಾಂಚನಮಾಲೆಯ ಮಾತನ್ನು ಕೇಳಿ ಬಹುಕೋಪವನ್ನು ತಾಳಿ ಮಾರನನ್ನು ಈಗಲೇ ಕೊಲ್ಲಿಸುವೆನೆಂದು ಅರಮನೆಯಿಂದ ಹೊರಟು ವಜ್ರ

ದಾಡಾದಿ ವೃತ್ಯರನ್ನು ಕರೆಯಿಸಿ ಪ್ರದ್ಯುಮ್ನನನ್ನು ಶೀಘ್ರವಾಗಿ ಕೊಂದುಬರುವಂತೆ ಹೇಳಲು ಅವರು ಹೋಗಿ ಮಾರನಲ್ಲಿ ಹೆಚ್ಚಾದ ಕಪಟನ್ನೇಹವನ್ನು ಬೆಳೆಯಿಸಿ ವಿದ್ಯಾ ಸಾಧನೆಗೆಂದು ಅವನನ್ನು ಹೊರಡಿಸಿ ಅವನೊಡನೆ ಏಮಾನವನ್ನೇರಿ ವಿಜಯಾರ್ಧಗಿರಿ ಯ ಸಿದ್ಧಕೂಟಕ್ಕೆ ಹೋಗಿ ದೇವರ ದರ್ಶನವನ್ನು ಮಾಡಿ ಭಜಿಸಿ ಮನ್ಮಥನನ್ನು ಕುರಿ ತು " ಈ ಸಿದ್ಧಕೂಟದ ತುತ್ತತುದಿಯಲ್ಲಿ ಉತ್ತಮವಸ್ತುಗಳನ್ನು ಒಂದು ಸರ್ಪವು ರಕ್ಷಿಸುತ್ತಿರುವುದು. ಅಲ್ಲಿಗೆ ಹೋಗಿ ಅದನ್ನು ಹೊಡೆದು ಆ ವಸ್ತುಗಳನ್ನು ತರಬೇ ಕು" ಎಂದು ಹೇಳಿ ವಜ್ರದಾಡನು ತಾನು ಅದನ್ನು ತರಲು ಹೋಗುವುದಾಗಿ ಹೇಳಲು ಮಾರನು ನಗುತ್ತ ತಾನು ಹೋಗಿ ತನ್ನ ಮೇಲಾವ್ಯಯ್ದು ಬಂದ ಆ ಸರ್ಪವನ್ನು ಹೊಡೆ ದನು. ಆಗ ಅದು ತನ್ನ ದಿವ್ಯರೂಪವನ್ನು ತೋರಿ ಕಾಮಚಂಡಾಳಿನಿ ಸಮವಿದ್ಯೆ ಅತಿವಿದ್ಯೆ ಸಿಹ್ಮಪೀಠ ಚಾಮರ ಛತ್ರಿ ಇವುಗಳನ್ನಿತ್ತು " ಮೊದಲೋರ್ವ ಖೇಚ ರನು ಈ ವಸ್ತುಗಳನ್ನು ನನ್ನಲ್ಲಿ ಕೊಟ್ಟು ತಪಸ್ಸಿಗೆ ಹೋಗುವಾಗ ನನ್ನನ್ನು ಕುರಿ ತು ' ಸರ್ಪರೂಪವನ್ನು ಧರಿಸಿ ನೀನಿಲ್ಲಿರುವಾಗ ನಿನ್ನ ಬಳಿಗೆ ಬಂದು ನಿನ್ನನ್ನು ಹೊಡೆದ ವನಿಗೆ ಈ ವಸ್ತುಗಳನ್ನು ಕೊಡು ' ಎಂದು ಹೇಳಿರುವುದರಿಂದ ನಾನೀರೂಪವನ್ನು ಹೊಂದಿದ್ದೆನು." ಎಂದನು. ಅದಕ್ಕೆ ಸ್ಮರನು ತಾನು ಸ್ಮರಿಸಿದಾಗ ಆ ವಸ್ತುಗ ಗಳನ್ನು ತನಗೆ ಕೊಡಬೇಕೆಂದು ಆ ದೇವನಿಗೆ ಹೇಳಿ ಹೊರಟುಬಂದನು. ಆವನನ್ನು ಕಂಡು ವಜ್ರದಾಡಾದಿಗಳು ಚೋದ್ಯವಟ್ಟು ಮುಂದೆ ಒಂದು ಉರಿವ ಅಗ್ನಿಕುಂಡ ವನ್ನು ತೋರಿದರು. ಮಾರನು ಅದನ್ನು ಹೊಕ್ಕಲು ಬೆಂಕಿಯು ತಣ್ಣಗಾಗಿ ಅಲ್ಲಿಂದ ಅಗ್ನಿಕುಮಾರನು ಹೊರಟುಬಂದು ದಿವ್ಯವಸ್ತ್ರವನ್ನೂ ರತ್ನಾಭರಣವನ್ನೂ ಕೊಟ್ಟುಹೋದನು. ಮತ್ತೊಂದೆಡೆಯಲ್ಲಿ ಎರಡು ಮೇಷಪಾಷಾಣಗಳು ಬಹು ಭಯಂಕರವಾಗಿ ತಾಕುಬಡಿಯುತ್ತಿದ್ದುವು. ಮಾರಕುಮಾರನನ್ನು ಅಲ್ಲಿಗೆ ಕರೆ ದೊಯ್ಯಲು ಅವನು ಆ ಕಲ್ಲುಗಳನ್ನು ಒತ್ತಿ ಹಿಡಿದನು. ಆಗ ಮೇಷಾಸುರನು ಅವನಿಗೆ ಮಕರಕುಂಡಲವನ್ನಿತ್ತನು. ಮುಂದೆ ಸೂಕರಗಿರಿಯ ಗುಹೆಗೆ ಕರೆದೊ ಯ್ಯಲು ಅಲ್ಲಿ ಸೂಕರಾಸುರನು ಲೋಕಪೂರಣವೆಂಬ ಶಂಖವನ್ನಿತ್ತನು. ಕಾಳಗು ಹೆಯಲ್ಲಿ ಕಾಳಾಸುರನು ಕಾಳದಂಡವೆಂಬ ಗದೆಯನ್ನಿತ್ತನು. ಬಲಿಮುಖಗಿರಿಯಲ್ಲಿ ಬಲಿಮುಖದೇವನು ರತ್ನಕಿರೀಟವನ್ನಿತ್ತನು. ಮಲ್ಲಗಿರಿಯ ಗುಹೆಯುಲ್ಲಿ ಮಲ್ಲಾ ಸುರನು ಗುರಾಣಿಯನ್ನಿತ್ತನು. ಉರಗಗುಹೆಯಲ್ಲಿ ಉರಗರಾಕ್ಷಸನು ಕಾಮ ರೂಪಾನವನ್ನಿತ್ತನು. ಕಚ್ಛವೆಂಬ ಹೊಂಡದಲ್ಲಿ ತುರಗಾಸುರನು ಅಶ್ವರತ್ನವನ್ನಿತ್ತನು. ಗಜಮುಖಗುಹೆಯಲ್ಲಿ ಗಜರಾಕ್ಷಸನು ತ್ರಿಜಗದ್ಭೂಷಣವೆಂಬ ಗಜರತ್ನವನ್ನಿತ್ತನು.

ಒಂದು ಸರೋವರದಲ್ಲಿ ಜಲಾಸುರನು ಕಾಮಚಕ್ರವನ್ನಿತ್ತನು. ಅಕ್ಷವೆಂಬ ಗುಹೆಯಲ್ಲಿ ಭೀಮಾಸುರನು ಕಾಮಧೇನುವನ್ನಿತ್ತನು. ರಥಪರಿವೃಢವೆಂಬ ಗಿರಿಯಲ್ಲಿ ರಥರಾಕ್ಷಸನು ಮಕರಧ್ವಜಯುಕ್ತವಾದ ಪುಷ್ಪರಥವನ್ನಿತ್ತನು. ಬಲಾಹಕಗುಹೆಯಲ್ಲಿ ಹೆಬ್ಬುಲಿಯು ಪುಷ್ಪಬಾಣವನ್ನೂ ಇಕ್ಷುಧನುಸ್ಸನ್ನೂ ಕೊಟ್ಟಿತು. ಕದಂಬದ ನವೆಂಬ ಬಾವಿಯಲ್ಲಿ ಕದಂಬವಿಷಯವೆಂಬ ನಾಗಪಾಶವನ್ನು ದೊರಕಿಸಿದನು. ವೈಜಯಂತಗಿರಿಯನ್ನು ಹತ್ತಿ ಅಲ್ಲೊರ್ವ ರಾಕ್ಷಸನ ಗದೆಯನ್ನು ಕಿತ್ತುಕೊಂಡು ಅವನನ್ನು ಸದೆಬಡಿಯಲು ಅವನು ಮನುಷ್ಯರೂಪವನ್ನು ಧರಿಸಿ " ಈ ವಿಜಯಾರ್ಧಗಿರಿಯ ವಿಜಯನಗರದ ಅಜಿತಂಜಯನೆಂಬ ಖೇಚರನಿಗೂ ಆತನ ಸತಿ ಶಚಿಯೆಂಬ ವಳಿಗೂ ಹುಟ್ಟಿದ ಹೇಮಾಂಗದನೆಂಬ ಮಗನು ನಾನು. ಅನುಪಮ ರೂಪವತಿಯಾದ ರತಿಯು ನನ್ನ ತಂಗಿ. ಆಕೆಯ ಅವಯವ ಸೌಂದರ್ಯವನ್ನು ನೋಡಲು ಶತಸಹಸ್ರನೇತ್ರಗಳಾಗಬೇಕು. ಈಕೆಗೆ ಯೌವನವು ಪ್ರಾಪ್ತವಾಗಲು ' ಈಕೆಗೆ ಅನುರೂಪನಾದ ಪುರುಷನಿದ್ದಾನೆಯೇ? ' ಎಂದು ನಮ್ಮ ತಂದೆಯು ಓರ್ವ ಶಕುನಿಗನನ್ನು ಕೇಳಲು ಅವನು ' ವೈಜಯಂತಪರ್ವತದ ತುದಿಯ ಕೋಡುಗಲ್ಲಿನಲ್ಲಿ ನಿನ್ನ ಮಗನು ರಾಕ್ಷಸರೂಪವನ್ನು ಧರಿಸಿರಲು ಅವನನ್ನು ಬೆದರಿಸುವ ಪುರುಷನು ನಿನ್ನ ಮಗಳಿಗೆ ಪತಿಯಾಗುವನು ' ಎನಲು ಆ ಮಾತನ್ನು ಕೇಳಿ ನಮ್ಮ ತಂದೆಯು ಈ ತಂಗಿ ಸಹಿತ ನನ್ನನ್ನೀಪರ್ವತಕ್ಕೆ ಕಳುಹಲು ನಾನೀರೂಪವನ್ನು ಧರಿಸಿ ಇಲ್ಲಿದ್ದೆನು. ಆ ಶಕುನಿಗನು ಹೇಳಿದಂತೆ ನೀನೀಗ ಬಂದು ನನ್ನನ್ನುಗೆದ್ದುದರಿಂದ ನನ್ನ ತಂಗಿಯಾದ ರತಿಯನ್ನು ಪರಿಗ್ರಹಿಸು " ಎಂದು ತನ್ನ ಹಿಂದೆ ನಿಂತಿದ್ದ ರತಿಯನ್ನು ಮನ್ಮಥನಿಗೆ ತೋರಿದನು ಸಮರೂಪ ಸಮಯೌವನ ಸಮಲಾವಣ್ಯಾದಿಗಳುಳ್ಳ ರತಿಮನ್ಮಥರು ಆಗ ಒಬ್ಬರಿಗೊಬ್ಬರು ಅನುರಾಗದಿಂದ ನೋಡಿದರು. ಬಳಿಕ ಅಂಗಜನು ತಾನು ಕರೆಯಲು ಕಳುಹುವನರೆಗೂ ರತಿಯು ತಂದೆಯ ಬಳಿಯಲ್ಲಿರಲೆಂದು ಹೇಳಿ ಮುಂದೆ ನಡೆದು ಸಹಸ್ರಮುಖದ ಹುತ್ತವನ್ನು ಹೊಕ್ಕು ಕಾಮಮುದ್ರಿಕೆಯನ್ನು ತೆಗೆದುಕೊಂಡು ಬಂದನು. ಈ ರೀತಿಯಾಗಿ ಬಂದ ಮದನನನ್ನು ಕಂಡು ವಜ್ರದಾಡಾದಿಗಳು " ನಾವೊಂದು ಮಾಡಲು ತಾನೊಂದಾಗುವುದು. ಇವನಿಗೆ ಪುಣ್ಯದ ಬಲವುಂಟು ' ಎಂದು ಮನಸ್ಸಿನಲ್ಲಿ ಯೋಚಿಸಿ ಮನ್ಮಥನನ್ನು ಕುರಿತು " ಎಲೈ ವೀರನೆ! ಪೂರ್ವಭವದಲ್ಲಿ ಮಾಡಿದ ಪುಣ್ಯದಿಂದ ಇವು ನಿನಗೆ ಸೇರಿದುವು " ಎಂದು ಕಪಟ ವಿನಯದ ಪ್ರಾತನ್ನಾಡಿ ತಮ್ಮ ಪಟ್ಟಣದ ಮುಂದಣ ವನದ ಹಳೆಯ ಬಾವಿಯ ಬಳಿಗೆ ಅವನನ್ನು ಕರೆದೊಯ್ದು " ಈಬಾವಿಯಲ್ಲಿ ಉತ್ತಮವಾದ ವಸ್ತುಗಳಿರುತ್ತವೆ.

ಇದಕ್ಕಿಳಿದರೆ ಅವು ಸಾಧ್ಯವಾಗುವುವು. ಇದುನಿಶ್ಚಯ''ಎನಲು ಅವಳ ಕಾಪಟ್ಯವನ್ನು ಮದನನು ತಿಳಿದು ರೂಪಪರಾವರ್ತನವೆಂಬ ವಿದ್ಯೆಯಿಂದ ತನ್ನ ರೂಪವನ್ನು ನಿರ್ಮಿಸಿ ಆಧನ್ನು ಬಾವಿಗಿಳಿಸಿ ತಾನು ಅದೃಶ್ಯನಾಗಿ ನೋಡುತ್ತಿರಲು ಅವರು ಇದೇ ಸಮಯವೆಂದು ಅನೇಕ ಕಲ್ಲುಗಳನ್ನು ಆ ಬಾವಿಯೊಳಕ್ಕೆ ಬಿಸುಟು '' ಶತ್ರುವು ಸತ್ತನು, ನಮಗಿನ್ನು ಲೇಸಾಯಿತು ''ಎನ್ನುವ ಸಮಯದಲ್ಲಿ ಮದನನು ಪ್ರತ್ಯಕ್ಷನಾಗಿ ಕೋಪದಿಂದ ಅವರನ್ನು ಹಿಡಿದು ನಾಗಪಾಶದಿಂದ ಬಂಧಿಸಲು ಅದನ್ನು ತಿಳಿದು ಕಾಳಶಂಬರನು ತನ್ನ ಸೈನ್ಯಸಮೇತನಾಗಿ ಬರುವುದನ್ನು ಕಂಡು ಮಾರನು ಅದಕ್ಕೆಮ್ಮಡಿಯಾದ ಬಲವನ್ನು ವಿದ್ಯೆಯಿಂದ ನಿರ್ಮಿಸಿ ಯುದ್ಧಸನ್ನದ್ಧನಾಗಿ ನಿಂತಿರಲು ಆಗ ಆಕಾಶದಿಂದ ನಾರದನು ಇಳಿದು ಬಂದು ಅವರೀರ್ವರ ಮಧ್ಯದಲ್ಲಿ ನಿಂತು ' ಎಲೈ ಖೇಚರರಾಜನೆ! ಪರೀಕ್ಷಿಸದೆ ಸ್ತ್ರೀಯರ ಮಾತನ್ನು ನಂಬಿ ನೀವು ಪರಸ್ಪರವಾಗಿ ಹೋರಾಡಿದರೆ ಅಪಕೀರ್ತಿಯು ಬಾರದಿರುವುದೇ ? '' ಎನಲು ಆ ಮಾತನ್ನು ಕೇಳಿ ಕಾಳಶಂಬರನು ಯುದ್ಧವನ್ನು ನಿಲ್ಲಿಸಿದನು. ಆಗ ನಾರದನು ಕಾಳಶಂಬರನಿಗೆ ಮನ್ಮಥನ ಪರಿಚಯವನ್ನೆಲ್ಲ ಹೇಳಿ ಪುತ್ರನನ್ನು ಹುಡುಕುವುದಕ್ಕಾಗಿ ಕೃಷ್ಣರುಗ್ಮಿಣಿಯರು ಕಳುಹಲು ತಾನು ಶ್ರೀಮಂದರ ತೀರ್ಥಂಕರರ ಸಮವಸರಣಕ್ಕೆ ಹೋಗಿ ಗಣಧರರಿಂದ ಎಲ್ಲಾ ವಿಷಯವನ್ನು ಮತ್ತು ಕಾಂಚನಮಾಲೆಯು ಮಾಯೆಯನ್ನು ನಿಜವೆಂದು ನಂಬಿ ಕಾಳಶಂಬರನು ಮಾಡುತ್ತಿರುವ ಯುದ್ಧಸಮಾಚಾರವನ್ನು ಕೇಳಿ ಬಂದೆನೆಂದೂ ಮನ್ಮಥನನ್ನು ತಂದೆತಾಯಿಗಳ ಬಳಿಗೆ ಈಗಲೇ ಕಳುಹೆಂದೂ ಹೇಳಿದನು. ಆ ಮಾತನ್ನು ಕೇಳಿ ಕಾಂಚನಮಾಲೆಯು ಲಜ್ಜಿತೆಯಾಗಿ ವೈರಾಗ್ಯದಿಂದ ದೀಕ್ಷೆಯನ್ನು ಧರಿಸಿದಳು. ಕಾಮನು ವಜ್ರದಾಡ ಮೊದಲಾದವರ ಬಂಧನವನ್ನು ಬಿಡಿಸಿದನು. ನಾರದನು ಕಾಳಶಂಬರನಿಗೆ ಸಮಾಧಾನವನ್ನು ಹೇಳಿ ಒಡಂಬಡಿಸಿ ಮನ್ಮಥನೊಡನೆ ಕಾಮವಿಮಾನವನ್ನೇರಿ ಆಕಾಶಮಾರ್ಗದಲ್ಲಿ ಬರುತ್ತ ಕೆಳಗೆ ತಳಿರು ತೋರಣಾದಿಗಳಿಂದ ಅಲಂಕೃತವಾದ ಒಂದು ನಗರವನ್ನು ನೋಡಿ ಮಾರನು ಅಡಾವನಗರವೆಂದು ಕೇಳಿದನು. ಅದಕ್ಕೆ ನಾರದನು ' ಎಲೆ ಸುಕುಮಾರ! ಇದು ನಿನ್ನ ಮಾವನಾದ ಕೌರವಭೂವಾಲನ ಹಸ್ತಿನಪುರವೆಂಬ ರಾಜಧಾನಿ. ಕೌರವನಿಗೆ ಆತನ ಹೆಂಡತಿ ಜಲಧಿಯೆಂಬವಳಲ್ಲಿ ಉದಧಿಕುಮಾರಿಯೆಂಬ ಮಗಳು ಹುಟ್ಟಿ ಯೌವನವತಿಯಾಗಿಹುತ್ತಾಳೆ. ಹದಿನಾರನೆಯ ವರುಷಕ್ಕೆ ನೀನು ಬಂದಾಗ ಆಕೆಯನ್ನು ನಾರಾಯಣನು ನಿನಗೆ ತರಬೇಕೆಂದಿದ್ದನು. ನೀನು ಬರುವುದು ಸಾವಕಾಶನಾದುದರಿಂದ ಈಕೆಯನ್ನು ವುರುಷೋತ್ತಮನ ಹಿರಿಯ ಹೆಂಡತಿಯಾದ ಸತ್ಯಭಾ

ಮೆಯ ಮಗ ಭಾನುಕುಮಾರನಿಗೆ ತರುವುದಕ್ಕಾಗಿ ಒಸಗೆಯ ವಾದ್ಯಧ್ವನಿಯಾಗುತ್ತಿದೆ. ಈ ಮದುವೆಯಲ್ಲಿ ನಿನ್ನ ತಾಯಿ ರುಗ್ಮಿಣಿದೇವಿಯ ಕುರುಳುಗಳನ್ನು ಸತ್ಯಭಾಮೆಯು ಮೆಟ್ಟಿ ಮಾಯುವಳು " ಎಂದನು. ಆ ಮಾತನ್ನು ಕೇಳಿ ಮನ್ಮಥನು ರೇಗಿ ನಾರದನನ್ನು ವಿಮಾನದಲ್ಲೇ ಇರುವಂತೆ ಹೇಳಿ ತಾನು ಆ ಕನ್ನೆಯನ್ನು ನೋಡಿಬರುತ್ತೇನೆಂದು ಆ ಪುರಕ್ಕಿಳಿದು ಒಬ್ಬ ಮುದುಕನಾದ ಕ್ಷೌರಿಕನ ವೇಷವನ್ನು ಧರಿಸಿಕೊಂಡು ಕೌರವನ ಅರಮನೆಯ ಬಾಗಿಲಿಗೆ ಹೋಗಿ ದ್ವಾರಪಾಲಕರನ್ನು ಕುರಿತು " ನಾನು ಪುರುಷೋತ್ತಮನ ಮನೆಯ ನಾಪಿತನು. ಕೌರವನ ಪುತ್ರಿಯನ್ನು ಸಿಂಗರಿಸುವುದಕ್ಕಾಗಿ ನನ್ನನ್ನು ಕಳುಹಿದನು. ಈ ವಿಷಯವನ್ನು ರಾಜನಿಗೆ ತಿಳಿಸಿ " ಎಂದನು. ಆ ಮಾತನ್ನು ಕೇಳಿ ದ್ವಾರಪಾಲಕರು ರಾಜನಿಗೆ ತಿಳುಹಲು ಅವನು ಅನುಮತಿಸಿ ಮಾರನನ್ನು ಒಳಕ್ಕೆ ಕಳುಹಲು ಅವನು ಹೋಗಿ ಆ ಸುಂದರಕನ್ಯೆಯ ಅವಯವಗಳಿಗೆ ಮಿಂಚಿಕ್ಕಿ ಆಕೆಯ ಸೌಂದರ್ಯವನ್ನು ನೋಡಿ ಮುಗ್ಧನಾಗಿ ಆಕೆಯನ್ನೆತ್ತಿಕೊಂಡು ಆಕಾಶಕ್ಕೆ ಹಾರಿ ನಾರದನಿದ್ದ ವಿಮಾನಕ್ಕೆ ಕರೆತರಲು ಆಕೆಯು ನಾರದನ ಅಡಿದಾವರೆಗೆರಗಿದಳು. ಆಗ ನಾರದನು " ರುಗ್ಮಿಣಿಯ ಕುಮಾರನಿಗೆ ಮದುವೆಯಾಗು " ಎಂದು ಹರಸಲು ಆಕೆಯು " ಮೊದಲು ನನ್ನನ್ನು ಆತನಿಗೆ ಕೊಡುವೆನೆಂದು ಈವರೆಗೆ ನನ್ನ ತಾಯಿತಂದೆಗಳು ಹೇಳುತ್ತಿದ್ದು ಈಗ ಅವನ ಬರುವಿಕೆಯನ್ನು ಕಾಣದೆ ನನ್ನ ಪೂರ್ವಭವದ ಪಾಪದ ಫಲದಿಂದ ಸತ್ಯಭಾಮೆಯ ಮಗನಾದ ಭಾನುಕುಮಾರನಿಗೆ ಕೊಡಬೇಕೆಂದಿರುವರು. ಸುಂದರನಾದ ಮನ್ಮಥನನ್ನಲ್ಲದೆ ಬೇರೆಯವರನ್ನು ನಾನು ಹೇಗೆ ಒಪ್ಪುವೆನು? ಇನ್ನೇ ಅದೃಷ್ಟಕ್ಕೆ ಏನು ಚಿಂತಿಸಲಿ? ಈ ಮುದುಕನಾದ ನಾವಿದನು ನನ್ನನ್ನು ತೆಗೆದುಕೊಂಡು ಬಂದುದು ಒಳ್ಳೆಯದಾಯ್ತು. ಕಾಮನಲ್ಲದೆ ನನಗೆ ಬೇರೆಯವರು ಬೇಕಿಲ್ಲ " ಎಂದು ಆಕೆಯು ವಿಮಾನದಿಂದ ಭೂಮಿಗೆ ಉರುಳಿದಳು. ಆಗ ಮಾರನು ಅಂತುಕೊಂಡು ಬಂದು ತನ್ನ ರೂಪವನ್ನು ತೋರಿದನು. ಆಗ ನಾರದನು " ಉದಧಿಕುಮಾರಿಯೆ! ನೋಡು, ನೀನು ಮೊದಲು ಮದುವೆಯಾಗುವೆನೆಂದಿರ್ದ ಮದನಕುಮಾರನು ಇವನು " ಎನಲು ಆಕೆಯು ಬಹು ಸಂತೋಷದಿಂದ ಮನ್ಮಥನನ್ನು ನೋಡಿದಳು.

೨೦. ಮನ್ಮಥನ ವಿವಾಹವರ್ಣನೆ ಸಂಧಿ

ಮನ್ಮಥನು ಉದಧಿಕುಮಾರಿಯನ್ನು ನಾರದನೊಡನೆ ಕಳುಹಲು ಅವನು ಆಕೆಯನ್ನು ಕರೆದುಕೊಂಡು ಕೌರವನಲ್ಲಿಗೆ ಇಳಿದು ಬಂದು "ರಾಜನೆ! ಈಕೆಯನ್ನು ಓರ್ವ ಖೇಚರನು ಎತ್ತಿಕೊಂಡು ಆಕಾಶದಲ್ಲಿ ಹೋಗುತ್ತಿರಲು ನಾನಾ ವಿಧದಿಂದ ಆತನನ್ನು ಒಡಂಬಡಿಸಿ ಬಿಡಿಸಿಕೊಂಡು ಬಂದೆನು" ಎಂದು ನುಡಿದು ಆಕೆಯನ್ನು ಅಲ್ಲಿ ಬಿಟ್ಟುಹೋಗಿ ಕಂದರ್ಪನೊಡನೆ ಬರುತ್ತಿರಲು ಇತ್ತ ಕೌರವನು ತನ್ನ ಪುತ್ರಿಯನ್ನು ಮದುವೆಗೆಂದು ವೈಭವದಿಂದ ದ್ವಾರಾವತಿಗೆ ಕರೆತರುತ್ತಿರುವುದನ್ನು ಕಂಡು ಮದನನು ಅದು ಯಾವರಾಜನ ಸೇನೆಯೆಂದು ಕೇಳಲು ನಾರದನು ಅದು ಕೌರವನ ಬಲವೆಂದೂ ಅದರಲ್ಲಿ ವೀರರಾದ ಪಾಂಡವರಿರುವರೆಂದೂ ಉದಧಿಕುಮಾರಿಯನ್ನು ಉತ್ಸವದಿಂದ ನಾರಾಯಣನಲ್ಲಿಗೆ ಕರೆದೊಯ್ಯುತ್ತಿರುವರೆಂದೂ ಹೇಳಿದನು. ಆ ಮಾತನ್ನು ಕೇಳಿ ಮಾರನು ನಾರದನನ್ನು ಅಲ್ಲಿಬಿಟ್ಟು ತಾನು ವೃದ್ಧ ವೇಷವನ್ನು ಧರಿಸಿ ಬೇಡರವನಂತೆ ಬಿಲ್ಲು ಬಾಣಗಳನ್ನು ಹಿಡಿದು ಹೆಗಲಲ್ಲಿ ಬಲೆಯನ್ನು ಹಾಕಿಕೊಂಡು ಬಂದು "ನೀವು ನನಗೆ ಸುಂಕವನ್ನು ಕೊಡದೆ ಮುಂದಕ್ಕೆ ಹೋಗಕೂಡದು. ನಾರಾಯಣನು ನನ್ನನ್ನಿಲ್ಲಿರಿಸಿದ್ದಾನೆ. ನೀವೆಲ್ಲರು ನಿಲ್ಲಿ" ಎಂದು ಕೌರವನ ಕಡೆಯವರನ್ನೆಲ್ಲ ತಡೆಯಲು ಅವರು ಸಗುತ್ತ ಮುಂದುವರಿದರು. ಆಗ ಆ ಮುದುಕನು ತನ್ನ ಬಿಲ್ಲನ್ನು ಅಡ್ಡಹಿಡಿದು ನಿಲಿಸಿದನು. ಯಾರು ಶಕ್ತರು ಬಂದು ನೂಕಿದರೂ ದಾರಿಯನ್ನು ಬಿಡದೆ ಅಡ್ಡಕಟ್ಟಿ ಹೋರಾಡುತ್ತಿರುವುದನ್ನು ಕಂಡು ವೀರರಾದ ಭೀಮಾರ್ಜುನರು ಬಂದು ನೂಕಿದೊಡನೆ ಅವರ ಕೈಕಾಲುಗಳನ್ನು ಸ್ತಂಭಿಸಿದನು. ಆಗ ಕುರುಬಲದ ನಾಯಕರು "ಇರಿಯಿರಿ ಕೊಲ್ಲು ಕೊಲ್ಲು" ಎಂದು ಬಂದು ಇದಿರಾಗಲು ಆ ಮುದುಕನು ಅವರ ಸೈನ್ಯಕ್ಕೆ ಎರಡರಷ್ಟು ಮಾಯಾಸೈನ್ಯವನ್ನು ನಿರ್ಮಿಸಿ ನಿಲಲು ಕಂಡು ಭೀಷ್ಮರು ತಾವು ಅದನ್ನು ಗೆಲ್ಲುವುದು ಸಾಧ್ಯವಲ್ಲವೆಂದು ಆ ವೃದ್ಧನ ಬಳಿಗೆ ಬಂದು "ಎಲೆ ಬೇಡನೆ! ನೀನೇಕೆ ನಮ್ಮನ್ನು ತಡೆವೆ? ನಿನಗೇನು ಬೇಕು? ಹೇಳು" ಎನಲು ಅವನು "ಈ ನಿಮ್ಮ ದೊರೆಯ ಮಗಳನ್ನು ನೀವು ಸುಂಕಕೊಡಿ" ಎಂದನು. ಅದಕ್ಕೆ ಭೀಷ್ಮರು ಆ ಸುಂಕವನ್ನು ಕೃಷ್ಣನ ಮುಂದೆ ಕೊಡುವೆವೆಂದೊಡಂಬಡಿಸಲು ಅದಕ್ಕೊಪ್ಪಿ ತನ್ನ

ಮಾಯಾಬಲವನ್ನು ಹಿಂದೆಗೆದು ಭೀಮಾರ್ಜುನರ ಬಂಧನವನ್ನು ಬಿಡಿಸಿ ಆಕಾಶಕ್ಕೆ ಹಾರಿ ನಾರದನೊಡನೆ ಹೋಗಿ ದ್ವಾರಾವತಿಯ ವನದ ಮೇಲ್ಗಡೆಯಲ್ಲಿ ನಾರದನನ್ನಿರಿಸಿ ತಾನು ಇಳಿದು ದೊಡ್ಡ ಸೇನೆಯನ್ನು ನಿರ್ಮಿಸಿ, ಕೌರವನು ತನ್ನ ಮಗಳೊಡನೆ ಬರುತ್ತ ಮುಂದೆ ಭೀಷ್ಮನನ್ನು ಕಳುಹಲು ತಾನು ಅವನ ರೂಪವನ್ನು ಧರಿಸಿ, ಸೈನ್ಯ ಸಮೇತನಾಗಿ ಸತ್ಯಭಾಮೆಯ ಉದ್ಯಾನಕ್ಕೆ ನುಗ್ಗಿ ಅದನ್ನು ಹಾಳುಮಾಡಿ ಆ ರೂಪವನ್ನು ಬಿಟ್ಟು ಮುನಿರೂಪವನ್ನು ಧರಿಸಿ ಆಕೆಯ ಮನೆಗೆ ಹೋಗಿ ಅಲ್ಲಿಯ ಕೊಳದ ನೀರನ್ನೆಲ್ಲ ತನ್ನ ಕಮಂಡಲಕ್ಕೆ ತುಂಬಲು ಅಲ್ಲಿಯವರು ಅವನು ಭೂತವಾಗಿರಬೇಕೆಂದರು. ಆಗ ನಡುಬೀದಿಗೆ ಬಂದು " ನಿಮ್ಮ ನೀರನ್ನು ನೀವು ತಡೆಯಿರಿ" ಎಂದು ಕಮಂಡಲವನ್ನು ಅಡಿ ಮೇಲುಮಾಡಲು ಆ ನೀರು ಹೊಳೆಯಂತೆ ಹರಿಯಿತು. ಆಗ ಪುರಜನರು ಓಡಿ ತಂತಮ್ಮ ಮನೆಗಳೊಳಕ್ಕೆ ಹೊಕ್ಕರು. ಬಳಿಕ ಆ ರೂಪವನ್ನು ಬಿಟ್ಟು ಕುಳ್ಳನಾದ ಮನುಷ್ಯನ ಆಕಾರವನ್ನು ಧರಿಸಿ ಬೀದಿಯಲ್ಲಿ ಬರುತ್ತಿರಲು ಪಟ್ಟಣದ ಸ್ತ್ರೀಯರು ಆ ರೂಪವನ್ನು ಕಂಡು ನಕ್ಕರು. ಅವರಲ್ಲಿ ಕೆಲವರ ಮುಖದಲ್ಲಿ ಗಡ್ಡಮೀಸೆಗಳನ್ನು, ಕೆಲವರ ಮೂಗುಗಳನ್ನು ಆನೆಯ ಸೊಂಡಿಲಿನಂತೆ, ಕೆಲವರ ಕುಚಗಳನ್ನು ಮೂರು ಮಾರುದ್ದ ಮಾಡಿ ಕುಣಿಯುತ್ತ ಬಂದು ಆ ರೂಪವನ್ನು ಬಿಸುಟು ಒರ್ವ ಬ್ರಾಹ್ಮಣನ ರೂಪವನ್ನು ಧರಿಸಿ ಸತ್ಯಭಾಮೆಯ ಬಳಿಗೆ ಹೋಗಿ ಆಕೆಗೆ ಆಶೀರ್ವಾದಮಾಡಿ " ದೇಶಾಂತರದಿಂದ ನಾನು ಹಸಿದುಬಂದೆನು. ಮೃಷ್ಟಾನ್ನಭೋಜನವಾಗಬೇಕು " ಎನಲು ಆಕೆಯು ಒಪ್ಪಿ ಮುಂದೆ ಕುಳ್ಳಿರಿಸಿ ಉತ್ತಮವಾದ ಪಂಚಭಕ್ಷ್ಯಗಳನ್ನು ತರಿಸಿ ಬಡಿಸಲು ಅವನು ಭುಂಜಿಸಿ ಮತ್ತೆಮತ್ತೆ ಕೇಳುತ್ತಿರಲು ಕಂಡು ಆಕೆಯು " ಇವನು ಮನುಷ್ಯರೂಪದ ರಾಕ್ಷಸನು " ಎಂದಳು. ಆ ಮಾತನ್ನು ಕೇಳಿ ಅವನು " ನೀನು ಕೊಟ್ಟ ಭೋಜನವನ್ನು ನೀನೇ ತೆಗೆದುಕೊ " ಎಂದು ಓಕರಿಸಿ ಕಾರಿದನು. ಅದು ಮನೆಯ ಅಂಗಣವನ್ನೆಲ್ಲ ವ್ಯಾಪಿಸಿತು. ಸತ್ಯಭಾಮೆಯು ಅಲ್ಲಿಂದೆದ್ದು ಮನೆಯೊಳಕ್ಕೆ ಓಡಿದಳು. ಬಳಿಕ ಆ ರೂಪವನ್ನು ಬಿಟ್ಟು ಉದ್ದಿಷ್ಟತ್ಯಾಗಿಯೆಂಬ ಹನ್ನೊಂದನೆಯ ನೆಲೆಯ ಶ್ರಾವಕನ ರೂಪವನ್ನು ಧರಿಸಿ ರುಗ್ಮಿಣಿಯ ಮನೆಗೆ ಹೋದನು. ಆಕೆಯು ಕಂಡು ಉಪ್ಪರಿಗೆಯಿಂದಿಳಿದು ಬಂದು ಭಕ್ತಿಯಿಂದ ಮನೆಗೆ ಕರೆದೊಯ್ದು ವಿರಾಗಾಸನದಲ್ಲಿ ಕುಳ್ಳಿರಿಸಿ ಉತ್ತಮವಾದ ಆಹಾರವನ್ನು ಕೊಟ್ಟಳು. ಇದನ್ನುಂಡು ಪರೀಕ್ಷಾರ್ಥವಾಗಿ ಮುನ್ನಿನಂತೆ ಕಾರಲು ರುಗ್ಮಿಣಿಯು ಥಟ್ಟನೆ ತನ್ನ ಕೈಯಿಂದಾತುಕೊಂಡು ಮರುಗಿ " ಇವರ ದೇಹಕ್ಕೆ ತಕ್ಕ ಲಘುವಾದ ಆಹಾರವನ್ನು ಕೊಡದೆ ನಾನು ಸವಿಯಾದ ಆಹಾರವನ್ನು ಕೊಟ್ಟೆನು "

ಎಂದು ಅಳುತ್ತಿರಲು ಆ ತನ್ನ ತಾಯಿಯು ಉತ್ತಮಗುಣಕ್ಕೆ ಮೆಚ್ಚಿ ನಾರದನನ್ನು ತನ್ನ ವಿದ್ಯೆಯಿಂದ ಅಲ್ಲಿಗೆ ಕರೆಯಿಸಿದನು. ಅವನನ್ನು ಕಂಡು ರುಗ್ಮಿಣಿಯು ಎದ್ದು ನಮಸ್ಕಾರಮಾಡಿ ಆಸನವನ್ನು ಕೊಟ್ಟು ಬಳಿಕ " ನನ್ನ ಮಗನನ್ನು ಹುಡುಕಿ ತರುವೆನೆಂದು ಹೇಳಿಹೋಗಿ ಸುಮ್ಮನೆ ಬಂದಿರಿ ' ಎಂದು ಗದ್ಗದಕಂಠೆಯಾಗಿ ಅಳುವುದನ್ನು ಕಂಡು ಮನ್ಮಥನು ಆ ರೂಪವನ್ನು ತೊರೆದು ನಿಜರೂಪವನ್ನು ತೋರಿದನು. ಆಗ ನಾರದನು " ಎಲೆ ದೇವಿ! ನೀನಿಚ್ಛಿಸುವ ನಿನ್ನ ಕುಮಾರನಾದ ಮನ್ಮಥನು ಇವನೇ ನೋಡು " ಎನಲು ರುಗ್ಮಿಣಿಯು, ಚಂದ್ರನನ್ನು ಕಂಡ ಸಮುದ್ರದಂತೆ, ಸಂತೋಷದಿಂದ ಉಕ್ಕಿದಳು. ಮದನನು ಉತ್ತಮವಾದ ರತ್ನದ ಜಿನಬಿಂಬವನ್ನು ಕಾಣ್ಕೆಯಿತ್ತು ಭಕ್ತಿಯಿಂದ ತಾಯಿಯ ಪಾದಕ್ಕೆ ನಮಸ್ಕಾರಮಾಡಿದನು. ರುಗ್ಮಿಣಿಯು ಮಗನ ತಲೆಯನ್ನೆತ್ತಿ ಹರಸಿ ಆನಂದಬಾಷ್ಪದಿಂದ ಮಜ್ಜನಮಾಡಿಸಿ ಅಮರ್ದಪ್ಪಿಕೊಂಡು ತನ್ನ ತೊಡೆಯಮೇಲೆ ಕುಳ್ಳಿರಿಸಿ ಗಲ್ಲವನ್ನು ಹಿಡಿದು ಮುದ್ದಾಡಿ ನೋಡಿ ಆನಂದಪರವಶಳಾದಳು. ಬಳಿಕ ಸ್ಮರನು ಬೇರೆ ಆಸನದಲ್ಲಿ ಕುಳ್ಳಿರಲು ನಾರದನು ಮನ್ಮಥನನ್ನು ಕರೆತಂದ ವಿವರವನ್ನೆಲ್ಲ ರುಗ್ಮಿಣಿಗೆ ತಿಳುಹಿದನು. ಬಳಿಕ ರುಗ್ಮಿಣಿಯು " ಎಲೈ ಮಗನೆ! ನಿನ್ನ ಬಾಲ್ಯದ ಮುದ್ದಾಟವನ್ನು ಬಯಸಿ ನೋಡುವ ಭಾಗ್ಯವು ನನಗಿಲ್ಲವಾಯ್ತು " ಎಂದು ಅಳುತ್ತಿರಲು ಕಂಡು ಕುಸುಮಾಸ್ತ್ರನು ತನ್ನ ವಿದ್ಯಾಸಾಮರ್ಥ್ಯದಿಂದ ಬಾಲಕನಾಗಿ ತರುಣನಾಗುವವರೆಗಿನ ಬಾಲಲೀಲೆಯನ್ನೆಲ್ಲ ತೋರಲು ರುಗ್ಮಿಣಿಯು ಬಹು ಸಂತೋಷವನ್ನು ಹೊಂದಿ ಸುಖವಾಗಿರುವಾಗ ಸತ್ಯಭಾಮೆಯ ದಾಸಿಯರು ಬರುತ್ತಿರುವುದನ್ನು ಕಂಡು ಮನಸಿಜನು ಇವರಾರೆಂದು ಕೇಳಲು ರುಗ್ಮಿಣಿಯು ಅವರು ತನ್ನ ಸೋಲದ ತಲೆಯ ಕುರುಳುಗಳನ್ನು ಕೇಳಲು ಬಂದವರೆಂದಳು. ಆ ಮಾತನ್ನು ಕೇಳಿ ಮಾರನು ಅವರು ಬರುವುದರೊಳಗಾಗಿ ತಾನು ಕೃಷ್ಣನ ರೂಪವನ್ನು ಧರಿಸಿರಲು ಅವರು ಬಂದು ಆ ಕೃತಕ ಕೃಷ್ಣನಿಗೆ ಕೈಮುಗಿದು ರುಗ್ಮಿಣಿಯನ್ನು ಕುರಿತು ' ನಿನ್ನ ವಾಗ್ದಾನದಂತೆ ಸಮ್ಮ ಒಡತಿಯು ಸೋಲವನ್ನು ತರಲು ಕಳುಹಿಸಿರುತ್ತಾಳೆ " ಎಂದರು. ಆ ನುಡಿಯನ್ನು ಕೇಳಿ ಕೃತಕ ಹರಿಯು ಕಡುಮುನಿಸಿಂದೆದ್ದುಬಂದು ಆ ದಾಸಿಯರ ಕೂದಲುಗಳನ್ನು ಕೊಯ್ದು ಅವರ ಕೈಯಲ್ಲಿ ಕೊಟ್ಟುಕಳುಹಲು ಅವರು ಹೋಗಿ ಆ ವಿವರವನ್ನೆಲ್ಲ ಸತ್ಯಭಾಮೆಗೆ ತಿಳುಹಿದರು. ಆಕೆಯು ಬಹುಕೋಪದಿಂದ ಹರಿಯ ಬಳಿಗೆ ಹೋಗಿ " ಜೆನ್ನಾಗಿ ಮಾಡಿದಿರಿ ಕಾರ್ಯವನ್ನು. ಮೊದಲು ನಿಮ್ಮಮುಂದೆ ಸುಡಿದ ಭಾಷೆಯಂತೆ ರುಗ್ಮಿಣಿಯ ಕುರುಳನ್ನು ಕೇಳಿದರೆ ನನ್ನ ದಾಸಿಯರ ಕುರುಳನ್ನೇ ಕೊಯ್ದು ನೀವು

ನನ್ನ ಬಳಿಗೆ ಕಳುಹುವುದು ನ್ಯಾಯವೇ ?" ಎನಲು ಕೃಷ್ಣನು ತಾನು ಅಲ್ಲಿರಲಿಲ್ಲ ವೆಂದು ಹೇಳಿ ವಿಸ್ಮಿತನಾಗಿ ರುಗ್ಮಿಣಿಯ ಮನೆಗೆ ತನ್ನ ಭೃತ್ಯರನ್ನು ಕಳುಹಿದನು. ಅವರು ಹೋಗಿ ರುಗ್ಮಿಣಿಗೆ ವಿನಯದಿಂದ ಕೈಮುಗಿದು ಸತ್ಯಭಾಮೆಗೆ ಕುರುಳನ್ನು ಕೊಡಬೇಕೆಂದು ಕೇಳಲು ಮನ್ಮಥನು ಅವರನ್ನು ತಲೆಕೆಳಗಾಗಿ ತೂಗುಹಾಕಿದನು. ಅದನ್ನು ಕೇಳಿ ಕೃಷ್ಣನು ಬಹುಕೋಪದಿಂದ ಬಲರಾಮನನ್ನು ಕಳುಹಲು ಮನ್ಮಥನು ಅವನನ್ನು ಕಂಡು " ಇವನಾರು ?" ಎಂದು ತಾಯನ್ನು ಕೇಳಿದನು. ಆಕೆಯು ಬಲರಾಮನ ಪರಿಚಯವನ್ನು ಹೇಳಿದಳು. ಆ ಮಾತನ್ನು ಕೇಳಿ ಮನ್ಮಥನು " ಎಲೈ ತಾಯೆ! ನಿನ್ನ ಮಗನ ಶೌರ್ಯವನ್ನು ಮನವಿಟ್ಟು ನೋಡು " ಎಂದು ಸಿಹ್ಮದರೂಪವನ್ನು ಧರಿಸಿ ಹೋಗಿ ಬಲರಾಮನನ್ನು ನುಂಗಿ ರುಗ್ಮಿಣಿಯ ಮನೆಯ ಕರುಮಾಡದ ಮೇಲೆ ಹಾರಿ ಕುಳಿತನು. ಪುರಪರಿಜನರು ಅಚ್ಚರಿವಟ್ಟು ನೋಡುತ್ತಿರಲು ಅಲ್ಲಿಂದ ಬಲರಾಮನನ್ನು ಉಗುಳಿ ಸಿಹ್ಮರೂಪವನ್ನು ಬಿಟ್ಟು ಮೊದಲಿನ ನಿಜರೂಪವನ್ನು ಧರಿಸಿ ತಾಯಬಳಿಗೆ ಬಂದನು. ಆ ವಿಷಯವನ್ನು ಕೃಷ್ಣನು ಕೇಳಿ ಅತ್ಯಂತ ಕೋಪವನ್ನು ತಾಳಿ ತಾನು ಬರುತ್ತಿರಲು ಆಗ ಆತನ ಮಂತ್ರಿಗಳು ಬಂದು ಕೈಮುಗಿದು ಆ ಮಾಯದವನು ಸಾಮಾನ್ಯನಲ್ಲವೆಂದೂ ಬಲರಾಮನನ್ನು ನುಂಗಿ ಉಗುಳಿದ ಭಯಂಕರಸಿಹ್ಮಾಕಾರವನ್ನು ಧರಿಸಿದ ಮಹಾಶಕ್ತಿಸಂಪನ್ನನೆಂದೂ ಆದುದರಿಂದ ಎಲ್ಲಾ ಸೈನ್ಯವನ್ನು ತೆಗೆದುಕೊಂಡು ಹೋಗಿ ಅವನನ್ನು ಬೆದರಿಸಿ ಆ ಮನೆಯಿಂದ ಹೊಡಿಸಬೇಕೆಂದೂ ಹೇಳಲು ಕೇಶವನು ಆ ಮಾತಿಗೊಪ್ಪಿ ಸೈನ್ಯವನ್ನೆಲ್ಲ ಬರಿಸಿ ಕೌರವ ಭೀಷ್ಮ ದ್ರೋಣ ಭೀಷ್ಮ ಮೊದಲಾದವರನ್ನು ಬರಮಾಡಿ ಅಲ್ಲಲ್ಲಿ ಪೌಜನ್ನಿರಿಸಿ ದೂತರನ್ನು ಕರೆದು " ರುಗ್ಮಿಣಿಯ ಮನೆಯಲ್ಲಿರುವವನನ್ನು ಕರೆಯಿರಿ " ಎಸಲು ಅವರು ಬಂದು ಮದನನ್ನು ಕರೆದರು. ಆಗ ಅವನು ತಾಯಬಳಿಯಿಂದ ಬಂದು ಕೃಷ್ಣನ ಸೇನೆಗೆ ಎರಡಷ್ಟು ಸೇನೆಯನ್ನು ತನ್ನ ವಿದ್ಯಾಬಲದಿಂದ ನಿರ್ಮಿಸಿದನು. ಅದನ್ನು ಕಂಡು ಹರಿಯು ತನ್ನ ಸೈನ್ಯಕ್ಕೆ ಕೈವೀಸಲು ಆ ಯಾದವಸೇನೆಯು, ನೆರಳಿನೊಡನೆ ಯುದ್ಧಮಾಡುವಂತೆ, ಸ್ಮರನ ಸೇನೆಯೊಡನೆ ಯುದ್ಧಮಾಡಿ ಬಳಲುತ್ತಿರಲು ಆಗ ವಿಷ್ಣುವು ಅತಿಕೋಪದಿಂದ ತನ್ನ ಬೆಂಗಡೆಯಲ್ಲಿದ್ದ ಅತಿರಥರುಗಳನ್ನು ಕಳುಹಿದನು. ಅವರನ್ನು ಕೌರವನು ನಾಗಪಾಶದಿಂದ ಕಟ್ಟಿದನು. ಅದನ್ನು ಕಂಡು ಹರಿಯು ಕೌರವ ಪಾಂಡವರನ್ನು ಕಳುಹಿದನು. ಅವರು ಬಹು ಕೋಪಾವೇಶದಿಂದ ಬರುತ್ತಿರಲು ಇಕ್ಷ್ವಾಕುವಪನು ಅವರನ್ನು, ಮರದಂತೆ, ಸ್ತಂಭಿಸಿ ನಿಲಿಸಿದನು. ಅದನ್ನು ಕಂಡು ಗೋವಿಂದನು ಅತ್ಯಂತ ಕೋಪಪರವಶನಾಗಿ ಮಾರನಿಗೆ ಇದಿರಾಗಿ ಯುದ್ಧಕ್ಕೆ ಬರುತ್ತಿರು

ಎಂದು ಅಳುತ್ತಿರಲು ಆ ತನ್ನ ತಾಯಿಯು ಉತ್ತಮಗುಣಕ್ಕೆ ಮೆಚ್ಚಿ ನಾರದನನ್ನು ತನ್ನ ವಿದ್ಯೆಯಿಂದ ಅಲ್ಲಿಗೆ ಕರೆಯಿಸಿದನು. ಅವನನ್ನು ಕಂಡು ರುಗ್ಮಿಣಿಯು ಎದ್ದು ನಮಸ್ಕಾರಮಾಡಿ ಆಸನವನ್ನು ಕೊಟ್ಟು ಬಳಿಕ " ನನ್ನ ಮಗನನ್ನು ಹುಡುಕಿ ತರುವೆ ನೆಂದು ಹೇಳಿಹೋಗಿ ಸುಮ್ಮನೆ ಬಂದಿರಿ ' ಎಂದು ಗದ್ಗದಕಂಠೆಯಾಗಿ ಅಳುವು ದನ್ನು ಕಂಡು ಮನ್ಮಥನು ಆ ರೂಪವನ್ನು ತೊರೆದು ನಿಜರೂಪವನ್ನು ತೋರಿದನು. ಆಗ ನಾರದನು " ಎಲೆ ದೇವಿ! ನೀನಿಚ್ಛಿಸುವ ನಿನ್ನ ಕುಮಾರನಾದ ಮನ್ಮಥನು ಇವನೇ ನೋಡು " ಎನಲು ರುಗ್ಮಿಣಿಯು, ಚಂದ್ರನನ್ನು ಕಂಡ ಸಮುದ್ರದಂತೆ, ಸಂತೋಷದಿಂದ ಉಕ್ಕಿದಳು. ಮದನನು ಉತ್ತಮವಾದ ತನ್ನ ದ ಜಿನಬಿಂಬ ವನ್ನು ಕಾಣ್ಕೆಯಿತ್ತು ಭಕ್ತಿಯಿಂದ ತಾಯಿಯ ಪಾದಕ್ಕೆ ನಮಸ್ಕಾರಮಾಡಿದನು. ರುಗ್ಮಿಣಿಯು ಮಗನ ತಲೆಯನ್ನೆತ್ತಿ ಹರಸಿ ಆನಂದಬಾಷ್ಪದಿಂದ ಮಜ್ಜನಮಾಡಿಸಿ ಅಮರ್ದಪ್ಪಿಕೊಂಡು ತನ್ನ ತೊಡೆಯಮೇಲೆ ಕುಳ್ಳಿರಿಸಿ ಗಲ್ಲವನ್ನು ಹಿಡಿದು ಮುದ್ದಾ ಡಿ ನೋಡಿ ಆನಂದಪರವಶಳಾದಳು. ಬಳಿಕ ಸ್ಮರನು ಬೇರೆ ಆಸನದಲ್ಲಿ ಕುಳ್ಳಿರಲು ನಾರದನು ಮನ್ಮಥನನ್ನು ಕರೆತಂದ ವಿವರವನ್ನೆಲ್ಲ ರುಗ್ಮಿಣಿಗೆ ತಿಳುಹಿದನು. ಬಳಿಕ ರುಗ್ಮಿಣಿಯು " ಎಲೈ ಮಗನೆ! ನಿನ್ನ ಬಾಲ್ಯದ ಮುದ್ದಾಟವನ್ನು ಬಯಸಿ ನೋಡು ವ ಭಾಗ್ಯವು ನನಗಿಲ್ಲವಾಯ್ತು " ಎಂದು ಅಳುತ್ತಿರಲು ಕಂಡು ಕುಸುಮಾಸ್ತ್ರನು ತನ್ನ ವಿದ್ಯಾಸಾಮರ್ಥ್ಯದಿಂದ ಬಾಲಕನಾಗಿ ತರುಣನಾಗುವವರೆಗಿನ ಬಾಲಲೀಲೆ ಯನ್ನೆಲ್ಲ ತೋರಲು ರುಗ್ಮಿಣಿಯು ಬಹು ಸಂತೋಷವನ್ನು ಹೊಂದಿ ಸುಖವಾಗಿರು ವಾಗ ಸತ್ಯಭಾಮೆಯ ದಾಸಿಯರು ಬರುತ್ತಿರುವುದನ್ನು ಕಂಡು ಮನಸಿಜನು ಇವ ರಾರೆಂದು ಕೇಳಲು ರುಗ್ಮಿಣಿಯು ಅವರು ತನ್ನ ಸೋಲದ ತಲೆಯ ಕುರುಳುಗಳನ್ನು ಕೇಳಲು ಬಂದವರೆಂದಳು. ಆ ಮಾತನ್ನು ಕೇಳಿ ಮಾರನು ಅವರು ಬರುವುದರೊಳ ಗಾಗಿ ತಾನು ಕೃಷ್ಣನ ರೂಪವನ್ನು ಧರಿಸಿರಲು ಅವರು ಬಂದು ಆ ಕೃತಕ ಕೃಷ್ಣ ನಿಗೆ ಕೈಮುಗಿದು ರುಗ್ಮಿಣಿಯನ್ನು ಕುರಿತು ' ನಿನ್ನ ವಾಗ್ದಾನದಂತೆ ನಮ್ಮ ಒಡತಿಯು ಸೋಲವನ್ನು ತರಲು ಕಳುಹಿಸಿರುತ್ತಾಳೆ " ಎಂದರು. ಆ ನುಡಿಯನ್ನು ಕೇಳಿ ಕೃತಕ ಹರಿಯು ಕಡುಮುನಿಸಿಂದೆದ್ದುಬಂದು ಆ ದಾಸಿಯರ ಕೂದಲುಗಳನ್ನು ಕೊಯ್ದು ಅವರ ಕೈಯಲ್ಲಿ ಕೊಟ್ಟುಕಳುಹಲು ಅವರು ಹೋಗಿ ಆ ವಿವರವನ್ನೆಲ್ಲ ಸತ್ಯಭಾಮೆಗೆ ತಿಳುಹಿದರು. ಆಕೆಯು ಬಹುಕೋಪದಿಂದ ಹರಿಯ ಬಳಿಗೆ ಹೋಗಿ " ಚೆನ್ನಾಗಿ ಮಾಡಿದಿರಿ ಕಾರ್ಯವನ್ನು. ಮೊದಲು ನಿಮ್ಮ ಮುಂದೆ ಸುಡಿದ ಭಾಷೆಯಂತೆ ರುಗ್ಮಿಣಿಯ ಕುರುಳನ್ನು ಕೇಳಿದರೆ ನನ್ನ ದಾಸಿಯರ ಕುರುಳನ್ನೇ ಕೊಯ್ದು ನೀವು

ನಸ್ನಬಳಿಗೆ ಕಳುಹುವುದು ನ್ಯಾಯವೇ ?'' ಎನಲು ಕೃಷ್ಣನು ತಾನು ಅಲ್ಲಿರಲಿಲ್ಲ ವೆಂದು ಹೇಳಿ ವಿಸ್ಮಿತನಾಗಿ ರುಗ್ಮಿಣಿಯ ಮನೆಗೆ ತನ್ನ ಭೃತ್ಯರನ್ನು ಕಳುಹಿದನು. ಅವರು ಹೋಗಿ ರುಗ್ಮಿಣಿಗೆ ವಿನಯದಿಂದ ಕೈಮುಗಿದು ಸತ್ಯಭಾಮೆಗೆ ಕುರುಳನ್ನು ಕೊಡಬೇಕೆಂದು ಕೇಳಲು ಮನ್ಮಥನು ಅವರನ್ನು ತಲೆಕೆಳಗಾಗಿ ತೂಗುಹಾಕಿದನು. ಅದನ್ನು ಕೇಳಿ ಕೃಷ್ಣನು ಬಹುಕೋಪದಿಂದ ಬಲರಾಮನನ್ನು ಕಳುಹಲು ಮನ್ಮಥನು ಅವನನ್ನು ಕಂಡು '' ಇವನಾರು ? '' ಎಂದು ತಾಯನ್ನು ಕೇಳಿದನು. ಆಕೆಯು ಬಲರಾಮನ ಪರಿಚಯವನ್ನು ಹೇಳಿದಳು. ಆ ಮಾತನ್ನು ಕೇಳಿ ಮನ್ಮಥನು '' ಎಲೈ ತಾಯಿ ! ನಿನ್ನ ಮಗನ ಶೌರ್ಯವನ್ನು ಮನವಿಟ್ಟು ನೋಡು '' ಎಂದು ಸಿಹ್ಮದರೂಪ ವನ್ನು ಧರಿಸಿ ಹೋಗಿ ಬಲರಾಮನನ್ನು ನುಂಗಿ ರುಗ್ಮಿಣಿಯ ಮನೆಯ ಕರುಮಾಡದ ಮೇಲೆ ಹಾರಿ ಕುಳಿತನು. ಪುರಪರಿಜನರು ಅಚ್ಚರಿವಟ್ಟು ನೋಡುತ್ತಿರಲು ಅಲ್ಲಿಂದ ಬಲರಾಮನನ್ನು ಉಗುಳಿ ಸಿಹ್ಮರೂಪವನ್ನು ಬಿಟ್ಟು ಮೊದಲಿನ ನಿಜರೂಪವನ್ನು ಧರಿಸಿ ತಾಯಬಳಿಗೆ ಬಂದನು. ಆ ವಿಷಯವನ್ನು ಕೃಷ್ಣನು ಕೇಳಿ ಅತ್ಯಂತ ಕೋಪವನ್ನು ತಾಳಿ ತಾನು ಬರುತ್ತಿರಲು ಆಗ ಅತನ ಮಂತ್ರಿಗಳು ಬಂದು ಕೈಮುಗಿದು ಆ ಮಾಯದವನು ಸಾಮಾನ್ಯನಲ್ಲವೆಂದೂ ಬಲರಾಮನನ್ನು ನುಂಗಿ ಉಗುಳಿದ ಭಯಂ ಕರಸಿಹ್ಮಾಕಾರವನ್ನು ಧರಿಸಿದ ಮಹಾಶಕ್ತಿಸಂಪನ್ನನೆಂದೂ ಆದುದರಿಂದ ಎಲ್ಲಾ ಸೈನ್ಯವನ್ನು ತೆಗೆದುಕೊಂಡು ಹೋಗಿ ಅವನನ್ನು ಬೆದರಿಸಿ ಆ ಮನೆಯಿಂದ ಹೊಡಿಸ ಬೇಕೆಂದೂ ಹೇಳಲು ಕೇಶವನು ಆ ಮಾತಿಗೊಪ್ಪಿ ಸೈನ್ಯವನ್ನೆಲ್ಲ ಬರಿಸಿ ಕೌರವ ಭೀಮ ಪಾರ್ಥ ಭೀಷ್ಮ ಮೊದಲಾದವರನ್ನು ಬರಮಾಡಿ ಅಲ್ಲಲ್ಲಿ ಪೌಜನ್ನಿರಿಸಿ ದೂತರನ್ನು ಕರೆ ದು '' ರುಗ್ಮಿಣಿಯ ಮನೆಯಲ್ಲಿರುವವನನ್ನು ಕರೆಯಿರಿ '' ಎಸಲು ಅವರು ಬಂದು ಮದ ನನ್ನು ಕರೆದರು. ಆಗ ಅವನು ತಾಯಬಳಿಯಿಂದ ಬಂದು ಕೃಷ್ಣನ ಸೇನೆಗೆ ಎರಡ ರಷ್ಟು ಸೇನೆಯನ್ನು ತನ್ನ ವಿದ್ಯಾಬಲದಿಂದ ನಿರ್ಮಿಸಿದನು. ಅದನ್ನು ಕಂಡು ಹರಿಯು ತನ್ನ ಸೈನ್ಯಕ್ಕೆ ಕೈವೀಸಲು ಆ ಯಾದವಸೇನೆಯು, ನೆರಳಿನೊಡನೆ ಯುದ್ಧಮಾ ಡುವಂತೆ, ಸ್ಮರನ ಸೇನೆಯೊಡನೆ ಯುದ್ಧಮಾಡಿ ಬಳಲುತ್ತಿರಲು ಆಗ ವಿಷ್ಣುವು ಅತಿಕೋಪದಿಂದ ತನ್ನ ಬೆಂಗಡೆಯಲ್ಲಿದ್ದ ಅತಿರಥರುಗಳನ್ನು ಕಳುಹಿದನು. ಅವರನ್ನು ಸ್ಮರನು ನಾಗಪಾಶದಿಂದ ಕಟ್ಟಿದನು. ಅದನ್ನು ಕಂಡು ಹರಿಯು ಕೌರವ ಪಾಂಡ ವರನ್ನು ಕಳುಹಿದನು. ಅವರು ಬಹು ಕೋಪಾವೇಶದಿಂದ ಬರುತ್ತಿರಲು ಇಕ್ಷು ಚಾಪನು ಅವರನ್ನು, ಮರದಂತೆ, ಸ್ತಂಭಿಸಿ ನಿಲಿಸಿದನು. ಇದನ್ನು ಕಂಡು ಗೋವಿಂ ದನು ಅತ್ಯಂತ ಕೋಪಪರವಶನಾಗಿ ಮಾರನಿಗೆ ಇದಿರಾಗಿ ಯುದ್ಧಕ್ಕೆ ಬರುತ್ತಿರು

ವಷ್ಟರಲ್ಲಿ ಆಕಾಶದಿಂದ ನಾರದನು ಇಳಿದು ಬಂದು ಕೃಷ್ಣನನ್ನು ಕುರಿತು "ನಿನ್ನ ಮಗನಾದ ಮನ್ಮಥನನ್ನು ನಾನು ತಂದೆನು" ಎಂದನು. ಆ ಮಾತನ್ನು ಕೇಳಿ ಹರಿಯು ಬಹುಸಂತುಷ್ಟನಾಗಿ ಆತನನ್ನು ತಂದ ವಿವರವನ್ನೆಲ್ಲ ನಾರದನಿಂದ ತಿಳಿದು ಬಳಿಕ ತಾನೇರಿದ ರಥದಿಂದಿಳಿದು ಬರುತ್ತಿರಲು ಕಂಡು ಸ್ಮರನು ಇದಿರಾಗಿ ಹೋಗಿ ಭಕ್ತಿಯಿಂದ ಕೇಶವನ ಕಾಲಿಗೆರಗಿದನು. ಹರಿಯು ಮಗನ ತಲೆಯನ್ನು ಹಿಡಿದೆತ್ತಿ ಹರಸಿ ಬಿಗಿದಪ್ಪಿ ಆನಂದಾಶ್ರುಗಳನ್ನು ಸುರಿದನು. ಆಗ ಮನ್ಮಥನು ತನ್ನ ಮಾಯಾಸೇನೆಯನ್ನು ಪರಿಹರಿಸಿ ಮೊದಲು ಬಂಧಿಸಿದ ವೀರರ ಬಂಧನಗಳನ್ನು ಬಿಡಿಸಿ ನಾರದನ ಹೇಳಿಕೆಯಂತೆ ಸಮುದ್ರವಿಜಯ ಮೊದಲಾದವರಿಗೆ ನಮಸ್ಕಾರಮಾಡಿ ಅವರುಗಳ ಆಶೀರ್ವಾದಗಳನ್ನು ಪಡೆದನಂತರ ಕೇಶವನು ಮಾರನನ್ನು ವೈಭವದಿಂದ ಮನೆಗೆ ಕರೆದೊಯ್ದು ಸಿಹ್ಮಾಸನದಲ್ಲಿ ಕುಳ್ಳಿರಿಸಿ ಯುವರಾಜಪಟ್ಟವನ್ನು ಕಟ್ಟಿದನು. ಆ ಲಗ್ನದಲ್ಲಿ ಉದಧಿಕುಮಾರಿಯನ್ನು ಮಾರನಿಗೆ ಮದುವೆಮಾಡಬೇಕೆಂದು ಕೃಷ್ಣನು ಉಚ್ಚುಗಿಸಲು ಕಂಡು ಮನ್ಮಥನು ವಿನಯದಿಂದ ಕೈಮುಗಿದು ತಾನು ವಿಜಯಾರ್ಧಗಿರಿಯಲ್ಲಿ ಬಹುವಸ್ತುಗಳನ್ನು ಸಾಧಿಸುವ ಸಮಯದಲ್ಲಿ ನಶವಾದ ರತಿಯನ್ನು ಮೊದಲು ಮದುವೆಯಾಗಬೇಕೆಂದನು. ಅದಕ್ಕೆ ವಿಷ್ಣುವು ಸಮ್ಮತಿಸಿ ಕರೆಸೆಸಲು ಸ್ಮರನು ವಿದ್ಯೆಯಿಂದ ಕಾಳಶಂಬರ ವಜ್ರದಾಡ ಮೊದಲಾದವರನ್ನೂ ಆ ವಸ್ತುಗಳನ್ನೂ ರತಿಯನ್ನೂ ಬರಮಾಡಿದನು. ಅವರನ್ನು ಇವಿಗೊಂಡು ಕರೆತಂದು ಅನುಪಮ ವೈಭವದಿಂದ ಗೋವಿಂದನು ರತಿ ಮನ್ಮಥರ ವಿವಾಹವನ್ನು ಮಾಡಿ ತದನಂತರ ಉದಧಿಕುಮಾರಿಯನ್ನು ಮನ್ಮಥನಿಗೆ ಮದುವೆಮಾಡಿದನು. ಹೀಗೆ ಬೇರೆ ನೂರೆಂಟು ಮಂದಿ ರಾಜವುತ್ರಿಯರನ್ನೂ ಮಾರನು ಮದುವೆಯಾಗಿ ಆ ಲಲನಾಮಣಿಯರಲ್ಲಿ ಏನೋದದಿಂದಿದ್ದನು.

ಇತ್ತ ರುಗ್ಮಿಣಿಯು ತನಗೆ ಗೆಲುವಾದುದರಿಂದ ಸತ್ಯಭಾಮೆಯ ಕುರುಳು ಕೂದಲುಗಳನ್ನು ಕೇಳುವುದಕ್ಕೆ ತನ್ನ ಭೃತ್ಯರನ್ನು ಕಳುಹಿದಳು. ಅವರು ಹೋಗಿ ಕೇಳಲು ಸತ್ಯಭಾಮೆಯು ಬಹಳವಾಗಿ ರೇಗಿ "ಯಾವನೋ ಖೇಚರನ ಮಗನನ್ನು ತಂದು ತನ್ನ ಮಗನೆಂದು ಮೆರೆದರೆ ನನ್ನ ತಲೆಗೂದಲನ್ನು ಕೊಡುವೆನೇ?" ಎಂದಳು. ಆ ಮಾತನ್ನು ಅವರು ಹೋಗಿ ಹೇಳಲು ಕೃಷ್ಣನು ಮನ್ಮಥನ ವಿಷಯವನ್ನೆಲ್ಲ ಸತ್ಯಭಾಮೆಗೆ ಹೇಳುವುದಕ್ಕಾಗಿ ನಾರದನನ್ನು ಆಕೆಯಬಳಿಗೆ ಕಳುಹಿದನು. ಅವನು ಹೋಗಿ ತಾನು ಪೂರ್ವವಿದೇಹವೆಂಬ ಕ್ಷೇತ್ರದಲ್ಲಿ ಶ್ರೀಮಂದರತೀರ್ಥಂಕರರ ಗಣಧರರಿಂದ

ಮನ್ಮಥನಿರುವಸ್ಥಾನವನ್ನೂ ಅವನ ಜನ್ಮಾಂತರವಿಷಯವನ್ನೂ ವಿಸ್ತಾರವಾಗಿ ತಿಳಿದೆನೆಂದು ಸತ್ಯಭಾಮೆಗೆ ಹೇಳಿ ಆ ವಿಷಯವನ್ನು ಹೀಗೆ ವಿವರಿಸುತ್ತಾನೆ—

ಈ ಭರತಕ್ಷೇತ್ರದ ಆರ್ಯಖಂಡದ ಮಗಧದೇಶದಲ್ಲಿರುವ ಶಾಲಿಗ್ರಾಮವೆಂಬ ಊರಿನಲ್ಲಿ ಸೋಮಶರ್ಮನೆಂಬ ಬ್ರಾಹ್ಮಣನಿಗೂ ಅತನ ಸತಿ ಅಗ್ನಿಲೆಗೂ ಅಗ್ನಿಭೂತಿ ಮಾರುತಭೂತಿಗಳೆಂಬ ಇಬ್ಬರು ಮಕ್ಕಳು ಹುಟ್ಟಿದರು. ಅವರು ಪ್ರಾಯಭರಿತರಾಗಿ ಒಂದು ದಿನ ಆ ನಗರದ ನಂದನವನಕ್ಕೆ ಬಂದಿದ್ದ ಓರ್ವ ಮುನಿಯ ಬಳಿಗೆ ಹೋಗಿ ಅವನೊಡನೆ ವಿದ್ಯಾಮದದಿಂದ ವಾದಮಾಡಿ ಸೋತು ಲಜ್ಜೆಯಿಂದ ಹೊರಟುಹೋಗಿ ಆ ದಿನ ರಾತ್ರಿಯಲ್ಲಿ ಆ ಮುನಿಯನ್ನು ಕೊಲ್ಲಬೇಕೆಂದು ಕತ್ತಿಯನ್ನು ತೆಗೆದುಕೊಂಡು ಹೋದರು. ಆಗ ಆ ವನವನ್ನು ರಕ್ಷಿಸುವ ಕನಕಯಕ್ಷನೆಂಬ ದೇವನು ಕೋಪದಿಂದ ಆ ಅಗ್ನಿಭೂತಿ ವಾಯುಭೂತಿಗಳಿಗೆ ಹಲವು ಬಾಧೆಗಳನ್ನುಂಟುಮಾಡಿದನು. ಆಗ ಅವರು ಬೆದರಿ ಪ್ರಾಣದಾನವನ್ನು ಮಾಡಬೇಕೆಂದು ಮುನಿಯು ಅಡಿದಾವರೆಗೆ ಅವನತರಾಗಿ ಬಿದ್ದಿರಲು ಆ ಯಕ್ಷನು ' ನಿಮ್ಮ ದುರ್ಮಾರ್ಗವನ್ನು ಬಿಟ್ಟು ಸನ್ಮಾರ್ಗವನ್ನು ಹೊಂದಿದಲ್ಲದೆ ನಾನು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ' ಎಂದನು. ಆಗ ಅವರು ಗರ್ವವನ್ನು ಬಿಟ್ಟು ಆ ಯಕ್ಷನು ಹೇಳಿದಂತೆ ಆ ಮುನಿಯಿಂದ ಉತ್ತಮವ್ರತವನ್ನು ಕೈಕೊಂಡು ತಮ್ಮ ಮನೆಗೆ ಹೋದರು. ಅಲ್ಲಿ ಅವರ ತಂದೆತಾಯಿಗಳು ಆ ವಿಷಯವನ್ನು ತಿಳಿದು " ಮಕ್ಕಳಿರಾ! ನೀವು ಉತ್ತಮವಾದ ವೈದಿಕಪದ್ಧತಿಯನ್ನು ಬಿಟ್ಟು ಸವಣರ ಧರ್ಮವನ್ನವಲಂಬಿಸುವುದು ಉಚಿತವಲ್ಲ " ಎಂದು ನಿರ್ಬಂಧಪಡಿಸಿದರೂ ಕೇಳದೆ ಆ ಸಹೋದರರಿಬ್ಬರೂ ತಾವು ಕೈಕೊಂಡ ವ್ರತವನ್ನು ಬಿಡದೆ ಪಾಲಿಸಿ ಆಯುಷ್ಯವು ತೀರಿದಮೇಲೆ ಸಕ್ಕು ಆ ವ್ರತದ ಫಲದಿಂದ ಸೌಧರ್ಮವೆಂಬ ಪ್ರಥಮಸ್ವರ್ಗದಲ್ಲಿ ಹುಟ್ಟಿ ದಿವ್ಯಸುಖವನ್ನುಂಡು ಅಲ್ಲಿಂದ ಬಂದು ಇಲ್ಲಿಯ ಕೌಶಲದೇಶದ ಸಾಕೇತನಗರದ ಅರಿಂಜಯರಾಜನ ರಾಜಶ್ರೇಷ್ಠಿ ಜಿನದತ್ತನಿಗೂ ಅತನ ಸತಿ ಶ್ರೀಮತ್ಯೆಗೂ ಪೂರ್ಣಭದ್ರ ವಾಣಿಭದ್ರರೆಂಬ ಮಕ್ಕಳಾಗಿ ಹುಟ್ಟಿ ಬೆಳೆದು ಯೌವನವನ್ನು ಹೊಂದಿದರು. ಒಂದು ದಿನ ಆ ನಗರದ ನಂದನವನಕ್ಕೆ ಓರ್ವ ಮುನಿಶ್ರೇಷ್ಠನು ಬರಲು ಅಲ್ಲಿಯ ರಾಜನೂ ಜಿನದತ್ತಶ್ರೇಷ್ಠಿಯೂ ಆ ಸಹೋದರರೂ ಆ ಮುನಿಯ ಬಳಿಗೆ ಹೋಗಿ ಅವನಿಂದ ಧರ್ಮಾಧರ್ಮಸ್ವರೂಪವನ್ನು ತಿಳಿದು ಅವರೆಲ್ಲರೂ ದೀಕ್ಷೆಯನ್ನು ಪಡೆದರು. . ಪೂರ್ಣಭದ್ರ ವಾಣಿಭದ್ರರು ತಪಸ್ಸನ್ನು ಮಾಡಿ ಮಡಿದು ಸೌಧರ್ಮಸ್ವರ್ಗದಲ್ಲಿ ಹುಟ್ಟಿ ಸುಖವನ್ನುಂಡು ಬಂದು ಈ ಕುರುಭೂಮಿಯಲ್ಲಿ ಹಸ್ತಿನಾಪುರದ ಐಶ್ವಭೂಪತಿಗೂ ಅತನ ಪತ್ನಿಯಾದ ರೂಪ

ವತಿಗೂ ಮಧು ಕೈಟಭರೆಂಬ ಮಕ್ಕಳಾಗಿ ಹುಟ್ಟಿ ಬಹುಲಾವಣ್ಯಯುತರಾಗಿ ಬೆಳೆದು ತಾರುಣ್ಯವನ್ನು ಹೊಂದಲು ವಿಶ್ವಭೂಪತಿಯು ತನ್ನ ರಾಜ್ಯವನ್ನು ಮಕ್ಕಳಿಗೆ ಕೊಟ್ಟು ತಾನು ಜಿನದೀಕ್ಷೆಯನ್ನು ಪಡೆದನು.

ಇತ್ತ ಮಧುವು ರಾಜನಾಗಿಯೂ ಕೈಟಭನು ಯುವರಾಜನಾಗಿಯೂ ಸುಖದಿಂದ ರಾಜ್ಯವಾಳುತ್ತಿದ್ದರು. ಆಗ ಮಧುರಾನಗರದಲ್ಲಿ ದೊರೆಯಾಗಿದ್ದ ವೀರಸೇನ ರಾಜನು ಮಧುರಾಜನಲ್ಲಿ ಬಹು ಸ್ನೇಹವುಳ್ಳವನಾಗಿದ್ದು ಒಂದುದಿನ ತನ್ನ ಚಂದ್ರಾಭೆಯೆಂಬ ಪತ್ನಿಯ ಕೈಯಲ್ಲಿ ಉತ್ತಮವಸ್ತ್ರಗಳನ್ನು ಕೈಗಾಣಿಕೆಯಾಗಿ ಕೊಟ್ಟು ಮಧುರಾಜನ ಬಳಿಗೆ ಕಳುಹಲು ಆತನು ಆಕೆಯ ರೂಪಲಾವಣ್ಯವನ್ನು ನೋಡಿ ಮೋಹಿಸಿ ಆಕೆಯನ್ನು ಹೋಗಗೊಡದೆ ಅವಳಲ್ಲಿ ಕೂಡಿದ್ದನು. ಆ ವಿಷಯವನ್ನು ವೀರಸೇನನು ತಿಳಿದು ಆತನಿಂದ ತನ್ನ ವಲ್ಲಭೆಯನ್ನು ತರಿಸಲು ಶಕ್ತಿಯಿಲ್ಲದೆ ಹುಚ್ಚನಾಗಿ ಹಸ್ತಿನಾಪುರಕ್ಕೆ ಹೋದನು. ಅಲ್ಲಿಯ ಜನರು ಮಧುರಾಜನ ಕೃತ್ಯಕ್ಕೆ ಒಹಳವಾಗಿ ಪರಿಹಾಸ್ಯಮಾಡುವುದನ್ನು ಕೇಳಿ ಆ ಮಧುರಾಜನು ಪರಸ್ತ್ರೀಹರಣದ ದುರ್ಯಶಸ್ಸಿಗೆ ಕೊಕ್ಕರಿಸಿ ಒಂದು ದಿನ ಆ ನಗರದ ಉದ್ಯಾನದಲ್ಲಿ ಬಂದು ನೆಲಸಿದ್ದ ವಿಮಲವಾಹನರೆಂಬ ಕೇವಲಿಗಳ ಬಳಿಗೆ ಹೋಗಿ ಧರ್ಮೋಪದೇಶವನ್ನು ಕೇಳಿ ವೈರಾಗ್ಯದಿಂದ ತನ್ನ ಮಗನಿಗೆ ರಾಜ್ಯಭಾರವನ್ನು ವಹಿಸಿ ತಾನು ತನ್ನ ತಮ್ಮನಾದ ಕೈಟಭನೊಡನೆ ದೀಕ್ಷೆಯನ್ನು ಧರಿಸಿ ತಪಸ್ಸುಮಾಡಿ ಸತ್ತು ಮಹಾಶುಕ್ರವೆಂಬ ಹತ್ತನೆಯ ಸ್ವರ್ಗದಲ್ಲಿ ಇಂದ್ರನಾಗಿ ಹುಟ್ಟಿದನು. ಆತನ ತಮ್ಮ ಕೈಟಭನೂ ಅದೇ ಸ್ವರ್ಗದಲ್ಲಿ ಪ್ರತೀಂದ್ರನಾಗಿ ಹುಟ್ಟಿದನು. ಅವರೀರ್ವರೂ ಹದಿನಾರು ಸಾಗರೋಪಮಕಾಲದವರೆಗೆ ದಿವ್ಯಸುಖವನ್ನನುಭವಿಸಿ ಅಲ್ಲಿಂದ ಮಧುರಾಜನಾಗಿದ್ದ ದೇವನು ಬಂದು ಮನ್ಮಥನಾಗಿ ಹುಟ್ಟಿದನು. ಆತ್ತ ವೀರಸೇನನು ತನ್ನ ಪತ್ನಿಯಲ್ಲಿ ಮನವಿಟ್ಟು ಮರುಳಾಗಿ ಸತ್ತು ಭವಸಾಗರದಲ್ಲಿ ತೊಳಲುತ್ತಿದ್ದು ಕರ್ಮೋಪಶಮದಿಂದ ಮನುಷ್ಯಜನ್ಮವನ್ನು ಪಡೆದು ಪಂಚಾಗ್ನಿ ತಪಸ್ಸನ್ನು ಮಾಡಿ ಮಡಿದು ಧೂಮಕೇತುವೆಂಬ ಜ್ಯೋತಿಷ್ಕದೇವನಾಗಿ ಹುಟ್ಟಿ ಒಂದು ದಿನ ಆಕಾಶಮಾರ್ಗದಲ್ಲಿ ಬರುತ್ತ ತನ್ನ ವಿಮಾನವು ನಿಂತುಹೋಗಲು ಆ ದೇವನು ಕೆಳಕ್ಕಿಳಿದು ಬಂದು ರುಗ್ಮಿಣಿಯ ಪಕ್ಕದಲ್ಲಿ ಮಾತನಿರುವುದನ್ನು ಕಂಡು ಪೂರ್ವದ ಶತ್ರುವೆಂದು ಎತ್ತಿಕೊಂಡುಹೋಗಿ ದೊಡ್ಡಕಾಡಿನಲ್ಲಿ ಹಾಕಿಹೋದನು. ಆ ಮಗುವನ್ನು ಕಾಳಶಂಬರನು ಕೊಂಡೊಯ್ದು ಸಾಕಿದನು. ಮನ್ಮಥನು ಯೌವನಾವಸ್ಥೆಯನ್ನು ಹೊಂದಿದಲು, ಪೂರ್ವದ ಆ ಚಂದ್ರಾಭೆಯು ಅನೇಕ ಭವಗಳಲ್ಲಿ ತೊಳಲಿ ಕಾಳಶಂಬರನಿಗೆ ಕಾಂಚನಮಾಲೆ

ಯೆಂಬ ಹೆಂಡತಿಯಾಗಿ ಹಿಂದಿನ ಭವಬದ್ಧವಾದ ಮೋಹದಿಂದ ಮದನನಲ್ಲಿ ಮರುಳಾದಳು. ಅತ್ತ ಕೈಟಭನಾಗಿದ್ದ ಪ್ರತೀಂದ್ರನು ಸ್ವರ್ಗದಿಂದ ಬಂದು ಇಂದಿಗೆ ಆರನೆಯ ತಿಂಗಳಲ್ಲಿ ಕೃಷ್ಣನಿಗೆ ಪುತ್ರನಾಗಿ ಹುಟ್ಟುವನು'' ಎಂದು ಹೇಳಿ ನಾರದನು ಹೊರಟುಹೋದನು. ಸತ್ಯಭಾಮೆಯು ನಾರದನ ಮಾತನ್ನು ಕೇಳಿ ರುಗ್ಮಿಣಿಯ ಭೃತ್ಯರನ್ನು ಕರೆದು ತನ್ನ ತಲೆಗೂದಲುಗಳನ್ನು ತೆಗೆದುಕೊಳ್ಳುವಂತೆ ಹೇಳಲು ಅವರು '' ಕುರುಳನ್ನು ಕೇಳಿದಾಗ ಸತ್ಯಭಾಮೆಯು ಕೊಡುವುದಕ್ಕೆ ಬಂದರೆ ತೆಗೆದುಕೊಳ್ಳದೆ ಹಿಂದಿರುಗಿರೆಂದು ನಮಗೆ ರುಗ್ಮಿಣಿಯು ಆಜ್ಞಾಪಿಸಿರುವುದರಿಂದ ನಾವು ಇವನ್ನು ತೆಗೆದುಕೊಳ್ಳುವುದಿಲ್ಲ '' ಎಂದು ಹೇಳಿ ಹಿಂದಿರುಗಿಹೋಗಿ ಆ ವಿವರವನ್ನು ರುಗ್ಮಿಣಿಗೆ ತಿಳುಹಲು ಆಕೆಯು ಕೇಳಿ ಮಗನ ಪುಣ್ಯೋದಯವನ್ನು ನೋಡಿ ಅತಿ ಸಂತೋಷವನ್ನು ಹೊಂದಿ ಸುಖವಾಗಿದ್ದಳು.

೨೧. ಮದನವಿದರ್ಭೆಯರ ವಿವಾಹವರ್ಣನ ಸಂಧಿ

ಇಂದಿಗೆ ಆರನೆಯ ತಿಂಗಳ ರಾತ್ರಿಯಲ್ಲಿ ಸ್ವರ್ಗದಿಂದ ಬಂದು ಮನ್ಮಥನ ಪೂರ್ವಭವದ ತಮ್ಮನು ಕೃಷ್ಣನಿಗೆ ಮಗನಾಗುವನೆಂಬ ನಾರದನ ಮಾತನ್ನು ಕೇಳಿ ಸತ್ಯಭಾಮೆಯು ಕೃಷ್ಣನ ಬಳಿಗೆ ಹೋಗಿ ಆದಿನದ ವರ್ತಿಯನ್ನು ಬೇಡಿ ಪಡೆದು ತನ್ನ ಮನೆಗೆ ಬರಲು ಸ್ಮರನು ಆ ವಿಷಯವನ್ನು ತಿಳಿದು ತನ್ನ ಕೈಯಲ್ಲಿ ಶೋಭಿಸುವ ಕಾಮಮುದ್ರಿಕೆಯನ್ನು ಜಂಬಾವತಿಗಿತ್ತನು. ಆಕೆಯು ಅದನ್ನು ತನ್ನ ಕೈಬೆರಳಿಗಿಟ್ಟುಕೊಂಡಿದ್ದು ಆ ದಿನ ಸತ್ಯಭಾಮೆಯ ರೂಪವನ್ನು ಕೈಕೊಂಡು ಆಕೆಗಿಂತ ಮೊದಲೇ ತಾನು ಕೃಷ್ಣನ ಶಯ್ಯಾಗೃಹಕ್ಕೆ ಹೋಗಲು ಸತ್ಯಭಾನೆಯೆಂದು ತಿಳಿದು ಕೃಷ್ಣನು ಆಕೆಯಲ್ಲಿ ರತಿಕ್ರೀಡೆಯನ್ನಾಡುತ್ತಿದ್ದನು. ಆಗ ಸತ್ಯಭಾಮೆಯು ಬಹಳವಾಗಿ ಶೃಂಗಾರಮಾಡಿಕೊಂಡು ಗಂಡನ ಬಳಿಗೆ ಬರುತ್ತ ಆತನು ಮತ್ತೋರ್ವನತಿಯಲ್ಲಿ ಕೂಡಿರುತ್ತಾನೆಂಬುದನ್ನು ಕೇಳಿ ಹಿಂದಿರುಗಿ ಮನೆಗೆಹೋಗಿ ಬಹುಕೋಪದಿಂದಿದ್ದು ಮರುದಿನ ಬೆಳಿಗ್ಗೆ ಎದ್ದು ಪತಿಯ ಬಳಿಗೆ ಬಂದು '' ನೀನು ಪುರುಷೋತ್ತಮನೆಂಬುದನ್ನು ಸುಳ್ಳುಮಾಡಿ ದನಕಾಯುವವನೆಂಬ ಮಾತನ್ನು ನಿಜಮಾಡಿದೆ '' ಎನಲು ಕಮಲ

ನಾಭನು ನಸುನಗುತ " ಎಲೈ ಕಮಲವದನೆ! ಕೇಳು, ಸ್ಮರನ ಕೃತ್ಯದಿಂದ ಜಂಬಾವತಿಯು ಕಾಮಮುದ್ರಿಕೆಯನ್ನು ಕೈಗಿಟ್ಟುಕೊಂಡು ನಿನ್ನ ರೂಪವನ್ನು ಧರಿಸಿಕೊಂಡುಬರಲು ನೀನೆಂದು ತಿಳಿದು ನಾನು ಅವಳಲ್ಲಿ ಕೂಡಿದೆನು. ನನ್ನಲ್ಲಿ ತಪ್ಪಿಲ್ಲ " ಎಂದು ಒಳ್ಳೆಯ ಮಾತನ್ನಾಡಿ ಸಂತೈಸಿ ಕಳುಹಿದನು. ಇತ್ತ ಜಂಬಾವತಿಗೆ ಗರ್ಭವು ನಿಂತು ಒಂಬತ್ತನೆಯ ತಿಂಗಳಲ್ಲಿ ಶುಭಲಗ್ನದಲ್ಲಿ ಶಿಶುವು ಜನಿಸಲು ಕೃಷ್ಣನು ಉತ್ಸವವನ್ನು ಮಾಡಿಸಿ ಆ ಶಿಶುವಿಗೆ ಶಂಭುಕುಮಾರನೆಂದು ಹೆಸರನ್ನಿಟ್ಟನು. ಅದು ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತ ವಿದ್ಯಾವಿನಯ ರೂಪ ಮೊದಲಾದ ಗುಣಗಳಲ್ಲಿ ಮನ್ಮಥನನ್ನು ಹೋಲುತ್ತಿದ್ದಿತು. ಪೂರ್ವಭವದ ಸಂಸ್ಕಾರದಿಂದ ಅವರೀರ್ವರೂ ಪರಸ್ಪರ ಅನುರಾಗವುಳ್ಳವರಾಗಿದ್ದರು. ಮದನನು ವಿದ್ಯಾಧರಲೋಕದಲ್ಲಿ ಕಲಿತ ವಿದ್ಯೆಗಳನ್ನೆಲ್ಲ ಶಂಭುಕುಮಾರನಿಗೆ ಕಲಿಸಿದನು.

ಒಂದು ದಿನ ರುಗ್ಮಿಣಿಯು ಸಚಿವರ ಕೈಯಲ್ಲಿ ಕೈಗಾಣಿಕೆಗಳನ್ನು ಕೊಟ್ಟು ತನ್ನ ಅಣ್ಣನಾದ ರುಗ್ಮಿಣನ ಬಳಿಗೆ ಕಳುಹಲು ಅವರು ಹೋಗಿ ಆ ಕೈಗಾಣಿಕೆಗಳನ್ನಿತ್ತು " ಎಲೈ ರಾಜನೆ! ರುಗ್ಮಿಣಿದೇವಿಯು ತನ್ನ ಮಗನಾದ ಮದನನಿಗೆ ನಿಮ್ಮ ಮಗಳಾದ ವೈದರ್ಭಿಯನ್ನು ಕೇಳಲು ನಮ್ಮನ್ನು ನಿಮ್ಮಬಳಿಗೆ ಕಳುಹಿಸಿದ್ದಾಳೆ " ಎಂದರು. ಆ ಮಾತನ್ನು ಕೇಳಿ ರುಗ್ಮಿಣರಾಜನು " ಮೊದಲು ನಿಮ್ಮ ಒಡೆಯನು ಬಂದು ನಮ್ಮ ತಂದೆಯನ್ನು ಕೊಂದು ನನ್ನ ತಂಗಿಯನ್ನು ಒಯ್ದನು. ಅವನ ಮಗನಿಗೆ ನನ್ನ ಮಗಳನ್ನು ಹೇಗೆ ಕೊಡಲಿ? ಅವನಿಗೆ ಕೊಡುವುದಕ್ಕೆ ಬದಲಾಗಿ ಚಂಡಾಲರಿಗೆ ಕೊಡುವೆನು " ಎನಲು ಆ ಮಾತನ್ನು ಮಂತ್ರಿಗಳು ಹೋಗಿ ರುಗ್ಮಿಣಿಗೆ ತಿಳಿಸಿದರು. ಆ ಮಾತನ್ನು ಮನ್ಮಥನು ಕೇಳಿ " ಜನನಿಯೆ! ಕೇಳು, ರುಗ್ಮಿಣ ಮಾವನು ತನ್ನ ಮಗಳನ್ನು ಚಂಡಾಲರಿಗೆ ಕೊಡುತ್ತೇನೆಂದನಲ್ಲವೆ? ನಾನು ಆ ರೂಪವನ್ನೇ ಅನುಕರಣಮಾಡುತ್ತೇನೆ " ಎಂದು ತಾಯಿಯ ಚರಣಗಳಿಗೆ ನಮಸ್ಕರಿಸಿ ಬೀಳ್ಕೊಂಡು ಶಂಭುಕುಮಾರನೊಡನೆ ವಿಮಾನವನ್ನೇರಿ ಆಕಾಶಮಾರ್ಗದಿಂದ ಆ ಕುಂಡಿನಪುರಕ್ಕೆ ಹೋಗಿ ಊರ ಮೇಲ್ಗಡೆಯಲ್ಲಿ ನಿಂತು ಮನ್ಮಥನು ತನ್ನ ವಿದ್ಯೆಯಿಂದ ವೃದ್ಧಚಾಂಡಾಲಿಯ ರೂಪವನ್ನು ರಚಿಸಲು ಆ ಚಾಂಡಾಲಿಯು ಆ ನಗರಕ್ಕಿಳಿದು ರುಗ್ಮಿಣನ ಅರಮನೆಗೆ ಹೋಗಿ ಒಂದು ಚಿಬ್ಬಲಲ್ಲಿ ಸುವರ್ಣರತ್ನಾಭರಣಗಳನ್ನು ತುಂಬಿಕೊಂಡು ರುಗ್ಮಿಣನ ಓಲಗಕ್ಕೆ ಹೋಗಿ " ನಿನ್ನ ಮಗಳನ್ನು ನನ್ನ ಮಗನಿಗೆ ಕೊಡು " ಎನಲು ದೊರೆಯು ಅಚ್ಚರಿಪಡುತ್ತ " ಚಾಂಡಾಲಿಯೆ! ಕೇಳು, ನಿನ್ನ ಆ ಮಗನನ್ನು ತಂದು ತೋರಿಸು " ಎಂದನು. ಆ ಮಾತನ್ನು ಕೇಳಿ ಆಕೆಯು

ಮನ್ಮಥನೆಡೆಗೆ ಹೋಗಿ ದೊರೆಯು ಹೇಳಿದ ಮಾತನ್ನು ಹೇಳಲು ಅವನು ಶಂಭು ಕುಮಾರನೊಡನೆ ಚಾಂಡಾಲವೇಷದಿಂದ, ಪ್ರೇಕ್ಷಕರು ಆಶ್ಚರ್ಯಪಡುವಂತೆ, ಓಲಗ ಶಾಲೆಗೆ ಹೋಗಿ ದೊರೆಗೆ ವಂದಿಸಿ ದೂರದಲ್ಲಿನಿಂದಿರಲು ನೋಡಿ ದೊರೆಯು ''ನಿಮ್ಮ ಪಟ್ಟಣವಾವುದು? ನಿಮ್ಮ ಕೆಲಸವೇನು? ಹೇಳಿ '' ಎನಲು ಆ ಮಾತನ್ನು ಕೇಳಿ ಕಾಮನು '' ನಾವಿರುವ ನಗರಿಯು ದ್ವಾರಾವತಿ. ನಿಮ್ಮ ಮಗಳನ್ನು ಮಾತಂಗರಿಗೆ ಕೊಡುತ್ತೀವೆಂದು ಹೇಳಿದಿರಿ. ಆ ವಾರ್ತೆಯನ್ನು ಕೇಳಿ ಆ ಸುಕುಮಾರಿಯನ್ನು ಕೇಳುವುದಕ್ಕಾಗಿ ಬಂದೆವು ' ಎನಲು ದೊರೆಯು '' ತನಗೆ ಬೇಡವಾದವರಿಗೆ ಮಗಳನ್ನು ಕೊಡುವುದಕ್ಕಿಂತಲೂ ನಿಮಗೆ ಕೊಡುವುದೊಳ್ಳೆಯದು. ನಿಮ್ಮ ರೂಪುಲಾವಣ್ಯವು ಚಂಡಾಲರಿಗಿರುವುದಿಲ್ಲ. ಇದು ನಮಗೆ ಆಶ್ಚರ್ಯಕರವಾಗಿದೆ '' ಎಂದನು. ಆ ಮಾತನ್ನು ಕೇಳಿ ಮದನ ಶಂಭುಕುಮಾರರು '' ಹರಿಯ ಕೃಪೆಯಿಂದ ನಮಗೆ ಈ ರೂಪವೂ ಸಿರಿಯೂ ದೊರಕಿರುತ್ತವೆ. ರಾಜರು ನುಡಿದ ಮಾತಿಗೆ ತಪ್ಪುವವರಲ್ಲವಾದುದರಿಂದ ನಿಮ್ಮ ಮಗಳನ್ನು ಕೊಡಬೇಕು '' ಎನಲು ರಾಜನು ದ್ವಾರಾವತಿಯ ನಿವಾಸಿಗಳಿಗೆ ಕೊಡುವುದಿಲ್ಲವೆಂದೂ ಬೇರೆಯವರಿಗೆ ಕೊಡುವೆನೆಂದೂ ಹೇಳಿದನು. ಆ ನುಡಿಯನ್ನು ಕೇಳಿ ಅವರು ಹೊರಟು ನಡುಬೀದಿಗೆ ಬಂದು ನಿಂತರು. ಆಗ ವಿದರ್ಭೆಯು ಅವರನ್ನು ನೋಡುವ ಇಚ್ಛೆಯಿಂದ ಉಪ್ಪರಿಗೆಯನ್ನೇರಿ ಜಗದಾಶ್ಚರ್ಯಕರವಾದ ಅವರ ರೂಪವನ್ನೂ ಹೆಚ್ಚಾಗಿ ಮನ್ಮಥನ ರೂಪವನ್ನೂ ನೋಡಿ ಬಹಳವಾಗಿ ಮೋಹಿತಳಾದಳು. ಮದನನೂ ಆಕೆಯ ರೂಪವನ್ನು ನೋಡಿ ಮೋಹಿತನಾದನು. ಬಳಿಕ ಅವರು ಆ ರೂಪವನ್ನು ಬಿಟ್ಟು ಗೊರವಿಯರ— ತಪಸ್ವಿನಿಯರ ರೂಪವನ್ನು ಧರಿಸಿಕೊಂಡು ತ್ರಿಕಾಲವಿಷಯುಗಳ ನಿಮಿತ್ತವನ್ನು ಹೇಳುತ್ತೇವೆಂದು ಬೀದಿಯಲ್ಲಿ ಬರುತ್ತಿರುವಾಗ ವಿದರ್ಭೆಯ ದಾಸಿಯರು ಅವರನ್ನು ಕನ್ಯಾಮಾಡಕ್ಕೆ ಕರೆದೊಯ್ದರು. ಅಲ್ಲಿ ವಿದರ್ಭೆಯನ್ನು ನೋಡಿ '' ಕೈತೋರು, ನೀನು ಕಂಡ ಕನಸನ್ನೂ ಉಂಡೂಟವನ್ನೂ ಹೇಳುವೆನು '' ಎನಲು ಆಕೆಯು ತನ್ನ ಕೈಯನ್ನು ಕೊಟ್ಟು ತಾನುಂಡ ಊಟದ ಮತ್ತು ಕನಸಿನ ವಿವರವನ್ನು ಕೇಳಿದಳು. ಆಗ ಕಾಮನು ಪ್ರಜ್ಞಪ್ತಿಯೆಂಬ ವಿದ್ಯೆಯಿಂದ '' ವನಿತೆಯೆ! ಇಂದಿನ ರಾತ್ರಿ ನೀನು ಮನ್ಮಥನ ಕೈಹಿಡಿದಿರುವುದನ್ನೂ ಅತನ ಪುಷ್ಪಬಾಣಗಳನ್ನೂ ಕನಸಿನಲ್ಲಿ ಕಂಡಿರುವುದು ಸುಳ್ಳಲ್ಲವು '' ಎಂದು ಹೇಳಿ ಆಕೆಯು ಊಟಮಾಡಿದ್ದವಸ್ತುಗಳ ವಿವರವನ್ನೂ ಹೇಳಿದನು. ಅದನ್ನು ಕೇಳಿ ವಿದರ್ಭೆಯು ಅಚ್ಚರಿವಟ್ಟು ಸಂತೋಷದಿಂದ ಆ ಗೊರವಿಯರನ್ನು ಏಕಾಂತಸ್ಥಾನಕ್ಕೆ ಕರೆದೊಯ್ದು '' ಗೊರವಿಯರಿರಾ! ನನ್ನ

ಮನಸ್ಸಿನಲ್ಲಿರುವ ಅಭೀಷ್ಟವನ್ನು ಹೇಳಬೇಕು '' ಎನಲು ಕಾಮನು ಆಕೆಯ ಕೈಯನ್ನು ಹಿಡಿದು ನೋಡಿ '' ವನಿತೆಯೆ ! ನೀನೋರ್ವ ಮಾದಿಗನಲ್ಲಿ ಮನಸನ್ನಿಟ್ಟಿರುವೆ; ಏನು ಹೇಳುವೆ ? '' ಎಂದನು. ಅದಕ್ಕವಳು '' ಇದು ಸುಳ್ಳು '' ಎಂದು ನಸುನಕ್ಕಳು. ಆಗ ಮನ್ಮಥನು '' ಇದೇಕೆ ಮುಚ್ಚುಮರೆ ? ಮೊದಲು ನೀನು ಇಚ್ಛಿಸಿದವನು ನಿನ್ನ ಬಳಿಗೆ ಮೆಚ್ಚಿ ಬಂದಿರುವನು, ಎನ್ನ ಮಾಕಾಳಿಯಾಣೆ, ನೀನು ಸಂದೇಹಪಡಬೇಡ '' ಎಂದು ಹೇಳಿ ಆಕೆಯಿಂದ ಬಹುಮಾನವನ್ನು ಪಡೆದು ಬಂದು ಆ ರೂಪವನ್ನು ಬಿಸುಟು ಮೊದಲಿನ ಮಾತಂಗರೂಪವನ್ನು ಕೈಕೊಂಡು ಬಂದು ಕಾಮನು ವಿದರ್ಭೆಯು ಮುಂದೆ ನಿಂತನು. ಆತನ ಅಸದೃಶವಾದ ರೂಪವನ್ನು ನೋಡಿ ವಿದರ್ಭೆಯು ಪರವಶಳಾದಳು. ಮನ್ಮಥನು ಆಕೆಯನ್ನೆತ್ತಿಕೊಂಡು ಆಕಾಶಮಾರ್ಗವಾಗಿ ದ್ವಾರಾವತಿಯ ಉದ್ಯಾನಕ್ಕೆ ಹೋಗಿ ವಿದ್ಯಾದೇವತೆಗಳಿಂದ ವಸ್ತ್ರಾಭರಣಾದಿಗಳನ್ನು ತರಿಸಿ ಆಕೆಗೆ ತೊಡಿಸಿ ತನ್ನ ಹಾರವನ್ನು ಆಕೆಯ ಕೈಗಿತ್ತು ಅದನ್ನು ಆ ಊರಲ್ಲಿ ಪುಷ್ಪಬಾಣಕ್ಕೆ ಮಾರಿ ಬರುವಂತೆ ಹೇಳಿ ವಿದ್ಯಾದೇವತೆಗಳನ್ನು ಪರಿವಾರ ಸ್ತ್ರೀಯರನ್ನಾಗಿ ಮಾಡಿ ಆಕೆಯನ್ನು ಕಳುಹಿದನು. ಆ ನಗರದ ಜನರು ವಿದರ್ಭೆಯ ರೂಪ ಸೌಂದರ್ಯವನ್ನು ನೋಡುತ್ತಿರಲು ಆಕೆಯು '' ಪುಷ್ಪಬಾಣಗಳು ಯಾವನ ಕೈಯಲ್ಲಿರುವುವೋ ಅವನು ಅವುಗಳನ್ನು ಕೊಟ್ಟು ಈ ಮಣಿಮಾಲೆಯನ್ನು ನನ್ನ ಕೈಯಿಂದ ಬದಲಾಗಿ ತೆಗೆದುಕೊಳ್ಳಲಿ '' ಎಂದು ಹೇಳುತ್ತ ಬೀದಿಯಲ್ಲಿ ಬರುತ್ತಿರುವಾಗ ಆ ವಿಷಯವನ್ನು ಓರ್ವಸ್ತ್ರೀಯು ರತಿದೇವಿಗೆ ತಿಳಿಸಿದಳು. ಆ ಮಾತನ್ನು ಕೇಳಿ ರತಿದೇವಿಯು ಉದಧಿಕುಮಾರಿಯೊಡನೆ ಬರಲು ಆಕೆಯನ್ನು ಕಂಡು ವಿದರ್ಭೆಯು ಪುಷ್ಪಬಾಣವನ್ನು ಬದಲಾಗಿ ಕೊಟ್ಟು ತನ್ನ ಆ ಮಣಿಮಾಲೆಯನ್ನು ತೆಗೆದುಕೊಳ್ಳುವಂತೆ ಹೇಳಿದಳು. ಅದಕ್ಕೆ ರತಿಯು ನಸುನಕ್ಕು '' ಎಲೈ ಮಾಯದ ಮಾತಂಗಿ ! ಈ ಮಣಿಮಾಲೆಯನ್ನು ಕೊಟ್ಟು ಪುಷ್ಪಬಾಣಗಳನ್ನು ಪಡೆಯುವೆನೆಂಬ ಮರುಳುಮಾತೇಕೆ ? ಮನ್ಮಥನ ರೂಪವನ್ನು ನೋಡಿದರೆ ನಿನ್ನ ಮನಸಿನೊಳಗೇ ಪುಷ್ಪಬಾಣಗಳು ನಟಿಸುವುವು '' ಎಂದಳು. ಆ ಮಾತನ್ನು ಕೇಳಿ ವಿದರ್ಭೆಯು '' ಎಲೈ ದೇವಿಯೆ ! ನೀನು ನನ್ನ ಮನಸಿಗೆ ಹಿತವಲ್ಲದ ಮಾತನ್ನಾಡಬಹುದೇ ? ನನಗೆ ನನ್ನನ್ನು ತಂದ ಮಾತಂಗನಿಗಿಂತಲೂ ಮನ್ಮಥನು ಹೆಚ್ಚಿನವನೋ ? ಆ ಮಾತಂಗನ ನೋಟವೇ ಪುಷ್ಪಬಾಣಗಳ ಸಮೂಹವಲ್ಲವೆ ? ಅವನನ್ನು ನೋಡಿದ ಕಣ್ಣುಗಳು, ಕೂವಕಂಭವನ್ನಾಶ್ರಯಿಸಿದ ಕಾಗೆಯಂತೆ, ಚಲಿಸವು '' ಎನಲು ಉದಧಿಕುಮಾರಿಯು ರತಿದೇವಿಯನ್ನು ಕುರಿತು '' ಈಕೆಯು ಕುಲೀನಳಲ್ಲದೆ ದುಷ್ಕುಲದವಳಲ್ಲ. ಈ

ಸೌಂದರ್ಯ, ಈ ಭಾಗ್ಯ, ಈ ಚಾತುರ್ಯ ದುಷ್ಕುಲದವರಿಗೆಲ್ಲಿಬರುವುವು? ಇದು ನಿಮ್ಮ ಯಜಮಾನರ ಗೊಡ್ಡಾಟವಲ್ಲದೆ ಬೇರೊಂದಲ್ಲವು " ಎಂದಳು. ಆ ಸಮಾಚಾರವನ್ನು ರುಗ್ಮಿಣಿಯು ಕೇಳಿ ಆ ಮಾತಂಗಿಯನ್ನು ತನ್ನಲ್ಲಿಗೆ ಕರೆಸಿ ಆಕೆಯ ರೂಪಲಾವಣ್ಯವನ್ನು ನೋಡಿ ಮನ್ಮಥನು ತನ್ನಲ್ಲಿ ಹೇಳಿಹೋಗಿದ್ದ ಮಾತನ್ನು ಸ್ಮರಿಸಿಕೊಂಡು ತನ್ನಲ್ಲಿ ನಿಜಸ್ಥಿತಿಯನ್ನು ಹೇಳಬೇಕೆಂದು ಆಕೆಯನ್ನು ಕುರಿತು ಹೇಳಿದಳು. ಆಗ ಆ ಮಾತಂಗಿಯು ಲಜ್ಜೆಯಿಂದ ತಲೆಬಾಗಿಸಿ ಸ್ವಲ್ಪಹೊತ್ತು ಮಾತನಾಡದೆ ಬಳಿಕ ಕೈಮುಗಿದು " ವಿದರ್ಭದೇಶದ ಕುಂಡಿನಪುರದರಸು ರುಗ್ಮಿಣನಿಗೂ ಆತನ ಸತಿ ಲಕ್ಷ್ಮೀಮತಿಗೂ ಹುಟ್ಟಿದ ವಿದರ್ಭೆಯೆಂಬವಳು ನಾನು. ನಾನಿದ್ದಸ್ಥಾನಕ್ಕೆ ಈರ್ವರು ಮಾದಿಗರು ಬಂದು ಅವರಲ್ಲಿ ಮಹಾಸುಂದರನಾದ ಹಿರಿಯನು ನನ್ನನ್ನಿಲ್ಲಿಗೆ ಕರೆತಂದನು " ಎನಲು ಕೇಳಿ ರುಗ್ಮಿಣಿದೇವಿಯು ಎದ್ದು ಹೋಗಿ ಆಕೆಯನ್ನು ಬಿಗಿದಪ್ಪಿ ಕಣ್ಣೀರನ್ನು ಸುರಿಸುತ್ತ "ಎಲೆ ಕೋಮಲೆ! ಮೊದಲು ಹರಿಯು ಮುಳಿದುಬಂದು ನನ್ನ ತಂದೆಯನ್ನು ಯುದ್ಧದಲ್ಲಿ ಕೊಂದು ನನ್ನನ್ನು ತಂದನು. ಇಂದು ಅವನ ಮಗ ಅಂಗಜನು ನಿನ್ನನ್ನು ಈರೀತಿಯಾಗಿ ತಂದನು " ಎಂದು ಆಕೆಯನ್ನು ತನ್ನ ಹತ್ತಿರದಲ್ಲಿ ಕುಳ್ಳಿರಿಸಿಕೊಂಡಳು. ಆಗ ಮನ್ಮಥನೂ ಶಂಭುಕುಮಾರನೂ ಬಂದು ರುಗ್ಮಿಣಿಯ ಕಾಲಿಗೆ ನಮಸ್ಕಾರಮಾಡಲು ಆಕೆಯು ಹರಸಿ ಕುಳ್ಳಿರಿಸಿ ಕಣ್ಣೀರನ್ನು ಸುರಿಸುತ್ತ ಮನ್ಮಥನನ್ನು ಕುರಿತು " ಮಗನೆ! ನೀನು ನನ್ನ ಅಣ್ಣನನ್ನು ಲೆಕ್ಕಿಸದೆ ಹೆಣ್ಣನ್ನು ತಂದೆಯಲ್ಲ. ನಮ್ಮಿಂದ ನಮ್ಮ ತವರುಮನೆಗೆ ಬಹುದುಃಖವುಂಟಾಯ್ತು. ಮಗನೆ! ಈದಿನ ನೀನು ನನ್ನ ಅಣ್ಣನನ್ನೂ ಲಕ್ಷ್ಮೀಮತಿಯನ್ನೂ ಕರೆಸು " ಎನಲು ಅಂಗಜನು ಒಪ್ಪಿ ತನ್ನ ವಿದ್ಯೆಯಿಂದ ನಾರದನನ್ನು ಬರುಮಾಡಿ ಕುಂಡಿನಪುರಕ್ಕೆ ಕಳುಹಿದನು. ಅವನು ಹೋಗಿ ಚತುರತೆಯಿಂದ ರುಗ್ಮಿಣರಾಜನನ್ನೂ ಲಕ್ಷ್ಮೀಮತಿಯನ್ನೂ ಒಡಂಬಡಿಸಿ ದ್ವಾರಾವತಿಗೆ ಕರೆತಂದನು. ಆ ವಿಷಯವನ್ನು ಕೃಷ್ಣನು ತಿಳಿದು ರುಗ್ಮಿಣರಾಜನನ್ನು ಇದಿರ್ಗೊಂಡು ಅರಮನೆಗೆ ಕರೆದೊಯ್ದು ಬಹು ವೈಭವದಿಂದ ಮದನವಿದರ್ಭೆಯರ ಮದುವೆಯನ್ನು ಮಾಡಿ ರುಗ್ಮಿಣನಿಗೆ ಉಡುಗುರೆಯನ್ನಿತ್ತು ಕಳುಹಿಸಿಕೊಟ್ಟನು. ಇತ್ತ ಅಂಗಜನು ಆ ಲಲನಾಮಣಿಗಳಲ್ಲಿ ಅನುರಾಗದಿಂದ ಸುಖವಾಗಿದ್ದನು.



೨೨. ನೇಮಿನಾಥೋದಯಸಂಧಿ

ದ್ವಾರಾವತಿಯಲ್ಲಿ ಹರಿವಂಶತಿಲಕನೂ ಮಹಾಗುಣವಂತನೂ ಆದ ಸಮುದ್ರವಿಜಯಮಹಾರಾಜನು ವಸುದೇವ, ಬಲರಾಮ, ಕೃಷ್ಣ, ಮನ್ಮಥ ಈ ಕಾರಣ ಪುರುಷರಿಂದ ಒಲ್ಮೆಸಲ್ಪಟ್ಟವನಾಗಿ ಸುಖದಿಂದ ರಾಜ್ಯಭಾರವನ್ನು ಮಾಡುತ್ತಿದ್ದನು. ಹಿಂದೆ ಸುಪ್ರತಿಷ್ಠನಾಗಿದ್ದ ಅಹಮಿಂದ್ರದೇವನು ಸರ್ವಾರ್ಥಸಿದ್ಧಿಯೆಂಬ ಸ್ವರ್ಗದಿಂದ ಚ್ಯುತನಾಗಿ ಬಂದು ಆ ಸಮುದ್ರವಿಜಯಮಹಾರಾಜನ ಪತ್ನಿ ಮಹಾರೂಪವತಿಯಾದ ಶಿವದೇವಿಯ ಗರ್ಭದಲ್ಲಿ ಅವತರಿಸುವನೆಂಬುದನ್ನು ಆರುತಿಂಗಳಿಗೆ ಮೊದಲು ಸೌಧರ್ಮಸ್ವರ್ಗದ ದೇವೇಂದ್ರನು ಅವಧಿಜ್ಞಾನದಿಂದ ತಿಳಿದು ಭವನವ್ಯಂತರ, ಜ್ಯೋತಿಷ್ಕ, ಕಲ್ಪವಾಸಿಗಳೆಂಬ ನಾಲ್ಕುವಿಧವಾದ ದೇವತೆಗಳೊಡನೆ ದ್ವಾರಾವತಿಗೆ ಬಂದು ಆ ದಂಪತಿಗಳನ್ನು ಮಣಿಮಯವಾದ ಆಸನದಲ್ಲಿ ಕುಳ್ಳಿರಿಸಿ ಗಂಗಾಸಿಂಧುಮೊದಲಾದನದಿಗಳ ತೀರ್ಥೋದಕಗಳಿಂದ ಮಜ್ಜನಮಾಡಿಸಿ ದಿವ್ಯವಸ್ತ್ರಾಭರಣಗಳಿಂದಲೂ ಗಂಧ ಪುಷ್ಪಾನುಲೇಪನಗಳಿಂದಲೂ ಸತ್ಕರಿಸಿ ಇಂದ್ರನು ಸಮುದ್ರವಿಜಯಮಹಾರಾಜನನ್ನೂ ರಂಭೆ ಶಚಿ ಮೊದಲಾದ ದೇವಾಂಗನೆಯರು ಶಿವದೇವಿಯನ್ನೂ ವಿವಿಧವಸ್ತ್ರಾಭರಣಗಳಿಂದ ಶೃಂಗರಿಸಿದರು. ಬಳಿಕ ದೇವೇಂದ್ರನು ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿ ಮೊದಲಾದ ದೇವಸ್ತ್ರೀಯರನ್ನು ಕರೆಯಿಸಿ ಶಿವದೇವಿಯ ಸೇವೆಜುನ್ನೂ ಗರ್ಭಶೋಧನೆಯನ್ನೂ ಮಾಡುವಂತೆ ಆಜ್ಞಾಪಿಸಿ ದೇವಲೋಕಕ್ಕೆ ಹೋದನು.

ಇತ್ತ ಆ ದೇವಕನ್ಯೆಯರು ದೇವಲೋಕದ ವಸ್ತ್ರಾಭರಣಗಳಿಂದಲೂ ಭೋಜನ ಗಂಧ ತಾಂಬೂಲ ಮೊದಲಾದ ವಸ್ತುಗಳಿಂದಲೂ ಶಿವದೇವಿಯ ಸೇವೆಯನ್ನು ಮಾಡುತ್ತಿದ್ದರು. ತಮ್ಮ ಪಾಪಪರಿಹಾರವಾಗಲೆಂದು ಆ ಜಿನಮಾತೃವಿನ ಗರ್ಭಶೋಧನೆಯನ್ನು ಮಾಡಿದರು. ಕುಬೇರನು ದೇವೇಂದ್ರನ ಅಪ್ಪಣೆಯಿಂದ ದಿನಕ್ಕೆ ಮೂರು ಹೊತ್ತು ಸಮುದ್ರವಿಜಯರಾಜನ ಅಂಗಣದಲ್ಲಿ ರತ್ನವೃಷ್ಟಿಯನ್ನು ಮಾಡಿದನು. ಹೀಗೆ ಆರು ತಿಂಗಳವರೆಗೆ ಆ ದೇವಾಂಗನೆಯರು ಜಿನಜನನಿಯ ಸೇವೆಯನ್ನೂ ಕುಬೇರನು ರತ್ನವೃಷ್ಟಿಯನ್ನೂ ಮಾಡುತ್ತಿದ್ದರು. ಬಳಿಕ ಶಿವದೇವಿಯು ಋತುಮತಿಯಾಗಲು ನಾಲ್ಕನೆಯದಿವಸ ಆಕೆಗೆ ದೇವಸ್ತ್ರೀಯರು ತೀರ್ಥೋದಕ

ಗಳಿಂದ ನಾಲ್ನೀರನ್ನು ಎರೆದು ವಿವಿಧ ವಸ್ತ್ರಾಭರಣಗಳಿಂದ ಶೃಂಗರಿಸಿದರು. ಆ ದಿನ ರಾತ್ರಿ ಶಿವದೇವಮ್ಮನು ಪತಿಯ ಶಯ್ಯೆಗೆ ಹೋಗಿ ಪತಿಯೊಡನೆ ರತಿಸುಖದೊಳೋಲಾಡಿ ಒರಗಿರ್ದು ಬೆಳಗಿನ ಜಾವದಲ್ಲಿ ಹದಿನಾರು ಕನಸುಗಳನ್ನು ಕಂಡು ಬೆಳಿಗ್ಗೆ ಎದ್ದು ಮುಖವನ್ನು ತೊಳೆದು ಶೃಂಗರಿಸಿಕೊಂಡು ಪತಿಯ ಬಳಿಗೆ ಹೋಗಿ ತಾನು ಕಂಡ ಕನಸುಗಳನ್ನು ಆತನಿಗೆ ತಿಳಿಸಿದಳು. ಸಮುದ್ರವಿಜಯಮಹಾರಾಜನು ಆ ಸ್ವಪ್ನಗಳ ಫಲಗಳನ್ನು ಈ ರೀತಿಯಾಗಿ ತಿಳಿಸಿದನು:—

"ದೇವಿಯೆ! ನೀನು ಕನಸಿನಲ್ಲಿ ಆನೆಯನ್ನು ಕಂಡುದರಿಂದ ಅಂಗಜನನ್ನು ಮರ್ದಿಸುವ ತ್ರಿಲೋಕಪೂಜ್ಯನಾದ ಪುತ್ರನನ್ನು ಪಡೆಯುವೆ; ವೃಷಭನನ್ನು ಕಂಡುದರಿಂದ ಮೋಕ್ಷಲಕ್ಷ್ಮಿಗೊಡೆಯನಾಗುವ ಶ್ರೇಷ್ಠ ಪುತ್ರನನ್ನು ಪಡೆಯುವೆ; ಸಿಹ್ಮವನ್ನು ಕಂಡುದರಿಂದ ಪಾಪವನ್ನು ನಾಶಮಾಡಿ ಸಿಹಾ್ಮಸನಾಲಂಕೃತನಾಗುವ ಬಲಿಷ್ಠ ಪುತ್ರನನ್ನು ಪಡೆಯುವೆ; ಲಕ್ಷ್ಮಿಯನ್ನು ಕಂಡುದರಿಂದ ಸುರಗಿರಿಯಲ್ಲಿ ಜನ್ಮಾಭಿಷೇಕವನ್ನು ಹೊಂದಿ ಮುಕ್ತಿಗಧಿಪತಿಯಾಗುವ ಮಗನನ್ನು ಪಡೆಯುವೆ; ಪುಷ್ಪಮಾಲೆಯನ್ನು ಕಂಡುದರಿಂದ ಇಂದ್ರನಂದಿತನೂ ಸದ್ಧರ್ಮ ತೀರ್ಥಪ್ರವರ್ತಕನೂ ಆದ ಪುತ್ರನನ್ನು ಪಡೆಯುವೆ; ಚಂದ್ರನನ್ನು ಕಂಡುದರಿಂದ ತ್ರಿಲೋಕಕ್ಕೆ ಆನಂದದಾಯಕನಾದ ಪುತ್ರನನ್ನು ಪಡೆಯುವೆ; ಸೂರ್ಯನನ್ನು ಕಂಡುದರಿಂದ ಕೋಟಿಸೂರ್ಯಪ್ರಕಾಶದೇಹವುಳ್ಳ ಮಗನನ್ನು ಪಡೆಯುವೆ; ಸುವರ್ಣಕುಂಭವನ್ನು ಕಂಡುದರಿಂದ ಕಾಮಾಂತಕನೂ ಸಮಸ್ತಸಿದ್ಧೀಶ್ವರನೂ ಆದ ಮಗನನ್ನು ಪಡೆಯುವೆ. ಮೀನಿನ ಜೋಡಿಯನ್ನು ನೋಡಿದುದರಿಂದ ಆನಂದದಿಂದ ವೃದ್ಧಿಹೊಂದುವ ಜಿನಬಾಲಕನನ್ನು ಪಡೆಯುವೆ; ಕಮಲಸರೋವರವನ್ನು ನೋಡಿದುದರಿಂದ ಸಾವಿರದೆಂಟು ಶುಭಲಕ್ಷಣಗಳುಳ್ಳವನೂ ಸುವರ್ಣಕಮಲಪೀಠಾಲಂಕೃತನೂ ಆದ ಮಗನನ್ನು ಪಡೆಯುವೆ; ಸಮುದ್ರವನ್ನು ನೋಡಿದುದರಿಂದ ಕೇವಲಜ್ಞಾನಾಧಿಪತಿಯಾದ ಮಗನನ್ನು ಪಡೆಯುವೆ; ಸಿಂಹಾಸನವನ್ನು ನೋಡಿದುದರಿಂದ ತ್ರಿಲೋಕಾಧಿಪತಿಯಾದ ಪುತ್ರನನ್ನು ಪಡೆಯುವೆ; ದೇವವಿಮಾನವನ್ನು ನೋಡಿದುದರಿಂದ ಸ್ವರ್ಗದಿಂದವತರಿಸುವ ಪುತ್ರನನ್ನು ಪಡೆಯುವೆ; ನಾಗದೇವತೆಗಳ ನಿಲಯವನ್ನು ನೋಡಿದುದರಿಂದ ಅವಧಿಜ್ಞಾನಸಂಪನ್ನನೂ ನಾಗನರಾಮರವಂದ್ಯನೂ ಆದ ಮಗನನ್ನು ಪಡೆಯುವೆ; ರತ್ನರಾಶಿಯನ್ನು ನೋಡಿದುದರಿಂದ ಜ್ಞಾನ ಮೊದಲಾದ ಅನಂತಗುಣರಾಶಿಯೂ ನವಕೋಟಿ ಮುನಿವಂದ್ಯನೂ ಆದ ಮಗನನ್ನು ಪಡೆಯುವೆ; ಉರಿಯುವ ಬೆಂಕಿಯನ್ನು ಕಂಡುದರಿಂದ ಘಾಸ

ರಾಶಿಗೆ ಕಾಡ್ಗಿಚ್ಚಿನಂತಿರುವ ಪುತ್ರನನ್ನು ಪಡೆಯುವೆ" ಎಂದು ಹೇಳಿದನು. ಪತಿಯಿಂದ ಸ್ವಪ್ನಫಲವನ್ನು ತಿಳಿದು ಶಿವದೇವಿಯು ಸಂತುಷ್ಟಳಾಗಿ ಸುಖದಿಂದಿದ್ದಳು.

ಮೇಲೆ ಹೇಳಿದ ಅಹಮಿಂದ್ರದೇವನು ಸರ್ವಾರ್ಥಸಿದ್ಧಿಸ್ವರ್ಗದಿಂದ ಬಂದು ಶಿವದೇವಿಯ ಗರ್ಭದಲ್ಲಿ ಅವತರಿಸಿದನು. ಆ ಪುಣ್ಯಪುರುಷನ ಮಹಿಮೆಯಿಂದ ಶಿವದೇವಿಗೆ ಗರ್ಭಚಿಹ್ನೆಯೂ ಆಲಸ್ಯವೂ ತೋರಲಿಲ್ಲ. ಆ ಮಹಾಮಹಿಮನು ಒಂಬತ್ತುತಿಂಗಳು ಬಸಿರಲ್ಲಿ ಬೆಳೆದು ವೈಶಾಖ ಶುದ್ಧ ತ್ರಯೋದಶಿಯ ದಿವಸ ಶುಭಲಗ್ನದಲ್ಲಿ ಜನಿಸಿದನು. ಆಗ ಇಂದ್ರನ ಆಸನವು ಕಂಪಿಸಲು ಅವನು ಅವಧಿಜ್ಞಾನದಿಂದ ಆ ವಿಷಯವನ್ನು ತಿಳಿದು ಜಯಜಯವೆನುತ ನಾಲ್ಕು ತೆರೆದ ದೇವದೇವಸ್ತ್ರೀಯರೊಡನೆ ಬಂದು ಸಮುದ್ರವಿಜಯಮಹಾರಾಜನ ಅರಮನೆಯ ಮೇಲ್ಗಡೆಯಲ್ಲಿದ್ದು ಆ ಜಿನಶಿಶುವನ್ನು ತರುವಂತೆ ಶಚೀದೇವಿಗೆ ಅಪ್ಪಣೆಮಾಡಿದನು. ಆಕೆಯು ಪ್ರಸೂತಿಗೃಹಕ್ಕೆ ಬಂದು ದೇದೀಪ್ಯಮಾನವಾದ ಆ ಶಿಶುವನ್ನು ನೋಡಿ ಮೂರು ಸುತ್ತು ಬಲವಂದು ಭಕ್ತಿಯಿಂದ ವಂದಿಸಿ ಜಿನಮಾತೃವಿಗೆ ಮಾಯಾನಿದ್ರೆಯನ್ನು ಬರಿಸಿ ಪಕ್ಕದಲ್ಲಿ ಮಾಯಾಶಿಶುವನ್ನಿರಿಸಿ ಆ ಜಿನಬಾಲಕನನ್ನು ಎತ್ತಿಕೊಂಡು ಹೋಗಿ ಇಂದ್ರನ ಕೈಗಿತ್ತಳು. ಆತನು ತನ್ನ ಎರಡು ಕೈಗಳಿಂದಲೂ ತೆಗೆದುಕೊಂಡು ಬಹು ಸಂತುಷ್ಟನಾಗಿ ಸ್ತುತಿಸಿ ತನ್ನ ಐರಾವತಗಜವನ್ನೇರಿ ಶಿಶುವನ್ನು ತೊಡೆಯಮೇಲಿಸಿಕೊಂಡು ದೇವತಾಸಮೂಹದೊಡನೆ ಮೇರುಗಿರಿಗೆ ಹೊರಟನು. ಈಶಾನೇಂದ್ರನು ಕೊಡೆಯನ್ನು ಹಿಡಿದನು. ಉಳಿದ ಇಂದ್ರರು ಚಾಮರಗಳನ್ನು ಬೀಸಿದರು. ಐರಾವಣನೆಂಬ ದೇವನು ಐರಾವತಗಜದ ರೂಪವನ್ನು ಧರಿಸಿ ಮೂವತ್ತೆರಡು ಮುಖಗಳನ್ನೂ ಒಂದೊಂದು ಮುಖಕ್ಕೆ ಎಂಟೆಂಟು ದಂತಗಳನ್ನೂ ಒಂದೊಂದು ದಂತಕ್ಕೆ ಒಂದೊಂದು ಸರೋವರವನ್ನೂ ಒಂದೊಂದು ಸರೋವರಕ್ಕೆ ಮೂವತ್ತೆರಡು ತಾವರೆಗಳನ್ನೂ ಒಂದೊಂದು ತಾವರೆಗೆ ಮೂವತ್ತೆರಡು ಎಸಳುಗಳನ್ನೂ ನಿರ್ಮಿಸಿದನು. ಆ ಒಂದೊಂದು ಎಸಳಿನ ಮೇಲೆ ಮೂವತ್ತೆರಡು ಮಂದಿ ದೇವಸ್ತ್ರೀಯರು ಹಾವಭಾವವಿಲಾಸವಿಭ್ರಮ ಗೀತಗಳಿಂದ ನರ್ತನಮಾಡುತ್ತ ನಡೆದರು. ಈ ರೀತಿಯಾಗಿ ಬಹು ವೈಭವದಿಂದ ದೇವಸಮೂಹದೊಡನೆ ದೇವೇಂದ್ರನು ಮೇರುಗಿರಿಯ ಈಶಾನ್ಯದಿಕ್ಕಿನಲ್ಲಿರುವ ಪಾಂಡುಕಶಿಲೆಗೆ ಆ ಜಿನಬಾಲಕನನ್ನು ಕರೆತಂದು ಸಿಂಹಪೀಠದ ಮೇಲೆ ಕುಳ್ಳಿರಿಸಿ ಕಲಶಾರ್ಚನೆಯನ್ನು ಮಾಡಿ ಸ್ವಾಮಿಯ ಒಲಗಡೆಯಲ್ಲಿ ಸೌಧರ್ಮೇಂದ್ರನೂ ಎಡಗಡೆಯಲ್ಲಿ ಈಶಾನೇಂದ್ರನೂ ನಿಂತು ಸಾವಿರ ತೋಳುಗಳನ್ನು ನಿರ್ಮಿಸಿಕೊಂಡು,

ದೇವತೆಗಳು ಸಾಲಾಗಿ ನಿಂತು ಕ್ಷೀರಸಮುದ್ರದಿಂದ ಸುವರ್ಣಕಲಶಗಳಲ್ಲಿ ತಂದಿತ್ತ ಜಲವನ್ನು, ಆ ಜಿನಬಾಲಕನಿಗೆ ಬಹು ಭಕ್ತಿಯಿಂದ ಅಭಿಷೇಕವನ್ನು ಮಾಡಿ ಬಳಿಕ ಗಂಧೋದಕವನ್ನು ಅಭಿಷೇಕ ಮಾಡಿದರು. ತದನಂತರ ಅಷ್ಟವಿಧಾರ್ಚನೆಯನ್ನು ಮಾಡಿ ಜಿನಬಾಲಕನನ್ನು ಎತ್ತಿಕೊರಿಡು ಐರಾವತವನ್ನೇರಿ ಸಮಸ್ತ ದೇವಸಮೂಹದೊಡನೆ ದ್ವಾರಾವತಿಗೆ ಕರೆತಂದು ಶಿವದೇವಿಗೆ ನಮಸ್ಕಾರಮಾಡಿ ಸಮುದ್ರ ವಿಜಯಮಹಾರಾಜನನ್ನು ಪೂಜಿಸಿ ಜಿನಬಾಲಕನ ಮುಂದೆ ಆನಂದನರ್ತನವನ್ನು ಮಾಡಿ ಸಾಸಿರ ಕಣ್ಣುಗಳನ್ನು ನಿರ್ಮಿಸಿಕೊಂಡು ಆ ಶಿಶುವಿನ ಅನುಪಮಸೌಂದರ್ಯ ವನ್ನು ನೋಡಿ ತಣಿದನು. ದೇವಲೋಕದ ನೃತ್ಯ ಗೀತ ವಾದ್ಯಗಳಾಗುತ್ತಿರಲು ದೇವೇಂದ್ರನು ಆ ಜಿನಬಾಲಕನನ್ನು ಶೃಂಗರಿಸಿ ನೇಮಿನಾಥನೆಂದು ನಾಮಕರಣ ವನ್ನು ಮಾಡಿ ದೇವಸ್ತ್ರೀಯರನ್ನು ದಾದಿಯರನ್ನಾಗಿಯೂ ಕೆಲವು ದೇವತೆಗ ಳನ್ನು ಜಿನಬಾಲಕನ ಓರಗೆಯ ರೂಪಧಾರಿಗಳನ್ನಾಗಿಯೂ ನೇಮಿಸಿ ತನ್ನ ಪರಿವಾ ರದೊಡನೆ ಸ್ವರ್ಗಕ್ಕೆ ಹೊರಟುಹೋದನು.

ಇತ್ತ ನೇಮಿನಾಥನು ತನ್ನ ಓರಗೆಯ ಮಕ್ಕಳೊಡನೆ ಸುರಲೋಕದ ಆಹಾರ ವನ್ನುಂಡು ದೇವಸ್ತ್ರೀಯರಿಂದ ಸಾಕಲ್ಪಡುತ್ತ ಬೆಳೆಯುತ್ತಿದ್ದನು. ದಿನಕ್ರಮದಿಂದ ಬಾಲಲೀಲೆಯನ್ನೂ ತೊದಲುನುಡಿಯನ್ನೂ ಬಿಟ್ಟು ತಾರುಣ್ಯವನ್ನು ಹೊಂದಿ ಲೋಕಾತಿಶಯವಾದ ಸೌಂದರ್ಯದಿಂದಲೂ ನಂದ್ಯಾವರ್ತ ಸ್ವಸ್ತಿಕ ಮೊದಲಾದ ಸಾವಿರದೆಂಟು ಲಕ್ಷಣಗಳಿಂದಲೂ ನೀಲಶ್ಯಾಮಲ ಕೋಮಲದೇಹದಿಂದಲೂ ಮೃದು ಮಧುರ ಗಂಭೀರವಚನದಿಂದಲೂ ವಜ್ರವೃಷಭನಾರಾಚಸಂಹನನದಿಂದಲೂ ಸಮಚತುರಸ್ರಸಂಸ್ಥಾನದಿಂದಲೂ ಮತಿ ಶ್ರುತಾವಧಿಗಳೆಂಬ ತ್ರಿಜ್ಞಾನಸಂಪ ನ್ನನೂ ಸಹಸ್ರವರ್ಷ ಆಯುಷ್ಯವುಳ್ಳವನೂ ಆದ ನೇಮಿಶ್ವರನು ರಾರಾಜಿಸು ತ್ತಿದ್ದನು.

೨೩. ದ್ರೌಪದೀ ಸ್ವಯಂವರಸಂಧಿ

ಹಸ್ತಿನಾಪುರದಲ್ಲಿ ಪಾಂಡುರಾಜನು ಕುರು-ಜಾಂಗಣದೇಶವನ್ನಾಳುತ್ತಿರು ವಾಗ ಒಂದುದಿನ ಆ ನಗರದ ನಂದನವನಕ್ಕೆ ಸುವ್ರತರೆಂಬ ಮುನೀಶ್ವರರು ಬಂದಿ ದ್ದಾರೆಂದು ಕೇಳಿ ಅಲ್ಲಿಗೆ ಹೋಗಿ ಅವರಿಗೆ ಭಕ್ತಿಯಿಂದೆರಗಿ ಧರ್ಮೋಪದೇಶವನ್ನು ಕೇಳಿದನು. ಆಗ ಅವನ ಮನಸ್ಸಿನಲ್ಲಿ ವೈರಾಗ್ಯವು ಅಂಕುರಿಸಿ ತನಗೆ ದೀಕ್ಷೆಯನ್ನು

ಕೊಡಬೇಕೆಂದು ಆ ಮುನೀಶ್ವರರನ್ನು ಪ್ರಾರ್ಥಿಸಲು ಅವರು ಅವಧಿಜ್ಞಾನದಿಂದ ನೋಡಿ ಪಾಂಡುರಾಜನನ್ನು ಕುರಿತು " ಇನ್ನು ನಿನಗೆ ಹದಿಮೂರು ದಿನಗಳ ಆಯುಷ್ಯವಿರುವುದು " ಎಂದರು. ಆ ಮಾತನ್ನು ಕೇಳಿ ಪಾಂಡುರಾಜನು ತನ್ನ ಮನೆಗೆ ಹೋಗಿ ಧರ್ಮರಾಜನಿಗೆ ರಾಜ್ಯಭಾರವನ್ನಿತ್ತು ತಾನು ಮಾದ್ರಿಯೊಡನೆ ತಪಸ್ಸಿಗೆ ಹೋಗಿ ಹದಿಮೂರು ದಿವಸ ತಪಸ್ಸನ್ನು ಮಾಡಿ ಸತ್ತು ಸ್ವರ್ಗದಲ್ಲಿ ದೇವನಾಗಿ ಹುಟ್ಟಿದನು.

ಇತ್ತ ಕೌರವ ಪಾಂಡವರನ್ನು ಭೀಷ್ಮನು ಸಾಕುತ್ತಿರಲು ಒಂದುದಿನ ಧನುರ್ವಿದ್ಯೆಯನ್ನು ತಿಳಿದ ದ್ರೋಣನೆಂಬ ಬ್ರಾಹ್ಮಣನು ಆ ಅರಸುಮನೆತನದ ಪುರೋಹಿತನಾದ ಕೃಪನ ಪುಣ್ಯಾಂತರ ಬಂದು ಭೀಷ್ಮನನ್ನು ಕಂಡನು. ಅವನು ಕೌರವ ಪಾಂಡವರನ್ನು ಕರೆದು ಧನುರ್ವಿದ್ಯೆಯನ್ನು ಕಲಿಯುವುದಕ್ಕಾಗಿ ಆ ದ್ರೋಣನ ವಶಪಡಿಸಿದನು. ಅವನು ಅವರಿಗೆ ನಾನಾವಿದ್ಯೆಗಳನ್ನು ಕಲಿಸಿದನು. ಕೃಪನು ತನ್ನ ತಂಗಿಯಾದ ಸುಂದರಿಯೆಂಬವಳನ್ನು ಆ ದ್ರೋಣನಿಗೆ ಕೊಟ್ಟು ಮದುವೆ ಮಾಡಿದನು. ಆ ದಂಪತಿಗಳಿಗೆ ಅಶ್ವತ್ಥಾಮನೆಂಬ ಮಗನು ಹುಟ್ಟಿ ಬೆಳೆದು ಬಹು ಪರಾಕ್ರಮಿಯಾದನು.

ಅತ್ತ ಚಂಪಾಪುರದಲ್ಲಿ ಭಾನುರಾಜನು ತನ್ನ ಕೆನ್ನೆಯಲ್ಲಿ ನರೆಗೂದಲನ್ನು ಕಂಡು ವಿರಕ್ತನಾಗಿ ಕರ್ಣನಿಗೆ ರಾಜ್ಯಭಾರವನ್ನಿತ್ತು ತಾನು ಜಿನದೀಕ್ಷೆಯನ್ನು ಪಡೆದನು. ಕರ್ಣನು ಬಹು ದಾನಶೀಲನಾಗಿ ರಾಜ್ಯವನ್ನಾಳುತ್ತ ಒಂದು ದಿನ ತನ್ನ ಕುಲಪರಂಪರೆಯ ವಿವರವನ್ನು ತಿಳಿಯಬೇಕೆಂದು ಕೈಲಾಸಪರ್ವತಕ್ಕೆ ಹೋಗಿ ' ಅರಹಂತ ಸಿದ್ಧ ಆಇರಿಯ ಉವಜ್ಝಾಯ ಸಾಹು " ಈ ಷೋಡಶಾಕ್ಷರಮಂತ್ರಗಳನ್ನು ಶುದ್ಧವಾಗಿ ಜಪಿಸಿದನು. ಆಗ ಜ್ವಾಲಾಮಾಲಿನೀದೇವಿಯು ಪ್ರತ್ಯಕ್ಷಳಾಗಿ ವಜ್ರಕವಚವನ್ನೂ ದಿವ್ಯಾಸ್ತ್ರಗಳನ್ನೂ ಕೊಟ್ಟು ಮತ್ತೆ ಬೇಕಾದುದನ್ನು ಕೇಳಿಕೊಳ್ಳುವಂತೆ ಹೇಳಿದಳು. ಆಗ ಕರ್ಣನು ತನ್ನ ತಾಯಿಯಾರೆಂಬುದನ್ನು ತಿಳಿಸಬೇಕೆಂದು ಕೇಳಲು ದೇವಿಯು ಉರಿಮಾಲೆಯೆಂಬ ಒಂದು ವಸ್ತ್ರವನ್ನು ಅವನಿಗೆ ಕೊಟ್ಟು " ಇದನ್ನು ಧರಿಸಿ ಯಾವಳು ನಿರಾತಂಕವಾಗಿರುವಳೋ ಅವಳೇ ನಿನ್ನ ತಾಯಿಯು " ಎಂದು ಹೇಳಿ ಕಳುಹಲು ಅವನು ಊರಿಗೆ ಬಂದು ಸುಖವಾಗಿದ್ದು ಒಂದು ದಿನ ಕೌರವ ಪಾಂಡವರ ಧನುರ್ವಿದ್ಯೆಯ ಪ್ರಖ್ಯಾತಿಯನ್ನು ಕೇಳಿ ಅವರನ್ನು ನೋಡಬೇಕೆಂದು ಪಟ್ಟಣದಿಂದ ಹೊರಟು ಹಸ್ತಿನಾಪುರಕ್ಕೆ ಹೋಗಿ ಅವರ ಗುರುಗಳಾದ ದ್ರೋಣಾಚಾರ್ಯರ ಮನೆಗೆ ಪ್ರವೇಶಿಸಿ " ಇವರೇ ಧನುರ್ವಿದ್ಯಾಪ್ರವೀಣರು? ಇವರುತಾನೆ

ವಿದ್ಯೆಗಳು?'' ಎಂದನು. ಅವನ ತಾತ್ಪರ್ಯದ ಮಾತನ್ನು ಕೇಳಿ ಪಾಂಡವರು ಮನಸ್ಸಿನಲ್ಲಿ ಖೇದಪಟ್ಟು ಅತಿಶಯವಾದ ತಮ್ಮ ವಿದ್ಯೆಯನ್ನು ಹೊಗಳದೆ ಹೀಯಾಳಿಸಿದ ಈತನು ಎಂತಹ ಬಲಿಷ್ಠನೋ ಎಂದು ಮಾತನಾಡುತ್ತಿದ್ದರು. ಆಗ ಕೌರವನು ಕರ್ಣನ ಸುಂದರಾಕಾರವನ್ನು ನೋಡಿ ಅವನು ಸಾಮಾನ್ಯನಲ್ಲವೆಂದು ತಿಳಿದು ಅವನ ಹತ್ತಿರಕ್ಕೆ ಹೋಗಿ ಕೈಹಿಡಿದು ತನ್ನ ಆಸನಕ್ಕೆ ಕರೆಯಲು ಅವನು ಕೌರವನನ್ನು ಕುರಿತು '' ಎಲೈ ರಾಜನೆ! ನಾನಾರೆಂದು ತಿಳಿಯದೆ ಈ ಕಾರ್ಯವನ್ನು ಮಾಡಬಹುದೇ?'' ಎಂದನು. ಅದಕ್ಕೆ ಕೌರವನು '' ಎಲೈ ಬಲವಂತನೆ! ಸಾಮಾನ್ಯಮನುಷ್ಯರಿಗೆ ಈ ರೂಪವೂ ವೀರತ್ವವೂ ಬಾರವು '' ಎಂದು ತನ್ನ ಧರ್ಮಾಸನಕ್ಕೆ ಕರೆತಂದು ಕುಳ್ಳಿರಿಸಿಕೊಂಡನು. ಆಗ ಒಬ್ಬನು ' ಇವನು ಚಂಪೆಯ ಸೂರ್ಯರಾಜನ ಮಗನು '' ಎಂದನು. ಆ ಮಾತನ್ನು ಕೇಳಿ ಕೌರವನು ಬಹು ಸಂತುಷ್ಟನಾಗಿ ಕರ್ಣನೊಡನೆ ಮಾತನಾಡುತ್ತಿದ್ದನು. ಆಗ ಭೀಮನು ನೋಡಿ ಕೋಪಗೊಂಡು ಕಿಸುಗಣ್ಣಿನಿಂದ ನೋಡುತ್ತಿರಲು ಅವನ ಭಾವವನ್ನು ತಿಳಿದು ಕರ್ಣನು '' ಪಸುಳೆಯೇ! ಕೇಳು, ಆನೆಮರಿಯ ನೋಟಕ್ಕೆ ಸಿಹ್ಮವು ಅಂಜುವುದೇ?'' ಎನಲು ಭೀಮನು '' ನೀನು ಯಾರೆಂದು ತಿಳಿಯದೆ ಕೌರವನು ಸರಿಗದ್ದುಗೆಯಲ್ಲಿ ಕುಳ್ಳಿರಿಸಬಹುದೇ?'' ಎಂದು ಬಿರುನುಡಿಯನ್ನು ನುಡಿದನು. ಆ ಮಾತನ್ನು ಕೇಳಿ ಕೌರವನು ಕೋಪದಿಂದ ಭೀಮಸೇನನನ್ನು ನೋಡುತ್ತಿರಲು ಆ ವಾರ್ತೆಯನ್ನು ಕೇಳಿ ಭೀಷ್ಮನು ಬಂದು ಅವರನ್ನು ಸಮಾಧಾನಪಡಿಸಿ ಅವರವರ ಮನೆಗಳಿಗೆ ಕಳುಹಿದನು. ಕುರುಪತಿಯು ಕರ್ಣನನ್ನು ತನ್ನ ಮನೆಗೆ ಕರೆದೊಯ್ದು ಒಡನುಂಡು ಒಡನಾಡುತ್ತ ಅವನಿಗೆ ಅನೇಕ ದೇಶಕೋಶಗಳನ್ನು ಕೊಟ್ಟು ಅವನೊಡನೆ ಅಭೇದಭಾವದಿಂದಿದ್ದನು. ಭೀಮ ಕೌರವರು ಗದಾವಿದ್ಯೆಯಲ್ಲಿ ನಿಪುಣರಾಗಿ ಒಬ್ಬರನ್ನೊಬ್ಬರು ಲೆಕ್ಕಿಸದೆ ಸೊಕ್ಕಾನೆಯಂತೆ ಮೆರೆಯುತ್ತಿದ್ದರು. ಅರ್ಜುನ ಮೊದಲಾದವರು ಧನುರ್ವಿದ್ಯೆ ಮೊದಲಾದುವುಗಳಲ್ಲಿ ನಿಪುಣರಾದರು. ಕೌರವ ಪಾಂಡವರು ದಾಯಾದಮಾತ್ಸರ್ಯದಿಂದ ಆಗಾಗ ಹೋರಾಡಲಾರಂಭಿಸಿದರು. ಭೀಮಾರ್ಜುನರ ಭುಜಬಲವನ್ನು ನೋಡಿ ಕೌರವನು ಹೊಟ್ಟೆಕಿಚ್ಚು ಮಾಡುತ್ತಿದ್ದನು. ಒಂದುದಿನ ದ್ರೋಣನು ತನ್ನ ಹಳೆಯ ಗೆಳೆಯನಾದ ದ್ರುಪದರಾಜನನ್ನು ನೋಡಬೇಕೆಂದು ಹೋದಾಗ ಅವನು ಇವನನ್ನು ಮನ್ನಿಸದಿರಲು ನಾಚಿಕೆಯಿಂದ ಹಿಂದಿರುಗಿ ಬಂದು ಧರ್ಮರಾಜನಲ್ಲಿ ಆ ವಿಷಯವನ್ನು ಹೇಳಿದನು. ಅವನು ಅರ್ಜುನನನ್ನು ಕರೆದು '' ನಮ್ಮ ಗುರುವನ್ನು ಮನ್ನಿಸದ ಆ ದ್ರುಪದನ ಸೊಕ್ಕನ್ನಡಗಿಸು '' ಎಂದು ಹೇಳಲು ಅವನು

ಹೋಗಿ ದ್ರುಪದನೊಡನೆ ಯುದ್ಧಮಾಡಿ ಅವನ ಪೆಡಗೈಗಟ್ಟಿ ತಂದು ಧರ್ಮರಾಜನ ಮುಂದೆ ನಿಲಿಸಿದನು. ಅವನು ದ್ರೋಣನನ್ನು ಕರೆಸಲು ಅವನು ಬಂದು ದ್ರುಪದನನ್ನು ಹೀಯಾಳಿಸಿ ಅವನ ಪಟ್ಟಣಕ್ಕೆ ಕಳುಹಿದನು. ಅರ್ಜುನನ ಭುಜಬಲವನ್ನು ಹಸ್ತಿನಾ ಪುರನಿವಾಸಿಗಳೆಲ್ಲ ಹೊಗಳುತ್ತಿರಲು ಕೌರವನು ಆ ನುಡಿಯನ್ನು ಕೇಳಿ ಮತ್ಸರ್ಯ ಮಾತ್ಸರ್ಯಪಟ್ಟು ಆ ಪಾಂಡವರನ್ನು ಕೃತಕದಿಂದ ಕೊಂದಲ್ಲದೆ ತನಗೆ ಕ್ಷೇಮ ವಿಲ್ಲವೆಂದು ಬಗೆದು ಮೊದಲು ತನಗೆ ವಶವಾಗಿದ್ದ ವಾರಾಣಸಿಯಲ್ಲಿ ಗುಟ್ಟಾಗಿ ಅರಗಿನ ಮನೆಯನ್ನು ಕಟ್ಟಿಸಿ ಧೃತರಾಷ್ಟ್ರನ ಬಳಿಗೆ ಹೋಗಿ ತನಗೂ ಪಾಂಡವ ರಿಗೂ ಸರಿಹೋಗುವುದಿಲ್ಲವೆಂದೂ ಪಾಂಡವರನ್ನು ವಾರಾಣಸಿಯಲ್ಲಿರಿಸಬೇಕೆಂದೂ ಹೇಳಿದನು. ಧೃತರಾಷ್ಟ್ರನು ಹಾಗೆಯೇ ಆಗಲೆಂದು ಒಪ್ಪಿ ಧರ್ಮರಾಜನನ್ನು ಕರೆಯಿಸಿ ಕೌರವರೂ ಪಾಂಡವರೂ ಬೇರೆಬೇರೆ ದೇಶಗಳಲ್ಲಿರುವಂತೆಯೂ ಒಂದು ಕಡೆಯವರು ಸ್ವದೇಶದಲ್ಲಿಯೂ ಮತ್ತೊಂದು ಕಡೆಯವರು ಪರದೇಶದಲ್ಲಿಯೂ ಇರುವಂತೆಯೂ ಹೇಳಿ ಧರ್ಮರಾಜನಿಗೆ ಯಾವುದು ಇಷ್ಟವೆಂದು ಕೇಳಿದನು. ಅದಕ್ಕೆ ಧರ್ಮರಾಜನು ತಾನು ವಾರಾಣಸಿಯಲ್ಲಿರುತ್ತೇನೆಂದು ಹೇಳಿ ಶುಭದಿನ ದಲ್ಲಿ ಭೀಷ್ಮರಿಗೆ ವಂದಿಸಿ ಬಂಧುಗಳಿಗೆ ಹೇಳಿ ಅನುಜರೊಡನೆ ವೈಭವದಿಂದ ಹೊರ ಟು ವಾರಾಣಸಿಗೆ ಹೋದನು. ಅಲ್ಲಿ ಕೌರವನ ಕಡೆಯ ಸುಲೋಚನನೆಂಬವನು ಇದಿರ್ಗೊಂಡು ಅರಗಿನ ಮನೆಗೆ ಹೊಗಿಸಿದನು. ಅಲ್ಲಿ ಪಾಂಡವರು ಸುಖದಿಂದಿರು ವಾಗ ಒಂದು ದಿನ ವಿದುರನು ಮರುಕದಿಂದ ಆ ಅರಗಿನಮನೆಯ ವಿಷಯವನ್ನೂ ದೀಪಾವಳಿಯ ನೆವದಿಂದ ಅದನ್ನು ಸುಟ್ಟು ಕೌರವನು ಪಾಂಡವರನ್ನು ಕೊಲಿಸಲೆಳ ಸಿರುವನೆಂಬ ವಿಷಯವನ್ನೂ ಗೂಢಚಾರರ ಮೂಲಕ ಪಾಂಡವರಿಗೆ ಹೇಳಿಕಳುಹಿ ದನು. ಆ ಮಾತನ್ನು ಕೇಳಿ ಪಾಂಡವರು ಒಂದು ಸುರಂಗವನ್ನು ಮಾಡಿಸಿದರು. ದೀಪಾವಳಿಯ ದಿವಸ ಆ ಸಂಕೇತದವರು ದೀಪಗಳನ್ನು ಹಚ್ಚಲು ಆ ಊರಿಯು ವ್ಯಾಪಿಸಿ ಮನೆಯು ಸುಟ್ಟುಹೋಯ್ತು. ಆಗ ಪಾಂಡವರು ಕೊಂತಿದೇವಿಸಹಿತ ಆ ಸುರಂಗದ ಮೂಲಕವಾಗಿ ಹೊರಟು ಒಂದು ದೊಡ್ಡ ಕಾಡಿಗೆ ಹೋದರು. ಅಲ್ಲಿ ಕಿಮ್ಮೀರನೆಂಬೋರ್ವ ದಾನವನು ತನ್ನೆಡೆಗೆ ಬಂದವರಾರೆಂದು ಕೋಪದಿಂದ ಒಂದು ಮರವನ್ನು ಕಿತ್ತು ಹೊಡೆಯುವುದಕ್ಕೆ ಬರಲು ಭೀಮನು ತನ್ನ ಗದೆಯಿಂದ ಅವನನ್ನು ಹೊಡೆದು ಕೊಂದನು.

ಇತ್ತ ಕೌರವನು ವಾರಾಣಸಿಯ ಅರಗಿನ ಮನೆಯಲ್ಲಿ ಪಾಂಡವರು ಸತ್ತ ರೆಂಬ ವಾರ್ತೆಯನ್ನು ಕೇಳಿ ಸಂತೋಷದಿಂದ ನಿಶ್ಚಿಂತನಾಗಿದ್ದನು. ಹರಿವಂಶದರಸು ಗಳೆಲ್ಲ ಪಾಂಡವರ ಮರಣವಾರ್ತೆಯನ್ನು ಕೇಳಿ ಬಹು ದುಃಖಿತರಾದರು.

ಇತ್ತ ಪಾಂಡವರು ಕಿಮ್ಮೀರನನ್ನು ಕೊಂದು ಆ ಪ್ರಾತಃಕಾಲದಲ್ಲಿ ಕಾಮ್ಯಕ ವೆಂಬ ಪಟ್ಟಣದ ಉದ್ಯಾನಕ್ಕೆ ಹೋಗಿ ಅಲ್ಲಿದ್ದರು. ಅಲ್ಲಿಯ ದೊರೆಯಾದ ಧಾನ್ಯ ರಾಜನಿಗೂ ಆತನ ಸತಿ ಧರಾಸುಂದರಿಗೂ ಹುಟ್ಟಿದ ಕುಸುಮಮಾಲೆಯೆಂಬ ಸುಂದರಳಾದ ಕನ್ಯೆಯನ್ನು ಆ ದಂಪತಿಗಳು ಧರ್ಮರಾಜನಿಗೆ ಕೊಟ್ಟು ಮದುವೆ ಮಾಡಬೇಕೆಂದಿದ್ದರು. ಪಾಂಡವರು ಅರಗಿನಮನೆಯಲ್ಲಿ ಸತ್ತರೆಂಬ ವಾರ್ತೆಯನ್ನು ಕೇಳಿ ಧಾನ್ಯರಾಜನು ದುಃಖಿತನಾಗಿ ಓರ್ವ ದಿವ್ಯಜ್ಞಾನಸಂಪನ್ನನಾದ ಮುನಿಯ ಬಳಿಗೆ ಹೋಗಿ ತನ್ನ ಉದ್ದೇಶವನ್ನು ತಿಳಿಸಿ ಪಾಂಡವರು ಜತುಗೃಹದಲ್ಲಿ ಮಡಿದುದು ದಿಟವೇ ಎಂದು ಕೇಳಿದನು. ಅವಧಿಜ್ಞಾನಿಯಾದ ಆ ಮುನಿಯು " ತದ್ಭವಮೋಕ್ಷ ಗಾಮಿಗಳಾದ ಪಾಂಡವರು ಸತ್ತುದು ಸುಳ್ಳು, ಅವರು ಈದಿನ ಬೆಳಿಗ್ಗೆ ನಿನ್ನ ರಾಜ ಧಾನಿಯ ವನಕ್ಕೆ ಬಂದಿದ್ದಾರೆ ಹೋಗು " ಎಂದು ಹೇಳಿಕಳುಹಲು ಅವನು ಆ ವನಕ್ಕೆ ಬಂದು ಪಾಂಡವರನ್ನು ಕಂಡು ಸಂತೋಷದಿಂದ ಅವರನ್ನು ಮನೆಗೆ ಕರೆ ದೊಯ್ದು ಆ ದಿನ ರಾತ್ರಿ ಕುಸುಮಮಾಲೆಯನ್ನು ಧರ್ಮರಾಜನಿಗೆ ಕೊಟ್ಟು ಮದುವೆಮಾಡಿದನು. ಧರ್ಮರಾಜನು ಆಕೆಯಲ್ಲಿ ಕೆಲವು ದಿನಗಳವರೆಗೆ ಸುಖಪಡು ತ್ತಿದ್ದು ಒಂದುದಿನ ತನ್ನ ಮುಂದಿನ ಕಾರ್ಯವನ್ನು ಧಾನ್ಯರಾಜನಿಗೆ ತಿಳಿಸಿ ಆ ರಾತ್ರಿ ಯಲ್ಲಿ ತಾಯಿ ಮತ್ತು ತಮ್ಮಂದಿರೊಡನೆ ಅಲ್ಲಿಂದ ಹೊರಟು ಹೋಗಿ ಒಂದು ಅರ ಣ್ಯಪಸ್ಸು ಹೊಕ್ಕು ಅಲ್ಲಿ ಒಂದು ತಾಪಸಾಶ್ರಮದಲ್ಲಿ ಜಡೆಯನ್ನು ಬಿಟ್ಟು ಮರದ ತೊಗಟೆಯನ್ನುಟ್ಟು ಭಸ್ಮಧಾರಣಮಾಡಿ ತಪಸ್ಸುಮಾಡುತ್ತಿದ್ದ ಓರ್ವ ಸ್ತ್ರೀಯನ್ನು ನೋಡಿ ಕೊಂತಿಯು ಆಕೆಯ ಬಳಿಗೆ ಹೋಗಿ ' ಎಲೈ ತರುಣಿಯೆ ! ಈ ಚಿಕ್ಕ ವಾ್ರಯದಲ್ಲಿ ನಿನಗೇಕೀ ದೊಡ್ಡತಪಸ್ಸು ? ನನಗೆ ಹೇಳು " ಎನಲು ಆಕೆಯು ಕಣ್ಣು ಬಿಟ್ಟು ಧರ್ಮನಂದನನ್ನು ಕಣ್ಮನವಿಟ್ಟು ನೋಡಿ ತಪಸ್ಸನ್ನು ಬಿಟ್ಟು ಆನಂದಬಾಷ್ಪ ವನ್ನು ಸುರಿದು ಕೊಂತಿಯಲ್ಲಿ ಇಂತೆಂದಳು—

" ನನ್ನ ತಂದೆ ವಿಂಧ್ಯಕನು. ತಾಯಿ ಸುರಕ್ಷಣೆ. ಅವರ ವಸಂತಸುಂದರಿ ಯೆಂಬ ಮಗಳು ನಾನು. ನನ್ನ ತಂದೆತಾಯಿಗಳು ನನ್ನನ್ನು ಯುಧಿಷ್ಠಿರನಿಗೆ ಕೊಡ ಬೇಕೆಂದಿದ್ದು ಅರಗಿನ ಮನೆಯಲ್ಲಿ ಪಾಂಡವರು ಸತ್ತರೆಂದು ಕೇಳಿ ನನ್ನ ತಂದೆಯು ನನ್ನನ್ನು ಬೇರೊಬ್ಬನಿಗೆ ಕೊಡಬೇಕೆಂದು ಯೋಚಿಸಲು ಆ ಸಮಾಚಾರವನ್ನು ನಾನು ತಿಳಿದು ಮರುಗಿ ಆ ಊರಿಂದ ಹೊರಟು ಯಾರಿಗೂ ತಿಳಿಯದಂತೆ ಈ ವನದ ಮಧ್ಯ ಕ್ಕೆಬಂದು ಮುಂದಿನ ಭವದಲ್ಲಾದರೂ ಆ ಧರ್ಮರಾಜನೊಡನೆ ಸೇರಿ ಸುಖವನ್ನು ಹೊಂದುವೆನೆಂದು ಈ ತಾಪಸರೂಪವನ್ನು ಧರಿಸಿದೆನು " ಎನಲು ಆ ಮಾತನ್ನು

ಕೇಳಿ ಕೊಂತಿಯು " ಮಾನಿನಿಯೆ ! ದುಃಖವನ್ನು ಬಿಡು. ನೀನಿಚ್ಛಿಸಿದ ಪತಿಯು ಇವನೆ " ಎಂದು ಧರ್ಮರಾಜನನ್ನು ತೋರಿಸಿ ತಾವು ಹೊರಟುಬಂದ ವಾರ್ತೆಯನ್ನು ಆಕೆಗುಸುರಿ ಆಕೆಯನ್ನು ಆಕೆಯ ಊರಿಗೆ ಕಳುಹಿ ಅವರು ಅಲ್ಲಿಂದ ಹೊರಟು ತ್ರಿಸ್ಥಂ ಗವೆಂಬ ನಗರದ ಬಾಹ್ಯೋದ್ಯಾನಕ್ಕೆ ಹೋಗಿ ಅಲ್ಲಿಯ ಚಂದ್ರನಾಥದೇವಾಲಯ ವನ್ನು ಹೊಕ್ಕು ದೇವರಿಗೆ ವಂದಿಸಿ ಅಲ್ಲಿರ್ದ ವೀರಾಚಾರ್ಯರೆಂಬ ಮುನೀಶ್ವರರಿಗೆ ನಮ ಸ್ಕರಿಸಿ ಅವರಿಂದ ಧರ್ಮೋಪದೇಶವನ್ನು ಕೇಳುತ್ತಿರುವಾಗ ಅಲ್ಲಿಗೆ ಆ ನಗರದ ಚಂಡ ವಾಹನನೆಂಬ ದೊರೆಯು ಹನ್ನೆರಡು ಮಂದಿ ತನ್ನ ಹೆಣ್ಣುಮಕ್ಕಳೊಡನೆ ಬಂದು ದೇವರಿಗೂ ಗುರುಗಳಿಗೂ ಭಕ್ತಿಯಿಂದೆರಗಿ ಬಳಿಕ " ಎಲೈ ಮುನೀಶ್ವರರೆ ! ನನ್ನ ಈ ಹನ್ನೆರಡು ಮಂದಿ ಹೆಣ್ಣುಮಕ್ಕಳನ್ನು ಧರ್ಮರಾಜನಿಗೆ ಕೊಡಬೇಕೆಂದಿದ್ದೆನು. ಅವನು ತಮ್ಮಂದಿರೊಡನೆ ಲಾಕ್ಷಾಗೃಹದಲ್ಲಿ ಮಡಿದನೆಂದು ಕೇಳಿ ಈ ಬಾಲೆಯರು ದುಃಖದಿಂದ ತಪಸ್ವಿನಿಯರಾಗಬೇಕೆಂದಿರುವರು " ಎನಲು ಆ ಮುನಿಪತಿಯು ಕೇಳಿ ದೊರೆಯನ್ನು ಕುರಿತು " ಎಲೈ ರಾಜನೆ ! ಪಾಂಡವರು ಮಹಾಮಹಿಮೆಯುಳ್ಳವರು ಮತ್ತು ಚರಮದೇಹಿಗಳು. ಅವರಿಗೆ ಕೇಡುಂಟಾಗುವುದಿಲ್ಲ " ಎಂದನು. ಆ ಮಾತನ್ನು ಕೇಳಿ ದೊರೆಯು ಸಂತುಷ್ಟನಾಗಿ ಮುನಿಗೆರಗಿ ತನ್ನ ಹೆಮ್ಮಕ್ಕಳೊಡನೆ ಹೊರಟು ಹೋದನು.

ಧರ್ಮರಾಜನು ಮುನಿಯ ಆ ಮಾತನ್ನು ಕೇಳಿ ತಾಯಿ ತಮ್ಮಂದಿರೊಡನೆ ಮುನಿಪತಿಗೆ ವಂದಿಸಿ ಅಲ್ಲಿಂದ ಹೊರಟು ಮತ್ತೊಂದು ನಗರಕ್ಕೆ ಹೋಗಿ ಜಿನಾ ಲಯವನ್ನು ಹೊಕ್ಕು ದೇವರಿಗೆ ವಂದಿಸಿ ಆ ರಾತ್ರಿ ಮಲಗಿದ್ದು ಬೆಳಿಗ್ಗೆ ಅಲ್ಲಿಂದ ಹೊರಟು ಒಂದು ಅಗ್ರಹಾರಕ್ಕೆ ಹೋಗಿರಲು ಅಲ್ಲೊಬ್ಬ ಬ್ರಾಹ್ಮಣಬಾಲಕನು ಒಂದು ಬಂಡಿಯಲ್ಲಿ ಭಕ್ಷ್ಯಗಳನ್ನು ತುಂಬಿಕೊಂಡು ಅದನ್ನು ಹೊಡೆದುಕೊಂಡು ಹೋಗುತ್ತಿರುವುದನ್ನೂ ಬಂಡಿಯ ಹಿಂದೊಬ್ಬಳು ಅಳುತ್ತ ಹೋಗುತ್ತಿರುವುದನ್ನೂ ಕಂಡು ಪಾಂಡವರು " ಇದೇನು ? " ಎಂದು ಕೇಳಿದರು. ಅದಕ್ಕವಳಿಂತೆಂದಳು.—

" ಹರಿಪುರನಗರದಲ್ಲಿ ಅಷ್ಟಮದಯುಕ್ತನಾದ ಬಾಣನೆಂಬ ರಾಜನು ಮಾಂ ಸಾಹಾರಲೋಲುಪನಾಗಿ ರಾಜ್ಯವಾಳುತ್ತಿರುವಾಗ ಒಂದು ದಿನ ಮಾಂಸವು ಸಿಕ್ಕ ದಿರಲು ಅವನ ಅಡಿಗೆಯವನು ಸತ್ತು ಬಿದ್ದಿದ್ದ ಒಬ್ಬ ಮನುಷ್ಯನ ಹೆಣವನ್ನು ಕೊಯ್ದು ಬೇಯಿಸಿ ದೊರೆಗೆ ಒಡಿಸಿದನು. ಅವನು ಆ ನರಮಾಂಸದ ಸವಿಯನ್ನು ನೋಡಿ ಅದು ಯಾವುದರ ಮಾಂಸವೆಂದು ಹಟವುಡಿ ಕೇಳಿದನು. ಬಾಣಸಿಗನು ಭೀತಿ ಯಿಂದ ಅದು ನರಮಾಂಸವೆಂದು ಹೇಳಲು ಅವನಿಗೆ ಅಭಯವನ್ನು ಹೇಳಿ ಇನ್ನು

ಮೇಲೆ ನರಮಾಂಸವನ್ನೇ ಅಡಿಗೆಮಾಡೆಂದು ನುಡಿದು ಅಂದಿನಿಂದ ಮನುಷ್ಯರನ್ನು ತರಿಸಿ ಕೊಂದು ತಿಂದು ತೃಪ್ತನಾಗಿರುತ್ತಿದ್ದನು. ಈ ಅನಾಚಾರವನ್ನು ಕಂಡು ಪ್ರಜೆಗಳು ಅವನನ್ನು ಓಡಿಸಿ ಅವನ ಮಗನಿಗೆ ಪಟ್ಟವನ್ನು ಕಟ್ಟಿದರು. ನರಮಾಂಸದ ಸವಿಗಂಡ ಆ ಬಾಣನು ಭ್ರಷ್ಟನಾಗಿ ತಾಕ್ಷ್ಸಸವಿದ್ಯೆಯನ್ನು ಕಲಿತು ಅದರಿಂದ ರಾಕ್ಷಸರೂಪವನ್ನು ಪಡೆದು ಹಳ್ಳಿಗಳಲ್ಲಿ ಮನುಷ್ಯರನ್ನು ಕೊಂದು ತಿನ್ನುತ್ತ ಈ ಅಗ್ರಹಾರಕ್ಕೆ ಬಂದು ಇಲ್ಲಿರುವ ಅನೇಕ ಹಾರುವರನ್ನು ಕೊಂದು ತಿನ್ನುತ್ತಿರಲು ಈ ಊರಿನವರೆಲ್ಲ ಸೇರಿ ಆ ರಾಕ್ಷಸನ ಬಳಿಗೆ ಹೋಗಿ ಅವನನ್ನು ಪ್ರಾರ್ಥಿಸಿಕೊಂಡು ದಿನಕ್ಕೊಬ್ಬನನ್ನು ತಂದೊಪ್ಪಿಸುವುದಾಗಿ ಹೇಳಲು ಅದಕ್ಕವನು ಒಪ್ಪಿದನು. ಊರಿನವರ ವಾಗ್ದಾನಪ್ರಕಾರ ದಿನಕ್ಕೊಬ್ಬನು ಬಂಡಿಯಲ್ಲಿ ಭಕ್ಷ್ಯವನ್ನು ತುಂಬಿಕೊಂಡು ಹೋಗುತ್ತಿದ್ದು ಈ ದಿನ ನನ್ನ ಮಗನ ಬಾರಿಯು ಬಂದಿದೆ. ಈ ದಿನವೇ ಮಗನಿಗೆ ಮದುವೆಮಾಡಬೇಕೆಂದು ನಿಶ್ಚಯಿಸಿದ್ದೆನು.'' ಎಂದು ಹೇಳಿದಳು. ಆ ಮಾತನ್ನು ಕೇಳಿ ಕೊಂತಿಯು ತನಗೆ ಐದು ಮಂದಿ ಮಕ್ಕಳಿರುವರೆಂದೂ ಅವರಲ್ಲಿ ಭೀಮನೆಂಬವನಿಗೆ ತಾನು ಕೂಳನ್ನೊದಗಿಸಲಾರೆನೆಂದೂ ಆತನನ್ನು ಆ ರಾಕ್ಷಸನಿಗೆ ಬಲಿಯಾಗಿ ಕಳುಹುವೆನೆಂದೂ ಹೇಳಿ ತಕೆಯ ದುಃಖವನ್ನು ಸಮಾಧಾನಗೊಳಿಸಿ ಭೀಮನನ್ನು ಕರೆದು ಆ ಬಂಡಿಯನ್ನು ತೋರಿ '' ಈ ಬಂಡಿಯ ಭಕ್ಷ್ಯವನ್ನು ತಿಂದು ಬಾಣನನ್ನು ಕೊಂದು ಬಾ '' ಎಂದು ಹರಸಿ ಕಳುಹಿದಳು. ಭೀಮನು ಆ ಬ್ರಾಹ್ಮಣಯುವಕನನ್ನು ಬಂಡಿಯಿಂದಿಳಿಸಿ ತಾನು ಆ ಬಂಡಿಯನ್ನೇರಿ ಭಕ್ಷ್ಯಭೋಜ್ಯಗಳನ್ನು ತಿನ್ನುತ್ತ ಹೋಗಿ ಹಸಿದು ಕೋಪದಲ್ಲಿದ್ದ ಬಾಣನನ್ನು ಮುದ್ದಿಗೊಳ್ಳೆಂದು ಅಣಕಿಸಿದನು. ಅದನ್ನು ಕಂಡು ಬಾಣನು ಕೋಪದಿಂದ ಭೀಮನ ಮೇಲೆ ಹಾಯ್ದು ಬರಲು ಭೀಮನು ಅವನನ್ನು ಕೆಡಹಿ ತನ್ನ ಕಾಲಿನಿಂದ ತುಳಿದು ಕೊಂದನು. ಅದನ್ನು ಕಂಡು ಆ ಗ್ರಾಮದ ಜನರೆಲ್ಲ ಭೀಮಸೇನನನ್ನು ಕೊಂಡಾಡಿ ಕೊಂತಿಗೆ ನಮಸ್ಕರಿಸಿ ತಮ್ಮೂರಿಗೆ ಕರೆದೊಯ್ದು ಉಪಚರಿಸಿದರು. ಅಲ್ಲಿ ಕೆಲದಿನವಿರ್ದು ಅಲ್ಲಿಂದ ಮುಂದಕ್ಕೆ ತೆರಳಿ ಬಂದು ದೊಡ್ಡ ಅರಣ್ಯವನ್ನು ಹೊಕ್ಕು ಬಂದು ಆಲದಮರದ ಬುಡದಲ್ಲಿ ಆ ರಾತ್ರಿ ಪಾಂಡವರು ಮಲಗಿದರು. ಭೀಮನು ಅವರಿಗೆ ಕಾವಲಾಗಿರಲು ಆಗ ಪರಿಮಳವಾದ ಗಾಳಿಯು ಬೀಸಿತು. ಎಲ್ಲಿಯದೀಗಾಳಿಯೆಂದು ಭೀಮನು ಆ ಕಡೆಗೆ ಹೋಗಿ ಅಲ್ಲೊಂದು ದೊಡ್ಡವೊದರಿನಲ್ಲಿ ಭಯಂಕರವಾದ ಗದೆಯನ್ನು ಕಂಡು ಅದಕ್ಕೆ ಕೈನೀಡಿದನು. ಅದು ಅವನ ಪುಣ್ಯಪ್ರಭಾವದಿಂದ ಕೈಗೆ ಬರಲು ಅದನ್ನು ತೆಗೆದುಕೊಂಡು ಪಾಂಡವರು ಮಲಗಿದ್ದ ಸ್ಥಳಕ್ಕೆ ಬಂದು ಕುಳಿ

ತನು. ಆಗ ಓರ್ವ ಕನ್ಯೆಯು ಬಂದು ಭೀಮನ ತೊಡೆಯನ್ನು ಸೋಂಕಿ ಕುಳಿತಳು. ಭೀಮನು ಆಕೆಯನ್ನು ಕುರಿತು " ನೀನು ಯಾವಕಾರಣದಿಂದ ಬಂದು ಕುಳಿತೆ? ನೀನು ಯಾರ ಮಗಳು? ನಿನ್ನ ಸದಾಚಾರವನ್ನು ತಿಳುಹು " ಎನಲು ಆಕೆಯು " ನಾನು ಸಿಹ್ಮಘೋಷಣನೆಂಬ ಖೇಚರನಿಗೂ ಅತನ ಸತಿ ಸುದರ್ಶನೆಗೂ ಹುಟ್ಟಿದ ಸುಕೇಶಿಯೆಂಬ ಮಗಳು. ನನ್ನ ತಂದೆಯು ಈರ್ವರು ಚಾರಣಮುನಿಗಳಿಗೆ ನಮಸ್ಕರಿಸಿ ತನ್ನ ಮಗಳಿಗೆ—ನನಗೆ ಪತಿಯಾರಾಗುವನೆಂದು ಕೇಳಿದನು. ಅವರು ಈ ರುಧಿರೋದ್ಗಾರಿಯೆಂಬ ಗದೆಯನ್ನು ಸಾಧಿಸುವವನು ಪತಿಯಾಗುವನೆಂದು ಹೇಳಿದರು. ಆ ಮಾತನ್ನು ಕೇಳಿ ನನ್ನ ತಂದೆಯು ಸಂತೋಷದಿಂದಿರಲು ಒಂದು ದಿನ ಈ ಸಮುದ್ರಮಧ್ಯದ ಲಂಕಾದ್ವೀಪದ ದೊರೆಯಾದ ಘನಗತಿಯೆಂಬ ಖೇಚರನು ಹಿಡಿಂಬನೆಂಬ ತನ್ನ ಮಗನಿಗೆ ನನ್ನನ್ನು ಕೇಳಲು ತನ್ನ ಭೃತ್ಯರನ್ನು ಕಳುಹಿದನು. ಅದಕ್ಕೆ ನನ್ನ ತಂದೆಯು ಮುನೀಶ್ವರರು ಹೇಳಿದ ಮಾತನ್ನು ಹೇಳಿಕಳುಹಲು ಆ ಮಾತನ್ನು ಕೇಳಿ ಹಿಡಿಂಬನು ಈ ಗದೆಯನ್ನು ಅರ್ಚಿಸಿ ಸಾಧಿಸುತ್ತಿರುವನು. ಅದರಿಂದ ಈ ವನಕ್ಕೆ ಹಿಡಿಂಬವನವೆಂದು ಹೆಸರಾಯ್ತು. ಆ ಮಾನ್ವೇಷಣಕ್ಕಾಗಿ ನಾನು ಈ ವನದಲ್ಲಿ ಸಂಚರಿಸುತ್ತಿರುವುದರಿಂದ ನನ್ನ ಹೆಸರು ಹಿಡಿಂಬೆಯೆಂದಾಯಿತು. ಆ ದುರುಳನ ದೆಸೆಯಿಂದ ಈ ಇಚ್ಛಾಪುರವೂ ಈ ನಾಡೂ ಹಾಳಾದುವು. ನನ್ನ ಪುಣ್ಯದಿಂದ ನಿನ್ನ ದರ್ಶನವಾಯ್ತು " ಎಂದಳು. ಅತ್ತ ಹಿಡಿಂಬನು ಮಂತ್ರವನ್ನು ಜಪಿಸುತ್ತಿದ್ದು ಅದು ಪೂರ್ತಿಯಾದಮೇಲೆ ಕಣ್ಣುತೆರೆದು ನೋಡಿ ಆ ಗದೆಯನ್ನು ಕಾಣದೆ ಬಹುದಿನಗಳಿಂದ ತಾನು ಸಾಧಿಸುತ್ತಿದ್ದ ದಿವ್ಯಗದೆಯನ್ನು ತೆಗೆದುಕೊಂಡು ಹೋದವನ ತಲೆಯನ್ನು ಚೆಂಡಾಡದೆ ಬಿಡೆನೆಂದು ಹುಡುಕುತ್ತ ಭೀಮನ ಬಳಿಗೆ ಬಂದು ಅವನು ಸುಕೇಶಿಯೊಡನೆ ಕುಳಿತಿರುವುದನ್ನು ಕಂಡು ಬಹು ಕೋಪದಿಂದ ಭೀಮನ ಮೇಲೆ ಬೀಳಲು ಅವನು ಆ ರಕ್ಕಸನ ಕಾಲ್ಪಿಡಿದು ನೆಲಕ್ಕಪ್ಪಳಿಸಿ ಕೊಂದನು. ಆ ರಭಸಕ್ಕೆ ಆ ಮರದಡಿಯಲ್ಲಿ ಮಲಗಿರ್ದ ಪಾಂಡವರೆದ್ದು ಕಣ್ದೆರೆದು ನೋಡಿ ಧರ್ಮರಾಜನು ಏನಿದಾಶ್ಚರ್ಯವೆಂದು ಭೀಮನನ್ನು ಕೇಳಿದನು. ಅದಕ್ಕವನು ಆ ಸದಾಚಾರವನ್ನೆಲ್ಲ ಹೇಳಲು ಕೇಳಿ ಧರ್ಮಸುತನು ತಮ್ಮನ ಸಾಹಸಕ್ಕೆ ಬಲುಮೆಚ್ಚಿದನು. ಆ ದಿನ ಬೆಳಿಗ್ಗೆ ಪಾಂಡವರು ಎದ್ದು ಮುಂದಕ್ಕೆ ಹೊರಡುವಷ್ಟರಲ್ಲಿ ಹಿಡಿಂಬೆಯು ಕೈಮುಗಿದು ಹಿಡಿಂಬನಿಂದ ಹಾಳಾದ ತನ್ನ ಇಚ್ಛಾಪುರವನ್ನು ನೋಡಿ ಹೋಗಬೇಕೆಂದು ಪ್ರಾರ್ಥಿಸಿ ಅಲ್ಲಿಗೆ ಕರೆದೊಯ್ಯುವಾಗ ಆಕೆಯ ತಂದೆಯು ಆಕಾಶಮಾರ್ಗದಲ್ಲಿ ವಿಮಾನಾರೂಢನಾಗಿ ಬಂದು ಇವರನ್ನು ಇದಿ

ಗೊಂಡು ಕರೆದೊಯ್ದು ತನ್ನ ಮಗಳನ್ನು ವಾಯುತನಯನಿಗೆ ಕೊಟ್ಟು ಮದುವೆ ಮಾಡಿದನು. ಆಕೆಯಲ್ಲಿ ಭೀಮನು ಕೂಡಿರಲು ಗರ್ಭವು ತಲೆದೋರಿ ಪುತ್ರನನ್ನು ಹಡೆದಳು. ಆ ಮಗುವಿಗೆ ಧರ್ಮತನಯನು ಘಟೋದ್ಗಜನೆಂದು ಹೆಸರನ್ನಿಟ್ಟನು. ಬಳಿಕ ಒಂದು ದಿನ ಆ ಸಿಹ್ಮಘೋಷನನ್ನೂ ಸುಕೇಶಿ—ಹಿಡಿಂಬೆಯನ್ನೂ ಸಂತೈಸಿ ಪಾಂಡವರು ಆ ನಗರದಿಂದ ಹೊರಟು ಅಂಗದೇಶಕ್ಕೆ ಹೋದರು. ಅಲ್ಲಿ ಕರ್ಣನ ಪ್ರಶಂಸೆಯನ್ನು ಕೇಳುತ್ತ ಮುಂದೆ ನಡೆವಾಗ ದಾರಿಯಲ್ಲಿ ಓರ್ವ ಬ್ರಾಹ್ಮಣನನ್ನು ಕಂಡು ಧರ್ಮನಂದನನು " ಪೃಥ್ವಿಯಲ್ಲಿ ಸಮಾಚಾರವೇನು ? " ಎಂದು ಕೇಳಿದನು. ಅದಕ್ಕವನು ಪಾಂಚಾಲದೇಶದ ಮಹೇಂದ್ರನಗರಿಯ ದೊರೆಯಾದ ದ್ರುಪದರಾಜನಿಗೆ ಅನುಪಮಕಲಾವಿಲಾಸ ರೂಪಾನ್ವಿತೆಯಾದ ದ್ರೌಪದಿಯೆಂಬ ಮಗಳಿರುವಳೆಂದೂ ದ್ರುಪದನ ಆಯುಧಶಾಲೆಯಲ್ಲಿ ಒಂದು ದಿವ್ಯಧನುವುದಯಿಸಿರಲು ಅದನ್ನು ಅವನು ಪೂಜಿಸುತ್ತಿದ್ದು ಒಂದು ದಿನ ಅನಧಿಜ್ಞನಿಗಳಾದ ಮುನೀಶ್ವರರು ಬರಲು ಅವರಿಗೆ ವಂದಿಸಿ ತನ್ನ ಮಗಳಿಗೆ ವರನಾರಾಗುವನೆಂದು ಕೇಳಿದನು. ಆ ಮುನಿಪತಿಯು ದೊರೆಯನ್ನು ಕುರಿತು " ನಿನ್ನ ಮನೆಯಲ್ಲಿ ಉದ್ಭವಿಸಿರುವ ಧನುಸ್ಸನ್ನು ಹೆದೆಯೇರಿಸಿ ಮೇಲೆ ತಿರುಗುವ ಯಂತ್ರದ ಏಸನ್ನು ಮಂತ್ರಾಸ್ತ್ರದಿಂದ ಭೇದಿಸುವವನು ಪತಿಯಾಗುವನು " ಎಂದು ನುಡಿದನು. ಈ ಕೆಲಸವು ಅರ್ಜುನನಿಂದಲ್ಲದೆ ಬೇರೆಯವರಿಂದಾಗದೆಂದೂ ಅರ್ಜುನನಿಗೆ ತನ್ನ ಮಗಳು ಪತ್ನಿಯಾಗುವಳೆಂದೂ ಬಗೆದು ದ್ರುಪದನು ಸಂತೋಷದಿಂದಿರುವಾಗ ಪಾಂಡವರು ಲಾಕ್ಷಾಗೃಹದಲ್ಲಿ ಸತ್ತರೆಂದು ಕೇಳಿ ದುಃಖಿತನಾಗಿ ಓರ್ವ ಮುನಿಪರ್ಯನ ಬಳಿಗೆ ಹೋಗಿ ಪಾಂಡವರು ಮಡಿದುದು ನಿಜವೇ ಎಂದು ಕೇಳಿದನು. ಅದಕ್ಕಾ ಮುನಿಯು ತದ್ಭವಮೋಕ್ಷಗಾಮಿಗಳಾದ ಪಾಂಡವರಿಗೆ ಅಪಮೃತ್ಯುವಿಲ್ಲವೆಂದೂ ಸ್ವಯಂವರಮಂಟಪಕ್ಕೆ ಬಂದು ಅರ್ಜುನನು ಲಕ್ಷ್ಯಭೇದವನ್ನು ಮಾಡಿ ದ್ರೌಪದಿಗೆ ಪತಿಯಾಗುವನೆಂದೂ ಹೇಳಲು ದ್ರುಪದನು ಕೇಳಿ ಸಂತುಷ್ಟನಾಗಿ ಸ್ವಯಂವರವನ್ನು ಮಾಡಿಸಿ ರಾಜರನ್ನೆಲ್ಲ ಕರೆಸಿರುತ್ತಾನೆ ' ಎಂದನು. ಆ ವಾರ್ತೆಯನ್ನು ಕೇಳಿ ಪಾಂಡವರು ದ್ರುಪದನ ಪಟ್ಟಣಕ್ಕೆ ಹೋಗಿ ಆ ಮರುದಿನ ಪ್ರಾತಃಕಾಲದಲ್ಲಿ ನಡೆದ ಸ್ವಯಂವರಮಂಟಪವನ್ನು ಹೊಕ್ಕರು. ಅಲ್ಲಿ ದ್ರುಪದನು ಅನೇಕ ರಾಜರುಗಳನ್ನು ಮಣಿಮಯಾಸನಗಳಲ್ಲಿ ಕುಳ್ಳಿರಿಸಿ ತನ್ನ ಪತ್ನಿಯಾದ ದೃಢರಥೆಯನ್ನು ಕುರಿತು ದ್ರೌಪದಿಯನ್ನು ಶೃಂಗರಿಸಿ ಸ್ವಯಂವರಮಂಟಪಕ್ಕೆ ಕಳುಹುವಂತೆ ಹೇಳಿದನು. ಆಕೆಯು ಒಲುಸೊಗಸಾಗಿ ಶೃಂಗಾರಮಾಡಿಸಿ ದ್ರೌಪದಿಯನ್ನು ಆಕೆಯ ಸಖಿಯರೊಡನೆ ಸ್ವಯಂವರಮಂಟ

ಪಕ್ಕೆ ಕಳುಹಿದಳು. ಆಗ ದ್ರೌಪದಿಯು ಸೊಗಸುಗಾತಿಯರಾದ ತನ್ನ ಬಹು ಮಂದಿ ಸಖಿಯರೊಡನೆ ಸ್ವಯಂವರಮಂಟಪಕ್ಕೆ ನಡೆತಂದಳು. ಆಕೆಯ ರೂಪ ಸೌಂದರ್ಯವನ್ನು ನೋಡಿ ರಾಜಕುಮಾರರೆಲ್ಲ ಮೋಹಿತರಾದರು.

ಆ ಸಮಯದಲ್ಲಿ ಪಾಂಡವರು ವೇಷಾಂತರದಿಂದ ಬ್ರಾಹ್ಮಣರ ಗುಂಪಿನಲ್ಲಿ ಸೇರಿದ್ದರು. ಅವರ ರೂಪಲಕ್ಷಣಗಳನ್ನು ನೋಡಿ ಸಭಿಕರೆಲ್ಲ ಆಶ್ಚರ್ಯಪಟ್ಟರು. ಸ್ವಯಂವರ ಶಾಲೆಯಲ್ಲಿ ಆ ದಿವ್ಯ ಧನುಸ್ಸೂ ಅದರ ಮೇಲ್ಗಡೆಯಲ್ಲಿ ಯಂತ್ರದ ಮೀನೂ ಕಂಗೊಳಿಸುತ್ತಿದ್ದುವು. ಆಗ ದ್ರೌಪದಿಯ ಸುಂದರಿಯೆಂಬ ಗೆಳತಿಯು ಕೈಬೆರಳನ್ನೆತ್ತಿ ಕರ್ಣ ಕೌರವ ಮೊದಲಾದ ರಾಜರುಗಳನ್ನು ದ್ರೌಪದಿಗೆ ತೋರಿಸಿ ಅವರುಗಳ ಚೆಲ್ವಿಕೆಯನ್ನು ವರ್ಣಿಸಿದಳು. ಆಕೆಯ ಆ ಮಾತು ದ್ರೌಪದಿಗೆ ಸಮ್ಮತವಾಗಲಿಲ್ಲ. ಆಕೆಯ ಮನಸ್ಸು ಅರ್ಜುನನಲ್ಲಿ ಆಸಕ್ತವಾಗಿದ್ದುದರಿಂದ ಉಳಿದ ರಾಜರುಗಳನ್ನು ತಲೆಯೆತ್ತಿ ನೋಡಲಿಲ್ಲ. ಆಗ ದ್ವಾರಪಾಲಕರು ರಾಜರುಗಳನ್ನು ಕುರಿತು " ನಿಮಗೆ ಕನ್ಯಾರತ್ನವು ಬೇಕಾದರೆ ಈ ನೀರಿನ ನೆರಳನ್ನು ನೋಡಿ ಮೇಲೆ ತಿರುಗುವ ಯಂತ್ರದ ಮೀನಿನ ಎಡಗಣ್ಣನ್ನು ಈ ಧನುಸ್ಸಿನಿಂದ ಭೇದಿಸಬೇಕು " ಎನಲು ಆ ಮಾತನ್ನು ಕೇಳಿ ಕೆಲವರು ರಾಜರುಗಳು ಪ್ರಯತ್ನಿಸಿ ನೋಡಿ ಸಾಧ್ಯವಾಗದಿರಲು ಹಿಂದಿರುಗಿದರು. ಕೆಲವರು ಧನುಸ್ಸನ್ನು ಮುಟ್ಟಿ ಕೆಲವರು ಹಿಡಿದು ಹಿಂದಿರುಗಿದರು ಕೌರವನು ಎದ್ದುಹೋಗಿ ಎತ್ತಿ ಬಳಿಕ ಹೆದೆಯೇರಿಸಲಾರದೆ ಬಲು ನಾಚಿಕೆಯಿಂದ ಬಂದು ಕುಳಿತನು. ಅದನ್ನು ನೋಡಿ ಕರ್ಣನು ಆ ಧನುಸ್ಸನ್ನು ಎತ್ತಿ ಹೆದೆಯೇರಿಸಿ ನಿಂತು ಬಳಿಕ ಲಕ್ಷ್ಯಭೇದವನ್ನು ಮಾಡಲಾರದೆ ಹಿಂದಿರುಗಿದನು. ಆ ರಾಜರೆಲ್ಲ ಸಾಧಾರಣರೆಂದು ಬಗೆದು ದ್ರುಪದನು " ಬ್ರಾಹ್ಮಣರ ಸಭೆಯಲ್ಲಿ ಈ ಧನುಸ್ಸನ್ನೆತ್ತುವ ಸಾಹಸಿಗಳಿದ್ದರೆ ಏಳಿ ' ಎಂದು ಸಾರಿಸಿದನು. ಅದನ್ನು ಕೇಳಿ ಬ್ರಾಹ್ಮಣರು " ಸತ್ಯದಲ್ಲಿ ಕುಳಿತು ವಿಸ್ತಾರವಾದ ಎಲೆಯಲ್ಲಿ ಊಟಕ್ಕೆ ಪಾತ್ರರಲ್ಲದೆ ಬಡಬ್ರಾಹ್ಮಣರು ಈ ರಾಜಪುತ್ರಿಗೆ ಪಾತ್ರರೇ? ಸಣ್ಣಕ್ಕಿಯ ಅನ್ನವನ್ನೂ ತೊಗರಿಯ ತೊಗೆಯನ್ನೂ ಬೆಣ್ಣೆಕಾಯಿಸಿದ ತುಪ್ಪವನ್ನೂ ಬಡಿಸಿ ಅಣ್ಣಂದಿರಾ! ಊಟಮಾಡಿ ಬನ್ನಿಯೆನಬೇಕಲ್ಲದೆ ಹೆಣ್ಣಿಗೆಂದು ನಮ್ಮನ್ನು ಕರೆಯುತ್ತಾರೆಯೇ? ಸುವಾಸನೆಯಾದ ತುಪ್ಪವನ್ನು ಬಡಿಸಿ ನಮ್ಮ ಕೈಯ ಪರಿಯನ್ನು ನೋಡದೆ ಅಯ್ಯಯ್ಯೋ ಬಲಿಷ್ಠರಿಂದಾಗದ ಕೆಲಸವನ್ನು ನಮಗೆ ಹೇಳುವುದುಂಟೆ?" ಈ ರೀತಿಯಾಗಿ ಹೇಳುವ ಬ್ರಾಹ್ಮಣರ ಮಾತುಗಳನ್ನು ಕೇಳಿ ನಸುನಗುತ ಧರ್ಮರಾಜನು ಪ್ರೀತಿಯಿಂದ ಅರ್ಜುನನಿಗೆ ಕಣ್ಣಸನ್ನೆಮಾಡಿದನು. ಆಗ ಫಲ್ಗುನನು ಬ್ರಾಹ್ಮಣರ

ಸಭೆಯಿಂದೆದ್ದು ಬರುತ್ತಿರಲು ಸಭಿಕರೆಲ್ಲ ಅವನನ್ನು ನೋಡಿ ಪರಿಪರಿಯಾಗಿ ಪರಿಹಾಸ್ಯಮಾಡಿದರು. ಅರ್ಜುನನು ಧನುಸ್ಸನ್ನು ಹಿಡಿದು ಹರಳುಗಿಡವನ್ನು ಎತ್ತುವಂತೆ ಎತ್ತಿ ಹೆದೆಯೇರಿಸಿ ಲಕ್ಷ್ಯವನ್ನು ಭೇದಿಸಿ ಬಂದು ಧರ್ಮರಾಜನ ಕಾಲಿಗೆ ನಮಸ್ಕಾರಮಾಡಿ ಕುಳಿತನು. ಸಭಿಕರೆಲ್ಲ ಅಚ್ಚರಿವಟ್ಟರು. ದ್ರೌಪದಿಯು ಅರ್ಜುನನ ಅಂಗಸೌಂದರ್ಯವನ್ನು ನೋಡಿ ಮುಗ್ಧಳಾಗಿ ಆತನಿಗೆ ಸ್ವಯಂವರ ಮಾಲಿಕೆಯನ್ನು ಹಾಕಿದಳು. ಆಗ ದ್ರುಪದನು ಅರ್ಜುನನ ಬಳಿಗೆ ಬಂದು ಅವನನ್ನು ನೋಡಿ ಬಹು ಸಂತೋಷಪಟ್ಟು ಬಳಿಕ ಪಾಂಡವರನ್ನು ಗುರುತಿಸಿ ಅವರಿಗೆ ತಕ್ಕ ಸನ್ಮಾನವನ್ನು ಮಾಡಿ ಅವರನ್ನೂ ಕೊಂತಿಯನ್ನೂ ದ್ರೌಪದಿಯನ್ನೂ ರಥದಲ್ಲಿ ಕುಳ್ಳಿರಿಸಿ ತನ್ನ ಪಟ್ಟಣಕ್ಕೆ ಕರೆದೊಯ್ದನು. ಆಗ ಕೌರವನು ತಾನೂ ಇತರ ರಾಜರುಗಳೂ ಇರುವಾಗ ದ್ರುಪದನು ದ್ರೌಪದಿಯನ್ನು ಓರ್ವ ಬಡಬ್ರಾಹ್ಮಣನಿಗೆ ಕೊಡಬಹುದೇ ? ಎಂದು ಬಹುಕೋಪಗೊಂಡು ತನ್ನ ಅಪರಿಮಿತ ಸೇನೆಯೊಡನೆ ರಣಸನ್ನದ್ಧನಾಗಿ ರಣಭೇರಿಯನ್ನು ಹೊಯ್ಸಿದನು. ಅವನಿಗೆ ಸಹಾಯಕರಾಗಿ ಇತರ ರಾಜರುಗಳೂ ಸೇರಿದರು. ಆ ಬಹುಸೈನ್ಯವನ್ನು ಕಂಡು ಪಾಂಡವರೂ ದ್ರುಪದನೂ ಪಟ್ಟಣಕ್ಕೆ ಹೋಗದೆ ಹಿಂದಿರುಗಿದರು. ಭೀಮಾರ್ಜುನರು ರಥವನ್ನೇರಿ ಅರ್ಜುನನು ಗಾಂಡೀವಧನುಸ್ಸನ್ನೂ ಭೀಮನು ರುಧಿರೋದ್ಗಾರಿಗದೆಯನ್ನೂ ಹಿಡಿದು ಕೌರವನ ಸೇನೆಯನ್ನು ಹೊಕ್ಕು ಹೆಸರು ಕುರುಹಿಲ್ಲದಂತೆ ಕೊಲುತ್ತಿರುವುದನ್ನು ಕಂಡು ಅಳಿದುಳಿದ ಸೇನೆಯು ಓಡುತ್ತಿರಲು ಆ ಕುರುಸೇನೆಯ ನಾಯಕರು ಭೀಮಾರ್ಜುನರ ಮುಖವನ್ನು ನೋಡಿ ಇವರು ಭೀಮಾರ್ಜುನರೆಂದು ನಿಶ್ಚಯಿಸಿ ಬಂದು ಕೌರವ ಭೀಷ್ಮ, ಕೃಪ ಎದುರಿರಿಗೆ ತಿಳಿಸಿದರು. ಅವರು ಭೃತ್ಯರನ್ನು ಕಳುಹಿ ನಿಜಾಂಶವನ್ನು ತಿಳಿದು ಬಂದು ಪಾಂಡವರನ್ನು ಕಂಡರು. ಅವರು ಕಾಲಿಗೆ ನಮಸ್ಕಾರಮಾಡಲು ಮರಳಿ ಮರಳಿ ಹರಸಿ ಭೀಷ್ಮರು ಧರ್ಮರಾಜನನ್ನು ಕುರಿತು " ನೀವು ಅರಗಿನ ಮನೆಯಿಂದ ಹೇಗೆ ಬದುಕಿ ಬಂದಿರಿ ? " ಎಂದು ಕೇಳಿದರು. ತಾವು ಅದೃಷ್ಟದಿಂದ ಬದುಕಿಬಂದೆವೆಂದು ಧರ್ಮರಾಜನು ಹೇಳಿದನು. ಭೀಷ್ಮರು " ದೈವಬಲವುಳ್ಳವರನ್ನು ನಾಗನರರಾಮರರು ಕೆಡಿಸಬಲ್ಲರೇ ? " ಎನಲು ಯುಧಿಷ್ಠಿರನು ಕೇಳಿ ಕೈಮುಗಿದು " ಯೋಚಿಸಿ ನೋಡಿದರೆ ನಮಗೆ ನಮ್ಮ ಕರ್ಮದಿಂದ ಅಪಾಯವು ಸಂಭವಿಸಿತಲ್ಲದೆ ಕೌರವನಿಂದಲ್ಲ " ಎಂದನು. ಆ ಮಾತನ್ನು ಕೇಳಿ ಭೀಷ್ಮರು ಅವನ ಸಮತಾಭಾವವನ್ನು ಕೊಂಡಾಡಿ " ನೀವು ನಿಮ್ಮ ರಾಜ್ಯದಲ್ಲಿರಿ " ಎಂದು ಹೇಳಿ ಒಡಂಬಡಿಸಿ ಬಂದು ಅವರ

ಸಮಾಚಾರವನ್ನು ಕೌರವನಿಗೆ ಹೇಳಿದರು. ಆಗ ಕರ್ಣನು ಪಾಂಡವರ ಏಳ್ಗೆಯ ಮಾತನ್ನು ಕೇಳಿ ಕೌರವನನ್ನು ಪುರಸ್ಕರಿಸಿಯೂ ಪಾಂಡವರನ್ನು ತಿರಸ್ಕರಿಸಿಯೂ ಮಾತನಾಡಿದನು. ಆ ಮಾತನ್ನು ಕೇಳಿ ಭೀಷ್ಮರು ಸೋದರರಲ್ಲಿ ಬಲವನ್ನು ತೋರುವುದು ಅರಸುತನದ ನೀತಿಯಲ್ಲವೆಂದೂ ಅರ್ಧರಾಜ್ಯವನ್ನು ಪಾಂಡವರಿಗಿತ್ತು ಬಾಳುವುದು ಕ್ಷೇಮಕರವೆಂದೂ ಹೇಳಿ ನಾನಾತೆರದ ಒಡಂಬಡಿಕೆಗಳಿಂದ ಒಡಂಬಡಿಸಿ ಕೌರವನನ್ನು ಹಸ್ತಿನಾಪುರಕ್ಕೆ ಕಳುಹಿ ತಾವು ಪಾಂಡವರೊಡನೆ ದ್ರುಪದನ ಪಟ್ಟಣಕ್ಕೆ ಹೋದರು ಬಳಿಕ ದ್ರುಪದನು ಅರ್ಜುನನಿಗೆ ದ್ರೌಪದಿಯನ್ನು ಕೊಟ್ಟು ಬಹು ವೈಭವದಿಂದ ಮದುವೆಮಾಡಿ ಬಳುವಳಿಯನ್ನು ಕೊಟ್ಟನು. ತರುವಾಯ ಭೀಷ್ಮರು ಪಾಂಡವರು ಸಮೇತ ಪಾಂಚಾಲಪುರದಿಂದ ಹೊರಟು ಬಂದು ಶುಭಲಗ್ನದಲ್ಲಿ ಪಾಂಡವರನ್ನು ಇಂದ್ರಪ್ರಸ್ಥವೆಂಬ ಪಟ್ಟಣಕ್ಕೆ ಹೊಗಿಸಿ ಅಲ್ಲಿಗೆ ಕೌರವನನ್ನು ಬರುಮಾಡಿ ಧರ್ಮರಾಜನಿಗೆ ಆ ರಾಜ್ಯದ ಪಟ್ಟವನ್ನು ಕಟ್ಟಿ ಬಳಿಕ ಹಸ್ತಿನಾಪುರಕ್ಕೆ ಹೊರಟುಹೋದರು.

ಧರ್ಮರಾಜನು ಆ ರಾಜ್ಯವನ್ನು ಪಾಲಿಸುತ್ತ ಮೊದಲು ತಾನು ಮದುವೆಯಾಗಿದ್ದ ಕುಸುಮಮಾಲೆಯನ್ನೂ ಆಕೆಯ ತಂದೆ ಧಾನ್ಯರಾಜನನ್ನೂ ಕರೆಸಿದನು ಬಳಿಕ ಆ ಎಂಧ್ಯಕನೂ ಚಂಡವಾಹನನೂ ತಂತಮ್ಮ ಹೆಣ್ಣುಮಕ್ಕಳನ್ನು ಕರೆತಂದು ಉತ್ತಮಲಗ್ನದಲ್ಲಿ ಧರ್ಮರಾಜನಿಗೆ ಮದುವೆಮಾಡಿಕೊಟ್ಟು ತಮ್ಮ ಪಟ್ಟಣಕ್ಕೆ ಹೊರಟುಹೋದರು. ಧರ್ಮರಾಜನು ಕುಸುಮಮಾಲೆಗೆ ಅಗ್ರಮಹಿಷಿಯ ಪಟ್ಟವನ್ನು ಕಟ್ಟಿ ಸುಖದಿಂದಿರುತ್ತಿರಲು ಆ ಸಿಹ್ಮಘೋಷನು ಹಿಡಿಂಬೆಯನ್ನು ಕರೆತಂದು ವೀರಮಾರುತಿಗಿತ್ತು ಹೋದನು. ಬಳಿಕ ಕೆಲವು ರಾಜರುಗಳು ನಕುಲ ಸಹದೇವರಿಗೆ ತಂತಮ್ಮ ಪುತ್ರಿಯರನ್ನು ಕೊಟ್ಟು ಮದುವೆಮಾಡಿದರು. ಧರ್ಮರಾಜನು ಭೀಮನಿಗೆ ತಿಲಕಪ್ರಸ್ಥವೆಂಬ ನಗರವನ್ನೂ ಅರ್ಜುನನಿಗೆ ಕಣೆಯಪ್ರಸ್ಥವೆಂಬ ನಗರವನ್ನೂ ನಕುಲನಿಗೆ ನಾಗಪ್ರಸ್ಥವೆಂಬ ನಗರವನ್ನೂ ಸಹದೇವನಿಗೆ ಕನಕಪ್ರಸ್ಥವೆಂಬ ನಗರವನ್ನೂ ಕೊಟ್ಟನು. ಅವರು ನಾಲ್ವರೂ ತಂತಮ್ಮ ನಗರವನ್ನು ಪ್ರವೇಶಿಸಿ ಸಂತೋಷದಿಂದ ತಂತಮ್ಮ ರಾಜ್ಯವನ್ನಾಳುತ್ತಿರಲು ಅನೇಕ ರಾಜರುಗಳು ತಮ್ಮಲ್ಲಿರುವ ಉತ್ತಮ ವಸ್ತುಗಳನ್ನೂ ತಮ್ಮ ಪುತ್ರಿಯರನ್ನೂ ತಂದು ಕಾಣ್ಕೆಯನ್ನಿತ್ತು ಸುಖದಿಂದಿದ್ದರು. ಪಾಂಡವರ ಕೀರ್ತಿಯು ದಶದಿಕ್ಕುಗಳಲ್ಲಿ ಹರಡಿತು. ಧರ್ಮರಾಜನು ತಮ್ಮಂದಿರನ್ನು ತನ್ನಾಜ್ಞೆಯೊಳಗಿಟ್ಟುಕೊಂಡಿದ್ದು ಕೀರ್ತಿವಡೆದನು.

೨೪. ಪಾಂಡವರ ವನವಾಸ ಸಂಧಿ

ಒಂದು ದಿನ ಧರ್ಮರಾಜನು ಓರ್ವ ಮಂತ್ರಿಯನ್ನು ಕರೆದು ತಮ್ಮ ಕ್ಷೇಮ ಸಮಾಚಾರವನ್ನು ದ್ವಾರಾವತಿಗೆ ಹೋಗಿ ಕೃಷ್ಣ ಬಲರಾಮ ಮೊದಲಾದವರಿಗೆ ತಿಳಿಸಿಬರುವಂತೆ ಹೇಳಿಕಳುಹಿದನು. ಅವನು ಹೋಗಿ ತಿಳುಹಲು ಅವನಿಗೆ ಕೃಷ್ಣಾದಿಗಳು ರತ್ನಾಭರಣಗಳನ್ನು ಬಹುಮಾನ ಕೊಟ್ಟು ಕಳುಹಿದರು. ಕಣಿಯಪ್ರಸ್ಥದಲ್ಲಿ ಅರ್ಜುನನು ದ್ರೌಪದಿಯೊಡನೆ ಏಡೆಬಿಡದೆ ಸುಖದಿಂದಿರುವಾಗ ದ್ವಾರಾವತಿಯಲ್ಲಿ ವಸುದೇವನಿಗೆ ನೀಲಾಂಜನೆಯೆಂಬ ಪತ್ನಿಯಲ್ಲಿ ಜನಿಸಿದ ಅತ್ಯಂತ ರೂಪವತಿಯಾದ ಸುಭದ್ರೆಯನ್ನು ಕೌರವನು ತನಗೆ ಕೊಡಬೇಕೆಂದು ಕೇಳಿದನು. ಅವರು ಆತನಿಗೆ ಕೊಡಲೊಪ್ಪದಿರಲು ಆ ವಾರ್ತೆಯನ್ನು ಕೇಳಿ ಅರ್ಜುನನು ತನಗೆ ಕೊಡಬೇಕೆಂದು ಸಚಿವರೊಡನೆ ಹೇಳಿಕಳುಹಿದನು. ಅದಕ್ಕೊಪ್ಪಿ ವಸುದೇವ ವಾಸುದೇವಾದಿಗಳು ಸುಭದ್ರೆಯನ್ನು ಫಲ್ಗುನನಿಗೆ ಕೊಟ್ಟು ಮದುವೆಮಾಡಿದರು. ದಂಪತಿಗಳು ಕಣಿಯಪ್ರಸ್ಥಕ್ಕೆ ಹೋಗಿ ಸುಖಾನುಭವದಲ್ಲಿರುತ್ತಿರಲು ಅವರಿಗೆ ಅಭಿಮನ್ಯುವೆಂಬ ಮಗನು ಹುಟ್ಟಿ ಸಕಲಕಲಾಪ್ರವೀಣನಾಗಿ ಬೆಳೆದನು. ಮನ್ಮಥಸಮರೂಪನಾದ ಆ ಅಭಿಮನ್ಯುವಿಗೆ ಕೃಷ್ಣನು ಸುಂದರಿಯೆಂಬ ತನ್ನ ಮಗಳನ್ನು ಮದುವೆಮಾಡಿಕೊಟ್ಟು ಅಸರೊಡನೆ ಕಣಿಯಪ್ರಸ್ಥಕ್ಕೆ ಹೋಗಿ ಅರ್ಜುನನೊಡನೆ ಕೆಲವ್ರದಿನ ಸ್ನೇಹದಿಂದಿದ್ದನು. ಆ ವಿಷಯವನ್ನು ಕೌರವನು ತಿಳಿದು ತನ್ನ ಆಪ್ತಸಚಿವರನ್ನು ಬರುಮಾಡಿ ಅವರಲ್ಲಿ ಪಾಂಡವರ ವೈಭವವು ಹೆಚ್ಚಿದುದರಿಂದ ತನ್ನ ಅರಸುತನವು ಉಳಿಯುವುದಿಲ್ಲವೆಂದು ಹೇಳಿದನು. ಆ ಮಾತನ್ನು ಕೇಳಿ ಶಕುನಿಯು ಕೈಮುಗಿದು "ಯೋಚನೆಯೇಕೆ? ಧರ್ಮರಾಜನು ಜೂಜಾಟದಲ್ಲಿ ಪ್ರೀತಿಯುಳ್ಳವನು. ಅವನನ್ನು ಒಂದು ಹಬ್ಬದ ನೆವದಿಂದ ಬರುಮಾಡಿ ಅವನೊಡನೆ ಜೂಜಾಡಿ ಅವನಾಡುಬೀಡುಗಳೆಲ್ಲವನ್ನೂ ಗೆದ್ದು ಕಾಡಿಗೆ ಕಳುಹುವೆವು. ಸಂದೇಹಬೇಡ" ಎಂದನು. ಆ ಮಾತನ್ನು ಕೇಳಿ ಕೌರವನು ಕೃತ್ರಿಮವಾದ ದಾಳಗಳನ್ನು ಮಾಡಿಸಿ ಭೀಷ್ಮರಿಗೆ ತಿಳಿಯದಂತೆ ಒಂದುದಿನ ಹಬ್ಬದ ನೆವದಿಂದ ಧರ್ಮರಾಜನನ್ನು ಕರೆಯುವುದಕ್ಕೆ ಕಳುಹಿದನು. ಅವನು ತಮ್ಮಂದಿರೊಡನೆ ವೈಭವದಿಂದ ಬರಲು ಕೌರವನು ಇದಿರ್ಗೊಂಡು ಪಟ್ಟಣಕ್ಕೆ ಹೊಗಿಸಿ ವಿನಯೋಪಚಾರಗಳಿಂದಿರಿಸಿಕೊಂಡಿರ್ದು

ಚೆನ್ನಾಗಿ ಹಬ್ಬವನ್ನು ಮಾಡಿಸಿ ಬಳಿಕ ಒಂದುದಿನ ಓಲಗಶಾಲೆಯಲ್ಲಿ ಸೇರಿದ್ದ ಸಭೆಯಲ್ಲಿ ಕೌರವನೂ ಧರ್ಮರಾಜನೂ ಉನ್ನತಾಸನಗಳಲ್ಲಿ ಕುಳಿತಿರಲು ಅವರ ಮುಂದೆ ಈರ್ವರು ಪಗಡೆಯನ್ನಾಡಲಾರಂಭಿಸಿದರು. ಒಬ್ಬನಿಗೆ ಕೌರವನೂ ಇನ್ನೊಬ್ಬನಿಗೆ ಧರ್ಮರಾಜನೂ ಆಟದ ಆಯವನ್ನು ಹೇಳುತ್ತಿರಲು ಪಕ್ಕದಲ್ಲಿದ್ದ ಶಕುನಿಯು "ದೊರೆಗಳಿರಾ! ಹೊತ್ತುಹೋಗುವುದಕ್ಕೆ ನೀವು ಕೆಲವಾಟಗಳನ್ನು ಆಡಿ" ಎನಲು ಕೌರವನು ಧರ್ಮರಾಜನ ಮುಖವನ್ನು ನೋಡಿ "ಹಾಗಾದರೆ ಆಡುವ ಬನ್ನಿ" ಎಂದನು. ಅದಕ್ಕೆ ಧರ್ಮರಾಜನು ಒಡಂಬಡಲು ಶಕುನಿಯು ಆ ನೆತ್ತದ ಹಲಗೆಯನ್ನು ತಂದಿರಿಸಿ ದಾಳವನ್ನು ಕೈಗಿತ್ತನು. ಅವರು ಎರಡುಮೂರಾಟಗಳನ್ನಾಡಿದ ಮೇಲೆ ಶಕುನಿಯು 'ಈ ಆಟಕ್ಕೆ ಹತ್ತುಸಾವಿರರೂ ಪಾಯಿ ಜೂಜು" ಎಂದನು. ಅದಕ್ಕವರು ಒಡಂಬಟ್ಟರು. ಬಳಿಕ ಒಂದೆರಡಾಟಗಳನ್ನು ಗೆದ್ದು ಧರ್ಮರಾಜನ ಮನಸ್ಸಿನಲ್ಲಿ ಹಟವನ್ನು ಹುಟ್ಟಿಸಿ ತರುವಾಯ ಅವನ ಆನೆ ಕುದುರೆ ಪದಾತಿಗಳನ್ನು ಒಂದೊಂದಾಗಿ ಗೆಲ್ಲುತ್ತಿರಲು ಅದನ್ನು ಕಂಡು ಭೀಮಸೇನನು "ಸಂಚಿನ ದಾಳಗಳನ್ನು ಮಾಡಿ ಅಣ್ಣನನ್ನು ವಂಚಿಸಿ ಪಗಡೆಯಾಡಿ ಮೊದಲು ಗೆಲವನ್ನು ಕೊಟ್ಟು ಬಳಿಕ ಹೀಗೆ ಆಡುವ ವಂಚನೆಯು ಲೇಸು ಲೇಸು. ಯುದ್ಧಭೂಮಿಯನ್ನು ಹಲಗೆಯನ್ನಾಗಿಯೂ ನಿನ್ನ ವಂಶಿಕರನ್ನು ಪಗಡೆಕಾಯಿಗಳನ್ನಾಗಿಯೂ ಮಾಡಿ ಈ ನಿನ್ನ ಗದೆಯೆಂಬ ದಾಳದಿಂದ ನೆಲಕ್ಕುರುಳಿಸದೆ ಬಿಡುವೆನೇ?" ಎಂದನು. ಕೌರವನು ಕಾರ್ಯವಶದಿಂದ ಭೀಮನ ಮಾತಿಗೆ ಕಿವಿಗೊಡಲಿಲ್ಲ. ಭೀಮನು ಧರ್ಮರಾಜನಿಗೆ ಕಣ್ಣುಸನ್ನೆ ಮಾಡಿದನು. ಭೀಷ್ಮ ವಿದುರರು ಬೆದರಿ "ಹೀನರಂತೆ ಉತ್ತಮರು ಜೂಜಾಡುವರೇ" ಎನಲು ಧರ್ಮರಾಜನು "ನಿನ್ನ ಈ ಸೋಲವನ್ನು ಇನ್ನೊಂದು ರೀತಿಯಾಗಿ ತಿರುಗಿಸುವೆನು. ನೀವು ಅಡ್ಡಬರಬೇಡಿ" ಎಂದು ಕೈಮುಗಿದನು. ಅವರು ಮರುಮಾತಿಗವಕಾಶವಿಲ್ಲದೆ ಧೃತರಾಷ್ಟ್ರನಲ್ಲಿಗೆ ಹೋಗಿ ಕೌರವನಾಡುವ ಜೂಜಿನ ರೀತಿಯನ್ನು ತಿಳುಹಿ "ಯುದ್ಧದಲ್ಲಿ ಭೀಮನು ಗದೆಯನ್ನೂ ಫಲ್ಗುನನು ಗಾಂಡೀವಧನುಸ್ಸನ್ನೂ ಹಿಡಿದರೆ ಬ್ರಹ್ಮ ವಿಷ್ಣು ಮಹೇಶ್ವರರೂ ತಡೆಯಬಲ್ಲರೇ?" ಎಂದು ಕೌರವನಿಗೆ ಮುಂದಾಗುವ ಕೇಡನ್ನು ತಿಳುಹಿ "ನೀನೀಗಲೇ ಹೋಗಿ ನಿನ್ನ ಮಗನಿಗೆ ಬುದ್ಧಿಹೇಳಿ ಜೂಜಿನಲ್ಲಿ ಅವನು ಗೆದ್ದುದೆಲ್ಲವನ್ನೂ ಧರ್ಮರಾಜನಿಗೆ ಕೊಡಿಸಿ ಬರಬೇಕು" ಎಂದು ಧೃತರಾಷ್ಟ್ರನನ್ನು ಕೌರವನ ಬಳಿಗೆ ಕಳುಹಿದರು. ಅವನು ಹೋಗಿ ಮಗನಿಗೆ ಬುದ್ಧಿಹೇಳಿದರೂ ಅವನು ಕೇಳದಿರಲು ಧೃತರಾಷ್ಟ್ರನು ಹಿಂದಿರುಗಿದನು. ಧರ್ಮ

ಸುತನು ವಸ್ತ್ರವಾಹನ ದೇಶಕೋಶಗಳನ್ನೆಲ್ಲ ಒಂದೊಂದಾಗಿ ಸೋತನು. ಆಗ ಭೀಮಾರ್ಜುನರು ಕೋಪಗೊಂಡು ಕೌರವನನ್ನು ಕುರಿತು ಅವಧಿಯನ್ನು ಸುರಿದರು. ಅದಕ್ಕೆ ಶಕುನಿಯು ದುರ್ಯೋಧನನ ಅನುಮತಿಯಿಂದ ಹನ್ನೆರಡು ವರುಷ ವನವಾಸವನ್ನೂ ಒಂದು ವರುಷ ಅಜ್ಞಾತವಾಸವನ್ನೂ ಮಾಡಬೇಕೆಂದನು. ಆ ನುಡಿಗೊಡಂಬಟ್ಟು ಧರ್ಮರಾಜನು ಎದ್ದು ಮನೆಗೆ ಹೋದನು. ದುರ್ಯೋಧನನು ಸಂತೋಷದಿಂದ ತಾನು ಗೆದ್ದ ಸಾಮ್ರಾಂಗವನ್ನು ಕೇಳಲು ಧರ್ಮರಾಜನ ಬಳಿಗೆ ಭೃತ್ಯರನ್ನು ಕಳುಹಲು ಅವನು ಅವೆಲ್ಲವನ್ನೂ ಒಪ್ಪಿಸಿದನು. ಆಗ ಭೀಮಾರ್ಜುನರು ಬಹುಕೋಪದಿಂದ ತಮ್ಮ ಆಯುಧಗಳಿಗೆ ಕೈನೀಡಲು ಧರ್ಮರಾಜನು ಅವರನ್ನು ದೃಷ್ಟಿಸಿ ನೋಡಿದನು. ಆಗ ಅವರು ಅಣ್ಣನಿಗೆ ಹೆದರಿ ಅವನ ಆಜ್ಞೆಯನ್ನು ಮನ್ನಿಸಿ ಸುಮ್ಮನಾದರು.

ಬಳಿಕ ಸರ್ವಸ್ವವನ್ನೂ ಕೌರವನಿಗೊಪ್ಪಿಸಿ ಆ ವೀರಪಾಂಡವರು ಪಟ್ಟಣದಿಂದ ಹೊರಟರು. ಆಗ ಭೀಷ್ಮ ಕೃಪ ಮೊದಲಾದವರು ಕೌರವನ ಬಳಿಗೆ ಹೋಗಿ "ಬೇಡ, ನೀನು ಮೊದಲು ಗೆದ್ದಿರುವ ದೇಶವನ್ನು ಅವರಿಗೊಪ್ಪಿಸು" ಎನಲು ಅವನು ಕಿವುಡನಂತೆ ಅವರ ಮಾತಿಗೆ ಕಿವಿಗೊಡಲಿಲ್ಲ. ಆವರು ಕಡುನೊಂದು ಪಾಂಡವರ ಬಳಿಗೆ ಹೋಗಲು ಅವರು ಇವರುಗಳ ಕಾಲುಗಳಿಗೆರಗಿ ಕಡೆಗಣ್ಣಿಂದ ಕಣ್ಣೀರನ್ನು ಸುರಿದರು. ಆಗ ಭೀಷ್ಮ ಮೊದಲಾದವರು "ಮಕ್ಕಳಿರಾ! ಕಾಡಿನಲ್ಲಿರುವವರಿಗೆ ನಾವೇನು ಆಶೀರ್ವಾದ ಮಾಡುವೆವು?" ಎಂದು ದುಃಖಿಸಿದರು. ಆಗ ಪಾಂಡವರು "ನಿಮ್ಮ ಆಶೀರ್ವಾದವೇ ನಮ್ಮನ್ನು ರಕ್ಷಿಸುವುದು" ಎನಲು ಅವರ ಸಾಹಸಕ್ಕೆ ಮನಸ್ಸಿನಲ್ಲಿ ಮೆಚ್ಚಿ ಬೀಳ್ಕೊಂಡು ದುಃಖದಿಂದ ಹಿಂದಿರುಗಿದರು.

ಇತ್ತ ಪಾಂಡವರು ಇಂದ್ರಪ್ರಸ್ಥನಗರಕ್ಕೆ ಹೋಗಿ ಅಲ್ಲಿಂದ ಹೊರಟು ಗಂಗಾನದಿಯನ್ನು ದಾಂಟಿ ಒಂದು ದೊಡ್ಡ ಆಲದಮರದ ಬುಡದಲ್ಲಿ ಬೀಡನ್ನು ಬಿಡಿಸಿ ತಮ್ಮನ್ನು ಹಿಂಬಾಲಿಸಿ ಬಂದ ಬಂಧುಗಳನ್ನೂ ಸಾಮಂತರಾಜರುಗಳನ್ನೂ ಮಂಡಳಿಕರನ್ನೂ ದುರ್ಗಾಧಿಪತಿಗಳನ್ನೂ ಬಹು ವಿನಯವಚನಗಳಿಂದ ಸಂತೈಸಿ ಬೀಳ್ಕೊಟ್ಟು ಆದಿನ ಅಲ್ಲಿದ್ದು ಮರುದಿನ ತಮ್ಮ ಪತ್ನಿಯರನ್ನು ಅವರವರ ತಂದೆತಾಯಿಗಳ ಬಳಿಗೆ ಕಳುಹಿದರು. ದ್ರೌಪದಿಯೋರ್ವಳು ಹಿಂಬಾಲಿಸಿ ಬರಲು ಆಕೆಯನ್ನೂ ಕೊಂತಿಯನ್ನೂ ಕರೆದುಕೊಂಡು ನಡೆದು ಒಂದು ದೊಡ್ಡ ಅರಣ್ಯಕ್ಕೆ ಹೋಗಿ ಶತಶೃಂಗವೆಂಬ ಬೆಟ್ಟದಲ್ಲಿರುವ ಬದರೀವನವನ್ನು ಹೊಕ್ಕು ಅಲ್ಲಿ ಸಂತೋಷದಿಂದಿರುವಾಗ ಪಾಂಡವರು ಕೌರವನೊಡನೆ ಜೂಜಾಡಿ

ದೇಶಕೋಶವೆಲ್ಲವನ್ನೂ ಸೋತು ಅರಣ್ಯವಾಸಿಗಳಾಗಿರುತ್ತಾರೆಂಬ ವಾರ್ತೆಯನ್ನು ಕೃಷ್ಣಬಲರಾಮರು ಕೇಳಿ ಧೀರರೂ ಚತುರಕಲಾಪರಿಪೂರ್ಣರೂ ಮಹಾ ಶಕ್ತಿಸಂಪನ್ನರೂ ಆದ ಕೃಷ್ಣನೆಂಬೋರ್ವ ರಾಜಪುತ್ರನನ್ನು ಕರೆದು ಪಾಂಡವರ ಬಳಿಗೆ ಹೋಗಿ ಆ ವನದಲ್ಲಿ ಅವರಿಗೆ ಶತ್ರುಬಾಧೆಯಿಲ್ಲದಂತೆ ನೋಡಿಕೊಳ್ಳೆಂದು ಹೇಳಿಕಳುಹಿದರು. ಅವನು ಹೋಗಿ ಧರ್ಮರಾಜನಿಗೆರಗಿ ತಾನು ಬಂದ ಕೆಲಸವನ್ನು ತಿಳುಹಿ ಆ ಕಾನನದಲ್ಲಿ ಪಾಂಡವರಿಗೆ ಕಾವಲಾಗಿದ್ದನು. ಒಂದಾನೊಂದು ದಿವಸ ಪ್ರಾತಃಕಾಲದಲ್ಲಿ ಅರ್ಜುನನು ವನವಿಹಾರಾರ್ಥವಾಗಿ ಕೆಲವುದೂರ ಬರುತ್ತ ಇಂದ್ರಕೀಲವೆಂಬ ಬಹು ರಮಣೀಯವಾದ ಬೆಟ್ಟವನ್ನು ಕಂಡು ಅದರ ತುದಿಯನ್ನು ನೋಡುವೆನೆಂದು ಬರುವಾಗ ಒಂದು ಬಿದಿರಿನ ತುದಿಯಲ್ಲಿ ಪೆಡಗೈಗಟ್ಟಿ ಜೋಲುತ್ತಿರುವ ಮನುಷ್ಯನನ್ನು ಕಂಡು ಆ ಖೇಚರನನ್ನು ಯಾರೋ ಅವನ ಶತ್ರುಗಳು ಕಟ್ಟಿರುವರೆಂದು ಬಗೆದು ತನ್ನ ಗಾಂಡೀವಕ್ಕೆ ಬಾಣವನ್ನು ಸೇರಿಸಿ ಆ ಬಿದಿರ ಹಿಂಡಲಿಗೆ ಪ್ರಯೋಗಿಸಿದನು. ಅದು ಭೂಮಿಗೆ ಉರುಳುವಾಗ ಆ ಖೇಚರನನ್ನು ತನ್ನ ಭುಜಗಳಿಂದ ಅಂತುಕೊಂಡು ಪೆಡಗಟ್ಟನ್ನು ಬಿಡಿಸಿದನು. ಆಗ ಆ ಖೇಚರನು ಅರ್ಜುನನ ಕಾಲುಗಳಿಗೆ ನಮಸ್ಕಾರಮಾಡಿ "ಗುಣಮಣಿಯೆ! ನೀನು ನನ್ನ ಪ್ರಾಣಗಳನ್ನುಳಿಸಿದೆ' ಎಂದು ಹೇಳಲು ಅರ್ಜುನನು "ನಿನಗೆ ಈ ಅವಸ್ಥೆಯನ್ನುಂಟುಮಾಡಿದವರಾರು?" ಎಂದು ಕೇಳಿದನು ಅದಕ್ಕಾ ಖೇಚರನು ಕೈಮುಗಿದು "ಬಲಶಾಲಿಯೆ! ಕೇಳು, ಈ ವಿಜಯಾರ್ಧಪರ್ವತದ ಅಂಬರತಿಲಕವೆಂಬ ಪಟ್ಟಣದ ಇಂದ್ರರಥನೆಂಬ ದೊರೆ ನಾನು. ಈ ಪರ್ವತದಲ್ಲಿ ಅನೇಕ ವಿದ್ಯೆಗಳನ್ನು ಸಾಧಿಸುವುದಕ್ಕಾಗಿ ಈದಿನ ಬರಲು ನನ್ನ ಓರ್ವ ಮೇಘರಥನೆಂಬ ಶತ್ರುವು ನನ್ನನ್ನು ಹಿಂಬಾಲಿಸಿಕೊಂಡು ಬಂದು ಮೋಸದಿಂದ ನನ್ನನ್ನು ಕಟ್ಟಿಹೋದನು. ನಿನ್ನಿಂದ ನನ್ನ ಸಾವು ತಪ್ಪಿತು. ನಾನು ಸಾಧಿಸುವುದಕ್ಕಾಗಿ ಬಂದ ವಿದ್ಯೆಗಳನ್ನು ನೀನೇ ಸಾಧಿಸು" ಎಂದು ಹೇಳಿ ಅರ್ಜುನನಿಗೆ ಆ ವಿದ್ಯಾಮಂತ್ರಗಳನ್ನು ಕೊಟ್ಟು ಅವುಗಳನ್ನು ಆ ಗಿರಿಯ ಶಿಖರದ ಮೇಲಿರುವ ಅವಿತೀರ್ಥಂಕರರ ದೇವಾಲಯದ ಮುಂದಿರುವ ಯಕ್ಷಿಮಂದಿರಕ್ಕೆ ಹೋಗಿ ಕುಳಿತು ಉಚ್ಚರಿಸಿದರೆ ಆ ವಿದ್ಯಾದೇವತೆಗಳೊದಗುವು" ವೆಂದು ಹೇಳಿದನು ಆ ಮಾತನ್ನು ಕೇಳಿ ಅರ್ಜುನನು ಅವನೊಡನೆ ಆ ಸ್ಥಳಕ್ಕೆ ಹೋಗಿ ದೇವರಿಗೆ ವಂದಿಸಿ ಆ ಯಕ್ಷಿದೇವಿಯ ಮಂದಿರಕ್ಕೆ ಹೊಕ್ಕು ಕುಳಿತು ಆ ಪವಿತ್ರಮಂತ್ರಗಳನ್ನು ಜಪಿಸಿದನು. ಆಗ ವೈರಿಭಂಜನಿ, ಲೋಕಮದವಿಧ್ವಂಸಿನಿ, ಮನೋರಥಸಿದ್ಧಿ ಮೊದಲಾದ ಮೂವತ್ತು ವಿದ್ಯಾದೇವತೆಗಳು ಬಂದು

ಅರ್ಜುನನ ಮುಂದೆ ನಿಂದು " ಏನಪ್ಪಣೆ? ಹೇಳು " ಎನಲು ಅವುಗಳನ್ನು ಅಂಗೀ ಕರಿಸಿ ಪೂಜಿಸುತ್ತಿರುವಾಗ ಅಲ್ಲಿಗೆ ಇಂದ್ರರಥನನ್ನು ಮೊದಲು ಕಟ್ಟಿಹಾಕಿ ಹೋ ಗಿದ್ದ ಅವನ ವೈರಿಯಾದ ಮೇಘರಥನು ತನ್ನ ಸೈನ್ಯಸಮೇತನಾಗಿ ಬರುತ್ತಿರುವು ದನ್ನು ಕಂಡು ಅರ್ಜುನನು " ಇವನಾರು? " ಎಂದು ಕೇಳಿದನು. ಅದಕ್ಕೆ ಇಂದ್ರ ರಥನು " ಮೊದಲು ನನ್ನನ್ನು ಇಲ್ಲಿ ಬಂಧಿಸಿ ಹೋಗಿ ಬಳಿಕ ನನಗೊದಗಿರುವ ಅವ ಸ್ಥೆಯನ್ನು ತನ್ನ ಹೆಂಡತಿಯರಿಗೆ ತೋರುವೆನೆಂದು ಅವರೊಡನೆ ಮೇಘರಥನು ಸೈನ್ಯ ಸಮೇತನಾಗಿ ಬರುತ್ತಿದ್ದಾನೆ " ಎಂದನು. ಆಗ ಮೇಘರಥನು ಆಕಾಶಮಾರ್ಗ ದಿಂದ ಇಳಿದುಬಂದು ಅಲ್ಲಿ ಬಿದ್ದಿದ್ದ ಬಿದಿರಹಿಂಡಲನ್ನೂ ತಾನು ಕಟ್ಟಿದ್ದ ನಾಗಪಾಶ ವನ್ನು ಬಿಡಿಸಿಕೊಂಡು ಸಂತೋಷದಿಂದಿದ್ದ ಇಂದ್ರರಥನನ್ನೂ ಬಾಲಸೂರ್ಯನಂತೆ ನಿಂದಿರ್ದ ಪಾರ್ಥನನ್ನೂ ನೋಡಿ ಆಶ್ಚರ್ಯಪಟ್ಟು ನಿಂದಿರಲು ಅರ್ಜುನನು ಅವ ನನ್ನು ನೋಡಿ " ಎಲೆ ಮೇಘರಥನೆ! ಮೋಸದಿಂದ ಈ ಖೇಚರನನ್ನು ನೀನು ಈ ಸ್ಥಳದಲ್ಲಿ ಕಟ್ಟಿಹಾಕಿ ಹೋಗಿ ತನ್ನ ಹೆಂಡತಿಯರಿಗೆ ತೋರುವೆನೆಂದು ಬರುವುದು ಕುಲಹೀನರ ಯೋಚನೆಯಲ್ಲವೇ? " ಎನಲು ಮೇಘರಥನು ರೇಗಿ ಧನುಸ್ಸನ್ನು ಹಿಡಿದು ಅರ್ಜುನನಿಗಿದಿರಾದನು. ಆಗ ಅವನ ಸೇನೆಯು ಅವನನ್ನು ಹಿಂದಿಕ್ಕಿ ಬಹು ಕೋಪದಿಂದ ಇದಿರಾಗಲು ಕಂಡು ವೀರಪಾರ್ಥನು ಆ ಸೈನ್ಯವನ್ನು ಯಮಪುರಕ್ಕೆ ಕಳುಹಿದನು. ಅದನ್ನು ಕಂಡು ಮೇಘರಥನು ತನ್ನ ಖಡ್ಗವನ್ನು ಬಳಪಿಸಿ ಅರ್ಜು ನನಿಗಿದಿರಾಗಲು ಅವನು ಒಂದು ಬಾಣದಿಂದ ಆ ಖೇಚರನ ಕೈಯ ಖಡ್ಗವನ್ನು ಕಡಿದುಹಾಕಿದನು. ಒಳಿಕ ಆ ಖೇಚರನು ವಿದ್ಯಾಬಲವನ್ನು ನಿರ್ಮಿಸಿ ಇದಿರಾ ಗಲು ಪಾರ್ಥನು ಒಂದೇ ಬಾಣದಿಂದ ಆ ಬಲವನ್ನು ಓಡಿಸಿದನು. ಅದನ್ನು ಕಂಡು ಮೇಘರಥನು ಬೆದರಿ ಆಕಾಶಕ್ಕೆ ನೆಗೆದು ಓಡಿಹೋಗುತ್ತಿರಲು ಕಂಡು ಇಂದ್ರರಥನು ತನಗಿದೇ ಸಮಯವೆಂದು ಬಗೆದು ಅವನನ್ನು ಹಿಂಬಾಲಿಸಿ ಓಟ್ಟಿ ಕೊಂಡು ಹೋಗಿ ಹಿಡಿದು ಪೆಡಗಟ್ಟಿ ಬಿಗಿದುತಂದು ಅರ್ಜುನನಿಗೊಪ್ಪಿಸಿದನು. ಅವನು ನೋಡಿ ವ್ಯಸನಪಟ್ಟು ಇಂದ್ರರಥನಿಂದ ಕಟ್ಟನ್ನು ಬಿಡಿಸಿ " ಮೇಘರಥನೆ! ಕೇಳು, ಈವಿನ ಮೊದಲುಗೊಂಡು ನೀನು ಇಂದ್ರರಥನಿಗೆ ಅಧೀನನಾಗಿರಜೇಕು " ಎಂದು ಹೇಳಿ ಕಳುಹಿದನು.

ಇತ್ತ ಇಂದ್ರರಥನು ಅರ್ಜುನನ್ನು ಕುರಿತು " ವೀರಪಾರ್ಥನೆ! ನನ್ನ ಪಟ್ಟ ಣಕ್ಕೆ ಬಿಜಯಂಗೈಯ್ವುದು " ಎಂದು ಪ್ರಾರ್ಥಿಸಿ ಪುಷ್ಪಕವಿಮಾನವನ್ನೇರಿಸಿ ಸಂತೋಷದಿಂದ ಕರೆದೊಯ್ದು ವಿನಯದಿಂದುಪಚರಿಸಿ ತನ್ನ ನೂರುಮಂದಿ ಮಕ್ಕ

ಳನ್ನು ಕರೆದು '' ನೀವು ಈತನಿಗೆ ಸೇನಕರಾಗಿರಿ '' ಎಂದು ನಿಯಮಿಸಲು ಅವರು ಪ್ರೀತಿಯಿಂದ ಅರ್ಜುನನಿಗೆ ಅನೇಕ ವಿದ್ಯೆಗಳನ್ನು ಸಾಧ್ಯಮಾಡಿಕೊಟ್ಟರು. ಅರ್ಜುನನು ಮೂರು ತಿಂಗಳವರೆಗೆ ಅಲ್ಲಿದ್ದು ಬಳಿಕ ಧರ್ಮರಾಜನ ಬಳಿಗೆ ಹೋಗಬೇಕೆಂದೆಳಸಿ ಆ ವಿಷಯವನ್ನು ಇಂದ್ರರಥನಿಗೆ ತಿಳುಹಲು ಅವನು ಉತ್ತಮವಸ್ತ್ರಾಭರಣಗಳಿಂದ ಪೂಜಿಸಿ ವಿಮಾನವನ್ನೇರಿಸಿ ತನ್ನ ಮಕ್ಕಳು ಸಮೇತನಾಗಿ ಆಕಾಶಮಾರ್ಗದಿಂದ ಅರ್ಜುನನನ್ನು ಬದರೀವನಕ್ಕೆ ಕರೆತಂದನು. ಅರ್ಜುನನು ಕೊಂತಿ ಧರ್ಮರಾಜ ಭೀಮರ ಕಾಲಿಗೆ ನಮಸ್ಕರಮಾಡಿ ತನ್ನಕಾಲಿಗೆ ನಮಸ್ಕಾರಮಾಡಿದ ನಕುಲ ಸಹದೇವರುಗಳಿಗೆ ಹರಸಿ ಕುಳಿತನು. ಬಳಿಕ ಇಂದ್ರರಥನು ಧರ್ಮರಾಜ ಭೀಮ ಮೊದಲಾದವರಿಗೆ ನಮಸ್ಕಾರಮಾಡಿ ಉಚಿತಾಸನದಲ್ಲಿ ಕುಳಿತು ತನಗೆ ಪಾರ್ಥನು ಮಾಡಿದ ಉಪಕಾರವನ್ನು ಹೇಳಿ ಬಳಿಕ ತನ್ನ ನೂರು ಮಂದಿ ಮಕ್ಕಳಿಂದ ಸೇವೆಮಾಡಿಸಿಕೊಂಡಿರಬೇಕೆಂದು ಪ್ರಾರ್ಥಿಸಿ ಮಕ್ಕಳನ್ನು ಅಲ್ಲಿರಿಸಿ ಆಕಾಶಮಾರ್ಗವಾಗಿ ಹೊರಟುಹೋಗುವಾಗ ಕೌರವನು ವನದಲ್ಲಿ ಕಂದಮೂಲಗಳನ್ನು ತಿಂದು ಜೀವಿಸಿಕೊಂಡಿರುವ ಪಾಂಡವರಿಗೆ ತನ್ನ ವೈಭವವನ್ನು ತೋರಿಸಬೇಕೆಂದು ಯೋಚಿಸಿ ಸೈನ್ಯಸಮೇತನಾಗಿ ಆ ಬದರೀವನಕ್ಕೆ ಬಂದು ಬೀಡ ಬಿಟ್ಟಿರಲು ಅದನ್ನು ಪ್ರಜ್ಞಪ್ತಿಯೆಂಬ ವಿದ್ಯೆಯಿಂದ ತಿಳಿದು ಇಂದ್ರರಥನು ರೇಗಿ ಇಳಿದುಬಂದು ಕೌರವನ ಸಭೆಯನ್ನು ಹೊಕ್ಕು ಅವನನ್ನೂ ದುಶ್ಶಾಸನನನ್ನೂ ಹಿಡಿದು ಕಟ್ಟಿದನು. ಆಗ ಕೌರವನ ಕಡೆಯ ವೀರರು ಆಯುಧಪಾಣಿಗಳಾಗಿ ಬರಲು ಅವರನ್ನು ವಿದ್ಯೆಯಿಂದ ಸ್ತಂಭಿಸಿ ಉಬ್ಬಸವಾಗುವಂತೆ ಕಟ್ಟಿ ಆಕಾಶಕ್ಕೆ ನೆಗೆದು ಕೌರವ ದುಶ್ಶಾಸನರನ್ನು ವಿಮಾನದಲ್ಲಿ ಹಾಕಿಕೊಂಡು ನಡೆದನು. ಆಗ ಕೌರವನ ಬೀಡಿನಲ್ಲಿ ಗಲಭೆಯೆದ್ದು ಅವನ ಪಟ್ಟಮಹಿಷಿಯರು ತಾವು ಕೆಟ್ಟೆವೆಂದು ಕೃಪ ಕರ್ಣ ವಿಕರ್ಣ ಶಕುನಿ ಶಲ್ಯ ಭೀಷ್ಮ ಸೈಂಧವ ಅಶ್ವತ್ಥಾಮ ಮೊದಲಾದ ವೀರಭಟರ ಮುಂದೆ ಹೊರಳಾಡುತ್ತಿರಲು ಅವರು '' ಸತ್ಯನಿಧಿಗಳಾದ ಪಾಂಡವರನ್ನು ಅಣಕಿಸಲು ಬಂದುದರಿಂದ ಕೌರವನಿಗೆ ಈ ಅದ್ಭುತವಾದ ಆಪತ್ತುಂಟಾಯ್ತು. ಇದನ್ನು ನಾವು ಹೋಗಲಾಡಿಸಲಾರೆವು ' ಎಂದು ಹೇಳಲು ಭಾನುಮತಿಯು ಕೇಳಿ ಇತರ ರಾಜಪತ್ನಿಯರೊಡನೆ ಧರ್ಮರಾಜನ ಬಳಿಗೆ ಹೋಗಿ ಆತನ ಮುಂದೆ ಬಿದ್ದು ಪುರುಷ ಭಿಕ್ಷೆಯನ್ನು ಕೊಡಬೇಕೆಂದು ಆತನ ಕಾಲನ್ನು ಹಿಡಿದು ಹೊರಳಾಡಿದಳು. ಧರ್ಮರಾಜನು '' ಇದೇನು ? '' ಎಂದು ಕೇಳಿದನು. ಅದಕ್ಕೆ ಭಾನುಮತಿಯು '' ಆಕಾಶದಿಂದೋರ್ವನು ಭಯಂಕರನಂತೆ ಇಳಿದುಬಂದು ' ಪಾಂಡವರ ವೈರಿಯು ನೀನಲ್ಲವೆ '

ಎಂದು ಕೋಪದಿಂದ ನನ್ನ ಪತಿಯನ್ನು ಆಕಾಶಕ್ಕೆ ತೆಗೆದುಕೊಂಡು ಹೋದನು. ಸಾವಕಾಶವಾಗದೆ ತರಿಸು ' ಎಂದು ಬಿನ್ನವಿಸಲು ಧರ್ಮರಾಜನು ದಯೆಯಿಂದ ಅರ್ಜುನನ ಮುಖವನ್ನು ನೋಡಿ " ನಿನ್ನಿಂತಸಿಂದ ಈರೀತಿಯಾಯ್ತು. ಇದನ್ನು ನೀನೇ ಪರಿಹರಿಸಬೇಕು " ಎಂದನು. ಆಗ ಭೀಮನು ಅಣ್ಣನನ್ನು ಕುರಿತು " ನಾವು ಕೊಲ್ಲಬೇಕೆಂಬ ವೈರಿಯು ಬೇರೆಯವರಿಂದ ಹತನಾದರೆ ಒಳ್ಳೆಯದಲ್ಲವೆ ?" ಎನಲು ಧರ್ಮರಾಜನು ಕೇಳಿ " ಹೆಂಗುಸರ ಮೊರೆಯನ್ನು ಕೇಳಿ ಸುಮ್ಮನಿರುವುದು ರಾಜರ ಧರ್ಮವಲ್ಲವಾದುದರಿಂದ ಅವನ ಕಷ್ಟವನ್ನು ಹೋಗಲಾಡಿಸಬೇಕು. ಯುದ್ಧದಲ್ಲಿ ಅವರು ನೂರುಮಂದಿಗಳು ; ನಾವು ಐದುಮಂದಿಗಳು. ಪರಬಾಧೆಯು ನಮಗೆ ಯಾರಿಗೆ ಒಂದಾದರೂ ನಾವು ನೂರೈದು ಮಂದಿಗಳು. ಆದುದರಿಂದ ಇದನ್ನು ಪರಿಹರಿಸುವುದು ಯುಕ್ತವಾಗಿದೆ " ಎಂದನು. ಆ ಮಾತನ್ನು ಕೇಳಿ ಅರ್ಜುನನು ಬಂದು ಬಾಣದಿಂದ ಪತ್ರವನ್ನು ಬರೆದು ಮತ್ತೊಂದು ಬಾಣಪ್ರಯೋಗದಿಂದ ಅದನ್ನು ಆ ಖೇಚರನ ಪುಷ್ಪಕವಿಮಾನಕ್ಕೆ ಕಳುಹಿದನು. ಆ ಬಾಣವು ತಾಗಿದೊಡನೆಯೇ ಆ ಪತ್ರವನ್ನು ನೋಡಿ ಇಂದ್ರರಥನು ಆಕಾಶದಿಂದ ಇಳಿದು ಪಾಂಡವರಿದ್ದ ಸ್ಥಳಕ್ಕೆ ಬಂದು ಧರ್ಮರಾಜನ ಕಾಲಿನ ಬುಡದಲ್ಲಿ ಬಂಧನಸಹಿತವಾಗಿ ಆ ಕೌರವ ದುಶ್ಶಾಸನರನ್ನು ಬಿಟ್ಟು ಆಕಾಶಮಾರ್ಗವಾಗಿ ಹೊರಟುಹೋದನು. ಇತ್ತ ಅರ್ಜುನನು ಕರುಣೆಯಿಂದ ಆ ಕಟ್ಟನ್ನು ಬಿಡಿಸಲು ಕೌರವನು ನಾಚಿಕೆಯಿಂದ ತಲೆಬಾಗಿಸಿದನು. ಆಗ ಅರ್ಜುನನು ಕಂಡು " ಎಲೈ ಕುರುಪತಿಯೆ ! ನಮ್ಮ ಪಟ್ಟಣಕ್ಕೆ ಬಿಜಯಂಗೈಯಿರಿ. ನಿಮಗೇಕೆ ಮನೋವ್ಯಥೆ ?" ಎನಲು ಹಲ್ಲು ಮುರಿದ ಆನೆಯಂತೆ ಕೌರವನು ಎದ್ದು ಹೋದನು. ಇತ್ತ ಪಾಂಡವರು ವನವಾಸದಲ್ಲಿರುತ್ತಿರಲು ಆಗ ಧರ್ಮರಾಜನ ಸತ್ಯಕ್ಕೆ ಮೆಚ್ಚಿ ಬಂದು ವನದೇವತೆಗಳು ಸಂತೋಷದಿಂದ ರತ್ನಾಭರಣ ವಸ್ತ್ರಗಳಿಂದರ್ಚಿಸಿ ಹರಸಿ ಸೇಸೆಯನ್ನಿಟ್ಟರು.

೨೫. ದ್ರೌಪದಿಯಂಕಳ್ದೊಯ್ದ ಸಂಧಿ

ಪಾಂಡವರು ಆ ವನದಲ್ಲಿ ಸುಖವಾಗಿರುತ್ತಿರಲು ಅರ್ಜುನನ ಪತ್ನಿಯಾದ ದ್ರೌಪದಿಗೆ ಗರ್ಭೋತ್ಪತ್ತಿಯಾಗಿ ಆಗ ಆಕೆಗೆ ಹೊಂದಾವರೆಗಳನ್ನು ನೋಡಬೇಕೆಂಬ ಇಚ್ಛೆಯುಂಟಾಯ್ತು. ಅದನ್ನು ಪತಿಗೆ ತಿಳಿಸಲು ಅವನು ಆಕೆಯನ್ನು ಪುಷ್ಪಕ ವಿಮಾನವನ್ನೇರಿಸಿ ಆಕಾಶಮಾರ್ಗದಲ್ಲಿ ಕನಕದ್ವೀಪಕ್ಕೆ ಕರೆದೊಯ್ದು ಫಲಭಾರದಿಂದ ಭೂಮಿಗೆ ಬಗ್ಗಿರ್ದ ಮಾಪಿನಮರದ ನೆರಳಿನಲ್ಲಿ ಆಕೆಯನ್ನು ಬಿಟ್ಟು ತಾನು ಹೊಂದಾವರೆಯ ಕೊಳದಕಡೆಗೆ ಹೋದನು. ಇತ್ತ ಧಾತಕೀಖಂಡದ್ವೀಪದ ಪೂರ್ವಮೇರು ವಿನ ಭರತಕ್ಷೇತ್ರದ ತ್ರಿಖಂಡಾಧಿಪತಿಯಾದ ಶಂಖನೆಂಬವನ ಭಾವಮೈದುನನೂ ವಿಜಯಾರ್ಧಪರ್ವತದ ರಥನೂಪುರಚಕ್ರವಾಳವೆಂಬ ಪಟ್ಟಣದ ದೊರೆಯೂ ಆದ ಪದ್ಮರಥನೆಂಬವನು ಸಂತೋಷದಿಂದ ವಿಮಾನಾರೂಢನಾಗಿ ಬರುತ್ತಿರಲು ದ್ರೌಪದಿಯು ಕಳಿತಿರ್ದ ಸ್ಥಳಕ್ಕೆ ನೇರವಾಗಿ ಆಕಾಶದಲ್ಲಿ ಅತನ ವಿಮಾನವು ಕೀಲಿಸಿ ನಿಂತಿತು. ತನ್ನ ವಿಮಾನವೇಕೆ ನಿಂತಿತೆಂದು ಕೆಳಕ್ಕಿಳಿದುಬಂದು ಬಹುಸುಂದರಿಯಾದ ಆಕೆಯಯ್ನು ನೋಡಿ ಕಾಮಾತುರನಾಗಿ ತನ್ನ ಅವಲೋಕಿನಿಯೆಂಬ ವಿದ್ಯಾದೇವತೆಯನ್ನು ಕರೆದು ದ್ರೌಪದಿಯನ್ನು ಕೊಂಡೊಯ್ವ ಉಪಾಯವನ್ನು ಹೇಳೆನಲು ಆ ದೇವತೆಯು " ಈಕೆಯು ಸಾಮಾನ್ಯನ ಸತಿಯಲ್ಲ. ಭರತತ್ರಿಖಂಡಾಧಿಪತಿಯಾದ ಕೃಷ್ಣನ ಮೈದುನನೂ ಧರ್ಮರಾಜ ಭೀಮಸೇನರ ತಮ್ಮನೂ ಜರಾಸಂದೇಹಿಯೂ ಮಹಾ ಬಲಶಾಲಿಯೂ ಆದ ಅರ್ಜುನನ ಹೆಂಡತಿ. ಈಕೆಯು ನಿನಗೆ ಸಾಧ್ಯಳಲ್ಲ. ಅಂದು ಅವಿಚಾರದಿಂದ ಸೀತೆಯನ್ನೊಯ್ದ ರಾವಣನು ನರಕಗಾಮಿಯಾದನೆಂಬುದನ್ನು ತಿಳಿದು ಪರಮಪತಿವ್ರತೆಯಾದ ಈಕೆಯನ್ನು ನೀನೊಯ್ವುದು ಉಚಿತವೇ ? ಬೇಡ " ಎನಲು ಕೇಳಿ ಪದ್ಮರಥನು " ನನಗೆ ಭಯವನ್ನು ತೋರಿಸಬೇಡ. ಶೀಘ್ರವಾಗಿ ಕೊಂಡೊಯ್ವ ಉಪಾಯವನ್ನು ಸುರು " ಎಂದನು. ಆ ಮಾತನ್ನು ಕೇಳಿ ದೇವತೆಯು " ಹೊಂದಾವರೆಯನ್ನು ತರಲು ಹೋದ ಪಾರ್ಥನ ರೂಪವನ್ನು ಧರಿಸಿ ಈಕೆಯನ್ನು ಕೊಂಡೊಯ್ವುದು " ಎನಲು ಶೀಘ್ರವಾಗಿ ಆ ರೂಪವನ್ನು ಧರಿಸಿ ಪದ್ಮರಥನು ಭೂತಲಕ್ಕಿಳಿದುಬಂದು ಕೃತ್ರಿಮಕಮಲವನ್ನು ಆಕೆಯ ಕೈಗಿತ್ತು ಕೈಹಿಡಿದು ಎತ್ತಿಕೊಂಡು ಆಕಾಶಕ್ಕೆ ಲಂಘಿಸಿ ತನ್ನ ವಿಮಾನದಲ್ಲಿ ಕುಳ್ಳಿರಿಸಿ

ಕೊಂಡೊಯ್ವಾಗ ಆತನ ಜೇಷ್ಟೆಯನ್ನು ನೋಡಿ ಸಂದೇಹಪಟ್ಟು ದ್ರೌಪದಿಯು ಪರ
ವಿದ್ಯಾಛೇದಿನಿಯೆಂಬ ತನ್ನ ಉಂಗುರವನ್ನು ಆತನಿಗೆ ಮುಟ್ಟಿಸಿದಳು. ಆಗ ಆತನ
ಕೃತ್ರಿಮರೂಪವು ಅಳಿದು ನಿಜರೂಪವು ಪ್ರಕಟವಾದುದು. ಅದನ್ನು ನೋಡಿ
ಆಕೆಯು ತನ್ನ ಕಣ್ಣುಗಳನ್ನು ಮುಚ್ಚಿದಳು. ಪದ್ಮರಥನು ಆಕೆಗೆ ಕಣ್ಣು ತೆರೆದು
ತನ್ನನ್ನು ನೋಡುವಂತೆ ಹೇಳಲು ಆಕೆಯು " ಎಲವೊ, ಪಾಳ್ಮನೆಗೆ ಪೊಗುವ
ನಾಯಂತೆ ನಾನೋರ್ವಳಿರ್ಪ ಸ್ಥಳಕ್ಕೆ ಬಂದು ನನ್ನನ್ನು ಕದ್ದೊಯ್ವುದು ಧೀರತನ
ವೇ ? " ಎಂದು ಆತನನ್ನು ಜರಿದು ಯಾರಾದರು ತನ್ನನ್ನು ಬಿಡಿಸುವ ವೀರರುಂಟೇ
ಯೆಂದು ಗೋಳಾಡಿದಳು. ಅದನ್ನು ಕೇಳಿ ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದ
ಕೆಲವು ಮಂದಿ ಖೇಚರರು ಆ ಪದ್ಮರಥನೊಡನೆ ಯುದ್ಧಮಾಡಿ ಸೋತುಹೋಗಲು
ಕಂಡು ದ್ರೌಪದಿಯು ತನಗಿನ್ನಾರೂ ಶರಣಿಲ್ಲವೆಂದು ಬಗೆದು " ಶರಣಾಗು
ವೀರಫಲ್ಗುನದೇವ " ಎಂದುಸುರಿ ಭೂತಳಕ್ಕುರುಳಿದಳು. ಆಗ ಪದ್ಮರಥನು
ಪರ್ಣಲಘುವೆಂಬ ವಿದ್ಯೆಯಿಂದ ಅಂತರಿಕ್ಷದಲ್ಲೇ ಆಕೆಯನ್ನು ಹಿಡಿಸಿ ತರಿಸಿ ವಿಮಾನ
ದಲ್ಲಿರಿಸಿ " ನೀನು ಸಮ್ಮತಿಸದೆ ನಾನು ನಿನ್ನ ಮೈ ಮುಟ್ಟುವುದಿಲ್ಲ, ಇನ್ನು ನೀನು
ಹೀಗೆ ಮಾಡಬೇಡ " ಎನಲು ಕೇಳಿ ಆಕೆಯು ' ನೀನೇನಾದರೂ ನನ್ನನ್ನು ಮುಟ್ಟಿ
ದರೆ ನಾನು ನನ್ನ ನಾಲಗೆಯನ್ನು ಕಿತ್ತುಕೊಳ್ಳುವೆನು. ಆ ಮೇಲೆ ನನ್ನ ಗಂಡನು
ನಿನ್ನ ಜೀವವನ್ನು ಹಿಂಡದೆ ಬಿಡನು " ಎಂದಳು. ಆ ಬಿರುನುಡಿಯನ್ನು ಕೇಳಿ ಆ
ದುಷ್ಟನು ಆಕೆಯ ಮೈ ಮುಟ್ಟದೆ ವಾಯುವೇಗದಿಂದ ತನ್ನ ನಗರಿಗೆ ಕರೆದೊಯ್ದು
ಮನೆಯಲ್ಲಿರಿಸಿ ತನ್ನ ಪಟ್ಟಣಕ್ಕೆ ಯಾರೂ ಬಾರದಂತೆ ವಿದ್ಯೆಯಿಂದ ವಜ್ರದ ಆವರಣ
ವನ್ನು ಮಾಡಿಸಿ ಅನೇಕ ದೇವತೆಗಳನ್ನು ಕಾವಲಿರಿಸಿ ಆ ದಿನ ತನ್ನ ಭಾವನಾದ
ಶಂಖಚಕ್ರವರ್ತಿಯೊಡನೆ ಅಲ್ಲಿಯ ತೀರ್ಥಂಕರರ ಸಮವಸರಣಕ್ಕೆ ಹೋಗಲು ಇತ್ತ
ದ್ರೌಪದಿಯು " ಪತಿಯ ಮುಖವನ್ನು ಕಾಣುವವರೆಗೆ ನನಗೆ ಉಪವಾಸ " ವೆಂದು
ಪ್ರತಿಜ್ಞೆಯನ್ನು ಮಾಡಿದಳು. ಆಗ ಆ ಮನೆಯ ದೇವತೆಗಳು ಅತ್ತವು. ಹಗಲಿನಲ್ಲಿ
ಉಳ್ಳಾಪಾತವಾಯ್ತು. ಅದನ್ನು ಕಂಡು ಆ ದುಷ್ಟ ಪದ್ಮರಥನ ತಂದೆತಾಯಿ
ಗಳು ಹೆದರಿ ದ್ರೌಪದಿಯ ಒಳಿಗೆ ಬಂದು " ಶ್ರೇಷ್ಠವಾದ ಸಡತಿಯುಳ್ಳ ಪತಿವ್ರ
ತೆಯೇ ! ನೀನು ಮನಸ್ಸಿನಲ್ಲಿ ಚಿಂತಿಸಬೇಡ. ನಿನ್ನ ಪತಿಯ ಒಳಿಗೆ ನಿನ್ನನ್ನು ಕರೆದೊ
ಯ್ಯುವೆವು. ಈ ಮಾತನ್ನು ನಂಬು " ಎಂದು ಕೈಮುಗಿದು ಪ್ರಾರ್ಥಿಸುವಾಗ
ಅತ್ತ ಕನಕದ್ವೀಪದಲ್ಲಿ ಪಾರ್ಥನು ಹೊಂದಾವರೆಯನ್ನು ತಂದು ದ್ರೌಪದಿಯನ್ನು
ಕಾಣದೆ ಚಿಂತಾಕ್ರಾಂತನಾಗಿ ಲತಾಮಂಟಪ ತಾವರೆಗೊಳ ಮೊದಲಾದ ಸ್ಥಳಗ

ಳಲ್ಲಿ ಹುಡುಕಿ ಕಾಣದೆ ಕಳವಳಿಸಿ ಸ್ವಲ್ಪ ಮೂರ್ಛೆಗೊಂಡು ತಾನೇ ಎದ್ದು " ನನ್ನ ಪ್ರಿಯಕಾಂತೆಯನ್ನು ಕೊಂಡೊಯ್ದವನು ಎಂಥವನಾಗಿದ್ದರೂ ಎಲ್ಲಿದ್ದರೂ ಅವನ ತಲೆಯನ್ನು ಚೆಂಡಾಡಿ ನನ್ನ ಪ್ರಾಣೇಶ್ವರಿಯನ್ನು ತರದೆ ಬಿಡುವೆನೇ " ಎನುತ ಬಹುಕೋಪಾರೂಢನಾಗಿರುವಷ್ಟರಲ್ಲಿ ಹಿಂದೆ ಪದ್ಮರಥನು ದ್ರೌಪದಿಯನ್ನು ಕರೆದೊಯ್ವಾಗ ಅತನೊಡನೆ ಯುದ್ಧಮಾಡಿ ಸೋತಿದ್ದ ಓರ್ವ ಖೇಚರನು ವೀರಪಾರ್ಥನ ಬಳಿಗೆ ಹೋಗಿ ದ್ರೌಪದಿಯನ್ನು ಪದ್ಮರಥನು ಕೊಂಡೊಯ್ದನೆಂದು ಸುರಿದನು. ಅದನ್ನು ಕೇಳಿ ಪಾರ್ಥನು ತನ್ನ ವಿದ್ಯೆಯಿಂದ ದ್ರೌಪದಿಯಿರುವ ಸ್ಥಳವನ್ನು ತಿಳಿದು ಧರ್ಮರಾಜನ ಒಳಿಗೆ ಹೋಗಿ ಆ ಸಮಾಚಾರವನ್ನು ತಿಳುಹಲು ಭೀಮನು ರೇಗಿದನು. ಬಳಿಕ ಭೀಮ ಪಾರ್ಥರೀರ್ವರೂ ಅಣ್ಣನ ಕಾಲಿಗೆ ನಮಸ್ಕಾರಮಾಡಿ ಬೀಳ್ಕೊಂಡು ವಿಮಾನವನ್ನೇರಿ ದ್ವಾರಾವತಿಗೆ ಹೋಗಿ ದ್ರೌಪದಿಯನ್ನು ಆ ದುಷ್ಟನು ಕಳ್ಕೊಂಡ್ಯದ ವಾರ್ತೆಯನ್ನು ಕೃಷ್ಣಬಲರಾಮರಿಗುಸರಲು ಕೇಳಿ ಕಡುಮುಳಿದು ಅವರು ಭೀಮ ಪಾರ್ಥರೊಡನೆ ವಿಮಾನವನ್ನೇರಿ ಆಕಾಶಮಾರ್ಗವಾಗಿ ಹೋಗಿ ಲವಣಸಮುದ್ರವನ್ನು ದಾಂಟಿ ಆ ರಥನೂಪುರಚಕ್ರವಾಳಕ್ಕೆ ಹೋಗಿ ಕೃಷ್ಣಬಲರಾಮಪಾರ್ಥರು ಪಟ್ಟಣದ ಹೊರಗಿದ್ದು ಭೀಮನನ್ನು ಪಟ್ಟಣದೊಳಕ್ಕೆ ಕಳುಹಿದರು. ಅವನು ಗದೆಯನ್ನು ಹಿಡಿದು ಅತಿಕೋಪದಿಂದ ಹೋಗಿ ಆ ಪಟ್ಟಣಕ್ಕೆ ಹೊದಿಸಿರ್ದ ಪಜ್ರದ ಆವರಣವನ್ನು ಗದೆಯಿಂದ ಹೊಡೆದುರುಳಿಸಿದನು. ಗದೆಯ ಶಬ್ದವು ಸಿಡಿಲಿನಂತೆ ದಶದಿಕ್ಕುಗಳನ್ನು ವ್ಯಾಪಿಸಿತು. ಆ ಪಜ್ರದ ಆವರಣವನ್ನು ಕಾಯುತ್ತಿದ್ದ ದೇವತೆಗಳು ಬೆದರಿ ಓಡಿದುವು, ಭೀಮನು ಅತಳಮುಂಡಿಗೆಗಳನ್ನು ಕಿತ್ತು ತನಗೆ ತಡೆಯಲು ಬಂದ ದ್ವಾರಪಾಲಕರಿಗೆ ಹೊಡೆದು ಕಾಲಯಮನಂತೆ ನಗರವನ್ನು ಹೊಕ್ಕು " ಯಾದೂ ತಿಳಿಯದಂತೆ ನಿಮ್ಮ ರಾಜಭವನವನ್ನು ಹೊಗುವವನು ನಾನಲ್ಲ. ಯಾರಾದರು ಶೂರರಿದ್ದರೆ ಮುಂದೆಬನ್ನಿ " ಎನುತ ಭೀಮನು ನಡೆವಾಗ " ರಾಜನಿಲ್ಲದಿರುವಾಗ ಇವನು ಹೊಕ್ಕು ಹೊರಟರೆ ತಮಗೆ ಕೂರತೆಯಾಗುವುದು " ಎಂದು ಪುರಪರಿಜನರು ಭೀಮಸೇನನನ್ನು ಮುತ್ತಿದರು. ಅವರು ಹತ್ತಿರಕ್ಕೆ ಬರುವವರೆಗೆ ಸುಮ್ಮನಿರ್ದು ಒಳಿಕ ತನ್ನ ಗದೆಯಿಂದ ಹೊಡೆದು ಕೆಲವರನ್ನೂ ಹಿಸುಕಿ ಕೆಲವರನ್ನೂ ಈಡಾಡಿ ಕೆಲಪರನ್ನೂ ಅಪ್ಪಳಿಸಿ ಕೆಲವರನ್ನೂ ಕೊಂದನು. ಬಳಿಕ ಆನೆ ಕುದುರೆ ರಥ ಮೊದಲಾದ ಸೇನೆಯೆಲ್ಲ ಬಂದು ಮುಸುಕಲು ಅದನ್ನು ಲಕ್ಷಿಸದೆ ರಥದಿಂದ ರಥವನ್ನೂ ಕುದುರೆಯಿಂದ ಕುದುರೆಯನ್ನೂ ಆನೆಯಿಂದ ಆನೆಯನ್ನೂ ಕ್ರೂರ ಪದಾತಿಯಿಂದ ಪದಾತಿಯನ್ನೂ ಹೊಡೆಯುತ್ತ ಆ

ಸೇನೆಯನ್ನು ನಾಶಮಾಡಿ, ಜಿಂಕೆಗಳ ಹಿಂಡಿಗೆ ಹೆಬ್ಬುಲಿಯು ಹೊಗುವಂತೆ, ಉಲ್ಲಾ
ಸದಿಂದ ರಾಜಭವನವನ್ನು ಹೊಕ್ಕನು. ಆಗ ಬಾಗಿಲನ್ನು ಕಾಯುತ್ತಿದ್ದ ಆಳುಗಳು
ಬಾಗಿಲನ್ನು ಹಾಕಲು ವಾಯುಪುತ್ರನು ಅವರನ್ನು ನೆಲಕ್ಕಿಕ್ಕಿ ಬಾಗಿಲನ್ನು ಒದ್ದು
ಕೆಡಹಿ ಅರಮನೆಯೊಳಕ್ಕೆ ಹೊಕ್ಕು "ದ್ರೌಪದಿಯೆಲ್ಲಿರುವಳು ತೋರಿಸಿ, ತೋರಿ
ಸದಿದ್ದರೆ ಕೊಂದುಬಿಡುತ್ತೇನೆ" ಎಂದು ಎಲ್ಲರನ್ನೂ ಅಂಜಿಸುತ್ತ ಹೋಗಿ ದ್ರೌಪ
ದಿಯನ್ನು ಕಂಡು "ಅಕ್ಕ ಬೇಗ ಏಳು ಏಳು" ಎನಲು ಆಕೆಯು ತ್ವರೆಯಾಗಿ ಹೊರಟು
ಸಂಶಯದಿಂದ ಪರವಿದ್ಯಾಛೇದಿನಿಯೆಂಬ ತನ್ನ ಕೈಯುಂಗುರವನ್ನು ಆತನಿಗೆ
ಮುಟ್ಟಿಸಿದಳು. ಆಗ ಆತನ ರೂಪವು ಬದಲಾಗದಿರಲು ಮಾಯೆಯಲ್ಲವೆಂದು
ಒಗೆದು ಆತನ ಹಿಂದೆ ಬಂದಳು. ಬಾಗಿಲ ಕಾಯುವ ಭಟರು ಹೋರಾಡಲಾರದೆ
ಪಕ್ಕಕ್ಕೆ ತೊಲಗಿದರು. ಭೀಮನು ರಾಜಬೀದಿಗೆ ಬಂದು ತನಗಿದಿರಾದ ವೀರರನ್ನೆಲ್ಲ ಗದೆ
ಯಿಂದ ಹೊಡೆದುರುಳಿಸಲು ಕಂಡು ಭೀತಿಯಿಂದ ಪಟ್ಟಣಿಗರು "ಇಪ್ಪತ್ತೇನು ಕಡೆ
ಗಾಲದ ರುದ್ರನೋ, ಭೈರವನೋ, ದಂಡಧರನೋ, ನಾವು ಇಂತಹ ವೀರನನ್ನು
ಕಂಡಿಲ್ಲ" ಎನುತ್ತಿದ್ದರು. ಆಗ ಭೀಮನು "ಎಲೈ ಪಟ್ಟಣಿಗರೆ! ಪರಸ್ತ್ರೀಯನ್ನು
ಕದ್ದ ಆ ದುಷ್ಟನನ್ನು ತೋರಿಸಿದರೆ ಅವನನ್ನು ನೆಲಕ್ಕಿಕ್ಕುವೆನು" ಎಂದು ಗದೆಯನ್ನು
ತೂಗುತ್ತ ನಾಮನಿಯನ್ನು ಮುಂದೆ ನಡೆಯಿಸಿಕೊಂಡು ಕೃಷ್ಣಬಲರಾಮಫಲ್ಗುನ
ರಿದ್ದಲ್ಲಿಗೆ ಹೋಗಿ ಸೇರಿದನು. ದ್ರೌಪದಿಯು ಬಲಗೋವಿಂದರ ಕಾಲುಗಳಿಗೆರಗಿ
ಆಶೀರ್ವಾದವನ್ನು ಪಡೆದು ತನ್ನ ಪತಿಯ ಎಡದ ಭಾಗದಲ್ಲಿ ನಿಂತಳು.

ಜಂಬೂದ್ವೀಪದಿಂದ ತಾವು ಬಂದ ವಾರ್ತೆಯನ್ನು ತಿಳುಹಬೇಕೆಂದು ಕೃಷ್ಣ
ನು ತನ್ನ ಶಂಖವನ್ನೂದಲು ಆಕಾಶಭೂಮಿಗಳದುರಿದುವು. ಆಗ ಸಮವಸರಣ
ಮಂಟಪದಲ್ಲಿದ್ದ ಶಂಖಜಕ್ಕಿಯು ಇದೇನೆಂದು ಗಣಧರಮಹಾಮುನಿಗಳನ್ನು ಕೇಳ
ಲು ಅವರು ಅವಧಿಜ್ಞಾನದಿಂದ ದ್ರೌಪದಿಯನ್ನು ಅವನ ಮೈದುನನಾದ ಪದ್ಮರಥನು
ತಂದಿದ್ದ ವಿವರವನ್ನೂ ಆಕೆಯನ್ನು ಕರೆದುಕೊಂಡುಹೋಗುವುದಕ್ಕೆ ಕೃಷ್ಣಬಲರಾಮ
ಭೀಮಾರ್ಜುನರು ಬಂದು ಆಕೆಯನ್ನು ತಂದು ಕೃಷ್ಣನು ಶಂಖನಾದವನ್ನು ಮಾಡಿದ
ನೆಂಬ ವಿಷಯವನ್ನೂ ತಿಳುಹಿದರು. ಆ ಮಾತನ್ನು ಕೇಳಿ ಶಂಖಜಕ್ಕಿಯು ತೀರ್ಥಂಕರ
ರಿಗೆ ವಂದಿಸಿ ಅಲ್ಲಿಂದ ಹೊರಟುಬಂದು ಕೋಪದಿಂದ ತನ್ನ ದೊಡ್ಡ ಸೈನ್ಯವನ್ನು
ಅನುಗೊಳಿಸಿ ಯುದ್ಧಕ್ಕೆ ನಡೆವ ಸಮಯದಲ್ಲಿ ಅವನ ಮಂತ್ರಿಗಳು ಅವನಿಗೆ ವಿವೇಕ
ವನ್ನು ಹೇಳಿ ಯುದ್ಧಸನ್ನಾಹವನ್ನು ನಿಲ್ಲಿಸಿ ತಾವು ಊರಮುಂದಿದ್ದ ಆ ರಾಮ
ಕೇಶವ ಭೀಮಪಾರ್ಥರ ಬಳಿಗೆ ಬಂದು ಅವರುಗಳಿಗೆ ನಮಸ್ಕರಿಸಿ ಕೈಮುಗಿದು

ಸಮಾಧಾನಕರವಾದ ಮಾತನ್ನಾಡಲು ಅಗಅವರು ತಮ್ಮ ಪುಷ್ಪಕವಿಮಾನವನ್ನೇರಿ ದ್ರೌಪದಿಯನ್ನು ಕರೆದುಕೊಂಡು ಹಿಂದಿರುಗಿ ಬದರೀವನಕ್ಕೆ ಹೋಗಿ ಭೀಮಾರ್ಜುನರನ್ನೂ ಪಾಂಚಾಲಿಯನ್ನೂ ಅಲ್ಲಿ ಬಿಟ್ಟು ಕೃಷ್ಣಬಲರಾಮರು ಕೊಂತಿಯನ್ನು ಕರೆದುಕೊಂಡು ದ್ವಾರಾವತಿಗೆ ಹೋದರು.

ಇತ್ತ ಪಾಂಡವರು, ತಮ್ಮ ರಾಜಧಾನಿಯಲ್ಲಿ ಬಂಧುಗಳ ಮಧ್ಯದಲ್ಲಿ ಸುಖದಿಂದಿರುವಂತೆ, ೮ ವಸದಲ್ಲಿ ಹನ್ನೆರಡು ವರ್ಷ ಸುಖವಾಗಿದ್ದು ಬಳಿಕ ದ್ರೌಪದಿಯನ್ನು ದ್ರುಪದರಾಜನ ಬಳಿಗೆ ಕಳುಹಿ ತಾವು ಅಲ್ಲಿಂದ ಹೊರಟು ಶ್ರೀಪರ್ವತಕ್ಕೆ ಹೋಗಿ ಅಲ್ಲಿ ಕೆಲವು ದಿನಗಳವರೆಗಿದ್ದು ಅಲ್ಲಿಂದ ಕಾಂಚೀಪುರಕ್ಕೆ ಹೋಗಿ ಕೆಲವು ದಿನವಿದ್ದು ಅಲ್ಲಿಂದ ಕರ್ನಾಟಕದೇಶಕ್ಕೆ ಬಂದು ವಿರಾಟನಗರದ ಬಳಿಯಲ್ಲಿರುವ ದೊಡ್ಡ ಕಾಡಿನ ಮಧ್ಯದಲ್ಲಿದ್ದೊಂದು ದೊಡ್ಡ ಬನ್ನಿಯ ಮರದಲ್ಲಿ ತಮ್ಮ ದಿವ್ಯಾಸ್ತ್ರಗಳನ್ನಿಟ್ಟು ದೇವತೆಗಳನ್ನು ಕಾವಲಿರಿಸಿ ರೂಪಪರಾವರ್ತನವೆಂಬ ವಿದ್ಯೆಯಿಂದ ತಮ್ಮ ರೂಪವನ್ನು ಬದಲಾಯಿಸಿ ಧರ್ಮರಾಜನು ಬ್ರಾಹ್ಮಣರೂಪವನ್ನೂ ಭೀಮನು ಅಡಿಗೆಯವನ ಮತ್ತು ಜಟ್ಟಿಯ ರೂಪವನ್ನೂ ಅರ್ಜುನನು ನಟುವನ ರೂಪವನ್ನೂ ನಕುಲನು ಕ ದುರೆಯ ಶಿಕ್ಷಕನ ರೂಪವನ್ನೂ ಸಹದೇವನು ಗೋವುಗಳ ಹಟ್ಟಿಯ ಅಧ್ಯಕ್ಷನ ರೂಪವನ್ನೂ ಧರಿಸಿ ವಿರಾಟನ ಬಳಿಗೆ ಹೋಗಿ ತಂತಮ್ಮ ವಿಷಯವನ್ನು ಹೇಳಲು ಅವನು ಮೆಚ್ಚಿ ಅವರನ್ನು ಆಯಾ ಕೆಲಸಕ್ಕೆ ನೇಮಿಸಿದನು. ಒಂದುದಿನ ವಿಷಮಖಿರ್ಸರನೆಂಬೋರ್ವ ದೊಡ್ಡ ಜಟ್ಟಿಯು ಬಂದು ಕೀಚಕನ ಮೂಲಕವಾಗಿ ವಿರಾಟನನ್ನು ಕಂಡು ಮಲ್ಲಯುದ್ಧದಲ್ಲಿ ತನಗಿದಿರಾಗತಕ್ಕ ಜಟ್ಟಿಯನ್ನು ತಂದು ನಿಲಿಸೆಂದನು. ಆಗ ಬಾಣಸಿಗನ ವೇಷದಲ್ಲಿದ್ದ ಭೀಮಸೇನನು " ಎಲವೋ ವಿಷಮಖರ್ಸರನೆ! ನಿನ್ನ ಶಕ್ತಿಯನ್ನು ನನ್ನಲ್ಲಿ ತೋರು " ಎನಲು ಕೇಳಿ ದೊರೆಯು ಸಂತೋಷದಿಂದ ಮಲ್ಲರಂಗವನ್ನು ಮಾಡಿಸಿ ಕುಳ್ಳಿರಲು ಭೀಮಸೇನನು ತನಗಿದಿರಾದ ಜಗಜಟ್ಟಿಯನ್ನು ಕಂಡು ಕೋಪದಿಂದ ಹಿಡಿದು ನೆಲಕ್ಕಪ್ಪಳಿಸಿದನು. ಅದನ್ನು ಕಂಡು ವಿರಾಟನ ಮೈದುನನಾದ ಕೀಚಕನು ಕೋಪಾಹಂಕಾರಗಳಿಂದ ಭೀಮನಿಗಿದಿರಾಗಿ ಖಡ್ಗವನ್ನು ಬೀರುತ್ತ ಬರಲು ಭೀಮನು ಅವನ ಖಡ್ಗವನ್ನು ಎಳೆದು ಕಾಲನ್ನು ಹಿಡಿದು ನೆಲಕ್ಕಪ್ಪಳಿಸಿ ಕೊಂದನು. ಅದನ್ನು ಕಂಡು ರಾಜನ ಸಚಿವರು ಆಶ್ಚರ್ಯಪಟ್ಟರು. ಆಗ ವಿರಾಟನು " ಎಲ್ಲೆ ಬಾಣಸಿಗನೆ! ಕೀಚಕನು ಜಟ್ಟಿಯ ಸಲುವಾಗಿ ತನ್ನಿಂದತಾನೇ ಅಳಿದುದಕ್ಕೆ ನೀನು ಚಿಂತಿಸಬೇಡ " ಎಂದು ಮನ್ನಿಸಿ ಕಳುಹಿದನು.

ಇತ್ತ ಕೌರವನಿಗೆ ಶಕುನಿಯು "ರಾಜನೆ! ಪಾಂಡವರಿಗೆ ಹನ್ನೆರಡು ವರುಷ ವನವಾಸದ ಅವಧಿಯು ತೀರಿತು. ಅವರ ಅಜ್ಞಾತವಾಸದ ಸ್ಥಾನವನ್ನು ತಿಳಿಯದೆ ಹೀಗೆ ಅಲಕ್ಷ್ಯವಾಗಿರುವುದುಂಟೇ?" ಎನಲು ಆ ಮಾತನ್ನು ಕೇಳಿ ಭೀಷ್ಮರು ಕೌರವನನ್ನು ಕುರಿತು "ಎಲೈ ಮಗನೆ! ಕೇಳು, ಪಾಂಡವರ ವನವಾಸದ ಅವಧಿಯು ತೀರಿತು. ಅವರನ್ನು ಕರೆಸಿ ಅವರ ನಾಡುಬೀಡುಗಳನ್ನು ಅವರಿಗೆ ಕೊಡುವುದು ನಿನಗೆ ಉಚಿತವಾಗಿದೆ. ಹಾಗೆ ಮಾಡದಿದ್ದರೆ ಕೆಲಸವು ಕೆಡುವುದು" ಎನಲು ಕೇಳಿ ಕೌರವನು ಕೋಪಗೊಂಡು ಭೀಷ್ಮರನ್ನು ಕುರಿತು "ನೀವು ಯಾರ ಗೆಲುವನ್ನು ಹಾರೈಸುತ್ತಿರುವಿರಿ? ನನ್ನ ಈ ಕರ್ಣನಿಗೆ ಯುದ್ಧದಲ್ಲಿ ದೇವದಾನವಪನ್ನಗರು ಇದಿರಾಗಬಲ್ಲರೇ? ನನ್ನ ದೊಡ್ಡ ಸೈನ್ಯದಲ್ಲಿ ತ್ರಿಮೂರ್ತಿಗಳು ಬಂದರೂ ಇದಿರಾಗಬಲ್ಲ ಅತಿರಥ ಮಹಾರಥರಿರುವಾಗ ನನಗೇಕೆ ಯೋಚನೆ?" ಎಂದು ತನ್ನ ಗರ್ವವನ್ನು ಮಾತನಾಡಲು ಭೀಷ್ಮರು "ಮುಂದಿನ ಕಾರ್ಯವನ್ನು ನೀನೇ ನೋಡಿಕೊಳ್ಳು" ಎಂದು ಹೇಳಿ ಹೊರಟುಹೋದರು.

ತರುವಾಯ ಕೌರವನು ಗೂಢಚಾರರನ್ನು ಕರೆಸಿ ಪಾಂಡವರು ಎಲ್ಲಿ ಅಜ್ಞಾತವಾಸದಲ್ಲಿರುತ್ತಾರೆಂಬುದನ್ನು ತಿಳಿದುಕೊಂಡು ಬರುವಂತೆ ಹೇಳಿಕಳುಹಲು ಅವರು ಹುಡುಕಿಕೊಂಡು ವಿರಾಟನಗರಕ್ಕೆ ಹೋಗಿ ಅಲ್ಲಿ ಪಾಂಡವರಿರುವುದನ್ನು ತಿಳಿದುಕೊಂಡು ಹೋಗಿ ಕೌರವನಿಗೆ ಹೇಳಿದರು. ಆಗ ಅವನು ಶಕುನಿಯನ್ನು ಕರೆಸಿ ಪಾಂಡವರು ವಿರಾಟನಗರದಲ್ಲಿರುತ್ತಾರೆಂಬ ಸಂಶಯವನ್ನು ನಿವೃತ್ತಿಮಾಡಿಕೊಳ್ಳುವ ಉಪಾಯವಾವುದೆಂದು ಕೇಳಲು ಅವನು "ಉಪಾಯವು ಬೇರೆಯಿಲ್ಲ. ವಿರಾಟನಗರದ ಹೊರಗೆ ಮೇಯುತ್ತಿರ್ಪ ಗೋವುಗಳನ್ನು ನಾವು ಹಿಡಿದರೆ ಪಾಂಡವರು ಸೈರಿಸುವುದಿಲ್ಲ. ಈ ರೀತಿಯಿಂದಲ್ಲದೆ ಅವರನ್ನು ಕಾಣಲಾಗುವುದಿಲ್ಲ" ಎಂದನು. ಆ ಮಾತನ್ನು ಕೇಳಿ ಕೌರವನು ತನ್ನ ಸೈನ್ಯವನ್ನೆಲ್ಲ ಒರಿಸಿ ಅದನ್ನೂ ತ್ರಿಗರ್ತದೇಶದ ಸುಶರ್ಮನ ಹದಿನಾಲ್ಕು ಸಾವಿರ ರಥಿಕರನ್ನು ಬರಮಾಡಿ ಅವರನ್ನೂ ಕಳುಹಲು ಆ ಸೈನ್ಯವೆಲ್ಲ ಹೋಗಿ ವಿರಾಟನಗರದ ದಕ್ಷಿಣದಿಕ್ಕಿನಲ್ಲಿ ಮೇಯುತ್ತಿದ್ದ ಗೋವುಗಳನ್ನೆಲ್ಲ ಅಪಹರಿಸಿತು. ಆ ವಾರ್ತೆಯನ್ನು ಕೇಳಿ ವಿರಾಟನು ರೇಗಿ ಉತ್ತರಕುಮಾರನನ್ನು ಷಟ್ಚಣಕ್ಕೆ ಕಾವಲಿಕ್ಕೆ ತಾನು ಚತುರಂಗಸೈನ್ಯಸಮೇತನಾಗಿ ಗೋವುಗಳನ್ನು ಬಿಡಿಸಿಕೊಂಡು ಬರಲು ಹೊರಟನು. ಆಗ ಧರ್ಮರಾಜನು ತಮ್ಮಂದಿರ ಬಳಿಗೆ ಹೋಗಿ "ಕೌರವನು ಕೊಟ್ಟ ಅವಧಿಯು ಇಂದಿಗೆ ತೀರಿತು. ನಾವಿರುವುದನ್ನು ಕಾಣಬೇಕೆಂದು ಅವನ ಸೈನಿಕರು ಈ ಊರಿನ ಗೋವುಗಳನ್ನೆಲ್ಲ ಅಪಹರಿ

ಸಿದರು. ನಾವು ತಿಳಿದೂ ಸುಮ್ಮನಿದ್ದರೆ ದೋಷಬರುವುದು '' ಎಂದು ಹೇಳಿ ಪಾರ್ಥನನ್ನು ಅಲ್ಲಿ ಬಿಟ್ಟು ಭೀಮನೊಡನೆ ತಾನು ವಿರಾಟನ ಬಳಿಗೆ ಬಂದು ಅವನ ಸೈನ್ಯವನ್ನು ಹಿಂದೆಮಾಡಿ ಅನಿಲಸುತನು ಗದೆಯನ್ನಾಂತು ಕುರುಸೈನ್ಯವನ್ನು ಹೊಕ್ಕು ಅನೇಕರನ್ನು ಕೊಂದು ಸುಶರ್ಮನನ್ನು ಪಿಡಗಟ್ಟಿ ತಂದು ಧರ್ಮರಾಜನಿಗೊಪ್ಪಿಸಿದನು. ಅಳಿದುಳಿದ ಕುರುಸೇನೆಯೆಲ್ಲ ಹೆದರಿ ಓಡಿತು. ಧರ್ಮರಾಜನು ಸುಶರ್ಮನ ಬಂಧನವನ್ನು ಬಿಡಿಸಿ ಕಳುಹಲು ವಿರಾಟನು ಸಂತುಷ್ಟನಾಗಿ ಹಿಂದಿರುಗಿದನು.

ಇತ್ತ ಕುರುಸೇನೆಯು ಪುನಃ ಅಪರಿಮಿತವಾಗಿ ಸೇರಿ ಮರುದಿನ ಆ ಮತ್ಸ್ಯಪುರದ ಎಡಗಡೆಯಲ್ಲಿ ಮೇಯುತ್ತಿರ್ದ ಗೋವುಗಳನ್ನಪಹರಿಸಲು ಆ ವಾರ್ತೆಯನ್ನು ಓರ್ವ ಗೋಪಾಲಕನು ಬಂದು ವಿರಾಟನಿಗೆ ತಿಳುಹಿದನು. ಅದನ್ನು ಕೇಳಿ ವಿರಾಟನು ಬಹು ಕೋಪದಿಂದ ಗದ್ದುಗೆಯನ್ನು ಹಾಯ್ದು ಏಳುವ ಸಮಯದಲ್ಲಿ ಉತ್ತರನು ಎದ್ದು ಕೈಮುಗಿದು ತಾನು ಹೋಗಿ ಗೋವುಗಳನ್ನು ಬಿಡಿಸಿಕೊಂಡು ಬರುವುದಾಗಿ ಹೇಳಿ ಪೌರುಷದಿಂದ ಶಪಥವನ್ನು ಮಾಡಿ ಯುದ್ಧಸನ್ನದ್ಧನಾಗಿ ಪಟ್ಟಣದಿಂದ ಹೊರಟನು. ಆಗ ಪಾಂಡವರು ತಮ್ಮ ಆಯುಧಗಳನ್ನು ಆ ಬನ್ನಿಯಮರದಿಂದ ತಂದು ಉತ್ತರಕುಮಾರನೊಡನೆ ಹೋದರು. ಉತ್ತರಕುಮಾರನು ಸಮುದ್ರದಂತೆ ಘೂರ್ಣಿಸುತ್ತಿದ್ದ ಆ ಕುರುಸೇನೆಯನ್ನು ನೋಡಿ ತಲೆಯನ್ನಳ್ಳಾಡಿಸಿ ದಿಗಿಲುಬಿದ್ದು ನಿಂದಿರಲು ಕಂಡು ಭೀಮಾರ್ಜುನರು ಒಂದೊಂದು ರಥವನ್ನೇರಿ ಕುರುಬಲಕ್ಕೆದಿರಾಗಿ, ಆ ಕಲಿಪಾರ್ಥನು ಬರಸಿಡಿಲಂತೆ ಧನುಷ್ಟಂಕಾರವನ್ನು ಮಾಡಿ ಒಂದೊಂದು ಬಾಣದಿಂದ ಅನೇಕಾನೇಕ ಗಜ ರಥ ತುರಗ ಪದಾತಿಗಳನ್ನು ಸಂಹರಿಸಿದನು. ಭೀಮನು ಪ್ರಳಯಕಾಲದ ಬರಸಿಡಿಲಂತೆ ತನ್ನ ಗದೆಯನ್ನು ಘುಡುಘುಡಿಸುತ ಹೊಡೆದು ಅನೇಕ ಸೈನ್ಯವನ್ನು ಭೂಮಿಗುರುಳಿಸಿದನು. ಭೀಮಾರ್ಜುನರ ಹೊಡೆತಕ್ಕೆದಿರಾಗಲಾರದೆ ಅಳಿದುಳಿದ ಕುರುಸೈನ್ಯವೆಲ್ಲ ಗುಂಪುಗುಂಪಾಗಿ ಓಡಿ ಹೋಯ್ತು. ಆಗ ಆ ವೀರಾಗ್ರಣಿಗಳು ಗೋವುಗಳನ್ನು ಹಿಂದಿರುಗಿಸಿದರು. ಆ ಹಿಮ್ಮೆಟ್ಟಿದ ಕುರುಸೈನಿಕರು ಪಾಂಡವರು ವಿರಾಟನಗರದಲ್ಲಿರುವುದನ್ನು ನಿರ್ಧರಿಸಿ ಆ ವಿಷಯವನ್ನು ತಮ್ಮ ನಗರಕ್ಕೆ ಹೋಗಿ ಕೌರವನಿಗೆ ತಿಳಿಸಿದರು.

ಇತ್ತ ವಿರಾಟನು ಕುರುಸೈನ್ಯವನ್ನು ಓಡಿಸಿದವರು ಲೋಕೈಕವೀರರಾದ ಪಾಂಡವರೆಂಬುದನ್ನು ತಿಳಿದು ಸಂತುಷ್ಟನಾಗಿ ಬಂದು ಧರ್ಮರಾಜ ಮೊದಲಾದ ಪಾಂಡವರಿಗೆ ವಂದಿಸಿ ಕೈಮುಗಿದು '' ಗುಣವಂತರೂ ಸತ್ಯಸಂಧಿಗಳೂ ಆದ ನೀವುಗಳು ಅಳಿಗೆ ಒಳಾಗಿ ಹೀನವೇಷವನ್ನು ಧರಿಸಿ ನನ್ನಲ್ಲಿ ಜೀವಿಸಿದುದು ಕಾಲಮಹಿಮೆ

ಯಿಂದ'' ಎಂದು ಬಹಳವಾಗಿ ನೊಂದುಕೊಂಡು ನುಡಿದು ತನ್ನ ಪಟ್ಟಣಶೃಂಗಾರವನ್ನು ಮಾಡಿಸಿ ಆನೆಯಮೇಲೆ ಅವರನ್ನು ಕುಳ್ಳಿರಿಸಿ ಇಂದ್ರವೈಭವದಿಂದ ತನ್ನ ಅರಮನೆಗೆ ಕರೆದೊಯ್ದು ಧರ್ಮರಾಜನನ್ನು ಸಿಹಾಸನದಲ್ಲಿ ಕುಳ್ಳಿರಿಸಿ ಮಂಡಳಿಕರು ಸಾನುಂತರು ಮೊದಲಾದನಂತರ ಪಾಂಡವರನ್ನು ಓಲೈಸಿದನು. ಪಾಂಡವರು ವಿರಾಟನಗರದಲ್ಲಿರುವ ವಾರ್ತೆಯನ್ನು ಕೇಳಿ ಧಾನ್ಯರಾಜ, ವಿಂಧ್ಯಕರಾಜ, ಚಂಡವಾಹನರಾಜ, ಸಿಹ್ಮಘೋಷಣ, ಪಾಂಚಾಲರಾಜ ಮೊದಲಾದ ರಾಜರುಗಳು ತಂತಮ್ಮ ಪುತ್ರಿಯರನ್ನು ಕರೆದುಕೊಂಡು ತಮ್ಮ ಅಪರಿಮಿತ ಸೈನ್ಯದೊಡನೆ ವಿರಾಟನಗರಕ್ಕೆ ಬಂದು ಪಾಂಡವರನ್ನು ಕಂಡು ಅನುಪಮಾನಂದಪರವಶರಾದರು. ಬಳಿಕ ಆ ಇಂದ್ರರಥಖೇಚರನು ತನ್ನ ನೂರುಮಂದಿ ಮಕ್ಕಳೊಡನೆಯೂ ಸೈನ್ಯದೊಡನೆಯೂ ಬಂದನು. ವಿರಾಟನ ಮಿತ್ರನಾದ ಪಾಂಡ್ಯರಾಜನು ತನ್ನ ಲಲಿತಾಂಗಿಯೆಂಬ ಮಗಳನ್ನು ಅರ್ಜುನನಿಗೆ ಮದುವೆಮಾಡಿಕೊಟ್ಟು ಅನೇಕಸೈನ್ಯವನ್ನು ಬಳುವಳಿಯಿತ್ತು ತಾನೂ ಬಂದು ಓಲೈಸುತ್ತ ಸುಖವಾಗಿದ್ದನು. ಇನ್ನೂ ಕೆಲವು ರಾಜರು ತಮ್ಮ ಪುತ್ರಿಯರನ್ನಿತ್ತು ಓಲೈಸುತ್ತಿದ್ದರು.

ಇತ್ತ ದ್ವಾರಾವತಿಯಿಂದ ಸತ್ಯಕನೆಂಬ ರಾಜನು ಬಂದು ಕಾಲಿಗೆರಗಿ ''ಎಲೈ ಧರ್ಮರಾಜನೆ! ಹರಿಯು ತನ್ನ ಪಟ್ಟಣಕ್ಕೆ ತಮ್ಮನ್ನು ಕರೆತರುವಂತೆ ನನ್ನನ್ನು ಪ್ರೇಮದಿಂದ ಕಳುಹಿದನು'' ಎನಲು ಧರ್ಮಸುತನು ಯಾದವರ ಕುಶಲವಾರ್ತೆಯನ್ನು ಕೇಳಿ ಬಳಿಕ ವರ್ಷಾಕಾಲವು ಕಳೆದನಂತರ ಬಂದು ದುರಿತಹರನಾದ ನೇಮಿಜಿನಗೆ ವಂದಿಪೆನೆಂದು ಹೇಳಿ ಸತ್ಯಕನನ್ನು ಕಳುಹಿ ಸುಖದಲ್ಲಿದ್ದನು.

ಒಂದಾನೊಂದುದಿನ ಕೊಂತಿಯು ದ್ವಾರಾವತಿಯಿಂದ ವಿದುರನನ್ನು ನೋಡಬೇಕೆಂದು ಹೊರಟು ಬರುತ್ತೊಂದು ಅರಣ್ಯದಲ್ಲಿ ಓರ್ವ ಮುನೀಶನನ್ನು ಕಂಡು ನಮಸ್ಕರಿಸಿ ' ಎಲೈ ಮುನಿಪತಿಯೆ! ನನ್ನ ಯೌವನದಲ್ಲಿ ಪಡೆದ ಮಗುವನ್ನು ಮುಂದಾಸಿನಲ್ಲಿಟ್ಟು ಯಮುನಾನದಿಯಲ್ಲಿ ಬಿಡಿಸಿದೆನು. ಅವನ ಬಾಳುವೆಯನ್ನು ದಯವಿಟ್ಟು ತಿಳಿಸಬೇಕು'' ಎನಲು ಮುನಿಪತಿಯು ಕೊಂತಿಯನ್ನು ಕುರಿತು '' ನೀನು ಮೊದಲು ಹಡೆದ ಮಗನು ಬಲಿಷ್ಠನಾಗಿ ಕೌರವೇಶ್ವರನ ಪ್ರೀತಿಗೆ ಪಾತ್ರನಾಗಿ ಅವನೊಡನೆ ಎಡೆಬಿಡದೆ ಬೆಳೆದು ನಿಸ್ಸೀಮನಾಗಿರುವನು. ಅವನೇ ಕರ್ಣನು '' ಎಂದನು. ಆ ಮಾತನ್ನು ಕೇಳಿ ಕೊಂತಿಯು ಸಂತುಷ್ಟಳಾಗಿ ಮುನಿಪತಿಗೆ ವಂದಿಸಿ ಬೀಳ್ಕೊಂಡು ಹಸ್ತಿನಾಪುರಕ್ಕೆ ಹೋಗಿ ವಿದುರನ ಮನೆಯಲ್ಲಿ ಸಂತೋಷದಿಂದ ಇರುತ್ತಿದ್ದು ಒಂದುದಿನ ಆಕೆಯು ಕರ್ಣನಬಳಿಗೆ ಹೋಗಲು ಆತನು ಎದ್ದು ಆಕೆಗೆ

ನಮಸ್ಕಾರವನ್ನು ಮಾಡಿ ಉನ್ನತಾಸನವನ್ನಿತ್ತು ಕೈಮುಗಿದು " ಏನಪ್ಪಣೆ, ಹೇಳಿ ", ಎಂದನು. ಕೊಂತಿಯು " ನಾನು ಯೌವನದಲ್ಲಿ ಮೊದಲು ಹಡೆದ ಜೊಚ್ಚಲ ಶಿಶುವಾದ ನಿನ್ನನ್ನು ಯಮುನಾನದಿಯಲ್ಲಿ ಬಿಟ್ಟೆನು. ಈಗ ನಿನ್ನನ್ನು ನೋಡಬೇಕೆಂಬ ಕೌತುಕದಿಂದ ಬಂದೆನು. ಎನಲು ಕರ್ಣನು ಜ್ವಾಲಾಮಾಲಿನೀ ದೇವಿಯು ತನಗೆ ಹಿಂದೆ ಕೊಟ್ಟಿದ್ದ ಉರಿಯ ವಸ್ತ್ರವನ್ನು ಆಕೆಗೆ ಹೊದಿಸಲು ಅದು ವಿಕಾರವನ್ನು ಹೊಂದದೆ ಎಳೆದಳಿರಂತೆ ಶೋಭಿಸುತ್ತಿರುವುದನ್ನು ಕಂಡು ಕರ್ಣನು ಆಕೆಯ ಚರಣಕಮಲಕ್ಕೆರಗಿ ಕೈಮುಗಿದು ನಿಂದಿರಲು, ಆಗ ಕೊಂತಿಯ ಸ್ತನಗಳಲ್ಲಿ ಸ್ತನ್ಯವೂ ನೇತ್ರಗಳಲ್ಲಿ ಆನಂದಬಾಷ್ಪವೂ ಸುರಿದುವು. ಬಳಿಕ ಆಕೆಯು ಕರ್ಣನನ್ನು ಬಿಗಿದಪ್ಪಿ " ಮಗನೆ! ನಿನ್ನ ತಮ್ಮಂದಿರಿಂದ ಓಲೈಸಿಕೊಂಡಿರು " ಎನಲು, ಕರ್ಣನು " ತಾಯೆ! ಬಿನ್ನಪವು. ಕೌರವೇಶ್ವರನನ್ನು ಕನಸುಮನಸಿನಲ್ಲಿಯೂ ನಾನು ಬಿಡುವಂತಿಲ್ಲ. ಆದುದರಿಂದ ಆ ಮಾತು ಬೇಡ " ಎಂದನು. ಆಗ ಕೊಂತಿಯು " ಮಗನೆ! ನೀನು ಪಡೆದಿರುವ ದಿವ್ಯಾಸ್ತ್ರಗಳನ್ನು ನಿನ್ನ ಅನುಜರಮೇಲೆ ಪ್ರಯೋಗಿಸಬೇಡ " ಎನಲು ಕರ್ಣನು ಹಾಗೆಯೇ ಮಾಡುವೆನೆಂದೂ ಈ ವಿಚಾರವನ್ನು ಅವರಲ್ಲಿ ಹೇಳಬಾರದೆಂದೂ ನುಡಿದು ದಿವ್ಯ ವಸ್ತ್ರಾಭರಣಗಳಿಂದ ಪೂಜಿಸಿ ಬೀಳ್ಕೊಟ್ಟನು. ಬಳಿಕ ಕೊಂತಿಯು ಅಲ್ಲಿಂದ ಹೊರಟು ದ್ವಾರಾವತಿಗೆ ಬಂದು ಸುಖದಿಂದಿರಲು ಇತ್ತ ಧರ್ಮರಾಜನು ವರ್ಷಾಕಾಲವು ಕಳೆದನಂತರ ವಿರಾಟನಗರದಿಂದ ದ್ವಾರಾವತಿಗೆ ಹೊರಟನು. ಆಗ ವಿರಾಟನು ಪಾಂಡವರೊಡನೆ ಬಹುದೂರ ಬರಲು ಆತನನ್ನು ಪ್ರೇಮದಿಂದ ಬೀಳ್ಕೊಟ್ಟು ಮುಂದೆ ನಡೆದುಬರುತ್ತಿರುವ ವಾರ್ತೆಯನ್ನು ಕೇಳಿ ಕೃಷ್ಣನು ದ್ವಾರಾವತಿಯಲ್ಲಿ ನಗರಶೃಂಗಾರವನ್ನು ಮಾಡಿಸಿ ತನ್ನ ಅಧೀನರಾಜರುಗಳೊಡನೆ ಪಾಂಡವರನ್ನು ಇದಿರ್ಗೊಂಡು ಪುರಪ್ರವೇಶವನ್ನು ಮಾಡಿಸಿದನು. ಪಾಂಡವರು ನೇಮಿತೀರ್ಥೇಶ್ವರನಿಗೆ ನಮಸ್ಕಾರವನ್ನು ಮಾಡಿ ಕೃಷ್ಣಬಲರಾಮಾದಿಗಳೊಡನೆ ಅಲ್ಲಿ ಕೆಲವುಕಾಲ ಸುಖದಿಂದಿದ್ದರು.

೨೬. ಜರಾಸಂಧನು ಕೃಷ್ಣನಮೇಲೆ ದಂಡೆತ್ತಿ ನಡೆದ ಸಂಧಿ

ಕೃಷ್ಣನು ಪಾಂಡವರೊಡನೆ ಸುಖದಿಂದ ರಾಜ್ಯಪರಿಪಾಲನಮಾಡುತ್ತಿರಲು ಒಂದುದಿನ ದ್ವಾರಾವತಿಗೆ ಓರ್ವ ಹಡಗಿನ ವ್ಯಾಪಾರಿಯು ಬಂದು ಆ ನಗರವನ್ನು ನೋಡಿ "ಅಮರಾವತಿಗೆ ಸದೃಶವಾದ ಇಂತಹ ಪಟ್ಟಣವು ಈ ಭೂಲೋಕದಲ್ಲಿಲ್ಲ" ಎಂದು ಬಹಳವಾಗಿ ಹೊಗಳುತ್ತ ಅರಮನೆಯ ಬಾಗಿಲಿಗೆ ಬಂದು ಸಮಯವನ್ನು ನೋಡಿ ಒಳಕ್ಕೆ ಪ್ರವೇಶಿಸಿ ದ್ವಾರಪಾಲಕರ ಮೂಲಕ ಕೃಷ್ಣನ ಆಸ್ಥಾನಕ್ಕೆ ಹೋಗಿ ಕೃಷ್ಣನನ್ನು ಕಂಡು ಭಯಭಕ್ತಿಯಿಂದ ನಮಸ್ಕರಿಸಿ ತಾನು ತಂದಿದ್ದ ಉತ್ತಮ ವಸ್ತುಗಳನ್ನು ಕೈಗಾಣಿಕೆಯಿತ್ತನು. ಕೃಷ್ಣನು ಆತನಿಗೆ ಉಚಿತಾಸನವನ್ನು ಕೊಡಿಸಿ ಪ್ರೇಮದಿಂದ ಮಾತನಾಡಿಸಿ ಅವನಿಗೆ ಅನರ್ಘ್ಯವಾದ ರತ್ನಗಳನ್ನು ಬಹುಮಾನ ಕೊಟ್ಟನು. ಅದರಿಂದ ಆ ವೈಶ್ಯನು ಬಹು ಸಂತುಷ್ಟನಾಗಿ ಬೀಳ್ಕೊಂಡು ಆ ನಗರದಲ್ಲಿ ಕೆಲವು ದಿನವಿದ್ದು ಬಳಿಕ ಅಲ್ಲಿಂದ ಹೊರಟು ಮಗಧೇಶ್ವರನ ಪಟ್ಟಣಕ್ಕೆ ಬಂದು ಅರಮನೆಯ ಶೋಭೆಯನ್ನು ನೋಡುತ್ತ ದ್ವಾರಪಾಲಕರ ಮೂಲಕ ಜರಾಸಂಧ ಚಕ್ರೇಶ್ವರನ ಆಸ್ಥಾನಕ್ಕೆ ಹೋಗಿ ಅವನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಕೃಷ್ಣನು ತನಗೆ ಉಡುಗೊರೆಯಿತ್ತ ಅನರ್ಘ್ಯರತ್ನಗಳನ್ನು ಕಾಣಿಕೆಯಿತ್ತನು. ಜರಾಸಂಧನು ಆ ರತ್ನಗಳನ್ನು ನೋಡಿ ಅಚ್ಚರಿವಟ್ಟು ತಲೆದೂಗಿ ಬಳಿಕ "ಈ ರತ್ನಗಳು ನಿನಗೆಲ್ಲಿ ದೊರೆತುವು?" ಎಂದು ಆ ವೈಶ್ಯನನ್ನು ಕೇಳಲು ಅವನು "ಸಮುದ್ರದ ಮಧ್ಯದಲ್ಲಿ ಶೋಭಿಸುವ ದ್ವಾರಾವತಿಯಲ್ಲಿ ಮಹಾಬಲಶಾಲಿಗಳೂ ಸುಂದರರೂ ಉತ್ತಮರೂ ಧೀರೋದಾತ್ತರೂ ಆದ ನೇಮಿಶ್ವರ, ಸಮುದ್ರವಿಜಯ, ವಸುದೇವ, ಬಲರಾಮ, ವಾಸುದೇವ ಮೊದಲಾದ ರಾಜಕುಮಾರರು ಇರುತ್ತಾರೆ. ಅವರು ನನಗೆ ಈ ರತ್ನಗಳನ್ನು ಪ್ರೀತಿಯಿಂದಿತ್ತರು" ಎಂದನು. ಆ ಮಾತನ್ನು ಕೇಳಿ ಕೃಷ್ಣಾದಿಗಳ ಮೇಲೆ ಬಹುಕೋಪಾವಿಷ್ಟನಾಗಿ ಮೊದಲು ತನಗೆ ಹೆದರಿ ಅಗ್ನಿಕುಂಡದಲ್ಲಿ ಬಿದ್ದು ಸತ್ತರೆಂಬ ಮಾತು ಸುಳ್ಳಾಯಿತೆಂದು ಬಗೆದು "ನನಗೆ ಇದಿರಾಗಲಾರದೆ ಸಮುದ್ರವನ್ನು ಹೊಕ್ಕಿರುತ್ತಾರೆ. ಆ ಸಮುದ್ರವನ್ನು ತುಳುಕಿ ಅವರ ತಲೆಗಳನ್ನು ಚೆಂಡಾಡದಿದ್ದರೆ ನನಗಿದು ಮಾಸೆಯಲ್ಲ" ಎನುತ ಆ ವೈಶ್ಯನಿಗೆ ಬಹಳವಾಗಿ

ಯಲ್ಲಲ್ಲದೆ ಸಾಧ್ಯವಾಗದು'' ಎನಲು ಧರ್ಮರಾಜನು ''ಯುದ್ಧಮಾಡದೆ ರಾಜ್ಯವನ್ನು ಕೊಡೆನೆಂಬುದು ಕೌರವನ ಸಂಕಲ್ಪ. ಆದರೆ ಸಹೋದರರನ್ನು ಕಾದಿ ಕೊಂದು ಧರ್ಮರಾಜನು ರಾಜ್ಯವನ್ನು ಬೆಳೆಸಿದನೆಂಬ ಅಪವಾದವನ್ನು ಹೇಗೆ ಕಳೆವೆನು?'' ಎನಲು ಭೀಮಾರ್ಜುನ ನಕುಲಸಹದೇವರು ಕ್ರುದ್ಧರಾಗಿ 'ಅಣ್ಣನೆ! ನೀನು ಹೀಗಿರು. ಆ ದುರ್ಯಶಸ್ಸನ್ನು ನಾವು ಹೊಂದುವೆವು. ನಿನ್ನ ಉತ್ತಮವಾದ ಸತ್ಯವನ್ನು ಕಾಪಾಡಲು ಇದುವರೆಗೂ ನಾನು ಸೈರಿಸಿದೆವಲ್ಲದೆ ಕೌರವನೊಡನೆ ಯುದ್ಧಮಾಡಲು ಸೈರಿಸುವೆವೇ? ಕೃತ್ರಿಮೋಪಾಯದಿಂದ ನಮ್ಮನ್ನು ಕೊಲ್ಲುವು ದಕ್ಕಾಗಲಿಲ್ಲ. ಆ ಕಪಟಿ ಕೌರವನು ದುರ್ಧರವಾದ ಯುದ್ಧರಂಗದಲ್ಲಿ ನಮ್ಮನ್ನು ಗೆಲುವುದು ನಿಜವೇ?' ಎಂದರು. ಆಗ ಬಲರಾಮನು ಕೃಷ್ಣನನ್ನು ಕುರಿತು ''ಈ ಪಾಂಡವರ ನಿಮಿತ್ತದಿಂದ ನಮಗೆ ಆ ಜರಾಸಂಧನೊಡನೆ ಯುದ್ಧವು ನಡೆಯುದಿರದು'' ಎಂದು ನುಡಿದು ಅವರು ಯುದ್ಧಸನ್ನಾಹವನ್ನು ಮಾಡತೊಡಗಿದರು. ಅತ್ತ ಜರಾಸಂಧಚಕ್ರವರ್ತಿಯು ಕನಲಿ ಯುದ್ಧಭೇರಿಯನ್ನು ಹೊಯ್ಸಲು ಆಗ ಅವನ ಅಪರಿಮಿತವಾದ ಸೈನ್ಯವು ಸೇರಿತು. ಆಗ ಜರಾಸಂಧನು ಯಾದವರೊಡನೆ ಯುದ್ಧಕ್ಕಾಗಿ ಹೊರಡಲು ವಾಚಸ್ಪತಿಯೆಂಬ ಓರ್ವ ಮಂತ್ರಿಯು ಬಂದು ''ಎಲೈ ರಾಜನೆ! ಯಾದವರು ನಿನಗಿದಿರಾಗಲಾರದೆ ಹೋಗಿ ಸಮುದ್ರದಲ್ಲಿ ಮನೆಮಾಡಿ ಕೊಂಡು ತಲೆಮರೆಸಿಕೊಂಡಿರುವರು. ಅಂತಹವರಲ್ಲಿ ನೀನು ಕೋಪಮಾಡು ವುದೇ?' ಎಂದನು. ಆ ಮಂತ್ರಿಯನ್ನು ಕುರಿತು ಜರಾಸಂಧನು ''ಅವರಿಗೆ ಸಮುದ್ರವು ಹೇಗೆ ಅವಕಾಶಕೊಟ್ಟಿತು?'' ಎನಲು, ಮಂತ್ರಿಯು ''ದೇವೇಂದ್ರನು ದಯೆಯಿಂದ ಅವರ ಬಳಿಗೆ ಬಂದು ಸಮುದ್ರದ ನೀರನ್ನು ಬಗಿದು ದ್ವಾರಾವತಿ ಯೆಂಬ ಪಟ್ಟಣವನ್ನು ನಿರ್ಮಿಸಿ ಯಾದವರಿಗಿತ್ತನು'' ಎಂದನು. ಅದಕ್ಕೆ ಜರಾ ಸಂಧನು ''ದೇವೇಂದ್ರನು ಆ ಪಟ್ಟಣವನ್ನು ರಚಿಸಿ ಕೊಡುವುದಕ್ಕೆ ಅವರ ಮಹಿಮೆ ಯೇನು?' ಎನಲು ಆ ಮಂತ್ರಿಯು ''ಹರಿಯ ಪುಣ್ಯಾನನ್ನೇನೆಂದು ಹೇಳಲಿ? ನಿನ್ನ ಅಳಿಯನು ಅವನ ಆರುಮಂದಿ ಸಹೋದರರನ್ನು ಕೊಂದು ಮತ್ತೆ ಅವನನ್ನೂ ಕೊಲ್ಲಲು ದೇವತೆಗಳನ್ನು ಕಳುಹಿದನು. ಅವುಗಳನ್ನೆಲ್ಲ ನಾಶಮಾಡಿ ಏಳುದಿನ ಗಳವರೆಗೆ ಗೋವರ್ಧನಗಿರಿಯನ್ನೆತ್ತಿ ಕಾಳಿಂಗಸರ್ಪವನ್ನು ಕೊಂದು ಸಹಸ್ರದಳ ಕಮಲವನ್ನು ತಂದು ಉರಗಶಯ್ಯೆಯನ್ನೇರಿ, ಶಾರ್ಙ್ಗಧನುಸ್ಸನ್ನೇರಿಸಿ ಪಾಂಚಜ ನ್ಯವನ್ನು ಊದಿ ಚಾಣೂರಮಲ್ಲನನ್ನು ಮಲ್ಲಯುದ್ಧದಲ್ಲಿ ಕೊಂದು ನಿನಗೆ ಅಂಜಿ ಹೋಗುವಾಗ ನಿನ್ನ ಮಹಾಸೈನ್ಯವು ಅವರನ್ನು ಹಿಂಬಾಲಿಸಲು ಅವರ ಸುಕೃತ

ದೇವತೆಯು ಅಗ್ನಿಕುಂಡದಲ್ಲಿ ಅವರು ಕಳೆದಂತೆ ನಿನ್ನವರಿಗೆ ತೋರಿಸಿ ಅಲ್ಲಿಂದ ಅವರನ್ನು ಕಳುಹಿಸಿಕೊಟ್ಟಿತು. ಆಗ ದೇವೇಂದ್ರನು ಬಂದು ಸಮುದ್ರವಿಜಯರಿಗೆ ನೇಮಿತೀರ್ಥಂಕರರು ಉದಯಿಸುವುದರಿಂದ ದ್ವಾರಾವತಿಯನ್ನು ನಿರ್ಮಿಸಿ ಆ ಯಾದವರನ್ನು ಅಲ್ಲಿರಿಸಿದನು. ಕೃಷ್ಣನು ದ್ವಾರಾವತಿಯಲ್ಲಿದ್ದು ಶಿಶುಪಾಲನನ್ನು ಸಂಹರಿಸಿ ವಿಜಯಾರ್ಧಗಿರಿಗೆ ಹೋಗಿ ಜಾಂಬವರಾಜನನ್ನು ಕೊಂದು ಅತನ ಪುತ್ರಿ ಜಾಂಬವತಿಯನ್ನು ವಿವಾಹಮಾಡಿಕೊಂಡು ಧಾತಕೀಖಂಡದ್ವೀಪಕ್ಕೆ ಹೋಗಿ ಶಂಖನಾದವನ್ನು ಮಾಡಿ, ಶಂಖಜಕ್ಕೆ ಕದನೇಚ್ಛೆಯನ್ನುಂಟುಮಾಡಿ ಸುಪ್ರಸಿದ್ಧನಾಗಿರುವನು. ಮಹಾಪುರಾಕೃವಿಯೂ ತದ್ಭವಮೋಕ್ಷಗಾಮಿಯೂ ಆದ ಈ ಕಾಲದ ಮನ್ಮಥನು ಅವನ ಪುತ್ರನು. ಸಮುದ್ರವಿಜಯಮಹಾರಾಜನ ಪುತ್ರನು ನೇಮಿಕುಮಾರ. ವಸುದೇವ, ಬಲರಾಮ, ಪಾಂಡವರು ಮೊದಲಾದ ವೀರರು ಆ ಹರಿಯ ಜೊತೆಯಲ್ಲಿ ಸೇರಿರುತ್ತಾರೆ. ಇಂತಹ ಸಹಾಯ ಸಂಪತ್ತಿಯನ್ನು ಹೊಂದಿರುವ ಕೃಷ್ಣನು ನಿನಗಿದಿರಾಗಲಾರದೆ ಸಮುದ್ರವನ್ನು ಹೊಕ್ಕು ನಿಶ್ಚಿಂತೆಯಾಗಿ ಬಾಳುತ್ತಿದ್ದಾನೆ'' ಎಂದನು. ಆ ಮಾತನ್ನು ಕೇಳಿ ಜರಾಸಂಧನು ಕೋಪದಿಂದ ಗದ್ದುಗೆಯನ್ನು ಹೊಯ್ದೆದ್ದು ಆನೆಯನ್ನೇರಿ ಪುರದ್ವಾರಕ್ಕೆ ಬಂದು ನಿಂತನು. ಆಗ ಅವನ ಅಧೀನರಾಜರು ಕೈಮುಗಿದು ತಮ್ಮ ಪೌರುಷವನ್ನು ಹೇಳಿಕೊಂಡು ತಾವು ಹೋಗಿ ಓರೋರ್ವರೇ ಗೆದ್ದುಬರುವೆವೆಂದೂ ತಮಗೆ ಅನುಜ್ಞೆಯನ್ನೀಯಬೇಕೆಂದೂ ಹೇಳಲು, ಮಗಧೇಶ್ವರನು ಅವರ ಮುಖವನ್ನು ನೋಡಿ ನಸುನಕ್ಕು ತನ್ನ ಇಪ್ಪತ್ತುನಾಲ್ಕು ಸಾವಿರ ಅಕ್ಷೌಹಿಣೀಬಲದೊಡನೆಯೂ ಹದಿನಾರುಸಾವಿರ ಮಕುಟಬದ್ಧರಾದ ಅಧೀನರಾಜರೊಡನೆಯೂ ಷಡಂಗಸೈನ್ಯಸಮೇತನಾಗಿ ಹೊರಟು ಕುರುಜಾಂಗಣದೇಶಕ್ಕೆ ಬಂದು ಬೀಡುಬಿಡಿಸಿದನು. ಆ ಸಮಾಚಾರವನ್ನು ಕೇಳಿ ಕೌರವೇಶ್ವರನು ''ನನ್ನ ವೈರಿಗಳಾದ ಪಾಂಡವರೊಡನೆ ಕೂಡಿಕೊಂಡಿರುವ ಯಾದವರಿಗೆ ಜರಾಸಂಧಚಕ್ರವರ್ತಿಯಿಂದ ಈಗ ಕೇಡು ಸಂಭವಿಸಿರುವುದು. ಇದು ನನ್ನ ಪುಣ್ಯದ ಫಲ. ಇದೇ ನನಗೆ ಸಮಯ'' ಎಂದು ತನ್ನ ಸೈನ್ಯಸಮೇತನಾಗಿ ಜರಾಸಂಧನಿಗಿದಿರಾಗಿ ಬಂದು ಅವನನ್ನು ಕುರಿತು ''ಎಲೈ ಪ್ರಭುವೆ! ಈ ಸ್ವಲ್ಪ ಕಾರ್ಯಕ್ಕಾಗಿ ನೀನು ದಂಡೆತ್ತಿ ಹೋಗಬೇಕೇ? ನನ್ನನ್ನು ಕರೆಸಿ ಆಜ್ಞೆಮಾಡಿದ್ದರೆ ನಿನ್ನ ಇಷ್ಟಾರ್ಥವನ್ನು ನೆರವೇರಿಸುತ್ತಿದ್ದೆನು'' ಎನಲು, ಜರಾಸಂಧನು ''ಎಲೈ ಕುರುಪತಿಯೆ! ಸೈನ್ಯದಲ್ಲಿಯೂ ಬಾಹುಬಲದಲ್ಲಿಯೂ ಬಂಧುಸಂಪತ್ತಿಯಲ್ಲಿಯೂ ನಿನಗೆ ಸಮನಾದವರು ಯಾರಿರುವರು? ಅದರಿಂದಲೇ

ನಿನ್ನ ಈ ಮಾತು ಸಹಜವಾಗಿದೆ'' ಎಂದು ಅವನನ್ನು ಹೊಗಳಿದನು. ಮರುದಿನ ಸೈನ್ಯವೆಲ್ಲವೂ ಮುಂದೆ ಹೊರಡಲನುವಾಯಿತು. ಆಗ ನಾರದರು ಆಕಾಶದಿಂದಿಳಿದು ಬರಲು ಜರಾಸಂಧನು ಎದ್ದು ಅವರಿಗೆ ನಮಸ್ಕರಿಸಿ '' ನಾರದಮುನಿಗಳೆ! ತಮ್ಮಿಂದ ಒಂದು ಕಾರ್ಯವಾಗಬೇಕು. ತಾವೀಗಲೇ ದ್ವಾರಾವತಿಗೆ ಹೋಗಿ ಆ ಕೃಷ್ಣಬಲರಾಮರು ನನ್ನೊಡನೆ ಯುದ್ಧಮಾಡಲು ಶಕ್ತಿಯಿದ್ದರೆ ಯುದ್ಧಮಾಡಲಿ; ಇಲ್ಲವಾದರೆ ಬಂದು ನನಗೆ ಶರಣಾಗತರಾಗಲಿ. ಈ ವಿಚಾರವನ್ನು ಅವರಿಗೆ ತಿಳಿಸಬೇಕು'' ಎಂದನು. ಅದಕ್ಕೆ ನಾರದರು ನಸುನಕ್ಕು ಹಾಗೆಯೇ ಮಾಡುವೆನೆಂದು ಹೇಳಿ ಆಕಾಶಮಾರ್ಗದಿಂದ ದ್ವಾರಾವತಿಗೆ ಬಂದು ಕೃಷ್ಣಬಲರಾಮರನ್ನು ಕಾಣಲು ಅವರು ಎದ್ದು ಅವರ ಪಾದಗಳಿಗೆ ನಮಸ್ಕಾರಮಾಡಿದರು. ನಾರದರು ಅವರನ್ನು ಆಶೀರ್ವದಿಸಿ '' ಎಲೈ ಕೃಷ್ಣನೆ! ಜರಾಸಂಧಚಕ್ರವರ್ತಿಯು ತನ್ನ ಜಯಶ್ರೀಯನ್ನು ನಿನಗೆ ಕೊಡಬೇಕೆಂದು ದಂಡೆತ್ತಿಬಂದು ಕುರುಭೂಪತಿಯು ರಾಜ್ಯದಲ್ಲಿ ಬೀಡುಬಿಟ್ಟುಕೊಂಡಿರುವನು. ಇದಕ್ಕೆ ತಕ್ಕುದನ್ನು ನೀವೇಬಲ್ಲಿರಿ ' ಎಂದು ಹೇಳಿ ಅವರನ್ನು ಬೀಳ್ಕೊಂಡು ಹೊರಟುಹೋದರು. ಇತ್ತ ಕೃಷ್ಣನು '' ಕಾರಣವಿಲ್ಲದೆ ದಂಡೆತ್ತಿಬಂದಿರುವ ಜರಾಸಂಧನ ತಲೆಯನ್ನು ಕತ್ತರಿಸುವೆನು'' ಎಂದು ಕೋಪದಿಂದ ನುಡಿಯಲು ಅದಕ್ಕೆ ಬಲರಾಮನು ಕೃಷ್ಣನನ್ನು ಕುರಿತು '' ಎಲೈ ಕೃಷ್ಣನೆ! ಚಕ್ರದ ಸಹಾಯದಿಂದ ಭೂಚಕ್ರವನ್ನು ಜಯಿಸಿದಮಾತ್ರಕ್ಕೆ ಜರಾಸಂಧನ ಸಾಹಸವು, ಬೆರಳಿನಿಂದ ಬೆಟ್ಟವನ್ನೆತ್ತಿದ ನಿನ್ನ ಸಾಹಸಕ್ಕೆ ಸಮನಾಗುವುದೇ?'' ಎಂದನು. ಅನಂತರ ಎಲ್ಲರೂ ತಮ್ಮ ಇಷ್ಟಾರ್ಥವನ್ನು ನೆರವೇರಿಸಲೆಂದು ಶ್ರೀ ನೇಮಿಶ್ವರನಿಗೆರಗಿ ಬೀಳ್ಕೊಂಡರು.

ಕೃಷ್ಣಬಲರಾಮರು ಸಮುದ್ರವಿಜಯರಿಗೆ ನಮಸ್ಕಾರಮಾಡಲು ಅವರು ಅವರನ್ನು ಹರಸಿ '' ಎಲೆ ಮಕ್ಕಳಿರಾ! ನೀವೀರ್ವರು ಈಕಾಲದ ಬಲದೇವ ವಾಸುದೇವರುಗಳು. ಆ ಪ್ರತಿವಾಸುದೇವನಾದ ಜರಾಸಂಧನ ಚಕ್ರವು ನಿಮ್ಮ ಕೈಸೇರಿ, ಅದರಿಂದಲೇ ಅವನ ತಲೆಯನ್ನು ತರಿದು ನೀವು ಅತ್ಯಂತ ಖ್ಯಾತಿಯಿಂದ ರಾಜ್ಯಭಾರಮಾಡುವಿರಿ. ಇದು ಶಾಸ್ತ್ರಸಿದ್ಧವಾದ ಮಾತು'' ಎಂದು ಹೇಳಲು ಬಲಾಚ್ಯುತರು ಮತ್ತೊಮ್ಮೆ ಅವರಿಗೆ ನಮಸ್ಕಾರಮಾಡಿ, ನೇಮಿಕುಮಾರನ ಬಳಿಯಲ್ಲಿರುವಂತೆ ಹೇಳಿ ಬಳಿಕ ಶ್ರೀ ನೇಮಿಶ್ವರರಿಗೂ, ಹಿರಿಯರಿಗೂ ನಮಸ್ಕಾರಮಾಡಿ, ಅವರ ಅಪ್ಪಣೆಯನ್ನು ಹೊಂದಿ, ಯುದ್ಧಭೇರಿಯನ್ನು ಹೊಯ್ಸಿ ಯುದ್ಧಸನ್ನದ್ಧರಾಗಿ ಹೊರಟರು. ಧರ್ಮರಾಜನೂ ಅವನ ಸಹೋದರರೂ ತಮ್ಮ ಸಮಸ್ತ

ಸೈನ್ಯದೊಡನೆ ಹೊರಟರು. ಹೀಗೆ ಪಾಂಡವರು, ಮನ್ಮಥ, ಸಮಸ್ತ ಹರಿವಂಶದ ರಾಜರುಗಳು ಇವರುಗಳೊಡನೆ ಕೂಡಿಕೊಂಡು ಕೃಷ್ಣಬಲರಾಮರು ಆನೆಗಳನ್ನೇರಿ ಶುಭಶಕುನಗಳುಂಟಾಗುತ್ತಿರಲು ದ್ವಾರಾವತಿಯಿಂದ ಹೊರಟುಹೋಗಿ ಜರಾಸಂಧ ಚಕ್ರವರ್ತಿಯ ಬೀಡಿಗೆ ಸ್ವಲ್ಪದೂರದಲ್ಲಿ ಸೈನ್ಯವನ್ನಿಟ್ಟರು. ಆಗ ವಿಜಯಾರ್ಧಗಿರಿಯಿಂದ ಬಂದ ದೂತನೋರ್ವನು ಕೃಷ್ಣನನ್ನು ಕಂಡು ನಮಸ್ಕರಿಸಿ "ಎಲೈ ರಾಜನೆ! ನಿಮಗೊದಗಿರುವೀಯುದ್ಧದಲ್ಲಿ ನಿಮಗೆ ಸಹಾಯಕರಾಗಿ ಬಂದು ಸೇರಬೇಕೆಂದು ಹೊರಟಿದ್ದ ಕಾಳಶಂಬರ ಮೊದಲಾದ ಖೇಚರರಾಜರನ್ನು ಜರಾಸಂಧನ ಸಾಮಂತರಾದ ಬರಾದ ಕೆಲವರು ಖೇಚರರು ತಡೆದು ನಿಲ್ಲಿಸಿರುತ್ತಾರೆ" ಎನಲು, ಆ ವಿಷಯವನ್ನು ಕೃಷ್ಣನು ಬಲರಾಮನೊಡನೆ ಆಲೋಚಿಸಿ ವಸುದೇವ ಮನ್ಮಥ ಶಂಭುಕುಮಾರ ಇವರುಗಳನ್ನು ವಿಜಯಾರ್ಧಗಿರಿಗೆ ಕಳುಹಿಸಿಕೊಟ್ಟನು. ಅಷ್ಟು ಹೊತ್ತಿಗೆ ಮಗಧ ಚಕ್ರೇಶ್ವರನು ಅಳಿಯುವನೆಂಬುದನ್ನು ತೋರಿಸುತ್ತಾನೋ ಎನ್ನುವ ಹಾಗೆ ಸೂರ್ಯನು ಅಸ್ತಮಿತನಾದನು. ಉಭಯಪಕ್ಷದವರೂ ತಾತವ್ಯ ಬೀಡಿನಲ್ಲಿ ರಾತ್ರಿಯನ್ನು ಕಳೆದರು.

೨೭. ಪ್ರಥಮಕಾಳಗ ಸಂಧಿ

ಮಗಧೇಶ್ವರನಾದ ಜರಾಸಂಧ ಮತ್ತು ಮಧುಮಥನನಾದ ಕೃಷ್ಣ ಅವರುಗಳ ಯುದ್ಧವನ್ನು ನೋಡಬೇಕೆಂಬ ಅಪೇಕ್ಷೆಯಿಂದಲೋ ಎಂಬಂತೆ ಸೂರ್ಯನು ಉದಯಿಸಲು ಜರಾಸಂಧಚಕ್ರವರ್ತಿಯು ನಿತ್ಯಕರ್ಮಗಳನ್ನು ತೀರಿಸಿಕೊಂಡು ಕೌರವೇಶ್ವರನ ಅನುಮತಿಯಿಂದ ಶೂರನಾದ ಕರ್ಣನಿಗೆ ವೀರಪಟ್ಟವನ್ನು ಕಟ್ಟಿದನು. ಇತ್ತ ಕೃಷ್ಣನು ಅರ್ಜುನನಿಗೆ ವೀರಪಟ್ಟವನ್ನು ಕಟ್ಟಿದನು. ಉತ್ತಮವಾಗಿ ಶೃಂಗರಿಸಿದ ಆನೆಯನ್ನೇರಿ ಜರಾಸಂಧನು ತನ್ನ ಸಮಸ್ತ ರಾಜಚಿಹ್ನೆಗಳೊಡನೆ ಯುದ್ಧಭೂಮಿಗೆ ಹೊರಟನು. ಆಗ ಅಶುಭಸೂಚನೆಗಳಾಗುತ್ತಿದ್ದರೂ ಗಮನಿಸದೆ ಯುದ್ಧರಂಗಕ್ಕೆ ಬಂದು ಕರ್ಣನನ್ನು ಕರೆಸಿ, ಸೈನ್ಯವನ್ನು ಸಾವಿರ ಎಸಳುಗಳುಳ್ಳ ತಾವರೆ

ಯಂತೆ ರಚಿಸೆಂದು ಹೇಳಿದನು. ಆಗ ಕರ್ಣನು ಶಲ್ಯ, ಶಕುನಿ, ದ್ರೋಣ, ಭೂರಿಶ್ರವ, ಕೃಪ, ಕೃತವರ್ಮ, ವೀರಧ್ವಜ, ಸೋಮದತ್ತ, ಸುಶರ್ಮ, ಕೌರವ, ಜಯದತ್ತ, ಬಾಣಾಸುರ, ವೃಷಭಧ್ವಜ, ವಿಂಧ್ಯ, ವಿಕರ್ಣ, ತಾರಕ, ಪುರಂದರ, ದುರ್ದರ್ಶನ, ದುಶ್ಶಾಸನ, ದುಂದುಭಿ, ಕನಕಧ್ವಜ ಮೊದಲಾದ ರಾಜರನ್ನು ಕಮಲದ ಕರ್ಣಿಕೆಯಂತೆ ನಿಲಿಸಿದನು. ಅಜಿತಂಜಯ, ಅಪರಾಜಿತ, ಸಿಹ್ನಧ್ವಜ ಮೊದಲಾದರಸುಗಳನ್ನು ಸುತ್ತಲೂ ನಿಲ್ಲಿಸಿ ಮಧ್ಯದಲ್ಲಿ ಗಜಾರೂಢನಾದ ಚಕ್ರವರ್ತಿಯನ್ನು ಇರಿಸಿ, ಅವನ ತಲೆಯ ಮೇಲುಗಡೆಯಲ್ಲಿ ಚಕ್ರರತ್ನವನ್ನಿರಿಸಿ ಸುತ್ತಲೂ ಖೇಚರರಾಜರನ್ನು ಅವನಿಗೆ ಕಾವಲಿಟ್ಟು ಭೇದಿಸುವುದಕ್ಕಾಗದಂತೆ ಸಮಸ್ತಸೈನ್ಯವನ್ನು ಜೋಡಿಸಿದನು.

ಇತ್ತ ಅಚ್ಯುತನು, ಶೂರನಾದ ಕೃಷ್ಣನೆಂಬವನನ್ನು ಅರ್ಜುನನಿಗೆ ಸಾರಥಿಯನ್ನಾಗಿ ನಿಯಮಿಸಿ ಸೈನ್ಯದಿಂದ ಗರುಡಾಕಾರವಾದ ವ್ಯೂಹವನ್ನು ರಚಿಸುವಂತೆ ಹೇಳಿದನು. ಅರ್ಜುನನು ಜಯ, ವಿಜಯ, ಪಾಂಚಾಲ ಮೊದಲಾದ ರಾಜರನ್ನು ಅವರವರ ಸೇನೆಯೊಡನೆ ಗರುಡನ ಎಡದ ರೆಕ್ಕೆಯಂತೆಯೂ, ಧರ್ಮರಾಜ, ಭೀಮ, ನಕುಲ, ಸಹದೇವ, ಮತ್ಸ್ಯರಾಜ, ಅಭಿಮನ್ಯು, ವಿಂಧ್ಯಕ, ಘಟೋದ್ಗಜ ಮೊದಲಾದವರನ್ನು ಅವರ ಸೇನೆಯೊಡನೆ ಒಲದ ರೆಕ್ಕೆಯಂತೆಯೂ, ಸೇಮಿರಥ, ಸಾಗರಚಂದ್ರ, ದೃಢರಥ, ಚಿತ್ರಭಾನು ಮೊದಲಾದರಸುಗಳನ್ನು ಕೊಕ್ಕಿನಂತೆಯೂ, ಸೋಮದೇವ ಮೊದಲಾದ ರಾಜರನ್ನು ಕೊರಳಿನಂತೆಯೂ, ದೇವಸೇನ, ದೀಪಾಯನ ಮೊದಲಾದ ಅರಸರನ್ನು ಬಾಲದಂತೆಯೂ ನಿಲಿಸಿ, ಮಧ್ಯದಲ್ಲಿ ಗಜಾರೂಢನಾದ ಕೃಷ್ಣನನ್ನೂ ಅದರ ಉದರ ಮಧ್ಯದಲ್ಲಿ ಗಜಾರೂಢನಾದ ಬಲರಾಮನನ್ನೂ ನಿಲ್ಲಿಸಿ ಉಳಿದ ಖೇಚರ ಭೂಚರ ರಾಜರನ್ನೆಲ್ಲ ಅವರವರ ಸೇನೆಯೊಡನೆ ಆ ಬಲಕೇಶವರ ಉಭಯಪಾರ್ಶ್ವಗಳಲ್ಲಿ ಸ್ಥಾಪಿಸಿದನು. ಆ ಯುದ್ಧವನ್ನು ನೋಡಲಿಚ್ಛೆಯಿಂದ ವ್ಯಂತರರು ಮೊದಲಾದ ದೇವತೆಗಳು ಸಭೋಭಾಗದಲ್ಲಿ ಸೇರಿದರು. ಅಸಮಸಾಹಸಿಗಳಾದ ಕರ್ಣಾರ್ಜುನರು ಯುದ್ಧಸನ್ನದ್ಧರಾಗಿ ಸೈನ್ಯಕ್ಕೆ ಅಪ್ಪಣೆಯನ್ನು ಕೊಟ್ಟೊಡನೆಯೇ ಯುದ್ಧವು ಪ್ರಾರಂಭವಾಯಿತು. ಪ್ರಳಯಕಾಲದಲ್ಲಿ ಪೂರ್ವ ಪಶ್ಚಿಮ ಸಮುದ್ರಗಳು ಒಂದನ್ನೊಂದು ತಾಗುವಂತೆ ಉಭಯ ಪಕ್ಷದ ಸೇನೆಗಳು ಒಂದರಮೇಲೊಂದು ಬಿದ್ದುವು. ಆನೆಯವರು ಆನೆಯವರೊಡನೆಯೂ, ಕುದುರೆಯವರು ಕುದುರೆಯವರೊಡನೆಯೂ, ಭಟರು ಭಟರೊಡನೆಯೂ ಹೋರಾಡಲಾರಂಭಿಸಿದರು. ಉಭಯಪಕ್ಷದ ಪಿಲ್ಲುಗಾರರಿಂದ ಬಿಡಲ್ಪಟ್ಟ ಬಿಲ್ಲುಗಳು

ಮಧ್ಯಮಮಾರ್ಗದಲ್ಲಿ ಒಂದಕ್ಕೊಂದು ತಗಲಿ, ಯುದ್ಧರಂಗದ ಮೇಲ್ಭಾಗದಲ್ಲಿ ಜಪ್ಪರ ಗಟ್ಟಿದಂತೆ, ತೋರುತ್ತಿದ್ದಿತು. ಇರ್ಕಡೆಗಳಲ್ಲಿಯೂ ಮಡಿದ ಸೈನಿಕರ ಮತ್ತು ವಾಹನಗಳ ಛಿನ್ನಛಿನ್ನವಾದ ಅಂಗಗಳಿಂದ ಯುದ್ಧರಂಗವು ತುಂಬಿಹೋಗಿ ಭಯಂಕರವಾಗಿ ಕಾಣುತ್ತಿದ್ದಿತು. ಹೀಗೆ ಅತಿಭಯಂಕರವಾಗಿ ಆ ಸಾಯಂಕಾಲದವರೆಗೂ ಯುದ್ಧನಡೆದು, ಜರಾಸಂಧನಕಡೆಯ ಎರಡು ಅಕ್ಷೌಹಿಣೀ ಸೇನೆಯೂ ಕೃಷ್ಣನ ಕಡೆಯ ಒಂದು ಅಕ್ಷೌಹಿಣೀ ಸೇನೆಯೂ ನಾಶವಾದುವು. ಆಗ ಸೂರ್ಯಾಸ್ತವಾ ಯವಾಗಲು ಯುದ್ಧವನ್ನು ನಿಲ್ಲಿಸಿ ಎಲ್ಲರೂ ತಂತಮ್ಮ ಪಾಳೆಯಕ್ಕೆ ಹೊರಟು ಹೋದರು.

ಮರುದಿನ ಬೆಳಗಾದೊಡನೆಯೇ ಉಭಯಪಕ್ಷದವರೂ ಯುದ್ಧರಂಗಕ್ಕೆ ಬಂದರು. ಕೃಷ್ಣನು ಅಂದಿನ ಯುದ್ಧಕ್ಕೆ ಉಗ್ರಸೇನರಾಜನಿಗೆ ವೀರಪಟ್ಟಗಟ್ಟಿ, ಅವನ ಸಹಾಯಕ್ಕೆ ಧರ್ಮರಾಜನನ್ನೂ ಶ್ವೇತರಾಜನನ್ನೂ ಕಳುಹಿಸಿದನು. ಜರಾಸಂಧನು, ಶಕ್ರುಕ್ಷಯರಾಜನಿಗೆ ವೀರಪಟ್ಟವನ್ನು ಕಟ್ಟಿ ಅವನ ಸಹಾಯಕ್ಕೆ ಕೌರವೇಶ್ವರನನ್ನು ಸೇರಿಸಿದನು. ಕೃಷ್ಣ ಜರಾಸಂಧರು ತಂತಮ್ಮ ಸೈನ್ಯಗಳ ಮಧ್ಯದಲ್ಲಿ ಗಜಾರೂಢರಾಗಿ ಬಂದು ನಿಂತರು. ಯುದ್ಧವು ಪ್ರಾರಂಭವಾಯಿತು. ಶ್ವೇತರಾಜನು ಮಹಾ ಕೋಪದಿಂದ ಭೀಷ್ಮನಮೇಲೆ ಬಿದ್ದು ಅವನನ್ನು ಬಾಣಗಳಿಂದ ಮುಚ್ಚಿದನು. ಅದನ್ನು ಕಂಡು ಭೀಷ್ಮರು ರೇಗಿ ಒಂದೇಬಾಣದಿಂದ ಆ ಶ್ವೇತರಾಜನನ್ನು ಸಂಹರಿಸಿದರು. ಆಗ ಉಗ್ರಸೇನರಾಜನು ತನ್ನ ಸೈನ್ಯದೊಡನೆ ಬಂದು ಭೀಷ್ಮರಮೇಲೆ ಬಿದ್ದನು. ಅಷ್ಟರಲ್ಲಿ ಸಾಯಂಕಾಲವಾಗಲು ಯುದ್ಧವನ್ನು ನಿಲ್ಲಿಸಿ ತಂತಮ್ಮ ಬೀಡಿಗೆ ಹೋಗಿ ಸೇರಿದರು.

ಆ ಮರುದಿನ ಬೆಳಗಾದ ಕೂಡಲೆ ಸೈನ್ಯಗಳು ಯುದ್ಧರಂಗಕ್ಕೆ ಬಂದು ಸೇರಿದುವು. ಜರಾಸಂಧನ ಪಕ್ಷದಲ್ಲಿ ಅತನ ಮಗ ಕಾಮದಂತನು ಮುಂದಾಗಿ ಬಂದನು. ಅವನಿಗಿದಿರಾಗಿ ಕೃಷ್ಣನ ಪಕ್ಷದಲ್ಲಿ ಬಲರಾಮನು ನಿಂತು ಹೋರಾಡುತ್ತಿರಲು, ಬಲರಾಮನಿಗಿದಿರಾಗಿ ಭೀಷ್ಮನು ಬಂದು ನಿಂತನು. ಅವನನ್ನು ಹಿಂದಿಕ್ಕಿ ಪರಂತಪನೆಂಬವನು ಮುಂದೆ ಬಂದನು. ಅವನನ್ನು ನೋಡಿ ದ್ರುಪದನು ಒಂದು ಅವನ ಮೇಲೆ ಬಿದ್ದನು. ಪರಂತಪನ ಕೈ ಮೇಲಾದುದನ್ನು ಕಂಡು ಅರ್ಜುನನು ಅವನ ಮೇಲೆ ಬಿದ್ದನು. ಅರ್ಜುನನಿಗಿದಿರಾಗಿ ಶಲ್ಯನು ಬಂದನು. ಅವರೀರ್ವರ ಶರಸಂಧಾನದಿಂದ ಯುದ್ಧಭೂಮಿಯಲ್ಲಿ ಅಂಬುಗಳೇ ತುಂಬಿಹೋಗಿ ಸೂರ್ಯರಶ್ಮಿಯು ಕಾಣದಂತಾಯಿತು. ಬಲರಾಮನೊಡನೆ ಯುದ್ಧಮಾಡುತ್ತಿದ್ದ ಕಾಮದಂ

ತನಿಗೆ ಸಹಾಯಕನಾಗಿ ಅಶನಿಘೋಷರಾಜನು ಬಂದನು. ಅವನನ್ನು ಒಲರಾವುತ ಕಡೆಯ ಅನುಚಾರಣನೆಂಬವನು ಕೊಂದನು. ಅಷ್ಟುಹೊತ್ತಿಗೆ ಸಾಯಂಕಾಲ ವಾಯಿತು. ಯುದ್ಧವನ್ನು ನಿಲ್ಲಿಸಿ ಸೈನ್ಯವೆಲ್ಲವೂ ಪಾಳೆಯಕ್ಕೆ ಹೋಯಿತು.

ಆ ಮರುದಿನ ಪುನಃ ಸೈನ್ಯಗಳೆರಡೂ ಯುದ್ಧಭೂಮಿಗೆ ಬಂದು ಸೇರಿದುವು. ಕದನವು ಪ್ರಾರಂಭವಾಯಿತು. ಸತ್ಯಕನೆಂಬವನು ವಜ್ರಬಾಹುವನ್ನು ಕೊಂದನು. ಜಯದ್ರಥನು ಉತ್ತರನನ್ನು ಸೆಂಹರಿಸಿದನು. ಮಹಾಪರಾಕ್ರಮಿಯಾದ ವಸು ಪಾಲನು ನಕುಲನೊಡನೆ ಯುದ್ಧಮಾಡಿ ವಿರಥನಾದನು. ದೃಷ್ಟದ್ಯುಮ್ನನೂ ಕೃಪನೂ ಅತ್ಯಂತ ಕೋಪದಿಂದ ಹೋರಾಡಿದರು. ಅಷ್ಟುಹೊತ್ತಿಗೆ ಸಾಯಂಕಾಲವಾಯಿತು. ಎಲ್ಲರೂ ಪಾಳೆಯಕ್ಕೆ ಹೋದರು.

೨೮. ಅಭಿಮನ್ಯುಕಾಳಗ ಸಂಧಿ

ಆ ಐದನೆಯ ದಿವಸ ಸೂರ್ಯೋದಯಾನಂತರ ಸೈನ್ಯಗಳೆರಡೂ ಯುದ್ಧ ಭೂಮಿಗೆ ಬಂದು ಸೇರಿದುವು. ಕೌರವನು ಅಸುರರಾಜರಾದ ಸಂಸಪ್ತಕರನ್ನು ಕರೆಸಿ ಅಂದಿನ ಯುದ್ಧದಲ್ಲಿ ಅರ್ಜುನನ್ನು ಕೊಲ್ಲಬೇಕೆಂದು ನಿಯಮಿಸಿದನು. ಅವರು ಮಾಯಾಬಲವನ್ನು ನಿರ್ಮಿಸಿ ತಂದೊಡ್ಡಿದರು. ಆನೆ ಕುದುರೆಗಳಿಗೆ ಬದಲಾಗಿ ಸಿಹ್ಮ, ಶಾರ್ದೂಲ, ಹುಲಿ, ಕರಡಿ ಮೊದಲಾದ ಕ್ರೂರಮೃಗಗಳಿಂದ ಕೂಡಿದ ರಥಗಳನ್ನು ನಿರ್ಮಿಸಿದರು. ಅತ್ಯುನ್ನತಗಳಾದ ಆನೆ ಕುದುರೆಗಳಿಂದಲೂ ಅವುಗಳ ಮೇಲೆ ಅತಿಭಯಂಕರರಾದ ಭಟರುಗಳಿಂದಲೂ ಕೂಡಿರುವ ಸೇನಾಸಮೂಹವು ಬಂದು ನಿಂತಿತು. ಹೀಗೆ ಬಂದುನಿಂತ ಮಾಯಾಬಲವನ್ನು ನೋಡಿ ಅರ್ಜುನನು ಬಂದು ದಿವ್ಯಾಸ್ತ್ರದಿಂದದು ದಿಕ್ಕೆಟ್ಟು ಓಡಿಹೋಗುವಂತೆ ಮಾಡುತ್ತಿರಲು ಇತ್ತ ದ್ರೋಣನು ಚಕ್ರವ್ಯೂಹರೂಪದಲ್ಲಿ ಸೇನಾರಚನೆಯನ್ನು ಮಾಡಿ ಯುದ್ಧಕ್ಕೆ ಅನುಗೊಳಿಸಿದನು. ಅದನ್ನು ಕಂಡು ಧರ್ಮರಾಜನು ಕೃಷ್ಣನೊಡನೆ "ಈ ಚಕ್ರವ್ಯೂಹವನ್ನು ಭೇದಿಸಬಲ್ಲ ಅರ್ಜುನನು ರಾಕ್ಷಸಸೇನೆಗೆ ಇದಿರಾದನು. ಬೇರೆ ಯಾರೂ ಇಲ್ಲ" ಎಂದು ಹೇಳುತ್ತಿರುವ ಸಮಯದಲ್ಲಿ ಅಭಿಮನ್ಯುವು ಅಲ್ಲಿಗೆ ಬಂದು ಕೃಷ್ಣನಿಗೂ, ಧರ್ಮರಾಜನಿಗೂ ನಮಸ್ಕರಿಸಿ "ಅರ್ಜುನನಲ್ಲದೆ ಮತ್ತಾರೂ ಈ ಚಕ್ರವ್ಯೂಹವನ್ನು ಭೇದಿಸಲಾರರೆಂದು ತಾವು ಹೇಳಬಹುದೇ? ನನಗೆ ಅಪ್ಪಣೆಯಾಗಲಿ"

ಎಂದನು. ಆಗ ಧರ್ಮರಾಜನು ಅಭಿಮನ್ಯುವನ್ನು ಕುರಿತು " ಮಗನೆ! ನೀನಿನ್ನೂ ಬಾಲಕನು. ನಿನ್ನನ್ನು ಯಮಪುರಿಯಂತೆ ಗರ್ಜಿಸುತ್ತಿರುವ ಚಕ್ರವ್ಯೂಹಕ್ಕೆ ಕಳುಹಿಸುವುದು ಯುಕ್ತವೇ? ಇದಕ್ಕೆ ಹೇಗಾದರು ಪ್ರವೇಶಿಸಬಹುದು. ಆದರೆ ಹಿಂದಿರುಗಿ ಬರಲಾಗುವುದಿಲ್ಲ. ಅದರಿಂದ ಈ ಮಾತನ್ನು ಬಿಡು " ಎಂದನು. ಅದಕ್ಕವನು ತಂದೆಯೆ! ಸಿಹ್ಮದ ಮರಿಯು ಆನೆಗಳ ಗುಂಪಿಗೆ ನುಗ್ಗಲು ಹೆದರುವುದೇ ? ಅಗಸ್ತ್ಯಮುನಿಯು ಸಮುದ್ರದ ನೀರನ್ನೆಲ್ಲಾ ಕುಡಿಯಲಿಲ್ಲವೇ ! ನಾನು ಸಣ್ಣವಯಸ್ಸಿನವನಾದರೂ ಇದುವರೆಗೆ ನಾಶವಾಗಿರುವ ಶತ್ರುಸೈನಿಕರಿಗಿಂತ ನೂರರಷ್ಟು ಸೈನಿಕರನ್ನು ನಾನಿಂದೊಂದು ದಿನದಲ್ಲಿ ನಾಶಮಾಡಿ ಶತ್ರುರಾಜರನ್ನೆಲ್ಲಾ ಕೊಂದು ಜಯಶೀಲನಾಗಿ ಬರುವೆನು " ಎಂದನು. ಅದನ್ನು ಕೇಳಿ ಧರ್ಮರಾಜನು " ಮಗನೆ! ನಿನ್ನನ್ನು ಯುದ್ಧಕ್ಕೆ ಕಳುಹಿದರೆ ನಿಮ್ಮ ತಂದೆಯ ಮನಸ್ಸು ನೋಯುವದಿಲ್ಲವೇ ? " ಎಂದು ಹೇಳಿದುದಕ್ಕೆ ಅಭಿಮನ್ಯುವು " ತಂದೆಯೆ! ಇದೇನೀ ಭಿನ್ನವಾದ ಮಾತನಾಡುವಿರಿ ? ನಾನು ಅರ್ಜುನನಿಗೆ ಮಾತ್ರ ಮಗನು. ನಿಮಗೆ ಮಗನಲ್ಲವೇ ? ನೀವು ಅಪ್ಪಣೆಯಿತ್ತರೆ ತಂದೆಯು ಅನ್ಯಥಾ ಭಾವಿಸುವನೇ ? ಇಷ್ಟೆಲ್ಲಾ ಪೌರುಷವನ್ನು ಹೇಳಿಕೊಂಡು ಹಿಮ್ಮೆಟ್ಟಿದರೆ ನಾನು ಚಂದ್ರವಂಶಜನೇ ? ನಾನು ಕೃಷ್ಣನ ತಂಗಿಯ ಮಗನಲ್ಲವೇ ? ನನ್ನನ್ನು ತಡೆಯಬೇಡಿ. ನೀವು ಅಪ್ಪಣೆ ಕೊಟ್ಟುಕಳುಹಿ ಅಥವಾ ಕಳುಹದಿರಿ. ನಾನು ನಿಮ್ಮಾಣೆಗೂ ಚಕ್ರವ್ಯೂಹವನ್ನು ಪ್ರವೇಶಮಾಡಿ ಶತ್ರುಗಳನ್ನೆಲ್ಲಾ ತುಂಡುತುಂಡು ಮಾಡದೆ ಬಿಡೆನು " ಎಂದು ಹೇಳಿ ಸಮಸ್ಕರಿಸಿದ ಅಭಿಮನ್ಯುವಿಗೆ ಮನಸ್ಸಿಲ್ಲದಿದ್ದರೂ ಧರ್ಮರಾಜನು ಒಪ್ಪಿಗೆಯಿತ್ತು ಕಳುಹಿದನು. ಯುದ್ಧಸನ್ನದ್ಧನಾಗಿ ಹೊರಟಿರುವ ಮಗನನ್ನು ಸುಭದ್ರೆಯು ಕಂಬನಿಗೂಡಿದ ಕಣ್ಣುಗಳುಳ್ಳವಳಾಗಿ ಮಗನನ್ನು ಕುರಿತು " ಮಗನೆ! ಒರಗೆಯ ಬಾಲಕರ ಜೊತೆಯಲ್ಲಿ ಆಟವಾಡುವುದನ್ನು ಬಿಟ್ಟು ಇಂತಹ ಮಹತ್ಕಾರ್ಯಕ್ಕೆ ಮನಸ್ಸುಮಾಡಿದೆಯಾ? ನೀನಿನ್ನೂ ಹಸುಳೆ. ನಿನಗೆ ಯುದ್ಧಕಾರ್ಯವೆಂದರೇನು? ಯುದ್ಧಮಾಡಲು ಯೋಗ್ಯರಾದ ಪಟುಭಟರಿಪ್ಪತ್ತೇಮಂದಿಗಳಿರುವಾಗ ನೀನೇತಕ್ಕೆ ಈ ಕಾಳಗಕ್ಕೆ ಹೋಗಬೇಕು? ಹೆತ್ತಹೊಟ್ಟೆಗೆ ದುಃಖವನ್ನು ತಂದು ಹೋಗಬೇಡ " ಎಂದು ಬಹುವಿಧವಾಗಿ ತಡೆದಳು. ಆ ಮಾತನ್ನು ಕೇಳಿ ಅಭಿಮನ್ಯುವು " ಅಮ್ಮಾ ! ನೀವೇತಕ್ಕೆ ಯೋಚಿಸುವಿರಿ ? ಕೆಂಡವು ಸಣ್ಣದಾದರೂ ಅರಣ್ಯವನ್ನೆಲ್ಲಾ ಸುಡಲಾರದೇ ? ನಾನು ಸಣ್ಣವಯಸ್ಸಿನವನಾದರೂ ಶತ್ರುಸೈನ್ಯವನ್ನೆಲ್ಲಾ ನಾಶಮಾಡಲಾರನೇ ? ನಾನು ಯುದ್ಧೋತ್ಸಾಹಿಯಾಗಿ ಹೊರಟು ಹಿಮ್ಮೆಟ್ಟಿದರೆ ನಮ್ಮ ಕುಲಕ್ಕೆ ಕುಂದು

ಬರುವುದಿಲ್ಲವೇ ? ತಾಯೇ ! ತಾವೇನೂ ವ್ಯಸನಪಡಬೇಕಾದುದಿಲ್ಲ. ನಾನು ಹೋಗಿ ಶತ್ರುಗಳನ್ನೆಲ್ಲಾ ಜಯಿಸಿ ಆ ಕೌರವನ ಮಕ್ಕಳನ್ನೆಲ್ಲಾ ಯಮನ ಬಾಯಿಗಿಕ್ಕಿ ಹಿಂದಿರುಗುವೆನು " ಎಂದು ಹೇಳಿ ತನ್ನೊಂದಿಗೆಯರಸುಮಕ್ಕಳನ್ನು ಸೇರಿಸಿಕೊಂಡು, ದಿವ್ಯವಾದ ರಥವನ್ನೇರಿ ಯುದ್ಧರಂಗಕ್ಕೆ ಹೊರಟನು. ಹೀಗೆ ಧೈರ್ಯದಿಂದ ಯುದ್ಧಕ್ಕೆ ಬರುತ್ತಿರುವ ಅಭಿಮನ್ಯುವನ್ನು ನೋಡಿ ದ್ರೋಣನು ತನ್ನ ರಥವನ್ನು ಅಭಿಮನ್ಯುವಿಗಿದಿರಾಗಿ ನೂಂಕಿ ಅವನನ್ನು ಕುರಿತು " ಎಲೆ ಮಗು ! ಅಸಹಾಯಶೂರರಾದ ಅನೇಕ ಸುಭಟರಿದ್ದರೂ ನಿನ್ನನ್ನು ಈ ಯುದ್ಧಕ್ಕೆ ಕಳುಹಿಸಿದರೇ ? ಈ ಚಕ್ರವ್ಯೂಹವನ್ನು ಪ್ರವೇಶಿಸುವುದೇ ಕಷ್ಟವು. ಒಂದುವೇಳೆ ಪ್ರವೇಶಿಸಿದರೆ ಹಿಂದಿರುಗುವುದಸಾಧ್ಯವು. ಆದುದರಿಂದ ಈ ಕಾರ್ಯವನ್ನು ಬಿಡು " ಎಂದನು. ಅವಕ್ಕೆ ಅಭಿಮನ್ಯುವು " ಗುರುಗಳೆ ! ಸಣ್ಣವರಿಯಾದರೂ ಆನೆಯು ಬಾಳೆಯ ದೊಡ್ಡವನವನ್ನು ನಾಶಮಾಡುವಂತೆ ನಾನು ಹುಡುಗನಾದರೂ ಈ ದೊಡ್ಡಸೈನ್ಯವನ್ನೆಲ್ಲಾ ನಾಶಮಾಡುವೆನು. ಆನೆಗಳ ದೊಡ್ಡಸಮೂಹವು ಸಿಂಹದಮರಿಗಿದಿರೇ " ? ಎಂದು ಹೇಳಿ ಅವನ ಪಾದಕ್ಕೆ ಪುಷ್ಪಾರ್ಚನೆಮಾಡುವಂತೆ ತನ್ನ ಬಾಣದಿಂದ ರಥವನ್ನೂ ಕುದುರೆಗಳನ್ನೂ ಖಂಡಿಸಿ ಮುಂದಕ್ಕೆ ನಡೆದು ಚಕ್ರವ್ಯೂಹದ ಸಮೀಪಕ್ಕೆಹೋಗಿ ಅಲ್ಲಿದ್ದ ಕೃಪ, ಕೃತವರ್ಮ ಮೊದಲಾದವರನ್ನು ವಿರಥರನ್ನಾಗಿಮಾಡಿ ಮುಂದೆ ನುಗ್ಗಿ ಕೊಡಲಿಯಿಂದ ಅರಣ್ಯವನ್ನು ಕತ್ತರಿಸುವಂತೆ ಅಪರಿಮಿತಸೈನ್ಯವನ್ನು ನಾಶಮಾಡಿ ಚಕ್ರವ್ಯೂಹವನ್ನು ಪ್ರವೇಶಿಸಿದನು. ಆ ವಿಷಯವನ್ನು ಕೇಳಿ ಅವನನ್ನು ಬಿಡಿಸಿಕೊಂಡು ಬರಬೇಕೆಂದು ಭೀಮ, ನಕುಲ, ಸಹದೇವ ಮೊದಲಾದವರು ಬರುತ್ತಿರಲು ಅವರಿಗಿದಿರಾಗಿ ಕರ್ಣ, ದ್ರೋಣ ಮೊದಲಾದವರು ಬಂದು ತಡೆದರು.

ಇತ್ತ ಅಭಿಮನ್ಯುವು ತನಗಿದಿರಾದ ಶತ್ರುಗಳನ್ನು ಕತ್ತರಿಸುತ್ತಾ ಮುಂದಕ್ಕೆ ಹೋಗುತ್ತಿರಲು, ಅದನ್ನು ಕಂಡು ಭೀಷ್ಮರು ಮನಸೊಂದು ಅಭಿಮನ್ಯುವನ್ನು ಕುರಿತು " ಅಣ್ಣಾ ಅಭಿಮನ್ಯು ! ಏನಿದು ? ಸಂತಾನಕ್ಕೆ ಒಬ್ಬನೇ ಮಗನಾಗಿರುವ ನಿನ್ನನ್ನು ಹಿಂದುಮುಂದು ಯೋಚಿಸದೆ ಚಕ್ರವ್ಯೂಹವನ್ನು ಭೇದಿಸುವುದಕ್ಕೆ ಕಳುಹಿಸಿದರೇ ? ನೀನೇನೋ ಒಳಕ್ಕೆ ಬಂದೆ, ಆದರೆ ಹಿಂದಿರುಗುವುದು ಸಾಧ್ಯವಲ್ಲ. ಮಗುವೆ ! ನನ್ನ ಮಾತನ್ನು ಕೇಳು. ನನ್ನೊಡನೆ ಬಾ. ನಾನು ನಿನ್ನನ್ನು ಹೊರಕ್ಕೆ ಕಳುಹಿಸಿಕೊಡುವೆನು. " ಎಂದರು. ಆ ಮಾತನ್ನು ಕೇಳಿ ಅಭಿಮನ್ಯುವು " ತಾತನೆ ! ನಾನೀ ಶತ್ರುಸೈನ್ಯಕ್ಕಳುಕಿ ಈಗ ಹಿಂದಿರುಗಿದರೆ ಚಂದ್ರವಂಶಕ್ಕೆ ಅವಮಾನವಲ್ಲವೇ ? " ಎಂದನು. ಆ ಮಾತನ್ನು ಕೇಳಿ ಭೀಷ್ಮರು ಕಣ್ಣೀರು ತುಂಬಿದವರಾಗಿ

ರಲು, ಅಭಿಮನ್ಯುವು ಅವರ ರಥಕ್ಕೂ ಕುದುರೆಗಳಿಗೂ ಬಾಣಪ್ರಯೋಗಮಾಡಿ ಮುಂದಕ್ಕೆ ನುಗ್ಗಿ ಅನೇಕ ಕುದುರೆ, ಆನೆ, ರಥ, ಭಟರುಗಳನ್ನು ಒಂದೇಸಮನಾಗಿ ಕತ್ತರಿಸಿದನು. ಅದನ್ನು ನೋಡಿ ಕೌರವನ ಮಗನಾದ ಲಕ್ಷ್ಮಣನು ಬಂದು ಇದಿರಾದನು. ಅಭಿಮನ್ಯುವು ಒಂದೇ ದಿವ್ಯಶರದಿಂದ ಅವನ ತಲೆಯನ್ನು ಹಾರಿ ಸಿದನು. ಅದನ್ನು ನೋಡಿ ಅವನ ತಮ್ಮಂದಿರು ಸೂರ್ವರು ಬಂದು ಇದಿರಾದರು. ಆ ಶೂರತಾಗ್ರಣಿಯು ಅವರೆಲ್ಲರನ್ನೂ ಕೊಂದುರುಳಿಸಿದನು ಆ ದಿನ ತಾನೊಬ್ಬನೇ ಒಂದು ಅಕ್ಷೌಹಿಣೀ ಶತ್ರುಸೈನ್ಯವನ್ನು ನಾಶಮಾಡಿದನು. ಆ ಬಾಲಕನ ಶೌರ್ಯ ವನ್ನು ಅಂತರಿಕ್ಷದಲ್ಲಿ ನೋಡುತ್ತಿದ್ದ ಕಿನ್ನರಾದಿ ದೇವತೆಗಳು ಕೊಂಡಾಡಿದರು. ಕೌರವನು ತನ್ನ ಮುಕ್ಕಳೆಲ್ಲರೂ ಸತ್ತುಹೋದುದಕ್ಕಾಗಿ ಅತ್ಯಂತ ಚಿಂತಾಕ್ರಾಂತ ನಾದನು. ಆಗ ಸಿಂಧುರಾಜನು ಕೌರವನ ಅನುಜ್ಞೆಯನ್ನು ಪಡೆದು ಬಂದು ಅಭಿ ಮನ್ಯುವಿನ ಮೇಲೆ ಬಿದ್ದನು. ಸೈಂಧವನೊಡನೆ ಅಭಿಮನ್ಯುವು ಬಹಳ ಕೌಶಲ ದಿಂದ ಯುದ್ಧಮಾಡುತ್ತ ಬಾಣಗಳಿಂದವನನ್ನು ಮುಚ್ಚಿದನು. ಅಷ್ಟುಹೊತ್ತಿಗೆ ಅಭಿಮನ್ಯುವಿನಲ್ಲಿದ್ದ ಅಂಬುಗಳೆಲ್ಲಾ ಮುಗಿದುಹೋದುವು. ಕೊಂಬುಮುರಿದ ಆನೆಯಂತೆ ನಿರಾಯುಧನಾಗಿ ಅಭಿಮನ್ಯುವು ನಿಂತಿರಲು, ಸೈಂಧವನು ಇದೇ ಸಮಯವೆಂದು ಬಗೆದು ತನ್ನ ಬಾಣದಿಂದವನ ತಲೆಯನ್ನು ಕತ್ತರಿಸಿದನು. ವೀರ ಶ್ರೀಯ ಕರುಮಾಡದ ಕಲಶವೋ ಎಂಬಂತೆ ಲೋಕೈಕವೀರನಾದ ಅಭಿಮನ್ಯುವಿನ ತಲೆಯು ಆಕಾಶಕ್ಕೆ ಹಾರಿ ನೆಲಕ್ಕೆ ಬಿದ್ದಿತು. ಅದನ್ನು ಕಂಡ ದೇವತೆಗಳೆಲ್ಲರೂ ಬಹಳವಾಗಿ ಮರುಗಿದರು. ಸೂರ್ಯನು ಅಸ್ತಂಗತನಾದನು. ಸೈನ್ಯವೆಲ್ಲವೂ ಪಾಳೆಯಕ್ಕೆ ಹಿಂದಿರುಗಿತು. ಅತ್ತ ಅರ್ಜುನನು ಸಂಸಪ್ತಕರನ್ನು ಸೋಲಿಸಿ ಹಿಂದಿ ರುಗಿ ಬೀಡಿಗೆ ಬಂದು ಬೀಡಿನಲ್ಲಿ ಬಂಧುಬಳಗದವರೂ ಹೆಚ್ಚಾಗಿ ಸುಭದ್ರೆಯೂ ಅಭಿಮನ್ಯುವಿನ ಮರಣಕ್ಕಾಗಿ ರೋದಿಸುತ್ತಿರುವುದನ್ನು ಕೇಳಿ ಸಿಡಿಲಶಬ್ದವನ್ನು ಕೇಳಿದ ನವಿಲಿನಂತೆ ಬೆದರಿ ಬಳಕ್ಕೆ ಹೋಗಿ ಪುತ್ರನ ಮರಣವಾರ್ತೆಯನ್ನು ಕೇಳಿ ಅತಿಯಾಗಿ ದುಃಖಿಸಿ ಹಂಬಲಿಸಿ ರೋದಿಸುತ್ತಾ "ನನ್ನ ಪುತ್ರನು ಚಕ್ರವ್ಯೂಹ ಭೇದನಕ್ಕೆ ಹೋದ ತೆರನೇನು?" ಎಂದು ಕೇಳಲು, ಧರ್ಮರಾಜನು "ಅರ್ಜುನ! ಕೇಳು, ಚಕ್ರವ್ಯೂಹವನ್ನು ಪ್ರವೇಶಿಸಲು ಎಂತಹ ಬಿಲ್ಲೋಜನೂ ಅನುಮಾನಿಸುವ ನೆಂದು ಮಾತನಾಡುತ್ತಿರುವ ಸಮಯದಲ್ಲಿ ಅಭಿಮನ್ಯುವು ಬಂದು ತಾನು ಆ ವ್ಯೂ ಹವನ್ನು ಭೇದಿಸುವೆನೆಂದು ಹೇಳಿದನು ನಾವೆಷ್ಟುನಿಷೇಧವಾಗಿ ಬೇಡವೆಂದು ಸಮಾ ಧಾನಗೊಳಿಸಿದರೂ ಕೇಳದೆ ತಾನೇ ಹೊರಟುಹೋದನು" ಎನಲು ಆಗ ಪಕ್ಕದ

ಲ್ಲಿದ್ದ ಕೆಲವರು ಅರ್ಜುನನನ್ನು ಕುರಿತು "ಅರ್ಜುನನೆ! ನಿನ್ನ ಪುತ್ರನು ಲೋಕೈಕ ವೀರನು. ಅವನಿಗೆ ಸಮಾನರಾರು? ಧೈರ್ಯದಿಂದ ವ್ಯೂಹವನ್ನು ಹೊಕ್ಕು, ಕುರಿಯ ಹಿಂಡಿಗೆ ತೋಳನುಗ್ಗಿದಂತೆ ಶತ್ರುಗಳನ್ನೆಲ್ಲಾ ನಾಶಮಾಡಿದನು. ಅವನೆಂತಹ ಶೂರನೊ! ಹಸುಳೆಯಾದ ತಾನೊಬ್ಬನೇ ಇಂದು ಒಂದಕ್ಷೌಹಿಣೀ ಸೈನ್ಯವನ್ನು ನಾಶಮಾಡಿರುವನು. ಅವನನ್ನು ಕೊಲ್ಲಲು ಸಾಧ್ಯವಾಗುತ್ತಿದ್ದಿತೇ? ನಖದಂತ ಹೀನವಾದ ಸಿಹ್ಮವನ್ನು ಆನೆಯು ಕೊಲ್ಲುವಂತೆ ಅಂಬುಗಳೆಲ್ಲವೂ ತೀರಿಹೋಗಿ ಬರಿಗೈಯಲ್ಲಿ ನಿಂತಿದ್ದಾಕುಮಾರನನ್ನು ಆ ನಿಷ್ಕರುಣಿಯಾದ ಸೈಂಧವನು ಮೋಸದಿಂದ ಕೊಂದನು" ಎಂದರು. ಅದನ್ನು ಕೇಳಿ ಅರ್ಜುನನು ಅತ್ಯಂತ ಕೋಪಾವಿಷ್ಟನಾಗಿ "ಬರಿಗೈಯಲ್ಲಿ ನಿಂತಿದ್ದ ನನ್ನಾಮಗುವನ್ನು ಸಂಹರಿಸಿದ ನೀಚನಾದ ಸೈಂಧವನನ್ನು ನಾಳೆ ಸಾಯಂಕಾಲದೊಳಗೆ ಕೊಲ್ಲಲಾರದಿದ್ದರೆ ಅಗ್ನಿಪ್ರವೇಶಮಾಡುವೆನು" ಎಂದು ಪ್ರತಿಜ್ಞೆಮಾಡಿದನು.

ಬೆಳಗಾಯಿತು. ಸೈನ್ಯಗಳೆಲ್ಲವೂ ಬಂದು ಕೂಡಿದುವು. ಅಂದು ಸಾಯಂಕಾಲದೊಳಗಾಗಿ ಸೈಂಧವನನ್ನು ಕೊಲ್ಲದಿದ್ದರೆ ಅಗ್ನಿಪ್ರವೇಶಮಾಡುವನೆಂಬ ಅರ್ಜುನನ ಪ್ರತಿಜ್ಞೆಯನ್ನು ಕೇಳಿ, ಕೌರವನು, ಉಪಾಯದಿಂದ ಸೈಂಧವನನ್ನು ಸಾಯಂಕಾಲದವರೆಗೆ ರಕ್ಷಿಸಿಕೊಂಡರೆ, ಅರ್ಜುನನು ಅಗ್ನಿಪ್ರವೇಶಮಾಡುವನೆಂದೂ ಅವನು ಸತ್ತರೆ ತನ್ನ ಕಾರ್ಯವು ಅನುಕೂಲವಾಗುವುದೆಂದೂ ಯೋಚಿಸಿ ಆ ದಿನ ಸೈನ್ಯವನ್ನು ಬಹಳ ಭಯಂಕರವಾದ ರೀತಿಯಲ್ಲಿ ಜೋಡಿಸಿ, ಹೊರಸುತ್ತಿನಲ್ಲಿ ಭಟರೂ, ಅದರಂದೊಳಗೆ ಬಿಲ್ಲುಗಾರರೂ, ಅದರೊಳಗೆ ತುರಗಸೈನ್ಯವೂ, ಅನಂತರ ರಥಗಳೂ, ಅದರೊಳಗೆ ಗಜಸೈನ್ಯವೂ, ನಿಲ್ಲುವಂತೆ ನಿಯಮಿಸಿದನು. ಎಲ್ಲಾ ಸೈನ್ಯದ ಹಿಂದೆ ಸೈಂಧವನನ್ನು ಬಹು ಜೋಪಾನವಾಗಿರಿಸಿ ಅವನ ಮುಂದೆ ಕರ್ಣ, ಭಗದತ್ತ, ಭೂರಿಶ್ರವ ಮೊದಲಾದ ವೀರರನ್ನೂ ಅತನ ಬಲಗಡೆಯಲ್ಲಿ ಕೃಪ, ಕೃತವರ್ಮ ಮೊದಲಾದವರನ್ನೂ ಎಡಗಡೆಯಲ್ಲಿ ದ್ರೋಣ, ಭೀಷ್ಮ, ದುಶ್ಶಾಸನ ಮೊದಲಾದವರನ್ನೂ ಕಾಪಿಟ್ಟನು. ಇತ್ತ ಅರ್ಜುನನು ಭೀಮ, ನಕುಲ, ಘಟೋದ್ಗಜ ಮೊದಲಾದವರನ್ನು ಧರ್ಮರಾಜನಿಗೆ ಕಾವಲಾಗಿರಿಸಿ, ಉಳಿದ ವೀರರೊಡನೆ ಯುದ್ಧಭೂಮಿಗೆ ಬಂದು, ಪ್ರಳಯಕಾಲದ ರುದ್ರನಂತೆ, ಮೃತ್ಯುದೇವತೆಯಂತೆ, ಮಹಾಕೋಪದಿಂದ ಶತ್ರುಸೈನ್ಯದ ಮೇಲೆ ಬಿದ್ದು ಉಲ್ಲೋಲಕಲ್ಲೋಲ ಮಾಡಲುಪಕ್ರಮಿಸಿದನು. ಆಗ ಬಹುಸೈನ್ಯವು ಚಲ್ಲಾಪಿಲ್ಲಿಯಾಯಿತು ಹೀಗೆ ಸೈನ್ಯವನ್ನು ನಾಶಮಾಡುತ್ತಿರುವ ಅರ್ಜುನನಿಗಿದಿರಾಗಿ ಶಲ್ಯನು ಬಂದುಬಿದ್ದು

ಸತ್ಯನು. ಅನಂತರ ಮಾದ್ರೀಶ್ವರನೂ ಭಗದತ್ತನೂ ಇದಿರಾದರು. ಆಗ ಧರ್ಮರಾಜನ ಅಪ್ಪಣೆಯನ್ನು ಹೊಂದಿ ಅರ್ಜುನನ ಸಹಾಯಕ್ಕೆ ಭೀಮನು ಬಂದು ಭಗದತ್ತನನ್ನು ಕೊಂದನು. ಸತ್ಯಕನ ಮೇಲೆ ಬಿದ್ದ ಭೂರಿಸೈನವನ್ನು ಅರ್ಜುನನು ಕೊಂದು ಮುಂದೆ ನುಗ್ಗುತ್ತಿರಲು ದ್ರೋಣನು ಬಂದು ಅವನನ್ನು ಮುತ್ತಿದನು. ಅನ ನೊಡನೆ ಅರ್ಜುನನು ಎರಡು ಜಾವದವರೆಗೆ ಕಾದಿ ಅವನನ್ನು ಹಿಂದಕ್ಕಟ್ಟಿ ಮುಂದೆ ನುಗ್ಗಿ ಹೋಗುವಾಗ ಇದಿರಾದ ಭೀಷ್ಮನ ರಥವನ್ನೂ ಬಿಲ್ಲನ್ನೂ ಕತ್ತರಿಸಿ, ಮುಂದೆಹೋಗಿ ಕೌರವನ ತಮ್ಮಂದಿರನ್ನೂ ಕೃಪ ಕರ್ಣ ಮೊದಲಾದವರನ್ನೂ ಹೊಡೆದು ಅವಮಾನಪಡಿಸಿ ಹಿಂದಿರುಗಿಸಿ ನುಗ್ಗಿ ಹೋಗಿ ಸೈಂಧವನ ಸೈನ್ಯವನ್ನು ಕಂಡು ಅತ್ಯಂತ ಕೋಪದಿಂದವನಮೇಲೆ ಬಿದ್ದನು. ಅರ್ಜುನನ ಕೈಗೆ ಸಿಕ್ಕಿದಮೇಲೆ ತನಗೆ ಉಳಿವಿಲ್ಲವೆಂದು ತಿಳಿದು ಸೈಂಧವನೂ ಬಹಳ ಹೊಡೆದಾಡಿದನು. ಆದರೆ ಲೋಕೈಕವೀರನಾದ ಅರ್ಜುನನ ಮುಂದೆ ನಿಲ್ಲುವರಾರು? ಸ್ವಲ್ಪಹೊತ್ತಿನಲ್ಲೇ ವೀರಪಾರ್ಥನು ಸೈಂಧವನ ತಲೆಯನ್ನು ಕತ್ತರಿಸಿದನು. ಸೂರ್ಯನು ಅಸ್ತನಾದನು. ಎಲ್ಲರೂ ಬೀಡಿಗೆ ಹೋದರು.

೨೯. ಭೀಷ್ಮನಿರ್ಯಾಣ ಸಂಧಿ

ಆ ಮರುದಿನ ಬೆಳಿಗ್ಗೆ ಎರಡುಪಕ್ಷದ ಸೈನ್ಯಗಳೂ ಯುದ್ಧಭೂಮಿಗೆ ಬಂದು ಸೇರಿ ಯುದ್ಧವು ಪ್ರಾರಂಭವಾಯಿತು. ಉಭಯಪಕ್ಷದ ಸೈನ್ಯಗಳ ಅತಿರಥ ಮಹಾರಥರು ಶತ್ರುಸೈನ್ಯವನ್ನು ನಾಶಮಾಡುತ್ತ ಒಹು ಕ್ರೂರತನದಿಂದ ಕಾದಾಡುತ್ತಿದ್ದರು. ಆ ದಿನ ಭೀಮನು ಧರ್ಮರಾಜನ ಅಪ್ಪಣೆಯನ್ನು ಹೊಂದಿ ಯುದ್ಧಕ್ಕೆ ಬಂದು ಪ್ರಳಯಕಾಲದ ರುದ್ರನಂತೆ ಅತ್ಯಂತಕೋಪದಿಂದ ಸೈನ್ಯವನ್ನು ನಾಶಮಾಡುತ್ತಿರಲು ಅವನಮೇಲೆ ಕೌರವನ ನೂರುಮಂದಿ ತಮ್ಮಂದಿರು ಬಂದು ಬಿದ್ದು ಅತ್ಯಂತಕೋಪದಿಂದ ಅವನನ್ನು ಹೊಡೆಯಲುಪಕ್ರಮಿಸಿದರು. ಆಗ ಭೀಮನು ಕೆಲವರನ್ನು ತನ್ನ ಗದೆಯಿಂದ ಹೊಡೆದೂ, ಕೆಲವರನ್ನು ಕೈಯಿಂದ ಗುದ್ದಿಯೂ, ಕೆಲವರನ್ನು ಕಾಲಿನಿಂದ ಒದೆದೂ, ಕೆಲವರನ್ನು ಆಕಾಶಕ್ಕೆ ಎಸೆದೂ, ಕೆಲವರನ್ನು ಒಬ್ಬರಮೇಲೊಬ್ಬರನ್ನು ಎತ್ತಿಹಾಕಿಯೂ ಎಲ್ಲರನ್ನೂ ಕೊಂದನು. ಅಷ್ಟುಹೊತ್ತಿಗೆ ಸಾಯಂಕಾಲವಾಗಲು ಸೈನ್ಯಗಳು ಪಾಳೆಯಕ್ಕೆ ತಿರಳಿದುವು. ಕೌರವನು

ತನ್ನ ತಮ್ಮಂದಿರ ಮರಣಕ್ಕಾಗಿ ವ್ಯಸನಪಡುತ್ತ, ಭೀಷ್ಮರನ್ನು ಕರೆಸಿ ' ನಿಮ್ಮಂತಹ ಜಗದೇಕಸಾಹಸಿಗಳಿದ್ದೂ ನನ್ನ ತಮ್ಮಂದಿರನ್ನು ಪಾಂಡವರಿಗೆ ಒಲಿಗೊಟ್ಟೆನು ' ಎಂದು ಶೋಕದಿಂದ ಹೇಳಲು ಅದಕ್ಕೆ ಅವರು '' ಎಲೈ ಕೌರವನೆ! ನಾಳೆ ನನ್ನ ಪೌರುಷವನ್ನು ನೋಡು '' ಎಂದು ಹೇಳಿ ಸಮಾಧಾನಮಾಡಿದರು. ಮರುದಿನ ಪ್ರಾತಃಕಾಲದಲ್ಲಿ ಎಂದಿನಂತೆ ಸೈನ್ಯಗಳು ಒಂದು ಸೇರಿದುವು. ಭೀಷ್ಮನು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ದೇವರಿಗೆ ವಂದಿಸಿ ಅಭೇದ್ಯವಾದ ವಜ್ರಕವಚವನ್ನು ತೊಟ್ಟು ಇಪ್ಪತ್ತುವಿಧವಾದ ಆಯುಧಗಳಿಂದ ಕೂಡಿದ ದಿವ್ಯರಥವನ್ನೇರಿ ಒಂದು ಅಕ್ಷೌಹಿಣೀ ಸೈನ್ಯಸಮೇತನಾಗಿ ಯುದ್ಧರಂಗಕ್ಕೆ ಬಂದು ಕಡೆಗಾಲದ ರುದ್ರನಂತೆ ಪಾಂಡವರ ಸೇನೆಗಿದಿರಾಗಿ ಬಂದು ಅರ್ಜುನನ ಮೇಲೆ ಬಿದ್ದನು. ಭೀಷ್ಮನು ಪ್ರಯೋಗಿಸಿದ ದಿವ್ಯಾಸ್ತ್ರಗಳನ್ನೆಲ್ಲ ಅರ್ಜುನನು ಪ್ರತಿಶರಗಳಿಂದ ಖಂಡಿಸಿದನು. ಅತ್ಯಂತಕೋಪಾವಿಷ್ಟನಾಗಿದ್ದ ಭೀಷ್ಮನ ಹೊಡೆತದಿಂದ ಧರ್ಮರಾಜನ ಬಹು ಸೈನ್ಯವು ನಾಶವಾಯಿತು. ಅಷ್ಟುಹೊತ್ತಿಗೆ ಸಾಯಂಕಾಲವಾಗಲು ಎಲ್ಲರೂ ಬೀಡಿಗೆ ಹೋದರು. ಅಂದು ರಾತ್ರಿ ಧರ್ಮರಾಜನು ತನ್ನ ತಮ್ಮಂದಿರೊಡನೆ '' ಅನುಜರೆ! ಇಂದಿನ ಯುದ್ಧದಲ್ಲಿ ಭೀಷ್ಮರು ತೋರಿದ ಸಾಹಸವನ್ನು ನೋಡಿದಿರಲ್ಲವೇ? ಇಂತಹ ಸಾಹಸವನ್ನು ನಾನು ಎಲ್ಲಿಯೂ ನೋಡಿಯೂ ಕೇಳಿಯೂ ಇಲ್ಲ. ಜಯಲಕ್ಷ್ಮಿಯು ಅವರ ಕೈಸೇರುವಳು. ನಮ್ಮನ್ನು ಬಾಲ್ಯದಿಂದಲೂ ಸಾಕಿದವರೇ ನಮ್ಮ ಮೇಲೆ ಕೈಮಾಡಿದರೆ ರಕ್ಷಿಸುವರಾರು? ಬೇಲಿಯೇ ಹೊಲವನ್ನು ಮೇದಂತೆಯೂ ತಾಯಿ ಹಾಲೇ ಮಕ್ಕಳಿಗೆ ವಿಷವಾದಂತೆಯೂ ಆಯಿತಲ್ಲ? ಇದಕ್ಕುಪಾಯವೇನು?'' ಎಸಲು ಅದಕ್ಕೆ ಅರ್ಜುನನು '' ಅಣ್ಣಾ! ಇದಕ್ಕೆ ಚಿಂತೆಯೇಕೆ? ಭೀಷ್ಮರು ವಯೋವೃದ್ಧರು ಮತ್ತು ಗುಣವಂತರು. ಅವರಿಗೆ ವೈರಾಗ್ಯಹುಟ್ಟುವಂತೆ ನಿರ್ವೇಗನೀತಿಯನ್ನು ಬೋಧಿಸಿದರೆ ನಮ್ಮ ಕಾರ್ಯವು ಕೈಗೂಡುವುದು ಎಂದು ಹೇಳಿದನು. ಧರ್ಮರಾಜನು ಆ ಮಾತನ್ನು ಅನುಮೋದಿಸಿ ತಕ್ಕ ಜನಗಳನ್ನು ಕಳುಹಿಸಿ ಭೀಷ್ಮರಿಗೆ ವೈರಾಗ್ಯನೀತಿಯನ್ನು ಹೇಳಿಸಿದನು. ಅದರಿಂದ ಭೀಷ್ಮರಿಗೆ ವೈರಾಗ್ಯವುಂಟಾದುದೆಂದು ಆ ಬೋಧಕರಿಂದ ತಿಳಿದು ಧರ್ಮರಾಜನು ತುಷ್ಟನಾದನು. ಅತ್ತ ಭೀಷ್ಮನು ತಾನು ಸಲಹಿದ ಬಾಲಕರಮೇಲೆ ತಾನೇ ಕೈಮಾಡುವುದು ನ್ಯಾಯವಲ್ಲವೆಂದೂ ಮನುಷ್ಯನು ತುಚ್ಛವಾದ ಆಶೆಗೊಳಗಾಗಿ ಅನಿತ್ಯವಾದೀ ಸಂಸಾರದಲ್ಲಿ ಬಿದ್ದು ನರಳುವನೆಂದೂ ಭಾವಿಸಿ ನಿರ್ವೇಗವನ್ನು ಹೊಂದಿ ಆಂದಿನ ರಾತ್ರಿಯನ್ನು ಕಳೆದು ಮರುದಿನ ಪ್ರಾತಃಕಾಲ ಸೈನ್ಯಮಧ್ಯದಲ್ಲಿ ಬಂದುನಿಂತರೂ '' ಈ ಸಂಸಾರ

ಸುಖವು ಹಿಂಸಾದಿದೋಷಗಳಿಂದುಂಟಾದುದು " ಎಂದು ಭಾವಿಸಿ ಸಂಪೂರ್ಣವಾಗಿ ಆಶೆಯನ್ನು ಬಿಟ್ಟು ಮನಸ್ಸಿನಲ್ಲಿ ಉಪಶಾಂತತೆಯನ್ನು ಹೊಂದಿದನು. ಹೊರಗೆ ಮಾತ್ರ ರೌದ್ರಭಾವವನ್ನು ತೋರ್ಪಡಿಸುತ್ತ ಧನುರ್ಧಾರಿಯಾಗಿ ರಥವನ್ನೇರಿ ಶತ್ರುಸೈನ್ಯಕ್ಕೆದಿರಾದನು. ಆಗ ಮೋಕ್ಷಗಾಮಿಗಳ ಮೂರ್ತಿಯನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಲೂ ತನು ಬೇರೆ ಆತ್ಮನು ಬೇರೆ ಎಂದು ಭಾವಿಸುತ್ತಲೂ ದೀಕ್ಷಾಕಾಂಕ್ಷಿಯಾಗಿದ್ದ ಆ ಭೀಷ್ಮನು ಪಾದರಸದಿಂದ ಮುಚ್ಚಲ್ಪಟ್ಟ ಚಿನ್ನದಂತೆ ಪ್ರಕಾಶಿಸಿದನು. ನೋಡುವವರ ಕಣ್ಣಿಗೆ ಬಿಲ್ಲಿನಲ್ಲಿ ಬಾಣಗಳನ್ನು ಸೇರಿಸಿ ಹೊಡೆಯುವವನಂತೆ ತೋರಿಸುತ್ತ ನಿಂತಿದ್ದ ಭೀಷ್ಮನಿಗೆ ಅರ್ಜುನನು ಪ್ರಯೋಗಿಸಿದ ಅನೇಕ ಬಾಣಗಳು ದೇಹದಲ್ಲಿ ನಾಟಿದುವು. ಗರಿಮಾತ್ರ ಹೊರಗೆ ಕಾಣಿಸುತ್ತ ದೇಹದಲ್ಲಿ ನಾಟಿದ್ದ ಆ ಬಾಣಗಳಿಂದ ಕೂಡಿದ ಭೀಷ್ಮನು ಹೂವುಗಳಿಂದ ಕೂಡಿದ ಮಂದಾರವೃಕ್ಷದಂತೆಯೂ ಆಕಾಶಕ್ಕೆ ಹಾರಿಹೋಗಲೆತ್ನಿಸುತ್ತಿರುವ ಮನುಷ್ಯ ಪಕ್ಷಿಯೋ ಎಂಬಂತೆಯೂ ಶೋಭಿಸಿದನು. ದೇಹದಿಂದ ಹೊರಕ್ಕೆಬಂದು ರಕ್ತದಿಂದ ಕೂಡಿದ ಅಂಬುಗಳ ಕೊನೆಗಳು ಭೀಷ್ಮನ ತೇಜಸ್ಸೆಂಬ ವೃಕ್ಷದ ಮೊಳಕೆಗಳಂತೆ ತೋರುತ್ತಿದ್ದುವು. ಆ ಬಾಣಗಳ ಭಾರದಿಂದ ಭೀಷ್ಮನು ನಿಲ್ಲಲಾರದೆ ರಥದ ಕಂಭವನ್ನೊರಗಿ ನಿಂತನು. ಅದನ್ನು ನೋಡಿದ ಧರ್ಮರಾಜನ ಸೈನಿಕರು ಸಂತೋಷದಿಂದ ಬೊಬ್ಬಿಟ್ಟರು. ಅಷ್ಟುಹೊತ್ತಿಗೆ ಇನನು ಅಸ್ತಂಗತನಾದನು. ಸೈನ್ಯಗಳು ಬೀಡಿಗೆ ತೆರಳಿದುವು. ಎಡೆಬಿಡದೆ ನಾಟಿದ್ದ ಅಂಬುಗಳಿಂದಾದ ನೋವನ್ನು ಸ್ವಲ್ಪವೂ ಲೆಕ್ಕಿಸದೆ, ಆತ್ಮನನ್ನು ದೇಹದಿಂದ ಬೇರೆಯಾಗಿಸಿ, ಅಕ್ಷಯವಾದ ಸುಖವನ್ನು ಕೊಡುವ ಪವಿತ್ರರಾದ ಪಂಚಪರಮೇಷ್ಠಿಗಳನ್ನು ಧ್ಯಾನಿಸುತ್ತ ಭೀಷ್ಮನು ದೇಹಭಾರವನ್ನಿಳುಸಿ ಮೊದಲನೆಯ ಸ್ವರ್ಗದಲ್ಲಿ ದೇವನಾಗಿ ಹುಟ್ಟಿದನು.

ಇತ್ತ ಆ ಮರುದಿನ ಎಂದಿನಂತೆ ಸೈನ್ಯಗಳು ಯುದ್ಧರಂಗಕ್ಕೆ ಬಂದು ಸೇರುತ್ತಿರಲು, ಕೌರವನು ಕರ್ಣನನ್ನು ಕರೆಸಿ " ಭೀಷ್ಮರಂತಹ ಸಾಹಸಿಯನ್ನುಕೊಂದ ಅರ್ಜುನನಿಗೆ ಸಮನಾರು? ತನ್ನ ಪ್ರತಿಜ್ಞೆಯಂತೆ ಚಕ್ರವ್ಯೂಹವನ್ನೊಡೆದು ಸೈಂಧವನನ್ನುಕೊಂದ ವೀರನಾದ ಕಿರೀಟಿಗೆ ಪ್ರತಿಯಾರುಂಟು? ನನ್ನ ನೂರುಜನ ಮಕ್ಕಳನ್ನು ಲೆಕ್ಕವಿಲ್ಲದೆ ಕೊಂದ ಅಭಿಮನ್ಯುವಿಗೆ ಸಮನಾದ ಶೂರನಾರುಂಟು? ಒಂದು ಗಳಿಗೆಯಲ್ಲಿ ನನ್ನ ತಮ್ಮಂದಿರು ನೂರ್ವರನ್ನೂ ಕೊಂದ ಭೀಮನಿಗೆ ಸಮನಾರು? ಹೇಳು " ಎನಲು ಕೇಳಿ ಕರ್ಣನು " ಇಂದು ನನ್ನ ಸಾಹಸವನ್ನು ನೋಡು" ಎಂದು ಹೇಳಿ ಧನುರ್ಧಾರಿಯಾಗಿ ರಥವನ್ನೇರಿ ವಜ್ರಕವಚವನ್ನು ಧರಿಸಿ ಕೌರವನ

ಒಂದು ಅಕ್ಷೌಹಿಣೀ ಸೈನ್ಯವನ್ನೂ ತನ್ನ ಸೈನ್ಯವನ್ನೂ ಸೇರಿಸಿಕೊಂಡು ಯುದ್ಧ ರಂಗಕ್ಕೆ ಬಂದನು. ಕರ್ಣನ ಏಟನ್ನು ತಡೆಯಲಾರದೆ ಪಾಂಡವರ ಸೈನ್ಯವೆಲ್ಲವೂ ಚಲ್ಲಾಪಿಲ್ಲಿಯಾದುದು. ಅದನ್ನು ನೋಡಿ ಭೀಮನು ಅತ್ಯಂತಕೋಪದಿಂದ ಕರ್ಣನಿಗಿದಿರಾದನು. ಅವನನ್ನು ಕರ್ಣನು ಒಂದೇ ಬಾಣದಿಂದ ಮೂರ್ಛೆಗೊಳಿಸಿದನು ಆಗ ಘಟೋದ್ಗಜನು ಕರ್ಣನಿಗಿದಿರಾಗಿ ಅನೇಕ ಬಲವನ್ನು ಸಂಹರಿಸಿದನು ಕರ್ಣನು ಅವನನ್ನು ಸಂಹರಿಸಿದನು; ಘಟೋದ್ಗಜನ ಮರಣವನ್ನು ನೋಡಿ ಕುಪಿತನಾದ ಧರ್ಮಜನು ಮುಂದೆ ಬಂದನು. ಕರ್ಣನು ಅವನನ್ನು ವಿರಥನನ್ನಾಗಿ ಮಾಡಿದನು; ಬಳಿಕ ನಕುಲಸಹದೇವರು ಬಂದರು; ಅವರನ್ನೂ ಕರ್ಣನು ಹಿಮ್ಮೆಟ್ಟಿಸಿದನು.

ಮತ್ತೊಂದು ಕಡೆ ಅರ್ಜುನನು ತನಗಿದಿರಾದ ಶತ್ರುರಾಜರೊಡನೆ ಯುದ್ಧ ಮಾಡುತ್ತಿದ್ದನು. ಬಲರಾಮನೊಂದು ಕಡೆ ಜರಾಸಂಧನ ಮಗ ಕಾಲವಯನೊಡನೆ ಯುದ್ಧಮಾಡಿ ಅವನನ್ನೂ ಅವನಕಡೆಯ ನಾಲ್ಕುಸಾವಿರ ಮುಕುಟಬದ್ಧರನ್ನೂ ಕೊಂದನು. ಆಗ ಸಾಯಂಕಾಲವಾಯಿತು. ಯುದ್ಧವನ್ನು ನಿಲಿಸಿ ಎಲ್ಲರೂ ತಮ್ಮ ಪಾಳೆಯಕ್ಕೆ ಹೋದರು.

ಮರುದಿನ ಕೌರವನು ದ್ರೋಣನಿಗೆ ವೀರಪಟ್ಟವನ್ನು ಕಟ್ಟಿ ಕಳುಹಿದನು. ಬಿಲ್ಲುವಿದ್ಯೆಯಲ್ಲಿ ಶ್ರೇಷ್ಠನಾದ ದ್ರೋಣನ ಏಟಿನಿಂದ ಪಾಂಡವರ ಸೈನ್ಯವು ಬಹಳವಾಗಿ ನಾಶವಾಯಿತು. ಅದನ್ನು ನೋಡಿ ದ್ರುಪದನು ದ್ರೋಣನಿಗಿದಿರಾಗಲು ದ್ರೋಣನು "ಸಾಯುವುದಕ್ಕೆ ನನ್ನೊಡನೆ ಯುದ್ಧಕ್ಕೆ ಬಂದೆಯಾ? ಬೇಡ. ನಾನು ಸಾಮಾನ್ಯನಲ್ಲ. ನನ್ನ ಕೈಯನ್ನು ನೋಡು" ಎಂದನು. ಅದಕ್ಕೆ ದ್ರುಪದನು "ಎಲವೋ ಬ್ರಾಹ್ಮಣ! ದೊಡ್ಡ ಬಾಳೆಯೆಲೆಯನ್ನು ಹಾಕಿ ರಾಜಾನ್ನವನ್ನೂ, ದೋಸೆ, ಕಡುಬು, ಹಾಲು, ತುಪ್ಪ ಮೊದಲಾದ ಭಕ್ಷ್ಯಭೋಜ್ಯಗಳನ್ನೂ ಬಡಿಸಿದರೆ ಆಗ ನಿನ್ನ ಕೈಯನ್ನು ನೋಡಬಹುದು" ಎಂದು ಮೂದಲಿಸಲು ದ್ರೋಣನು ಒಂದೇ ದಿವ್ಯಾಸ್ತ್ರದಿಂದವನನ್ನು ಸಂಹರಿಸಿದನು. ಬಳಿಕ ಅವನ ಮಗನಾದ ದೃಷ್ಟದ್ಯುಮ್ನನು ತಂದೆಯ ಮರಣದಿಂದ ಕಡುಗೋಪವನ್ನು ತಾಳಿ ದ್ರೋಣನಮೇಲೆ ಬಿದ್ದನು. ಅವನಮೇಲೆಯೂ ದ್ರೋಣನೊಂದು ದಿವ್ಯಾಸ್ತ್ರವನ್ನು ಪ್ರಯೋಗಿಸಿದನು. ಆದರೆ ಅದು ಬಲಹೀನವಾದುದನ್ನು ನೋಡಿ ದ್ರೋಣನು ಆಶ್ಚರ್ಯದಿಂದ ನಿಂತನು. ಆಗ ದೃಷ್ಟದ್ಯುಮ್ನನು ಬಿಟ್ಟ ಬಾಣವು ದ್ರೋಣನ ತಲೆಯನ್ನು ಹಾರಿಸಿತು.

ಮತ್ತೊಂದೆಡೆಯಲ್ಲಿ ಜರಾಸಂಧನ ತಮ್ಮನಾದ ಶಂಕುಕರ್ಣನು ಎರಡು ಸಾವಿರ ಮಕುಟಬದ್ಧರೊಡನೆ ಬಂದು ಕೃಷ್ಣಸಕಡೆಯ ನಂದನೆಂಬ ರಾಜನೊಡನೆ ಯುದ್ಧಮಾಡುತ್ತಿದ್ದನು.

ಕೌರವನು ದ್ರೋಣನ ಮರಣಕ್ಕಾಗಿ ದುಃಖಿಸುತ್ತಿರಲು ಆಗ ಕರ್ಣನು "ಎಲೈ ಕೌರವನೆ! ಏಕೆ ದುಃಖಿಸುವೆ? ನಿನ್ನ ಸೈನ್ಯದಲ್ಲಿನ್ನೂ ಅನೇಕಮಂದಿ ಸುಭಟರಿರುವರು. ಉಭಯಪಕ್ಷದಲ್ಲಿಯೂ ಮರುಕವುಳ್ಳವರಾಗಿದ್ದ ಭೀಷ್ಮ, ದ್ರೋಣರ ಮರಣಕ್ಕಾಗಿ ವ್ಯಸನವೇಕೆ? ನಾನಿನ್ನೂ ಬದುಕಿರುವೆನು. ಯುದ್ಧದಲ್ಲಿ ಅವರಿವರೆಂದು ನೋಡದೆ ಎಲ್ಲರನ್ನೂ ನಾಶಮಾಡಿಬಿಡುವೆನು. ಕೌಂತೇಯರೋ, ಗಿವುಂತೇಯರೋ, ಯಾರುತಾನೆ ನನ್ನ ಅಸ್ತ್ರಕ್ಕೆ ಇದಿರಾಗಬಲ್ಲರು? ಯೋಚನೆಯನ್ನು ಬಿಡು" ಎಂದು ಸಮಾಧಾನಮಾಡಲು, ಕೌರವನು ಅವನಿಗೆ ಆ ದಿನದ ವೀರಪಟ್ಟವನ್ನು ಕಟ್ಟಿ ಶಲ್ಯನನ್ನು ಕರೆಯಿಸಿ "ನೀನೂ ಕರ್ಣನೂ ಕೈತೆಗೆದುದರಿಂದ ನನ್ನ ಸಹೋದರರೂ ಪುತ್ರರೂ ನಾಶವಾಗಿ ನಾನೊಬ್ಬನೇ ಉಳಿದಿರುವೆನು. ನೀವೀರ್ವರೂ ನನ್ನೆರಡು ತೋಳುಗಳಂತೆಯೂ ಎರಡು ಕಣ್ಣುಗಳಂತೆಯೂ ಇರುವಿರಿ. ಈ ಪರಾಭವವು ನಿಮಗಲ್ಲದೆ ನನಗಲ್ಲ." ಎಂದು ಕಣ್ಣಿನಲ್ಲಿ ಕಂಬನಿಯನ್ನು ತಂದು ಹೇಳಲು ಆ ಮಾತಿಗೆ ಶಲ್ಯನು "ಎಲೈ ಕುರುರಾಜನೆ! ಸತ್ಪುರುಷರಿಗೆ ದುಃಖಪಟ್ಟರೆ ಅವರು ಜೀವಿಸುವರೇ? ಇದನ್ನು ತಿಳಿದ ನೀನು ಹೀಗೆ ದುಃಖಿಸಬಹುದೇ? ನಿನ್ನ ಮಕ್ಕಳನ್ನೂ ಸಹೋದರರನ್ನೂ ಕೊಂದ ಆ ಪಾಂಡವರನ್ನು ನಿಜವಾಗಿಯೂ ಯುದ್ಧದಲ್ಲಿ ಕೊಲ್ಲುವೆನು. ನೀನು ಚಿಂತೆಯನ್ನು ಬಿಡು" ಎಂದು ಅವನನ್ನು ಸಮಾಧಾನಪಡಿಸಿದನು. ಆ ಮಾತನ್ನು ಕೇಳಿ ಕೌರವನು ತುಷ್ಟನಾಗಿ "ನೀನು ಹಾಗೆ ನನಗೆ ಸಹಾಯಮಾಡುವೆಯಾದರೆ ನಾನಾಡಿದ ಮಾತನ್ನು ಮನಸ್ಸಿನಲ್ಲಿಡದೆ ಮನ್ನಿಸು" ಎಂದು ಹೇಳಿ ಶಲ್ಯನಿಂದ ಭರವಸೆಯನ್ನು ಹೊಂದಿ "ಈ ದಿನ ಕರ್ಣನು ಪಾಂಡವರನ್ನು ನಿಜವಾಗಿಯೂ ಕೊಲ್ಲುವನು, ಸಂದೇಹವಿಲ್ಲ. ಆದುದರಿಂದ ನೀನು ಅವನಿಗೆ ಸಾರಥಿಯಾಗಬೇಕು" ಎಂದು ಆತನನ್ನೊಡಂಬಡಿಸಿ ಕಳುಹಿದನು. ಆ ವರ್ತಮಾನವನ್ನು ಕೇಳಿ ಅರ್ಜುನನು ಚೆನ್ನಾಗಿ ಮಾತಾಡಬಲ್ಲ ಕೆಲವರನ್ನು ಕರ್ಣನಬಳಿಗೆ ಕಳುಹಿದನು. ಅವರು ಬಂದು ಕರ್ಣನನ್ನು ಕಂಡು ಅವನನ್ನು ಬಹಳವಾಗಿ ಹೊಗಳಿ ಮರುದಿನ ಯುದ್ಧದಲ್ಲಿ ಅರ್ಜುನನೇ ಬರುವುದರಿಂದ ಧೈರ್ಯ ಸಾಹಸಗಳಿಂದ ಯುದ್ಧಮಾಡಬೇಕೆಂದು ಹೇಳಲು ಆ ಮಾತಿಗೆ ಕರ್ಣನು ನಕ್ಕು "ರೋಗಿ ಬಯಸಿದುದನ್ನೇ ವೈದ್ಯನು ಹೇಳಿದಂತಾಯಿತು. ಬರಹೇಳು" ಎಂದು

ಹೇಳಿ ಕಳುಹಿ ತಾನು ಮನಸ್ಸಿನಲ್ಲಿ " ಶೂರರಾದ ಪಾಂಡವರು ನನಗೆ ಸಹೋದರರು. ಅವರನ್ನು ಕೊಂದರೆ ಪಾಪಸಂಘಟನೆಯಾಗುತ್ತದೆ. ಆದರೆ ಕೌರವನು ನನ್ನನ್ನು ನಂಬಿ ನನ್ನ ಬಲದಿಂದಲೇ ಅವರಿಗೆ ರಾಜ್ಯವನ್ನು ಕೊಡಲೊಪ್ಪದಿರುವನು. ಆದುದರಿಂದ ಯುದ್ಧಮಾಡುವುದೇ ನ್ಯಾಯವು. ಆಗಲಿ, ಅನ್ನವಿತ್ತು ಸಾಕಿ ನನ್ನನ್ನೇ ನಂಬಿರುವ ಕೌರವನಿಗಾಗಿ ಈ ಪ್ರಾಣವನ್ನೊಪ್ಪಿಸುವೆನು " ಎಂದು ಮರುದಿನ ಜಿನಪೂಜನಾದಿ ನಿತ್ಯಕರ್ಮಗಳನ್ನು ತೀರಿಸಿಕೊಂಡು ಯುದ್ಧರಂಗಕ್ಕೆ ಬರಲನುವಾದನು. ಅಷ್ಟರಲ್ಲಿ ಜರಾಸಂಧನು ಜಯದ್ರಥನೆಂಬವನನ್ನು ಮುಂದಟ್ಟಿದನು. ಕೃಷ್ಣನು ಆವನಿಗಿದಿರಾಗಲು ಪದ್ಮನೆಂಬ ರಾಜನನ್ನು ಕಳುಹಿದನು. ಆ ದಿನದ ಯುದ್ಧಕ್ಕೆ ಬಂದು ನಿಲ್ಲುವ ಕರ್ಣಾರ್ಜುನರನ್ನು ಅವರ ಸೈನ್ಯದವರು ಅವರ ಬಿರುದುಗಳನ್ನೆತ್ತಿ ಕೊಂಡಾಡುತ್ತಿದ್ದರು.

೩೦. ಕರ್ಣಾರ್ಜುನರ ಕಾಳಗ ಸಂಧಿ

ಆ ದಿನ ನಡೆಯಲಿದ್ದ ಕರ್ಣಾರ್ಜುನರ ಯುದ್ಧವನ್ನು ನೋಡಲು ಸಮಸ್ತದೇವತೆಗಳೂ ಆಕಾಶದಲ್ಲಿ ಬಂದು ನಿಂತರು. ಯುದ್ಧವು ಮೊದಲಾಯ್ತು. ಉಭಯ ಪಕ್ಷದ ಸೈನ್ಯಗಳೂ ಅತ್ಯಂತ ಭಯಂಕರವಾಗಿ ಯುದ್ಧಮಾಡಲಾರಂಭಿಸಿದುವು. ಮುಂದೆ ಬರುತ್ತಿದ್ದ ಶಕುನಿಗೆ ಭೀಮನು ಇದಿರಾಗಿ ತನ್ನ ಗದೆಯಿಂದವನ ಸೈನ್ಯವನ್ನೆಲ್ಲ ನಾಶಮಾಡಿದನು. ಅದನ್ನು ನೋಡಿ ಶಕುನಿಯು ಕೋಪದಿಂದ ಮುಂದೆ ನುಗ್ಗಿದನು; ಅವನನ್ನು ಸಾಳುವನು ಕೊಂದನು. ಅನಂತರ ಭೀಮನನ್ನು ಹಿಂದಿಕ್ಕಿ ಅರ್ಜುನನು ಮುಂದೆ ಬಂದು ಕರ್ಣನಿಗಿದಿರಾದನು. ಇಬ್ಬರೂ ಧನುಷ್ಟಂಕಾರಮಾಡಿ ಬಾಣಗಳನ್ನು ಹೂಡಿ ಪ್ರಯೋಗಿಸಲು ಆ ಬಾಣಗಳು ಆಕಾಶವನ್ನು ವ್ಯಾಪಿಸಿದುವು. ಕೆಲವು ಹೊತ್ತು ಸಾಮಾನ್ಯಶರಗಳಿಂದ ಯುದ್ಧಮಾಡಿ ಅನಂತರ ಮಂತ್ರಾಸ್ತ್ರಗಳಿಗೆ ಕೈನೀಡಿ ಕರ್ಣನು ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಅರ್ಜುನನು ಅದನ್ನು ವಾರುಣಾಸ್ತ್ರದಿಂದ ಖಂಡಿಸಿದನು. ಕರ್ಣನು ಶೈಲಾಸ್ತ್ರವನ್ನು ಬಿಟ್ಟನು. ಅದನ್ನು ಅರ್ಜುನನು ವಜ್ರಾಸ್ತ್ರದಿಂದ ಕತ್ತರಿಸಿದನು. ಸರ್ಪಾಸ್ತ್ರವನ್ನು ಗರುಡಾಸ್ತ್ರದಿಂದ ಖಂಡಿಸಿದನು. ಹೀಗೆ ಕರ್ಣನು ಪ್ರಯೋಗಿಸಿದ ಮಂತ್ರಾಸ್ತ್ರಗಳನ್ನು ಅರ್ಜುನನು ಪ್ರತಿಶರಗಳಿಂದ ಖಂಡಿಸಿದನು. ಅದನ್ನು

ನೋಡಿ ಕರ್ಣನು ಅತ್ಯಂತ ಕೋಪಾವಿಷ್ಟನಾಗಿ ದಿವ್ಯಾಸ್ತ್ರಗಳಿಗೆ ಕೈನೀಡಿ ಕಾಲಾಗ್ನಿಶರನನ್ನು ಹೂಡಿ ಪ್ರಯೋಗಮಾಡಲನುವಾದನು. ಆಗ ತಾನು ತನ್ನ ತಮ್ಮಂದಿರಮೇಲೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸುವುದಿಲ್ಲವೆಂದು ತನ್ನ ತಾಯಿಯಾದ ಕೊಂತಿಗೆ ಮಾಡಿದ ಭಾಷೆಯು ನೆನಪಿಗೆ ಒಂದು "ಸಮುದ್ರವು ಮೇರೆದಪ್ಪಿದರೂ ನಾನು ಕೊಟ್ಟಭಾಷೆಗೆ ತಪ್ಪಲಂಜೆನು" ಎಂದು ನಿರ್ಧರಿಸಿ ಬಾಣಪ್ರಯೋಗಮಾಡದೆ ನಿಶ್ಚೇಷ್ಟನಾಗಿ ನಿಂತನು. ಆಗ ಅರ್ಜುನನು "ಎಲವೊ ಕರ್ಣ! ಕೌರವನು ನಿನ್ನನ್ನೇ ನಂಬಿಕೊಂಡಿರುವನು. ಅವನಿಗೆ ದ್ರೋಹಮಾಡಿ ಯುದ್ಧಮಾಡದೆ ಸುಮ್ಮನೆ ಏಕೆ ನಿಂತಿರುವೆ?" ಎಂದು ಮೂದಲಿಸಿದನು. ಆಗ ಶಲ್ಯನು ತನ್ನ ವಿದ್ಯೆಯ ಬಲದಿಂದ ತಮ್ಮ ರಥದಂತಹ ಅನೇಕ ರಥಗಳನ್ನು ನಿರ್ಮಿಸಿದನು. ಎತ್ತ ನೋಡಿದರೂ ಕರ್ಣನ ರಥಗಳೇ ಕಣ್ಣಿಗೆ ಕಾಣಿಸುವಂತಾದುವು. ಆಗ ಅರ್ಜುನನು ಆಶ್ಚರ್ಯಹೊಂದಿದನು. ಅದನ್ನು ನೋಡಿ ಅರ್ಜುನನ ಸಾರಥಿಯಾದ ಕೃಷ್ಣನು ಶಲ್ಯನ ಬಹುರೂಪಿಣೀ ವಿದ್ಯೆಯಿಂದ ಹಾಗಾಗಿರುವುದೆಂದೂ ಅವನನ್ನು ಮೊದಲು ಕೊಂದರೆ ಬಳಿಕ ಕರ್ಣನನ್ನು ಸೋಲಿಸಬಹುದೆಂದೂ ಅರ್ಜುನನಿಗೆ ಹೇಳಿದನು. ಕೂಡಲೆ ಅರ್ಜುನನು ಪರವಿದ್ಯಾಭೇದಿನಿಯೆಂಬ ದಿವ್ಯಾಸ್ತ್ರದಿಂದಾ ಬಹುರೂಪಿಣೀ ವಿದ್ಯೆಯನ್ನು ಪರಿಹರಿಸಿ ರಥವನ್ನು ಮುಂದಕ್ಕೆ ನೂಂಕಿ ಅಮೋಘವಾದ ಬಾಣದಿಂದ ಶಲ್ಯನ ತಲೆಯನ್ನು ಹಾರಿಸಿದನು. ಸಾರಥಿಯಾದ ಶಲ್ಯನ ಮರಣದಿಂದ ಬಹುಕೋಪಗೊಂಡು ಕರ್ಣನು ದಿವ್ಯಾಸ್ತ್ರಪ್ರಯೋಗಮಾಡಲುದ್ಯುಕ್ತನಾಗುವಷ್ಟರಲ್ಲಿ ಅರ್ಜುನನು ಒಂದು ದಿವ್ಯಾಸ್ತ್ರದಿಂದ ಅವನ ಕಿರೀಟವನ್ನು ಹಾರಿಸಿದನು. ಕುರುಭೂಪತಿಯ ಜಯಲಕ್ಷ್ಮೀಮಂಟಪದ ಮಣಿಕಲಶವು ಉರುಳಿತೋ, ಕೌರವನ ಪುಣ್ಯಪುಂಜದ ಭರಣಿಯ ಮುಚ್ಚಳವು ಕಳಚಿಬಿದ್ದಿತೋ ಎಂಬಂತೆ ಆ ಕರ್ಣನ ಮಣಿಕಿರೀಟವು ಕೆಳಕ್ಕೆ ಬಿದ್ದಿತು. ಸೂರ್ಯನು ಅಸ್ತೋನ್ಮುಖನಾದನು. ಎಲ್ಲರೂ ಪಾಳೆಯಕ್ಕೆ ಹೋದರು. ಆರಾತ್ರಿ ಕರ್ಣನು ಯುದ್ಧರಂಗದಲ್ಲೆಲ್ಲರೆದುರಿನಲ್ಲಿ ತನ್ನ ಮಕುಟಭಂಗವಾದುದನ್ನು ನೆನಸಿಕೊಂಡು ತನ್ನಂತಹ ಸಾಹಸಿಯಾದ ಯೋಧನಿಗೆ ಮಕುಟಭಂಗವು ಮರಣಕ್ಕೆ ಸಮಾನವೆಂದು ಭಾವಿಸಿ, ಇನ್ನು ಮುಂದೆ ಸಂಸಾರದಲ್ಲಿ ತಾನು ಪರಿಗ್ರಹಬಂಧನದಲ್ಲಿರುವುದು ಅನುಚಿತವೆಂದು ನಿರ್ಧರಿಸಿ ಸುದರ್ಶನವೆಂಬೊಂದು ವನಕ್ಕೆ ಹೋಗಿ ದಮವರರೆಂಬ ಮುನೀಶ್ವರಲ್ಲಿ ದೀಕ್ಷೆಯನ್ನು ಬೇಡಿದನು. ಅವರು ಕರ್ಣನಿಗುಳಿದಿರುವುದು ಒಂದೇ ತಿಂಗಳಾಯುಷ್ಯವೆಂದು ತಿಳಿಸಿ ದೀಕ್ಷೆಯನ್ನಿತ್ತರು. ಅವನು ಆಯುಷ್ಯಾವಸಾನದವರೆಗೆ ತಪವನ್ನಾಚರಿಸಿ ಸತ್ತು ಸ್ವರ್ಗದಲ್ಲಿ ದೇವನಾಗಿ ಹುಟ್ಟಿದನು.

ಇತ್ತ ಕರ್ಣನು ಹೊರಟುಹೋದನೆಂದು ತಿಳಿದು ಬಹಳವಾಗಿ ಚಿಂತಿಸಿ, ಕೌರವನು ಬೆಳಗಿನ ಜಾವದಲ್ಲಿ ಯಾರಿಗೂ ತಿಳಿಯದಂತೆ ಕೃಪಾಚಾರ್ಯನೊಡನೆ ಬೀಡಿನಿಂದ ಹೊರಟು ಬಹುರೂಪಿಣಿಯೆಂಬ ವಿದ್ಯೆಯನ್ನು ಸಾಧಿಸುವುದಕ್ಕಾಗಿ ವೈಶಂಪಾಯನಸರೋವರಕ್ಕೆ ಹೋಗಿ ನೀರಿನಲ್ಲಿ ಮುಳುಗಿ ವಿದ್ಯಾಸಾಧನಮಾಡುತ್ತಿರಲು, ಸೂರ್ಯನು ಉದಯಿಸಿದನು.

ಇತ್ತ ಉಭಯಸೈನ್ಯಗಳು ಯುದ್ಧಭೂಮಿಗೆ ಬಂದುವು. ಶತ್ರುಸೈನ್ಯದ ಮಧ್ಯದಲ್ಲಿ ಕೌರವನಿಲ್ಲದಿರುವುದನ್ನು ನೋಡಿ ಪಾಂಡವರು ಅವನಿರುವ ಸ್ಥಾನವನ್ನರಿಯಲು ಚಾರರನ್ನಟ್ಟಿದರು. ಅಷ್ಟರಲ್ಲಿ ಭಟನೊಬ್ಬನು ಬಂದು ಸೂರ್ಯೋದಯಕ್ಕೆ ಮುಂಚೆಯೇ ಕೌರವನು ವೈಶಂಪಾಯನಸರೋವರಕ್ಕೆ ಹೋಗಿ ಅದಕ್ಕಿಳಿದಿರುವನೆಂದು ತಿಳಿಸಿದನು. ಆಗ ಭೀಮನು ಅತಿಕೋಪದಿಂದ ಆ ಸರೋವರಕ್ಕೆ ಹೊರಟನು. ಧರ್ಮರಾಜನೂ ಅವನ ತಮ್ಮಂದಿರೂ ಅವನೊಡನೆ ಹೊರಟರು. ಭೀಮನು ಕೌರವನಿದ್ದ ಕೊಳದ ಬಳಿಗೆ ಹೋಗಿ ನೀರಿಗಿಳಿದು ಶತ್ರುವನ್ನು ಕೊಲ್ಲುವೆನೆಂದು ಆರ್ಭಟಿಸುತ್ತಿರುವುದನ್ನು ನೋಡಿ ಧರ್ಮರಾಜನು " ಭೀಮನೆ ! ನೀರೊಳಡಗಿರುವ ಶತ್ರುವನ್ನು ಕೊಲ್ಲುವುದು ಧರ್ಮವಲ್ಲ. " ಎನಲು ಅದಕ್ಕವನ ತಮ್ಮಂದಿರು " ಪ್ರಬಲನಾದ ಶತ್ರುವನ್ನು ಯಾವ ಮಾರ್ಗದಿಂದಲಾದರೂ ಕೊಲ್ಲುವುದೇ ನ್ಯಾಯವು " ಎಂದರು. ಆಗ ಧರ್ಮರಾಜನು " ಸಹೋದರರೆ! ಇದುವರೆಗೂ ನನ್ನ ಸತ್ಯವನ್ನು ಪರಿಪಾಲಿಸಿ ನನ್ನನುಮತಿಯಂತೆ ನಡೆದು ಈಗ ಹೀಗೆ ಮಾಡುವುದು ಯೋಗ್ಯವಲ್ಲ ' ಎನಲು ಅವರು ಅಣ್ಣನ ಮಾತಿಗೊಡಂಬಟ್ಟರು. ಭೀಮನು ಸರೋವರದ ದಡದಲ್ಲಿ ನಿಂತು ಗಟ್ಟಿಯಾಗಿ " ಎಲವ್ಹೋ ಕೌರವ ! ಹಟಸಾಧನೆಗಾಗಿ ಮಕ್ಕಳು, ತಮ್ಮಂದಿರು, ಬಾಂಧವರು ಎಲ್ಲರನ್ನೂ ಬಲಿಗೊಟ್ಟು ನೀನೊಬ್ಬನು ಮಾತ್ರ ಬದುಕಬೇಕೆಂದು ನೀರಿನಲ್ಲಿ ಕಳ್ಳನಂತೆ ಅಡಗಿರುವೆಯಾ? ಬೇಗ ಹೊರಕ್ಕೆ ಬಾ. ಎಲ್ಲರೆದುರಿನಲ್ಲಿ ಗರ್ವದ ಮಾತನಾಡಿ ಮೀಸೆತಿರುಹಿ ಈಗ ಓಡಿಬಂದು ಅವಿತುಕೊಂಡರೆ ಜನರು ಹಾಸ್ಯಮಾಡರೇ ? ಬಹುಮಂದಿ ಅತಿರಥಮಹಾರಥರಿದ್ದರೂ ಗೆಲಲಾರೆನೆಂದು ತಿಳಿದು ನೀರಿನಲ್ಲಿರುವ ನಳ್ಳಿಗುಳ್ಳೆಗಳನ್ನು ಸಹಾಯಕ್ಕೆ ಕರೆದುಕೊಂಡು ಹೋಗುವುದಕ್ಕಿಲ್ಲಿಗೆ ಬಂದೆಯಾ ? ಹೊರಗೆ ಬಾ " ಎಂದು ಗರ್ಜಿಸಿದನು. ಭೀಮನ ಗರ್ಜನೆಯಿಂದಾ ಕೊಳದ ನೀರು ಉಲ್ಲೋಲಕಲ್ಲೋಲವಾಯ್ತು. ಆ ಕೂಗಿನಿಂದ ಮಂತ್ರೋಚ್ಚಾರನೂಡಲಾರದೆ ಮೂರ್ಛಿತನಾದ ಕೌರವನು ಅಲ್ಲಿಂದೆದ್ದು ಗದೆಯನ್ನು ಹಿಡಿದು " ಭೀಮನೆಲ್ಲಿ, ಭೀಮನೆಲ್ಲಿ " ಎಂದು ಕೂಗುತ್ತ ಸರೋವರದಿಂದ ಕೃತಾಂತನಂತೆ

ಮೇಲಕ್ಕೆಬಂದು ಭೀಮಸಿಂದಿರಾದನು. ಅವನನ್ನು ನೋಡಿ ಭೀಮನು ರುಧಿರೋದ್ಗಾರಿಗದೆಯನ್ನು ತೂಗುತ್ತ "ಎಲ್ಲೆ ಕುರುಪತಿಯೆ! ನಿನ್ನನ್ನು ನಂಬಿದ್ದ ಸೈನ್ಯವೆಲ್ಲವನ್ನೂ ಕೊಲ್ಲಿಸಿದೆ. ಈಗಲಾದರೂ ಹಟವನ್ನು ಬಿಡು. ಧರ್ಮರಾಜನೊಂದಿಗೆ ಸೇರಿ ಸುಖವಾಗಿರು." ಎನಲು ಆ ಮಾತನ್ನು ಕೇಳಿ ದುರ್ಯೋಧನನು "ಎಲವೋ ಭೀಮ! ನನ್ನ ಸೈನ್ಯವೆಲ್ಲ ಹೋದಮಾತ್ರಕ್ಕೆ ನನ್ನೀ ಬಾಹುಬಲವು ಕಡಮೆಯಾಗುವುದೇ? ನಿನಗೆ ಹೆದರಿ ರಾಜ್ಯವನ್ನು ಕೊಡುವೆನೇ?" ಎಂದನು. ಆ ಮಾತನ್ನು ಕೇಳಿ ಧರ್ಮರಾಜನು ಕೈಮುಗಿದು "ಎಲ್ಲೆ ಕೌರವನೆ! ಐಶ್ವರ್ಯವು ಯಾರಿಗೆ ಸ್ಥಿರವಾಗಿರುವುದು? ಮೊದಲಿನಂತೆ ನಮ್ಮ ರಾಜ್ಯವನ್ನು ನಮಗೆ ಕೊಡು" ಎಂದನು. ಅದಕ್ಕೆ ಕುರುಪತಿಯು "ನನ್ನ ತಿಮ್ಮಜರನ್ನೂ ಮಕ್ಕಳನ್ನೂ ಬಲಿಗೊಟ್ಟು ಈಗ ನಿಮ್ಮೊಡನೆ ಕೂಡುವೆನೇ? ನೀವೆಲ್ಲರೂ ನನ್ನೊಡನೆ ಯುದ್ಧಮಾಡಿ. ನಿಮ್ಮೆಲ್ಲರನ್ನೂ ಜಯಿಸಿ ನಾನು ನನ್ನ ರಾಜ್ಯವನ್ನಾಳುವೆನು." ಎಂದನು. ಆಗ ಧರ್ಮರಾಜನು ಒಬ್ಬನೊಡನೆ ಹೆಚ್ಚು ಜನಗಳು ಒಂದೇ ಸಮಯದಲ್ಲಿ ಯುದ್ಧಮಾಡುವುದು ನ್ಯಾಯವಲ್ಲವೆಂದೂ ಇದರಿಂದ ಒಬ್ಬೊಬ್ಬರೇ ಯುದ್ಧಮಾಡಬೇಕೆಂದೂ ಹೇಳಿದನು. ಆ ಮಾತನ್ನು ಕೇಳಿ ಭೀಮನು ತಾನು ಮೊದಲು ಕೌರವನೊಡನೆ ಯುದ್ಧಮಾಡುವೆನೆಂದು ಮುಂದಾದನು. ಕೌರವನು ಭೀಮಸೇನನ್ನು ನೋಡಿ "ಎಲೇ ಭೀಮನು! ಹುಡುಕಿ ಕೊಲ್ಲುವ ವ್ಯಾಧನಮುಂದೆ ತಾನಾಗಿ ಬಂದ ಜಿಂಕೆಯಂತಾಯ್ತು. ಬಾ" ಎಂದು ಹೇಳಿ ಭೀಮನನ್ನೂ ತೊಡೆಯನ್ನೂ ತಟ್ಟುತ್ತ ಎಡಗಾಲನ್ನು ಮುಂದಕ್ಕಿಟ್ಟು ಗದೆಯನ್ನು ಮೇಲಕ್ಕೆತ್ತಿ "ಹಿಡಿಹಿಡಿ ತೆಗೆದುಕೊಳ್ಳು" ಎಂದು ಕೂಗುತ್ತ ಭೀಮಸೇನನಿಗೆ ಹೊಡೆದನು. ಭೀಮಸೇನನು ಆ ಪೆಟ್ಟನ್ನು ತಪ್ಪಿಸಿಕೊಂಡು ತಾನೊಮ್ಮೆ ಹೊಡೆದನು. ಒಬ್ಬರಿಗೊಬ್ಬರು ಹೊಡೆಯುವ ಏಟನ್ನು ತಪ್ಪಿಸಿಕೊಳ್ಳುತ್ತಲೂ ಮತ್ತೆ ಹೊಡೆಯುತ್ತಲೂ ಅನೇಕವಿಧವಾದ ಚಮತ್ಕಾರದಿಂದ ಇಬ್ಬರೂ ಯುದ್ಧಮಾಡಿದರು. ಭೀಮಸೇನನು "ಇದು ಲಿರಗಿನಮನೆಯ ಬೆಂಕಿಯ ಪೆಟ್ಟು, ಇದು ಕೃತಕದ್ಯೂತದ ಪೆಟ್ಟು" ಎಂದು ಹೇಳಿ ಹೊಡೆದನು. ಆಗ ಕೌರವನು "ಇದು ನನ್ನ ಪುತ್ರರ ಕೊಂದುದಕ್ಕೆ, ಇದು ನನ್ನ ನುಜರ ಕೊಂದುದಕ್ಕೆ" ಎಂದು ಹೇಳುತ್ತ ಭೀಮಸೇನನನ್ನು ಹೊಡೆದನು. ಹೀಗೆ ಭೀಮಕೌರವರು ತಲೆ, ಬೆನ್ನು, ತೋಳು, ಎದೆ, ಭುಜ, ಹಣೆ, ಕೆನ್ನೆ ಮೊದಲಾದ ಸ್ಥಳಗಳಿಗೆ ಸಮಯ ಮತ್ತು ಅಯವರಿತು ಗದೆಯಿಂದ ಹೊಡೆಯುತ್ತಲೂ ಇದಿರಾಳಿಯ ಪೆಟ್ಟುಗಳನ್ನು ತಪ್ಪಿಸಿಕೊಳ್ಳುತ್ತಲೂ ಬಹಳಹೊತ್ತಿನವರೆಗೆ ಯುದ್ಧಮಾಡಿದರು.

ಕೊನೆಗೆ ಕಡುಕೋಪದಿಂದ ಕೌರವನು ಮೇಲಕ್ಕೆ ಹಾರಿ ಭೀಮನ ತಲೆಯ ಮೇಲೆ ಹೊಡೆಯಬೇಕೆಂದು ನೆಗೆದನು. ಆಗ ಭೀಮನು ಗದೆಯನ್ನೆತ್ತಿ ಕೌರವನ ತೊಡೆಗೆ ಹೊಡೆದನು. ಆ ಬಲವಾದ ಪೆಟ್ಟಿನಿಂದ ತೊಡೆಮುರಿದು ಕೌರವನು ನೆಲಕ್ಕೆ ಬಿದ್ದನು; ತೊಡೆಯಿಂದ ರಕ್ತವು ಹರಿಯಿತು. ಆದನ್ನು ನೋಡಿ ಭೀಮನು ಕೋಪವನ್ನು ಬಿಟ್ಟು ' ಭಾವು ಕೌರವನೆ! ಭಾವು! ಲೋಕದಲ್ಲಿ ನಿನ್ನಂತಹ ಹುಟ್ಟಗಾರರುಂಟೇ?" ಎಂದು ಕೊಂಡಾಡಿದನು. ಒಳಿಕ ಪಾಂಡವರು ಪಾಳೆಯಕ್ಕೆ ಹಿಂದಿರುಗಿ ಬಂದು ಕೌರವನ ಸ್ಥಿತಿಯನ್ನು ಕೃಷ್ಣನಿಗೆ ಹೇಳಲು ಅವನು ಬಹಳ ಸಂತುಷ್ಟನಾದನು. ಅತ್ತ ಕೌರವನ ತೊಡೆಗಳು ಮುರಿದವಾರ್ತೆಯನ್ನು ಕೇಳಿ ಜರಾಸಂಧನು ಅತ್ಯಂತ ಖಿನ್ನನಾದನು. ಸಾಯಂಕಾಲವಾಗಲು ಸೈನ್ಯಗಳೆರಡೂ ಪಾಳೆಯಕ್ಕೆ ತೆರಳಿದುವು. ಕೌರವನಿಗಾದವಸ್ಥೆಯನ್ನು ಕೇಳಿ ಅಶ್ವತ್ಥಾಮನು ಪಾಂಡವರ ಪಾಳೆಯಕ್ಕೆ ಬಂದು ಸೈನ್ಯವನ್ನೆಲ್ಲ ಕತ್ತರಿಸುತ್ತಿರುವುದನ್ನು ಕಂಡು ದೃಷ್ಟದ್ಯುಮ್ನನು ಅವನಮೇಲೆ ಬೀಳಲು ಅಶ್ವತ್ಥಾಮನು ಅವನನ್ನು ಸಂಹರಿಸಿ ಮುಂದೆಸುಗ್ಗಿ ತನಗಿದಿರಾದ ಪಂಚಪಾಂಡವರೆಂಬ ರಾಜಕುಮಾರರನ್ನು ಕೊಂದು ಅವರೇ ಪಾಂಡವರೆಂದು ತಿಳಿದು ಅವರ ತಲೆಗಳನ್ನು ತಂದು ಕೌರವನಿಗೆ ತೋರಿಸಿದನು. ಆ ತಲೆಗಳನ್ನು ನೋಡಿ ಕೌರವನು ಅವು ಪಾಂಡವರ ತಲೆಗಳಲ್ಲವೆಂದೂ ಪಂಚಪಾಂಡುಕುಮಾರರ ತಲೆಗಳೆಂದೂ ಹೇಳಿ " ಆ ಪಾಂಡವರು ವಜ್ರಶರೀರಿಗಳು. ಅವರು ಒಳ್ಳೆಯ ಗುಣಶಾಲಿಗಳು. ಅವರಲ್ಲಿ ಇದುವರೆಗೂ ಹಟಸಾಧನೆಮಾಡಿದೆನು. ಕೋಪತಾಪಗಳನ್ನೇಕೆ? ಈಗ ನನಗೆ ಪರಲೋಕಸುಖವಲ್ಲದೆ ಮತ್ತೇನೂ ಬೇಕಿಲ್ಲ" ಎಂದು ಉಪಶಮಭಾವದಿಂದ ನುಡಿದು ಅಶ್ವತ್ಥಾಮನನ್ನು ಬೀಳ್ಕೊಟ್ಟು ಏದುರನೆಂಬೋರ್ವ ಮುನೀಶ್ವರಲ್ಲಿ ದೀಕ್ಷೆಯನ್ನು ಕೈಕೊಂಡು ಮರುದಿನ ಹಗಲಿನಲ್ಲಿ ಶುಭಭಾವನೆಯಿಂದ ಇಹಲೋಕವನ್ನು ಬಿಟ್ಟು ಸ್ವರ್ಗವನ್ನೈದಿದನು.

೩೧. ಕೃಷ್ಣ ಜರಾಸಂಧ ಕಾಳೆಗ ಸಂಧಿ

ಆ ಮರುದಿನ ಜರಾಸಂಧನು ಯುದ್ಧಕ್ಕೆ ಅನುವಾಗಿ ಯುದ್ಧರಂಗಕ್ಕೆ ಹೊರಟುಬಂದು ತನ್ನ ಕಡೆಯವರಾದ ವಿದ್ಯುಚ್ಚರ, ಅಂಗಾರದೇವ, ವಿದ್ಯುತ್ಪ್ರಭ, ನೀಲಕಂಠ, ವಿದ್ಯುದ್ವೇಗ, ನಳಿನಕೇತುಗಳೆಂಬ ವಿದ್ಯಾಧರರನ್ನು ತಂತಮ್ಮ ಸೈನ್ಯಗ ಳೊಡನೆ ಬರಮಾಡಿಕೊಂಡನು. ಇತ್ತ ಕೃಷ್ಣನೂ ತನ್ನ ಕಡೆಯ ಮರುತವೇಗ, ಸಿಹ್ಮದಾಢ, ಅಕಂಪನ, ಹರಿಕೇತು, ವಜ್ರಬಾಹು, ಅರುಣಚಂದ್ರ, ದಧಿಮುಖ, ಮಾನಸವೇಗ, ಧ್ರುವಕುಮಾರರೆಂಬ ವಿದ್ಯಾಧರರನ್ನು ಅನುಗೊಳಿಸಿದನು. ವಿದ್ಯಾ ಧರರು ಅಂತರಿಕ್ಷದಲ್ಲಿ ತಂತಮ್ಮ ಸೈನ್ಯಗಳೊಡನೆ ಯುದ್ಧಸನ್ನದ್ಧರಾದರು. ಭೂಮಿ ಯಮೇಲೆ ಕೃಷ್ಣಜರಾಸಂಧರ ಭೂಚರ ಸೈನ್ಯಗಳಿಗೂ ಆಕಾಶದಲ್ಲಿ ಖೇಚರಸೈನ್ಯಗ ಳಿಗೂ ಯುದ್ಧವು ಮೊದಲಾಯಿತು. ವಿದ್ಯಾಧರರು ಬಹು ಸಾಹಸದಿಂದ ಭಯಂ ಕರವಾಗಿ ಕಾದುತ್ತಿದ್ದರು. ಭೂಮಿಯಮೇಲೆ ಜರಾಸಂಧನ ಪಕ್ಷದ ವೃಷಭ ಸೇನನೆಂಬ ರಾಜನು ಅತ್ಯಂತ ಸಾಹಸದಿಂದ ಯಾದವರ ಸೈನ್ಯವನ್ನು ಹೊಡೆದು ತತ್ತರಗೊಳಿಸಿದನು. ಅದನ್ನು ನೋಡಿ ಬಲರಾಮನು ಕಡುಕೋಪದಿಂದನನ ಮೀಲೆಬಿದ್ದು ಅವನನ್ನು ಸಂಹರಿಸಿದನು. ಬಲರಾಮನ ಪೆಟ್ಟಿಗೆ ಶತ್ರುಸೈನ್ಯವು ಹೆದರಿ ನಿಂತಿತು. ಇನ್ನೊಂದುಕಡೆ ಯಾದವರಕಡೆಯ ವಸುಪಾಲನೆಂಬ ರಾಜನು ಘೋರವಾಗಿ ಕಾದುತ್ತಿರಲು ಅವನಿಗೆ ಜರಾಸಂಧನ ಮಗನಾದ ಕಾಲಯವನನು ಇದಿರಾದನು. ಅವನನ್ನು ದಾರಣ, ಪೂರಣ, ಜರತ್ಕುಮಾರ ಮೊದಲಾದ ರಾಜ ರು ಇದಿರಿಸಿ ಹಿಮ್ಮೆಟ್ಟಿಸಿದರು. ಅತ್ತ ಅಂತರಿಕ್ಷದಲ್ಲಿ ಕೃಷ್ಣನಕಡೆಯ ವಿದ್ಯಾಧರರ ಕೈಮೇಲಾಯಿತು. ಅದನ್ನು ಕಂಡು ಜರಾಸಂಧನು ತನ್ನ ಭೂಚರ ಸೇನೆಯನ್ನು ಮುಂದಕ್ಕೆ ನೂಕಿ ತಾನು ದಿವ್ಯರಥವನ್ನೇರಿ ಸಿಡಿಲಿನಂತೆ ಗರ್ಜಿ ಸುತ್ತ ಬಂದನು. ಕೃಷ್ಣನೂ ತನ್ನ ರಥವನ್ನೇರಿ ಮುಂದೆ ಬಂದನು. ಪೂರ್ವ ನಪದ ವೈರದಿಂದ ಕೃಷ್ಣಜರಾಸಂಧರ ಕೋಪವು ಒಬ್ಬರನ್ನೊಬ್ಬರು ನೋಡಿಮೊ ಕನೆಯೇ ಹೆಚ್ಚಿತು. ಆಗ ಜರಾಸಂಧನು ಕೃಷ್ಣನನ್ನು ಕುರಿತು "ಎಲೆ ಕೃಷ್ಣ! ನಿನಕಾಯುವವನೆ! ನಾನು ನಿನ್ನನ್ನು ಕೊಲ್ಲುವುದನ್ನು ತಪ್ಪಿಸುವ ಶಕ್ತಿಯಿದ್ದರೆ ನಿನ್ನ ಕುಲದೇವತೆಯನ್ನು ಬರಹೇಳು. ನೀರೊಳ್ಳೆಯ—ಹಾವಿನ ತಲೆಯಮೇಲೆ

ಹತ್ತಿ, ಕೈಕಡ್ಡಿಯನ್ನು ಬಗ್ಗಿಸಿ, ನೀರಿನಗುಳ್ಳೆ--ಶಂಖವನ್ನೂದಿ, ಒಂದು ಸಣ್ಣ ಮಣ್ಣಿನ ದಿಣ್ಣೆಯನ್ನೆತ್ತಿ, ಸಾಹಸವನ್ನು ಹೇಳಿಕೊಳ್ಳುವುದು ಬಹಳ ಚೆನ್ನಾಗಿದೆ. ನನಗೆ ಹೆದರಿ ದೇಶಕೋಶಗಳನ್ನು ಬಿಟ್ಟು ಸಮುದ್ರಮಧ್ಯದಲ್ಲಿ ಮನೆಮಾಡಿಕೊಂಡು ಜೀವಿಸುತ್ತಿರುವ ನಿನಗೆ ನನ್ನಂತಹ ಚಕ್ರವರ್ತಿಯೊಡನೆ ಯುದ್ಧವೇ?" ಎಂದು ಮೂದಲಿಸಿದನು. ಅದಕ್ಕೆ ಕೃಷ್ಣನು "ಎಲವೊ ಜರಾಸಂಧ! ನಿನ್ನ ಪುಣ್ಯದಿಂದ ಹುಟ್ಟಿ ನಿನ್ನ ವಶದಲ್ಲಿರುವ ಆ ಚಕ್ರದಿಂದ ನಿನ್ನನ್ನು ಎಲ್ಲರೂ ಚಕ್ರಿ ಎನ್ನುವರು. ಸಾಹಸವಿಲ್ಲದಿದ್ದರೇನು? ಕುಂಬಾರನನ್ನೂ "ಚಕ್ರಿ" ಎನ್ನುವರು. ಅವನಂತೆಯೇ ನೀನೊಬ್ಬ ಚಕ್ರಿಯಾಗಿರುವೆ. ಯಾರು ಸಾಹಸಿಗಳೆಂಬುದು ಯುದ್ಧದಲ್ಲಿ ತಿಳಿಯುವುದು" ಎಂದನು. ಈರ್ವರೂ ಬಿಲ್ಲಿಗೆ ಅಂಬನ್ನು ಜೋಡಿಸಿ ಯುದ್ಧಕ್ಕೆ ಆರಂಭಿಸಿದರು. ಜರಾಸಂಧನು ಪುಂಖಾನುಪುಂಖವಾಗಿ ಬಾಣಗಳನ್ನು ಬಿಡುತ್ತ ಕೃಷ್ಣನನ್ನು ಮುತ್ತಿದನು. ಕೃಷ್ಣನು ಅವನ ಬಾಣಗಳನ್ನೆಲ್ಲ ಖಂಡಿಸಿ ತನ್ನ ದಿವ್ಯಾಸ್ತ್ರಗಳಿಗೆ ಕೈಯಿಟ್ಟನು. ಜರಾಸಂಧನು ಅಗ್ನಿಬಾಣವನ್ನು ಬಿಟ್ಟನು; ಕೃಷ್ಣನದನ್ನು ಜಲಬಾಣದಿಂದ ಪರಿಹರಿಸಿದನು. ಜರಾಸಂಧನ ಸರ್ಪಾಸ್ತ್ರವನ್ನು ಗರುಡಾಸ್ತ್ರದಿಂದಲೂ ಭೂಧರಾಸ್ತ್ರವನ್ನು ವಜ್ರಾಸ್ತ್ರದಿಂದಲೂ ಗಜಬಾಣವನ್ನು ಸಿಹ್ಮ ಬಾಣದಿಂದಲೂ ಶರಭಬಾಣವನ್ನು ಗಂಡಭೇರುಂಡಬಾಣದಿಂದಲೂ ಕೃಷ್ಣನು ಖಂಡಿಸಿದನು. ತನ್ನ ಎಲ್ಲಾ ದಿವ್ಯಾಸ್ತ್ರಗಳನ್ನೂ ಕೃಷ್ಣನು ಖಂಡಿಸಿದುದನ್ನು ನೋಡಿ ಜರಾಸಂಧನು ಅತ್ಯಂತ ಕೋಪದಿಂದ ಸುಪ್ರಭವೆಂಬ ತನ್ನ ಚಕ್ರಕ್ಕೆ ಕೈ ನೀಡಿದನು. ಅದನ್ನು ನೋಡಿ ಯಾದವಸೈನಿಕರೆಲ್ಲ ಭಯದಿಂದ ನಡುಗಿ ಚಕ್ರವನ್ನು ಖಂಡಿಸುವುದಕ್ಕೆ ಕೃಷ್ಣನಿಂದಾಗುವುದೋ ಇಲ್ಲವೋ ಎಂದು ಯೋಚಿಸುತ್ತಿದ್ದರು. ಅಕ್ಕಪಕ್ಕದಲ್ಲಿದ್ದ ಬಲರಾಮ, ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವ, ವಸುವಾಲ ಮೊದಲಾದ ಯಾದವಪಕ್ಷದ ರಾಜರೆಲ್ಲರೂ ಚಕ್ರವನ್ನು ತಡೆಯುವುದಕ್ಕೆಂದು ಬಿಲ್ಲಿನಲ್ಲಿ ಶರಸಂಧಾನವನ್ನು ಮಾಡಿ ನಿಂತಿದ್ದರು. ಜರಾಸಂಧನು "ಎಲೆ ಕೃಷ್ಣ! ನನಗೆ ಶರಣಾಗು. ಇಲ್ಲವಾದರೆ ಇಗೋ ನೋಡು" ಎಂದು ಹೇಳಿ ಚಕ್ರವನ್ನು ಬಿಟ್ಟನು. ಅದು ಬಂದು ಕೃಷ್ಣನನ್ನು ಮೂರುಸುತ್ತು ಪ್ರದಕ್ಷಿಣೆ ಮಾಡಿ ಅವನ ಬಲದ ಭಾಗದಲ್ಲಿ ಬಂದು ನಿಂತಿತು. ಅದನ್ನು ನೋಡಿ ಕೃಷ್ಣನು "ಎಲವೋ ಜರಾಸಂಧ! ನೀನು ಮಾಡಿದ್ದ ಪುಣ್ಯವು ತೀರಿಹೋಯಿತು. ಈಗ ನಿನಗೆ ಜಯವೆಲ್ಲಿ ಬಂದೀತು? ಈಗಲಾದರೂ ನಿನ್ನಾ ಗರ್ವವನ್ನು ಳಿದು ಬಂದು ಶರಣಾಗತನಾಗು" ಎನಲು, ಜರಾಸಂಧನು "ನನ್ನ ಚಕ್ರವು ಹೋದ ಮಾತ್ರಕ್ಕೆ ನನ್ನ

ಶೌರ್ಯವು ಹೋಗುವುದೇ ? ನೋಡು " ಎಂದು ಹೇಳುತ್ತ ಕೈಯಲ್ಲಿ ಚಂದ್ರಾಯುಧವನ್ನು ಹಿಡಿದು ರಥದಿಂದಿಳಿದು ಕೃಷ್ಣನಮೇಲೆ ಬಿದ್ದನು. ಆಗ ಕೃಷ್ಣನು ತನಗೆ ವಶವಾದ ಆ ಚಕ್ರವನ್ನೇ ತಿರುಗಿಸಿ ಬಿಟ್ಟನು. ಅದು ಜರಾಸಂಧನ ತಲೆಯನ್ನು ಕತ್ತರಿಸಿತು. ಆಗ ಜಯಭೇರಿಯಾಯ್ತು. ಅಂತರಿಕ್ಷದಲ್ಲಿ ದೇವತೆಗಳು ಪುಷ್ಪ ವೃಷ್ಟಿಯನ್ನು ಸುರಿದರು. ಕೃಷ್ಣನು ಅಭಯಘೋಷವನ್ನು ಮಾಡಲು ಎಲ್ಲರೂ ಬೀಡಿಗೆ ಹೋದರು. ಅತ್ತ ವಿಜಯಾರ್ಧಪರ್ವತಕ್ಕೆ ಹೋಗಿದ್ದ ವಸುದೇವ, ಮನ್ಮಥ, ಶಂಭುಕುಮಾರ ಇವರೂ ಖೇಚರರನ್ನು ಜಯಿಸಿ ಬೀಡಿಗೆ ಬಂದು ಸೇರಿದರು. ಕೃಷ್ಣನು ಜರಾಸಂಧನ ಅನುಜರನ್ನೂ ಮಕ್ಕಳನ್ನೂ ಕರೆಸಿ ಅವರನ್ನು ಸಮಾಧಾನಮಾಡಿ ಕಳುಹಿದನು.

ಪಾಂಡವರು ಧೃತರಾಷ್ಟ್ರ, ಗಾಂಧಾರಿಯರ ಬಳಿಗೆ ಹೋಗಿ ಅವರಿಗೆ ನಮಸ್ಕರಿಸಿ ಅವರನ್ನೂ ಕೌರವನ ಪತ್ನಿ ಮೊದಲಾದ ಬಂಧುಗಳನ್ನೂ ಸಮಾಧಾನಪಡಿಸಿದರು. ಕರ್ಣನ ವಿಯೋಗಕ್ಕಾಗಿ ದುಃಖಪಡುತ್ತಿದ್ದ ಕೊಂತಿಯನ್ನು ನೋಡಿ ಪಾಂಡವರು ಅಕೆಯನ್ನು ಪ್ರಶ್ನೆಮಾಡಿ ಕರ್ಣನು ತಮ್ಮ ಹಿರಿಯಣ್ಣನೆಂದು ತಿಳಿದು ತಾವೂ ದುಃಖಪಟ್ಟರು. ಹೀಗೆ ದುಃಖಪಡುತ್ತಿರುವ ಪಾಂಡವರನ್ನು ಸಮಾಧಾನಪಡಿಸಿ ಎಲ್ಲರೊಡನೆ ಕೃಷ್ಣನು ದ್ವಾರಾವತಿಗೆ ಹೊರಟನು. ಜಯಶೀಲರಾಗಿ ಬರುತ್ತಿರುವ ಕೃಷ್ಣಬಲರಾಮರನ್ನು ಇದಿರ್ಗೊಳ್ಳಲು, ಸಮುದ್ರವಿಜಯನು ಪಟ್ಟಣವನ್ನು ಶೃಂಗರಿಸಿ ಅತ್ಯಂತ ವೈಭವದಿಂದ ಆ ಮಕ್ಕಳನ್ನು ಇದಿರ್ಗೊಂಡು ಪಟ್ಟಣಪ್ರವೇಶಮಾಡಿಸಿ ಮೆರವಣಿಗೆಯಿಂದ ಅರಮನೆಗೆ ಕರೆದು ಕೊಂಡು ಹೋದನು. ಕೃಷ್ಣನು ಅರಮನೆಗೆ ಬಂದು ಶ್ರೀ ನೇಮಿಶರಿಗೆ ವಂದಿಸಿ " ಸ್ವಾಮಿ ! ನಿಮ್ಮ ಸೇವೆಯಿಂದ ಉತ್ತಮವಾದ ಮೋಕ್ಷಸುಖವೂ ಚಕ್ರವರ್ತಿ ಸಂಪತ್ತೂ ಉಂಟಾಗುವುದಾಶ್ಚರ್ಯವೇ ? " ಎಂದು ಮತ್ತೊಮ್ಮೆ ನಮಸ್ಕರಿಸಿ ಅನಂತರ ಯುದ್ಧದಲ್ಲಿ ಸಹಾಯಕರಾಗಿ ಬಂದಿದ್ದ ಸಮಸ್ತ ರಾಜರುಗಳನ್ನೂ ಮನ್ನಿಸಿ ಕಳುಹಿದನು. ಕೆಲವು ದಿನಗಳ ಬಳಿಕ ಕೃಷ್ಣನು ಧರ್ಮರಾಜಾದಿಗಳನ್ನು ಹಸ್ತಿನಾಪುರಕ್ಕೆ ಕಳುಹಿಸಿಕೊಟ್ಟನು.

ಇತ್ತ ಹಸ್ತಿನಾಪುರಿಗೆ ಬಂದು ಧರ್ಮರಾಜನು ಧೃತರಾಷ್ಟ್ರನಿಗೂ ವಿದುರನಿಗೂ ಬೇರೆಬೇರೆ ದೇಶವನ್ನಿತ್ತು, ಹಸ್ತಿನಾಪುರವನ್ನು ತನ್ನ ತಮ್ಮಂದಿರಿಗಿತ್ತು ತಾನು ದಕ್ಷಿಣ ಮಧುರಾಪುರಕ್ಕೆ ಬಂದು ಅಲ್ಲಿ ರಾಜ್ಯವನ್ನಾಳುತ್ತ ಸುಖದಿಂದಿದ್ದನು.

ಇತ್ತ ಕೃಷ್ಣ ಬಲರಾಮರು ದ್ವಾರಾವತಿಯಲ್ಲಿ ಅತ್ಯಂತ ಸುಖದಲ್ಲಿರುತ್ತಿದ್ದು ಒಂದುದಿನ ಕೃಷ್ಣನು ದಿಗ್ವಿಜಯಕ್ಕೆ ಹೋಗಲೆಳಸಿ ಮಾರ್ಗಶಿರ ಶುದ್ಧದಶಮಿಯ ದಿನ ಭೇರಿಯನ್ನು ಹೊಡೆಸಿ ಶ್ರೀ ನೇಮಿಜಿನೇಶ್ವರರನ್ನು ಪೂಜಿಸಿ, ಸ್ತುತಿಸಿ, ನಮಸ್ಕರಿಸಿ ಬೀಳ್ಕೊಂಡು, ಚಕ್ರಾದಿ ರತ್ನಗಳನ್ನು ಪೂಜಿಸಿ ಅಪರಿಮಿತ ಸೈನ್ಯಸಮೇತನಾಗಿ ಬಲರಾಮನೊಡನೆ ಪ್ರಯಾಣಬೆಳಸಿ ಆರ್ಯಖಂಡದ ಸಮಸ್ತರಾಜರಿಂದಲೂ ಕಪ್ಪ ಕಾಣಿಕೆಗಳನ್ನು ತೆಗೆದುಕೊಳ್ಳುತ್ತಲೂ ರಾಜಕನ್ಯಾರತ್ನಗಳನ್ನು ವಿವಾಹಮಾಡಿಕೊಳ್ಳುತ್ತಲೂ ವಿಜಯಾರ್ಧಗಿರಿಯ ಬಳಿಗೆ ಹೋಗಿ ವಿದ್ಯಾಧರರಾಜರನ್ನು ಜಯಿಸಿ ಕೈಲಾಸಗಿರಿಗೆ ಬಂದು ಭರತೇಶ್ವರರಚಿತವಾದ ಎಪ್ಪತ್ತೆರಡು ತೀರ್ಥಂಕರರ ಚೈತ್ಯಾಲಯಗಳಲ್ಲಿರುವ ಜಿನಬಿಂಬಗಳನ್ನು ಪೂಜಿಸಿ, ಅಲ್ಲಿಂದ ಹೊರಟು ಗಂಗಾನದಿಯ ಪೂರ್ವದಿಕ್ಕಿನ ಮ್ಲೇಚ್ಛಖಂಡದ ರಾಜರನ್ನೂ, ದಕ್ಷಿಣಸಮುದ್ರದ ತಡಿಯ ಭೂಗಧ ಪ್ರಭಾಸಾಗರವೆಂಬ ಅತಿಶೂರರಾದ ಅಸುರರನ್ನೂ ಸಿಂಧುನದಿಗೂ ಸಮುದ್ರಕ್ಕೂ ಮಧ್ಯದಲ್ಲಿರುವ ಮ್ಲೇಚ್ಛದೇಶದ ರಾಜರನ್ನೂ ಜಯಿಸಿ ಉತ್ತಮವಸ್ತು ವಾಹನಾದಿಗಳನ್ನೂ ಅವರ ಕನ್ಯಾರತ್ನಗಳನ್ನೂ ಕಪ್ಪ ತೆಗೆದುಕೊಂಡು ಭರತಕ್ಷಿಖಂಡವನ್ನೆಲ್ಲ ಗೆದ್ದು ದ್ವಾರಾವತಿಗೆ ಹಿಂದಿರುಗಿ ಬಂದು ಸೇರಿದನು.

ಆಗ ಅಧೀನರಾಜರೂ ಹಸ್ತಿನಾಪುರದಿಂದ ಪಾಂಡವರೂ ಬಂದು, ತ್ರಿಖಂಡ ಚಕ್ರವರ್ತಿಯೂ ಸಾವಿರ ಯಕ್ಷರಿಂದ ಕಾಪಿಡಲ್ಪಟ್ಟ ಚಕ್ರ, ಗದೆ, ಶಕ್ತಿ, ಶಂಖ, ಶಾರ್ಙ್ಗ, ಕೌಸ್ತುಭ, ನಂದಕಗಳೆಂಬ ದಿವ್ಯರತ್ನಗಳುಳ್ಳವನೂ ನೀಲವರ್ಣನೂ ಹತ್ತು ಬಿಲ್ಲು ಉನ್ನತವಾದ ದೇಹವುಳ್ಳವನೂ ಹದಿನಾರು ಸಾವಿರ ಮುಕುಟಾಧೀಶ್ವರರ್ಗೊಡೆಯನೂ ಹದಿನಾರುಸಾವಿರ ಸತಿಯರ ಪತಿಯೂ ಆದ ಕೃಷ್ಣನನ್ನೂ ಬಲರಾಮನನ್ನೂ ರತ್ನಸಿಹಾಸನದಲ್ಲಿ ಕೂಳ್ರಿಸಿ, ಸಾಸಿರದಂಟು ಕಲಶತೀರ್ಥೋದಕಗಳಿಂದಭಿಷೇಕಮಾಡಿ ದಿವ್ಯವಸ್ತ್ರಾಭರಣಗಳಿಂದಲಂಕರಿಸಿ ಮುತ್ತಿನ ಸೇಸೆಯನ್ನಿಟ್ಟು ಹರಸಿದರು. ಹಲ, ಮುಸಲ, ಗದೆ, ಪರಿಘವೆಂಬ ನಾಲ್ಕು ಆಯುಧಗಳುಳ್ಳವನೂ ಸಾವಿರದ ಇನ್ನೂರು ವರ್ಷ ಆಯುಃಪ್ರಮಾಣವುಳ್ಳವನೂ ಶುಭ್ರವರ್ಣನೂ ಹತ್ತು ಬಿಲ್ಲಿನಷ್ಟು ಎತ್ತರವಾದ ದೇಹವುಳ್ಳವನೂ ಎಂಟುಸಾವಿರ ಮಂದಿ ಪತ್ನಿಯರುಳ್ಳವನೂ ಆದ ಬಲರಾಮನೊಡನೆ ಕೃಷ್ಣನು ರಾಜ್ಯಭಾರಮಾಡಿಕೊಂಡಿದ್ದನು.

೩೨. ನೇಮೀಶ್ವರ ನಿರ್ವೇಗಸಂಧಿ

ಒಂದುದಿನ ಕೃಷ್ಣ ಬಲರಾಮ ಮೊದಲಾದ ಸಮಸ್ತರೂ ತಸಗೆ ನಮಸ್ಕರಿಸುತ್ತಿರಲು ಶ್ರೀ ನೇಮೀಶನು ಇಂದ್ರನಿಂದ ಕಳುಹಲ್ಪಟ್ಟ ದಿವ್ಯವಸ್ತ್ರಾಭರಣಗಳಿಂದಲಂಕೃತನಾಗಿ ಆಮರಸ್ತ್ರೀಯರಿಂದ ಚಾಮರವನ್ನು ಬೀಸಿಸಿಕೊಳ್ಳುತ್ತ ಯಕ್ಷ, ನಾಗ, ಕಿನ್ನರ, ಕಿಂಪುರುಷಾದಿ ದೇವತೆಗಳಿಂದ ಓಲ್ಗೆಸಿಕೊಳ್ಳುತ್ತ ಒಡ್ಡೋಲಗದಲ್ಲಿರುವ ಸಮಯದಲ್ಲಿ ಕೆಲರು ಎದ್ದು ಕೈಮುಗಿದು " ದೇವ! ತಮ್ಮ ಬಾಹುವಿನ ಶಕ್ತಿಯನ್ನು ನಾವು ನೋಡಬೇಕು " ಎಂದು ಬೇಡಿಕೊಳ್ಳಲು, ಸ್ವಾಮಿಯು ಸಂತೋಷದಿಂದ ಕೈಯನ್ನು ಚಾಚಿ ಕಿರುಬೆರಳನ್ನು ನೀಡಿದನು. ಆಗ ಕೃಷ್ಣನೆದ್ದು ಆ ಬೆರಳನ್ನು ಬಗ್ಗಿಸಲು ಪ್ರಯತ್ನಿಸಿದನು. ಅದು ವಜ್ರದಂಡದಂತೆ ಗಟ್ಟಿಯಾಗಿದ್ದುದರಿಂದ ಅದನ್ನು ಬಗ್ಗಿಸಲಾಗಲಿಲ್ಲ. ಸ್ವಾಮಿಯು ಕೈಯನ್ನು ಮೇಲಕ್ಕೆತ್ತಲು ಕೃಷ್ಣನು ಬೆಂಡಿನ ಬೊಂಬೆಯಂತೆ ತೂಗಾಡಿದನು. ಆಗ ಕೃಷ್ಣನು ಚಂದನವೃಕ್ಷದ ಕೊಂಬೆಯಲ್ಲಿ ನೇತಾಡುವ ತುಂಬಿಯಂತೆ ಕಾಣುತ್ತಿದ್ದನು. ಸುರರು ಪುಷ್ಪವೃಷ್ಟಿಯನ್ನು ಸುರಿದರು. ದೇವದುಂದುಭಿಯು ಮೊಳಗಿತು. ಕೃಷ್ಣನಿಗೆ ಮನಸ್ಸಿನಲ್ಲಿ ಸ್ವಲ್ಪ ಲಜ್ಜೆಯುಂಟಾಯಿತು.

ಹೀಗೆ ಕೆಲವುಕಾಲ ಕಳೆಯಲು ವಸಂತರ್ತುವು ಪ್ರಾಪ್ತವಾಯಿತು ಎಲ್ಲೆಲ್ಲೂ ಮಲ್ಲಿಗೆ ಮೊದಲಾದ ಹೂಗಳು ಅರಳಿ ಅವುಗಳ ಗಂಧದಿಂದ ಕೂಡಿದ ತಂಗಾಳಿಯು ಬೀಸಿತು. ಮಾವಿನ ಮರಗಳು ಚಿಗುರಿದುವು. ಕೋಗಿಲೆಗಳು ಪಂಚಮರಾಗವನ್ನು ಹಾಡಿದುವು. ಕೊಳಗಳ ನೀರು ತಿಳಿಯಾಯಿತು. ಆಗ ಕೃಷ್ಣನು ಶ್ರೀ ನೇಮೀಶರಲ್ಲಿಗೆ ಬಂದು ಕೈಮುಗಿದು, " ದೇವ! ವಸಂತಕಾಲವು ಪ್ರಾಪ್ತವಾಗಿದೆ. ಜಲಕೇಳಿ ವನಕೇಳಿಗಳಿಗೆ ಉದ್ಯಾನಕ್ಕೆ ದಯಮಾಡಿಸಬೇಕು " ಎಂದು ವಿನ್ನವಿಸಿದನು. ಸ್ವಾಮಿಯು ಒಸ್ಸಿ ಎಲ್ಲರೊಡನೆ ಹೊರಟು ನಂದನವನಕ್ಕೆ ಹೋಗಿ ವನಕೇಳಿ ಜಲಕೇಳಿಯನ್ನಾಡಿ, ಸರೋವರದಿಂದ ಹೊರಕ್ಕೆ ಬಂದು ತಮ್ಮ ಒದ್ದೆಯಾದ ವಸ್ತ್ರಗಳನ್ನು ಬಿಚ್ಚುವಾಗ ಕೃಷ್ಣನು ಅವರಿಗೆ ಸನ್ನೆಮಾಡಲು ಅವರು ಸತ್ಯಭಾಮೆಗೆ ಆ ಬಟ್ಟೆಗಳನ್ನು ಹಿಡಿದುಕೊಳ್ಳುವಂತೆ ಹೇಳಿ ಕೊಡುವಾಗ " ತಕೆಯು ಭರತತ್ರಿಖಂಡಾಧೀಶ್ವರನ ಪಟ್ಟದರಸಿಯಾದ ನಾನು ಸೇವಕರಂತೆ ಉಟ್ಟು ತೆಗೆದ ಒಟ್ಟೆ

ಯನ್ನು ಹಿಡಿವೆನೇ ? '' ಎಂದು ಗರ್ವದಿಂದ ಹೇಳಿದುದನ್ನು ಕೇಳಿ ರುಗ್ಮಿಣಿಯು ಕೋಪದಿಂದ ''ಅಕ್ಕ ! ಈತನು ಸ್ನಾನಮಾಡಿದ ನೀರನ್ನು ದೇವಾಧಿದೇವತೆಗಳೆಲ್ಲರೂ ತಲೆಯಮೇಲೆ ತಳಿದುಕೊಳ್ಳುವರು. ಇದು ನಿನಗೆ ತಿಳಿಯದೇ ? '' ಎಂದಳು. ಆಗ ಸತ್ಯಭಾಮೆಯು '' ಸಣ್ಣವಯಸ್ಸಿನಲ್ಲೇ ರಾಕ್ಷಸಿಯರನ್ನು ಕೊಂದು, ಗೋವರ್ಧನ ಪರ್ವತವನ್ನೆತ್ತಿ, ಉರಗಶಯ್ಯೆಯನ್ನೇರಿ, ಶಾರ್ಙ್ಗಧನುಸ್ಸನ್ನೇರಿಸಿ, ಪಾಂಚಜನ್ಯವನ್ನೂದಿ, ಜರಾಸಂಧನನ್ನು ಸಂಹರಿಸಿದವನಿಗೆ ಲೋಕದಲ್ಲಿ ಸಮಾನರಾರು ? ನನಗೆ ಊಳಿಗವನ್ನು ಹೇಳಬಹುದೇ ? ' ಎಂದುತ್ತರವಿತ್ತಳು. ಮತ್ತೆ ರುಗ್ಮಿಣಿಯು ' ಈ ನೇಮಿಶ್ವರನು ಹುಟ್ಟುವುದಕ್ಕೆ ಮುಂಚೆ ಮನುಷ್ಯರ ರೂಪವನ್ನು ನೋಡಿ ಹೇಸಿ ಸುತ್ತಿದ್ದ ದೇವತೆಗಳೆಲ್ಲ ದೇವೇಂದ್ರ, ಯಕ್ಷೇಂದ್ರ, ಪನ್ನಗೇಂದ್ರರೊಡಗೂಡಿಬಂದು ಇಂದ್ರನು ಆರುತಿಂಗಳ ವರೆಗೆ ರತ್ನದ ಮಳೆಯನ್ನು ಸುರಿಸಿ ದೇವಸ್ತ್ರೀಯರಿಂದ ಇವನ ಮಾತೆಯಾದ ಶಿವದೇವಿಯ ಗರ್ಭಶೋಧನೆಮಾಡಿಸಿ, ದೇವಸ್ತ್ರೀಯರನ್ನು ಅವರಿಗೆ ಸೇವಕಿಯರನ್ನಾಗಿ ನಿಯಮಿಸಿದ್ದು ಮಗು ಹುಟ್ಟಿದೊಡನೆ ಅದನ್ನು ಮೇರು ಗಿರಿಗೆ ತೆಗೆದುಕೊಂಡು ಹೋಗಿ ಪಾಲ್ಗಡಲ ನೀರಿಂದಭಿಷೇಕಮಾಡಿ, ಈತನ ಸೇವೆ ಮಾಡಿ ಹೋದುದು ಲೋಕಕ್ಕೆ ಗೊತ್ತಿಲ್ಲವೇ ? ಇವನ ಪಾದಗಳನ್ನು ತೊಳೆದ ನೀರಿನಲ್ಲಿ ಸ್ನಾನಮಾಡುವ ದೇವತೆಗಳ ಎಡಗಾಲಿನ ಬೆರಳನ್ನು ನೀನು ಸೋಕಿದರೆ ನೀನು ಲೋಕದಲ್ಲೆಲ್ಲ ದೊಡ್ಡವಳೇ ಸರಿ '' ಎಂದು ಹೇಳಲು ಕೇಳಿ ಸತ್ಯಭಾಮೆಯು ನಾಚಿ ಹೊರಟುಹೋದಳು. ಬಳಿಕ ರುಗ್ಮಿಣಿಯು ಅತ್ಯಂತ ಚಿತ್ತಶುದ್ಧಿಯಿಂದ ನಿತ್ಯಸುಖವನ್ನು ಬಯಸಿ ಆ ಸ್ವಾಮಿಯು ವಿಸರ್ಜಿಸಿದ್ದ ಬಟ್ಟೆಯನ್ನು ಸೇವಕಳಂತೆ ತೆಗೆದುಕೊಂಡಳು. ಬಳಿಕ ಕೃಷ್ಣ ಬಲರಾಮರು ದಿವ್ಯವಸ್ತ್ರಾಭರಣಗಳಿಂದ ನೇಮಿಶ್ವರನನ್ನು ಪೂಜಿಸಿ ಪಟ್ಟಣಪ್ರವೇಶಮಾಡಿ ತಮ್ಮ ಆರಮನೆಗೆ ಹೋದರು.

ಇತ್ತ ಆ ನೇಮಿಕುಮಾರನಿಗೆ ಸತ್ಯಭಾಮೆಯಾಡಿದ ಹೆಮ್ಮೆಯ ಮಾತಿನಿಂದ ಮನಸ್ಸಿನಲ್ಲಿ ಕೋಪ ಪುಂಟಾಯಿತು. ಆಸೆಯನ್ನೇರಿ ದೇವತೆಗಳಿಂದ ಪರಿವೃತನಾಗಿ ವನದಿಂದ ಆರಮನೆಗೆ ಬರುತ್ತಾ ನೇಮಿಶನು ಅಸ್ತ್ರಶಾಲೆಗೆ ಹೋಗಿ, ಉರಗ ಶಯ್ಯೆಯನ್ನೇರಿ ಶಾರ್ಙ್ಗಧನುಸ್ಸನ್ನು ಎಡಗೈಯಲ್ಲೇರಿಸಿ ಪಾಂಚಜನ್ಯವನ್ನು ತೆಗೆದು ಕೊಂಡು ಎಡದ ಮೂಗಿನಹೊಳ್ಳೆಯಿಂದ ಊದಲು ಭೂಮಿಯು ನಡುಗಿತು, ದಿಕ್ಕಟಗಳು ಅದುರಿದುವು ಆ ಶಬ್ದದಿಂದ ಬೆದರಿದ ಮದಗಜಗಳೂ ಕುದುರೆಗಳೂ ಕಟ್ಟಿದ್ದ ಕಂಭಗಳನ್ನು ಮುರಿದು ನಗರದಲ್ಲೆಲ್ಲ ಓಡಾಡಿದುವು. ಈ ಶಬ್ದವನ್ನು ಕೇಳಿ ಇದೇ ನದ್ಭುತವೆಂದು ಬಲರಾಮನು ಗದೆಯನ್ನು ಹಿಡಿದನು. ಕೃಷ್ಣನು ಚಂದ್ರಾಯುಧ

ವನ್ನು ಝಳಪಿಸಿದನು. ಆಷ್ಟರಲ್ಲಿ ನೇಮಿಶ್ವರನು ತನ್ನ ಆರಮನೆಗೆ ಬಂದು ಸೇರಿ ದನು. ಇತ್ತ ಆಯುಧಶಾಲೆಯಲ್ಲಿ ಆ ದಿವ್ಯರತ್ನಗಳನ್ನು ಕಾಯುತ್ತಿದ್ದ ದೇವತೆ ಗಳು ಕೃಷ್ಣನಲ್ಲಿಗೆ ಹೋಗಿ ನಡೆದ ವಾರ್ತೆಯನ್ನೆಲ್ಲ ತಿಳಿಸಿದುವು. ಅದೆಲ್ಲವನ್ನೂ ಕೇಳಿ ಕೃಷ್ಣನು " ಸುರನರೋರಗಕಿನ್ನರಾದಿಗಳಿಂದ ಸೇವಿತನಾಗಿರುವ ಈ ನೇಮೀಶನು ನನ್ನ ರಾಜ್ಯವನ್ನು ಸೆಳೆದುಕೊಂಡರೆ ತಡೆಯುವರುಂಟೇ ? ' ಎಂದು ಯೋಚಿಸಿ ಆ ವಿಷಯವನ್ನು ತನ್ನ ಅಣ್ಣನಾದ ಬಲರಾಮನಿಗೆ ತಿಳಿಸಿದನು. ಅದಕ್ಕೆ ಅವನು " ದಿವ್ಯಜ್ಞಾನಿಗಳು ಮೋಹೋದ್ರೇಕದ ರಾಜ್ಯಲಂಪಟಕ್ಕೆ ಸಿಕ್ಕುವವರಲ್ಲ. ಅವರು ಅನಂತವಾದ ಮೋಕ್ಷಸುಖವನ್ನು ಇಚ್ಛಿಸುವರು " ಎಸಲು ಅದಕ್ಕೆ ಕೃಷ್ಣನು " ಹಿಂದಿನ ತೀರ್ಥಂಕರರು ಚಕ್ರವರ್ತಿಸಂಪತ್ತನ್ನನುಭವಿಸಿ, ಕೊನೆಗೆ ಮೋಕ್ಷಸುಖ ವನ್ನು ಹೊಂದಿರುವರೆಂಬುದನ್ನು ನೀವು ತಿಳಿದಿಲ್ಲವೇ ? " ಎಂದನು. ಆಗ ಏಕಕುಂ ಡಲನು " ಉಪಾಯಾಂತರದಿಂದ ಶ್ರೀ ನೇಮಿಕುಮಾರನಿಗೆ ವೈರಾಗ್ಯವುಂಟಾಗು ವಂತೆ ಮಾಡೋಣ " ಎನಲು ಕೇಳಿ ಕೃಷ್ಣನು ಸಂತುಷ್ಟನಾಗಿ ಒಪ್ಪಿಕೊಂಡನು.

ಕೆಲವುದಿನಗಳನಂತರ ಒಂದುದಿನ ಕೃಷ್ಣನು ಸಮುದ್ರವಿಜಯರನ್ನು ಕಂಡು ನೇಮೀಶರಿಗೆ ಯೌವನವು ಬಂದಿರುವುದೆಂದೂ ವಿವಾಹವನ್ನು ನೆರವೇರಿಸಬೇಕೆಂದೂ ಹೇಳಿದನು. ಅದಕ್ಕೆ ಅವರು ಒಡಂಬಡಲು ಎಲ್ಲರೂ ಬಂದು ನೇಮೀಶ್ವರರಿಗೆ ನಮ ಸ್ಕರಿಸಿ ಆ ಶುಭಕಾರ್ಯಕ್ಕೆ ಅವರನ್ನೊಪ್ಪಿಸಿದರು. ಬಳಿಕ ಕೃಷ್ಣನು ಉಗ್ರಕುಲದ ಉಗ್ರಸೇನರಾಜನ ಮಗಳು ರಾಜೀಮತಿ ಮೊದಲಾದ ಐನೂರುಮಂದಿ ರಾಜಪು ತ್ರಿಯರನ್ನು ಕರೆಸಿದನು. ತಳಿರು, ತೋರಣ, ಮೇಲುಕಟ್ಟು, ಮುತ್ತಿನ ರಂಗವಲಿ ಗಳಿಂದ ಆ ರಾಜಭವನವು ಶೋಭಿಸಿತು. ಅತ್ಯಂತ ಮನೋಹರವಾಗಿ ದಿವ್ಯರತ್ನ ಖಚಿತವಾದ ವಿವಾಹಮಂಟಪವು ರಚಿಸಲ್ಪಟ್ಟಿತು. ಸರ್ವಾಭರಣಭೂಷಿತೆಯು ರಾದ ಆ ರಾಜಪುತ್ರಿಯರು ರತಿದೇವಿಯೇ ಅನೇಕ ರೂಪುಗಳಿಂದ ಬಂದಿರುವಳೋ ಎಂಬಂತೆ ಕಣ್ಣೊಳಿಸಿದರು. ನೇಮಿಕುಮಾರರಿಗೆ ಮಂಗಳಸ್ನಾನವನ್ನು ಮಾಡಿಸಿ ದಿವ್ಯರತ್ನಾಭರಣಗಳಿಂದಲಂಕರಿಸಿ ಆನೆಯಮೇಲೆ ಕುಳ್ಳಿರಿಸಿ ಮೆರವಣಿಗೆ ಹೊರಟರು. ದೇವಸ್ತ್ರೀಯರು ಇಕ್ಕೆಲದಲ್ಲಿ ಚಾಮರವನ್ನು ಬೀಸುತ್ತಿದ್ದರು. ರನ್ನಗನ್ನಡಿ ಯನ್ನೂ ಸುವರ್ಣಕುಂಭಗಳನ್ನೂ ಹಿಡಿದರು. ಕಿನ್ನರಸ್ತ್ರೀಯರು ಹಾಡುತ್ತಿದ್ದರು. ಹೀಗೆ ವೈಭವದಿಂದ ಬರುತ್ತಿರುವಾಗ ಇದಿರ್ಗಡೆಯಲ್ಲಿ ಅನೇಕ ಮೃಗಪಶುಗಳನ್ನು ಕಟ್ಟಿದ್ದರು. ಅವು ಹಸಿವುತೃಷೆಗಳಿಂದ ಗೋಳಿಡುತ್ತಿದ್ದುವು. ಅದನ್ನು ನೋಡಿ ನೇಮಿಕುಮಾರರು ಮನಕರಗಿ ಆನೆಯನ್ನು ನಿಲ್ಲಿಸಿ " ಅವಿವೇಕದಿಂದ ಇಲ್ಲಿ ಈ

ಮೃಗಗಳನ್ನಿರಿಸಿದವರಾರು?'' ಎಂದು ಕೇಳಲು ಅಲ್ಲಿ ಕಾವಲಿದ್ದ ಸೇವಕರು "ಸ್ವಾಮಿ! ತಮ್ಮ ಮದುವೆಗೆ ಬರುವ ಮಾಂಸಾಹಾರಿಜನರ ಭೋಜನಕ್ಕಾಗಿ ಈ ಪ್ರಾಣಿಗಳನ್ನು ತಂದಿರುತ್ತೇವೆ'' ಎಂದು ಕೃಷ್ಣನು ಹೇಳಿಕೊಟ್ಟಿದ್ದಂತೆ ಉತ್ತರ ನಿತ್ತರು. ಅದನ್ನು ಕೇಳಿ ನೇಮಿಶರು "ಇಷ್ಟು ಮೃಗಗಳನ್ನು ಕೊಂದು ನಾನು ಮದುವೆಮಾಡಿಕೊಳ್ಳುವುದು, ಪ್ರಥಮಜಿನಂಬನದಲ್ಲಿ ಹಲ್ಲುಮುರಿದಂತಾದುದು. ನನ್ನ ಈ ಅಲ್ಪವಾದ ಸುಖಕ್ಕಾಗಿ ಅನ್ಯಾಯದಿಂದ ಪಶುಗಳನ್ನು ಕೊಲ್ಲಿಸಿ ಹೆಂಗಳನ್ನು ಮದುವೆಯಾಗುವುದು ಚೆನ್ನಾಯ್ತು'' ಎಂದು ಯೋಚಿಸಿ ಮುಕ್ತಿಲಕ್ಷ್ಮಿಯೊಡನೆ ಮದುವೆಯಾಗುವೆನೆಂದು ಮನಸ್ಸಿನಲ್ಲಿ ವೈರಾಗ್ಯವನ್ನು ಹೊಂದಿದರು. ಆಗ "ಶುಭಲಗ್ನವು ಬಂದಿದೆ, ದಯಮಾಡಿಸಬೇಕು'' ಎನಲು ಕೇಳಿ ನೇಮಿಶರು "ಈ ಮದುವೆಯು ಅನೇಕ ಪಾಪವನ್ನುಂಟುಮಾಡುವುದು. ಅನಂತಸುಖವನ್ನೀಯುವ ಮುಕ್ತಿಶ್ರೀಯೊಡನೆ ನಾನು ಮದುವೆಯಾಗುವೆನು. ಹಿಂಸೆಗೆ ಕಾರಣವಾದ ಈ ಸಂಸಾರದಿಂದ ಹೊರಡುವೆನು'' ಎಂದು ಸಂಸಾರಕ್ಕೆ ಕೊಕ್ಕರಿಸಿ ಅಲ್ಲಿಂದ ಹಿಂದಿರುಗಿ ಅರಮನೆಗೆ ಬಂದರು. ಆ ವರ್ತಮಾನವನ್ನು ಕೇಳಿ ಸಮುದ್ರವಿಜಯನು ಆಶ್ಚರ್ಯಪಟ್ಟನು. ಶಿವದೇವಿಯು ಮೂರ್ಛೆಹೊಂದಿದಳು. ಆಗ ನೇಮಿಶರು ತಂದೆತಾಯಿಗಳಿದ್ದಲ್ಲಿಗೆ ಬಂದು ಅವರನ್ನು ಎಚ್ಚರಿಸಿ "ಮಂಜಿನ ಬೆಳಕಿನಂತೆ ಕ್ಷಣಭಂಗುರವಾದ ಐಶ್ವರ್ಯ, ಯೌವನ, ಬಂಧುಬಾಂಧವರು ಇವರಲ್ಲಿ ಆಸಕ್ತನಾಗಿರುವವನು ಮೂಢನು'' ಎಂದು ಮುಂತಾಗಿ ಅನೇಕ ವಿಧವಾದ ಬೋಧನೆಗಳಿಂದೊಡಂಬಡಿಸಿ ದೀಕ್ಷೋನ್ಮುಖರಾದರು. ಆಗ ದೇವತೆಗಳು ಪುಷ್ಪವೃಷ್ಟಿಗರೆದರು. ಲೌಕಾಂತಿಕಾಮರರು ಬಂದು ನೇಮಿಶರಿಗೆರಗಿ "ಎಲೈ ಸ್ವಾಮಿಯೆ! ತಾವು ಲೋಕದಲ್ಲಿ ಧರ್ಮಾಮೃತವರ್ಷಣಕಾರ್ಯವನ್ನು ಆಚರಿಸಿದಿಂದ ಮಾಡಬೇಕು' ಎಂದು ಹೇಳಿ ಹೊರಟುಹೋದರು. ಆಗ ಇಂದ್ರನು ಚತುರ್ನಿಕಾಯದೇವತೆಗಳೊಡನೆ ಬಂದು ವಂದಿಸಿ ಸ್ವಾಮಿಯನ್ನು ರತ್ನಪೀಠದಲ್ಲಿ ಕುಳ್ಳಿರಿಸಿ ಇಂಗಡಲ ಜಲದಿಂದಭಿಷೇಕಮಾಡಿ ದಿವ್ಯರತ್ನಭೂಷಣಗಳಿಂದಲಂಕರಿಸಿ ಪೂಜಿಸಿ ದೀಕ್ಷಾ—ಪರಿನಿಷ್ಕ್ರಮಣ ಕಲ್ಯಾಣವನ್ನು ಮಾಡಿದನು. ಅನಂತರ ನೇಮಿಜಿನನು ಮಾತಾಪಿತೃಮೊದಲಾದವರಿಂದ ಬೀಳ್ಕೊಂಡು ಮಣಿಮಯ ಶಿಬಿಕೆಯನ್ನೇರಲು ಏಳುಹೆಜ್ಜೆ ರಾಜರೂ, ಅಲ್ಲಿಂದ ಏಳುಹೆಜ್ಜೆ ವಿದ್ಯಾಧರರೂ, ಮುಂದೆ ದೇವತೆಗಳೂ ಆ ಪಲ್ಲಕ್ಕಿಯನ್ನು ಹೊತ್ತುಕೊಂಡು ಕಿನ್ನರಾದಿ ದೇವತೆಗಳ ಗೀತನೃತ್ಯವಾದ್ಯಗಳೊಡನೆ ಪರಮೋತ್ಸಾಹದಿಂದ ಹೋಗಿ ದ್ವಾರಾವತಿಯ ಹೊರಗಣ

ಉದ್ಯಾನದ ಮಧ್ಯದಲ್ಲಿ ದೇವನಿರ್ಮಿತವಾದ ಹಸೆಯ ಮಂಟಪದಲ್ಲಿಳಿಸಿದರು. ಆಗ ಸ್ವಾಮಿಯು ಪೂರ್ವಾಭಿಮುಖನಾಗಿ ಕುಳಿತು ಬಾಹ್ಯಾಭ್ಯಂತರ ಪರಿಗ್ರಹಗಳನ್ನು ಬಿಟ್ಟು, ಕತ್ತಿಯಿಂದ ಜರೆಯನ್ನು ಬೇರೆಮಾಡುವಂತೆ, ತನ್ನ ದೇಹದಲ್ಲಿದ್ದ ಆಭರಣಾದಿಗಳನ್ನೆಲ್ಲ ಕಳೆದು, ಕರ್ಮವೆಂಬ ಲತೆಯ ಬೇರುಗಳನ್ನು ಕೀಳುವಂತೆ, ತಲೆಯ ಕೂದಲನ್ನು ಕಿತ್ತನು. ಆ ಕೂದಲನ್ನು ದೇವೇಂದ್ರನು ಎಂತುಕೊಂಡು ಹೋಗಿ ಸಮುದ್ರದಲ್ಲಿ ಬಿಟ್ಟನು. ಬಳಿಕ ದೇವೇಂದ್ರಾದಿ ಸಕಲ ದೇವತೆಗಳೂ ಜಿನೇಶನನ್ನು ಸ್ತೋತ್ರಮಾಡಿ ಸ್ವರ್ಗವನ್ನೈದಿದರು. ರಥನೇಮಿ ಮೊದಲಾದ ಸಾವಿರಮಂದಿ ರಾಜಕುಮಾರರೂ, ಮದುವೆಗೆ ಸಿದ್ಧರಾಗಿ ಬಂದಿದ್ದ ರಾಜೀಮತಿ ಮೊದಲಾದ ರಾಜಕನ್ಯೆಯರೂ ತಮ್ಮ ಆರುಸಾವಿರಮಂದಿ ಸಖಿಯರೊಡನೆ ದೀಕ್ಷೆಯನ್ನು ಹೊಂದಿದರು. ಶ್ರಾವಣ ಶುದ್ಧ ಚತುರ್ಥಿಯ ದಿನ ನೇಮಿಜಿನೇಶನು ದೀಕ್ಷೆಯನ್ನು ಸ್ವೀಕರಿಸಿ ಸಪ್ತರ್ಧಿಸಮೇತನೂ ಮನಃಪರ್ಯಯಜ್ಞಾನವನ್ನು ಹೊಂದಿದವನೂ ಆಗಿ ಆರುದಿನಗಳವರೆಗೆ ಉಪವಾಸವನ್ನು ಮಾಡಿ ಪಾರಣೆಗೆ ಗಿರಿನಗರವೆಂಬ ಪಟ್ಟಣಕ್ಕೆ ಬರಲು ವರದತ್ತನೆಂಬ ರಾಜನು ಯಥಾವಿಧಿಯಿಂದಾಯತೀಶ್ವರನನ್ನು ಇದಿರ್ಗೊಂಡು ನಿಲಿಸಿ ಪ್ರತಿಗ್ರಹ, ಉಚ್ಚಸ್ಥಾನ, ಪಾದೋದಕ, ವಂದನಾ, ಪೂಜಾ, ಮನಶ್ಶುದ್ಧಿ, ವಚನಶುದ್ಧಿ, ಕಾಯಶುದ್ಧಿ, ಆಹಾರಶುದ್ಧಿಗಳೆಂಬ ನವವಿಧಪುಣ್ಯಸಮೇತನಾಗಿ ಅವರಿಗೆ ಆಹಾರದಾನವನ್ನು ಮಾಡಲು ನೇಮಿಶ್ವರರು ಅದನ್ನು ಸ್ವೀಕರಿಸಿ ಆಕ್ಷಯದಾನವೆಂದು ಹರಸಿದರು. ಆಗ ಸುರದುಂದುಭಿ, ಪುಷ್ಪವೃಷ್ಟಿ, ಸುವರ್ಣವೃಷ್ಟಿ, ಸುಗುಧವಾಯು, ದೇವತೆಗಳ ಜಯಘೋಷಗಳೆಂಬ ಪಂಚಾಶ್ಚರ್ಯಗಳಾದುವು. ಅನಂತರ ಸ್ವಾಮಿಯು ಅಲ್ಲಿಂದ ಹೊರಟು ಊರ್ಜಯಂತಗಿರಿಗೆ ಹೋಗಿ ನಿರ್ಜಂತುವಾದೊಂದೆಡೆಯಲ್ಲಿ ಒಂದು ಚಂದ್ರಕಾಂತಶಿಲೆಯಮೇಲೆ ನಿಂತು ಪ್ರತಿಜ್ಞಾಪೂರ್ವಕವಾಗಿ ನಾಲ್ಕು ತಿಂಗಳವರೆಗೆ ಕಾಯೋತ್ಸರ್ಗತಪಸ್ಸನ್ನು ಮಾಡಿದರು ಅವರ ತಪಃಪ್ರಭಾವದಿಂದ ಆ ಬೆಟ್ಟದಲ್ಲಿದ್ದ ಸಿಂಹ, ಆನೆ, ಹಂದಿ, ಸರ್ಪ, ಹೆಬ್ಬುಲಿ, ಹುಲ್ಲೆ, ಶರಭ, ಭೇರುಂಡಾದಿ ಮೃಗಪಕ್ಷಿಗಳೆಲ್ಲವೂ ಕ್ರೂರಭಾವವನ್ನು ಬಿಟ್ಟು ಉಪಶಾಂತತೆಯಿಂದಿದ್ದುವು ಗಿರಿನಗರದ ರಾಜನಾದ ವರದತ್ತನೂ ವೈರಾಗ್ಯವನ್ನು ಹೊಂದಿ ನೇಮಿಜಿನೇಶರ ಸನ್ನಿಧಿಯಲ್ಲಿ ದೀಕ್ಷೆಯನ್ನು ಹೊಂದಿದನು.

ಮತ್ತೆ ನೇಮಿಶ್ವರರು ಐವತ್ತಾರು ದಿನಗಳವರೆಗೆ ಛದ್ಮಸ್ಥಕಾಲದಲ್ಲಿದ್ದು ಅಂದರೆ ಮೋಹನೀಯಶಕರ್ಮಾವಶಿಷ್ಟರಾಗಿದ್ದು ಬಳಿಕ ಒಂದುದಿನ ಬಿದಿರುಮೂಲದಲ್ಲಿ ಏಕಾಗ್ರದೃಷ್ಟಿಯಿಂದ ಧ್ಯಾನಾರೂಢರಾಗಿ ಕರ್ಮವೆಂಬ ಕಾನನವನ್ನು ಧ್ಯಾನ

ವೆಂಬ ಅಗ್ನಿಯಿಂದ ಸುಡಲು ಕೇವಲಜ್ಞಾನೋದಯವಾಯ್ತು. ಅಂದರೆ ಸರ್ವಜ್ಞತ್ವವುಂಟಾಯ್ತು. ಆಗ ಸ್ವಾಮಿಯು ಭೂಮಿಯಿಂದೈದುಸಾವಿರ ಬಿಲ್ಲು ಎತ್ತರದ ಮೇಲೆ ವಿರಾಜಮಾನರಾದರು. ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು. ದೇವದುಂದುಭಿಯು ಮೊಳಗಿತು. ದೇವೇಂದ್ರನು ತನ್ನ ಆಸನಕಂಪದಿಂದ ಸ್ವಾಮಿಗೆ ಕೇವಲಜ್ಞಾನೋತ್ಪತ್ತಿಯಾದ ವಿಷಯವನ್ನು ತಿಳಿದು ಸ್ವಾಮಿಗೆ ಸಮವಸರಣವೆಂಬ ಮಣಿಮಯವಮಂಡಪವನ್ನು ನಿರ್ಮಿಸುವಂತೆ ಕುಬೇರನಿಗೆ ಅಪ್ಪಣೆ ಮಾಡಿ ತಾನು ಸಮಸ್ತದೇವತೆಗಳೊಡನೆ ಸ್ವಾಮಿಯಬಳಿಗೆ ಬಂದು ಮೂರು ಸೂಳು ಬಲವಂದು ಅಶೋಕವೃಕ್ಷ, ಸುರಪುಷ್ಪವೃಷ್ಟಿ, ದಿವ್ಯಧ್ವನಿ, ಚಾಮರ, ಸಿಹ್ಮಾಸನ, ಭಾಮಂಡಲ, ದುಂದುಭಿ, ಛತ್ರಗಳೆಂಬ ಅಷ್ಟಮಹಾಪ್ರಾತಿಹಾರ್ಯಗಳಿಂದ ಶೋಭಿತನೂ ಅನಂತಜ್ಞಾನ, ಅನಂತದರ್ಶನ, ಅನಂತಶಕ್ತಿ, ಅನಂತಸುಖಗಳೆಂಬ ಅನಂತಚತುಷ್ಟಯೋಪೇತನೂ ಜ್ಞಾನಾವರಣ, ದರ್ಶನಾವರಣ, ಮೋಹನೀಯ, ಅಂತರಾಯಗಳೆಂಬ ದುಷ್ಟದುರಿತದೂರೀಕೃತನೂ ಆದ ಆ ನೇಮಿನಾಥೇಶ್ವರನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಉತ್ತಮವಾದ ಜಲ, ಗಂಧ, ಅಕ್ಷತ, ಪುಷ್ಪ, ಚರು, ದೀಪ, ಧೂಪ, ಫಲಗಳಿಂದರ್ಚಿಸಿ ಅರ್ಘ್ಯವನ್ನೆತ್ತಿ ಸ್ತುತಿಸಿ ಉಚಿತಾಸನದಲ್ಲಿ ಕುಳಿತುಕೊಂಡನು. ಇತರ ಎಲ್ಲಾ ದೇವತೆಗಳೂ ಬಹುಭಕ್ತಿಯಿಂದ ಸ್ವಾಮಿಯನ್ನು ಒಲೈಸಿದರು. ದ್ವಾರಾವತಿಯಿಂದ ಕೃಷ್ಣಬಲರಾಮರು ಸಮಸ್ತರಾದವರ ಮತ್ತು ಖೇಚರ ಭೂಚರ ರಾಜಕುಮಾರರ ಸಮೂಹದೊಡನೆ ಸಮವಸರಣಕ್ಕೆ ಬಂದು ನೇಮಿಜಿನೇಶ್ವರರನ್ನು ಕಂಡು ತ್ರಿಪ್ರದಕ್ಷಿಣೆಯನ್ನೂ ಸಾಷ್ಟಾಂಗನಮಸ್ಕಾರವನ್ನೂ ಮಾಡಿ ಮನುಷ್ಯಕೋಷ್ಠದಲ್ಲಿ ಕುಳಿತು ಸ್ವಾಮಿಯ ದಿವ್ಯಾಕೃತಿಯನ್ನು ನೋಡಿ ತಣಿದು ಧರ್ಮಶ್ರವಣಮಾಡಿ ಹಿಂದಿರುಗಿ ಹೋದರು. ಇತ್ತ ವರದತ್ತ ಮುನಿಪತಿಯು ಸಮವಸರಣಕ್ಕೆ ಬಂದು ಸ್ವಾಮಿಗೆ ನಮಸ್ಕಾರಮಾಡಿದೊಡನೆಯೇ ದಿವ್ಯಜ್ಞಾನೋದಯವಾಗಿ ಅವರು ಗಣಧರಪದವಿಯನ್ನು ಹೊಂದಿದರು. ಬಳಿಕ ದೇವೇಂದ್ರನು ಕೈಮುಗಿದು "ಎಲೈ ದೇವಾ! ಭೂಮಿಯಲ್ಲಿ ಧರ್ಮಾಮೃತದ ಮಳೆಗರೆಯಬೇಕು" ಎನಲು ಅದಕ್ಕೆ ಸ್ವಾಮಿಯು ಒಡಂಬಟ್ಟು ಧರ್ಮಚಕ್ರಸಮನ್ವಿತರಾಗಿ ಭರತಾರ್ಯಖಂಡದ ನಾನಾದೇಶಗಳಲ್ಲಿ ಸಂಚರಿಸಿ ಧರ್ಮಾಮೃತವರ್ಷಣವನ್ನು ಮಾಡಿ ಭವ್ಯಜನಸಮೂಹವನ್ನು ತಣಿಸುತ್ತಿದ್ದರು.

೩೩. ಕೃಷ್ಣನ ಸ್ತ್ರೀಯರ ಭವಾವಳಿಸಂಧಿ

ತ್ರಿಖಂಡಾಧಿಪತಿಯಾದ ಕೃಷ್ಣನು ಬಲರಾಮನೊಡನೆ ಅನೇಕ ವರ್ಷಗಳ ವರೆಗೆ ಸುಖವಾಗಿ ರಾಜ್ಯಭಾರಮಾಡಿಕೊಂಡಿರಲೊಂದು ದಿನ ಶ್ರೀ ನೇಮಿಜಿನೇಶ್ವರರ ಸಮವಸರಣವು ದ್ವಾರಾವತಿಯ ಸಮೀಪದ ರೇವತಿಯೆಂಬ ವನದ ಮೇಲ್ಗಡೆ ಬಂದು ನೆಲಸಿರುವುದನ್ನು ದೇವದುಂದುಭಿಯ ಸ್ವರದಿಂದ ತಿಳಿದು ಕೃಷ್ಣನು ತನ್ನ ಸಮಸ್ತ ಬಂಧು ಪರಿವಾರದೊಡನೆ ಅಲ್ಲಿಗೆ ಹೋಗಿ ಸ್ವಾಮಿಯನ್ನು ಪೂಜಿಸಿ ಮನುಷ್ಯಕೋಷ್ಠದಲ್ಲಿ ಕುಳ್ಳಿರ್ದು ಧರ್ಮಶ್ರವಣಮಾಡಿದ ಬಳಿಕ ದೇವಕೀದೇವಿಯು ವರದತ್ತಗಣಧರರನ್ನು ಕುರಿತು ತನ್ನ ಮನೆಗೆ ಆಹಾರನಿಮಿತ್ತವಾಗಿ ಬಂದ ಆರುಜನ ಮುನಿರಾಜರುಗಳಲ್ಲಿ ತನಗೆ ಅತ್ಯಂತಸ್ನೇಹವುಂಟಾಗಲು ಕಾರಣವೇನೆಂದು ಬೆಸಗೊಂಡಳ.. ಅದಕ್ಕವರು '' ಎಲೆ ದೇವಕೀದೇವಿ ! ನೀನು ಮೊದಲು ಮಧುರಾಪುರದಲ್ಲಿ ಹೆತ್ತ ಆರುಜನ ಮಕ್ಕಳೇ ಅವರು. ಅವರು ಜರಮಾಂಗಧಾರಿಗಳು. ಅವರನ್ನು ನೈಗಮದೇವನು ಒಯ್ದನು. ಅವರು ಬೆಳೆದು ನಿರ್ವೇಗದಿಂದ ದೀಕ್ಷೆಯನ್ನು ಹೊಂದಿ ಬಂದರು. ಅದರಿಂದ ಅವರಲ್ಲಿ ನಿನಗತ್ಯಂತಸ್ನೇಹವುಂಟಾದುದು ' ಎಂದು ಹೇಳಲು ದೇವಕೀದೇವಿಯು ಸಂತುಷ್ಟಳಾದಳು. ಬಳಿಕ ಸತ್ಯಭಾಮೆಯು ತನ್ನ ಪೂರ್ವಭವದ ಕಥೆಯನ್ನು ಹೇಳಬೇಕೆಂದು ಗಣಧರರನ್ನು ಕೇಳಿದಳು. ಅದಕ್ಕವರು ಸತ್ಯಭಾಮೆಗೆ ಇಂತೆಂದರು.

'' ಶೀತಳಜಿನರ ಕಾಲಾವಸಾನದಲ್ಲಿ ಧರ್ಮವು ಖಿಲವಾಗುತ್ತಿರಲು ಭದ್ರಿಳವೆಂಬ ನಗರದ ಭೂತಿಶರ್ಮನೆಂಬ ಬ್ರಾಹ್ಮಣನಿಗೂ ಅತನ ಸತಿ ಕಮಲೆಯೆಂಬವಳಿಗೂ ಮುಂಡಶಲಾಯನನೆಂಬ ದುಷ್ಪುತ್ರನು ಹುಟ್ಟಿ ಕುಶಾಸ್ತ್ರಗಳನ್ನಭ್ಯಸಿಸಿ ಸಪ್ತವ್ಯಸನಗಳಿಂದ ಕೂಡಿದವನಾಗಿದ್ದು ಅಲ್ಲಿಯ ಘನರಥನೆಂಬ ರಾಜನಿಗೂ ದುರುಪದೇಶವನ್ನು ಮಾಡಿ ಸತ್ತು ಕ್ರಮವಾಗಿ ಏಳು ನರಕಗಳಲ್ಲಿಯೂ ಹುಟ್ಟಿಬಂದು ತಿರ್ಯಗ್ಗತಿಯಲ್ಲಿ ಜನಿಸಿ ಸತ್ತು ಬಳಿಕ ಒಂದು ಅರಣ್ಯದಲ್ಲಿ ಕಾಲನೆಂಬ ಬೇಡನಾಗಿ ಹುಟ್ಟಿ ಒಂದುದಿನ ಕಾಲಲಬ್ಧಿವಶದಿಂದ ದೊರೆತ ಓರ್ವ ಮುನೀಶ್ವರ ಪಾದಗಳಮೇಲೆ ತಲೆಯಿಟ್ಟು ನಮಸ್ಕರಿಸಿದನು. ಅವರು ಅವನನ್ನು ಆಸನ್ನ ಭವ್ಯನೆಂದು ತಿಳಿದು ಅವನಿಗೆ ಉತ್ತಮವ್ರತವನ್ನಿತ್ತರು. ಅವನು ಅದನ್ನಾಚರಿಸಿ

ಸತ್ಯ ವಿಜಯಾರ್ಧಗಿರಿಯ ದಕ್ಷಿಣದಲ್ಲಿರುವ ಅಳಕಾನಗರದ ವಿದ್ಯಾಬಲರಾಜನಿಗೂ ಅತನ ರಾಣಿ ಜ್ಯೋತಿರ್ಮಾಲೆಗೂ ಹರಿಬಲನೆಂಬ ಮಗನಾಗಿ ಹುಟ್ಟಿ ರಾಜ್ಯವಾಳುತ್ತಿದ್ದು ಬಂದವನು ಮುನೀಶರೋರ್ವರನ್ನು ಕಂಡು ವೈರಾಗ್ಯದಿಂದ ದೀಕ್ಷೆಯನ್ನು ಹೊಂದಿ ದೇಹಾಂತ್ಯದಲ್ಲಿ ಸೌಧರ್ಮಕಲ್ಪದಲ್ಲಿ ಹುಟ್ಟಿ ಸ್ವರ್ಗಸುಖವನ್ನನುಭವಿಸಿ ಅಲ್ಲಿಂದ ಬಂದು ಆ ವ್ರತದ ಫಲದಿಂದ ಈಗ ಸತ್ಯಭಾಮೆಯಾಗಿ ಹುಟ್ಟಿರುವೆ'' ಎನಲು ಆಕೆಯು ಸಂತುಷ್ಟಳಾಗಿ ಕುಳಿತಳು. ಆಗ ರುಗ್ಮಿಣಿಯು ತನ್ನ ಭವಾವಳಿಯನ್ನು ಕೇಳಲು ಗಣಧರರು " ಮಗಧದೇಶದ ಲಕ್ಷ್ಮೀಪುರದಲ್ಲಿ ಸೋಮಶರ್ಮನೆಂಬ ಬ್ರಾಹ್ಮಣನ ಹೆಂಡತಿ ಲಕ್ಷ್ಮೀಮತಿಯೆಂಬವಳು ಒಂದು ದಿನ ಸರ್ವಾಭರಣ ಭೂಷಿತಳಾಗಿ ಕನ್ನಡಿಯಲ್ಲಿ ತನ್ನ ಮೊಗವನ್ನು ನೋಡುತ್ತಿರುವಾಗ ಅಲ್ಲಿಗೆ ಮಾಸೋಪವಾಸವನ್ನು ಮುಂಡಿದ್ದು ಆಹಾರಕ್ಕೆ ಬರುತ್ತಿದ್ದ ಕೃಶಾಂಗರಾದ ಸಮಾಧಿಗುಪ್ತರೆಂಬ ತಪಸ್ವಿಯ ನೆಳಲು ಆ ಕನ್ನಡಿಯಲ್ಲಿ ಬೀಳಲು ಇದೇನೆಂದವಳು ತಿರುಗಿನೋಡಿ ಆ ಮುನೀಶನನ್ನು ಮನಸ್ಸಿಗೆ ಬಂದಹಾಗೆ ಬೈದು ಅಟ್ಟಿದಳು. ಆ ಪಾಪದಿಂದವಳ ದೇಹದಲ್ಲಿ ಔದುಂಬರವೆಂಬ ಕುಷ್ಠರೋಗವುಂಟಾಗಿ ದೇಹವೆಲ್ಲವೂ ಕೊಳೆತು ದುರ್ವಾಸನೆಯಾಗಿ ಸತ್ತು ತನ್ನ ಮನೆಯಲ್ಲಿ ಇಲಿಯಾಗಿ ಹುಟ್ಟಿ ಸತ್ತು ಕ್ರಮವಾಗಿ ಹಾವು, ಹಂದಿ, ಮೂಗಿಲಿ, ಬೆಕ್ಕು, ಹೆಣ್ಣುನಾಯಿ, ಬಿಳಿಯಕತ್ತೆ ಮೊದಲಾದ ಜನ್ಮಗಳನ್ನೆತ್ತಿ ಅತಿ ದುಃಖವನ್ನುಂಡು ಅನಂತರ ಕಾಳಿಂದೀನದೀತೀರದ ವಂದಿರವೆಂಬ ಗ್ರಾಮದಲ್ಲಿ ಮತ್ಸ್ಯನೆಂಬ ಬೆಸ್ತರವನಿಗೂ ಅವನ ಹೆಂಡತಿ ಮಂಡೂಕಿಯೆಂಬವಳಿಗೂ ಪೂತಿಗಂಧಿನಿಯೆಂಬ ಮಗಳಾಗಿ ಹುಟ್ಟಿದಳು. ಆಕೆಯ ತಂದೆ ತಾಯಿಗಳು ಸತ್ತರು. ಆ ಊರ ಜನರು ಅವಳ ಮೈಯ ದುರ್ಗಂಧಕ್ಕೆ ಹೇಸಿ ಅಲ್ಲಿಂದವಳನ್ನು ಓಡಿಸಲು ಅವಳು ಯಮುನಾನದೀತೀರಕ್ಕೆ ಹೋಗಿ ಅಲ್ಲಿಯ ಅಂಬಿಗರೊಡನೆ ಸೇರಿಕೊಂಡಿದ್ದು ಒಂದುದಿನ ಸಾಯಂಕಾಲಸಮಯದಲ್ಲಿ, ಹಿಂದೆ ಅವಳು ಲಕ್ಷ್ಮೀಮತಿಯಾಗಿದ್ದಾಗ ಕನ್ನಡಿಯ ಹಿಂಗಡೆಯಲ್ಲಿ ಯಾರ ನೆರಳು ಬಿದ್ದಿದ್ದಿತೋ ಆ ಸಮಾಧಿಗುಪ್ತಮುನಿಗಳೇ ಆ ನದೀತೀರಕ್ಕೆ ಬಂದು ತಪಸ್ಸಿಗೆ ನಿಂತಿರಲು, ಆ ಪೂತಿಗಂಧಿನಿಯು ಕರ್ಮೋಪಶಮದಿಂದಲ್ಲಿಗೆ ಬಂದು ಆ ಮುನೀಶರ ಕಟಂಕಟಿಯಾಗಿದ್ದ ದೇಹವನ್ನು ನೋಡಿ ಕರುಣಹುಟ್ಟಿ ಈತನು ಒಡವರಲ್ಲಿ ಅತ್ಯಂತ ಬಡವನಾಗಿರುವುದರಿಂದ ಒಟ್ಟಿಯಿಲ್ಲದಿರುವನೆಂದು ಭಾವಿಸಿ ಅತಿವೇಗವಾಗಿ ಜೀಸುತ್ತಿದ್ದ ಗಾಳಿಗೆ ಅಡ್ಡವಾಗಿ ತನ್ನ ಹರಿಗೋಲನ್ನು ತಂದಿರಿಸಿ ಶೀತವಾಯುವಿನ ಉಪಸರ್ಗವನ್ನು ತಪ್ಪಿಸಿದಳು. ಬೆಳಗಾದಮೇಲೆ ಆ ಮುನಿಯು ಕಣ್ದೆರೆದು ಪೂತಿಗಂಧಿನಿಯನ್ನು

ನೋಡಿ ಅವಳು ಲಕ್ಷ್ಮೀಮತಿಯಾಗಿದ್ದವಳೆಂದು ದಿವ್ಯಜ್ಞಾನದಿಂದ ತಿಳಿದು " ಎಲೆ ಪೂತಿಗಂಧಿನಿ ! ಅಂದು ಲಕ್ಷ್ಮೀಮತಿಯಾಗಿದ್ದಾಗ ಯೌವನಮದದಿಂದ ನಮ್ಮನ್ನು ದೂಷಿಸಿದುದರಿಂದ ನಿನಗೆ ಇಂತಹ ದುಃಖಪ್ರಾಪ್ತಿಯಾದುದು " ಎಂದು ಹೇಳಿ ಅವಳ ಭವಗಳ ವಿಚಾರವನ್ನೆಲ್ಲ ತಿಳಿಸಲು ಕೇಳಿ ಆಕೆಯು ಆ ಮುನಿಪತಿಗೆರಗಿ ಸುವ್ರತಗಳನ್ನು ಕೈಕೊಂಡು ಪಾಲಿಸುತ್ತಿದ್ದಳು. ಆಗ ವಸುಂಧರೆಯೆಂಬ ಕಂತಿಕೆಯು ಬರಲು ಆಕೆಯನ್ನು ಕಂಡು ಅವಳೊಡನೆ ರಾಜಗೃಹವೆಂಬ ಪುರದ ಸಿದ್ಧಶಿಲೆಯೆಂಬ ಗುಹೆಗೆ ಹೋಗಿ ಅಲ್ಲಿ ಉತ್ತಮವಾದ ನೋಂಪಿಯಂ ಕೈಕೊಂಡು ನಡೆಸುತ್ತಿದ್ದಳು. ಅಲ್ಲಿಗೆ ಸಮಾಧಿಗುಪ್ತರು ಬರಲು ಅವರನ್ನು ಕಂಡು ಆ ಪುರದರಸನ ಮಗಳಾದ ಶ್ರೀಮತಿಯು ಅವರಿಗೆ ನಮಸ್ಕರಿಸಿ ತನ್ನ ಭವವಿಚಾರವನ್ನು ಕೇಳಿ ಆ ಪೂತಿಗಂಧಿನಿಯು ಹಿಂದೆ ಲಕ್ಷ್ಮೀಮತಿಯ ಜನ್ಮದಲ್ಲಿ ತನಗೆ ಪ್ರಿಯಳಾದ ಸಖಿಯಾಗಿದ್ದುದರಿಂದ ಆಕೆಯನ್ನು ತನ್ನ ಮನೆಗೆ ಕರೆದೊಯ್ದು ಜಿನಗುಣಸಂಪತ್ತಿ ಮೊದಲಾದ ನೋಂಪಿಗಳನ್ನು ಮಾಡಿಸುತ್ತಿರಲೊಂದುದಿನ ಆ ಕಂತಿಕೆಯು ಉತ್ತಮವಾದ ಅನ್ನವನ್ನು ಪೂತಿಗಂಧಿನಿಗೆ ಕೊಡಿಸಲು, ಆಕೆಗೆ ಆ ದಿನ ಉಪವಾಸವ್ರತವಿದ್ದುದರಿಂದ ಅದನ್ನು ಭುಂಜಿಸದೆ ಬಿಸುಟಳು. ಆದರಲ್ಲಿ ಅನೇಕ ಇರುವೆಗಳು ಮುತ್ತಿ ಸಾಯಲು ಆ ಪಾಪವು ಹಿಂಬಾಲಿಸಿತು. ಕೆಲವು ದಿನಗಳ ಮೇಲೆ ಗುರುಸನ್ನಿಧಿಯಲ್ಲಿ ಸನ್ಯಸನವ್ರತವನ್ನು ಕೈಕೊಂಡು ಸತ್ತು ಹದಿನಾರನೆಯ ಸ್ವರ್ಗದ ದೇವೇಂದ್ರನಿಗೆ ಪತ್ನಿಯಾಗಿ ಹುಟ್ಟಿ ಸುಖವನನುಭವಿಸಿ ಬಂದು ಈಗ ರುಗ್ಮಿಣಿಯಾಗಿ ಹುಟ್ಟಿರುವೆ. ಅಂದು ನೀನು ಬಿಸುಟ ಅನ್ನಕ್ಕೆ ಇರುವೆಗಳು ಮುತ್ತಿ ಅಳಿದುದರಿಂದ ಈ ಜನ್ಮದಲ್ಲಿ ನೀನು ಪಿತೃವಿಯೋಗದುಃಖವನ್ನನುಭವಿಸಿದೆ " ಎಂದು ಹೇಳಲು ಕೇಳಿ ರುಗ್ಮಿಣಿಯು ಸಂತೋಷಪಟ್ಟಳು.

ಆಗ ಜಂಬಾವತಿಯು ತನ್ನ ಪೂರ್ವಭವವನ್ನು ಕೇಳಲು ಗಣಧರರು " ವಿಜಯಾರ್ಧಗಿರಿಯ ಸೀತಾನದಿಯ ಪೂರ್ವದಿಕ್ಕಿನ ಪುಷ್ಕಲಾವತೀದೇಶದ ಮಧ್ಯದಲ್ಲಿರುವ ವೀತಶೋಕಪಟ್ಟಣದ ದಮನಕನೆಂಬ ವೈಶ್ಯನಿಗೂ ಅತನ ಪತ್ನಿ ದೇವಮತಿಗೂ ವಿಮಲೆಯೆಂಬ ಮಗಳು ಹುಟ್ಟಿ ಬೆಳೆದು ಸುಮಿತ್ರನೆಂಬವನಿಗೆ ವಿವಾಹಿತಳಾಗಿ ಕೆಲವು ಕಾಲ ಸುಖದಲ್ಲಿರಲು ಆ ಸುಮಿತ್ರನು ಮರಣಹೊಂದಿದನು. ವಿಮಲೆಯು ಸುವ್ರತಾಚರಣೆಯಲ್ಲಿದ್ದು ಸತ್ತು ಅನಿಮಿಷವೆಂಬ ಅರಣ್ಯದಲ್ಲಿ ವನದೇವತೆಯಾಗಿ ಹುಟ್ಟಿ ಎಂಬತ್ತುನಾಲ್ಕು ಸಾವಿರ ವರ್ಷಗಳವರೆಗಿದ್ದ ದೇಹಾವಸಾನದಲ್ಲಿ ಆ ಪುಷ್ಕಲಾವತೀದೇಶದ ವಿಜಯವೆಂಬ ನಗರದ ಮಧುಸೇನನೆಂಬ ವೈಶ್ಯನಿಗೆ ಬಂಧುಮತಿಯೆಂಬ

ಪತ್ನಿಯಲ್ಲಿ ವಿಜಯಸೇನೆಯೆಂಬ ಮಗಳಾಗಿಹುಟ್ಟಿ ಯೌವನದಲ್ಲಿ ಶ್ರೀಪಂಚಮಿಯ ಉಪವಾಸವಮಾಡಿ ಸತ್ತು ಈಜೀರದಿಕ್ಪಾಲಕನಿಗೆ ಹೆಂಡತಿಯಾಗಿ ಹುಟ್ಟಿ ಐದು ಪಲ್ಯೋಪಮಕಾಲ ಸುಖವನನುಭವಿಸಿ ಅಲ್ಲಿಂದ ಬಂದು ಪುಂಡರೀಕಿಣೀನಗರದ ವಜ್ರಸೇನನೆಂಬ ವೈಶ್ಯನಿಗೂ ಆತನ ಪತ್ನಿ ಸುಭದ್ರೆಗೂ ಸುಮತಿಯೆಂಬ ಮಗಳಾಗಿ ಹುಟ್ಟಿ ಬೆಳೆದು ಸುವ್ರತೆಯೆಂಬ ಕಂತಿಕೆಗೆ ಭಕ್ತಿಪುರಸ್ಸರವಾಗಿ ಉತ್ತಮವಾದ ಆಹಾರದಾನವನ್ನುಮಾಡಿ ರತ್ನಾವಳಿಯೆಂಬ ಸೋಂಪಿಯಂ ಸೋಂತು ಆಯುಷ್ಯವನ್ನು ವನವಾಸದಲ್ಲಿ ಸತ್ತು ಐದನೆಯ ಕಲ್ಪದ ದೇವೇಂದ್ರನ ಪತ್ನಿಯಾಗಿ ಹುಟ್ಟಿ ಹದಿಮೂರು ಪಲ್ಯೋಪಮಕಾಲ ಸುಖವನುಂಡು ಅಲ್ಲಿಂದ ಬಂದು ಈಗ ಜಂಬಾವತಿಯಾಗಿ ಹುಟ್ಟಿರುವೆ ಎಂದು ಹೇಳಿದರು.

ಬಳಿಕ ಸುಸೀಮೆಯು ತನ್ನ ಜನ್ಮದ ಕಥೆಯನ್ನು ಹೇಳಬೇಕೆಂದು ಗಣಧರರನ್ನು ಕೇಳಿಕೊಳ್ಳಲು ಅವರು "ಧಾತಕೀಖಂಡದ ಮೂಡಣ ಮಂದರದ ಸೀತಾನದಿಯ ಬಲಗಡೆಯ ಮಂಗಲಾವತೀದೇಶದ ರತ್ನಸಂಚಯಪುರದರಸನಾದ ವಿಶ್ವಸೇನನನ್ನು ಶತ್ರುರಾಜರು ಯುದ್ಧದಲ್ಲಿ ಕೊಂದರು. ಅವನ ಸುಂದರಿಯೆಂಬ ಪತ್ನಿಯು ಪತಿಶೋಕದಿಂದ ಅಗ್ನಿಪ್ರವೇಶಮಾಡಿ ಸತ್ತು ವಿಜಯಾರ್ಧಗಿರಿಯಲ್ಲಿರುವ ಒಂದು ವನದ ಮಧ್ಯದಲ್ಲಿ ವ್ಯಂತರದೇವತೆಯಾಗಿ ಹುಟ್ಟಿ ಸಂತೋಷದಿಂದಿದ್ದು ಮಡಿದು ಹಿಂದೆ ಅಗ್ನಿಪ್ರವೇಶಮಾಡಿ ಆತ್ಮಹತ್ಯಮಾಡಿಕೊಂಡಿದ್ದ ಪಾಪದ ಫಲದಿಂದ ಅನೇಕ ಜನ್ಮಗಳನ್ನೆತ್ತಿ ಒಂದು ಜಂಬೂದ್ವೀಪದ ಭರತಕ್ಷೇತ್ರದ ಶಾಲಿಗ್ರಾಮದಲ್ಲಿ ಯಕ್ಷಾಂಕನೆಂಬ ವೈಶ್ಯನಿಗೂ ದೇವಸೇನೆಯೆಂಬಾತನ ಸತಿಗೂ ಯಕ್ಷಿಯೆಂಬ ಮಗಳಾಗಿ ಹುಟ್ಟಿ ಜಿನಧರ್ಮವನ್ನು ಕೈಕೊಂಡು ನಡೆಸುತ್ತ ಓರ್ವ ಮುನೀಶಗೆ ಆಹಾರದಾನಮಾಡಿ ಸುಖದಿಂದಿರ್ದು ಒಂದು ದಿನ ಆ ನಗರದ ವನಕ್ಕೆಹೋಗಿರಲು ಅಲ್ಲಿ ಹಾವು ಕಡಿದು ಸತ್ತು ಈ ದೇಶದ ವಾಸವಗಿರಿಯ ಸೀತಾನದಿಯ ದಕ್ಷಿಣನಾಡಿನ ಪುಷ್ಕಲಾವತೀದೇಶದ ಪುಂಡರೀಕಿಣಿಯ ಅರಸ ಅಶೋಕನಿಗೂ ಆತನ ವಲ್ಲಭೆ ಸೋಮಶ್ರೀಗೂ ಲಕ್ಷ್ಮೀಕಾಂತೆಯೆಂಬ ಮಗಳಾಗಿ ಹುಟ್ಟಿ ಯೌವನದಲ್ಲಿ ದೀಕ್ಷೆಯನ್ನು ಹೊಂದಿ ಸತ್ತು ಅದರ ಫಲದಿಂದ ಮಾಹೇಂದ್ರಕಲ್ಪದ ದೇವನಿಗೆ ವಲ್ಲಭೆಯಾಗಿ ಹುಟ್ಟಿ ಹನ್ನೊಂದು ಪಲ್ಯೋಪಮಕಾಲ ಜೀವಿಸಿ ಅಲ್ಲಿಂದ ಬಂದಿಲ್ಲಿ ಸುಸೀಮೆಯಾಗಿ ಹುಟ್ಟಿದೆ" ಎಂದು ಹೇಳಿದರು.

ಅನಂತರ ಲಕ್ಷ್ಮಣೆಯು ತನ್ನ ಭವದ ಕಥೆಯನ್ನು ಕೇಳಲು ಗಣಧರರು "ಸೀತಾನದಿಯ ದಕ್ಷಿಣತೀರದ ಕಚ್ಛಕಾವತೀದೇಶದಲ್ಲಿ ಅರಿಷ್ಟವೆಂಬ ಪಟ್ಟಣದ

ರಸು ಸುಷೇಣನೆಂಬವನು ಕಠಿನರೋಗದಿಂದ ಸಾಯಲು ಅವನ ತಾಯಿಯು ಅತ್ಯಂತ ಶೋಕಾಕುಲೆಯಾಗಿ ಆರ್ತಧ್ಯಾನದಿಂದ ಸತ್ತು ವಿಂಧ್ಯಾಟವಿಯಲ್ಲಿ ಹುಟ್ಟಿ ಒಬ್ಬ ಬೇಡನ ಹೆಂಡತಿಯಾಗಿದ್ದು ಅಲ್ಲಿಗೆ ಬಂದ ಓರ್ವ ಚಾರಣಮುನಿವರರಿಂದ ವ್ರತವನ್ನು ಕೈಕೊಂಡು ಮುಪ್ಪಿನಲ್ಲಿ ಸತ್ತು ಕಾಪಿಷ್ಠ ಸ್ವರ್ಗದ ದೇವನಿಗೆ ನರ್ತಕಿಯಾಗಿ ಹುಟ್ಟಿ ಇಪ್ಪತ್ತು ಪಲ್ಯೋಪಮಕಾಲದವರೆಗಿದ್ದು ಅಲ್ಲಿಂದ ಬಂದು ರಜತಾದ್ರಿಯ ದಕ್ಷಿಣಶ್ರೇಣಿಯಲ್ಲಿರುವ ಸುಘೋಷನಗರದ ರಾಜಮಹೇಂದ್ರನಿಗೂ ಆತನ ಭಾರ್ಯೆ ವಸುಂಧರೆಗೂ ಕಾಂಚನಮಾಲೆಯೆಂಬ ಮಗಳಾಗಿ ಹುಟ್ಟಿ ಸ್ವಯಂವರದಲ್ಲಿ ಹರಿವಾಹನನೆಂಬ ರಾಜನನ್ನು ವರಿಸಿ ಸುಖವಾಗಿದ್ದು ಮುಕ್ತಾವಳಿಯೆಂಬ ನೋಂಪಿಯುಂ ನೋಂತು ಸತ್ತು ಮಾಹೇಂದ್ರನೆಯ ಸ್ವರ್ಗದ ಸುರಪತಿಗೆ ಪತ್ನಿಯಾಗಿ ಹುಟ್ಟಿ ಒಂಬತ್ತು ಪಲ್ಯೋಪಮಕಾಲ ಸ್ವರ್ಗಸುಖವನನುಭವಿಸಿ ಅಲ್ಲಿಂದ ಬಂದು ನೀನೀಗ ಲಕ್ಷ್ಮಣೆಯಾಗಿ ಹುಟ್ಟಿರುವೆ'' ಎಂದು ಹೇಳಿದರು.

ಬಳಿಕ ಗಾಂಧಾರಿಯು ತನ್ನ ಭವವನ್ನು ಕೇಳಿದಳು. ಗಣಧರರು ''ಸಾಕೇತನಗರದ ರುದ್ರನೆಂಬ ರಾಜನರಸಿ ವಸಶ್ರೀಯೆಂಬವಳು ಮುನೀಶ್ವರಿಗಾಹಾರದಾನ ಮಾಡುತ್ತಿದ್ದು ಆ ಪುಣ್ಯದಿಂದ ಮರಣಾನಂತರ ಉತ್ತರಕುರುಭೋಗಭೂಮಿಯಲ್ಲಿ ಮೂರು ಪಲ್ಯೋಪಮಕಾಲ ಸುಖವಿದ್ದು ಅಲ್ಲಿಂದ ಬಂದು ಜ್ಯೋತಿರ್ದೇವನಾದ ಚಂದ್ರನಿಗೆ ರೋಹಿಣಿಯೆಂಬ ಪತ್ನಿಯಾಗಿದ್ದು ಮತ್ತಲ್ಲಿಂದ ಬಂದು ಈ ಭರತದ ವಿಜಯಾರ್ಧದ ದಕ್ಷಿಣದಲ್ಲಿರುವ ವಲ್ಲಭನಗರದ ವಿದ್ಯುತ್ಪ್ರಭನೆಂಬ ಖೇಚರರಾಜನಿಗೆ ಮಗಳಾಗಿ ಹುಟ್ಟಿ ಅಲೋಕಪುರದ ಮಹೇಂದ್ರವಿಕ್ರಮನನ್ನು ವರಿಸಿ ಸುಖದಿಂದಿದ್ದು ಒಂದು ದಿನದ ದಂಪತಿಗಳು ಜಿನೇಶ್ವರನ ಪೂಜೆಗೆಂದು ದೇವಗಿರಿಗೆ ಹೋಗಿರಲು ಅಲ್ಲಿಗೆ ಬಂದ ಚಾರಣರಲ್ಲಿ ಧರ್ಮಶ್ರವಣಮಾಡಿ ವೈರಾಗ್ಯವನ್ನು ಹೊಂದಿ ತನ್ನ ಗಂಡನೊಡನೆ ದೀಕ್ಷೆಗೊಂಡು ತಪಶ್ಚರಣಮಾಡಿ ಸತ್ತು ಆಕೆಯು ಸ್ವರ್ಗದಲ್ಲಿ ಹುಟ್ಟಿ ಐದು ಪಲ್ಯೋಪಮಕಾಲ ಸುಖವನುಂಡು ಅಲ್ಲಿಂದ ಬಂದು ಗಾಂಧಾರಿಯಾಗಿ ಹುಟ್ಟಿರುವೆ'' ಎಂದು ಹೇಳಿದರು.

ಬಳಿಕ ಗೌರಿಯೆಂಬ ಪಟ್ಟದರಸಿಯು ತನ್ನ ಭವಗಳನ್ನು ಕೇಳಲು ಅವರು ''ನಾಗಪುರವೆಂಬ ನಗರದ ಹೇಮಾಭನೆಂಬ ರಾಜನು ತನ್ನ ಹೆಂಡತಿ ಸರಸ್ವತಿಯೆಂಬವಳೊಡನೆ ಸುಖದಿಂದಿದ್ದು ಯಶೋಧರರೆಂಬ ಅವಧಿಜ್ಞಾನಿಗಳಿಂದ ಸರಸ್ವತಿಯು ತನ್ನ ಪೂರ್ವಜನ್ಮದ ಕತೆಯನ್ನು ಕೇಳಿ ಚಿಂತಾಕ್ರಾಂತಳಾಗಿರಲು ಆಕೆಯ ವಲ್ಲಭನು ಅವಳ ವ್ಯಥೆಗೆ ಕಾರಣವನ್ನು ಕೇಳಲು ಅವಳು 'ನಾನು ಭೋಗಪುರವೆಂಬ

ನಗರದ ವಿಜಯಸೇನನೆಂಬ ವೈಶ್ಯನಿಗೆ ಪತ್ನಿಯಾಗಿದ್ದು ಶ್ರೇಷ್ಠರಾದ ಮುನಿಗಳಿಗೆ ಆಹಾರದಾನಮಾಡಿ ಆ ಪುಣ್ಯದಿಂದ ಭೋಗಭೂವಿಯಲ್ಲಿ ಹುಟ್ಟಿ ಮೂರು ಪಲ್ಯೋಪಮಕಾಲವಿದ್ದು ಅಲ್ಲಿಂದ ಬಂದು ಧರಣೀಂದ್ರನಿಗೆ ವಲ್ಲಭೆಯಾಗಿ ಮೂರು ಪಲ್ಯೋಪಮಕಾಲ ಸುಖವನುಂಡು ಬಂದು ಈಗ ನಿನಗೆ ಪತ್ನಿಯಾಗಿ ಹುಟ್ಟಿದೆನು' ಎಂದು ಹೇಳಲು ಆತನೂ ವೈರಾಗ್ಯವನ್ನು ಹೊಂದಿ ಓರ್ವ ತಪಸ್ವಿಗಳಲ್ಲಿ ಈರ್ವರೂ ಅಹಿಂಸಾಸತ್ಯಾದಿ ಅಣುವ್ರತಗಳನ್ನು ಕೈಕೊಂಡು ನಡೆಸಿ ಸತ್ತು ಸರಸ್ವತಿಯು ಮೊದಲನೆಯ ಸ್ವರ್ಗದಲ್ಲಿ ಹುಟ್ಟಿ ಸುಖವನನುಭವಿಸಿ ಅಲ್ಲಿಂದ ಬಂದು ವತ್ಸದೇಶದ ಕೌಶಂಬೀನಗರದ ಸುಮತಿಯೆಂಬ ವೈಶ್ಯನಿಗೂ ಅವನ ಸುಭದ್ರೆಯೆಂಬ ಸತಿಗೂ ಧರ್ಮಿಳೆಯೆಂಬ ಮಗಳಾಗಿ ಜನಿಸಿ ಬೆಳೆದು ಜಿನಗುಣಸಂಪತ್ತಿಯೆಂಬ ಅವೋಘ ವಾದ ವ್ರತವನಾಚರಿಸಿ ಮಡಿದು ಅಚ್ಯುತಕಲ್ಪೇಂದ್ರನಿಗೆ ರಾಣಿಯಾಗಿ ಹದಿಮೂರು ಪಲ್ಯೋಪಮಕಾಲ ಸ್ವರ್ಗಸುಖವನಾಸ್ವಾದಿಸಿ ಬಂದು ನೀನೀಗ ಗೌರಿಯಾದೆ'' ಎಂದು ಹೇಳಿದರು.

ಬಳಿಕ ಪದ್ಮಾವತಿಯು ಎದ್ದು ಕೈಮುಗಿದು ತನ್ನ ಭವವೃತ್ತಾಂತವನ್ನು ಬಿಸಗೊಂಡಳು. ಅದಕ್ಕೆ ಗಣಧರರು ''ಭರತಖಂಡದ ಅವಂತೀದೇಶದ ಉಜ್ಜ ಯಿನೀನಗರದ ವಿಜಯಸೇನನೆಂಬ ರಾಜನಿಗೆ ಅಪರಾಜಿತೆಯೆಂಬ ರಾಣಿಯಲ್ಲಿ ನಯಶ್ರೀಯೆಂಬ ಮಗಳು ಹುಟ್ಟಿ ಹಸ್ತಿಸೀರುಷವೆಂಬ ನಗರದ ರಾಜ ಹರಿಷೇಣ ನನ್ನು ಮದುವೆಯಾಗಿ ಸುಖದಿಂದಿರುತ್ತ ಒಂದುದಿನ ಓರ್ವ ಮುನಿಪತಿಗೆ ಭಕ್ತಿ ಯಿಂದ ಆಹಾರವನ್ನಿತ್ತು ಆ ದಾನದ ಪುಣ್ಯದಿಂದ ಉತ್ತರಭವದಲ್ಲಿ ಹೈಮವತವೆಂಬ ಭೋಗಭೂಮಿಯಲ್ಲಿ ಹುಟ್ಟಿ ಸುಖವನನುಭವಿಸಿ ಸತ್ತು ಚಂದ್ರನಿಗೆ ರೋಹಿಣಿಯೆಂಬ ಸತಿಯಾಗಿ ಬಹುದಿನ ಸುಖವನ್ನುಂಡು ಬಳಿಕ ಅಲ್ಲಿಂದ ಬಂದು ಮಗಧದೇಶದ ಶಾಲ್ಮ ಲಿಗ್ರಾಮದ ಓರ್ವ ವಿಜಯನೆಂಬ ವರ್ತಕನಿಗೂ ಅತನ ದೇಯಿಲೆಯೆಂಬ ಪತ್ನಿಗೂ ಪದ್ಮೆಯೆಂಬ ಮಗಳಾಗಿ ಹುಟ್ಟಿ ಬೆಳೆದು ಒಂದಾನೊಂದುದಿನ ವರಧರ್ಮಮುನೀಶ ರಲ್ಲಿ ಹೆಸರು ತಿಳಿಯದ ಮರಗಳ ಫಲಗಳನ್ನು ತಿನ್ನುವುದಿಲ್ಲವೆಂಬ ವ್ರತವನ್ನು ಸ್ವೀಕ ರಿಸಿ ಸಂತೋಷದಿಂದಿದ್ದಳು. ಆ ಶಾಲ್ಮಲಿಗ್ರಾಮವನ್ನು ಓರ್ವ ಬೇಡರ ರಾಜನು ನಾಶಮಾಡುತ್ತಿರಲು ಪ್ರಾಣಭಯದಿಂದ ಆ ಊರಿನವರೆಲ್ಲರೂ ಅರಣ್ಯಕ್ಕೆ ಓಡಿಹೋ ದರು. ಹಸಿವಿನಿಂದ ಬಳಲಿದ್ದ ಆ ಜನರು ವನದಲ್ಲಿ ಸಿಕ್ಕಿದ ಹಣ್ಣುಗಳನ್ನು ತಿನ್ನು ತ್ತಿರಲು, ಪದ್ಮೆಯು ತಾನು ಕೈಕೊಂಡಿದ್ದ ವ್ರತವನ್ನು ನೆನಪಿಗೆ ತಂದುಕೊಂಡು ಹೆಸರರಿಯದ ಮರದ ಹಣ್ಣುಗಳನ್ನು ತಿನ್ನದೆ ಹಸಿವಿನಿಂದ ಪ್ರಾಣಬಿಟ್ಟು ಆ ವ್ರತದ

ಫಲದಿಂದ ಭೋಗಭೂಮಿಯಲ್ಲಿ ಹುಟ್ಟಿ ಅಲ್ಲಿ ಅತುಲಸುಖವನುಂಡು ಬಂದು ಸ್ವಯಂಪ್ರಭನೆಂಬ ಅಮರನಿಗೆ ವಲ್ಲಭೆಯಾಗಿ ಹುಟ್ಟಿ ಆಯುಷ್ಯಾವಸಾನದಲ್ಲಿ ಸತ್ತು ಭರತಾರ್ಯಖಂಡದ ಜಯಂತೀಪುರದ ಶ್ರೀಧರನೆಂಬ ರಾಜನಿಗೆ ಲಕ್ಷ್ಮೀಮತಿಯೆಂಬ ರಾಣಿಯಲ್ಲಿ ವಿಮಲೆಯೆಂಬ ಮಗಳಾಗಿ ಹುಟ್ಟಿ ಭದ್ರಿಳವೆಂಬ ನಗರದರಸು ಮೇಘನಾದನೆಂಬವಗೆ ಪತ್ನಿಯಾಗಿ ಸುಖದಿಂದಿರ್ದು ಒಂದುದಿನ ವರಧರ್ಮರೆಂಬ ಮುನೀಶರಲ್ಲಿ ಧರ್ಮಾಧರ್ಮವನ್ನು ಕೇಳಿ ನಿರ್ವೇಗದಿಂದ ದೀಕ್ಷೆಗೊಂಡು ಆಚಾಮ್ಲವರ್ಧನವೆಂಬ ವ್ರತವನಾಚರಿಸಿ ಸತ್ತು ಸ್ವರ್ಗದಲ್ಲಿ ಇಂದ್ರನಿಗೆ ರಾಣಿಯಾಗಿ ಹುಟ್ಟಿ ಅಲ್ಲಿಂದ ಬಂದು ಈಗ ಪದ್ಮಾವತಿಯಾಗಿ ಹುಟ್ಟಿ ಕೃಷ್ಣನಿಗೆ ಪತ್ನಿಯಾಗಿರುವೆ'' ಎಂದು ಹೇಳಲು ಕೇಳಿ ಸಂತುಷ್ಟಳಾದಳು. ಹೀಗೆ ಅಚ್ಯುತನ ಎಂಟು ಮಂದಿ ಪಟ್ಟಮಹಿಷಿಯರೂ ತಮ್ಮ ಭವವೃತ್ತಾಂತವನ್ನು ಕೇಳಿ ಅತ್ಯಂತ ಸಂತೋಷವನ್ನು ಹೊಂದಿ ಗಣಧರರಿಗೆ ನಮಸ್ಕರಿಸಿದರು.

೩೪. ಮದನನಿರ್ವೇಗ ದ್ವಾರಾವತೀ ದಹನಸಂಧಿ

ಸುರ, ನರ, ಉರಗ, ಯಕ್ಷ, ರಾಕ್ಷಸ, ವಿದ್ಯಾಧರ, ಕಿನ್ನರ, ಕಿಂಪುರುಷ, ಗರುಡ, ಗಾಂಧರ್ವ ಮೊದಲಾದ ಸಮಸ್ತ ನರಾಮರರಿಂದ ಒಲ್ಪಿಸಲ್ಪಡುತ್ತಿರುವ ಶ್ರೀ ನೇಮಿಜಿನರಿಗೆ ಬಲರಾಮನೆದ್ದು ಕೈಮುಗಿದು 'ಎಲ್ಲೈ ಸ್ವಾಮಿಯೆ! ಈ ಸಮುದ್ರಮಧ್ಯದಲ್ಲಿ ದೇವೇಂದ್ರನಿಂದ ರಚಿಸಲ್ಪಟ್ಟ ದ್ವಾರಾವತೀನಗರವೂ ಅದನ್ನಾಳುವ ಕೃಷ್ಣನ ಸಾಮ್ರಾಜ್ಯಸಂಪದವೂ ಇದೇರೀತಿ ಸ್ಥಿರವಾಗಿರುವುನೇ ?'' ಎಂದು ವಿನಯದಿಂದ ಪ್ರಾರ್ಥಿಸಿದನು. ಅದಕ್ಕೆ ಸ್ವಾಮಿಯು ''ಎಲೈ ರಾಜನೆ! ಹೆಂಡದಿಂದಲೂ ದೀಪಾಯನನಿಕ್ಕುವ ಬೆಂಕಿಯಿಂದಲೂ ದ್ವಾರಾವತೀನಗರವು ಇನ್ನು ಹನ್ನೆರಡು ವರುಷಕ್ಕೆ ಸುಟ್ಟುಹೋಗುವುದು. ನೀನೂ ಕೃಷ್ಣನೂ ಹೊರತು ಅಲ್ಲಿ ಉಳಿದ ಯಾದವರು ನಾಶವಾಗುವರು. ಜರತ್ಕುಮಾರನ ಬಾಣದಿಂದ ನಾರಾಯಣನಿಗೆ ಮರಣವುಂಟಾಗುವುದು'' ಎಂದು ಹೇಳಲು ಕೇಳಿ ಯಾದವರೆಲ್ಲರೂ ವಿಸ್ಮಯಗೊಂಡರು. ಪುನಃ ಬಲರಾಮನು ವಿನಯದಿಂದ ಸ್ವಾಮಿಯನ್ನು ಕುರಿತು ''ಭವರಹಿತನೆ! ನನ್ನ ಮತ್ತು ಕೃಷ್ಣನ ಮುಂದಿನ ಭವದವಸ್ಥೆಯನ್ನು ತಿಳಿಸಬೇಕು'' ಎಂದು ಬೇಡಿಕೊಂಡನು. ಅದಕ್ಕೆ ಆ ಮಹಾಮಹಿಮರು '' ಈ ಕೃಷ್ಣನು ಸತ್ತು ವಾಲು

ಕಾಪ್ಯಜವೆಂಬ ಮೂರನೆಯ ನರಕದಲ್ಲಿ ಹುಟ್ಟಿ ಏಳುಸಾಗರೋಪಮಕಾಲದವರೆಗ
ಲ್ಲಿದ್ದು ಮಡಿದು ಉತ್ಸರ್ಪಣಕಾಲದಲ್ಲಿ ತೀರ್ಥಂಕರನಾಗುವನು ನೀನು ಕೃಷ್ಣನ
ಮರಣದ ದುಃಖದಿಂದ ಜಿನದೀಕ್ಷೆಯನ್ನು ಕೈಕೊಂಡು ಆಯುಷ್ಯಾವಸಾನದಲ್ಲಿ
ದೇಹಭಾರವನುಳಿದು ಐದನೆಯ ಸ್ವರ್ಗದಲ್ಲಿ ಹುಟ್ಟಿ ಅಲ್ಲಿಂದ ಬಂದು ಕೃಷ್ಣತೀರ್ಥಂ
ಕರರ ಅಂತರಕಾಲದಲ್ಲಿ ಈ ಲೋಕದಲ್ಲಿ ಹುಟ್ಟಿ ಕರ್ಮಕ್ಷಯಮಾಡಿ ತೀರ್ಥಂಕರ
ಪದವಿಯನ್ನು ಹೊಂದುವೆ'' ಎಂದು ಹೇಳಲು ಕೇಳಿ ಬಲಾಚ್ಯುತರೂ ಸಮಸ್ತ
ಯಾದವರೂ ಸ್ವಾಮಿಗೆ ವಂದಿಸಿ ಬೀಳ್ಕೊಂಡು ದ್ವಾರಾವತಿಗೆ ಹೋದರು.
ದ್ವಾರಾವತಿಯು ತನ್ನಿಂದ ನಾಶವಾಗುವುದೆಂದು ಕೇಳಿ ದೀಪಾಯನನು ನಿರ್ವೇಗ
ದಿಂದ ಜಿನದೀಕ್ಷೆಯನ್ನು ಕೈಕೊಂಡು ಹೋದನು. ಇತ್ತ ಜರತ್ಕುಮಾರನು ತನ್ನ
ಅಣ್ಣನನ್ನು ಕೊಲ್ಲುವ ಈ ಬಾಣವೇಕೆಂದು ಅದನ್ನು ಸಮುದ್ರದಲ್ಲಿ ಬಿಸುಟು ತನ್ನ
ನೆಲೆಯನ್ನು ಬಿಟ್ಟು ಬೇಡರಪಳ್ಳಿಗೆ ಹೋಗಿ ಸೇರಿದನು. ಕೃಷ್ಣನು ದ್ವಾರಾವತೀ
ನಗರದಲ್ಲಿದ್ದ ಸುರೆಯನ್ನೆಲ್ಲ ಊರಮುಂದಣ ಕಲ್ಲುಡೊಣೆಯಲ್ಲಿ ಸುರಿಸಿ ನಿಶ್ಚಿಂತ
ನಾಗಿದ್ದನು '' ಸಮುದ್ರಮಧ್ಯದಲ್ಲಿ ನೀವೆಂದ್ರಂದ ನಿರ್ಮಿತನಾದೀದ್ವಾರಾವತಿಗೆ
ಕೇಡುಬರುವುದೆಂದಮೇಲೆ ಮನುಷ್ಯರ ಬಾಳ್ವೆಯು ಸ್ಥಿರವಾದುದೇ '' ಎಂದು
ಯೋಚಿಸಿ ಮನ್ಮಥನು ಇನ್ನು ಸಂಸಾರದ ಹಂಬಲು ಬೇಡವೆಂದು ತನ್ನ ಮಾತೆಯಾದ
ರುಗ್ಮಿಣಿಯಲ್ಲಿಗೆ ಬರಲು ಅಕೆಯು '' ಮಗುವೆ! ಪರಿಚಾರಕರಾರೂ ಇಲ್ಲದೆ ಸಾಮಾ
ನ್ಯರಂತೆ ನೀನು ಏಕಾಕಿಯಾಗಿ ಬಂದುದು ಚೆನ್ನಾಯ್ತು '' ಎನಲು ಮನ್ಮಥನು
'' ದೇವಿ! ಬಿನ್ನಪವು; ಅನಾದಿಕಾಲದಿಂದಲೂ ಈ ಜೀವನು ಯಾವಾಗಲೂ
ಒಂಟಿಯಾಗಿಯೇ ತಿರುಗುತ್ತಿರುವನೆಂಬುದನ್ನು ತಿಳುಹಲು ಬಂದೆನು '' ಎನಲು
ತಲೆದೂಗಿ ರುಗ್ಮಿಣಿಯು '' ಈತನು ಜರಮರಣಾಗನು. ವೈರಾಗ್ಯದಿಂದ ಬಂದಿರುವನು ''
ಎಂದು ತಿಳಿದು ಭೀತಳಾಗಿ ಅವನನ್ನು ಕುರಿತು '' ಧೀರಲಲಿತನೆ! ನಿನ್ನಯೌವನವು
ಕೊನೆಗಾಣುತಕ್ಕುದಲ್ಲ '' ಎಂದಳು. ಆ ಮಾತನ್ನು ಕೇಳಿ ಮನ್ಮಥನು '' ಸಂಸಾರ
ದುಃಖವು ತೀರಿದರೆ ಅದೂ ತೀರುವುದು. ನಾನು ಆ ನೇಮೀಶ್ವರರಂತೆ ಮುಂದು
ವರಿದು ವ್ಯವಸಾಯವನ್ನು ಮಾಡುವೆನು. ನಿನಗೆ ನನ್ನ ಮೇಲಣ ಆಶೆಯು ಬೇಡ ''
ಎಂದನು. ಅದಕ್ಕವಳು '' ಮಗನೆ! ನಿನ್ನನ್ನು ಬಿಟ್ಟು ಇರಲಾರೆನು '' ಎನಲು
ಮನ್ಮಥನು '' ಯಮನು ಮುಂದುವರಿದು ಕೊಂಡು ಹೋಗುವಾಗ ಬಿಡದೆ ನಿಮ್ಮಿಂ
ದ ಹಿಡಿದುಕೊಳ್ಳಲಾಗುವುದೇ? '' ಎಂದನು. ಆ ಮಾತನ್ನು ಕೇಳಿ ರುಗ್ಮಿಣಿಯು
ಮೂರ್ಛೆಹೋದಳು. ಅವಳನ್ನು ಶೈತ್ಯೋಪಚಾರದಿಂದೆಚ್ಚರಿಸಿ '' ಎಲೆ ತಾಯೆ!

ಸಂಸಾರವು ಬಹು ದುಃಖಮಯವಾದುದೆಂಬುದು ನೇಮಿಜಿನೇಶ್ವರರಿಂದ ಕೇಳಿ ಯೂ ನೀನು ಇಂತಹ ದುರ್ವಿಚಾರವನ್ನು ಮಾಡುವುದು ಉಚಿತವಲ್ಲ '' ಎಂದು ಯುಕ್ತಿಯಿಂದ ತಾಯನ್ನು ಒಡಂಬಡಿಸಿದನು. ಸಿದ್ಧರಸಸ್ಪರ್ಶದಿಂದ ಲೋಹವು ಬಂಗಾರವಾಗುವಂತೆ ರುಗ್ಮಿಣಿಯು ಶುದ್ಧಚಿತ್ತೆಯಾಗಿ ಪುತ್ರನಿಗನುಜ್ಞೆಯನ್ನು ಕೊಡಲು ಮನ್ಮಥನು ಸಂತುಷ್ಟನಾಗಿ ತಾಯಿಯನ್ನು ಬೀಳ್ಕೊಂಡು ಹೊರಡುವ ಸಮಯದಲ್ಲಿ ಅವನ ಪತ್ನಿಯರಾದ ರತಿ, ವೈದರ್ಭಿ, ಉದಧಿಕುಮಾರಿಯರು ಬಂದು ಸುತ್ತಿಕೊಂಡು '' ಅಯ್ಯೋ ಪತಿಯೆ! ನಮ್ಮೊಡನಿದ್ದು ಅತಿಶಯವಾದ ಭೋಗವ ನ್ನನುಭವಿಸದೆ ನಮ್ಮನ್ನು ಬಿಟ್ಟುಹೋದರೆ ನಿನಗೆ ಪಾಪವು ಸಂಘಟಿಸುವುದಿಲ್ಲವೇ ? ಆಕಾಶದಲ್ಲಿರುವ ಮೋಡವನ್ನು ನೋಡಿ ಮನೆಯಲ್ಲಿದ್ದ ನೀರನ್ನು ಚೆಲ್ಲುವ ಹೆಡ್ಡರಂತೆ ನೀನಾ ಕುಲಗೆಟ್ಟ ಸನ್ಯಾಸಿಗಳ ಮಾತನ್ನು ಕೇಳಿ ನಮ್ಮನ್ನು ನಿರಾಕರಿಸಬಹುದೇ ?'' ಎಂದು ಮುಂತಾಗಿ ಅನೇಕವಿಧದಲ್ಲಿ ಐಹಿಕಸುಖವನ್ನು ಹೊಗಳಿ ತನ್ನ ಪ್ರಯಾಣಕ್ಕೆ ಅಡ್ಡಿ ಮಾಡುತ್ತಿರುವ ಆ ಸತಿಯರ ಮಾತುಗಳನ್ನು ಕೇಳಿ ಪ್ರದ್ಯುಮ್ನನು '' ಎಲೆ ಸತಿಯರೆ! ಕೃಷ್ಣ ಬಲರಾಮರಿಬ್ಬರು ಹೊರತಾಗಿ ಉಳಿದ ಯಾದವರೊಡನೆ ಈ ದ್ವಾರಾವತಿಯು ಉರಿದು ಭಸ್ಮವಾಗಿ ಹೋಗುವುದೆಂದು ಶ್ರೀ ನೇಮಿಜಿನೇಶರು ದಯೆಯಿಂದ ಹೇಳಿದುದನ್ನು ನೀವು ಕೇಳಿಯೂ ಅದನ್ನು ಯೋಚಿಸದೆ ಹೀಗೆ ಹೇಳ ಬಹುದೇ ? '' ಎಂದು ಮೊದಲಾದ ಸವಿಮಾತುಗಳಿಂದ ಸಮಾಧಾನಪಡಿಸಿ ಬಳಿಕ ಬಲಾಚ್ಯುತರನ್ನು ಕಂಡು ಅವರನ್ನು ಒಡಂಬಡಿಸಿ ಬೀಳ್ಕೊಂಡು ಶಂಭು-ಕುಮಾ ರನೂ, ರತಿ, ಉದಧಿ, ವಿದರ್ಭಾನೇವಿ ಮೊದಲಾದ ತನ್ನ ಸ್ತ್ರೀಯರೂ ರುಗ್ಮಿಣಿ, ಸತ್ಯಭಾಮೆ ಮೊದಲಾದ ಕೃಷ್ಣನ ಸತಿಯರೂ ತನ್ನೊಡನೆ ದೀಕ್ಷೆಗೆ ಬರಲು ಸಮುವ ಸರಣಕ್ಕೆ ಹೋಗಿ ಶ್ರೀ ನೇಮಿಜಿನೇಶವಲ್ಲಿ ಅವರೆಲ್ಲರೊಡನೆ ದೀಕ್ಷಾಗ್ರಹಣಮಾಡಿ ದನು. ಸಮುದ್ರವಿಜಯನೂ ಅವನ ತಮ್ಮಂದಿರೂ ಕೃಷ್ಣ ಬಲರಾಮರ ಪುತ್ರರು ಗಳೂ, ಅನೇಕ ಯಾದವರಾಜರೂ ವೈರಾಗ್ಯಹೊಂದಿ ಬಂದು ದೀಕ್ಷೆಯನ್ನು ಹೊಂದಿದರು. ಶಿವದೇವಿಯೂ ಅನೇಕ ಯಾದವರಾಜರ ಪತ್ನಿಯರೊಡನೆ ಬಂದು ತಪಸ್ಸನ್ನು ಸ್ವೀಕರಿಸಿದಳು. ಹೀಗೆ ಅವರೆಲ್ಲರೂ ದೀಕ್ಷೆಯನ್ನು ಹೊಂದಿ ತಪಸ್ಸನ್ನಾ ಚರಿಸಿ ಅವರವರ ಪರಿಣಾಮಾನುಸಾರವಾಗಿ ಸ್ವರ್ಗಮೋಕ್ಷಗಳನ್ನು ಹೊಂದಿದರು. ಬಲರಾಮನು ಕೃಷ್ಣನಮೇಲಿನ ಪ್ರೀತಿಯಿಂದ ಸಂತನು. ಹಿಂದೆ ತಪಸ್ಸಿಗೆ ಹೋ ಗಿದ್ದ ದೀಪಾಯನಮುನಿಯು ಮುಂದೆ ಬರುವ ಅಧಿಕಉಪಸರ್ಗವನ್ನು ತಿಳಿಯದೆ ಪಾರಣೆ ಗೆಂದು ಬಂದು ದ್ವಾರಾವತಿಯ ಸಮೀಪದಲ್ಲಿ ಪ್ರತಿಮಾಯೋಗದಲ್ಲಿ ನಿಂತಿರಲು,

ಆನೆಯು ಬೇಂಟೆಗೆ ಹೋಗಿ ಹಿಂದಿರುಗಿಬಂದ ಆ ನಗರಿಯು ಯಾದವರು ಬಿಸಿಲ ತಾಪದಿಂದ ಬಾಯಾರಿದರು. ಹಿಂದೆ ಕಲ್ಲಡೊಣೆಗಳಲ್ಲಿ ಸುರಿದಿದ್ದ ಸುರೆಯು ಒಣಗಿ ಹೋಗಿದ್ದು ಮಳೆಯ ನೀರಿನಲ್ಲಿ ನೆನೆದಿದ್ದಿತು. ಅದು ನೀರೆಂದೇ ಬಗೆದು ಅದನ್ನು ಅವರು ಕುಡಿದು ಮತ್ತರಾಗಿ ಒರುತ್ತ ಇದಿರಲ್ಲಿ ಪ್ರತಿಮಾಯೋಗದಲ್ಲಿ ನಿಂತಿದ್ದ ದೀಪಾಯನಮುನಿಯನ್ನು ಕಂಡು ಕೋಪಗೊಂಡು " ಈ ಸವಣನನ್ನು ನೋಡಿದ ಶಕುನದಿಂದ ನಮಗೆ ಬೇಂಟೆ ಸಿಕ್ಕಲಿಲ್ಲ " ಎಂದು ಹೇಳುತ್ತ ಕಲ್ಲಗುಂಡುಗಳನ್ನು ತಂದು ಆ ಮುನಿಯ ಕಾಲಿನಿಂದ ತಲೆಯವರೆಗೂ ಸುತ್ತಲೂ ರಾಶಿಮಾಡಿ ಪಟ್ಟಣಕ್ಕೆ ಹೋದರು. ಅದರಿಂದಾ ಯತಿಗೆ ಬಹುಬಾಧೆಯಾಗಿ ಅತ್ಯಂತ ಕೋಪಾವಿಷ್ಟನಾದನು. ಆ ವಿಷಯವನ್ನು ಬಲಾಚ್ಯುತರು ತಿಳಿದು ಓಡಿಬಂದು ಆ ಮುನಿಗೆ ಮಾಡಿದ್ದ ಉಪಸರ್ಗವನ್ನು ಪರಿಹರಿಸಿ ಕ್ಷಮಿಸಬೇಕೆಂದು ಅವನ ಕಾಲಿಗೆ ನಮಸ್ಕರಿಸಿದರು. ಆಗ ಕಂಠಗತಪ್ರಾಣನಾಗಿದ್ದ ದೀಪಾಯನನು ನೀವಿಬ್ಬರು ಉಳಿಯುವಿರೆಂದು ಎರಡು ಬೆರಳನ್ನೆತ್ತಿ ತೋರಿಸಿ ಪ್ರಾಣಬಿಟ್ಟನು. ಕೃಷ್ಣ ಬಲರಾಮರು ಪಟ್ಟಣಕ್ಕೆ ಬಂದರು. ರೌದ್ರಧ್ಯಾನದಲ್ಲಿ ಸತ್ತ ಆ ದೀಪಾಯನನು ಸೌಧರ್ಮ ಸ್ವರ್ಗದಲ್ಲಿ ಹುಟ್ಟಬೇಕಾಗಿದ್ದುದು ತಪ್ಪಿ ಜ್ಯೋತಿರ್ಲೋಕದಲ್ಲಿ ಅಗ್ನಿಕುಮಾರನಾಗಿ ಜನಿಸಿ ದ್ವಾರಾವತಿಯು ಯಾದವರಿಂದ ತನಗೆ ಈ ರೀತಿಯಾಯಿತೆಂದು ತಿಳಿದು ಅಲ್ಲಿಂದಿಳಿದುಬಂದು ಆ ನಗರಿಗೆ ಬೆಂಕಿಯನ್ನಿಟ್ಟನು.

ದ್ವಾರಾವತಿಯೆಲ್ಲ ಬೆಂಕಿಯಿಂದ ಉರಿಯಲುಪಕ್ರಮವಾಗಿ ಬೆಂಕಿಯು ಎಲ್ಲಾ ಕೇರಿಗಳಿಗೂ ವ್ಯಾಪಿಸಿತು. ಇದ್ದಕ್ಕಿದ್ದಹಾಗೆ ಊರಿಗೆಲ್ಲಾ ಬೆಂಕಿಬಿದ್ದುದನ್ನು ನೋಡಿ ಜನಗಳು ಬಹಳ ಹೆದರಿ ಉರಿಯುತ್ತಿರವ ಮನೆಗಳಲ್ಲಿದ್ದ ವೃದ್ಧರನ್ನೂ ಮಕ್ಕಳನ್ನೂ ಉತ್ತಮವಸ್ತುಗಳನ್ನೂ ಹೊರಕ್ಕೆ ತೆಗೆಯಲು ಪ್ರಯತ್ನಮಾಡುತ್ತಿದ್ದರು. ಎಲ್ಲೆಲ್ಲೂ ಜನಗಳು ಪ್ರಾಣಭಯದಿಂದ ಅರಚಿಕೊಳ್ಳುತ್ತಿದ್ದರು. ಉರಿಯುವ ಒಂದು ಮನೆಯಿಂದ ಮತ್ತೊಂದು ಮನೆಗೆ ಬೆಂಕಿಯು ವ್ಯಾಪಿಸದಂತೆ ಮಾಡಲು ಮಧ್ಯದಲ್ಲಿರುವ ಮನೆಗಳನ್ನು ಕತ್ತರಿಸಿದರು. ನೀರನ್ನು ಹುಯ್ದರು. ಬೆಂಕಿಯು ಮನೆಯಿಂದ ಮನೆಗೆ ವ್ಯಾಪಿಸುತ್ತ ಮಾಳಿಗೆ ಮನೆ, ಇಟ್ಟಿಗೆಯಮನೆ, ಹೆಂಚಿನಮನೆ, ಕಲ್ಲಿನಮನೆ ಎಲ್ಲವನ್ನೂ ಸುಡುತ್ತಲಿತ್ತು. ಹಟಾತ್ತಾಗಿ ಪುರವೆಲ್ಲವೂ ಬೆಂಕಿಯಿಂದ ಹತ್ತಿಕೊಂಡುದರಿಂದ ಅಲ್ಲಿದ್ದ ಜನರು ಅಲ್ಲಲ್ಲೇ ಸುಟ್ಟುಹೋದರು. ಬಾಣಂತಿಯರು ಮಕ್ಕಳನ್ನು ಬಿಟ್ಟು ಹೋಗಲಾರದೆ " ಕೆಟ್ಟೆವು ಕೆಟ್ಟೆವು " ಎಂದು ಕೂಗಿಕೊಳ್ಳುತ್ತ ಮಕ್ಕಳನ್ನು ಅಪ್ಪಿಕೊಂಡು ಸತ್ತು

ದು. ವೃದ್ಧರೂ, ಗರ್ಭಿಣಿಯರೂ, ಸಣ್ಣಮಕ್ಕಳೂ ಹೊರಗೆ ಒರಲಾರದೆ ಅಲ್ಲಲ್ಲೇ ಬೆಂದುಹೋದರು. ಉರಿಯಲ್ಲಿ ಸಿಕ್ಕಿರುವ ತಮ್ಮ ಪತಿಯರನ್ನು ಆಲಿಂಗಿಸಿ ಎಷ್ಟೋ ಮಂದಿ ಸ್ತ್ರೀಯರು ತಮ್ಮ ಪ್ರಾಣಗಳನ್ನು ಬಿಟ್ಟರು. ದೇವಸ್ಥಾನಗಳಲ್ಲಿ ಜಪತಪಗಳಲ್ಲಿ ನಿರತರಾಗಿದ್ದವರು ಸತ್ತು ಸದ್ಗತಿಗೆ ಹೋದರು. ಪಟ್ಟಣವೆಲ್ಲ ಬೆಂಕಿಯಿಂದ ಉರಿಯುತ್ತಿರುವಾಗ ತಪ್ಪಿಸಿಕೊಂಡು ಹೋಗುವುದೆಲ್ಲಿಗೆ? ಬೆಂಕಿಯನ್ನಾರಿಸಲು ಪಟ್ಟಶ್ರಮವೆಲ್ಲವೂ ವ್ಯರ್ಥವಾಯಿತು. ಜನರು ಇದ್ದಿದ್ದಲ್ಲಿಯೇ ಸತ್ತರು. ಬೆಂಕಿಯಲ್ಲಿ ಸಿಕ್ಕಿರುವವರನ್ನು ಬಿಡಿಸುವರಿಲ್ಲ. ಸತ್ತವರಿಗೆ ಅಳುವರಿಲ್ಲ. ಹೀಗೆ ಬೆಂಕಿಯು ಹತ್ತಿ ಸುಡುತ್ತಿರುವಾಗ ಉರಿಯುತ್ತಿರುವ ಗೋಪುರಗಳು ರೋಹಣಾದ್ರಿಯಂತೆ ಕಾಣಿಸುತ್ತಿದ್ದುವು. ರತ್ನನಿರ್ಮಿತವಾದ ಅರಮನೆಗೆ ಬೆಂಕಿಹತ್ತಿ ರತ್ನಗಳೆಲ್ಲ ಸಿಡಿದು ಪುಡಿಯಾದುವು. ಅವುಗಳಿಂದ ಆಕಾಶವು ಹಲವು ಬಣ್ಣವಾಗಿ ತೋರುತ್ತಿದ್ದಿತು. ಕೋಟೆಯಮೇಲೆ ನಿಲಿಸಿದ್ದ ಕೆಂಪಿನ ಬೊಂಬೆಗಳು ಉರಿದು ಸಿಡಿದುವು ಕೃಷ್ಣನ ಹದಿನಾರುಸಾವಿರಮಂದಿ ಸ್ತ್ರೀಯರು ಅರಮನೆಯಲ್ಲಿ ಬೆಂದುಹೋದರು. ಕೃಷ್ಣನು ಇದು ದೇವಕೃತವಾದುದೆಂದು ಬಗೆದು ಚಕ್ರ ಮೊದಲಾದ ರತ್ನಗಳನ್ನು ಸ್ಮರಿಸಲು ಆಗ ಅವುಗಳನ್ನು ಕಾಯುತ್ತಿದ್ದ ದೇವತೆಗಳು ಅದೃಶ್ಯವಾಗಿದ್ದುವು. ಇದು ನಮ್ಮ ಪೂರ್ವಕೃತ ಪಾಪದಫಲವೆಂದು ಕೃಷ್ಣನು, ದಂತಸಹಿತವಿಲ್ಲದ ಸಿಹ್ಮದಂತೆ, ಚಿಂತಾಕ್ರಾಂತನಾದನು. ಅವನ ಪುಣ್ಯವು ತೀರಿತು. ಬಲರಾಮನು ಬೆಂಕಿಯನ್ನಾರಿಸುವುದಕ್ಕಾಗಿ ಹುಯ್ಯುತ್ತಿದ್ದ ನೀರು ಎಣ್ಣೆಯಂತಾದುದು. ಆಗ ಬಲರಾಮನು ನಿರಾಶನಾಗಿ ಕೃಷ್ಣನ ರಕ್ತಕಂಬಲವನ್ನೊಂದನ್ನು ತೆಗೆದುಕೊಂಡು ಅವನೊಡನೆ ಊರಿಂದ ಹೊರಕ್ಕೆ ಬಂದು ಸಮುದ್ರತೀರದಲ್ಲಿ ನಿಂತು ದ್ವಾರಾವತಿಯು ಭಯಂಕರವಾಗಿ ಸುಟ್ಟುಹೋಗುವುದನ್ನು ವಿಸ್ಮಯದಿಂದ ನೋಡುತ್ತಿದ್ದನು. ಹನ್ನೆರಡು ಯೋಜನ ವಿಸ್ತಾರವಾಗಿದ್ದ ದ್ವಾರಾವತಿಯು ನಿಶ್ಶೇಷವಾಗಿ ಸುಟ್ಟು ಆ ಸ್ಥಳದಲ್ಲಿ ಸಮುದ್ರವು ವ್ಯಾಪಿಸಿತು. ಇದು ಪಟ್ಟಣವನ್ನು ಸುಟ್ಟಪಾಪವನ್ನು ಪರಿಹರಿಸಿಕೊಳ್ಳಲು ಅಗ್ನಿದೇವನು ಸ್ನಾನಕ್ಕೆ ಸಮುದ್ರಕ್ಕಿಳಿದಂತೆ ತೋರುತ್ತಿದ್ದಿತು.

ಇತ್ತ ಕೃಷ್ಣ ಬಲರಾಮರು ಆ ಸಮುದ್ರತೀರದಿಂದ ದಕ್ಷಿಣಾಭಿಮುಖವಾಗಿ ಹೊರಟು ಪ್ರಯಾಣಮಾಡಿದರು. ಅನೇಕ ಸೈನ್ಯದಿಂದ ಪರಿವೃತರಾಗಿ ಖೇಚರ ಭೂಚರರಾಜರುಗಳಿಂದ ಓಲೈಸಿಕೊಳ್ಳುತ್ತ ಇಂದ್ರವೈಭವದಿಂದ ಒರುತ್ತಿದ್ದ ಕೃಷ್ಣ ಬಲರಾಮರು ಕರ್ಮವಶದಿಂದ ಇಂದು ಇಬ್ಬರೇ ಪಾದಚಾರಿಗಳಾಗಿ ನಡೆದುಬರುವಂತಾಯ್ತು. ಹದಿನಾರುಸಾವಿರ ಮಕುಟನರ್ಧಸರಿಂದ ಓಲೈಸಲ್ಪಟ್ಟು ವೈಭವ

ದಿಂದ ಬರುತ್ತಿದ್ದ ಅವರು ಇಂದು ಪರದೇಶಿಗಳಂತೆ ಬರುತ್ತಿದ್ದರು. ಮಂಡಳಿಕರಿಂದ ಸುತ್ತಲ್ಪಟ್ಟು ರನ್ನದ ಸತ್ತಿಗೆಯ ನೆಳಲಲ್ಲಿ ಬರುತ್ತಿದ್ದ ಅವರು ಇಂದು ಬಿಸಿಲಿನಲ್ಲಿ ಬರುವಂತಾಯ್ತು. ರಾಜಭೋಗವನ್ನನುಭವಿಸುತ್ತಿದ್ದ ಅವರು ಇಂದು ಕಲ್ಲಿನಮೇಲೆ ಕಾಲಿಟ್ಟು ನೋವಿನಿಂದ ಕಾಲೆತ್ತುತ್ತ ಬಿಸಿಲಲ್ಲಿ ಬೆಮರ್ತು ಬಳಲಿ ಬೆಂಡಾಗಿ ಬಂದು ಬಂದು ಭಯಂಕರವಾದ ಅರಣ್ಯವನ್ನು ಹೊಕ್ಕರು. ಹಸಿದು ಬಳಲಿದ್ದ ಕೃಷ್ಣನನ್ನು ಅಲ್ಲಿ ಒಂದು ಮಾವಿನಮರದ ಕೆಳಗೆ ಕುಳ್ಳಿರಿಸಿ ಆಹಾರವನ್ನು ತರುತ್ತೀನೆಂದು ಹೇಳಿ ಬಲರಾಮನು ಕುರುಭೂಪತಿಯ ಮೊಮ್ಮಗನಾದ ಕುಯವರನು ಆಳುತ್ತಿದ್ದ ಧನದಕುಶ್ಮಿಯೆಂಬ ಪಟ್ಟಣಕ್ಕೆ ಹೋದನು. ಅಲ್ಲಿ ಆ ಕುಯವರನು ದ್ವಾರಾವತಿಯು ಸುಟ್ಟು ಕೃಷ್ಣ ಬಲರಾಮರಿಬ್ಬರು ಹೊರತು ಉಳಿದ ಯಾದವರೆಲ್ಲ ಸತ್ತುಹೋದರೆಂದು ಕೇಳಿ ಸಂತುಷ್ಟನಾಗಿ ಓಕುಳಿಯಾಡಿಸುತ್ತಿರುವುದನ್ನು ಕಂಡು ದುಃಖಿತನಾಗಿ ತನ್ನ ಪೂರ್ವಜನ್ಮದ ದುಷ್ಕೃತ್ಯದ ಫಲವೆಂದು ಭಾವಿಸಿ ನಾಗದತ್ತನೆಂಬ ವೈಶ್ಯನ ಅಂಗಡಿಗೆ ಹೋಗಿ ತನ್ನ ಕಿವಿಯಲ್ಲಿದ್ದ ರತ್ನ ಕುಂಡಲವನ್ನು ಮಾರಿ ಕಲಸಿದ ಅನ್ನವನ್ನು ತೆಗೆದುಕೊಂಡು ಹಿಂದಿರುಗಿದನು. ತ್ರಿಖಂಡಾಧಿಪತಿಯಾದ ಕೃಷ್ಣನ ಅಣ್ಣನೂ ಅತ್ಯಂತ ಪರಾಕ್ರಮಶಾಲಿಯೂ ಆದ ಬಲರಾಮನು ಕಾಲವಶದಿಂದ ಅನ್ನಕ್ಕಾಗಿ ಕಿವಿಯ ಕುಂಡಲವನ್ನು ಮಾರುವಂತಾದುದು. ಬಲರಾಮನ ಸುಂದರಾಕಾರವನ್ನು ನೋಡಿ ಆಶ್ಚರ್ಯಗೊಂಡ ಆ ನಾಗದತ್ತನು ತಾನು ಕ್ರಯಕ್ಕೆ ಪಡೆದ ಆ ಕುಂಡಲವನ್ನು ತಾನು ಧರಿಸುವುದುಚಿತವಲ್ಲವೆಂದು ಬಗೆದು ಅದನ್ನು ದೊರೆಯಾದ ಕುಯವರನಿಗೆ ಕೊಡಲು ಅವನು ನೋಡಿ ಆಶ್ಚರ್ಯಪಟ್ಟು ಅದನ್ನು ಕೊಟ್ಟವನಾರೆಂದು ಕೇಳಿದನು ಅದಕ್ಕಾನಾಗದತ್ತನು ತೇಜಸ್ವಿಯೂ ಅತ್ಯಂತ ಸುಂದರನೂ ಆದ ಪೂರ್ವ ಕಾರಣಪುರುಷನು ಅದನ್ನು ಕೊಟ್ಟು ಕಲಸುಗೂಳನ್ನು ತೆಗೆದುಕೊಂಡು ಹೋದನೆನಲು ಕೇಳಿ, ಅವನು ಬಲರಾಮನೆಂದೇ ಅನುಮಾನದಿಂದ ತಿಳಿದು ಕುಯವರನು ಅತ್ಯಂತ ಕುಪಿತನಾಗಿ ಹಿಂದೆ ಪಾಂಡವರನ್ನು ಎತ್ತಿಕಟ್ಟಿ ತನ್ನ ವಂಶವನ್ನು ನಾಶಮಾಡಿಸಿದ ಶತ್ರುವು ಕೈಗೆ ಸಿಕ್ಕಿದನೆಂದು ತನ್ನ ಅಪರಿಮಿತ ಸೇನೆಯೊಡನೆ ಬಲರಾಮನೆಡೆಗೆ ಬರುತ್ತಿರಲು ಕಂಡು ಬಲರಾಮನು "ಕೃಷ್ಣನ ಪುಣ್ಯದೇವತೆಗಳಿರಾ! ಈ ಅನ್ನವನ್ನು ಆತುಕೊಳ್ಳಿ" ಎಂದ ಹೇಳಿ ಕೈಯಲ್ಲಿದ್ದ ಆ ಬುತ್ತಿಯನ್ನು ಮೇಲಕ್ಕೆಸೆಯಲು ಅದು ಕೆಳಕ್ಕೆ ಬಿದ್ದಿತು ಅದನ್ನುನೋಡಿ 'ನನ್ನ ಪುಣ್ಯದೇವತೆಗಳಿರಾ! ಈ ಅನ್ನವನ್ನು ಆತುಕೊಳ್ಳಿ" ಎಂದು ಮೇಲಕ್ಕೆಸೆಯಲು ಅದು ಮೇಲೆನಿಂತಿತು. ಅಷ್ಟರಲ್ಲಿ ಸಮೀಪಕ್ಕೆ ಬಂದು ಮೇಲೆ ಬಿದ್ದ ಕುಯವರನ

ಸೈನ್ಯವನ್ನು, ಜಿಂಕೆಯ ಹಿಂಡಿಗೆ ನುಗ್ಗಿದ ಹೆಬ್ಬುಲಿಯಂತೆ, ಕೊಂದನು. ಅದನ್ನು ಕಂಡು ಕುಯವರನು ಓಡಿಹೋದನು. ಬಳಿಕ ಬಲರಾಮನು ಅನ್ನವನ್ನು ತೆಗೆದು ಕೊಂಡು ಒಂದು ನೆಲದಮೇಲೆ ಮಲಗಿದ್ದ ತಮ್ಮನನ್ನು ದೂರದಿಂದ ನೋಡಿ ಅತ್ಯಂತ ದುಃಖಿತನಾಗಿ "ಎಲೆ ತಮ್ಮನೆ! ರತ್ನಮಂಚದಮೇಲೆ ಮಣಿದೀಪಗಳ ಬೆಳಕಿನಲ್ಲಿ ಮಲಗುವ ನಿನಗೆ ಈ ವಿಧಿಯಾಯ್ತೇ? ಶ್ವೇತಚ್ಛತ್ರದ ನೆಳಲಿನಲ್ಲಿ ಚಾಮರಗಳಿಂದ ಬೀಸಿಸಿಕೊಳ್ಳುವವನಿಗೆ ಇಂದು ಈ ವಿಧಿಯಾಯ್ತೇ? ಭೂಮಿಯು ಸಮಸ್ತರಾಜರಿಂದಲೂ ನಮಸ್ಕರಿಸಿಕೊಳ್ಳುತ್ತಿದ್ದ ಮುರವೈರಿಯು ಕರ್ಮವಶದಿಂದ ಏಕಾಕಿಯಾದೆಯಲ್ಲ?" ಎಂದು ಹಂಬಲಿಸಿ ಕಣ್ಣೀರನ್ನು ತಂದುಕೊಂಡು ಸಮೀಪಕ್ಕೆ ಬಂದು ಕುಳಿತು ಕೃಷ್ಣನಿಗೆ ಕುಯವರನು ಸೇನೆಯೊಡನೆ ಬಂದಿದ್ದುದನ್ನೂ ತಾನು ಅವನನ್ನು ಹೊಡೆದೋಡಿಸಿದುದನ್ನೂ ತಿಳುಹಲು ಕೇಳಿ ಕೃಷ್ಣನು ಹೆದರಿ "ಅಣ್ಣಾ! ನಾವು ಇಲ್ಲಿರುವುದು ಸರಿಯಲ್ಲ" ಎಂದನು. ಆ ಮಾತನ್ನು ಕೇಳಿ ಬಲರಾಮನು "ಅಯ್ಯೋ! ವಿಧಿಯೆ! ಲೋಕೈಕವೀರನೂ ಅಚಲನೂ ಆದ ಈತನು ಪಾಪವಶದಿಂದ ಅಂಬಿದ ನಲ್ಲಾ!" ಎಂದು ಚಿಂತಿಸಿ ತಮ್ಮನೊಡನೆ ಅಲ್ಲಿಂದ ಹೊರಟು ಕೌಶಂಬಿಯೆಂಬ ಅರಣ್ಯವನ್ನು ಹೊಕ್ಕು ಒಂದು ಪರಿದಾರಿಯ ದೂರ ನಡೆದು ಒಂದು ಆಲದಮರದ ಬಳಿಗೆ ಬಂದರು. ಆಗ ಕೃಷ್ಣನು ಬಹಳ ಬಾಯಾರಿರುವನೆಂದು ತಿಳಿದು ಅವನನ್ನು ಆ ಮರದ ಬುಡದಲ್ಲಿ ಮಲಗಿಸಿ ಕೆಂಪುಬಣ್ಣದ ರನ್ನಗಂಬಳಿಯನ್ನು ಹೊದಿಸಿ ತಾನು ನೀರನ್ನು ತರಲು ಹೋದನು.

ಇತ್ತ ನೇಮಿನಾಥರು ಹೇಳಿದ ಮಾತನ್ನು ಕೇಳಿ ಹಿಂದೆ ಜರತ್ಕುಮಾರನು ನೀರಿನಲ್ಲಿ ಬಿಸುಟಿದ್ದ ಬಾಣವನ್ನು ಮೀನೊಂದು ನುಂಗಿರಲು ಅದನ್ನು ಹಿಡಿದ ಬೆಸ್ತನು ಆ ಬಾಣವನ್ನು ತಂದು ಜರತ್ಕುಮಾರನಿಗೆ ಕಾಣಿಕೆಯಾಗಿ ಕೊಟ್ಟಿದ್ದನು. ಅವನು ಸಂತೋಷದಿಂದ ಆ ಬಾಣವನ್ನು ತೆಗೆದುಕೊಂಡು ಆ ಕೌಶಂಬೀವನಕ್ಕೆ ಬಂದು ಮರದಡಿಯಲ್ಲಿ ಕೆಂಪುಬಣ್ಣದ ಕಂಬಳಿಯನ್ನು ಹೊದೆದು ಮಲಗಿದ್ದ ಕೃಷ್ಣನನ್ನು ದೂರದಿಂದ ನೋಡಿ ಹಲವು ಬಣ್ಣದ ಮೃಗವಿದೆಂದು ಭಾವಿಸಿ ಬಾಣಪ್ರಯೋಗ ಮಾಡಿದನು. ಆ ಬಾಣವು ಕೃಷ್ಣನ ಕಾಲಿಗೆ ನಾಟಿ ಮೇಲೆ ಮೂಡಿತು. ಆಗ ಕೃಷ್ಣನೆದ್ದು ಅದನ್ನು ಕಿತ್ತು ಕೋಪದಲ್ಲಿರುವಾಗ ಜರತ್ಕುಮಾರನು ತನ್ನ ಬಾಣದಿಂದ ಮೃಗವು ಸತ್ತಿತೆಂದು ಭಾವಿಸಿ ಅಲ್ಲಿಗೆ ಹೋಗಿ ಕೃಷ್ಣನನ್ನು ಕಂಡು "ಅಯ್ಯೋ ಅಣ್ಣ! ಕೆಟ್ಟೆನು, ನಾನು ಮಹಾಪಾಪಿ" ಎಂದು ಹೇಳುತ್ತ ನೆಲದಲ್ಲಿ ಬಿದ್ದು ಹೊರಳಿ ಶೋಕಪಡುತ್ತಿರುವುದನ್ನು ನೋಡಿ ಹರಿಯು ಇದೇನೆಂದು ಕೇಳಿದನು. ಅದಕ್ಕೆ

ಜರತ್ಕುಮಾರನು ಅಳುತ್ತ "ಅರಸ! ನಿನ್ನನ್ನು ಮೃಗವೆಂದು ಊಹಿಸಿ ದುಷ್ಕರ್ಮದಿಂದ ನಾನು ಬಾಣಪ್ರಯೋಗಮಾಡಿದೆನು. ಈ ದ್ರೋಹಿಯಾದ ನನ್ನನ್ನು ದಂಡಿಸು' ಎಂದು ಹೇಳಲು ಕೇಳಿ ಕೃಷ್ಣನು ಕೋಪಿಸಿಕೊಳ್ಳದೆ "ತಮ್ಮ! ಏಕೆ? ನೀನು ಅವಿವೇಕಿಯಲ್ಲ. ಲೋಕೈಕಪತಿಯಾದ ನೇಮೀಶ್ವರರು ಹೇಳಿದ ಮಾತು ತಪ್ಪುವುದೇ? ದುಃಖವನ್ನು ಬಿಡು. ನೀನಿಲ್ಲಿ ಸಾವಕಾಶಮಾಡಿದರೆ ಬಲರಾಮನು ಬಂದು ನನ್ನ ಗಾಯವನ್ನು ನೋಡಿ ಕೋಪದಿಂದ ನಿನ್ನನ್ನು ಕೊಲ್ಲದೆ ಬಿಡನು. ಆದುದರಿಂದ ನೀನು ಇಲ್ಲಿಂದ ಹೊರಟುಹೋಗು" ಎಂದು ಹೇಳಲು ಅವನು ಹೊರಟುಹೋದನು. ಇತ್ತ ಕೃಷ್ಣನು ಕಂಬಳಿಯನ್ನು ಹೊದೆದುಕೊಂಡು "ನನ್ನನ್ನು ಹೊಡೆದವನು ನನ್ನ ತಮ್ಮನಲ್ಲದೆ ಬೇರೆಯವನಾಗಿದ್ದರೆ ಅವನನ್ನು ಕೊಲ್ಲದೆ ಬಿಡುತ್ತಿರಲಿಲ್ಲ" ಎಂದು ಭಾವಿಸುತ್ತ ರೌದ್ರಧ್ಯಾನದಿಂದ ಸತ್ತು ಮೂರನೆಯ ನರಕದಲ್ಲಿ ಹುಟ್ಟಿದನು.

ಇತ್ತ ಬಲರಾಮನು ನೀರನ್ನು ಹುಡುಕಿಕೊಂಡು ಹೋಗಿ ಬಂದು ಕೊಳವನ್ನು ಕಂಡು ತಾವರೆಯೆಲೆಯು ದೊನ್ನೆಯಲ್ಲಿ ನೀರನ್ನು ತೆಗೆದುಕೊಂಡು ಕೃಷ್ಣನಿದ್ದಲ್ಲಿಗೆ ಬಂದು ಅವನು ನಿದ್ರಿಸುತ್ತಿರುವನೆಂದು ಭಾವಿಸಿ ಕರುಣದಿಂದ ಸ್ವಲ್ಪಹೊತ್ತು ಕುಳಿತಿರಲು, ಆಗ ಕೃಷ್ಣನ ಗಾಯವಾದ ಕಾಲಿಗೆ ನೊಣಗಳು ಮುತ್ತುತ್ತಿರುವುದನ್ನು ಕಂಡು ಎಲ್ಲಿಯದೀನೊಣವೆಂದು ಕಾಲಿನ ಗಾಯವನ್ನು ನೋಡಿ ಹೊದಿಕೆಯನ್ನು ತೆಗೆದು ಅವನ ಮುಖವನ್ನು ಕಂಡು ಕೃಷ್ಣನು ಮಡಿದನೆಂದು ತಿಳಿದು "ಆಹಾ' ಎಂದು ಮೂರ್ಛಿತನಾಗಿ ತಾನೇ ಚೇತರಿಸಿಕೊಂಡೆದ್ದು 'ಅಚ್ಯುತನೆ! ನಿನಗೆ ಈ ವಿಧಿಯಾಯ್ತೇ? ಹಾ ಕೆಟ್ಟೆನು. ಲೋಕೈಕವೀರನಾದ ನಿನ್ನನ್ನು ಕೊಂದವನನ್ನು ಕೊಲ್ಲದೆ ಬಿಡೆನು" ಎಂದು ಬಂದು ದೊಡ್ಡಮರವನ್ನು ಕಿತ್ತುಕೊಂಡು ಆ ಭೀಮಾಟವಿಯಲ್ಲೆಲ್ಲ ಹುಡುಕಿ ನೋಡಿ ಆ ಕೊಲೆಗೇಡಿಯು ಸಿಕ್ಕದಿರಲು ಹಿಂದಿರುಗಿ ಬಂದು ಕೃಷ್ಣನ ಹೆಣವನ್ನಪ್ಪಿಕೊಂಡು "ಹಾ! ಮುರಾಂತಕ! ಮಗಧವಿಧ್ವಂಸಕ! ಕಂತುಜನಕ! ಕಂಸಾರಿಯೇ! ನಿನಗೆ ಈ ಸಾವು ಪ್ರಾಪ್ತವಾಯಿತೇ? ಹಾ! ಹರಿಕುಲಗಗನಭಾಸ್ಕರ! ಹರಿವಂಶತಿಲಕ! ಹರಿವಂಶಾಂಬುಧಿಚಂದ್ರ! ರಾಜಕುಲಚೂಡಾಮಣಿಯೆ! ರಿಪುನೃಪಪಿನಕುಠಾರ! ನಿನಗೀವಿಧಿಯಾಯ್ತೇ? ನೀನು ಸಣ್ಣ ಮಗುವಾಗಿರುವಾಗ ನಿನ್ನನ್ನು ಕೊಲ್ಲಲು ಬಂದ ಪೂತನಿಯ ಪ್ರಾಣವನ್ನು ಹೀರಿದ ನಿನ್ನ ಪುಣ್ಯವು ಕೀರಿತಲ್ಲ. ಕಾಕಾಸುರನನ್ನೂ ಕೇಶೋರಾಸುರನನ್ನೂ ಗರ್ದಭಾಸುರನನ್ನೂ ಮರ್ದಿಸಿದ ನಿನ್ನ ಭುಜಬಲವೇನಾಯ್ತು? ವೀರನಾರಾಯಣ! ನಿನ್ನ ಆ ಬಲವನ್ನು ತೋರು. ಮತ್ತಿಯ ಮರವನ್ನೂ ತಾಳವೃಕ್ಷವನ್ನೂ

ಕಿತ್ತು ಕೈಟಭನನ್ನು ಸಂಹರಿಸಿ, ಕಾಳಿಂಗಸರ್ಪವನ್ನು ಕೊಂದು, ಅಸುರರನ್ನು ಹತಿಸಿ, ಗೋವರ್ಧನಗಿರಿಯನ್ನೆತ್ತಿ, ಸರ್ಪಶಯ್ಯೆಯನ್ನೇರಿ, ಶಾರ್ಙ್ಗಧನುಸ್ಸನ್ನೆತ್ತಿ, ಪಾಂಚಜನ್ಯವನ್ನೂದಿ, ಜಟ್ಟಿಗಳನ್ನು ಕೊಂದು ತೋರಿದ ಆ ನಿನ್ನ ಅದ್ಭುತಶಕ್ತಿಯೇ ನಾಯ್ತು? ಆ ದಿನ ಜರಾಸಂಧನು ಬಿಟ್ಟ ಚಕ್ರವು ನಿನಗೆ ಬಲವಂದು ನಿನ್ನನ್ನು ಆಶ್ರಯಿಸಿತು. ಇಂದು ಈ ಹೀನಮನುಷ್ಯನು ಬಿಟ್ಟ ಮುರುಕು ಬಾಣವು ಕರ್ಮವಶದಿಂದ ನಿನ್ನನ್ನು ಕೊಂದಿತಲ್ಲ? ಚಕ್ರವರ್ತಿಗೀವಿಧಿಯಾಯ್ತೇ? ನಾನಾದೇಶದ ರಾಜರುಗಳನ್ನು ಎರಗಿಸಿಕೊಂಬ ನಿನ್ನ ಕಾಲಿಗೆ ಈ ನೊಣಗಳು ಮುತ್ತುವಂತಾಯ್ತೇ? ಅಚ್ಯುತನೆಂಬ ನಿನ್ನ ಹೆಸರು ಅಂತಕನ ದೆಶೆಯಿಂದ ಸುಳ್ಳಾಯಿತಲ್ಲ? ನಿನ್ನ ಮರಣದಿಂದ ನನಗೆ ಈಗ ಈ ಶರೀರವೂ ಮನೆಯೂ ಐಶ್ವರ್ಯವೂ ಸ್ಥಿರವಲ್ಲವೆಂಬ ಶಾಸ್ತ್ರವಚನವು ದೃಷ್ಟಾನುಭೂತವಾಯ್ತು. ಹಂಸತೂಲತಲ್ಪದಲ್ಲಿ ಕೋಮಲಾಂಗಿಯರೊಡನೆ ತಣ್ಣನೆ ತಣಿದು ನಿದ್ರಿಸುತ್ತಿದ್ದ ನಿನಗೆ ಇಂದು ಹುಡಿಮಣ್ಣಿನಲ್ಲಿ ಮಲಗುವಂತಾಯ್ತೇ?'' ಎಂದು ಮುಂತಾಗಿ ಹಂಬಲಿಸಿ, ಶೋಕಿಸಿ, ಮತಿಗೆಟ್ಟು ಕೃಷ್ಣನ ಹೆಣವನ್ನು ಹೆಗಲಮೇಲಿಟ್ಟುಕೊಂಡು ಆಲೆಯುತ್ತಲೂ ಅದನ್ನು ರಾಜರುಗಳ ಓಲಗಶಾಲೆಗೊಯ್ದು ಶೃಂಗರಿಸಿ '' ನಮಸ್ಕಾರಮಾಡಿ '' ಎಂದು ಹೇಳುತ್ತಲೂ '' ಅಡವಿಯ ಮೃಗಗಳಿರಾ! ನನ್ನ ಹೆಗಲೇರಿರುವ ನನ್ನ ತಮ್ಮನು ಕೋಪದಿಂದ ನನ್ನೊಡನೆ ಮಾತನಾಡುವುದಿಲ್ಲ. ನೀವು ಈತನ ಕೋಪವನ್ನು ಬಿಡಿಸಿ '' ಎಂದು ಹುಚ್ಚನಂತೆ ಮಾತನಾಡುತ್ತಲೂ ಆರುತಿಂಗಳವರೆಗೆ ಆ ಹೆಣವನ್ನು ಹೊತ್ತುಕೊಂಡು ಭೂತಳದಲ್ಲಿ ಆಲೆಯುತ್ತಿದ್ದನು. ಆಗ ಸ್ವರ್ಗದಿಂದ ನೈಗಮದೇವನು ಸಿದ್ಧಾರ್ಥನೆಂಬ ದೇವನೊಡನೆ ಬಂದು ವಿಗುರ್ವಣೆಯಿಂದ ತಮ್ಮ ರೂಪವನ್ನು ಬದಲಾಯಿಸಿ ಬಲರಾಮನು ಒರುತ್ತಿರುವ ದಾರಿಯಲ್ಲಿ ಒಂದು ಕಲ್ಲಿನ ಮೇಲೆ ಬಾಳೆಯ ಗಿಡವನ್ನು ತಲೆಕೆಳಗಾಗಿ ನೆಟ್ಟು ಅದಕ್ಕೆ ಮಣ್ಣಿನ ಮಡಕೆಯಿಂದ ನೀರುಹುಯ್ಯುತ್ತಿರುವುದನ್ನು ಕಂಡು ಬಲರಾಮನು '' ಎಲೈ ಹುಚ್ಚರೆ! ನೀವೇಕೆ ಆಗದ ಕೆಲಸವನ್ನು ಮಾಡುತ್ತಿರುವಿರಿ?'' ಎಂದು ಕೇಳಲು ಅವರು '' ಹೆಗಲಲ್ಲಿ ಹೆಣವನ್ನು ಹೊತ್ತುಕೊಂಡು ತಿರುಗುವುದು ಆಗದ ಕೆಲಸವಲ್ಲವೋ?'' ಎಂದರು. ಆ ಮಾತನ್ನು ಕೇಳಿ ಬಲರಾಮನು '' ನನ್ನ ತಮ್ಮನು ಸಾರ್ವಭೌಮನು, ವೃಷ್ಣಿಶ್ರೇತ್ತಮನು. ವಿಚಾರಿಸಿಲ್ಲದೆ ಅವನನ್ನು ಹೆಣವೆಂದು ಹೇಳುವುದನ್ಯಾಯವಲ್ಲವೇ? ಹೇಳಿ '' ಎಂದು ನಿರಾಕರಿಸಿದನು. ಆಗ ಅವರು ಅಲ್ಲಿಂದ ಮುಂದೆ ಹೋಗಿ ಇನ್ನೊಂದು ಸ್ಥಳದಲ್ಲಿ ಮಡಿಕೆಯಲ್ಲಿ ನೀರನ್ನು ಹಾಕಿ ಅದನ್ನು ಕಡೆಯುತ್ತಲೂ ಮಳಲನ್ನು ಹಿಂಡುತ್ತಲೂ

ಇರಲು ಅದನ್ನು ನೋಡಿ ಬಲರಾಮನು ಮೊದಲಿನಂತೆ ಅವರನ್ನು ಹೀಯಾಳಿಸಿದನು. ಅವಕ್ಕವರು "ನಿನ್ನನ್ನು ನೀನರಿಯದೆ ಹೆಗಲಮೇಲೆ ಹೆಣವನ್ನು ಹೊತ್ತುಕೊಂಡು ಚೆನ್ನಾಗಿ ಹೇಳಿದೆ" ಎನಲು ಆಗ ಬಲರಾಮನಿಗೆ ಮೋಹಾಂಧಕಾರವು ದೂರವಾಗಿ ಚಾನ್ನಾನೋದಯವಾಯ್ತು. ಆಗ ಕೃಷ್ಣನು ಸತ್ತುಹೋಗಿದ್ದಾನೆಂದು ತಿಳಿದು ಆ ಹೆಣವನ್ನು ಕೆಳಕ್ಕಿಳಿಸಿ ತನಗುಂಟಾಗಿದ್ದ ಅಜ್ಞಾನಕ್ಕೆ ತಾನೇ ಚಿಂತಿಸುತ್ತಿರಲು ಆ ದೇವತೆಗಳು ತಮ್ಮ ನಿಜರೂಪನ್ನು ತೋರಿಸಿ ಅವನಿಗೆ ಬುದ್ಧಿವಾದವನ್ನು ಹೇಳಿ ಹೋದರು. ಬಳಿಕ ಬಲರಾಮನು ಕೃಷ್ಣನ ಹೆಣವನ್ನು ಸುಡುವುದಕ್ಕಾಗಿ ತುಂಗಿಯೆಂಬ ಬೆಟ್ಟಕ್ಕೆ ಹೋಗಲು ಆಕಾಶದಿಂದ "ಇದು ಸೇರಿ ನೀನು ಮೋಹದಿಂದ ಇಪ್ಪತ್ತುಬಾರಿ ಇವನನ್ನು ಸುಟ್ಟಿಯಲ್ಲ" ಎಂದು ಅಶರೀರವಾಣಿಯಾದುದನ್ನು ಕೇಳಿ ಆಶ್ಚರ್ಯಪಟ್ಟು, ಚಂದನದ ಕಾಷ್ಠಗಳಿಂದ ಶವಸಂಸ್ಕಾರಮಾಡಿ ಅಲ್ಲಿಗೆ ಬಂದ ಈರ್ವರು ಚಾರಣರಿಗೆ ವಂದಿಸಿ, ಅವರಲ್ಲಿ ದೀಕ್ಷೆಯನ್ನು ಹೊಂದಿ ತಪಶ್ಚರಣಮಾಡಿ ಆಯುಃಪ್ರಮಾಣದಲ್ಲಿ ಸತ್ತು ಐದನೆಯ ಸ್ವರ್ಗದಲ್ಲಿ ದೇವನಾಗಿ ಹುಟ್ಟಿ ದಿವ್ಯಸುಖವನ್ನನುಭವಿಸುತ್ತ ಸಂತೋಷದಿಂದಿದ್ದನು.

೩೫. ಮೋಕ್ಷಪ್ರಾಪ್ತಿಸಂಧಿ

ದ್ವಾರಾವತಿಯು ಬೆಂಕಿಯಿಂದ ನಾಶವಾದುದನ್ನೂ ಕೃಷ್ಣನು ಮೃತಿ ಹೊಂದಿದುದನ್ನೂ ಕೇಳಿ ಕುರುಜಾಂಗಣದೇಶಾಧೀಶರಾದ ಪಾಂಡವರು ಬಹಳವಾಗಿ ಶೋಕಿಸಿ ಅಭಿಮನ್ಯುವಿಗೂ ಅವನ ಪತ್ನಿ ಉತ್ತರೆಗೂ ಹುಟ್ಟಿದ ಪರೀಕ್ಷಿತನಿಗೆ ರಾಜ್ಯವನ್ನು ಕೊಟ್ಟು ತಮ್ಮ ಸತಿಯರು ಮೊದಲಾದ ಒಂಭೈವರಿವಾರದೊಡನೆಯೂ ಅನೇಕ ಅರಸುಗಳೊಡನೆಯೂ ಉತ್ತರದಿಕ್ಕಿನ ಪಲ್ಲವದೇಶದಲ್ಲಿ ವಿಹರಿಸುತ್ತಿದ್ದ ಶ್ರೀ ನೇಮಿನಾಥ್ವರರ ಸಮವಸರಣಕ್ಕೆ ಹೋಗಿ ಆ ಜಿನೇಶ್ವರರಿಗೆ ವಂದಿಸಿ, ಗಣಧರರಿಗೆ ರಾಜ ಧರ್ಮರಾಜನು ತಮ್ಮ ಪೂರ್ವಭವಗಳನ್ನು ತಿಳಿಸಬೇಕೆಂದು ಬೇಡಿಕೊಂಡನು. ಅದಕ್ಕೆ ಅವರು "ಈ ಭರತಕ್ಷೇತ್ರದ ಅಂಗದೇಶದಲ್ಲಿ ಪ್ರಸಿದ್ಧವಾದ ಶುಂಡಾಲವೆಂಬ ನಗರದ ರಾಜನಾದ ಘನರಥನ ಮಂತ್ರಿ ಸೋಮನೆಂಬವನಿಗೂ ಅವನ ಸತಿ ಸೋಮೆಯೆಂಬವಳಿಗೂ ಸೋಮದತ್ತ, ಸೋಮಿಲ, ಸೋಮಭೂತಿಗಳೆಂಬ ಮೂವರು ಪುಕ್ಕಳು ಹುಟ್ಟಿ ಯೌವನಾವಸ್ಥೆಯನ್ನು ಹೊಂದಿರಲು ತಂದೆಯಾದ ಸೋಮನು

ತನ್ನ ಮೈದುನ ಅಗ್ನಿಭೂತಿಯೆಂಬವನಿಗೂ ಅಗ್ನಿಲೆಯೆಂಬವಳಿಗೂ ಹುಟ್ಟಿದ ಹೇಮ ಶ್ರೀ, ಮಿತ್ರಶ್ರೀ, ನಾಗಶ್ರೀಯೆಂಬ ಮೂವರು ಹೆಣ್ಣುಮಕ್ಕಳನ್ನು ತಂದು ತನ್ನ ಆ ಪುತ್ರರಿಗೆ ವಿವಾಹಮಾಡಿ ಸುಖದಿಂದಿರಲು, ಆ ಊರಿನ ಸಮೀಪದಲ್ಲಿರುವ ವನಕ್ಕೆ ಓರ್ವ ಮುನೀಶರು ಬಂದುದನ್ನು ತಿಳಿದು ಮೇಘರಥಮಹಾರಾಜನು ತನ್ನ ಮಂತ್ರಿ ಸೋಮನೊಡನೆ ಹೋಗಿ ಅವರಲ್ಲಿ ಧರ್ಮಶ್ರವಣಮಾಡಿ ವಿರಕ್ತನಾಗಿ ತನ್ನ ಪುತ್ರ ವಿಮಲವಾಹನನಿಗೆ ರಾಜ್ಯವನ್ನು ಕೊಟ್ಟು ತನ್ನ ಮಂತ್ರಿಯೊಡನೆ ದೀಕ್ಷೆಯನ್ನು ಕೈಕೊಂಡನು. ವಿಮಲವಾಹನನು ಸೋಮನ ಮಕ್ಕಳಾದ ಸೋಮದತ್ತ, ಸೋಮಿಲ, ಸೋಮಭೂತಿಗಳನ್ನು ತನ್ನ ಮಂತ್ರಿಗಳನ್ನಾಗಿ ಮಾಡಿ ಅವರಲ್ಲಿ ವಿಶ್ವಾಸವುಳ್ಳವನಾಗಿದ್ದು ವಸಂತಕಾಲದಲ್ಲೊಂದು ದಿನ ವನಕೇಳಿಗೆಂದು ಹೊರಟನು. ಆಗ ಸೋಮದತ್ತನು ಕಾರ್ಯಾಂತರದಿಂದ ಮನೆಯಲ್ಲಿ ಉಳಿದು, ತನ್ನ ತಮ್ಮಂದಿರಾದ ಸೋಮಿಲ, ಸೋಮಭೂತಿಯರನ್ನೂ ತನ್ನ ಹೆಂಡತಿಯನ್ನೂ ಸೋಮಿಲನ ಹೆಂಡತಿಯನ್ನೂ ವನಕ್ಕೆ ಕಳುಹಿದನು. ಇತ್ತ ಸೋಮಭೂತಿಯ ಹೆಂಡತಿಯಾದ ನಾಗಶ್ರೀಯು ಅಲಂಕಾರಮಾಡಿಕೊಳ್ಳುವುದಕ್ಕಾಗಿ ಹೊರಡಲು ಸಾವಕಾಶಮಾಡಿದಳು. ಆ ಸಮಯಕ್ಕೆ ಸರಿಯಾಗಿ ಮಾಸೋಪವಾಸದ ಪಾರಣೆಗೆಂದು ಬಂದ ಓರ್ವ ಯತಿಪತಿಯನ್ನು ಕಂಡು ಸೋಮಭೂತಿಯು ಅವರನ್ನು ತಡೆದು ಮನೆಗೆ ಕರೆದುಕೊಂಡು ಬಂದು ಉತ್ತಮವಾದ ಪೀಠದಮೇಲೆ ಕುಳ್ಳಿರಿಸಿದನು. ಆಗ ರಾಜನಿಂದ ಕಳುಹಿಸಲ್ಪಟ್ಟ ಸೇವಕರು ಬಂದು ರಾಜನು ಬೇಗ ಕರೆದುಕೊಂಡು ಬರುವಂತೆ ಅಪ್ಪಣೆಮಾಡಿರುವನೆಂದು ಸೋಮಭೂತಿಗೆ ಹೇಳಲು ರಾಜಾಜ್ಞೆಗೆ ಹೆದರಿ ನಾದುನಿಯಾದ ನಾಗಶ್ರೀಯನ್ನು ಕುರಿತು ಮುನೀಶರಿಗೆ ಭಿಕ್ಷೆಯನ್ನು ಮಾಡಿಸುವಂತೆ ಹೇಳಿ ಹೊರಟುಹೋದನು. ಇತ್ತ ನಾಗಶ್ರೀಯು ಆ ಮುನಿವರ್ಯನಿಂದ ತಾನು ವನಕ್ಕೆ ಹೋಗುವುದಕ್ಕೆ ಅಡ್ಡಿಯಾಯಿತೆಂದು ಅತ್ಯಂತರೋಷವುಳ್ಳವಳಾಗಿ ವಿಷಮಿಶ್ರವಾದ ಭಕ್ಷ್ಯಗಳನ್ನು ಮಾಡಿ ಬಡಿಸಲು ಆ ತಪೋಧನನು ಅದನ್ನು ಭುಂಜಿಸಿ ಸತ್ತು ಸ್ವರ್ಗದಲ್ಲಿ ಹುಟ್ಟಿದನು. ಇತ್ತ ಸೋಮದತ್ತನು ತನ್ನ ನಾದುನಿಯು ಮಾಡಿದ ಮಹಾಪಾತಕವನ್ನು ತಿಳಿದು ಹೆದರಿ ತನ್ನ ತಮ್ಮಂದಿರೊಡನೆ ದೀಕ್ಷೆಯನ್ನು ಹೊಂದಿದನು. ಧನಶ್ರೀ ಮಿತ್ರಶ್ರೀಯರೂ ತಪಸ್ಸನ್ನು ಹೊಂದಿದರು. ಸೋಮದತ್ತ ಮೊದಲಾದ ಆ ಐವರೂ ಸ್ವರ್ಗದಲ್ಲಿ ಹುಟ್ಟಿ ಸುಖದಿಂದಿದ್ದರು. ಇತ್ತ ಮುನಿಯನ್ನು ಕೊಂದ ಪಾತಕಗಿತ್ತಿ ನಾಗಶ್ರೀಯನ್ನು ರಾಜನು ಶಿಕ್ಷೆಗೆ ಗುರಿಮಾಡಿದನು. ಅವಳು ಸತ್ತು ನರಕದಲ್ಲಿ ಹುಟ್ಟಿ ಹದಿನೇಳು ಸಾಗರೋಪಮಕಾಲ

ದುಃಖಾನುಭವಮಾಡಿ ಸತ್ತು ತಿರ್ಯಗ್ಗತಿಯಲ್ಲಿ ನಾನಾಜನ್ಮಗಳನ್ನೆತ್ತಿ ಕೊನೆಗೆ ಕರ್ಮೋಪಶಮದಿಂದ ಅಂಗದೇಶದ ಚಂಪಾನಗರದಲ್ಲಿ ಮಾತಂಗಿ— ಚಾಂಡಾಳಿಯಾಗಿ ಹುಟ್ಟಿದಳು. ಆಕೆಯ ಪಾಪವಶದಿಂದ ತಂದೆತಾಯಿಗಳು ಮೃತರಾದರು. ಕಾಪಾಡುವವರಿಲ್ಲದೆ ಭಿಕ್ಷೆಬೇಡಿ ಜೀವಿಸುತ್ತಿದ್ದಳು. ಒಂದುದಿನ ಓರ್ವ ಅವಧಿಜ್ಞಾನಿಗಳಾದ ಮುನಿಗಳು ಬಂದಿರಲು ಅವರಲ್ಲಿ ರಾಜನು ವ್ರತಗಳನ್ನು ಕೈಕೊಂಡನು. ಆ ವಿಷಯವನ್ನು ತಿಳಿದು ಆಕೆಯು ತಾನೂ ಆ ಮುನೀಶರಲ್ಲಿಗೆ ಹೋಗಿ ವಂದಿಸಿ ತನಗೂ ವ್ರತವನ್ನು ದಯಪಾಲಿಸಬೇಕೆಂದು ಬೇಡಿದಳು. ಆಗ ಮುನಿಪತಿಯು " ಮಧುಮಾಂಸಗಳನ್ನು ತಿನ್ನಬೇಡ " ಎಂದು ಹೇಳಲು ಮಾತಂಗಿಯು ಅದನ್ನು ಕೈಕೊಂಡು ಸಡೆಯಿಸದೆ ಸತ್ತು ಅದೇ ಪುರದ ಬಂಧುವೆಂಬ ವೈಶ್ಯನಿಗೂ ಧನದೆಯೆಂಬವಳಿಗೂ ಸುಕುಮಾರಿಯೆಂಬ ಮಗಳಾಗಿ ಹುಟ್ಟಿ ಮಹಾದುರ್ಗಂಧವಾದ ಶರೀರವುಳ್ಳವಳಾದಳು. ಆ ಪುರದ ಧನದೇವನೆಂಬ ವೈಶ್ಯನಿಗೂ ಯಶೋದತ್ತೆಯೆಂಬವಳಿಗೂ ಹುಟ್ಟಿದ ಜಿನದೇವ, ಜಿನದತ್ತರೆಂಬ ಇಬ್ಬರು ಮಕ್ಕಳಲ್ಲಿ ಹಿರಿಯನಾದ ಜಿನದೇವನಿಗೆ ಆ ಸುಕುಮಾರಿಯನ್ನು ತಂದು ವಿವಾಹಮಾಡಬೇಕೆಂದಿರಲು ಜಿನದೇವನಾ ಸುಕುಮಾರಿಯ ದೇಹದ ದುರ್ಗಂಧಕ್ಕೆ ಹೇಸಿ ನಿರ್ವೇಗದಿಂದ ತಪಸ್ಸಿಗೆ ಹೋದನು. ಬಳಿಕ ಕಿರಿಯನಾದ ಜಿನದತ್ತನಿಗೆ ಆ ಸುಕುಮಾರಿಯನ್ನು ಮದುವೆಮಾಡಲು ಅವನು ಅವಳ ಶರೀರದ ದುರ್ಗಂಧಕ್ಕೆ ಅಸಹ್ಯಪಟ್ಟು ಅವಳನ್ನು ಮುಟ್ಟದಿರಲು, ಆಕೆಯು ಲಜ್ಜಿತೆಯಾಗಿ ಬಂದು ವಿನಸುವ್ರತರೆಂಬ ಮುನೀಶರನ್ನು ಕಂಡು ನಮಸ್ಕರಿಸಿ ಕೈಮುಗಿದು ಅವರಿಂದ ತನ್ನ ಭವದ ಕತೆಯೆಲ್ಲವನ್ನೂ ಕೇಳಿ ತನ್ನ ಹಿಂದಿನ ನಾಗಶ್ರೀ ಜನ್ಮದ ಪತಿಯಾದ ಸೋಮಭೂತಿಯು ಆಚ್ಯುತಕಲ್ಪದಲ್ಲಿ ದೇವನಾಗಿರುವನೆಂದು ತಿಳಿದು, ಅವನನ್ನೇ ಹೊಂದಬೇಕೆಂದು ಮನಸ್ಸಿನಲ್ಲಿ ನಿರ್ಧರಿಸಿ ಜಿನದೀಕ್ಷೆಯನ್ನು ಹೊಂದಿ ತಪಶ್ಚರಣಮಾಡಿ ಸತ್ತು ಆ ದೇವನಿಗೆ ಹೆಂಡತಿಯಾಗಿ ಹುಟ್ಟಿದಳು. ಸೋಮದತ್ತ, ಸೋಮಿಲ, ಸೋಮಭೂತಿ, ಹೇಮಶ್ರೀ, ಮಿತ್ರಶ್ರೀ ಎಂಬ ಆ ಐದು ಜನಗಳೇ ಸ್ವರ್ಗದಿಂದ ಬಂದು ಪಾಂಡವರಾಗಿ ಹುಟ್ಟಿರುವರಿ. ಆ ಸುಕುಮಾರಿಯೇ ಅರ್ಜುನನ ಹೆಂಡತಿ ಪಾಂಚಾಲಿಯಾಗಿರುವಳು " ಎಂದು ಹೇಳಲು ಕೇಳಿ ಪಾಂಡವರು ವೈರಾಗ್ಯಹೊಂದಿ ಅನೇಕ ರಾಜಕುಮಾರರೊಡನೆ ದೀಕ್ಷೆಗೊಂಡರು. ಕೊಂತಿ, ದ್ರೌಪದಿ, ಸುಭದ್ರೆ ಮೊದಲಾದವರೂ ತಪಸ್ಸನ್ನು ಕೈಕೊಂಡರು. ಹೀಗೆ ದೀಕ್ಷೆಗೊಂಡ ಪಾಂಡವರು ಅಂತರಂಗಶುದ್ಧರಾಗಿ ತಪಸ್ಸನ್ನಾಚರಿಸಿ ಅವಧಿಜ್ಞಾನವನ್ನು ಪಡೆದು ಒಂದು ದಿನ ಶತ್ರುಂಜಯವೆಂಬ ಬೆಟ್ಟದಮೇಲೆ ಧ್ಯಾನನಿಮಗ್ನರಾಗಿ

ನಿಂತಿರಲು ಅದನ್ನು ತಿಳಿದು ಕೌರವನ ಮೊಮ್ಮಗನಾದ ಕ.ಯವರನೆಂಬವನು ಬಂದು ಮುನಿದು ಆ ತಪಸ್ವಿಗಳಿಗೆ ಕಾಸಿದ ಕಬ್ಬಿಣದ ಆಭರಣಗಳನ್ನು ಆಯಾ ಅವಯವಗಳಿಗೆ ತೊಡಿಸಿ, ಕಾಸಿದ ಕಬ್ಬಿಣದ ಗದ್ದುಗೆಯಮೇಲೆ ಕುಳ್ಳಿರಿಸಿ, ಕಾಸಿದ ಕಬ್ಬಿಣದ ಪಟ್ಟಿಗಳನ್ನು ಹಣೆಗೆ ಕಟ್ಟಿ ಕಬ್ಬಿಣವನ್ನು ಕಾಸಿದ ರಸವನ್ನು ಅವರಮೇಲೆ ಅಭಿಷೇಕ ಮಾಡಿಸಿ ಲೋಕವೆಲ್ಲ ಬೆದರುವಂತೆ ಅನೇಕವಿಧವಾದ ಉಪಸರ್ಗವನ್ನು ಮಾಡಿದನು. ಆ ಉಪಸರ್ಗವನ್ನು ಉವಶಾಂತತೆಯಿಂದ ಸಹಿಸಿದ ಧರ್ಮರಾಜ, ಭೀಮ, ಅರ್ಜುನ ಇವರುಗಳಿಗೆ ಶುಕ್ಲಧ್ಯಾನೋತ್ಪತ್ತಿಯಾಗಲು ದೇವದುಂದುಭಿಯು ಮೊಳಗಿತು. ಅದನ್ನು ಕೇಳಿ ಕುಯವರನು ಹೆದರಿ ಓಡಿಹೋದನು. ದೇವತೆಗಳೆಲ್ಲ ಬಂದು ಅವರನ್ನು ಸ್ತುತಿಸಿ ಪೂಜಿಸಿ ವಂದಿಸಿ ಹೋದರು ಇತ್ತ ಧರ್ಮರಾಜ ಭೀಮಾರ್ಜುನರು ಸಕಲ ಕರ್ಮಕ್ಷಯವನ್ನು ಮಾಡಿ ಮುಕ್ತಿಗೆ ಸಂದರು. ಬಳಿಕ ನಕುಲ ಸಹದೇವರು ದೇಹವಳಿದು ಸರ್ವಾರ್ಥಸಿದ್ಧಿಯನ್ನು ಹೊಂದಿದರು.

ದೇವೇಂದ್ರಾದಿಸಮಸ್ತದೇವತೆಗಳಿಂದ ನಮಸ್ಕಾರಮಾಡಿಸಿಕೊಳ್ಳುವ ಅನೇಕಕೋಟಿಸೂರ್ಯಚಂದ್ರರ ತೇಜಸ್ಸನ್ನು ವಿಾರಿಸುವ ತೇಜಸ್ಸಿನಿಂದ ಕೂಡಿದ ಆ ನೇಮಿತೀರ್ಥಂಕರರ ಸಮವಸರಣದಲ್ಲಿ ಅಷ್ಟಮಹಾಪ್ರಾತಿಹಾರ್ಯಗಳೂ ವರದತ್ತರೇ ಮೊದಲಾದ ಹನ್ನೊಂದು ಜನ ಗಣಧರರೂ ನಾಲ್ಕುನೂರುಮಂದಿ ಪೂರ್ವಶಾಸ್ತ್ರಧರರೂ ಎರಡುಸಾವಿರದುಂದಿ ಶಿಕ್ಷಕರೂ ಸಾವಿರದ ಏಳುನೂರುಮಂದಿ ಅವಧಿಜ್ಞಾನಿಗಳೂ ಅಷ್ಟೇ ಕೇವಲಿಗಳೂ ಸಾವಿರದ ನೂರುಮಂದಿ ವಿಕ್ರಿಯರ್ಧಿಸಂಪನ್ನರೂ ಒಂಬೈನೂರುಮಂದಿ ಮನಃಪರ್ಯಯಜ್ಞಾನಿಗಳೂ ರಾಜೀಮತಿ ಮೊದಲಾದ ನಲವತ್ತುಸಾವಿರದುಂದಿ ಕಂತಿಕೆಯರೂ ಒಂದು ಲಕ್ಷ ಶ್ರಾವಕರೂ ಮೂರು ಲಕ್ಷ ಶ್ರಾವಕಿಯರೂ ನಾಲ್ಕುತೆರದ ಅಸಂಖ್ಯಾತ ದೇವತೆಗಳೂ ತಿರ್ಯಕ್ಕಾಣಿಗಳೂ ಇದ್ದರು. ನೇಮಿಜಿನೇಶರು ದ್ವಾದಶಗಣಸಂವೇಷ್ಟಿತರಾಗಿ ಭವ್ಯಕ್ಷೇತ್ರಗಳಲ್ಲಿ ಧರ್ಮೋಪದೇಶವನ್ನು ಮಾಡುತ್ತಿದ್ದು ಒಂದುತಿಂಗಳಾಯುಷ್ಯವುಳಿದಿರುವಾಗ ಸಮವಸರಣವನ್ನು ಬಿಟ್ಟು, ಊರ್ಜಯಂತಗಿರಿಯು ನಿರ್ಜಂತುಕವಾದ ಪ್ರದೇಶದಲ್ಲಿ ಅಷಾಢಶುದ್ಧ ಸಪ್ತಮಿಯ ದಿವಸ ಪೂರ್ವಾಭಿಮುಖರಾಗಿ ಪರ್ಯಂಕಾಸನದಲ್ಲಿ ಕುಳಿತು ದಂಡ, ಕವಾಟ, ಪ್ರತರ, ಲೋಕಪೂರಣಗಳೆಂಬ ಯೋಗಗಳಿಂದ ವೇದನೀಯ, ಆಯುಷ್ಯ, ನಾಮ, ಗೋತ್ರಗಳೆಂಬ ಅಘಾತಿಕರ್ಮಗಳನ್ನು ನಾಶಮಾಡಿ ಕೈವಲ್ಯವನ್ನು ಪಡೆದರು ಅವರ ದಿವ್ಯದೇಹವು ಮಂಜಿನಂತೆ ವಿಲೀನವಾಯ್ತು. ಆಗ ದೇವೇಂದ್ರನು ಸಮಸ್ತ ದೇವತೆಗಳೊಡನೆ

ಬಂದು ಸ್ವಾಮಿಯ ನಿರ್ವಾಣಕಲ್ಯಾಣಪೂಜೆಯನ್ನು ಮಾಡಿ ಹೋದನು. ವ್ಯುಪರತ ಕ್ರಿಯಾನಿವೃತ್ತಿಯೆಂಬ ಕೊನೆಯ ಶುಕ್ಲಧ್ಯಾನದಿಂದ ಕರ್ಮಸಮೂಹವನ್ನು ನಾಶ ಮಾಡಿ ಅಕ್ಷಯಮೋಕ್ಷವನ್ನು ಪಡೆದ ಶ್ರೀ ನೇಮಿಜಿನೇಶ್ವರರು ಲೋಕದ ಸಮಸ್ತ ಭವ್ಯಪ್ರಾಣಿಗಳಿಗೆ ಸ್ವರ್ಗಸುಖವನ್ನೂ ಶಾಶ್ವತವಾದ ಮೋಕ್ಷಸುಖವನ್ನೂ ದಯ ಪಾಲಿಸಲಿ. ಹೀಗೆ ಈ ಪುರಾಣವನ್ನು ಓದುವವರೂ ಕೇಳುವವರೂ ಬರೆಯು ವವರೂ ಸ್ವರ್ಗಸುಖವನ್ನು ಹೊಂದಿ ಮುಕ್ತಿಗಾಮಿಗಳಾಗುವರು.

ಜಿನೇಶ್ವರನ ಪಾದಕಮಲದಲ್ಲಿ ಮದಿಸಿದ ಭೃಮರನೂ ಚತುರನೂ ಆದ ಮಂಗರಸನು ರಚಿಸಿದ ಕಾಮವಿಜಯಿಯಾದ ನೇಮಿಜಿನೇಶನ ಸಂಗತಿ ಯಲ್ಲಿ ಮೂವತ್ತೈದನೆಯಾಶ್ವಾಸವು ಪೂರ್ತಿಯಾಯ್ತು.

॥ ಇತಿ ಮಂಗಲಮಹಃ ॥

ಶ್ರೀಮದ್ಯುವರಾಜ ಕಂಠೀರವ ನೃಸಿಂಹರಾಜ ಒಡೆಯರವರು

ಮಂಗಲಾಚರಣ

ಓಂಕಾರಂ ಬಿಂದುಸಂಯುಕ್ತಂ | ನಿತ್ಯಂ ಧ್ಯಾಯಂತಿ ಯೋಗಿನಃ ||
ಕಾಮದಂ ಮೋಕ್ಷದಂ ಚೈವ | ಓಂಕಾರಾಯ ನಮೋ ನಮಃ ||೧||

ಅವಿರಲಶಬ್ದಘನೌಘಪ್ರಕ್ಷಾಲಿತಭೂತಲಮಲಕಲಂಕಾ ||
ಮುನಿಭಿರುಪಾಸಿತತೀರ್ಥಾ ಸರಸ್ವತೀ ಹರತು ನೋ ದುರಿತಂ ||೨||

ಅಜ್ಞಾನತಿಮಿರಾಂಧಾನಾಂ | ಜ್ಞಾನಾಂಜನಶಲಾಕಯಾ ||
ಚಕ್ಷುರುನ್ಮೀಲಿತಂ ಯೇನ | ತಸ್ಮೈ ಶ್ರೀಗುರವೇ ನಮಃ ||೩||

ಪರಮಗುರವೇ ನಮಃ ಪರಂಪರಾಚಾರ್ಯಗುರವೇ ನಮಃ ||೪||

ಸಕಲಕಲುಷವಿಧ್ವಂಸಕಂ ಶ್ರೇಯಸಾಂ ಪರಿವರ್ಧಕಂ ಧರ್ಮಸಂಬಂಧಕಂ ಭವ್ಯಜೀವಪ್ರತಿಬೋಧಕಾರಕಮಿದಂ ಶಾಸ್ತ್ರಂ ಶ್ರೀನೇಮಿಜಿನೇಶಸಂಗತಿನಾಮಧೇಯಕಂ ಅಸ್ಯ ಮೂಲಕರ್ತಾರಃ ಶ್ರೀಸರ್ವಜ್ಞದೇವಾಃ ತದುತ್ತರಕರ್ತಾರಃ ಶ್ರೀಗಣಧರದೇವಾಃ ತದುತ್ತರೋತ್ತರಕರ್ತಾರಃ ಶ್ರೀಕುಂದಕುದಾದ್ಯಾಸ್ತೇಷಾಂ ವಚೋನುಸೃತ್ಯ ಶ್ರೀಮಂಗರಸಕವಿನಾ ವಿರಚಿತಂ ಸರ್ವೇ ಶ್ರೋತಾರಃ ಸಾವಧಾನತಯಾ ಶೃಣ್ವಂತು ||೫||

ಭಾವಾರ್ಥ:—ಬಿಂದುವಿನೊಡನೆ ಕೂಡಿರುವುದೂ ಇಷ್ಟಾರ್ಥವನ್ನೂ ಮೋಕ್ಷವನ್ನೂ ಕೊಡುವುದೂ ಆದ ಯಾವ ಓಂಕಾರವನ್ನು ಯೋಗಿಗಳು ಸದಾ ಧ್ಯಾನಿಸುತ್ತಾರೋ ಅಂತಹ ಓಂಕಾರಕ್ಕೆ ಪುನಃ ಪುನಃ ನಮಸ್ಕಾರವು ||೧|| ಸಾಂದ್ರವಾದ ಶಬ್ದವೆಂಬ ಮೇಘಸಮೂಹದಿಂದ ಭೂತಳದ ಮಲವೆಂಬ ಕಳಂಕವನ್ನು ತೊಳೆದಿರುವ ವಳೂ ಮುನಿಗಳಿಂದ ಸೇವಿಸಲ್ಪಟ್ಟ ತೀರ್ಥ (ಆಗಮ) ವುಳ್ಳವಳೂ ಆದ ಸರಸ್ವತಿಯು ನಮ್ಮ ದುಷ್ಕೃತವನ್ನು ನಾಶಮಾಡಲಿ ||೨|| ಅಜ್ಞಾನವೆಂಬ ಕತ್ತಲೆಯಿಂದ ಕಣ್ಣುಗಾಣದವರ ಕಣ್ಣನ್ನು ಜ್ಞಾನವೆಂಬ ಅಂಜನಶಲಾಕೆಯಿಂದ ಯಾವನು ತೆರೆಯಿಸಿದನೋ ಅಂತಹ ಗುರುವಿಗೆ ನಮಸ್ಕಾರವು ||೩|| ಪರಮಗುರುವಿಗೆ ನಮಸ್ಕಾರವು, ಪರಂಪರಾಚಾರ್ಯಗುರುವಿಗೆ ನಮಸ್ಕಾರವು ||೪|| ಸಮಸ್ತದುರಿತನಾ

ಮಂಗಲಂ ಭಗವಾನ್ವೀರೋ | ಮಂಗಲಂ ಗೌತಮೊ ಗಣೀ ||
ಮಂಗಲಂ ಕುಂದಕುಂದಾದ್ಯಾ | ಜೈನಧರ್ಮೋಸ್ತು ಮಂಗಲಂ ||೬||

ಶಕವೂ ಶ್ರೇಯಸ್ಸುಗಳನ್ನು ಹೆಚ್ಚಿಸುವುದೂ ಧರ್ಮಸಂಬಂಧಿಯೂ ಭವ್ಯಪ್ರಾಣಿಗಳಿಗೆ ಎಚ್ಚರಿಕೆಯನ್ನುಂಟುಮಾಡುವುದೂ ಆದ ಶ್ರೀನೇಮಿಜಿನೇಶಸಂಗತಿಯೆಂಬೀ ಶಾಸ್ತ್ರದ ಮೂಲಕರ್ತರು ಶ್ರೀಸರ್ವಜ್ಞದೇವರು, ಉತ್ತರಕರ್ತರು ಶ್ರೀಗಣಧರದೇವರು, ಉತ್ತರೋತ್ತರಕರ್ತರು ಶ್ರೀಕುಂದಕುಂದಾಚಾರ್ಯರು ಮೊದಲಾದವರು. ಅವರುಗಳ ವಚನಪರಂಪರೆಯನ್ನಾಶ್ರಯಿಸಿ ಶ್ರೀಮಂಗರಸಕವಿಯಿಂದ ಈ ಗ್ರಂಥವು ವಿರಚಿತವಾದುದು. ಇದನ್ನು ಶ್ರೋತೃಗಳೆಲ್ಲರೂ ಸಾವಧಾನದಿಂದ ಕೇಳಬೇಕು ||೫|| ಭಗವಾನ್ ಮಹಾವೀರಸ್ವಾಮಿಯೂ ಗೌತಮಗಣಧರರೂ ಕುಂದಕುಂದರೇ ಮೊದಲಾದ ಆಚಾರ್ಯರೂ ಜೈನಧರ್ಮವೂ ಮಂಗಳಗಳಾಗಿರಲಿ ||೬||

ಶ್ರೀಮಜ್ಜಯಚಾಮರಾಜ ಒಡೆಯರವರು

॥ ಓಂ ॥

ಶ್ರೀ ನೇಮಿಜಿನಾಯ ನಮಃ.

ಶ್ರೀ ಮಂಗರಸಕವಿಯ

ನೇಮಿಜಿನೇಶ ಸಂಗತಿ

(ಹರಿವಂಶಪುರಾಣ)

೧. ಪೀಠಿಕಾಸಂಧಿ.

ಶ್ರೀಮ [1]ತ್ಪಂಚಕಲ್ಯಾಣವೈಭವಯುತ । ರಾಸುಕೇಶವನತಚರಣ ॥
ಸೋಮಾರ್ಕಕೋಟಿಕಿರಣ ನೇಮಿನಾಥನು । ದಾ ಮಸುಖವನೀವುದೆಮಗೆ ॥೧॥

[2]ಪದಿನೆಂಟುದೋಷವ ಗೆಲ್ದು ಲೋಕದ ತುತ್ತ । ತುದಿಯೊಳು ನಿಂದು ತಮ್ಮಿಂದ ॥
ಒದವಿದ ಸುಖಮುಯರಾಗಿರ್ದ ಸಿದ್ಧರ । ಪದಯುಗಕಾನೆರಗುವೆನು ॥೨॥

ನಾರತರಾಮೃತ ಸುಖನಿಷ್ಠ ಕೈವಲ್ಯ । ನಾರಿ ಮೋಹಿಸಬೇಕೆಂದು ॥
ಚಾರುಚರಿತ್ರಾಭರಣ ಭೂಷಿತರಾದ । [3]ಸೂರಿಗಳಡಿಗೆರಗುವೆನು ॥೩॥

[4]ಎನ್ನದು ಮನೆಯೊಡಲೊಡವೆಯೆನ್ನಲಾಬೇಡ । [5]ವೆನ್ನದು ಮನೆಯೊಡಲೊಡವೆ ॥
ಎನ್ನಿಮೆಂದುಪದೇಶಗೆಯ್ವ [6]ಪದೇಶಕ । ರಂ [7]ಸಲಮಿಂದ ವಂದಿಪೆನು ॥೪॥

ನಿರ್ದೋಗಪಾರಾಯಣ ನಿಜಹೃದಯರು । [8]ನಿರ್ವಾಣೋಪ್ಸಿತಯುತರು ॥
ಸರ್ವಸಾಧುಗಳ ವಂದಿಸಿ ನಾನು ಪಡೆವೆನು । ಸರ್ವಜ್ಞಾಧಿಕಾರವನು ॥೫॥

ಜಿನಸಿದ್ಧಸೂರಿದೇಶಕಸಾಧು ಸಮಿತಿಯ । ನನುಸಯವಿಂ ವಂದಿಸುವೆನು ॥
ಘನತರ [9]ಪಂಚಪರಾವರ್ತನವೆಂಬ । [10]ವನಸಧಿಯನು ದಾಂಟಲೆಂದು ॥೬॥

ಟಿಪ್ಪಣಿ.— 1 ಗರ್ಭ, ಜನ್ಮ, ದೀಕ್ಷಾ, ಕೇವಲಜ್ಞಾನ, ಮೋಕ್ಷ. 2 ಹಸಿವೆ, ಬಾಯಾರಿಕೆ ಮೊದಲಾದುವು 3 ಆಚಾರ್ಯರ 4 ನನ್ನದು. 5 ಎನಿಸದು. 6 ಉಪಾಧ್ಯಾಯರನ್ನು. 7 ಸಂತೋಷದಿಂದ. 8 ಮೋಕ್ಷೇಚ್ಛೆ. 9 ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವಗಳೆಂಬೈದು ಸಂಸಾರ. 10 ಸಮುದ್ರ.

ಕೊಲ್ಲದುದೇ ಧರ್ಮ ಪೂರ್ವಾಪರವೈರ | ವಿಲ್ಲದುದೇ ಶಾಸ್ತ್ರವೆಂದು ||
ನಿಲ್ಲದೆ [1]ನಿರವಿಸಿದಂಗಜವೈರಿಯ | [2]ಮೆಲ್ಲಡಿಗಾನೆರಗುವೆನು ||೬||

ವಾಣಿ [3]ಪ್ರಜಿನಘನತರ [4]ಕಾಂತಾರ [5]ಕೃ | ಪಾಣಿ ಸಂಸಾರವಾರಿಧಿಗೆ ||
[6]ದ್ರೋಣಿ ನಿರ್ಮಲ [7]ನಿಃಶ್ರೇಯೋಮಾರ್ಗ [8]ನಿಃ | ಶ್ರೇಣಿಗೆ ನಾನೆರಗುವೆನು ||೭||

ಸರ್ವಜ್ಞಪದಸರಸಿಜಮಂದಮಧುಕರ | ಸರ್ವಯೆಕ್ಕಾನ್ವಯತಿಲಕ ||
ಸರ್ವಾಹ್ಣಯಕ್ಷವರವಕೊಡು ಕವಿತೆಯ | ನಿರ್ವಹಿಸುವಶಕ್ತಿಯನು ||೮||

ಮದನಮದಾಪಹರಣತೀರ್ಥಕರಮೃದು | ಪದಯುಗನಖಚಂದ್ರಿಕೆಗೆ ||
ಮುದದಿ ಚಕೋರಿಯೆನಿಪ ಯಕ್ಷೇಶ್ವರಿ | ಯೊದವಿಸೆನಗೆ ಸುಮತಿಯನು ||೯||

[9]ಶರಧಿಯ ಜಲವ ಮುಗಿಲು ತೀವಿ ಧರಣಿಗೆ | ಸುರಿಮಂತೆ ಜಿನವಾಕ್ಸುಧೆಯ ||
ಧರಿಸಿ ಭವ್ಯರ ಹೃದಯದೊಳು ಕರೆವ ಗಣ | ಧರರ ಪಾದವೆ ಗತಿಯೆನಗೆ ||೧೧||

ಶುದ್ಧನೆನಿಸ ತತ್ತ್ವಾರ್ಥಕೆ ವೃತ್ತಿಯ | ನುದ್ಧರಿಸುತ ಮೈಮೆವಡೆದ ||
ಗೃದ್ಧ್ರಪಿಂಛಾಚಾರ್ಯರ ಚಾರುಚರಣಕೆ | ಬದ್ಧಾಂಜಲಿನತನಹೆನು ||೧೨||

ಅವನತನಹೆನು ಜಘ್ವೀಶತೀರ್ಥೇಶರ | ನವಕಥನನನಿರದೊರೆದು ||
ಅವನಿಯೊಳತಿಕೀರ್ತಿವಡೆದು ವಿಧಾಜಿಸ | ಕವಿಪರಮೇಷ್ಠಿಯಂಘ್ರಿಯನು ||೧೩||

ಎಣಿಕೆಮಾಡದೆ ಮದನನ ಬಿಲ್ಲನಾ ಪೂ | ಗಣೆಯ ಮುರಿದು [10]ಕಂಪುವಡೆದ ||
ಗುಣಭದ್ರರಡಿಯ[11]ನೆಣೆಯಮಾಡುವೆನೆನ್ನ | ಹೃಣೆಗೆ ತ್ರಿಕರಣಶುದ್ಧಿಯೊಳು ||೧೪||

ಕಲಿಯುಗಗಣಧರರನು ನಮ್ಮಲೋಕದ | ಅಲಘುಗುಣಾಲಂಕೃತರ ||
[12]ಕಲಿಲಹರರ ಮಾಘನಂದಿಮುನೀಶರ | ಬಲವಂದು ವಾಡಿ ನಂದಿಪೆನು ||೧೫||

ಛಂದೋಲಂಕಾರ ಶಬ್ದಶಾಸ್ತ್ರಗಳೆಲ್ಲ | [13]ವೊಂದಿಮುರಿದು ಮೂರ್ತಿವಡೆದು ||
ನಿಂದನಿಲವಿನಂದದಿಂದೊಪ್ಪುವ ದೇವ | ನಂದಿಯ ಪದಕೆರಗುವೆನು ||೧೬||

[14]ಅಂಕದ ಮುಖದೊಳಡಂಗದೆ ಕರ್ಮಕ | ಲಂಕರೆನಿಪ ಬೌದ್ಧರನು ||
ಶಂಕಾಪಹರಣಹೃದಯರಾಗಿ ಗೆಲಿದಕ | ಲಂಕರಿಗೊಲಿದೆರಗುವೆನು ||೧೭||

ಟಿಪ್ಪಣಿ.— 1 ಅಪ್ಪಣೆ ಮಾಡಿದ. 2 ಮೃದುಪಾದಕ್ಕೆ. 3 ಪಾಪ. 4 ಕಾಡು. 5 ಕತ್ತಿ. 6 ದೋಣಿ 7 ಮೋಕ್ಷ. 8 ಏಣಿ. 9 ಸಮುದ್ರದ. 10 ಪ್ರಸಿದ್ಧಿಹೊಂದಿದ 11 ಸಮಾನ. 12 ಪಾಪ 13 ಒಟ್ಟಾಗಿಸೇರಿ, 14 ಯುದ್ಧದ—ವಾದದ.

ಹಿಂದೆ ನಾನೆಸಗಿದ ಘೋರಮ[1]ಪ್ಪಘತತಿ | ಯೊಂದಿಸಿಲ್ಲದೆ ಕೆಡುವ ||
ಅಂದದಿ ಸುವ್ರತವನು ಪಾಲಿಸಿದ ಪ್ರ | ಭೇಂದುಮುನಿಯ ವಂದಿಪೆನು ||೧೮||

ಅವ[2]ರಣುಗಿನ ಶಿಷ್ಯರು ಶ್ರುತಮುನಿಗಳ | ನವಿತಳಗುಣಗಣಯುತರ ||
[3]ಅವಿರತವೆಸಗುವೆ ನಾನೆಸಗಿದ ಪಾಪ | [4]ತವಿಸಲೆಂದು ಭಕುತಿಯೊಳು ||೧೯||
ಶ್ರುತಮುನಿವಂರ ಸಮೋದರನಾಗಿ [5]ಸಂ | ಸೃತಿಬಂಧನವ [6]ಪರಿಪಡಿಸಿ ||
ಅತಿಕೀರ್ತಿವಡೆದ ವಿಮಲಕೀರ್ತಿವೆಸರ ವಿ | ಶ್ರುತಮುನಿಗಿರದೆರಗುವೆನು ||೨೦||

[7]ಪಾಟಿಗೆಡಿಸುವೆವಘವನೆಂಬಾ ನವ | ಕೋಟಿಮುನಿಗಳ ಮೆಲ್ಲಡಿಗೆ ||
ತಾಟಿಸಿ ಹಣೆಯನೇಮಿಶಸಂಗತಿಯ: [8]†ಸಂ | ಘಾಟದಿಂದಾನುಸುವೆನು||೨೧||

ಇನ್ನು ನಾನೊರೆವೆ ಚಪ್ಪೀಶತೀರ್ಥೇಶರ | ತ್ಯುನ್ನತವಪ್ಪ ಸಂಗತಿಯ ||
ಕನ್ನಡದೊಳು ಜಂಪೂಕಾವ್ಯವೆನೆ ಪೇಳ್ದ | ಸನ್ನುತಸತ್ಕವೀಶ್ವರರ ||೨೨||

ವುರುಜಿನಪತಿಯ ಪುರಾಣವನುಸುರಿದ | ವರಕವಿಸಂಪರರಾಜನನು ||
ದುರಿತವಿದೂರರಜಿತಜರಿತವಪೇಳ್ವ | ಗರುವ ರನ್ನನ ನುತಿಸುವೆನು ||೨೩||

ಪೇವಚಂದ್ರಪ್ರಭರನು ಕೊಂಡಾಡಿದ | ಶ್ರೀವಿಜಯರ ವುಪ್ಪದಂತ ||
ಭಾವಜಾರಿಯ ಪೊಗಳಿದ ಗುಣವರ್ಮನ | ಪಾವಶುದ್ಧಿಯೊಳು ವಂದಿಪೆನು ||೨೪||

ಪದಿನಾಲ್ಕನೆಯ ತೀರ್ಥಕರಚರಿತ್ರವ | ಒದವಿ ಪೇಳಿದ ಜನ್ನಗನ ||
ಮುದದಿಂ ಧರ್ಮಜರಿತ್ರವನುಸುರಿದ | ಪದುರಮಧುರನ ನ್ನುತಿಪೆನು ||೨೫||

ಶಾಂತೀಶನ ಪೊಗಳಿದ ಪೊನ್ನನ ರಘು | ಕಾಂತನ ಮಲ್ಲಿತೀರ್ಥಕರ ||
ಸಂತಸವಿಂ ವರ್ಣಿಸಿದ ನಾಗಚಂದ್ರನ | ಸಂತತಮಭವಂದಿಸುವೆನು ||೨೬||

ಅಂಗಜರಿಪು ನೇಮಿ ವೀರೇಶಚರಿತವ | [9]ಪೊಂಗಿ ಪೊಗಳ್ದ ಕಣ್ಣಪ್ಪನ ||
ಶೃಂಗಾರಕಾವ್ಯ ಲೀಲಾವತಿಯನು ಪೇ | [10]ಳ್ದಾಂಗಿಕನೇಮಿಯ ನೆನೆವೆ ||೨೭||

ಬಂಧುರಭರತ ಯಾದವವಂಶವನು ಕೃತಿ | ಬಂಧದೊಳಗೆ ಸೇರಿಸಿದ ||
ಬಂಧುವರ್ಮನನು ನೆನೆದು ನೇಮಿಜರಿತಪ್ರ | ಬಂಧವ ನಾನುಸುರುವೆನು ||೨೮||

ಪಾಠಾಂತರ.—† ಸಘಾಟ.

ಟಿಪ್ಪಣಿ:—1 ಪಾಪಸಮೂಹ. 2 ಬಾಲ್ಯದ. 3 ಸದಾ. 4 ನಾಶಮಾಡಲು. 5 ಸಂಸಾರ. 6 ಕಿಪ್ಪುಹಾಕಿ. 7 ರೀತಿ. 8 ಸಮೂಹ-ಸಂಗ್ರಹ. 9 ವಿಶ್ತಾರವಾಗಿ. 10 ವಿಲಾಸಿ-ತಸಿಳ.

ಇವರಾದಿಯಾಗಿ ಇಳೆಯೊಳುಳ್ಳ ನರಜನ | ಕವಿಗಳ ನನ್ನ ಚಿತ್ತ್ರದೊಳು ||
[1]ಅವಿರತವಿರಿಸಿ ನೇಮಿನಾಥನ ಚರಿತೆಯ | ಸವಿಸಯದಿಂದುಸುರುವೆನು ||೭೯||

ಕೃತಿಯ ನೆವದಿ ನೇಮಿನಾಥನ ಚರಿತೆಯ | ಸುತಿಗೆಯ್ಸಲಘ[2]ಸಂವರಣೆ ||
ಹತನಾಗಲೆಂದು ಬರೆದೆ ನಿಂತಿದಭವ್ಯ | [3]ತತಿಯಿರ[4]ದೊಲಿದು ಲಾಲಿಪುದು ||೮೦||

ಕೇಳಿದೊಡೇನೊ ಕೇಳದೊಡೇನೊ ಮನಗೊಂಡು | [5]ಕೂಳರದರಿನೇನು ಸಿದ್ಧಿ ||
[6]ಕಾಲಮಿಜಯನ ಕಥೆಯ ಪುಣ್ಯಕಾರಣ | ಕೇಳಿದೆನೆನ್ನ [7]ರಿವಸಿತ ||೮೧||

ಕೋಡಗಗುತ್ತನುನಾಣಿಕವನು ಕೊಡ | ಲೀಡಾಡುವೊಲು ದುರ್ಜನರು ||
ರೂಢವಡೆದ ಪುಣ್ಯಕಥೆಯನು ‡ ಕೇಳುವ | ರೋಡಾಡದೆ ಸುಮ್ಮನಿಹರೆ ||೮೨||

ಹಾವಿಗೆ ಹಾಲನರೆಯಲದೊಡಲೊಳ | ಗಾ ವಿಷ ಪೂರಿಸುವಂತೆ ||
[8]ಶಾವಕರಿಗೆ ಲೇಸನಾಡಲು ಕಷ್ಟವ | ನೇವೈಸಿಕೊಂಡು [9]ಕೊನೆವರು ||೮೩||

ತಾನಳಿದುಂಡವರಿಗೆ ಒಕರನಾ | ಳ್ವಾ ನೊಣಗಂತೆ ದುರ್ಜನರು ||
ಹಾನಿ ತಮಗೆಯಾದೊದಾಗಲು ಪರಾಸ್ಯರ | ಮಾನಾವಹಾರನಾಡುವರು ||೮೪||

$ ಕಾಸಲು ಕಾಂಚನ ಕಡುರಂಗುವಡೆವಂತೆ | ದೂಸಕರಾ ಸಜ್ಜನರಿಗೆ ||
ಏಸೇಸು ಪರಿಯೊಳು ಕಪಟವನೆಸಗಲು | ಲೇಸನವರಿಗೆಸಗುವರು ||೮೫||

[10]ಪಿಸುಣರ ಸಂಸರ್ಗವಸುರೆ ಮಾಡಿದ | ರಸಿಕರ್ಗೆ ಕೇಡಾಗದಿಹುದೆ ||
ಮುಸುಗುವ ಪೊಸ ಪೊನ್ನ ಗಟ್ಟಿಯೊ[11]ಳನಲೋಹ | ಮುಸುಕಲಂತದು ಕೆಡುವಂತೆ ||

ಇಂತು ದುರ್ಜನರನು ದೂಷಿಸಿ ಸಜ್ಜನ | ಸಂತಾನವ ತುತಿಗೆಯ್ದು ||
ಕಂತುಮರ್ದನ ನೇಮಿನಾಥನ ಚರಿತೆಯ | ಸಂತಸದಿಂದುಸುರುವೆನು ||೮೭||

† ಹರಿಕುಲತಿಲಕ ಮಹಾಮಂಡಳಿಕನೂ | ತರುಣೇಶಚಂಗಾಳ್ವನೃಪನ ||
ವರಸಚಿವಾಸ್ಥಾಯಾಂಬರ ಭಾನು ಜಿನಪದ | ಸರಸಿಜ ಮುದಮಧುಕರನು ||೮೮||

ಪಾಠಾಂತರ.—‡ ಕೇಳ್ದವ $ ಈಪದ್ಯವು (ಐ) ಪ್ರತಿಯಲ್ಲಿಲ್ಲ. † ಈಪದ್ಯವು (ಕ. ಗ.) ಪ್ರತಿಗಳಲ್ಲಿಲ್ಲ.

ಟಿಪ್ಪಣಿ.—1 ಸದಾ. 2 ತಡೆ. 3 ಸಮೂಹ. 4 ಪ್ರೀತಿನಿ. 5 ಅಲ್ಪರು. 6 ಯಮುವಿಜಯನ 7 ತಿಳಿದಷ್ಟು 8 ಕೆಡುಕರಿಗೆ. 9 ಹಿಗ್ಗುವರು. 10 ದುಷ್ಟರ. 11 ಕೀಳುಲೋಹ.

ಜನನುತ ಕಲ್ಲಹಳ್ಳಿಯ ನಾಡಿನ ಪ್ರಭು | ವಿನಯ[1]ವ್ಹನಧಿಜಂದ್ರಮನು ||
ಮನುನಿಭಚರಿತ ಮಾಳವಸುತ ಮಾಧವ | ತನಜಸದೃಶ ವಿಜಯೇಂದ್ರ ||೩೯||

ನಿತರಣದೊಳಗೆ [2]ವಿಬುಧಮುಖೀಜಾತವ | ನುತವಿಭವದೊಳಿಂದ್ರನನು ||
ವಿತತವಿವೇಕದೊಳಾ ವಿಧಿಯನು ಗೆಲ್ದು | ನುತನಾದನಾ ವಿಜಯೇಂದ್ರ ||೪೦||

ಆ ಪ್ರಭುವಿನ ತನುಜಾತನು ಸಕಲಕ | ಲಾನುಪ್ರವೀಣನುತ್ತಮನು ||
ಅಪ್ರತಿಮನು ಗುಣಾನ್ವಿತ ಕಾಮುಧೇನುಸೆ | ಮಪ್ರದನೆನೆ ರಂಜಿಸುವನು ||೪೧||

ಜಿನಪದಭಕ್ತ ಮಂಗರಸನಾನೀ ಮುಕ್ತಿ | ವನಿತೇಶನೇಮುತೀರ್ಥಕರ ||
ವಿನುತಮುಪ್ಪಾಕಥನವ ಪಾಡುಗಬ್ಬದೊ | ಳನುಗೆಯ್ದೆ ತಾನದೆಂತೆನಲು ||೪೨||

ಗುರುಕಟಿತಟವಸ್ಯನ್ಯಹಸ್ತದ್ವಯ | ಧರಣೀತಳಾಂಘ್ರಿಪ್ರಸಾರ ||
$ ವರನರ್ತಕಾಕಾರಮೂಲೋಕಮಿಪ್ಪುದು | [3]ಮರುತತ್ರಯಾಧಾರದಿಂದ ||೪೩||

ಆ ರೀತಿವಡೆದ ಭುವನದೊಳು ದಂಡಾ | ಕಾರದ [4]ತ್ರಸನಾಳಮಿಹುದು ||
ನಾರಕನರನಾಕಲೋಕಕೆ ತಾನಾ | ಧಾರಮೆನಲು ರಂಜಿಸುತ ||೪೪||

ಆ ಸರಲೋಕದ ಮಧ್ಯದೊಳಿಪ್ಪ ನಾ | ನಾದ್ವೀಪ ಸಮುದ್ರ ||
ಆ ಸಟ್ಟನಡುವೆ ಮಹಾಜಲರಾಜಾಬುಧಿ | ತಾನತಿಶೋಭೆವಡೆದುದು ||೪೫||

ಅಸುರನ ಕೊಂದವ * ನೊಯ್ದವನಿಯತಂದು | ಹಸಮಾಡಿ ಮುಂದದಕಾರೂ ||
ಮುಸುಕದಂದದಿ ಹರಿಗೆಯ್ದ ಸ್ಥಿರಗಳನ | [5]ಲೆಸಕವಡೆದುದಾ ಜಲಧಿ ||೪೬||

ಜಂಬೂದ್ವೀಪವೆಂಬೆಂಬ [6]ಜೈವಾತ್ಮಕ | ಬಿಂಬದ ಪೊರವಳಯದೊಳು ||
ಇಂಬುವಡೆದ ಪಾವೇಷದ ಪೊಲುಲವ | ಣಾಂಬುಧಿಯತಿರಂಜಿಸಿದುದು ||೪೭||

ಕರಮೆಸವಾ ಕಜಲೊಳಮೆಯ್ಯೊಳು ಬಂ | ಧುರಮಾದುದಾ § ಜಂಬೂದ್ವೀಪ ||
ಉರುತರಮುಪ್ಪಾ [7]ಕಾನಾರಮಧ್ಯದ | ಸರಸಿಜಕುಸುಮದಂದದೊಳು ||೪೮||

ಆ ವಸುಧಾಮಂಡಲದ ನಡುವೆ ಶೋ | ಭಾವಹಮಾಗಿರುತಿಹುದು ||
ದೇವಲೋಕದೆ ಪಾತಾಳಲೋಕಂಬರ | ತೀವಿ ಮಹಾಮೇರುಶಿಖರಿ ||೪೯||

ಪಾತಾಂತರ.—$ ಉರುನರ್ತನಾಕಾರ. * ಕಳ್ದಧರೆಯ § ಜಂಬೂದೀವಿ.

ಟಿಪ್ಪಣಿ.- 1 ಸಮುದ್ರ. 2 ಕಲ್ಪವೃಕ್ಷವ 3 ಮೂರುಗಾಳಿಗಳ ಆಧಾರದಿಂದ.
4 ದ್ವೀಂದ್ರಿಯಾದಿ ತ್ರಸಜೀವಗಳುಳ್ಳಪ್ರದೇಶ. 5 ಪ್ರಕಾಶ. 6 ಚಂದ್ರ. 7 ಸರೋವರ

[1]ಅಂಬರವೆಸೆವ ಸುದತಿಸುರಲೋಕವೆಂ | ದೆಂಬ ಹೆಂಚಿನೊಳಂಜನನನು ॥
ಇಂಬಿನೊಳಡಲೆಂದಿಟ್ಟ [2]ಹೆಜ್ಜೊಡರೆಂ | ದೆಂಬಂತೆ ಮೇರುವೊಪ್ಪಿದುದು ॥೫೦॥

ಜ್ಯೋತಿಷ್ಕರಿಂದೀ ಕಾಲವನೊಕ್ಕುವಿ | ಳಾತಳವೆಂಬ[3]ಕಳದೊಳು ॥
[4]ಒತ್ತು ವಿಲುಮಕರ್ತ್ರು ನಿಲಿಸಿದ[5]ಮೇಟಿಯು | ರೀತಿಯಾಯ್ತಾ ಮೇರುಶಿಖರ ॥೫೧॥

ಕೀಳಿನೊಳೆಸವೇಳು ಲೋಕಂಗಳೆಂಬ | ಏಳು ನೆಲೆಯುಪಾಡಗಳೊಳು ॥
[6]ಧಾಳಿಪ ಹೊಂಗಳಸದಪೊಲೊಪ್ಪಿತು ಮೇರು | ಭೂಲೋಕಕಚ್ಚರಿಯಾಗಿ ॥೫೨॥

ಆ ಸುರುಚಿರಮಪ್ಪ ಮೇರುಗಿರಿಯ ದಕ್ಷಿ | ಣಾಶೆಯೊಳಾ ನಿಷಧಾವ್ಹಿ ॥
ಆ ಸಾಗರವ ಪೂರ್ವಾಪರದೊಳು ಮುಟ್ಟಿ | ಭಾಸುರವಾಗಿರುತಿಹುದು ॥೫೩॥

ಆ ನಿಷಧಾವ್ಹಿಯ[7]ಸುಸ್ಪುತಮನಿಯು | ತಾನಾಂತಾ ಬಲು ಹೊರೆಗೆ ॥
ಆನದೊಗೆದು ಬೀಳ್ವಪೆವರೆಸೆ ಸೀತೋ | ದಾನದಿಯೊಗೆನೊಪ್ಪಿದುದು ॥೫೪॥

ಭೂತರುಣಿಯ ಬೆಸ್ಮೊಳೆಸೆನ[8]ವೇಣಿಯುಸ್ಪೊಲು | ವ್ಯಾತಿವಡೆದು ಪಡುಗಡೆಗೆ ॥
ಓತು ಪರಿಪ ಜಂಗಮವಾರ್ಧಯೆಂಬಂ | ತಾ[9]ತರಂಗಿಣಿಯೊಪ್ಪಿದುದು ॥೫೫॥

ಅದರೆಡಬಲಗಡೆ ಎಂಟೆಂಟು[10]ಜನಪದ | ಪದಿನಾಳುಸಗ್ಗದಂದದೊಳು ॥
[11]ಪುದಿದಿಹನದರ ದಕ್ಷಿಣದೆಸೆಯೊಳಗೆಸೆ | ದುದು ವತ್ಸಕಾವತಿವಿಷಯ ॥೫೬॥

ಧರೆಯೆಂಬ ಲಲಿತಾಬ್ಜದ ಪುಷ್ಯದ ಕೋಶ | ದಿರವೆನಲೆಸೆವಾ ದೇಶ ॥
ವರಭೋಗಿಗಳು ಭೋಗಿಸ ವಸ್ತುವಿನ ಕೋಶ | ಸುರಿಪುರನಿಗೆ ಸುಕದೇಶ ॥೫೭॥

ಸುರರುಣಿಸಿಗೆ ಸರಿಮಿಗಿಲೆನಿಸುವ ಭೋಜ್ಯ | ತರವಸ್ತುವಿಂದಾ ರಾಜ್ಯ ॥
ಧರೆಯೊಳಗುಳ್ಳ ಚಪ್ಪನ್ನದೇಶಕೆ ಪೂಜ್ಯ | [12]ಸುರಭಿಶರನ ಸಾಮ್ರಾಜ್ಯ ॥೫೮॥

ಸತತ[13]ಕುಜಾತವಿತಾನ ತಟಸ್ಥಮು | ನ್ನತ[14]ಭಂಗ[15]ಜಡಭಾವಗಳು ॥
ಅತಿಭಾವಿಸೆ ನದಿಯೊಳಗಲ್ಲದೆಸಾ | ಕ್ಷ್ಮಿತಿಯ ಜನರೊಳಿನಿಸಿಲ್ಲ ॥೫೯॥

ಪಾಠಾಂತರ.— ೫೦, ೫೧ ಪದ್ಯಗಳು (ಜ) ಪ್ರತಿಯಲ್ಲಿಲ್ಲ. ೫೦, ೫೧, ೫೨ ಪದ್ಯಗಳು (ಫ) ಪ್ರತಿಯಲ್ಲಿಲ್ಲ.

ಟಿಪ್ಪಣಿ.— 1 ಆಕಾಶವೆಂಬ ಸ್ತ್ರೀ. 2 ದೊಡ್ಡದೀಪ. 3 ಕಣ, 4 ಕಾವಾಡಿ. 5 ಕಂಬ. 6 ಪ್ರಕಾಶಿಸುವ 7 ಸ್ರವಿಸುವ. 8 ಜಿಡೆ 9 ಹೊಳೆ. 10 ದೇಶ. 11 ಸೇರಿಯಿಹವು. 12 ಕಾಮನ. 13 ವೃಕ್ಷಸಮೂಹ—ನೀಚಜಾತಿ ಜನಸಮೂಹ 14 ಅಲೆ-ತಿರಸ್ಕಾರ. 15 ಜಲ-ಮಂಕುತನ

[1]ಶ್ರುತಿಶೂನ್ಯವೆಂಬು[2]ದಕ್ರಮವೆಂಬುದು[3]ಪರ್ವ | ಗತಿಯೆಂಬುದು ಭಾವಿಸಲು ||
ನುತಮಾಗಿಯಾದೇಶ[4]ದಹಿಯೊಳಲ್ಲದೆ ಜನ | ತತಿಯೊಳಗೊಂದಿನಿಸಿಲ್ಲ ||೬೦||

ಅಲರಶರನ ಬೀಡಪರಂಜಿಮಿಗ[5]ದಾಡು | ವೊಲ ಕಾಮುಪಲು ಮೇವ ಕಾಡು ||
ನೆಲವ ಹಡೆದ ನಾಕಲೋಕದೇಳ್ಗೆಗೆ ಜೋಡು | ಸಲೆಸೊಗಯಿಪುದಾ ನಾಡು||೬೧||

ಆ ಸಗ್ಗದ ನಾಡಿನ ಗುರುಲಘುವನು | ತಾ್ಸುವಿಡಿದು ನೋಡಲಜನು ||
ಭಾಸಿಪ ಗುಣದಿ * ನೆಯ್ದಿತು[6]ಉಡುಧರೆಯನು | ಆ ಸಗ್ಗವೆಯ್ದಿತುದ್ಭವನು ||೬೨||

ಆ ಜನಪದದ ನಡುವೆ ಸಿಂಹಪುರವೆಂಬ | ರಾಜಧಾನಿಯು ಇರ್ಪುದದನು ||
ರಾಜಿಸುವಂತೆ ಬಳಸಿ ಉದ್ಯಾನ ಪ | ರೋಜನಾವಾನದಂತಿಹುದು ||೬೩||

ಹರಸೊಳು ಹುಸಿದ ದೋಷಿಗಳೆಮ್ಮ † ಹೊರೆಯೊಳ | ಗಿರಬೇಡವೆಂದುಕೋಪದೊಳು||
ವರವನ ಸತಿಸೂಂಕಿದಂತೆ ಬೇಲಿಗಳೊಳು | ಪಿರಿದೊಪ್ಪಿದುವು ಕೇತಕಿಗಳು ||೬೪||

ತೀವಿಹವಲ್ಲಿ ವಕುಳನಾಗಚಂಪಕ | [7]ಬಾವನ್ನಬೇಲ ಬಾಳೆತಿಲಕ ||
ದೇವದಾರು ದಾಡಿಸು ಬಂಬುಕುರವಕ | ಮಾವು ಮುಂದಾವಸಶೋಕ ||೬೫||

ಮಿಸುಗುವ ದಶ[8]ದೋಹಲವೃಕ್ಷಗಳಿಂದ | ಮಿಸುನಿದಾವರೆಗೊಳದಿಂದ ||
ಪೊಸರನ್ನ [9]ವೆಸದ ಕೃತ್ರಿಮಶೈಲಗಳಿಂದ | ಪಸನಾದುದಾ ವನದಿಂದ ||೬೬||

ಸುರುಚಿರಮಾದ ಸುವರ್ಣವನಲತೊಳು | ಧರಿಸಿದಪೊಸಸಂಪಗೆಯೊಳು ||
$ ಪೊರೆಯಲಮ್ಮವು ಜಂಡಾಳಿಕುಲಂಗಳು | ಕರಮೆಸೆವಾ ನಂದನದೊಳು ||೬೭||

ವ್ಯೋಮಕೇಶಗೆಯಭಿಷೇಕಮಾಡುವೆನೆಂದು | ಹೇಮಕುಂಭದಿ ಸುಧೆವಿಡಿದು ||
ಪ್ರೇಮದಿನಗೆವಂತೆ ತೆಂಗುಕಾಯಿದಳೆದು | ದ್ದಾಮವೆತ್ತವು ಸೊಂಪುನಡೆದು||೬೮||

ಕರಮೊಪ್ಪಿದುವಲ್ಲಿ ಕರವೀರಮದಿರ್ಗಂತಿ | ಮುರುಗಮಲ್ಲಿಗೆ ಇರವಂತಿ ||
ಸುರಗಿ[10]ನಂದ್ಯಾವರ್ತ[11]ಬಾಧೂಕ[12]ಮಾಲತಿ | [13]ಸಿರಿಸಸಂಪಗೆಸೇವಂತಿ ||೬೯||

ಪಾಠಾಂತರ.—* ನೆಯ್ದಿದುದು. † ನೆರೆಯೊಳ. $ ಪೊರೆಯಲಮ್ಮವು.

ಟಿಪ್ಪಣಿ.—1 ಕವಿಯಿಲ್ಲದಿರುವುದು- ಚಾಡಿಮಾತಿಗೆ ಕಿವಿಗೊಡದಿರುವುದು. 2 ಸೊಟ್ಟಾಗಿ-ಅಕ್ರಮಪ್ರವೃತ್ತಿ. 3 ಡೊಂಕಾಗಿನಡೆಯುವುದು-ಕುಟಿಲತನ. 4 ಸರ್ಪ. 5 ಆಶ್ರಯಸ್ಥಾನ. 6 ಜ್ಯೋತಿರ್ಲೋಕ. 7 ಶ್ರೀಗಂದ. 8 ಸ್ತ್ರೀಯರ ಗಂಡೂಷ ಪಾದತಾಡನಾದಿಗಳಿಂದ ಚಿಗುರುವ ವೃಕ್ಷಗಳು. 9 ಕೆಲಸದ 10 ನಂದಿಬಟ್ಟಲು. 11 ಗೋರಟೆ. 12 ಜಾಜಿ. 13 ಬಾಗೆ.

ಅತಿ * ಸುಖಿಯಿಸುವುವಂತದರೊಳು ಪಾರಾ | ವತ ಲಾವುಕ ರಾಜಕೀರ ||
ಸುತಚಕ್ರವಾಳ ಸುತಾಳ ಸಾರಸ[1]ಪರ | ಧೃತ||ಧ್ರುಗುಸಾರಮಯೂರ ||೭೦||

ಮೊರೆವಳಿ ಕಳಭಗಳಿಗೆ[2]ಜೇವಳಿಗೆಯ್ವ | ಮರುತನ ಮೈಗೆ ಕಂಪಿಡುವ ||
ಅರಲವಲ್ಲರಿ ಹಬ್ಬಿಬಿಡುವಾ[3]ಇಮ್ಮಾವ | ಸೊರೆವೆನೇನದರ ವರ್ಣನವ ||೭೧||

ಮುನಿದು ತೊಲಗಿಪ ಏಟೀ೧ಟನಂಘಾನ | ವನೆ ಮಾಡುವಾ ಉದ್ಯಾನ ||
ಏನುತ ಪಸಂತರಾಜನ ಜನ್ಮಸ್ಥಾನ | ಮನಸಿಜನೃಪನಾಸ್ಥಾನ ||೭೨||

ಸಿರಿಯರಮನೆ ಗಾಳಿಯು ಗುಣದಾಗಾರ | ಬೆರಕೆಗೆಂಪಿನ ಬಂಡಾರ ||
ವರವನಸತಿಯು ಲಾವಣ್ಯರಸದ ಪೂರ | ವಿರವಾದುವಲ್ಲಿ ಕಾಸಾರ ||೭೩||

ಪಿರಿದು ರಂಬಿಸುವುವಂತದರೊಳು †ಗ್ಗಡಿಸುವ | ಗೊರವ ಬಂದುದ ಬಾಯಿಗರೆವ ||
ಅರಗಿಳಿ ನಲಿದು ಕೆಲೆವ ಪೊಸ ಪಾರಿವ | ಮೊರೆವಳಿ[4]ಕುಳಿರೆಂಬ ಕೊಳನ ||೭೪||

ತೊಳಗಿ ಬೆಳಗುವಂತೊಪ್ಪುವ ವನದಿಂದ | ಒಳವಲಯದ ಪಾತಿಯಿಂದ ||
ಪೊಳೆವಪರಂಜಿಯೆಸೆವ ಕೋಂಟೆಯಿಂದಾ | ಪೊಳಲೊಪ್ಪಿತತಿಶೋಭೆಯಿಂದ ||೭೫||

ತನ್ನ[5]ಣುಗಿನ ಸುತೆಯಾಪಟ್ಟಣದೊಳು | ಚೆನ್ನಾಗಿರೆ ಹರುಷದೊಳು ||
[6]ಸುಸ್ನೀರಮರ್ದಪ್ಪಿದಂತೆ ರಂಜನೆಯೊಳು | ಉನ್ನತಮಾಯ್ತಲ್ಲಿಯಗಳು ||೭೬||

ಗೆಲೆವಂದುದಾ ಕೋಟೆ ತೆನೆಯಿಂ ಬೆಳೆಯನು | ಪಲವು ಕೊತ್ತಳದಿಹೇರುಗಳ ||
ನೆಲಸಿದಬ್ಬಣೆಯಿಂದಡುಗೆಯ ಮನೆಯನು | ಪುಲಿಹೊಗದಿಂದ ರಾತಿಯನು ||೭೭||

ತರದಿನೊಪ್ಪುವ ಸೋನೆಸೂರ್ಯವೀಥಿಗಳಿಂದ | ಅರಸುಮಕ್ಕಳ ಮನೆಯಿಂದ ||
[7]ಬಿರಕವರಲ ಲಿಖರದ ದೇಗುಲಗಳಿಂದ | ಪುರಮೊಪ್ಪಿತತಿಶೋಭೆಯಿಂದ ||೭೮||

ವೀರಭಟರ ವಿದ್ವಾಂಸರಕ್ಷರಿಗರ | ನೇರಣಿಗರ ಸಜ್ಜಣಿಗರ ||
ವಾರವನಿತೆಯರ ವೈದ್ಯರ § ಬಚ್ಚರ | ಕೇರಿಯಿಂದೆಸೆಯಿತಾ ನಗರ ||೭೯||

ಭೂರಮಣಗೆ ಮಾರ್ಮಲೆದಿಪ್ಪಾವೈರಿ | ಭೂರಿಭೂಭುಜರಿಗೆ ಮಾರಿ ||
÷ಈರೆನೆ ಶತಲಕ್ಷಕೋಟಿಭಟರ ಕೇರಿ | ಕೇರಿಯಿಂದೆಸೆಯಿತಾನಗರಿ ||೮೦||

ಪಾತಾಂತರ.— * ಅತಿಸೊಗಯಿಸುವ. ¶ಭೃಂಗಸಾರ. † ಒಡಸುವ. § ಬಚ್ಚರ ÷ ಊರೆನೆ.

ಟಿಪ್ಪಣಿ.— 1 ಕೋಗಿಲೆ. 2 ಬಿಲ್ಲಿನಧ್ವನಿಮಾಡುವ 3 ಸಿಹಿಮಾವು. 4 ಶೈತ್ಯ. 5 ಪ್ರಿಯ. 6 ಸಮುದ್ರ. 7 ಮಿಶ್ರರತ್ನ—ನವರತ್ನ.

ಎಂತ್ಸಿಗಳು ಮಂಡಳಿಕಸಾಮಂತರ | ಪರದೇಶಾಧೀಶ್ವರರ ||
ಕಲಾಭಿಜ್ಞರ ಕೇರಿಯಿಂತರ | ತರದಿನೊಪ್ಪಿದುದಾಸಗರ ||೮೧||

ಪೂಮೀಳೆಯವನು ಲೇಪನ ಬಲು | ವೆಸದ*ತೊಡವು[1]ಪಲಪರಲು ||
ಕುನಿವಸನ[2]ಪರಿಯಣದಂಗಡಿಯ ಸಾ | ಲ್ಮಸುಗಲೊಪ್ಪಿದುದಾ ಪೊಳಲು ||

ಗುವ ಬೆರಕೆಗಂಪಿನ ಹೂವಿನಸರ | ಗಳನೀವನವಯೌವನೆಯರ ||
ಗೆ‡ಗಣ್ಣಳ ಬೆಳಗಿನಬಲೆಗಿರ | ದೊಳಗಾದುದಾ ಏಟನಿಕರ ||೮೩||

ಹಪುರವನಾಳುತ್ತಿರ್ಪನರುಹ | ದ್ವಾಸವೆಸರ ಭೂಭುಜನು ||
ುರವಡೆದಮರಾವತಿಯೊಳಗಾ | [3]ವಾಸವನಿರ್ಪಂತಿಹನು ||೮೪||

ನಿತಾಜನಹೃದಯಕಮಲವನ | [4]ತರುಣಸಹಸ್ರಕಿರಣನು ||
ಸಮರೂಪನೊಪ್ಪಿದನು ಸತ್ಕವಿಚಿತ್ರ | ಶರಧಿಸಂಪೂರ್ಣಚಂದ್ರಮನು ||೮೫||

ಜಿನಪದಸರಸಿಜ ಮದಮಧುಕರ | ಚದುರಮಂಗರಸರಚಿಸಿದ ||
ುರಿ ನೇಮಿಜಿನೇಶಸಂಗತಿಯೊಳು | ಪೊವಲಾಶ್ವಾಶವೊಪ್ಪಿದುದು ||೮೬||

ಪೀಠಿಕಾಸಂಧಿ ಸಂಪೂರ್ಣಂ

ಪಾಠಾಂತರ.—* ತೊಡರ. † ವಿಸುನವಾಸದ ‡ ಗಂಗಳ.

ಟಪ್ಪಣಿ.—1 ನವರತ್ನ. 2 ಹರಿವಾಣ-ಪಾತ್ರ. 3 ದೇವೇಂದ್ರ. 4 ಬಾಲಸೂರ್ಯ.

೨. *ಇಭ್ಯಕೇತುಕುಮಾರಾಭ್ಯುದಯ ಸಂಧಿ

ಶ್ರೀಪುದಮರಪತಿವಲಿಕೀಲಿತಪಾದ | [2]ತಾಮರಸದ್ವಯನಜಗೆ ||
ಕಾಮುಮಮದೇಭಹರಗೆ ಸೇಬುಜಿನಪತಿ | ಗಾಮೋದವೆತ್ತೆರಗುವೆನು ||೧||

ಅರಿಸೈಸಮರ್ದನನರುಹದ್ಯಾಸಗೆ | ಸರಸಿಜಮುಖಿ ಜಿನದತ್ತೆ ||
†ಅರಸಿಯಾದಳು ಫಣಿಪತಿಗೆ ಪದ್ಮಾವತಿ | ವರಸತಿಯಾದಂದದೊಳು ||೨||

ಆ ಸರನಾಥಜಂದ್ಯಗೆ ಜಿನದತ್ತೆಯ | ಮಾನಿತಮಪ್ಪ ಗರ್ಭದೊಳು ||
[3]ಮಾಸಕೇತನಸ ¶ಮಸುಮ ರೂಪನಾಂತೋರ್ವ | ಭೂಸುತಸುತನುದಯಿಸಿದ ||೩||

ಜಸಿಸಿದ ಸಿಸುಗಸರಾಜಿತನಾಮುಪ | ನಸುರಾಗದಿಂದವರಿಡಲು ||
ಏಸುತಮಪ್ಪೆಲ್ಲಾ ಕಲೆಗೂಮಿ ಬೆಳೆದನಾ | [4]ಪನಧಿಕುಮಾರನಂದದೊಳು ||೪||

ಚತುರಕಲಾಭಿಜ್ಞನೆನೆ ರಂಜಿಸಪರಾ | ಜಿತಗೆ ಮದುವೆಯ ಮಾಡಿದನು ||
ಅತಿಮುದದಿಂ ಪ್ರೀತಿಪತಿಯೆಂಬವನಿಪ | ಸುತೆಯನಿಳಾಧೀಶ್ವರನು ||೫||

ಜ್ಯೋತಿರ್ಲೋಕಪ [5]ಸೌಮ್ಯನೆರಸಿ ಜೈ | ವಾತೃಕನಾಳುವಂದದೊಳು ||
ಆ ತನುಜಾತಸಹಿತ ಭೂಪಾಲನಿ | ಳಾತಳವನು ಪಾಲಿಸುತ ||೬||

ವಿಮಲವಾಹನರೆಂಬ ತೀರ್ಥಾಧೀಶರ | [6]ಸಮವಸರಣದೆಡೆಗೈದಿ ||
ಕ್ರಮದಿಂ ಧರ್ಮಾಧರ್ಮವೆಲ್ಲವ ಕೇಳ | ಲವರಿತು ನಿರ್ವೇಗಮವಗೆ ||೭||

ಸನ್ನುತನಪರಾಜಿತಗೆ ಭೂಭಾರವ | ನುನ್ನತವಿಭವದೊಳಿತ್ತು ||
ತನ್ನ ಸುಮತಿ ಜಿನದತ್ತೆಸಹಿತ ಸಂ | ಪನ್ನನು ದೀಕ್ಷೆದಳೆದನು ||೮||

ಸುರುಚಿರಗುಣಿಯಪರಾಜಿತಸುಕುಮಾರ | ನಿರದಾಶ್ರಾಪಕಪ್ರತವ ||
ಧರಿಸಿ ಬಳಿಕ ಸೀತಿಯ ಮಾರದಿಳೆಯನು | ‡ಪರಿಪಾಲಿಸುತಿರ್ದನತ್ತ ||೯||

ಪಾಠಾಂತರ್ಮ– *ಅಪರಾಜಿತನ ಸಮ್ಯಕ್ತ್ವಸಂಧಿ (ಖ) ಅಪರಾಜಿತಸಂಧಿ (ಗ) ನೇಮಿಶ್ವರಭವಾವಳಿಸಂಧಿ (ಘ) | ಗರುವೆ (ಜ) ಗರಣಿ (ಚ) ¶ ಮಿಸುಗುವರೂಪನಾಂತೋರುವ § ನೆಂದೆನಿಪಪರಾ (ಜ) ‡ ಪರಿಪಾಲಿಸಿದನು ಮತ್ತಿತ್ತ (ಜ) ಪರಿಪಾಲಿಸುತಿರ್ದನಿತ್ತ (ಗ)

ಟಿಪ್ಪಣಿ.—1 ಕಿರೀಟ. 2 ಕಮಲ. 3 ಮನ್ಮಥನ. 4 ಚಂದ್ರ. 5 ಬುಧ. 6 ಆಕಾಶದಲ್ಲಿ ಸಂಚರಿಸುವ ಸಭಾಮಂಟಪ.

ಮುನಿಪತಿಯರುಹದ್ದಾಸನು ವಿಮಲವಾ | ಹನರೊಡನಘ [1]ಶ್ಯಂಖಲವನು ||
ಘನವಾಗಿ ಪರಿದು ಬಳಿಕ್ಕ [2]ಪವರ್ಗಾ | ವನಿಗೆ ಪೋದನು ಧರೆಪೊಗಳೆ ||೧೦||

ನಿರ್ವಾಣಪೂಜೆಯನೆಸೆಗುವೆನೆಂದು* [3]ಸು | ಪರ್ವಾಣನಾಥನು ಬಗೆದು ||
ಸರ್ವದಿವಿಜರೊಡಬರಲು ವಾದ್ಯದರವ | ಪರ್ವಿದುದೆ [4]ಣ್ಪೆಸೆಗಳನು ||೧೧||

ಆ ವಾದ್ಯದ ರವಗೇಳ್ದ ಪರಾಜಿತ | ಭೂವಲ್ಲಭನಿಜಜನಕ ||
ಕೈವಲ್ಯಕೆ ಪೋದನೆಂಬುದ†ನರಿಯಲು | [5]ತೀವಿತು ಮೂರ್ಛೆಯಂಗಮೊಳು ||೧೨||

ಪರ ಶೈತ್ಯೋಪಚಾರದಿ ಮುಸುಕಿದ ಮೂರ್ಛೆ | ಹರೆಯಲು ಕಣ್ದೆರೆದವನು ||
ಪಿರಿದಾಗಿ [6]ಹಳವಳಿಸಿದನೆನ್ನಯ ನಿಜ | ಗುರುವೆಲ್ಲಿದ್ದನೊಯೆಸುತ ||೧೩||

ಸನ್ನುತಮಪ್ಪ ಭೋಗೋಪಭೋಗಂಗಳಿ | ವೆನ್ನ ತಂದೆಯಸೀಕ್ಪಿಸುವ ||
ಅನ್ನೆವರೆಲ್ಲ [7]ನಿವೃತ್ತಿಯೆಂದಾ ಸಂ | ಪನ್ನ ಮೋಹಿಸಿ ಕೈಕೊಂಡು ||೧೪||

[8]ಸುರಗಿರಿಯನು ಹಬ್ಬಿಯಾತುದಿಮುಟ್ಟಿದ | ಸುರಲೋಕವನಿವಡವರಿ ||
ವರಸೆರ್ವಾರ್ಘಸಿದ್ಧಿಯೊಳು ತಗುಳಿ ಮೇಲೆ | ಧರದಿ ಕೈವಲ್ಯಕೆಯ್ದುವೆನು ||೧೫||

ಎನುತ ಸನ್ನಾಹಭೇರಿಯ ಹೊಯ್ಸಲು ಕೇಳಿ | ಘನತರವನು ಒಲವೆಲ್ಲ ||
ಇನಿಸು ಬೇಗದಿ ಬರಲುತ್ತರಣಿಸೆಗಾಗಿ | ಜನಪತಿದಂಡು ನಡೆಯುಲು ||೧೬||

ಆ ಸೇನಾಪದಧೂಳಿಯಾಗಸವನು | [9]ಬಾಸಣಿಸಲು [10]ನಾಕದೊಳು ||
ಆ ಸುದ್ದಿ ಹರೆಯೆ ತದ್ವಿಪರೀತವೃತ್ತಿಗೆ | ವಾಸವ ನಸುನಗೆ ನಗುತ ||೧೭||

ಕರೆದು ಕುಬೇರನ¶ನೀನೀಗವೆ ಪೋಗಿ | ಯರಮಗ ನೆನೆದಕೃತ್ಯವನು ||
ಪರಿಹರಿಸೆಂದಾಕ್ಷಣದೊಳು ಕಳುಹಲು | ಧರಣೀತಳಕಿಳಿತಂದು ||೧೮||

ಭರದಿಂದ ಬಡಗಣ ದಿಗಧೀಶನಾನೃಪ | ವರನು ನಡೆವ [11]ಸಸಿಸದೊಳು ||
ಮರುತಪೂರ್ವದೊಳೊಂದು ಸಮವಸರಣವನು | ಕರಮೆಸೆವಂದದಿ ರಚಿಸಿ ||೧೯||

ಆ ಮಧ್ಯದೊಳು ಜಿನಪಮಲವಾಹನರ ಮ | ತ್ತಾ ಮೋಹದ ಜನಕನನು ||
ಆ ಮೋಹಿಯುಪರಾಜಿತನು ಕಾಣ್ಬಂದದಿ | §ಪ್ರೇಮದಿನೊಡ್ಡಿತೋರಿದನು ||೨೦||

ಪಾಠಾಂತರ.-* ಸುಪರ್ವಾಧಿನಾಥನಾಬಳಗೆ (ಘ ಙ) † ನುಸುರಲು ¶ ನೀನೀಗಲೆ (ಗ) § ಪ್ರೇಮದಿಯೊಡ್ಡಿ (ಗ ಙ)

ಟಿಪ್ಪಣಿ.—1 ಸರಪಳಿ. 2 ವೇಕ್ಷ್ಯ. 3 ಇಂದ್ರ, 4 ಅಷ್ಟದಿಕ್ಕುಗಳನ್ನು 5 ಕುಂಬಿತು 6 ಹಂಬಲಿಸಿದ 7 ಬೆದಗಡೆ. 8 ಮೇರುಪರ್ವತ. 9 ತುಂಬಲು ಆದವಾ ಮುಚ್ಚಲು. 10 ಸ್ವರ್ಗ ದೊಳು. 11 ನೇರದಲ್ಲಿ.

ಆಯಿಂದ್ರಜಾಲದ ಸಮಪಸರಣದೊಳ | ಗಾಯತಿ*ವಲ್ಲಭರಿರಲು ||
ಮಾಯವಿದೆಂದರಿಯದೆ ನಿಜಮೆಂದು ಕ | ಟ್ಟಾಯತದಿಂದಭಿನಮಿಸಿ ||೨೧||

ತಂದೆಯ ಮೆಚ್ಚಿಗವ ಕಂಡೆನು ನನ್ನ ವ್ರತಸಂದಿ | ತೆಂದಪರಾಜಿತನೃಪತಿ ||
ಇಂದುವ ಕಂ[1]ಡಿಂದೀವರದಂತಾ | ನಂದವಡೆದು ತಿರುಗಿದನು ||೨೨||

ಬಂದು ಹೊಳಲ ಹೊಕ್ಕು ಹಲಕಾಲಪತ್ಯಾ | ನಂದದಿ ನೆಲನ ಪಾಲಸುತ ||
ಒಂದಾನೊಂದು ದಿನದಿ ಚೈತ್ರಮಾಸದೊ | ಳಂದವಡೆವ ವನಕೆಯ್ದಿ ||೨೩||

ತಂದೆ ಮಾಡಿಸಿದಪರಂಜಿಯು ಬಸದಿಯು | ನಂದನದೊಳಗಿರೆ ಕಂಡು ||
ಸಂದ ಬಕುತಿಯೊಳಲ್ಲಿರ್ದಭವಂಗಳ | ಮಾದಿಸಿದನು ಭೂವರನು ||೨೪||

ಜಿನರಿಗೆರಗಿ ಜಿನಗೃಹಮಣಿಮಂಟಪ | ಕನುರಾಗದಿಂ ಬಂದು ನಿಲಲು ||
ಅನಿತರೊ[2]ಳನತಿಗಳಪೊಲು ಚಾರಣ | ಮುನಿಗಳೀರ್ವರು ಸಭದಿಂದ ||೨೫||

ಧರಣಿಗಿಳಿದು ಬಂದಾ ಪೊಸ್ನ ಬಸದಿಯ | ಸುರುಮುದದಿಂ ಬಲವಂದು ||
ಸ್ಮರಮರ್ದನನ ವಂದಿಸಿ ಪೊರಮಡಲಾ | ವರಮಣಿಮಯಮಂಟಪಕೆ ||೨೬||

ವಿನಮಿತವೌಳಿ[3]ವಿಶ್ವಂಭರೇಶ್ವರನಾ | ಮುನಿಯುಗಕನ್ನತಾಸನವ ||
ಅನುರಾಗದಿಂ ತಂದಿರಿಸಿ ಕುಳ್ಳಿರಿಸಿದ | ನನುಪಮಭಕ್ತಿಯೊಳೊಸೆದು ||೨೭||

ಚಿತ್ತಶುದ್ಧಿಯೊಳಭಿವಂದಿಸಿದಾ [4]ಭೂ | ಪೋತ್ತಂಸಗಾ ಮುನಿವರರು ||
ಉತ್ತಮಮಪ್ಪ ಧರ್ಮಾಧರ್ಮದಿರವನು | ವಿಸ್ತರಮಾಗಿ ಪೇಳಿದರು ||೨೮||

ವಿಲಸದ್ಧರ್ಮನಿರೂಪವ ಕೇಳ್ದಾ | [5]ತುಳಿಲಾಳಾ ಮುನಿಯುಗಕೆ ||
ಜಲಜಾತೋಪಮ ಕರಯುಗಲವ ಮುಗಿ | ದೆಳಸಿ ಕೇಳಿದನಿಂತೆಂದು ||೨೯||

ಎಲೆ ಮುನಿಯುಗಲವೆ ನಿಮ್ಮ ಮೇಲತಿಮೋಹ | ನೆಲೆಗೊಂಡಿದೆ †ರವಿಗಂಡ ||
ನಳಿನದಂದದಿ ನನಗೇನುಕಾರಣಮೆಂ | ದಿಳೆಯಾಧಿಪತಿ ಕೇಳಿದನು ||೩೦||

ಎನಲಾ §ಜಾರಣಯುಗಲದೊಳಗೆ ಮುಖ್ಯ | ಮುನಿ ಮರುಕದಿ ಬಾಯ್ದೆರೆದು ||
ಜನಪತಿ ಕೇಳು ನಿನ್ನಯ ನಮ್ಮಯ ಭವ | ದನುವನು ಭಾವಶುದ್ಧಿಯೊಳು ||೩೧||

ಭೂವರ ಕೇಳ್ಪೂರ್ವವಿದೇಹದ ಪುಷ್ಕ | ಳಾವತಿಯೆಂಬ ವಿಷಯದ ||
ಭೂವಿಶ್ರುತಪುಂಡರೀಕವೆಸರ ಪುರ | ದಾ ವಾಸವದಿಕ್ಕಿಸೊಳು ||೩೨||

ಪಾಠಾಂತರ.—*ಪುಂಗವ † ಹೊತ್ತಕಂಡ (ಜ) § ಚಾರಣಮುನಿಯುಗಲದೊಳಗ್ರ

ಟಿಪ್ಪಣಿ.-1 ನ್ನೆದಿಲೆ. 2 ಸೂರ್ಯಚಂದ್ರ. 3 ಭೂಮಿಗೊಡೆಯ. 4 ರಾಜಶ್ರೇಷ್ಠ. 5 ವೀರಭಟ

[1]ಅತಕ*ನೃಪವರನಾಡುಂಬೊಲನೆಂ | ಬಂತೊಂದು ಕಾನನಮಿಹುದು ||
ಅಂತದರೊಳು ವಿಂಧ್ಯಕನೆಂಬ ವನಚರ | ಕಾಂತ ಸಂತಸಮಿರುತಿಹನು ||೩೩||

ಕಾಲಭೈರವನೊಂದುಗಾತ್ರಕಾರವ | †ಸೋಲಿಸಿ[2]ಬಿದಿಯುಕ್ಕಿನಿಂಚ ||
[3]ಚೀಲಣಿಸಿದ ಚಿತ್ರವೆಂಬಂತೆ ಫಿಲ್ಲನಾ | [4]ಭೀಳಾಕಾರವೊಪ್ಪಿದುದು ||೩೪||

[5]ಶೂಲಿಯಿರಲೆಯು ಸುಧಾಂಶುವ ಪೊಲನ ಪಾ | ಕಾಳಯೇರಿದ ಕೇಸರಿಯ ||
ಕಾಲನ ಹೊತ್ತ ಕೋಣನ ಬೇಂಟೆಗಾ ಜೇಡ | ನಾಳೋಚನೆ§ಮಾಡುತಿರಲು ||

ಆ ಗಂಡುಗಲಿ ವಿಂಧ್ಯಕನ ತೋಳಬಾಳನು | ರಾಗದಿ ಕೈವಿಡಿದಿಹಳು ||
ವಾಗುರೆಯೆಂಬಬೇಡತಿ ಕೃಷ್ಣಾಹಿಕಾ | ಲಾಗರುವನು §ಹಿಡಿದಂತೆ ||೩೬||

ಇಂತಿರುತೊಂದು ಪಗಲು ತದ್ವನಚರ | ಕಾಂತನು ಮೃಗ‡ಬೇಂಟೆಗೆನುತ ||
ಸಂತಸದಿ ಪೊರಮಟ್ಟನಿರದೆ ನಿಜ | ಕಾಂತೆ ÷ವಾಗುರೆ ಸಹಮಾಗಿ ||೩೭||

ಬಡಿ ಬಲೆ ದಡಿ ಕಾಲ್ಕಣ್ಣಿ .·.ಯುರುಳು ಪಾಡಿ | ಸಿಡಿ ಸೆಳೆ ಗಾಣ ಬೆಳ್ಳಾರ ||
ತಡಿಕೆ ದೀಪದ ಬಗಮೃಗಸಂತತಿಗೂಡಿ | ನಡೆತಂದನಾ ವನಚರನು ||೩೮||

ಕಟ್ಟಿದ [6]ಹಾಸ ಬಟ್ಟೊಡೆ[7]ಕೈರವೇಂದ್ರನ | ಹೊಟ್ಟೆಯೇಣನ ಕೊಲ್ವೆನೆಂಬ ||
ಕಟ್ಟುಗ್ಗರದ [8]ಚಾಯಿಲದ [9]ಬಂಗುಳಿಗಳ | ತಟ್ಟು ನಡೆದು ಬಂದುವಾಗ ||೩೯||

ದಂಡವ ಬಿಸುಟು ಕೋದಂಡವ ನಿರಿದಾಂತ | ದಂಡಧರನು ಬಹುರೂಪ ||
ಕೊಂಡೈದುವಂತೆ ಪಲವ್ರ ಬೇಡರನೊತ್ತಾ | ಗೊಂಡೈದಿದ[10]ರೊಗ್ಗಿನಲಿ ||೪೦||

ಈ ರೀತಿಯಿಂದ ನಡೆದುಬಂದು ಬಲೆ ಬೆ | ಳ್ಳಾರವ $ಬೀಸಿಬಿಲ್ಲಾಳ ||
ಕಾರಿರುಳೊಡ್ಡ ¶ನಿಲಿಸುವಂತೆ ನಿಲಿಸಿದ | [11]ನೋರಣ..ದಿಂದೊಂದೆಡೆಯೊಳು||೪೧||

ಸಾಹಿನ ಬಿಲ್ಲಾಳುಗಳಾ‡ಜಾಖುಲ | [12]ವ್ಯೂಹಮನತಿಜೋಕೆಯೊಳು ||
+ಸೋಹಿಸಿಕೊಂಡುಬಂದರು [13]ಗರಳದ ಗಾಳಿ | [14]ಮೋಹರಿಸಿದ ಮಾಳ್ಕೆಯೊಳು||

ಪಾಠಾಂತರ.-*ರಾಜೇಂದ್ರ † ಪೊಲ್ವಿನಂ (ಕ) ಪೋಲಿಸಿ (ಜ) § ಮಾಡುತಿಹನು (ಖ) § ಹಿಡಿನಂತೆ (ಜ್ಞ) ‡ ಬೇಂಟೆಗೆಂದು (ಜ್ಞ) ÷ ವಾಗುರೆಯೊಡಗೂಡಿ (ಫ) .·. ಯುರುಳುಬಲೆ (ಖ) ಯುರುಳುಪಾಡಿಸಿಡಿ (ಫ) $ ಬಿಸುಟುಬೆಳ್ಳಾರ (ಕ) ¶ ನಿಲಿಸಿದಂತೆ (ಜ) .. ದಿಂದೊಡ್ಡಿನೊಳು ‡ ಜಾತಿ + ಸೋಹಿಸಿಕೊಂಡು

ಟಿಪ್ಪಣಿ.-1 ಯಮ. 2 ಬ್ರಹ್ಮ. 3 ನರ್ಮಸಿದ. 4 ಭಯಂಕರರೂಪ. 5 ಶಿವನಹುಲ್ಲೆ. 6 ಪಾಶ-ಹಗ್ಗ. 7 ಚಂದ್ರ. 8 ನಾಯಿಯ. 9 ಸಮೂಹಗಳ. 10 ಗುಂಪಿನಲ್ಲಿ. 11 ಸಾಲಿನಿಂದ 12 ಸಮೂಹ. 13 ವಿಷದ. 14 ಮುತ್ತಿದ.

ಕರಿಮರಿ ಶರಭ [1]ಕೇಸರಿ [2]ಖಡ್ಗಿ ಕಾಡೆಮ್ಮೆ | ಕರಡಿ ಕಡವೆ [3]ಚಿತ್ರಕಾಯ ||
ಹರಿ ಹುಲ್ಲೆ ಸಾರಗ ಮೊದಲಾದ ಮಿಗಗಳಂ | ದಿರದೊಳಗಾಯ್ತಾ ಬಲೆಗೆ ||೪೩||

ಆ ಬಲೆ ಬೆಳ್ಳಾರಕೊಳಗಾದ ಮಿಗಗಳ | ನಾ ಬೇಂಟೆಗಾರರು ಕಂಡು ||
ಆ ಬಾಣಗಳೆಲ್ಲ ತೀರ್ವನ್ನ ಬರನೆಚ್ಚ | ರಾ ಬಳಿಯಿಳೆ ಹೇಸುವಂತೆ ||೪೪||

ಕೆಡಹು ಕೆಡಹು ಕೊಲ್ಲು ಕೊಲ್ಲೆಸು ಇರಿಯಿರಿ | ಇಡು ಇಡು ಬಿಡು ಬಿಡು ನಾಯ||
ಬಡಿ ಬಡಿ ಹೊಡೆ ಹೊಡೆಯೆಂಬಬ್ಬರ ಬಲು | ನುಡಿ[4]ಮುಗ್ಗೈ *ತೆಲ್ಲಿನೋಡಿದರು ||

ಬಲೆಯ ಬಳಸಿ ಬಂದಾ ವನಚರಸಂ | ಕುಲದೊಡ್ಡಣವನೊಡಹಾಯ್ದು ||
ಕೆಲಬಲದೆಸುಗೆಯನೆಣಿಸದೆ ಪಾರಿದ | ಪಲಘುಭೀತಿಯೊಳೆರಲೆಗಳು ||೪೬||

†ನೀಡುಂಗೊರಲು ನಿಲುಕುಗಾಲಾಡಿದೆವೆ | ಗೂಡು ವಿರಾಜಿಸುತಿರಲು ||
ನೋಡದಮುನ್ನ ನಾಲ್ಕೈದಾರೇಳೆಂಟು | ಜೋಡಿಸಿ §ನೆಗೆಯೆಯೋಣಗಳು ||೪೭||

ಬಲೆಯ ಹರಿದು ಬಿಟ್ಟು ಬೆಳ್ಳಾರವ ಕಿಳ್ತು | [5]ಪಲಸಿನ [6]ತೋಹಿನಾಳುಗಳ ||
.·.ತಲೆಮೆಟ್ಟಿಯಚ್ಚಂಬಿಗೆ ಮುನ್ನ ನೆಗೆದವ್ರ | ಸಲೆ ಛೀತಿಪಡೆದು ಹುಲ್ಲೆಗಳು ||೪೮||

ಮರುತಗೆ ಮುಂಡು ಮನವ ಹಿಂಜುವಾಳ್ವ ಬೆ | ಬೆಳ್ಳಿರಲೆಗೆ ಬಡೆ $ನಿಮುಷದೊಳು||
ಹರಿದಡ್ಡವಾಯ್ದು ಹಿಡಿದು ¶ಕೊಂಡವಾಸನ | ಚರರ ಕೈಯ ಚಾಯಿಲಗಳು ||೪೯||

ಕೈವಶವಾದ ಖಡ್ಗಿಯನಸಲೊಲ್ಲದೆ | ‡ಸವ್ವೆರಗಾಗಿ ಮೈಮರೆದು ||
ಕೈವಾರಿದೆಯನುತಾ ಬೇಟೆಬೈಗಳ | ಪೈನುತಿದ್ದರು ಕೆಲದಾಗ ||೫೦||

ಎಚ್ಚು ಕೆಲಪನೆಡಪರಿಯದೆ ತಲೆಯೆಲು | ನುಚ್ಚಾಗುವಂತೆ ..ಜೊಣ್ಣೆಯೊಳು ||
ಚಚ್ಚಿ ಕೆಲವು ಮಿಗಗಳ ಕೊಂದರಾ ಬನ | ವೊಕ್ಕತಬಯಲಾಗುವಂತೆ ||೫೧||

+ಬಿಲ್ಲಿಂದ ಬೀಹಿನ ಹಗರು ಮುರಿವಂತೆ | ಕಲ್ಲಿಂದ ಕಾಲ್ತುಂಡಿಸುವೊಲು ||
ಬಲ್ಲಿತಪ್ಪಾ ಕೊಲೆಯಿಂ ಕೊಂದರಾ ಮಿಗ | ವಲ್ಲಿಂ ಸಿಲ್ಲವೆಂಬಂತೆ ||೫೨|| (ಜ)

ಪಾಠಾಂತರ. .. *ತತ್ತ (ಏ) † ನೀಡುಗೊರಲುನಿಲುಕುಂಗಾಲುಡಿವೆದೆ (ಗ) § ನೆಗೆದ ಮೇಂಗಳು (ಏ ಘ ಜ) .·. ತಲೆಯುಮೆಟ್ಟಿಚ್ಚಂಬಿಗೆ (ಏ ಘ) $ ನಿಮಿಸ ¶ ಕೊಂದವು ‡ ಸಯ್ವೆರಗಾಗಿ .. ಢಾಳೆಯೊಳು (ಏ) ಢಾಣೆಯೊಳು (ಘ ಜ) + ೫೨ನೆಯ ಪದ್ಯವು (ಚ) ಪ್ರತಿಯಲ್ಲಿಲ್ಲ.

ಟಿಪ್ಪಣಿ.— 1 ಸಿಂಹ. 2 ಖಡ್ಗಮೃಗ. 3 ಹುಲಿ. 4 ಉಬ್ಬಿತು. 5 ದಣಪೆ. 6 ಗೊಂಪಿನ.

*ಜೋಳ[1]ಯಂಬಿನ ಗಾಯದ ಬಾಯ್ದೆರೆಯಿಂದ | ಬೀಳುತೆ [2]ಗೋಣ್ಮರಿಗೊಂಡು ||
ಬೀಳುಗರೆವ ಹಸುಳೆಯ ನೆಕ್ಕುವ ಹುಲ್ಲೆ | [3]ಯೋಳಿಯಿಂದ†ವವರೊಳಗೆ ||೫೩||
ಕರುಪಿನ ಕಟವಾಯನಾ ನೊರೆವಾಲ್ಗಳ | ಕರೆವ ಕಾಡೆಮ್ಮೆಯ ಮೊಲೆಯ ||.
ಉರುಗುಳಿ ವಿಂಧ್ಯಕನೊಂದೇಯಂಬಿನಿಂ | ಹರಿಯೆಚ್ಚು ಕೆಡಹಿದನಾಗ ||೫೪||
ಈತೆರದಿಂ ಜೀಂಟಿಗೊಳಗಾದ ಬಹುಪಧ | ಜಾತಿಯೆಲ್ಲವ ಸಲೆ ಕೊಂದು ||
ಮಾತೇಸು ಪುನ ಜೇಸದೆ ಮುಂದಕ್ಕೈದಿದ | ನಾತುರದಿಂ ವಿಂಧ್ಯಕನು ||೫೫||
[4]ಎಕ್ಕಲಗಳು ತಮ್ಮ §ತೆಗೆದ ಜಾಯಿಲಗಳ | ನಿಕ್ಕಡಿಪಾಡಿ ¶ಹಾಯ್ದುದನು ||
+ತಕ್ಕಿನ ಬೀಡರ ಕೆಡಹಿದುದನು ಕಂ | ಡಿಕ್ಕಿದನಾ ಪನಚರನು ||೫೬||
[5]ಅಡಲ ಮೊಕ್ಕಡಗಿಯಾಳ್ಗಳ ಕೊಂದು ತಾನೇರು | ವಡೆದ ಹೆಬ್ಬುಲಿಗಿದಿರಾಗಿ ||
ನಡೆದು ಲೀಲಾಮಾತ್ರದಿ ಕೊಂದು ಕೆಡಹಿದ | ಕಡುಗಲಿತನದಿ ವಿಂಧ್ಯಕನು ||೫೭||
ಸುಂಡಿಲು ಖಂಡಿಸುವಂತೆಸಲೊಂದು [6]ಸೇ | ತಂಡನಿಳೆಗೆ §ಕೊಂಬೂರಿ ||
[7]ಮಂಟಿಸಲೊಪ್ಪಿದುದಾದಿಪರಾಯ ಭಟ | .. ಮುಂಡಲಕಿಟ್ಟಾಸ್ಯದಂತೆ ||೫೮||
ಆರ್ಭಟೆಯಿಂದಿದಿರಾದ ಸಿಂಹವ ಕಂಡು | [8]ಕೂರಸಿಯಿಂ ನೆರೆ ತಿವಿದ ||
ವೀರವಿಂಧ್ಯಕನೊಪ್ಪಿದನಾ ಶೂದ್ರಕ | ವೀರನುಪಾಧ್ಯಾಯನಂತೆ ||೫೯||
ಕರಿಯ ಬೇಂಟೆಯನು ಕೇಸರಿಯಿಂದಾ ಕೇ | ಸರಿಯ ಬೇಂಟೆಯ ಶರಭಗಳಿಂ ||
ಶರಭನ ಬೇಂಟೆಯ ಭೇರುಂಡನಿಂದಾಡು | ತುರುಲೀಲೆಯಿಂದೆಯ್ದಿದನು ||೬೦||
ಆ ವಿಂಧ್ಯಕನಾಡುವ ಬೇಂಟೆಯಾರ್ಭಟೆ | ಗಾ ಪನಕನಿ ಕೆಲವೋಡಿ ||
ಭೂವಲಯದ ಪುರೆ ಹೊಗಲು ದಿಗ್ಗಜವೆಂ | ದೋಪದಾಡುವುದು ಭೂತಳವು ||
ತಾನೇರಿದ ಗಂಡೆರಲೆಯನಾ ಜೇಷ | ನಾನದೆ ಕೊಲ್ವನೆಂದಂಜಿ ||
ಮಾನಪಡಗಿಯೋಡಾಟಪನಾ ಪಪ | ‡ಮಾನಕಲಿತನದಿಂದ ||೬೨||
ಅಂಬು ತಾಗಿದ ಕೇಸರಿ ಹರಿಯಲ್ಕಾ | ನಂಬುಗೆವಿಡಿದು ವಿಂಧ್ಯಕನು ||
ಬೆಂಬಳಿಯೊಳ- ಬರುತಿರೆ ಕಟ್ಟಿದಿರೊಳ | ಗಿಂಬಾದ§ಶೋಕಪೂಲದೊಳು ||೬೩||

ಪಾಠಾಂತರಗಳು.—* ಬಾಳೆಯುಂಬಿನ ಬಾಯ್ದೆರೆಯಂ | ಬೀಳುವಗೋಣ್ಮರಿದು (ಕ) † ನವರೊಡನೆ [ಕ] § ತಡೆಯ (ಜ) ¶ ಹುಯ್ದುದನು [ಘ ಜ] + ಟಕ್ಕಿನ § ಕೋಡನೂರಿ ... ಮುಂಡಲಕಾಸ್ಯವಿಟ್ಟಂತೆ ‡ ಮಾನನಂದಿಂದಕಲಿತನು § ವೃಕ್ಷಮೂಲದೊಳು

ಟಿಪ್ಪಣಿ.— 1 ಧನುಸ್ಸು. 2 ಕತ್ತು. 3 ಸಾಲು 4 ಕಾಡಹಂದಿ. 5 ಕಾಡು. 6 ಅಲಂಕರಿಸಲು. 7 ಅನೆ. 8 ತೀಕ್ಷ್ಣವಾದಕತ್ತಿ.

ಅಮಲಬುದ್ಧಿಗಳು ವಿಮಲಬುದ್ಧಿಗಳೆಂಬ | ವಿಮಲಗುಣಾಲಂಕೃತರು ||
ಕ್ಷಮೆ ದಮೆಗಳು ಕೂಡಿದಂತೀರ್ವರು ಸಂ | ಯಮಿಗಳಿರಲು ಕಂಡನಾಗ ||೬೪||

[1]ಶಶಿಸ್ನೇಸರು ತಮ್ಮ ಶೀತೋಷ್ಣವ ಬಿಟ್ಟು | ಪಸುಧೆಗಿಳಿದು ಬಂದಂತೆ ||
ಅಸಮಾನದೋಷಾಪಹರಣರಿರಲುಕಂ | ಡುಸುರಿದನಪಸಿಂತೆಂದು ||೬೫||

ಎಂದು ನಾನರಿಯದ ಮನುಜಮೃಗವನಾ | ನಿಂದು ಕಂಡೆನು ಪೊಸತಾಗಿ ||
ಎಂದಾ ಭಿಲ್ಲನಾ ಬಿಲ್ಗೆ ಬಾಣವನಿಟ್ಟು | ನಿಂದನವರನೆಸಲೆಂದು ||೬೬||

ಎಲೆ ವಾಗುರೆ ನೋಡು ನೋಡೆನ್ನೀ ಕೈ | ಜಳಕವನಿನಿಸೆಯೆಡದೆ ||
ಕಳುಪದೊಂದೇ ಶರದಿಂ ನೀ ಮೃಗಗಳ | ನಿಳೆಗುರುಳ್ವಂದದಿ*ನೆಸುವೆ ||೬೭||

ಎಂದುಮೊಬ್ಬರಿದಂಬನೆಸುವ ಸಮಯದೊಳು | ಬಂದು ವಾಗುರೆ ಬಿಲ್ಲಿನಿಂದ ||
ಮುಂದಕೆ ಪರಿಪಂಬ†ನುಗಿದು ಬೇಡನೊಳಿಂ | ತೆಂದಳು ನಿಗೆ ಭೀತಿಯೊಳು ||೬೮||

ಇವರು ಮನುಜಮೃಗವಲ್ಲ ವಿಂಧ್ಯಕ ಕೇ | ಳವರು ಮಹಾನುಭಾವಿಗಳು ||
ಇವರನೆಸುವುವೆಮಗನುಚಿತವೆಂದಾ | ಯುವತಿ ವಾಗುರೆಯುಸುರಿದಳು ||೬೯||

ಆ ನುಡಿಗೇಳಿ §ವಿಂಧ್ಯಕನೆಂದನಿಂತಿವು | ಮಾನವಮೃಗವಲ್ಲೆಂಬುದನು ||
§ನೀನಾವತೆರದಿನರಿದೆಯೆಂದೆನಲಾ | ಮಾನಿನಿ ನುಡಿದಳಿಂತೆಂದು ||೭೦||

[2]ಎಕ್ಕಟಿಯೊಳು ಪೋಗಿ ಬೇಂಟೆಯಾಡುತ ನೀನು | ಹೊಕ್ಕಲ್ಲಿ ಹೊಕ್ಕೆಚ್ಚು ಕೆಡಹಿ ||
[3]ಹಿಕ್ಕಿದ ಕೇಸರಿಯೊಡಲೊಳು ಸಿಕ್ಕಿರ್ದ | ಸೊಕ್ಕಾನೆದಲೆಯ ಮುತ್ತ್ತುಗಳ ||೭೧||

ಮಾನ ಹಿಡಿದು §ಮುಂಬುಲವಕ್ಕಿ ಮುಗಿಲೆಡೆ | ಗಾನದೆ ಹಾರಲಾತದನು ||
ನೀನಸಲವನಿಗೆ ಬೀಳ್ದ ಮುಗಿಲ ಮುತ್ತ್ತು | ಮಾನ ಬಸಿರ ಮುತ್ತ್ತುಗಳನು ||೭೨||

ಮಿಕ್ಕಪಾಪನ ಪೆಡೆಯಿಂ ತಂದ ಮಣಿಗಳ | ನೆಕ್ಕುಲಗಳ ದಾಪೆಯಿಂದ ||
ಸಿಕ್ಕಿದ ಮಣಿಮುತ್ತೆಲ್ಲವ ನಾ ನಗ | ರಕ್ಕೆ ಮಾರಲುಕೊಂಡುಪೋಗಿ ||೭೩||

ವುರಕಗ್ಗಳನು ವೃಷಭಸೇನನೆಂಬೋರ್ವ | ಹರದನ ಮನೆಗಾನುಪೋಗಿ ||
ಹರಲುಮಾರುವ ವೇಳೆಯೊಳಾಮನೆಯೊಳೀ | ಹಿರಿಯನಿರಲು ಕಂಡೆನಾನು ||೭೪||

ಆಶೆಬ್ಬಿ ವೃಷಭದತ್ತನು ಬಳಿಕವರ್ಗುನ್ನ | ತಾಸನವನಿತ್ತು ಕಾಲ್ತೊಳೆದು ||
ಸೇಸೆ ಸುಗಂಧ ಕುಸುಮ ನವಫಲಗಳಿಂ | ದೋಸರಿಸದೆ ಪೂಜಿಸಿದನು ||೭೫||

ಪಾಠಾಂತರ.— * ನೆಸೆವೆ [ಕ] † ನುಳಿದು [ಖ] § ವಿಂಧ್ಯಕನಂತೆಂದನು [ಖ] § ನೀನೇತರದಿ [ಕ ಘ ಗ] ¤ ಮಿಂಗಲಿವಕ್ಕಿ [ಖ]

ಟಿಪ್ಪಣಿ.— 1 ಚಂದ್ರಸೂರ್ಯ. 2 ಏಕಾಂಗಿ. 3 ಚೀರೆಮಾಡಿದ.

ಬಳಿಕಾ ಪೊಳಲಬಲ್ಲಿದರೆಲ್ಲರಿವರಿಪ್ಪ | ನಿಳಯಕಿರದೆ ತಂತಮ್ಮ ||
ಬಳಗಸಹಿತ ಬಂದು ಭಕುತಿಯಿಂದವೆ ಕಾಲ| ತೊಳೆದು ಪೂಜಿಸಿ ಪೊಡಮಟ್ಟು||೭೬||

ಮತ್ತೇನನೆಂದರಿಯೆನು ಕೊಡಿಕೊಡಿ ಯೆಂ | ದೊತ್ತಿ ಜೇಡುದೊಡಾಗಲವರು ||
ಇತ್ತೆವಿವನು ಕೈಕೊಳ್ಳಿಯೆನುತ[1] ಪೀಲಿ | ಯಿತ್ತರವರತಲೆಯೊಳಗೆ ||೭೭||

ಇವರನವರಿಂದೆಲ್ಲಕೆ ವೆಗ್ಗಳಕೆಂಬ | ವಿವರವರಿದೆನದರಿಂದ ||
ಇವರನೆಚ್ಚೊಡೆ ಪಾತಕವೆಂದಾ ವ್ಯಾಧ | ಯುವತಿ[2]ಯೊಳ್ನುಡಿಯಾಡಿದಳು||೭೮||

ಆ ನುಡಿಗೇಳಿ ಬೆದರಿ ಬೇಡನಾಯಕ | ತಾನೆನೆಪಂಬುಬಿಲ್ಲುಗಳ ||
ಆನದೆ ಬಿಸುಟು ವಾಗುರೆಗೂಡಿ ಮುನಿಗಳಿ | ಗಾನಂದದೊಳೆರಗಿದನು ||೭೯||

ಎರಗಿದ ಲುಬ್ಧಕದಂಪತಿಯನು ಕ | ಣ್ದೆರೆದಾಮುನಿಪುಂಗವರು ||
ಮರುಕಮಿಗಿಲು ಧರ್ಮವೃದ್ಧಿಯೆನುತ ಪರ | ದೆರಕದಿ ಮಿಗೆ ಹರಸಿದರು ||೮೦||

ಹರಸಲಂತೆಂದನು ತಮ್ಮನೆನುವೆನೆಂದು | ಸರಲಬಿಲ್ಲಿಗೆ ತೊಟ್ಟನನು ||
ಹರಿದೆಯ್ದಿ ಹರಣವಕಾಯ್ದೊಸತಿಯನು | ನೆರಿಗಂಡು ಹರಸಿದರಿವರು ||೮೧||

ಇವರಿಂದಾವವರತ್ಯುತ್ತಮರೆಂದು | ಸಂಜನಯದಿಂ ಕೊಂಡಾಡಿ ||
ತವಕದಿಂದಾ ಕಾಡಹೂವ ತಿರಿದುತಂ | ದನರಡಿಗಳ ಪೂಜಿಸಿದನು ||೮೨||

ಹರುಷದಿ ಪೂಜಿಸಿ ಬಳಿಕಿಂತೆಂದನು | ಪುರದೊಳಗಾಸೆಟ್ಟಿಗಳಿಗೆ ||
ವರವನಿತ್ತಿರಿ ಕುಂಡಾವರವನು ನನ | ಗಿರವೆ ಪಾಲಿಸಯೆಂದನವನು ||೮೩||

ಇಂತೆಂದಾಲುಬ್ಧಕನ ಬಿನ್ನಪವಕೇಳಿ | ಕಂತುಮದಾಪಹರಣರು ||
ಪಿಂತಿವನೆಸಗಿದ ದುಷ್ಕರ್ಮಾಂಗ ನಿ | ಸ್ಸಂತಾನನಾಯಿತೆಂದಲದು ||೮೪||

ಲುಬ್ಧಕನಾಯಕ ಕೇಳುನಿನಗೆ ಕಾಲ | ಲಬ್ಧವಶದ ಜೀವವಧೆಯ ||
ಲುಬ್ಧತ್ವಪಹರಿಹಾರವಿತೆನುತ ಬೋ | ಧಾಬ್ಧಿಜಂದ್ರರುನುರುತವೆ ||೮೫||

ಎಲೆಭವ್ಯನೇಳು ಕಳವುಹುಸಿಪಾದರ | ಕೊಲೆಕಾಂಕ್ಷೆಯೆಂದಿವಸುಳಿದು ||
ಹೊಲಸುಕಳ್ಳಿಂಬವಪಿಡಲು ನೀಬಯಸಿದ | ಫಲವು ನಿನಗೆ ದೊರಕುವುದು ||೮೬||

ಈ ನಾವುಕೊಟ್ಟ ವ್ರತಂಗಳನೆಲ್ಲವ | ನೀನಿರದೊಸೆದು ರಕ್ಷಿಸಲು ||
ಭೂನುತಮಪ್ಪ ಮೂಲೋಕದೊಡೆಯತನ | ತಾನಿರದೊದಗುವುದೆನಲು ||೮೭||

ಟಿಪ್ಪಣಿ.— 1 ನವಿಲ್ಗರಿ. 2 ಬಳ್ಳೇನಾತು.

ಅದಱಂತಪ್ಪ ಪರವಕೊಡಜೇಕೆಂ | ದಾಡರದಿಂದಾಬಯದ ||
ಆ ದಿವ್ಯಮುನಿಪುಂಗವರ ಕೋಮಲ ತರ | ಪಾದಮೂಲಕೆ ಮುಗ್ಗಿದನು ||೮೮||

ಅಡಿಗೆರಗಿದ ಪನಜರಗಾವ್ಯತವನು | ಪಡುವಿಲ್ಲದೆ ರಕ್ಷಿಸುತ ||
ನಡಗರದಿಂದಾಸಂಯಮಿಗಳು ಕೊಡ | ಲೊಡನವ ಕೈಕೊಂಡನಾಗ ||೮೯||

ಗಂಡಸಿರದೆ ಯಾಚರಿಸಿದ ಚರಿತವೆ | ಪೆಂಡರಿಗೌಚಿತ್ಯವೆಂದು ||
ತೊಂಡೆವಾಯ್ದೆರೆಯ ವಾಗುರ ಯಾವ್ರತಪ ಕೈ | ಕೊಂಡಳು ಕಡುಭಕುತಿಯೊಳು ||

ವ್ರತವಧರಿಸಿ ಪ್ರತಿಗಳ ಪಾದಯುಗಕವ | ನತರಾಗಿಯವರ ಬೀಳ್ಕೊಂಡು ||
ಸತಿಪತಿಗಳು ತಮ್ಮಾಜೇಡಪಳ್ಳಿಗೆ | ಅತಿಹರುಷದೊಳ್ಪೊದಿದರು ||೯೧||

ಬೀಡಿಗೆಬಂದು ಬೆಲ್ಲಂಬುಗಳನು ಮುರಿ | ದೀಡಾಡು ಹರಿದುಬಲೆಯನು ||
ಕೂಡಣದೀವದ ಖಗಮ್ಮಗವನು ಬಿ | ಟ್ಟೋಡಿಸಿದನು ಭಿಲ್ಲನಂದು ||೯೨||

ಬಡಿಯಬಿಸುಡು ಬಡಿಕೋಲನೊಲೆಗೆಹಾಕಿ | ಸುಡು ಕೀಳುಕಾಲಕಣ್ಣಿಯನು ||
ಕಡಿಖಂಡಮಾಡು ಬೆಳ್ಳಿಬವನೆಂದಾ | ಮಡದಿಗೆ ಬಯದನಾಟದನು ||೯೩||

ನಂಟರಿಷ್ಟರಮನೆ ಹೊಕ್ಕುತಿಂಬುಂಬುದ | ಬೇಂಟೆಯಾಡಿ ಮೃಗತತಿಗೆ ||
ಕಂಟಕವನು ಮಾಳ್ಪುದನೆಲ್ಲವನಂದು | ಗೆಂಟುಮಾಡಿದನಾಬಯದ ||೯೪||

ವರಹನದಾಡೆಯೊಳಗೆ ಮುತ್ತುಘಣಿಸನ | ಶರದೊಳು ಮಣಿಪುಟ್ಟುವಂತೆ ||
ದುರಳವಿಂಧ್ಯಕನ ಹೃದಯದೊಳು ಸಂಯಮ| ಸಿರುತವೆಸಲು ಜನಿಸಿದುದು||೯೫||

ಕೊಲೆಯಿಲ್ಲದೆಡೆಯೊಳು ಕಾರಿಲ್ಲದೆಡೆಯೊಳು | ಹೊಲಸಿಸಿಲ್ಲದೆಡೆಯೊಳು ||
ಎಲುನರತೊವಲಿಲ್ಲದೆಡೆಯೊಳು ಪನಜರ | ನಿಲಯವಮಾಡಿಕೊಂಡಿಹನು ||೯೬||

ಬಿದಿರಕ್ಕಿಯನುತಂದು ಕುಟ್ಟಿಯೋಗರಪಟ್ಟು | ನದಮೂಲಫಲಪತ್ರಗಳನು ||
ಕುದಿಸಿಯೋಗರಮಾಡಿ ಯಾದಂಪತಿಗಳು | ಉದಯದ ಪೋಷಿಸುತಿಹರು ||೯೭||

ಉಪ್ಪುಮೆಣಸ ಹಾಕಲರಿಯದೆ ಪಳುಪಸ | ಸೊಪ್ಪು ಹಸುರುಕಾಯ್ಗಳನು ||
ನಸ್ಪೃಯತಿಂದು ಜೀವವಹೊರೆವುತ್ತಿರ | ಲಸ್ಪಿತಬಡವವರೊಡಲು ||೯೮||

ಪಿಡಿದಸುವ್ರತವನಿನಿಸುಬಡತಾರದೆ | ಯಡಗುಂಬುದನು ಪರಿಪಟ್ಟು ||
ಅಡವಿಯಗೆಂಡೆದಿಂಡುಗಳ ತಿಂದಾಬೇಡ | ನೊಡಲು ಕಟಂಕಟಿಯಾಯ್ತು ||೯೯||

ಕಡುಬಡವಾಗಿ ಕಟ್ಟಿಯಪ್ಪೊಲುತಿರುಗುವ | ದೃಢಶೀಚಿಗಳನು ಕಂಡವನ ||
ಮಡದಿಯಕೂಡಿಂತೆಂದಾಡಿದರವ | ಳೊಡನಾಡುವ ಬೇಡತಿಯರು ||೧೦೦||

ಪಸುರ್ವುಲ್ಲತಿಂದಬೆಳ್ಳಿಗನತಿಂದೊಡೆ ದಿಟ್ಟಿ | ಪಸುರಪ್ಪುದೆಂದು ಕೋಳ್ಮಿಗದ ||
ಪಸಿಯಡಗುಂಬ ಬಲ್ಲಿದಗೀಹಳುವಿನ | ಪಸುರೆಲೆಯನುತಿಂಬುದಾಯೆ ||೧೦೧||

ಎಂದು ನುಡಿದಮಾತುಗೇಳಿವಾಗುರೆ ಇಂ | ತೆಂದಳು ತಾನವರೊಡನೆ ||
ಅದಾವುನಿಗಳ ನಾಕಂಡಕಾರಣ | ದಿಂದೀವಿಧಿಯಾಯಿತೆಮಗೆ ||೧೦೨||

ಅಂಬನೆಸುವ ಕೈಯನು ಮದ್ಯವಾಂಸವ | ತಿಂಬುಂಬುಪಾಯಕಟ್ಟಿದರು ||
ನಂಬಿಸಿಯಾಮುನಿಪತಿಗಳೆನುತ ನೀರ | ತುಂಬಿದಳಾದಿಟ್ಟಿಗಳೊಳು ||೧೦೩||

ಬಿಲ್ಲಹಿಡಿಯ ಬೇಂಟೆಯನಾಡಮಿಗನನು | ಕೊಲ್ಲನಡಗತಿಂಬುದನು ||
ಒಲ್ಲನಂತದರಿಂದಿಂತಾಯಿತೆಂಬಳ | ಸೊಲ್ಲಿಗಿಂತಪರುಸುರಿದರು ||೧೦೪||

ತಾನಡಗುಂಬುದನೊಲ್ಲದೊಡಾಗಲಿ | ನೀನೆಮ್ಮ ಮನೆಗೆಯ್ತಂದು ||
ನಾನುರಾಗದಿ ತಿಂದುಂಡುಹೋಗೆನಲಾ | ಮಾನಿಸಿನುಡಿದಳಿಂದು ||೧೦೫||

ಮುನ್ನ ಮುಂದರಿಯದೆ ಕೊಂಡಸುಪ್ರತವನು | ಇನ್ನು ಬಟ್ಟೊಡೆ ದೋಷವಹುದು ||
ಇನ್ನೇಕವನಾಜರಿಸಿದಾಚಾರವೆ | ಎನ್ನಾಜ್ಞಾಪಿಸ್ಥಯದಿ ||೧೦೬||

ಎನುತವರೊಡನೆ ಮಾತಾಡಿವಾಗುರೆ ತನ್ನ | ಇನಿಯನಡೆದ ನಡೆಗಳಿಯ ||
ಮನಮುಟ್ಟಿನಡೆದಡವಿಯ ಕಾಯಿಪಣ್ಗಳ | ನನುರಾಗದಿಂ ತಿನ್ನುತಿಹಳು ||೧೦೭||

ಈವಿಧದಾಚಾರದೊಳಾಚರಿಸುತ | ಆವಿಂಧ್ಯಕನೊಂದುಪಗಲು ||
ತೀವಿದಹಸುವಿಂದ ಬರುತಿರಲೊಂದಿ | ಗ್ರಾಮಸಮೀಪದಿರೆ ಕಂಡು ||೧೦೮||

ಅಲ್ಲಿತೀವಿದ ನವಮಧುರಫಲಂಗಳ | ನೆಲ್ಲವಸವಿನೆಂದದನು ||
ಮೆಲ್ಲನೆಹತ್ತಿತಿರಿನ ಹಣ್ಣುಕೊಟ್ಟರ | ದಲ್ಲಿಬೀಳ್ಪುದು ಕೈಜಳುಪಿ ||೧೦೯||

ಪೋಳಲೊಳಗೆ ಮುನ್ನಕೊಯ್ದ ಮಧುರಫಲ | ಬೀಳಲದನು ತಾನುತೆಗೆವ ||
ವೇಳೆಯೊಳಾಕೈಯನು ಕಚ್ಚಿದುದೊಂದು | ಕಾಳೋರಗನುಕೋಪದೊಳು ||೧೧೦||

ಹಾವಿನಹಲ್ಲ ಹಾಲಾಹಲದಿಂದಾ | ಭೂವಲಯದೊಳು ಬಿದ್ದುರುಳೆ ||
ಆ ಏಂಧ್ಯಕನೆಂಬವಿಪಿನಚರಂಗದು | ನಾವಾಡುದು ನಿಮುಷದೊಳು ||೧೧೧||

ಪತಿಯಸಾವನು ಕಾಣ್ಬದನುಚಿತವೆಂದಾ | ಸತಿವಾಗುರೆ ಮುರಸೇರಿ ||
ಅತಿವೇಗದಿಂದಕೋಟರದೊಳು ಬೆರಲಿಟ್ಟು | ಹತಮಾದಳಹಿಮುಖದಿಂದ ||೧೧೨||

ಸತ್ಯಾವಿಂಧ್ಯಕನಾನಗರಿಯ ವೈ | ಶ್ಯೋತ್ತಮನೃಪದತ್ತಂಗೆ ||
ಮತ್ತವನಬಲೆ ಪದ್ಮಶ್ರೀಗುದಯಿಸಿ | ಚಿತ್ತಜಸಂತೊಪ್ಪಿದನು ||೧೧೩||

ಸುತಗಿಭ್ಯಕೇತುವೆಸರನಿಟ್ಟಾ ವೈಶ್ಯ | ಪತಿಕಡುಸಂತಸದಿಂದ ||
ಅತಿಮಮತೆಯೊಳು ಜಯಂತನನಾಸುರ | ಪತಿಸಾಕುವೊಲುಸಾಕಿದನು ||೧೧೪||
ಆ ವಸಚರಿಯಳಿದಾವೊಳಲೊಳಗೋರ್ವ | ಧೀವರನಾಯಕಗೊಗೆದು ||
ಧೀವರಸೆಸರಾಂತುತತ್ಕುಲದವರ್ಗೆ ತಾ | ನೇವರನಾಗಿರುತಿಹನು ||೧೧೫||
ಆಪಟ್ಟಣದೊಳಳ್ಳ ಗುಣುಗಳೊಳಗೆ ಕ| ಲಾಪರಿಣತೆಸಜ್ಜನತ್ವ ||
ರೂಪುಕ್ಕಮುಮತರಣದೊಳಿವನೆಯೆಂ | ದಾಪೃಥ್ವಿಪೊಗಳುತಮಿಹುದು ||೧೧೬||
ಈತೆರದಿಂದಿಭ್ಯಕೇತು ಭೂತಳದೊಳು | ಖ್ಯಾತಿಯಿಂದಿರಲಾಪುರದ ||
ಭೂತಳಪತಿ ನಾಗದತ್ತಗೆ ಸುದತಿಯ | ಸೂತೆಸುಪ್ಪಯೆಯೆಂಬಳಿಹಳು ||೧೧೭||
ಸುಗುಣೆಗಳಸರೀರ್ವರ ಬಸಿರೊಳಗೋರ್ವ | ಮಗಳು ಸೌಂದರಿಯೆಂದೆಂಬ ||
ಬಗಸೆಗಂಗಳಬಾಲೆಯುದಯಿಸಿ ಬಲ್ಲಿರ | ಬಗೆಯಬಂಧಸಕಿಕ್ಕುವೆಳ ||೧೧೮||
ಪಿಂಯಾಧರೆಯಾ ಸೌಂದರಿಗರಸ ಸ್ವೆ | ಯಂಬರ ಮಂಗಿಮಂಬಪಡಸು ||
ಇಂಬಾಗಿರಜಿಸಿಯುಳಿದನಾತನ್ಯಪಸಿಕು | ರುಂಬಪಬರಿಸಿದನಂದು ||೧೧೯||
ತರುಣಿಯವರಿಯಿಪೆಸೆಂದಾ ನೃಪಸುತ | ರುರು ಮುದದಿಂ ಸ್ವಯಂವರಕೆ ||
ಬರಲಾಯೆನೆಗಿಭ್ಯಕೇತು ವೈಶ್ಯಾತ್ಮಜ | ನಿರದೆ ತಾನಲ್ಲಿನೈದಿದನು ||೧೨೦||
ಲಲನೆಯೆಲ್ಲನರಿರ್ದಂತಿಭ್ಯಕೇತುವ | ಗೆಳಸಿ ಮಾಲೆಯುನಿಕ್ಕಿದಳು ||
ಉಳಿದಲೋಹಪಬಟ್ಟು ಹೊನಾಳ್ಪಳದಸಿ ಪ | ಬ್ಬಳಿಸುವ ಪಣವಿಟವಂತೆ ||೧೨೧||
ಶುಭಲಗ್ನದೊಳು ನಾಗವತ್ತೈಸುತಿರತಿ | ನಿಭರೂಪವತಿ ಸೌಂದರಿಯನು ||
ಅಭಿನವಮದನಗೆ ಮದುವೆಸೂಾದಿದನತಿ | ವಿಭವನೊಳಿಪೊಗಳ್ವಂತೆ ||೧೨೨||
ಆ ರಮಣೀಮಣಿಯೊಳಗಿಭ್ಯಕೇತು ಕು | ಮಾರನೊಪೆದುಕೂಡಿಹನು ||
ಗೌರಿಯೊಡನೆ ನೇಹದಿಂ ರಾಜಶೇಖರ | ನೋರಣದಿ ಕೂಡಿದಂತೆ ||೧೨೩||
ಅತನುಸದೃಶನಿಂತಿರೆ ನಾಗದತ್ತಭೂ | ಪತಿಕನ್ನೆಯನರೆಗಂಡು ||
ಗತಕೆಕಾರಣವಿತನುನೆಂದು ವೈರಾಗ್ಯ | ಯುತನಾದನಿಳೆಪೊಗಳ್ವಂತೆ ||೧೨೪||
ತನಗೆ ನಂದನರಿಲ್ಲದಕಾರಣದಿಂದ | ಜನಪತಿಯಾನಾಗದತ್ತ ||
ತನುಜೆಸೌಂದರಿಯ ವಲ್ಲಭನಿಭ್ಯಕೇತುನಿ | ಗನುನಯದಿಂ ಪಟ್ಟಗಟ್ಟಿ ||೧೨೫||
ಭಾವಶುದ್ಧಿಯೊಳು ದೀಕ್ಷೆಯಧರಿಯಿಸಲಾ | ಭಾವಜಸಿಭನಿಭ್ಯಕೇತು ||
ಮಾವನರಾಜ್ಯಕೆ ತಾನೆಯೊಡೆಯನಾಗಿ | ಭೂವಿಸುತನು ಮಾಗಿಹನು ||೧೨೬||
ಇದು ಜಿನಪದಸರಸಿಜಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿ ನೇಮಿಜಿನೇಶ ಸಂಗತಿಯೊಳ | ಗೊದವಿದ ಸಂಧಿಗಳೆರಡು ||೧೨೭||

೩. ಚಿಂತಾಗತಿಯು ನಿರ್ವೇಗಸಂಧಿ.

ಶ್ರೀಮದಮರಪತಿ ವಸಾಲಕೀಲಿತಪಾದ | ತಾಮರಸದ್ವಯನಜಗೆ ||
ಕಾಮಮಮೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತರಗುವೆನು ||೧||

ಜನನುತನಾಗಿಯಭಸು ಗೆಯ್ದುತಿರಲೊಂದು | ದಿನದೊಳಗಿಂದ್ರವೈಭವದಿ ||
ಮನುಜಾಧೀಶರ ಸಡುವೆ ಓಲಗದೊಳ | ಗನುರಾಗದಿಂದಿರುತಿರಲು ||೨||

ಮತ್ತಗಜದ ಸುರಿಯನು ಸಿಂಗಸಿಸುವನು | ಕತ್ತುರಿಮಿಗದ ಕರುವನು ||
ಇತ್ತು ಕಂಡನು ಧೀವರಪತಿಯಾ ಭೂ | ಪೋತ್ತಮನಿಷ್ಟಕೇತುವನು ||೩||

ಇಂತು ಕಂಡಾಧೀವರಪತಿಗರಸ ಜ | ನ್ಮಾಂತರನೋಹಕಾರಣದಿ ||
ಸಂತಸದಿಂ ಸೇನಾಪತಿಪದವಿಯ | ಸಂತಲಿಸದೆ ಕೊಟ್ಟನಾಗ ||೪||

ತನಗೆ ಪರನುನಿಶ್ವಾಸಿಯಾತನೆಯಾಗಿ | ಜನಪದವನು ಪರಿವೃಢನು ||
ಅನುರಾಗದಿಂದಾಳುತಿರ್ದೊಂದಾನೊಂದು | ದಿನದೊಳು ಬನಕೆಯ್ದಿದನು ||೫||

ಆ ನಂದನದೊಳಗತಿನಿರ್ಮಲತೆಂಬ | ಜೈನಮುನಿಗಳಿರೆ ಕಂಡು ||
ಸಾನಂದದಿಂದ ವಂದಿಸಿ ಧರ್ಮವ ಕೇಳಿ | ತಾನಿಂತೆಂದಾಡಿದನು ||೬||

ಭೂವಿಶ್ರುತಬೋಧಸಿಂಧುವೆ ನನಗೀ | ಧೀವರಸೊಳಗತಿಮಮತೆ ||
ಚವರಿಸಿದುದೇನುಕಾರಣವೆನಲಾ | ಭಾವಜ್ಞನಿಧಿಯಿಂತೆಂದ ||೭||

ಪೋದ ಭವದೊಳು ನೀ ಏಂಧ್ಯಕನಾದಾಗ | ಲೀಧೀವರನು ನಿನ್ನೊಲವಿನ ||
ಕಾದಲೆಯಾಗಿರ್ದಳೆಂದಾ ಜನ್ಮದೊ | ಳಾದ ಪ್ರಪಂಚವೆಲ್ಲವನು ||೮||

ಸರಸಿಯದರಿಂದೀ ಧೀವರನೊಳು | ಹಿರಿದು ಮಮತೆಯೊದವಿದುದು ||
ಧರಣಿಪ ಕೇಳೆಂದಾಯತಿಪುಂಗವ | ನೊರೆಯಲಂತದನು ತಾಳಿಸುತ ||೯||

ಆವಾವ ಭವದೊಳಗಾವಾವ ಜೀವವ | ದಾವ ಪರಿಯೊಳಪ್ಪುದೆಂದು ||
ಭೂವರನಾ ಸಂಸಾರನಾಟಕಕತಿ | ಹೇವನು ತಾಳಿದನಾಗ ||೧೦||

ಇಂತು ನಿರ್ವೇಗಪರಾಯಣನಾಗಿ ಭೂ | ಕಾಂತನುಕೇತುವೆಂದೆಂಬ ||
ಕಂತುಸದ್ವಶನಪ್ಪಸುತಗೆ ಪಟ್ಟವ ಕಟ್ಟಿ | ತಾಂ ತಳಿದನು ದೀಕ್ಷೆಯನು ||೧೧||

ಕಾಂತನುತ್ತಮದೀಕ್ಷೆಗೊಳಲು ಸೌಂದರಿದೇವಿ | ತಾಂ ತಳೆದಳು ದೀಕ್ಷೆಯನು ||
ಮುಂತೆ ವಸಂತಬಂದೊಡೆ ಮಲ್ಲಿಕಲತೆ | ಪಿಂತೆ ಬಾರದೆ ಸುಮ್ಮನಿಹುದೆ ||೧೨||

ಆ ವ್ರತಪತಿಯ ಕೋಮಲಪದಕಮಲವ | ಧುವ್ರತನಾಗಿ ಧೀವರನು ||
ತೀವ್ರವಾಸಲೋಪಿತವೆಂದೆನಿಸುವ | ಣುವ್ರತವನು ಧರಿಸಿದನು ||೧೩||

ಬೋಧಶರಧಿ ಇಜ್ಯಕೇತುಮುನಿಪನು ನ | ಮಾಧಿವಡೆದು ನಿಮುಷದೊಳು ||
ಸಾಧಾರಣವಲ್ಲದ ಸೌಖ್ಯಪದವೀಪ | ಸೌಧರ್ಮದೊಳು ಬಸಿಸಿದನು ||೧೪||

ಶ್ರೀನಿಲಯಾಖ್ಯದ ನವಮಣಿಖಚಿತವಿ | ಮಾನದಮಳವಾಸಿಸೊಳು ||
ತಾನಿರದುದಯಿಸಿ ಶ್ರೀದೇವನಂಬಾ | ವಮಾನಿತವೆಸರವಡೆದನು ||೧೫||

ನಿಃಪ್ರಸಂಚಪ್ರತದಿಂದಾ ಸೌಂದರಿ | ಯಪ್ರತಿವಡೆದಕಲ್ಪದೊಳು ||
ಸುಪ್ರಭವೆಂಬ ವಿಮಾನದೊಳಗೆ ನಿಮ | ಲಪ್ರಭನಾಗಿ ಪುಟ್ಟಿದಳು ||೧೬||

ಧೀವರನಾಕಲ್ಪದೊಳು ತೊಳತೊಳಗುತಿ | ಪ್ಪಾವಿದ್ಯುತ್ಪ್ರಭೆಯೆಂಬ ||
ಆ ವಿಮಾನದೊಳು ಶ್ರುತಪ್ರಭನೆಸರಾಂತು | ದೇವನಾಗಿ ಬಸಿಸಿದನು ||೧೭||

ಆ ವಿದ್ಯುತ್ಪ್ರಭನಾವಿಮಲಪ್ರಭ | ದೇವರೀರ್ವರೊಳನವರತ ||
ತೀವಿದೊಲವಿನಿಂದ ಸುರಲೋಕಸೌಖ್ಯವ | ನೋವದೆ ಭೋಗಿಸುತಿರ್ದು ||೧೮||

ಅಂದವಡೆದ ಪುಷ್ಕರಾರ್ಧದ ಪಡುವಣ | ವಂದರದಪರವಿದೇಹ ||
ಎಂದೆಂಬ ವಸುಧೆಯ ಸೀತೋದಾನದಿ | ಯಿಂದ ಬಡಗಣ ಭಾಗೆಯೊಳು ||೧೯||

ಭಾಸಿಪ ಗಂಧಿಲವಿಷಯವಿಹುದು ನ | ತ್ಕಾಸೀಮೆಯೊಳು ವಿಜಯಾದ್ರಿ ||
ಭೂಸುದತಿಯಮುದ್ದುವೊಗದೊಳುರಂಜಿಪ | ನಾಸಿಕದಂತೊಪ್ಪುತಿಹುದು ||೨೦||

ಆದರ ಕುಬೇರದಿಶಾಶ್ರೇಣಿಯೊಳು ಸಂ | ಪದಕೆ ತಾನೇ ತಾಣವೆನಿಸಿ ||
ವಿದಿತವಾಗಿ ಸೂರ್ಯಪ್ರಭವೆಂಬ ನಾ | ಮದ ಪುರವೊಂದು ರಂಜಿಪುದು ||೨೧||

ಆ ನ್ಯಾಯುರ್ಯವಡೆದ ಪುರದೊಳು ಸೂ | ರ್ಯಪ್ರಭನೆಂಬ ಖೇಚರನು ||
ಅಪ್ರತಿಮಪ್ರತಾಪದಿ ಪಾಲಿಪನು ಧ | ರಾಪ್ರಮದೆಯನನವರತ ||೨೨||

ಅರಾಜೇಂದ್ರಚೂಡಾರತ್ನಕೆ ಗಾಂ | ಧಾರಿವೆಸರ ಸತಿಯಿಹಳು ||
ನೀರಭುಡಾಗಾರದ ಸುಕುಮಾರಿ ಮು | ರಾರಿಗೆ ಮಡದಿಯಾದಂತೆ ||೨೩||

ಆ ಮಿಥುನದ ಗರ್ಭದೊಳಗಿಜ್ಯಕೇತುಚ | ರಾಮರನಾ ಶ್ರೀದೇವ ||
ಆ ಮೊದಲಮರಾವನಿಯಿಂದಿಳಿದು ಸು | ಪ್ರೇಮದ ಸುಕುಮಾರನಾದ ||೨೪||

ಅವನಿಗೆ ಚಿಂತಾಗತಿಯೆಂಬ ನಾಮವ | ನವಿನಯದಿಂದಾ ಖಚರ ||
ಸುಪಥಾನದೊಳು ಕೂಡಲೆಲ್ಲಾ ಕಲೆಗೂಡಿ | ಕುವಲಯಪತಿಯೆನೆಬೆಳೆದ ||೨೫||

ಬಳಿಕವರೊಡಲೊಳಗಾ ಸುಪ್ರಭದೇವ | ನಿಳಿದು ಸ್ವರ್ಗದಿನೆಯ್ದಿ ಜನಿಸಿ ||
ತುಳಿಲಾಳಾಗಿಮನೋಗತಿನಾಮವ | ತಳೆದು ಜವ್ವನವೇರಿದನು ||೨೬||

ಮತ್ತಾ ಧೀವರಚರನು ವಿದ್ಯುತ್ಪ್ರಭ | ನತ್ತಮದೇವನಲ್ಲಿಂದ ||
ಸತ್ಕುಚಪಲಗತಿಯೆಂಬೊಂದು ಪೆಸರನು | ಪೊತ್ತು ಸಂಭವಿಸಿಯೊಪ್ಪಿದನು ||೨೭||

ವರದರುಶನಬೋಧಚರಿತದಂತಾಮೂ | ವರುಸೋದರರೊಡಗೂಡಿ ||
ಇರಲಾಪರ್ವತದಾಶ್ರೇಡಿಯೊಳೊಂದು | ಪುರವರಿಂಧರವೆಂಬುದಿಹುದು ||೨೮||

ಅದರೊಳರಿಂಬಯನೆಂಬ ಖೇಚರಪತಿ | ಮದನಸದೃಶನಿರಲವಗೆ ||
ಮದವತ್ಕಾಯಿತೆ ಜಿತಸೇನೆಯೆಂಬೋರ್ವ | ಸುದತಿವಲ್ಲಭೆಯಾಗಿಹಳು ||೨೯||

ಕ್ಷಿತಿಪನರಿಂಬಯಖೇಚರೇಶ್ವರಗಾ | ಜಿತಸೇನೆಗೆ ಜನಿಸಿದಳು ||
ರತಿನಿಭೆ ನಿಸುನಿದಾಪರೆಮೊಗದ ಬಲಾಸ | ವತಿಯೆಂಬೋರ್ವಕುಮಾರಿ ||೩೦||

ಸಿರಿಯನ್ಯೆಸಿರಿಯೊಳು ರತಿಯು ರೂಪಿನೊಳಾ | ನರಸತಿಯನು ಜಾಣ್ಮೆಯೊಳು ||
ಸರಿತನಗಲ್ಲವೆಂದಾಖೇಚರ ಭೂ | ವರಸುತೆ ನಗುತಿರಲವರ ||೩೧||

ಚತುರತೆ ಚಲ್ಪೈಸಿರಜಪ್ಪನದೊಳ | ಪ್ರತಿಮರೆನಿಪಖಚರರೊಳು ||
ಗತಿಯುದ್ಧದೊಳು ತನ್ನ ಗೆಲಿದವನೇನಿಜ | ಪತಿಯೆಂದು ಡಂಗುರವೊಯಿಸೆ ||೩೨||

ಆ ಡಂಗುರದನಿಗೇಳಿ ಬಜಾ್ವದರ | ನಾಡ ನರೇಂದ್ರನಂದನರು ||
ಗಾಡಿಕಾತಿಯೊಳೋಪದೆ ಗತಿಯುದ್ಭವ | ಮಾಡುವೆವೆಂದೆಯ್ದಿದರು ||೩೩||

ಆಗ ಚಪಳಗತಿಯಾಗಮನೋಗತಿ | ರಾಗದಿಂ ತನ್ನೊಡಬರಲು ||
ಬೇಗದಿಂದಾಯೆಡೆಗೆಯ್ತಂದನು ಚಿಂ | ತಾಗತಿ ಖಚರಕುಮಾರ ||೩೪||

ಅಸಮಯುದೊಳಾಗರಿಂಬಯಖಚರ ವಿ | ಲಾಸವತಿಯಕೂಡಿಕೊಂಡು ||
ಭಾಸುರವಡೆದಾಗಿರಿಯು ಜಿನೇಂದ್ರನಿ | ವಾಸಮನಿರಡೆಯ್ದಿದನು ||೩೫||

ಜಿನಗೃಹವನು ಮೂರು ಸೂಳ್ವರಜಲವಂದು | ಜಿನರನರ್ಚಿಸಿ ಭಕುತಿಯೊಳು ||
ವಿನಮಿತೆಯಾಗಿ ವಿಮಲಮಣಿ ಮಂಟಪ | ಕನುನಯದಿಂದೈದಿದಳು ||೩೬||

ಬಳಿಕಾಬಳಿಯರ್ಚಿಸಿದಗತಿಯುದ್ಧಸ | ಲ್ಲಲಿತಪೀತದೊಳಾಸತಿಯ ||
ಕೆಳದಿ ಲಲತೆಯೆಂಬಳೊಂದು ಪೂವಿನಮಾಲೆ | ದಳೆದನುರಾಗದಿನಿಂದು ||೩೭||

ಈರಜತಾದ್ರಿಯೊಳೀ ಬಿಟ್ಟಪೂಮಾಲೆ | ಧಾರಿಣಿಗಳಿಯದಮುನ್ನ ||
ಮೇರುಗೆ ಪರಿದು ಬಸದಿಯೊಕ್ಕು ಮಗುಳ್ದಿದ | ಭೋಕೆನೆ ಪಿಡಿವಾವರೆಯ್ದಿ ||೪೮||

ಎಂದಾಸುಟಗೇಳಿ ನಮಗಿದಶಕ್ಯಮೆ | ಇಂದಿನ ದುರ್ಘರವಾದ ||
ಎಂದುಬಂದಾಸ್ಯಪತಿ ಹೆರಸಾರಲಿಂ | ತೆಂದು ಚಿಂತಾಗತಿನುಡಿದ ||೪೯||

ಈ ಗತಿಯುದ್ಧಮನಾಸೊಮ್ಮೆಮಾಡುವೆ | ಬೇಗದಿ ನೋಡಿನೀವೆಂದು ||
ರಾಗದಿಂದಾಗತಿಯುದ್ಧಲಾಪಟ್ಟ | ಕಾಗಂಡುಗಲಿನಡೆತಂದ ||೫೦||

ಕಡುನೇಗದಿಂದಲ್ಲಿನಿಂದ ಬಿಜ್ಜಾದರ | ನೆಡಗಡೆಗೆಯ್ತಂದುನಿಂದ ||
ಬಡನಡುವಿನ ಭಾವೆಗೆ ಸಾತ್ವಿಕಭಾವ | ವಡಸಿದುದತಿವೇಗದೊಳು ||೫೧||

ಅನಿತರೊಳವಧಾನಮೆಂದು ಪೂವಿನಮಾಲೆ | ಯನು ಮಧ್ಯದೊಳುಸಿಂದಿರ್ದ ||
ವನಜನದನೆ ಬಿಡುವಾಗ ಪಾರಿದರಾ | ಘನಪಥಕಾ ಈರ್ವರಂದು ||೫೨||

ಅರಲಮಾಲೆಯು ಬೀಳದಮುನ್ನ ಪೂಜಯಾರ್ಘ | ಗಿರಿಯಿಂದ ಮೇರುಗೆಪರಿದು ||
ಅರುಹನಗೃಹಕೆಯ್ದಿ ತಿರುಗಿಹಿಡಿದನದ | ನರಮಗನವಳಪಿಂದುಳುಪಿ ||೫೩||

ದಿಟ್ಟಿಗಳೆವೆವೊಯ್ಯದಮುನ್ನ ಕುರಿತೆಡೆ | ಮುಟ್ಟಿಮಗುಳಿಹಾರಿಬಂದು ||
ಬಿಟ್ಟಡೆಯಿಂದಾಪೂಮಾಲೆ ಪೃಥಿವಿಯ | ಮುಟ್ಟದಮುನ್ನ ಹಿಡುದನು ||೫೪||

ಗುಣುಧಮ್ಮಿಲ್ಲೆ ವಿಶಾಲಲೋಚನೆ ಪೀ | ವರಕುಚೆ ಪೀನನಿತಂಬೆ ||
ಕರಿನಿಭಗಮನೆಯುನ್ಮತ್ತಯೌವನೆ ಚೆ | ಚರಗೆ ಹಿಂದುಳಿದೆಬ್ಬಿದಳು ||೫೫||

ಮಾಲೆಯಹಿಡಿದ ಮಹಾನುಭಾವನಕಂಡು | ಲೋಲಲೋಚನೆ ಚಿತ್ತದೊಳು ||
ಸೋಲವತಾಳಿಯಾತನಕೊರಲೊಳು ಪೂ | ಮಾಲೆಯನಿಕ್ಕಲೆಯ್ದಿದಳು ||೫೬||

ಅರಲವಾಶವಬೀಸಿಯಾ ಉರುಳಿಂನ್ಪಪ | ಪರನ ಕೊರಲಬೀರಲೆಂದು ||
ಸ್ಮರಸತಿನಡೆದು ಒಪ್ಪವೊಲು ಮಾಲೆಯನಾಂತು | ಬರಲವಳನುಕಂಡನಾಗ||೫೭||

ಈಸತಿಗೀಬಂದಬಾಂಬಟ್ಟಿಗರೆಲ್ಲ | ರಾಸೆಮಾಡಿದರಲ್ಲದೆಯೂ ||
ಸಾಸಿಗರೆನ್ನೀಯನುಜಾತರಿಚ್ಛೈಸಿ | ಯೋಪರಿಸದೆತಳರಿದರು ||೫೮||

ಓರ್ವಳೀಬಾಲಕಿ ಬಹುರೂಪುವಡೆದಂತೆ | ಸರ್ವರೆದೆಗೆಬಂದಳದುತಾ ||
ಕರ್ವುವಿಲ್ಲನಗೊಡ್ಡಾಟವಲಾಯೆಂದು | ಉರ್ವೀಶನಜ್ಞರವಟ್ಟು ||೫೯||

ಘನತರಮಪ್ಪಭಾವನೆಯ ಭಾವಿಸುತಿರೆ | ನನೆಯದಂಡೆಯ ಕೊಂಡುಬರ್ಪ ||
ವನಿತೆ ವಿಲಾಸವತಿಯನರಮಗನೊಂ | ದಿನಿಸುನಿಲ್ಲೆಂದಿಂತುನುಡಿದ ||೬೦||

ಎನ್ನಗೆಲುವು ಎನ್ನಣುಗನಸುಜವದು | ಕನ್ನಕೇಳ್ನೀನವರೊಳಗೆ ||
ನಿನ್ನವನಕೆ ಬಂದವರಿಗೆ ಮಾಲೆಯ | ಚೆನ್ನಾಗಿ ವರಿಯಿಸೆಂದೆಸಲು ||೫೧||
ಆ ನುಡಿಗೇಳಿ ಹೆಗ್ಗರಹೊಡೆದಂತಾ | ಮಾನಿನಿಸವ್ವೆರಗಾಗಿ ||
ನಾನೊಂದೆಣಿಕೆಮಾಡಿದೊಪ್ಪೆನ್ನ ದುಷ್ಕೃತ | ತಾನೊಂದೆಣಿಸಿದುದೀಗ ||೫೨||

ಹಸೆಯೊಳು ಹಾವುಹರಿಯುತೆಂಬ ನಾಣ್ನುಡಿ | ಹಸನಾಯುತೀಗೆನ್ನೊಳೆಂದು ||
ಮಿಸುನಿವಾನರೆಮೊಗದಲಿ ಚಿಂತಿಸುತಾ | ರಸಿಕಸೊಳಿತಾಡಿದಳು ||೫೩||
ಗತಿಯುದ್ದದೊಳಗೆನ್ನ ಸೋಲಿಸಿದವನೇ | ಪತಿ ಈಜನ್ಮಕೆಂದೊಸೆದು ||
ಕ್ಷಿತಿಯೆಲ್ಲಮರಿಪಂದದೊಳು ಪ್ರತಿಜ್ಞೆಯ | ಮತಿಹೀನೆ ನಾನುಮಾಡಿದೆನು ||೫೪||
ಅದರಿಂದನೀನೇಪತಿಯನಗಭಿನವ | ಮದನಕೇಳುಳಿದವರೆಲ್ಲ ||
ಮುದವಿಂದೊಡಹುಟ್ಟಿದವರ ಸಮಾನನು | ತಿದಕೆನ್ನು ಸಂದೆಗಮೇಕೆ ||೫೫||
ಇಂತು ಪ್ರತಿಜ್ಞೆಯಮಾಡಿಯಾಯೆಡೆಯಿಂ | ಕಾಂತಾಮಣಿ ಸಡೆತಂದು ||
ಕಂತುಹರಣಜಿನರೇ ಗತಿಯನುತಾಗ | ತಾಂ ತಪಗೊಳಲೆಣಿಸಿದಳು ||೫೬||

ಅಸಿದ್ಧಕೂಟದ ಚೈತ್ಯಬಿಂಬದಮುಂದೆ | ಯಾ ಸತಿತನ್ನೊಡವಂದ ||
ನಾಸಿರ್ವರಬಲೆಯರೊಡಗೂಡಿ ದೀಕ್ಷೆಯ | ನೋಸರಿಸದೆಕೊಂಡಳಾಗ ||೫೭||
ಮೊದಲು ತನ್ನ ಸಸುನಗೆವೆತ್ತ ಶಶಿನಿಭ | ವದನಕೆರಗೆನೆಂಬವಸನು ||
ಸುದತೀಮಣಿ ದೀಕ್ಷಾಮುಖದಿಂ ನಿಜ | ಪದಕೆರಗಿಸಿಕೊಂಡಳಾಗ ||೫೮||

ಚಡುರೆ ಚಮತ್ಕಾರದೊಳು ದೀಕ್ಷೆಯನಾಂತು | ದದುವೆನಿಸ್ಪೇಗಮುಮಾಗಿ ||
ಸದಮಲಗುಣಿಚಿಂತಾಗತಿ ದೀಕ್ಷೆಯ | ಪದೆದುಕ್ಕೆಕೊಳಲೆಣಿಸಿದನು ||೫೯||
ಅಪಗತಮೋಹಿಮನೋಗತಿಮತಾ | ಚಪಲಗತಿಯುವೊಡನಂದ ||
ನೃಪರಿಚ್ಛಾಸಿರಗೂಡಿ ಚಿಂತಾಗತಿ | ತಪವಧರಿಸಲೆಣಿಸಿದನು ||೬೦||

ವಿಧಮುಖಿಯೊಳು ಮದುವೆಯನುಳಿದುಪಶಮ | ವಧುವನೊಡನೆಮದುವೆಯನು ||
ವಿಧಿವೂರ್ವಕದನುವರರೆಂಬ ಮುನಿಯ ಸ | ನ್ನಿಧಿಯೊಳುಹಡೆಬೊಪ್ಪಿದನು ||೬೧||
ಆ ಉತ್ತಮಮಪ್ಪತಪದೊಳು ನೆಗಳಿಸಿ | ಜಾಯುಷ್ಯಾವಸಾನದೊಳು ||
ತಾವು ಮಹೇಂದ್ರಕಲ್ಪದೊಳು ಸಾಮಾನಿಕ | ದೇವರಾಗಿ ಜನಿಸಿದರು ||೬೨||

ಅವರು ಮೂವರೊಳು ಚಿಂತಾಗತಿಜರದೇವ | ದಿವಿಜಸುಖಮನನುಭವಿಸಿ ||
ಜನನಾಜ್ಞೆಯಿಂದ ಬಂದಪರಾಜಿತನೆಂ | ಬವನಾದವನೀಸುಕೇಳಾ ||೬೩||

ಜಂಬೂದ್ವೀಪದ ಮೂಡಗಡೆಯ ಸೀತೆ | ಯೆಂಬನದಿಯ ತೆಂಕಗಡೆಯ ||
ಇಂಬಿನ ಪುಷ್ಕಳಾವತಿಯೆಂಬ ವಿಷಯದ | ಜಾಂಬಟ್ಟಿಗರಜೇಟ್ಟದೊಳು ||೬೪||

ಸೊಗಯಿಪಬಡಗಣದೆಸೆಯ ಶ್ರೇಣಿಯೊಳಿಪ್ಪ | ಗಗನವಲ್ಲಭಪುರದರಸು ||
ಗಗನಚಂದ್ರಮನೆಂಬ ಗಗನಚರನಸತಿ | ಗಗನಸೌಂದರಿಯೆಂಬಳಿಹಳು ||೬೫||

ಅವರೀರ್ವರಿಗೆ ಚಿಂತಾಗತಿಯೊಡಹುಟ್ಟಿ | ದವರಾಸಗ್ಗದಾಯುಷ್ಯ ||
ತವೆಯಲುಮುಂದೆಸವೆನ್ನೊಡಲೊಳು ಶಶಿ | ರವಿಗಳುದ್ಭವಿಸುವಂದದೊಳು ||೬೬||

ಮಿಸುಗುವಮೃತಗತಿಯಮಿತರಾಜಸುಮೆಂಬ | ಪೆಸರಾಂತುದಯಿಂಗೆಯ್ದು ||
ಪೊಸಜವ್ವನದೊಳು ವೈರಾಗ್ಯಮುಗೆ ಜನಿ | ಯಿಸಿ ನೆಪ್ಪಧಿಸರಲ್ಲಿ ||೬೭||

ದೀಕ್ಷೆವಡೆದು ಚಾರಣತ್ವಮನಾಂತ ಮು | ಮುಕ್ಷುಗಳಾ ನಾವುಕೇಳ್ನಿನ್ನ ||
ಈಕ್ಷಿಸಲೆಂದೆಲೆಯಸಂಜಿತ ನಾ | ವೀಕ್ಷಿತಿತಳಕೆಯ್ದಿದೆವು ||೬೮||

ತಿಂಗಳಂತೆಯಪರಾಜಿತಸಿನಗೊಂದು | ತಿಂಗಳಾಯುವದರಿಂದ ||
ಪಿಂಗಿಸಿಸಕಲಪರಿಗ್ರಹವನು ಬೇಗ | ಸಂಗೊಳಿಸಧಿಕಪುಣ್ಯವನು ||೬೯||

ಎಂದುನುಡಿದು ಧರ್ಮರಾಜಸಿನಗೆಯಾಗ | ಲೆಂದಾಗಸಕವರೆಯ್ದಿ ||
ಕಂದರ್ಪನಿಭನಿತ್ಯಲಪರಸಸೇವ್ಯತೆ | ಯ್ತಂದನು ನಿಜಪುರವಧಕೆ ||೭೦||

ಆ ತಪಸ್ವಿಗಳು ಪೇಳಿದಮಾಸ್ಕ್ಯೆಯೊಳು ಧ | ರಾತಳಭಾರವೆಲ್ಲವನು ||
ಪ್ರೀತಿಂಕರನೆಂಬ ಪ್ರಿಯತನುಜಗೆ ಸ | ತ್ಪ್ರೀತಿಯಿಂದವೆಕೊಟ್ಟನಾಗ ||೭೧||

ನಂದೀಶ್ವರಪರ್ವಂಪಯಸೆಂಟುದಿವಸ ಮಾ | ನಂದದಿಂಗೆ ಮಾಡಿಬಳಿಕ ||
ಒಂದಿದಸಕಲಪರಿಗ್ರಹವನು ಪುಲ್ಲಿ | ನಿಂದಲಿಕಡೆಮಾಡಿ ತೊರೆದು ||೭೨||

ತಳುವದೆಮೊದಲುಜಾಂಧವಬಂಧನವಕಳ್ತು | ಒಳಿಕ ಕುಂತಳಸಮಿತಿಯನು ||
ಘಳಿಲನೆಪರಿದು ಸನಾಥವಿಧಿಯನಂದು | ತಳೆದನಿಂತಪತಾಪೆಸನು ||೭೩||

ಆ ಪಗಲಪ್ಪತ್ತೈರಡರೊಳಾ ಪ್ರಾ | ಯೋಪಗಮನಸನ್ಯಸನದಿ ||
ಆ ಪರಮಾಯುಷ್ಯಮಿಪ್ಪತ್ತಿಚ್ಛಾಭೃ | ರೋಪಮಮಾಗಿ ರಂಬಿಸುವ ||೭೪||

ಉರುಸುಖವೀವಚ್ಯುತಕಲ್ಪದಾಶಾಂತ | ಕರಮೆಂಬಮಣಿವಿಮಾನದೊಳು ||
ಇರದೆ ಜನಿಸಿಯಚ್ಯುತೇಂದ್ರವೆಸರನಾಂತು | ಸುರಸತಿಯರನೊಲಿಸಿದನು ||೭೫||

ಭೋಗವನೀಂಟುವ ಸುರಪನತೃಷ್ಣಾ | ಯೋಗವೆಯಿಪ್ಪತ್ತೈರಡು ||
ಸಾಗರೋಪಮಾಯುಷ್ಯಮನೀಂಟಿ | ತ್ಯೇಗೆಯ್ದೆಕರ್ಮದ ತೆರನ ||೭೬||

ನಿರುಪಮ ಜಂಬೂದ್ವೀಪದೊಳೊಪ್ಪುವ | ಭರತಾರ್ಧಖಂಡಮಧ್ಯದೊಳು ||
ಕುರುಜಾಂಗಣದೇಶವಿಹುದಲ್ಲಿ ಹಸ್ತಿನ | ಪುರನೆಂಬುದಿಹುದು ಕೋಭೆಯೊಳು ||

ಆ ಪುರವನು ಪಾಲಿಸುವನು ಸಕಲಕ | ಲಾಪನಂತಕಸಿಭ ಕೋಪ ||
ರೂಪ ಮಾನವಮನಸಿಜ ನೃಪಕುಲಮಣಿ | ದೀಪ ಶ್ರೀಚಂದ್ರನೆಂಬವನು ||೭೮||

ಆ ಮಹೀಪಾಲಕನಾ ಶ್ರೀಚಂದ್ರಂಗೆ | ಶ್ರೀಮತಿಯೆಂದೆಂಬವಳು ||
ಭಾಮೆಯಾದಳುದಾನದೊಳು ಶ್ರೀಮತಿಯಿಂ | ಕಾಮುಭೇನು ಕಲ್ಪವೃಕ್ಷವೆನಿಸಿ ||

ಆ ಮಹೀಪಾಲ ಶ್ರೀಚಂದ್ರರಾಜೇಂದ್ರನ | ಶ್ರೀಮತಿಯಮುಲಗರ್ಭದೊಳು ||
ರಾಮಣೀಯಕಮಪ್ಪ ಸೌಖ್ಯವನುಂಡಜ್ಯ | ತಾಮರಬಂದು ಪುಟ್ಟಿದನು ||೮೦||

ಅನುರಾಗವೆದೆಯೊಳಂಕುರಪ ಹಜೆಯಲಾ | ಮನುಜೇಶ ಶುಭಲಗ್ನದೊಳು ||
ತನುಜಾತಗೆ ಸುಪ್ರತಿಷ್ಠವೆಸರನತಿ | ವಿನಯದಿಂದಲಿಮಾಡಿದನು ||೮೧||

ನಂದನಗೇರುಂಜಪ್ಪನ ಬೊಡವೆಯಾ | ನಂದದಿನಾ ಶ್ರೀಚಂದ್ರ ||
ತಂದು ಮುದುವೆನಾಟದನರಮಗ ನು | ನಂದಾವೇಂಯೆಂಬವಳ ||೮೨||

ಅರಿಕೆವಡೆದ ಸುಪ್ರತಿಷ್ಠಕುಮಾರಕ | ನಿರವಸೆರೆವ ಪರೆಯುವನು ||
ನೆರೆ ತಳೆಯಲು ಶ್ರೀಚಂದ್ರಮಹೀಶಗೆ | ಪರಿದುದು ರಾಜ್ಯವೈಭೋಗ ||೮೩||

ನೆಟ್ಟನೆ ನಿರ್ವೇಗಮನವನಾವರಿಸಲು | ವಿಟ್ಟತನದಿಭೂವರನು ||
ಕಟ್ಟೊಲವಿಂ ಸುಪ್ರತಿಷ್ಠಗೆ ಪಟ್ಟವ | ಕಟ್ಟಿ ದೀಕ್ಷೆಯನಾಂತನಿತ್ತ ||೮೪||

ಆ ಸುಪ್ರತಿಷ್ಠರಾಜೇಂದ್ರಶಶಾಂಕಗೆ | ಯಾ ಸುನಂದಾವಲ್ಲಭೆಗೆ ||
ಭಾಸುರಮೂರ್ತಿಸುದೃಷ್ಟವೆಸರನಾಂ | ತಾ ಸುತುಮಾರಪುಟ್ಟಿದನು ||೮೫||

ಅಪ್ರತಿಮಪ್ರತಾಪದನಾ ಸಕಲಧ | ರಾಪ್ರಮುಖಯನೊಂದಿಂದ ||
ಸುಪ್ರತಿಷ್ಠನು ತನ್ನ ಸಜಾತಿಯೊಳು | ಸುಪ್ರತಿಷ್ಠೆಯಮಾಡಿದನು ||೮೬||

ಇಂತಿರುತಾನೃಪನೊಂದಾನೊಂದು ದಿ | ನಾಂತದೊಳುಪ್ಪರಿಗೆಯನು||
ಸಂತಸದಿಂದೇರಿದನುಸುರಪತಿ ವೈಜ | ಯಂತಮನೇರುವಂದದೊಳು ||೮೭||

ಪುತ್ತಾನಗ್ಗದಹಾಸಿನ ಹೊರೆಯೊಳು | ತ್ಪತ್ತಿಯಪ್ಪುದತೋರುವಂತೆ ||
ಪೆತ್ತನೆಸೆವ ಹಂಸೆಕೂಳತಳ್ಪದಮೇಲೆ | ಚಿತ್ತಜನಿಭನೊಪ್ಪಿದನು ||೮೮||

ಉದಯಪರ್ವತದೊಳುತ್ಪಲಪತಿತಾರಾ | ಸುದತೀಜನದನುಸ್ಯದೊಳು ||
ಮುದದಿನೋಲಗದೊಳಿಪ್ಪಂತಾನೃಪನಿಂದು | ವದನೆಯರಿಂದಲೊಪ್ಪಿದನು ||೮೯||

ಇಕ್ಕೆಲದೊಳು ಚಾಮರವನುಬೀಸುವ | ಸುಕ್ಕುಗುರುಳನೀರೆಯರ ||
ಸೊಕ್ಕುಗಂಗಳ ರುಚಿಸೂಸಲು ನೃಪಮುತ್ತ | ನಿಕ್ಕಿದುದವಿನೊಪ್ಪಿದನು ||೯೦||

ಚಾರುನಕ್ಷತ್ರ ಸಹಸ್ರಲೋಚನನಾ | ಕಾರಕಳತ್ರಲೆಯೆಂಬಗಿರಿಯ ||
ಅರಯ್ಯದಟ್ಟಕುಲಿಶನೆಂಬಂದದಿ | ಭೋರೆನೆಬೀಳ್ವುದೊಂದುಳ್ಳು ||೯೧||

ಧರಣೀತಳವನುಡುವೆನೆಂದಂದಾ | ಸುರನೋವದೆತೆಗೆದೆಚ್ಚ ||
ಉರಿಯಬಾಣದಬಗೆಯಂತೆ ಬೀಳ್ವಾಉಳ್ಕ | ನಿರದೆನೃಪತಿಕಂಡನಾಗ ||೯೨||

ಕಾರಿರುಳೆಂಬ ಕಾಂತೆಯ ಕಬರಿಯ ಕಲು | ಹಾರದಮೂಲೆಭೂತಳಕೆ ||
ಆರೈಯದುರುಳ್ವಂದದಿಬೀಳ್ದುದಾ ಉ | ಳ್ಕಾರಾಯನೀಕ್ಷಿಸುತಿರಲು ||೯೩||

ನೀಳ್ಕರಿಸಿದಕಾಂತಿಯಕೂಡಿಕೊಂಡುಕ | ಣ್ಣುಳ್ಕದಮುನ್ನಬೀಳ್ತಪ್ಪ ||
ಉಳ್ಕಾಪಾತಪಕಂಡೆಮ್ಮದೇಹದ | ಜಾಳ್ಕೆಯಿಂತೆಂದೆಣಿಸಿದನು ||೯೪||

ಉರಿಯಬಾಣದಸರಿಯೊಳುಬೀಳ್ವ ಉಳ್ಕನು | ಅರಸನೀಕ್ಷಿಸುತಿಂತುನುಡಿದ ||
ಉರಿಯಬಾಣದ ಬೊಸೆಗಿದಿರಾದ ಪುಲ್ಮನ | ಯಿರವೆವಿದ್ಯಾದೇಹವೆನುತ ||೯೫||

ಪಟ್ಟದಸುದತಿ ಸುನಂದಾದೇವಿಯ | ಮುಟ್ಟಿದ ಮೋಹದಮಗನು ||
ದಿಟ್ಟಸುದೃಷ್ಟಗೆ ಮಹದೈಶ್ವರ್ಯವ | ಕೊಟ್ಟನವನಿಪಾಲಕನು ||೯೬||

ಆವೇಳೆಯೊಳಾನಗರಿಯುದ್ಯಾನಕೆ | ದೇವಸುಮಂದರರಂಬ ||
ಕೇವಲಿಗಳಸಮವಸೃತಿಬರಲಾ | ದೇವದುಂದುಭಿಮೊಳಗಿದುದು ||೯೭||

ಸುಮತಿಯಿಂದದಕೇಳಿ ತಾಸಲ್ಲಿಗಿರದೆಯ್ದಿ | ವಿಮಲಜೋಧರಪದಕೆರಗಿ ||
ರಮಣೀಯಮಪ್ಪ ತಪವನಾಧರಣೀ | ರಮಣೀರಮಣತಾಳಿದನು ||೯೮||

ಆ ಸುನಂದಾದೇವಿ ಮೊದಲಾದ ಸತಿಯರಿ | ಚ್ಚಾಸಿರಸ್ನೇಹದಸುತರು ||
ಸಾಸಿರನೃಪನರರೈನೂರ್ವರೊಡಗೂಡಿ | ಸಾಸಿಗದೀಕ್ಷೆವಡೆದನು ||೯೯||

ದೂರೀಕೃತದುರಿತನು ತನ್ನೊಳೊಡವಂ | ದಾರುಷಿಯರಕೂಡಿಕೊಂಡು ||
ಸಾರಮಪ್ಪಾತಪದೊಳುನೆಗಳ್ದೇಕವಿ | ಹಾರಿಯಾದನುಧರೆಪೊಗಳೆ ||೧೦೦||

ಉರಿಯಮಡಿಲಕಟ್ಟಿಕೊಂಡೊಡರಿಯಬಾರ | ದಿರವಾಂತಾವಾಗಿಯೊಳು ||
ವನಮುಸಿ ನದಿಯತಡಿಯೊಳು ನಾಲ್ದಿಂಗಳು | ನಿರುತಮಾಗನಿಂದಿಹನು ||೧೦೧||

ಸಿಡಿಲಾಲಿವರಲು ಮೊಳಗುಮಿಂಚು ಬಿರುಗಾಳಿ | ಯೊಡಗೂಡಿ ಕರೆವಮಳೆಯೊಳು ||
ಎಡವರಿಯದೆ ನಾಲ್ಕುತಿಂಗಳಾಲದಮರ | ದಡಿಯಬಿಡನು ಜತಿರಾಯ ||೧೦೨||

ಕಡೆಗಾಲದ ಸೂಲಿತೆರೆದನೊಸಲಕಣ್ಣ | ಕಡುಗಿಚ್ಚಿನಂತೆ ಭೂತಳವ ||
ಸುಡುವಬೇಸಿಗೆಯೊಳು ಕಾದಕಲ್ಲಿನಮೇಲೆ| ಯುಡಿದೆಗೆಯನು ಮುನಿವಥನು||೧೦೩||

ಆ ಸಂಯಮಸುವಿಧಾನದಿ ಪಕ್ಷೋಪ | ವಾಸ ಮಾಸೋಪವಾಸವನು ||
ಓಸರಿಸದೆಮಾಡಿಗಿಡಿಗಿಡಿಜಂತ್ರದ | ಪಾಸಟಿಯಾಯ್ತು ನಿಜಾಂಗ ||೧೦೪||

ಅಂಗದೊಳಸುವ ಭಿನ್ನವಪಮಾಡಿ ಏಕದ | ಶಾಂಗವನಾಗಿನಿಶ್ಚಯದಿ ||
ಅಂಗಜನಧಟಮುರಿದು ಮತ್ತಾಮುನಿ | ಪುಂಗವ ತಪಸುಮಾಡಿದನು ||೧೦೫||

ತೀವಿದಸುಜ್ಞಾನದಿಂದ ಮೂಲೋಕವು | ನಾವರಿಸಿದಮಾಳ್ಕೆಯೊಳು ||
ಓನದೆಸನ್ಯಕ್ತ್ವನೊಡಶಾವ ಸೋಡಶ | ಭಾವನೆಯಸುಭಾವಿಸಿದನು ||೧೦೬||

ಎನಗಹಮಿಂದ್ರತ್ವಕೊಡುನೀನೆಂದು | ಜಿನಗೆವಾಳುಂಬಡುವಂತೆ ||
ಮುನಿ ಮೂರುತಿಂಗಳು ಸಸ್ಯಸನದೊಳಿರ್ದು | ತನುಮಾಡಿತನುವಬಿಸುಟನು||೧೦೭||

ನಿರ್ವಾಣಭೂಮಿಗೆ ನೆರೆಮನೆಯೆನಿಸಿಸು | ಸರ್ವಲೋಕಕೆಕಡೆಯೆನಿಸಿ ||
ಸರ್ವಸುಖಕೆನೆಲೆವನೆಯೆಂದೆನಿಸುವ | ಸರ್ವಾರ್ಥಸಿದ್ಧಿಗೆಯ್ದಿದನು ||೧೦೮||

ಮೂವತ್ತಮೂರು ಸಸುದ್ರೋಪ | ಮಾಯುಷ್ಯ | ಮೂವತ್ತುಮೂರುಸಹನ ||
ಆ ವತ್ಸರತೀವೆಯಾಹಾರಪಾಹುಮಂನ್ಯ | ದೇವಗೆಸಂಭವಿಸಿಹುದು ||೧೦೯||

ನಿಃಪ್ರವಿಚಾರಸೌಖ್ಯನು ತಾನೇಕರ | ತ್ನಿಪ್ರಮಾಣಸಂಯುತನು ||
ಸುಪ್ರವಿಚಾರಸದ್ಗುಣ ಶುದ್ಧಸ್ಫಟಿ | ಕಪ್ರತ್ಯಂಗರದಂಜಿತನು ||೧೧೦||

ಭುವನನಾಳಿಕಾಭ್ಯಂತರ ಗತಮಾ | ದವಧಿಸುಬೋಧವಿಭಾಸಿ ||
ವಿವರಿಸೆತಾರ್ಥಸೋಡಶಮಾಸನಿಃಶ್ವಾಸ | ನವಿರಳಸುಖನಹಮಿಂದ್ರ ||೧೧೧||

ನಿರುಸಮಶುಕ್ಲಲೇಶ್ಯಾಪರಿಣಾಮುಬಂ | ಧುರನಾಗಿಯಾ ಅಹಮಿಂದ್ರ ||
ಸುರುಚಿರಸುರಲೋಕಸುಖವನು ಭೋಗಿಸು | ತಿರಲಿತ್ತಭೂತಲದೊಳಗೆ ||೧೧೨||

ಇದು ಜಿನಪದಸರಸಿಜಮದಮಧುಕರ | ಚದುರಮಂಗರಸ ರಚಿಸಿದ ||
ಮದನಾರಿ ನೇಮಿಜಿನೇಶಸಂಗತಿಯೊಳ | ಗೊದವಿದಸಂಧಿಗಳ್ಮೂರು ||೧೧೩||

ಮೂರನೆಯಸಂಧಿ ಸಂಪೂರ್ಣಂ.

೪. ಹರಿವಂಶೋದಯ ಸಂಧಿ

ಶ್ರೀಮದಮರಪತಿ ಪರೌಲಿಕೀಲಿತಪಾದ | ತಾಮರಸದ್ವಯನಜಗೆ ||
ಕಾಮಿತಮದೇಭಹರಿಗೆ ನೇಮಿಜಿನಪತಿ | ಗಾವೋದಪೆಕ್ಕಿರಗುವೆನು ||೧||

ಜಂಬೂದ್ವೀಪದ ಭರತಾರ್ಯಖಂಡ | ವಿಂಬಾಗಿಹುದು ಮತ್ತಲ್ಲಿ ||
ತುಂಬಿದವಕ್ಕೆಯೆಂಬೊಂದು ನಾಡೊಳುಕ್ಕೌ | ಶಾಂಬನೆಸರಪ್ಪಪುರವಿಹುದು ||೨||

ಅದರೊಳು ಮಗಧಮಹೀಪಾಲಕನೆಂ | ಬಧಿಪನಿಹನು ಪ ತ್ಮವಗೆ ||
ಸುದತಿಯಿಹಳು ವನಮಾಲೆಯೆಂಬೋರ್ವಳು | ಸದಮಲಸಿಧಶಲವನನೆ ||೩||

ಅವರೀರ್ವರಗರ್ಭದೊಳು ರಘುವೆಂಬೋರ್ವ | ಕುವರನೊಗೆದು ಭೂತಳವ ||
ವಿವಿಜಲೋಕಮನಮನೇಂದ್ರನಾಳುವೊಲು | ಸವಿನಯದಿಂದಾಳುತಿಹನು ||೪||

ಆಶ್ರಿತಜನಸುರತರು ರಘುನೃಪನನ | ನುಸ್ತುತಕೆಗೊಂಡಿಹನು ||
ವೈಶ್ರವಣೋಪಮವಿತ್ತಸಂಯುತನುರಾ | ಜಶ್ರೇಷ್ಠಿಸುಮುಖಿಸೆಂಬುದನು ||೫||

ಆ ರಾಜಶ್ರೇಷ್ಠಿಗೆ ಜಾಂಧವನಾಗಿಸು | ಚಾರುಗುಣಾಲಂಕೃತನು ||
ವೀರದತ್ತನೆಂಬೋರ್ವ ಪರದನು ಮ | ತ್ತಾತ್ತಾಜಘಾನಿಯೊಳಿಹನು ||೬||

ಆವೀರದತ್ತವೈಶ್ಯನಪಲ್ಲಭೆಕೆಂ | ದಾವರೆಯಲರ್ಜೈಗಳ ||
ಭಾವಕಿವನಮಾಲೆಯೆಂಬೊಳ್ವೆಸರಿನ | ಲಾವಣ್ಯಾಂಗಿಯೊಪ್ಪಿದಳು ||೭||

ಆಕೆಯನಂಗಜವಿಭು ನಿಜವಿಜಯಪ | ತಾಕೆಯ ಪರಿರಂಜಿಸುವ ||
ಆಕಾರವನಾಲೋಕಿಸಿ ವಿರಹೋ | ದ್ರೇಕವಾಯತ್ತಾಸುಮುಖಂಗೆ ||೮||

ನೀತಿಪರಾಜ್ಯಮಿನಾಸುಮುಖನು ಸ | ತ್ಪ್ರೀತಿಪೂಡಿಪರಪಥಗೆ ||
ಅತುರದಿಂದೊಡಬಡಿಸಿ ಕೂಟಕೆ ಸ | ರ್ಗೀತಿಯಪ್ಪುದನೆಣಿಸಿದನು ||೯||

ಪಿರಿದುವಂಚಿಸಿ ವೀರದತ್ತನಕರೆದಾ | ದರದಿಂದಿಂತನುಡಿದನು ||
ಪರದುಗೆಯ್ಯುದೆಸುಮ್ಮನಾಡಿಕೊಂಟಿರ್ಪುದು | ಪರದರಿಗನುಚಿತವೆನಲು ||೧೦||

ಪರಿಮಿತವಸ್ತುವಿಲ್ಲವೆಯೆನಗತಿವಿತ್ತ | ದೊರಕಲು ಬಲಯಾತ್ರೆಯಿಂದ ||
ಪರದುಗೆಯ್ವೆಡೆನಾಂ ನಿಪುಣಸಲ್ಲವೆಯೆಂದು | ಪಿರಿದಾಗಿಮಾತನಾಡಿದನು ||೧೧||

ಆನುಡಿಗೇಳಿಸುಮುಖನಾಗಿ ಸುಮುಖನು | ತಾನೆತಿಪಸ್ಯಾವನವಗೆ ||
ಆನದೆಜಲಯಾತ್ರೆಗೆ ತಕ್ಕುದನುಕೊಟ್ಟ | ನೇಸಂನೆನವಸಮಂಜನೆಯು ||೧೨||
ಪಿರಿದುಸಂತುಷ್ಟವಾನಸಪೀರದತ್ತನು | ವಿರಚಿಸಿಯಾನಪಾತ್ರವನು ||
ವರುಷಹನ್ನೆರಡಕೆ ನನುನಿಸಿಸಮಕಟ್ಟ | ನುರುತಥಬಂಡವತುಂಬಿ ||೧೩||
ಹಡಗೇರಿಹರದುಗೆಯ್ಯಲು ವೀರದತ್ತನು | ಸಡೆಯೆಮತ್ತಿತಾ್ತಸುಮುಖ ||
ಕಡುನೇಹದಿಂಪರಸತಿವನಮಾಲೆಯೊ | ಡೂಡಗೂಟಸಿಶ್ಚಿಂತವಿರಲು ||೧೪||
ವನಯಾತ್ರಾಪರನಾಗಿನಡೆದು ಬಹು | ಧನವಗಳಿಸಿವೀರದತ್ತ ||
ಅನುರಾಗದಿಂದೆಮಗುಳಿಕೌಶಂಜಯು | ವನದಮಧ್ಯದೊಳೆಯ್ದಿತವೆ ||೧೫||
ತನ್ನವನಿಕೆವನಮಾಲೆ ಸುಮುಖನೊಳ | ಗನ್ಯಾಯದಿಂದಾಚರಿಪುದ ||
ಜೆನ್ನಾಗಿನಿಂದಿಪ ಜನವಜನವಕೇಳಿ : ಯುನ್ನತಿಕೆಯಕೋಪದಿಂದ ||೧೬||
ತನಗಾಸುಮುಖನಬಾರಿಸುವಾಶಕ್ತಿ | ಯಿನಿಸಿಲ್ಲದಾವೀರದತ್ತ ||
ಜನನಾಥಗೆ ಮೊರೆಯಿಡುವವೇಳೆಯಕಾಣ | ದನುಮಾಸಿಸಿದನಿಂತೆಂದು ||೧೭||
ಎನ್ನಮನೋರಮೆಗೆಂದುಪತ್ಯವನಾ : ನುನ್ನತಿಯಿಂತಂದೆನವಳು ||
ಅನ್ನಿಗನನು ಮೆಚ್ಚಿದಳೆನುತಾನು | ಪನ್ನಸಿರ್ವೇಗವತಾಳಿ ||೧೮||
ಈಪರಿಯಿಂದ ಚಿಂತಿಸಿಪ್ಪೋಷ್ಟಲಮುನಿ | ಯಾಪಾದಪದ್ಮಾಂತಿಕದೊಳು ||
ತಾಪಸರೂಪಧರಿಸಿ ವೀರದತ್ತನು | ಪಾಪರಹಿತವೃತ್ತನಾಗಿ ||೧೯||
ಸದಮಲಮಪ್ಪತಪದೊಳು ನೆಗಳಿಯಳಿ | ದುದಯಿಸಿಸೌಧರ್ಮವೆಂಬ ||
ಮೊದಲನಾಕದೊಳು ಚಿತ್ರಾಂಗದನೆಂಬೋರ್ವ | ವಿದಿತದಿವಿಜನಾದನಿತ್ತ ||೨೦||
ಉತ್ತಮರಘನೃಪತಿಯಸಖನುಮುಖನು | ಮತ್ತಾವನಪಾಲೆಯೊಡನೆ ||
ಚಿತ್ತಜನಾರತಿಯೊಳುಕೂಡಿದಂತೆಯಿ | ರುತ್ತೊಂದಾನೊಂದುಪಗಳು ||೨೧||
ಸಂಯಮಿಗಳುಚರಿಗೆಗೆ ಬರುತಿರಲಾ | ರೈಯದಿದಿರುಗೊಂಡುಬಳಿಕ ||
ಒಯ್ಯನೆನಿಲಿಸಿ ದಿವ್ಯಾಹಾರವತನ್ನ | ಕೈಯ್ಯಾಗೆದಾನಗೂಡಿದನು ||೨೨||
ಭಿಕ್ಷಾನ್ನವಕೊಂಡು ಬಳಿಕ ಕೈಯೆತ್ತಿಮು | ಮುಕ್ಷುಗಳತಿಹರುಷದೊಳು ||
ಅಕ್ಷಯದಾನಮಕ್ಕೆಂದು ಹಥಸಿಯುಪ | ಲಕ್ಷಿಸಿದರುಧರ್ಮವನು ||೨೩||
ಧರ್ಮಾಧರ್ಮನಿರೂಪಣವನು ಕೇಳಿ | ಕರ್ಮರಹಿತಚಿತ್ತರಾಗಿ ||
ಕೂರ್ಮೆಯಿನಾವನಮಾಲೆಯು ಸುಮುಖನು | ನಿರ್ಮಲಮಪ್ಪಸಂಯಮವ ೨೪||

ಹರಿಸದಿಕ್ಕೈಕೊಂಡಾವ್ರತವನು ಪರಿ | ಹರಿಸಪೆನಡಸಿ ಸುಮುಖನು ||
ಮರಣವನೆಯ್ದಿ ಭರತದವಿದ್ಯಾಧರ | ಗಿರಿಯತಪ್ಪಲೊಳುರಂಜಿಸುವ ||೨೫||

ಹರಿವರುಷಾಖ್ಯವಿಷಯದೊಳು ಶೋಭಾ | ಕರವಪಾದ ಭೋಗಸಗರಿಯ ||
ಅರಸು ಪ್ರಭಂಜನಖಿಚರಂಗಾತನಸತಿ | ಗರುವೆಮ್ಮಕಂಡುವೆಂಬನಳ್ಗೆ ||೨೬||

ವರಸುತನಾಗಿ ಜನಿಸಿಹರಿಕೇತುವೆಂ | ಬುರುತರ ನಾಮವಧರಿಸಿ ||
ಸಿರಿಯಕುಮಾರನಂದದೊಳು ಬೆಳೆದು ಪೊಸ | ಹರೆಯವಾದನು ಬಳಿಕಿತ್ತ ||೨೭||

ಆ ವನಮಾಲೆ ಸತ್ಕಾಂತಿಯಿಷಯದ ವಿ | ಶ್ವಾವಲಯಾಖ್ಯನಗರಿಯ ||
ಭೂವರವಜ್ರಚಾಪಂಗೆ ಸುಭಾಮಾ | ದೇವಿಗೆ ಸಂಭವಿಸಿದಳು ||೨೮||

ಪೊಸಕುಡಿಮಿಂಚಮಸೆದವೊಲುಮಿಗೆ ರಂ | ಜಿಸುವಂಗಲತಿಕೆಯಕಾಂತಿ ||
ಅಸದೃಶವಿದ್ಯುನ್ಮಾಲೆಗೆಯುಸ್ವರ್ಥ | ವೆಸರಾಂತಳಿಯರಿಕೆಯೊಳು ||೨೯||

ಆ ಸುಕುಮಾರಿ ವಿದ್ಯುನ್ಮಾಲೆಯುಸು ಮ | ತ್ಕಾಸಿಂಹಕೇತುಕುವರಗೆ ||
ವಾಸವಸದೃಶಪ್ರಭಂಜನ ನೃಪತಿಯ | ತ್ಯಾಸಕ್ತಿಯಿಂಕೈಗೂಡಿಸಿದ ||೩೦||

ಈತೆರದಿಂದ ಮದುವೆಯಾಗಿಯಾಸಿಂಹ | ಕೇತುವಿದ್ಯುನ್ಮಾಲೆಯೊಡನೆ ||
ಮಾತೇನು ಭವಬದ್ಧಮೋಹದನ್ಯೋನ್ಯಸಂ | ಪ್ರೀತಿಯಿಂದೊಡಗೂಡಿದನು ||೩೧||

ಬಂದಬಸಂತವತುವಿನೊಳಗತ್ಯಾ | ನಂದದಿನಂದನಕ್ಕೈದಿ ||
ಕುಂದಲತಾಮಂಟಪದೊಳವರಿವೊಕ್ಕು | ಕಂದರ್ಪಕೇಳಿಯೊಳಿರಲು ||೩೨||

ಆ ಪೇರದತ್ಯಚರನು ಚಿತ್ಕಾಂಗದ | ದೇವನು ಸಗ್ಗದಿಂದಿಳಿದು ||
ಆ ವನಕೈದಿಯಾಯೆಡೆಯೊಳಗಿರ್ದವ | ಧೂವರರನುಕಂಡನಾಗ ||೩೩||

ಕಂಡತಿಕೋಪಾವೇಶಮಾನಸನಿತ್ತ | ಕೊಂಡುಸುಮುಖಧರ್ಮವಿಮುಖ ||
ಚಂಡಪಾಶಕಿವನಮಾಲೆ ನಿಮ್ಮನುವನು | ಹಿಂಡಿದಲ್ಲದೆ ಸುಮ್ಮನಿಹೆನೆ ||೩೪||

ಎಂದುರೆಮುಟ್ಟಿಮೂದಲಿಸಿ ಬೈವುತಕೊಲ್ವೆ | ನೆಂದುಪೋಪಾಸವಯುದೊಳು ||
ಹಿಂದಣಭವದ ಸುಮುಖಸಚಾಂಧವರಘು | ವೆಂದೆಂಬಾನೃಪವರನು ||೩೫||

ವದನದೊಳೊಗೆದ ಜರೆಯಕಂಡು ವೈರಾಗ್ಯ | ಮೊದವಿವೀಕ್ಷಾವಿಧಿಯಿಂದ ||
ಅದಿರದಳಿದುಮತ್ಕಾಸೌಧರ್ಮ ಕ | ಲ್ಪದೊಳಿರದುದಯಂಗೆಯ್ದು ||೩೬||

ಶರಣಿಪ್ರಭನೆಂಬನಾಮವ ತಳೆದಾ | ಹರಿಕೇತುವಿನ ಪುಣ್ಯದೊದವೆ ||
ನಿರುತಮಾಗಿಬರ್ಪಂತಾಗಸಮೊಳು | ಬರುಶಕಂಡನುಬಳಿಕವರ ||೩೭||

ಕರುಣಹೃದಯನಾಗುತಾ ಚಿತ್ತಾಂಗದ | ಸುರನೊಳಿಂತೆಂದುನುಡಿದನು ||
ಉರುತರಕೋಪದಿನಿವಧನೇಕಾರಣ | ಭರದಿಂಕೊಂಡೊಯ್ವೆಯೆನಲು ||೩೮||

ಅಸಗ್ಗಿಗನೆಂದನು ಪೋದಭವದೊಳು | ಕೌಶಂಬಿಯೆಂಬಪುರವನು |
ಒಸರಿಸದೆ ನೀನಾಳವಂದಿನಸಟ್ಟಿ | ಯಾಸುಮುಖನುವಂಚನೆಯೊಳು ||೩೯||

ಬಲಯಾತ್ರೆಯಿಂದಪರದುಗೆಯ್ಯಿಂದೆನ್ನ | ಕಳುಹಿ ಎನ್ನೀಹೆಂಡತಿಗೆ ||
ಅಳುಪಿದಪಾತಕಿಯಿವಗಾಜ್ಞೆಯಮಾಡ | ಲಳವಂದೆನಗಾದುದಿಲ್ಲ ||೪೦||

ಅಂದಿನಭವದೊಳಗಾದ ಹಗೆಯನಾ | ನಿಂದಿಂತಪ್ಪಭವದೊಳು ||
ಕೊಂದುಹಾಕುವೆನೆಂದು ಕೊಂಡೊಯ್ದೆನೆನಸ | ಲೆಂದನು ಸೂರ್ಯಪ್ರಭನು ||೪೧||

ಇವು ನರಕೀಟಕನಾವುದಿವ್ಯಾಂಗಿಗ | ಳೆವನು ಕೈಮುಟ್ಟಿಕೊಲ್ಲುವುದು ||
ಅವಿವೇಕಮಿಂತಿದರಿಂ ಸಲೆಪಾಪಸಂ | ಭವಿಸುವುದನು ನೀನರಿಯ ||೪೨||

ಸ್ಥಾವರ ಜಂಗಮಜೀವರಾಶಿಗಳೊಳು | ಭಾವಿಸಿನೋಡಿದೊಡೊಂದು ||
ಜೀವಕೆಹಗೆಕೆಳೆಯಾಗಿ ಹುಟ್ಟದರಾರು | ಭಾವಜ್ಞನಿನ್ನರಿಕೆಯೊಳು ||೪೩||

ಪಗೆವರಕೊಲ್ಪೆನೆಂಬಾಸೆಯುಂಟಾದೊಡೆ | ಜಗದಜೀವಗಳೆಲ್ಲನಿನಗೆ ||
ಹಗೆಕೆಳೆಯಾಗಿ ಕೆಲವುಸೂಳೊಳೊಗೆವರು | ಸುಗುಣನೀನಾರಾರಕೊಲ್ಪೆ ||೪೪||

ಅರಿಗಾರಾರುಪಗೆವರು ಬಂಧುಗಳು ಮ | ತ್ತಾರಿಗಾರಾರುಸತಿಯರು ||
ಅರಿಗಾರಾರರಸುಗಳೆಂಬುದಿದಸೋಡು | ಧೀರನೀನೀಸಂಸೃತಿಯೊಳು ||೪೫||

ಅದರಿಂದಾರಾಗದ್ವೇಷಂಗಳ | ಹೃದಯದೊಳಗೆ ನಿಲಿಸುವುದು ||
ಸದಮಲಗುಣಿಗಳಿಗಲ್ಲದ ಕೃತ್ಯವಿಂ | ತಿದನು ನೀನೇಬಲ್ಲೆಯಾಗಿ ||೪೬||

ಜೀವದಯಾಸ್ಥಿತ ಜಿನಧರ್ಮವಿಡಿದೀ | ದೇವಗತಿಯನುರಿಪಡೆದು ||
ಈವಿಧವನು ಮಾಡುವುದು ನಮಗುಚಿತವೆ | ಕೋವಿದಕೇಳುನೀನೆಂದು ||೪೭||

ಇವುಮೊದಲಾದ ಯುಕ್ತಾಯುಕ್ತಿಗಳಿಂದ | ದಿವಿಜನನಾಸೂರ್ಯಪ್ರಭನು ||
ನವನಯದಿಂದೊಡಬಡಿಸಲಂತದನವ | ನವಧರಿಸುತಮಿಂತುನುಡಿದ ||೪೮||

ಎಲೆ ಸೂರ್ಯಪ್ರಭ ನಿನ್ನ ಸೂಕ್ತಿಗಳನು | ಗೆಲುವುದು ಪಿರಿದನುಚಿತವು ||
ಸಲೆಯೆನಗೆಂದಾರಾಜಮಿಥುನವನು | ಕೊಲಲೊಲ್ಲದವಗೆಯೊಪ್ಪಿಸಲು ||೪೯||

ಆ ಸಿಂಹಕೇತುವಿದ್ಯುನ್ಮಾಲೆಯರನಂ | ದಾಸೂರ್ಯಪ್ರಭದೇವ ||
ಆ ಸಗ್ಗಿಗನಕೈಯಿಂದ ತೆಗೆದುಕೊಂಡು | ಲೇಸನವರಿಗೆಮುಂದೆನಿಸಿ ||೫೦||

ಪೆಂಪುವಡೆದುರಾಜಿಸುವಂಗದೇಶದ | ಚಂಪಾಪುರದವನದೊಳು ||
ದಂಪತಿಗಳನುತಂದಿಳಿಪಿ ತನ್ನತ್ತಸಿ | ಕಿಂಪನೆಯ್ದಿದನು ಮತ್ತಿತ್ತ ||೫೧||

ಆ ಚಂಪಾಪುರವರದಧನಾಥನು | ಶ್ರೀಚಂದ್ರಕೀರ್ತಿಯೆಂಬನನು ||
ನೀಚಕೃತ್ಯದೊಳಂತಕನೆಳದೊಯ್ದನು | ಭೂಚಕ್ರಪಳಲುವಂದದೊಳು ||೫೨||

ಆ ನರನಾಥಗೆ ತನುಜಾನುಜ ಸಂ | ತಾನವಿಲ್ಲದಕಾರಣದಿ ||
ಮಾನನಿಧಾನಿಗಳಪ್ಪಮಂತ್ರಿಗಳ ವಿ | ತಾನವೆಲ್ಲವು ಕೂಡಿಕೊಂಡು ||೫೩||

ಪೂಜಿಸಿ ಪಟ್ಟದಗಜವನುಬಿಡಲದು | ರಾಜಧಾನಿಯ ನಂದನಕೆ ||
ಓಜೆಯಿಂದೆಯ್ತಂದಲ್ಲಿ ಮುನ್ನಿರ್ದಾ | ರಾಜಮಿಥುನವನು ಕಂಡು ||೫೪||

ಬರಿಕೈಯೊಳಿರ್ದ ಹೊಂಗಳಸದುದಕವನು | ಸಿರಿದಲೆಗಭಿಷೇಕಮಾಡಿ ||
ಹರಿಸದಿತನ್ನ ಮನ್ಮಕದೊಳಿರಿಸಿ ಪುರ | ವರಕೆ ಬಂದುದು ಭದ್ರಹಸ್ತಿ ||೫೫||

ಸಕಲಾಭರಣಭೂಷಿತರಾಗಿ ಗಜದ ಮು | ಸ್ತಕವನಡರಿಬರುತಿರ್ಪ ||
ಅಕಲಂಕರೂಪಯುತರಕಂಡು ಹರುಷೋ | ತ್ಸುಕರಾದರಾಮಂತ್ರಿಗಳು ||೫೬||

ಪುರದೊಳಗಷ್ಟಪ್ರಕೋಷ್ಠೆಯನಮಾಡಿ ನೃಪನು | ದಿರವ ಹೊಗಿಸಿವಿಭವದೊಳು ||
ಹರಿಕೇತುವಿಗೆ ಪಟ್ಟಾಭಿಷೇಕಮನಾ | ದರದಿಂಮಾಡಿದರವರು ||೫೭||

ಮಂಡಳಿಕರ ಮಂತ್ರಿಗಳ ನಾಮಂತರ | ದುಷ್ಟನಾಥರದುರ್ಗಾಧಿಪರ ||
ಮಂಡಳಿಯೆಲ್ಲನೆರೆದು ಭೂಪತಿ ನಿನ್ಮ | ಮುಂಡಲವನು ಪೇಳ್ವುದೆಸಲು ||೫೮||

ಹರಿಕೇತುನೃಪತಿಯವರೊಳಿಂತೆಂದನೀ | ಭರತದವಿಜಯಾರ್ಧಗಿರಿಯ ||
ಸುರುಚಿರಹರಿವರ್ಷಾಖ್ಯದೇಶದ ಭೋಗ | ಪುರದ ಪ್ರಭಂಜನ ನೃಪನ ||೫೯||

ಸರಸಿಜಪದನೆ ಮೃಕಂಡುವೆಂಬಬಲೆಯ | ವರನಂದನನು ನಾನೆಂದು ||
ಹರಿಸದಿ ತನ್ನವೃತ್ತಾಂತವನೆಲ್ಲವ | ನೊರೆಯಲು ತಾನವರೊಡನೆ ||೬೦||

ಮೈರುತೀರ್ಥಪ್ರವರ್ತನಸುಪ್ರತಿಷ್ಠಿತ | ಹರಿವಂಶದಶಮತೀರ್ಥಕರು ||
ವರಶೀತಳಜಿನಸನಕಾಲದೊಳಾದು | ಚಿರಮಾದುದೀಗ ನಿನ್ನಿಂದ ||೬೧||

ಹರಿವರ್ಷಾಖ್ಯದೇಶಾಧೀಶನೆಯಾಗಿ | ಹರಿಕೇತುವೆಂಬಹೆಸರನೆ ||
ಧರಿಸಿದಕಾರಣಮಿನ್ನು ನಿನ್ನೀವಂಶ | ಹರಿವಂಶವಾಗಲಿಯೆನುತ ||೬೨||

ಪೆಂಡಿರಕುಲಕೆ ಪೇರ್ಮಣಿಯೆನಲಿಸಿವ ಮೃ | ಕಂಡುವಸುತನಾದುದರಿಂ ||
ಮಂಡಲದೊಳು ಮಹೀಪತಿ ನಿನ್ನ ಹೆಸರು ಮಾ | ರ್ಕಂಡೇಯನೆಂದಾಗಲೆಂದು |

ಪುರಪರಿಜನಮೆಲ್ಲ ಮೆಲ್ಲನುಲಿವುತಿರೆ | ನರನಾಥನಾಹರಿಕೇತು ||
ಧರೆಯಭಾರವನೆಲ್ಲನ ತನ್ನ ಕೋಳೊಳು | ಧರಿಸಿಯರಸುಗೆಯ್ವುತಿರ್ದ ||೬೪||
ಬೆಸಸನುಬೇಡಿ ಭೂತಳದರಸುಗಳೆಲ್ಲ | ಮುಸುಕುತಿರಲು ಸಿಂಹಕೇತು ||
ವಸುಧೆಯೆಲ್ಲವನೇಕಚ್ಛತ್ರದೊಳು ಸಂ | ತಸದಿಂದ ಪರಿರಕ್ಷಿಸಿದನು ||೬೫||
ಈತೆರದಿಂದ ರಾಜ್ಯವನಾಳ್ವ ಸಿಂಹ | ಕೇತುವಿದ್ಯುನ್ಮಾಲೆಯರಿಗೆ ||
ಪ್ರೀತಿಯಿಂದಾಹರಿಯೆಂಬ ಪೆಸರ ತನು | ಜಾತ ಜನಿಸಿಯೊಪ್ಪಿದನು ||೬೬||
ಆ ಹರಿಸ್ಯಸುತನಹಿತಸ್ಯಪಾಲ | ವ್ಯೂಹವುಸ್ಮೈಕನತಪದನು ||
ಸಾಹಸಿ ಹಿಮಗಿರಿಯೆಂಬ ಪೆಸರಿನ ಸ | ಮೂಹಿತ ಮತಿಯೊಪ್ಪಿದನು ||೬೭||
ಅವನಬಸಿರಿಸೊಳು ವಸುಗಿರಿಯೆಂಬೋರ್ವ | ಕುವರನೊಗೆದು ವಿಕ್ರಮದೊಳು ||
ಅವನಿಯೆಲ್ಲವನಾಳಿ ಕೀರ್ತಿವಲ್ಲರಿಗಾ | ಭುವನವನಡರುವಾಡಿದನು ||೬೮||
ಆ ವಂಶದೊಳಗೆಯನೇಕ ನೃಪರು ಧರ | ಣೀಶ್ವತಂತಾಗಲಲ್ಲಿ ||
ದೇವೇಂದ್ರಾರ್ಚಿತಪದಮುನಿಸುಸ್ಯತ | ದೇವನು ಸಂಭವಿಸಿದನು ||೬೯||
ಆ ಮುನಿಸುವ್ರತತೀರ್ಥಾಧೀಶನು | ದ್ದಾಮವಂಪದೊಳಗನೇಕ ||
ಭೂಮಿಸತಿಗಳು ಜನಿಸಲಲ್ಲಿ ವಸುವೆಂಬ | ನಾಮದನೃಪನು ಪುಟ್ಟಿದನು ||೭೦||
ಆ ಮಹೀಪತಿ ವಸುವಿನ ಬಸಿರೊಳಗು | ದ್ದಾಮಪರಾಕ್ರಮಯುತರು ||
ಸೋಮಾರ್ಕರಂತೆಸುವಸುಬೃಹದ್ವಸು | ನಾಮದ ಸುತರುಪುಟ್ಟಿದರು ||೭೧||
ಅವರೊಳು ಸುವಸುವ ವಂಶಸಮಿತಿಯೊಳು | ದ್ಭವಿಸಿದ ಶತಮನ್ಯುವೆಂಬ ||
ಅವನೀಶ್ವರಗೆ ಬೃಹದ್ರಥನೆಂಬೋರ್ವ | ಕುವರನೊಗೆದು ರಂಜಿಸುತ ||೭೨||
ಮಗಧದೇಶದ ಮಧ್ಯದೊಳು ರಾಜಗೃಹವೆಂಬ | ನಗರಿಯ ಪರಿಪಾಲಿಸುತ ||
ಸೊಗಯಿಸುತಿರಲು ಜರಾಸಂಧನೆಂಬೋರ್ವ | ಮಗನಾದನಾನೃಪವರಗೆ ||೭೩||
ಅವನ ಪುರಾತನ ಪುಣ್ಯಪ್ರಭಾವದಿಂ | ಭವದಿಜನಿಸೆ ಚಕ್ರಿತ್ವ ||
ಅವನಿಯೊಳುಳ್ಳರಸುಗಳನೆಲ್ಲರ ತನ | ಗವನತರನು ಮಾಡಿಕೊಂಡು ||೭೪||
ಭರತಾವನಿಯತ್ರಿಖಂಡವನೆಲ್ಲವ | ನುರುತರವಿಕ್ರಮದಿಂದ ||
ನಿರುತಮಾಗಿಯೆ ಸಾಧಿಸಿಯರ್ಧಚಕ್ರೇ | ಶ್ವರನಾದ ನಾನೃಪನಿತ್ತ ||೭೫||
ವಸುಧೀಶ ವಸುವಿನಕಿರಿಯಮಗನು ಬೃಹ | ದ್ವಸುನೃಪತಿಯ ವಂಶದೊಳು ||
ಅಸಮವಿಕ್ರಮಿಗಳನೇಕನೃಪರು ಜನಿ | ಯಿಸಿ ಕೀರ್ತಿಪಡೆದಿರಲಲ್ಲಿ ||೭೬||

ಯದುವೆಂಬ ಜನನಾಥನೋರ್ವನು ದಯಗೆ | ಯ್ದಧಟನಾಗಿಯವನಿಯನು ||
ಪಡೆದುಪಾಲಿಸಿಕೀರ್ತಿಯನೆಯ್ದಲಂದಿಂದ | ಯದುವಂಶಮಾದುದಾಕುಲಕೆ ||೭೭||
ಜಸನೆತ್ತಾಯದುವೆಂಬ ನೃಪಾಲನ | ಬಸಿರೊಳು ನರಪತಿಯೆಂಬ ||
ವಸುಧೀಶನೊಗೆದು ಮಧುರೆಯೆಂಬ ಪುರದೊಳ | ಗಸದೃಶನಾಗಿರಲಪಗೆ ||೭೮||
ಶೂರವೀರರೆಂಬ ಹೆಸರಹಡೆದು ಸುಕು | ಮಾರರೀರ್ವರು ಸಂಭವಿಸಿ ||
ಚಾರುಕಲಾನ್ವಿತರಾಗಿ ಬನ್ನವಮಾಂತು | ದಾರಮೂರ್ತಿಗಳಾಗಿರಲು ||೭೯||
ನರಪತಿ ತನ್ನ ಕೆನ್ನೆಯೊಳು ಸಂಜನಿಸಿದ | ನರೆಗಂಡು ನಿರ್ವೇಗವನು ||
ಧರಿಸಿ ಮಕ್ಕಳಿಗೆಯರಸುತನಪನು ಕೊಟ್ಟು | ವರಜಾತವೂಪತಾಳಿದನು ||೭೦||
ಇತ್ತ ಶೂರನೃಪವರನು ಕೃತಾರ್ಥನೆಂ | ಬುತ್ತಮವಾದನೇಶವನು ||
ಒತ್ತಿಸಾಧಿಸಿ ಶೌರೀಪುರವೆಂಬುದ | ಬಿತ್ತರದಿಂಕಟ್ಟಿಸಿದನು ||೭೧||
ಅದರೊಳುತಾನಿರ್ದು ಮಧುರಾಪುರದೊಳು | ಏದಿತನನುಜ ವೀರನೃಪನ ||
ಮುದದಿನಿರಿಸಿ ತಾವಿರ್ವರು ಸುಖಸಂ | ಪದದಿ ರಾಜ್ಯವನಾಳುತಿರಲು ||೭೨||
ಸುರಪತಿಸನ್ನಿಭನಾ ಶೂರನೃಪತಿಗೆ | ಗರುವೆಗಾಂಧಾರಿಗುದ್ಭವಿಸಿ ||
ಚರಮಾಂಗನಾಗಿಯಂಧಕವೃಷ್ಟಿಯೆಂಬೋರ್ವ | ನರನಾಥಚಂದ್ರನೊಪ್ಪಿದನು ||
ವೀರನೃಪಗೆ ನರಪತಿವೃಷ್ಟಿಯೆಂಬ ಕು | ಮಾರನೊಗೆದು ರಂಜಿಸಿದನು ||
ಮಾರಗೆಸರಿಮಿಗಿಲೆನಿಸಿ ಮಿಸುಗುವಾ | ಕಾಡವನಂಗೀಕರಿಸಿ ||೭೪||
ವಿಷ್ಣುಗೆಸರಿಯು ತಪ್ಪಂದದಿಯಂಧಕ | ವೃಷ್ಣಿಕುಮಾರನಮನದ ||
ತೃಷ್ಣೆಗೆತಕ್ಕ ಸುಭದ್ರೆಯೆಂಬೋರ್ವಳು | ಕೃಷ್ಣವೇಣಿಯತಂದನೊಸೆದು ||೭೫||
ಕಿರಿಯಕುವರನರಪತಿ ವೃಷ್ಣಿಗೆ ಮನ | ದೆರಕದಿ ಮದುವೆಮಾಡಿದನು ||
ತುರುಗೆವೆಗಣ್ಗಳ ಪದ್ಮಾವತಿಯೆಂ | ಬರಿಕೆಯು ರಾಜನಂದನೆಯು ||೭೬||
ಅಧಟನಂಧಕವೃಷ್ಣಿನೃಪಗೆ ಸುಭದ್ರಾ | ಸುದತಿಗೆ ಸಂಜನಿಸಿದರು ||
ಸದಮಲರಾ ದಶದಿಶೆಯಾಳ್ವರಾದಿಂ | ದುದಯಿಸಿದರು ದಶಸುತರು ||೭೭||
*ಶರಧಿವಿಜಯನಕ್ಷೋಭನುಸ್ಫಿಮಿತಸಾ | ಗರಹಿಮವಂತವಿಜಯನು ||
ವರಗುಣಿಯಚಲಧಾರಣ ಪೂರಣನುರು | ತರಮೂರ್ತಿಯಭಿನಂದನನು ||೭೮||

ಪಾತಾಂತರ.—* ವನಧಿವಿಜಯನಕ್ಷೋಭನು ಸ್ಥಿಮಿತಸು | ವನನಿಧಿಹಿಮವಂತವಿಜಯ||
ವಿನುತಾಚಲಧಾರಣ ಪೂರಣಾಭಿನಂ | ದನವಸುದೇವನೆಂಬನರು ||೭೮|| ಸುರಲೋಕದೊಳು
ಜನಿಯಿಸಿ ದಶವಿಧಕಲ್ಪ | ತರುಬೆಳೆದೊಪ್ಪುವತೆರದಿ || ಸ್ಮರನಿಭರಾಹತ್ತುಮಂದಿ ಕುಮಾರ | ಕರು
ದಾನಯುತರು ಬೆಳೆದರು ||೭೯||

ಚಿತ್ತಜನಿಭವಸುದೇವವೆಸರವಡೆ | ದುತ್ತಮರಾಹತ್ತುಮಂದಿ ||
ಹತ್ತುವಿಧದಸುರತರುವೀವರರೂಪು | ವೆತ್ತಂದದಿಸೊಪ್ಪಿದರು ||೮೯||
ಇಂತೆಸೆವಾಹತ್ತುಮಂದಿಕುಮಾರಕ | ರಂತರಸೊಳು ಜನಿಸಿದರು ||
ಕೊಂತಿಮಾನ್ಯೆಯರೆಂಬವರು ಪಾರ್ವತಿಗಂಗೆ | ಯಿಂತೆ ಲೀಲಾವಡೆದರು ||೯೦||
ಉಗ್ರವಿಕ್ರಮಿನರಪತಿವೃಷ್ಣಿಯೆಂಬ ನೃ | ಪಾಗ್ರಣಿಗಾಪದ್ಮಾವತಿಗೆ ||
ಉಗ್ರಸೇನ ದೇವಸೇನ ಮಹಾಸೇನ | ರಗ್ರಗಣ್ಯರು ಜನಿಸಿದರು ||೯೧||
ಆ ಮೂವರಿಂನೆರೆಕಿರಿಯಳು ಕೋಮಲ | ತಾಮರಸಾಯತನೇತ್ರೆ ||
ಸೋಮಸದೃಶಮುಖಿಗಾಂಧಾರಿಯೆಂಬೋರ್ವ | ಭಾವಿಸಿಸಂಜನಿಸಿದಳು ||೯೨||
ಇಂತೆಸೆವಾಸುಕುಮಾರರು ಜನ್ಮನ | ನಂತಳೆಯಲು ಕಂಡವರಿಗೆ ||
ಸಂತಸದಿಂರಾಜಸುತೆಯರತಂದು ಭೂ | ಕಾಂತನು ಮದುವೆಮಾಡಿದನು ||೯೩||
ವಿಜಿಗೀಷು ಸಾಗರವಿಜಯುಗೆ ಧರಣೀ | ಭುಜನಂದನೆಯಸೋರ್ವಳನು ||
ತ್ರಿಜಗದೇಕರೂಪವತಿ ಶಿವದೇವಿಯು | ನಿಜಲಗ್ನದೊಳು ತಂದು ಬಳಿಕ ||೯೪||
ಉಳಿದೆಂಟುಮಂದಿ ಕುಮಾರರ್ಗೆ ಭೂಪರ | ಲಲನೆಯರುಗಳೇಣ್ಪರನು ||
ಲಲಿತವಿಭವದಿ ಮದುವೆಮಾಡಿದನಾ | ಇಳೆಯಾಣ್ಮನಾಶೂರನೃಪತಿ ||೯೫||
§(ಕ್ರಮದಿಂದೊಸೆದು ಧೃತೀಶ್ವರಿಯೆಂದೆಂಬ | ರಮಣೆಯಸಕ್ಕೋಭಂಗೆ ||
ಸ್ಥಿವಿತಸಾಗರಗೆ ಸ್ವಯಂಪ್ರಭೆಯೆಂಬಳ | ಹಿಮವಂತಂಗೆ ಸುಸೀಮೆ ||೯೬||
ಎಂಬವಳನು ವಿಜಯುಂಗೆ ಸೀತಾದೇವಿ | ಯೆಂಬವಳನು ಪ್ರಿಯವಚನೆ ||
ಎಂಬಳಸಚಲಭೂವರಗೆ ಪ್ರಭಾವತಿ | ಯೆಂಬಳನಾಧಾರಣಗೆ ||೯೭||
ಕಾಳಿಂದಿಯೆಂಬವಳನು ಪೂರಣಗೆ ವಿ | ಲೋಲಾಕ್ಷಿಜಿನಮತಿಯೆಂಬ ||
ಬಾಲೆಯನಭಿನಂದನಗೆ ಸುಪ್ರಭೆಯೆಂಬ | ಲೀಲಾನಿಧಿಯೋರ್ವಳನು ||೯೮||
ಎಳವಿಯೊಳೆಸಕವಡೆದ ರೂಪಲಾವಣ್ಯ | ದಳೆದಾವಸುದೇವಂಗೆ ||
ವಿಲಸಿತವಿಭವದಿ ಮದುವೆಮಾಡಿದನಾ | ಇಳೆಯರಿಕೆಯೊಳಾನೃಪತಿ) ||೯೯||
ಈತೆರದಿಂ ಪುತ್ರಪೌತ್ರರು ಸಹಿತಧ | ರಾತಳವನು ಪಾಲಿಸುತ ||
ಪ್ರೀತಿಯಿಂದಾ ಶೂರವೀರಭೂವರರು ವಿ | ಖ್ಯಾತಿಯಿಂದಿರಲೊಂದುಪಗಲು ||೧೦೦||
ಭೂವಿಶ್ರುತಮಪ್ಪ ಗಂಧಪೂದನವೆಂ | ಬಾವನಧಾಧರದೆಡೆಗೆ ||
ಭಾವಜರಿಪುಸುಪ್ರತಿಷ್ಠಮುನಿಗಳೆಯ್ದ | ಬಾವಾರ್ತೆಯಕೇಳುತವೆ ||೧೦೧||

---

§ಪಾಠಾಂತರ.—೮೯—೯೭—೯೮—೯೯ ಈ ಪದ್ಯಗಳು (ಜ) ಪ್ರತಿಯಲ್ಲಿಲ್ಲ.

ಮತ್ತಲ್ಲಿಗೆಯ್ದಿ ಧರ್ಮಾಧರ್ಮದಿರವನು । ಚಿತ್ತಶುದ್ಧಿಯೊಳು ಕೇಳುತವೆ ॥
ಸುತ್ತಿಬಿಗಿದ ಮೋಹಪಾಶವ ಹರಿವೆನೆ । ನುತ್ತೈಣಿಸಿದರು ಬೇಗದೊಳು ॥೧೦೩॥

ಇಂತು ನಿರ್ವೇಗನೂನಸೆರಾಗಿ ಯಾ ಮುನಿ । ಕಾಂತಗೆರಗಿಜೀಳ್ಕೊಂಡು ॥
ಸಂತಸದಿಂ ತಮ್ಮ ರಾಜಧಾನಿಗೆ ಭೂ । ಕಾಂತರು ಬಂದೊಂದುಸಗಲು ॥೧೦೩॥

‡ವರಶೌರೀಪುರದೊಳಗಂಧಕವೃಷ್ಣಿ । ಧರಣಿಪನಸು ಮಧುರೆಯೊಳು ॥
ನರಪತಿವೃಷ್ಣಿಯನಿರಿಸಿ ದೀಕ್ಷೆಯನಾಂತ । ನಿರದಾಭೂವರರುಗಳು ॥೧೦೪॥

ಶೂರವೀರರಾಗಿ ಕರ್ಮಧಟರಗೆಲ್ದು । ಶೂರವೀರಮುನಿವರರು ॥
ನಾರಸುಖಸುನಿರದೀವ ಮುಕುತಿಯೆಂಬ । ನಾರಿಯನೊಡಗೂಡಿದರು ॥೧೦೫॥

ಇತ್ತಲಂಧಕವೃಷ್ಣಿನರಪತಿವೃಷ್ಣಿಗ । ಳುತ್ತಮಸತ್ಪ್ರಸಂಯುತರು ॥
ಪತ್ತುದೆಸೆಯೊಳು ತಮ್ಮಯಕೀರ್ತಿವಲ್ಲಿಯ । ಪತ್ತಿಸಿ ಸುಖದೊಳಿರ್ದರು ॥೧೦೬॥

ಶುಭಗುಣಮಣಿಭೂಷಣ ಸುಮನೋಬಾಣ । ನಿಭಸಿರುಪಮ ವಿಕ್ರಮನು ॥
ತ್ರಿಭುವನನುತನತಿಜಶುರಸೊಪ್ಪಿದ ನಾ । ಪ್ರಭುಕುಲಮಣಿದೀಪಕನು ॥೧೦೭॥

ಹಿಡು ಜಿನಪದಸರಸಿಜ ಮದಮಧುಕರ । ಚದುರಮಾಗರಸ ರಚಿಸಿದ ॥
ಮದನಾರಿ ನೇಮಿಜಿನೇಶ ಸಂಗತಿಯೊಳ । ಗೊದವಿದ ಸಂಧಿಗಳ್ನಾಲ್ಕ ॥೧೦೮॥

ನಾಲ್ಕನೆಯಸಂಧಿ ಸಂಪೂರ್ಣಂ.



ಪಾಠಾಂತರ.—‡ಆ ಮಧುರಾಪುರಿಯನು ತಮ್ಮ ಮೈದುನ । ಸೋಮವಂಶಜನು ಸೇನ ॥ ಭೂವಿನಾಶಗೆಯೊಟ್ಟು ಸುತಗೆ ಪಟ್ಟವಕಟ್ಟಿ । ಯಾಮಹಿಮರು ದೀಕ್ಷೆಗೊಂಡು ॥೧೦೪॥

೫. ಧೃತರಾಷ್ಟ್ರ ಗಾಂಧಾರಿ ವಿವಾಹಸಂಧಿ.

ಶ್ರೀಮದಮರಪತಿಮೌಲಿಕೀಲಿತನಾದ | ತಾಮರಸದ್ವಯನಜಗೆ ||
ಕಾಮನುದೇಹಹರಿಗೆ ನೇಮಜಿನಪತಿ | ಗಾವೋದವೆತ್ತಿರಗುವೆನು ||೧||

ಒಂದಾನೊಂದುಪಗಲು ಮುಂಡಳಿಕರ | ಸಂದಣಿ ತನ್ನನೋಲೈಸೆ ||
ಅಂದವಡೆದ ವಿಭವದಿನೋಲಗದೊಳು | ಕಂದರ್ಪನಿಭಕುಳ್ಳಿರಲು ||೨||

ಆ ವೇಳೆಯೊಳು ಹಸ್ತಿನಪುರನರಪಿಂ | ಭಾವಕರೆನಿಪ ಮಂತ್ರಿಗಳು ||
ಆ ಓಲಗಶಾಲೆಗೆಯ್ದಿಯಂಧಕವೃಷ್ಟಿ | ಭೂವನಿತೇಶನಕಂಡು ||೩||

ವಿನಮಿತರಾಗಿ ವಿನಯದಿಂದುಚಿತಾ | ಸನದೊಳು ಕುಳ್ಳಿರ್ದು ಬಳಿಕ ||
ಜನಪತಿ ವಿಸ್ಮಪಕುರುಕುಲಮಣಿದೀಪ | ನನುಸಮಗುಣಿ ಭೀಷ್ಮಭೂಪ ||೪||

ದೇವರಬಳಿಗೆನ್ಮನಟ್ಟಿದನೆನಲಾ | ಭೂವರನಂಧಕವೃಷ್ಟಿ ||
ಆವುದು ಕಜ್ಜಮೆಂದೆನಲವರೆಂದರು | ಲಾವಣ್ಯಯುತರೆಮ್ಮ ನೃಪನ ||೫||

ವರತನುಜಾತರ್ಗೆ ನಿಮ್ಮತನುಜೆಯರ | ಸುರುಮುದದಿಂ ಕುಡಹೇಳಿ ||
ಧರಣೀಶನಿಮ್ಮಲ್ಲಿಗೆಮ್ಮನಟ್ಟಿದನೆನ | ಲರಸು ಮಂತ್ರಿಯನೋಡಿದನು ||೬||

ಅರಸು ಮೊಗವನೋಡಲುವ್ಯಾಯನನೆಂಬ | ವರಮಂತ್ರಿಯಾಮಹತ್ತರರ ||
ಹರುಷವೊದವೆನೋಡಿ ನಿಮ್ಮನ್ಯಪರಕುಲ | ದಿರವನೆಮಗೆ ಪೇಳಿಮೆನಲು ||೭||

ಆಮಾತಿಗಾಮಹತ್ತರರೊಳಗೋರ್ವನು | ದ್ದಾಮಗಂಭೀರವಾಕ್ಯದೊಳು ||
ಭೂಮಿಗೆ ಸೂತ್ರಧಾರಕನೆನೆನೆರೆವಾ | ಶ್ರೀಮದಾದೀಶ್ವರನೊಸೆದು ||೮||

ಮೊತ್ತಮೊದಲಕಾಲದೊಳು ವಂಶಭೇದವ | ಬಿತ್ತರದಿಂ ನಿರ್ಮಿಸಿದನು ||
ಮತ್ತಾಕುಲದೊಳು ಕುರುವಂಶವೆಂಬುದ | ತ್ಯುತ್ತಮಮಾಗಿ ರಂಜಿಪುದು ||೯||

ಆವಂಶದೊಳು ಸೋಮಪ್ರಭನೆಂಬೋರ್ವ | ಭೂವರಸಿಹನವನನುಜ ||
ಭೂವಿಶ್ರುತದಾನತೀರ್ಥಪ್ರವರ್ತನ | ಕೋವಿದನಾಶ್ರೇಯಾಂಸ ||೧೦||

ಅಜನಪತಿ ಸೋಮಪ್ರಭನೃಪನ ತ | ನೂಜಾತ ಜಯನೃಪನೆಂಬ ||
ತೇಜನು ಬುಧಜನಸುರಭೂಜನು ಘನ | ತೇಜನು ಸಂಭವಿಸಿದನು ||೧೧||

ಕೃತಯುಗ ಚಕ್ರೇಶಭರತಗೆ ಸೇನಾ | ಪತಿರತ್ನಮಾಗಿ ಭೂಮಿಯನು ||
ಪ್ರತಿಪಾಲಿಸಿ ಕಡೆಯೊಳು ದೀಕ್ಷೆವಡೆದು | ನ್ನತಸಿದ್ಧ ಪದವನೆಯ್ದಿದನು ||೧೬||

ವಿನುತ ಸೋಮಪ್ರಭ ಜನಿತಮಾದುದರಿಂ | ಘನತರಮಪ್ಪಾವಂಶ ||
ಅನುಕರಿಸಿತುಸೋಮವಂಶಾಭಿಧಾನಮ | ನನಿಮಿಷಪತಿಯರಿಕೆಯೊಳು ||೧೩||

ವಿಸ್ತಾರಮಪ್ಪಾವಂಶದೊಳೊಗೆದು ಸ | ಮಸ್ತನೃಪರು ಪೋಗಲಲ್ಲಿ ||
ಹಸ್ತಿಯೆಂಬರಸನುದಿಸಿ ತನ್ನ ಹೆಸರೊಳು | ಹಸ್ತಿಪುರವಕಟ್ಟಿಸಿದ ||೧೪||

ಬಳಿಕಪಲವು ಭೂಪಾಲಕರುದಯಿಸಿ | ಕಳಿಯೆ ಮತ್ತಾವಂಶದೊಳು ||
ಬಳಿಕರ್ಮವಿಜಯನುದ್ಭವಿಸಿದನನೀ | ತಳವಂದ್ಯಶಾಂತಿತೀರ್ಥಕರು ||೧೫||

ಬಳಿಕದರೊಳಗರ್ಧಪಲ್ಯೋಪಮಕಾಲ | ಕಳಿಯಲು ಸಂಭವಿಸಿದನು ||
ಕಲಿಲಾರಣ್ಯದವಾಸಲಕುಂಥು ಕೇ | ವಲಬೋಧವಿಭ್ರಾಜಿತನು ||೧೬||

ಆ ಕುರುಕುಲದಲ್ಲಿ ಜನಿಸಿದರುದ್ಧತ | ಭೀಕಭಕಪರ್ಮಾಪಹರರು ||
ಲೋಕಸ್ತವನೀಯರು ಘನಕೀರ್ತಿ | ಸ್ವೀಕೃತರರತೀರ್ಥಕರು ||೧೭||

ಮತ್ತೆಕೆಲವುಕಾಲ ಪೋಗಲಂತದರೊಳು | ಉತ್ತಮರೂಪಸಂಯುತನು ||
ಚಿತ್ತಜಸನ್ನಿಭಶಕ್ತಿಯೆಂಬೋರ್ವ ನೃ | ಪೋತ್ತಂಸನುದ್ಭವಿಸಿದನು ||೧೮||

ಆ ಶಕ್ತಿನೃಪತಿಗೆ ಧಾರಿಣಿಯೆಂಬ ಸು | ಕೇಶವಲ್ಲಭೆಯಾದಳವಗೆ ||
ಕೌಶಲ್ಯಸುದರೆಂದೆನಿಪಪರಾಶರ | ನಾಶಾಂತನು ಜನಿಸಿದರು ||೧೯||

ಶಾಂತನಿಗರಸುತನವನಿತ್ತು ಶಕ್ತಿಭೂ | ಕಾಂತಪರಾಶರಸಹಿತ ||
ತಾಂ ತಳೆದನು ನಿಜಪಾರಿವ್ರಾಜಕ | ಸಂತತಿಯೊಳು ದೀಕ್ಷೆಯನು ||೨೦||

ಇತ್ತಲುಜ್ಜ್ವಲಕೀರ್ತಿಯುತ ಶಾಂತನುಭೂ | ಪೋತ್ತಂಸನೊಂದುದಿನದೊಳು ||
ಮತ್ತಾಪೊಳಲಬಹಿರ್ವನದೊಳಗೆ ಬ | ರುತ್ತಿರ್ದೊಂದುತಾಣದೊಳು ||೨೧||

ವಿಮಲಶಶಾಂಕವದನೆ ವಿದ್ಯಾಧರ | ರಮಣಿಯೋರ್ವಳು ಮುದದಿಂದ ||
ಸಮೆದೊಂದುಕೂಪವನಾನೀರೊಳು ತನ್ನ | ಕಮನೀಯಮಪ್ಪ ಭೂಷಣವ ||೨೨||

ಹಾಕಿಮತ್ತಾ ಕೂಪದತಡಿಯೊಳು ನಿಂದು | ಶೋಕಿಸುತಿರೆ ಕಾಣುತವೆ ||
ಭೂಕಾಂತಶಾಂತನುಮವಳಸದೃಶನು | ಪ್ಪಾಕಾರಕೆ ಸೋಲ್ತನಾಗ ||೨೩||

ಈತೆರದಿಂಸೋಲ್ತೆಲೆ ಬಾಲಕಿನೀ | ನೇತರದುಃಖದಿಂದಳಲ್ವೆ ||
ಆತೆರವನು ಪೇಳೆನಲವಳೆಂದಳು | ಭೂತಳಪತಿ ಶಾಂತನುವಿಗೆ ||೨೪||

ಸೊಗಯಿಸುವೆನ್ನ ಭೂಷಣವಿಾನೀರೊಳ | ಗಗುಳಿವೆಯಿವನೋರ್ಮೆಯೊಳು ||
ತೆಗೆದೆನಗೀವವರಾರನುಕಾಣದೆ | ಮಿಗೆದುಃಖಿಸಿದೆನು ಕುಮಾರ ||೨೫||

ಎನಲೆಂದನಿದಕುಮ್ಮಳವೇಕೆ ನಾನೊಂ | ದಿನಿಸರೊಳಗೆ ತೆಗೆದೀವೆ ||
ವನಿತೆನೋಡೆನಲೆಂದಳಂತಾದೊಡೆ ನಾನು | ನಿನಗೆ ರಮಣಿಯಾಗುವೆನು ||೨೬||

ಇಂತೆನಲವನಿಪನೆಲೆಬಾಲೆ ನಿನ್ನ ವೃ | ತ್ತಾಂತವನೆನಗೆವೇಳಿಸಲು ||
ಕಾಂತೆಯೆಂದಳು ವಿಜಯಾರ್ಧಮಹೀಧರ | ದಂತಕದೆಸೆಯಶ್ರೇಣಿಯೊಳು ||೨೭||

ಸುರುಚಿರಪೃಥ್ವೀತಿಲಕವೆಸರಪುರ | ವರದಮಹೀಧರನೆಂಬ ||
ಅರಸುಖೇಚರಗೆ ಮನೋಹರಿಯೆಂಬೋರ್ವ | ತರುಣಿಗೆ ನಾನುಪುಟ್ಟಿದೆನು ||೨೮||

ಈಪರಿಬೆಳೆದು ಲಕ್ಷ್ಮೀಮತಿವೆಸರಾಂತು | ಶ್ರೀಪಂಚಮಿಯ ನೋಂಪಿನೊಳು ||
ಈಪೊಡವಿಯ ಮಧ್ಯದೊಳಿಪ್ಪ ಮೇರುವಃ | ಹಾಪರ್ವತಕೆಯ್ತುತವೆ ||೨೯||

ಅಲ್ಲಿಯಕೃತ್ರಿಮಜೈತ್ಯಾಲಯಕೆಯ್ದಿ | ಸಲ್ಲೀಲೆಯಿಂ ಸಿದ್ಧರನು ||
ನಿಲ್ಲದೆ ಪೂಜಿಸುತಿರೆ ಚಾರಣಮುನಿ | ವಲ್ಲಭರಾಗಲೆಯ್ದಿದರು ||೩೦||

ಅವರಿಗೆರಗಿ ಧರ್ಮಾಧರ್ಮದಿರವನು | ತವೆಕೇಳಿಯತಿವೇಗದೊಳು ||
ಭವಪಾಶವನು ಹರಿವೆನೆಂಬಬುದ್ಧಿಸಂ | ಭವಿಸಿದುದಂತರಂಗದೊಳು ||೩೧||

ಮನದೊಳು ಹೇಯವಂಕುರಿಸಲೂರಿಗೆ ಬಂದು | ಜನನೀಜನಕರನುಕಂಡು ||
ಜಿನಗಂಧೋದಕವನುಕೊಟ್ಟು ದೀಕ್ಷೆಯ | ನನುಕರಿಸುವೆನಾನೆನಲು ||೩೨||

ಆ ಮಾತುಗೇಳಿಯೊತ್ತರವತ್ತಿದಂದದಿ | ತಾಮಿಂತೆಂದಾಡಿದರು ||
ಪ್ರೇಮದ ಗಂಡುಮಕ್ಕಳು ನಮಗಿಲ್ಲಾಗಿ | ಭಾಮೆ ನೀನೇರಾಜ್ಯಕೊಡತಿ ||೩೩||

ಪಿಂತಣ ಭವದ ಪಾಪದ ಫಲದಿಂ ಗಂಡು | ಸಂತಾನವೆಮಗಿಲ್ಲವಾಗಿ ||
ಕಾಂತೆ ನೀನೇಗಂಡುಮಗುವೆಂದು ನಾವು ನಿ | ಶ್ಚಿಂತರಾಗಿರ್ದೆವಿಂದುವರ ||೩೪||

ಬೇಡ ಮಗಳೆ ಗಂಡುಮಕ್ಕಳಹಡೆದೆಮ್ಮ | ನಾಡುಬೀಡಿಗೆಕರ್ತುಗಳನು ||
ಮಾಡಿ ಬಳಿಕದೀಕ್ಷೆಗೊಳ್ಳೆಂದು ನನ್ನನು | ಬೇಡಿಕೊಂಡರುದೈನ್ಯದೊಳು ||೩೫||

ವರಮಾತಾಪಿತೃಗಳ ಮಾತನು ಪರಿ | ಹರಿಸದೆ ಬಳಿಕನಾನೆನಗೆ ||
ಸರಿಯಹ ಸತ್ಪುರುಷರು ನಮ್ಮವಿದ್ಯಾ | ಧರಲೋಕದೊಳಿಲ್ಲವಾಗಿ ||೩೬||

ಸದಮಲಮಪ್ಪಭೂಚರರೊಳುಮುದದಿಂ | ಪುದುವಾಳ್ವೆನೆಂದಿಳೆಗಿಳಿದು ||
ಮುದನಸದೃತ ನಿನ್ನ ಕುಲ ನಿನ್ನ ಬಲ ನಿನ್ನ | ಪದುರತೆಯನು ನೆರೆಕೇಳಿ ||೩೭||

ನೀನೇವಲ್ಲಭನಾಗಲುಬೇಕೆಂದು | ನಾನಿದಹಣ್ಣಿದೆನೆನಲು ||
ಆ ನರಪತಿಯಾಕೂಪದೊಳಗುಳಿದ | ಮಾನಿತಮಣಿಭೂಷಣವನು ||೩೮||

ಶರದಿಂದ ಶರಾವ ಪುಂಖಾನುಪುಂಖಿಯೊಳೆಚ್ಚು | ಧರದಿಂದತೆಗೆಯಲುಕಂಡು ||
ಉರುಮುದವೆತ್ತಲಲನೆನೃಪಗತ್ಯಾ | ದರದಿಂದಿಂತನುಡಿದಳು ||೩೯||

ತಡೆಯದೆನ್ನಾತನುಜರಸುರನದಿಯೊಳು | ಬಿಡುವುದತಾನುದೀಕ್ಷೆಯನು ||
ಕಡೆಯೊಳು ಕೈಕೊಂಬುದಕೆಯವನಿಪತಿ | ಯೊಡಂಬಡಬೇಕುನೀನೆನಲು ||೪೦||

ಅಂತೇಗೆಯ್ವೆನೆನಲು ಕಡುಹರಿಸವ | ತಾಂ ತಾಳಿ ಬಿಜರಕುಮಾರ ||
ಶಾಂತನು ಕುರುಕುಲಚೂಡಾಮಣಿಯೊಳ | ಗಿಂತೆಂದು ಮಾತನಾಡಿದಳು ||೪೧||

ಮುದನಸದ್ಯಶನೀಸತಿವಿಭವದಿಸುರ | ನದಿಯವೇಳಾವಸದೊಳಗೆ ||
ಪದಪಿಂದಬಂದಿರುನಾನಾಮಡುವಿನಿಂ | ದುದಯಿಸಿದಂತೆಯ್ದುವೆನು ||೪೨||

ಎನುತತಾನಾನದಿಯೊಳಗೆ ಮುಳುಗಿಬರ್ಪ | ದಿನದವೇಳೆಯಹೇಳಿಕೊಟ್ಟು ||
ವನಿತೆಯಾಗಳೆಪೋಗಿಯಾವಾರ್ತೆಯು ತನ್ನ | ಜನಕಗರಿಕೆಯಮಾಡಿದಳು ||೪೩||

ಅನುಡಿಗೇಳಿಯಾತನು ಹರಿಸವ ತಾಳ | ಲಾನಾರಿಯಾಶಾಂತನುವಿಗೆ ||
ಸಾನಂದದಿನುಸುರಿದವೇಳೆಯೊಳು ಮ | ತ್ತಾನದಿಗಾಗಿಬಂದಿರಲು ||೪೪||

ಅತ್ತಲವನಿಪತಿಶಾಂತನು ಸಂತಸ | ವೆತ್ತುಮಹಾವಿಭವದೊಳು ||
ಚಿತ್ತರಮಪ್ಪಗಂಗೆಯತಡಿಗೆಯ್ದಿಪಾ | ರುತ್ತಿರ್ದನವಳಬರವನು ||೪೫||

ಅನಿತರೊಳಮೃತಸಮುದ್ರದಿಂದಾಸಿರಿ | ಜನಿಯಿಸಿಪೊರಮಡುವಂತೆ ||
ವನಿತಾಮಣಿಲಕ್ಷ್ಮೀಪತಿಮುಂದಾ | ಕೆನಿಯಿಂಪೊರಮಟ್ಟಳಾಗ ||೪೬||

ವಿಾಂಗಳಪುರಿಗಂಗಳಜಕ್ಕವಾಕಕು | ಮಂಗಳತಾಮರೆಮೊಗದ ||
ಅಂಗನೆಗಂಗೆಯೆಂಬುದದಿನಾ ದೇವ | ಗಂಗೆಯಿಂಪೊರಮಟ್ಟಳಾಗ ||೪೭||

ಹೊಳೆಯಪುಡುವಿನಿಂದ ಪೊರಮಡುವಾ ಕೋ | ಮಲೆಯನಿದಿರುಗೊಂಡುತಂದು ||
ಸುಲಲಿತಮಪ್ಪಲಗ್ನದೊಳು ಮದುವೆನಿಂದು | ತಳೆದನುಸಲೆಸಂತಸವನು ||೪೮||

ಗಂಗೆಯುಮಡುವಿಂದ ಬಂದಕಾರಣದಿಂದ | ಗಂಗೆಯೆಂದೆಂಬನಾಮವನು ||
ಅಂಗನೆಗಿತ್ತು ಮಮತೆಯಿಂದಾನೃಪ | ತುಂಗನವಳನಾಳುತಿರಲು ||೪೯||

ಸುದತಿತನಗೆಜನಿಸಿದಮಕ್ಕಳೇಣ್ಬರ | ನದಿಯೊಳುಬಿಟ್ಟಂತೆಮಾಡಿ ||
ಪದೆದುವಿದ್ಯೆಗಳಿಂದ ತನ್ನ ಜನಕನೆಡೆ | ಗೊದವಿದಮುದದಿಸಟ್ಟಿದಳು ||೫೦||

ನುತ್ತನೊಂಬತ್ತನೆಯಣುಗನನಾಸತಿ | ಹೆತ್ತಾನದಿಯೊಳುಬಿಟ್ಟು ||
ಹೆತ್ತಮಕ್ಕಳಸಲಹುವೆನೆಂಬಭಿಲಾಷೆ | ವೆತ್ತಾಮಗುವಸುತರಿಸಿ ||೫೧||

ತತ್ತಸುಜಾತಗೊಲಿದು ಭೀಷ್ಮನಾಮವ | ನಿತ್ತಾಗಂಗಾದೇವಿ ||
ಹೆತ್ತುದರಿಂ ಗಾಂಗೇಯಾಭಿಧಾನಮು | ನುತ್ತಮನಾನೃಪನಿಡಲು ||೫೨||

ಧರೆಯೊಳು ತನಗೆಣೆಯಾರಿಲ್ಲವೆಂಬಂ | ತರಮಗನಾಗಾಂಗೇಯ ||
ವರರೂಪಗಾಡಿವಿಕ್ರಮದೊಡಗೂಡಿಬಂ | ಧುತನಾಗಿಹರೆಯವೇರಿದಸು ||೫೩||

ಹರೆಯವಡೆದಮಗನಸುಕಂಡು ಬಿಜತ್ತಿ | ದರಿಲಕ್ಷ್ಮೀಮತಿತನ್ನ ||
ಸುರುಚಿರಮಪ್ಪವಿದ್ಯೆಗಳನೆಲ್ಲವನವ | ಗುರುಮುದದಿಂಕೊಟ್ಟಬಳಿಕ ||೫೪||

ಒಡಲೊಳು ಮೊದಲುಹೂಣಿದ ವೈರಾಗ್ಯವೆಂ | ಬೊಡವೆಯುತೆಗೆದುವಲ್ಲಭನ ||
ಮುಡದಿಯೊಡಂಬಡಿಸುತ ಜಿನದೀಕ್ಷೆಯ | ಕಡುವೇಗದಿಂಕೊಂಡಳಾಗ ||೫೫||

ನುತನುಪ್ಪತಪಸಿನಫಲದಿಂದಾ ಶ್ರೀ | ಮತಿತನುಭಾರವನಿಳುಹಿ ||
ಅತಿಶಯಮೆನಿಪ ಸೌಖ್ಯವನುಸಂಭವಿಸುವ | ಚ್ಯುತಕಲ್ಪದೊಳುಜನಿಸಿದಳು ||೫೬||

ಇಂತಚ್ಯುತಕಲ್ಪದೇವನಾಗಿರಲಿತ್ತ | ಶಾಂತನುವಿರುತೊಂದುಪಗಲು ||
ತಿಂತಿಣಿಗೊಂಡರಸುಗಳುವೆರಸಿ ನಿ | ಶ್ಚಿಂತದಿ ವೊರಮಟ್ಟುಬಳಿಕ ||೫೭||

ಬಂದು ಗಂಗೆಯತಡಿಯೊಳು ತಾಪಸಾಶ್ರಮ | ವೊಂದಿರಲಂತದರೊಳಗೆ ||
ಇಂದುವದನೆತಾಪಸಸುತೆಯೋರ್ವಳು | ನಿಂದಿರಲವಳನೋಡಿದನು ||೫೮||

ಮುಸುಕಿದವಿರಹದಿಂದಾಶಾಂತನು ಭೂಪ | ನಸದೃಶೆಯಾಕೆಯತಂದೆ ||
ವಸುವೆಂಬಗೊರವನನಾಪೆಣ್ಮಣಿಯನು ಸಂ | ತಸದಿಂದಬೇಡಿಸಲವನು ||೫೯||

ಪಾಯಕಳೆದವರಿಗಬಲೆಯಕೊಡುವುದ | ನ್ಯಾಯಮೆನಲು ಕೇಳಿನೃಪತಿ ||
ಕಾಯಜಕಣೆಗೆತನುವನೊಡ್ಡಿ ಪುರಕೆಬಂ | ದಾಯಾಸಗೊಳುತಿರಲಾಗ ||೬೦||

ತಂದೆಗೆ ವಿರಹವಂಕುರಿಸಲು ಕೇಳ್ದಾ | ನಂದನಭೀಷ್ಮಕುಮಾರ ||
ಬಂದಾತಪಸಿಯಲ್ಲಿಗೆ ಮುದದಿಂನಮ್ಮ | ತಂದೆಗೆಕೊಡು ನಿನ್ನ ಮಗಳ ||೬೧||

ಎನಲವನೆಂದನೆಲೇಭೀಷ್ಮಸುಕುಮಾರ | ನೆನುತವಿಕ್ರಮಿಕೇಳುನಿನಗೆ ||
ಅನುಚರರಾಗುವರೆನ್ನ ಮಗಳು ಹೆತ್ತ | ತನುಜರದರಿಂಕೊಡೆನಾನು ||೬೨||

ಎಂದುಬಿಟ್ಟೆಯವಾತನುಡಿಯಲು ಭೀಷ್ಮನಿಂ | ತೆಂದನುನನಗೀಭವಕೆ ||
ಇಂದುಮುಖಿಯರಾರಾಜ್ಯವು ನಿರ್ವೃತಿ | ಯೆಂದುವ್ರತವಧರಿಸಿದನು ||೬೩||

ಈತೆರದಿಂಬ್ರಹ್ಮಚರ್ಯಸಂಯಮನವಿ | ಖ್ಯಾತಧರಿಸಲಾತಪಸಿ ||
ಪ್ರೀತಿಯಿಂತನ್ನತನುಜೆ ಸತ್ಯವತಿಯನು | ಭೂತಳೇಶಗೆಕೊಟ್ಟನೊಸೆದು ||೬೪||

ಧಾತ್ರಿಪನಿಂತುಮದುವೆನಿಂದಾಮೃಗ | ನೇತ್ರೆಯೊಳೊಲಿದಿರಲವರ್ಗೆ ||
ಪುತ್ರರು ಜನಿಯಿಸಿದರು ಚಿತ್ರವೀರ್ಯ ವಿ | ಚಿತ್ರವೀರ್ಯರೆಂಬವರು ||೬೫||

ಸುತರನುಸಲಹುತ ಶಾಂತನುಭೂಪತಿ | ಮತಿಹೀನನೆನೆನಗಾಗಿಮಗನು ||
ನುತಗುಣಿಭೀಷ್ಮನು ಸತಿಯರತೊರೆದನು | ದತಿಚಿಂತಾಕ್ರಾಂತನಾಗಿ ||೬೬||

ಎನ್ನಲ್ಪಸುಖಕಾಗಿ ಸುತನಸುಖವು ತಪ್ಪಿ | ತಿನ್ನೇಕೆಬಾಳ್ವೆನೆಂದೆನುತ ||
ಉನ್ನತಗುಣಿಶಾಂತನುಧರಿಯಿಸಿದನು | ಸನ್ಮತಜಿನದೀಕ್ಷೆಯನು ||೬೭||

ಬಳಿಕಿತ್ತಭೀಷ್ಮಾನುಜರು ವಿಕ್ರಮಗೂಡಿ | ಬೆಳೆದವರೊಳುಚಿತ್ರವೀರ್ಯ ||
ತಳುವದೆ ಷಡಭೂಪರೊಳುಕಾದಿಯುವರನು | ಗಳೆದುತಾನಲ್ಲಿಯಳಿದನು ||೬೮||

ಬಳಿಕವಿಚಿತ್ರವೀರ್ಯಗೆ ಭೀಮನೃಪಕುಲ | ತಿಲಕನುನ್ನತರೂಪವನು ||
ತಳೆದಂಬಿಕೆಯುಂಬೆಯುಂಬಾಲೆಯೆಂಬ ಹೆಂ | ಗಳನು ಕಾಶೀಜನಪದದ ||೬೯||

ಒಡೆಯನಮಕ್ಕಳ ಬೇಡಿಕಳುಹಲವ | ಕುಡದಿರಲಾವಾರ್ತೆಗೇಳಿ ||
ಕಡುಗಲಿ ಭೀಷ್ಮನವನೀಲೆ ದಾಡೆತ್ತಿ | ನಡೆದವನನು ನೆಲಕೆಕ್ಕಿ ||೭೦||

ಆ ಮೂವರುಸತಿಯರತಂದು ತಮ್ಮಗೆ | ನ್ನೇಮದಿ ಮದುವೆಯಮಾಡೆ ||
ಆ ಮನುಜೇಶಕುಮಾರನನರೊಳು | ದಾ ಮನಸುಖದಿ ಕೂಡಿರಲು ||೭೧||

ಅಂಬೆಗೆಧೃತರಾಷ್ಟ್ರನೆಂಬ ಜಾತ್ಯಂಧನು | ಅಂಬಿಕೆಗಾ ಪಾಂಡುನೃಪತಿ ||
ಎಂಬವನಂಬಾಲೆಗೆ ನುತ್ಕೃವಿದುರನೆಂ | ದೆಂಬವರುದ್ಭವಿಸಿದರು ||೭೨||

ಪುತ್ರರು ಪುಟ್ಟಲೊಡನೆ ರೋಗದಿಂದವಿ | ಚಿತ್ರವೀರ್ಯನು ಸತ್ತುಪೋಗೆ ||
ಕ್ಷತ್ರಿಯಕುಲದೀಪ ಭೀಷ್ಮನವರಸಾಕಿ | ಧಾತ್ರಿಯೊಳತಿಕೀರ್ತಿವಡೆದ ||೭೩||

ಎಂದಿಂತಾಕುರುಕುಲದ ವಿಸ್ತಾರವ | ನೊಂದಿನಿಸಿಲ್ಲದೆಪೇಳಿ ||
ಕಂದರ್ಪನಿಭರೂಪನಂಧಕವೃಷ್ಟಿಗಿಂ | ತೆಂದನು ಮತ್ತಾಮಂತ್ರಿ ||೭೪||

ಅವನಿಪಕೇಳು ವಿಚಿತ್ರವೀರ್ಯನ ಸುತ | ರವರಿಗೆ ನಿಮ್ಮ ಸುತೆಯರ ||
ಸವಿನಯದಿಂಕುಡಕೇಳಿಯಬ್ಬಿದನೆಮ್ಮ | ನವಿರಳಗುಣಿಭೀಷ್ಮಸೇನಲು ||೭೫||

ಈರೀತಿವಡೆದ ನಿಮ್ಮವನಿಪಾಲಕನುಸು | ಮಾರಕರಾಮೂವರೊಳು ||
ಆರಗ್ರಜಾತರವರಿಗೆಮ್ಮಮಕ್ಕಳ | ನಾರೈಯದೀವೆನೆಂದೆನಲು ||೭೬||

ಅರಸುತನಕೆ ಕರ್ತು ಧೃತರಾಷ್ಟ್ರನೆಲ್ಲಕೆ | ಹಿರಿಯನೆನೆಸಲು ಭೂವರನು ||
ಪಿರಿದುವಿಚಾರಿಸಿದನು ತನ್ನಮನದೊಳು | ನಿರುತವುಪ್ಪಾಕಾರ್ಯವನು ||೭೭||

ಹುಟ್ಟುಕುರುಡನಾದೊಡಮೇನೂ ಧೃತರಾಷ್ಟ್ರ | ಪಟ್ಟಕೆಕರ್ತುವಾದುದರಿಂ ||
ನೆಟ್ಟನೆಯುವಗೆ ಮಕ್ಕಳಕುಡಬಹುದೆಂದು | ದಿಟ್ಟನೆಣಿಸುತಿಂತುನುಡಿಪ ||೭೮||

ಹಿರಿಯಕುವರ ಧೃತರಾಷ್ಟ್ರಗೆ ನಮ್ಮಾ | ನರಪತಿವೃಷ್ಟಿಯುಸುತೆಯ ||
ಹರಿಸದಿಕುಡುವೆನೆಂಬಾನುಡಿಗಾಮುತ್ರಿ | ವರರನುರಾಗಮನೆಯಿ್ದ ||೭೯||

ಅರಸನಕೈಯಿಂದ ಬಳಿಕ ಬೀಳ್ಕೊಂಡತಿ | ಭರದಿಂದ ಪೊರಮಟ್ಟುಬಂದು ||
ವರಹಸ್ತಿನಪುರಕೆಯ್ದಿ ಭೀಷ್ಮರಕಂ | ಡೊರೆದರಂಪಾಕಾರ್ಯವನು ||೮೦||

ಆ ನುಡಿಗೇಳಿ ಶೌರೀಪುರಕಾಭೀಷ್ಮ | ಭೂನಾಥನೆಯ್ದಿಮದುವೆಯ ||
ಸಾನಂದದಿ ಮಾಡಿದನು ಧೃತರಾಷ್ಟ್ರಗೆ | ಭೂನುತೆ ಗಾಂಧಾರಿಯನು ||೮೧||

ಉರುತರವುಪ್ಪವಸ್ತುವ ಬಳುವಳಿಗೊಟ್ಟು | ನರಪನಂಧಕವೃಷ್ಟಿಕಳುಹೆ ||
ಹರಿಸದಿಮದವಕ್ಕಳುಗೂಡಿ ಹಸ್ತಿನ | ಪುರಕೆಬಂದನು ಭೀಷ್ಮನೃಪತಿ ||೮೨||

ಪುರವನುಪೊಕ್ಕುಮತೊ್ಮಂದುದಿವಸದೊಳು | ಗರುವೆಕೊಂತಿಯನು ಪಾಂಡುವಿಗೆ ||
ಹರಿಸದಿಕುಡುಹೇಳಿ ಕಳುಹಿದವರ ಕೂಡೆ | ಧರಣೀಶನಂಧಕವೃಷ್ಟಿ ||೮೩||

ನವಪಾಂಡುತೋಗವಿಡಿದ ಪಾಂಡುಕುವರಗೆ | ಯುವತೀಮಣಿಕೊಂತಿಯನು ||
ಸವಿನಯದಿಂದೀವುದುಚಿತವಲ್ಲೆನಲು ಪು | ತ್ರನರು ತಿರುಗಿದವಾರ್ತೆಯನು ||೮೪||

ಅರಿದಾಪಾಂಡುಕುಮಾರನಾ ಕೊಂತಿಯು | ಮೆರೆವವಿಲಾಸವಿಭ್ರಮವ ||
ನೆರೆಕೇಳಿಕಿವಿನೇಟಗೊಂಡು ವಿರಹದೊಳು | ಮರುಗುತಿರ್ದೊಂದುದಿನದೊಳು ||೮೫||

ಪುರದಬಹಿರ್ವಂದನಕೆಪೋಗಿ ವಿಹರಿಸು | ತಿರೆ ವೊದಲೋರ್ವಖೇಚರನು ||
ವರಸತಿಯೊಳು ಕ್ರೀಡಿಸುತಿರ್ದು ತನ್ನಕೈ | ವೆರಲಕಾಮನುದ್ರಿಕೆಯನು ||೮೬||

ಅಲ್ಲಿ ಮರೆದುಪೋಗಲದನಾ ಪಾಂಡು ಭೂ | ವಲ್ಲಭನೆತ್ತಿಕ್ಕೈಗಿಟ್ಟು ||
ಸಲ್ಲೀಲೆಯಿಂದಿರಲಾ ವಿದ್ಯಾಧರ | ನಿಲ್ಲದಾ ವಡೆಗೆಯ್ತಂದು ||೮೭||

ಎನನರಸುವರಿ ನೀವೆಸಲವನೆಂದ | ನಾನೆನ್ನ ಕೈಯಮುದ್ರಿಕೆಯ ||
ತಾನೆಲಜೊಳುಕೆಡಹಿದೆನೆನೆ ಕೇಳ್ದಾ | ಮಾನಿನಿಗಂಜಿ ಪಾಂಡುಸೃಪತಿ ||೮೮||

ಭರದಿಂದ ತನ್ನವಶದೊಳಿರ್ದ ರನ್ನದುಂ | ಗುರವನು ಕೊಡಲಂದವನು ||
ಉರುಹರುಷವತಾಳಿ ಎಲೆ ಭೂನುತಗುಣಿ | ವರಸತ್ಯನಿಧಿ ಸುಕುಮಾರ ||೮೯||

ಮರಸದೆನ್ನೀಕಾಮಮುದ್ರಿಕೆಯನು ಕೈ | ದೊರೆದುಕೊಟ್ಟಿಯಲಾ ಎಂದು ||
ಎರಕದಿಂದಾಪಾಂಡುಕುವರನ ಕೊಂಡಾಡಿ | ನೆರೆಗುಣಿಯಾಖೇಚರನು ||೯೦||

ಇದುಕಾಮಿತಫಲವೀವ ಮುದ್ರಿಕೆಯುಂ | ತಿದುನಿನ್ನ ವಶದೊಳಿರಲಿ ||
ಇದು ನೀನುಬಯಸಿದ ಕಾರ್ಯವಕೊಡುವುದೆಂ | ದದರ ಮಂತ್ರವ ಹೇಳಿಕೊಟ್ಟ ||
ಮತ್ತಮಿಂತೆಂದನು ವಿಜಯಾರ್ಧಭೂಧರ | ದುತ್ತರದಿದಿರಶ್ರೇಣಿಯೊಳು ||
ಉತ್ತಮಮಾದ ಕಿನ್ನರಗೀತವೆಂಬೊಂದು | ಪತ್ತನದಧಿಪತಿನಾನು ||೯೩||

ನನ್ನ ಹೆಸರು ವಜ್ರಮಾಲಿ ನಾನಾವಾಗ | ನಿನ್ನೆಡೆಗೈದಿದಾಕ್ಷಣವೆ ||
ರನ್ನದನುದ್ರಿಕೆಯನುಕೊಡು ನೀನೆಂದು | ತನ್ನ ನೆಲೆಗೆಪೋದನಿತ್ತ ||೯೪||

ಸುಕುಮಾರನಾಪಾಂಡುನೃಪತಿಯಾಕಾಮುಮು | ದ್ರಿಕೆಯೊಂದುನಾಮಾರ್ಥ್ಯದಿಂದ ||
ಸುಕರಮಪ್ಪೊಂದು ವಿಮಾನವರಚಿಸಿಯು | ತ್ಸುಕದಿಂದ ತಾನದನೇರಿ ||೯೫||

ಒಡನಾಡಿಗಳುಕೂಡಿ ನೀರದಪಥದೊಳು | ನಡೆದು ಶಾರೀಪುರಕ್ಕೈದಿ ||
ಮಡದಿವಾಣಿಕಕೊಂತಿಯಾಡುವ ವನವನು | ಕಡುರಸಿಕನುಹೊಕ್ಕನತ್ತ ||೯೬||

ಕೊಂತಿ ನಾಲಕು ನೀರುಮಿಂದು ಕೆಳದಿಯರ | ತಿಂತಿಣಿಯನು ಕೂಡಿಕೊಂಡು ||
ಕಾತು ರಾಜನವಲ್ಲಭೆಯೆಂಬಂದದಿ | ತಾಂತಳರಿದಳಾಬನಕೆ ||೯೭||

ಬನದೊಳುತೊಳಲಿಯಾಡುತ್ತಿರ್ದಭಿನವ | ಮನಸಿಜನಂದದೊಳಿರ್ಪ ||
ಜನತಾಧಿಪಪಾಂಡುರಾಜಭಾಸ್ಕರನಾ | ವನಜಲೋಚನೆ ಕಂಡಳಾಗ ||೯೮||

ಕಾಣಲೊಡನೆತನ್ನ ಮನದೊಳು ಮನಸಿಜ | ಬಾಣಗಳೆಡೆಯಾಡುತಿರಲು ||
ತಾ೯ಣವಡಗಿಯಿವನಾರೆಂದು ಸಖಿಯರ | ಏಣಲೋಚನೆಕೇಳಿದಳು ||೯೯||

ಸುದತೀಮಣಿ ಗಾಂಧಾರಿಯಪರಿಣಯ | ನದೊಳಾಧೃತರಾಷ್ಟ್ರನೊಡನೆ ||
ಮುದದಿಂದ ಬರಲಿವನನು ನಾವುಕಂಡೆವಂ | ತದರಿಂದಪಾಂಡುಕುಮಾರ ||೯೯||

ನಿನ್ನ ಸೋದರಭಾವನೆನಲಾಸುಡಿಗೇಳಿ | ಉನ್ನತಮಪ್ಪಕಾತರದಿ ||
ತನ್ನ ಮನವನಾತಗೆ ಮಾರುಗೊಟ್ಟಾ | ಚೆನ್ನೆನಿರೀಕ್ಷಿಸುತಿರಲು ||೧೦೦||

ಕೆಳದಿಯರವರ ಕಾತರದಚಿತ್ತವನರಿ | ದಲಘುತರಪ್ರೀತಿಯಿಂದ ||
ತಳುಮಾಡದೆ ಗಾಂಧರ್ವವಿವಾಹವ | ನೆಳಸಿಮಾಡಿದರಂತವರ್ಗೆ ||೧೦೧||

ಆ ಗಾಂಧರ್ವವಿವಾಹಾಂತರದೊಳು | ರಾಗದಿಂದಾಪಾಂಡುನೃಪತಿ ||
ಪೂಗೋಲನಾ ರತಿಯೊಳು ಕೂಡಿದಂದದಿ | ನಾ ಗದುವೆಯೊಳು ಕೂಡಿದನು||೧೦೨||
ಅರುಮರಿಯದಂತೆ ನಾಲ್ಕೆಂಟುದಿವಸ ಮ | ತ್ತಾರಮ್ಯವನದೊಳಗಿರ್ದು ||
ಆ ರಮಣಿಯೊಳು ಬೀಳ್ಕೊಂಡಾಪಾಂಡು ಕು | ಮಾರ ತಮ್ಮೂರಿಗೈದಿದನು ||
ಇತ್ತಕೊಂತಿಗೆ ಗರ್ಭಚಿಹ್ನವು ದಿನದಿನ | ಕೊತ್ತಂಬಿಸಿ ಗೂಢಮಿರ್ದು ||
ಮತ್ತಮದಾಡುಮರಿಯದಂತೆ ಶಿಶುವನು | ಹೆತ್ತಳು ಶುಭಲಗ್ನದೊಳು ||೧೦೪||
ಆ ಸುಕುಮಾರನನೊಂದುಮಂದಾಸಿನೊಳ್ | ರಾಸಿಮಾಡಿದ ರತ್ನಸಹಿತ ||
ಆ ಸಹಚರಿಯರಿರಿಸಿಸೋಮವಂಶಜ | ನೀಸಿಸುವೆಂದು ಶುದ್ಧಗೆಯ್ದು ||೧೦೫||
ಅಂದಮಾಗಿ ಬರೆದದನಲ್ಲಿ ಪರಿವ ಕಾ | ಳಿಂದೀನದಿಯೊಳುಬಿಡಲು ||
ಅಂದಿನಪಗಲೊಳಗಾಮಂದಸುಪರಿ | ತಂದುದುಕಡುವೇಗದೊಳು ||೧೦೬||
ಮಿಗೆಸೊಗಯಿಸುವಂಗದೇಶದ ಚಂಪಾ | ನಗರಿಯಾರವೆಯಕೆಲದೊಳು ||
ಧಗಧಗಿಸುತಬರುತಿರಲದನೋರ್ವನಂ | ಬಿಗನು ತೆಗೆದು ಮುದದಿಂದ ||೧೦೭||
ತನ್ನ ಮನೆಗೆ ಕೊಂಡುಪೋಗಿ ಮಂದಸಿನೊಳು | ರನ್ನದರಾಸಿಯನಡುವೆ ||
ಹೊನ್ನಬೊಂಬೆಯವೊಲು ಹೊಳೆವಸಿಸುವಕಂ | ಡುನ್ನತಹರ್ಷವತಾಳಿ ||೧೦೮||
ಕರಗಳನೆರಡನೆರಡುಕರ್ಣದೊಳಗಿಟ್ಟು | ಕರವೊಪ್ಪುತಿರಲಾಸಿಸುವಿಗೆ ||
ಹರಿಸದಿ ಕರ್ಣನೆಂಬಭಿಧಾನವುನಿತ್ತು | ಪಿರಿದಳ್ತಿಯಿಂ ಸಾಕುತಿರಲು ||೧೦೯||
ಆ ನಗರಿಯ ಸೂರ್ಯನೆಂಬ ಮಹೀಪತಿ | ತಾನಾವಾರ್ತೆಯಕೇಳಿ ||
ತಾನಪುತ್ರಿಕನಾದುದರಿಂ ತಡೆಯದೆ | ಸಾನುರಾಗದಿ ತರಿಸಿದನು ||೧೧೦||
ಆ ಮಂದಸಿನೊಂದುಕೆಲದೊಳು ಬರೆದಿರ್ದ | ಸೋಮವಂಶಜನೀತನೆಂಬ ||
ನಾಮದಕ್ಕರಗಳನೋದಿಸಿ ನೋಡಿಯು | ದ್ದಾಮಹರ್ಷವನೆಯ್ದಿದನು ||೧೧೧||
ತನ್ನ ನೋಹದರಾಧೆಯೆಂಬ ರಮಣಿಗಿತ್ತು | ಚೆನ್ನಾಗಿ ಸಲಹುತಲಿರಲು ||
ಚೆನ್ನೀಸರು ಮೂಡಗಡೆಬೆಳೆವಂದದಿ | ಸನ್ನುತವೆತ್ತುಬೆಳೆದನು ||೧೧೨||
ಸುರಭೂಜಾತದ ಸಸಿಯಂದದೊಳಾ | ಸುರಭಿಯಸಿಸುವಿನಂದದೊಳು ||
ವರಚಿಂತಾಮಣಿಗರುವಿನಂದದೊಳು ಬಂ | ಧುರನಾದನಾಸುಕುಮಾರ ||೧೧೩||
ಇದುಜಿನಪದಸರಸಿಜ ಮದ ಮಧುಕರ | ಚದುರ ಮಂಗರಸ ರಚಿಸಿದ ||
ಮದನಾರಿ ನೇಮಿಜಿನೇಶ ಸಂಗತಿಯೊಳ | ಗೊದವಿದಸಂಧಿಗಳೈದು ||೧೧೪||

ಐದನೆಯ ಸಂಧಿ ಸಂಪೂರ್ಣಂ.

೬. ಪಾಂಡು ಕೊಂತಿ ಮಾದ್ರಿ ವಿವಾಹಸಂಧಿ

ಶ್ರೀಮದಮರಪತಿ ಮೌಲಿಕೀಲಿತಪಾದ | ತಾಮರಸದ್ವಯನಜಗೆ ||
ಕಾಮನುದೇಭಹರಿಗೆ ನೇಮಿಜಿನಪತಿ | ಗಾವೋದವೆತ್ತೆರಗುವೆನು ||೧||

ಮತ್ಕಾಸೂರ್ಯನೃಪತಿಗಾರಾಧ್ಯಗೆ | ಉತ್ತಮರೂಪ ಸಂಯುತನು ||
ಉತ್ತುಂಗತೇಜದಿ ಕರ್ಣನೆಂಬವನು | ತ್ಪತ್ತಿಯಾದನು ಬಳಿಕಿತ್ತ ||೨||

ಆ ಹೆಣ್ಮಣಿ ಕೊಂತಿಯೊಳು ಗಾಂಧರ್ವ ವಿ | ವಾಹದಿನಾಪಾಂಡುಕುವರ ||
ನೇಹದಿನೆರೆದುದನಾಸಿಸು ಜನಿಯಿಸಿ | ದಾಹದ ಹೊರಹೊಮ್ಮಲದನು ||೩||

ಅರಸ‡ನಂಧಕವೃಷ್ಟ್ಯಕ್ಕೇಳ್ದತಿಚಿಂತಾ | ತುರನಾಗಿ ತನುಜೆಯೆಸಗಿದ ||
ದುರಘವ್ಯಾಪಾರಕಿನ್ನೇವೆನೆಂದದ | ಪರಿಹರಿಸಲುಬೇಕೆಂದು ||೪||

ನವಗಿನ್ನೇನೆಂದೆನಬಾತದೆಂದಾ | ಕುವರಿಕೊಂತಿಯನು ಪಾಂಡುವಿಗೆ ||
ಸವಿನಯದಿಂದೀವುದು ಮತವೆಂದಾ | ಸುವಿವೇಕಿಕಾರ್ಯವನೆಣಿಸಿ ||೫||

ಸುರಸಿಂಧುಜನಲ್ಲಿಗೆ ಪಾಂಡುಗೆವ್ಮಾ | ತರಳೆ ಕೊಂತಿಯನೀವೆನೆಂದು ||
ಚರರಕಳುಹಲಂತಡಕ್ಕೇಳಿ ಪಾಂಡುಭೂ | ವರನಿಂತೆಂದಾಡಿದನು ||೬||

ಕಿರಿಯತನುಜೆ ಮಾದ್ರಿಯನು ಕೊಟ್ಟಲ್ಲದೆ | ಬರಿದೆ ಕೊಂತಿಯನೊಲ್ಲೆನೆಂಬ ||
ಇರುಕುವಾತಾಡಲದನು ಕೇಳಿಯಾ ನಾ | ಡಿರೆಯನಂತೇಗೆಯ್ವೆನೆನಲು ||೭||

ಗಾಂಗೇಯನಾಪುರಕಯ್ದಲು ತನ್ನ ಮ | ನಂಗೊಳಿಪಾಕನ್ನೆಯರನು ||
ಅಂಗಜನಿಭಪಾಂಡುವಿಗೆಯಂಧಕವೃಷ್ಟಿ | ಮಾಂಗಲ್ಯವನು ಮಾಡಿದನು ||೮||

ಇಂತು ಮದುವೆಮಾಡಿಯುಡುವಲಿಯನುಕೊಟ್ಟು|ಕೊಂತಿಮಾದ್ರಿಯರನು ಕಳುಹೆ||
ಕಂತುಸದೃಶಪಾಂಡು ಸಹಿತಾಭೀಷ್ಮಭೂ | ಕಾಂತನೆಯ್ದಿದ ನಿಜಪುರಕೆ ||೯||

ಅತಿವಿಭವದಿ ಹೊಳಲನು ಹೊಕ್ಕಿರಲಾ | ಧೃತರಾಷ್ಟ್ರ ಪಾಂಡುಕುವರರು ||
ಸತತಸುಖಿಗಳಾಗಿರಲಾಭೀಷ್ಮಭೂ | ಪತಿಯೊಂದಾನೊಂದುಪಗಲು ||೧೦||

ಪಾಠಾಂತರ.—‡ಅಂತದಕ್ಕೇಳ್ದು.

ಹಿರಿಯರಂದದಿ ರಾಜ್ಯಪದವಿಯನಿತ್ತೊಡೆ | ಕುರುಡನಿವನು ಕಿರಿಯನವಗೆ ||
ಹಿರಿಯನಿದ್ದಂತೀಯಬಾರದೆನುತ ಸಚಿ | ವರರೊಳಾಲೋಚನೆಗೆಯ್ದು ||೧೧||

ವಸುಧೆಯನಾಧೃತರಾಷ್ಟ್ರಗೆ ಪಾಂಡುಗೆ | ಪಸುಗೆಯೆರಡ ಮಾಡಿಕೊಟ್ಟು ||
ಪಸುಳೆಯಾಗಿರ್ದ ವಿದುರಕುಮಾರನ | ನೊಸೆದು ತಾನೋವುತಲಿರ್ದ ||೧೨||

ಧರೆಯದುರ್ಧರತರ ವಿಕ್ರಮದಿಂದಾಳು | ತುರುಮುದದಿಂ ಧೃತರಾಷ್ಟ್ರ ||
ಪಿರಿಯಣ್ಣನೊಳು ಕೂಡಿಯಾಡುತ ಪಾಂಡುಭೂ | ವರನು ವಿರಾಜಿಸುತಿರ್ದು ||೧೩||

ಕೊಂತಿಮಾದ್ರಾದೇವಿಯರೊಳು ಒಲಿದು ನಿ | ಶ್ಚಿಂತನಾಗಿಯೊಂದುಪಗಲು ||
ಕಂತುಗುತ್ಸಹವನು ಮಾಡುತ ಬಂದ ಬ | ಸಂತಮಾಸದ ಸಮಯದೊಳು ||೧೪||

ರನ್ನಗೆಲಸದ ವಿಮಾನನಿರವೇರಿ | ಚೆನ್ನೆ ಮಾದ್ರಾದೇವಿಸಹಿತ ||
ಸನ್ನುತಮಪ್ಪೊಂದಾನೊಂದು ವನಕಾಗಿ | ಯುನ್ನತಗುಣಿಯೈದಿದನು ||೧೫||

ನಂದನದೊಳು ನಲವಿಂದತಿಯೊಡನಾ | ಕಂದರ್ಪನೊಸೆದಿರ್ಪತೆರದಿ ||
ಇಂದುವದನೆ ಮಾದ್ರಿಯೊಳು ಪಾಂಡುನೃಪತಿಯಾ | ನಂದದಿ ರಮಿಯಿಸಿಬಳಿಕ ||

ಮಿಗೆಸೊಗಯಿಸುವಾ ವನದ ಬಾಗಿಲೊಳಿರ್ದು | ದಿಗವಲೋಕನಗೆಯ್ವಾಗ ||
ಮಿಗಗಳೆರಡು ಮುಂದೆ ಪರಿತರಲಾನೃಪ | ನೊಗೆದುದು ಕೋಪಾವೇಶ ||೧೭||

ಇಟ್ಟಣಿಸಿದ ಕೋಪದಿಂದ ಬಿಲ್ಲೊಳು ಶರ | ದೊಟ್ಟಾಮಿಗಗಳನೆಸಲು ||
ತೊಟ್ಟನೆ ಬೆಳ್ಗರೆವುತ ತಮ್ಮಸುವನು | ಬಿಟ್ಟು ನೆಲಕೆಬೀಳ್ವುವಾಗ ||೧೮||

ಕರುಣಮಿಲ್ಲದೆಯಂಪರಿಣಿಯುಗವನಾ | ಧರಣೀಶಸೆಚ್ಚುದಕಂಡು ||
ಪಿರಿದುಮರುಕದಿಂದಾ ಮಾದ್ರಾದೇವಿ | ಯೊರೆದಳು ತಾನಿಂತೆಂದು ||೧೯||

ಅಪರಾಹ್ಣಹೀನಸಂಗಳವನು ಪರೀಕ್ಷೆಯಿಂ | ದಪಗತಕಾರುಣ್ಯದಿಂದ ||
ವಿಪರೀತವೃತ್ತಿಯಿಂದವೆ ಹತಿಯಿಸುವುದು | ನೃಪನ ಸದ್ವರ್ತನವಹುದೆ ||೨೦||

ಎಂದುನುಡಿದ ಸುದತಿಯಮಾತು ಮನಸಿಗೆ | ಬಂದು ಬಿಲ್ಲಂಬನೀಡಾಡಿ ||
ಒಂದಿದ ಕರುಣಹೃದಯನಾಗುತಾನೃಪ | ಕಂದರ್ಪನಿರ್ಪಳೆಯೊಳು ||೨೧||

ಆ ಉದ್ಯಾನಕುತ್ತಮಬೋಧಸಂಯುತ | ಪಾವನಮುನಿಯೋರ್ವನೆಯ್ದಿ ||
ಆ ವರವಧುಗಳ್ಗಿಗೆ ಭಕ್ತಿಯಿಂದೆಯ್ದಿ | ಭಾವಶುದ್ಧಿಯೊಳಿರದೆನಗಿ ||೨೨||

ಕರಕಮಲವ ಮುಗಿದೆಲೆಮುನಿನಾಥಾ | ಎರಲೆಯೆರಡ ಕಂಡೆನಗೆ ||
ಉರುತರಮಪ್ಪ ಮುನಿಸುಬಂದಿತೀಕೆನೆ | ವರಮುನಿಯಿಂತನುಡಿದನು ||೨೩||

ಸುರುಚಿರಮಾಪ್ಪವಿನಿತಾಖಂಡದ | ಕುರುಣೆಯೆಂಬಗ್ರಹಾರದೊಳು ||
ಹರುಷದಿಂ ವಟುಕವೆಸರಹಡೆದವನೀ | ಸುರನಿಪ್ಪನಾ ಬಿದಿಯಂತೆ ||೨೪||

ಅವಗೆಯಗ್ಗಲೆಯೆಂಬಂಗನೆಯಿಹಳು ಮ | ತ್ತವರಿಗೆ ದಾರಕನೆಂಬ ||
ಕುವರನಾಗಿನೀನನುದಿನ ವೇದವ | ನುವಿಧಾನದಿಂದೋದುತಿರಲು ||೨೫||

ಜಿನಮಾರ್ಗದೊಳಗೆ ತಾತ್ಪರ್ಯವು ನಿನಗೆ ಸಂ | ಜನಿಸಿವೇದವನೋದಬಿಟ್ಟು ||
ಜನನುತಮಪ್ಪ ಪಂಚಾಣುವ್ರತಂಗಳ | ನನುಕರಿಸುತ ಮನಮೊಸೆದು ||೨೬||

ಚಿಂತಾವಿರಹಿತನಾಗಿಯಾಪುರದನ | ಸಂತಪಾಲೆಯೆಂಬೋರ್ವ ||
ಕಾಂತೆಯೊಳೊಡಗೂಡಲಾ ದ್ವಿಜವಂಶಕೆ | ಕುಂತಾಯಿತೆಂದು ಕೋಪದೊಳು||೨೭||

ಆ ಪಟುಕನುಬಂದು ಚಪ್ಪರಿಸಲ್ಕದ | ಭಾವಿಸದಾಸೂಳೆಯೊಡನೆ ||
ತೀವಿದೊಲವಿನಿಂದಿರ್ದೊಂದುದಿನದೊಳಾ | ಗಾ ಊರನಂದನಕೆಯ್ದು ||೨೮||

ಭಾವಜಕೇಳಿಯೊಳೊಂದು ಪೂವಿನಮನೆ | ಯೋವರಿಯೊಳು ಲಜ್ಜೆಸೊರೆದು ||
ನೀವೊರಗಿರಲಲ್ಲಿಗಾವಟುಬಂದು ಕೋ | ಪಾವೇಶಮಾನಸನಾಗಿ ||೨೯||

ಕೂರಸಿಯಿಂದಿರಿಯಲು ನೀನುಸತಾ | ನಾರನ ವ್ರತಫಲದಿಂದ ||
ಈ ರಮ್ಯವಡೆದಾಕಾರದ ಪಾಂಡುಕು | ಮಾರನಾದೆ ನೀನರನ ||೩೦||

ಬಳಿಕವಟುಕನನ್ಯಾಯವ ಕೇಳ್ದಾ | ಪೊಳಲ ಪಾರ್ವರು ನಮ್ಮಕುಲದ ||
ಒಳಗೆ ನೀನಲ್ಲವೆನುತ ಪರಿಭವಿಸುತ | ಕಳೆಯುತಾರ್ತದಿನವನಳಿದು ||೩೧||

ಹರಿಣನಾದನು ನಿನಗದರಿಂದದಕಾಣು | ತುರುತರಕೋಪವಂಕುರಿಸಿ ||
ಮರಣವನದಕೆಮಾಡಿದೆಯೆಂದುಪೇಳ್ದ ಮ | ತ್ತುರುತರ ಧರ್ಮವರ್ತನವ ||೩೨||

ನಿರವಿಸೆ ಕೇಳ್ದಮತ್ತವರನು ಬೀಳ್ಕೊಂಡು | ತರುಣಿಸಹಿತ ಪುರವರಕೆ ||
ಹರುಷದಿಂ ಬಂದು ಧರ್ಮೋದ್ಯೋಗದೊಳು ಗುರು | ತರಚಿತ್ತನಾಗಿರ್ಪುತಿರಲು||೩೩||

ನುತರೂಪವತಿ ಕೊಂತಿಯಬಸಿರೊಳಗೆಯು | ಚ್ಯುತಕಲ್ಪದಮರನಲ್ಲಿಂದ ||
ಚ್ಯುತನಾಗಿಬಂದು ಬೆಳೆದುನವಮಾಸ ದು | ನ್ನತವಹಶುಭಲಗ್ನದೊಳು ||೩೪||

ಸುತನಾಗಲಾ ಸಿಸುವಿಗೆ ಹತ್ತುದಿನದೊಳ | ಗತಿಶಯಮಪ್ಪವೈಭವದಿ ||
ಕ್ಷಿತಿಪಾಲಕನು ಯುಧಿಷ್ಠಿರನಾಮವ | ನತಿಮುದದಿಂದಿತ್ತನಾಗ ||೩೫||

ಧರ್ಮೋದ್ಯೋಗದೊಳೊಗೆದಕಾರಣದಿಂದ | ಧರ್ಮಜನೆಂಬಪೆಸರನು ||
ಪೇರ್ಮೆಗುಏಗೆ ಕೊಟ್ಟು ಪಾಂಡುನೃಪತಿಯತಿ | ನಿರ್ಮಲಚಿತ್ತನಾಗಿರಲು ||೩೬||

ಬಳಿಕ ತದಚ್ಯುತಕಲ್ಪದಮರನೋರ್ವ | ನಿಳಿದಲ್ಲಿಂದೆಯ್ತಂದು ||
ಲಲಿತಾಂಗನಾಗಿ ಕೊಂತಿಯ ಬಸಿರೊಳುಬಂದು | ಬೆಳೆದನುನವಮಾಸತುಂಬಿ||೩೭||

ಮೂಲನಕ್ಷತ್ರದೊಳೊಗೆಯಲು ಕಂಡದ | ನಾಳೋಚಿಸಿ ಬಂಧುಗಳು ||
ಹೇಳದೆ ನೃಪಗೆ ಪರೇತವನದೊಳಾ | ಬಾಲಕನನು ಹಾಕಿಸಿದರು ||೩೮||

ಆ ಕುವರನ ಪೂರ್ವಕೃತಪುಣ್ಯದೇವತೆ | ಭೀಕರಮಪ್ಪ ಸುಂಟುರೆಯ ||
ಆಕಾರದಿಂದ ಬಳಸಿರಕ್ಷಿಸುತಿರ್ದು. | ದಾಕುಣಪಾಲಯದೊಳಗೆ ||೩೯||

ಹುಟ್ಟಿದ ಹಸುಳೆಮಗುವನು ಮಸಣದೊಳು | ಬಿಟ್ಟುದನಾಪಾಂಡುವರಿದು ||
ಮುಟ್ಟಿದ ನೋಹದಿತಾನಲ್ಲಿಗೆಯ್ತರೆ | ಸುಂಟುರೆ ಪಿಂಗಿದುದಾಗ ||೪೦||

ಕುವರನ ಪುಣ್ಯಪ್ರಭಾವವಕಂಡಾ | ಅವನೀಶನುರುಮುದದಿತ್ತು ||
ತವಕದಿ ತೆಗೆದು ಮನೆಗೆಬಂಪು ಜಾತಕ | ರ್ಮವನೊಲವಿಂದಮಾಡಿದನು ||೪೧||

ಭೀಮಪರೇತವನದ ಮಧ್ಯದೊಳಗೆ ಮು | ಹಾಪೂರುತನ ರಕ್ಷಣೆಯೊಳು ||
ಆ ಮಗುವುಳಿದುದರಿಂ ವಾಯುನಂದನ | ಭೀಮವೆಸರನಿಟ್ಟನೊಸೆದು ||೪೨||

ಬಳಿಕ ತದಚ್ಯುತದೇವನಲ್ಲಿಯ ಭೋಗ | ಗಳನನುಭವಿಸಿಯಲ್ಲಿಂದ ||
ಅಳಿದು ಕೊಂತಿಯ ಕೋಮಲಗರ್ಭದೊಳು ಪುಟ್ಟಿ | ಬೆಳೆದೊಂಬತ್ತುತಿಂಗಳೊಳು||

ಉತ್ತಮಲಗ್ನದೊಳುತ್ಪತ್ತಿಯಾಗಲು | ಮತ್ತಾಸಿಸುಗಾನೃಪತಿ ||
ಪಿತ್ತರಮಪ್ಪ ಕರ್ಮದೊಳರ್ಜುನನಾನು | ನಿತ್ತನು ದಶದಿವಸದೊಳು ||೪೪||

ಇಂದ್ರೋತ್ಸವದೊಳೊಗೆದಕಾರಣದಿಂ | ದಿಂದ್ರಸುತಾಭಿಧಾನವನು ||
ರುಂದ್ರವಿಭವದಿಂ ಕೊಟ್ಟಾಪಾಂಡುನ | ರೇಂದ್ರ ಸಂತಸದೊಳಗಿರ್ದ ||೪೫||

ಚರಮಾಂಗರವರು ಮೂವರು ಸುಕುಮಾರರು | ಸಿರುಪಮಸತ್ವಸಂಯುತರು ||
ಸರಸಕಲಾಕೋವಿದರುತ್ತಮರೂಪ | ರುರುಮುದದಿಂದ ಜೆಳೆದರು ||೪೬||

ಮತ್ತಾಅಚ್ಯುತದಿವಿಜರೀರ್ವರು ಭೂ | ಪೋತ್ತಂಸವಾಂಡುವ ಕಿರಿಯ ||
ಚಿತ್ತವಲ್ಲಭೆ ಮಾದ್ರೆಯಬಸಿರೊಳು ಪುಟ್ಟಿ | ಯುತ್ತಮಮಪ್ಪ ಲಗ್ನದೊಳು ||೪೭||

ಅಮಳುಗಳಾಗಿಜನಿಸೆ ಪಾಂಡುಭೂಪತಿ | ಮುಮತೆಯಿಂ ಜಾತಕರ್ಮವನು ||
ಕ್ರಮದಿಂದೆಸಗಿ ನಕುಲ ಸಹದೇವರೆಂ | ಬಮಲನಾಮವನಿಟ್ಟನೊಸೆದು ||೪೮||

ಸ್ಮರಸೈದುಬಾಣಗಳೇ ನರರೂಪಾಂತು | ಪಿರಿದು ವಿಭ್ರಾಜಿಸುವಂತೆ ||
ತರುಣೀಜನದ ಚಿತ್ತದೊಳು ಮೋಹನಮನಂ | ಕುರಿಸಿ ಬೆಳೆದರಾ ಕುವರರು ||೪೯||
ಅತಿಬಲಯುತರೀತೆರದಿ ಬೆಳೆವುತಿರೆ | ಧೃತರಾಷ್ಟ್ರ ಧರಣೀಪತಿಗೆ ||
ರತಿನಿಭೆ ಗಾಂಧಾರಿಗೆಯೋರ್ವ ಸುಕುಮಾರ | ಸುತುಪತಿಯಾಗಿಯೊಪ್ಪಿದನು ||೫೦||
ತನುಜಗೆ ಜಾತಕರ್ಮವಮಾಡಿ ದುರ್ಯೋ | ಧನವೆಸರಿಟ್ಟು ಭೂವರನು ||
ಅನುರಾಗಪಡೆದಿರಲಾ ಸೂನು ಬೆಳೆದಾ | ದಿನಕರಸಿಗ್ಧತೇಜನಾದ ||೫೧||
ಆ ದುರ್ಯೋಧನಗೂಡಿ ನೂರ್ವರು ಮಕ್ಕ | ಳಾದರು ದುಶ್ಶಾಸನನು ||
ಆ ದುರ್ದರ್ಶನನಾ ದುರ್ಮರ್ಷಣ | ನಾದಿಯಾ ಸುಕುಮಾರಕರು ||೫೨||
ಅವರಂತರದೊಳು ದುಶ್ಶಲ್ಯೆಯೆಂಬೋರ್ವ | ಕುವರಿ ಜನಿಸಿಯೊಪ್ಪಿದಳು ||
ಅನಳನು ಸಿಂಧುದೇಶಾಧೀಶ್ವರನು ಸೈಂ | ಧವಗೆ ಮುದುವೆಮಾಟಿಪನು ||೫೩||
ಆ ಪಾಂಡುನೃಪಸುತರೈವರು ಧೃತರಾಷ್ಟ್ರ | ಭೂಪನ ನೂರ್ವರುಸುತರು ||
ಆ ಪೊಳ್ತೀಪೊಳ್ತೆನ್ನದೆ ಮದಮತ್ಸ | ರೋಪೇತರಾಗಿರುತಿಹರು ||೫೪||
ಒರ್ವರೊರ್ವರೊಳು ಬಾಲಕ್ರೀಡೆಯಿಂ ನೆರೆ | ಪರ್ವಿದಪಾಸುಕದಿಂದ ||
ಸರ್ವರು ಜೆಗನುವಂದದಿ ಕಲಹವ ಮನ | ಪರ್ವಿಬಜೆದೆ ಮಾಡುತಿಹರು ||೫೫||
ವರಬಂಧುಜನಮೆಲ್ಲ ಬೆದರುವಂತಾ ಈರ್ವ | ರರಸಿನ ಸುಕುಮಾರಕರು ||
ಹಿರಿದುಹೋಟಬೆಗೊಂಡಾತಂತಮ್ಮೊಳ | ಗೊರಸೊರಸಾಗಿರುತಿಹರು ||೫೬||
ಮಕ್ಕಳಾಟಿಕೆಯೊಳಗಾರಾಜಸಂದನ | ರೆಕ್ಕೆಕ್ಕಯಿಂ ಹೋರುತಿಹರು ||
ತಕ್ಕದೆತಂತಮ್ಮೊಳೊಬ್ಬರೊಬ್ಬರೊಳೆರ | ದುಕ್ಕುಕ್ಕುಹಳಚುವಂದದೊಳು ||೫೭||
ಬವರದಬೀಜಮನಾಬಾಲಕೇಳಿಯೊ | ಳವನಿಯೊಳಗೆ ಜೆಲ್ಲುವಂತೆ ||
ಅವರಯಿವರಿವರು ಸೂರ್ವರು ಗರ್ದುಗಪನತಿ | ತವಕದಿನೆಚ್ಚಾಡುತಿಹರು ||೫೮||
ಹೋರಟಿಗೊಂಬ ನೂರೈವರುಮಕ್ಕಳ | ಬಾರಿಸುತಾ ಸಿಂಧುಸುತನು ||
ಆರೈದು ರಕ್ಷಿಸುತಿರ್ದನು ಧೃತರಾಷ್ಟ್ರ | ಭೂರಮಣನ ಪಾಂಡುಸಹಿತ ||೫೯||
ಮನುಸಮಚರಿತ ಮನೋಭವನಿಭರೂಪ | ನನುಪಮ ವಿಕ್ರಮಯುತನು ||
ಜನಪತಿಕುಲಮಣಿದೀಪಸೊಪ್ಪಿದನು ಸ | ಜ್ಜನವನಜಾತಭಾಸ್ಕರನು ||೬೦||
ಇದು ಜಿನಪದಸರಸಿಜ ಮದ ಮಧುಕರ | ಚದುರಮಂಗರಸ ರಚಿಸಿದ ||
ಮದನಾರಿ ನೇಮಿಜಿನೇಶ ಸಂಗತಿಯೊಳ | ಗೊದವಿದ ಸಂಧಿಗಳಾರು ||೬೧||

ಆರನೆಯ ಸಂಧಿ ಸಂಪೂರ್ಣಂ.

೭. ಅಂಧಕವೃಷ್ಣಿ ಭವಾವಳಿ ಸಂಧಿ.

ಶ್ರೀಮದಮರಪತಿ ಮೌಲಿಕೀಲಿತಪಾದ | ತಾಮರಸದ್ವಯನಖಗೆ ||
ಕಾಮಮದೇಭಹರಿಗೆ ನೇಮಚಿನಪತಿ | ಗಾಮೋದವೆತ್ತೆರಗುವೆನು ||೧||

ಇತ್ತಲಂಧಕವೃಷ್ಣಿರಾಜೇಂದ್ರನವನಿಯ | ನೊತ್ತಿಯಾಳುತ ತನ್ನ ಜನನ ||
ಪತ್ತುದಿನೆಯೊಳಿನಿಸೆಡೆದೆರಸಿಲ್ಲದೆ | ಪತ್ತಿಸಿದನು ಏಕ್ಕಮದೊಳು ||೨||

ಈತೆರದಿಂದೀರಾರುವರುಷವು | ಖ್ಯಾತಿಯಿನಾಸ್ಥಪವರನು ||
ಭೂತಳವೆಲ್ಲವಪರಿಪಾಲಿಸುತವು | ನೂತನನಾಗಿರುತೊಂದುಪಗಲು ||೩||

ಆ ಗಂಧಮಾದನಶಿಖರಿಯಕಡಿಯೊಳು | ಯೋಗನಿಷ್ಠಾಪರನಾಗಿ ||
ಯೋಗಿತಿಲಕಸುಪ್ರತಿಷ್ಠನು ವ್ರತಿಮಾ | ಯೋಗದೊಳಗೆನಿಂದಿರಲು ||೪||

ಪೂರ್ವಜನ್ಮದ ವೈರಸಂಬಂಧಮನವನು | ಪರ್ವಸುದರ್ಶನನೆಂಬ ||
ಓರ್ವದನುಜನೆಯ್ದಿ ಮುನಿಗುಪಸರ್ಗವ | ನುರ್ವಿಹೆದರೆಮಾಡಿದನು ||೫||

ಅತಿಮಥಯಿಸಲು ಮಾಣಿಕಕುತ್ತಮಕಾಂತಿ | ಯುತುಪತಿಯಾಗುವಂದದೊಳು ||
ಮತಿಹೀನ ಮಾಡಿದಬಾಧಯನಾಂತಾ | ಯತಿಗೆಶುಕ್ಲಧ್ಯಾನವಾಯ್ತು ||೬||

ಆನಿರ್ಮಲಬೋಧೋದಯದೊಳುನೇ | ವಾನೀಕಪುರದಲ್ಲಿಗೆಯ್ದಿ ||
ಆನಂದದೊಳಾಕರುಣಾಬ್ಧಿಚಂದ್ರನ | ನೂನಮಪ್ಪಾಭಕುತಿಯೊಳು ||೭||

ಸಾವಧಾನದಿನಾದೇವಪೂಜೆಯನಾ | ದೇವರ್ಕಳುಮಾಡುತಿರಲು ||
ಭೂವರನಂಧಕವೃಷ್ಟಿಯೈದಿದನತಿ | ಭಾವಶುದ್ಧಿಯೊಳಾಬಳಿಗೆ ||೮||

ಗಂಧಕುಟಿಯಹೊಕ್ಕಾಶುಕ್ಲಧ್ಯಾನ | ಸಿಂಧುವ ಪಾದಾಂಬುಜಕೆ ||
ಗಂಧಮಾಲ್ಯಾದಿವಸ್ತುವನರ್ಚನೆಗೆರ್ದ್ದ | ಸಂಧಕವೃಷ್ಟಿಭೂವರನು ||೯||

ಬಳಿಕತುಳಿಲುಗೆಯ್ದಿಂತೆಂದನೆಲೆದೇವ | ಮುಳಿದೀದನುಜನುನಿನುಗೆ ||
ಚಲಘುಬಾಧೆಯನೆಸಗಿದಕಾರಣವನು | ತಿಳಿವಂದದಿಪೇಳಿಮೆನಲು ||೧೦||

ಆ ಜಿನವರಪತಿಯಿಂತೆಂದನೆಲೆ ವಿಭು | ಈ ಜಂಬೂದ್ವೀಪದೊಳು ||
ರಾಜಿಪಭರತದೊಳಗೆ ಕಾಂಚಿಯೆಂಬೊಂದು | ರಾಜಧಾನಿಯುಮುಂಟಲ್ಲಿ ||೧೧||

ಹರದರಿಬ್ಬರು ಸೂರದತ್ತಸುದತ್ತರೆಂ | ಬುರುತರವಸ್ತುಸಂಯುತರು ||
ಪರದುಗೆಯ್ವೆವೆಂದೊಂದುದಿನದೊಳು | ಪರದೇಶಕೆಪೋದರದರು ||೧೨||

ಪಿಡಿದು ವಸ್ತುಗಳಿಸಿ ಮಗುಳ್ದಾಪುರ | ವರದಶಾಣಯದಸುಂಕಿಗರು ||
ವರವಸ್ತುತತಿಯಕಂಡೊಡೆ ಬಲುಸುಂಕವ | ನಿರದೆಬೇಡುವರೆಂದವರು ||೧೩||

ಪೊಳಲಹೊರಗೆಯೊಂದಿನಿಸುದೂರದೊಳಿರ್ಪ | ಹಳುವಿನಮಧ್ಯದೊಳೊಂದು ||
ಮೆಳೆಯಹೊದಗನೆತ್ತಿಯಾದತ್ನವನೆಲ್ಲ | ನೆಲದಿ ಹೂಳಿಹೋಗಲೊಡನೆ ||೧೪||

ಅಲ್ಲಿಗಂದೋರ್ವದ್ವೀಪರಕಳ್ಳಮುದ್ದುಗ | ಳಲ್ಲಿಕೊಯ್ವೆನೆಂದೆಯ್ದಿ ||
ಸಲ್ಲೀಲೆಯಿಂದಾಮೆಳೆಯ ಹೊದರಮೂಲ | ದಲ್ಲಿರ್ದೊಡವೆಯಕಂಡು ||೧೫||

ಎಸ್ಸದುಗಳಿಸಿದೊಡವೆಯೆಂಬುರವಸು | ಚೆನ್ನಾಗಿಸಗುವಂದದೊಳು ||
ಹೊನ್ನಕುಪ್ಪಿಗೆಯೊಳಿರಿಸಿ ಧಗಧಗಿಸುವ | ರನ್ನವನವನೊಯ್ದುನಿತ್ತ ||೧೬||

ಆಪಗಲಿನ ಮರುದಿನದೊಳವರು ಬಂ | ದಾಪೊಳಿದೊಡಮೆಯಿಲ್ಲದಿರೆ ||
ಏಪರಿಯೆಂದರಿಯದೆ ತಾತಮ್ಮೊಳು | ಕೋಪವತಾಳಿಮನದೊಳು ||೧೭||

ಒಬ್ಬರವೇಲೊಬ್ಬರು ಸಂದೇಹಿಸಿ | ಪರ್ಬದಲೋಭತೆಯಿಂದ ||
ಒಬ್ಬುಳಿಗೊಂಡುಕೋಪದೊಳೀರ್ವರು ಮನ | ಸುಬ್ಬಿಕಲಹವಮಾಡಿದರು ||೧೮||

ಹರಿದೆನಿಸುಪಹಚ್ಚಹಸಿಗೆಬಡಿಗೆಗೊಂಡು | ಹಗದರೀರ್ವರುಹೊಯ್ದಾಡಿ ||
ಭರದೊಳುಸತ್ತು ನೊದಲಸರಕದೊಳೊಗೆ | ದಿರವೆತಮ್ಮೊಳು ಹೋರುತಿರ್ದು ||೧೯||

ಅಲ್ಲಿಂದಳಿದುಬಂದೊಂದು ಕುರಿಯಹಿಂಡಿ | ನಲ್ಲಿ ಮೇಷಗಳಾಗಿ ಜನಿಸಿ ||
ಬಲ್ಲಿದವಾಗಿಬೆಳೆದು ತಂತಮ್ಮೊಳು | ನಿಲ್ಲದೆ ಹೋರಾಟಗೆಯ್ದು ||೨೦||

ಕೊಡುಮುರಿದು ಕೊರಲುಡಿದು ಒಡೆದು ಹಣೆ | ಯೋಡುಕಿಬ್ಬರಿಗಳುಬಿರಿದು ||
ನೋಡುವಕಣ್ಣುಕಳೆದು ಬೀಳ್ದೊಂದೊಂದ | ಕೆಯ್ಕೊಡದೆಕಾದಿಯಳಿದವು ||೨೧||

ಗಂಗಾತೀರದತುರುಪಟ್ಟಿಯೊಳಗೆ ವೃಷ | ಭಂಗಳಾಗಿಸಂಜನಿಸಿ ||
ಹಿಂಗದಕೋಪಾವೇಶದಿಂತಮ್ಮೊಳು | ಸಂಗರವನುಮಾಡಿಯಳಿದು ||೨೨||

ಪುರಣಮುಖನಿ ವೃಷಭಂಗಳು ಸಮ್ಮೋದ | ಗಿರಿಯಕೋಡುಂಗಲ್ಲಿನೊಳು ||
ಉರುತರಮಪ್ಪಮರ್ಕಟವಾಗಿ ತಮ್ಮೊಳು | ಹಿರಿದುಹೋರಟೆಯುಮಾಡಿದವು ||೨೩||

ಒಂದರಕಡಿತಕ್ಕೊಂದಿನಿಸಂಬದೆ | ಒಂದಿದಕಡುಗೋಪದಿಂದ ||
ನಿಂದುಕಾದಿಬೀಳ್ದಾಕೋಡಗದೊಳ | ಗೊಂದು ಮರಣವನೆಯ್ದಿದುದು ||೨೪||

ಬಳಿಕೊಂದುಬಲಿಮುಖಹರಣವಪಿಡುವಾ | ಗಳಿಗೆಯೊಳಾಗಸದಿಂದ ||
ಇಳಿದುಬಂದರುಸುರಗುರುದೇವಗುರುವೆಂಬ | ಕಲಿಲವಿಜಯೆಚಾರಣರು ||೨೫||

ಸದಮಲಬೋಧದಿನಾಸನ್ನಭವ್ಯನಿಂ | ತಿದುತಪ್ಪದೆಂಬುದನರಿದು ||
ಒದವಿದಕರುಣದಿ ತಮ್ಮಕಮಂಡಲ | ದುದಕಮನದಕೆಸೂಸಿದರು ||೨೬||

ಬಲಿಮುಖಧರ್ಮಬಹಿರ್ಮುಖಕೋಪವ | ತಳೆದು ದುರ್ಗತಿಗೆವೋಪುದನು ||
ಉಳಿದುಸದ್ಗತಿಯನೆಯ್ದುವಸಮತೆಯನೀನು | ತಳೆಯೆಂದುಸನ್ಯಸನವನು ||೨೭||

ಕಟ್ಟೊಲವಿಂದಲಿಕೊಡಲದ ಕೈಕೊಂಡು | ದಿಟ್ಟಿದೆರೆದುಮುನಿಗಳನು ||
ನಿಟ್ಟಿಸುತಿರೆಬಳಿಯೊಳುಪಂಚಪದಗಳ | ನಿಟ್ಟರದರಕಿವಿಯೊಳಗೆ ||೨೮||

ಆ ಮಂತ್ರವಕೇಳಿದ ಸತ್ಫಲದಿಂದ | ಲಾಮರ್ಕಟಜೀವಮಿರದೆ ||
ಆ ಮಹೀಧರದಿಂದ ಪೌಧರ್ಮಕಲ್ಪಕೆ | ಸಾಮಮಾಡದೆಲಂಘಿಸಿದುದು ||೨೯||

ಆ ಸಗ್ಗದೊಳುಚಿತಾಂಗದಪೆರರಾಂತು | ಭಾಸುರಮಪ್ಪಭೋಗವನು ||
ಆಸಕ್ತಿಯಿಂದಂಡುಬಂದೀಭರತದೊ | ಳಾಸಿರಿವಡೆದಕಾಂಚಿಯೊಳು ||೩೦||

ಜಿತಸೇನನೆಂಬವನಿಪಗೆ ಸುಭದ್ರಾ | ಸತಿಗೆ ಸಾಗರಸೇನನೆಂಬ ||
ಸುತನಾಗಿ ಬೆಳೆದುಮಂಡಲಿಕಪದದೊಳು ಸ | ನ್ನುತನಾಗಿರ್ದೊಂದುದಿವಸ ||೩೧||

ಆಸಂದದಿಂದ ನಂದನಕೆಯ್ದಲಂತಲ್ಲಿ | ವಾನರಗಳುಹೋರುತಿರಲು ||
ತಾನವನೋಡಿ ಜಾತಿಸ್ಮರಣವ್ರಪುಟ್ಟಿ | ಯಾನದೆ ದೀಕ್ಷೆವಡೆದನು ||೩೨||

ಸಾವಧಾನದೊಳು ತಪಸುಗೆಯ್ದವನಾ | ಗ್ರೈವೇಯಕದೊಳಹಮಿಂದ್ರ ||
ದೇವನಾಗಿದಿವ್ಯಸುಖವುಂಡುಬಳಿಕೀ | ಭೂವಲಯದಮಧ್ಯದೊಳು ||೩೩||

ಜನಸುತಮಪ್ಪಸುಧರ್ಮೇಶದ ಪೌ | ದನಪುರದರಸುಸುಸ್ಥಿರಗೆ ||
ವನಿತೆವನಜಲೋಚನೆಗೆ ಲಕ್ಷ್ಮಿಮತಿಗೆಸಂ | ಜನಿಸಿಸುಪ್ರತಿಷ್ಠವೆಸರ ||೩೪||

ಧರಿಸಿಸೂರ್ಯಾಸ್ತಮಾನವಕಂಡು ವೈರಾಗ್ಯ | ಪರದುದಯಿಸೆ ದೀಕ್ಷೆಗೊಂಡು ||
ಉರುತರಮಪ್ಪದುರಿತವೆಲ್ಲವಪರಿ | ಹರಿಸಿಮತ್ಕೀಪದವಡೆದ ||೩೫||

ಸೂರದತ್ತನೆಂಬಪರದನುನಾಪಾಗ | ಭೂರಮಣೀಶಕೇಳತ್ತ ||
ಕ್ರೂರಹೃದಯಸುದತ್ತಮರ್ಕಟ ಸಂ | ಸಾರಸಾಗರದೊಳುಮುಳುಗಿ ||೩೬||

ನರಿನಾಯಿಪಂದಿನಾವುಡುವೋತಿ ಪಲ್ಲಿಮೂ | ಗುರಿಮೂಷಕಮೊದಲಾದ ||
ತಿರಿಕನೆತಿರಕಗತಿಯೊಳುಪುಟ್ಟಿ ತಿರ್ಯನೆ | ತಿರುಗುತಿರ್ದೊಂದುಜನ್ಮದೊಳು ||೩೭||

ಸುಲಲಿತಪಹ ಸಿಂಧುತೀರದ ಋಷಿಪಳ್ಳಿ | ಯೊಳಗೆಮ್ಮೆಗಾಯಣವೆಸರ ||
ತಳೆದತಾಪಸಗೆ ವಿಶಾಖೆವೆಸರನಾಂತ | ಲಲನೆಗೆಸಂಭವಿಸಿದನು ||೩೮||

ಗೌತಮನೆಂಬತೆಸರನುರ್ಕಿತಳೆದುಮ | ತ್ಯಾತಪದೊಳಗಾಚರಿಸಿ ||
ಜ್ಯೋತಿಷ್ಮನಾಗಿ ಸುದರ್ಶನವೆಸರನಾಂ | ತೀತನೀಗಭೂಪಾಲ ||೩೯||

ಹಿಂದಣಭವಬದ್ಧವೈರಮನೇಮನ | ದಂದುಕೋಪಾಟೋಪದಿಂದ ||
ಸಂದೇಹವುಲ್ಲದೆಘೋರೋಪಸರ್ಗವ | ನಿಂದುನಮಗೆ ಮಾಡಿದನು ||೪೦||

ಎಂದುನುಡಿದ ಸುಪ್ರತಿಷ್ಠರನುಡಿಗೇಳಿ | ಸಂದಸುದರ್ಶನವ್ರತವ ||
ಅಂದವರಿಂದ ಸುದರ್ಶನದನುಜನಾ | ನಂದದಿಂ ತಾಂತಾಳಿದನು ||೪೧||

ಏನಲಂಧಕವೃಷ್ಟಿಯಿಂತೆಂದನೆಲೆದೇವ | ನನಗೆನನ್ನ ಯಪೂರ್ವಭವವ ||
ಮನದೆಗೊಂಡು ಪೇಳೆಮೆಂದುಕೇಳಿದೊಡಾ | ಮುನಿನಾಥನಿಂತುನುಡಿದನು ||೪೨||

ಸುರುಚಿರಕೌಶಲದೇಶದಯೋಧ್ಯಾ | ಪುರದೊಳು ವೈಶ್ಯವಲ್ಲಭನು ||
ಉತ್ತುತರದಾನಿ ಜಿನೇಂದ್ರದತ್ತನೆಂಬ | ಪರದನುಪೆಸರ್ವಡೆದಿರುತ ||೪೩||

ಒಂದುದಿನಕೆ ನೂರು ಹೊನ್ನತೆಗೆದುಕೊಂಡು | ಬಂದು ಜಿನೇಂದ್ರಪೂಜೆಯನು ||
ಸಂದಭಕುತಿಯಿಂದಿನಬಂಜೆಯಿಲ್ಲದಾ | ನಂದದಿ ಮಾಡಿನುತಿಹನು ||೪೪||

ಈತೆರದಿಂ ಜಿನಪೂಜೆಯಮಾಡಿ ನಿ | ಖ್ಯಾತನಾಗಿರ್ದೊಂದುಪಗಲು ||
ಪ್ರೀತಿಯಿಂದ ಹಡಗಿನವ್ಯವಹಾರನ | ನಾತನು ಮಾಡಲೆಂದೆಣಿಸಿ ||೪೫||

ತನಗತಿಹಿತನಸಪ್ಪಾರುದ್ರದತ್ತನೆಂಬ | ವನೋರ್ವಪಾರ್ವನಕರೆದು ||
ದಿನಚರಿ ನೂರುಹೊನ್ನಸಪೂಜೆಯನುಮಾಡಿ | ನೆನುತಲಘುಪ್ರೀತಿಯಿಂದ ||೪೬||

ವರುಷಹನ್ನೆರಡಕೆ ತಕ್ಕವಿತ್ತಮನಾ | ಪರದನವನವಶಮಾಡಿ ||
ಪರದುಗೆಯ್ವೆನೆಂದುಪಡಗೇರಿಯತ್ಯಾ | ತುರದಿಂದವಪೋದನಿತ್ತ ||೪೭||

ಆ ವೈಶ್ಯಪತಿ ತನ್ನ ವಶಮಾಡಿಕೊಟ್ಟರ್ಥ | ದೇವಸ್ವಮೆಂದುಚಿತ್ತದೊಳು ||
ಭಾವಿಸದಾರುದ್ರದತ್ತನಾಪೊಳಲವೇ | ಶ್ಯಾವಾಸದೊಳಗನವರತ ||೪೮||

ನರರೆಲ್ಲದುರ್ಜನಿಪಂದದಿವೇಶ್ಯಾ | ತರುಣಿಯರ್ಗಾವಿತ್ತವನು ||
ಪಿರಿದಾಗಿಕುಡುವದುರ್ವರ್ತನವನು ತ | ತ್ಪುರದತಳಾರರುಕಂಡು ||೪೯||

ಇವನತಿಪಾತಕಿಯಿದಮೇಲೆಪಾರ್ವನು | ಇವನಕೊಲ್ಲಲುಬಾರದಿವನು ||
ಆವನೀಸುರವಂಶಕೆ ಹೊರಗೆಂದು ಮ | ತ್ತವನನೂರಿಂತೆಗುಳಿದರು ||೫೦||

ಪೊಲೆವಟ್ಟಾವೊಳಲಿಂಪೊರಮಡಿಸಿಕೊಂ | ಡಲಸದೊಂದಡವಿಯೊಳಿರ್ಪ ||
ಕುಲಗೆಟ್ಟ ಬೇಡವಳ್ಳಿಯಂ ಸೊಕ್ಕಿರ್ದಾ | ಖಳನೊಂದಾನೊಂದುಸಗಲು ||೫೧||

ವನಚರರೊಡಗೂಡಿಯಾನಗಲಯಜೀವ | ದನವಕಳ್ಪೊಯ್ವುತಮಿರಲು ||
ಅನಿತರೊಳಾಪೌರರೆಲ್ಲಹುಯ್ಯಲುಬಂದು | ಕನಲಿಕೊಂದರು ತನ್ನ ನಾಗ ||೫೨||

ನಾವಹಡೆದು ನಪ್ಪಮನರಕದೊಳಿಗೆ | ದಾವರಿಸಿದ ದುಃಖವ್ರಂಡು ||
ಮೂವತ್ತುಮೂರು ಸಮುದ್ರೋಪಮಾಯುಷ್ಯ | ತೀವೆಮತ್ತಲ್ಲಿಂದಬಂದು ||೫೩||

ಲವಣಜಲಧಿಯೊಳಗಾನಾರಕನು ಸಂ | ಭವಿಸಿ ತಿಮಿಂಗಿಳನಾಗಿ ||
ತವೆಯದಪಾಪವನಿರದೆ ನರಕಿಸಿಕೊಂಡು | ಜವನಾಜ್ಞೆಯಿಂತಾನಳೆದು ||೫೪||

ಪಿರಿದುದುಃಖಮನೀವಷಷ್ಟಮನರಕದೊ | ಳಿರದೊಗೆದಿಸ್ತ್ರೈರಡು ||
ವರಸಾಗರೋಪಮಾಯುಷ್ಯಂ ತೀರ್ದನ್ನ | ಬರ ಜೀವಿಸಿಯಲ್ಲಿಸತ್ತು ||೫೫||

ಅವನಧಿಯೊಳು ಮುಂಪೇಳ್ದಮಾನಾಗಿ ನಾ | ನಾವಧಮಪ್ಪಮಾನ್ಯನು ||
ಒವದೆತಿಂದೈದನೆಯನರಕಬಿಲ | ವೋವರಿಯೊಳು ಸಂಜಸಿಸಿ ||೫೬||

ಅದರೊಳು ಪದಿನೇಳಣ್ಣವೋಪಮಕಾಲ | ವುದಿದದುಃಖಮನನುಭವಿಸಿ ||
ಒದವಿದಮರಣದಿ ಮಾತಂಗರಿಪುವಾಗಿ | ಉದಯಿಸಿ ಬಹುಪಾಪವಡೆದು ||೫೭||

ಮರಣವಡೆದು ನಾಲ್ಕನೆಯ ನರಕವನು | ನಾರಿಮುತ್ಪತಿದುಃಖವನು ||
ಈರೈಗುಕಡಲನ್ನ ಮುಪ್ಪಾಯುಷ್ಯವು | ತೀರುವನ್ನ ಬರುಂಡುಸತ್ತು ||೫೮||

ಉರುತರದ್ವಿಷ್ಟವಿಷೋದರಗನಾಗಿದು | ರ್ಧರಪಾಪಮನುರೆಹಡೆದು ||
ತರಣಿಯಬಟ್ಟು ಪ ರಾಧನೆಯ ನರಕದೊಳು | ಭವವನದಿಂ ಸಂಜಸಿಸಿ ||೫೯||

ಏಳುಸಮುದ್ರೋಪಮಾಯುಷ್ಯಂಬರ | ಹೇಳಬಾರದದುಃಖದೊಳು ||
ಆಳಮುಳುಗುತಿರ್ದು ಸತ್ತುಬಂದೊಂದು ಶಾ | ರ್ದೂಲನಾಗಿ ಸಂಜಸಿಸಿ ||೬೦||

ಎಡೆವಿಡದತಿಹಿಂಸೆಯೊಳು ಬೀಪಸಿ ಮಕ್ಕೆ | ಮಡಿದೆರಡನೆಯ ನರಕವ ||
ಜಿಡದೆಯ್ದಿ ಮೂರುಸಮುದ್ರೋಪಮಾಯುಷ್ಯ | ಉಡುಗುವನ್ನಬರಲ್ಲಿ ಬದುಕಿ ||

ತನುವಜಿಟ್ಟೊಂದು ಗರುಡನಾಗಿಬಂದು ಸಂ | ಜನಿಸಿಜೀವಿಸಿಯಂಗವಳಿದು ||
ಘನತರಮಪ್ಪ ದುಃಖವನ್ನಿದಂಜೊಂ | ದನೆಯನರಕದೊಳ್ಪುಟ್ಟಿ ||೬೨||

ಒಂದು ಸಾಗರೋಪಮಾಯುಷ್ಯವನುಂಡು | ಹೊಂದಿ ಮತ್ತೀಭೂಮಿಯೊಳು ||
ಒಂದಾನೊಂದು ಭೇರುಂಡಪಹಗನಾಗಿ | ಕೊಂದು ಸಕಲಜೀವಿಗಳನು ||೬೩||

ಬಳಿಕಳಿದವನೀತಳದ ಕುಯೋನಿಗ | ಳೊಳಗೊಂದುಳಿಯದತೆರದಿ ||
ತಳುವದೆ ಹುಟ್ಟಿಸಾವುತ ಭವವನದೊಳು | ತೊಳಲುತದುರಿತೋಪಶಮದಿ ||೬೪||

ಕುರುಜಾಂಗಣ ವಿಷಯದ ಹಸ್ತಿನಾಪುರ | ವರದೊಳು ಗೌತಮಕುಲದ ||
ಪಿರಿಯ ಕೌಶಿಷ್ಟನೆಂಬೋರ್ವ ಮುನಿಗೆ ಸಾಂ | ದರಿಯೆಂಬಳವನವಲ್ಲಭೆಗೆ ||೬೫||

ಜನಿಸಿ ಸ್ಯಗೌತಮವೆಸರಾಂತು ನೆರೆಬೆಳೆ | ವನಿತರೊಳಗೆ ತಾನೆಸಗಿದ ||
ಘನಪಾಪಫಲದಿಂದ ಜನನೀಜನಕ ಬಂಧು | ಜನವೆಲ್ಲ ಜವಪುರಕ್ಕೈದೆ ||೬೬||

ಉಡಲಿಲ್ಲುಣವಿಲ್ಲದರಿಂದುದರಾಗ್ನಿ | ಯೊಡಲನುಡಲು ಬಗ್ಗರೆಯ |
ಹಿಡಿದು ಪುರದಕೇರಿಗಳೊಳು ಭಿಕ್ಷವ | ಕೊಡಿಯೆಂದು ಬೇಡುತಪರಲು ||೬೭||

ದುರಿತವಶದಿತನಗಾರುಭಿಕ್ಷವ ಕೊಡ | ದಿರಲಾಪುರದತಿಪ್ಪೆಯೊಳು ||
ಸುರದೆಂಬಲುಗೂಳುಗಳನಾಯ್ದು ತಾನುಣು | ತಿರಲಾಗ ಕಂಡಕಂಡಪರು ||೬೮||

ಮನುಜರೂಪಿನ ಪಂದಿಯಿಂತಿದೆನುತ ಪುರ | ಜನವೆಲ್ಲದಡಿದೊಣ್ಣೆಗೊಳಲು ||
ಘನತರಮಪ್ಪ ಭೀತಿಯೊಳೋಡಿಯೊಂದೆಡೆ | ನಿಲಲನಿತರೊಳಾಪುರಕೆ ||೬೯||

ಕಾನನದಿಂದಜರಿಗೆಗೆಂದು ಸಾಗರ | ಸೇನನೆಂಬೋರ್ವ ಮುನೀಶ ||
ಭೂನುತಬರಲದನಾಸ್ಯಗೌತಮಕಂಡು | ಮಾನಸದೊಳಗಿಂತನುಡಿದ ||೭೦||

ಜಗದಬಡವರೊಳಗಾಸೆ ಬಡವನೆಂಬು | ಬಗೆದಿರ್ದೆನಿನ್ನಿಂದಮಿವನು ||
ಮಿಗಿಲಾದ ಬಡವನಾಗಿವನಿಂವನೀ | ನಗರಿಯವರುಕಾಣುತವೆ ||೭೧||

ಎನ್ನ ಕೊಲುವತೆರದಿಂದೀಪಾಪಿಯ | ಚೆನ್ನಾಗಿಕೊಲ್ವರಂತದನು ||
ತಾನೊಡನೆಯ್ದಿನೋಡುವೆನೆಂದು ಮುನಿಪನ | ಬೆನ್ನೊಳವನು ಬರುತಿರಲು ||೭೨||

ಆನಗರಿಯ ವೈಶ್ರವಣವೆಸರಟ್ಟಿ | ಸಾನುರಾಗದೊಳಾಮುನಿಗೆ ||
ಆನತನಾಗಿನಿಲಿಸಿ ನಿಜಗೃಹಕಾಗಿ | ತಾನೊಡಗೊಂಡೊಯ್ವತಿರಲು ||೭೩||

ಈಪಥವನುಕಂಡಚ್ಚರಿಯಿಂ ನೆರೆ | ಭಾವಿಸುತಾಸ್ಯಗೌತಮನ ||
ಆ ವರಮುನಿಕಂಡನನಘದುಪಶಾಂತ | ಭಾವವನಸಧಿಯಿಂದರಿದು ||೭೪||

ಕಡುಮರುಕದಮನದಿಂದವನಮುಮನೆ | ಗೊಡಗೊಂಡುವೋಗಿಯನ್ನವನು ||
ಕೊಡಿಸಲುಕಸಿನೊಳಗೆ ಕಂಡರಿಯೆನೆಂ | ದೊಡಲೊಡಸಂತುಂಡುಬಳಿಕ ||೭೫||

ಅವರ್ಣ್ಯಯಬಿನ್ನ ಬಿಡದನುದಿನತನ್ನ | ಜೀವವಹೊರೆವುತಮಿರ್ದು ||
ಅವ್ಯಕ್ತಮಮಪ್ಪರೂಪಧರಿಪೆನೆಂಬ | ಭಾವನೆಯವಗೆ ಪುಟ್ಟಿದುದು ||೭೬||

ಅದನಾಮುನಿಸತಿಯವಧಿಬೋಧದಿನರಿ | ದೊದವಿದಕಾರುಣ್ಯದಿಂದ ||
ಸದಮಲತರಮಪ್ಪ ಜಾತರೂಪವನುಸಂ | ಮುದದಿನವಗೆ ಪಾಲಿಸಿದನು ||೭೭||

ಶ್ರೀಗೌತಮನೆಂಬಹೆಸರನವಗೆ ಕೊಡ | ಲಾಗ ಕೊಂಡಾ ಸುವ್ರತವನು ||
ತೀಗೆಮೊಡದೆಪಲಕಾಲ ತನಸುಗೆಯ್ದು | ಸೀಗಿದನಾಮುನಿತನುವ ||೭೮||

ಈವಿಧದಿಂತನುವನು ಬಿಸುಟಾನವ | ಗ್ರೈವೇಯಕದೊಳುಸಂಜನಿಸಿ ||
ತೀವಿದಿಪ್ಪತ್ತೆಳುಸಾಗರೋಪಮಕಾಲ | ಪ್ರೋನದೆಯುಹುಮಿಂದ್ರನಾಗಿ ||೭೯||

ಸುರುಚಿರಮಪ್ಪಸುಖವನುಂಡದಪರಿ | ಹರಿಸಿಯಿಂತಪ್ಪಸಿರಿಯನು ||
ಧರಿಸಿಯಂಧಕವೃಷ್ಣಿಭೂಪಸೀನಾದ್ಯೆ | ಯುರಸುಕೃತಪಲದಿಂದ ||೮೦||

ಎಂದುಪೇಳಲು ತನ್ನ ತನುಜಾತರು ಹತ್ತು | ಮುಂನಿಕ್ಷಮಾವರಭವವ ||
ಕಂದರ್ಪನಜಯ ಜೆಸಸಿವೆಸಲನೆಯಿಂ | ತೆಂದು ನುಡಿದರತಸನೊಳು ||೮೧||

ಧರತಭೂತಲದಾಪಸಿತಾರ್ಯಖಂಡದ | ಸುರುಚಿರಮಲಯದೇಶದೊಳು ||
ಪುರಮೂಪ್ಪುತಿಹುದು ಭದ್ರಿಲಸೆಂಬುದದನಾಳ್ವ | ಧುರಧೀರಘನರಥನೃಪತಿ ||೮೨||

ಅದರೊಳು ಧನದೇವನೆಂಬವಣಿಕ್ಪತಿ | ಮುದನಸದ್ಯಶನಿಹನವಗೆ ||
ಸದಮಲಶಶಿನಿಭಮುಖಿ ನಂದೆಯೆಂಬೋರ್ವ | ಸುದತಿರಂಬಿಸುವಳಂತವರ್ಗೆ ||೮೩||

ತನುಜರು ಧನದೇವ,ಧನದತ್ತ,ಜಿನದೇವ | ಜಿನಪಾಲನರ್ಹದ್ದತ್ತ ||
ಬಿನದತ್ತನರ್ಹದ್ದಾಸನುಪ್ರಿಯದತ್ತ | ಮನುಧರ್ಮರುಚಿಯೆಂಬವರು ||೮೪||

ಜನಿಯಿಸಲವರಂತರದೊಳು ಪ್ರಿಯದರು | ತನೆ ಜ್ಯೇಷ್ಠೆಯೆಂಜೊಂದುಹೆಸರ ||
ವನಿತೆಯರುದಯಿಸಿ ಜನನೀಜನಕರಿಗೆ | ಯನುರಾಗವನುಮಾಡುತಿರಲು ||೮೫||

ದಿನವೊಂದರೊಳ್ಕೋರ್ವಮುನಿಯಾಸಗರಿಯ | ಒನಕೆಬರಲುಧನದೇವ ||
ಅನುರಾಗದಿಂತನ್ನ ಮಕ್ಕಳು ನಿಜಜನ | ವನಿತೆಸಹಿತನಡೆತಂದು ||೮೬||

ಮುನಿಗಳಿಗೆರಗಿನದ್ವರ್ಮದತೆರನನು | ಘನಮಾಗಿಕೇಳಿಸಿರ್ವೇಗ ||
ಮನದೊಳು ಜನಿಸಿಸಲವರೆಲ್ಲರುಗೂಡಿ | ಜಿನದೀಕ್ಷೆಯಧರಿಯಿಸುತ ||೮೭||

ನಂದಸುಖಮನೀವಮುಕ್ತಿಗೆ ಧನದೇವ | ನಂದುಪೋದನುಬಳಿಕಿತ್ತ ||
ಮುಂದಣಭವಕೀಮಕ್ಕಳು ಸುತರಾಗ | ಲೆಂದು ನಿದಾನವಮಾಡಿ ||೮೮||

ಧನದೇವನಬಲೆ ಸುನಂದೆಸುಕ್ಕಳುಗೂಡಿ | ಜನನುತಮಪ್ಪತಪವನು ||
ಅನುಪಮದಿಂಮಾಡಿತಾಮೆಲ್ಲರಳಿದಾ | ಘನತರಸೌಖ್ಯಮಿನೀವ ||೪೪||

ಪದಿಮೂರನೆಯಾನತಕಲ್ಪದೊಳು ಪುಟ್ಟಿ | ವಿದಿತಸುಖನಸಿಪ್ಪತ್ತು ||
ಉದಧಿನಪಮಾನಾಯುಷ್ಯಂಬರಸುಂ | ಡೊಡವಿದಾಯುಷ್ಯವ್ರತೀರೆ ||೪೫||

ಧನದೇವನಬಲೆಸುನಂದೆಯಲ್ಲಿಂಬಂದು | ಸಿನಗೆಸುಭದ್ರೆಸರಿನ ||
ನಸಿತೆಯಾದಳು ಮತ್ತವಳಬಸಿರೊಳಂ | ದಿನ ನವನಂದನರೆಯ್ದಿ ||೪೬||

ಅಂಬುಧಿಸುಜಯನಾಮಿಯ ಸೆಕುಮಾರಕ | ರೊಂಬತ್ತುಮುಂದಿಪುಟ್ಟಿದರು ||
ಬಿಂಬಾಭೆಯಾಖ್ಯಾದತ್ತಿಯಾಜ್ಯೇಷ್ಠೆ | ಯೆಂಬವಲ್ಲಿಂದಬಂದು ||೪೭||

ಕೊಂತಿ ಪಾಪ್ಯರೆಂಬ ಸುತೆಯರಾದರು ಭೂ | ಕಾಂತಕೇಳಿಂಫಕವೃಷ್ಟಿ ||
ಇಂತಿದಿವರ ಜನ್ಮವನುನೇವನಜ | ನಾ೩ಂತರವನು ಪೇಳ್ವೆವಿನ್ನ ||೪೮||

ಅಗ್ರಮೆನಿಸ ಕುರುಫಲೆಯ ಸಲಾಶಕೂ | ಟಗಾಮಮೊಳು ವೇದಶಾಸ್ತ್ರ ||
ಸುಗ್ರೀವನು ಸೋಮಶರ್ಮನೆಂದೆಂಬ ಗು | ರಾಗ್ರಣಿ ಪಾರ್ವನೊಪ್ಪಿದನು ||೪೯||

ಆ ಸುತಗೆಣೆ ಸೋಮಶರ್ಮಗ್ಗಲೆಯೆಂಬ | ಮಾಸಿನಿಯೆಸೆದಿಪಳವಗೆ ||
ಸೂನುಜನಿಸಿದನು ನಂದಿಯೆಂಬೋರ್ವನ | ನೂನಪಾವೋಪಾಖ್ಯರ್ತನು ||೫೦||

ಕೆಟ್ಟಪಾಪಿಯು ಸಂಜನಿಸಲವರು ರೋಗ | ವಟ್ಟಾ ಅಗ್ಗಲೆಯೊಳನೆ ||
ಹುಟ್ಟಿದಣ್ಣನು ದೇವಶರ್ಮಗಾಮಗುವನು | ಕೊಟ್ಟು ಬಿಂಕ ಸತ್ಕರಿಸ್ದ ||೫೧||

ಮುದದಿಂದ ಸಾಕಿಯವಗೆ ತನ್ನಣುಗಯು | ಮದುವೆಯುಮಾಡುವೆನೆನಲು ||
ಅದನರಿದನನ ಕುರೂಂಗನಳ ತಾ | ಯೊದನದ ಹೇಸಿಕೆಯಿಂದ ||೫೨||

ಆ ಮಗಳನು ತನ್ನ ಗಂಡನರಿಯದಂತೆ | ಸಾಮನವಮಾಡದೆಯವನು ||
ಕಾಮನಸದೃಶನೋರ್ವ ಪಾರ್ವನ ತನುಜಗೆ | ಪ್ರೇಮದು ಮದುವೆಮಾಡಿದಳು ||೫೩||

ತನ್ನಪದ್ರೂಪಿಗೊಡಂಬಡದಾಹೆಣ್ಣು | ನನ್ನಿಗಗಿತ್ಯರೆಂಬುದಕೆ ||
ತನ್ನ ತಾನೇಹೇಸಿಯಾನಂದಿಮನದೊಳು | ಖಿನ್ನನಾಗಿರಲದನರಿದು ||೫೪||

ಆ ದೇವಶರ್ಮನುತನ್ನಕೆರಿಯು ಮುಗ | ಳಾದೊಡಮಾನಿಸಗೀವೆ ||
ವೇದವೇತಕೆ ಮನನೊಳಗೆಂದಳಿಯನ | ಸಾದರದಿಂನೊಡಂಬಡಿಸೆ ||೫೫||

ಆದನರಿದಾಹೆಣ್ಣನ್ನ ನೀಪಾಪಿಗೆ | ಮದುವೆಮಾಡಿದ ಮರುದಿನವೆ ||
ಅದಿರದೆ ದುರ್ಮರಣವಮಾಡಿಕೊಂಟೆನಂ | ದೊದವಿದಚಿಂತೆಯೊಳಿರಲು ||೫೬||

ಒಂದುದಿವಸಬಿಸಿಲೊಳುಪೋಗಿ ಬಲುಹುರು | ವೊಂದಿದಮೈಯೊಳು ಜೆಮರು ||
ನಿಂದುಕನಿತುಮಿಗೆನುಲವುಣ್ಮಲಾಕ | ಣ್ಣಿಂದಸುರನ ಜಾರಿನಿಂದ ||೧೦೨||

ಕೊರಟುದಲೆಯು ಕೊಳೆನಾರುನಕಬ್ಬಾಯು | ಸುರುಟುಕಿವಿಯು ಸುಂತಿವೆರಲು ||
ಕಿರಿದುಕಿನಿಕೆ ಹತ್ತಿದಹಲ್ಲಿಂದುಗಿದೊಂ | ದುರದಕುಸುಂಗಿದವೆನ್ನ ||೧೦೩||

ಬತ್ತಿದಬಿಡಪೊರನಾರ ಬಲ್ಸೆರೆಸುತ್ತಿ | ಹತ್ತಿದಮಿಕ್ಕಿಗಾಬುಗಳ ||
ಕೊತ್ತಿಗಣ್ಣಕ ಕೋತಿಯುಸುಯಿಸಚಪ್ಪಡೆ | ಪೆಟ್ಟುಸಜೆಪಪೆಟ್ಟಿಯಿಂದ ||೧೦೪||

ಬಾತಕೆಕ್ಕೆಯ ಬಲುಮುಕ್ಕರಿಯೊಟ್ಟೆಯ | ಓತಿದಲೆಯು ಕೀನದಸಿಯ ||
ನಾತವಡೆದ ತನುಸಸಳ್ಳಮೂಗಿನ | ಘಾತವೆ ನಜೆಕಪ್ಪಂತೆ ||೧೦೫||

ನುನೆಗೆಬರಲು ಕಂಡಾವಿದೂಪಿಗೆ | ಮನದೊಗುಮುಗೆಕೊತ್ತರಿಸಿ ||
ಘನವಾಗಿಕಾರುವ ಕಸ್ಮಲೆಯುಸುಕಂಡು | ಜನಕಸವೆಸಂಸ್ಪಿಸಿ ||೧೦೬||

ಹೊಳೆಗೆಪೋಗಿ ಮೈಮಂಜೆಯು ಹಸನಾಗಿ | ತೊಳೆದು ತಿರುಗಿಬರಹೇಳಿ ||
ಹಳೆಗುಜೆಸ್ಥೆಯ ತಲೆಗಿಬ್ಬರಿಸಿಸಪಸು | ತಳಿದೊಂದರುನೆಯು ಮೊಬಸಿ ||೧೦೭||

ಕಳುಪೆ ಬರುತ್ತಿರಲಾ ಊರೊಳಗೋರ್ವ | ರುಯಿಡಿಲ್ಲರು ಕೂಡಿಕೊಂಡು ||
ಬಳಸಿಯಾಡುವ ಬೀದಿಯ ನಾಟಕವನು ಕ | ಣ್ಣಿಳಸಿ ನಿರೀಕ್ಷಿಸುತಿರಲು ||೧೦೮||

ತಾನದನೀಕ್ಷಿಪೆನೆಂದು ಬರುತ್ತಿರ | ಲಾಸೆರಮಿಯೊ ತೋರ್ವಕಂಡು ||
ಈ ನವಮಥ ಜೋಹುಮಸೋಡಿ ನೀನೆಂದು | ತಾನುತಿ ಪಾಸ್ಯಮನಾಡೆ ||೧೦೯||

ಧರದಿನೆಲ್ಲರು ತಗುಳಲುಪೋಗಿ ತಾನೊಂದು | ಮರನೇರಿಸೋಡುತಮಿರಲು ||
ಉರಿವ ಬಿಸಿಲುತಾಗಿಯಾಮುಂಡೆಯ ಜೆಣ್ಣಿ | ಕದಿಗ ಕಸಿತುನೋಡುವವರ ||೧೧೦||

ಮುಂಡೆಯಮೇಲೆ ಪಸಿತುಪೀಳಲಂತದ | ಕಂಜು ಹೇಸಿದಾಣಿಯಿಂದ ||
ಕಂಡಕಂಡವರಿಡಲಿಕಿದಲ್ಲಂ ಕಾಲು | ಗೊಂಡೋಡೆ ಕಡುಲಜ್ಜೆಯಿಂದ ||೧೧೧||

ಆರೆನ್ನ ಬೈದೊಡವಾರೆನ್ನ ಕೊಂದೊಡೆ | ಬಾರಿಸುವಾರನುಕಾಣೆ ||
ಕ್ರೂರಕಮ್ಮ ನನಗಿಂತಪ್ಪಸಂಸಾರ | ದಿರವೇಂದೋಡಿಬಂದು ||೧೧೨||

ಒಂದಡವಿಯಹೊಕ್ಕಲ್ಲಿಂಬೀಳುವೆನೆಂ | ದೊಂದುಕಮ್ಮರಿಯನು ಏರಿ ||
ನಿಂದು ಕಳಗೆನೋಡಿ ಚಕಿತಹೃದಯನಾಗಿ | ಯೆಂದುಜಾಸಿಸುತಿರ್ದನವನು ||೧೧೩||

ಅಂತಕನವನ ವಿದ್ಯೂಪಿಗೆ ಹೇಸಿಕೆ | ಯಂತಾಳಿಯೊಳಕೊಂಡುದಿಲ್ಲ ||
ಅಂತಲ್ಲದೊಡೆ ತನ್ನ ಸಾವಿಗೆಣಿಸಿಯವ | ನಂತರವನು ಮಾಡುವನೆ ||೧೧೪||

ಆ ಗುಂಡಿನಡಿಯೊಳುಕೈಯಿಕ್ಕಿ ನಿಜತತ್ತ್ವ | ಯೋಗನಿಷ್ಠಾಪರರಾಗಿ ||
ಯೋಗಿಯುಗಲಮಿರಲಲ್ಲಿಯವನ ನೆಳ | ಲಾಗಬೀಳಲುದಿಟ್ಟಿದೆರೆದು ||೧೧೫||

ಹಿರಿಯಾತಶಂಖನೆಂಬಾಮುನಿತಿಲಕನಾ | ಶರಣಾಸಿನಾರ್ಮುಕನೆಂಬ ||
ವರಶಿಷ್ಯಮುನಿಗಿಂತೆಂದನೀನೆಳಲಾತ | ನಿರದೆನಮಗೆ ಮೂರುಭವಕೆ ||೧೧೬||

ತಂದೆಯಾಗುವನಿದುನೆಲೆಯೆಂದಲ್ಲಿಂ | ಬಂದು ಕಮ್ಮರಿಯನು ಪರಿ ||
ನಿಂದಿರ್ದಾನಂದಿಯನಿಯ್ದಿಯವನೊಳಿಂ | ತೆಂದರು ಹಿತವಾಕ್ಯದಿಂದ ||೧೧೭||

ಏಕಿಲ್ಲಿನಿಂದಿರ್ದಪೆಯೆನಿಕೇಳ್ದಾ | ವ್ಯಾಕುಲನಾಪ್ರಪಂಚವನು ||
ಆ ಕಂತುಹರರೊಳು ನುಡಿಯಲಿಂತೆಂದರು | ಲೋಕೈಕಹಿತಮುಪ್ಪನುಡಿಯ ||೧೧೮||

ಎಲೆಸಂದಿನಮ್ಮರೂಪನು ನೀನುತಳೆದೊಡೆ | ಸುಲಲಿತಪುಷ್ಪಸೌಭಾಗ್ಯ ||
ನೆಲೆದೊರಕುವುದು ನಿಶ್ಚಯಮೆನಕೇಳ್ದದ | ನಲಸದೆಕೈಕೊಂಡುಳಿಕ ||೧೧೯||

ಮುನಿಗಳವರು ಪಾಲಿಸಿದಸುವ್ರತವನು | ಇನಿಸುನಿವಾರದೆಬಗೆಗೊಂಡು ||
ದಿನಚರಿಯದರೊಳು ನೆಗಳಿಸನ್ಯಸನದಿ | ತನುಪನಿಸರ್ಜನೆಗೆಯ್ದು ||೧೨೦||

ತುಂಬಿದಸೌಖ್ಯವನೀವ ಮಹಾಶುಕ್ಲ | ವೆಂಬಸಗ್ಗದೊಳುಸಂಜನಿಸಿ ||
ಇಂಬಾದ ಈರೆಂಟಬ್ಧೀಪಮಾಯುಷ್ಯ | ತುಂಬುವನ್ನತಿಸುಖವುಂಡು ||೧೨೧||

ಬಂದೀಗಂಧಕವೃಷ್ಟಿನೃಪತಿನವ | ಕಂದರ್ಪನಿನ್ನಗರ್ಭದೊಳು ||
ಸೌಂದರ್ಯಯುತನಾಗಿ ವಸುದೇವನೆಸರಾಂತು | ನಂದನನಾಗಿಪುಟ್ಟಿದನು ||೧೨೨||

ಎನಲುತನಗೆಮನದೊಳು ವೈರಾಗ್ಯಸಂ | ಜನಿಸಿ ಜಿನಪನಂಘ್ರಿಗೆರಗಿ ||
ಮನೆಗೆಯ್ದಿ ಶರಧಿವಿಜಯಗೆ ಭೂಭಾರಮ | ನನುಮುದದಿಂಹೊರಿಸಿದನು ||೧೨೩||

ನರಪತಿಯೊಡನ್ನೈನೂರ್ವರರಸುಗಳು | ವೆರಸಿಯಂಧಕವೃಷ್ಟಿನೃಪತಿ ||
ಗುರುಸಿಂಹನತಿಷ್ಠರಕೈಯಿಂದ ದೀಕ್ಷೆಯ | ಧರಿಸಿ ಮುಕ್ತಿಯನೆಯ್ದಿದನು ||೧೨೪||

ವೀರನುದಾರನುತ್ತಮಶುಚಿ ಘನಗಂ | ಭೀರನುತ್ತಮಬೋಧಯುತನು ||
ಚಾರುಚರಿತ್ರನೆಯ್ದಿದನು ಮುಕ್ತಿಯನಾ | ವಾರಮುದಾಪಹರಣನು ||೧೨೫||

ಇದು ಜಿನಪದಸರಸಿಜಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿ ನೇಮಿಜಿನೇಶಸಂಗತಿಯೊಳ | ಗೊದವಿದಸಂಧಿಗಳೇಳು ||೧೨೬||

ಏಳನೆಯ ಸಂಧಿ ಸಂಪೂರ್ಣಂ.

೮. ವಸುದೇವ ಶೃಂಗಾರವರ್ಣನಾಸಂಧಿ

ಶ್ರೀಮದಮರಪತಿ ಮಂಡಲಕೀಲಿತಪಾದ । ತಾಮರಸದ್ವಯನಜಗೆ ॥
ಕಾಮಮದೇಭಹರಿಗೆ ನೇಮಿಜಿನಪತಿ । ಗಾಮೋದವೆತ್ತೆರಗುವೆನು ॥೧॥

ಸ್ವಾರ್ಥಮೆನಿಸುವ ಶೌರೀಪುರದೊಳಗೆ ಕೃ । ಷಾರ್ಥದೇಶಮನಾಳುತಿರಲು ॥
ಪಾರ್ಥಿವಕುಲ ಮಸ್ತಕಮಣಿವಿನಯುಸ । ಮರ್ಥಸಮುದ್ರವಿಜಯನು ॥೨॥

ವಾರಿಧಿವಿಜಯನೃಪತಿಗಾಂಭೀರ್ಯದಿ । ವಾರಿಧಿಯನು ನೆರೆಗೆಲಿದ ॥
ಕಾರಣದಿಂದಾ ಅಸ್ವರ್ಥನಾಮವು । ಸೇರಿದುದಿಳೆಯರಿಕೆಯೊಳು ॥೩॥

ಅದೇಯಮೂರ್ತಿ ಸಮುದ್ರವಿಜಯಧರ । ಣೀದಯಿತೇಶನೊಳೊಸೆದು ॥
ಸೋದರರೊಂಬತ್ತುಮಂದಿಕುಮಾರರು । ಛೇದವಿಲ್ಲದೆಕೂಡಿಹರು ॥೪॥

ಆಂತವರಿಂನೆರೆಕಿರಿಯನು ರೂಪಜ । ಯಂತನು ವಸುದೇವಕುವರ ॥
ಕಾಂತಾಜಿತ್ಮಜಕೋಂಚಂದ್ರಮನುರೆ । ಸಂತಸದಿಂದಿರುತಿಹನು ॥೫॥

ಪಾರ್ಶ್ವಯವೇರದಮುಸ್ನ ತರುಣಿಯರುಗಳ ನಿ । ಕಾಯವನೊಲಿಯಿಸಿಕೊಂಬ ॥
ಭಯತಿಕೆಯು ಚಲ್ಲಿಕೆಯಾ ವಸುದೇವ । ರಾಯಕುವರಗೊಪ್ಪಿದುದು ॥೬॥

ವನಕರಿಗುತ್ಮಮಮದವೇರುವಪೋಲು । ಜನತಾಧೀಶನಂದನಗೆ ॥
ಮಿನುಗುವ ಪರುಂಜವ್ವನವೇರಲು । ನನೆವಿಲ್ಲಿಗೇರಿತುನಾರಿ ॥೭॥

ಇಂತು ಒಂದಾನೊತ್ಮವೊದಲ ಜವ್ವನದೊಳು । ಕಂತುಸದ್ಮಶವಸುದೇವ ॥
ಸಂತಸದಿಂ ತನ್ನೆಣೆಯದಮುಕ್ತಳ । ಸಂತತಿಯನು ಕೂಡಿಹನು ॥೮॥

ನಟಿಯಿಸುತರಸೆನ ಮನಕೆಸಂತಸಮಾಳ್ಪ । ವಿಟ ವಿದೂಷಕ ನಾಗರಿಕ ॥
ನಟಕಪಂಡಿತಪರಿಹಾಸಕಾದಿಗಳು ಸಿ । ಷ್ಟುಟಿಲತೆಯಿಂ ಕೂಡಿಹರು ॥೯॥

ವಾರದೊಡಿಗೆಗಳ ದೇಸೆಯನರಿದು ಶೃಂ । ಗಾರವವಾಡಿಕುವರನು ॥
ನಾರಿಯರೆರ್ದೆಯೊಳಗಾನಗರಿಯ ಕೇರಿ । ಕೇರಿಯೊಳಗೆತಿರುಗುವನು ॥೧೦॥

ಭಾವಿಸಿನೋಡುವ ಬಾಲಕಿಯರದಿಟ್ಟಿ । ತೀವಿಬಿಂಬಿಸೆಕನ್ನ ತನುವ ॥
ಆ ವಸುದೇವನಾಸೆಯಸೇರಿ ಪೊಳಲೊಳು । ದೇವೇಂದ್ರನೆನಿಸಿಕೊಳಲುವನು ॥೧೧॥

ಗೊಂದೆಗಳನು ಕಾಯದಗೊಂದಸೊ | ಅಂದವಡೆದವುಸುಮಪಸೊ ||
ಕುಂದದಜಂದಿನನೋ ಎಂದಾಪುರ | ಸುಂದರಿಯರು ನೋಳ್ಪರವನ ||೧೨||

ವಾಜೆಯನೇರಿ ವಾಹಳಿಯಾಡಿಪುಗುಳಾ | ರಾಜಧಾನಿಯಂಕೇರಿಗಳೊಳು ||
ರಾಜಸಂದನರೆಡಬಲದೊಳು ಒಬ್ಬ ರಾಜ | ರಾಜನಂದದಿತಿರುಗುವನು ||೧೩||

ಅದೆಯದೆ ಒಂದಬಂದವನಾ ಅಭಿನವ | ಮದನನೆಂದಾಪುರವರದ ||
ಸುದತಿಯರೊಳಗೊಬ್ಬರುಳಿಯದೆ ಬೀದಿಗೆ | ಅದಿರದೆ ಒಂದು ನೋಡುವರು ||೧೪||

ಕೇರಿಕೇರಿಯ ಮನೆಮನೆಯಂಗಣದೊಳು | ನಾರಿಯರೆಲ್ಲರೆಯ್ದಂದು ||
ಸ್ತ್ರೀರಾಜ್ಯಮೊ ಈನಗರಿಯೆಂಬಂತಾ | ಮಾರನಿಭನನೀಕ್ಷಿಸಿದರು ||೧೫||

ಸ್ವರನೆರಡನೆಯವತಾರವಕ್ಕೆಕೊಂಡ | ಪರಿಯೊಳಗಾನಗರಿಯೊಳು ||
ತಿರುಗುನರರಾಜಕುಮಾರನನಾಪುರ | ತರುಣಿಯರೊಲದೀಕ್ಷಿಸುವರು ||೧೬||

ಪೋಗದಿರೆಂಬತ್ತೆಯ ಮಾತಕೇಳದೆ | ಬಾಗಿಲವರ ಹೊರನೂಂಕಿ ||
ಈಗಮಗುಳ್ದನೆಂದೆಯ್ದಂದುನೋಡುವ | ರಾಗಾಧರೆಯರೊಪ್ಪಿದರು ||೧೭||

ಬಾರಿಪಗಂಡಮಗಳ ಬಗೆಗೊಳ್ಳರು | ಕೂರಸಿಗಳಸದೆಗೆಡರು ||
ಸೀರೆಕಳೆಯಲೇನೆಂದರಿಯರು ಪುರ | ನಾರಿಯರಪನಸೋಳ್ಪಾಗ ||೧೮||

ಅರಸುಮಕ್ಕಳ ಸತಿಯರು ತೊಟ್ಟುದುಟ್ಟುದ | ನಿರದೆ ಬಿಸುಟು ನಾಸಲುಟ್ಟು ||
ನೆರೆದತೊಳ್ತಿರೊಳು ತಾಮಾತೊಳ್ತಿರಾಗಿ ಬಂ | ದುರುಮುದದಿಂನೋಳ್ಪರವನ||೧೯||

ಅನ್ಯಪುರುಷರನೀಕ್ಷಿಸೆ ನುನೆಯಾಣ್ಮರಿ | ಗನ್ಯಾಯಕಾತಿಯರಹವು ||
ಮಾನ್ಯಗೆಡುವುದೆನ್ನದೆನುನೆವೆಣ್ಣಾ | ಧನ್ಯನನಂದು ನೋಡಿದರು ||೨೦||

ಮದಿಲನಡರಿ ಮಾಡವಹತ್ತಿ ನುರಗಳ | ತುದಿಯೇರಿಯಾಪುರವರದ ||
ಮದವತಿಯರು ನೋಡುನರಾಬರಚರ | ಸುದತಿಯರಂತಾನ್ಯಪನ ||೨೧||

ಲಲನೆಯರವನ ನೊಲಮನೋಡುವನೋಟ | ವಲರ್ಗಣೆಗಳಕಾಲಾಟ ||
ನಲಸಿದಬಗೆಯಬಲ್ಮೆಯ ನೋಡಿಸುವೋಟ | ಗೆಲವಿಗಿಕ್ಕಿದಕಾಳಕೂಟ ||೨೨||

ಅಂಗಡಿಬೀದಿಯಿಡಿದುನಡೆವಾನ್ಯಪ | ತುಂಗನೆಯ್ದುವಕಡೆಗಾಗಿ ||
ಹಿಂಗದೆನಡೆತಂದುದಾಸತಿಯರ ಜಾಲ | ವಂಗಭವನಜಾತ್ಮೆಯಂತೆ ||೨೩||

ಮುಟ್ಟಿಪಿಡಿದುನೋಡುವ ಮುಗ್ಧಸತಿಯರ | ಕಟ್ಟಕಡೆಯ ಕಣ್ಬೆಗಂ ||
ಅಟ್ಟಿಹಿಡಿಯೆ ಮುತ್ತಿನಬೊಂಬೆಯಂತಳ | ನಟ್ಟುನಡೆದನಾನ್ಯಪತಿ ||೨೪||

ಗಂಡುಗಂಡಿಗೆ ಮೋಹಿಸುವ ಚೆಲ್ವಿಕೆಯ ಕೈ | ಕೊಂಡ ಕುಮಾರಚಂದ್ರಮನ ||
ಗಂಡಗಾಡಿಯ ನೋಡಿದಬಲೆಯರಿಗೆ ಕಾವ | ನಂಡಲೆಯತಿಪಿರಿದಾಯ್ತು ||೨೫||

ಕಟ್ಟರಸಿನಕುವರನಚೆಲ್ವಿಕೆಯನುಕ | ಣ್ಣಿಟ್ಟುನೋಡಿದಮಾತ್ರದೊಳು ||
ಬಟ್ಟಬವ್ವನೆಯರಬಳಗಕಂಗೋದ್ಭವ | ನಟ್ಟುಳಿಯತಿಘನವಾಯ್ತು ||೨೬||

ಆ ವಸುದೇವಕುಮಾರನ ರೂಪವ | ಭಾವಬಲಿದುನಡೆನೋಳ್ಪ ||
ಭಾವೆಯರಿಗೆ ತತ್ಪುರದೊಳುಕಾವನ | ಹಾವಳಿವೆಗ್ಗಳವಾಯ್ತು ||೨೭||

ಶೃಂಗಾರಶರಧಿಶಶಾಂಕನರೂಪವ | ನಂಗೊಳಿಸಂತೀಕ್ಷಿಸುವ ||
ಅಂಗನೆಯರ್ಗಾಪುರವರದೊಳಗೆಯ | ನಂಗನಬ್ಬರಪಿರಿದಾಯ್ತು ||೨೮||

ಅರಮಗನಾಕಾರವ ನಿರೀಕ್ಷಿಸಿ ಸರ | ಪುರುಷರನೊಲ್ಪೆಸೆಂದೆಂಬ ||
ತರುಣೀಜನದಕಲ್ಲೆದೆಗೋಂಟೆಕಾವನ | ಹರಿದಾಳಿಗೀಡಾದುದಿಲ್ಲ ||೨೯||

ಅಲರಂಬನ ದಾಳಿ ಬಪ್ಪ ವಾರ್ತೆಯಕೇ | ಳ್ದಲಸದವನಸಡೆನೋಳ್ಪ ||
ಲಲನೆಯರೆದೆಯಬಲುಮೆನಾಣ್ಚಿಕೆಗೂಡಿ | ಒಲಸುತೆಗೆದುಪೋದುದಾಗ ||೩೦||

ಕಟ್ಟೊಲವಿನಕರುವಿನವೊಲುಕಣ್ಗಳ | ಪಟ್ಟರಮಗನನೀಕ್ಷಿಸುವ ||
ಪಟ್ಟಣದಬಲಾನೀಕದಳ್ಕೆದೆಲಾಳ | ವಟ್ಟಿಯಾಯ್ತಲರಂಬಿನಿಂದ ||೩೧||

ಅವಳನಸುವೆನವಳನಿಳೆಗುರುಳಿಪೆ | ನವಳನುಮೆಲ್ಲರ್ದಿಯಿಂದ ||
ಜೀವದೆಗೆವೆನೆಂದು ಸುಂದೆಗೆಸುರಗಿಯ | ಕಾವಕೀಳುವಳೆರನಾದ ||೩೨||

ಆ ಮನಸಿಜನಾ ಪೊಳಲೊಳಗಾ ಳು | ದ್ದಾಮರೂಪನನಡೆನೋಳ್ಪ ||
ಕೋಮಲೆಯರತನುಮನವನು ನಿರ್ಧೂಮ | ಧಾಮವಾಗಿರೆಸುಟ್ಟನಂದು ||೩೩||

ಆ ಸರನಾಥಭಾನುವನೊಸೆದೀಕ್ಷಿಸು | ವಾನಗರಿಯನಾರಿಯರ ||
ಮಾನವನಾಶಂಬರರಿಪುದಂದಹ್ಯ | ಮಾನಮಪ್ಪಂತುರುಪಿದನು ||೩೪||

ಕೆಲರಂಬುಗೂಡಾಗಿಬಿಳ್ದಿರೆ ಕೆಲರಲ್ಲಿ | ಯಲರಂಬಹೊತ್ತುಹೊಮ್ಮಿರಿದು ||
ನೆಲಕುರುಳ್ದರುಪುರಸುದತಿಯರಾನ್ಯಪ | ಕುಲತಿಲಕನನೀಕ್ಷಿಸುತ ||೩೫||

ಮಾಟಿನಿಸುವಮುಗುಳ್ನಗೆಯನರೂಪನ | ಧರ್ಮಟಿಪನ್ಯಪನನೀಕ್ಷಿಸುವ ||
ನೋಟಮಾತ್ರದೊಳಬಲೆಯರ್ಗೆ ವಿರಹದಾಟ | ಕೋಟಲೆಕಡುಸಿರಿದಾಯ್ತು ||೩೬||

ಅಡ್ಡಾಕೆಲ್ಲದಂದದಿ ನಾಲಿವಗೆಮನ | ವೊಡ್ಡಿಬಿಡದೆಸುಖವಿಸುವ ||
ದೊಡ್ಡಿತೆಂದಿಂಗಹುದೊ ಬಂದು ಕೆಲಬರು | ಗುಡ್ಡೆಣಿಕೆಯಸೆಣಿಸುವರು ||೩೭||
ಚೆನ್ನಿಗನೀವಸುದೇವನಲ್ಲದೆ ನಮು | ನಸ್ಸಿಗರೀ ಭವಾಂತರಕೆ ||
ಪಿನ್ನೊಡಹುಟ್ಟಿಂದು ಭಾಷೆಗಳನು ರಾಜ | ಕನ್ನೆಯರೊಸೆದು ಮಾತಾಡುವರು ||೩೮||
ಚಿತ್ರವೆನಿಪರೂಪುವಡೆದನೀರನ ಭಾನ | ಚಿತ್ರದ ಪಟಗಳ ತರಿಸಿ ||
ನೇತ್ರೇಂದ್ರಿಯಸುಖವೆನಿಪರೊಸೆದು ಶತ | ಪತ್ರಾಕ್ಷಿಯರಲ್ಲಿ ಕೆಲರು ||೩೯||
ಬಣ್ಣವನುಡರು ಬಂಗಾರಗಳನು ತೊಡ | ರುಣ್ಣಾರಂಗವನೋಸರಿಸರು ||
ಕಣ್ಣನವಿಗೆಯಾತನರೂಪನೋಡಿದ | ಹೆಣ್ಣೆಲ್ಲರಾಪುರದೊಳಗೆ ||೪೦||
ಪರಕಾಯಪ್ರವೇಶವು ಜೀವಗುಂಟೆಂ | ಬರನಾತುಗಳನುಂಟುಮಾಡಿ ||
ಪುರಸುದತಿಯರು ಚಿತ್ತವನುಸಂಗದೊ | ಳಿರಿಸಿಹಡೆದುನೂರ್ಪಯನು ||೪೧||
ಮರುವುಡಿಮದ್ದುಮೈಯುಂಪಂತೆ ಮನಸಿಜ | ಸಿರದೇರಿಂ ಸೊಕ್ಕಿದಂತೆ ||
ಅರಿವನುಂಗಿದನೋಹಪು ಮನೆವೆಣ್ಣಾಳು | ಮುರೆವರು ಮನೆಗೆಲಸವನು ||೪೨||
ಕನಸುಮನಸು ಕನಸರದೊಳಗಾನ್ಯಪ | ತನುಚಾತನನಿಂಬುಗೊಳಿಸಿ ||
ಘನಮೂಢಮೋಹನುರುಳುಗೊಂಡವೊಲುಪುರ | ವನಿತೆಯರುಗಳಿರುತಿಹರು ||೪೩||
ಮನಸಿನೊಳಾಕುಮರನ ಭಾವರತನೋ | ಕನಸಿನೊಳವನಸುರತವೆ ||
ಅನುಕರಿಸಿರಲಂತದರಿಂದಾಪುತ | ವನಿತೆಯರೆದೆಯಿಡದಿಹರು ||೪೪||
ಅನಿತರೊಳಾಕಕಾಮುನಿಯರೆಲ್ಲರು ಹೆತ್ತ | ತನುಜರೆಲ್ಲರು ನೃಪಸುತನ ||
ಏನುತಪುಪ್ರಾಕಾರವ ಸೌಂದರ್ಯಮ | ನನುಕರಿಸಿಯೆ ಜನಿಸಿದರು ||೪೫||
ಇಂತುಕಂತುವ ಪಾಪಳಿಯಾನವಸಿದ | ಕಾಂತಾಜನವನುಕಂಡು ||
ಚಿಂತಿಯಿಂದಾಪೌರರೊಂದೆಕೆಯೊಳುಸಿಂದು | ಮಂತಣವನುಮಾಡುತಿರಲು ||೪೬||
ಅನಿತರೊಳೋರ್ವಪಾರ್ವನು ತನ್ನವಲ್ಲಭೆ | ಜನನುತನಾಕುಮಾರಕನ ||
ವನಸೆಗೊಂಡುನೋಡಿ ಮನಸಿಜಬಾಣಕೆ | ತನುಲತೆಯನುಗುರಿಮಾಡಿ ||೪೭||
ಉಂಬುದಬಿಟ್ಟಳು ಉಡುವುದತೊರೆದಳು | ಕೊಂಬುದನೆಲ್ಲವುಳಿದಳು ||
ಶಂಬರರಿಪುನಿಭವಸುದೇವಕುಮರನ | ಪಂಬಲಸುತ್ಕಾಸುದತಿ ||೪೮||
ವಿರಹದೊಳೊಂಬತ್ತನೆಯವಸ್ಥೆಯನಂ | ದಿರದೆನ್ನಿಮೂರ್ಛೆಯೊಳಿರಲು ||
ಪರಿತಂದುನೋಡಿಯಿವಳು ಸತ್ತಳೆಂದತಿ | ಭರದಿಂದ ಪೊರಮಟ್ಟುಮನೆಯ ||೪೯||

ಮೊದಲುಮಂತಣಗೊಂಡು ನೆರೆದಿರ್ದಾನಪಥೆ | ಗದಿರುತಒಂದುನ್ಮೈಯಿಕ್ಕಿ ||
ಪುದಿದದುಃಖಮೊಳಿಂತೆಂದನುಪಾರ್ವನು | ಮದನರೂಪನೆನೀಕ್ಷಿಸುತ ||೫೧||

ಅತಿಗೂಸವತಿ ಹಾವಭಾವಮುಲಾಸಾ | ನ್ವಿತೆಯೆನ್ನ ಚಿತ್ತವಲ್ಲಭೆಯು ||
ಅತನುಪಿರಾಚನಡಿಕೊಂದಿತೆಂದಾ | ಗತಲಚ್ಚಿತನು ಮೊರೆಯಿಡಲು ||೫೨||

ಆನನ ಮೊರೆಯ ಕೇಳುತಾಸನ್ಯರೆಲ್ಲರು | ತಪೆ ನಗುತಲ್ಲಿಂದೆಳ್ದು ||
ಅವನೆದಮೆಯುಗಿದೆನುತ್ತವನೊಡಗೂಡಿ | ಯನಸೀಶನಾಲಯಮೆಯ್ದಿ ||೫೩||

ಅರಸಿಸೋಲಗದವಸರಮುಸರಿದುಬಂದು | ನೆರೆದರಮನೆಯಜಾಗಲೊಳು ||
ಶರಧಿಫೂರ್ಣಿಮೆನಂತೆ ತೊಪಲಪಿಡಿದುಕೊಂಡು | ಧರದಿಂನೊರೆಯಿಟ್ಟರಾಗ ||೫೪||

ಎಲ್ಲಿಯುದೀ ಮೊರೆಯೆಂದಪ್ಪಿನಿಜಯ ಭೂ | ವಲ್ಲಭನವರನು ಕರೆಸಿ ||
ಸಲ್ಲೀಲೆಯಿಂಕೇಳ್ದಿವರು ಪಿನ್ನಪನನು | ಸಿಲ್ಲದಿಂತೆಂದುಪಾಯದನು ||೫೫||

ವಸುಧೀಶ್ವರಕೇಳೆನ್ಮಾಪಿನ್ನಪವನು | ಉಸುರಲವೆನ್ನಾನಿಮ್ಮನು ||
ವಸುದೇವನಾಟವ ನೋಡೆಂದು ತಂತಮ್ಮ | ಸಿಸುಗಳೆಲ್ಲವಸಿಳುಹಿದರು ||೫೬||

ವಸುದೇವನ ರೂಪನಗೆಯೊಯಿದಂತಿರ್ದ | ಸಿಸುಗಳೆಲ್ಲವಕಾಣ ತಪೆ ||
ವಸುಧಾಧೀಶನೊತ್ತಿದಪೊತ್ತಿದಂತೆ ಬೆ | ಕ್ಕಸವಟ್ಟಸೆಯ್ದರಗಾಗ ||೫೭||

ಅನುಜಸಿಂತಪ್ಪದುಃಸ್ಥಿತಿಗಳನುವಸಲ್ಲ | ವೆನುತಮನದೊಳುಭಾವಿಸುತ ||
ಜನಪತಿಯವರನಂಬಲುಜೇಂದತಿ | ವಿನಯದಿಜೀಕ್ಕೊಟ್ಟನಾಗ ||೫೮||

ಆ ಪೋಲಗದಿಂದೆಳ್ದು ಮಂತ್ರಾಲೋಚ | ನಾವಾಸದೊಳುಕುಳ್ತಿರ್ದು ||
ಆ ಏಪು ಮಂತ್ರಿಮುಖ್ಯರನು ಕರೆಸಿಕೊಂ | ಡಾವಾರ್ತೆಯನುಸುರಿದನು ||೫೯||

ಅರಸುನುಡಿಯಲವರಂತೆಂದು ನುಡಿದರು | ಸರನಾಥನಿನ್ನನುಜಾತ ||
ತರಳತನದಿತನ್ನೆಯರಮುಕ್ಕಳು | ವೆರಸಿ ಬೂರೊಳು ತಿರುಗುವನು ||೬೦||

ತಂಡತಂಡದಿ ಪರಿಹಾಸಕರವನು ಕೂಡಿ | ಮಂಡಳಿಸಿರುಮಂತ್ರಿಗಳ ||
ದಂಡನಾಧರಕೇರಿಯೆನ್ನದೆ ಕುಸುಮಕೋ | ದಂಡನಂದಂತಿರುಗುವನು ||೬೧||

ಇರುಳು ಹಗಲುಮೆನ್ನದೆಯಚ್ಚಿಕಾರರು | ವೆರಸಿಬವಣೆಬರುತಿರಲು ||
ಪುರವನಿತೆಯರೆಲ್ಲ ಕೈಗೆಲಸವಬಿಟ್ಟು | ಪರಿದುಬಂದವನಸೋಡುವರು ||೬೨||

ಮುನಿವಾರ್ತೆಯದಂದುಗವನುಸುರೆದರು | ತನುಜರಿಗೆರೆಯರು ಹಾಲ ||
ಇನಿಯರಹೋಲಣ ಭಕುತಿಯಜಿಟ್ಟರು | ವನಿತೆಯರೀಪುರದೊಳಗೆ ||೬೩||

ಗುಡರತೋಳೊಳು ಮೈಮರೆದಿದಾರ್ಗ | ಪೆಂಡಿರುಕನಪರನೊಳಗೆ ||
ಗಂಡುಗಳರಸನು ವಸುದೇವಕುಮರನ | ಕೊಂಡುಬನ್ನಿಯೆನುತಿಹರು ||೬೩||

ಚಿತ್ತಜನಾವಸುದೇವಕುಮಾರನ | ಉತ್ತಮಮಪ್ಪರೂಪವನು ||
ಮತ್ತಾಪುರನಿತೆಯರಂಗದೊಳಗ | ಚೆಲ್ಲುತ್ತಿದನತಿನಿನ್ನಣದೊಳು ||೬೪||

ರತಿಯಿಲ್ಲದೊಡಮೀನಸ್ಯಪುರುಷರೊಳು | ಮತಿಯನಿಟ್ಟಾವಾಸಿನಿಯರ ||
ಸುತರವರಂತಾಗುವರೆಂಬ ನಾಣ್ನುಡಿ | ಯತಿಸಿದ್ಧವಾಯ್ತೊಮ್ಮೊರಿನೊಳು ||೬೫||

ಮತ್ತಮಂತದರಿಂದಾಪೊಳಲ್ಪೆಣ್ಣಳು | ಪೆತ್ತಮಕ್ಕಳರೂಪಲ್ಲ ||
ಉತ್ತಮವಸುದೇವನ ರೂಪಹಾಗಿತಾದು | ಹತ್ತಿಸಿದುತೆಯೊಪ್ಪಿದುದು ||೬೬||

ಇದರಿಂದಾ ಮಾನಸನಿಧಿಯಮೇಲಸರಾಧ | ಪೊದಮಿತಲ್ಲದೆ ಬಳಿಕೊಂದು ||
ಹದನವಾವರಿಯೆವೆಂದಾಮಂತ್ರಿಗಳು ಭೂ | ಸುದತಿಯಣ್ಣನೊಳುನುರುದರು ||೬೭||

ಆ ಸುಭಗತಿಹರುಷವತಾಳಿಯಿಂತೆಂದ | ನಾ ನೃಪನೀದುರ್ಯಶಕೆ ||
ಆಸದೆ ಬಂದು ಕಾರ್ಯಮಮಾಡಬೇಕೆಂದು | ತಾನವರನುಮತದಿಂದ ||೬೮||

ಆ ಮುಂತಾಳೋಜನಗ್ರಹಿಸಿಂದೆ | ಳ್ದಾಮತುದಿನದೋಲಗಕೆ ||
ಪ್ರೇಮದಿನಾವಸುದೇವಕುಮಾರನ | ನಾಮಹೀಪತಿಕರೆಸಿದನು ||೬೯||

ಬಂದನುಜನಬೇರುಮದಿದ ಸೂಬಗಗಾ | ನಂದದಿ ಪಿಗಿಬಿಗಿಯಪ್ಪಿ ||
ಕಂದಳಿವಾರ್ಯೆಶಂಖುಲಲಿತ್ತುಕೆಲದೊಳು | ತಾದುಕುಳ್ಳಿರಿಸಿ ಮೈದಡವು ||೭೦||

ಹಸುಳೆಯಿದೇಕ ನಿನ್ನೀಸುಕುಮಾರಾಂಗ | ಹೊಸೆದ ಹೂಮಾಲೆಯಂತಾಯ್ತು ||
ನಸುನಗೆಮಿಸುಗುವ ಮೊಗಮೇಕೆ ಪೊಗಸಿನ | ಶಶಿಯಂತೆ ಕಲೆಗುಂದಿದುದು ||೭೧||

ಬಿಸಿಲೊಳು ತಿರ್ಗನೆತಿರುಗಿದಕಾರಣ | ಒಸೆದುನೋಡುವರಕಣ್ಣೀರು ||
ಮುಸುಕಿದಕಾರಣ ನಿನ್ನ ಕೋಮಲತನು | ಹಸಗೆಟ್ಟುಬಡಬಡವಾಯ್ತು ||೭೨||

ಇನ್ನಿನಿತರಮೇಲೆ ತಿರುಗಿದೆಯಾಮೊಡೆ | ಎನ್ನಾಣೆಯೆಂದಾಕುವರಗೆ ||
ಕನ್ನೆಯರಾದಿಯಾದಾಸುಕಪರಿಕರ | ಮಂ ನಶ್ಮೈಯಿಂತರುಸಿದನು ||೭೩||

ಅನುಜನಮನಕೆ ತಾಮಾಡಿದಕೃತ್ಯವಂ | ದಿನಿಸರಿಯಾಜಾರದಂತೆ ||
ಸನುಮನದಿಂದರಮನೆಯಂಕೆಲದನಂ | ದನವನದೊಳಗಿರಿಸುತವೆ ||೭೪||

ಧಾರುಕ ವಲ್ಲಭೀಕರರೆಂಬೀರ್ವರು | ವೀರಭಟರ ಕಾವನಿರಿಸಿ ||
ಆದರಿಯುದಶೆರದಿಂದಿರಿಸಿದನು ಳು | ಮಾರನನತ್ನಜೆಗೆಂದು ||೭೫||

ತಮ್ಮಣ್ಣನೆಸೆಗಿದಕೃತ್ಯಮಾರಿಂಹೊರ | ಹೊಮ್ಮಿದಿರಲು ವಸುದೇವ ||
ತಮ್ಮಗಣಿಯಸಂದದೊಳಾವನದೊಳು | ಸುಮ್ಮಾನದಿಂದಿರುತಿರಲು ||೭೬||

ಹರಿಸದಿಸೊಂದುದಿನದೊಳಚ್ಚಿ ವಿಜಯಭೂ | ವರನವಲ್ಲಭೆ ಶಿವದೇವಿ ||
ಸ್ಮರನಿಭನಾವಸುದೇವನರಸಿಯರ್ಗೆ | ಪರಿಮಳಮಪ್ಪವಸ್ತ್ರವನು ||೭೭||

ಭಾಸಿಸಿ ಬಹುಮಣಿಪಾತ್ರೆಯೊಳಿಟ್ಟೋರ್ವ | ದಾಸಿಯಕೈಯೊಳು ಕಳುಹೆ ||
ಆ ಸುಕುಮಾರನವಳಕಂಡು ಸರಸವ | ನೋಸರಿಸದೆ ಮಾಡಿದನು ||೭೮||

ಅತ್ತಿಗೆಯಾತಿವದೇವಿಯನೇಹದ | ತೊತ್ಸಾದಕಾರಣದಿಂದ ||
ಒತ್ತಿರೋಡಾಡಿಸುತಿರೆ ಕಜ್ಜಗೊಳಿಸದಿ | ಮತ್ತನಳಿಂತಾಡಿದಳು ||೭೯||

ಕೋತಿಯವೊಲು ಬಾಧಸದೊಳಿರ್ದೀಜೇಷ್ಟೆಯು | ನೀತೋರಿದೆಯೆಂಬವಳ ||
ಮಾತಿಗೆ ಕದುಕಿಸಿದಂತಾಗೆ ವಸುದೇವ | ನಾತೊಳ್ತಿಸಕ್ಕೈನಿದು ||೮೦||

ತನ್ನ ಮುಂಗೈಯಕಂಕಣವನವಳಿಗಿತ್ತು | ಚೆನ್ನಾಗಿಯಾಸ್ಯಸಂಚಲನು ||
ಎನ್ನೊಳುಮರೆಸದೆ ಪೇಳೆನಲೆಂದವಳು | ಮುನ್ನಾದ ಕಜ್ಜವೆಲ್ಲವನು ||೮೧||

ತಿರದರುಶನವಾಗಿ ನುಡಿದದಾಸಿಯಮಾತ | ನರಿತೇಳಿಯಾವಸುದೇವ ||
ಬೆರಗಾಗಿ ತಾನಾಬುತ್ತಿಗಾಗಿವ ಹುಲ್ಲೆಯ | ತರಸಿನೆ ಸಸದೊಳು ಸೊಂದು ||೮೨||

ನಿರ್ಮಲನಿವನೆನ್ನ ನಜಾತನೆನ್ನದೆ | ಕೂರ್ಮೆಯನೊಕ್ಕಿಗಲೆನ್ನ ||
ದುರ್ಮತಿಗಳಮಾತಿಗೆ ಸೆರೆಯಾಡುವುದು | ಧರ್ಮವೆ ಬನ್ನಗ್ಯಜಗೆ ||೮೩||

ಪಿರಿದುಪಂಜಿಸಿ ನಿರ್ದೋಷಿಯನೆನ್ನೀ | ಪರಿಯೊಳು ಸೆರೆಯೊಳಗಿಟ್ಟ ||
ಅರಸನದಿಟ್ಟಿಗೆ ನೀರಬರಿಸಿ ನಾನು | ಪರಮಂಡಲಕಯ್ದುವೆನು ||೮೪||

ಅಳಿವುಸೊಡಲು ಉಳಿವುದು ಕೀರ್ತಿಯಪಕೀರ್ತಿ | ಇಳೆಯೊಳು ಮನುಜರಿಗೆಂದು ||
ಅಲಘುವಿಕ್ರಮಿಚಿಂತಿಸುವಾಸಮಯಕ್ಕೆ | ನಳಿನಬಾಂಧವನಸ್ತಮಿಸಿದ ||೮೫||

ಆರಯಿಸ್ತಮಾನದ ಜಾವವೆರಡರ | ಘೋತಮಪ್ಪರ್ಧರಾತ್ರೆಯೊಳು ||
ಧೀರಲಲಿತವಸುದೇವಕುಮಾರನಂ | ದಾರಯ್ದುದೆ ಪೊರಮಟ್ಟ ||೮೬||

ಪೊರಮಟ್ಟಾಪುರವನು ಪೊಗದಳಲೊಳು | ಕಿರಿದಾಸುದೂರವೆಯ್ತಂದು ||
ಸೆರೆಗಲಿಯದಿರಬೆ ಹೊಕ್ಕನಂತಕರಾಜ | ನರಿಕೆಯರುದ್ರಭೂಮಿಯನು ||೮೭||

ಅವಬಳಿಯೊಳಿನ್ನಡೆ ಕೊಂಡದಕುಂಟೆ | ಯಾ ಉರಿಯಂತಕನೆಂಬ ||
ದೇವಗೆ ಮಿಳ್ಳುಕಾತ್ರ್ಯಕದೊಳಗೆತ್ತಿವ | ದೀವಳಿಗೆಯತೆರನಾಯ್ತು ||೮೮||

ಮರಣಮುಖದಿಸಗ್ಗಕೆಸಂದವರನು | ನರಕಕಿಳಿದುಪೋದವರನು ||
ಪಿರಿದಳರ್ವಂತಾಪಾತಾಳನಾಟಾಂ | ಬರೆಗಮೆಯಿಪ್ಪುದುಚಿತಾಗ್ನಿ ||೮೪||
ಭೂತದಬೊಮ್ಮರಕ್ಕಸದ ಪಿಶಾಚದ | ಪೇತದಾಗರದಶಾಕಿನಿಯ ||
ಪೇತಾಳರನುರುಳ್ಗಳಗೊಂದಣದಿ ರುದ್ರ | ಭೂತಳಭೀಕರವಾಯ್ತು ||೮೫||
ಪಿತ್ಮನಪೋರಿಬೊಳೆಯನುಕಟದು ಕ | ನ್ನೆತ್ತರಕುಡಿದು ಪಾಂಪನು ||
ತುಪ್ಪುವಾಟನವನು ಕಾರಿನುರುಳ್ಗಳ | ಪೊತ್ತಕೊಪ್ಪಿರಿದಾಡುತಿಹುದು ||೮೬||
ಸಿಸುಗಳ ಬಾಯೊಳಡಸಿಸಿಡಿಮಿಡಿಗೊಂಬ | ಪಿಸಿಯನುವಾಸವ ತೋಡಿಪಾಕಿ ||
ಒಸೆದು ತಾವುಂಬ ಕೈತ್ಮದಬಾಡನೂಡಿಸಂ | ಪಿಸ ಪ ಶಾಕಿನಿಯರೊಪ್ಪಿರು ||೮೭||
ಕಳೆದಪಲ್ಲಕವನೆಯಗಪ್ಪಯನೂಡಿ | ಬಳಿಕ ಸೋಳಯಣೊಂಪೆಯನು ||
ಅಲಸದಾಡುವ ಜೂಯಂಗಾಡದುರುಳ್ಗಳ | ಬಳಗವಲ್ಲಲ್ಲಿಯೊಪ್ಪಿದುದು ||೮೮||
ಜಾತಯೆಂದಹೊಟ್ಟೆಯನುಮದ್ದಳೆಮಾಡಿ | ಪೇತಾಳಗಳನುಡಿಯಿಸಲು ||
ಓತುಮತ್ತಾವತಿಗೆಡದೆ ಕುಣಿವುತಿಪ್ಪ | ಭೂತಗಳೊಪ್ಪಿದುವಲ್ಲಿ ||೮೯||
ಬಡಸಿನೋಡುವ ಭೂತಪೇತ ಪಿಶಾಚಂ | ಗಳಮುಪ್ಪಳೊಳು ಪಂಪಗುಡವೆ||
ಅಟುಕಪೆಯಲಗುಮಿಟದು ಕಾಡುತಿರ್ದುವ್ರ | ಕಳನೇರಿ ಕೆಲ ಮುರುಳುಗಳು ||೯೦||
ಅರವೇಯದಮುರುಳ್ಗಳ ಕಾಲಕೊಳ್ಳಿಯಿಂ | ದರುಹಿಸಿತ್ತದನೆದ್ದನೆರೆದು ||
ಅರಿದುಚಿಕಿತ್ಸೆಗೊಡಾಡುತಲರ್ದರಾತಲ್ಲಿ | ಯರಿಕಯ ವೈದ್ಯರಾಕ್ಷಸರು ||೯೧||
ಗಂಡರನಂಚಿಸಿ ಮೆಲ್ಲನೆಕಾಮಳ | ಗೊಂಡಾರುಮರಿಯದತೆರದಿ ||
ಮಿಂಡರಬಳಿಗೆ ಪಾದರಕೆ ನಡೆನ ಮರು | ಳ್ವಿಂಡಿರತಾಡನೊಪ್ಪಿದುದು ||೯೨||
ಮುಂಡೆಯೋಡಿನ ಸಿವ್ಪುಗಳನು ಲಗ್ಗೆಯನೊಟ್ಟಿ | ಕೊಂಡೆರೆಯನು ಹಚ್ಚಿಕೊಂಡು ||
ಸಂಡನಿಟ್ಟಾಡುವ ಮಕ್ಕಳ ಮುರುಳ್ಗಳ | ತಂಡ ರಂಜಿಸಿತಲ್ಲಲ್ಲಿ ||೯೩||
ನಲಿವ ಮುರುಳು ನಗುತ್ತೊತ್ತರಕೆಕ್ಕಸ | ಗೆಲೆವಶಾಕಿನಿ ಡಾಕಿನಿಯರು ||
ಉಲಿವರಾಕ್ಷಸಕೋಟಿಯಿಂದಾರುದ್ರಭೂ | ತಳದತಿಭೀಕರವಾಯ್ತು ||೯೪||
ಇಂತಿಸೆಯಾರುದ್ರಭೂತಳದೊಳಗೆ ಕೃ | ತಾಂತದೀಕ್ಷಿತನು ಲೋಕವನು ||
ತಾಂತನುಸೆಳ್ಕಟ್ಟಮಾರಣಮುಖಕುಂಡ | ದಂತೊಂದು ಕುಂಡವೊಪ್ಪಿದುದು ||೯೫||
ಭರದಿಂದಾ ಕೊಂಡದ ತಿಪ್ಪಿಗೆ ಬಂ | ದರಮಗ ತನ್ನ ಕೈಗೆಯ್ದ ||
ವರರತ್ನಭೂಷಣಾವಳಿಯನು ತೆಗೆದೊಂದು | ಬರೆದೋಲೆಯನಲ್ಲಿರಿಸಿ ||೯೬||

ಅಲ್ಲಿಗನತಿದೂರದೊಳೊಂದು ಹೊಸಸೂಲ | ದಲ್ಲಿ ಕೀಲಿಸಿಜೀವವಿಡಿದ ||
ಬಲ್ಲಿದನೋರ್ವ ಬೀರನಕೂಡೆಯದಿರದೆ | ನಿಲ್ಲದಿಂತೆಂದಾಡಿದನು ||೧೮೨||

ಎಲೆ ಶೂಲದ ಬೀರ ಕೇಳೆನ್ನ ಗ್ರಜ | ನಿಳೆಹೊರದಪಕೀರ್ತಿಯನು ||
ಅಲಸದೆಯವಿಚಾರದಿಂದೆನ್ನ ತಲೆಯೊಳು | ನಿಲೆಮಾಡಿದನೆಲ್ಲರರಿಯ ||೧೮೩||

ಅಂತದರಿಂದೀ ಉರಿಗೊಂಡದೊಳು ಬೀ | ಳ್ವಂತಕಗೃಹಕೆಯ್ದುವೆನು ||
ಇಂತೀವಾರ್ತೆಯನಿಲ್ಲಿಗೆಯಿ ಪ್ಪುದರೊಳು | ನೀಂ ತಳುಮಾಡದೆ ಪೋಗು ||೧೮೪||

ಎಂದುಕೊರಚಿ ತನ್ನ ಹೆಸರನುಸುರಿ ಮು | ತ್ತೊಂದುಪಣನಹಿಡಿದೆಳೆದು ||
ತಂದಾಕುಂಡದೊಳಗೆಹಾಕಿ ವಸುದೇವ | ನಂದುಮುಂದಕೆಚಿಮ್ಮಿದನು ||೧೮೫||

ಬೆಳಗಾಗುವಸಮಯಕೆ ಮೊತ್ತಮೊದಲೆ ತಾ | ನಲಘುವೇಗದೊಳೈತಂದು ||
ಬಳಲದೆ ತಳಿರಡಿಗಳ ನೋವ ನೋಡದೆ | ಕಳೆದನು ತನ್ನ ಸೀಮೆಯನು ||೧೮೬||

ಇತ್ತಶಬಾಲಯವನುಕಾವವರಾ | ಹೊತಾ್ತರೆಯಾಬಳಿಗೈದಿ ||
ಮತಾ್ತಕುಂಡದಬಳಿಯೊಳು ಕಂಡರ | ತ್ಯುತ್ತಮಮಪ್ಪಭೂಷಣವ ||೧೮೭||

ಆ ಸಮಯದೊಳಾಕುವರನೊರೆದಪಾತ | ನಾ ನಾವಿನವಾರ್ತೆಯನು ||
ಆ ಶೂಲದಮೇಲಣಬೀರನೆಲ್ಲವ | ನೋಸರಿಸದೆ ಪೇಳಿದನು ||೧೮೮||

ಅರೆಬೆಂದಾಕೊಂಡದೊಳರಿಮುರಿಯಾಗಿ | ಉರುಳಿಬೀಳಬ್ದಭಗಂಡು ||
ಅರಸುಮಗನದೆಂದೇಬಗೆದಾಭಟ | ರ.ರುತರದುಃಖಿಯತಾಳಿ ||೧೮೯||

ಮತಾ್ತಮಣಿದೊಡವಾ ಓಲೆಯನಿರ | ದೆತ್ತಿಕೊಂದಾಪುರಕೆಯ್ದಿ ||
ಸುತ್ತಿದರಸುಗಳ ನಡುವಣೋಲಗದ ನ್ಯ | ಪೋತ್ತಂಸನಬಳಿಗೆಯ್ದಿ ||೧೯೦||

ದೇವ ಚಿತ್ತೈಸುನಿನ್ನಣುಗಿನಸುಜ ವಸು | ದೇವನ ಕೊಡವ ಇವೆಂದು ||
ಕಾವಲರುದ್ಯಭೂಮಿಯೊಳಿರ್ದವೆಂದವ | ನೋವದೆತಂದುಮುಂದಿಟ್ಟ ||೧೯೧||

ಶೂಲದಮೇಲೆಕೀಲಿಸಿ ಬೀವಹಿಡಿದಿ | ರ್ದಾಳಿನೊಳೊರೆದನುಡಿಯನು ||
ಪೇಳಿಮತಾ್ತ ಓಲೆಯನೀಯಲದನೋರ್ವ | ನಾಳೋಚಿಸುತಿಂತನುಡಿದ ||

ತರಳತನದಿನಳ್ತಿಯಿಂ ನಾನೂರೊಳು | ತಿರುಗಿದುದನೆ ತಪ್ಪೆಂದು ||
ಪಿರಿದುಭಾವಿಸಿದಿರಲ್ಲದೆ ಪಶವೆಣ್ಗೆ ನೋ | ದರನೆಂದುಭಾವಿಸಿತಿಲ್ಲ ||೧೯೩||

ದೋಷಿಯಲ್ಲದನೆನ್ನನು ದೋಷಿಯೆಂಬಾ | ದೂಸಕರಾದೂರುಗೇಳಿ ||
ಮೋಸವಪಮಾಡಿ ಸನ್ಯಾಸದಿಂದವೆ ಮ | ತಾ್ತನೆರೆವನೆಯೊಳಿಕ್ಕಿದಿರಿ ||೧೯೪||

ಇರುಮುಟ್ಟಮೆಂದುಚಪ್ಪರಿಸಲದಕೆ ಸುಮ್ಮ | ಸಿರಬಲ್ಲಪನನೀಏಧಗೆ ||
ಬರಿಸಿದಹೀಹಾಳಿಕೆಗಾಗಿ ಕೊಂಡದ | ಉರಿಯೊಳುತನುವನೀಗಿದೆನು ||೧೧೫||

ಹಿಂದೆಯಾರಾರುಮಾಡದ ದೋಷಮನಾ | ನಿಂದುಮಾಡಿದೆನಾಫಲವೆ ||
ಶಂದೆನ್ನನೀಗತುಪ್ಪದೊಳಗೆಬೇಯಿಸಿ | ಕೊಂದುದು ನಿಶ್ಚಯಮಾಗಿ ||೧೧೬||

ಅನುಜನಳಿದನೆಂದಗ್ರಜರೆಲ್ಲರೊಂ | ದಿನಿಸುಮ್ಮಳವಮಾಡಬೇಡ ||
ಘನದುರಿತದ ಪ್ರಾಯಶ್ಚಿತ್ತಕಾಗಿ ನಾ | ತನುಪನಗ್ನಿಯೊಳುನೀಗಿದೆನು ||೧೧೭||

ಎಂದಾಬರೆದೋಲೆಯ ಸಂಧಿನಿಗ್ಗಪಿ | ಯೊಂದಿನಿಸುಳಿಯುದೋದಿದುದ ||
ಸಂದೆಗವಿಲ್ಲದೆ ಕೇಳಲೊಡನೆಮೂರ್ಛೆ | ಯೊಂದಿದುದತಿಬೇಗದೊಳು ||೧೧೮||

ಸಿರಗಂಪು ಸಿರಿಪಚ್ಚೆಪನಿನೀರು ಬಜ್ಜಣ | ದೆಲರುಪಚಾರಗಳಿಂದ ||
ಧರಣೀಪತಿದಿಟ್ಟಿದೆರೆದೀತಿರದೊಳು | ಹಿರಿದಾಗಿಹಳವಳಿಸಿದನು ||೧೧೯||

ಎಲ್ಲಿಯರಾಜ್ಯವೆಲ್ಲಿಯಭೋಗದಕಾಂಕ್ಷೆ | ಎಲ್ಲಿಯಮಹದೈಶ್ವರ್ಯ ||
ಎಲ್ಲಿಯ ಸುದತೀಜನದಬಾಳುವೆ ನೀ | ನಿಲ್ಲದಿರಲು ವಸುದೇವ ||೧೨೦||

ಹಾ ವಸುದೇವ ಹಾ ಯದುಕುಲಮಣಿದೀಪ | ಹಾ ವನಿತಾಜನಮದನ ||
ಹಾ ವಸುಧಾಲಂಕೃತ ಹಾಹಾ ಎಂ | ದಾವಿಭುಹಳವಳಿಸಿದನು ||೧೨೧||

ಇನ್ನೇಕರಸುತನದ ಪಂಬಲನುಜಾತ | ನಿನ್ನನುರಿವಕೊಂಡದೊಳಗೆ ||
ನನ್ನ ಕೈಯಾರೆಕೆಡಹಿಕೊಂದಪಾಪಿಗೆಂ | ಬನ್ನೆಗಮಾಪೋಲಗಕೆ ||೧೨೨||

ಮುಕುಳಿತಮಾದನಪಾಂಬುಜವನಪನು | ಏಕಸನಮಾಳ್ಪಿನಂತೆ ||
ಏಕಲವಾಗಿದಾರ್ಸಭೆಗರಿಂದಮನೆಂ | ಬಕಲಂಕಮುನಿಯೆಯಿದ್ದನು ||೧೨೩||

ಬಂದಾಮುನಿತನಗೆರಗಿದನೊಳಗಿಂ | ತೆಂದನೆಲೇಸರನಾಥ ||
ಕಂದರ್ಪರೂಪನುಕಲವಾನುದಿವಸಕ್ಕೆ | ಬಂದುನಿನ್ನೆಡೆಗೆಯ್ವುವನು ||೧೨೪||

ಬೇವುದುಪುಸಿವಹ್ನಿಯೊಳಕೊಳ್ಳನಾಸ್ವಾ | ಹಾವಧುತನ್ನೋಪವಳು ||
ಆ ವಸುದೇವನ ರೂಪಿಗೆ ಸೋಲ್ವಳೆಂ | ಬಾಶಂಕಾಭಾವದಿಂದ ||೧೨೫||

ಎಂದುನುಡಿದು ನರನಾಥನಚಿತ್ತದ | ಸಂದೇಹಪಪರಿಹರಿಸಿ ||
ಹೊಂದಿಸಿಮನಕೆಮುದವನಾಮುನಿಯು | ಲ್ಲಿಂದಪೋದನು ಬಳಿಕಿತ್ತ ||೧೨೬||

ವಸುದೇವನೆಲ್ಲಾ ಜನಪದವನುಹೊಕ್ಕು | ಕುಸುಮಶರನಬೀಡೆನಿಸಿ ||
ಎಸೆವವಿಜಯಖೇಟಮೆಂಬನಗರಿಯರಂ | ಜಿಸುವನಂದನವನಕಯ್ದಿ ||೧೨೭||

ಆ ವನಜಲಕ್ಷ್ಮಿಯಮನ್ಯದೊಳೆಸೆವ ನಾ | ಭೀವಲಯದತೆರನಾದ ||
ತಾವರೆಗೊಳದೊಳಗಡಗಿಸಿದನುಮೈ | ತೀವಿದಪಥಪರಿಶ್ರಮವ ||೧೭೮||
ಆವನಜಾಕರದೊತ್ತಿನೊಳೊಂದೆಳೆ | ಮಾವರಲಲ್ಲಗೆಯ್ತಂದು ||
ಸೇವಂತಿಯೆಸಳ ಪಚ್ಚಡಿಸಿಯೆ ಮೂದಗಿದನು | ಭೂವನಿತೆಯನಪ್ಪುವಂತೆ ||೧೭೯||
ಒಂದುಜಾವಪರ್ಯಂತರ ನಿದ್ರಾ | ಸುಂದರಿಯೊಳು ಮೈಮರೆದು ||
ಒಂದಿದಸುಖದಿಂದ ತನ್ನ ತಾನರಿಯದೆ | ಕಂದರ್ಪನಿಭನು ಕೂಡಿರಲು ||೧೮೦||
ಹರಿಣಲೋಚನೆಯರೀರ್ವರು ತನ್ನ ಕೋಮಲ | ತರಪದಯುಗಪದ್ಮಂಗಳನು ||
ಹರಿಸದಿನೊತ್ತುವ ಕನಸುಗಂಡಾ ನಿದ್ರೆ | ಹರೆಯಲು ರಾಜನಂದನಗೆ ||೧೮೧||
ಕನಸಿನಿತಾಯಿತ್ತೆಂಬಂತೀರ್ವರು | ವನಿತೆಯರಾಪಜ್ಜೆಗಳನು ||
ಮನುಗುವ ತೊಡೆಯಮೇಲಿಟ್ಟು ಒತ್ತಿದರಾ | ವನಜೋಪಮಕರದಿಂದ ||೧೮೨||
ಆ ವಧುಗಳ ಕಡೆಗಣ್ಗಳಬೆಳ್ಪಿಳ | ಗಾವರಿಸಲು ವಸುದೇವ ||
ಭೂವರ ಕಣ್ದೆರೆದನುಜೊನ್ನಗಂಡಿಂ | ದೀವರವೆಂಬಮಾಳ್ಕೆಯೊಳು ||೧೮೩||
ಗಾಡಿಕಾತಿಯರ ಕತನದಿಂದಲೆ ಸಪ್ಪ | ನಾಡುಬೀಡೆಲ್ಲವಬಿಟ್ಟು ||
ಓಡಿಬಂದರೆ ಪೆನ್ನಬಿಡುವೆಯ್ದಿ ಬಂದೆನ್ನ | ಕಾಡಿಕಾಲ್ವಿಡಿದಂದಾಗ ||೧೮೪||
ಪೆಂಗಗೊಳನಾಂಟಿದ ದಿಟ್ಟಿಬೆಗೆಯದಾ | ಸೊಗಯಿಪಕಣ್ಗೊಡವರಿದು ||
ಮುಗೆನನಾಂಟಿದ ಮನವನುತೆಗೆಯದೆ ಕಾಲ | ತೆಗೆದ ಸಪತಕೊಡೆಯಿಂದ ||೧೮೫||
ಅದನರಿದಸದ ಕೆಳದಿ ಚಿತ್ರಲತೆಯೆಂಬ | ಮದವತಿ ತಲೆದೆಸೆಸಿಂದು ||
ಮೊದಲಲರ್ವಿಜ್ಜಣಿಗೆಯು ಬೀಸುತಲಾನೊಳ | ಗೊದಪಿನುಡಿದಳಿಂತೆಂದು ||೧೮೬||
ಲಜ್ಜೆಯಿದೇಕೆ ಕಾಲ್ದೆಗೆದಪೆನುಕುಮಾತ | ಕಜ್ಜಳಾಕ್ಷಿಯರಂಜಿಸುವ ||
ಪಜ್ಜೆಗಳನುಮುಂದಕೆ ನಿನ್ನ ಕೈಯಿಂದ | ಸಜ್ಜುಕಸೆರನೊತ್ತಿಸುವನು ||೧೮೭||
ಎಂದುಸುಡಿದ ಚಿತ್ರಲತೆಯನುಡಿಗೆ ಮನ | ದಂದಾ ವಸುದೇವಕುವರ ||
ಸುಂದರಿಯರು ಕಾಲನೊತ್ತುವಕೆರನೇ | ನೆಂದುಕೇಳಲು ಪೇಳ್ದಳಿಂತು ||೧೮೮||
ಈಪುರವರದನುಪೀಪತಿ ಚಿತಶತ್ರು | ಗೀಪೆಣ್ಮಣಿಗಳುಪುಟ್ಟಿದರು ||
ರೂಪಕಲಾಪರಿಣತೆಯೊಳು ತಮಗೆ ತಾ | ಮೇಪಡಿಯಾಗಿ ರಂಜಿಸುತ ||೧೮೯||
ಈಯಂದದಿನೊಪ್ಪುವ ಜಯೆ ವಿಜಯೆಯೆಂ | ಬಾಯತತಾಕ್ಷಿಯರಿಗುತ್ತಮದ ||
ಪ್ರಾಯವೇರಲು ಕಾಣುತಕರೆಸಿದನಾ | ರಾಯನೋರ್ವಶಕುನಿಗನ ||೧೯೦||

ಕರಸಿದನೈಸುತ್ತಿಕನೊಳಗಿಂತೆಂ | ದೊರೆದನೆವ್ಮಾ ಸುತೆಯರಿಗೆ |
ವರನೆಂತಪ್ಪನಾಗುವನೆನೆಕೇಳ್ದಾ | ದರದಿ ನುಡಿದನವನಿಂತು ||೧೪೧||

ಈಊರವನದಕೊಳದತೀರದ ಸೆಸಿ | ಮಾವಿನಮರದ ಮೂಲದೊಳು ||
ಭೂವರನೋರ್ವನುಬಂದೊರಗುವನವ | ನೀವನಿತಾಮಣಿಗಳಸು ||೧೪೨||

ನವವಿಧಸಂಗೀತದ ಸುಪ್ರಪಂಚದಿ | ವಿವರಿಸಿಗೆಲುವನಂದವಗೆ |
ಇವರುರುತರಹರುಹದಿ ಮಾಲೆಸೂಡುವ | ರವನೀತಳಮರಿವಂತೆ ||೧೪೩||

ಇಂದುವದನೆಯರಿಗಿದು ಸಿದ್ಧಾದೇಶ | ವೆಂದೊರೆದನನುಡಿಗೇಳಿ ||
ಅಂದಿಂದೀನಂದನವನದೊಳು ಕಾಪ | ತಂದಿಟ್ಟನೆಮ್ಮಭೂವರನು ||೧೪೪||

ಬಲ್ಲಿದರಾಣೆಯಿಡಲುವಿಾರದಂತೆ ನೀ | ನಿಲ್ಲಿಗೆ ಬಂದೊರಗಿರಲು ||
ಇಲ್ಲಿರ್ದಕಾವಲಪರು ನಮ್ಮರಸಿಗೆ | ನಿಲ್ಲದೆಪೇಳಲೈದಿದರು ||೧೪೫||

ಆ ಶಕುನಿಗನ ಮಾತನುಕೇಳಿದಂದಿಂ | ದೀಸುದತಿಯರೀನವನದೊಳು ||
ಬೇಸರದಾತುರದಿಂ ವನಸತಿಯರ | ಪಾಸಟಿಯಂತಿರುತಿಹರು ||೧೪೬||

ಇಂದುನೀನಾಪಾಂಥಶ್ರಮದಿಂದಿಲ್ಲಿ | ಕಂದರ್ಪನಂತೊರಗಿರಲು ||
ಸುಂದರಿಯರು ನಿನ್ನ ಕಾಲಾಸರುಕೆಸ | ಲೆಂದುನಲ್ಮೆಯೊಳೊತ್ತಿದರು ||೧೪೭||

ಇಂತಿದಕೇಸುಕುಮಾರ ನಿನಗೆಲಜ್ಜೆ | ಕಾಂತೆಯರುಗಳನ್ಯರಲ್ಲ ||
ಸಂತಸದಿಂದಕಾಲ್ಗಳನೀಡಿಪೊಡೆ ನೋ | ವಂತಪಿಸುವರು ಎಂಬಾಗ ||೧೪೮||

ಸುರಪತಿವಿಭವದಿಂದಾಜಿತಶ್ರೀಭೂ | ವರನಾನಂದನಕೆಯ್ದಿ ||
ಹರಿಸದಿನಾ ವಸುದೇವನಕಂಡಾ | ದರವನುಪಿರಿದಾಗಿಮಾಡಿ ||೧೪೯||
ಆರಮನೆಗೊಡಗೊಂಡುಪೋಗಿಸತ್ಕರಿಸಿ ಬಂ | ಧುರಬಂಧುಕಾಧರೆಯರ ||

ಸುರುಚಿರಸಂಗೀತಪ್ರಸಂಚಮನೀ | ನಿರದೆ ಪರೀಕ್ಷಿಸಿವೆನಲು ||೧೫೦||
ಆ ವಸುದೇವನವರಸಂಗೀತದಿ | ನೋವದೆಗೆಲಲಾತುರದಿ ||

ತೀವಿದೊಲವಿನಿಂದವನ ಕಂಧರದೊಳು | ಪೂವಿನಮಾಲೆಸೂಡಿದರು ||೧೫೧||
ಅಂದಿನದಿನದ ಮುಹೂರ್ತದೊಳಾವಿಭು | ಕಂದರ್ಪದೇವನನ್ನಿಭಗೆ ||

ಇಂದುಮುಖಿಯರೀರ್ವರು ತನುಜೆಯರನಾ | ನಂದದಿಮದುವೆಮಾಡಿದನು ||೧೫೨||
ಈತೆರದಿಂದ ಮದುವೆಮಾಡಿಯಾತನು | ಜಾತೆಯರ್ಗರ್ಧರಾಜ್ಯವನು ||

ಪ್ರೀತಿಯಿಂದೀಯಲಂತವರೊಳಗಾ ವಿ | ಖ್ಯಾತನೊಸೆದುಕೂಡಿದನು ||೧೫೩||
ಗಿರಿಸುತೆ ಗಂಗಾಸುದತಿಯರೊಳಗಿಂದು | ಧರನೊಲವಿಂಕೊಡಿದಂತೆ ||
ಗರುವೆಯರವರೀರ್ವರೊಳು ಕೂಡಿದನಾ | ವರಗುಣನಿಧಿವಸುದೇವ ||೧೫೪||
ಇದುಜಿನಪದಸರಸಿಜ ಮದಮಧುಕರ | ಚದುರಮಂಗರಸರಚಿಸಿದ ||
ನುದನಾವಿ ನೇಮಿಜಿನೇಶಸಂಗತಿಯೊಳ | ಗೊದವಿದಾಶ್ವಾಸಗಳೆಂಟು ||೧೫೫||

ಎಂಟನೆಯ ಸಂಧಿ ಸಂಪೂರ್ಣಂ.

೯. ವಸುದೇವ ಗಜಾರೋಹಣ ಸಂಧಿ.

ಶ್ರೀಮದಮರಪತಿ ಮೌಳಿಕೀಲಿತಪಾದ | ತಾಮರಸದ್ವಯಸಜಗೆ ||
ಕಾಮಮದೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತೆರಗುವೆನು ||೧||

ಎರಕದಿಂದಾ ಈರ್ವರೊಳುಕೂಡಿರಲಾ | ಕಿರಿಯಳು ವಿಜಯಾಂಗನೆಗೆ ||
ನೆರೆಗಲಿಯಕ್ರೂರನೆಂಬಹೆಸರನಾಂ | ತರಿಕೆಯಮಗನುದಿಸಿದನು ||೨||

ಅವರೀರ್ವರೊಳಗತಿಮೋಹದೊಳಿರ್ದೊಂದು | ದಿನದೊಳಗೀಸತಿಯರೊಳು ||
ಅಪರತಮಿಪ್ರುದೆನಗೆಯನುಚಿತಮೆಂದು | ಕುವರನೆಣಿಕೆಮಾಡಿದನು ||೩||

ಒಂದಾನೊಂದುರಾತ್ರಿಯೊಳಾರಮಣಿಯು | ರೊಂದಿನಿಸರಿಯದಂದದೊಳು ||
ಕಂದರ್ಪನಿಧನಾಸಗರಿಯ ಪೊರಮ | ಟ್ಟೊಂದಿದಾರಣ್ಯಕೆಯ್ದಿದನು ||೪||

ಕರಿಖಳ್ಗಿದಂಷ್ಟ್ರಾಷ್ಟಾಪದ ಫಲ್ಲೂಕ | ಹರಿಚಿತ್ರಕಾಯಲುಲಾಯ ||
ಪುರುಷವ್ಯಾಘ್ರಾನೀಕಾಸ್ಪದಮಾದ ದು | ರ್ಧರತರ ವಿಪಿನಕೆಯ್ದಿದನು ||೫||

ಆ ವನದೊಳು ಲಯಕಾಲದಕಾರ್ಮುಗಿ | ಲಾವಳಿಯಾಗಸದಿಂ ||
ಭೂವಲಯಕೆ ಬಂದಂತಿರಾನೆಯುಹಿಂಡು | ತೀವಿ ಭೀಕರಮೆಯ್ದಿದುದು ||೬||

ಆ ಕರಿಗಳಮಧ್ಯದೊಳಗೊಂದು ವದಹಸ್ತಿ | ನಾಕಾಧಿಪನ ಗಜದಂತೆ ||
ಆಕಾರವಡೆದುನ್ಮದವೇರಿ ನಡೆದುಬಂ | ದಾಕುವರನಕಂಡುದಾಗ ||೭||

ಮರಗಳಕಿಳ್ತು ಪಿಬಯಮರಗಳ ಹೊ | ಯ್ದುರುಳಿಸುತವೆಕಗ್ಗಲ್ಲ ||
ನೊರಡಿಯನಾಕೊಂಬಿನಿಂ ನುಗ್ಗುನುರಿಮಾಡು | ತಿರದೆಯ್ದಿತಾಭದ್ರಹಸ್ತಿ ||೮||

ಈ ನವಮದಮಾತಂಗಮನೇರಿದೊ | ಡಾನೆವಿನ್ನಾಣಿನಾಸಹೆಸ ||
ಈನೆಲಕೋರ್ವನೆಯೆನುತದಕಣ್ಮ | ತ್ತಾನದೆಸರದೋರಿದನು ||೯||

ತುಳಿಲಾಳಿನಾಸರವನು ಕೇಳುತಾಗಳೆ | ವಳಿಯಪಾವಿನಮಾಳ್ಕೆಯೊಳು ||
ಇಳಿದ ಸುಂಡಿಲನೆತ್ತಿಯಿದಿರಾಗಿಬಂದು ಬ | ಲ್ಮಳಿಸಿಂದಮೇಲ್ವಾಯ್ತಾಗ ||೧೦||

ದಂಡಧರನಕೋಣನುರೆ ಮುಳಿದವೊಲು ವೇ | ತಂಡಸುಗ್ರದಿನೆಯ್ದಂದು ||
ಸುಂಡಿಲನೆತ್ತಿವೊಡೆಯಲುಕುನುಂಗಿ ಭೂ | ಮಂಡಲಾಧಿಪನುರುಳಿದನು ||೧೧||

ಧರೆಗುರುಳುವನೃಪತಿಯುಕಂಡುನ್ಮದ | ಕರಿದಂತಯುಗದಿಂದತಿವಿಯೆ ||
ಹರನಡಿಗಾಣಲೆಂದಾಹರಿಯಿಳೆಯ ಸೂ | ಕರನಾಗಿತಿವಿದಂತಾಯ್ತು ||೧೨||

ತಿವಿದಾನೆಯುದಂತದ್ವಯಮಧ್ಯದೊ | ಳವನಿಪಜಗುಳಿಸಿಳ್ಕಿದೊಡೆ ||
ತಪಕದಿಪಿಡಿದರಾಹುವಿನದಾಡೆಯೊಳೊ | ಪ್ಪುವ ಚಂದ್ರನಂತೊಪ್ಪಿದನು ||೧೩||

ಎರಡುಕೋಡೆಡೆಸಿಳ್ಕಿದರಸನೊಪ್ಪಿದನಾ | ಕರಿಯೆಂದೆಂಬಕಮ್ಮರನ ||
ಕರದೊಳಗಣಸವದಳಪವರಿದಹೊನ್ನ | ಸುರಗಿಯೆಂದೆಂಬಮಾಳ್ಕೆಯೊಳು ||೧೪||

ಚಂಡುಪಕ್ಕಮಿ ದಂತದಿಂಸಾಯದಿರ್ದೊಡೆ | ಕಂಡುಕೋಪದೊಳೀಡಾಡಿ ||
ಸೆಂಡನೊದೆವತೆರದಿಂದಾಘುದವೇ | ತಂಡನೊದೆಯುತಡಿಯಿಂದ ||೧೫||

ಒಪೆಯಲೊಡನೆ ಕಾಲಬಾಯಿಗೆಸಿಳ್ಕದೆ | ಪದಪಿಂದುರುಳಿಬಳಿಕ್ಕ ||
ಮದದಂತಿಯುನಾಲ್ಗಾಲನಡುವೆ ಭೂ | ಸುದತೀಪತಿನಿಂದನಾಗ ||೧೬||

ಏನೆಂಬೆನಾಸಾಸಿಗನಬಲುಮೆಯನಾ | ಆನೆಬಿಟ್ಟೊಡೆ ತಾನುಬಿಡದೆ ||
ನಾನಾತೆರದೊಳದರಕೂಡೆಮಿಗೆಮೋಲು | ತಾನತಿಕೀರ್ತಿವಡೆದನು ||೧೭||

ಬತ್ತೀಸತೆರದಬಿನ್ನಣದಿಂದಾ ಭೂ | ಪೋತ್ತಂಸನತುಗ್ರನುಪ್ಪ ||
ಮತ್ತಗಜವಬಳಲಿಸಿಬಳಿಕಾಬೆನ್ನ | ಹತ್ತುವೆನೆಂದೆಣಿಸಿದನು ||೧೮||

ಕಡುಸೊಗಯಿಪಕಾರ್ಗಾಲದಮುಗಿಲನು | ಕುಡಿಮಿಂಚುಹತ್ತುವಂದದೊಳು ||
ತಡಮಾಡದೆತತ್ಕರಿಯಬೆಂಗಡೆಗಾ | ಕಡುಗಲಿಯಣ್ಮತೇರಿದನು ||೧೯||

ಪರಿನೀಲರತ್ನರಚಿತದಮಾಡದಮೇಲೆ | ಸುರುಚಿರವಪ್ಪಹೊಂಗಳಸ ||
ಕರಮೆಸೆವಂತಾಕರಿಯಕಂಧರದೊಳು | ಸರನಾಥಚಂದ್ರನೊಪ್ಪಿದನು ||೨೦||

ಕರಿಯಮುಗಿಲಜೂಳಿಕೆಯನೇರಿದಶೀತ | ಕರನುಂಡಲದಮಾಳ್ಕೆಯೊಳು ||
ಉರುಮದವೇರಿದಕರಿಯ ತಲೆಯನಾ | ಅರಮಗನೇರಿಯೊಪ್ಪಿರಲು ||೨೧||

ಆ ಪ್ರಸಾವದೊಳಂಬರದಿಂದಮ | ತಿಪ್ರೌಢಖಚರರೆಯ್ತಂದು ||
ಆ ಪ್ರಭುವಂಶಭಾನುವಪಾದಕೆ ಮಳು | ಟಪ್ರಭೆಯುರ್ಘ್ಯವೆತ್ತಿದರು ||೨೨||

ಮತ್ತೆತುಳಿಲುಗೆಯ್ದಿಂತೆಂದರೆಲೆ ಭೂ | ಪೋತ್ತಂಸವಿಜಯಾರ್ಧಗಿರಿಯ ||
ಉತ್ತರದಿಕ್‌ಶ್ರೇಣಿಯಕುಂಜರಾವರ್ತ | ಪತ್ತನಮೆಂಬುದೊಪ್ಪಿಹುದು ||೨೩||

ಇಲ್ಲಿಯಶನಿವೇಗನೆಂಬೋರ್ವಖೇಚರ | ವಲ್ಲಭನಿಹನವನಣುಗೆ ||
ಸಲ್ಲಲಿತಾಂಗಿ ಶಾಲ್ಮಲಿದತ್ತೆಯೆಂಬೋರ್ವ | ಫುಲ್ಲಾಕ್ಷಿಕಣ್ಗೊಪ್ಪಿದಳು ||೨೪||

ಉದೇಶದೊಳಾಕೆಗೆಯನುರೂಪಾದ | ಕಾದಲರಾರಿಲ್ಲದಿರಲು ||
ಖೇದಹೃದಯನಾಗಿ ಸಮ್ಮರಸಿರಲಲ್ಲಿ | ಗಾದೇಶವಿದನೋರ್ವನೆಯ್ದಿ ||೫೫||

ಈ ಮದಹಸ್ತಿಯನೀಹಳುವಿನೊಳೇಂ | ದಾಮಹಿಮನುಸೆಸಿನ್ನ ಸುತೆಗೆ ||
ಪ್ರೇಮದವೊಸಮದುವಳಿಗನಾಗುವನೆಂ | ಬಾಮಾತನಾಡಿದನವನು ||೫೬||

ಆ ಸುಡಿಗೇಳಿಯಶನಿವೇಗಖಚರೇಂದ್ರ | ನಾನಂದದಿಂದೆಮ್ಮಕರೆದು ||
ಈ ನಡುಗಾಡೊಳು ನಮ್ಮಾರ್ವರಸಂ | ದಾಸೆಗಾವಲನಿರಿಸಿದನು ||೫೭||

ಇಂದಿಂದಡವಿಯಮಿಗಮಾಗಿನಾವು ಮ | ತ್ತೊಂದುಕಡೆಗೆಸಜ್ಜಿಗಳನು ||
ಒಂದುಗಳಿಗೆ ತೆಗೆಯದೆಕಾವಲಿರ್ದೆವು | ಇಂದುನೀನೀ ಎಡೆಗೆಯ್ದಿ ||೫೮||

ನಾಸಿಗನಾಗಿಯಾದೇಶಪುರುಷನಾಗಿ | ಈಸಿಂಧುರದಮಸ್ಕವನು ||
ಓಸರನದೆಹತ್ತಿದೆ ಸಮ್ಮಸುಕ್ಕಶದಿ | ವಾಸವನಿಭಶಕ್ಕಿಯಿಂದ ||೫೯||

ಬಲ್ಮಾನಿಸನೆ ಕೇಳನ್ಯಪುರುಷರೆಂಬ | ಶಾಲ್ಮಲಿಗರಗಿಳಿಯಾದ ||
ಶಾಲ್ಮಲಿದತ್ತೆಯೊಡನೆಯೆಡೆವರಿಯದೆ | ನಲ್ಮೆಯಿಂದೊಡಗೂಡಲೇಳು ||೬೦||

ಎಂದು ವಿಮಾನವನೇರಿಸಿಕೊಂಡಾ | ನಂದದಿನಾಕುಮಾರಕನ ||
ಚಂದವರೊಡಗೊಂಡುಪೋಗಲಶನಿವೇಗ | ನಂದನೆಯನುಕೊಟ್ಟನವಗೆ ||೬೧||

ಆ ಶಾಲ್ಮಲಿದತ್ತೆಯೊಳು ವಸುದೇವಭೂ | ಮೀಶನೆಲ್ಲಾಪಗಲಿರುಳು ||
ಆಸಕ್ತಿಯಿಂಮೈಮರೆದನು ತಮ್ಮಾ | ದೇಶಾಕೋಶ ನಗರಿಯ ||೬೨||

ಮುಕ್ತಾಬಾಲೆಯಬಸಿರೊಳು ಧ್ರುವನೆಂ | ಬುತ್ತಮಪತ್ರಸಂಯುತನು ||
ಚಿತ್ರಸಂಭವಪನ್ನಿಧಸೌಂದರ್ಯನು | ತ್ಪತ್ತಿವಡೆದುರಂಬಿಸಿದನು ||೬೩||

ದಂಪತಿಗಳುರತಿಮನಸಿಜರಂತೆಯ | ಲಂಪಿನಜೀವನವಾಗಿ ||
ಪೊಂಪುಳಿಗೊಂಡು ಸುಖದೊಳಿರೆ ಬಂದುದು | ಸೊಂಪೆಸೆವಾಚೈತ್ರಮಾಸ ||೬೪||

ಆ ಉಷ್ಣರಿವಸದೊಂದಿರುಳು ಹರ್ಮ್ಯದಮೇಲೆ | ಭಾವಭವಕ್ರೀಡೆಯಿಂದ ||
ತೀನಿದಮೈಯಬಳಲ್ಕೆಯಿಂದೊರಗಿಮ | ತ್ತಾವರವನಿತೆಯರಿರ್ದು ||೬೫||

ಪಡಿಯಮೊಚ್ಚಿದೊಡುಚ್ಚೈತಾಗುವುದೆಂದಾ | ಮಡದಿಯೆಡದತೋಳೊರಗಿ ||
ಬಡಗಾಳಿಗೆಮೈಯೊಡ್ಡಿನೃಪಾತ್ಮಜ | ನಡಸಿದನಿದ್ರೆಯೊಳಿರಲು ||೬೬||

ಬಳಸಿದುರಗಿಯಜಿಡಿಸಿಬಾವನ್ನವ | ನೆಳೆದೊಯ್ವಂತೋರ್ವಖಳನು ||
ಲಲನೆಯತೋಳಶಪ್ಪವಸುಬಿಡಿಸಿ ನೃಪ | ತಿಲಕನಕೊಂಡೊಯ್ದನಾಗ ||೬೭||

ಅನಿತರೊಳಾಖೇಚರತನ್ನ ತೋಳೊಳ | ಗಿನೆಯನಿಲ್ಲದಿರೆಕಣ್ದೆರೆದು ||
ಕನಲಿಕಾಸೆಯನುಟ್ಟು ಕಂಚುಕವನೆತೊಟ್ಟು | ಘನವೇಣಿಯನನುಮಾಡಿ ||೬೮||
ಕರವಾಳುಖೇಟಕವನುಕರದೊಳಗಾಂತು | ಮರುತಮಾರ್ಗದೊಳುವಲ್ಲಭನ ||
ಭರದಿಂಕೊಂಡೊಯ್ವಖಿಳನಸಟ್ಟಿದಳಾ | ಸ್ಮರವೀರಲಕ್ಷ್ಮಿಯಂದದೊಳು ||೬೯||
ಪರಿಮಳವನು ಕಳ್ದೊಯ್ವನಿಲನಬಿನ್ನ | ಪರಿದುಪಿಡಿವತುಂಬಿಯಂತೆ ||
ಅರಸನಕೊಂಡೊಯ್ವಖಿಚರನ ಪೆನ್ನಪ | ಲ್ಮೊರೆವುತೆಯ್ದಿದಳಾತರುಣಿ ||೭೦||
ಬಿಡುಬಿಡು ಬೀರಾಳನು ಬಿಡವಿರ್ದೊಡೆ | ಕಡಿಖಂಡಮಾಳ್ಪೆನೆಂದಸಿಯ ||
ಒಡಿವುತೊಪ್ಪಿದಳು ತತ್ಕಳಿಸುವಮಿಂಚ | ಪಿಡಿದಂಬರಲಕ್ಷ್ಮಿಯಂತೆ ||೭೧||
ಸೋಗೆಯಕಳರವವನು ಕೇಳಿಯಳುಕಿದ | ನಾಗರುಹಿಡಿದಸೌರಭವ ||
ಬೇಗಲುಗುಳುವಂತೆಯವಳದನಿಗೆಯಂಜು | ತಾಗಲವನುಬಟ್ಟುವೋದ ||೭೨||
ನೆಲಕುರುಳುವ ಭೂಪಾಲಭಾನುವನಾ | ಲಲನೆತಾಮರೆಗೈಯೊಳಾಂತು ||
ನೆಲೆಮೊಲೆಯೊಳಗಿಟ್ಟು ಬಾನಿಗೆಬಾಯತಂ | ಬುಲಮಿಕ್ಕಿಸುಗುಳಿದಳಾಗ ||೭೩||
ಅನಿತೊಳಂಬದೊಳಗೊಂದು ದೇವ | ಧ್ವನಿಯೆಲೆಖಚರಯಿನ್ನಪನ ||
ಏನಯದಿ ಭೂತಳಕಿಳುಹಲುಕೆಲವಾನು | ದಿನಕೆನಿನ್ನೆಡೆಗೆಯ್ದುವನು ||೭೪||
ನಿನ್ನ ಜನಕನಮನೋರಥಕೀವಿಕ್ರ | ಮೋನ್ನತನಾರಥಿಯಹನು ||
ಇಂತಿದುನಿಶ್ಚಯಮೆನೆನಾಲ್ದೆಸೆಯನಾ | ಘನ್ನಸ್ತನೆಸೋಡಿದಳು ||೭೫||
ಇದು ದೇವವಚನಮಲಂಘ್ಯವೆನುತಾ | ಸದಮಲಗುಣಸಂಯುತನ ||
ಚದುರೆ ಖೇಚರಿಪರ್ಣಲಘುವಿದ್ಯೆಯೊಳು ಕೊಡ | ಲದುಧರಣೀತಳಕೆಯ್ದಿ ||೭೬||
ಅಂಗದೇಶದ ಚಂಪಾಪುರವರದಮ | ನಂಗೊಳಿಸುವನಂದನದೊಳು ||
ಸಿಂಗರಿಸಿದಲತೆವನೆಯೊಳಗಿಳುಹಿತ | ಭಂಗನನಾವಿದ್ಯೆಯಂದು ||೭೭||
ನಲ್ಲಳತೋಳತಳ್ಪದಮೇಲಾನೃಪ | ವಲ್ಲಭನೊರಗಿದಂದದೊಳು ||
ಉಲ್ಲಾಸದಿಂದಾಲತಿಕಾಮಂದಿರ | ದಲ್ಲಿ ವೈಮರೆದೊರಗಿರಲು ||೭೮||
ಮುಂದೆಸೆಯೊಳುಮೂಡುವ ಕೆಂಪುಗಂಡಾ | ನಂದನವನದಪಕ್ಕಿಗಳ ||
ನಂದಣಿಚಿಲಿಪುಲಿಯೆಂಬವೇಳೆಗೆ ನೃಪ | ಕಂದರ್ಪದಿಟ್ಟಿದೆರೆದನು ||೭೯||
ಬಟ್ಟಜವ್ವನೆಯ ತೆಕ್ಕೆಯ ಕಾಣದೆ ಚೋದ್ಯ | ವಟ್ಟಾಯೆಡೆಯಿಂದೆಳ್ದು ||
ದಿಟ್ಟನುಬರುತಿರ್ದು ಉದಯದೊಳೆದ್ದಾ | ಬಟ್ಟೆಯೊಳಗೆ ಬರ್ಪಜನವ ||೮೦||

ಎಲೆಯಣ್ಣಗಳಿರಾ ಇದೆಲ್ಲಿಯಬಟ್ಟೆ ಈ | ನೆಲನಾವುದುಪೇಳಿಮೆನಲು ||
ಜೆಲುವನೀಯಣ್ಣನಾಗಸವನೊಡೆದು ಭೂ | ತಳಕೆಬೀಳ್ವವರಂದಮೊಳು ||೫೧||

ಕೇಳುವಪರಿಯಚ್ಚರಿಯೆಂಬರಮಾತ | ಕೇಳಿ ಮುಗುಳ್ನಗೆನಗುತ ||
ಆ ಲಲಿತಾಂಗನು ಬಂದೊಂದುಕೊಳಹೊಕ್ಕು | ಲೀಲೆಯಿಂದವೆಮೊಗದೊಳೆದು ||

ಬಳಿಕತಾಯೆಡೆ ವಾಸುಪೂಜ್ಯತೀರ್ಥೇಶರ | ನಿಲಯಮಿರಲುಕಂಡುಬಂದು ||
ಅಲಘುಭಕ್ತಿಯೊಳುವಂದಿಸಿ ಸಿದ್ಧಶೇಷೆಯ | ತಲೆಗಿಟ್ಟುಕೊಂಡು ಭೂವರನು ||೫೨||

ಆ ಯಿಡೆಯೊಳಗಿರ್ದಬೋಧಸಿಂಧುಗಳೆಂ | ಬಾಯತಿರಾಜಗೆಮಣಿದು ||
ಆ ಇರುಳಾದವೃತ್ತಾಂತವನೆಲ್ಲವ | ನೊಯ್ಯಾತದಿಂ ಕೇಳಿದವಗೆ ||೫೩||

ಮನುನಿಘನಿನ್ನ ಶಾಲ್ಮಲಿದತ್ತೆಯ ನಿಜ | ಜನಕನಶನಿವೇಗನಿಗೆ ||
ಮುನಿದೋರ್ವನಂಗಾರವೇಗನೆಂಬವನಾ | ತನಪಿರಿಯಣ್ಣನಮಗನು ||೫೪||

ನಾಡುಬೀಡೆಲ್ಲವನಿರದೆ ನುಲಿದುಕೊಂ | ಡೋಡಿಸಲಾಗಿರಿವರದ ||
ಕಾಡೊಳಗೊಂದು ಪಟ್ಟಣವನಶನಿವೇಗ | ಮಾಡಿಕೊಂಡಿರ್ದೊಂದುಪಗಲು ||೫೫||

ಚಾರಣವರನುಕಂಡು ನನಗೆನಮ್ಮಾನಾಡು | ಸೇರುವುದೆಂದಿಗೆಂದೆನಲು ||
ಭೂರಮಣೀಪತಿನಿನ್ನ ಪಿರಿಯ ಮುಕ್ಕು | ಮಾರಿಗೆ ಭೂಚರನೋರ್ವ ||೫೬||

ಅಸುಗೀಶನಾಗುವನವನ ತನೂಜನ | ದೆಸೆಯಿಂದಹುದೆಂಡನರು ||
ಉಸುರಲಂತದಕೆಯಶನಿವೇಗನಿಗೆ ಸಂ | ತಸಗೆಯ್ಯಲಾವಾರ್ತೆಯನು ||೫೭||

ಕ್ಷುದ್ರನೂನಸನಂಗಾರವೇಗನುಕೇಳಿ | ಛಿದ್ರಾನ್ವೇಷಿಯಾಗಿರ್ದು ||
ರೌದ್ರನಾಗಿಸಡೆತಂದು ನೀಸವಳೊಳು | ನಿದ್ರೆಯೊಳೊರಗಿರೆಕಂಡು ||೫೮||

ನಿನ್ನನೆತ್ತಿಕೊಂಡು ವೋಗುತ್ತಿರಲಾ | ಚೆನ್ನೆಕಸಲಿಬೆನ್ನೊಳೆಯಿದ್ದ ||
ನಿನ್ನ ಬಿಡಿಸಿಕೊಂತಶರೀರವಚನವ | ತಾಂನರೆಕೇಳಿಯಾಯೆಡೆಗೆ ||೫೯||

ಒಯ್ಯಾತದಿಂಬಿಡಿಯಿಸಿದ ವೃತ್ತಾಂತವ | ನಾ ಯತಿಪುಂಗವನುಸುರೆ ||
ಕಾಯಜಸನ್ನಿಭಸವರನು ಬೀಳ್ಕೊಂ | ಡಾಯೆಡೆಯಿಂದೆಯ್ದಿದನು ||೬೦||

ಅಲ್ಲಿಗನತಿದೂರದೊಳೊಂದುಕರ್ವಿನ | ವಿಲ್ಲಟಂಕಾರದಂದದೊಳು ||
ಮೆಲ್ಲನುಲಿವುತಿರೆಯದನರಿದಪೆನೆಂ | ದುಲ್ಲಾಸದಿಂದೆಯ್ದಿದನು ||೬೧||

ಆ ರಂಜಿಸುವ ಇಂಚರದ ಪಜ್ಜೆಯವಿಡಿ | ದಾರಾಜಸುತನಾಬಳಿಗೆ ||
ಆರೈವುತವೋಗಿಕಂಡನೊಂದಹರ್ಮ್ಯ | ಗಾರದ ಮಣಿಮಂಟಪವನು ||೬೨||

ಮತ್ತದರೊಳಗಧಿನವ ಶಾರದೆಯಂತೆ | ಮೊತ್ತದಸಖಿಯುತನಡುವೆ ||
ವೃತ್ತಪಯೋಧರೆಪಿಡಿದು ವೀಣೆಯಬಾಜಿ | ಸುತ್ತಿರಲಲ್ಲಿಗೆಯ್ದಿದನು ||೬೪||

ನವವಿಧಮಪ್ಪಾವೀಣೆಯಿಂಚರವನು | ಭುವನಾತಿಶಯರೂಪವಡೆದ ||
ಯುವತಿಯನೋಡುವೆನೆಂದೊಂದು ಕಂಬವ | ನವನಿಪಮುರೆಗೊಂಡನಾಗ ||೬೫||

ಆ ಮಣಿಗಂಬವಮುರೆಗೊಂಡುನಿಂದಿರೆ | ಭಾಮಿನಿಗಭ್ಯಾಸಿಸುವ ||
ಆ ಮನೋಹರನೆಂಬ ಗಾಂಧರ್ವಾಚಾರ್ಯ | ನಾಮಹಿಮನಕಂಡನಾಗ ||೬೬||

ಅರಿವನೆಂದು ನಿರೀಕ್ಷಿಸಿಯವನಾ | ಕಾರಕೆಯಿಗೆ ಮೆಚ್ಚಿತನ್ನ ||
ಸಾರಕೆಕರೆದೊಲ್ಮೆಯೊಳು ಕುಳ್ಳಿರಿಸಿದನ | ಕಾರಣಪುರುಷನನಂದು ||೬೭||

ಅನ್ನೆಗಮಾಬನದಿಯಪದ್ಮಾವತಿ | ಕನ್ನೆಯವೀಣೆಯಿಂಚರಕೆ ||
ಚೆನ್ನಾಗಿಮೆಚ್ಚಿಪಸಾಯನಮಿತ್ತಳು | ತನ್ನ ಮಂಡೆಯು ತುನುಮವನು ||೬೮||

ಕಾಮಿತಫಲಸಿದ್ಧಿಯಾದುದೆಂದಾ ಹೂವ | ನಾಮುಡಿಗಿಟ್ಟುಚಿತ್ತದೊಳು ||
ಕಾಮನಿಭನಿಗಿತ್ತು ಗುರುವಿಗೆವಂದಿಸಿ | ಭಾಮೆ ಪ.ನೆಗೆಪೋದಳಿತ್ತ ||೬೯||

ಈ ಉತ್ತಮರೂಪನೆಯ್ದಲೊಡನೆ ಪ | ದ್ಮಾವತಿಯವಳೊಪ್ಪುವನು ||
ತೀವಿದೊಲವಿನಿಂಕೊಟ್ಟಳಂತದರಿಂ | ದೀವನಿತೆಗೆವನಿವನು ||೭೦||

ಎಂದಾಚಾರ್ಯನು ಮನಕನುರಾಗವ | ತಂದು ಮುಗುಳ್ನಗೆಯಿಂಡಲು ||
ಕಂದರ್ಪನನ್ನಿಭನಂತದನರಿದಿಂ | ಕಿಂದವನೊಳಗಾಡಿದನು ||೭೧||

ಈ ನಾರೀಮಣಿ ಯಾವರಾಯನಮಗ | ಳೇನೆಂಬ ಹೆಸರುಮತ್ತಿವಳ್ಗೆ ||
ಏನುಕಾರಣ ವೀಣೆಯಸಾಧನೆಯೆನ | ಲಾನುಡಿಗಿಂತೆಂದನವನು ||೭೨||

ಚಿತ್ತಜನಿಭಕೇಳೀನಗರಿಯ ಚಾರು | ದತ್ತವಣಿಗ್ವರನಣುಗೆ ||
ಉತ್ತಮಸೌಂದರ್ಯಾನ್ವಿತೆ ಗಾಂಧರ್ವ | ದತ್ತೆಯೆಂಬುತೆಯತನುಜೆ ||೭೩||

ಈ ವೀಣೆಯ ರಮ್ಯವಾದನದಿಂ ತನ್ನ | ನಾವನೋರ್ವನುಗೆಲಿದವನೆ ||
ಜೀವಿತೇಶ್ವರನೆಂಬೊಂದು ಪ್ರತಿಜ್ಞೆಯ | ನಾವಧುಮಾಡಿಕೊಂಡಿಹಳು ||೭೪||

ಅದು ಕಾರಣವೈಶ್ಯವಿಭು ತಿಂಗಳಿಗೊಮ್ಮೆ | ಪದೆದುವೀಣಾಸ್ವಯಂವರವ ||
ಒಡನಿಸೆನಾಡನೃಪಾತ್ಮಜರೆಯ್ತಂ | ದದುಘಟಿಸದೆ ಪೋಗುತಿಹರು ||೭೫||

ಎಂ ಸಲೀನ.ಡಿಯಿಂನಡೆಯಿಂಗಾಡಿ | ಬಂವಿನಸಿಂಗಾತದೇಳ್ಗೆ ||
ಸಂಸೊಬಗು ಭೂಜರಸತಿಯರಿಗಿಲ್ಲ | ವೆಂದು ನುಡಿದನಾನೃಪತಿ ||೭೬||

ಆ ನುಡಿಗೇಳಿಯಾಚಾರ್ಯನಿಂತೆಂದನು | ಮಾನನಿಧಾನನಕೂಡೆ ||
ಭೂನುತಚಾರುಹತ್ತನಕಥನವನು ಮ | ತ್ತಾನಾರಿಯಹುಟ್ಟುವೆಟ್ಟ ||೭೭||

ವೈಶ್ರವಣೋಪಮನಾಚಾರುದತ್ತ ರಾ | ಜಶ್ರೇಷ್ಠಿಯಸತ್ಕಥನವ ||
ವಿಶ್ರುತನಾಮಸೋಹರವೇಳೆ ಕೇಳ್ದನಾ | ಆಶ್ರಿತಜನಕಲ್ಪಕುಜನು ||೭೮||

ಇದು ಜಿನಪದಸರಸಿಜ ಮದನುಧುಕರ | ಜದುರಮಂಗರಸರಚಿಸಿದ ||
ಮದನಾರಿ ನೇಮಿಜಿನೇಶಸಂಗತಿಯೊಳ | ಗೊದವಿದ ಸಂಧಿಯೊಂಬತ್ತು ||೭೯||

ಒಂಬತ್ತನೆಯ ಸಂಧಿ ಸಂಪೂರ್ಣಂ.

೧೦. ಚಾರುದತ್ತನ ಪ್ರಸಂಗ ಸಂಧಿ

ಶ್ರೀಮದಮರಪತಿ ಮೌಲಿಕೀಲಿತಪಾದ | ತಾಮರಸದ್ವಯಸಜಗೆ ||
ಕಾಮುಮದೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತರಗುವೆನು ||೧||

ಮಾನಿತಮಾದೀಯಂಗದೇಶದರಾಜ | ಧಾನಿಚಂಪಾನಗರಿಯೊಳು ||
ಭೂನುತವಿಶ್ರಮಿ ವಿಮಲವಾಹನನೆಂಬ | ಮಾನವೇಂದ್ರನು ಸುಖಮಿರಲು ||೨||

ಆನಗರಿಯೊಳಿಭ್ಯಕುಲ ಚೂಡಾಮಣಿ | ಭಾನುದತ್ತನೆಂಬ ಪರದ ||
ಮಾನಿನಿದೇಯಿಲೆಯೆಂಬಳವಳಕೂಡಿ | ಸಾನಂದದೊಳಿರುತಿಹನು ||೩||

ಒಂದುದಿವಸ ಕುಸುಮಿತೆಯಾಗಿನಾಲ್ಮೀರ | ಮಿಂದುಪತಿಯಸೂಳ್ಗೆ ವಂದು ||
ಕಂದರ್ಪಕೇಳಿಯೊಳಾದೇಯಿಲೆಯಿ | ದ್ದಂದಿನ ಕಡೆಯರಾತ್ರಿಯೊಳು ||೪||

ಕರುಣದಿಚಾರಣ ಪರಮೇಷ್ಠಿಗಳು ತನ್ನ | ಕರದೊಳಗೊಂದು ಮಾಣಿಕವ ||
ಇರಿಸಿದುತ್ತಮಮಪ್ಪಕನಸುಗಂಡಾನಿದ್ರೆ | ಹರೆದು ಹಿರಿದು ಸುಖಮಿರಲು ||೫||

ಕೆಲವುದಿವಸದೊಳು ಗರ್ಭೋದಯಮಾಗೆ | ಸುಲಲಿತಮಪ್ಪಲಗ್ನದೊಳು ||
ಅಲರ್ಗಣೆಯನಸಿರಿ ಹಡೆವಂತೆ ಹಡೆದಳು | ಲಲಿತಾಂಗನನೋರ್ವನನು ||೬||

ಚಾರಣರುಗಳು ರತ್ನವಕನಸಿನೊಳಿಟ್ಟ | ಕಾರಣದಿಂದಾಸಿಸುಗೆ ||
ಚಾರುದತ್ತನೆಂಬಭಿಧಾನವಿತ್ತನು | ಚಾರುಮೂರ್ತಿಯು ಭಾನುದತ್ತ ||೭||

ಆಊರೊಳಗೈವರು ವೈಶ್ಯೋತ್ತಮ | ರ್ಗಾವೇಳೆಯೊಳು ಪುಟ್ಟಿದರು ||
ಭೂವಿಶ್ರುತರೈವರು ಸುಕುಮಾರರು | ಕಾವನಕಣೆಗಳಂಬಂತೆ ||೮||

ಅವರೈವರನೊಡಂಬಡಿಸಿಯಾ ಮಕ್ಕಳ | ಸವಿನಯದಿಂ ಕೊಂಡುಬಂದು ||
ತವರಿಲ್ಲದ ಕೂರ್ಮೆಯಿಂದವೆತನ್ನಾತ್ಮ | ಭವನೊಳುಜಾತಕರ್ಮವನು ||೯||

ವಿರಚಿಸಿಯಾ ಭಾನುದತ್ತರಾಜಶ್ರೇಷ್ಠಿ | ಹರಿಬಾಂಧವಗೋಮುಖನು ||
ಮರುಭೂತಿಯುಂಪರಂತಪ ದೇವದತ್ತನೆಂ | ಬುರುನಾಮವನಿತ್ತನವರ್ಗೆ ||೧೦||

ಅತಸುಸದೃಶಚಾರುದತ್ತನವರುಗೂಡಿ | ಸತತ ಸಕಲಕಲೆಗಳನು ||
ಮತಿವಂತನಾಗಿ ಕಲಿತುಜವ್ವನವಾಂ | ತತಿಶಯಕೀರ್ತಿವಡೆದನು ||೧೧||

ಚಾರುಕಲಾಕುಶಲತೆಯಿಂದವಿನುತೋ | ದಾರತೆಯಿಂದ ರೂಪಿಂದ ||
ಸಾರಸದ್ಗುಣದಿಂದ ಭೂರಿಭೂಷಣನಾಗಿ | ಚಾರುದತ್ತನೊಪ್ಪಿದನು ||೧೨||

ಒಂದಾನೊಂದು ದಿನದೊಳಾನಗರಿಯ | ಮುಂದಣ ಹೊಳೆಗೆಯ್ತಂದು ||
ಮಿಂದಾಕೆಲದ ನಂದನದೊಳಗತ್ಯಾ | ನಂದದಿವಿಹರಿಸಿಬಳಿಕ ||೧೩||

ಪುರಕೆತಿರುಗುವ ಸಮಯದೊಳಗಾವನಾಂ | ತರದೊಳಗೊಂದು ಸೂಲದೊಳು ||
ಪಿಂದಾಗಿಕೀಲಿಸಿಯರೆಜೀವಮಾಗಿರ್ದ | ಪುರುಷಸೋರ್ವನ ಕಂಡನಾಗ ||೧೪||

ಆವನದಿಟ್ಟಿಗಳಾಬಳಿಯೊಳು ಬಿದ್ದಿರ್ದ | ನವರತ್ನಮಯಪೀಟಕದೊಳು ||
ಅವಿರಳಮಾಗಿ ಕೀಲಿಸಿಸಿಂದಿರಲಾ | ಕುವರನಾಭಾವವನರಿದು ||೧೫||

ಆ ರತ್ನಮಯಪೀಟಕದಮಧ್ಯದೊಳೊಂದು | ಚಾರುಘಟಿಕೆಕೀಲಸಿರಲು ||
ಚಾರುದತ್ತನು ಸುವಿವೇಕತನದಿನದ | ನಾರೈದುತೆಗೆದುನೋಡಿದನು ||೧೬||

ಅಸಲೌಷಧಿಯೆಂಬ ಘಟಿಕೆಯಿ | ದಾಸೂಲದಪುರುಷನನು ||
ಒಸರಿಸದೆ ತಾನುತೆಗೆವೆನೆನುತ ಮುಟ್ಟ | ವಾಸಮಯಕೆ ತನ್ನತಾನೆ ||೧೭||

ಬಸಿದಸೂಲದೊಳಿರ್ದಾ ಕಾಂತಗತಪಾ | ದಪುದೇಹದೊಳು ಪೂರಯಿಸಿ ||
ಮುಸುಕಿದ ಶಕ್ತಿಯೊಳಾಯೆಜೆಯಿಂ ನಂ | ತಸದಿಂದಿಳಿತಂದನಾಗ ||೧೮||

ಉತ್ತಮಸಿನ್ನಕರುಣದಿಂದ ಪುನರು | ತ್ಪತ್ತಿಯಾದುದು ನನಗೆಂದು ||
ಚಿತ್ತಶುದ್ಧದೊಳು ಕೀರ್ತನೆಗೆಯ್ವಾಚಾರು | ದತ್ತಗೆ ವಿನಮಿತನಾಗಿ ||೧೯||

ಇನ್ನೀಜನ್ಮಕೆ ನೀನೇನಿಜಗುರು | ನೆನ್ನ ಪೂತಾಪಿತೃನೀನು ||
ಇನ್ನಿದುನಿಶಯಮುಲ್ಲೆಂದವನೊಳು | ತನ್ನ ತೆರನ ಪೇಳ್ದನಿಂತು ||೨೦||

ವಿಲಸಿತವಿಜಯಾರ್ಧಗಿರಿಯ ದಕ್ಷಿಣತಟ | ದೊಳಗೆ ಶಿವಂಕರವೆಂಬ ||
ಪೊಳಲೊಳಮಿತಗತಿಯೆಂಬವನಾನೆನ್ನ | ಲಲನೆ ಕಲಾವತಿಗೂಡಿ ||೨೧||

ಅನುರಾಗನಿಂದಿರಲವಳಿಗೆ ಸೋಲ್ತುವಂ | ಜನೆಯಿಂದೋರ್ವ ಚೇಚರನು ||
ತನಗೆನಗೆರವಿಲ್ಲದಂತೆನ್ನೊಳು ಕೆಳೆ | ತನವನುಮಾಡಿಕೊಂಡಿರ್ದು ||೨೨||

ಎನ್ನೊ ಜನಾಟಕೆನಲವಾಗಿಯಾಬಳ | ತನ್ನ ರಾಜ್ಯವಪಟ್ಟುಬಂದು ||
ಉನ್ನತಮಪ್ಪಕಪಟಸ್ನೇಹವನವ | ಜೆನ್ನಾಗಿಪೂಡುತಲಿರ್ದ ||೨೩||

ಇರಲಿತುನಾನೀಡಂಪಾನಗರಿಯ | ವರಜಿನವಾಸುಪೂಜ್ಯರನು ||
ಉರುಭಕ್ತಿಯಿಂಪೂಜಿಸಲೆಂದು ಬಂದಾ | ತುರದಿಂದಾಸತಿಸಹಿತ ||೨೪||

ಕಂದರ್ಪಹರನನರ್ಚಿಸಿಬಳಿಕತ್ಯಾ | ನಂದದಿಂದೀನ್ತಂದನದ ||
ಕುಂದಲತಾಮಂಟಪದೋವರಿವೊ | ಕ್ಕಿಂದುವದನೆಯೊಡಗೂಡಿ ||೨೫||

ಸುರತಾಂತ್ಯಶ್ರಾಂತಿಯೊಳಾನುಮೈನುರೆ | ದಿರಲಾಖಳನೆಯ್ತಂದು ||
ಭರದಿಂದೆನ್ನ ಸೂಲದೊಳಿಕ್ಕಿ ಬಳಿಕಾ | ತರುಣಿಯ ಕಳ್ದೊಯ್ದನಿತ್ತ ||೨೬||

ಇನ್ನಿಲ್ಲಿ ನಾನೊಂದಿನಿಸು ತಡಮಾಡಿದೊ | ಡೆನ್ನ ವಿಪತ್ತಿಯೊಳಿರದೆ ||
ತನ್ನ ಜೀವನವತೊರೆವಳು ನಿಜಾಂಗನೆ | ಸನ್ನುತಗುಣಗಣನಿಳಯ ||೨೭||

ಎನುತಾಚಾರುದತ್ತನಕೈಯಿಂ ಕಡು | ವಿನಯದಿಂದವೆಜೀಳ್ಕೊಂಡು ||
ಇನಿಸುವೇಗದೊಳಾ ವಿದ್ಯಾಧರರಾಜ | ನನಿಲಪಥಕೆವ್ಪೋದನಿತ್ತ ||೨೮||

ಕೆಳೆಯರೈವರುಗೂಡಿಯಾಚಾರುದತ್ತನು | ಹೊಳಲಹೊಕ್ಕಾನಿಜಗೃಹಕೆ ||
ತಳರಿಬಳಿಕ ವಿದ್ಯಾಭ್ಯಾಸಂಗಳ | ನುಳಿಯದೆಪೂಡುತಮಿಹನು ||೨೯||

ಈತೆರದಿಂದಿರೆ ಭಾನುದತ್ತನು ತನ್ನ | ಪ್ರೀತಿವಡೆದ ನೈದುನನ ||
ನೀತಿನಿಪುಣ ಸಿದ್ಧಾರ್ಥನೆಂಬನತನು | ಜಾತೆಮಿತ್ರಾವತಿಯೆಂಬ ||೩೦||

ಅಭಿನವರತಿದೇವಿಯನಂಗೋದ್ಭವ | ನಿಭಗೆ ಮುದುವೆಮಾಡಿದನು ||
ಶುಭತರಮಪ್ಪ ಲಗ್ನದೊಳಮರಾಧೀಶ | ವಿಭವದೊಳಿಳೆವೊಗಳ್ವಂತೆ ||೩೧||

ಅತಿರೂಪಯುತ ಚಾರುದತ್ತಕುಮಾರನು | ವಿತತವಿದ್ಯಾಭ್ಯಾಸದೊಳು ||
ಮತಿಯನಿಟ್ಟಾಸತಿಮಿತ್ರಾವತಿಯೊಳು | ಸತತಸುಖದೊಳಿಹುದಿಲ್ಲ ||೩೨||

ಅದರಿಂದಾಜವ್ವನೆಯೊಡಲೊಳು ಚಿಂತೆ | ಯೊದವಿರಲರಿದೊಂದುದಿನದ ||
ಉದಯದೊಳಾನಿಜಜನನಿ ಸೌಮಿತ್ರಿ ಸ | ಮ್ಮದವಳಿದವಳೆಡೆಗೆಯ್ದಿ ||೩೩||

ಬಣ್ಣಗೆಡದಿಂದುಗೆಹೂದುಟಿಯುಲ | ರ್ಗಣ್ಣಿಂಜನರೇಖೆಬಿಡದ ||
ಬಣ್ಣಿಸಿತೊಡೆದಂಗರಾಗವುದುರದೆಳೆ | ವೆಣ್ಣವಾಣಿಕವನೋಡಿದಳು ||೩೪||

ಉಡೆಸಿರಿಯೊಳಗಿಟ್ಟ ಮಣಿಕಾಂಚಿಯುಕೀಲು | ಸಡಿಲದಮುಡಿಯಲರುಗಳ ||
ಕಡುಸೊಗೆಯಿಸುವ ತಿಲಕಪತ್ರಳಿಯದ | ಮಡದಿಮಣಿಯನೀಕ್ಷಿಸಿದಳು ||೩೫||

ನೇತ್ರಯುಗದಕಜ್ಜಲವೊಳು ಕೆಂಪುದೋರದ | ಚಿತ್ರವಡೆದಸುಣ್ಣದಹಸ ||
ಪತ್ರಕೆ ಭಂಗವಾಗದ ಕಾಂಚನಶತ | ಪತ್ರಮುಖಿಯನೀಕ್ಷಿಸಿದಳು ||೩೬||

ಅಳಿಕಳಭಾಕಳವಳಿಕುಳಳಿಯದ | ಬಳೆಯೊಡೆಯದತನುಲತಿಕೆ ||
ಬಳಲದ ಬಲುಮೊಲೆಗಳು ಗುಜ್ಜುವಡೆಯದ | ಲಲಿತಾಂಗಿಯನೋಡಿದಳು ||೩೭||

ಕಂದರ್ಪಕೇಳಿಯಸುಖಮಿಲ್ಲಮಾಬಾಲೆ | ಗೆಂದು ಬಗೆವುತಿಲೆಮಗಳೆ ||
ಅಂದುನಿವ್ಮಕ್ತ್ರಿಯಮಾತುಗೇಳಿದದೆಸೆ | ಯಿಂದೆಗ್ಗರಾದೆವುನಾವು ||೩೮||

ಎಂದು ತನ್ನ ತ್ತಿಗೆದೇಯಿಲೆಯೆಡೆಗೆ | ಯ್ತಂದೆಲೆಪಾತಕಿ ನಿನ್ನ ||
ನಂದನಗತಭೋಗಿಗೆ ಎನ್ನ ಮಗಳನು | ತಂದುಕೆಡಿಸುವುದುಮತವೆ ||೩೯||

ಎನಲಾದೇಯಿಲೆಯಿಂತೆಂದಳೆನ್ನಗ್ಗ | ತನಯನುತ್ತಮನಾಯಕನು ||
ವಿನುತವಿದ್ಯಾಭ್ಯಾಸದೊಂದಾತುರದಿಂದ | ಮನವನಿಕ್ಕನು ರತಿಸುಖಕೆ ||೪೦||

ಅದನೊಂದೆಡುದಿನದೊಳು ಮಾಣಿಸುವೆನಿಂ | ತಿದಸುರೆಸಂಬುನೀನೆನುತ ||
ಚದುರೆವೇಯಿಲೆ ತನ್ನಾ ನಾದುನಿಯನು | ಸದನಕೆಬೀಳ್ಕೊಟ್ಟ ಬಳಿಕ ||೪೧||

ತನ್ನ ವಲ್ಲಭ ಭಾನುದತ್ತನನುಜನ | ತ್ಯುನ್ನತವೇಶ್ಯಾಚಾರಿ ||
ಸನ್ನುತರುದ್ರದತ್ತನನು ಕರೆದುಕೊಂಡು | ಮನ್ನಿಸಿನುಡಿದಳಿಂತೆಂದು ||೪೨||

ಚದುರರನ್ನನು ಚಾರುದತ್ತಗೆ ರತಿಯಿಚ್ಚೆ | ಯುದಿಯದತೆರನಿನ್ನಿಂದ ||
ಒದವುವುದದನೀನೆಸಗುವುದದಕೆಂದ | ನಿದಕೆ ಸಂಶಯಮಾಡಬೇಡ ||೪೩||

ಎರಡುದಿನಕೆ ಚಾರುದತ್ತನನೀಪೇಳ್ವ | ಪರಿಯಮಾಡುವೆನೆನಲವಗೆ ||
ಹರಿಸದಿಪಿದು ವಸ್ತುವನಿತ್ತತ್ಯಾ | ದರವನುಸುರಿಬೀಳ್ಕೊಡಲು ||೪೪||

ಬಂದಾಮಹಿಮಗೆ ರುದ್ರದತ್ತನುಮನ | ಸಂದುಸಹಾಧ್ಯಾಯಿಯಾಗಿ ||
ಒಂದಿಸಿವೇಳವ ಕೆಲದಿನಮಿರ್ದು ಮ | ತ್ತೊಂದಾನೊಂದುದಿನದೊಳು ||೪೫||

ಗಾಡಿವಡೆದ ಸಮ್ಮೋರಸೊಬಗನೀ | ನೋಡುಬಾರೆಂದೊಡಂಬಡಿಸಿ ||
ಕೂಡಿಕೊಂಡುಬಂದು ವುರವರದೊಳಗಾ | ರೂಢಿವಡೆದಕೇರಿಯೊಳು ||೪೬||

ಹೂವಿನಂಗಡಿಗೊಂಡುಕದುಬದ | ಹೂವನಿರದೆ ಬೆಲೆಗೊಡುವ ||
ಭಾವಕಿಯರ ಹಾವಭಾವಂಗಳನಾ | ಭಾವಜನಿಭಗೆ ತೋರುವನು ||೪೭||

ಸಿರಿಗಂಪನರೆದುಮಾರುವ ಕೋಮಲೆಯರ | ಸುರುಚಿರಮಪ್ಪರೂಪವನು ||
ಸುರನಿಭನಾಚಾರುದತ್ತನಿಗತ್ಯಾ | ದರದಿಂದವೆ ತೋರುವನು ||೪೮||

ವರವಿದ್ಯಾಧರವನಿತೆಯರಂದದಿ | ಕರುಪಮಾಡಂಗಳನೇರಿ ||
ಹರಿನದಿನಾಡುವ ನೃಪಸುತೆಯರನಾ | ಸ್ಮರಸದೃಶಗೆ ತೋರಿಸುವನು ||೪೯||

ಕೇರಿಕೇರಿಯೊಳಿಡಿಯಾಡುವ ಬಿಡುವೆಣ್ಗ | ಳಾರಮ್ಯಮಪ್ಪರೂಪವನು ||
ಮಾರನಮಧುರಾಕಾರನಗೆಲ್ವಾ | ಚಾರುದತ್ತಗೆ ತೋರುವನು ||೫೦||

ಧಾರುಣಿಪತಿಯೋಲಗಕೆಯ್ತಪ್ಪಾ | ವಾರಾಂಗನೆಯರಜೆಲ್ವ ||
ಧೀರನುದಾರನುತ್ತಮಗುಣನಿಧಿಗಂ | ಭೀರಗೊಲಿದು ತೋರಿಸುವನು ||೫೧||

ಈತೆರದಿಂತಿರುಗಿಸುತೊಂದುದಿನ ಚಿತ್ತ | ಜಾತನರಾಜ್ಯದಂದದೊಳು ||
ರೀತಿವಡೆದ ಸೂಳೆಗೇರಿಯನಾವಿ | ಖ್ಯಾತರೂಪನ ಹೊಗಿಸಿದನು ||೫೨||

ಕಂಡಮಾತ್ರದೊಳು ವಿರಕ್ತಜನಂಗಳ | ಕೊಂಡಸುವ್ರತವನುಬಿಡಿಸಿ ||
ಗಂಡುದೊಳಾತ್ಮಗಿಸಃವಾಸೂಳೆಗೇರಿಗೆ | ಕೊಂಡೊಯ್ದನಾಕುಮಾರಕನ ||೫೩||

ಬೆಲೆವೆಣ್ಣಕೇರಿಗೆಯ್ದಿದನು ಸಖರುಗೂಡಿ | ಒಲವಿನಬಗೆಬಿಟ್ಟಬೀಡ ||
ಜೆಲುವಿನ ಬೆಳೆನಳನಳಿಸಿಬೆಳೆವ ಕಾಡ | ನಲರಂಬನೃಪನಾಳ್ವನಾಡ ||೫೪||

ಅತಿವೀತರಾಗವ್ರತದವರಿಗಿಮಾರಿ | ಅತನುಸೌಖ್ಯದ ಕೆರೆಯೇರಿ ||
ರತಿಮುಕ್ತಿಗಿತ್ತದೆಯ್ದಿಸಲಿಕ್ಕಿದದಾರಿ | ನುತಮಾದುದಾಸೂಳೆಗೇರಿ ||೫೫||

ಹೊಸಮಿಸುನಿಯ ಹೊನ್ನ ಪಟ್ಟಶಾಲೆಗಳಿಂದ | ಮಿಸುಪರನ್ನದಲೋವೆಯಿಂದ ||
ರಸಚಿತ್ರವೆಸದಿನೊಪ್ಪುವ ಭಿತ್ತಿಗಳಿಂದ | ಹಸನಾದುದಾಕೇರಿಯಂದ ||೫೬||

ಒತ್ತಿಗೆಸುತಬಂದಲ್ಲಲ್ಲಿನಿಂದಿರ್ದ | ವೃತ್ತಕುಚೆಯರಜೆಲ್ವಿಂದ ||
ಚಿತ್ತವಸೆರೆಗೆಯ್ದಾವಿಟಜನವೃಂದ | ವತ್ತಿತ್ತತೊಲಗದಲ್ಲಿಂದ ||೫೭||

ಮುತ್ತಿನ ತೋಡಮಣಿಯಭೂಷಣವಿಟ್ಟ | ಉತ್ತಮದೇವಾಂಗವುಟ್ಟ ||
ಕತ್ತುರಿಪುಣುಗುಜವಾದಿಯನಂಪಿಟ್ಟ | ಒತ್ತಿಗೆಯ್ದಿದರಳವಟ್ಟ ||೫೮||

ಪೊರ್ದದವರ ಮೈವಳಿಯೊಳೊಲಿಸಿಕೊಂಬ | ಪೊರ್ದಿದವರ ಸುಲಿತಿಂಬ ||
ಬರ್ದಿನಬಲ್ಲಿನಿಂದಾಕೇರಿಯತುಂಬ | ಲಿರ್ದುದುವಧೂನಿಕುರುಂಬ ||೫೯||

ನರಜನ್ಮಲೇಸುಜವ್ವನಲೇಸದರೊಳು | ವರರೂಪುಲೇಸು ಗಂಡರೊಳು ||
ಸರಿಸೋಲಲೇಸು ಪೆಂಡಿರಿಗೆಂದೋರ್ವಳು | ಗರುವೆಗಿಳಿಯನುಡಿಸಿದಳು ||೬೦||

ಗರುವರಚಿತ್ತವಸೊಲಿಸಿಕೊಂಬಬಲೆಯು | ವರಗೃಹವಾಬಲಮುರಿಯ ||
ಸುರುಚಿರಶಂಖವಹೂಳಿದ ಭೂಮಿಯು | ಸರಿಕೇಳು ಸಖಿಯಾಸುಡಿಯ ||೬೧||

ವರಗುಣಭೂಷಣವಿಲ್ಲದವಳ ಜೆಲ್ಲು | ಪರಿಮಲವಿಲ್ಲದಪೂವು ||
ಸುರುಚಿರಮಾದ ಸುಗ್ಗಿಯೊಳುಬಿಳಿದಬೇವು | ಉರುರುದ್ರಭೂಮಿಯಮಾವು ||೬೨||

ಕೊಡುವಕೋವಿದವಿಟರುಗಳ ಹೃದಯವನು | ಕೆಡಲೀಯದೆ ಮೋಹವನು ||
ಬಿಡದೊಡೆಬಿಡದೈಸಿರಿಯಾಪೆಣ್ಣನು | ಮಡದಿಮಣಿಯೆಕೇಳಿದನು ||೬೩||

ಸಿರಿಜಲ್ವುಚಾಣ್ಮೆಜವ್ವನ ವಿತರಣವನು | ಕರಿಸಿ ಒಲಿದಕಾದಲನನು ||
ಹೊರೆಗಾಣಿಸದೆ ಒಲಿಯಬಲ್ಲವಳನು | ಅರಲಂಬನೇನವಾಡುವನು ||೬೪||

ಪರಲೊತ್ತುವಮೊಲೆಯಿಂದೊಡವೆರೆದೆನು | ದೊರೆವೆತ್ತುಚಾಣುವಡೆದೆನು ||
ಪರಮುಖಶಶಿಗೆ ಸರೋಜಿನಿಯಾದೆನು | ಗರುವನೀಬಿಡುವುದಕೇನು ||೬೫||

ನುನೆಯವಾನಿನಿಯರೆಲ್ಲಕೆಹೊರಗಾದೆನು | ಅನುದಿನ ದುಃಖವೆಯ್ದಿದೆನು ||
ಮನದಾಣ್ಮನಕೇಳು ನಿನ್ನ ಕತದಿನಾನು | ನನಿಗಣಿಗೊಡಲನೊಡ್ಡಿದೆನು ||೬೬||

ಎಂದುನುಡಿವ ಮೋಹಿಗಳನಾತಕೇಳುತ | ಕಂದರ್ಪನಿಭಚಾರುದತ್ತ ||
ಮುಂದಕೆನಡೆದುಬರಲು ವೇಸಿಯರಮೊತ್ತ | ನಿಂದುನೋಡಿದುದವನತ್ತ ||೬೭||

ಆವಾವದಿನದೊಳಗೀಕೇರಿಗೆಬರ್ಪ | ಕೋವಿದರೊಳಗಿಂತಪ್ಪ ||
ಲಾವಣ್ಯವುಳ್ಳರ ಕಂಡುದಿಲ್ಲೆಂದಾ | ಭಾವೆಯರವನನೋಡಿದರು ||೬೮||

ವರವಜ್ರವಿಲ್ಲದೆಘ್ನಿದ ಸುರತಪತಿಯೊ | ಅರಲಂಬನುಳಿದಂಗಜನೊ ||
ಉರಿಗಣ್ಣಬಿಸುಟುಗ್ರನೊ ಯೆಂದುನೋಡಿದ | ರಿರದಾತರುಣಿಯರವನ ||೬೯||

ಈತೆರದಿಂ ತನ್ನ ಜೆಲ್ವನೀಕ್ಷಿಸು | ವಾತರಳಾಕ್ಷಿಯರುಗಳ ||
ರೀತಿಯನಡೆನೋಡುತತದ್ವೀಥಿಯೊ | ಳಾತುಳಿಲಾಳೆಯ್ದುವಾಗ ||೭೦||

ಆರುದ್ರದತ್ತನ ಪ್ರೇರಿಣೆಯಿಂಮದ | ವಾರಣಮೊಂದಿದಿಡಾಗಿ ||
ಘೋರೆನೆಬರುತಿರೆ ಕಾಣುತಪಿಮ್ಮೆಟ್ಟಿ | ಯಾರಸಿಕನುಬರ್ಪಾಗ ||೭೧||

ಮತ್ತೊಂದುಮದಗಜಮಾವೆನೆಯಿಂದ ಬ | ರುತ್ತಿರಲುತದಕಂಡು ||
ಉತ್ತಮನೊಂದುಗೃಹದಮಣಿವಾಗಿಲ | ಹತ್ತಿರನಾಂತನಿಂದಿರಲು ||೭೨||

ಆರುದ್ರದತ್ತನು ಮುನ್ನತನಗೆಪೇಳ್ದ | ಕಾರಣದಿಂ ಕೆಳದಿಯರ ||
ಚಾರುದತ್ತನನು ವಸಂತತಿಲಕೆಯೆಂಬ | ನಾರಿಕರೆಯಲಟ್ಟಿದಳು ||೭೩||

ಬಂದಾನಖಿಯರೀಯಾನೆ ಹೋಹನ್ನವ | ರೊಂದುನಿಮಿಷ ನಮ್ಮಮನೆಗೆ ||
ಸಂದೇಹಮಿಲ್ಲದೆ ಬಿಜಯಂಮಾಡುವು | ದೆಂದತ್ಯಾಗ್ರಹದಿಂದ ||೭೪||

ಕರೆದ-ಕೊಂಡುಹೋಗಿ ತಲೆವಾಗಿಲಹೊಚ್ಚಿ | ಕರುಮಾಡದೊಳುಕುಳ್ಳಿರಿಸಲು ||
ಗರುವೆವಸಂತತಿಲಕೆ ಬಂದಳಾಗ ನಿಂ | ಗರದೊಟ್ಟು ಸಂತಸನಿಂದ ||೭೫||

ಅರಲಂಬನಾರಾಧಿಪದೇವತೆಯೊ | ಸುರಭಿಶರಸಕೀರ್ತಿಸತಿಯೊ ||
ಸ್ಮರರಾಜನವಿಜಯಾಂಗನೆಯೋ ಎನೆ | ತರಳಾಕ್ಷಿನಡೆತಂದಳಾಗ ||೭೬||

ಸೆಡಗರದಿಂಬಂದು ಕೆಲದೊಳುಕುಳ್ಳಿರ್ದ | ಮಡದಿಯಮಮತೆಯಾಳಿಯರು ||
ಕಡುವೇಗದಿಂನೆತ್ತಪಲಗೆಯನೀರ್ವರ | ನಡುವೆತಂದುಮಡಗಿದರು ||೭೭||

ಎಲೆಚಾರುದತ್ತ ಚೌಷಷ್ಟಿಕಲೆಗಳೊಳು | ಸುಲಭನೀನಂತದರಿಂದ ||
ಲಲನಾಮಣಿಯಿವಳೊಳು ನೆತ್ತವನಾಡಿ | ಗೆಲುವಚಿನ್ನಣವತೋರೆಂದು ||೭೮||

ನೆತ್ತದ ಚಾರಿಹಾಸಗಿಯನದರಮೇ | ಲಿತ್ತುತಳುವದಾಡೆನಲು ||
ಮತ್ತದಕವನು ಮೆಲ್ಲನೆ ಮಾಡಲಾರುವ | ದತ್ತನಿದಿರೀಸುಕೊರತೆ ||೭೯||

ಒಂದೆರಡಾಟಮನಾಡಿ ಮತ್ತೀಬಳಿ | ಯಿಂದೆದ್ದು ಹೋಹೆವೆಂದಾಗ ||
ಕಂದರ್ಪರೂಪನಕೈಯಿಂದನೆತ್ತಮ | ನಿಂದುಮುಖಿಯೊಳಾಡಿಸಿದನು ||೮೦||

ಕಡೆಗಣ್ಗಳ ನನ್ನೆಯಿಂದಾಸುಕುಮಾರ | ನೊಡನೆಬಂದಾಕೆಳೆಯರನು ||
ತಡೆಯದೊಬ್ಬೊಬ್ಬರನೇಳಿಸಿತಾಕಟ್ಟ | ಕಡೆಯೊಳು ಚಿಮ್ಮಿದನಿತ್ತ ||೮೧||

ನೆತ್ತಮನೊಂದೆರಡಾಟಮನಾಚಾರು | ದತ್ತನಾಡಿಗೆಲಲಾಗ ||
ವೃತ್ತಪದನೆ ನನ್ನೀಸೋಲಕೆಸೋಲ | ವಿತ್ತಲ್ಲದೆ ಪೋಗಬೇಡ ||೮೨||

ಎಂದು ಕಾವಸಕೈಯರತಿಪಿಡಿದೆಳೆವಂತೆ | ಯಂದದಿಂದವನಕೈವಿಡಿದು ||
ಮಂದಗಮನೆಪಾಡದ ಮೇಲ್ನೆಲೆಗಾ | ನಂದವಿಂ ಕೊಂಡೊಯ್ದಳಾಗ ||೮೩||

ಸರಸಜೂತದಮೇಲಕೆಗಂಡುಗಿಳಿಯೆಸಡ | ವೆಳಸಿ ನಾರಿಕೆಪೋಪಂತೆ ||
ಕರುಮಾಡವನು ಜಯಂತರೂಪನು ಸಹಿ | ತರವಿಂದಮುಖಿಯೇರಿದಳು ||೮೪||

ಬಳಿಕಬಂಧುರವಣಿಮಂಚದಮೇಲೆ ಕ | ಣ್ಗೊಳಿಸುವ ಮೃದುತಲ್ಪಕಿರದೆ ||
ಕಳಹಂಸಮಿಥುನಮಳಲ್ಗುಪ್ಪೆಗಡರ್ವಂತೆ | ತಳುದರಾಪ್ಯಯತಮರು ||೮೫||

ಪರಿಚಾರಕಿಯರನಿತರೊಳು ಪನಿಸೀರು | ಪರಿಮಳಕುಸುಮತಾಂಬೂಲ ||
ಸಿರಿಗಂಪುಸಿರಿಪಜ್ಜೆವೊದಲಾದ ಸುಖಪರಿ | ಕರಮನಿರಿಸಿಚಾರಿದರು ||೮೬||

ಮುಸುಕಿದನಾಣ್ಗಸದೆಗೆದನುರಾಗದ | ರಸದಿಂವೂಸಿ ಜೆಲ್ವಡೆದ ||
ರಸಿಕನಮನದಮನೆಗೆಕಂತುರತಿಸಹಿ | ತೊಸೆದೊಕ್ಕಲೇರಿದನಾಗ ||೮೭||

ಭೋಗೋಚಿತವಸ್ತ್ರಪಸೆಲ್ಲವನಸು | ರಾಗಮೊದವೆಕೈಕೊಂಡು ||
ಭೋಗಿಗಳವರೀರ್ವರು ನವಸುರತೋ | ದ್ಯೋಗಮನೆಸೆಗಿದರಾಗ ||೮೮||

ನೋಡಿದಣಿವಹುಡೆಯರುಲಲ್ಲೆವೆರೆದಮಾ | ತಾಡಿದಣಿಯರು ಜುಂಬನವ ||
ಮಾಡಿದಣಿಯರೊಬ್ಬೊಬ್ಬರೊಳೊಲವಿಂ | ಕೂಡಿದಣಿಯರಾಪ್ಯಯರು ||೮೯||

ಎವೆಯಲುಗದನೋಟವೆಸಕದಿದೆಯಬೇಟ | ಸವಿಗೆಸವಿಯುವೊರೆಯಿಡುವ ||
ಹವಣಿನಿಸಿಲ್ಲದ ಲವಲವಿಕೆಯುಕೂಟ | ವವರೊಳು ಸಲೆಸಂದಿತಾಗ ||೯೦||

ಪಗಲಿರುಳಿನ್ನ ದೀಪರಿಯ ಜಾಣುಮೆಯಿಂ | ಸೊಗಯಿಪ ಸತ್ಕಾರದಿಂದ ||
ತೆಗೆಬಿಗಿಯಿಲ್ಲದ ಸಮರತಿಯಿಂದವ | ಳಗಣಿತಸುಖನಿತ್ಯಳವಗೆ ||೯೧||

ಅವನಕಣ್ಣ ಳ ಬೊಂಬೆಗಳ ತನ್ನ ಜೆಲುವಿನ | ಭವನದೊಳಗೆ ಬಂಧಿಸಿದಳು ||
ಅವಸಮನದಕಾಲನಾಕಾಮಿನಿತನ್ನ | ಸವಿಯಸಂಕಲೆಯೊಳಿಕ್ಕಿದಳು ||೯೨||

ಇಂತಪ್ಪನೇಹದಿನಾಚಾರುದತ್ತಪ | ಸಂತತಿಲಕೆಯೊಡಗೂಡಿ ||
ಸಂತತಸೋಲ್ಮಿರಲವಳ ಜನನಿತಾ | ನಿಂತೆಂದಿಣಿಕೆಮಾಡಿದಳು ||೯೩||

ಹಣವಹಿಡಿಯದೆ ಎಟುಗೆಪೋಹಪೆನೆಂ | ದಿಣಿಕೆಯಮನದೊಳುಮಾಳ್ಪ ||
ಗಣಿಕೆಯರುಂಬುಡುವುದನು ಹಡೆಯುದೆ | ಬಣಗಾಗಿತಿರಿಪರೂರೊಳಗೆ ||೯೪||

ಎನುತಚಿಂತಿಸಿಯುವಳಾಚಾರುದತ್ತನ | ಮನೆಗೆ ಊಳಿಗದಾಳಿಯರ ||
ಮನಹೀನೆಕಳುಹಿದೊಡವರಾತನ ನಿಜ | ಜನನಿದೇಯಿಲೆಯೆಡೆಗೆಯ್ದಿ ||೯೫||

ನಿನ್ನ ತನಯನೆಮ್ಮ ಮನೆಯಬೀಯಕೆತಕ್ಕ | ಹೊನ್ನ ತಡೆಯದೀಸಿಕೊಂಡು ||
ಬನ್ನಿ ಮೆಂದೆಮ್ಮ ಕಳುಹಿದನೆಂಬುದಕೇಳಿ | ಯುನ್ನತಿಕೆಯಮುದದಿಂದ ||೯೬||

ಲೇಸಾಯಿತೀಸುಡಿ ನಿಮ್ಮ ಮನೆಗೆವಿತ್ತ | ವೇಸುಬೇಕೆನೆ ಬೇಡಿಮೆಸಲು ||
ಆಸುದತಿಯರೆಂದುಾದೇಯಿಲೆಯನಿ | ರಾಶಾಹೃದಯವನು ಕಂಡು ||೯೭||

ದಿನಕೆಸಾಸಿರಪರ್ವಕೆ ಪತ್ತುಸಾಸಿರ | ಧನವಾಗಬೇಕೆಮ್ಮ ಮನೆಗೆ ||
ಎನಲದುಲೇಸೆಂದಾ ಹವಣಿನಹೊನ್ನ | ನನುಮಾನಿಸದೆ ಕೊಟ್ಟಳವಳು ||೯೮||

ಈತೆರದಿಂದಿನ ಬರಡಿಲ್ಲದೆಸು | ಪ್ರೀತಿಯಿಂದಲೆ ಕೊಡುತಿರಲು ||
ಆತನ್ವಂಗಿಯರಿಯದಂದದೊಳ | ತ್ಯಾತುರದಿಂ ತರಿಸುವಳು ||೯೯||

ಇಂದೂರವೃತಣಮಿಂದುನಂಟರುಬಂದ | ರಿಂದುಮುಯ್ಯನಿಕ್ಕಬೇಕು ||
ಎಂದು ಎಂದಿನ ಲೆಕ್ಕವಲ್ಲದವಳಕೈ | ಯಿಂದವಿತ್ತವತರಿಸಿದಳು ||೧೦೦||

ಆರುಪರುಷವಿಾತಿರದಲೆಕ್ಕದಿಪದಿ | ನಾರುಕೋಟಿವಿತ್ತವನು ||
ನೀರೆಗೆನೆರೆಕೊಟ್ಟಾಚಾರುದತ್ತನು | ದೂರಾದನಾನಗರಿಯೊಳು ||೧೦೧||

ಮಗನಪ್ಪಬುದ್ಧಿಗೆಯಾತಾಯಿದೇಯಿಲೆ | ಬಗೆಯಿತ್ತು ಮನೆಯವಿತ್ತವನು ||
ತೆಗೆದುಹಾಳುಮಾಡಿದುದಕೆ ವಿಸ್ಮಯನಾಗಿ | ಮಿಗೆನೊಂದನುಭಾನುದತ್ತ ||೧೦೨||

ಇಭ್ಯಕುಲೋತ್ತಮನಾನುದನದು | ಲಭ್ಯಾಸಕೆಮನಸೊಂದು ||
ಅಭ್ಯಗ್ರದಿಂಪರಿಪಡಿಸಿದನಾಬಾ | ಹ್ಯಾಭ್ಯಂತರಪರಿಗ್ರಹವ ||೧೦೩||

ಉತ್ತಮಜಿನದೀಕ್ಷೆಯು ತಳೆದಾಭಾನು | ದತ್ತನಿರದೆಪೋಗಲಿತ್ತ ||
ಮತ್ತೆವಸಂತತಿಲಕೆಯೊಳಗಾಚಾರು | ದತ್ತನಗಲದಿರುತಿರ್ದು ||೧೦೪||

ತಂದೆತಪವಕೈಕೊಂಡುದನಾಮನೆ | ಯಿಂದರ್ಥವೆಲ್ಲಹೋದುದನು ||
ಒಂದಿನಿಸರಿಪುದೆಯವಳೊಲವೇ ಜೀವ | ವೆಂದುಸಂತಸಮರ್ದನವನು ||೧೦೫||

ಲೌಕಿಕಮಪ್ಪಕಾರ್ಯವನಿನಿಸರಿಯದೆ | ಯಾಕಾಂಕ್ಷೆಯು ಮೇಲಗೊಳವೆ ||
ಆಕಾರಮಾಗಿಯವನುಕೂವಕಂಬದ | ಕಾಕನಮಾಳ್ಕೆಯೊಳಿರ್ದ ||೧೦೬||

ಇಂತುಮತ್ತಾರುವರುಷ ಪರಿಯಂತವ | ಸಂತತಿಲಕೆಯೊಡಗೂಡಿ ||
ಸಂತಸವಿರೆತರಿಸಿದಳು ಕುಂಟಣಿಮುನ್ನಿ | ನಂತೆಷೋಡಶ ಕೋಟಿಹೊನ್ನ ||೧೦೭||

ವರುಷಗಳಿಂತುಪನ್ನೆರಡಕ್ಕೆವೂವ | ತ್ತೆರಡುಕೋಟಿ ವಿತ್ತವನು ||
ತರಿಸಿಬಳಿಕ್ಕೆಂದಿನಂತೊಂದು ದಿನಹೊನ್ನ | ತರಹೇಳಿ ಸಖಿಯರಕಳುಹೆ ||೧೦೮||

ಚಿನ್ನಬೆಳ್ಳಿಬಂಗಾರಗಳೆಂಬವು | ತನ್ನಮನೆಯೊಳಿಲ್ಲದಿರಲು ||
ಇನ್ನೇವೆನೆಂದುದೇಯಿಲೆ ಮನೆಯುಸುಮಾರಿ | ಮುನ್ನಿನಂದದಿಕೊಟ್ಟಳಾಗ ||೧೦೯||

ಆಮನೆಯುನು ಮಾರಿಕೊಟ್ಟವಿತ್ತವಕೂಂ | ಡಾಮರುದಿನಕಳವಿಯರ ||
ಸಾಮಮಾಡದೆಯಿಂದಿನಹೊನ್ನ ತನ್ನಿಮೆಂ | ದಾಮುದಿಪಾರಿಯಟ್ಟಿದಳು ||೧೧೦||

ಬರುತವರಾದೇಯಿಲೆ ಹಣವಿಲ್ಲದೆ | ವರಗೃಹವನು ಮಾರಿತನ್ನ ||
ಹಿರಿಯಣ್ಣಿಸಿದ್ಧಾರ್ಥನಮನೆಗಾಪೋ | ದಿರುಳೇಪೋದಳೆಂಬುದನು ||೧೧೧||

ಆಮನೆಯನುಕೊಂಡವರುಸುರಲುಕೇಳಿ | ಯಾಮಾನಿನಿಯರಾಯೆಡೆಗೆ ||
ತಾಮೆಯ್ದಿ ಕಂಡುದೇಯಿಲೆಯಿಂದಿನಹೊನ್ನ | ನೀಮಿಾವುದುನಮಗೆನಲು ||೧೧೨||

ಆನುಡಿಯನುಕೇಳಿಲಜ್ಜಿಸಿತಲೆವಾಗಿ | ಮೋನಗೊಂಡಿರ್ದತ್ತೆಯನು ||
ಮಾನಿತೆಮಿತ್ರಾವತಿತನ್ನ ಸೊಸೆಗಂಡು | ತಾನಿಂತೆಂದಾಡಿದಳು ||೧೧೩||

ಅತ್ತೆಯಿದೇಕೆ ನಿಮಗೆಚಿಂತೆಯಿಂದಿನ | ವಿತ್ತಮನಾನೀನೆನೆಂದು ||
ಉತ್ತಮಮಪ್ಪತನ್ನಾಭರಣವತೆಗೆ | ದಿತ್ತಳುಸಂತಸದಿಂದ ||೧೧೪||

ಆ ಉತ್ತಮಾಭರಣವಕೊಂಡುಬರಲವ | ರಾವಾರತೆಯನುಕೇಳಿ ||
ಭಾವೆವಸಂತತಿಲಕೆ ತನ್ನ ಮನದೊಳು | ನೋವುತಿಂತೆನುತಾಡಿದಳು ||೧೧೫||

ಚಾತಿವೇಸಿಯರು ವಿಟರ ನಿಜಸತಿಯರಿ | ಟ್ಟಾತೊಡವಿಗೆಯಾಸೆ ಮಾಡೆ ||
ವಾತಕಮೆಂದು ತಿರುಗಿಯಟ್ಟಿದಳು ನಿಜ | ಮಾತೆಯನೆರೆಬೈವುತವಳು ||೧೧೬||

ಚಾರುದತ್ತನವನೆಯಿಂತಂದ ಹಣಮೆಲ್ಲ | ವಿಸಾ ರಾಜ್ಯವಿಸಾ ಪಟ್ಟಣವನು ||
ಆರೈಕೆಯುನಾವನುದಿನವಮಾಡಲು | ತೀರಲರಿಯುದದಿಂದ ||೧೧೭||

ಇಂದು ಮೊದಲು ನೀವವರನು ಬೇಡುವೆ | ವೆಂದತ್ತಲಡಿಯಿಡಬೇಡ ||
ಎಂದಾಸರಿಚಾರಕಿಯರಕರೆಸಿ ಯಾ | ಯಿಂದುವದನೆ ಮಾಣಿಸಿದಳು ||೧೧೮||

ಆ ಸುಡಿಯನು ಕೇಳುತಚಿಕೋಪವತಾಳು | ತಾನಂದನೆಯೆಡೆಗೆಯ್ದಿ ||
ದೀನಮಾನಸೆಸೂಳೆ ನಿನ್ನಾಣದಮಾತ | ತಾನಿಂತೆಂದಾಡಿದಳು ||೧೧೯||

ಚಾರುದತ್ತನ ಮನೆಯೊಳಗಿರ್ದ ಹಣವೆಲ್ಲ | ತೀರಿಹೋದುದು ಹಿರಿದಾಗಿ ||
ದಾರಿದ್ರ್ಯವೆಡೆಗೊಂಡುದವನನುಕಂಡರೆ | ಊರೆಲ್ಲ ಹೇಸುವಂತಾಯ್ತು ||೧೨೦||

ಹಣವುಳ್ಳವನೆಯಿಂದ್ರ ಹಣವುಳ್ಳವನೆ ಜಂದ್ರ | ಹಣವುಳ್ಳವನೆ ಜಯಂತ ||
ಹಣವುಳ್ಳವನೆಕಾಮ ಹಣವಿಲ್ಲದವನತ್ತ | ಹೆಣನುಕಾಣೆಲೆ ಕೇಳುಮಗಳೆ ||೧೨೧||

ಈ ಊರೊಳಗೆ ಬವ್ವನದಿಂದ ರೂಪಿಂದ | ಲಾವಣ್ಯದಿಂಜಾಣ್ಮೆಯಿಂದ ||
ತೀವಿದವಸ್ತುವಿಂದವಗೆ ಬಲ್ಲಿದರುಂಟು | ಭಾವಕಿವಿನುನೀನಪರ ||೧೨೨||

ಹೊನ್ನ ಹಿರಿದುಕೊಟ್ಟವನ ತಗುಳ್ವುದು | ನನ್ನಿಯಲ್ಲಯೆಂದವೆಯ ||
ಮುನ್ನ ಕರೆಪ ಹಸುವಿನಹಾಲು ಬೀತೊಡೆ | ಮನ್ನಿಸುವರೆ ಮುನ್ನಿನಂತೆ ||೧೨೩||

ಅಲತಗೆಯೆಸೆವ ರಸವಹಿಂಡಿದರಲೆಯ | ಎಲೆಬೀತಮರದನೆಳಲನು ||
ಹೊಲೆಗೆಟ್ಟು ಹಡೆವಸೂಳೆಯರನುಪೋಲ್ವರು | ಸಲೆವಿತ್ತವಿಲ್ಲದವಿಟರು ||೧೨೪||

ಒಲವು ಮನದೊಳಿಲ್ಲದೊಡೇನೊ ಒಲಿದಂತೆ | ಒಲಿಸುವಿಟನವಿತ್ತವನು ||
ಸುಲಿದುಬಳಿಕ ಪೊರಮಡಿಸುವುದದುನೀತಿ | ಬೆಲೆವೆಣ್ಣಳಿಗೆಲೆಮಗಳೆ ||೧೨೫||

ತಗುಳುವುದಿದೆವೇಳೆಯಾ ಚಾರುದತ್ತನ | ಮಗಳೆಯೆಂಬಾಸುಡಿಗೇಳಿ ||
ಮಿಗೆ ನೊಂದು ಮಾರುತ್ತರವನುಡಿದಳಾ | ಬಗಸೆಗಂಗಳಭಾಮೆಯಿಂತು ||೧೨೬||

ನಿನ್ನ ವಂಶದವೇಸಿಯರು ಕಡುಜದುರೆಯ | ರುನ್ನತಿಕೆಯರೂಪಿನವರು ||
ಸನ್ನುತೆಯರು ತಮ್ಮದಿನದೊಳುಗಳಿಸಿದ | ಹೊನ್ನೇಸುನನಗದನುಸುರು ||೧೨೭||

ನೀಮುನ್ನ ಹಡೆದೇರುಂಜವ್ವನದೊಳು | ಪ್ರೇಮದಿನಿನ್ನ ಭೋಜಗರು ||
ತಾವಿತ್ತಹಣ ಬಂಗಾರಮುಂಟಾದೊಡೆ | ಈ ಮನೆಯೊಳಗಿಲ್ಲದಿಹುದೆ ||೧೨೮||

ಎನ್ನೊ ೀರಗೆಯುವರೀನೆರೆಯೊಳಗಿರ್ದ | ಜೆನ್ನೆಯರತಿಚತುರೆಯರು ||
ಸನ್ನುತಮಪ್ಪ ಜವ್ವನೆಯರುಗಳಿಸುವ | ಬಿನ್ನಾಣವತೋರೆನಗೆ ||೧೨೯||

ಬರಿದೆ ಜನನಿಯೇತಕೆನುಡಿದಪೆನಾ | ಡರಿಕೆಯತನ್ನ ಸಿರಿಯನು ||
ಪಿರಿದು ನನಗೆಕೊಟ್ಟೊಲಿದೊಲಿಯಿಸಿಕೊಂಡ | ಸಿರಿಜೆಲುವನಬಿಡೆನೆಂದು ||೧೩೦||

ಕೋಟಿಮೂವತ್ತೆರಡರ್ಥಮನಿತ್ತನ | ಮಾಟನಿಸಿದರೂಪಯುತನ ||
ಬೇಟವರಿದು ಸವಿಯಿಾವವನನುನಿ | ರ್ಧಾಟಿಸೆಂದಿಂತುಪೇಳುವರೆ ||೧೩೧||

ಲವನಿತ್ತಹಣವವೆಚ್ಚಿಸುವುದಕವನಿತ್ತ | ನವಮಣಿದೊಡವಿಡುವುದಕೆ ||
ಅವನಿತ್ತುಡುಗೆಯುಡುವುದಕ್ಕೆಂದಿಗೆ | ಸವೆವುದೆಮ್ಮಯಪೀಳಿಗೆಗೆ ||೧೩೨||

ಸಮರೂಪಸಮಯೌವನಸಮಚತುರತೆ | ಸಮಭೋಗಬಲಸಮಸೋಲ ||
ಸಮರತಿಸಮಸುಖಿಗಳನಗಲಿಸುವುದು | ಕ್ರಮವೆ ಹೆಂಗಳಹೆತ್ತವರಿಗೆ ||೧೩೩||

ಪಿರಿದು ನಿಷ್ಕಪಟವಿಮೋಹದಸತಿಯನು | ನೆರೆಸನೆನವಕೋವಿದನು ||
ಬಿರಕೆನೇಹವಮಾಡುವಾತನನು ನರ | ಗುರಿಯಹಕ್ಕೇಳೆಲೆ ಜನನಿ ||೧೩೪||

ನೆನಹನೊಲ್ಮೆಯೊಳಾಳಿಸಿಕೊಂಡವನನು | ಮನವಿತ್ತುಬೆರಸುವಾತನನು ||
ತನಿಸೊಗಸಿಗೆ ಸೊಗಸನು ಸಂಧಿಸುವನನು | ಇನಿಸಗಲ್ದೆಂತುಜೀವಿಪೆನು ||೧೩೫||

ಸೋಲದ ಸೊಗಸನಳ್ಕೆರ್ದೆಯೊಳು ತೀವಿದ | ಲೋಲುಪತೆಯೊಗುಳಿಸಿದ ||
ಲೀಲೆಗಾರನನಾಲಯದಿಂದತಗುಳಿದ | ಬಾಲೆಗೆಬರದೆಪ್ಪಮಾದ ||೧೩೬||

ಒಲುಮೆಯಸೋಲತಲೆಯ ಹಿಡಿದವನನು | ಸಲೆನೇಹದೊಳಗಾಳ್ವನನು ||
ಗೆಲವುಮನದೊಳೆಳ್ಳನಿತಿಲ್ಲದವನನು | ತೊಲಗಿನಾನೆಂತುಜೀವಿಪೆನು ||೧೩೭||
ಒಲವೆಯೊಡಲಬಾಳುವೆಗೆ ಜೀವನವಾದ | ಒಲವೆಜೀವಕೆಮುಕ್ತಿಯಾದ ||
ಒಲವೆಜೀವನವೆಂಬಲತೆಗೆ ಯೆಡವಾದ | ಲಲನೆಗಹುದೆ ಬೇರೆಬಿನದ ||೧೩೮||
ಗೆಲುವನೊಬ್ಬರಮನಸಿನೊಳು ಕಾಣಿಸಿತಿಲ್ಲ | ಒಲುಮೆಹಿರಿದುಕಿರಿದಿಲ್ಲ ||
ಬಲುಮೆಯೆಂಬುದು ಬಗೆಯೊಳಗೊಂದಿನಿಸಿಲ್ಲ | ತೊಲಗಿನಾನಸುಗೊಂಬುದಿಲ್ಲ ||
ಪಿರಿದುಮೋಹವನವರತಮಾಡುವನನು । ಸರಸವಿಯೊಳುಕೂಡುವನನು ||
ಹರಣವನುರೆ ಸೆರೆಪಿಡಿದಬಲ್ಲಹನನು । ಕರೆಯದೊಡೆಂತುಜೀವಿಪೆನು ||೧೪೦||

ಒಲಿದುಒಲಿಸಿಕೊಳ್ಳಬಲ್ಲರಸಿಕನನು | ಸಲುಗೆಯಸಲಿಸುವಾತನನು ||
ಕಲೆಯನೆಲೆಯನರಿಪೊಸೆದು ಕೂಡುವನನು | ತೊಲಗಿನಾನೆಂತುಜೀವಿಪೆನು ||೧೪೧||

ಅಗಣಿತಮಪ್ಪವಸ್ತ್ರವನಿತ್ಯವನನು | ಸೊಗಯಿಪಮಣಿಭೂಷಣವನು ||
ಬಗೆಗುಂದದೆಕೊಟ್ಟ ಚಿಂತಾಮಣಿಯನು | ತಗುಳೆಂಬರೆ ತಾಯೆನೀನು ||೧೪೨||

ಭೋಗಮತ್ಯವನಿಂದತಿಪಿರಿದಾದುದು | ಶ್ರೀಗೆಣೆಯೈಸಿರಿಯಾಯ್ತು ||
ರಾಗದೇಳಿಗೆವನೆಗೆಲ್ಲ ಕೊದವಿದುದು | ಈಗಲವನನೂಂಕಲಾಯ್ತು ||೧೪೩||

ಮಳೆಯಕನಿಗೆ ಬಾಯ್ಬಿಡುವ ಚಾತಕಪಕ್ಷಿ | ಕೊಳಕುನೀರನು ಸೇವಿಸುವುದೇ ||
ತುಳಿಲಾಳಿಗೆಕೈವಶವಾದ ಸುದತಿಯ | ರಳಿಪಟರಿಗೆ ಮೋಹಿಸುವರೆ ||೧೪೪||

ಹೊನ್ನ ತಗಡಮೇಲೆ ಹೊಳೆವಮಾಣಿಕವುಕ | ರ್ಬೊನ್ನೊಳಗತಿರಂಜಿಪುದೆ ||
ಚೆನ್ನ ಗಂಡರೊಳು ರಂಜಿಪಸತಿಕೂರಾಳ | ಸನ್ನಿಧಿಯೊಳುಸೊಗಯಿಪಳೆ ||೧೪೫||

ಕರುಣವಿಲ್ಲದೆಮೋಹಕೆ ಕಂಟಕಿಯಾಗಿ | ಪಿರಿದುನಿಗ್ಗರಿಸಲು ನೀನು ||
ಹರಣವಬಿಟ್ಟಬಳಿಕ ನಾನುಬಿಡುವೆನು | ಸರಸಕಲಾಕೋವಿದನ ||೧೪೬||

ಎಂದುನುಡಿದಮುಗುದೆಯಮಾತಿಗೆ ಮನ | ಸೊಂದಾಬಳಿಯಿಂದೆಳ್ದು ||
ಬಂದಾಕಿನಿತಾಕೃತಕವಾನಸೆಯಾಗಿ | ಯೊಂದಾನೊಂದು ದಿನದೊಳು ||೧೪೭||

ಎಳೆನೀರಿನೊಳು ಸೊಕ್ಕುವ ಮದ್ದನೊಡಗೂಡಿ | ಕಳುಹಲಂದಾಕಾದಲರು ||
ಎಳಸಿಪಾನವಮಾಡಲಾ ಸೊಕ್ಕು ವೂರಿಸಿ | ಬಳಿಕಮೈಮರೆದೊರಗಿರಲು ||೧೪೮||

ಇಂತುಮೈಮರೆದ ಸೊಕ್ಕಿಂದೆಚ್ಚರದೆವ | ನಂತತಿಲಕೆಯೊಡಗೂಡಿ ||
ಕಂತುಸದೃಶಚಾರುದತ್ಯನಿರಲುತನ | ಗಿಂತಿದೆ ವೇಳೆಯೆಂದವಳು ||೧೪೯||

ಆರುಮುರಿಯದಂತವನ ಕಂಬಳಿಯೊಳ | ಗಾರಾತ್ರಿಯ ಮಧ್ಯದೊಳು ||
ಆರಯ್ದೆ ಕಟ್ಟಿಸಿಹಾಕಿಸಿದಳಾ | ಊರಚೌವಟದ ತಿಪ್ಪೆಯೊಳು ||೧೫೦||

ಅಲ್ಲಿಕಿರಿದುಹೊತ್ತು ಮೈಮರೆದಿರ್ದಾ | ಮೆಲ್ಲನೆಸೊಕ್ಕು ತಿಳಿಯಲು ||
ಸಲ್ಲೀಲೆಯಿಂದಾಕರುಮಾಡದಮೇಲೆ | ಸಲ್ಲಳತೋಳ ತೆಕ್ಕೆಯೊಳು ||೧೫೧||

ಸಂದಸುಖದೊಳೊರಗಿರ್ದನನಿಲ್ಲಿಗೆ | ತಂದುಹಾಕಿದರಾರೆಂದು ||
ಕಂದರ್ಪರೂಪಸನೆಣೆಕೆಮಾಡಿ ಬಳಿಕ | ಲ್ಲಿಂದ ಕಡೆಯರಾತ್ರಿಯೊಳು ||೧೫೨||

ತನ್ನ ಮನೆಯಬಾಗಿಲ್ಗೆಯ್ದು ತಿರಲಾ | ಮುನ್ನ ಮನೆಯ ಕೊಂಡವರು ||
ನಿನ್ನ ಜನನಿನಮಗೀಮನೆಯನು ಮಾರಿ | ನಿನ್ನ ಮಾವನ ಮಂದಿರಕೆ ||೧೫೩||

ಏಳೆಂಟುದಿನದೊಳು ಪೋದಳೆಂಬಾಮಾತಂ | ಗೇಳಿ ಪಿರಿದುದುಃಖವನು ||
ತಾಳಿಯಕ್ಕಟವಿಧಿಯೇಯೆಂದಾಮಾವ | ನಾಲಯಕಂದ್ವೆದಿದನು ||೧೫೪||

ಜನನಿಗೆರಗಿಮಾವಗೆಯಭಿವಂದಿಸಿ | ಧನತೀರಲಾ ತನ್ನತಂದೆ ||
ಬಿನದೀಕ್ಷೆಯಕೊಂಡುದನು ಮನೆಯನು ಮಾರಿ | ದನಿತನೆಲ್ಲವನು ಕೇಳಿದನು ||
ಅನಿತರೊಳಾ ನಿಜಸತಿಮಿತ್ರಾವತಿ | ವನಜವಿಲೋಚನೆ ಬಂದು ||
ಇನಿಯನಮೈಯಹತ್ತಿದ ತಿಪ್ಪೆಯಧೂಳ | ನನ-ರಾಗದಿಂದ ತೊಡೆದಳು ||೧೫೬||

ಬಳಿಕಮೈಮರ್ದನ ಮಜ್ಜನಭೋಜನ | ಗಳಸತ್ಯಾಸಕ್ತಿಯಿಂದ ||
ಲಲನಾಮಣಿಮಾಡೆ ಕಂಡತಿಸಂತಸ | ದಳೆದನು ವೈಶ್ಯಕುಮಾರ ||೧೫೭||

ಜನನಿಯಮೊಗನೋಡಿ ಎಲೆತಾಯೆನನ್ನಿಂದ | ನಿನಗೀಯಂದದವಸ್ಥೆ ||
ಜನಕಗೆದೀಕ್ಷಾವಿಧಿಯಾಯಿತೀ ದು | ರ್ಜನವ ನಾನೆಂತುನೀಗುವೆನು ||೧೫೮||

ಮುನ್ನ ಕೆಡಿಸಿದ ಪತ್ಕಕೆಪಾಸಟಿಯಾಗಿ | ಜೆನ್ನಾಗಿಪರದುಗೆಯ್ದಾನು |
ಸನ್ನುತನಾದಲ್ಲದೆ ಮನೆವೊಗೆನೆಂ | ದುನ್ನತಿಕೆಯ ಭಾಷೆಮಾಡಿ ||೧೫೯||

ಈತೆರದಿಂದಾಚಾರುದತ್ತನು ನಿಜ | ಮಾತೆಯೊಳಾಡಿದಮಾತ ||
ನೀತಿನಿಪುಣಸಿದ್ಧಾರ್ಥನರಿದುಜಾ | ಮಾತೃವಬಳಿಗೆಯ್ತಂದು ||೧೬೦||

ಅನ್ನಿಗನಾನಲ್ಲ ನಿನ್ನ ಸೋದರಮಾವ | ನನ್ನೊಳು ಪದಿನಾರುಕೋಟಿ ||
ಹೊನ್ನಿದಯದನುಕೈಕೊಂಡುಭೋಗಿಸುನೀನು | ಮುನ್ನಿನಂದದೊಳು ಜೆನ್ನಾಗಿ ||
ಎನಗೆಗಂಡುಮಗನಾಗಿ ಮಿತ್ರಾವತಿ | ತನುಜೆಯವಳು ನಿನ್ನರಮಣಿ ||
ಅನಿತರಿಂದಾವೊಡವೆಗೆ ನೀನೇಕರ್ತ | ವೆನಲಾನುಡಿಗಿಂತುನುಡಿದ ||೧೬೨||

ತಂದೆಗಳಿಸಿದವಿತ್ತವನುಕೆಡಿಸಿ ತನ್ನ | ಮುಂದಿರವನುಮಾರುಗೊಟ್ಟು ||
ಬಂದುಮಾವನಮನೆಯೊಡವೆಗೊಡೆಯನಾಗಿ | ನಿಂದನೆಂಬಪಕೀರ್ತಿಯನು ||೧೬೩||

ತಳೆದುಜೀವಿಪನಲ್ಲವದರಿಂದ ಪರಮಂ | ಡಲಕೆಯ್ದುಬಹುವಿತ್ತವನು ||
ಗಳಿಸಿಬಂದೊಡೆ ನಿನ್ನ ಜಾಮಾತೃವಲ್ಲದೊ | ಡಿಳೆಗೆ ನಾನೇಭಾರಕನು ||೧೬೪||

ಇದಕೆಸಂಶಯನೇತಕೆಮಾವ ಎನಲೆಂದ | ನದುಲೇಸಾವ್ಯವಹರಕೆ ||
ಮೊದಲಬಂಡವಕೊಂಡುಪರದುಗೆಯ್ಯೆನಲಂ | ತದಕೆಮುಗುಳ್ನಗೆನಗುತ ||೧೬೫||

ಪರದುಗೆಯ್ವೊಡೆಬಂಡಮೊದಲು-ಬೇಡುವನವ | ಪರದರಮಗನೆಸಂಗರಕೆ ||
ನೆರವಹಾರುವನವಿಕ್ರಮಿಯೇಯೆಂದು | ಪರಮಾರ್ಥವೆಂದೊಡಂಬಡಿಸಿ ||೧೬೬||

ಮಾತೆಯಮೃದುಪದಯುಗಕೆಮಣಿದು ನಿಜ | ಮಾತುಳನಡಿಗಿಟ್ಟುಹಣೆಯ ||
ಪ್ರೀತಿಯಿಂಮಿತ್ರಾವತಿಯಸಂತೈಸಿ | ಖ್ಯಾತನವ್ಯಗ್ರಹೃದಯನು ||೧೬೭||

ಪೊರಮಟ್ಟುಮನೆಯನು ದಕ್ಷಿಣದೆಸೆಗಾಗಿ | ಕಿರಿದುದೂರಕೆನಡೆತಪ್ಪ ||
ಮರುದಿನದೊಳು ಮಾತುಳಸಿದ್ಧಾರ್ಥನು | ಮರುಕದಿಬಂದುಕೂಡಿದನು ||೧೬೮||

ಸಿದ್ಧಾರ್ಥನತಿಸಿದ್ಧ ಪುರುಷಾರ್ಥನಾಸುಪ್ಪ | ಸಿದ್ಧನುಚಾರುದತ್ತಸೊಳು ||
ಒದ್ಧನಾಗಲುತಾಮಿರ್ವರುನಡೆದೊಂ | ದುದ್ಧತವನವನೆಯ್ದಿದರು ||೧೬೯||

ಆವನದೊಳು ದಿವ್ಯಮೂಲಿಕೆಗಳಕಿಳ್ತು | ತಾಮಿರ್ವರುಪೊರೆಗಟ್ಟಿ ||
ಓನದೆಪೊತ್ತುಪಲಾಶವೆಸರ್ವಡೆ | ದಾ ಊರಿಗಿರದೆಯ್ದಿದರು ||೧೭೦||

ಆದರೊಳದನುವಿಕ್ರಯಮಾಡಿ ಬಳಿಕಾ | ಮೊದಲಿಂಜವಳಿಯಕೊಂಡು ||
ಅದನೊಂದುಮನೆಯೊಳಗಿರಿಸಲಂತದು ಜೇಯ | ಲದಕೆ ವಿಸ್ಮಯಚಿತ್ತರಾಗಿ ||೧೭೧||

ಮತ್ತಕೆಲರುಪರದರಕೂಡಿಯಾವೈ | ಶ್ಯೋತ್ತಂಸನೊಂದುಪರ್ವತದ ||
ತುತ್ತತುದಿಯನೇರಿಯಾಗುಹೆಯೊಳಗ | ತ್ಯುತ್ತಮನುಪ್ಪರತ್ನವನು ||೧೭೨||

ಅಗೆದುಪೊರೆಯನವರೊಳುಕಟ್ಟಿಸಿಕೊಂಡು | ಮಿಗೆಹರಿಸದಿಬಪ್ಪಾಗ ||
ನಗದಬೇಡರುದಾರಿದಾಗಲವರನು ಸಾ | ಸಿಗನೆಬ್ಬಟ್ಟಿಯೋಡಿಸುತ ||೧೭೩||

ಮತ್ತೊಂದುಪುರಕೆಯ್ದಲದರೊಳು ವಾಸವ | ದತ್ತನೆಂಬೋರ್ವನುಕಂಡು ||
ಚಿತ್ತಶುದ್ಧಿಯೊಳಿರ್ವಂದತಿಸಮ್ಮದ | ವೆತ್ತುಮನೆಗೆಕೊಂಡುಪೋಗಿ ||೧೭೪||

ಸದುವಿನಯದೊಳತ್ಯುಪಚಾರವಮಾಡಿ | ತದನಂತರದೊಳವರಿಗೆ ||
ಒದವಿದವಸ್ಥೆಯೆಲ್ಲವಕೇಳಿಮನದೊಳು | ಬೆದೆಬೆದೆಬೇವುತಿಂತೆಂದ ||೧೭೫||

ಸನ್ನುತಗುಣಭೂಷಣಚಾರುದತ್ತಕೇ | ಳ್ನಿನ್ನ ಜನಕಭಾನುದತ್ತ ||
ನಿನ್ನೊಳಗೆರವಿಲ್ಲದಿರ್ದನಂತದರಿಂ | ದಿನ್ನ ಮನೆಯುವಿತ್ತವನು ||೧೭೬||

ತೆಗೆದುಕೊಳ್ಳೆನಲಿಂತೆಂದನು ಜಲಯಾ | ತ್ರೆಗೆತಕ್ಕುದ್ಯೋಗವನು ||
ನೆಗಳಿಸಿಮೆನೆಪಡಗಿಸಸಮಕಟ್ಟಿನು | ಜ್ಜುಗವನೆಸಗಿಕೊಟ್ಟನಾಗ ||೧೭೭||

ತವಕದಿನಂದಾಜಲಯಾತ್ರಾಪಾ | ತ್ರವನೇರಿಯಾಶರಧಿಯೊಳು ||
ಸುವಿವೇಕಿನಡೆದುಬಂದೊಂದುತ್ತಮದ್ವೀ | ಪವಸಾರಿ ಚತುರತೆಯಿಂದ ||೧೭೮||

ತನ್ನ ವಶದೊಳಿರ್ದವನ್ನ ದಮೊದಲಿಂ | ಚೆನ್ನಾಗಿಬೆಪಕಾರಮಾಡಿ ||
ಪನ್ನೆರಡಬ್ದಕಳೆವಪರಿಯಂತರ | ತ್ಯುನ್ನತಮಪ್ಪವಸ್ತುವನು ||೧೭೯||

ಮುನ್ನ ಕೆಡಿಸಿದವಿತ್ತಕೆಪಾಸಟಿಯಾದ | ಹೊನ್ನ ಗಳಿಸಿಹಡಗೇರಿ ||
ಮುನ್ನೀರಬಟ್ಟೆಯೊಳಗೆಬರುತಿರಲಾ | ಮುನ್ನಿನಕೃತಪಾಪಫಲದಿ ||೧೮೦||

ಪ್ಯಳಯಪವನನಂದದಿಸೊಂದುಸುಂಟುರೆ | ಸುಳಿದಾಭೈತ್ಯನಿರದೆ ||
ತಳಹೊಳಗೊಳಿಸಿಮತ್ತಾಕೂವಕಂಬಮ | ನುಳಿಯದೆಮುರಿದುಹಾಕಿದುದು ||

ಹದಗೊಡೆದಾವೇಳೆಯಗಂಡುನಾಮಂದು | ಹಡೆದದುರಿತವಶಮೆನುತ ||
ಕಡುಗಲಿಯಾಚಾರುದತ್ತನು ಸಿದ್ಧಾರ್ಥ | ನೊಡಗೂಡಿ ನಿಶ್ಚಲನಾಗಿ ||೧೮೨||

ಹಿಡಿದುಪ್ಯಮಾದಪಲಕವನು ಬೇಗದಿ | ಕಡಲೊಳು ಬೀಳ್ದಿಯ್ತರುತ ||
ದೃಢಧೀರ ಚಾರುದತ್ತನದೊಂದು ಕುರುವದ | ಕಡೆಗಾಗಿಸೇರಿದನಾಗ ||೧೮೩||

ಒಯೆಡೆಯೊಳು ಮೂರುದಿನತಡಗೈದಾ | ವಾಯುವಶದಿನಲ್ಲಿಂದ ||
ಒಯ್ಯಾರದಿಂಬಂದು ಶಂಬರಿಯೆಂಬೂರ್ಗೆ | ಕಾಮುಜನಿಭನುಸೇರಿದನು ||೧೮೪||

ಅದರೊಳು ಧನದತ್ತನೆಂಬವಣಿಗ್ವರ | ನಿದಿರ್ಪಂದು ಚಾರುದತ್ತನು ||
ಸದುವಿನಯದೊಳೊಡಗೊಂಡು ಮನೆಗವ್ಯೋಗಿ | ಒದವಿದ ಸತ್ಕಾರದಿಂದ ||೧೮೫||

ಹಿಂದೆ ನಿಮ್ಮಯ್ಯನೆನ್ನೊಳು ತನ್ನಾ ಪತ್ತಿ | ಗೆಂದು ಹೋಡಶಕೋಟಿಹೊನ್ನ ||
ತಂದಿರಿಸಿದನದರೊಳು ಮೊನ್ನೆ ಸಿದ್ಧಾರ್ಥ | ಬಂದೆಂಟುಕೋಟಿವಿತ್ತವನು ||೧೮೬||

ಕೊಂಡುಚಂಪಾಪುರಕೆಯ್ದಿದನಳಿದುದ | ಕೊಂಡು ನೀನೆಯ್ದಿಸಲಾಗ ||
ಗಂಡುಗಳರಸನಾಚಾರುದತ್ತನು ಮನ | ಗೊಂಡಾವಸ್ತುವತರಿಸಿ ||೧೮೭||

ಅನಾಡೊಳಗಿರ್ದಬಸದಿಗಳೆಲ್ಲಕೆ | ದಾನಶಾಲೆಗೆವೆಚ್ಚವನು ||
ಸಾನುರಾಗದಿವಾಡುತಿರೆ ಪೊಗಳಿದುದು ಮ | ತ್ತಾನಗರಿಯಜನಮೆಲ್ಲ ||೧೮೮||

ಒಡಪೆಯುಕೆಡಿಸಿ ಮನೆಯುಮಾರಿ ಪರದೇಶ | ವಡೆದು ಒಳಿಕಹಡಗೊಡೆದು ||
ಕಡುಗೇಡುವಡೆದು ಬಳಿಕ ಏಪಗುಣವನು | ಬಿಡದಾದನಾಚಾರುದತ್ತ ||೧೮೯||

ಎಂದು ನಗರಿಯೆಲ್ಲಮೆಲ್ಲನುಲಿವುತಿರ | ಲಾದಾತನಪತರಣದ ||
ಅಂದವನೀಕ್ಷಿಪೆನೆಂದು ವೀರಪ್ರಭ | ನೆಂದೆಂಬಯಕ್ಷನದೋರ್ವ ||೧೯೦||

ಆಊರವೊರವೊಳಲೊಳಗೆರಂಚಿಸುವಜಿ | ನಾವಾಸದಮಂಟಪದೊಳು ||
ತೀವಿದವೈಕುರ್ವಣದಿಂದ ಬಲ್ಗ್ರಹ | ವಾವರಿಸಿದವೂಳ್ಕೆಯೊಳು ||೧೯೧||

ಕೆಡದಿರ್ದಮತ್ತೋರ್ವನನು ನಿರ್ಮಿಸಿಯೂರ | ಕಡೆಗಾಗಿ ಕಳುಹಲಾದವನು ||
ಕಡುವೇಗದಿಬಂದು ನೆರೆದಿರ್ದಪುರಜನ | ದೊಡನಿಂತೆಂಬಾಡಿದನು ||೧೯೨||

ಎನ್ನೊಡೆಯನು ವಿಕ್ರಮಾಂಕನೆಂಬಾತನು | ನಿಮ್ಮೂರ ಬನದಬಸದಿಗೆ ||
ಸಮ್ಮದದಿಂಬರಲವನನುಬಲ್ಗ್ರಹ | ನಮ್ಮಿಹುದತಿವೇಗದೊಳು ||೧೯೩||

(13)

ಅದುಮಾನವರಕ್ತವಬಲಿಯನು ಬೇಡು | ತ್ತದೆಯಡತಡೆಯದೆಕೊಡುವ ||
ಅಧಟರುಂಟೆಯೆಂಬಸುಡಿಗೇಳಿ ಪುರಜನ | ವೊದವಿದಮೌನದೊಳಿರಲು ||೧೯೪||

ಆನುಡಿಯನು ಕೇಳಿಹರುಷಹೃದಯನಾಗಿ | ಭೂನುತನಾಚಾರುದತ್ತ ||
ತಾನವಸೊಡಗೂಡಿಯಾವಿಕ್ರಮಾಂಕನಿ | ದ್ದಾನಂದನಕೆಯ್ದಿದನು ||೧೯೫||

ಬಸದಿಗೆಬಂದು ನಿರ್ಭರಭಕ್ತಿಯಿಂದಾ | ಕುಸುಮಕೋದಂಡಮರ್ದನನ ||
ಒಸೆದುವಂದಿಸಿಪಲತೆರದಿಂದಪೂಜಿಸಿ | ಯಸವಸದಿಂಪೊರಮಟ್ಟು ||೧೯೬||

ಬರುತಾಗ್ರಹವಾವರ್ತಿಸಿದಾತನ | ಪಿರಿದುಕರುಣದಿಂದನೋಡಿ ||
ವರಮಂತ್ರತಂತ್ರಯಂತ್ರಂಗಳನತ್ಯಾ | ದರದಿಮಾಡಲು ಬಿಡದಿರಲು ೧೯೭||

ಅದರಿಂದಿವನಸುವನುಕಾವೆನೆಂದಾ | ಪದಮಲಗುಣಿ ತನ್ನಬರಿಯ ||
ಪದೆದುತಿವಿದುಕೊಂಡಾತನ್ನ ರಕ್ತವು | ನದಿರದೆ ಬಲಿಗೊಟ್ಟನಾಗ ||೧೯೮||

ಆವೇಳೆಯೊಳಾಗಾಯಸೊರಗಿಮೂರ್ಛೆ | ಯಾವರಿಸಲು ನೆಲಕೊರಗಿ ||
ಆ ವೀರವಿತರಣಗುಣಮಣಿಭೂಷಣ | ನಾವಿಧಿಯನು ನಡೆಸೋಡಿ ||೧೯೯||

ಅನಿತರೊಳಾದೇವನಾವಿಗುರ್ವಣಿಯನೊಂ | ದಿನಿಸುವೇಗದಿಪರಿಹರಿಸಿ ||
ಅನುರಾಗದಿಂಬಂದಾಚಾರುದತ್ತನ | ಘನತರಮಪ್ಪಮೂರ್ಛೆಯನು ||೨೦೦||

ಪರಿಹರವಾಡಿ ಬಳಿಕ ಗುಣನಿಧಿಯುಕಿ | ಬ್ಬರಿಯುಗಾಯವ ಮಾಣಿಸುತ ||
ಉರುಮುದದಿಂತನ್ನ ದಿವ್ಯರೂಪವತೋರಿ | ಪಿರಿದುಪೆಜ್ಜತ್ತಾದೇವ ||೨೦೧||

ಪುರುಷಾರ್ಥಮಾಗಿತನುವನಿತ್ತುತ್ತಮ | ಪುರುಷ ನಿನಗೆ ಭೂತಳದೊಳು ||
ಸರಿಯಪ್ಪವರನು ಕಾಣೆನೆನುತ ಸುಡಿ | ದರಲಮಳೆಯನುರೆಕರೆದು ||೨೦೨||

ಹೊನ್ನಮಳೆಯನು ಸುರಿದು ಒಳಿಕಾದೇವ | ನುನ್ನತಗುಣಿಬೀಳ್ಕೊಂಡು ||
ತನ್ನ ನೆಲೆಗೆವ್ಯೋಗಲಿತ್ತ ಸೌಭಾಗ್ಯನು | ಪನ್ನನಲ್ಲಿಯಕಾಂಚನವನು ||೨೦೩||

ನಾಡುಬೀಡಿನೊಳುಳ್ಳವರದಾರಿದ್ರ್ಯವೆ | ಲ್ಲೋಡುವಂದದಿದಾನಗೆಯ್ದು ||
ರೂಢಿವಡೆದುತತ್ಪುರದಿಂಬಂದೊಂದು | ಕಾಜೊಳು ತಾಪಸಾಶ್ರಮಕೆ ||೨೦೪||

ಬರಲಲ್ಲಿಲೋಹಿತಾಂಬಕನೆಂಬಪಸೋರ್ವ | ಗೊರವನೀಕ್ಷಿಸಿ ತನ್ನ ಮನೆಗೆ ||
ಹರುಷದಿನೊಡಗೊಂಡುಬಂದು ಬಳಿಕಮುಪ | ಚರವಮಾಡುತಮಿಂತುನುಡಿದ ||

ಮನಸಿಜನಿಭರೂಪ ಚಾರುದತ್ತನೆಕೇ | ಳಿನಗೊಂದುರಸವಿದ್ಯೆಯುಂಟು ||
ಅನುವಾಗಿಯದನೆಸಗುವರೆ ಸಹಾಯಿಗ | ಳನುಕಾಣೆನಾನಿಂದುವರ ||೨೦೬||

ಎನೆಚಾರುದತ್ತನಿಂತೆಂದನೀವಿದ್ಯೆಗೆ | ಮನದೆಗೊಂಡೊಡಗೂಡುವೆನು ||
ನಿನಗೆಂಬಾನುಡಿಯನುಕೇಳಿ ಹರುಷದಿ | ಮಸಿಯಿಂವೊರಮಟ್ಟುಬಂದು ||೨೦೭||

ಉರುತರಮವ್ಪೊಂದುಕೂಪದಲ್ಲಿಗೆಬಂದು | ವರಸಿದ್ಧರಸಮುದರೊಳಗೆ ||
ಪರಿಪೂರ್ಣವಾಗಿದೆಯಿದನು ತೆಗೆಯಬೇಕು | ತರುಣನೀವೊಗುವೊಡಸಾಧ್ಯ||೨೦೮||

ನೀನಿಲ್ಲಿರು ನಾನೀಕೂಪವಹೊಕ್ಕು | ಪೂನಿತಮಪ್ಪೀರಸವ ||
ಆನದೆತಹೆನೆಂಬುದಕ್ಕೇಳಿ ನಸುನಕ್ಕು | ನಾನೆಹೋಗುವೆನೆಂದೆನಲು ||೨೦೯||

ಆನುಡಿಗತಿಹರ್ಷಿತನಾಗಿ ಭೌತಿಕ | ತಾನಿಂತೆಂದಾಡಿದನು ||
ಈ ನೇಣುವಿಡಿದು ಬಾವಿಯಹೊಕ್ಕುರಸದೊಳು | ನೀನಿಸ್ನ ಕೈಗಳನಿಡದೆ ||೨೧೦||

ಸುರುಚಿರಮಪ್ಪಾಸಿದ್ಧರಸಮನೀ | ಸೋರೆಗುಂಡಿಗೆಯೊಳುತುಂಬಿ ||
ಕರತಳವನುಸೋಂಕಿಸದೀಹಗ್ಗಕೆ | ಭರದಿಂದ ಕಟ್ಟಿಯಲುಗಲು ||೨೧೧||

ಒಂದುಸೂಳೀಸಿದ್ಧರಸವತೆಗೆದು ಮ | ತ್ತೊಂದುಸೂಳೀಹಗ್ಗವನು ||
ಕಂದರ್ಪನಿಭನಿನಗಿಳಿಯುಬಿಡುವೆನಿದ | ರಿಂದವೋಲಕೆ ನೀನೆಯ್ದು ||೨೧೨||

ಎನಲಾಮಾತನುಕೇಳಿಯಂತೇಗೆಯ್ವೆ | ನೆನುತಾಹಗ್ಗವಹಿಡಿದು ||
ಅನುಪಾನಿಸದಾ ಘನಕೂಪವಹೊಕ್ಕು | ಇನಿಸುವೇಗದೊಳತಿಮುದವಿ ||೨೧೩||

ಗೊರವಹೇಳಿದಮಾಳ್ಕೆಯೊಳಾರಸವನು | ಸೊರೆಯಗುಂಡಿಗೆಯೊಳುತುಂಬಿ ||
ಭರದಿಂದಾಹಗ್ಗದತುದಿಯೊಳುಕಟ್ಟಿ | ಪಿರಿದಾಗಿಯಲುಗಾಡಿಸಿದನು ||೨೧೪||

ಆ ನೇಣನುತೆಗೆದಾರಸವನುಕೊಂ | ಡಾನೆಲೆಯಿಂದಾಪಾಪಿ ||
ಆನದೆಪೋಗಲೊಂದೆರಡುಗಳಿಗೆಯೊಳ | ಗಾನೇಣುಬರದಿರೆಕಂಡು ||೨೧೫||

ಕ್ಷುದ್ರಹೃದಯಭೌತಿಕನೀಗಲೆನ್ನನು | ಛಿದ್ರಿಸಿಪೋದನೆಂದೆನುತ ||
ಆದ್ರಿಸಮಾನಧೈರ್ಯನಂದಾಶಾಂ | ತೋದ್ರೇಕಮಾನಸನಾಗಿ ||೨೧೬||

ಹೊರಡಬಾರದಬಾವಿಯೊಳಿನ್ನನುಬಟ್ಟು | ಗೊರವಹೋದನದರಿಂದ ||
ಮರಣವಲ್ಲದೆನಗಗುಳುವಿಲ್ಲೆಂದುರು | ತರಶಾಂತರಸಚಿತ್ತನಾಗಿ ||೨೧೭||

ಹಿಂದೆನಾನೆಸಗಿದದುಷ್ಕರ್ಮದಫಲ | ದಿಂದೀವಿಧಿಯಾಯಿತೆನಗೆ ||
ಮುಂದಕೆ ಸದ್ಗತಿಯನುಸಾಧಿಸುವೆನೀ | ಯಂದದೊಳೆಂದುಭಾವಿಸುತ ||೨೧೮||

ಇನ್ನತಿಹಿತಮಪ್ಪಸನ್ಯಸನಮನಾನು | ಚೆನ್ನಾಗಿಧರಿಸಿ ದೇಹವನು ||
ಭಿನ್ನವಮಾಡಿ ಬಳಿಕಸಾಧಿಸುವೆನು | ಸನ್ನುತಮಪ್ಪಸದ್ಗತಿಯ ||೨೧೯||

ಎಂದುತಸ್ಕೊಳುತಾನೆನುಡಿವಾಗಳಾಕೂಪ | ದೊಂದುಕಡೆಯತಿಟ್ಟಿಸೊಳು ||
ಮುಂದವೀರ್ಯನಾಗಿರ್ದೋರ್ವನರನಿಂ | ತೆಂದುಕಾರ್ಯವನುಸುರಿದನು ||೨೨೦||

ಎಲೆಯಣ್ಣನೀನೀದಾರುಣಕೂಪದ | ನೆಲೆಯಿಂದಧರಣೀತಳಕೆ ||
ಅಲಸದೆಪೋಪತೆರನಪೇಳುವೆನಾನು | ತೊಲಗಿನುನಿನ್ನ ಚಿಂತೆಯನು ||೨೨೧||

ಎನೆಚಾರುದತ್ತನಿಂತೆಂದನವನಕೂಡೆ | ನನಗೆಹೇಳುವನೂಟವನು ||
ನಿನಗೆವಾಡವೆ ಸುಮ್ಮನೆಯೆಂತೀಕಿರ್ದಪೆ | ಯೆನಲವನಿಂತನುಡಿದನು ||೨೨೨||

ಇಂದಿಗೆ ಮೂರುದಿವಸದೊಳು ನಿನ್ನಪ | ಟ್ಟಂದದಿನಾಭೌತಿಕನು ||
ತಂದೆನ್ನ ನೀಬಾವಿಯೊಳುಬಿಟ್ಟುಪೋದುದ | ರಿಂದಿಲ್ಲಿನಾನುಬೀಳ್ದಿರ್ದ ||೨೨೩||

ಪಿಂದಪ್ಪನೀರಡಿಕೆಯಿನೀರಸವನು | ಸರಸೋದಕವೆಂದುನಾನು ||
ಭರದಿಂದಪಾನವಮಾಡುವೆನೆಂದೆನ್ನ | ಕರವನೀಡುವನೆಮಯಮೊಳು ||೨೨೪||

ಇದರೊಳುಮುರುಟಿದವೆನ್ನೀಹಸ್ತಗ | ಳಿದರಿಂದೆನಗೆಯಸಾಧ್ಯ ||
ಚದುರಕೇಳೀಸಿದ್ಧರಸವನೊಂದುಡುಬಂದು | ಪಿಡಿದುಪಾನವಮಾಡಿಕೊಂಡು ||೨೨೫

ಹೋಗುತಲದೆಯುಂತದರಜಾಲವಪಿಡಿ | ದೀಗಳಿಗೆಯೊಳಾನಲಕೆ ||
ಪೋಗೆಂದುನುಡಿವುತ ಕಂತಗತಪ್ರಾಣ | ನಾಗಲುಂತವನೆಡೆಗೈದಿ ||೨೨೬||

ಭರದಿಂದಕಿವಿಯೊಳುಪಂಚಪದುಂಗಳ | ನೊರೆದು-ಸಮಾಧಿಯನವಗೆ ||
ಹರುಷದಿವಾಡಲವನು ಜನಿಯಿಸಿದನು | ಸುರಲೋಕದೊಳುಬಳಿಕಿತ್ತ ||೨೨೭||

ಉಡುಬಂದಾಸಕ್ಕಿಯಿಂದಾರನವನು | ಕುಡಿದುಮಗುಳ್ದಾಬಿಲಕೆ ||
ನಡೆವಸಮಯದೊಳು ತಾನಾಬಾಲವ | ಪಿಡಿಯುಲಂತದುಮೇಲಕೆಯ್ದಿ ||೨೨೮||

ಅದನಪೆಂಬಳಿಯೊಳುಬಂದೊಂದುಪುತ್ತಿನೊ | ಳದರಬಾಲವಪಟ್ಟುಸಿಲಲು ||
ಅದುಮೇಲಕೆಪೋಗಲಾವಲ್ಮೀಕದ | ವದನವಿಟ್ಟಿಡೆಯಂಗಲಾಗ ||೨೨೯||

ಮೇಲಕೆಬರಬಾರದೆಕನ್ನೀವೆಸೆಂ | ದಾಲಲಿತಾಂಗನಲ್ಲಿರ್ದು ||
ಆಲೋಚನೆಯನುಮಾಡುತಲಿರಲಾ | ವೇಳೆಯೊಳೊಂದಾಹುಬಂದು ||೨೩೦||

ಹುತ್ತಿನಬಾಯೊಳುಕಾಲಿಕ್ಕಲುತದ | ನೊತ್ತಿಹಿಡಿಯುಲಾಕಾಲ ||
ಕಿತ್ತುಕೊಳ್ಳಲು ಬಾರದಾವೇಕನಿರವರು | ಚುತ್ತಿರಲುತದಕೇಳಿ ||೨೩೧||

ಆಡಮೇಯಿಸುವಮಕ್ಕಳುಗಳೆಲ್ಲರುಬಂದು | ಕೂಡಿತಾವೊಪ್ಪಡಿಸುತಾರ ದಿರಲು ||
ನೋಡುವೆವಿದರೊಳಗೇನಿರ್ದವುದೆಂದು | ತೋಡಿದರಾವಲ್ಮೀಕವನು ||೨೩೨||

ಅದರಿಂದಾಹುತ್ಕಿನಬಾಯಿತೆರವಾಗ | ಲಧಟನಲ್ಲಿಂಪೊರಮಟ್ಟು ||
ಒದವಿದತನ್ನಾ ಪತ್ತಿಗೆವಿನ್ಮಯ | ಹೃದಯನಾಗಿಬರುತಿರಲು ||೨೩೩||

ಕಡುಗೋಪದಿಂಕೊಂದಾಡುರ್ಗಿಯ ಕೈಯ | ಮಡಿದು ಬಳಿಕಮರಃಹುಟ್ಟ ||
ಹಡೆದುಬಪ್ಪಾ ಮಹಿಷಾಸುರನೋಯೆನೆ | ನಡೆತಂದುದೊಂದು ಕಾಡ್ಕೋಣ||೨೩೪||

ಆಲಲತಾಂಗನಕಂಡತ್ಯುಗ್ರದಿ | ಮೇಲುವಾಯಲೆಂದೆಸುತ ||
ಕಾಲಾಂತಕನೇರುವ ಕೋಣನಂತಾ | ಭೀಳಾಕಾರವ ಹಡೆದು ||೨೩೫||

ನಡೆನೋಡಿ ಕೆಂಗಣ್ಮಸೆಗಿಪರಿದುಬಂದು | ಹೊಡೆಯೆಹೊಳೆದು ಹಿಮ್ಮೆಟ್ಟಿ ||
ಕಡುದೊಡ್ಡಿತಪ್ಪೊಂದು ಹೆಜ್ಜಾವಿನಸಟ್ಟ | ನಡುಬೆನ್ನ ಮೆಟ್ಟಿದಾಂಟಿದನು ||೨೩೬||

ಅದಕತಿಕೋಪಾಟೋಪದಿನೇಳ್ದು ಹಾ | ವಿದಿರಾವಾ ಕೋಣನನು ||
ಅದಿರದೆಸುಂಗಲಂತದಕಂಡು ದುಷ್ಕರ್ಮ | ದೊದವಿಗೆ ತಲೆತೂಗುತವೆ ||೨೩೭||

ಮುಂದೊಂದೆಡೆಯೊಳು ಪರವಹೊಳೆಯಹೊಕ್ಕು | ಮಿಂದುಮೇಲಕೆಪೊರಮಟ್ಟು ||
ಬಂದುಪಲವು ಫಲತೀವಿದನವಮಾ | ಕಂದದಡಿಯೊಳು ಕುಳ್ಳಿರಲು ||೨೩೮||

ಭರವಶದಿಂದಾ ಸಮಯಕೆಬೇಗದಿ | ಹರಿಸಖನಾದಿಯಸಖರು ||
ಗರುವಥೈವರುಗೂಡಿಯಾ ರುದ್ರದತ್ತನು | ಬರುತಿದ್ದನತಿಮಮತೆಯೊಳು ||೨೩೯||

ಅವರಕಂಡಿದಿರೇಳ್ದಾಚಿಕ್ಕೆ ಯಗೆ | ಯವನತನಾಗಿತನ್ನ ಡಿಗೆ ||
ಸವಿನಯದಿಂದೆರಗಿದನಿಜಸಖನಿವ | ಜವನುರೆಹರಸಿದನಾಗ ||೨೪೦||

ಬಳಿಕುತ್ತಮಕ್ಷೇಮ ಕುಶಲವಾರ್ತೆಯಕೇಳಿ | ಲಲಿತಾಂಗನು ತನ್ನ ಜನನಿ ||
ಲಲನೆಮಿತ್ರಾವತಿ ನೊದಲಾದವರು ಸುಖ | ದೊಳಗೆಯಿರ್ದಪರೆಂದು ಕೇಳಿ ||೨೪೧||

ಕೋವಿದಕುಲಚಿಂತಾಮಣಿನಿಸ್ಯ ಸ | ದ್ಭಾವವೆತಮ್ಮತನುವಿಗೆ ||
ಜೀವಮಾಗಿನೀನುಬಂದುದು ಮೊದಲಾಗಿ | ಜೀವಿಸಿಕೊಂಡಿರುತಿಹರು ||೨೪೨||

ಎನುತನುಡಿದುರುದ್ರದತ್ತಮತ್ತಿಂತೆಂದ | ನಿನನನಬ್ಜಿನಿ ನೆನೆವಂತೆ ||
ವನಿತೆವಸಂತತಿಲಕೆ ನಿನ್ನ ಬರವನೆ | ಯನುನಯದಿಂಹಾರುತಹಳೆ ||೨೪೩||

ಎನೆಚಾರುದತ್ತನವರೊಳಿಂತೆಂದನು | ದಿನಚರಿತನಗಿರದೆರಗಿ ||
ಅನುರಾಗದಿಂದುಂಬತುಂಬಿಯಗಲೆ ಕುಮು | ದಿನಿಬಳಿಕದನು ಹ್ಹಾರುವುದೆ ||೨೪೪||

ವಿಟರನಗಲದವಿಟೀಜನಕತಿ ಸಂ | ಕಟವುಂಟು ವಿರಹದೊಳೆಂಬ ||
ಕುಟಿಲವಚವನೆಲೇ ಚಿಕ್ಕಯ್ಯನೆ | ದಿಟವೆಂದು ನಂಬಲುಬಹುದೆ ||೨೪೫||

ಎಂದಮಾತಿಗೆ ರುದ್ರದತ್ತನು ಹರಿಸಖ | ರೆಂದರುನೀನುತೊಲಗಿದ ||
ಅಂದಿಂದುಳಿದವಿಟರುತನ್ನ ಸೋದರ | ರೆಂದುಭಾವಿಸಿಕೊಂಡಿಹಳೆ ||೨೪೬||

ವಿಲಸಿತವಿಜಕಿಲವಲ್ಲರಿಮದುರಿತು | ತೊಲಗಲಲರಬಿದಿರ್ವಂತೆ ||
ಲಲಿತಾಂಗನೀನಗಲ್ದಂದಿಂದಾ ಕೋ | ಮಲೆತೆಗೆದಳು ತೊಡವುಗಳ ||೨೪೭||

ಕಾರಕಾಲಮನಿಶ್ಚೈಸಿ ಚಾತಕಪಕ್ಷಿ | ನೀರುಣಲೊಲ್ಲದಂದದೊಳು ||
ಧೀರಲಲಿತನಿನ್ನ ಬರವಹಾರೈಸಿ ಯಾ | ನಾರಿಯುಣಿಸೆನುತೊರೆದಳು ||೨೪೮||

ವಿತತವಸಂತವಲ್ಲಭನನಗಲಿಪರ | ಭೃತಮೌನಗೊಂಡಿರ್ಪಂತೆ ||
ಅತನುಸದೃಶನೀನಗಲಿದಂದಿಂದಾ | ಸತಿಯೊಬ್ಬರೊಡನೆನುಡಿಯಳು ||೨೪೯||

ಇಂದುಬಿಂಬವನಲ್ಲದುಳಿದವಸ್ತುವ ನೋಡೆ | ನೆಂದು ಮುಗಿವಕುಮುದಿನಿಯು ||
ಅಂದದಿನಬಲೆನೀನಲ್ಲದನ್ಯರನೋಡೆ | ನೆಂದು ವ್ರತವಧರಿಸಿದಳು ||೨೫೦||

ಎಂದು ವಸಂತತಿಲಕೆಯಂದಮನಿ | ರ್ದಂದದಿನಪರುನುಡಿಯಲು ||
ಮುಂದೇತರಮಪ್ಪಹರುಷಮನಾನವ | ಕಂದರ್ಪನುತಾಳಿದನು ||೨೫೧||

ತನಗೆಬಂದಾಪತ್ತನವಳೊಳಗುಸುರುತ | ಜನಸುತಸಲ್ಲಿಂದೆಳ್ದು ||
ಅನುರಾಗದಿಂನಡೆತಂದಾಪಶ್ಚಿಮ | ವಸಧಿಯತಡಿಯೊಳಗೆಸೆವ ||೨೫೨||

ಬಿತ್ತರಮಾದರಜತಮೆಂಬಪರ್ವತ | ದೊತ್ತಿನಪಾರ್ಶ್ವಕಮೆಂಬ ||
ಪತ್ತನವನುವೊಕ್ಕುಬಳಿಕಲ್ಲಿಯಾರುದ್ರ | ದತ್ತನಮುಖದಿಂದಾಗ ||೨೫೩||

ಅಲ್ಲಿಸಕಲದೇಶಭಾಷೆಗಳೆಲ್ಲವ | ಬಲ್ಲಪಾರಸಿಕನೋರ್ವನನು ||
ಸಲ್ಲೀಲೆಯಿಂದಕರೆದುಕೊಂಡವನೊಳು | ನಿಲ್ಲದಿಂತೆಂದಾಡಿದನು ||೨೫೪||

ಉತ್ತಮಮಪ್ಪರತ್ನದ್ವೀಪಕೆಬಟ್ಟೆ | ಯೆತ್ತಮದೇಕಡೆಯಿಹುದು ||
ಮತ್ತಮದಕೆವೋಪತೆರನೆಂತುಟದನೀನು | ಬಿತ್ತರಿಸೆನಲೆಂದನವನು ||೨೫೫||

ಆರಮ್ಯಮಪ್ಪ ರತ್ನದ್ವೀಪಮಪರಾಂ | ಭೋರಾಶಿಯನಟ್ಟನಡುವೆ ||
ಸೇರಿಹುದುತ್ತಮಮಪ್ಪರತ್ನಂಗಳ | ಭೂರಿಯಿಂದದಸೇವೊಗಳ್ವೆ ||೨೫೬||

ವಾರಿಧಿಯೊಳುನಾಲ್ವೆರಳಗಲದಕಲ್ಲ | ದಾರಿಮತ್ತದರಿಕ್ಕೆಲದೊಳು ||
ಆರಯ್ಯೆಪಿರಿದುಮಗಾಧೋದಕಮಿಪ್ಪ | ದಾರುವೊಗುವುದಳವಲ್ಲ ||೨೫೭||

ಆಡಿನಬೆನ್ನೊಳುಳ್ಳುಳ್ಳಿರ್ದು ಮನದೊಳ | ಳ್ಯಾಕ್ಕಡದೆವೋಗಲುಬೇಕು ||
ರೂಢಿವಡೆದರತ್ನದ್ವೀಪದದಾರಿ | ನಾಡಾಡಿಗಳಿಗದುವಶವೆ ||೨೫೮||

ಎಂದವಾತನುಕೇಳಿನಾವಿದನೋಡುವೆ | ವೆಂದಾಡುಗಳನುತರಿಸಿ ||
ಕಂದರ್ಪನಿಭನೇರಿಯಸಿಯಮದಿಲಮೇಲೆ | ಯುಂದದಿನಡೆಗಲಿಸಿದನು ||೨೫೯||

ಈತೆರದಿಂನಡೆಗಲಿಸಿಮತ್ತಾಯೇಳು | ಹೋತಿನನಡುಬೆನ್ನ ನೇರಿ ||
ಆತುರದಿಂದೆಯ್ದಿಯುಂಬುನಿಧಿಯರಂಜಿ | ಪಾತಡಿಗಿತದೆಯ್ದಿದರು ||೨೬೦||

ಆ ವಾರಾಶಿಯತಡಿಯೊಳುನಿಂದಾ | ಕೋವಿದನಿಂತುಸುರಿದನು ||
ನೀವರುವರುತಡೆದಿರಿನಾನಾರನ್ನ | ದೀವಿಗೆಯೋರ್ವನೆಪೋಗಿ ||೨೬೧||

ಅದರಳಬಳವನಿರೀಕ್ಷಿಸಿಬಳಿಕೀ | ಉದಧಿಯತಡಿಗೆಯ್ದಿಮತ್ತಿ ||
ಪದುಳದಿನಾಮೆಲ್ಲರುಪೋಪೆವೆಂದಾ | ಸದಮಲನವರನಲ್ಲಿರಿಸಿ ||೨೬೨||

ಆರ್ಗಿನಿಸಳವಲ್ಲದಂಭೋರಾಶಿಯು | ನೂರ್ಗದೊಳದಿರದೆಪೋಗಿ ||
ಭೋರ್ಗರೆವಾರಣ್ಯದನಡುವಣರತ್ನ | ದುರ್ಗವನೋಡಿಮಗುಳಿದ ||೨೬೩||

ಇತ್ತಲುರುದ್ರದತ್ತಾವಿಗಳಾಚಾರು | ದತ್ತನೇತಕೆಬಾರನೆಂದು ||
ಅತ್ತಲುಮುಖವಾಗಿಯಾಹೋತಿನಬೆನ್ನ | ಹತ್ತಿನಡೆದುಬರುತಿರಲು ||೨೬೪||

ಭೋರೆನೆತಗಿದಿರೆಯ್ದುವರನುಕಂಡು | ಚಾರುದತ್ತನುಶಂಕೆಯಿಂದ ||
ಆರಯ್ಯನಿಂತೆಯ್ದುವರೆಯೆಂದೆನೆಮ | ತ್ತಾರುದ್ರದತ್ತನಿಂತೆಂದ ||೨೬೫||

ನೀನಾಗಕುರಿತವೇಳೆಗೆ ಬಾರದಿರೆಕಂಡಿ | ದೇನೆಂದುಶಂಕೆಯಿಂದಾವು ||
ಆನದೆನಿನ್ನನೋಡುವೆವೆಂದುವಿಚಾರ | ಮಾನಸರಾಗಿಯೈದಿದೆವು ||೨೬೬||

ಇಟ್ಟಣಿಸಿದವಾರಾಶಿಯನಡುವೆ ನಾ | ಲ್ವೆಟ್ಟಗಲದದಾರಿಯೊಳಗೆ ||
ನೆಟ್ಟನೆಬರುತಪಿಂತಕೆತಿರುಗುವೆನೆಂಬ | ದಿಟ್ಟರುಂಟೀವಿಚಾರಿಸಲು ||೨೬೭||

ಎಂದುಸುಡಿದುನಾನೀನೀರನಿಧಿಯೊಳು | ಹೊಂದಿನಿಮ್ಮನುಕಳುಹುವೆನು ||
ಎಂದಾಗುಣಭೂಷಣನನುಣ್ಣಡಿಗಿಂ | ತೆಂದರುಹರಿಸಖಾವಿಗಳು ||೨೬೮||

ಲೋಕದೊಳಗೆ ನಮ್ಮಂತಪ್ಪಮನುಜರ | ನೇಕರುಂಟುಭಾವಿಸಲು ||
ಏಕಾಂಗವೀರನಿನ್ನಂತಪ್ಪಗುಣರ | ತ್ನಾಕರರೆಂದಿಗಾಗುವರು ||೨೬೯||

ಅದುಂನಾವಿಲ್ಲಿಹರಣವನೀಗುವೆ | ವಿದನುನೀಕಳೆದುಹೋಗೆನಲು ||
ಆದಕೆ ನಿಮ್ಮೆಲ್ಲರಕೊಂದುಬಂದಪಕೀರ್ತಿ | ಯೊದವನಾನೆಂತುನೀಗುವೆನು ||೨೭೦||

ಎಂದು ತನ್ನತಿಚಾತುರ್ಯವನೋಡುವೆ | ನೆಂದುಸಮಸ್ತಿದ್ಧೇಭ್ಯ ||
ವಂದತ್ಯವಧಾನದಿಂದ ಹೋತಿನಬೆನ್ನಿ | ನಿಂದೆಡಗಡೆಗಾಗಿಜಗುಳಿ ||೨೭೧||

ಒಂದಂಘ್ರಿಯನಾಬಟ್ಟೆಯೊಳಿಟ್ಟುಮ | ತ್ತೊಂದಂಘ್ರಿಯಮೇಲಕೆತ್ತಿ ||
ನಿಂದತಿಕುಶಲತೆಯಿಂದಾಹೋತಸ | ಮುಂದಕೆನಸುಚಾರಿಸುತ ||೨೭೨||
ಮುಂದಣವೆರಡಡಿಯನುಮಾಸರಣಿಯೊ | ಳ್ತಂದಿಟ್ಟುಗರಿಯಂದದೊಳು ||
ಹಿಂದಣವೆರಡುಕಾಲನು ಮೆಲ್ಲನೆತಿರಿ | ತಂದುಸಸಿನವಮಾಡಿದನು ||೨೭೩||
ಇಂತುಸಸಿನಮಾಡಿಯಾಹೋತಸಬೆನ್ನ | ಸಂತರಿಸದೆತಾನೇರೆ ||
ಪಿಂತಣತುದ್ಯದತ್ಕಾದಿಗಳೀಕ್ಷಿಸಿ | ಸಂತಸವನೆಮಾಡಿದರು ||೨೭೪||
ಬಳಿಕನಿಶ್ಚಿಂತಹೃದಯರಾಗಿಯಲ್ಲಿಂ | ತಳೆದಾಕಿರುವಟ್ಟೆವಿಡಿದು ||
ತಳುವದೆಯಾರತ್ನದ್ವೀಪಕೆಪೋಗಿ | ಜಲಧಿಯತಡಿಯೊಳಿಳಿದರು ||೨೭೫||
ಮತ್ತಾದ್ವೀಪದನಾಲ್ದೆಸೆಯನುನೋ | ಡುತ್ತಿರ್ದೊಂದೆಡೆಯಿರ್ಪ ||
ಉತ್ತಮಮಪ್ಪಕೊಳನಕಂಡಲ್ಲಿಗೆ | ಚಿತ್ತಜಸನ್ನಿಭನೆಯ್ದೆ ||೨೭೬||
ಕರಚರಣಾನನವನು ತೊಳೆದಲ್ಲಿಂ | ದುರುಮುದದಿಂದೆಯ್ತಂದು ||
ಸರಸಜೂತವನೊಂದಕಂಡಲ್ಲಿ ನಿದ್ರೆಯೊ | ಳೆರೆ ರುದ್ರದತ್ತನೆಯ್ತಂದು ||೨೭೭||
ಒರಗಿದಚಾರುದಶ್ತಬಡಪರಿಯ | ಚ್ಚರದಂತೆಯೊಯ್ಯಾರದಿಂದ ||
ತುರುಗೆವೆದಿಟ್ಟಿಗಂಜನಮಿಟ್ಟಾವೈ | ಮರೆವಂದದಿಮಾಡಿಬಳಿಕ ||೨೭೮||
ಆ ರುದ್ರದತ್ತನುತನ್ನೊಳುಮೊದಲಾ | ಪಾರಸಿಕಸುಪೇಳ್ದಂತೆ ||
ಕ್ರೂರಕರ್ಮಿಯಂದಾಯೇಳಾಡಿನ | ಹೋರಿಯತಲೆಯನುಸುಕಡಿದು ||೨೭೯||
ಕತ್ತಿಯಿಂದವರಕೊವಲಸೀಳಿ ಮಾಂಸವ | ಕೆತ್ತಿಟ್ಟಾತೊವಲುಗಳ ||
ಒತ್ತಿಮಗುಚಿ ತಿದಿಯನುಮಾಡಿಯಾಚಾರು | ದತ್ತನನದೊಳುಹೊಗಿಸಿ ||೨೮೦||
ಅದರಬಾಯನುಸೊಮ್ಮಿಬಳಿಕುಳಿದಾಡಿನ | ತಿದಿಯೊಳಗರುವರುಹೊಕ್ಕ ||
ಪದುಳನಿನಾಬಾಯಿಗಳಹೊಲಿದಿರ್ಪಾ | ಪದದೊಳುತಾಮಿರ್ಪಬಳಿಗೆ ||೨೮೧||
ಸುರಪತಿತಮ್ಮರಟ್ಟೆಯಕಡಿವಂದಂಜಿ | ಶರಧಿಯಹೊಕ್ಕಶೈಲಗಳು ||
ಇರದಲ್ಲಿಂಪೊರಮಡುವಂತೆಯ್ದಿದ | ವುರುತರಮೆಂಟುಭೇರುಂಡ ||೨೮೨||
ಅಂತುಬಂದವರೊಳಗಾರುಖಗಂಗಳು | ಮುಂತಿರ್ದಾರುತಿದಿಯನು ||
ಅಂತರಮಾಡದೆರಗಿಕಚ್ಚಿಕೊಂಡಾ | ಅಂತರಿಕ್ಷಕೆಪಾರಿದವು ||೨೮೩||
ಚಾರುದತ್ತನುವೊಕ್ಕತಿದಿಯನೊಕ್ಕಣ್ಣಿನ | ಭೇರುಂಡಕಚ್ಚಿಯಾಗಸಕೆ ||
ಭೋಟೆನಿಪಾರುತ್ತಿರಲಲ್ಲಿಮತ್ತೊಂದು | ಭೇರುಂಡಕುಟುಕುವಡೆಯದೆ ||೨೮೪||

ದಿಟ್ಟಿಯಿಲ್ಲದಕಡೆಯಿಂದಾವಿಹಗನ | ಮುಟ್ಟಿಬಂದದ್ದನುಸುಲಿಯಲು ||
ಬಿಟ್ಟೋಡಲಾತಿದಿಬೀಳುತಮಿರೆಕಂಡು | ತೊಟ್ಟನೆರಗಿಕಚ್ಚಿದುದು ||೨೮೫||

ಅದರಕೈಯಿಂದಾಯೇಕಾಕ್ಷಭೇರುಂಡ | ನದರಂತೆಯದನುಕರ್ದುಕಲು ||
ಅದುಬಿಡಲಾತಿದಿಮತ್ತೆಬೀಳುತ್ತಿರೆ | ಯೊದವಿಪಿಡಿದುಪಾಪಕ್ಷಿ ||೨೮೬||

ಈತೆರದಿಂದೊಂದೊಂದತಿಕೋಪದಿ | ನಾತಿದಿಗಾಗಿಯೋರಟಿಯ ||
ಆತುರದಿಂದೇಳುಸೂಳ್ವರಪಾಳ್ವಾಗ | ಭೂತಳಕದುಬಿಳ್ದುದಾಗ ||೨೮೭||

ಭೇರುಂಡವೆರಡರಹೋರಟೆಯಿಂದಾ | ನೀರನಿಧಿಯಮಧ್ಯದೊಳು ||
ಚಾರುದತ್ತನುಹೊಕ್ಕಾತಿದಿಬೀಳ್ದುದು | ಪ್ರಾರಬ್ಧಕರ್ಮವಶದೊಳು ||೨೮೮||

ಶರಧಿಯತೆರೆಹೊಯ್ಲಿಂದೊಂದುಕುರುವಕೆ | ಬರಲಾತಿದಿಯನುಕೊಯ್ದು ||
ಅರುಹನೆಗತಿಯೆಂದಾಚಾರುದತ್ತನು | ಭರದಿಂದವೊರಮಟ್ಟನಾಗ ||೨೮೯||

ಆಕುರುವದೊಳಿರ್ದುದೊಂದು ಕಾಸಾರವ | ನಾಕಂತರೂಪಸನುಹೊಕ್ಕ ||
ಸೌಕುಮಾರಾಂಗವೆಲ್ಲವ ಪ್ರಕ್ಷಾಲಿಸಿ | ಲೋಕೈಕನಾಥನನೆನೆದು ||೨೯೦||

ಏನಿದುಮುನ್ನೆಸಗಿದಕರ್ಮವಶದಿಸಂ | ಭೋನಿಧಿಯೊಳಾಕುರುವದೊಳು ||
ನಾನೋರ್ವನೆಸಿಲುಕಿದೆನಿಂತಿದಕೆಚಿಂತೆ | ಯೇನರುಹನೆಗತಿಯೆಂದು ||೨೯೧||

ಇದಕೆಮನಗಾಣಿಯಮಾಡುವುದಿದು | ಸದಮಲರಂಗವಲ್ಲೆನುತ ||
ಅಧಟರಪೇಪಸಲ್ಲಿರ್ದೊಂದುಕಲ್ಲೇರಿ | ಮುದದಿನಾಲ್ದೆಸೆಯನೋಳ್ಪಾಗ ||೨೯೨||

ಕಾಯೋತ್ಸರ್ಗದಿನೊಂದುಸವಾಪ್ಯ | ಚ್ಛಾಯೆಯೊಳಗೆಕೈಯಿಕ್ಕಿ ||
ಕಾಯಜಮದಮರ್ದನನೋರ್ವನುಜತಿ | ರಾಯನಿರಲುಕಂಡನಾಗ ||೨೯೩||

ತನಗೆಬಂದಾಪತ್ತೆಲ್ಲಾಮುನಿದರು | ಶನದಿಂ ವಿಚ್ಛಿನ್ನವಾಗೆ ||
ಅನುನಯದಿಂದೆಯ್ದಿಗುರುಭಕ್ತಿಪೂರ್ವಕ | ವಿನಮಿತನಾಗಲುಕಂಡು ||೨೯೪||

ಯೋಗಮನುಪಸಂಹರಿಸಿತಚ್ಚಾರಣ | ಯೋಗಿಕೈಗಳನೆತ್ತಿಬಳಿಕ ||
ಆಗಲಿವನಮರುಕದಿನೋಡಿಪಿರಿದನು | ರಾಗದಿಮಿಗೆ ಹರಸಿದರು ||೨೯೫||

ಒದವಿದಬೋಧದಿನಾಚಾರುದತ್ತನಂ | ಬುದನುತಿಳಿದು ಕರುಣದೊಳು ||
ಸದಮಲಗುಣಿನಿನಗಿಂತಪ್ಪವಸ್ಥೆಬಂ | ದುದು ಪೂರ್ವಕೃತಪಾಪದಿಂದ ||೨೯೬||

ಎಂಬಾಗಲಂಬರದಿಂದಾದಿಸಮಣಿ | ಬಿಂಬವಿಳಿದುಬರ್ಪಂತೆ ||
ಕೆಂಬನದನವಟ್ಟುಹರಿಕೇತುವೆಂಬೊರ್ವ | ನಂಬರಚರನೃಪವರನು ||೨೯೭||

ವಿಲಸಿತವಿಮಲಮಾಣಿಕ್ಯವಿಮಾನವಿಂ | ದಿಳಿದು ತತ್ಪಿತೃಗುರುಪದಕೆ ||
ಅಲಘುಭಕ್ತಿಯೊಳೊಂದಿಸಲಾಮುನಿಕುಲ | ತಿಲಕಹರಸುತಿಂತೆಂದ ||೨೯೮||

ಹರಿಕೇತುಕೇಳುನಮ್ಮನು ಜಂಪಾಪುರ | ವರದನದಿಯತಡಿಯೊಳಗೆ ||
ಭರದೊಳಗಾವೈರಿಶೂಲದೊಳಿಕ್ಕಲು | ಕರುಣದಿಂದೆಮ್ಮರಕ್ಷಿಸಿದ ||೨೯೯||

ಉತ್ತಮಗುಣಮಣಿಭೂಷಣನಾಚಾರು | ದತ್ತನೀತಗೆನಮ್ಮಂದ ||
ಮತ್ತೆವೆಗ್ಗಳೆದಪಿತೃಸ್ಥಾನವಿಮಾಪುರು | ಷೋತ್ತಮನನುಕೊಂಡುಪೋಗಿ ||೩೦೦||

ಒಸೆದುನಿನ್ನಯಸಾಮ್ಯಪದವನಿತ್ತು | ಬೆಸಕೆಯ್ದುಜಾಳುನೀನೆಂದು ||
ಬೆಸಸಲಂತೇಗೆಯ್ವೆನೆಂದಾಹರಿಕೇತು | ಮುಸುಕಿದಸಂತಸದಿಂದ ||೩೦೧||

ಚಾರುದತ್ತನನಿರ್ಮಲತರನೃದುಪದ | ವಾರಿಜಕಳಿಸಿಸುವಾಗಿ ||
ಆರಯ್ದೆರಗಿಕುಳ್ಳಿರ್ಪಸಮಯದೊಳು | ನೀರದಪಥದಿಂದಿಳಿದು ||೩೦೨||

ಕುಸುಮಶೇಖರನೆಂಬವಿವಿಜನೋರ್ವನುಬಂ | ದೊಸೆದಾಮುನಿಗಳಿರ್ವಂತೆ ||
ರಸಿಕನುಚಾರುದತ್ತಗೆಭಕ್ತಿಯಿಂದಬಂ | ದಿಸಮತ್ಕೃತುನಿಪದಕೆರಗಿ ||೩೦೩||

ಹರಿಕೇತುವಿಂತೆಂದನಲೆದಿವಿಜಾತಾ | ವರಗುರುವಿರ್ದಮಾಕ್ಷಿಯೊಳು ||
ಉರುಭಕ್ತಿಯಿಂದಗೃಹಸ್ಥಗೆರಗುವುದು | ನಿರುತಮೆಯೆನಲೆಂದನವನು ||೩೦೪||

ರಸಕೂಪದೊಳುಬೀಳ್ದಜ್ಞಾನದಿಂಸಾ | ವೆಸಗಿದುರ್ಗತಿಗೆಪೋಪವನ ||
ಒಸೆದೆನ್ನಕೈವಿಯೊಳುಪಂಜರಪದವಕಟ್ಟಿ | ಹನನಪ್ಪಗತಿಗೊಳಿಸಿದನು ||೩೦೫||

ಇದುದೈವವಿದುಗುರುವಿದುಸದ್ಧರುಶನ | ವಿದುಸಚ್ಚರಿತವೆಂಬುದನು ||
ವಿದಿತಮಾಗಿಯರಿವೀಪೋಧವೆನಗೀ | ಸದಪಮೃನಿಸಂಭವಿಸಿತು ||೩೦೬||

ಅದುಕಾರಣದಿಂದಿಂತೆಸಗಿದೆನೆಂದು | ಪದೆದಾಕುಸುಮಶೇಖರನು ||
ಮುದನಸವೃಶಜಾಳುದತ್ತನನವಕುಸು | ಮದೊಳಭಿಷೇಕಮಾಡಿದನು ||೩೦೭||

ಕೊರಗದಲರುಮಾಸದನವಚಿತಾಂ | ಬರನೆಸೆದಂದದೊಪ್ಪ ||
ವರರತ್ನಾಭರಣಗಳಿಂದಾಬಂ | ಧುರನನಲಂಕರಿಸಿದನು ||೩೦೮||

ಇಂತುಪೂಜಿಸಿದೀವನಾಗುಣಮಣಿಯನ | ನಂತಸೊಳಿರವೆಕೊಂಡಾಡಿ ||
ಕಂತುಸದೃಶನಿಮ್ಮಜಂಪಾನಗರಿಗೆ | ಸಂತಸದಿಂಪೋಪವೇಳು ||೩೦೯||

ಎಂದಮಾತನುಕೇಳಿಮನಗೊಡಲಾಮುನಿ | ವೃಂದಾರಕನಾನೃಪನ ||
ಒಂದಾಗಿನಮ್ಮಪಟ್ಟಣಕೆಯ್ದಲುಬೇ | ಕೆಂದುತಡೆಯಲಾಕ್ಷಣದೊಳು ||೩೧೦||

ಬಳಿಕಾಕುಸುಮಶೇಖರನದುಲೇಸೆಂ | ದಲಘುಭಕ್ತಿಯೊಳುಬೀಳ್ಕೊಂಡು ||
ತಳರ್ದನಮರಲೋಕಕಿತ್ತಲಾಖಗಕುಲ | ತಿಲಕನು ಹರಿಕೇತುನೃಪತಿ ||೩೧೧||

ಚಾರಣರನುಬೀಳ್ಕೊಂಡತಿವಿನಯೋಪ | ಚಾರದಿವುಪ್ಪಕವೇರಿ ||
ಚಾರುವಿಭವದಿಂದೊಡಗೊಂಡುಪೋದನು | ಚಾರುದತ್ತಸತಮ್ಮಪುರಕೆ ||೩೧೨||

ಹರುಷದಿಕೊಂಡೊಯ್ದರಸುತನಮನಾ | ದರದಿಂಕುಡಲೊಲ್ಲದಿರಲು ||
ಆರಸುಮಕ್ಕಳನೀರೇಣ್ಬರಬಲೆಯರ | ನಿರದೆಮುದುವೆಮಾಡಿದನು ||೩೧೩||

ಆರಮಣಿಯರೊಳಗಸುರಾಗಮಿರ್ದಾ | ಭೇರುಂಡಗಳುಕೊಡುಪೋದ ||
ಆರುದ್ರದತ್ತನುಹರಿಸಖಾದಿಯಸಖ | ರಾರತ್ನದ್ವೀಪದೊಳಗೆ ||೩೧೪||

ಇರಲಲ್ಲಿಗೆಸಿಹ್ಮಕೇತುಖೇಚರನನು | ಚರರುವಿದ್ಯಾಧರರುಗಳ ||
ಬರಿಸಿಕಳುಹಿಯವರಿಂದಾಚಂಪಾ | ಪುರಕವರಸುಕಳುಹಿಸಿದ ||೩೧೫||

ಇಂತುಸುಖದೊಳಿರ್ದುಹರಿಕೇತುವಿನಪ್ರ | ತ್ಯಂತಪೃಥಿವಿಪಾಲಕರ ||
ಅಂತಕನಿಭಕೋಪನಾಚಾರುದತ್ತನಿ | ಸ್ಸಂತಾನವಮಾಡಿದನು ||೩೧೬||

ಧುರದೊಳಗರಿಭೂಪರನಾನೆಲದೊಳು | ನೆರಪಿಯಾಹರಿಕೇತುವಿನ ||
ಅರಸುತನಕೆನಿಷ್ಕಂಟಕವನುಮಾಡಿ | ಹರುಷದಿಕೆಲದಿನಮಿರ್ದು ||೩೧೭||

ಹರಿಕೇತುಕುವರನೊಡನೆನಿನಮ್ಮಾನಿಜ | ಪುರಕೆಯ್ದಲುಬೇಕೆನಲು ||
ಅರಸುತನವಬಿಟ್ಟುಜನಕನಿಮ್ಮೊಡನಾ | ನಿರದೆಯ್ದುವೆನೆಂದನವನು ||೩೧೮||

ಎಂದನುಡಿಯಕೇಳುತಾಚಾರುದತ್ತನಿಂ | ತೆಂದನೆಲೆಸುಕುಮಾರ ||
ಇಂದುನಿನಗೆನಾನುರಾಜ್ಯವನಿತ್ತೆನು | ನಂದೇಹಬೇಡಪೆನ್ನಾಣೆ ||೩೧೯||

ಎಂದು ನಾನಾವಿಧಮಪ್ಪೊಡಂಬಡಿಕೆಗ | ಳಿಂದೊಡಂಬಡಿಸಲಾಕುಪರ ||
ಕಾಂದರ್ಪರೂಪಗೆ ಕೈಗಳಮುಗಿದಿಂ | ತೆಂದನೆಲೆಪ್ರಿಯಜನಕ ||೩೨೦||

ತರುಣೀಮಣಿಯೆನ್ನಿಂದ ಕಿರಿಯಳಾ | ಸಿರಿಸರಸತಿಪಾರ್ವತಿಗೆ ||
ಸರಿಮಿಗಿಲೆನಿಪೀಗಾಂಧರ್ವದತ್ತೆಯ | ಗರುವೆಯನಿನ್ನನಂದನೆಯ ||೩೨೧||

ವರಿಯಿಪಜೆನ್ನಗಂಡುಗಳೆಮ್ಮ ವಿದ್ಯಾ | ಧರಲೋಕದೊಳಗಾರಿಲ್ಲ ||
ಧರೆಯದರಸುಗಳೊಳಗೀಕೆಗೆ ತಕ್ಕೊರ್ವ | ವುರುಷಗೆ ನೀನೀವುದೆಂದು ||೩೨೨||

ಅನುಜೆಯನೊಪ್ಪಿಸಿಕೊಡಲಾಗುಣಮಣಿ | ನೆನೆಯೆತತ್ಕುಸುಮಶೇಖರನು ||
ಅನುರಾಗದಿಂದನಿಮಿಷರಬಲವೆಕೂಡಿ | ಯನಿಲಪಥದೊಳೆಯ್ತಂದು ||೩೨೩||

ಕಂತುರೂಪಸನಸುನಯದಿ ಪೂಜಿಸುತಮ | ನಂತಸೂಳಿರದೆ ಕೊಂಡಾಡಿ ||
ಸಂತಸದಿಂತಂದುಕೊಟ್ಟನು ಸುರಧೇನು | ಚಿಂತಾರತ್ನಂಗಳನು ||೩೨೪||

ಈತೆರದಿಂದಾದೇವಕೊಡಲು ಸಿಹ್ಮ | ಕೇತುಸಹಿತತತ್ಪುರನ ||
ಅ ತರುಣಿಯರೀರೇಣ್ಪರುಸಹಿತ ವಿ | ಖ್ಯಾತನು ಪೊರಮಟ್ಟನಾಗ ||೩೨೫||

ಮಾನಿತಮಣಿಮಯರಂಜಿತಮಪ್ಪ ವಿ | ಮಾನದಮೇಲೆಕುಳ್ಳಿರ್ದು ||
ಮಾನನಿ ಾಸನಂಬರಪಥವಿಡಿದುಸು | ಮ್ಮಾನಪೊದವಲೆಯ್ದಿದನು ||೩೨೬||

ಸುರಸೇನೆವಿದ್ಯಾಧರಸೇನೆಸಹಿತಾ | ದರದಿಂ ಚಂಪಾಪುರದ ||
ಸುರುಚಿರಮಪ್ಪಬಹಿರ್ವನದೊಳಗಾ | ಸ್ಮರರೂಪನು ಜೀಡಬಿಡಿಸಿ ||೩೨೭||

ಅರಸುವಿಮಲವಾಹನನಂತದಕೇಳಿ | ಪುರದೊಳಗಪ್ಪಕೋಭೆಯನು ||
ವಿರಚಿಸಿವಿಬುಧಾಧೀಶವಿಭವದಿಂ | ಹರಿಸದೊಳಿದಿರ್ವಂದನಾಗ ||೩೨೮||

ಅರಸಗೆರಗಿ ಹಿರಿಯರ್ಗಭಿವಂದಿಸಿ | ಹರುಷದಿನುಳಿದನಂಟರಿಗೆ ||
ಉರುತರಮಪ್ಪಾದರವಚನಂಗಳ | ನೊರೆದು ಬಳಿಕಚಾರುದತ್ತ ||೩೨೯||

ಜನನಿದೇಯಿಲೆಯ ಕೈಯಿಂಜೆಲೆಗೊಂಡಾ | ಮನೆಯೊಳಗಿರ್ದಪೈಶ್ಯಂಗೆ ||
ವಿನಯದಿಂದವೆನೂರುಮಡಿಹೊನ್ನನುಕೊಟ್ಟ | ಅನುಮಾಡಿಸಿದನಾಕ್ಷಣದೊಳು ||

ಅರಸೊಡಬರಮೇಲೆವಿದ್ಯಾಧರಸೇನೆ | ಸುರಸೇನೆಬಹುವಿಭವದೊಳು ||
ಪುರವನು ಹೊಕ್ಕರಸನಬೀಳ್ಕೊಂಡುರೆ | ಹರಿಸದಿಮನೆಗೆಯ್ದಿದನು ||೩೩೧||

ಜನನಿದೇಯಿಲೆಗಭಿವಂದಿಸಿನಿಜಸತಿ | ಜನನುತೆಮಿತ್ರಾವತಿಗೆ ||
ವಿನಯಮನುಸುರಿಯುಳಿದಬಂಧುಸುದತೀ | ಜನಕುಪಚರವಮಾಡಿದನು ||೩೩೨||

ಅನಿತರೊಳಾದೇವಕುಸುಮಶೇಖರನಾ | ದಿನದೊಳು ಹೊನ್ನವುಳೆಯನು ||
ಮಿನುಗುವರತ್ನವೃಷ್ಟಿಯನುಕರೆದು ಜನ | ವಿನುತನಬೀಳ್ಕೊಂಡುಪೋದ ||೩೩೩||

ಹರುಷದಿ ಹತ್ತಿಂಟುದಿನ ಸಿಹ್ಮಕೇತುವ | ನಿರಿಸಿಕೊಂಡಿರ್ದಕ್ಕರಿಂದ ||
ಪುರುಷಾರ್ಥನಿಧಿಶಿವಮಂದಿರಪುರಕಾ | ದರದಿಂಕಳುಹಿಮುತ್ತಿತ್ತ ||೩೩೪||

ಪರಿವಟಜನವಿಕಸಿತನವಚಂಪಕ | ವರವನಕಳಿಸಿಸುವಾದ ||
ತರುಣಿವಸಂತತಿಲಕೆಯನುಮುದದಿಂದ | ಕರೆಯಿಸಿದನು ತನ್ನಮನೆಗೆ ||೩೩೫||

ಮತ್ತೆಪೊಳಲಪೊರವನದನಡುವೆಯ | ತ್ಯುತ್ತಮಮಪ್ಪರತ್ನಗಳ ||
ತೆತ್ತಿಸಿಪದಿನೆಂಟುಕರುಮಾಡಂಗಳ | ಬಿತ್ತರದಿಂಮಾಡಿಸಿದನು ||೩೩೬||

ಅಲ್ಲಿಮಿತ್ರಾವತಿಯನು ವಿದ್ಯಾಧರ | ವಲ್ಲಭೆಯರುಷೋಡಶವನು ||
ಸಲ್ಲಲಿತಾಂಗಿವಸಂತತಿಲಕೆಯನು | ಸಲ್ಲೀಲೆಯೊಳಿರಿಸಿದನು ||೩೩೭||

ಚಿತ್ತಜನಂತವರೊಡನಿರ್ದು ಗಾಂಧರ್ವ | ದತ್ತೆಗೆಹೊನ್ನಮಾಡವನು ||
ಎತ್ತಿಸಿಕೊಟ್ಟುಕುಬೇರನಂದದಿಚಾರು | ದತ್ತನುಸಂತಸಮಿರ್ದ ||೩೩೮||

ಮಾರಸದೃಶರೂಪಶರನಿಧಿನಿಭಗಂ | ಭೀರಸುರಭಿಸಮುದಾನ ||
ಸಾರಸದ್ಗುಣಿಸುದತೀಜನಹೃದಯ | ಕ್ಷೀರವಾರಾಶಿಚಂದ್ರಮನು ||೩೩೯||

ಇದು ಜಿನಪದಸರಸಿಜಮದಮಧುಕರ | ಜದುರಮಂಗರಸರಚಿಸಿದ ||
ಮದನಾರಿ ನೇಮಿಜಿನೇಶಸಂಗತಿಯೊಳ | ಗೊದವಿದಾಶ್ವಾಸಗಳ್ಪತ್ತು ||೩೪೦||

೧೧. ಗಾಂಧರ್ವದತ್ತೆಯ ವೀಣಾಸ್ವಯಂವರ ಸಂಧಿ

ಶ್ರೀಮದಮರಪತಿಮೌಳಿಕೀಲಿತಪಾದ | ತಾಮರಸದ್ವಯನಜಗೆ ||
ಕಾಮಮದೇಭಹರಿಗೆ ನೇಮಿಜಿನಪತಿ | ಗಾವೋದವೆತ್ತೆರಗುವೆನು ||೧||

ಎಂದುನುಡಿದವೀಣಾಗುರುವಿಗೆಯಾ | ನಂದದಿನಾವಸುದೇವ ||
ಅಂದವಡೆದತನ್ನಮುಂಗೈಯಕಡಗವ | ನಂದುತೆಗೆದುಕೊಟ್ಟನಾಗ ||೨||

ಅನಿತರೊಳಾಶಾಸುದತಿಯಮನೆಗಾ | ಇನನೆಯ್ದಲಾಮನೋಹರನು ||
ಮನಸಿಜನಿಭವಸುದೇವನೃಪತನ್ನ | ಮನೆಗೊಡಗೊಂಡೆಯ್ದಿದನು ||೩||

ಆಮರುದಿನ ವೀಣಾಸ್ವಯಂವರವಾಗ | ಲಾಮನೋಹರನಾಗೃಹದಿ ||
ಸ್ತೋಮದೊಳೊಡಗೊಂಡುವೋದನಲ್ಲಿಗೆತ | ತ್ಕಾಮಸದೃಶನೃಪವರನ ||೪||

ಸತಿಯಬಯಸಿಬಂದ ಸಕಲಮಹೀಶ್ವರ | ಸುತರಮಧ್ಯದೊಳುಕುಳ್ಳಿರ್ದು ||
ಅತಿರಂಜಿಸಿದನು ವಸುದೇವತಾರಾ | ತತಿಯಮಧ್ಯದಚಂದ್ರನಂತೆ ||೫||

ಅನಿತರೊಳತಿರಂಜಿಸುವಭೂಷಣವಿಟ್ಟು | ಜನನುತೆಗಾಂಧರ್ವದತ್ತೆ ||
ಅನುರಾಗದಿಂತನ್ನ ಬಳಸಿಬರಲುಸಖಿ | ಜನದಮಧ್ಯದೊಳೆಯ್ದಿದಳು ||೬||

ಶಂಬರಶತ್ರುವಾರಾಧಿಪದೇವತೆ | ಯೆಂಬಂತಾಯೆಡೆಗೆಯ್ದಿ ||
ಅಂಬುಜಲೋಚನೆಕುಳ್ಳಿರ್ದಳೊಸೆದುಸ್ವ | ಯಂಬರಗೃಹದಮಧ್ಯದೊಳು ||೭||

ವಸುದೇವನುಕಣ್ಗೆತ್ತಲಾಚಾರ್ಯನು | ವಸುಧಾಧೀಶನಂದನರ ||
ರಸಿಕತೆಯಿಂಹಸನಾಗಿಬಾಚಿಸಿಮನ | ಲೊಸೆದುವೀಣೆಯಬಾಚಿಸಿದರು ||೮||

ಒಲವಿನದಿಟ್ಟಿಮನಮನೊಂದುಕಡೆಯೊಳು | ನಿಲಿಸಲವರುನುಡಿಯಿಸುವ ||
ವಿಲಸಿತಮಪ್ಪವಿಪಂಚಿಯಿಂಚರಮಾ | ಲಲನೆಯಕೆವಿಯೊಕ್ಕುದಿಲ್ಲ ||೯||

ತರಳಾಕ್ಷಿಯಚಿತ್ತವರಿದಾವೀಣಾ | ಗುರುವಸುದೇವಭೂವರನ ||
ಸುರುಚಿರಮಪ್ಪವಿದ್ಯಾಪೀಠದಮೇ | ಲಿರಿಸಿದನತಿಮುದದಿಂದ ||೧೦||

ಕಡುಸೊಗಯಿಸುವವಿಪಂಚಿಯತಂದಿಡ | ಲೊಡನಾತಂತಿಯಮಿಡಿದು ||
ನುಡಿಸಿನೋಡಿದೋಷಮಿಲ್ಲದವೀಣೆಯ | ತಡೆಯದೆತುದೀವುದೆನಲು ||೧೧||

ಸರಸತಿಪಿಡಿದುಜಾಜಿಸುವಾವೀಣೆಗೆ | ಸರಿಮಿಗಿಲಾದವೀಣೆಯನು ||
ತರಿಸಿಹತ್ತೆಂಬನಿರಿಸಲವರೊಳುಸುರು | ಚಿರಮಪ್ಪುದೊಂದುವೀಣೆಯನು ||೧೨||

ಪಿಡಿಯಲಾಚಾರ್ಯನಿಂತೆಂದನೆಲೇವಿಭು | ಕಡುಜತುರತೆಯಿಂದನೀನು ||
ಪಿಡಿದವೀಣೆಯಕುಲಮಾವುದುಪೇಳೆನೆ | ನುಡಿದನಿಂತೆಂದಾನೃಪತಿ ||೧೩||

ನುತಹಸ್ತಿನಾಖ್ಯಪುರದಮೇಘರಥಭೂ | ಪತಿಗೆಪದ್ಮಾವತಿಯೆಂಬ ||
ಸತಿಗೆ ಜನಿಸಿದರು ವಿಷ್ಣುಕುಮಾರನು | ದ್ಧತಪದ್ಮರಥನೆಂಬವರು ||೧೪||

ಆ ಸುತರೀರ್ವರು ಸಕಲಸಾಮಂತರು | ಭೂಸುರರುಗಳಮಧ್ಯದೊಳು ||
ವಾಸವಸಂತೆಹೊನ್ನುಪ್ಪರಿಗೆಯನೇರಿ | ಯೋಸರಿಸದೆಕುಳ್ಳಿರ್ದ ||೧೫||

ಮೇಘರಥಾವನಿಪಾಲನೊಂದಾನೊಂದು | ಮೇಘಲಕ್ಷ್ಮಣದರುಶನದಿ ||
ಈ ಘನದಿರವೀಸಂಸಾರದೇಳ್ಗೆಯು | ಮೋಘವೆಂದುಭಾವಿಸುತ ||೧೬||

ಕಿರಿಯತನುಜಪದ್ಮರಥಗೆ ಭೂಭಾರವ | ಹೊರಿಸಿ ತೃಣವಹರಿವಂತೆ ||
ಹೊರಗೊಳಗಾವರಿಸಿದಮೋಹಪಾಶವ | ಹರಿದನುಸಿಮುಷಮಾತ್ಮದೊಳು ||೧೭||

ತಂದೆಯೊಡನೆ ದೀಕ್ಷೆಯನುಧರಿಸಿಯಗ್ರ | ನಂದನವಿಷ್ಣುಕುಮಾರ ||
ಒಂದಿದತಪಬಿಂಬುದ್ಧಿಸಂಪನ್ನಿಕೆ | ಯಂದಳೆದಿರೆಬಳಿಕಿತ್ತ ||೧೮||

ಭೂಸುತಮಪ್ಪವಂತೀಜನಪದದು | ಜ್ಜೈನಿಯಾಪೊರಸಂದನದೊಳು ||
ಜೈನಮುನೀಶಸಕಂಪನೆಂಬೋರ್ವಮ | ಹಾನುಭಾವನುನಿಂದಿರಲು ||೧೯||

ಅಲ್ಲಿಗಾಪುರದವೃಷಭಸೇನನೆಂಬಭೂ | ವಲ್ಲಭಗೆಸೆವಮಂತ್ರಿಗಳು ||
ಬಲ್ಲಿದಬಲಿಬೃಹಸ್ಪತಿಶುಕ್ರರೆಂಬವ | ರುಲ್ಲಾಸದಿಂದೆಯ್ದಿದರು ||೨೦||

ಅವರುವಿಘ್ನಾಗಮಗರ್ವಶೈಲಾರೂಢ | ರವರಾಮುನಿವರರೊಡನೆ ||
ಅವಿವೇಕದಿಂವಾದವಮಾಡಿಬಳಿಕಸೋ | ಲವನಾಂತುಭಂಗವಡೆದರು ||೨೧||

ಇಂತುಭಂಗವಪಡೆದಾ ಬಲಿಯಾಮುನಿ | ಕಾಂತನಕೊಲಲುಜೇಕೆಂದು ||
ಅಂತಕಸಿಪಕೋಪನವರಿರ್ದ ನಂದನ | ಕಂತರಿಸದೆ ನಡೆತಂದು ||೨೨||

ಕರವಾಳಪಿಡಿದವರನು ಕೊಲ್ಲಲೆತ್ತಿದ | ಕರವನಾವನದೇವತೆಗಳು ||
ಪಿರಿದುಕೋಪದಿ ಕೀಲಿಸಿ ಮತ್ತವಗೆನಿ | ಷ್ಠುರಮಪ್ಪಬಾಧೆಮಾಡಿದರು ||೨೩||

ಆಬಲ್ಲಿತಪ್ಪಬಾಧೆಯತಾಳಲಾರದೆ | ಯಾಬಲಿಮೊರೆಯಿಡಲಾಗ ||
ಆಬಳಿಗಾಪೊಳಲರಸೆಯ್ದಿಬಂದು ಮ | ತ್ತಾಬಲಹೀನನಕಂಡು ||೨೪||

ವಿನಯಪೂರ್ವಕದಿ ನಾಷ್ಟಾಂಗಾನತನಾಗಿ | ಮುನಿಯಮುಖದಿ ಬಲಿಗಾದ ||
ಘನತರಮಪ್ರಸರ್ಗವಪಿಂಗಿಸಿ | ಮನುಜೇಶನಿಂತೆಂದನಾಗ ||೨೫||

ಯತಿರಾಜನನು ಕೊಲ್ಲು ವೆನೆಂದೆಣಿಕೆಮಾಡಿ | ದತಿದೋಷಿಗಳಿನ್ನು ನಮಗೆ ||
ಹಿತವರಲ್ಲೆಂದಾಬಲಿಶುಕ್ರನಾ ಬೃಹ | ಸ್ಪತಿಯಸೂರಿಂತಗುಳಿಸಿದ ||೨೬||

ಆವೊಳಲಿಂಭ್ರಷ್ಟರಾಗಿ ಬಂದಾಹಸ್ತಿ | ನಾವುರವರವನುಪೊಕ್ಕು ||
ಆ ಪದ್ಮರಥನಸಮ್ಮುಖದಿ ಮಂತ್ರಿತ್ವಮ | ನೇಪಡೆದುರೆ ಜಾಣ್ಮೆಯಿಂದ ||೨೭||

ಮತ್ತತಿಹಿತವರಾಗಿರಲಾನೃಪನಮೇ | ಲೆತ್ತಿಪ್ಪತ್ಯಂತಭೂವರರು ||
ಒತ್ತಂಬಿಸಲಾಬಲಿಯಾಬಿಸನನು | ಹೊತ್ತವರ್ಗಿದಿರಾಗಿಸಡೆದು ||೨೮||

ಮಂತ್ರಿಬಲದಿ ವೈರಿಭೂಪಾಲರತಳ | ತಂತ್ರಮನೆಲ್ಲವೋಡಿಸಲು ||
ಮಂತ್ರಿಬಲಿಗೆ ಪದ್ಮರಥವಿಭುವೆಚ್ಚಿದ | ತಾಂತ್ರಿಕರಣಶುದ್ಧಿಯೊಳು ||೨೯||

ವರಮಂತ್ರಿನಿನಗೆವೆಚ್ಚಿದೆ ನಿನ್ನಿಚ್ಛೆಯ | ನಿರದೀವೆ ಬೇಡಿಕೊಳ್ಳೆನಲು ||
ಧರಣಿಪ ನೀನೀವಮೆಚ್ಚು ಬಂಡಾರದೊ | ಳಿರಲೆಯೆಂದತಿಸುಖಮಿರಲು ||೩೦||

ಒಂದಾನೊಂದುದಿವಸ ಮತ್ತಾ ಊರ | ಮುಂದಣಸೌಮ್ಯಗಿರಿಯೊಳು ||
ಒಂದಾಗಿಯೈನೂರ್ವರುಮುನಿಗಳು ನಿಲೆ | ನಿಂದನಕಂಪಮುನೀಂದ್ರ ||೩೧||

ಧೃತಿಯಿಂದತನ್ನೊಳುಮಚ್ಚರಿಪಾಪ | ರ್ವತವನಿರದೆ ಮೆಟ್ಟಿದಂತೆ ||
ಯತಿನಿಕರದಮಧ್ಯದೊಳಗೆಯಕಂಪ | ವ್ರತಿಯೋಗನಿಸ್ಥೆಯೊಳಿರಲು ||೩೨||

ಹಿಂದೆತಾನವರೊಳುವಾದಿಸಿ ಸೋಲ್ತುದ | ರೊಂದುಪರಾಭವದಿಂದ ||
ಅಂದಾಮುನಿಗುಪಸರ್ಗವನೆಸಗುವೆ | ನೆಂದಾಬಲಿಯೆಣಿಸಿದನು ||೩೩||

ಅರಸಿನೆಡೆಗೆಬಂದು ಬಂಡಾರದೊಳುನಾ | ನಿರಿಸಿದಮೆಚ್ಚೀವುದೆನಲು ||
ಧರದಿಂಬೇಡುಕೊಡುವೆನೆನಲೇಳುವಾ | ಸರದೊಡೆತನವ ಬೇಡಿದನು ||೩೪||

ಕೊಡೆನೆಂಬೆರಡಕ್ಕರಮನರಿಯನಾಗಿ | ಕಡುಚಾಗಿಯಾಯೇಳುದಿನದ ||
ಒಡೆತನವನುಕೊಟ್ಟುತಾನರಮನೆಯೊಳ | ಗಡಗಿದನಿಳೆಪೊಗಳ್ವಂತೆ ||೩೫||

ಅರಸುತನವಪಡೆದಾಬಲಿಯಾವನು | ವರಗೆ ಬಾಧೆಯಮಾಳ್ಪೆನೆಂದು ||
ಧರಣಿಯೊಳುಳ್ಳಧರಾಮರರೆಲ್ಲರ | ಕರಸಿದನತಿವೇಗದೊಳು ||೩೬||

ಹೋಮಕರ್ಮಭೂಸುರಭೋಜನಮುಮ | ನಾಮಹೀಧರದಗುಹೆಯೊಳು ||
ಪ್ರೇಮದಿ ಮಾಡಬೇಕೆಂದು ಮತ್ತಾಮಂತ್ರಿ | ಯಾಮಹೀಸುರರ್ಗುಸುರಿದನು ||

ದಂಡಶ್ರಯಧಾರಿಗಳದೀಕ್ಷಿತರಪ್ಪ | ಚಂಡವಾದಿಗಳವಟುಗಳ ||
ಮಂಡಳಿನೆರೆದಾತನುಬೆಸಸಿದುದಕ್ಕೆ | ಕೊಂಡೆಸಗಿದುದತಿಘರದಿ ||೩೮||

ವರಮುನಿಗಳುನಿಂದಿರ್ದಾಸೌಮ್ಯಭೂ | ಧರದಗುಹೆಯುಬಾಗಿಲೊಳು ||
ಉರುತರಮಪ್ಪಕರ್ಮದಿಕೋಟಿಹೋಮವ | ವಿರಚಿಸಿದರುಬಿಸ್ಸಣದಿ ||೩೯||

ಆರೆಯೆಡೆಪಶುಮಾರಣವರೆಯೆಡೆಹೋಮ | ವರೆಯೆಡೆಭೋಜನದಡುಗೆ ||
ಹರವರಿಯಾಗಲುರಿವಕೆಚ್ಚಿನಿಂದಾ | ಗಿರಿಯೊಲೆಕಲ್ಲವೊಲಾಯ್ತು ||೪೦||

ಉರಿದುವುಮರನೊಡೆದುವುಕೋಡುಂಗಲ್ಲು | ಕರಿದುವಲ್ಲಿಯಕಮ್ಮರಿಗಳು ||
ಹುರಿಯೋಡಿಸಂತಾದುದುನೆಲನಾಗಿರಿ | ವರದೊಳೇಳುವಕೆಚ್ಚಿನಿಂದ ||೪೧||

ಹರಿವಿರಿಂಚಿಗಳಹೋರಟೆಯಿಂದಾ ಉಗ್ರ | ದುರಿಲಿಂಗವಾದಂದದೊಳು ||
ದುರುಳಸವನುಮಾಡಿಸುವಹೋಮದುರಿಯಿಂ | ಕರವೊಪ್ಪಿತಾಸೌಮ್ಯತಿಖಿ ||೪೨||

ಆ ಉರಿಹೊಗೆಯುನಡುವೆಯುಪಶವುಪೆಂ | ಬಾವೊರತೆಯುನಿರ್ಮಳಾಂಬು ||
ತೀವಿತಮ್ಮಂಗವುನಂತದರಿಂದಮು | ತ್ತಾಮುನಿಗಳುಜೀವಿಸಿದರು ||೪೩||

ಮುತ್ತಿದಕೆಮ್ಮುಗಿಲೊಳುತಾರೆಗೂಡಿತ | ಳತ್ತಳಿಸುವಜಂದ್ರನಂತೆ ||
ಹೊತ್ತುವಶಿಖಿಯೊಳುಮುನಿಕುಲದೊಡನೆಸ | ದ್ವೃತ್ತಸಕಂಪನೊಪ್ಪಿರಲು ||೪೪||

ಅಲ್ಲಿಗೆಬಡಗಸಹಸ್ರಯೋಜನದೂರ | ದಲ್ಲಿಯೊಂದಾನೊಂದುಗಿರಿಯ ||
ಬಲ್ಲಿತುವಡೆದೊಂದುಗವಿಯೊಳುಮನಸಿಜ | ಮಲ್ಲನವಧಿಬೋಧಯುತನು ||೪೫||

ಕ್ಷಿತಿನುತಸುಗ್ರೀವನೆಂಬಹೆಸರಯತಿ | ಪತಿಯಾರಾತ್ರಿಯೊಳೇಳ್ದ ||
ಯತಿಯುಪಸರ್ಗಕಂಬರತಳದೊಳಗದು | ಭುತಮಾಗಿನೆರೆಕಂಪಿಸುವ ||೪೬||

ಶ್ರವಣನಕ್ಷತ್ರವಕಂಡಿದೇತಕ್ಕೆಂ | ದವಧಿಬೋಧದಿನಾಮುನಿಗೆ ||
ವಿವಿಧೋಪಸರ್ಗಮಪ್ಪುದನರಿದೊಡವೆಕೆ | ಟ್ಟವರಂತೆಮಲುಮಲಮರುಗಿ ||೪೭||

ಅಯ್ಯಯ್ಯೋಕಡುಪಾತಕಬಲುಗೊಲೆ | ಗಯ್ಯುವಾರ್ವನುಬಾಧಿಸುವ ||
ನಾಯಮಿಗಳಬಾಧೆಯನುಬಾರಿಪಬಲು | ಗಯ್ಯತಕಾಣೆನೆಂಬಾಗ ||೪೮||

ನೆರೆದಶಿಷ್ಯರುಗಳಮಧ್ಯದೊಳೋರ್ವನು | ಬರಚತಸಪ್ತ ಬ್ರಹ್ಮಚಾರಿ ||
ಕರಯುಗಲವಮುಗಿದಿಂತೆಂದನೆಲೆಮುನಿ | ವರಕೇಳುನಾನೀಗಲೆಯ್ದಿ ||೪೯||

ಅತಿಭರದಿಂದಾಬಲಿಗಾಜ್ಞೆಯನಿಕ್ಕಿ | ಯತಿಪತಿಗಳಬಾಧೆಯನು ||
ಕ್ಷಿತಿಯರಿವಂತೆಮಾಣಿಸಿಬಪ್ಪೆನೆನಲಾ | ವ್ರತಿಕುಲತಿಲಕನಿಂತೆಂದ ||೫೦||

ವ್ಯಕಯುತರೀಕ್ಷಮವನುಭಾವಿಸುವುದು | ಮತವಲ್ಲವೆಂದಾಖಗನ ||
ಅತಿಕೋಪವನುತಂಬಿಸಿಯಾಸುಗ್ರೀವ | ಯತಿಯಾಗುಹೆಯಮೂಲೆಯೊಳು ||೫೧||

ಮಲಗಿರ್ದಾವಿಷ್ಣುವುನಿಯಕರೆದುನೀ | ವಲಸದೆನಡೆದಾಯತಿಗೆ ||
ಬಲಿವಾಡುವುಪಸರ್ಗವನುಬಿಡಿಸಿಯೆನೆ | ಸುಲಲಿತಬುದ್ಧಿಸಂಯುತನು ||೫೨||

ಅಂತೆಗೆಯ್ವೆನೆಂದಾನಿಜಗುರುಯತಿ | ಕಾಂತಗೆನಮಿಸಿಬೀಳ್ಕೊಂಡು ||
ಅಂತರಿಸದೆಹಸ್ತಿನಪುರಕೆಯ್ದಿಭೂ | ಕಾಂತನುತನ್ನನುಜಾತ ||೫೩||

ವಿತರಣಗುಣಿಪದ್ಮರಥನಡೆಗೆಯ್ದಿ ಕಂ | ಡತಿಭಕ್ತಿಭರದಿಂದೇಳ್ದ ||
ನತಿಸಿದೊಡಾತನಹರಸಲೊಲ್ಲದೆಯಪ | ಗತರಾಗಯುತಮುಖರಾಗಿ || ||೫೪||

ವೀತರಾಗಾಸನವನು ತಂದಿರಿಸಿದೊ | ಡೇತಕೆನಮುಗಿದೆಂದೆನುತ ||
ಆ ತಾಪಸಿಯಿಂತೆಂದುನುಡಿದನಾ | ಭೂತಳಪತಿ ಪದ್ಮರಥಗೆ ||೫೫||

ಅರಸನಾದುದಕಿದುಕುರುಹೇಯಾಮುನಿ | ವರಗಾದುಷ್ಟನಮುಖದಿ ||
ಪಿಡಪ್ಪುಪಸರ್ಗವನು ಮಾಡಿಸಿ ಬಲು | ರವಡರ್ದಂದದಿನಿಹುದು ||೫೬||

ಅನುಚಿತವೆಂಬುದನರಿಯಬೇಡವೆಯೆಂಬ | ಮುನಿವಚನವನಕೇಳುತವೆ ||
ಮುನಿಸುದಳೆದುಗದ್ದುಗೆಹೊಯ್ದುನನಗೀ | ಘನತರಮಪ್ಪವಾಪವನು ||೫೭||

ಮಾಡಿಕೊಡುವವಾತಕಿಯುತಲೆಯುಸೆಂ | ಡಾಡುವೆನೆಂದೇಳುವಾಗ |
ಬೇಡನೃಪತಿನಿಷ್ಠುರಮುಂಚೆನೀವೇಳ | ನೋಡದೆಕೊಟ್ಟುದಕೀಗ ||೫೮||

ಅಳಿಪಿದನೆಂಬಪಕೀರ್ತಿಯದೇಕಾ | ಖಳಗೆನಾನಾಜ್ಞೆಯಿಕ್ಕುವುದ ||
ಇಳೆಯಾಧಿಪತಿನೀನೋಡೆಂದಾಯತಿ | ಕುಲತಿಲಕನು ನಡೆತಂದು ||೫೯||

ವುತವರವೆಲ್ಲನಿರೆದು ಬೆನ್ನ ಬಿಡದೆಯ | ಚ್ಚರಿವಟ್ಟನೋಡುತಬರಲು ||
ಧರಿಯಿಸಿಪಂಚಮುತಾಳೋತ್ಸೇಧದ | ವರವಾಮನರೂಪವನು ||೬೦||

ರನ್ನದಕುಂಡಲದಿಂದರ್ಪಿಯಿಂಪೊಸ | ಪೊನ್ನುಂಗುರದಿ ಮುಂಜಿಯಿಂದ ||
ಜನ್ನಿವಾರವಿಶಿಖಿಯಿಂಧೋತ್ರದಿಂಕಡು | ಚೆನ್ನುಹಡೆವನಡೆತಂದು ||೬೧||

ಎಳೆಯಮಾಣಿಕದಬೊಂಬೆಯೊಪವಳದ ಪು | ತ್ಥಳಿಯೊಯೆಂಬವೊಳ್ಕೆಯೊಳು ||
ವಿಲಸಿತಮಪ್ಪ ವಾವಾಮನರೂಪವನಾತು | ಬಲಿಯೆಡೆಗೆಯ್ತಂದನಾಗ ||೬೨||

ಸ್ವೆಸ್ತಿವಿನುತಭೂಸುರಬಲಿನಿರ್ವಿಘ್ನ | ಮಸ್ತುಸುರಭಿದಾನಿಯೆಂದು ||
ಕುಸ್ತರಿಸಿದಮಾಣಿಗೆಮಣಿದಮಣಿ | ಮಸ್ತಕವನುಬಾಗಿಸಿದನು ||೬೩||

ಹರಸಿದಗುಜ್ಜಹಾರುವನಾಕಾರಕೆ | ಪಿಡಿದು ವಿಸ್ಮಯಚಿತ್ತನಾಗಿ ||
ಸರಸದಿನೆಲೆವಟುಬೀಡು ನಿನ್ನಿಚ್ಛೆಯ | ಭರವಿಂಸಲಿಸುವೆನೆನಲು ||೬೪||

ದಿನಚರಿನಾವುಕುಳ್ಳಿರ್ದನುಷ್ಠಾನವ | ಸನುಗೆಯ್ವೊಡೆಮ್ಮ ಹೆಜ್ಜೆಯೊಳು ||
ಅನುರಾಗದಿಂ ಮೂರಡಿಭೂಮಿಯನೀವು | ದೆನೆ ಬಲಿಯಿಂತೆಂದನಾಗ ||೬೫||

ಘನತರವನ್ನುವಬೇಡದೆಯಲ್ಪವ | ಮನಮಿತ್ತು ಬೇಡಿವೆಯೆನ್ನ ||
ಎನುತಜೇಡಿದುದನುಕೊಟ್ಟೆನಕೆದುಕೊ | ಳ್ಳೆನಲಾಪ್ಸಾವದೊಳು ||೬೬||

ಒಲಿಯನುಜಾತಭಾರ್ಗವನು ಬಂದೀವಟು | ಸಲೆಯಟಮಟಿಗನಿಂತಿವಗೆ ||
ನೆಲನಕುಡುವುದನುಚಿತಮೆಂದು ಮುಂದಡ್ಡ | ನಿಲುತಮತ್ಯಾಗ್ರಹಗೆಯ್ವೆ ||೬೭||

ಏಕೆ ದಾನಕೆ ಕಂಟಕನಾಗುವೆಯೆಂದು | ನೂಕುವಸಮಯದೊಳವನ ||
ಆಕೈಯದರ್ಭೆಯಮೊನೆತಾಕಿಕಣ್ಣೊಡೆ | ದೇಕಾಕ್ಷನಾದನಾಶುಕ್ರ ||೬೮||

ಬಳಿಕ ಮೂರಡಿನೆಲವನು ಕೊಟ್ಟೆನೆಲೆವಾಣಿ | ಯಳೆಯೆಂದು ಧಾರೆಯನೆರೆಯೆ ||
ಒಲಿನೋಡುನೀನಿಕ್ಕಭೂಮಿಯನಳೆವೆನು | ತಳುವದೆಂದಾವಾಮನನು ||೬೯||

ಉರದುದ್ದ ಕೊರಲುದ್ದತಲೆಯುದ್ದ ಮುಡಿಲುದ್ದ | ಮರದುದ್ದವಾಮುಗಿಲುದ್ದ ||
ಮರುತಮಾರ್ಗದುದ್ದಮಾಗಿಸೋಳ್ಪವರಿಗ | ಚ್ಛರಿಯಾಗುವಂತೆ ಬೆಳೆದನು ||೭೦||

ಆಕಾಶಕೇಶನೊಳೇಕಾಂತವಮಾಡ | ಬೇಕೆಂದು ನಿಗಡಿಬೆಳೆದನೊ ||
ನಾಕವನಿಲುಕಿನೋಡುವೆನೆಂದು ಬೆಳೆದನೊ | ಆಕೌತುಕದವಾಮನನು ||೭೧||

ವರಮಣಿಮಕುಟಕುಂಡಲಕೌಸ್ತುಭರತ್ನ | ಕರಕಂಜನಾಭನಳಿಸದ ||
ದೊರೆಯಾದುದಿನಬಿಂಬವಾವಿಷ್ಣುಗಗನಕ್ಕೆ | ಪರಿವಡಿಯಿಂಬೆಳೆವಾಗ ||೭೨||

ಅಂಬರಪರಿಯಂತ ಬೆಳೆದತ್ರಿವಿಕ್ರಮ | ನಿಂಬುವಡೆದ ನಿಜಮುಖಕೆ ||
ತುಂಬುದಿಂಗಳು ಸಮ್ಮುಖವೊಳುನಿಜಮುಕು | ರಂಬೋಲುಕಣ್ಗೆಡ್ಡವಾಯ್ತು ||

ಉಡಿಯಮೇಲಿಟ್ಟಮೇಖಲೆಯ ಕಿರುಕಿಣಿಗಳ | ಪಡಿಯಾಗಿ ವಿಗಿರಂಜಿಸಿದುವು ||
ಉಡುನಿಕುರುಂಬವಂಬರದತಲವುಮುಟ್ಟಿ | ಕಡುಬೆಳೆದಾತ್ರಿವಿಕ್ರಮನ ||೭೪||

ಈತೆರದಿಂದಬೆಳೆದುದೊಂದುಕಾಲನಿ | ಳಾತಳಕಿಟ್ಟೊಂದುಕಾಲ ||
ಆತರಣಿಯಸೆಂಡಸೊದೆವಂದದಿ ವಿ | ಖ್ಯಾತನೊದೆದನಂಬರಕೆ ||೭೫||

ಕಡಲಮಧ್ಯದ ಭೂಮಿಯನೆಲ್ಲವನೊಂ | ದಡಿಮಾಡಿಯಾಗಸವೆಂಬ ||
ಕೊಡೆಗೆಮತ್ತೊಂದುಕಾಲನು ಕಾವನುಮಾಡಿ | ನಡುಗಿಸಿದನು ಭೂತಳವನು||೭೬||

ಇದು ತಾರಾಸುಮನೋಮಂಜರಿತರು | ವಿದುಚಂದ್ರದೀಪದಕಂಬ ||
ಇದು ಸುರನದಿಗಿಟ್ಟ ಕಾಲುವೆಯೆನಲೊಪ್ಪಿ | ದುದುತ್ರಿವಿಕ್ರಮನಕ್ರಮವು ||೭೭||
ಗಗನವೆಂದೆಂಬ ಗೂಡಾರಕಿಕ್ಕಿದಕಂಬ | ಮುಗಿಲೆಂಬ ಭೂಮಂಡಲವ ||
ನೆಗಪಿದ ಪಂಚಫಣಾಶೇಷನವೊಲು | ಸೊಗೆಯಿಸಿದುದು ವಿಷ್ಣುಪಾದ ||೭೮||
ಧರೆಯನಡುವೆನಿಂದು ಮಾನುಷೋತ್ತರಗಿರಿ | ಗಿರಿಸಿತಿರುಗುವ ವಿಷ್ಣುವಿನ ||
ಚರಣವೊಪ್ಪಿತು ಬಿದಿನೆಲನನಿರ್ಮಿಸುವಂದು | ತಿರುಹುವಕವೆಯುರದಂತೆ ||೭೯||
ನರಲೋಕದನಭದೊಳಗೆಡಬಿಡನಿಲ್ಲ | ದಿರಿಸಿತಿರುವುತಿರಲಾಗ ||
ಸುರಪನೇರಿದಸಿಹ್ಮಾಸನವದಿರಲು | ಸುರಸಮಿತಿಯಕೂಡಿಕೊಂಡು ||೮೦||
ಇರದೆಂಟುಸಗ್ಗದಿಂದ್ರರುಜೋಯಿಸರಾ | ಉರಗೇಂದ್ರವ್ಯಂತರಾದಿಗಳ ||
ಬೆರಸಿಬಂದಾನಭದೊಳು ತಿರುಗುವವಿಷ್ಣು | ಚರಣವನಂದರ್ಚಿಸಿದನು ||೮೧||
ದೇವರದೇವನೆ ಜಯಜಯಜಯವೆಂಬ | ದೇವರ್ಕಳುಲುಹಸುಕೇಳಿ ||
ಭೂವಲಯಮದೆಲ್ಲಪಿರಿದಚ್ಚರಿವಟ್ಟು | ತಾಮಿಳೆಯೊಳುಬೊಜಿಸಿದುದು ||೮೨||
ಬಳಿಕಬಲಾರಿಕೈಗಳನು ಮುಗಿದುಮುನಿ | ಕುಲತಿಲಕನವಿಗುರ್ವಣೆಯ ||
ತಳುವದೆ ಬಿಡಿಸಿಯಾಬಲಿಯನು ಬಂಧನ | ದೊಳಗಿರಿಸ.ವಸಮಯದೊಳು ||೮೩||
ಹರುಷದಿಗಾಂಧರ್ವರಾವಿಷ್ಣುವಮುಂದೆ | ಕರಕುಶಲದಿಬಾಜಿಸಿದರು ||
ವರಗಾಂಧಾರಿಸುಘೋಷಣೆಯೆಂಬಾ | ಯೆರಡುವಿಪಂಚಿಯತಂದು ||೮೪||
ಆವಿಷ್ಣುಮುನಿಪನ ಬೆಸದಿಂಗಾಂಧರ್ವ | ರಾವೀಣೆಯನುಭಯವನು ||
ಆವಸುಧಾಧರ ಪದ್ಮರಥಗೆಕೊಟ್ಟು | ತಾವೆಯ್ದಿದರು ತಮ್ಮನೆಲೆಗೆ ||೮೫||
ಅನಿತರೊಳಾಮುನಿಯ.ಉಪಸರ್ಗವನುವಿಷ್ಣು | ಮುನಿಪ ಬಿಡಿಸಿಯಾಬಲಿಗೆ ||
ಜನನುತರತ್ನತ್ರಯವನುಕೊಟ್ಟು ಮ | ತ್ತನುರಾಗದಿಂದೆಯ್ದಿದನು ||೮೬||
ಆ ವಂಶದವೀಣೆಯಿದುತಾನೆಂದು ಮ | ತ್ತಾವೀಣೆಯನೆದೆಗಿಟ್ಟು ||
ಕೋವಿದವಸುದೇವನೃಪತಿಬಾಚಿಸಿದನು | ಭಾವಕಿ ಮೆಚ್ಚುವಂದದೊಳು ||೮೭||
ಅವನುಡಿಯಿಸುವನುಪಂಚಿಯನಾದಕೆ | ಯವನವಿಲಾಸದುನ್ನತಕೆ ||
ತವೆಸೋಲ್ತುಬಂದು ಮಾಲೆಯನುಸೂಡಿದಳಾ | ಯುವತೀಮಣಿ ಹರುಷದೊಳು ||
ತನ್ನ ಕೈಗಾತನಕೊರಲಿಗೆ ಸಂಕಲೆ | ಯಂ ನೆರೆಹೂಡುವಂದದೊಳು ||
ಚೆನ್ನೆಮಾಲೆಯಸೂಡೆ ಚಾರುದತ್ತನುಕಂ | ಡುನ್ನತಹರುಷವಡೆದನು ||೮೮||

ಹಸನಾದಂದಿನರಾತ್ರಿಯೊಳತಿಸಂ | ತಸದಿಂದಿಳಿಪೊಗಳ್ವಂತೆ ||
ವಸುದೇವಗೆ ಗಾಂಧರ್ವದತ್ತೆಯನಿತ್ತ | ಸಸದೃಶವೈಭವದಿಂದ ||೧೦||

ಇಂತು ಮಡುವೆಯಾಗಿ ಗಾಂಧರ್ವದತ್ತಾ | ಕಾಂತೆಯೊಡನೆ ಭೂವರನು ||
ಸಂತಸಸಮರತಿಯೊಳು ಮನಸಿಜನಿ | ರ್ಪಂತೆಯೊಲಿದುಸುಖಮಿಹನು ||೧೧||

ನೋಟದೊಳಲಸಿಕೆಯಕ್ಕರೊಳುಕ್ಕುವ | ಬೇಟದೊಳಗೆ ಭಿನ್ನಮನಸು ||
ಕೂಟದೊಳಗೆ ದಣಿನನುಪೊರ್ದುದಾಸತಿ | ನಾಟಿಸಿದಳು ತನ್ನೊಳವನ ||೧೨||

ಮೇರುಮಹೀಧರ ಸಮಧೀರ ಮನುಜಮಂ | ದಾರಮನೋಜಾತರೂಪ ||
ಕಾರುಣ್ಯನಿಧಿಕಾಂತಾಜನಹೃದಯ | ಕ್ಷೀರವಾರಾಶಿಚಂದ್ರಮನು ||೧೩||

ಇದು ಜಿನಪದಸರಸಿಜ ಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿ ನೇಮಿಜಿನೇಶ ಸಂಗತಿಯೊಳ | ಗೊದವಿದಾಶ್ವಾಸ ಪನ್ನೊಂದು ||೧೪||

ಹನ್ನೊಂದನೆಯ ಸಂಧಿ ಸಂಪೂರ್ಣಂ

೧೨ ರೋಹಿಣೀ ಸ್ವಯಂವರ ಸಂಧಿ

ಶ್ರೀಮದಮರಪತಿಮೌಲಿಕೀಲಿತಪಾದ | ತಾಮರಸದ್ವಯನಜಗೆ ||
ಕಾಮಮದೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತೆರಗುವೆನು ||೧||

ಒಸೆದಾರಾಜಮಿಥುನವೆರಡಂಗಕೆ | ಯಸುವೊಂದಹುದೆಂದದೊಳು ||
ನಸುತೊಲಗದೆ ಸಮರತಿಕೇಳಿಯೊಳು ಸಂ | ತಸದಿ ಸುಖಿಸುತಿರಲಂದು ||೨||

ಅವರುದ್ಧತಮೋಹನದಮನಕೆಯುಬ್ಬು | ಗವಳವನಿಕ್ಕುವಂದದೊಳು ||
ನವಚೈತ್ರಮಾಸಮೊದವೆವನಕೇಳಿಗೆ | ವಿವಿಧಸಿಭವದಿನೆಯ್ದಿದರು ||೩||

ಕೃತಕಗಿರಿಯನೇರಿ ಕೃತ್ರಿಮನದಿಗೆಯ್ದಿ | ಲತೆವನಗಳೊಳುಕುಳ್ಳಿರ್ದು ||
ಶತಸತಾಕರದೊಳು ಮೂಡಿಮುಳ್ಕಾಡಿ | ಯತಿವಿನೋದದೊಳಿರ್ದರಲ್ಲಿ ||೪||

ಕರ್ಪೂರತರುವನದೊಳುಪನಿನೀರ್ಗಳ | ಕಾಳ್ಪೂರದೊಳುನುಂಗೊನರ ||
ಸೀರ್ಪನಿಯೊಳಗಾತಾಜಮಿಥುನವತಿ | ಕೂರ್ಪಿಂತಿರುಗಿಯಾಡಿದುದು ||೫||

ಮುತ್ತೊಂದುಮಲ್ಲಿಗೆಯೆಳೆಲತೆವನೆಯೊಳು | ವೃತ್ತಪಯೋಧರೆಯೊಡನೆ ||
ಚಿತ್ತಜಕೇಳಿಯೊಳೊರಗಿರ್ದಾ ಭೂ | ಪೋತ್ತಮನಲ್ಲಿಂಪೆಳ್ದು ||೬||

ಸುರತಾಂತಶಾಂತಿಯನಾರಿಸಲೆಂದು | ಬರುತಿದಿರೊಳು ಸೊಂಪುವಡೆದ ||
ತರುಣಜೂತದ ತನ್ನೆಳಲೊಳಗೋರ್ವಳು | ತರಳಾಕ್ಷಿನಟಿಸಿದಳಿಂತು ||೭||

ತಾಳದಂಡಿಗೆಯಾವುಜವಾಸದುರುಮೆಯ | ಕಾಳೆಮದ್ದಳೆ ಕಿನ್ನರಿಯ ||
ಲೋಲತಾಕ್ಷಿಯರುನರ್ತಿನೆನಿಂಬ ನಾರಿಯ | ಮೇಳಕೆನಿಂದರಾಬಳಿಯ ||೮||

ಕಿರಿಯಮುಗಿಲ ಮರೆಯೊಕ್ಕಿಂದುಲೇಖೆಯ | ತೆರದಿತೆರೆಯ ಹೊಕ್ಕಬಲೆಯ ||
ಮಿರುಗುವರೂಪ ನೋಡುವೆನೆಂದಾರಾಯ | ನೊರಗಿದನೊಂದೆಳಲತೆಯ ||೯||

ಉಗುರಬೆಳಗುಗೂಡಿಸೂಸೆವೂವಲಿಯನು | ತೆಗೆಯಲಾಳಿಯರು ತೆರೆಯನು ||
ಮುಗುದೆಜಾರದ ಸಂಜೆಯರೋಹಿಣಿಯನು | ಮಿಗೆಗೆಲ್ದಳೀನೆಂಬೆನದನು ||೧೦||

ಕಳೆದತೆರೆಯಮುಂದೆಬಂದು ನಿಂದಾವಾತ್ರ | ದಳವುರಂಭೆಯ ಭಾವಚಿತ್ರ ||
ಎಳಸಿನಿರೀಕ್ಷಿಸುವಾರಸಿಕರನೇತ್ರ | ಗಳದೊಂದು ಜನ್ಮಪವಿತ್ರ ||೧೧||

ಅಸಿಯಳಾಟದೊಳಭಿನಯಿಪಕರಾಂಗುಲಿ | ಯೆಸಕದಿಂದಾಶಶಿಮೌಳಿ ||
ನೊಸಲನಯನದಿಂದುರುಪಲುಮೈಯಳಿ | ದಸಮಾಸ್ತ್ರಗೆಮೆರುಜವಳಿ ||೧೨||

ಅಳ್ಕಿಕಾರರಕಣ್ಮನಕೆ ಸಂಮೋಹನ | ಮೂರ್ತಿಮದನಮಂಡಳಿಕನ ||
ಕೀರ್ತಿಯೆಂದೆನೆರಂಜಿಸುವಾ ವಧುವಿನ | ನರ್ತನವಾರ್ಗಸಮಾನ ||೧೩||

ಹಲುಬುವಮುಗಿಲಮೆಲ್ಲುಲಿಗೆ ಸಂತಸದೊಳು | ನಲಿವಸವಿಲಮಾಳ್ಕೆಯೊಳು ||
ಉಲಿವಮದ್ದಳೆಯ ಜತಿಗೆಯುರುಮುದದೊಳು | ಲಲನಾಮಣಿ ನಟಿಸಿದಳು ||೧೪||

ಸೊಗಯಿಪಶುದ್ಧಮಲ್ಲದಿಯವಗುಣಗಳು | ಹೊಗದಿಹತಾಳವಟ್ಟದೊಳು ||
ಬಗೆಗೊಳಿಪೈದುವಾದ್ಯದ ಸಂದಣಿಯೊಳು | ಬಗಸೆಗಣ್ಣಬಲೆಯಾಡಿದಳು ||೧೫||

ವನಿತೆಗೊದವಿದುದು ಹಾವವದನದೊಳು | ಮಿನುಗುವ ಭಾವಚಿತ್ರದೊಳು ||
ವಿನುತವಿಲಾಸವತಾಯತಲೋಚನಗಳೊ | ಳ್ಕೊಸೆವುರ್ವಿನೊಳು ವಿಭ್ರಮಗಳು ||೧೬||

ಧಾರಿಣಿಗತಿವಿನ್ನಾಣಿಯುಂಗಜಸೂತ್ರ | ಧಾರಿಯುಕೈಯ ವಿಚಿತ್ರ ||
ಚಾರುಲಾವಣ್ಯಸುಧಾಂಬು ಪೂರಿತಗಾತ್ರ | ವಾರಿಜವದನೆಯ ಪಾತ್ರ ||೧೭||

ಸತಿಯರಕುಲಮಣಿಯಾಡುವ ನರ್ತನ | ಯತಿಗಳ ಧೈರ್ಯಾಪಹರಣ ||
ಚತುರಜನಾನೀಕ ಚಿತ್ತಾಕರ್ಷಣ | ನುತಶೃಂಗಾರೋದ್ಧರಣ ||೧೮||

ಎರಲಿಗಲುಗುವತಮಾಲಲತಿಕೆಯೋ | ತೆರೆಗಲುಗುವ ಕುಮುದಿನಿಯೋ ||
ನೊರೆವಮುಗಿಲ್ಗೆ ಕುಣಿವನವಿಲೋ ಯೆಂದು | ಕರಿಯಳ ನಡೆನೋಡಿದನು ||೧೯||

ಕಾವನಕೈಯಕಿರಿಯ ಕಬ್ಬಿನಬಿಲ್ಲೋ ಲೀ | ಕಾವನೇರುವ ಮದಕರಿಯೋ ||
ಕಾವನರ್ಚಿಪನೀಲದಬೊಂಬೆಯೊಯೆಂ | ದಾವನಿತೆಯ ನೋಡಿದನು ||೨೦||

ನಗೆಮಿನುಗುವಮುದ್ದುಮೊಗವ ತುಂಬಿದವೈಯ | ಹೊಗರನೇಳಿಪನೀಲಿಗುರುಳ ||
ಮೃಗಮದವರ್ಣದ ಮೈಯಕೋನುಲೆಮಿಗೆ | ಬಗೆಯಬಂಧನವ ಮಾಡಿದಳು ||

ನೀಲಕರಂಡಕವೋ ಕುಚವೋಕ | ರ್ವಾಳಿಯಕಂಬವೊ ತೊಡೆಯೋ ||
ತೋಳೋ ಮದನಕೃಷ್ಣಪಂಚಫಣಾಹಿಯೋ | ಬಾಲೆಯೊ ಮನಸಿಜಗಜವೋ ||

ಎಂದುನೋಡುತ್ತೀ ಕುಸುಮಕೋಮಲೆಯಾರ | ನಂದನೆಯೆನಲಾಸತಿಯು ||
ಒಂದಾಗಿರ್ದವಳಿವಳು ಚಾಂಡಾಳಿಕೆ | ಯೆಂದುಪೇಳಲು ವಸುದೇವ ||೨೩||

ಇದುಚಿತ್ರವಿಲಾಚಾಂಡಾಳಿಕೆಗೀರೂಪು | ವಿವಿತವಿಲಾಸವೆಂಬಾಗ ||
ಮದನಸದೃಶರೂಪನನೊಲವಿನೋಡಿ | ಪದುರೆಮೂರ್ಛೆಯನೆಯ್ದಿದಳು ||೨೪||

ಅನಿತರೊಳಾಸಹಜರಿಯರು ಮರುಕದಿ | ಘನಶೈತ್ಯೋಪಚಾರವನು ||
ವನಿತೆಗೆಮಾಡುತಿರಲು ಬಂದುಕಂಡಾ | ವನಜಾಕ್ಷಿಗಾಂಧರ್ವದತ್ತೆ ||೨೫||

ಅತಿಮಮತೆಯೊಳುನೀನಿವಳನು ನೋಳ್ಪುದು | ಮತವಲ್ಲಕಹಿಸೋರೆಯೊಳಗೆ ||
ಹಿತವುಂಟಿಯೆಂದು ಪತಿಯಪಿಡಿದೆಳೆದಳು | ರತಿಯತಸುವನೆಳೆವಂತೆ ||೨೬||

ಆಂತೊಯ್ದು ಪ್ರಣಯಕಲಹಕಲುಷಿತೆಯಾಗಿ | ಕಾಂತನೊಳವಳಿರಲಿತ್ತ ||
ಸಂತಸದಿಂ ಕೃತ್ರಿಮಚಾಂಡಾಳಿಕೆ | ಯಂತಂದಬಿಜ್ಜಾದರಿಯರು ||೨೭||

ಆದೇಶಪುರುಷನು ದೊರಕಿದನೇಳಿಂ | ದಾದರಹಸಿತಾನನೆಯ ||
ಸಾದರದಿಂತಮ್ಮ ಪುರಕೆಯ್ದಿ ಸಿಯಪ | ಳ್ಗಾದವಸ್ಥೆಗಳೆಲ್ಲವನು ||೨೮||

ತರುಣಿಯಪಿತೃಸಿಹ್ಮನಾದಖೇಚರನೊಳ | ಗಿರದೆನಿವೇದಿಸಲಾಗ ||
ಹರುಷದಿವೈತಾಳಿಯೆಂಬ ದೇವತೆಯನು | ಕರೆದುಕಾರಣ ಪುರುಷನನು ||೨೯||

ತರಹೇಳಲದು ಚಂಪಾಪುರವರಕೆಯ್ದಿ | ಭರದಿಂ ವಸುದೇವನನು ||
ಗರುವೆಗಾಂಧರ್ವದತ್ತೆಯಕೂಡಿ ನಿದ್ರೆಯೊ | ಳಿರಲೆತ್ತಿತಂದಾಕ್ಷಣದೊಳು ||೩೦||

ಅವಿಜಯಾರ್ಧದ ಮೇಘಪುರಕೆತರ | ಲಾವಸುಧಾವಲ್ಲಭನು ||
ಕೋವಿದಗಿದಿರ್ವಂದು ಕೊಂಡೊಯ್ದು ಹರುಷದಿ | ಭಾವೆಯಮದುವೆಮಾಡಿದನು ||

ಇಂತುನೀಲಾಂಜನೆಯೊಳು ಮದುವೆಯನಿಂದು | ಕಂತುಸದೃಶ ವಸುದೇವ ||
ಸಂತಸದಿಂರತಿಸುಖದೊಳ್ಮೀಲಾಡಿನಿ | ಶ್ಚಿಂತದಿಕೆಲದಿನಮಿರ್ದು ||೩೨||

ಭೂವಲಯಕ್ಕವತರಿಸುವೆನೆಂದಾ | ಮಾವನೊಳುಸುರಲುಕೇಳ್ದು ||
ಸಾವಧಾನದಿಪರ್ಣಲಘುವಿದ್ಯೆಯಿಂ ವಸು | ದೇವನನಿಳೆಗಿಳುಹಿದನು ||೩೩||

ಈತೆರದಿಂಬಿಜ್ಜಾದರನಾಡಿಂ | ಭೂತಳಕಿರದೆಯ್ತಂದು ||
ಪ್ರೀತಿಯಿಂ ಭೂಚರಖೇಚರನೃಪತನು | ಜಾತೆಯರತಿಜತುರೆಯರ ||೩೪||

ಕೆಲಬರನಾಗಾಂಧರ್ವವಿವಾಹದಿ | ಕೆಲಬರನಾದೇಶಮುಖದಿ ||
ಕೆಲಬರನಾಸ್ವಯಂವರದಿಂದಾನೃಪ | ತಿಲಕಸುವರಿಸಿದನೊಸೆದು ||೩೫||

ಇಂತೇಳುನೂರತೊಂಬತ್ತೇಣ್ಪರು ಭೂ | ಕಾಂತಸುತೆಯರ ಸ್ವೀಕರಿಸಿ ||
ಸಂತಸದಿಂ ಕೆಲಪಗಲುಮತ್ತಲ್ಲಲ್ಲಿ | ಕಂತುಸುಖವನನುಭವಿಸಿ ||೩೬||

ಅವರನವನತಂದೆತಾಯ್ಗಳ ಬಳಿಯೊಳು | ಸುವಿನಯದಿಂದಿರಿಸುತವೆ ||
ಶುವರನರಿಷ್ಟಪುರದಪೊರಗೊಪ್ಪುವ | ನವನಂದನಕೆಯ್ದಿದನು ||೩೭||

ಆನಗರಿಯೊಳು ಹಿರಣ್ಯಾಕ್ಷನೆಂಬೋರ್ವ | ಭೂನಾಥನ್ನನಾತನವನಿತೆ ||
ಭೂಸುತೆಗುಣವತಿಯವರೀರ್ವರಿಗೋರ್ವ | ಮಾನಿನಿಜನಿಸಿಯೊಪ್ಪಿದಳು ||೩೮||

ರೋಹಿಣಿಯೆಂಬವಳಾಕೆಯ ರೂಪಿಗೆ | ಊಹಿಸಿನೋಡಲು ರತಿಯ ||
ರೂಹಪರಂಜಿಯತಗಡಿಗೆಕರ್ಬೊನ್ನ | ನೂಹಿಸಿನೋಡುವಂತಿಹುದು ||೩೯||

ಅತ್ರಿಭುವನಸೌಂದರ್ಯಸಂಕೇತಧ | ರಿತ್ರಿಯನಾ ಕೋಮಲೆಯ ||
ಧಾತ್ರಿಪರಾರುಬೇಡಲು ಕೊಡದಾಹೇಮ | ನೇತ್ರಸ್ವಯಂವರಗೈಹವ ||೪೦||

ವಿರಚಿಸಲಲ್ಲಿಗೆ ಸಾಗರವಿಜಯಭೂ | ವರಮೊದಲಾದರಸುಗಳು ||
ನೆರೆದುಕುಳ್ಳಿರಲಾಯೆಡೆಗಾ ವಸುದೇವ | ನುರುಮುದದಿಂದೆಯ್ದಿದನು ||೪೧||

ಪೋಗಿಸ್ವಯಂವರ ಮಂಟಪವನು ಸಾನು | ರಾಗದಿಹೊಕ್ಕುಮತ್ತಲ್ಲಿ ||
ಆಗರುವೆಯನುಬಯಸಿ ಕುಳ್ಳಿರ್ದಾ | ಭೂಗಧಿಪರಕಂಡನಾಗ ||೪೨||

ಆಯೆಡೆಯೊಳುವಾದಿಸುವ ವಾದಕಸಂಪ್ರ | ದಾಯದೊಳ್ಪೋರ್ವವಾದಕನು ||
ಒಯ್ಯಾರದಿಂಬಾಜಿಪವಾದ್ಯವನು ವಿ | ಡಾಯಕಾರನೀಸಿಕೊಂಡು ||೪೩||

ಆವಾದ್ಯವ ತನ್ನ ಕೊರಲೊಳಗಿಟ್ಟುನಾ | ನಾವಿಧನುಮಾಗಿ ಬಾಜಿಸುವ ||
ಆವಾದ್ಯದಧ್ವನಿಗಾವಾದ್ಯಕಾರರು | ತಾವತಿಚೋದ್ಯವಡೆದರು ||೪೪||

ಅಪದದೊಳಗಲರ್ವಿಲ್ಲಬಲ್ಲಹಬಹು | ರೂಪುವಡೆದ ಮಾಳ್ಕೆಯೊಳು ||
ಭೂಪಾಲಸಂತತಿಕುಳ್ಳಿರಲವರ ಮ | ತ್ತಾಪೆಣ್ಮಣಿನೋಡಿದಳು ||೪೫||

ಅವರೊಳುತನ್ನ ಮನಕೆ ತಕ್ಕಲಾವಣ್ಯ | ನವಯವಸಗಂಡಗಾಡಿ ||
ಭುವನಾತಿಶಯ ರೂಪಯುತರಿಲ್ಲದಿರಲಾ | ಯುವತೀಮಣಿಮುಂದಕೆಯ್ದಿ ||೪೬||

ನಟನೆವಿಗಲುನಡೆನೋಳ್ಪನೃ ಪರನಟ || ವಿಟರಕಂಡಂತೆ ಕೊಕ್ಕರಿಸಿ ||
ಚಟುಲಜಕೋರಲೋಚನೆ ಕಂಡಳಾನಿ | ಷ್ಕುಟಿಲಕುಮಾರಚಂದ್ರಮನ ||೪೭||

ತುಂಬಿಕುಳ್ಳಿರ್ದಕುಮಾರಕರುಗಳ ವಿ | ಡಂಬಿಸಿ ಬಿಸರುಹನಯನೆ ||
ಮುಂಬರಿದೀಕ್ಷಿಸಿ ಸಲೆಸೋಲ್ತಳಾ ರವಿ | ಬಿಂಬಸದೃಶತೇಜಯುತಗೆ ||೪೮||

ಅತಿರೂಪಯುತವೆಂದೆನಿಪವನೀಶ್ವರ | ಸುತರತಿರಸ್ಕಾರಮಾಡಿ ||
ನುತಸತ್ಯವಾಣಿ ನಡೆದುಬಂದಳಾಕಡು | ಚತುರಚತುರ್ಮುಖನೆಡೆಗೆ ||೪೯||

ರನ್ನಗನ್ನಡಿಯನೇಳಿಪವದನದ ಹೊಸ | ಹೊನ್ನಕಳಸಕುಚಯುಗದ ||
ಚಿನ್ನದಚಿತ್ರದಂದದಿನಾಪೆಣ್ಮಣಿ | ಸನ್ನುತನೆಡೆಗೆಯ್ದಿದಳು ||೫೦||

ನಿಡುಗಣ್ಗಳ ನಿಬಿಡಸ್ತನಗಳಪಿಡಿ | ನಡುವಿನ ಪೀಲಿದುರುಬಿನ ||
ಕಡುಚೆಲ್ವುವಡೆದ ಸೊಬಗುಗಂತಿಮೆಲ್ಲನೆ | ನಡೆಶಂದಳಾ ನೃಪನೆಡೆಗೆ ||೫೧||

ಮೊತ್ತದಮಾನ್ನೆಯರುಗಳ ಧೈರ್ಯಂಗಳ | ನೆತ್ತರತತ್ತದಮಾಡಿ ||
ಚಿತ್ತವನಿತ್ತು ನೂತನಲಕ್ಷ್ಮಿಯಾ ಪುರು | ಷೋತ್ತಮಗತಿಸೋಲ್ತಳಾಗ ||೫೨||

ರೂಢಿಸಿದವನೀಶ್ವರರರೂಪವನು ರೋ | ಡಾಡಿಕನಕಲಲಿತಾಂಗಿ ||
ಗಾಡಿಯಿಂದಾ ಭೂಪಾಲವಸುತಗೆ | ನೂಡಿದಳಲರಮಾಲೆಯನು ||೫೩||

ರಾಜಾಧಿರಾಜಕದಂಬವ ಬಿಸುಟಾ | ರಾಜಶೇಖರಗೆ ನೂಡಿದಳು ||
ಓಜೆಯಿಂದಾ ಅಭಿನವಪಾರ್ವತಿ ಪ | ಭ್ರಾಜಿಸುವಲರ ಮಾಲೆಯನು ||೫೪||

ಭೂಲೋಕಾಧಿಪರರ್ದಂತೆ ವಾದಕ | ಗಾಲೋಲಾಕ್ಷಿಯೊಲಿದಳು ||
ಬಾಲೆಯರೊಲಿದೊಡೆ ಮೊರೆಜಾತಿಯೆಂಬುದ | ನಾಳೋಚನೆಮಾಳ್ಪದಿಲ್ಲ ||೫೫||

ಇದರಿಂದಿಳೆಯೊಳಗಪಕೀರ್ತಿಯೊದವುವು | ದಿದರಿಂದಕೇಡುದಯವುದು ||
ಇದರಂಕುಲಹಾನಿಯೆಂಬುದರಿಯರೊಲ್ಮೆ | ಗೆದೆಯ ನಿತ್ತೇಣಾಕ್ಷಿಯರು ||೫೬||

ಮೇಲುತಾಗೆಂಬುದನೇನೆಂದರಿಯರು | ಕಾಲೋಚಿತಪಭಾಪಸರು ||
ಸೋಲವಸೊಗಸೆದೆಯೊಳಗಾವರಿಸಿದ | ಲೋಲಾಕ್ಷಿಯರಿಳೆಯೊಳಗೆ ||೫೭||

ಮೋಹೋನ್ಮತ್ತದಫಲವು ಮೈದಾಗಿದ | ಮೋಹಿಗಳೆದಿರನೀಕ್ಷಿಸರು ||
ಈಹದಿಂಕೇಡುನಮಗಪ್ಪದೆಂಬುದ | ನಾಹೆಗಿನಿಸು ತಂದರಿಯರು ||೫೮||

ಮೋಹಿಮುಗಾಣ್ಬುದಿಲ್ಲೆಬಾನಾಣ್ಮಡಿ | ಈ ಹೆಣ್ಣಿಂತೆರೆದರ್ಶನವೂ ||
ಆಹಾ ಕಡುಚೆನ್ನಾಯಿತ್ತೆಂದನು | ತಾಹಿರಣ್ಯಾಕ್ಷನು ಬಗೆದು ||೫೯||

ಒಂದಿದಚಿಂತೆಯಿಂದೆಯ್ತಂದಾ ನವ | ಕಂದರ್ಪ ವಸುದೇವನೆಸೆವ ||
ಸುಂದರತೆಯನೋಡಿ ಈತನುತ್ತಮಜಾತಿ | ಯೆಂದಾಮೋದವನೆಯ್ದಿ ||೬೦||

ಆವನಜಲ್ವಕೆಯನವನಲಾವಣ್ಯವ | ನವನುತ್ತಮಯೌವನವ ||
ಅವನಗರುವತನವನು ಕಂಡಾಭೂ | ಧವನತಿ ಸಂತಸವಡೆದು ||೬೧||

ಬಳಿಕಾದಂಪತಿಗಳ ರತ್ನಮಯರಥ | ದೊಳಗೆಕುಳ್ಳಿರಿಸಿ ಸಂಮುದದಿ ||
ಪೊಳಲೊಳಪೊಸೆವುತ್ತಿನಭೂಪಾಲಸಂ | ಕುಲಮೆಲ್ಲಮಂತದನರಿದು ||೬೨||

ಅಂತರಮಪ್ಪಜಪತಿಗೆ ಮಾಲೆಯನಾ | ಕಾಂತೆ ಸೂಡುವುದನುಚಿತವು ||
ಇಂತಿದನಾವು ವಿಚಾರಿಸದೊಡೆದೋ | ಷಂತಪ್ಪದು ನಮಗೆಂದು ||೬೩||

ಚರನನೋರ್ವನನುಕರೆದು ಹೇಮಾಕ್ಷಭೂ | ವರನಲ್ಲಿಗಟ್ಟಲಂತವನು ||
ಭರದಿಂಪೋಗಿಯಿಂತೆಂದಾಡಿದನು ನಿ | ಷ್ಠುರತರವಚನಗಳಿಂದ ||೬೪||

ರಾಜಸುತೆಯನು ತಜ್ಜಾತಿಗೆಕುಡುವುದೊಂ | ದೋಜೆಯ ವಿಾರಿದುಷ್ಕುಲದ ||
ಬಾಜನೆಕಾರಗೆಕುಡುವುದುಚಿತವೆಯೆಂ | ದಾಜನಪತಿಗಳಟ್ಟಿದರು ||೬೫||

ನೆರೆದನೃಪರೊಳಣುಗೆಯನಾರ್ಗೀವೆನೆಂ | ದರಸಸಂದೆಗ ಮಾಡಬೇಡ ||
ದುರಗಲಿಯರ್ಧಚಕ್ರೇಶಜರಾಸಂಧ | ಗುರುಮುದದಿಂದೀವುದೆನಲು ||೬೬||

ಇಂತೆಂಬ ಚರನಮಾತನುಕೇಳಿಯಾಕ್ರೋ | ಧಾಂತಕನಾ ವಸುದೇವ ||
ಮಂತಣಮೇಕಿನ್ನು ನಿಮುಷಮಾತ್ರದೊಳಾ | ತಿಂತಿಣಿಗೊಂಡ ಭೂವರರ ||೬೭||

ನೆಲಹೊರದಂತಪ್ಪ ಜಲವನುನೆಲದೊಳ | ಗಲಸದೆ ನೆರಪಿಯಂತಕಗೆ ||
ನೆಲೆಯಾಗಿಯಳಿತಣವನು ಮೂಡದಿರ್ದೊಡೆ | ಪುಲುವಾನಿಸಮಾತೈಸೆ ||೬೮||

ಬಾಜನೆಕಾರನಾನಹುದೆನಗಿದಿರಾಗಿ | ಯಾಜಿರಂಗದೊಳೆನ್ನ ಗೆಲಿದು ||
ಈ ಜಲಜಾಕ್ಷಿಯ ಕೊಂಡೊಯ್ದಡೆ ತಾವು | ರಾಜರ ಬಸಿರ ಬಂದವರು ||೬೯||

ಎಂದು ನುಡಿದು ದೂತನ ಬೀಳ್ಕೊಟ್ಟಾ | ಕಂದರ್ಪರೂಪನನ್ನೋಡಿ ||
ಸಂದೇಹವ ಬಿಟ್ಟು ಹೇಮಾಕ್ಷನೃಪವರ | ನಂದುಕಲಹಕುಜ್ಜುಗಿಸಿದ ||೭೦||

ಚರನನುಡಿಯನಿತ್ತಕೇಳಿ ನೃಪಾಲಕ | ರುರುಕೋಪಾರೂಢರಾಗಿ ||
ಭರದಿಂದೆಯ್ತಂದೆಡೆಯಿಲ್ಲದಂತಾ | ಪುರವಮುತ್ತಿದರು ಮೂವಳಸಿ ||೭೧||

ಆ ನಗರಿಯ ಧೂಳಿಗೋಂಟೆಯ ಕೊಳಲೆಂ | ದಾನಾಡನಾಡಮನ್ನೆಯರು ||
ಆನದೆ ಬಂದು ಮುತ್ತಿದರಾರ್ಭಟಿಯಿಂ | ಜೀನೆಯ್ದಿ ಮುಸುಕುವಂದದೊಳು ||೭೨||

ಆವೇಳೆಯೊಳು ಹಿರಣ್ಯಾಕ್ಷನಾವಸು | ದೇವಸಹಿತ ಬಲವೆರಸಿ ||
ತೀವಿದ ಕೋಪಾಟೋಪದಿಂದವೆ ತನ್ನ | ಊರನೆಪೊರಮಟ್ಟನಾಗ ||೭೩||

ಇಂತು ಪೊಳಲಪೊರಮಟ್ಟಾಬಲವ ಕಂ | ಡಂತಕನಾ ಒಹುರೂಪ ||
ತಾಂ ತಳೆದಂದದಿ ಕಡುಮುಳಿದಾನೃಪ | ಸಂತತಿಯಾರುತೇರಿದುದು ||೭೪||

ತಬ್ಬಿಬ್ಬಿಗೊಂಬ ಹಿರಣ್ಯಾಕ್ಷನ ಪೌಜಿ | ನುಬ್ಬೆಯಕಂಡು ಕೋಪದೊಳು ||
ಗಬ್ಬಿಗಳರಸನು ವಸುದೇವನಿದಿರಾಗಿ | ಕೊಬ್ಬಿರಿದಾಗಲೇರಿದನು ||೭೫||

ಗಂಡರಗಂಡಸುದ್ದಂಡನೊಂದೇಬಿಲ್ಲು | ಗೊಂಡಾಗನಾಸಮನ್ನೆಯರ ||
ಮಂಡಳಿಸಿದ ಮೋಹರವ ಹೊಕ್ಕನು ಹಸು | ವಿಂಡ ಹೆಬ್ಬುಲಿ ಹೊಕ್ಕಂತೆ ||೭೬||

ಎಕ್ಕತೂಳದ ಬಂಟನಾವಸುದೇವನು | ಕಕ್ಕಸದಿಂದಿದಿರಾದ ||
ಲೆಕ್ಕವಿಲ್ಲದ ಮುನ್ನೆಯರ ಮೋಹರವನು | ಹೊಕ್ಕು ಸಂಹಾರಮಾಡಿದನು ||೭೭||

ಕಲಿಗಳರಸನೆಚ್ಚ ಕಣೆಗಳೊಂದೊಂದು ಮಾ | ರ್ಮಲೆವ ಮನ್ನೆಯರ ಮೋಹರದ ||
ಪಲವಾನೆಕುದುರೆ ಕೂರಾಳು ತೇರುಗಳನು | ನೆಲಕಿಕ್ಕಿದನು ನಿಮುಷದೊಳು ||೭೮||

ಉಳುಕದೆ ನಿಂದತಿರಥರೆಸುವಾ ಕಣೆ | ಗಳನಾಬಿಲ್ಲನಾರಥವ ||
ತಳುವದೆಕಡಿದು ಭಂಗಿಸಿದನವನ ಕೈಯ | ಚಳಕವನೇನಬಣ್ಣಿಪೆನು ||೭೯||

ಅರೆಬರ ನೆಲಕಿಕ್ಕಿಯರೆಬರ ಬೆದರಿಸಿ | ಯರೆಬರ ನೋಡಿಸಿ ಬಳಿಕ ||
ಅರಿಯರೆನಿಪರಾಯರ ಪೌಜಿನೊಳು ಚಾರಿ | ವರಿದಾಡಿದನಾಸುಭಟ ||೭೦||

ಬೀರಿತೋಡಿತು ಬೀರಾಳ್ವತಿ ಹಯದೊಡ್ಡ | ಮುರಿದುದಾನೆಯ ಬಲುಪೌಜು ||
ಹೆರೆಸಾರಿತು ತೇರತಟ್ಟುತಟ್ಟಾದುದು | ನರೆಗಲಿಯೆಸುವುರವಣೆಗೆ ||೭೧||

ಎಲ್ಲಿಯಮಾರಿಯ ಬರಿಯಚಿವುಟಿ ಮ | ತ್ತೆಲ್ಲಿಯ ಬಲುಮಿಳ್ತ್ರವಿನ ||
ಹಲ್ಲಟೆಗಾಡಿದೆವೆನುತೊಲ್ಲೈಸಿತು | ಬಲ್ಲಿದನೃಪನಿಕುರುಂಬ ||೭೨||

ಮಾಳವ ಮಗಧಕಳಿಂಗಗುಜ್ಜರ ನೇ | ಪಾಳ ಕೊಂಕಣಪಾಂಚಾಳ ||
ಜೋಳತೆಲುಂಗಭೂಭುಜರವನೆಸುಗೆಯ | ತಾಳಲಾರದೆ ತೊಲಗಿದರು ||೭೩||

ಹರೆಗಾರಸಲ್ಲಿವನಿರಿಗಾರನೆನುತವೆ | ಬೆರಗಾಗಿ ನಾಡಮನ್ನೆಯರು ||
ಗರಿಮೂಡಿದಂತೆ ಬೆಳ್ಕೆರಲೆಗೆ ನಿಮುಷದಿ | ಬಿರಿತೋಡಿದರು ದಶದಿಶೆಗೆ ||೭೪||

ಅದನರಿದರ್ಧಚಕ್ರೇಶ ಜರಾಸಂಧ | ನಿದುಹರಿವಂಶಾಗ್ರಗಣ್ಯ ||
ಅಧಟಸಂಬುಧಿವಿಜಯಂಗಲ್ಲದಾಗದೆಂ | ಬುದಕೇಳಿ ಕೆಕ್ಕಳಗೆರಳಿ ||೭೫||

ವಿಜಿಗೀಷು ವಸುದೇವನೆಸುಗೆಗೆ ಸಕಲಭೂ | ಭುಜರೆಲ್ಲ ಹೆರಸಾರಲಾಗ ||
ನಿಜಗಲಿತನದಿಂದಿದಿರಾಗೆ ಸಾಗದ | ವಿಜಯನೆಕ್ಕಟಿಗಲಿನಿಂದ ||೭೬||

ಕದುಬಿತನ್ನೊಳು ಕಾದಲೆಂದು ರಥವ ಸಾರ್ದು | ತಿದಿರಾದ ಭಟನಿವನಾರು ||
ಅದಿರದೆನುತ ಪೆ ಚ್ಚುತಾವಸುದೇವನು | ದೊದವಿಶರವತೆಗೆದೆಚ್ಚ ||೭೭||

ಶರಧಿವಿಜಯನೆಚ್ಚ ಕಣೆವಸುದೇವನ | ಶಿರದಮೇಲಾವಸುದೇವ ||
ನಿರದೆಚ್ಚ ಶರವು ಸಾಗರವಿಜಯನ ಚಾರು | ಚರಣದೊಳೆರಗುತಮಿರಲು ||೭೮||

ಅರುಭಟಿಯೊಳಾನೆಚ್ಚ ದಿವ್ಯಾಸ್ತ್ರಗ | ಳಾರೈಯದೆನಗಿದಿರಾದ ||
ವೀರನ ಮೃದುವಾದ ತಳಕೆರಗುವುದೇನು | ಕಾರಣಮಿವನಾರೆಂದು ||೭೯||

ಸಾರಥಿಯನು ಕೇಳಲವನಿಂತೆಂದನೀ | ಧೀರನು ಹರಿಕುಲತಿಲಕ ||
ಮೇರುಸದೃಶಧೀರನಂತಕನಿಭ ಕೋಪ | ವಾರಿಧಿವಿಜಯಭೂವರನು ||೯೦||

ಎಂದ ನುಡಿಯ ಕೇಳುತಾವಸುದೇವನು | ಮುಂದೇತರಫೇರುವಾಗಿ ||
ಇಂದು ಸೋದರನೊಳು ಕಾದುವಪಾತಕ | ವೊಂದಿತೆನಗೆ ಪಾಪವಶವಿ ||೯೧||

ಎಂದು ಬಿಲ್ಲಂಬುಗಳನುಬಿಟ್ಟು ಸುಮ್ಮನೆ | ನಿಂದಿರ್ದಾಸಾಹಸಿಯೊಳು ||
ಕುಂದಲ್ಲವೆರಣದೊಳುಕೈದುಬಿಸುಡುವು | ದೆಂದಸಾರಥಿಗಿಂತುನುಡಿದ ||೯೨||

ಹಿರಿಯಣ್ಣನೊಳು ಮುಂದರಿಯದೆ ರಣದೊಳು | ಹಿರಿದುಹೋರಿದೆನೆಂದೆಸುತ ||
ರವನೆಲ್ಲವನು ತಿಳಿಯಪೇಳುತಿಂತೆಂದ | ಕರುಣಹೃದಯ ವಸುದೇವ ||೯೩||

ಸಾದರದಿಂದಾನೆಯ್ದುವ ಬರವನಿ | ವೇದಿಸು ಮುಂದೆ ನೀವೋಗಿ ||
ಸೋದರನೊಳಗೆಂದು ಕಳುಹಲಾ ಸಾರಥಿ | ವೋದನು ತಾನಾತನೆಡೆಗೆ ||೯೪||

ವೋಗಿ ಸಾಗರವಿಜಯನ ಪಾದಕೆ ತಲೆ | ವಾಗಿ ತ್ವದೀಯಾನುಜಾತ ||
ಆ ಗಂಡುಗಲಿ ವಸುದೇವನು ನಿಮಗಿದಿ | ರಾಗಲಣ್ಮದೆ ಬಿಲ್ಲಬಿಸುಟು ||೯೫||

ನಿಮ್ಮಡಿಗೆರಗಲು ಬರುತಿರ್ದಪನೆನೆ | ಗಮ್ಮನೆ ಬಿಲ್ಲನೀಡಾಡಿ ||
ತಮ್ಮ ನಿರವಪೇಳಲು ತೊಟ್ಟತೊಡವನು | ಸಮ್ಮದದಿಂ ಕೊಟ್ಟಸವಗೆ ||೯೬||

ಅನಿತರೊಳಾವಸುದೇವನು ರಥದಿಂ | ದಸುರಾಗದಿಂದಿಳೆತಂದು ||
ಮಿನುಗುವ ಮುಕುಟಮಣಿಯಸಣ್ಣನ ಪಾದ | ವನಜಮೂಲದೊಳಿಕ್ಕಿದನು ||೯೭||

ಇಂತು ವಿನಯವಿನಮಿತನಾದ ತಮ್ಮನ | ಸಂತಸದಿಂಬಿಗಿಯಪ್ಪಿ ||
ಕಂತುಸಗೃಹ ಹರಿವಂಶಭಾಸುವೆ ನೀ | ನಿಂತಿನ್ನ ಜಿಟ್ಟಿಯ್ದುವರೆ ||೯೮||

ದೇಸಿಗನಾಗಿ ಈತೆರದಿನೋರ್ವನೆ ಪರ | ದೇಶಕೆ ವೋಪುದುಚಿತವೆ ||
ದೇಶಾಧಿಪತ್ಯವ ಬಿಟ್ಟಿಂದಾಭೂ | ಮಾಶ ಕಣ್ಣೀರಿಡುವಾಗ ||೯೯||

ಹರುಷದಿನಕ್ಷೋಭ ಮೊದಲಾದಣ್ಣಂ | ದಿರು ಬರಲಾಗವರಡಿಗೆ ||
ಸುರದಲೆಯಿಕ್ಕಲಂತವರಿರದಮರ್ದಪ್ಪಿ | ಹರಸಿದರತಿಹಿತದಿಂದ ||೧೦೦||

ಬಳಿಕ ಹಿರಣ್ಯಾಕ್ಷನಂತದನರಿದಾ | ಜಲಧಿವಿಜಯನೆಡೆಗೈದಿ ||
ತಳೆದನು ಕಡುಹರುಷವನತಿದಾರಿದ್ರ | ನೆಳಸಿ ನಿಧಿಯಪಡೆವಂತೆ ||೧೦೧||

ಶರಧಿವಿಜಯಭೂವರನನುಜಾತನು | ವರರೂಪಯುತವಸುದೇವ ||
ದುರಗಲಿಯೆಂಬುದನರಿದು ನೆರೆದಭೂ | ವರರೆಲ್ಲ ಹರುಷವೆಯ್ದಿದರು ||೧೦೨||

ಮತ್ತೆ ಹಿರಣ್ಯಾಕ್ಷನಬ್ಧಿವಿಜಯಭೂ | ಪೋತ್ಕಂಸನುಸಹಮಾಗಿ ||
ಪತ್ಕಸವನು ಪೊಕ್ಕತಿವೈಭವದಿಂ | ದುತ್ಕಮಮಪ್ಪ ಲಗ್ನದೊಳು ||೧೦೩||

ನೆರೆದ ನರೇಂದ್ರರೆಲ್ಲರು ದಿಬ್ಬಣಿಗರಾಗೆ | ಧರೆಯೆಲ್ಲ ಕೊಂಡಾಡುವಂತೆ ||
ವರಸುತೆ ರೋಹಿಣಿಯನು ವಸುದೇವಭೂ | ವರಗೆ ಮದುವೆಮಾಡಿದನು ||೧೦೪||

ಮದುವೆಯುಮಾಡಿವಭೂವರರನು ಸಂ | ಮದದಿನಿರಿಸಿಕೊಂಡು ಬಳಿಕ ||
ಉದಧಿವಿಜಯಭೂಪಾಲನಸತಿಯಿನ | ಯದೊಳೂರಿಗೆ ಕಳುಹಿದನು ||೧೦೫||

ಅಣ್ಣನಸುಜ್ಞೆಯೊಳುಳಿದಾ ವಸುದೇವ | ಹೆಣ್ಣುಕುಲಕೆ ಮಾಣಿಕದ ||
ಕಣ್ಣಬೆಳಂತಿಗೆಬೆಳಗೆಂಬ ಬಲೆಯೊಳು | ಬಣ್ಣಿಸಲೇನು ಸಿಕ್ಕಿದನು ||೧೦೬||

ಕುಸುಮಸುಗಂಧಿಯಕುಮುದಾಕ್ಷಿಯಬಂದುಗೆ|ಯೆಸಳ್ವಾಯಿದಿರೆಯಕೋಮಲೆಯ ||
ಮಿಸುನಿದಾವರೆವೊಗ್ಗೆವೊಲೆಯೊಳವಸದಿಟ್ಟ | ಹಸುಳೆದುಂಬಿಯೊಲೆರಗಿದುವು ||

ಇಂತಿರುತೊಂದು ರಾತ್ರಿಯೊಳಾವಿಭು ನಿ | ಶ್ಚಿಂತದೊಳಾ ಸತಿಯೊಡನೆ ||
ಸಂತಸವಿಂ ನಿದ್ರೆಯೊಳಿರೆಖೇಚರ | ಕಾಂತೆಯೋರ್ವಳೆಯ್ತಂದು ||೧೦೮||

ಉರುಮುದದಿಂದೆತ್ತಿಕೊಂಡು ವಿಮಾನದೊ | ಳಿರಿಸಿ ತಮ್ಮಾನಂದಪುರದ ||
ವರಸಂದನದೊಳಗಿರಿಸಲಪಳಪತ್ಯ | ಮರುತವೇಗಗೆ ಸೂಚಿಸಲು ||೧೦೯||

ಕರಮೊಳ್ಳಿತೆಂದವಸಿದಿರ್ವಂದ- ಕಾರಣ | ಪುರುಷನ ಪುರಕೆಯ್ತಂದು ||
ತರಳಲೋಚನೆ ಚಂದ್ರಲೇಖೆಯನತ್ಯಾ | ದರದಿಂದ ಮದುವೆಮಾಡಿದನು ||೧೧೦||

ಆ ಚಂದ್ರಲೇಖೆಯೊಳೊಲವಿಂ ಕುಸುಮನಾ | ರಾಚಸದೃಶನಿರ್ದುಬಳಿಕ ||
ಭೂಚಕ್ರಕೆ ಪೋಪೆನೆಂದಾನೃಪನೊಳು | ಸೂಚಿಸಲವನದಕೇಳಿ ||೧೧೧||

ಅದುಲೇಸೆಂದು ನಂದನಗುಡುವಲಿಗೊಟ್ಟು | ಒಡವೆದವೈಭವದಿಂದ ||
ಸದವುಲರೂಪಯುತನನು ಕಳುಹಿದನು | ವುದದಿಂದಾಖೇಚರನು ||೧೧೨||

ಪಡಪಿಂದೆಯಿದ್ದುಯರಿಷ್ಟನಗರಿಗಾ | ಸುದತಿ ರೋಹಿಣಿಯೊಡಗೂಡಿ ||
ಮೊದಲುಮದುವೆಯಾದ ಖೇಚರಭೂಚರ | ಮುದವತಿಯರನೆಲ್ಲರನು ||೧೧೩||

ಇಂದುವದನೆ ಚಂದ್ರಲೇಖೆಯ ವಿದ್ಯೆಗ | ಳಿಂದ ಕರೆಯಲಟ್ಟಲವರು ||
ಒಂಧಿದಹರುಷದಿನಾನಗರಿಯ ಪೊರ | ನಂದನಕಿತ್ತಿದೆಯ್ದಿದರು ||೧೧೪||

ಕಾಮಧೇನುವು ಕರೆವಂದನಿತಸುಜೆಗೆ | ಪ್ರೇವ.ದಿನುಡುವಲಿಗೊಟ್ಟು ||
ಹೇಮಾಕ್ಷಕಳುಹೆ ಮತ್ತಾರೋಹಿಣಿಗೂಡಿ | ಯಾ ಮಹಿಮನು ಪೊರಮಟ್ಟ

ಇಷ್ಟವಲ್ಲಭೆಯರೆಲ್ಲರುಗೂಡಿ ನಡೆದನ । ರಿಷ್ಟಪುರವಪೊರಮಟ್ಟು ॥
ಸಪ್ಪಾರಾತಿ ಕುಮಾರಚಂದ್ರಮನು ಪ । ಶಿಷ್ಟವಿಭವದಿನೆಯ್ದಿದನು ॥೧೧೬॥
ಸುರಪತಿಕಪ್ಪವ ಕಳುಹಿದಸಗ್ಗದ । ತರುಣಿಯರೆಂಬ ಮಾಳ್ಕೆಯೊಳು ॥
ಮರುತಮಾರ್ಗದೊಳು ವಿಮಾನವನೇರಿ ಬೇ । ಗರಕಾಂತೆಯರೆಯ್ದಿದರು ॥೧೧೭॥

ದೆಸೆವೆಣ್ಗಳಾಕುವರನ ರೂಪಿಗೆ ಮನ । ವೊಸೆದೆಯ್ದುವತೆರನಾಗಿ ॥
ಅಸವಸದಿಂದಬಂದರು ದಿಕ್ಕುದಿಕ್ಕಿನ । ವಸುಧಾಧಿಪನಂದನೆಯರು ॥೧೧೮॥

ರತಿಬಹುರೂಪವಡೆದು ಮನಸಿಜನೊಳ । ಗತಿಮುದದಿಂಬರ್ಪಂತೆ ॥
ಕ್ಷಿತಿಪನೊಡನೆ ಶೌರೀಪುರಕಾನೃಪ । ಸುತೆಯರೆಲ್ಲರು ಬಂದರಾಗ ॥೧೧೯॥

ಪುರದೊಳಗಷ್ಟಶೋಭೆಯನಬ್ಧಿನಿಜಯಭೂ । ವರನು ಮಾಡಿಸಿಯಿದಿರ್ವಂದು ॥
ಚರಣಕೆರಗಿದನುಜಾತನಬಿಗಿಯಪ್ಪಿ । ಹರುಷವೊದವಿಹರಸಿದನು ॥೧೨೦॥

ಬಳಿಕಕ್ರೌಷ್ಟ್ರಿಭನು ಮೊದಲಾದಗ್ರಜ । ರೊಳುವಿನಮಿಸಿ ಹರಕೆಯನು ॥
ತಳೆದವರೊಡಗೂಡಿ ಶೌರೀಪುರವರ । ದೊಳಹೊಕ್ಕನಾವಸುದೇವ ॥೧೨೧॥

ಈತೆರದಿಂದೂರ ಹೊಕ್ಕರಮನೆಗೆಯ್ದಿ । ಯಾತರಳಾಕ್ಷಿ ರೋಹಿಣಿಗೆ ॥
ಪ್ರೀತಿಯಿಂದವೆ ಪಟ್ಟವಕಟ್ಟಿ ಸುಖದಿಂ । ದಾತುಳಿಲಾಳೊಪ್ಪಿದನು ॥೧೨೨॥

ಪಲವುನಕ್ಷತ್ರಕಾಂತೆಯರೊಳು ಚಂದ್ರಮ । ನೊಲವಿನಿರ್ಕೂಡುವಂದದೊಳು ॥
ಲಲನೆಯರೊಡಗೂಡಿ ಯಾವಸುದೇವನು । ಸಲೆಸಃಖದೊಳಗಿರುತಿರ್ದ ॥೧೨೩॥

ಅಭಿನವಾಂಗಜನತಿಚತುರಕಲಾನ್ವಿತ । ಶುಭಗುಣಗಣಭೂಷಿತನು ॥
ತ್ರಿಭುವನೈಕನಾತಸಿರಂಜಿಸಿದನಾ । ಪ್ರಭುಕುಲಮಣಿದೀಪಕನು ॥೧೨೪॥

ಇದುಜಿನಪದಸರಸಿಜಮದಮಧುಕರ । ಚದುರಮಂಗರಸರಚಿಸಿದ ॥
ಮದನಾರಿನೇಮಿಜಿನೇಶಚರಿತೆಯೊಳ । ಗೊದವಿದಾಶ್ವಾಸ ಹನ್ನೆರಡು ॥೧೨೫॥

ಹನ್ನೆರಡನೆಯ ಸಂಧಿ ಸಂಪೂರ್ಣಂ

೧೩. ಕಂಸಪ್ರಸಂಗ ಸಂಧಿ

ಅಂಗಜವಿಜಯನುಕ್ತ್ಯಂಗನೆಯಧಿಪಭು | ಜಂಗೇಶವಂದಿತಚರಣ ||
ಮಂಗಲಮೂರ್ತಿನೀಮಾಶನಚರಿತಮ | ನಂಗೊಳಿಸುವೆ ಭಕ್ತ್ಯಿಯಿಂದ ||೧||

ಒಂದುಪಗಲು ಋತುಮತಿಯಾಗಿ ರೋಹಿಣಿ | ಯಿಂದುನಾಲಕುನೀರ ಬಳಿಕ ||
ಅಂದವಡೆದಬೆಳುವಸದನವಿಟ್ಟಾ | ನಂದದಿಪತಿಯ ಸೂಳ್ಗಿಯ್ದಿ ||೨||

ಸುರತಸುಖದೊಳೋಲಾಡಿಸುಷುಪ್ತಿಯೊ | ಳಿರೆಬೆಳಗಪ್ಪಚಾವದೊಳು ||
ತರುಣಿಶಶಾಂಕನನಾಸ್ವಪ್ನದೊಳುಕಂಡು | ಹರುಷದಿ ದಿಟ್ಟಿದೆರೆದಳು ||೩||

ಬಳಿಕಿನನುದಯದೊಳೆಳ್ದು ಕೈಮುಗಿದು ಸ | ಲ್ಲಲಿತಾಂಗನಲ್ಲಿಗೈತಂದು ||
ಲಲನಾಮಣಿತಾನು ಕಂಡಾಕನಸನು | ತಳುವದೆಪೇಳಲು ಕೇಳಿ ||೪||

ಲಲಿತಾಂಗಿ ನಿನಗೆಯಗಣ್ಯಪುಣ್ಯನುನೃಪ | ಕುಲಲಲಾಮನೋರ್ವಕುವರ ||
ಅಳಘುವಿಕ್ರಮಿಜನಿಸುವನೆನೆಸಂತಸ | ದಳೆದಿರೆಪತಿವಿಡಿಯಿಂದ ||೫||

ಗರ್ಭದದಾರಿದ್ರ್ಯವಳಿದು ತುಹಿನರೋ | ಚಿರ್ಭಾಸುರಕಾಂತಿಯುತನ ||
ಅರ್ಭಕನನುಪಡೆಯಲು ವಸುದೇವನು | ನಿರ್ಭರವೈಭವದಿಂದ ||೬||

ಕ್ಷುದ್ರಾರಾತಿಭೂಪಾಲಕನಿಕುರುಂಬ | ವಿದ್ರಾವಣನಿವನೆಂದು ||
ಭದ್ರಮುಹೂರ್ತದೊಳಾ ಸಿಸುವಿಗೆಬಲ | ಭದ್ರವೆಸರನಿಟ್ಟನೊಸೆದು ||೭||

ವರಮೌಕ್ತಿಕವರ್ಣ ವಜ್ರಶರೀರನು | ಉರುತರಧೀರೋದಾತ್ತ ||
ನಿರವಧಿಸಾಹಸನತಿರೂಪಯುತ ಬಂ | ಧುರಗುಣಮಣಿಭೂಷಣನು ||೮||

ಏಳಕುಂಡಲನೇಕಕಾಂಗವಿಕ್ರಾಂತನ | ನೇಕಕಲಾಕೋವಿದನು ||
ಆ ಕುವರನುಕೂಡಿ ಹರುಷದಿವಸುದೇವ | ಭೂಕಾಂತನತಿಸುಖಮಿರಲು ||೯||

ಸಲ್ಲಲಿತಾಂಗಿ ರೋಹಿಣಿಯ ಸ್ವಯಂವರ | ದಲ್ಲಿ ಸಕಲಭೂಭುಜರ ||
ಎಲ್ಲವರೊಳುಕಾದಿಗೆಲಿದ ತನ್ನ ಧಟಿನ | ಬಿಲ್ಲಬಿನ್ನಾಣಮಸರಿದು ||೧೦||

ಕಲಿವೆನೆನುತ ತನ್ನೆಡೆಗಿರದೆಯ್ದಿದ | ನೇದಾಣ್ಮರನಂದನರ್ಗೆ ||
ಒಲವಿಂದಬಿಲ್ಲೋಜನಾಗಿತಾನಿರಲಾ | ನೆಲೆಗೊಂದಾನೊಂದುಪಗಲು ||೧೧||

ಕಂಸನೆಂಬನುಬಂದು ನಮಿಸಿನರೇಂದ್ರೋ | ತ್ಯಂಸಗೆನಾನು ಧೀವರರ ||
ವಂಶದವನು ದೇವರೊಳುನಿಂದು ಬಿಲುವಿದ್ಯೆ | ಯುಂಸಶೆಧಿಸಲೆಯ್ದಿದೆನು ||೧೨||

ಎಸಲಿವನಕುಲಜನಾದೊಡಿಂತೀ ರೂಪು | ಜನಿಯಿಸದೆನುತಾನೃಪತಿ ||
ವಿಸಯವೊದವಿಬಿಲುವಿದ್ಯೆಯನವನಿಗೆ | ಯನುಮಾನಿಸದೆ ಕಲಿಸಿದನು ||೧೩||

ಮರೆದುದನೆಚ್ಚರಿಸಿದೊಡದಕ್ಕೆಕೊಂಬ | ತೆರನಾಗಿಬಿಲುವಿದ್ಯೆಯನು ||
ಅರಿಕೆಮಾಡಿದೊಡದನನುವಾಗಿಸಾಧಿಸಿ | ಮೆರೆದನು ಮಹಿಪೊಗಳ್ವಂತೆ ||೧೪||

ಬಿಲ್ವಿಡಿದವನನು ಸಂಗರಮುಖದೊಳು | ಗೆಲ್ವವರಾರಿಲ್ಲದಂತೆ ||
ಬಲ್ವಲದಿಂದ ಕಂಸನು ವಸುದೇವಗೆ | ಸಲ್ವಪನಾಗಿರಲತ್ತ ||೧೫||

ಪೆಸರುಳ್ಳ ಪೌದನಪುರದಧಿಪತಿ ಶಾ | ಹಸದಿಂದೆರಡು ಸಿಹ್ಮವನು ||
ವಶಮಾಡಿ ತಾನೇರುವರಥದೊಳು ಕಟ್ಟಿ | ವಸುಧೆಯೊಳತಿಕೀರ್ತಿವಡೆದ ||೧೬||

ಅದರಿಂಸಿಹ್ಮರಥಾಭಿಧಾನವನಾಂತು | ಕದಸೋದ್ಯೇಕನಾಸನು ||
ಮದವೆತ್ಕರ್ಧಚಕ್ಕೇಶ ಜರಾಸಂಧ | ಗಿದಿರಾಗಿ ಮಾರ್ಮಲೆತಿರಲು ||೧೭||

ಕೆಲವ್ಯಸೇನಯಕಳುಹಲು ಕಂಡುತನ್ನ ದೋ | ರ್ಬಲದಿಂದೊಡಿಸಲದಕೆ ||
ಕೆಳಲಿಬಳಿಕ ಚಕ್ರೇಶ್ವರನಾದುರ | ಗಲಿಸಿಹ್ಮರಥಸೊಳುಕಾವಿ ||೧೮||

ಗೆಲಿದವನಿಗೆ ತನ್ನ ಮಗಳನು ಮತ್ತವ | ನೊಲಿದು ಬೇಡಿದರಾಜ್ಯವನು ||
ನೆಲೆಯಾಗಿಕೊಡುವೆನೆನುತ ಸಾರಿಸಲಾ | ಉಲುಹಿಗೆಲ್ಲರು ಸುಮ್ಮಿರಲು ||೧೯||

ಇವನಗೆಲುವಶಕ್ಯ ವಸುದೇವಗಲ್ಲದೆ | ಸವನಿಸದೆಂದಾಜಕ್ರ ||
ಸವಿನಯದಿಂದ ಸಮುದ್ರವಿಜಯಭೂ | ಧವಗೆ ಲೇಖನವನಟ್ಟಿದನು ||೨೦||

ಆಲೇಖನವನೋದಿಸಿನೋಡಿಯಾಭೂ | ಪಾಲಕನಾಸಿಹ್ಮರಥನ ||
ಮೇಲೆತ್ತಿನಡೆಯೆಂದುಕಳುಹಲುವಿಕ್ರಮ | ಶಾಲಿಸನ್ನತವಸುದೇವ ||೨೧||

ಎಕ್ಕತೂಳದಭಟಸಂತತಿಯನುಕೂಡಿ | ರಕ್ಕಸನಂತೆಯ್ತಂದು ||
ಮಿಕ್ಕಸಾಹಸಿಸಿಹ್ಮರಥನೂರಿಗೆಯ್ತಂ | ದಕ್ಕರಿಗರಕಳುಹಿದನು ||೨೨||

ಬಳಿಕವರೆಯ್ತಂದೆಲೆವಿಭುಯಾದವ | ಕುಲತಿಲಕನನೀಗಬಂದು ||
ತಳುವದೆಕಂಡವಸತನಾಗಿಸಲೆನುಖ | ದೊಳುಜೀವಿಪುದುಲೇಸೆನಲು ||೨೩||

ಉದ್ರೇಕಿಸಿಸಿಹ್ಮರಥನೆಂದಸೆಲವೊ | ಕ್ಷುದ್ರನಿನ್ನೊಳಗೇನುಮಾತು ||
ಕೌದ್ರತೆಯಿಂದನಾನಿರಿಯಲಾನುವರೆಸ | ಮುದ್ರಪರೀತಾವನಿಪರು ||೨೪||

ಎಂದುರೆಸಿಹ್ಮನಾದವಿಗರ್ಜಿಸಿಯಲ್ಲಿ | ಬಂದಕ್ಕರಿಗಳನುಕಳುಹಿ ||
ಪಿಂದೆಸಮರಸನ್ನದ್ಧನಾಗುತಪೊಳ | ಲಿಂದಬೇಗದಿಪೊರಮಟ್ಟ ||೨೫||

ಆರಭಟೆಯಿನಾಕಲಾಪ್ಪಂತಕಲೊಲ್ಲೀಲ | ವಾರಧಿವಜ್ರವೇದಿಕೆಯ ||
ದ್ವಾರದಿಪೊರಮಡುವಂತಾನಗರಿಯ | ದ್ವಾರವಪೊರಮಟ್ಟುಬಂದು ||೨೬||

ಚಾತುರ್ದಂತಬಲವಕೂಡಿಯಾಹವ | ಭೂತಳದೊಳಗೊಡ್ಡಿನಿಲಲು ||
ಆತುಳಿಲಾಳ್ವಸುದೇವಸದಕೆ ಕಲ | ಹಾತುರನಾಗಿನಡೆಯಲು ||೨೭||

ಅದನುಕಂಡಾಸಿಹ್ಮರಥತನ್ನಬಿಲ್ಪಡೆ | ಗದಿರದೆಕೈವೀಸಲಾಗ ||
ಒದವಿಕಡೆಯಕಾಲದಮಳೆಕರೆವಂತೆ | ಕದುಬಿಸುರಿದುದಸ್ತ್ರಸಮಿತಿ ||೨೮||

ಬಲವೆಲ್ಲವಂಬುಗೂಡಾಗಿಬೀಳ್ವುದಕಂಡು | ಕಳಲಿಮಹಾರಥರುಗಳ ||
ತಳುವದೆವಸುದೇವಕಳುಹಲವರು ಪರ | ಬಲವಸಂಹರಿಸಿದರಾಗ ||೨೯||

ಅದಕಂಡುಸಿಹ್ಮರಥನುರಥವನುನೂಕಿ | ಪದೆದುಪಿಡಿದುಬಿಲ್ಲುಕೋಲ ||
ಒದವಿಯಾದವಬಲವನುಹೊಕ್ಕುಕಣ್ಗೆಡಿ | ಸಿದನುಮಹಾರಥಿಕರನು ||೩೦||

ಇಂತುಬರ್ಪವನುರವಣೆಯಕಂಡಾಕ್ರೋ | ಧಾಂತಕನಾವಸುದೇವ ||
ಅಂತರಿಸದೆತೇರನೂಂಕುವಸಮಯಕೆ | ಮುಂತೆಬಂದಾಕಂಸನಿಂದು ||೩೧||

ದೇವಬಿನ್ನಪಮಾಬೆಸಸನು ನನಗಿರ | ದೀವುದೆನುತಬೇಡಲಾಗ ||
ಆವಸುದೇವನುತೇ ಮಾಡೆನಲವ | ನಾವಹಿಲದಿತೇರನೂಂಕಿ ||೩೨||

ಗಂಡುತನದೊಳಿದಿರಾದಾಕಂಸನ | ಕಂಡುಪಸಿದಹುಲಿಯಂತೆ ||
ದಿಂಡುಗೆಡಹುವೆನಿವನನೆಂದಾ ಉ | ದ್ದಂಡನುಕೊಬ್ಬರಿದೇರಿ ||೩೩||

ಎಲಪ್ಪೋ ಧೀವರನೀನೆನಗೆಣೆಯೇಯೆಂದು | ಬಲಿದೆಸೆವಾಸಿಹ್ಮರಥನ ||
ಅಲಘುವರೂಥಕಿಕ್ಕಿದಸಿಹ್ಮವೆರಡರ | ತಲೆಗಳಪರಿದೆಚ್ಚನಾಗ ||೩೪||

ತಡೆಯದೆಮತ್ತೊಂದುಶರದೊಳಗಾವಿಭು | ವಡರ್ದವರೂಥವನವನು ||
ಪಿಡಿದಬಿಲ್ಲಂಬನವನುತೊಟ್ಟಕವಜವ | ಕಡಿದುವಿರಥನಮಾಡಿದನು ||೩೫||

ಸಂಶಯವಿಲ್ಲದೆಪಿಡಿದಾಸುಭಟೋ | ತ್ತುಂಗಕಂತೀರವರಥನ ||
ಕಂಸನಿರದೆಪಿಡಿದಾಯಾದವರಾಜ | ಹಂಸನಮುಂದಿರಿಸಿದನು ||೩೬||

ಬಳಿಕಮಭಯಘೋಷಣೆಯಹೊಯಿಸಿಯಾ | ಹೊಳಲಹೊಕ್ಕಲ್ಲಿಶೋಭಿಸುವ ||
ಕಲಿಲವಿಜಯಬಾಹುಬಲಿಕೇವಲಿಗಳ | ನಿಲಯವಹೊಕ್ಕಭಿನಮಿಸಿ ||೩೭||

ಅಲ್ಲಿಂದಬೀಡನೆತ್ತಿಸಿಶೌರೀಪುರ | ಕ್ಕಲ್ಲಾಸದಿಂದೆಯ್ತಂದು ||
ಬಲ್ಲಿದಸಿಹ್ಮರಥನನುತಂದಣ್ಣನ | ಮೆಲ್ಲಡಿಗಳಮುಂದಿರಿಸಲು ||೩೮||

ಈ ಸಿಹ್ಮರಥನನೀನೇಕೊಂಡುಪೋಗಿ ಜ | ರಾಸಂಧಚಕ್ರೇಶ್ವರಗೆ ||
ಈಸಮಯದೊಳೊಪ್ಪಿಸಿಬರಹೇಳೆನ | ಲಾಸಾಸಿಗನಲ್ಲಿಗೆಯ್ದಿ ||೩೯||

ಅವನನೊಪ್ಪಿಸೆಕಂಡತಿಹರುಷವತಾಳಿ | ಯವನೀಶ್ವರನಿಂತುನುಡಿದ ||
ಇವನನಾವನುಗೆಲ್ದಾತಗೆನಮ್ಮಾ | ಕುವರಿಯಜೀವಂಜಸೆಯಂನು ||೪೦||

ಅವನೊರೆದಿಳೆಯಕೊಡುವೆನೆಂದೆವದರಿಂದ | ಕುವರಿನಿಸಗೆಮೊರೆಯಲ್ಲ ||
ಇವಳನಿನ್ನ ಯಮನಸಿಗೆಬಂದವನಾವ | ನವಗೆಮುದುವೆನೂಡೆನಲು ||೪೧||

ಆಸೊಲ್ಲಿಗಾವಂ ದೇವನಿಂತೆಂದನಿಂ | ದೀಸಿಹ್ಮರಥನನುಹಿಡಿದ ||
ಸಾಸಿಗನಿವನೆಂದಾಕಂಸನನುಜ | ರಾಸಂಧಗೆತೋರಿಸಿದನು ||೪೨||

ಅವಪಂಶೋದ್ಭವನೆಂದವನನುಕೇಳಿ | ದೇವಕೌಶಂಬಿಯೊಳೋರ್ವ ||
ಧೀವರನಣುಗನೆಂದಾಕಂಸನನುಸುರಿಸೊ | ಡಾವನುಧಾವಲ್ಲಘನು ||೪೩||

ಅವನಚಾನುಜಂಘಿಗಳಪ್ಪಭುಜಯುಗ | ಮವನಲಕ್ಷಣಲಲಿತಾಂಗ ||
ಅವನವಿಶ್ರುತವಕ್ಷಮವನಸೌಂದರ್ಯವು | ತ್ಸವನಲಾವಣ್ಯವನೋಡಿ ||೪೪||

ಇವನುಸತ್ಕುಲಜನಲ್ಲದೆ ದುಷ್ಕುಲಜನಲ್ಲ | ವಿವರಿಪೆನಾನಿದನೆಂದು ||
ಅವನತಂದೆಯಕರೆತರಹೇಳಿ ಕೌಶಂಬ | ಗವನಿಪನಾಳನಟ್ಟಿದನು ||೪೫||

ಬಂದಾಚರರಾಧೀವರನೊಳಗಿಂ | ತೆಂದರಾಕಂಸನುನಿನ್ನ ||
ನಂದನನೊ ಅಲ್ಲವೊ ಎಂಬುದನುಕೇಳ | ಲಿಂದೆಮ್ಮರಸನಟ್ಟಿದನು ||೪೬||

ಎನೆಚಿಚ್ಚುತಾಧೀವರನೆಂದನುಕಂಸ | ನೆನಗೆಹುಟ್ಟಿದಮಗನಲ್ಲ ||
ಎನುತೊಂದುಮಂದಾಸುಸಹಿತ ಚಕ್ರೇಶನ | ಬಳಿಗಾರದೆಯ್ದಿದನನನು ||೪೭||

ಬಂದುದೂರದೊಳುನಾಷ್ಟಾಂಗನಮಿತನಾಗಿ | ಮಂದಾಸನಿರಿಸಿಧೀತಿಯೊಳು ||
ನಿಂದುಬಿನ್ನಪದೇವಕಾಳಿಂದಿಯೊಳೀ | ಮಂದಾಸುಪರುತಿರೆತೆಗೆದು ||೪೮||

ಕಾಂಸ್ಯಮಂಜೂಷೆಯೊಳಿರ್ದಕಾರಣದಿಂ | ಕಂಸನೆಂಬಾಖೆಸರಿಟ್ಟು ||
ಸಂಶಯಮಿಲ್ಲದೆ ನಿಜತನುಜನತೆರ | ದಿಂನಾಕುತಿರೆದುಷ್ಟನಾಗಿ ||೪೯||

ಪೊಳಲೊಳುಕಂಡಕಂಡವರೊಳುಹೋರಟಿ | ಗೊಳುತಿರಲದಕಾಸಲಸಿ ||
ಬಳಿಕನನ್ನೊಳುನೀನಿರಬೇಡವೆಂದೀ | ಖಳನನೂರಿಂತಗುಳಿದೆನು ||೫೦||

ಎನಲಾಮಂದಾಸತರಿಸಿಯಾಕೆಲದೊಳು | ಜನನುತಸೋಮವಂಶಜನು ||
ಮನುಜೇಶನುಗ್ರಸೇನಗೆಯಾತನಸತಿ | ವನಜಾಕ್ಷಿಪದ್ಮಾವತಿಗೆ ||೫೧||

ಜನಿಸಿದಸಿಸುವೆಂಬವರ್ಣವನೋದಿಸಿ | ಜನಪತಿತನ್ನನುಜಾತೆ ||
ವನಜಾವತಿಯತನುಜನೆಂಬುದನರಿ | ದನುರಾಗಮಾನಸನಾಗಿ ||೫೨||

ಅರಸುವಬಳ್ಳಿಕಾಲನುತೊಡರಿತ್ತೆಂಬ | ತೆರನಾಗಿನನ್ನ ನಂದನೆಗೆ ||
ಎರೆಯನೀನಾದೆಯೆನುತಕಂಸಗೆಧಾರೆ | ಯೆರೆದನು ಜೀವಂಜಸೆಯ ||೫೩||

ಮದುವೆಯಮಾಡಿಬಳಿಕಬೇಡಿದ ಜನ | ಪದವನೀವೆನುಬೇಡೆನಲು ||
ಅದಕಾಕಂಸನು ನಿಜಪಿತೃರಾಜ್ಯಮ | ನದನೆಪಾಲಿಸಬೇಕೆನಲು ||೫೪||

ಇವನವೈರವನುತಿಳಿವೆನೆಂದಾಭೂ | ಧವನಿರದೆಳ್ದುಬಂದೋರ್ವ ||
ಅವಧಿಚ್ಛಾನಿಮುನೀಶನಪದಪದ್ಮ | ಕವನತನಾಗಿಕೈಮುಗಿದು || ||೫೫||

ಮುನಿಕುಲತಿಲಕಬಿನ್ನಪಮಾಕಂಸಗೆ | ಜನನೀಜನಕರೊಳುವೈರ ||
ಜನಿಸಿದುದೇನುಕಾರಣಬೆಸಸೆನಲತಿ | ವಿನಯದೊಳುಸುರ್ದನಿಂತೆಂದು ||೫೬||

ಈಪೃಥವಿಯೊಳುಪಂಜಾಗ್ನಿಮಧ್ಯದೊಳೋರ್ವ | ತಾಪಸಿತಪಗೆಯ್ವುತಿರಲು ||
ಆಪದದೊಳುವೀರಭದ್ರವೆಸರಜಾತ | ರೂಪಸೋರ್ವನುಬರುತಿರ್ದು ||೫೭||

ಇದುಹಿಂಸಾರೂಪದತಿಕಷ್ಟತಪವೆನ | ಲದಕೇಳಿಕೋಪವಿಂದೆದ್ದು ||
ಆದಿರದೆಕೊಡಲಿಯತಿರುಪುತಹಿಂಸೆಯ | ನಿದರೊಳುತೋರುನೀನೆಲು ||೫೮||

ಆವರನನುಭವುವಕೆಚ್ಚಿನೊಳಗೆ ಜೀವ | ನಿವಹವುರಿವುದನುತೋರೆ ||
ಅವನದಕತಿಬೆರಗಾಗಿ ಮುಂದರಿಯದೆ | ಇವಗೆ ಮುನಿದೆನೆಂದಾಗ ||೫೯||

ಪರಸುವಬಿಸುಟು ಬಳಿಕ ನಿಮ್ಮಚರಿತವ | ಧರಿಸುವೆನೆನುತವರ್ಗೆರಗಿ ||
ನಿರುತಮಪ್ಪ ಜಿನದೀಕ್ಷೆಯನಾಂತು ನಿ | ಷ್ಠುರಮಪ್ಪ ತಪಗೆಯ್ಯಲೊಡನೆ ||೬೦||

ವನದೇವತೆಗಳಾತಪದ ಸಾಮರ್ಥ್ಯಕೆ | ಮನದೆಗೊಂಡೆಯ್ದಿ ಕೈಮುಗಿದು ||
ಮುನಿಪತಿಬೆಸಸೆನಲಾನಾವಾಗ | ನೆನೆಯಲೊಡನೆ ಬನ್ನಿಮೆಂದು ||೬೧||

ಮುದದಿಂ ಮಧುರೆಗೆಬಂದು ಮಾಸೋಪವಾ | ಸದೊಳಿರಲಾ ಉಗ್ರಸೇನ ||
ಪದಪಿಂಬಂದವರ್ಗೆರಗಿ ತನ್ನೊಡನೆ | ಯ್ದಿದ ಭವ್ಯನಿಕರಕಿಂತೆಂದ ||೬೨||

ಪಾರಣೆಗಿವರು ಬಿಜಯಮಾಡಲು ತಾನೆ | ಯಾರಯ್ಯದೆನಿಲಿಸುವೆನು ||
ಊರೊಳಗಾರುನಿಲ್ಲಿಸಬೇಡವೆಂದಾ | ಭೂರಮಣೇಶನು ಬಿಸುಸು ||೬೩||

ಮುನಿಗೆವಂದಿಸಿ ಪುರವರಕೆಯ್ದಲಾಮರು | ದಿನದೊಳಗಾಯತಿವರರು ||
ಅನುನಯದಿಂಪಾರಣೆಗೆಂದು ಬರಲಾ | ಜನಪನೇರುವ ಪಟ್ಟದಾನೆ ||೬೪||

ಮದವೆದ್ದು ಪುರದೊಳು ಕೋಳಾಹಳ ಮಾಡ | ಲದರಿಂದಾನೃಪವರನು ||
ಪದುಳದಿನವರನು ನಿಲಿಸಲು ಮರೆದಿರ | ಲವಕಪರಲ್ಲಿಂದತಿರುಗಿ ||೬೫||

ಬಂದು ಬಳಿಕ್ಕೊಂದು ಮಾಸೋಪವಾಸದೊ | ಳ್ನಿಂದು ಮತ್ಪದರಂತರದೊಳು ||
ಒಂದಿದಹಸುವಿಂದಾನಗರಿಗೆಭಿಕ್ಷೆ | ಗೆಂದು ನಡೆದುಬರುತಿರಲು ||೬೬||

ಆರಮನೆಕಿಚ್ಚೆಳ್ದಾ ಸಂಭ್ರಮದಿಂ | ಧರಣೀಪತಿನಿಲಿಸುವುದ ||
ಪಿರಿದಾಗಿಮರೆದಿರಲರಸನಾಜ್ಞೆಯೊಳಾ | ಪುರಜನನಿಲಿಸಲಣ್ಮದಿರೆ ||೬೭||

ಮುನಿಪತಿಮಗುಳ್ದು ಮುನ್ನಿನತೆರದಿಂದನ | ಶನವಕ್ಕೈಕೊಂಡಾಕಡೆಯ ||
ದಿನದೊಳುಪಾರಣೆಗೆಂದುಬರಲ್ಕೊರ್ವ | ಜನಪತಿಯಾಪುರಕೆಯ್ದಿ ||೬೮||

ಬರಲಾತನನಿದಿರ್ಗೊಂಬವೈಭವದಿಂ | ದರಸುಮುನಿಯನಿಲಿಸುವುದ ||
ಪಿರಿದಾಗಿಮರೆದಿರಲೊಡಲೊಳುದೀಪನ | ದುರಿಹತ್ತಿಬಲಹೀನನಾಗಿ ||೬೯||

ತಿರುಗನಡೆಯಲಾರದಾನಗಧದ ಜ | ತ್ವರದ ಕೆಲದಗೋಡೆಯೊಳು ||
ಪಿರಿದಾಗಿ ನೆಮ್ಮಿರೆ ಕಂಡಿಂತೆಂದರು | ಪುರದೊಳಗಡೆಯಾಡುವರು ||೭೦||

ಒರೊಬ್ಬರಿಂದ ನಿಲಿಸಲೀಯತಾನವಿ | ಚಾರದಿನಿವನನಿಲಿಸನು ||
ಈ ರಾಯಗೀಮುನಿಯೊಳು ಜಲಪ್ರೋಯೆನೆ | ಭೋರೆನೆ ಮುನಿಸಂಕುರಿಸಿತು ||೭೧||

ಈವಿಧದಿಂ ಕೋಪಾನಲನೊಡಲೊಳ | ಗಾವರಿಸಲು ಪಿಂತೆತನಗೆ ||
ಓವದೆ ಸಾಧ್ಯವಾದಾದೇವತೆಗಳು | ತಾವೈದಿಬೆಸನೇನೆನಲು ||೭೨||

ಇಂತೆಂದನಾಮುನಿಯೆನಗೀಗ ಜೀವನ | ವಂತೊರೆವಾವೇಳೆಯಾಯ್ತು ||
ಮುಂತಣಭವಕೆಯೊದಗಿಯೆನಲವು ಪೋ | ದಂತರದೊಳಗಾತಪಸಿ ||೭೩||

ತನುವನು ಬಿಸುಟಾ ಉಗ್ರಸೇನನ ನಿಜ | ವನಿತೆಯ ಗರ್ಭವಾಸದೊಳು ||
ಜನಿಯಿಸಲೊಡನಾಕೆಗೆ ಪೊಲ್ಲದಬೈಕೆ | ಮನದೊಳಗೊಗೆಯಲಂತದನು ||೭೪||

ಇನೆಯನೊಳುಸುರಲಮ್ಮದೆ ಮೌನಗೊಂಡಿರೆ | ಜನಪನವಳಮನವರಿದು ||
ವನಿತೆಯಿದೇನು ಕಾರಣವೆಂದಾಗ್ರಹ | ವನೆಮಾಡಿ ಬೆಸಗೊಳಲವಳು ||೭೫||

ಏಕಾಂತದೊಳೆಲೆವಿಭು ನಿನ್ನವಕ್ಷವ | ನೇ ಕೊರೆದಾರಕ್ತವನು ||
ಸಾಕೆಂಬಂತೀಂಟುವ ಬೈಕೆಯಾಯ್ತಿ | ನ್ನೇಕೆನ್ನ ಜೀವನದಾಸೆ ||೭೬||

ಎನಲೆಂದನೆಲೆಮಾನಿನಿ ನಿನ್ನ ಬಸಿರೊಳು | ಜನಿಸಿದ ಶಿಶುವಿನಮನದ ||
ಮುನಿಸಿಸತೆರನಲ್ಲದೆ ಮತ್ತೊಂದಲ್ಲ | ವೆನುತ ಮನೆಯಪೊರಮಟ್ಟು ||೭೭||

ಮಂತ್ರಶಾಲೆಗೆ ಬಂದಾಕಾರ್ಯವನಂದು | ಮಂತ್ರಾಲೋಚನೆಮಾಡೆ ||
ತಂತ್ರದಿಂದಾನಿದನೆಸಗುವೆನೆಂದಾ | ಮಂತ್ರಿಭೂಪಸಬೀಳ್ಕೊಂಡು ||೭೮||

ಅರಸನ ಪೋಲ್ವಿಕೆಯಿಂದೊಂದು ಲೆಪ್ಪದ | ಕರುವಮಾಡಿಸಿಯದರೊಳಗೆ ||
ಪರಿವೂರಿಸಿಯಲತಗೆಯರಸವನಾ | ವರಮಂತ್ರಿ ಗೂಢದೊಳಿರಿಸಿ ||೭೯||

ಅರಸಿಯಲ್ಲಿಗೆಬಂದು ದೇವಿಬಿನ್ನಪನಿ | ಮ್ಮರಸನಿರ್ದಪಸುತೀರ್ಚುವುದು ||
ಭರದಿಂದ ನಿಮ್ಮ ಬಯಕೆಯನೆಂದಾಲೆಪ್ಪ | ದರಸನ ಮನೆಯೊಳಗಿರಿಸಿ ||೮೦||

ಮತ್ತಮಿಂತೆಂದನು ಎಲೆದೇವಿ ನಿನ್ನಾ | ಚಿತ್ತೇಶನನೀಕ್ಷಿಸುತವೆ ||
ಕತ್ತಿಗೊಂಡಿರಿವುದುಚಿತವಲ್ಲವೆಂದಾ | ವೃತ್ತಕುಚೆಯ ನಿಜಮುಖಕೆ ||೮೧||

ವರವಸ್ತ್ರವನು ನುರೆಯಮಾಡಿ ಕೈಯೊಳು | ಸುರಗಿಯಕೊಡಲು ಕೃತ್ರಿಮದ ||
ಅರಸನೆದೆಯ ತಿವಿದೊಗುವರುಣಾಂಬುವ | ನರಸಿ ಕೋಪದೊಳೀಂಟಿಬಳಿಕ ||೮೨||

ತನ್ನಿಚ್ಛೆ ತೀರೆಲೆಪ್ಪದಭೂಪತಿಯನು | ತನ್ನವಲ್ಲಭನೆಂದು ಬಗೆದು ||
ಉನ್ನತಮಪ್ಪದುಃಖದಿ ಕಟ್ಟಿನೆಂದಾ | ಚೆನ್ನೆಮೂರ್ಛೆಗೆ ಸಲಲಾಗ ||೮೩||

ಅತಿಶೀತಳಕ್ರಿಯೆಯಿಂದಮೆಚ್ಚರಿಸಿ ಭೂ | ಪತಿಬರ್ದುಕಿದನೆಂದವನು ||
ಸತಿಯಸಂತೈಸಿ ಕೆಲವುದಿನಕಾತನು | ಕ್ಷಿತಪಿಂಗಿತೆಂದಾಕಗರುಪೆ ||೮೪||

ಆರಮಣೀಮಣಿಗೊಗೆದಮನಕ್ಷತ | ತೀರಲು ನವನೂಸತುಂಬಿ ||
ಕ್ರೂರಮಪ್ಪಲಗ್ನದೊಳು ಸಿಸುವುದಯಿಸ | ಲಾರಯ್ದಾಭೂವರನು ||೮೫||

ಬಂದಾಹಸುಳೆಯ ಮೊಗನೋಡಲದು ತನ್ನ | ತಂದೆಯಮೊಗವನೋಡುತವೆ ||
ಒಂದಿದ ಕೋಪದಿ ಕಡೆಗಣ್ಗಳೊಳು ಕೆಂಪು | ತಂದು ನಿರೀಕ್ಷಿಸುತಿರಲು ||೮೬||

ಈಮುಗತನಗೆ ಪಗೆವನೆಂದುಬಗೆದು ಮ| ತ್ತಾಮನುಜೇಶ್ವರನುಸುರೆ ||
ಆ ಮಂತ್ರಿಯೊಂದು ಕಂಚಿನಮಂಜೂಷೆಯೊ | ಳಾಮಗುವನುತಂದಿರಿಸಿ ||೮೭||

ಕೆಲದೊಳುಸುರಿದುರತ್ನ ಮತಂದೆತಾಯ್ಗಳ | ಕುಲಮನವರ ನಾಮವನು ||
ನೆಲೆಯಾಗಿ ಬರೆಯಿಸಿಜಗುನೆಯೊಳಗೆ ಬಿಡೆ | ನಲವಿಂದದು ಪರಿತರಲು ||೮೮||

ಅದನು ಕೌಶಂಬಿಯೊಳೋರ್ವಧೀವರಕಂಡು | ಮುದದಿಂತೆಗೆದು ಕೊಂಡೊಯ್ದು ||
ಒದವಿದಮರುಕದಿನಾಕಂಸನ ಸಾ | ಕಿದನೆಲೆಯರ್ಧಚಕ್ರೇಶ ||೮೯||

ಎಂದು ನಿರೂಪಿಸಿದಾಜತಿರಾಯಗೆ | ಬಂದಿಸಿ ಬಳಿಕ ಬೀಳ್ಕೊಂಡು ||
ಮಂದಿರಕೆಯ್ದಿ ಮತ್ತಾಮರುದಿನದೊಳು | ನಂದನೆಗಡುವಲಿಗೊಟ್ಟು ||೧೦||
ಅವನಕೋಪವನರಿದಾಮಧುರೆಯನಾ | ನಿವಗೆಕೊಡಲು ಮಾತೃಪಿತೃಗೆ ||
ತವೆಯದದುಃಖವಹುದು ಕೊಡದಿರ್ದೊಡೆ | ನವಗೆ ಭಾಷಾಭಂಗವಹುದು ||೧೧||
ಎಂದು ಕಂಸನಕರೆದಾತಂದೆತಾಯ್ಗಳ | ಕೊಂದು ರಾಜ್ಯವನಾಳಬೇಡ ||
ಎಂದು ನುಡಿದು ಬಳಿಕವಗಾಮಧುರೆಯ | ನಂದುಪಾಲಿಸಿ ಬೀಳ್ಕೊಡಲು ||೧೨||
ಪಿರಿದು ಭಕ್ತಿಯೊಳು ವಂದಿಸಿ ವಸುದೇವಭೂ | ವರಗೆ ಕಂಸನು ದೇವನಿಮ್ಮ ||
ಕರುಣದಿನಿಂತಪ್ಪ ಮಹದೈಶ್ವರ್ಯವು | ದೊರೆಕೊಂಡಿತೆನಗದರಿಂದ ||೧೩||
ಆ ಮಧುರೆಗೆ ಬಜಯಂಗೆಯ್ದೆನ್ನ ಸು | ಪ್ರೇಮದೊಳಿರಿಸುವುದೆನಲು ||
ಆಮಾತನವಧಾರಿಸಿ ಕಂಸನಕೂಡೆ | ಯಾಮಹಿಪನು ಸಡೆತರಲು ||೧೪||
ಭರದಿ ಮಧುರೆಗೆಯ್ದಿ ಜನನೀಜನಕರ | ನುರುತರಕೋಪವಂಪಿಡಿದು ||
ಪುರದಬಾಗಿಲ್ವಾಡದಮೇಲಸಿಪಂ | ಜರದೊಳು ಸೆರೆಯನಿಕ್ಕಿದನು ||೧೫||
ಮತ್ತಾ ಪುರಕೆಯರಸನಾಗಿಯಾಭೂ | ಪೋತ್ತಂಸವಸುದೇವನೊಳು ||
ಚಿತ್ತಶುದ್ಧಿಯೊಳು ಭೃತ್ಯತ್ವವಡೆದು ಸಂ | ಪತ್ತಿಯೊಳಾಕಂಸನಿರ್ದ ||೧೬||
ಆ ಉಗ್ರಸೇನ ಮಹಿಪನನುಜಾತನು | ದೇವಸೇನಸೆಂದೆಂಬ ||
ಭೂವಲ್ಲಭನಗ್ರಮಹಿಷಿಪೆಣ್ಮಣಿ ಧನ | ದೇವಿಯೆಂಬವಳಿಹಳವರ ||೧೭||
ಅತಿಮುಕ್ತನೆಂಬ ಕುಮಾರಕನಾಕಂಸ | ನತಿದುಷ್ಟತಸವನುಕಂಡು ||
ಮತವಲ್ಲಸಂಸೃತಿಯೆಂದು ದೀಕ್ಷೆಯನ | ಪ್ರತಿಮನಾಗತ ಧರಿಯಿಸಿದ ||೧೮||
ಮತ್ತಾತನಕಿರಿಯಳು ದೇವಕಿಯೆಂ | ಬುತ್ತಮರೂಪವತಿಯನು ||
ಮತ್ತಮರಾಳಗಮನೆಯನುರ್ವೀಪಾ | ಲೋತ್ತಂಸವಸುದೇವನಿಗೆ ||೧೯||
ದೇವಕೇಳಿಂತಿದು ಗುರುಪೂಜೆಯೆಂದು ಮ | ಹಾವಿಭವದೊಳು ರತಿಯನು ||
ಭಾವಭವಗೆ ಕೊಡುವಂದದಿ ನುದುವೆಯ | ತೀವಿದ ಮುದದಿಮಾಡಿದನು ||೧೦೦||
ಅವನಿತಾರತ್ನದೊಡನೆ ಸಂತತವಸು | ದೇವರಾಜೇಂದ್ರಶೇಖರನು ||
ತೀವಿದ ಮಮತೆಯಿಂದತ್ಯಂತಸುಖಸಂಕ | ಥಾವಿನೋದಮೊಳೊಪ್ಪಿದನು ||೧೦೧||
ಅನುಪಮರೂಪನತ್ಯಂತಕಲಾವಿದ | ನನಿಮಿಷಕುಜನಿಭದಾನಿ ||
ಜನತಾಧಿಪವಸುದೇವನೊಪ್ಪಿದನಾ | ವಿನಯವನಧಿಚಂದ್ರಮನು ||೧೦೨||
ಇದು ಜಿನಪದಸರಸಿಜ ಮದಮಧುಕರ | ಚದುರಮಂಗರಸ ರಚಿಸಿದ ||
ಮದನಾರಿ ನೇಮಿಜಿನೇಶಸಂಗತಿಯೊಳ | ಗಿದು ಪದಿಮೂರಾಶ್ವಾಸ ||೧೦೩||

೧೪. ಮಂಗಿಯ ಕಥಾಸಂಧಿ

ಶ್ರೀಮದಮರಪತಿಮೌಲಿಕೀಲಿತಪಾದ | ತಾಮರಸದ್ವಯನಜಗೆ ||
ಕಾಮಮದೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತೆರಗುವೆನು ||೧||

ಬಾವನ್ನ ವೀರಕಂಸನಕಡುಗೈಗೇಳಿ | ದಾವಸುಧಾಮಂಡಲದ ||
ಚಾವಡಿಚಾವಡಿಯೊಳಗುಳ್ಳ ವೀರಭ | ಟಾವಳಿಬಂದುಸೇರಿದುದು ||೨||

ತಾನಿರಿಯಲು ಬಲ್ಲನಿರಿದವರಿಗೆ ಕೈ | ವಾರದೆ ಮೆಚ್ಚೀಯಬಲ್ಲ ||
ಭೂನುತಗುಣನಿಕಂಸನೃಪನೆಂದು ಸೇರಿದ | ರಾನಾಡನಾಡಸುಭಟರು ||೩||

ಪೃಥುವಿಯೊಳುಳ್ಳರ್ಧರಥಸಮರಥರತಿ | ರಥರು ಮಹಾರಥರುಗಳು ||
ಪೃಥುವೀರವಿತರಣಗುಣಿ ಕಂಸನಗುಣ | ಕಥನವಕೇಳಿಸೇರಿದರು ||೪||

ದಿಕ್ಕರಿನಿಕರವನಾನೆಪನ್ನಾಣದಿ | ಧಿಕ್ಕರಿಸುವ ಜೋಧರರು ||
ಲೆಕ್ಕವಿಲ್ಲದೆಬಂದು ಸೇರಿದರಾರಣ | ರಕ್ಕಸ ಕಂಸಭೂವರನ ||೫||

ಭರತತ್ರಿಖಂಡಮಂಡಲದೊಳಗುಳ್ಳರಿ | ಬಿರುದಿನರಾಯರಾವುತರು ||
ಅರಿನೃಪಗಜಕೇಸರಿ ಕಂಸನೃಪನನಾ | ದರದಿಂಬಂದುಸೇರಿದರು ||೬||

ಚಕ್ರಿಗಿವನೆತೋಳ್ವಲವೆಂದಾಭೂ | ಚಕ್ರದಮುಕುಟವರ್ಧನರು ||
ವಿಕ್ರಾಂತಯುತ ಕಂಸಭೂಪಾಲನನಾ | ನಾಕ್ರಮದಿಂದೋಲಯಿಪರು ||೭||

ದುರಗಲಿಕಂಸನುದ್ಧತಸಾಹಸವಕೇಳಿ | ಹರಿವಹಾವುರಿವಕಿಚ್ಚುಗಳು ||
ಭರದಿಂದಡಗುವುವದರಿಂದವನ ನಿ | ಷ್ಠುರಬಲಯುತವನೇನೆಂಬೆ ||೮||

ನಷ್ಟಾರಾತಿಸರೇಂದ್ರನಿಕಾಯನ | ರಿಷ್ಟನಧಿಕಕೋಪಯುತನು ||
ಅಷ್ಟಮದೊಪೇತಸವನೀತಳಕತಿ | ದುಷ್ಟಸರಸನಾಗಿಹನು ||೯||

ಸತ್ಯಸದಾಚಾರಗಳಿಗತಿದೂರನ | ಕೃತ್ಯಮಾನಸರ್ಗೆ ಹಿತವನು ||
ಅತ್ಯಂತಕಪಟಹೃದಯನಾರಾಜಾಧಿ | ಪತ್ಯದೊಳಗೆ ನಿಂದಿರಲು ||೧೦||

ದೇವಕಿದೇವಿಯ ಹಿರಿಯಣ್ಣನಖಿಲೋ | ರ್ವೀವಿಸ್ತುತಪದೊಳಗೆ ||
ಓವದೆನೆಗಳಿಯುವಧಿಬೋಧಯುತನಾಗಿ | ಯಾ ಊರಿಗೊಂದುದಿನದೊಳು ||೧೧||

ಅನಶನಮಿರ್ದುಪಾರಣೆಗೆಂದತಿಮುಕ್ತ | ಮುನಿಬೀದಿಯೊಳು ಬಮುತಿರಲು ||
ವನಜವದನೆದೇವಕಿದೇವಿಯಿದಿರ್ವಂ | ದನುರಾಗದಿಂ ನಿಲಿಸಿದಳು ||೧೨||

ಬಳಿಕುನ್ನತಾಸನದೊಳುಕುಳ್ಳಿರಿಸಿ ಕೋ | ಮಲತರಪಾದಪದ್ಮವನು ||
ತೊಳೆದುವಿಶಿಷ್ಟಮಪ್ಪಷ್ಟವಿಧಾರ್ಚನೆ | ಗಳಿಸರ್ಚಿಪಸಮಯದೊಳು ||೧೩||

ಭೂವಲ್ಲಭ ಕಂಸನಪಟ್ಟವಲ್ಲಭೆ | ಜೀವಂಜಸೆನಡೆತಂದು ||
ದೇವಕಿಪುಷ್ಪಿತೆಯಾದ ವಸ್ತ್ರವನುತಂ | ದಾವರ್ಜಿಯಮುಂದೆಪಿಡಿದು ||೧೪||

ಎಲೆಯತಿಮುಕ್ತಭಾವ ನೀನೇಕೆ ಬೆ | ತ್ತಲೆಬಗೆಯಿಪಾವಸ್ತ್ರವನು ||
ಒಲಿದುಟ್ಟುಕೊಂಡು ನಿನ್ನೀತಂಗಿ ದೇವಕಿ | ಹೊಲೆತಡೆದೆಂತಪ್ಪಮಗನೆ ||೧೫||

ಹಡೆನಳೆನಲುಕೇಳಿಯಲ್ಲಿಮುಂದಕೆ | ನಡೆವುತಿರಲುಪರಿತಂದು ||
ಕಡುರಾಗದಿಂದಡ್ಡನಿಂದುಕಾಡಿದೊಡಾ | ಕೆಡಿಕೆಯೊಳಿಂತಾಡಿದರು ||೧೬||

ನನ್ನುತದೇವಕಿದೇವಿಯಣುಗವಿಕ್ರ | ಮೋನ್ನತನಿನ್ನ ಗಾಡನನು ||
ನಿನ್ನ ತಂದೆಯನು ನೆಲಕೆನೆರವುವನಿದು | ನನ್ನಿಯೆಂಬಾನುಡಿಗೇಳಿ ||೧೭||

ಸಿಂಗದಗರ್ಜನೆಯನುಕೇಳಿದ ಮಾ | ತಂಗಿಯಿಂದದೊಳಾದುಷ್ಟ ||
ಅಂಗಜಮಲ್ಲನನುಡಿಗೇಳಿ ಮನೆಗೆಯ್ದಿ | ಹಿಂಗದಿವರ್ತಾದುಃಖದಿಂದ ||೧೮||

ಮಾಗಿಯಕೋಗಿಲೆಯಂದದಿನಾನತಿ | ಮೂಗುಪಟ್ಟಿರೆಕಂಸನೆಯ್ದಿ ||
ರಾಗಾಧರೆ ನಿನ್ನ ಮನಸಿನುಬ್ಬೆಗವನು | ನೀಗಿಸುವೆನು ಪೇಳೆನಲು ||೧೯||

ಅತಿಮುಕ ಮುನಿಪತಿನುಡಿದ ನುಡಿಯತನ್ನ | ಪತಿಯೊಳೊರೆಯೆಕೇಳಿಯನನು ||
ಅತಿಭೀತಮಾನಸನನ್ಯಥಾಮುನಿಭಾ | ಷಿತಮೆಂದು ಮನದೊಳೇಣ್ಪಿಸಿ ||೨೦||

ಮತ್ತಮುದ್ಧತಸತ್ವಪ್ರಭಾವದಿಂದಾ | ಚಿತ್ತವಲ್ಲಭೆಗಿಂತುನುಡಿದ ||
ಮತ್ತತ್ವದಿಂ ನೀನುಕಾಡಿದೊಡಾಮುನಿ | ಪಿತ್ತೋದ್ರೇಕದೊಳಿರಪೆ ||೨೧||

ಒರಲಿಮೊಡೇತಕೆ ಒಡುಚಿಂತೆಬಣ್ಣಿಪಾ | ಯ್ದೆರೆಯಕೋಮಲೆಯಂತದಕೆ ||
ಹರುವನುಕಾಣವೆಯಿರ್ದೊಡೆ ನಾನು ನಿ | ನ್ನೆರೆಯನಯೆಂದು ಸಂತೈಸಿ ||೨೨||

ಇರಲಾದೇವಕಿದೇವಿಗೆ ಗರ್ಭವಂ | ಕುರಮಾಗಿಕಾಣಿಸಿಬೆಳೆದು ||
ಬರಲೇಳುತಿಂಗಳು ದಿನದೊಳಗಾಕಂಸ | ನುರುತರಕಪಟವಾನಸನು ||೨೩||

ವಸುದೇವನಲ್ಲಿಗೆಬಂದು ಕೈಮುಗಿದಿಂ | ತುನುರ್ದನು ದೇವಕಿದೇವಿ ||
ಪ್ರಸವಸಮಯದೊಳು ತವರುಮನೆಗೆಬಂದು | ಸಿಸುವನುಹಡೆಯಲುಬೇಕು ||೨೪||

ಎಂದವಾತಗೆ ಮೆಲ್ಲನೆಮಾಡಲೊತ್ಕಂಬ | ದಿಂದವಾದವಕಟ್ಟಿಕೊಂಡು ||
ಸಂದೇಹವೇಕೆಂದು ತಿಳುಪಿಭಾಷೆಯಕೊಂ | ಡಂದುಮನೆಗೆಯೋದನಿತ್ತ ||೨೫||

ದೇವಕಿಯರಿದು ಚಕಿತಚಿತ್ತೆಯಾಗಿ ಮ | ತ್ತಾನಲ್ಲಭನೆಡೆಗೈದಿ ||
ಆವರ್ಣಕೋಪದಿಂ ಮುಂದಪ್ಪ ಕಾರ್ಯಮ | ಜೀವಂಜಸೆಯೊಳಗಿರದೆ ||೨೬||

ಉಸುರಿದನದರಿಂದೆನ್ನೀಗರ್ಭದ | ಸಸಿಗೆಕಂಟಕವನುತರದೆ ||
ಸಸಿನೆನಿಲ್ವವಸಲ್ಲನಾದುಷ್ಟನೆನೆಕೇಳಿ | ವಸುದೇವನಾಸತಿಗೂಡಿ ||೨೭||

ಗರ್ಭೀಕೃತಬೋಧರತಿವಿಮುಕ್ತದೆಡೆಗೆಯ್ದಿ | ನಿರ್ಭರಭಕ್ತಿಯಿಂದೆರಗಿ ||
ದುರ್ಭಾವಿಕಂಸನಿಂದೀ ದೇವಕಿಯನಿಜ | ಗರ್ಭಕುಂಟಹುದೇಕೇಡು ||೨೮||

ಎಂದುನುಡಿದ ವಸುದೇವನೊಳಾಮುನಿ | ವೃಂದಾರಕನಿಂತುನುಡಿದ ||
ಸಂದೇಹಸದೆ ಕೇಳೀಮಧುರೆಯನೃಪ | ನಂದವಡೆದಸೂರಸೇನ ||೨೯||

ಅವನರರಾಜಶ್ರೀಷ್ಠಿರವಿದತ್ತನೆಂಬವ | ನವನಿಗೆಯಮುನಾದತ್ತೆ ||
ಯುವತಿಯವರ್ಗೇಳು ಮಂದಿಮಕ್ಕಳು ಸಂ | ಭವಿಸಿದರತಿರೂಪಯುತರು ||೩೦||

ಆನಗರಿಯೊಳತಿದುಷ್ಟಾಚಾರದಿ | ಭಾನುಸುರನುಸೂರಕೀರ್ತಿ ||
ಭಾನುಸೇನಾಸುರದೇವಸೂರಸುಸೂರ | ಸೇನನೆಂಬವರಿರುತಿರಲು ||೩೧||

ಆನಗರಿಯೊಳೋರ್ವ ಮುನಿಬರಲಲ್ಲಿಯ | ಭೂನಾಥನವರೆಡೆಗೆಯ್ದಿ ||
ಭಾನುದತ್ತಸುಗೂಡಿ ಧರ್ಮದಿದವಕೇಳಿ | ಜೈನದೀಕ್ಷೆಯುತಾಳಲಿತ್ತ ||೩೨||

ತಂದೆಗಳಿಸಿದಬಾರಹಕೋಟಿವಿತ್ತವ | ನೊಂದುಳಿಯದೆ ವೈಶ್ಯಸುತರು ||
ತಂದುದುರ್ವ್ಯಸನಕ್ಕೆ ಕೊಟ್ಟುಕೆಡಿಸಿಕಳ | ವಿಂದಬೀಪಸಿಕೊಂಡಿರಲು ||೩೩||

ಭೂವರನನಿದಾಯೇಳ್ವರುಕಳ್ಳರ | ನಾ ಊರಿಂ ಪೊರಮಡಿಸೆ ||
ಆವಿಷಯವವೊರಮಟ್ಟಜ್ಞಿನಿಯೆಂ | ಬಾ ಊರಿಗೊಂದು ರಾತ್ರಿಯೊಳು ||೩೪||

ಕಳಲೆಂದುಬಂದಾವೊಳಲ ಬಹಿರ್ಭಾಗ | ದೊಳಗೊಂದು ಪಿತೃವನದೊಳಗೆ ||
ಕುಲಸಂತತಿಗಿರಿಸುತ್ತಾಕಿಯನಾ | ಬಲಯುತಸೂರಸೇನನನು ||೩೫||

ಬಳಿಕತಾವರುವರುಕಳಲೆಯ್ದಲ್ಲಾ | ವೊಳಲವೃಷಭಕೇತುವೆಂಬ ||
ಇಳೆಪಾಣ್ಮನಕಿಂಕರವಜ್ರಮುಷ್ಟಿಯೆಂ | ಬಲಘುವಿಕ್ರಮಿಯಿಹನವಗೆ ||೩೬||

ಕನಕವಲ್ಲರಿಸಂಗಿಯೆಂಬ ಹೆಸರಿನಾಂತ | ವನಿತೆಯರಿಹರವರೊಳಗೆ ||
ವಿನುತವಿಲಾಸಾನ್ವಿತೆ ಮಂಗಿಗೆಕ | ಣ್ಮನವಿತ್ತು ಸಲೆವಾಗುತಿಹನು ||೩೭||

ಾನೊಂದುದಿವಸದೊಳಗರವೆಸ | ದಿಂದಬೀರೂರ್ಗೆಯ್ದಲವನು ||
ಕನಕವಲ್ಲರಿಯತಿಕಾಪಟ್ಯ | ದಿಂದವಳೊಳುನೇಹಮಾಡಿ ||೩೮||

ಗಿಮುಡಿಹೂವಿನ ಮಾಲೆಯಮೇಲೆ | ಪ್ರೇಮವೆಂಬುದಬಲ್ಲಳಾಗಿ ||
ವಿಲ್ಲದೆ ಹೂವಿನಹೇಳಿಗೆಯೊಳು | ದ್ದಾಮವಿಷಾಹಿಯನಿರಿಸೆ ||೩೯||

ಕಮನರಿಯದೆ ಹೂವಮುಡಿವೆನೆಂ | ದಾಕೈಯನಿಡಲಲ್ಲಿರ್ದ ||
ಾಹಿ ಹಿಡಿಯೆವಿಷವೂರಿಸಿ | ಯಾಕಾಮಿನಿಬೀಳ್ದಳಾಗ ||೪೦||

ರಪಿತೃವನದೊಳಗಾಮಂಗಿಯ | ನಾವಧು ಹಾಕಿಸಲಾಗ ||
ಮುಷ್ಟಿಬಂದಾಪ್ರಿಯವಲ್ಲಭೆ | ಯಾವೆಡೆಯಿರ್ದಪಳೆನಲು ||೪೧||

ೊಳಗೆ ಹೂವಕೊಯ್ವವೇಳೆಯೊಳು ಕ | ರುತ್ತೊಂದು ಹಾವುಹಿಡಿಯಲು ||
ಮಂಗಿಯಂತದಕಂಡು ನಾನಳ | ಲುತ್ತಿರೆತಳವಾರರೆಯ್ದಿ ||೪೨||

ಪುತ್ರೋತ್ಪತ್ತಿಯಾದುದಕಿಂದು | ಪುರದೊಳಗಾರಳಬೇಡ ||
ನಿರಿಮೆಂದು ಬಂದುಹೇಳಲ್ಕಾ | ರಗೇಳಿನಾನದರಿಂದ ||೪೩||

ಗಿಯಶಬವನು ಸುಡುಗಾಡಿಗೆ | ನಾನುಂಜೆಕಳುಹಿದೆನೆಂಬ ||
ತುಗೇಳಿ ನೊಂದಾವಜ್ರಮುಷ್ಟಿ ಯು | ದ್ದಾವಮದುಃಖೋಪೇತನಾಗಿ ||೪೪||

ತ್ರಿಯೊಳಗಾನಗರಿಯು ಪೊರಮ | ಟ್ಟಾರುದ್ರಭೂಮಿಗೆಯ್ತಂದು ||
ಯಶಬವನರಸಿಕೊಂಡು ಮತ್ತಾ | ಧೀರನಡೆದುಬರ್ಪಾಗ ||೪೫||

ೊಳಗೋರ್ವ ಜಿನಮುನಿಕೈಯಿಕ್ಕಿ | ದಿಟ್ಟನೆಯಾಗಿನಿಂದಿರಲು ||
ವರಪಾದಮೂಲಕೆ ಮುಂಡೆಯು | ನಿಟ್ಟಿಂತೆಂದಾಡಿದನು ||೪೬||

ಲ್ಲಶಬವನು ನಾನುಕಂಡೊಡೆ | ನಿನ್ನಕೆಂದಳಿರ್ವಜ್ರಿಗಳಿಗೆ ||
ತಾಮರೆಯ ನಾಸಿರಮನರ್ಚಿಪೆಂ | ಬುನ್ನತಿಕೆಯ ಭಾಷೆಮಾಡಿ ||೪೭||

ಮುಂದಕೆಬಂದೊಂದುಬಳಿತನ್ನ | ಸಲ್ಲಳುಬಿದ್ದಿರೆಕಂಡು ||
ಪದುಃಖದಿಂದಾಮುನಿಯಿ | ರ್ದಲ್ಲಿಗವಳತಂದಿರಿಸಲು ||೪೮||

ಪರ್ಯಾಪ್ತಿಋದ್ಧಿಸಂಪನ್ನರ | ಪ್ಪುದರಿಂದವತದೇಹವನು ||
ಗಿದೆಲರುತೀಡಲಾಕ್ಷಣದೊಳಗಾ | ಸುದತಿಗೆಯನುಪೂರಿಸಿತು ||೪೯||

ರೆದಸ್ಥಳಕಂಡುಸಂತಸ | ವಟ್ಟಾಕೆಯನಲ್ಲಿರಿಸಿ ||
ನದಿಹೊಂದಾವರೆಗೊಳನಿರ್ಪ | ಬಟ್ಟೆವಿಡಿದುಪೋದನಿತ್ತ ||೫೦||

ಮೊದಲಲ್ಲಿಯಡಗಿರ್ದಾಸೂತಸೇನನಾ | ಸುದತಿಯೊಳಗನೋಳ್ಪೆನೆಂದು ||
ಚದುರತನದಿಕೊಡದೊಳಗಿರ್ದದೀಪವ | ನೊದವಿಸಿಪಿಡಿದೆಯ್ತರಲು ||೫೧||

ಅತನಮೂಪಿಗೆಪುಗೆಸೋಲ್ತಮಂಗಿ | ಮಾತೇಸುನಾನಿನಗೊಲಿದೆ ||
ಅತುರದಿಂಕೊಂಡುಪೋಗೆನಲೆಂದ ನಿ | ನ್ನಾತನತ್ಯಂತವಿಕ್ರಮನು ||೫೨||

ಅದರಿಂದಾನಂಜುವೆನೆಂದೊಡನಂದ | ಳದಕೆತಕ್ಕುದಬಲ್ಲೆನಾನು ||
ಮದನಸದೃಶನೀನೀವುರಡಡಿಯೊಳು | ಮೊದಲಿರ್ದಂತಿರೆಂದರಸೆ ||೫೩||

ಆನಿತರೊಳಾ ಲಂಬನಜೋದರನಾತನ್ನ | ವನಿತೆಯೊಳಗಿಂತೆಣಿಸಿದನು ||
ವನಿತೆಯರ್ಗಳಕಾಪಟ್ಯವನಂಬುವ | ಮನುಜನಿಳೆಗೆಯೆಗ್ಗನೈಸೆ ||೫೪||

ರೀತಿಯೌವನರಸಿಕತೆಯುಸ್ಯರ್ಗೆತ | ನ್ನಾತನಿಂದಧಿಕಮಾಗಿರಲು ||
ಆತರಳಾಂಬಕಿಯರಕಣ್ಮನಗಳು | ಕಾತರಿಸದೆಸುಮ್ಮನಿರವು ||೫೫||

ಮಡದಿಯರಾಕಾಲೋಚಿತದೊದವೆದೆ | ವಿಡಿಯಲಸ್ಯರನೀಕ್ಷಿಸುತ ||
ಒಡಲೆರಡಕೆಯೊಂದೇಯಸುವಾಗಿಕ್ಕೈ | ವಿಡಿದಕಾಂತರಕೈಬಿಡುವರು ||೫೬||

ಸೂವನೇರಿದಮಲ್ಲಿಗೆಮಧುಮಾಸದ | ನೋವದಿಜ್ಜೈಸುವಂದದೊಳು ||
ಜೀವಿತೇಶ್ವರನರ್ದೆಯೊಳಗಿರ್ದನ್ನಿಗ | ರ್ಗಾವನಿತೆಯರುಮೋಹಿಪರು ||೫೭||

ಅಕಟಕಟಾಬಡವನೊಬಲ್ಲಿದನೋ | ಅಕುಲಜನೋಸತ್ಕುಲಜನೊ ||
ಏಕರಿಯೆಯೆಂಬುದನರಿಯದೆನಗೆಯು | ತ್ಕು ಕದಿನವಳುಮೋಹಿಸಿದಳು ||೫೮||

ಸ ಡುಸುಣ್ಣವಾಗಿಮತ್ತೀಸುಡುಗಾಡೊಳು | ಮಡಿದುಹೋಹವಳಜೀವನನು ||
ಹಡೆದಹರಣದೆರೆಯನಲೇಸಮರೆದೀ | ಕಡುಪಾಪಿಯನಂಬಬಹುದೆ ||೫೯||

ಭೂತಪ್ರೇತಗಳುಭುಂಜಿವುದಕೀಪಾಗಿ ಪ | ರೇತಭೂಮಿಯೊಳುಬಿಳ್ಚಿರ್ದ ||
ಈತನುವನುರಕ್ಷಿಸಿದನನುಮರೆದೀ | ಪಾತಕಿತ್ಯನಚ್ಚಬಹುದೆ ||೬೦||

ಎನುತವನೆಣಿಸುತ್ತಿರಲತ್ತಲಾಹೇಮ | ವನಜವನಾವಜ್ರಮುಷ್ಟಿ ||
ಅನುರಾಗದಿಂತಲೆಹೊರೆಹೊತ್ತುಬಂದಾ | ಮುನಿಯನನ್ನಿಧಿಯೊಳುನಿಂದು ||೬೧||

ಕೈಯಕತ್ತಿಯಮಂಗಿಯ ಕರದೊಳುಕೊಟ್ಟು | ಸಾಯುಮಿಗಳ ಜೆಲ್ಲಡಿಗೆ ||
ಒಯ್ಯನೊಂದೊಂದು ಹೊಂದಾವರೆಯಲರಿಟ್ಟು | ಮೈಯಿಕ್ಕಿ ಪೂಜ್ಯವೇಳೆಯೊಳು ||
ತ್ವರಿತದಿ ಕೈಯಮಿಳ್ಳದಿನಾಬಂಧಕಿ | ಪುರುಷನ ತಲೆವೊಯ್ವಾಗ ||
ಕರುಣದಿನಾಸೂತಸೇನತಸ್ಕರ ತನ್ನ | ಕರದಲೋಹದಬತಿಕೊಲ್ಲ ||೬೩||

ಭವದಿಂದಡ್ಡಹಿಡಿಯೆ ಖಣಿಲೆಂದಾ | ಕರವಾಳುಬೀಳಲು ಕಂಡು ||
ತರುಣಿಯಿದೇನೆಂದು ಕೇಳಿದೊಡಾದುಷ್ಟೆ | ಮರುಳಗೊಡ್ಡಾಟವೆಂದೆನಲು ||೬೪||

ಅವಳೆಸಗುವ ಕಾಪಟ್ಯವನರಿಯದೆ | ಯವನಾಖಡ್ಗವತೆಗೆದು ||
ತವಕದಿ ತನ್ನೆಡಗೈಯೊಳಗಿರದಾಂತು | ಸವಿನಯದಿಂದಾಹೂವ ||೬೫||

ಸಾಸಿರವನು ಬಲಗೈಯಿಂದರ್ಚಿಸಿ | ಆಸಂಯಮಿಯಡಿದಳಕೆ ||
ಸಾಸಿರ ಸೂಳುನಮಿಸಿ ಮತ್ತವಳ್ಗೂಡಿ | ಸಾಸಿಗನೂರ್ಗೈದನಿತ್ತ ||೬೬||

ಮಾನಿನಿಯರು ಮಾಡುವ ಕಾಪಟ್ಯಮ | ನೇನೆಂದಿನಿಸುಭಾವಿಸದೆ ||
ಮಾನಿತಮಪ್ಪಾಚಾರವನುಳಿದತಿ | ಹೀನಕೃತ್ಯದಿ ಕೆಟ್ಟೆವೆಂಬ ||೬೭||

ಸೂರಸೇನಾಗ್ರಜರುವರು ಕಳ್ಕರಾ | ಊರರಸಿನಮನೆವೊಕ್ಕು ||
ಭೂರಿವಸ್ತುವಕಳ್ದು ವೊರೆಗಟ್ಟಿಕೊಂಡು ಮ | ತ್ತಾರುದ್ರಭೂಮಿಗೆಯ್ದಿದರು||೬೮||

ಒಂದಾವಸ್ತುವನಾಸೂರಸೇನನ | ಮುಂದೇಳುಭಾಗೆಯಮಾಡಿ ||
ಕುಂದುಹೆಚ್ಚಸುನೋಡಿ ನಿನ್ನ ಮನಸ್ಸಿಗೆ | ಬಂದುದ ತೆಗೆದುಕೊಳ್ಳೆನಲು ||೬೯||

ನಾರಿಯರಸುನಂಬಿ ಹರಣದಾಶೆಯ ಬಿ | ಟ್ಟಾರಿಕೆಯೊಡವೆಯಕದ್ದು ||
ನಾರಕಗತಿಗೆಯ್ದುಬೇಡೆಂದು ಮಂಗಿಯ | ವಾರತೆಯನು ಪೇಳಿದನು ||೭೦||

ಆಮಾತುಗೇಳಿಯುಗ್ರಜರುಗಳರುವರು | ತಾಪತಿವಿಸ್ಮಯವಟ್ಟ ||
ಪ್ರೇಮದಿ ಸೂರಸೇನನು ಗೂಡಿದೀಕ್ಷೆಯ | ನಾಮುನಿಯಿಂಧರಿಸಿದರು ||೭೧||

ಗಂಡರಾಮಂಗಿಯ ಕಥನದಿದೀಕ್ಷೆಯ | ಕೊಂಡುದ ಕೇಳಿ ಮತ್ತವರ ||
ಪೆಂಡಿರೇಳ್ವರು ನಿರ್ವೇಗದಿ ದೀಕ್ಷೆಯ | ಕೊಂಡುವೋದರು ಬಳಿಕಿತ್ತ ||೭೨||

ದೀಕ್ಷೆಗೊಂಡಾಭಾನುಮುನಿಮೊದಲಾದ ಮು | ಮುಕ್ಷುಗಳೇಳ್ವರೆಯ್ತಂದು ||
ಪಕ್ಷೋಪವಾಸಾಂತರದೊಳುಜ್ಜಿನಿಗೆ | ಭಿಕ್ಷೆಗೆಂದು ಬರುತಿರಲು ||೭೩||

ಅವರಕಂಡಾ ವಜ್ರಮುಷ್ಟಿನಿಲ್ಲಿಸಿ ತನ್ನ | ಭವನಕೆಯ್ದಿಸಿ ಭಿಕ್ಷೆಯನು ||
ಸುವಿಧಾನದಿಂದ ಮಾಡಿಸಿ ಕೈಮುಗಿದು ಮ | ತ್ತವರೊಳಿಂತೆಂದಾಡಿದನು ||೭೪||

ಕುಸುಮಕೋದಂಡನ ಗೆಲ್ವೀಚೆಲ್ವಿಕೆ | ಹಸನಾದೀ ಚಿಕ್ಕಹರೆಯ ||
ಮಿನುಗುವಿಂತಪ್ಪಲಾವಣ್ಯಮುಮಿರ್ದೀ | ಯಸಿಧಾರಾಸುವ್ರತವು ||೭೫||

ನಿವಗೇನುಕಾರಣದಿಂದಾಯತಿಸಲಾ | ಗವರು ಮಂಗಿಯ ಕಥನವನು ||
ವಿವರಿಸೆಕೇಳಿ ವಿಸ್ಮಯಮಾನಸನಾಗಿ | ತವೆಯದ ವೈರಾಗ್ಯದಿಂದ ||೭೬||

ಆ ವಜ್ರಮುಷ್ಟಿಪೆಂಡಿರದೊಂದು ಕಪಟಕೆ | ನೋವುತದೀಕ್ಷೆವಡೆದನು ||
ಆವಿಧವರಿದು ತಪವನಿರದಾಂತಳು | ಲಾವಣ್ಯಯುತೆಯಾಮಂಗಿ ||೭೭||

ಮತ್ತಾಸಪ್ತರ್ಷಿಯರು ಪಲವು ಪಗ | ಲುತ್ತಮತಪದೊಳು ನೆಗಳಿ ||
ಸತ್ತುಮೊದಲ ಸೌಧರ್ಮಕಲ್ಪದೊಳು | ತ್ಪತ್ತಿಯಾದರು ಧರೆವೊಗಳೆ ||೭೮||

ಅಲ್ಲಿಯೇಕಸಾಗರೋಪಮಾಯುಷ್ಯಂಬ | ರುಲ್ಲಾಸದಿಂ ಸುಖವ್ರುಂಡು ||
ನಿಲ್ಲದಲ್ಲಿಂದಿಳಿದೀಧಾತಕಿಖಂಡ | ದಲ್ಲಿಯ ವಾಸವದೆಸೆಯ ||೭೯||

ಮಂದರಗಿರಿಯ ತೆಂಕಣ ಭರತಕ್ಷೇತ್ರ | ದೊಂದುಸುಧ್ಯದ ವಿಜಯಾರ್ಧ ||
ಎಂದೆಂಬಗಿರಿಯ ತೆಂಕಣತಪ್ಪಲೊಳಗತಿ | ಸುಂದರಮಾದದೇಶದೊಳು ||೮೦||

ಎಸೆವ ನಿತ್ಯಾಲೋಕವೆಂಬಪುರದೊಳು ರಂ | ಜಿಸುತಿರ್ಪನಾಚಿತ್ರಜೂಳ ||
ನಸುಧೀಶನವಗೆ ಮನೋಹರಿಯೆಂಬೋರ್ವ | ಲಸಿಯಳು ಸತಿಯಾದಳವಗೆ ||೮೧||

ಆ ಸಗ್ಗಿಗರೇಳ್ವರುಬಂದು ಪುಟ್ಟಿವಿ | ಲಾಸವಡೆದದೇಹವಾಂತು ||
ಸಾಸಿಗರಾಗಿಬೆಳೆದು ಜವ್ವನವಾಂತು | ಭಾಸುರತರ ಕೀರ್ತಿವಡೆದು ||೮೨||

ಇರುತಾಚಿತ್ರಾಂಗದ ಗರುಡಧ್ವಜ | ಗರುಡವಾಹನ ಮಣಿಚೂಡ ||
ಸುರಭಿಜೂಳ ಗಗನಾಸಂದ ಗಗನೇ | ಚರರೆಂಬಾನ್ಯಪಸುತರು ||೮೩||

ಹರಿವಾಹನನೆಂಬವಗೋರ್ವಳಾಸ್ವಯಂ | ವರದೊಳು ಮಾಲೆಯನಿಕ್ಕಿ ||
ವರಿಸಲೋರ್ವನುಚಕ್ರಿಯವನಹತಿಸಿಯಾ | ತರುಣಿಯನೆಳದೊಯ್ಯಲಾಗ ||೮೪||

ವನಿತೆಯಕಥನದಿಹರಿವಾಹನನತ್ತ | ನೆನುತಸಂಸೃತಿಗೆಕೊಕ್ಕರಿಸಿ ||
ಜನನುತಮೆನಿಸಿದುತ್ತಮಜಿನದೀಕ್ಷೆಯ | ನನುಕರಿಸಿದರಿಳೆವೊಗಳೆ ||೮೫||

ಇಂತುದೀಕ್ಷೆಯನಾಂತು ತಪಗೆಯ್ದಾಜೀವಿ | ತಾಂತದೊಳಗೆ ನಾಲ್ಕನೆಯ ||
ಸಂತತಸುಖನಿವಾಸಗ್ಗದೊಳಗೆನಿ | ಶ್ಚಿಂತದಿ ಜನಿಸಿಯೊಪ್ಪಿದರು ||೮೬||

ಅಲ್ಲಿಸಪ್ತಸಾಗರೋಪಮಾಯುಷ್ಯವ | ನೆಲ್ಲವತೀರಿಸಬಳಿಕ ||
ನಲ್ಲಲಿತಾಂಗಚಿತ್ರಾಂಗದಚರದೇವ | ನಿಲ್ಲಿಯಕುರುಜಾಂಗಣದ ||೮೭||

ಜನನುತ ಹಸ್ತಿನವುರದೊಳು ಸಿತವಾ | ಹನನೆಂಬ ವೈಶ್ಯೋತ್ತಮಗೆ ||
ವನಜಾಕ್ಷಿ ಬಂಧುಮತಿಗೆ ಶಂಖನೆಂಬೋರ್ವ | ತನುಜಾತನಾಗಿಯೊಪ್ಪಿದನು ||
ಆ ಊರರಸು ಗಂಗದೇವಗೆ ನಂದಯ | ಶಾವನಿತೆಗೆ ಪುಟ್ಟಿದರು ||
ಆ ಉಳಿದರುವರು ಗರುಡಧ್ವಜಾವಿಯ | ದೇವರ್ಕಳಾಸಗ್ಗದಿಂದ ||೮೮||

ಬಂದು ಗಂಗ ಗಂಗದೇವ ಗಂಗಾಮಿತ್ರ | ನಂದಿನಂದಿಬಾಂಧವನು ||
ನಂದಿಷೇಣರೆಂಬ ನಾಮವಹಡೆದತಿ | ಸುಂದರತೆಯುನೆಯ್ದಿದರು ||೧೦||

ರೇವತಿಯೆಂಬೋರ್ವ ದಾದಿಮಮತೆಯಿಂ | ದೋವಲಂತವರುರೆ ಬೆಳೆದು ||
ಆವೈಶ್ಯಸುತ ಶಂಖನೊಳು ಪೂರ್ವಜನ್ಮದೊ | ಳಾವರಿಸಿದನೇಹದಿಂದ ||೧೧||

ಭಾವಶುದ್ಧಿಯೊಳೊಡನುಂಡೊಡವೆರದಾಡಿ | ಓವದೆಕೆಳೆಗೊಂಡಿರಲು ||
ಆ ವಸುಧೀಶನ ಸತಿ ನಂದಯಶಾ | ದೇವಿ ಮತ್ತೊಂದು ಮಗುವನು ||೧೨||

ಹಡೆದದ ನೋಡಿಯವಳು ಪೂರ್ವಜನ್ಮದೊ | ಳಡಸಿದ ನಿಜವೈರದಿಂದ ||
ಕಡುಮುನಿದಾದಾದಿ ರೇವತಿಯೆಂಬಾ | ಮಡದಿಯಕೈಯೊಳುಕೊಟ್ಟು ||೧೩||

ಆರೊಬ್ಬರಿದನು ಸಾಕುವೆನೆಂಬವರಿಗೆ | ಸೇರಿಸೆಂದವಳನು ಕಳುಹೆ ||
ಆರಾಜಶಿಶುವಕೈಯೊಳಗೆತ್ತಿಕೊಂಡು ಮ | ತ್ತಾರೇವತಿಬರುತಿರ್ಪ ||೧೪||

ಕೇರಿಯೊಳಗೆ ವೈಶ್ಯಸುತ ಶಂಖಬರುತಿ | ರ್ದಾರತನುಜನಿವನೆಂದು ||
ಕಾರುಣ್ಯವಿಂಕೇಳಲಾಪ್ರಪಂಚಮನಾ | ನಾರಿಯುಸುರೆಕೇಳುತವೆ ||೧೫||

ಒಂದಿದಮರುಕದಿನಾಸಿಸುವನುತಂದು | ನಂದಯಶೆಯುಸಹಜಾತೆ ||
ಸುಂದರಿತನ್ನ ಜನನಿಬಂಧುಮತಿಗಾ | ನಂದದಿ ಕೊಡಲು ಕೈಕೊಂಡು ||೧೬||

ಅವಗೆನಿರ್ನಾಮಿಕನೆಂಬ ಹೆಸರವಿ | ಟ್ಟವಳು ಸಾಕುತ್ತಿರಲಿತ್ತ ||
ಅವನಿಪ ಗಂಗನೊಂದಾನೊಂದುದಿನದೊಳ | ಗವಧಿಬೋಧರಬಳಿಗೆಯ್ದಿ ||೧೭||

ವಿನಮಿತನಾಗಿ ನಿರ್ನಾಮಿಕಗಾನಿಜ | ಜನನಿ ಮುನಿದಕಾರಣವ ||
ಎನಗೆ ಬೆಸಸಿಮೆನಲವರಿಂತೆಂದರೀ | ವಿನುತಸೌರಾಷ್ಟ್ರವಿಷಯದ ||೧೮||

ಗಿರಿನಗರಮನಾಳ್ವ ಘನರಥಭೂಪತಿ | ತರುಣಿಕನಕಮಾಲೆಗೂಡಿ ||
ಇರಲವಗಮೃತರಸಾಯನ ನಾಮವ | ಧರಿಸಿಬಾಣಸಿಯೋರ್ವನಿಹನು ||೧೯||

ಒಂದುದಿವಸಮವಳಿತಶಾಕಂಗಳ | ನೊಂದಿಸಿಯಾಭೂವರಗೆ ||
ತಂದಿಕ್ಕಲವು ಸವಿಯಾಗಲವಗೆ ಮೆಚ್ಚಿ | ಒಂದು ಗ್ರಾಮವನಿತ್ತನಾಗ ||೧೦೦||

ಹಿಂಸಾಸುರೂಪದ ಬಾಣಸಿ ಬಿನ್ನಣ | ದಿಂಸಲೆಸವಿಯಾಗಿ ಸಮೆದ ||
ಮಾಂಸಾಹಾರವನಾಭೂವಾಲೋ | ಕ್ಯಂನಸುಣುತ ಸುಖಮಿರ್ದು ||೧೦೧||

ಮತ್ತೊಂದುದಿವಸ ಸುಧರ್ಮರೆಂಬೋರ್ವರ | ತ್ಯುತ್ತಮಮುನಿಯಲ್ಲಿಗೈದಿ ||
ಬತ್ತರಮಪ್ಪ ಸದ್ಧರ್ಮವನಾಭೂ | ವೋತ್ಯಂಸಗೆ ಪೇಳಲಾಗ ||೧೦೨||

ದೊರೆಕೊಂಡಲಬ್ಧವಶದಿ ನಿಜನಿರ್ವೇಗ | ಮಿರದಾಂತತಿವೇಗದೊಳು ||
ವರಸುತ ಚಿತ್ರರಥಗೆ ಪಟ್ಟವಕಟ್ಟಿ | ಧರಿಸಿದನಮಲದೀಕ್ಷೆಯನು ||೧೦೩||

ಬಳಿಕಾಚಿತ್ರರಥಾವನಿಪಾಲಕ | ವಿಲಸಿತಮಪ್ಪಸುವ್ರತವ ||
ತಳೆದಾಬಾಣಸಿಗಗೆಕೊಟ್ಟಗ್ರಾಮವ | ತಳುವಾಡದೆ ತೆಗೆಯಿಸಿದ ||೧೦೪||

ಈಸವಣನದೆಸೆಯಿಂದೆನ್ನುಂಬಳಿ | ಯೋಸರವಾಯ್ತಾಗವೆಂದು ||
ಆ ಸೂಪಕಾರನು ಕಡುಸೊಂದುಕಪಟದಿ | ನಾಸುಧರ್ಮರಬಳಿಗೆಯ್ದಿ ||೧೦೫||

ಚರಣಯುಗಕೆ ವಿನಮಿಸಿಯೆಬೆಮುನಿಪತಿ | ಸುರುಚಿರಮಪ್ಪಸುವ್ರತವ ||
ಪರಪಾಲಿಸೆಸುತ ಕಪಟವಮಾನಸನಂದು | ಧರಿಸಿದನಾಚರಿತವನು ||೧೦೬||

ಪ್ರಾಣಿದಯಾಪರಧರ್ಮವ ಪೊರ್ದಿದ | ಬಾಣಸಿಗನುಗುಣಯೋಗ ||
ಬಾಣದಗುಣಯೋಗದಂದದಿ ಮನದೊಳು | ಹೂಣಿಸಿದುದನೇನೆಂಬೆ ||೧೦೭||

ಈತೆರದಿಂಕಾಪಟ್ಯಚರಿತ್ರೋ | ಪೇತಪಾಚಕನೊಂದುಪಗಲು ||
ಆತಾಪಸಿಜರಿಗೆಗೆಬರೆ ಕುಟಿಲ | ಪ್ರೀತಿಯಿಂದ ತಾನಿಲಿಸಿ ||೧೦೮||

ಭಕ್ಷ್ಯಗಳೊಳು ಗರಳವಕೂಡಿ ಕೈಯೆತ್ತಿ | ಭಿಕ್ಷೆಯನೊಸೆದು ಕೈಕೊಡು ||
ಅಕ್ಷಣದೊಳು ನಿಜದೇಹವಬಿಸುಟು ಮು | ಮುಕ್ಷುಸ್ವರ್ಗಕೆಪೋದನಿತ್ತ ||೧೦೯||

ಯತಿವಧೆಗೆಯ್ದಾಪಾತಕಿಯನು ಭೂ | ಪತಿತಲೆಹೊಯ್ಸಲುಸತ್ತು ||
ಅತಿದುಃಖಮಾವೆಲ್ಲಾನರಕದೊಳುತ | ಪತಿಯಾಗಿ ನೆರೆಜೀವಿಸುತ ||೧೧೦||

ಪಲಪಗಲೀತೆರದಿಂದ ಸಂಸೃತಿಯೆಂಬ | ಜಲರಾಶಿಯ ಮಡುವಿನೊಳು ||
ಸಲೆಸಿಕ್ಕಿ ಊಹಿಸಬಾರದದುಃಖಮ | ನಲಸದೆತಾನುಣ್ಣುತಿರ್ದು ||೧೧೧||

ಎತ್ತಾನುದುರಿತೋಪಶಮದಿನಾರ್ಯಖಂಡ | ದುತ್ತಮಪಲಯದೇಶದೊಳು ||
ಚಿತ್ರರಮಾದ ಪಲಾಶಕೂಟಾಖ್ಯಂ | ಪೆತ್ತುರಂಜಿಪಪಳ್ಳಿಯೊಳು ||೧೧೨||

ಯಕ್ಷದೇವನೆಂಬ ಶೂದ್ರನಾತಸಸತಿ | ಯಕ್ಷದತ್ತೆಯೆಂಬಳವರ್ಗೆ ||
ಯಕ್ಷಿಳನೆಂಬವನಿಂನೆರೆಕಿರಿಯನು | ಯಕ್ಷದತ್ತಪೆಸರ್ಪಡೆದು ||೧೧೩||

ಜನಿಸುಬೆಳೆದು ಮತ್ತಾಸೋದರರೊಂದು | ದಿನದೊಳು ಬೆಳೆದಕಳಮೆಯ ||
ವನವನೋಡುವೆವೆಂದೊಂದುಬಂಡಿಯನೇರಿ | ಯತಿರಾಗದಿಂಬರ್ತಿರ್ದು ||೧೧೪||

ಮತ್ತಲ್ಲಿಯೊಂದುರಗಿಯವೀಲಾಯಕ್ಷ | ದತ್ತತಾನೇರಿದರಧವ ||
ಒತ್ತಿಹಾಯಿಸಲಾವೇಳೆಯೊಳಂತದು | ಸತ್ತುಮತ್ತೀಕ್ಷೇತ್ರದೊಳು ||೧೧೫||

ಭಾಸುರಮಪ್ಪಾ ಶ್ವೇತಪುರಮನಾಳ್ವ | ವಾಸವನಂಬುಜೂಪತಿಗೆ ||
ಆಸತಿ ವಸುದೇವಗೆ ಸಂದಯಶೆಯಂ | ಬಾಸುದತೀಮಣಿಯಾಗಿ ||೧೧೬||

ಜನಿಯಿಸಿ ಗಂಗಸ್ಯಪತಿನಿಸಗೊಲವಿನ | ವನಿತೆಯಾದಳು ಬಳಿಕಿತ್ತ ||
ಜನನುತ ಪಿರಿಯಯಕ್ಕ್ಷಿಳನಾತಮ್ಮನು | ಮುನಿಸಿಂದಾ ಉರಗಿಯನು ||೧೧೭||

ಕೊಂದುದಕಂಡೆಲೆಯನುಜಾತಾನೀ | ನಿಂದುನಿರಪರಾಧಿಯನು ||
ಹೊಂದಿಸುವುದು ಮತವೇಯೆಂದಾವನ | ನಂದುಬೋಧಿಸಲದಕೇಳಿ ||೧೧೮||

ಕರುಣಹೃದಯನಾಗಿ ಕೆಲವಿನಮಿರ್ದಾ | ಮರಣದಿನಾಯಕ್ಷ್ಮದಶ್ಮ ||
ಅರಸಕೇಳ್ನಿರ್ವಾಮಿಕನಾಗಿ ನಿನ್ನೀ | ಯರಸಿಯಬಸಿರೊಳೊಗೆದನು ||೧೧೯||

ಹಿಂದಣಜನ್ಮಾಂತರವೈರದಿಂದಾ | ನಂದಯಶಾದೇವಿಯವಗೆ ||
ಒಂದಿಸಿದಳು ಕೋಪವನೆನೆಕೇಳ್ದಾ | ನಂದದಿನಾಗಂಗನೃಪತಿ ||೧೨೦||

ವೈರಾಗ್ಯದಿಂದ ತನ್ನಾಅರುವರು ಸುಕು | ಮಾರಕರಾವೈಶ್ಯತನುಜ ||
ಕಾರುಣ್ಯನಿಧಿಶಂಖನಿರ್ವಾಮಿಕರುಗ | ಳಾರೆಯ್ದೊಡನೆಯ್ದಿ ಬರಲು ||೧೨೧||

ಭಾವಶುದ್ಧಿಯೊಳುತಪವತಾಳಲಾಗಂಗ | ದೇವನಸತಿಸಂದಯಶೆಯು ||
ರೇವತಿಯೆಂಬಾದಾದಿವೆರಸಿತಾ | ನೋವದೆದೀಕ್ಷೆಯಹಡೆದು ||೧೨೨||

ಮುಂದಣಭವಕೀಯುರುವರುಕುವರರು | ನಂದನರಾಗಬೇಕೆಂದು ||
ನಂದಯಶಾಕಂತಿಕೆಯುರುನಿದಾನವು | ನಂದು ಚೆನ್ನಾಗಿಮಾಡಿದರು ||೧೨೩||

ಆ ರೇವತಿಕಂತಿಕೆತಾನಾರೈ | ದಾರಾಜಸುತರುವರನು ||
ಆರ್ಪೆವೆಮುಂದಣಜನ್ಮಕೆಸುತನುನ ! ವಾರೆನಿದಾನಮಾಡಿದಳು ||೧೨೪||

ಇಂತವರೀರ್ವರುಮಾಡಿ ನಿದಾನವು | ಸಂತತಮಾಜಿನತಪವ ||
ಅಂತರಿಸದೆನೂಡಿ ಸನ್ಯಸನದಿಜೀವಿ | ತಾಂತದೊಳುತ್ತಮವಪ್ಪ ||೧೨೫||

ಪದಿನಾರನೆಯಸಗ್ಗದೊಳು ಸಂಜನಿಯಿಸಿ | ನದನುಲತರಸುಖವುಂಡು ||
ಒದವಿದಮರಣಮುಖದಿದೇವಸೇನಗೆ | ಉದಯಿಸಿಕಡುಜೆಲ್ವವಡೆದ ||೧೨೬||

ದೇವಕಿಯೆಂಬನಾಮವನುಹಡೆದು ವಸು | ದೇವನಿನಗೆಸತಿಯಾದ ||
ರೇವತಿಚರದೇವನುಬಂದು ಮಲಯವೆಂ | ಬಾವಿಷಯದಮಧ್ಯದೊಳು ||೧೨೭||

ಪರಿರಂಜಿಸುವಭದ್ರಿಳಮೆಂಬನಗರಿಯ | ವರದಸುದೃಷ್ಟಿಯೆಂಬವಗೆ ||
ಗರುವೆಯಳಕೆಯೆಂಬವಲ್ಲಭೆಯಾಗಿ ಬಂ | ಧುರಶೀಲವತಿಯಾದಳತ್ತ ||೧೨೮||

ಆ ವೈಶ್ಯಸುಃಶಂಖಮುನಿಸತ್ಕುಸಲೆ ಸುಃಖ | ವಿಾವಮಹಾಶುಕ್ರದೊಳು ||
ಒವದೆಜನಿಸಿಯಲ್ಲಿಂಬಂದೀಬಲ | ದೇವನಾಗಿಯೆ ಪುಟ್ಟಿದನು ||೧೨೯||

ಮತ್ತಾಗಂಗನೃಪಾಲಕನಾತ್ಮಜ | ರುತ್ತಮರರುಪರುತಪದಿ ||
ಸತ್ಕುಮಃತ್ಮಸಗ್ಗದೊಳುಸೊಜನಿಯಿಸಿ | ಪಿತ್ಕರಪಹಸುಖವುಂಡು ||೧೩೦||

ಅಲ್ಲಿಂವಿಗತವೇವಿಗಳಾಗಿಯೆಲೆ ಭೂ | ವಲ್ಲಭ ನಿನಗೆ ಮುಜ್ಜಾಳು ||
ಸಲ್ಲಲಿತಾಕಾರದವಮಳುಗಳಾಗಿತಾ | ವುಲಾ ಸದಿಃಜನಿಸುವರು ||೧೩೧||

ಆ ಗುಡುಮಕ್ಕಳಸಿಂದ್ರನಬಿಸದಿಂ | ನೈಗಮದೇವನೆಂಬವನು ||
ಬೇಗದೊಳೆತ್ತಿಕೊಂಡಳಕೆಯಬಳಿಗನು | ರಾಗದಿತಂದಿರಿಸುವನು ||೧೩೨||

ಅವಳುಪೆತ್ತರೆಯಾಯುಷ್ಯದಮಕ್ಕಳ | ಯುವತಿದೇವಕಿಯಮುಂದಿಡಲು ||
ತವಕದಿಬಂದಾ ಅರುವರುಮಕ್ಕಳ | ತವೆಕೊಲಿಸುವನಾಕಂಸ ||೧೩೩||

ಬಳಿಕತ್ಯಲಳಕೆ ಸಾಕಿದನಿನ್ನಮಕ್ಕಳು | ಸುಲಲಿತಚರಮಾಂಗಿಗಳು ||
ತಳುವದೆದೀಕ್ಷೆಯಧರಿಯಿಸಿನಿರ್ವಾಣ | ಲಲನೆಗೆನಲ್ಲರಾಗುವರು ||೧೩೪||

ಘೂಪರಕೇಳಾನಿರ್ವಾಮಿಕಚರ | ದೇವಸುನಿನ್ನಿರಮಣಿ ||
ದೇವಕಿಯೊಡಲೊಳಗೊಗೆದೇಳುತಿಂಗಳು | ತೀವಲೊಡನೆಸಂಜನಿಸಿ ||೧೩೫||

ಪೆರತೊಂದೆಡೆಯೊಳುಬೆಳೆದು ಮಾರಾಂತರ | ನುರದಿಕ್ಕಿಮುರೆಹೊಕ್ಕರನು ||
ನೆರೆರಕ್ಷಿಸಿಯರ್ಧಚಕ್ರೇಶ್ವರನಾಗಿ | ಮೆರೆವನುಭೂತಳದೊಳಗೆ ||೧೩೬||

ಈನುಡಿವುರುತೀರ್ಥಕರುಭರತಧರ | ಣೀನಾಥಗೆನಿರವಿಸಿದ ||
ಮಾನಿತಮಪ್ಪವಚನಮಿಂತಿದನಂಬು | ನೀನೆಂದಾಮುನಿಯುಸುರೆ ||೧೩೭||

ಸವಣೋಅಮೋಘವಯಣೊಯೆಂದುಘೂಮಾ | ಧವತಿಲಕನುವಸುದೇವ ||
ಯುವತಿಸಹತಯತಿಗೆರಗಿಬೀಳ್ಕೊಂಡಾ | ಭವನಕೆನಡೆತಂದನಾಗ ||೧೩೮||

ಜನಸುತಜಯಜಾಯಾಪತಿಸೂತನ | ಮನಸಿಜಮನುಜಮಂದಾರ ||
ಘನಗುಣಘೂಷಣನೆಸೆದನುಸಜ್ಜನ | ವನರುಹವನಭಾಸ್ಕರನು ||೧೩೯||

ಇದುಃಜಿನಪದಸರಸಿಜಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿ ನೇಮಿಜಿನೇಶಸಂಗತಿಯೊಳ | ಗೊದವಿದಾಶ್ವಾಸವೀರೇಳು ||೧೪೦||

ಹದಿನಾಲ್ಕನೆಯ ಸಂಧಿ ಸಂಪೂರ್ಣಂ

೧೫ ಕೃಷ್ಣೋದಯವರ್ಣನಾಸಂಧಿ

ಶ್ರೀಮದಮರಪತಿವಾಲಕೀಲಿತಪಾದ | ತಾನುರನಿದ್ವಯನಜಗೆ ||
ಕಾಮಮದೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತಿರಗುವೆನು ||೧||

ಆಲಲಿತಾಂಗಿಯ ಗರ್ಭಜೆಳೆದು ಬಳಿ | ಕೇಳುತಿಂಗಳು ಸಮನಿಸಿದ ||
ವೇಳೆಯೊಳಾಪಾತಕಿ ಕಂಸನಿರದೆ ತ | ನ್ನಾಲಯಕೊಡಗೊಂಡುಪೋಗಿ ||೨||

ಅಂತರಂಗದಹಗೆ ಬಹಿರಂಗದ ಹಿತ | ವಂತಿಕೆಯಿಂದುಪ್ಪನಿರಲು ||
ಅಂತದನರಿದಾಮುನಿವಾಕ್ಯವನಂಬಿ | ಕಾಂತೆನಿಶ್ಚಿಂತದಿನಿರ್ದು ||೩||

ನವಮಾಸವ್ರತೀಪವಜ್ರದೇಹಿಗಳಪ್ಪ | ಜವಳಿಮಕ್ಕಳನು ಹಡೆಯಲು ||
ತವಕದಿನಿದ್ರಸಬೆಸದಿಂಸೈಗಮ | ದಿವಿಜಾತನಾಬಳಿಗೈದಿ ||೪||

ಲಲನೆಗೆ ಮಾಯಾನಿದ್ರೆಯನೊದವಿಸಿ | ಯಳಕೆಹೆತ್ತಾಸಿಸುಗಳನು ||
ತಳುವದೆತಂದಲ್ಲಮಡಗಿ ಮತ್ತಾಶಿಶು | ಗಳನಲ್ಲಿಗೆ ಕೊಂಡುಪೋದ ||೫||

ಆಸಮಯದೊಳೈತಂದು ಹೆರಿಸಬಂ | ದಾಸೂನೆಗಾತಿಗೆಹೇಳಿ ||
ಓಸರಿಸದೆಯರೆಯಾಯುಷ್ಯವ ಹಡೆ | ದಾಶಿಶುಗಳಕೊರಲುಗಳ ||೬||

ಅರುಗುಲಿತನದಿಮುರಿಸಿ ಬಹಿರಂಗದ | ಮರುಕದಿನಾದೇವಕಿಯನು ||
ನೆರೆಯುಪಚರಿಸಿನೋಯದ ಕಣ್ಗಳಿಂ ನೀರ | ನೊರಯಿಸಿನಿಶ್ಚಿಂತಮಿರ್ದ ||೭||

ಇಂತು ಮೂರುಸೂಳವಳಿ ಮಕ್ಕಳನು ಕೃ | ತಾಂತನಂದದಿನಾಕಂಸ ||
ಅಂತರಿಸದೆ ಹತಿಯಿಸಿ ಮುನಿವಚನವ | ನಂತಾನುಗೆಲಿದೆನೆಂದೆನ.ತ ||೮||

ಘನತರವಹಕೃತಕದಿನಿರದಾಕಂಸ । ಮನೆಮರೆಯೊಳು ಮಾಡಿಸಿದ ||
ಮುನಿಸುಗಿಚ್ಚುಹೊರಹೊಮ್ಮಿದುದಚುಗೆಯ | ಮನೆಯ ಕಿಚ್ಚಿನಹೊಗೆಯಂತೆ ||೯||

ಈತೆರದಿಂ ಕಪಟವಮಾಡಿ ಮತ್ತಾ | ಪಾತಕಿ ನಿಶ್ಚಿಂತಮಿರಲು ||
ಆತನುಜಾತರಗಲ್ಕೆಯದಃಖದಿ | ನಾತರುಣೀಮಣಿಯಿರಲು ||೧೦||

ಒಂದುದಿವಸ ಋತುಮತಿಯಾಗಿ ನಾಲ್ಮೀರ | ಮಿಂದುಬಳಿಯತೊಡವಿಟ್ಟು ||
ಕಂದರ್ಪನಿಭವಸುದೇವನ ಸೂಳ್ಗೈ | ತಂದುರತಿಯೊಳೋಲಾಡಿ ||೧೧||

ಬೆಳಗಪ್ಪಜಾವದೊಳಗೆ ರವಿಶಶಿಕರಿ | ಕಳಭಕೇಸರಿ ಚಕ್ರಗಳನು ||
ಲಲನೆಕನಸಿನೊಳುಕಂಡುಪ್ಪವಡಿಸಿ | ಬಳಿಕದನಿನೆಯನೊಳುಸುರೆ ||೧೨||

ಬಾಲೆನೀನು ಕಂಡಕನಸಿನಿಂವಿಕ್ರಮ | ಶಾಲಿವಿಶ್ವಂಭರೇಶ್ವರನು ||
ಬಾಲಕ ನಿನಗೋರ್ವನಪ್ಪನೆಂಬುದಕೇಳಿ | ಲೀಲೆಯೊಳಾಸತಿಯಿರಲು ||೧೩||

ಆ ನಿರ್ಜಾಮಿಕಚರದೇವನೆಯ್ತಂದು | ಮಾನಿನಿಯಮಲಗರ್ಭದೊಳು ||
ತಾನಿರದುದಯಿಸಿದನು ಶುಕ್ತಿಯೊಳುಪುಟ್ಟು | ವಾನವಮೌಕ್ತಿಕದಂತೆ ||೧೪||

ಕೇಡನೆಣಿಸುವೆನೆಂಬಾಕಂಸಗೆ ಎಳ್ತು | ಮೂಡಿಬೆಳೆವಮಾಳ್ಕೆಯೊಳು ||
ಮೂಡಿ ಬೆಳೆದುಗರ್ಭಚಿಹ್ನಕಾಣಿಸಿತಾ | ಗಾಡಿಕಾತಿ ದೇವಕಿಗೆ ||೧೫||

ಕರವನೀಡುವ ಕಂಸನನುಂಗುವೆನೆಂ | ದುರುಗರ್ಭನಿಧಿಯಮೇಲಿರ್ದ ||
ಕರಿಯನಾಗರವೊಲಿರ್ದುದು ದೇವಕಾವಳಿ | ಸರಸಿಜದಳಲೋಚನೆಗೆ ||೧೬||

ಕಡುಗಲಿ ಕಂಸನಹಣೆಯಕ್ಷರವನಿಂ | ತಡಗಿಪೆನೆಂದು ತೋರ್ಪಂತೆ ||
ಮಡದಿಯೊಡಲಸಿಸುಬೆಳೆದು ತ್ರಿವಳಿಗಳ | ನಡಗಿಸಿತದನೇನೆಂಬೆ ||೧೭||

ಈವಿಧದಿಂ ಸಿಸುವಿನಗರ್ಭಮಾವಸು | ದೇವನ ಪಟ್ಟದಸುದತಿ ||
ದೇವಕಿದೇವಿಗೆ ಬೆಳೆದೇಳುತಿಂಗಳು | ತೀವಿದ-ತ್ಯಮಲಗ್ನದೊಳು ||೧೮||

ದುಷ್ಟಚತುಷ್ಟಯಕಷ್ಟಮಚಂದ್ರನ | ದೃಷ್ಟನಾಗಿಪಡೆವಂತೆ ||
ಅಷ್ಟಮಿಯರ್ಧರಾತ್ರಿಯೊಳರ್ಧಚಕ್ರಿಯ | ನಿಷ್ಟದಿನವಳುಪಡೆದಳು ||೧೯||

ನೀಚದಪುತ್ರಿಕೆಗಸುವೂರಿಸಿದಂತೆ | ಬಾಲಕ ಸೊಗಯಿಸುತಿರ್ಪ ||
ವೇಳೆಯೊಳೊಸಗೆಯದೇವದುಂದುಭಿಯಂತೆ | ಮೇಲೆ ಗುಡುಗುಮೊಳಗಿದುದು||೨೦||

ಆ ವಸುದೇವಕುಮಾರನ ನಿಜನೈರಿ | ಭೂವರತತಿಯಪಕೀರ್ತಿ ||
ಆವರಿಸುವಮಾಳ್ಕೆಯೊಳುದಿಕ್ತಟವನು | ತೀವಿದುದಾಕಾಳಮೇಘ ||೨೧||

ಇಂತೊಡ್ಡಿಕಣ್ಣಾಹುಯ್ವರ ಕಾಣಲಬ್ಬರ | ದಂತಾದ ಮಳೆಯಮೋಡದೊಳು ||
ಅಂತರವಿಲ್ಲದೆ ಸುರಿಪಸೋನೆಯೊಳು ಭೂ | ಕಾಂತನಾಶಿಶುವನುಸೋದಿ ||೨೨||

ಹಿಂದೆಹುಟ್ಟಿದ ಮಕ್ಕಳನಾಘಾತಕಿ | ಕೊಂದನು ಮತ್ತಾತೆರದಿ ||
ಇಂದೀಶಿಶುವನುಕೊಲ್ಲದೆನಿಲ್ವನ | ಲ್ಲೆಂದು ಪಿರಿದು-ಮರುಕದೊಳು ||೨೩||

ಮತ್ತಾಮಗುವನುಕಂಡು ನಿಕ್ಷೇಪವ | ನೆತ್ತುವಂತಾವಸುದೇವ ||
ಎತ್ತಿಕೊಂಡಾಮನೆಯನು ಪೊರಮಟ್ಟು ಬ | ರುತ್ತಿರಲಾಕಾವಳದೊಳು ||೨೪||

ಧಾತ್ರೀಪಲಯವೆನ್ನೀತಮ್ಮಗೇಕ | ಚ್ಛತ್ರವೆಂಬಂತೊಂದುಕೊಡೆಯ ||
ಮಿತ್ರತ್ವದಿಂಬಲರಾಮ ಪಿಡಿಯಲಾ | ರಾತ್ರಿಯೊಳಗೆ ನಡೆತಂದು ||೨೫||

ಆ ಪುರವರದಕಡೆಯ ಹೆಬ್ಬಾಗಿಲ | ಗೋಪುರಪರಿಯಂತರೈದಿ ||
ಆಪಡಿಹೊಚ್ಚಿರಲ್ಲಿಂಮುಂದಕೆ | ಪೋಪಹಾದಿಯನು ಪಡೆಯದೆ ||೨೬||

ಪಿರಿದುಚಿಂತಿಸುತಿರಲಾ ಪುಣ್ಯಶಿಶುವಿನ | ಚರಣಾರುಣರುಚಿಸೋಂಕೆ ||
ತರಣಿಕಿರಣವ ಕಂಡಾಕಂಜಮಲರ್ವಂತೆ | ಬಿರಿದುವಾಪೊಳಲಕವಾಟ ||೨೭||

ಪಡಿದೆಗೆಯಲು ಪಸುಳೆಯಪುಣ್ಯಕೆ ಜೋದ್ಯ | ವಡುತಲ್ಲಿಂಪೊರಮಟ್ಟು ||
ಇಡಿಕಿರಿದಾಗಿ ದಾರಿಯೊಳು ಮುಂದಕೆಹೋಹ | ಹಡೆಯದೆ ಚಿಂತಿಸುತಿರಲು ||೨೮||

ಮತ್ತಾಪುಗುವಿನಸುಕೃತದೇವತೆಯೆರ | ಡುತ್ತುಂಗಮಪ್ಪಕೊಂಬಿನೊಳು ||
ಪೊತ್ತುಪಜ್ಜಳಿಪದೀಪವನುವೃಷಭರೂಪ | ವೆತ್ತುಮುಂದಕೆನಡೆತರಲು ||೨೯||

ಆ ವೃಷಭನಬೆಂಬಳಿಗೊಂಡುಬಂದುಮ | ತ್ತಾವಿಭುಗಳುಮುಂಗಡೆಯೊಳು ||
ತೀವಿಪರಿವಜಗುನೆಯುಕಂಡಿಂತಿದ | ನಾವಂದದಿದಾಂಟುವೆವು ||೩೦||

ತಳುವದೆಂದಿಂತುಚಿಂತಿಸುತಿರಲಾಗೂಳಿ | ಸಳನಳಿಸುತಪರಿತಪ್ಪ ||
ಹೊಳೆಯಹಾಯಲುಕಟ್ಟೆಯಕಟ್ಟಿದವಾಳ್ಕೆ | ಯೊಳಗದರೊಳುಕಾಣಿಸಿತು ||೩೧||

ಈಪ್ರಥದಿಂ ದಾರಿದೋರಿದವೊಳೆಯೊಳ | ಗಾವಸುದೇವನಾಬಲನು ||
ಆವೃಷಭನಬೆಂಬಿಡಿದಾಚೆಮುತಡಿ | ಗೋವದೆನಡೆತಂದರಾಗ ||೩೨||

ಆನದಿಯನುದಾಂಟಿ ಕೆಲದೂರನಡೆತಂ | ದಾನೆಲೆಯೊಳಗಿವ್ವುದೊಂದು ||
ಮಾನಿತಮಪ್ಪಯಕ್ಷಿಯಗೃಹವಿಯಂತ | ರಾನಂದದಿಂದೈದಿದರು ||೩೩||

ಆವೇಳೆಯೊಳಗದೃಶ್ಯತೆಯನುಹಡೆ | ದಾವೃಷಭನುಪೋಗಲಾಗ ||
ಆವಸುದೇವನಾಸುತಗೂಡಿಯಾಯಕ್ಷಿ | ಯಾವಾಸಕೆಹೋಗಿರಲು ||೩೪||

ನಂದನೆಂಬವನುಕೈದೀವಿಗೆಸಹಿತಾ | ಮಂದಿರಕೆಯ್ತರುತಿರಲು ||
ಬಂದಪನಾಕಂಸನೆಂದಂಜಿದೀವಿಯ | ಹಿಂದೆಯಡಗಿಕೊಂಡಿರಲು ||೩೫||

ಅನಿತರೊಳೊಂದುಪೆಣ್ಣಾಸನುಕೊಂಡಾ | ಮನೆಯೊಕ್ಕಾಗೋವಳನು ||
ವಿನಯವಿದೂರನಾಯಕ್ಷಿಯಮುಂದೆನಿಂ | ದಿನಿಸುಕೋಪಾಟೋಪದಿಂದ ||೩೬||

ಎಲೆದೇವಿಯಿನ್ನಸಂಬಿಸಿಗಂಡುಮಗುವನು | ಒಲಿದುವರವನೀವೆನೆಂದು ||
ಹಲವುತೆರದಿಹಸನಾದಪೂಜೆಯನಾ | ಹಲವುಹಗಲುಕೈಕೊಂಡು ||೩೭||

ಹರಕೆಯಹಣವೆಂದುನಂಬಿಸಿತೆಗೆದತಿ | ಕರುಣವೆಂಬುದಿನಿತಾಯ್ತು ||
ವತಸತಿಗೋಪಿದೇವಿಗೆ ಗಂಡುಮಕ್ಕಳ | ವರವಕೊಡದೆ ಹೆಣ್ಣುಮಗುವ ||೩೮||

ನೀನೀಯಬಹುದೆನೀನಿತ್ತಪೀಡೆಯನಿನ್ನು | ನೀನೇತೆಗೆದುಕೊಳ್ಳೆಂದು ||
ಆ ನಂದನಾಕೂಸನಿರಿಸಿಯಲ್ಲಿಂಕೋಪ | ಮಾನಸವೊರಮಡಲಾಗ ||೩೯||

ಅನಿತರೊಳರಸುವನಿಧಿಯನೆಡಹಿಕಂಡೆ | ವೆನುತಸುತನನಲ್ಲಿರಿಸಿ ||
ಜನನುತವಸುದೇವನಾಪೆಣ್ಣುಸುಮನ | ದನುರಾಗದಿಂಕೈಕೊಂಡು ||೪೦||

ಬಲದೇವನಕೈಯಕೊಟ್ಟಾದೇವಿಯ | ಸಿಲಯದಬಾಗಿಲ್ಗೆಯ್ದಿ ||
ಎಲೆಗೋಪಸಿಸಗೊಂದುಗಂಡುಮಗುವನಾ | ನೊಲಿದೀವೆನು ತಿರುಗೆನಲು ||೪೧||

ತಿರುಗಿ ನೀಲದಬೊಂಬೆಯಂದದಿತೊಳಗುವ | ತರುಣನನೊಸೆದೆತ್ತಿಕೊಂಡು ||
ವರವನಿತ್ತಳು ದೇವಿಯೆಂದುವಿನತನಾಗಿ | ಹರಿಸದಿವನೆಗೆಯ್ತಂದು ||೪೨||

ಯಕ್ಷ್ಮಿಯೆನ್ನ ನುಕರೆದೀಗಂಡುಮಗುವ ಪ್ರ | ತ್ಯಕ್ಷದಿನಿತ್ತಳೆಮ್ಮಂತೆ ||
ಈಕ್ಷಿತಿಯೊಳುಪುಣ್ಯವಂತರುಂಟೀಕಮ | ಲಾಕ್ಷಿಕೈಕೊಳ್ಳಿಲವಿಂದ ||೪೩||

ಎಂದಾನಂದದಿನಾನಂದನಾಕೂಸ | ನಂದುಕೊಡಲುಕೈಕೊಂಡು ||
ಇಂದುವದನೆಕಣ್ಗುರುಡರ್ಗಿಕಣ್ಗಳು | ಬಂದಂತಿಹರ-ಷವೆಯ್ದಿದಳು ||೪೪||

ಆಕೃಷ್ಣಯಕ್ಷ್ಮಿಯವರದತನುಜನೆಂ | ದಾಕುವರಗೆಕೃಷ್ಣವೆಸರ ||
ಗೋಕುಲದಧಿಪತಿಯಾನಂದನೊಲವಿಂ | ಸ್ವೀಕಾರವಮಾಡಿದನು ||೪೫||

ವಸುದೇವನಿತ್ತಲಾಬಾಲೆಯನೆತ್ತಿಕೊಂ | ಡೊಸೆದಾಮಧುರೆಗೆಬಂದು ||
ಅಸಿಯಳುದೇವಕಿಯೊಡನಾಪ್ಪಪಂಚಮ | ನುಸುರಿಯಾಮಗ-ವನುಕೊಡಲು ||೪೬||

ಏಳುತಿಂಗಳಗರ್ಭದೊಳಗಾದೇವಕಿ | ಬಾಲಕಿಯನುಪೆತ್ತಳೆಂದು ||
ಕೇಳಿಮತ್ತಾಕಂಸತನ್ನೊಳಗಿಂತೆಂ | ದಾಳೋಚನೆಯಮಾಡಿದನು ||೪೭||

ಆ ಪೆಣ್ಮಗುವಿನಗುಡನದೆಸೆಯಿಂ | ದಾಪತ್ತುತನಗಪ್ಪುದೆಂದು ||
ಆ ಪಸುಳೆಯಮೂಗನಾರರಿಯದವೊಲು | ಪಾಪಕರ್ಮಿಯೊತ್ತಿಸಿದನು ||೪೮||

ಈಪರಿಯಿಂದಮಯೋಗ್ಯಮಪ್ಪಂತೆ ಕು | ರೂಪಾಗಿಸಂತತಬೆಳೆದು ||
ಆ ಪೆಣ್ಣಾರೂಪಿಗೆತಾನೇಹೇಸಿ | ತಾಪಸರೂಪನುತಾಳಿ ||೪೯||

ಭಾವಶುದ್ಧಿಯೊಳುವಿಂಧ್ಯವಹೊಕ್ಕುತಪಗೆಯ್ದು | ದೇವಲೋಕದೊಳುದ್ಭವಿಸಲು ||
ಆ ವನಚರರಾರೂಪವವಿಂಧ್ಯಾ | ದೇವತೆಯೆಂದುಪೂಜಿಪರು ||೫೦||

ಇತ್ಯಕಂಸನಮನೆಯೊಳುಸುರಿದುದುಕ | ನ್ನೆತ್ಯರಹನಿಮತ್ತವನ ||
ಸತ್ತಿಗೆಮುರಿದುದವನಗದ್ದುಗೆಯುದಿ | ರಿತ್ತುಬಿದ್ದುದುಪಗಲುಳ್ಕು ||೫೧||

ವಸದೇವತೆಗಳತ್ಯವುಕೂರಸಿಗಳ | ಮೊಸೆಯೊಳುಕಿಡಿಸೂಸಿದುವು ||
ಘನತರನ.ಪ್ಪದುಭುತವಹಡೆದು ಸು | ಜನಿಸಿತು ಭೂಕಂಪನವು ||೫೨||

ಕಂಸನಂತದಕಂಡುಮುಗಿಲದನಿಯುಕೇಳ್ದ | ಹಂಸನಂದದಿನಿದೇನೆಂದು ||
ಹಂಸಹಾರಿಯೋರ್ವಶಕುನಿಗನೊಳಗೆ ಪ್ರ | ಶಂಸೆಯನಿಂತುಮಾಡಿದನು ||೫೩||

ಏನುಕಾರಣವಿಾ ಉತ್ಪಾತವೆನಲೆಂದ | ನೀನೆಲದೊಳು ಭೂಪನಿನಗೆ ||
ಭೂಸುತವಿಕ್ರಮಶಾಲಿಪಗೆವನೋರ್ವ | ನಾನದೆಬೆಳೆಯುತಲಹನೆ ||೫೪||

ಎಂದಮಾತಿಗೆಶಂಕೆಗೊಂಬವೇಳೆಯೊಳಾ | ನಿಂದಣಭವದೊಳುತನ್ನ ||
ಬಂದುಬೆಸನಬೇಡಿದದೇವತೆಗಳೈ | ತಂದು ಕಂಸಾವನಿಪಾಲಾ ||೫೫||

ಮುನಿಪತಿನೀನಾಗಿರ್ದಜನ್ಮದೊಳಾವು | ನಿನಗೆಬೆಸನಮಾಡುವೆವು ||
ಎನಲುಮುಂದಣಜನ್ಮಕೊದಗಿಯೆಂದೆಯಲಾ | ಅನಿತರಿಂದೀಗಲೆಯ್ದಿದೆವು ||೫೬||

ಆರಸುಗೊಳ್ವೆವಾರನು ನಿನಗೆರಗಿಪೆ | ವಾರಬೀರವನುಬಾರಿಪೆವು ||
ಆರನೊಣವೆವಾರ ದಿಗುಬಲಿಗೊಡುವೆ | ವಾರನಾರಂತೆ ಸೀಳುವೆವು ||೫೭||

ಬೆಸಸು ಬೆಸಸುಕಂಸಭೂಪತಿಯೆನಲೀ | ವಸುಧೆಯೊಳೆನಗೋರ್ವವೈರಿ ||
ಎಸಕದಿಬೆಳೆವುತಲಹನೆ ನೀವಿರದೆಯ್ದಿ | ಮಸಕದಿನವನಕೊಲುವುದು ||೫೮||

ಎನಲಾದೇವತೆಯರು ತಾಮೇಳ್ವರು | ವಿನುತವಿಭಂಗಬೋಧದೊಳು ||
ವನರುಹನಾಭನು ಬೆಳೆವನಲೆಯನರಿ | ದೆನಿತ-ಕೋಪದಿನಲ್ಲಿಗೆಯ್ದಿ ||೫೯||

ನಾವೆಲ್ಲರುಕೂಡಿಕೊಲ್ವಡೆ ನರಕೀಟಕ | ನಿಾವೈರಿಯಂತದರಿಂದ ||
ನಾವೊಬ್ಬರೊಬ್ಬರೆ ಪೋಗಿಕೊಲ್ಲುವೆವೆಂ | ದೋವದೆಪೂತಿನಿಯೆಂಬ ||೬೦||

ದೇವತೆಯಾಗೋಪಿ ನೀರ್ಗೆಪೋದೆಡೆಯೊಳ | ಗಾವಾಸಕೆನಡೆತಂದು ||
ಆವನಜಾಕ್ಷಿಯಶೋದೆಯರೂಪನಂ | ದೋವದೆತೀವಿಕೋಪದೊಳು ||೬೧||

ತೊಟ್ಟನೆಬಂದುಹಸಿದೆಮಗನೇಯೆಂದು | ತೊಟ್ಟಿಲೊಳಿರ್ದಮಗುವನು ||
ಕಟ್ಟೊಲುಮೆಯವೊಲುತೆಗೆದು ತನ್ನೆದೆಯಮೇ | ಲಿಟ್ಟುಕೊಂಡಳು ಮುದ್ದಾಡಿ ||
ಹಸಿದೆಯಲಾಯೆನ್ನ ಹಿಡಿಹೋರಿಕೊಳ್ಳೆಂದು | ವಿಷವನೂಡಿದತನ್ನ ಮೊಲೆಯ ||
ಮಸಕದಿಕೊಡೆಪುಣ್ಯಪ್ರಭಾವದಿನಾ | ಸಿಸುಬೇಗದೊಳು ಮೊಲೆಗರ್ಚಿ ||೬೩||

ವಿಷವನೆಲ್ಲವನುಂಡಾ ಮೊಲೆಯೊಳಗುಳ್ಳ | ಬಿಸಿಯರಕ್ಕವನೆಲ್ಲವನು ||
ಹಸಿವುಹೋಗದೆಮತ್ತೆ ನೆರೆಹೀರುತಿರಲು | ಬ್ಬಸಮಾಗಿ ತಳಹೊಳಗೊಂಡು ||೬೪||

ಉಸುರಿಗುಬ್ಬಸಮಾಗಿಯುಸುರರಿಗಿಡುತಾ | ಸಸುರನಾಗಿದೆಯೆಂದವಳು ||
ಅಸವಸದಿಂದಮೊಲೆಯುತೂನಲ್ಕಾ | ಸಿಸುಕಚ್ಚಿ ಬಿಡದಿರಲಾಗ ||೬೫||

ಮತ್ತಾಮಗುವಿನಬಾಯೊಳು ಮೊಲೆದೊಟ್ಟ | ಕಿತ್ತುಹೋಹಂದದಿತುಯ್ದು ||
ನೆತ್ತರುಸುರಿವುತಿದೆಲ್ಲಿಯುಮಿಳ್ಕುವೆ | ನುತ್ತರಕ್ಕ ಸಿಪೋದಳಿತ್ತ ||೬೬||

ಮತ್ತೆಯುಶೋದೆ ನೀರಸುತಂದುಮನೆವೊಕ್ಕು | ನೆತ್ತರೊಕ್ಕಿರಲಲ್ಲಿಕಂಡು ||
ಒತ್ತಿಬೆದರಿಕೆಟ್ಟಿಮಗನೆಯಿನ್ನೇವೆನೆ | ನುತ್ತತೊಟ್ಟಿಲಬಳಿಗೈದಿ ||೬೭||

ಅರಕ್ಕಸಿಯಮೊಲೆದೊಟ್ಟು ಬಾಯೊಳುಸಿಕ್ಕಿ | ಯಾರಕುತದಧಾರೆಸುರಿವ ||
ಚಾರುಕಪೋಲಸಹಿತ ಬಾಲಕೃಷ್ಣನು | ಧಾರುಣಿಯೊಳುಬಿದ್ದಿರಲು ||೬೮||

ಎತ್ತಿಕೊಂಡಾಮೊಲೆ ದೊಟ್ಟತೆಗೆದುಬಾಯು | ಹತ್ತಿದನೆತ್ತರ ತೊಳೆದು ||
ಮತ್ತೆತೂಪಿರಿದು ಮುಂಡಾಡಿಮೊಲೆಯಸೊಲಿ | ದಿತ್ತು ಮೊಗವನೋಡಿದಳು||೬೯||

ಹರಕೆದೆಗೆದು ಮತ್ತಾಕೃಷ್ಣಯಕ್ಷಿಗೆ | ಹರಿಸದಿಂದಾ ಹಸುಳೆಯನು ||
ಕೊರಲದೇವರಹೊನ್ನ ನೋವುವವೊಲುಕಡು | ಹರಿಸದಿಸಾಕುತಲಿರಲು ||೭೦||

ಹೊಂಬಣ್ಣದಂಬುಜದೊಳು ಝೇಂಕರಿಸುತ | ತುಂಬಿಪಸುಳೆಬೆಳೆವಂತೆ ||
ತುಂಬಿಗರೆವ್ರತಕೃಷ್ಣನು ಹೊಸ್ನತೊಟ್ಟಿಲೊ | ಳಿಂಬಾಗಿಬೆಳೆವುತಲಿರ್ದ ||೭೧||

ದುರುಳಚಾಣೂರಮುಷ್ಟಿಗರನೊದೆದುಗುದ್ದಿ | ಯರಸುವ ಮಲ್ಲವಿದ್ಯೆಯನು ||
ಭರದಿಸಾಧಿಸುವಂತೆ ತೊಟ್ಟಿಲೊಳಾಹರಿ | ಕರಜಚರಣವನಾಡಿಸುವನು ||೭೨||

ಕಾಕಾಕಾರವಕೈಕೊಂಡು ಕೋಪದಿ | ಮಾಕಾಳಿಯೆಂಬೋರ್ವಳಸುರೆ ||
ಆಕುಲಿಶೋಪಮನಿಶಿತ ಚಂಚುವಿನಿಂ | ದಾ ಕೃಷ್ಣನಿರ್ದೆಡೆಗೈದಿ ||೭೩||

ದಿಟ್ಟಿಗಳನುಕುಟುಕುವಸಮಯದೊಳಾ | ದಿಟ್ಟನುಪೊರಕೈಯಿಂದ ||
ಮುಟ್ಟಿಬೀಸಲು ಬೀಳ್ದುದಿಂದ್ರನುಹೊಡೆದಾ | ರಟ್ಟಿಯಬೆಟ್ಟಬೀಳ್ವಂತೆ ||೭೪||

ಕಾಕಾಕಾಯೆಂದು ಕೊಕ್ಕನೆಲಕ್ಕೂರಿ | ಮಾಕಾಳಿಕೆಟ್ಟಿನಾನೆಂದು ||
ಕಾಕಾಕಾರವ ಬಿಟ್ಟದೃಶ್ಯತೆವೆತ್ತು | ಸಾಕಿದೆನುತಪೋಗಲಿತ್ತ ||೭೫||

ಬಂದುಯಶೋದೆಯಿದೆಲ್ಲಿಯ ಬಲುಮಿಳ್ಕ | ವೆಂದು ಸಿಸುವನೆತ್ತಿಕೊಂಡು ||
ಇಂದಿಗೆರಡುಕಂಟಕಹಸುಳೆಗೆ ತಪ್ಪಿ | ತೆಂದತಿಸಂತಸದಿಂದ ||೭೬||

ಎನ್ನ ದೇವತೆ ಕೃಷ್ಣಯಕ್ಷಿಯಕರುಣವೆಂ | ಬುನ್ನತವಹವಜ್ರಕವಚ ||
ಎನ್ನ ಶಿಶುವಿನಂಗಕುಂಟೆಂದು ಸಿಕ್ಷಯ | ವಂನೆರೆಮಾಡಿಕೊಂಡಿರಲು ||೭೭||

ಉರುಳಿಟ್ಟಂಬಿಗಲಿಸಿ ದಟ್ಟಡಿಯಿಟ್ಟು | ಪರದಾಡುವಸಮಯದೊಳು ||
ಉರುತರಕೋಪವಿ ಕೌಶಂಬಿಯೆಂಬ ನಿ | ಷ್ಠುರಮಪ್ಪರಕ್ಕಸಿಯೈದಿ ||೭೮||

ರಾಸಭರೂಪಧರಿಸಿ ಪರಿಪರಿದು ಕ | ಟ್ಟಾಸುರಮಾಗಿಘೋಷಿಸುತ ||
ಓಸರಿಸದೆಕಚ್ಚಿಕೊಲುವೆನೆನುತ ಬರ | ಲಾಸಿಸುವಂತದಕಂಡು ||೭೯||

ಭರದಿಂಕಚ್ಚುವೆನೆಂದು ತೆರೆದತುಟಿ | ಎರಡನೆರಡುಕರದಿಂದ ||
ಎರಡುಹಸುಗೆಯಪ್ಪಂದದಿ ಸರ್ರನೆ | ಉರುಕೋಪದಿಂದ ಸೀಳಿದುದು ||೮೦||

ಸೀಳಿಹಾಕಲೊಡನಾಬಲುರಾಸಭ | ಗೋಳಿಡುತಂದದೃಶ್ಯತೆಯ ||
ತಾಳಿವೋಗಲು ಕಂಡಚ್ಚರಿಯನು ಗೋ | ಪಾಲರೆಲ್ಲರುಮಾಡಿದರು ||೮೧||

ಇಂತುರಾಸಭರಾಕ್ಷಸಿಯನುಮರ್ದಿಸಿ | ಸಂತತವಾಕೇಶವನು ||
ತಿಂತಿಣಿಗೊಂಡಗೋಪರಮಕ್ಕಳೊಡನೆ ನಿ | ಶ್ಚಿಂತದಿಂದಾಡುತಮಿರಲು ||೮೨||

ವೊಂಗವಡಿಕೆಸಿಂಗದುಗುರುಡೆವಣಿಗೆಜ್ಜೆ | ಮಾಂಗಾಯಿ ಬಂದಿಬೆಂಡೋಲೆ ||
ಸಿಂಗಾರವಾಗಿ ಮತ್ತಾಬಾಲಕೇಶವ | ನಂಗಣಮೊಳಗಾಡುತಿರಲು ||೮೩||

ಬೇರುಮೇಲಾಗಿ ಬಲ್ಮರಗಳನೆಗ್ಗೊತ್ತಿ | ಕೇರಿಕೇರಿಯಮನೆಗಳನು ||
ಮಾರಿಹೊಕ್ಕಂದದಿ ಮುರಿದೆಲ್ಲೆಡೆಯೊಳು | ಚಾರುವುವೃತ್ತೈತಂದು ||೮೪||

ಸೃಷ್ಟಿಕೆಯೆಂಬಾರಕ್ಕಸಿಯಾಸುರಮಪ್ಪ | ರಥರೂಪವಕೈಕೊಂಡು ||
ಮಥಿಸುವೆನ್ನೈರಿಯನೆಂದು ಮುನಿದುಮುರ | ಮಥನನಲ್ಲಿಗೆ ನಡೆತರಲು ||೮೫||

ಇಟ್ಟೆಡೆಯೊಳು ಸಿಲುಕಿದಬಾಲಕೃಷ್ಣನು | ಕಟ್ಟೆವು ಕೆಟ್ಟೆವೆಂದೆನುತ ||
ಕಟ್ಟಮ್ಮಳದಿಗೋಳಿಡುತಾಗಲಾತುರು | ಪಟ್ಟಿಯಗೋಪಿಯರರಲು ||೮೬||

ಕಟ್ಟುಗ್ಗರದೊಳಿಂತು ಮೇಲಾವ್ಯುಶಕಟವ | ಹುಟ್ಟಿನಬಂಡಿಯನೊಡೆದು ||
ನೆಟ್ಟನೆಮುರಿವಂತೆಪದತಳದಿಂದಾ | ದಿಟ್ಟನೊಡೆದುನೂಕಲಾಗ ||೮೭||

ಅಚ್ಚುಮುರಿದುಮೂಕುಗುಡುಗಿರಿದಾಗುಂಬ | ನುಚ್ಚುನೂರಾಗಲಾಶಕಟ ||
ಬೆಚ್ಚಿದಂದದಿ ಮಾಯವಾಗಿವೋಗಲು ಕಂ | ಡಚ್ಚರಿಯನುತಾಳ್ದರೆಲ್ಲ ||೮೮||

ಕಕ್ಕಸದಿಂಬಂದಾಶಕಟನನೆಲ | ಕಿಕ್ಕಿಬಳಿಕನುಡಿಗಲಿತು ||
ಮಕ್ಕಳಮಾಣಿಕಮಾತನ್ನ ಪಾಟಿಯ | ಮಕ್ಕಳೆಲ್ಲರ ಕೂಡಿಕೊಂಡು ||೮೯||

ಕರೆವಗೋಪಿಯರಲ್ಲಿಗೆ ಪೋಗಿಯಂಡೆಯ | ಹರಿದುಕೊಂಡಾಹಾಲಸುರಿದು ||
ಎರಚಿದ ತನ್ನೊಡನಾಡುವ ಮಕ್ಕಳಿ | ಗೆರೆದು ಮುಂದಕೆ ಪೋಗುತಿಹನು ||೧೦||

ಒಡನಾಡುವಮಕ್ಕಳಹೆಗಲನುಮೆಟ್ಟಿ | ಹಿಡಿದುನೆಲಹಿನೊಳಗಿರ್ಪ ||
ಮಡಕೆಯಬೆಣ್ಣೆಯ ಮೆದ್ದಾ ಸತಿಯರು | ಪಿಡಿಪಿಡಿಯೆಸಲೋಡುತಿಹನು ||೧೧||

ಕಡೆಗೋಲಿಂದ ಬಡಿಯುಲಡಕಳುಕದೆ | ಹಿಡಿದುಗೋಪಿಯರನುಸೂಂಕಿ ||
ಕೂಡದೊಳಗಣಾಮೊಸರನು ಮಕ್ಕಳಿಗೆ ಸೂರೆ | ಗೊಡುತಿರಲವರಿರದೆಯ್ದಿ ||೧೨||

ಎಲೆಗೋಪಿ ನಿನ್ನ ಮಗನಪೆಸೆಯಿಂದೆನ್ನ | ಕಲತಿಯ ಮೊಸರುಒದುಕದು ||
ನೆಲಹಿನಜೆಣ್ಣೆಯುಳಿಯದಾಕಾವಕಾ | ದಲಪಾಲುಹಾಳಾಗಿಪೋಯ್ತು ||೧೩||

ತನ್ನೊಡಲನು ತುಂಬಿಸಿಕೊಂಬುದಲ್ಲನೆ | ತನ್ನೊಡವಂದಮಕ್ಕಳಿಗೆ ||
ಚೆನ್ನಾಗಿ ಹೊಲ್ಲವೆನುತ ಸೂರೆಗುಡುವುದ | ನಿನ್ನ ಸೈರಿಸುವವರಲ್ಲ ||೧೪||

ಬೇಡಯಶೋದೆ ಮೊಲೆಯುಕೊಡು ನಿನ್ನೀ | ಕೇಡಾಳಿಕೇಶವಗೆನಲು ||
ಕೂಡೆಪಲ್ಲದುಬಂದು ಹುಸುಳೆಯನೆತ್ತಿ ಮು | ದ್ದಾಡಿಸಿ ಮೊಲೆಗೊಟ್ಟಳಾಗ ||೧೫||

ಮತ್ತಿಮನೆಗೆ ಕೊಂಡುಪೋಗಿ ಬೆಣ್ಣೆಯಮುದ್ದೆ | ಯಿತ್ತುಕೆನೆಯಮೆಲ್ಲಗೊಟ್ಟು ||
ಅತ್ತಿತ್ತಯೋದಡೆ ಯೊರಮೈವಗಳುಕ | ರುತ್ತುಮುಸುಕುವುವುನಿನ್ನ ||೧೬||

ಅನತಿಂದೀಮನೆಯೊಳಗಿರು ಎಂಬಾ | ಜನನಿಯಮಾತನುಮಾರಿ ||
ವನಕರಕಳ್ಳನುಂದದಿ ಪೊರಮಡೆ ಬೆ | ನ್ನನೆ ಬಾದುಪಿಡಿದೆಳದೊಯ್ದು ||೧೭||

ಕಲ್ಲೊರಳೊಳುಹಗ್ಗವಿಟ್ಟು ಕಾಲನುಕಟ್ಟ | ಲುಲಾಸದಿಂದದಕೆಳ್ತು ||
ಎಲ್ಲಜ್ಜರಿವಡುವಂತೆಳೆದಸುರರ | ಮಲ್ಲನಂಗಣಕೆ ಒರ್ವಾಗ ||೧೮||

ಅರ್ಜುನಿಯೆಂಬ ದೇವತೆಯಾಸುಕುಮಾ | ರಾರ್ಜುನನನುಕೋಪದಿಂದ ||
ನಿರ್ದೇವನಪಾಡುವೆನೆಂದೊಂದೆಡೆಪೊಳ | ಗರ್ಜುನತರುಯುಗವಾಗಿ ||೧೯||

ಕವಡಿಯನೆಟ್ಟಂದವಿಬೆಳೆದಾಕ್ಷ | ಶವನಲ್ಲಿನಡೆವವೇಳೆಯೊಳು ||
ಬವನದಾಡೆಗಳಂತಿರುಂಕಿಬೇಗದಿಕೊ | ಲ್ಲುವೆಸಂಜಾಸಮುಯದೊಳು ||೧೦೦||

ಎರಡುತೋಳಿಂದಮಿಗ್ಗಿಸಿಯುತಿಭರದೊಳು | ಕರದಿಂಕಿಳ್ತೀಡಾಡೆ ||
ಧರೆಯದಿರ್ವಂತೆಗೋಳಿಡುತಾಮತ್ತಿಜು | ಮರವಾಯುವಾಯ್ತುಬೇಗದೊಳು ||

ಈಪರಿಯಾರಕ್ಕಸಿಯಬಿಟ್ಟೋಡಿಸಿ | ಗೋಪಾಲಸುತರೊಡಗೂಡಿ ||
ಆಪೊಳ್ತುಬಾಲಕ್ರೀಡೆಯೊಳೊಲವಿಂ | ದಾಪದ್ಮನಾಭನೊಪ್ಪಿದನು ||೧೦೨||

ಹಾಲುಂಡಸೊಕ್ಕಿನೊಳಗೆ ಹರಿದಾಡುವ ಬಾಲಕರೇಣುವಂದದೊಳು ||
ಲೀಲೆಯಿಂದಾತುರುಪಟ್ಟಿಯಂಗಣದೊಳು | ಬಾಲಕೇಶವಬಂದುನಿಲಲು ||೧೦೩||

ತಾಳಜಂಘೆಯೆಂಬದೇವತೆಬಂದೊಂದು | ತಾಳತರುವಿನಂದದಲಿ ||
ತಾಳಿಯಾಕಸ್ಮಿಕದಿಂಬೆಳೆದವನು | ಕಾಲನಾಲಯಕೆಯ್ದಿಸುವೆನು ||೧೦೪||

ಎಂದುಸುಂಟುರೆಗಾಳಿಗಬ್ಬೇಳುವಪಣ್ಣ | ಳಾದದಿಹಿಡಿಗುಂಡುಗಳ ||
ಅಂದವಡೆದುಕರೆಯಲುಕಂಡಾಗೋ | ವಿಂದಸುಕಡುಮುನಿಸಿಂದ ||೧೦೫||

ಎಡಗಾಲೊಳಗೊದೆಯಲುತಾಳಮೇಲಾಗ | ಕೆಡೆದುಮಂದರಿಯದೆಬಂದು ||
ಕೆಡಿಕನಕೆಣಕಿದೆನೆಂದುಪಿರಿದುಗೋ | ಳಿಡುತದೃಶ್ಯತೆವೆತ್ತುದಿತ್ತ ||೧೦೬||

ಕೇರಿಕೇರಿಗೆಹೋಗಿಕೆಣಕಿಪಕ್ಕಳಮಂಡೆ | ಬೋರೆಹೋಹುಂದಲುಹೆಟ್ಟಿ ||
ಹೋರಿಬಳಿಕಗುದ್ದಿಯಾಡುವುದಾಬಾಲ | ನಾರಾಯಣಗದುಲೀಲೆ ||೧೦೭||

ಮರೆಯೊಳುಬಂದು ಮಕ್ಕಳಗರ್ದುಗವಹಾಲು | ಪರೆಯೊಂದುಬಾಚಿಹಿಡಿಯಲು ||
ಹೆರನೂಂಕಿಬಳಿಕಕೈಯಿಂದಸುಲಿವನಾವ | ದುರುಮಂಜಿಯಾಬಾಲವಿಷ್ಣು ||೧೦೮||

ಕಕ್ಕಸದಿಂದಕಡಿವಚಿಪ್ಪುವನುಗಾ | ರಿಕ್ಕುವಹಿಸಿವಪೆಟ್ಟವನು ||
ಚಿಕ್ಕವರುಗಳಸ್ಲೊರನೇನುವಿಕರಿಯೊ | ಮಕ್ಕಳಾಟದೊಳುಸಾಧವನು ||೧೦೯||

ಬಾಸುಳೇಳ್ವಂತೆಬಡಿಪತಡೆಗಾಲ್ವೊಯ್ದು | ಓಸರಿಸದೆಕೆಡಹುವನು ||
ಗಾಸಿಮಾಡುವಸುಮಕ್ಕಳನೇಸುಕೆಡಿಕನೊ | ಕೂಸಾಟದೊಳುಕೇಶವನು ||೧೧೦||

ಈಪರಿಯಿಂಪರಿಮರೆಯಾಡುತಾಬಾಲ | ಗೋಪಾಲನಿರಲೊಂದುದಿವಸ ||
ಕೋಪದಿಕೇಸರಿಯೆಂಬದೇವತೆಮು | ತ್ತಾಪಳ್ಳಿಗಿರದೆಯ್ತಂದು ||೧೧೧||

ತುರಗರೂಪವನಾಂತು ತುರುಪಟ್ಟೆಯೊಳಗರೆ | ಬರಸೊದೆದರೆಬರಕಚ್ಚಿ ||
ಅರೆಬರಕುರವುಟದಿಂಕೊಲುತಾ ಚಾರಿ | ವರಿದಾಡಿಪೋಗುತಿರಲಾಗ ||೧೧೨||

ಬೆಚ್ಚಿಗೋವಳರೆಲ್ಲ ಮನೆಯಕದಂಗಳ | ಹೊಚ್ಚಿಕೊಳ್ಳುಸಡೆತಂದು ||
ನಿಚ್ಚಟಗಲಿ ನೀಲವರ್ಣನೆಡೆಗೆಬಂದು | ಕಚ್ಚುವೆನೆಂದುಕೋಪದೊಳು ||೧೧೩||

ಒತ್ತಿಬಿಟ್ಟಾಬಾಯಸುಕಂಡುಧರದಿ ಕ | ರುತ್ತುತಿವಿದಕರಶಾಖೆ ||
ನೆತ್ತಿಯೊಳಗೆ ಮೂಡಲಾಕುದುರೆಗೆ ಕಿವಿ | ಮತ್ತೊಂದುಮೂಡಿದಂತಾಯ್ತು ||
ಅಂತಾದಮೊಗವಹಿಡಿದು ಕಡುಪಿಂಕೋ | ಪಾಂತಕನದಿರದೆ ಸೀಳಿ ||
ಪಿಂತುಮುಂತಾಗುವಂದದಿ ಹಾಕಲಾಜೀವ | ತಾಂತಮೊಳಾತುರಂಗಮದ||೧೧೫||

ಕಡುನಿಡಿದಸ್ಪಾಬಾಲವಕಿತ್ತು ತ | ನ್ನೊಡನಾಡುವಗೋವಳರು ||
ಬಿಡದೂದುವಕೊಳಲಿಗೆ ಕಟ್ಟಿಕೊಡೆ ಕಡು | ಸಡಗರವೆಯ್ದಿದರೆಲ್ಲ ||೧೧೬||

ಒಡನಾಡುವ ಗೋಪಸಂದನರರಸುಕೂಡಿ | ಹಿಡಿಗವಡಿಕೆಹಿಳ್ಳುಲಗ್ಗೆ ||
ಸಡುಗುಡುಮೊದಲಾದ ಮಕ್ಕಳಾಟವಕಡು | ಸಡಗರದಿಂದಾಡುತಿಹನು ||೧೧೭||

ಮಕ್ಕಳೆಲ್ಲರನೊಡಗೊಂಡು ಮನೆಮನೆ | ಹೊಕ್ಕು ಹಾಲುಬೆಣ್ಣೆಮೊಸರ ||
ಒಕ್ಕಲಿಕ್ಕಿ ಸೂರೆಯಾಡುವುದನುಕಂ ! ಡಕ್ಕರಿಂದಾಗೋಪಿಯರು ||೧೧೮||

ಮೊರೆಯಿಡೆಕೇಳಿಯಶೋದೆಕೃಷ್ಣನಕರೆ | ದೆರಕದಿ ಬಿಗಿಬಿಗಿಯುಪ್ಪಿ ||
ತುರುವಕಾವುದನು ಕಲಿಯಬೇಕು ಮಗನೆನೀ | ಪೊರಪಡಸಡಗರದಿಂದ ||೧೧೯||

ಎಂದುಕಲಸುಗೂಳಕಟ್ಟಿಕೊಟ್ಟಾಗೋಪಿ | ಯೊಂದೋರಗೆಯಮಕ್ಕಳನು ||
ಒಂದಾಗಿಕೂಡಿಕೊಟ್ಟಾತುರುಗಳಕಾಯು | ಲೆಂದು ಕೃಷ್ಣನಕಳುಹಿದಳು ||೧೨೦||

ಕಳುಹಲುಬಂದು ತುರುವನೊಂದು ಬೆಟ್ಟವ | ಕೆಳಗಣಕಾಡೊಳಹೊಕ್ಕು ||
ಬಲಯುತನಾಬಾಲಗೋಪಾಲನಾಗೋ | ವಳರುಸಹಿತಮೇಯಿಸುವನು ||೧೨೧||

ಹುರಿಸದಿಂದಾಬಾಲಹರಿಕೊಳಲೂದುವ | ಸರಗೇಳಿ ವೈದವತೊರೆದು ||
ಕರಿಹರಿಹಸಿ-ಹುಲಿಫಣಿಪರ್ದುಗಳುಕೂಡಿ | ಯುರುವ-ುದವಿಂಕೇಳುತಿಹವು ||೧೨೨||

ಕಾಡೆಮ್ಮೆಗಳನುಹಿಡಿದು ಗೋಣ-್ಮರಿಗೊಂ | ಡಾಡುವನುಕ್ಕಳಬಾಯ್ಗೆ ||
ಆಡಕರೆವತೆರದಿಂದ ಕರೆವುತಳ್ಳಿ | ಮಾತುವನಾಕೇಶವನು ||೧೨೩||

ಬೇಕೆಂದುಗುಹೆಗಳ ಹೊಕ್ಕು ಹೆಬ್ಬುಲಿಗಳ | ನೆಕ್ಕಲುಗಳುತಪ್ಪವೆಂದು ||
ಸೊಕ್ಕಾನೆಗಳನು ಹಿಡಿವನೇನುಸತ್ತ್ವನೊ | ಚಿಕ್ಕಂದಿನೊಳುಕೇಶವನು ||೧೨೪||

ಈಸುಬಯಿಂತುರುಗಳಮೇಯಿ-ಸುತಿರ | ಲಾಪದಲೊಳಗಾಯೆಡೆಗೆ ||
ಆ ಪೂತಿನಿಮೊದಲಾದರಕ್ಕಸಿಯರು | ಕೋಪಮೊದಲಿನಡೆತಂದು ||೧೨೫||

ಹರೆಯದಮುಗಿಲಡಗದಮಿಂಜಳಿಯದ | ಸ-ರಥಸುಭಟಿಭಟಿಲೆಂಬ ||
ಸರವಡಗದಸಿಡಿಲೇಳ್ತಗ್ಗದಸುಂ | ಟುರೆಗಳನೊಡ್ಡಿದರಾಗ ||೧೨೬||

ಸ-ತನದಿಪರಿವೊಡಾಧಾರವಕಾಣದೆ | ಮರುತಮಾರ್ಗದಿನೀಧರೆಗೆ ||
ಸುರಿದವುದೊಯೆನಲೆಡೆ-ಡವಿಲ್ಲದೆ | ಸುರಿದುದಂದಿನಬಲುನೃಷ್ಟಿ ||೧೨೭||

ಪೊಡೆವಸಿಡಿಲನದಿರದೆಪೊಡೆಸೆಂಡನು | ಪೊಡೆವಂತಾವಸವಾಲಿ ||
ಪಿಡಿದಗೋವಳಗೋಲಿಂನುಗ್ಗುನುರಿಮಾಡಿ | ಪಡೆದನದೇನುಬಲ್ಲಿದನೊ ||೧೨೮||

ಸುರಿವಾಲಿವರಲೆಲ್ಲವುಬಲುವಜ್ರದ | ಹರಲಂತಿರಾಗೆಗೋವಳರು ||
ಪಿಡಿದಾಗಿಬೆದರಿಮತ್ತಾಗೋವರ್ಧನ | ಗಿರಿವರಕಾಗಿಯೋಡಿದರು ||೧೨೯||

ಅದುತಾನೊಂದೇಶಿಲೆಯುಪ್ಪುದರಿಂ | ದದರೊಳುಗವಿಕೊಡೆಗಲ್ಲು ||
ಹುದುಗಿಬೆಳೆದಮರನಿಲ್ಲವಾದುದರಿಂ | ದದುರಿಸಂಕಟಗೊಳುತಿರಲು ||೧೩೦||

ಆಸಮಯದೊಳಚ್ಯುತನಾಬಳಿಗೆಯ್ದಿ | ಯೋಸರಿಸದೆಯಾಗಿರಿಯ ||
ಕೇಸಡಿಯಿಂಬಿಡದೊತ್ತಿಯೊದೆದುವಸು | ಧಾಸಂಧಿಯುಪತ್ತುವಿಡಿಸಿ ||೧೩೧||

ಕರಮನದರಕೆಲದೊಳಗಿಕ್ಕಿಹಿಗ್ಗಿಸಿ | ಭರದಿಂತಾನೊಳಪೊಕ್ಕ ||
ಉರುಬಾಹುದಂಡದಿಂದಾಗೋವರ್ಧನ | ಗಿರಿಯನುಮೇಲಕೆತ್ತಿದನು ||೧೩೨||

ಹರಿಸದಿಂದಾ ಂಗಾಣಿಯನೆತ್ತುವ | ಪರಿಯೆನೆಪದ್ಮೋದರನು ||
ಉರುತರಮಪ್ಪರ್ಧರವನುವಾಮ | ಕರದಿಂಬಿಡದೆತ್ತಿದನು ||೧೩೩||

ಲೀಲಾಪಾತ್ರದಿಗಿರಿಯನೆತ್ತಿದಗೋ | ಪಾಲಸಹಸ್ರಮೊಪ್ಪಿದುದು ||
ಫೂಲಲಸೆಗೆಪಿಡಿದಾಸತ್ತಿಗೆಯಹರಿ | ನೀಲದಕಾವಿದೆಂಬಂತೆ ||೧೩೪||

ಹುಯೆ ಡಗೈಯೆಂಬಪಂಚಫಣೋರಗ | ನಿರದಾಭೂಧರವೆಂಬ ||
ಧರೆಯುಹೊರಲುಕಂಡು ಬೇಸರಿಸುವೆವೆಂದು | ಭರದಿಂದಾದೇವತೆಯರು ||೧೩೫||

ಇರಪೇಳುದಿನಕಲ್ಲುಮಳೆಯಬಲ್ಗುಂಡಿನ | ಸರಿಯವಾಸರೆಯತಂದಲನು ||
ಪಿರಿಯಸರಿಯಸೋನೆಯನುಸುರಿದರುಪಗ | ಲಿರುಳೆನ್ನದತಿಕೋಪದಿಂದ ||೧೩೬||

ಮತ್ತದಕಿನಿಸುಬೇಸರದಿಳುಹದೆ ಪುರು | ಷೋತ್ತಮನಾಪರ್ವತವನು ||
ಎತ್ತಿರೆಕಂಡಸುರೆಯರು ತಾವೇಬೇ | ಸತ್ತಿವನಮುಗೆಬಲ್ಲಿದನು ||೧೩೭||

ನಾವಿವನನುಕೊಲ್ವೆವೆಂಬುದಜ್ಞತೆಯೆಂದು | ದೇವತೆಗಳುಬಟ್ಟುಪೋಗೆ ||
ದೇವದುಂದುಭಿಮೊಳಗಿದುದಾಗಸದಿಂದ | ಪೂವಿನಮಳೆಸೂಸಿದುದು ||೧೩೮||

ಆವಸುಧಾಧರದಡಿಯೊಳುನಿಂದಿರ್ದ | ಗೋವಿನಗೊಂದಣಗಳನು ||
ಗೋವಳರುಗಳನುಪೊರಮಡಿಸಿದನಾ | ಭೂವಲಯಕೆಲೀಲೆಯಿಂದ ||೧೩೯||

ವಿಸ್ಮಸ್ತರಿವುನಿಕುರುಂಬಸಜ್ಜನಸುಖ | ದಾಶ್ರಯನಾಕೇಶವನು ||
ವಿಶ್ರುತಮಪ್ಪಭೂಧರಮನಿಳಾತಳ | ಕಶ್ರಮದಿಂದಿಳುಹಿದನು ||೧೪೦||

ಆ ನಾಡುಬೀಡೆಲ್ಲವು ಬಂದು ಲೋಕಕ್ಕೆ | ನೀನೇನೆದೈವವೆಂದು ||
ನಾನಾಪರಿಪೂಜೆಸಿಕೊಂಡಾಡಿದು | ದಾನಂದದಿಂದಾಹರಿಯು ||೧೪೧||

ಅತಿಬಲಯುತನಿವನಾರಾರದೆಸೆಯಿಂ | ಚ್ಯುತಮಪ್ಪುದಿಲ್ಲಿಂದೊಸೆದು ||
ಕ್ಷಿತಿಳಮೆಲ್ಲಕೊಂಡಾಡಿಯವಗೆಯ | ಚ್ಯುತನಾಮವನಿಟ್ಟರೊಸೆದು ||೧೪೨||
ಆಹವಲಂಪಟನತಿಶಕ್ತಿಸಂಯುತ | ಬಾಹುಭುವನಭುಂಭುಕನು ||
ಶ್ರೀಹರಿಕಣ್ಗಿಸೆದನುಸೆತ್ಕವಿಚಿತ್ತ | ಗೇಹಪಪಾಣಿಕ್ಯದೀಪಕನು ||೧೪೩||
ಇದು ಜಿನಪದಸರಸಿಜ ಮುದಮಧುಕರ | ಚದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗಿದುಪದಿನೈದಾಶ್ವಾಸ ||೧೪೪||

ಹದಿನೈದನೆಯ ಸಂಧಿ ಸಂಪೂರ್ಣಂ

೧೬. ಕಂಸವೆಧಸಂಧಿ

ಅಂಗಜವಿಜಯವುಕ್ಕ್ಯಂಗನೆಯಧಿಪಘು | ಜಂಗೇಶವಂದಿತಚರಣ ||
ಮಂಗಳಮೂರ್ತಿನೇವಿಶಾಶನಪಡಯುಗ | ಲಂಗಳಿಗೊಲಿದೆರಗುವೆನು ||೧||

ನಂದನ ನಂದನನತಿಬಲನೆಂಬುದ | ನಂದುದೇವಕಿದೇವಿಕೇಳಿ ||
ನಂದನದೊಳುಸೋಗೆಮುಗಿಲದನಿಗೆಯಾ | ನಂದಿಪಂದದಿನಲವೇರಿ ||೨||

ಸುತವದನಾಳೋಕನೋತ್ಸುಕತೆಯಿನಾ | ಪತಿಯೊಳುಬಲರಾಮನೊಳು ||
ಅತಿಗುಪ್ತದಿಂದರುಪಿದೊಪಾಕಾರ್ಯಕೆ | ಹಿತಮಾಗಿನಿಜಸೇನೆಸಹಿತ ||೩||

ಗೋವುಯಿಯೆಂಬ ನೋಂಪಿಯನಾದೇವಕಿ | ಪ್ರೇಮದಿವಾಡಬೇಕೆಂದು ||
ಆಪಾಪೀಪಾಲಕರಾತುರುಪಟ್ಟಿಗೆ | ಸಾಮವಿಲ್ಲದೆವೋದರಾಗ ||೪||

ನಂದಗೋಪನನುಕರೆಸಿ ನಿನ್ನ ಸುದತಿಯ | ರೊಂದಾಗಿ ನಾಳೆಯುದಯಕೆ ||
ಬಂದುಪೂಜೆಯಮಾಡಿಸಜೇಕೆನೆ ಮನ | ದಂದು ಮನೆಗೆಬರಲತ್ತ ||೫||

ಉತ್ತಮವಿಜಯಾರ್ಧಗಿರಿಯೊಳು ಶಾಲ್ಮಲಿ | ದತ್ತೈಯಪಿತನದಾಯಾದ ||
ಮತ್ತಾವನುದೇವಸುತನದೆಯಿನಾ | ಪತ್ತುಂಟುತನಗೆಂಬುದನು ||೬||

ಪೊದಲುಬಲ್ಲವನಾಗಿಶಕುನಿಗರಿಂದಾ | ಅಘಟನಿರ್ದತಾಣವನು ||
ಪದೆದುತಿಳಿದು ತನ್ನರಿಷ್ಟನೆಂಬೋರ್ವನ | ಗ್ಗದಕಲಿಬಿಡರನಕರೆದು ||೭||

ಅರಿಕೆವಡೆದ ಮಘುರೆಯೊಳುರಂಜಿಸುವಾ | ತುರುಪಟ್ಟಿಯನಂದಸುತನ ||
ತರಿದಿಕ್ಕಿಬರಯೇಳಿಕಳುಹಿದೊಡವನಾ | ಎರವೆಸದಿಂದೆಯ್ತಂದು ||೮||

ಕಟ್ಟಗ್ರಮಷ್ಟವೃಷಭನಾಕಾರವ | ತೊಟ್ಟುಗೋಪಾಲರೆಲ್ಲರನು ||
ಅಟ್ಟಿಕೊಲುತಬರ್ಪ ಕೋಲಾಹಲವನು ! ದಿಟ್ಟನಾರಾಯಣನರಿದು ||೯||

ಇದಿರ್ವಂ[illegible]ಡೆಗಾಲದರುದ್ರನೇರುವ | ಗ್ಗದಗೂಳಿಯೆಂಬಂದದೊಳು ||
ಒದಗಿಬಪ[illegible]ವೃಷಭನಕಂಡುನಡೆದು ಬಂ | ದದರಕೊಂಬೆರಡನುಪಿಡಿದು ||೧೦||

ನೆಲಕೆನೆಗೆ[illegible]ಲುಗೋಳಿಟ್ಟಾಗೂಳಿ | ಕಲಿಯಕೈಯಿಂಹತವಾಗೆ ||
ನಲಿಯಿ[illegible]ಳರೆಲ್ಲರಾಸಮಯದೊಳಾ | ನೆಲೆಯಿಂದದುಮಾಯಮಾಯ್ತು ||೧೧||

ಈಪರಿಯಿಂದ ವೃಷಭರಾಕ್ಷಸನಸಂ | ದಾಪದ್ಮನಾಭನುಕೊಲಲು ||
ಗೋಪವಲ್ಲಭನತಿಮುದದಿಂದಿರೆ ಮ | ತ್ತಾಪಗಲಿನ ಮರುದಿವಸ ||೧೨||

ದೇವತೆಯಾವಾಸದೊಳಿರ್ದದೇವಕಿ | ಯಾವಸುದೇವನಿರ್ದೆಡೆಗೆ ||
ಆವಿಷ್ಣುವಾಗೋಪಿಯಾಗೋಪರೊಡಗೂಡಿ | ತೀವಿದವಿಭವದಿಂದೆಯ್ದೆ ||೧೩||

ಬಳಿಕಾಕೃಷ್ಣಯಕ್ಷಿಯಸೋಂಪಿಯನು ಕ | ಣ್ಗೊಳಿಪಂತೆ ದೇವಕಿದೇವಿ ||
ತಳುವದೆಮಾಡಿಯತ್ಯಂತಸಂತೋಷಮ | ತಳೆದಾನಂದಗೋಪನನು ||೧೪||

ಕರೆದುಡಗೊಟ್ಟು ಮತ್ತಾಗೋಪಿಗೆ ಪಲ | ವರಲವಿಭೂಷಣವಿತ್ತು ||
ಮುರಪೈರಿಯವರಕೆಲದೊಳಿರಲಿವನಾರ | ವರಸುತನೆಂದುಕೇಳಿದನು ||೧೫||

ಕೇಳಲವರುತಮ್ಮತನ ಜಾತನಿವನೆಂದು | ಪೇಳಲು ಕರೆದುಸನ್ನಿಧಿಗೆ ||
ಲೀಲೆಯಿಂದಾಮಾತಾಪಿತೃವರ್ಗ್ಯರ | ಪಾಲೋಕನವಮಾಡಿದರು ||೧೬||

ಬೆನ್ನತಡವಿನಿವ್ಮಮಗನು ಬಲ್ಲಿದನೆಂ | ದುನ್ನತಮಪ್ಪನೇಹದೊಳು ||
ರನ್ನದೊಡವ್ರ ಬಹುವಿಚಿತ್ರಾಂಬರದಿಂ | ಚೆನ್ನಾಗಿನಮಾಡಿಸಿಂಗರವ ||೧೭||

ಬಳಿಕಸುರಾಗದಿ ತೊಡೆಯಮೇಲಿಟ್ಟುಕೊಂ | ಡೆಳೆವರೆಯದಕೇಶವನ ||
ಲಲನಾಮಣಿಯಮರ್ದಪ್ಪಿಯಾನಂದಾಶ್ರು | ಗಳೊಳಾಸ್ಯವನುತೊಳೆದಳು ||೧೮||

ಅನಿತರೊಳಾನಂದನಾನಂದಗೋಪಿಯ | ರನುರಾಗದಿಂವಸುದೇವ ||
ವನಜಲೋಚನೆ ದೇವಕಿದೇವಿಯಾಜನ | ನಿನುತನುಬಲದೇವರಿಗೆ ||೧೯||

ಮತ್ತಾಹರಿಹೀರಲು ಪೂತಿನಿ ಮೊಲೆ | ಯಿತ್ತಾಗಲಾನಂಜುಗೂಡಿ ||
ನೆತ್ತರೊಗಲು ಕೆಂಪುಕರಿದುಕೂಡಿದ ವಿಷ | ಮೃತ್ತಿಕೆಯೆಂಬಭೂಮಿಯನು ||೨೦||

ಮುರರಿಪುಮುರಿದಕಾಕಸಕೆನ್ನೆತ್ತರು | ಸುರಿದಲ್ಲಿಯಾವಾಗನೋಡೆ ||
ಇರದೆಕಾಗೆಗಳು ಪಾರಲುಕಾಕಗರ್ಭಿಯೆಂ | ಬುರುಭೀಕರಧರಣಿಯನು ||೨೧||

ಶಕಟನನಾವಿಷ್ಣುವೊದೆಯಲುಪಾತತಾ | ಳಕೆತೊತುಗೊರೆಯಲಂತಲ್ಲಿ ||
ಶಕಟಚ್ಛಾಯೆದೋರುತಭೀತಿಮಾಡುವ | ಶಕಟಬಲದ್ವಾರವನು ||೨೨||

ವನಮಾಲಿಕಿತ್ಯಮತ್ಯಿಯಮರಗಳಮೂಲ | ದನಿತುಕೊರೆದಕುಳಿಯೊಳಗೆ ||
ಎನಿತುಮಣ್ಣನುತಂದುಹೊಯ್ದಡೆಹೂಳದ | ರ್ಜುನಗರ್ವವೆಂಬಕುಂಡವನು ||೨೩||

ಸಿರಿಯೆರೆಯನುಸೀಳಿದಾಕಿಶೋರನಬಾಯೊ | ಳಿರದರುಣೋದಕಸುರಿದ ||
ಧರೆಯೊಳುಕುದುರೆಯಮುಖಮಾಗಿತೋರುವ | ತುರಗವದನಮೆಂಬನೆಲನ ||೨೪||

ಬಾಲಕೃಷ್ಣನುಕೆಡಹಿದತಾಳವೃಕ್ಷದ | ಮೂಲದನಿತ್ತುಧರೆಯೊಳಗೆ ||
ಆಲೋಕಿಸೆತಾಳಫಲಪಣೆದಾಗುವ | ತಾಳಗರ್ತಮುನೆಂಬುದಿಲವ ||೨೫||

ದೋರ್ದಂಡದಿಂಬಾಲಗೋಪನಪ್ಪಳಿಸಲು | ಗರ್ದಭಸುರುಳಲಂತಲ್ಲಿ ||
ಗಾರ್ದಭನಂತಾವಾಗಲತುಚ್ಚುತಿರ್ಪ | ಗರ್ದಭರವಮೆಂಬಖಿಲೆಯು ||೨೬||

ಓವದೆಯಾದೇವತೆಗಳೇಳ್ವಾಸರ | ತೀವಿಸುವಿನಕಲ್ಲುಮಳೆಗೆ ||
ಆಸಿಸ್ಸುವೆತ್ತಿಯೆಡದಕೈಯೊಳಗಾಂತ | ಗೋವರ್ಧನಮೆಂಬುಗಿರಿಯು ||೨೭||

ಅಂದನಡೆದುತೋರುತಬರಲತ್ಯಾ | ನಂದದಿನಾನೃಪವರರು ||
ನಂದಗೋಪನಬೀಳ್ಕೊಟ್ಟುವನೆಗೆವೋಪೆ | ವೆಂದಿಯ್ದುನದಾರಿಯೊಳು ||೨೮||

ವಸುಧೆಯಿನಾಗಗನಕೆಕೀಲುಕೊಟ್ಟಂತಿ | ರೆಸಕವಡೆದುದೊಂದುಶಿಲೆಯ ||
ಅಸಮಪರಾಕ್ರಮಿಯಾಯೇಕಕುಂಡಲ | ನಸದೃಶಭುಜಬಲದಿಂದ ||೨೯||

ಒತ್ತಿಯಣೆದುಭೂತಳಕಿರದುರ ಳಿಸಿ | ಕಿತ್ತುಚೆಂಡಸುಹಾಕುವಂತೆ ||
ಮತ್ತೊಂದುಕಡೆಗೆಹಾಕಲುಪೂವುಳೆಕರೆ | ಯಿತ್ತುನಘೋವಾರ್ಗದಿಂದ ||೩೦||

ಅದನುಕಂಡಾವಮಾತಾಪಿತೃಗಳುಸಂ | ಮದವೇರಿಮಧುರಾಪುರಿಗೆ ||
ಪದುಳದಿನೆಯ್ದಿಸುಖದೊಳಿರಲತ್ತ | ವಿದಿತವಿದ್ಯಾಧರಗಿರಿಯ ||೩೧||

ರಥನೂಪುರಚಕ್ರವಾಳಪುರದೊಳರಿ | ಮಥನಸುಕೇತುವೆಂಬೋರ್ವ ||
ಪೃಥುವಿಪಾಲಕಗಾಸ್ವಯಂಪ್ರಭೆಯೆಂಬೋರ್ವ | ಪೃಥುನಿತಂಬೆಗೆಜನಿಸಿದಳು ||೩೨||

ಕಂಜವದನೆಸತ್ಯಭಾಮೆಯೆಂಬೋರ್ವಳು | ರಂಜಿಪಕಲೆಯೊದಗೂಡಿ ||
ಹೊಂಜೆಳೆಹೊಗರಹಡೆವತೆರದಿಂದೇ | ರಂಜಿಪ್ಪನಮೆಯ್ದಿದಳು ||೩೩||

ಅವರಯ್ಯನಾಖೇಚರನೊಂದಾನೊಂದು | ದಿನದೊಳು ತನ್ನತನುಜೆಯ ||
ಭುವನಾತಿಶಯಮಪ್ಪರೂಪನೀಕ್ಷಿಸಿ ಸಂ | ಭವಿಸಿವ ಸಡಗರದಿಂದ ||೩೪||

ತರುಣಿಗೆವರನೆಂತಪ್ಪನಾಗುವನೆಂ | ದಿರದೆಸಂಘಿಸ್ಸನೆಂಬೋರ್ವ ||
ಸುಮುಚಿರಮೋಧಸಯುತ ಶಕುನಿಗನೊಳ | ಗೊರೆಯಲಿತವನುಸುರಿದನು ||೩೫||

ಮಾನನಿಧಿಯೆ ನಿನ್ನ ಶಸ್ತ್ರಶಾಲೆಯೊಳೈದಿ | ನಾಗಶಯ್ಯೆಯನೊಲಿದೇರಿ ||
ಭೂನುತಮಪ್ಪೇಶಾರ್ಙ್ಗಾಯನೇರಿಸಿ | ಈ ನವಶಂಖವೂದಿದನೆ ||೩೬||

ಭರತಾವನಿಗಧಿಪತಿಯಕ್ಕುಮವನೇ | ಯರಸಕೇಳ್ನಿನ್ನನಂದನೆಗೆ ||
ನಿರುತಮಾಗಿವಲ್ಲಭನಕ್ಕುಮೆನೆಕಂಡು | ಹರುಷದಿನಾಖೇಚರನು ||೩೭||

ಭವತಪವಸುಗಳೊಳಗೆ ಸಂಸೇಮುರು | ತರವಿಕ್ರಮಯುತನೆಂದು ||
ಪಿರಿದು ವಿಚಾರಿಸಿಯುಪನಿಪ್ಪಮಧುರಾ | ಪುರಕಾವಿವ್ಯವಸ್ಥಪನು ||೩೮||

ಚರರಕೈಯಿಂದ ಕಳುಹಲುತವರತಿ | ಭರದಿಂದಾಪುರಪರದ ||
ಹೊರೆಯನಂದನದ ಮಹಾಪೂತಚಿನಮಂ | ದಿರದಮಂಟಪಕಿರವಿಟ್ಟಿ ||೩೯||

ಭೂವರಕ.ಸಿಗರುಪೆಯವನಂದಾ | ದೈವಜ್ಞನಕೇಳಿದೊಡೆ ||
ಅವಸ್ಥಾವವನಿಗೆ ವಶಮವನೇ | ಶ್ರೀಪಥುವಿಗೆ ವರನಹನು ||೪೦||

ನಿನಗಹಿತವುಮವನಿಂದೆನೆಶಂಕಿಸಿ | ಮನದೊಳು ಬಳಿಕಾಕಂಸ ||
ವಿನುತಮಪ್ಪೀವಸ್ತ್ರಗಳ ಸಾಧಿಸಿದರ್ಗೆ | ಯೆನಿತು ಬೇಡಿದುದಕೊಡುವೆನು ||೪೧||

ಎಂದುಡಂಗುರವನೆಲ್ಲೆ ಹೆಯೊಳು ಹೊಯಿಸಿದೊ | ಡಂದಾತುರುವಟ್ಟಿಯೊಳು ||
ನಂದನ ನಂದನನಿದನು ಸಾಘವೆನಾ | ನೆಂದುಸಿಲಿಸೆಘೋಷಣೆಯ ||೪೨||

ಆವಾರತೆಯಸೋಲಗದೊಳಗಿರ್ದ ಕಂ | ಸಾವನಿಪಾಲಕಗೊರೆಯೆ ||
ಆ ಓಲಗದೊಳಗಿರ್ದರಿಂತೆಂದರು | ಭೂಪಶ್ರುತವಿಷ್ಣುವಿರವ ||೪೩||

ಮೊಲೆಯುಂಬಕಾಲಮೊದಲು ಕೊನ್ನ ಕೊಲಬಂದ | ಒಲಯುತದೇವತೆಗಳನು ||
ನೆಲಕೆಕ್ಕಿ ಬಳಿಕಗೋವರ್ಧನಗಿರಿಯನು | ಚಲಿಸದೆಚಾಳಿಸಿದವನು ||೪೪||

ಮುಳಿದೊಡೆನೆಲನನಾಗಸಕಾನಘವನು | ಇಳೆಗೆತರ್ಪಾಬಲಯುತಗೆ ||
ತಿಳಿಯಲಿದೇನುಗಹನಮೆಂದು ನುಡಿದವ | ರೊಳಗಾಕಂಸನಿಂತೆಂದ ||೪೫||

ನಾಳೆಯುದನು ಕಾಣಲಕ್ಕುಮೊಡಾವಸ್ತ್ರ | ಪಾಲಕರುಗಳನು ಕರೆಸಿ ||
ಮೇಳೈಸಿ ನಿಮ್ಮವಸ್ತ್ರವನುದಯಕ್ಕೆಂದು | ಹೇಳಿದೊಡಾಖೇಚರರು ||೪೬||

ಅಮರುದಿನದ.ದಯ.ದೊಳಂತವನು ಸು | ಪ್ರೇಮದಿನರ್ಚನೆಗೈದು ||
ಸಾಮಂತರರರುಮಕ್ಕಳುಸಹಿತಾಕಂಸ | ಭೂಮಿಶನಲ್ಲಿಗೈದಿದನು ||೪೭||

ಆ ಸುರತರಮಪ್ಪಾಶಯನದಜಂಡ | ವಾಸೆಕಿವಿಷದುಸುರ್ವೊಯ್ಯೆ ||
ಕೇಸರಿ ಛಟಿಛಟಿಲೆನೆ ಕಂಡದಕೆ ಸ | ಭಾಸದರೆಲ್ಲಳುಕಿದರು ||೪೮||

ಅಸಮಯದೊಳಂಬುಜೋದರನಾಬಳಿ | ಗೋಸರಿಸದೆನಡೆತಂದು ||
ಕೇಸಡಿಯಿಂದ ಭರದಿಮೆಟ್ಟಿಯೇರಿದ | ನಾಸರ್ಪಶಯ್ಯೆಯನಂದು ||೪೯||

ರಾಜೀವೋದರನಂಗದೀಧಿತಿಘಣಿ | ರಾಜತಲ್ಪದೊಳೊಪ್ಪಿದುದು ||
ರಾಜಮಂಡಲದನಡುವೆ ನೆರೆಕಾಣಿಸಿ | ರಾಜಿಪಚಿಸ್ಥದಂದದೊಳು ||೫೦||

ಮತ್ತಮಗುರ್ವಿಸುವಾಶಾರ್ಙ್ಗಿಯನಾ | ಉತ್ತಮಸತ್ತ್ವನುಂಗುಟದಿ ||
ಒತ್ತಿತಿರುವನೇರಿಸಿಸುರಧನುವನು | ಹೊತ್ತಕಾವರ್ಗಿಲಂತೆಸೆದನು ||೫೧||

ಕಂಬುವನೂದುವೆನೆಂದು ಕರ್ಚಿದಕಮ | ಲಾಂಬಕನಾಸ್ಯಮೊಪ್ಪಿದುದು ||
ತುಂಬುವೆರೆಯುನೋವದೆ ಕಚ್ಚಿದರಾಹು | ಬಿಂಬವದೆಂಬಂದದೊಳು ||೫೨||

ಆ ಪಾಂಚಜನ್ಯಮನತಿಭರದಿಂಪಿಡಿ | ದಾಪೀತಾಂಬರನೂದೆ ||
ಆಪತ್ತುದಿಗ್ವಿಸರಂಗಳೊಳಗೆ ತಾ | ನೇಪೂರಿಸಿತಾರವವು ||೫೩||

ವಿರಿಂಚಜಂಗಶಯ್ಯೆಯನಾಶಾರ್ಙ್ಗಿಯ | ನೇರಿಸಿಯಾಶಂಖವನು ||
ಹಾರಲೂವಿದ ಹರಿಯನುಕಂಡುಕಂಸಗೆ | ಒರಿಟ್ಟಿಗೊಂಡುತಾಯ್ತು ||೫೪||

ಆವನ್ನುಗಳನುರಕ್ಷಿಸುತ್ತಿರ್ಪಾಯಕ್ಷ | ದೇವತೆಗಳು ಸಂತಸದಿ ||
ಆವಾಸುದೇವನಪೂಜಿಸಿ ಒಳಿಕನಾ | ನಾವಿಧದಿಂಪೊಗಳಿದರು ||೫೫||

ಮತ್ತಾತುರುಪಟ್ಟಿಗಾಹರಿಪೋಗೆ ಕ | ರುತ್ತಾಕಂಸನಂದವನ ||
ಎತ್ತರವನುಕಂಡುಕೊಲಿಸಬೇಕವನನೆ | ನುತ್ತ ಮನದೊಳೆಣಿಸಿದನು ||೫೬||

ಅವನಮುನಿಸರಿದಂಬಲಭದ್ರನು | ತವಕದಿ ತುರುಪಟ್ಟಿಗೈದಿ ||
ನವಿನಯದಿಂತನ್ನತಮ್ಮನಜ್ಯುತನೊಳ | ಗವಿಡತಕೂಡಿರಲಿತ್ತ ||೫೭||

ಕಾಳಿಂದಿಯುಮಡುವಿನಕವಲನತರ | ಹೇಳಿನಂದಗೋವಳಗೆ ||
ಅಳನಿರದೆಕಂಸನಟ್ಟಲಂತದನವ | ಕೇಳಿಚಿಂತೆಯೊಕಿರುತಿರಲು ||೫೮||

ಚಿಂತೆಯಿದೇಕೆಂದಾಹರಿಕೇಳಿದೊ | ಡಿಂತೆಂದನೆಲೆತನುಜಾತ ||
ಅಂತಿಂತೆನಲೇಕಂತಕನಾಲಯ | ದಂತೆಯಗುರ್ವಿಸುತಿರ್ಪ ||೫೯||

ಜಗುನೆಯಮಡುವಿನೊಳೊಂದು ಹೇಮಾಂಬುಜ | ವೊಗೆದಿದೆಯದನುಕಾದಿರ್ಪ ||
ವಿಗಡವಿಷೋರಗಕಳಕಿಯದಕೆತುಂಬಿ | ಮೊಗವಿಕ್ಕವದಶತಹೇಳಿ ||೬೦||

ಆರಸೆನ್ನ ಬಳಿಗಾಳನಟ್ಟಿದನದರಿಂ | ಪಿರಿದಪ್ಪ ಚಿಂತೆಯಾಯ್ತೆನಲು ||
ಹರಿಯೆಂದನೆಲೆತಂದೆಯೊಳ್ಳಿಯಕಾಸಿನ | ಸರಸಿಜವಸುತಹುದಕ್ಕೆ ||೬೧||

ಚಿಂತೆಯಿದೇಕೆನುತಾತನ್ನಣೆಯ ಗೋಪ | ಸಂತತಿಯನು ಕೂಡಿಕೊಂಡು ||
ಅಂತರಿಸದೆ ಕಾಳಿಂದಿಯ ಮಡುವಿಗೆ | ಸಂತಸದಿಂದೆಯ್ದಿದನು ||೬೨||

ಸಾಸಿರೆಸಳಕಂಜಮನಾಮಡುಹೊಕ್ಕು | ಸಾಸಿಗನಲ್ಲಿಂದಕೀಳೆ ||
ಓಸರಿಸದೆಯುದನೊಸೆದು ರಕ್ಷಿಸುವಾ | ವಾಸುಗಿಕೆಕ್ಕಳಗೆರಲಿ ||೬೩||

ಅರೆವೆಡೆಗೊಂಡು ಭುಗಿಲ್ಭುಗಿಲೆನುತಕ್ಕೇ | ಸುರಿವೆರಸಿದಗರಳವನು ||
ಭರದಿಂದುಗುಳುತ ಮೇಲಾ೯ಯ್ದಾಕರಿ | ಯುರಗನಕಂಡು ಕೇಶವನು ||೬೪||

ಎಡದಕೈಯಿಂದ ಮತ್ತದರ ಹೆಡೆಯುಹಿಡಿ | ದೊಡನೊಡನಮು ಕೈಯಸುತ್ತೆ||
ಕಡುನೇಹದಿಂದಾಸುವಿಪನಾಗರ | ಪಡಿಯಾಗಿ ಪಿರಿದುರಾಜಿಸಿತು ||೬೫||

ಮತ್ತಾಕೈಯಿಂದಾತಲೆಯನು ಪಿಡಿ | ದೊತ್ತಿ ಬಿಡಿಸಿಕಾಳಿಂಗನನು ||
ಮೊತ್ತದಗೋಪರು ಕೊಂಡಾಡಲಾಪುರು | ಷೋತ್ತಮನಲ್ಲಿಗೈತಂದು ||೬೬||

ಒಂಮುಕೈಯೊಳು ಕಾಂಚನಕಂಜವನು ಮ | ತ್ತೊಂದುಕೈಯೊಳು ಕಾಳಿಂಗನನು||
ತಂದಾನಂದಗೋಪನ ಕೈಯಕೊಡಲಾ | ನಂದದಿನಂತವು ಸಹಿತ ||೬೭||

ಒಂದಾಕಂಸಗೊಪ್ಪಿಸೆಕಂಡುಕಡುವೆಚ್ಚಿ | ದುದದಿನುಡುತೊಡವಿತ್ತು ||
ನಂದನನಾತುರುಪಟ್ಟೆಗೆಳುಹಿಯಿಂ | ತೆಂದುಮನದೊಳೆಣಿಸಿದನು ||೬೮||

ಪ ಏವುಕೃತಕದಿಂದಸೆತ್ತುದಿಶ್ಲೇಪಗೆ | ಯಲಗಿನಮುಖದಿಕೊಲ್ವುದಕೆ ||
ಬಲುಗೈಯವಸುದೇವ ಬಲಭದ್ರರುಬಂದು | ಬಲವಾಗುವರುಬೇಗದೊಳು ||೬೯||

ಅದರಿಂದೀಹಗೆಯನು ಜಟ್ಟಿಗಳಿಂದ | ಸದೆಯಿಪನಿಶ್ಚಿತಮಿಹೆನು ||
ಇದುಕಾರ್ಯಮೆಂದು ಬಗೆದುಕಂಸನೃಪತಿಯು | ಗ್ಗದಭುಜಬಲಶಾಲಿಗಳು ||೭೦||

ಜಗಜಟ್ಟಿಗಳು ಚಾಣೂರಕೇಸರಿಮು | ಷ್ಟಿಗನಜ್ಯಜಂಘರಕರೆದು ||
ವಿಗಡಮಷ್ಟಾತುರುಪಟ್ಟೆಯನಂದನ | ಮಗನನಿಮ್ಮಾವಿದ್ಯೆಯಿಂದ ||೭೧||

ನೆಲಕಿಕ್ಕುವ ಸತ್ವಮುಂಟೆಯೆನೆಕೇಳಿ | ಇಳೆಯಾಧಿಪತಿಕೇಳೆಮಗೆ ||
ಕಲಹಕೆದಿಗುದುತಿಗಳೆಣೆಯುಲ್ಲದೆ | ಹುಲುಗೋವನಸುತನೆಣೆಯೇ ||೭೨||

ಒತ್ತಿತಿಳದು ಛಿದ್ರವಮಾಡಿ ಭೂಮಿಯು | ಹೊತ್ತಹಾವಿನಹೆಡೆವಣಿಯು ||
ಕೆತ್ತುತನ್ನಿಯೆನ್ನ ದೆದನಗಾಯಿಯು | ಮತ್ತೆಮಗಿದಿರನಿಕ್ಕುವರೆ ||೭೩||

ಎಂದಮಾತಸುಕೇಳಿ ನಿಮ್ಮಾಸಾಧನೆ | ಯಿಂದಮವನನಿಕ್ಕಿದೊಡೆ ||
ಸುದೇಹವೇಕೆನಿಮಗೆ ಬೇಡಿದುದನೀವೆ | ನೆಂದವರೊಳುಮಾತನಾಡಿ ||೭೪||

ಆ ಮರುದಿನಮಲ್ಲರಾಗಮನಾಕಾನ | ಭೂಮಿಾಶನುಮಾಡಿಸುತಿರೆ ||
ಆ ಮಹೀಪಾಲಕ ವಸುದೇವನಾಬಲ | ರಾಮನಪನಕಾರ್ಯವರಿದು ||೭೫||

ನಂದಗೊಪನನಾರುಮರಿಯದವೊಲು ಗೋ | ವಿಂದನಾಪತಕರೆತರಿಸಿ ||
ಬಂದವರೊಳಗೇಕಾಂತದೊಳಾ ಅರ | ವಿಂದನಾಭನಹುಟ್ಟುವೆಟ್ಟ ||೭೬||

ವರನುನಿಯತಿಮುಕ್ತರು ತವ್ಮೊಳಗಂ | ದೊರೆದವಚನವಾದಿಯಾಗಿ ||
ಹರಿಯಿಂದಕಂಸ ಜರಾಸಂಧಚಕ್ರಿಗೆ | ಮರಣಮುಂಟೆಂಬುದೆಲ್ಲವನು ||೭೭||

ತಿಳಿಯಪೇಳಿಯೆಚ್ಚರಿಕೆಯೆಂದವರನು | ಒಲರಾಮನಕೂಡೆಕಳುಹಿ ||
ಬಳಿಕಿತ್ತಮಲ್ಲರಂಗಮನಾನೃಪನನು | ಗೊಳಿಸಿತಾನಾಬಳಿಗೆಯ್ದಿ ||೭೮||

ಉತ್ತುಂಗಮಪ್ಪಚೌಪಳಿಕೆಯಮಾಡಿಸಿ | ಮೊತ್ತದರಸುಗಳುವೆರಸು ||
ಮತ್ತಹ್ಮದಯುಕಂಸಕುಳ್ಳಿರ್ದುಬಲವನು | ಸುತ್ತುವಲಯದೊಳಗಿರಿಸಿ ||೭೯||

ಇರಲಲ್ಲಿಗೆವಸುದೇವನೃಪತಿತ | ನ್ನುರುತರಸೈನ್ಯವಕೂಡಿ ||
ಭರದಿಂದಮತ್ತೊಂದುಚೌಪಳಿಕೆಯೊಳುಸಂ | ಗರಕೆಸನ್ನದ್ಧನಾಗಿರಲು ||೮೦||

ಮಲ್ಲರೊಳಗೆಹೋರಿಸಬೇಕುನಿನ್ನಾ | ಬಲ್ಲಿದನಪ್ಪನಂದನನ ||
ನಿಲ್ಲದೆಕಡುಹೆಂದಾನಂದಗೆಕಂಸ | ವಲ್ಲಭನಾಳನಟ್ಟಿದನು ||೮೧||

ಅವರುಬಂದುಸುರೆಯುಶೋದೆಯಿಂತೆಂದಳು | ವಿವರಿಸಲೆನ್ನನಂದನನು ||
ಜವನಿಂದಸಾಯಕಿಚ್ಚಿಂಬೇಯನದರಿಂ | ದಿವನನೋಯಿಸದವರುಂಟೆ ||೮೨||

ಎಂದಾಬಂದವದೂತರೊಳುಸುಡಿದುನಿಜ | ನಂದನನನುಸಿಂಗರಿಸಿ ||
ಇಂದುನಿನ್ನಾರಿಪುಗಳನೆಲ್ಲವಹೊಂದಿ | ಸೆಂದುಹರಸಿಬೀಳ್ಕೊಡಲು ||೮೩||

ಬಲನಾರಾಯಣರಾಕಂಸನನಿಂದು | ಕೊಲುವೆವೆನುತನಂದಸಹಿತ ||
ಪಲವುಗೋಪಾಲಸಂದನರೊಡಗೂಡಿಸಿ | ಶ್ಚಲರಾಗಿಪೊರಮಟ್ಟರಾಗ ||೮೪||

ಕೊಂಬುತಿತ್ತಿಗಾಳೆಕೊಳಲುತಮ್ಮಟೆತಾಳ | ಚೆಂಬಕವರೆವೀರವಂದ ||
ಬೊಂಬುಳಿಗಳಬಾಜಿಸುವಗೋಪರನಿಕ | ರುಂಬಸಹಿತಬಂದರಾಗ ||೮೫||

ಅತ್ಯಲತ್ಯಂತಕುಹಕಿಯಾಕಂಸನು | ನ್ಮತ್ತತನಗೆಯುತಿಹಿತನು ||
ಮತ್ತೋರ್ವಕೈಟಭನೆಂಬಸುರನನುತ | ನ್ನೊತ್ತಿಗೆಕರೆಯಿಸಿಕೊಂಡು ||೮೬||

ನೀನೆನಗುಳ್ಳವನಾದೊಡೆಗೋಪನ | ಸೂಸುಜಟ್ಟಿಗಳಕಾಳಗಕೆ ||
ಆನದೆನಡೆತರುತಹನೆಯವನನುಮ | ತ್ತೀನೆಲಕಿಕ್ಕುವುದೆನಲು ||೮೭||

ಎಲೆನೃಪಕಡೆಗಾಲದರುದ್ರನಭುಜ | ಬಲವನೆಗ್ಗುವಸತ್ತ್ವಯುತಗೆ ||
ಹುಲುಗೋವಳಹುಡುಗನಕೊಲ್ಲಿಂದೆನ | ಗಲಸದೀಬಿಸನಹೇಳುವರೆ ||೮೮||

ಒಂದುಗಲ್ಲವಹಿಸಿಯಲುಮೊಲೆವಾಲುಮ | ತ್ತೊಂದುಗಲ್ಲವನುಹಿಸಿಯಲು ||
ಒಂದಾಗಿನೆತ್ತರುಸುರಿವಬಾಲನಕೊ | ಲ್ಲಿಂದುಬೆಸನಹೇಳುವರೆ ||೮೯||

ಕರುಕೂಚಿಗನನುಕೈಟ್ಟಕೊಂದನೆಂದೆಂಬ | ಕೊರತೆಯುನೆನಗೆನ್ಯಾಲ ||
ಹೊರಿಸಿದೆಮುಂದರಿಯುದೆಯೆಂದುನುಡಿದಾ | ನೆರೆಗಲಿಯವನಬೀಳ್ಕೊಂಡು ||೯೦||

ಬಂದಾಬಲಯುತನಾನಂದಗೋಪನ | ನಂದನನಾಕೇಶವನು ||
ಗೊಂದಣಗೊಂಡಗೋವಳರನಡುವೆಯಾ | ನಂದದಿಬಪ್ಪಬಟ್ಟೆಯೊಳು ||೯೧||

ಪಲವುಬಣ್ಣದಚಿತ್ರಾಂಬರಂಗಳನಾ | ನೆಲಹಿಡಿಯುದವೊಲುಹರಹಿ ||
ಉಲಿದುಪರವಜಗುಸೆಯತಡಿಯೊಳಗೋರ್ವ | ಬಲಯುತರಜಕರೂಪವನು ||೯೨||
ಧರಿಸಿಸೀರೆಯತೊಳೆಯುತ್ತಿರಲಾನುರ | ಹರನುತನ್ನೆಡಬಲವಿಡಿದು ||

ಹರಿನದಿಬರ್ಪಗೋವಳರನಡುವೆನಡೆ | ತರುತೆಲೆಜಕದಾರಿಯೊಳು ||೯೩||
ಹರಹಿದಸೀರೆಯತೆಗೆಯೆಂದೊಡವನಂದ | ನಿರವೆತ್ತಕತ್ತೆಕಾಗೆಯನು ||
ದುರುಳತನದಿಕೊಂದಗಬ್ಬಿತನದವನಾತ | ನೊರೆಮುಕೆಡಲುಬೇಡತೊಲಗು ||೯೪||

ಜನಪತಿ ಕಂಸಗೆತೊಳೆವದುಕೂಲವ | ನಿನಿಸುನಿನ್ನವರು ಮೆಟ್ಟಿಡೊಡೆ ||
ನಿನಗೆತಕ್ಕುದನುಮಾಳ್ಪೆನು ನೋಡಿಸಡೆಯೆಂದು | ಕನಲಿನುಡಿದನುಡಿಗೇಳಿ ||೯೫||
ಮುಂದೆಬಂದುದನೋಡಿಕೊಂಬಮಿಂತಿದರಿಂ | ಬಂದುದುಬರಲಿಯೆಂದೆನುತ ||
ನಂದಣಿಗೊಂಡಗೋಪಾಲರುನಹಿತಮು | ಕುಂದವೆಟ್ಟಬುಸೀರೆಗಳನು ||೯೬||

ಎಲವೋ ಕರುಗಾಯಿಯೆಂದೆಹುಯ್ಲುತನದಿಂ | ದಿಳೆಯಾಣ್ಮನವಸ್ತ್ರಗಳನು ||
ಹುಲುಗೋಪರುನಹಿತವೆಟ್ಟಬಹುದೆಯೆಂ | ದಲಘುಕೋಪಾಟೋಪದಿಂದ ||೯೭||

ಮಾರಿಮೈಮರೆದುಮನಗಿಬರ್ದಂದದಿ | ನಾರಾಯಣನಡೆಗೈದಿ ||
ಭೂರಿಗೋಪಾಲರುನಡುಗುವಂದದಿಬಿಡ | ದಾರುತಮುಟ್ಟಿಮೂದಲಿಸಿ ||೯೮||

ಕೆನ್ನೆಯಹೊಡೆಮುಕೆಡಹಿಕೊಲ್ವೆನೆಂದಾ | ಉನ್ನತಮಪ್ಪಹಸ್ತವನು ||
ತನ್ನಹತ್ತಿರಕೈದಿನನುನಗುತು | ತ್ಪನ್ನಪರಾಕ್ರಮಯುತನು ||೯೯||

ಕಳಿಶಿಬಿದಿರಕುಡಿಯನುಮುರಿವಂದದಿ | ಮುರಿದುಮಾಯದವಾಡಿವಳನ ||
ಮೊಳಕೈಗಳನೆರಡನುಮುರಿದಾಬರ | ತಳಕಿರದೀಡಾಡಿದನು ||೧೦೦||

ಅದನುಕಂಡಾಗೋವಳರಾಲಿಬೊಬ್ಬಿರಿ | ದಧಟನಿನಗೆಸನುರದೊಳು ||
ಇದಿರಪ್ಪರುಂಟೆಯೆಂದೆನುತಾಯೆಡೆಹರ | ಹಿದಸೀರೆಗಳನೆಲ್ಲವನು ||೧೦೧||

ಓವದೆಸೂರೆಯನಾಡಿತಮ್ಮಾಕೈಯು | ಗೋವಳಗೋಲತುದಿಯೊಳು ||
ತೀವಿಗುಡಿಯಗಟ್ಟಿಕುಣಿಕುಣಿದಿರದಾ | ಗೋವಿಂದನೊಡನೈದಿದರು ||೧೦೨||

ತಪ್ಪಳೆಗುಟ್ಟುತತಾರೆಲೆವಾಡ.ತ | ಒಪ್ಪಗೋವಳರಮಧ್ಯದೊಳು ||
ಒಪ್ಪದಿನಾಒಲಕೇಶವರೀರ್ವರು | ಬರ್ಪಪಟ್ಟಣದದಾರಿಯೊಳು ||೧೦೩||

ಅಜಿತಂಜಯನೆಂಬಕಂಸನಪಟ್ಟದ | ಗಜಮನವನುವೊರಮಡಿಸೆ ||
ಗಜಬಜಿಸಲುತತ್ಪುರಮನೆಲ್ಲಾನರ | ಸಿಜನಾಭಗಿದಿರಾಗಲಾಗ ||೧೦೪||

ಎಲೆಎಲೆಕೃಷ್ಣತೊಲಗುತೊಲಗೆಂದುರೆ | ಪಲುಬುತಿರಲುಪುರಜನವು ||
ಅಲಘುವಿಕ್ರಮಿಸಿಹ್ಮನಾದಮನಾಭೂ | ತಳಮದಿರ್ವಂತೆಮಾಡಿದನು ||೧೦೫||

ಬಳಿಕದುಬರಿಕೈಯಿಂದೆತ್ತಿಹುಯ್ಯಲು | ಬಲಭದ್ರಾನುಜನಾಗ ||
ಕೆಳಲಿಯಕ್ಕಲನಸೊದೆವತೆರದಿಂಪದ | ತಳದಿನೊದೆಯೆಕುಕ್ಕುರಿಸಲು ||೧೦೬||

ಹದದನೆಲದಮೂಲಂಗಿಯಕೀಳ್ವಂತೆ | ಯದರಕೊಂಬನುಕಿಳ್ತುಕೊಂಡು ||
ಗದೆಮಾಡಿಪಿಡಿದುಪೆಗಲೊಳಿಕ್ಕಿಕೊಂಡಾ | ಪದಿತವಿಕ್ರಮಿನಡೆತರಲು ||೧೦೭||

ನೋಡಿರೆನಮ್ಮಕಂಸನಹೆಡ್ಡಾಟವ | ನಾಡಕೊಲುವಮಾಳ್ಕೆಯೊಳು ||
ರೂಢಿಸಿದೀದ್ವಿರದವಕೊಂದಗೆಮಲ್ಲ | ರೀಡೆಯೆಂದೆಲ್ಲರುಲಿಯಲು ||೧೦೮||

ಆ ಹಸ್ತಿಯಳಿದವಾರ್ತೆಯಕೇಳಿ ಕಂಸನಾ | ಜ್ಯಾಹುತಿಗೊಂಡಗ್ನಿಯಂತೆ ||
ಊಹಿಸಬಾರದಕೋಪದಿನಿರಲತ್ತ | ಲಾಹರಿಯತಿಲೀಲೆಯಿಂದ ||೧೦೯||

ವಸುದೇವನಿರ್ದಪಕ್ಕದೊಳಗೆಮಲ್ಲರು | ಪಸದನಗೊಂಡುನಿಂದಿರಲು ||
ಅಸಮಸಾಹಸಿಚಾಣೂರನಕ್ಕಡಕಿರ | ದಸವಸದಿಂಹೊಕ್ಕನಾಗ ||೧೧೦||

ದಂಡಾಧೀಶರದುರ್ಗಾಧಿನಾಥರ | ಮಂಡಲಿಕರಮನ್ನೆಯರ ||
ಗುಡುಗಲಿಗಳಗಡಿಯನಾಯಕರತಂಡ | ತಂಡದನಡುವೆಕುಳ್ಳಿರಲು ||೧೧೧||

ವರಬುಧಗುರು ಕವಿಜನವೆಡಬಲದೊಳ | ಗಿರೆದೋಷಾಕರನಾಗಿ ||
ಇರೆಕಲಸನಾರಂಗದೊಳು ರಾಹುಬಿಂಬದ | ದೊರೆಯಾದನಾಕೇಶವನು ||೧೧೨||

ಮತ್ತೆಚಾಣೂರಮಲ್ಲನು ಭುಜವನುಹೊ | ಯ್ದುತ್ತಿತ್ತಕೃಷ್ಣನೋಡೆಂದು ||
ಹತ್ತಸಾರಿಬಂದುಗರ್ಜಿಸಿಕಂಡುಕ | ರುತ್ತಾಯೆಡೆಯೊಳುನಿಂದು ||೧೧೩||

ಅರಭಟೆಯಿನಾಸ್ಫಾಳಿಸಲಾಧ್ವನಿ | ನಾರಾಯಣನಮುಡುಹಿಸೊಳು ||
ಕಾರಕಾರ್ಮುಗಿಲೊಡ್ಡಿನೊಳುಜನಿಸಿದಸಿಡಿ | ಲೋರಗೆಯಂತಗುರ್ವಿಸಿತು ||೧೧೪||

ಕಗ್ಗಲಿನೀಡಿದೆಡದಹಸ್ತವಸವ | ಸಗ್ಗಳಮಪ್ಪಕೈಯಿಂದ ||
ಬಗ್ಗಿಸಿನೋಡಲಿನಿಸುಬಗ್ಗಿತಿಲ್ಲದು | ಕಗ್ಗಲಿಯೊನಕೆಯಂದದೊಳು ||೧೧೫||

ಆಸೆದುತನ್ನು ರುಭುಜಬಲದಿನೋಡಿದರಾ | ತೃಣಜೊಂಬೆಯು-ಕ್ಕಿನಕರುವ ||
ಆಸೆಮನೋಡುವತೆರನಾಯತ್ಕಾಕಮಲೇ | ಕ್ಷಣನೇನುಸತತ್ವಾಧಿಕನೊ ||೧೧೬||

ಡೊಕ್ಕರದಿಂಬಂಡವನಕಾಲ್ಗಳನೊಳ | ಹೊಕ್ಕುಹಿಡಿದುನೋಡಿಪೊಡೆ ||
ಸೊಕ್ಕಾನೆಯಮುಂಗಾಲನಂಜದೆಬಂ | ದೆಕ್ಕಲನೆಳೆವಂತಾಯ್ತು ||೧೧೭||

ಬಲ್ಲಿತಪ್ಪಾಬಲಗೈಯಿಂದದಿರಪೆ | ಪೊಲ್ಲವುನಿಸಿನಿಂತಿಯೆ ||
ಮಲ್ಲರಮಲ್ಲನ ಮೈಯೊಳಸವುಷ್ಟಿ | ಕಲ್ಲತಾಗಿದಮಿಂಟಿಯಾಯ್ತು ||೧೧೮||

ಒತ್ತಿಹಿಡಿದುಕೊಲ್ವೆನೆಂದೆನುತಾಮೈಯ | ಹತ್ತಿಹಿಡಿದುನೋಡಿದೊಡೆ ||
ಮತ್ಕವನಿವದೆಸಾಧಿಪಮಲ್ಲಗಂಧದಂ | ತುತ್ತಮಸತ್ತ್ವನೊಪ್ಪಿದನು ||೧೧೯||

ಇಂತುಪಲವುಪರಿಯಿಂನೋಡಲಿವನೆನ | ಗೆಂತಾನುಶಕ್ಯವಲ್ಲೆಂದು ||
ಚಿಂತಿಸುತಾಚಾಣೂರನೊತ್ತಿದೊಡನು | ರಾಂತಕನಸುನಗೆನಗುತ ||೧೨೦||

ಅಳ್ತಯಿಂದಾಸರಿಗಾಳಿಗವನುಕೆಲ | ಹೊತ್ತುಕೊಡುವೆನಿವಗೆಂದು ||
ಮಿಳ್ತುಸಮಾಧಾನವಡೆದಂತಡಗಿಸಿ | ಎತ್ತರಮಪ್ಪಕೋಪವನು ||೧೨೧||

ಒತ್ತಿದೊಡೊಡನೆಹಿಮ್ಮೆಟ್ಟುವನೊನಮೊ | ಕ್ಕೆತ್ತಿಜೊಡೇಳ್ವಕೈವಿಡಿದು ||
ಎತ್ತಲೆಳೆಯಲತ್ತಲೈದುವನಾಹರಿ | ಮತ್ತವನಿಗೆಗೆಲುವಿತ್ತು ||೧೨೨||

ವಿರಿದಾಣಕೆಮೈಗೊಡುವನುಜೊಕ್ಕರ | ದಿಂದಹಾಕಿದೊಡುತುಳುವನು ||
ಒಂದಾಗಿಹುದುಗೆಹುದುಗಿನೋಡುವನುಮು | ಕುಂದನದೇಂವೈಸಿಕನೊ ||೧೨೩||

ಒಮ್ಮೆಸೋಲವನಿತ್ತೊಮ್ಮೆಗೆಲುವನಿ | ತ್ತೊಮ್ಮೆಸರಿಯಕಾಳಗವನು ||
ನುಮ್ಮಾನದಿಂದಿತ್ತಾಸಭೆಗಚ್ಚರಿ | ಯಂಮಿಗೆಮಾಳ್ಪವೇಳೆಯೊಳು ||೧೨೪||

ಹರಿಯವಂಚನೆಯಕಾಳಿಗದಸತ್ತ್ವವತನ್ನ | ಸರಿಸತ್ತ್ವಮೊಂದೇಬಗೆದು ||
ಮರಳಿಮರಳಿಮೈಯನಂಟುಹತ್ತುವವೊಲು | ಮರುಳುಗೊಂಡವರಂದದೊಳು||೧೨೫

ಹೂಣಹೊಕ್ಕುಹಿಡಿದಾಕೃಷ್ಣನನುವಿಂ | ದಾಣಂಗೊಳ್ವೆನೆಂದೆಂಬ ||
ಚಾಣೂರಮಲ್ಲನನೆತ್ತಿಹಿಡಿದ-ಕೊಂಡು | ಗೋಣಮುರಿದುಹಾಕಿದನು ||೧೨೬||

ಎಲೆಕಂಸನೀನೆನಗಪರಾಧಿಯಲ್ಲಂ | ದಲಸದಿಂತಿದನೆತ್ತಿನುತ ||
ಜಲಜೋದರನುಹಾಕಿದಮುಂಡಿಗೆಯಿನೆ | ನೆಲಕುರುಳೊಪ್ಪಿದನವನು ||೧೨೭||

ಅದಕಂಡು ಕೇಸರಿಯೆಂದೆಂಬವನುಕಂಸ | ಗೆದೆಗಲ್ಲಾಗಿನಿಂದಿರ್ದ ||
ಅಧಟರದೇವಸಚ್ಯುತನಿತ್ತಿತ್ತಂ | ದದಿರದೆಬಂದುಮೇಲ್ವಾಯಿ ||೧೨೮||

ಕುಟ್ಟಿಕೆಡಹಿಕಾಲ್ವಿಡಿದುನಭೋಮಾರ್ಗ | ಕಿಟ್ಟುಹಾಕುವೆನೆಂಬಾಗ ||
ಮುಟ್ಟಿಗನೆಂಬಹೆಸರ ಜಟ್ಟಿಯದಕಂಡು | ಮುಟ್ಟಿಸೂದಲಿಸಿಮೇಲ್ವಾಯೆ ||೧೩೯||

ಒಂದುಹಸ್ತದೊಳುಮುಷ್ಟಿಗನಹಿಡಿದುಮ | ತ್ತೊಂದುಕೈಯೊಳುಮೊತ್ತಮೊದಲು ||
ಆಂದದಿಹಿಡಿದಕೇಸರಿಯಹಿಳ್ಳೆಯಹೊಡೆ | ವಂದದಿಹೊಡೆದಿಡಲಾಗ ||೧೩೦||

ಮಿಗೆಮುನಿಸಿಂವಜ್ರಜಂಘನೆಂದೆಂಬೋರ್ವ | ಜಗಜಟ್ಟಿಬರೆಕಂಡುಹಿಡಿದು ||
ಗಗನಮಂಡಲಕೆಟ್ಟುಬೀಳದಮುನ್ನ ಮು | ಷ್ಟಿಗನಿಂದಿಡಲುಮತ್ತವನ ||೧೩೧||

ಮತ್ತಾಚಾಣೂರಮಲ್ಲಸಸೂಡಿಂ | ದೊತ್ತಿಕಾವಿಸಾವಡರ್ದ ||
ಮತ್ತಹೃದಯನೂವರಿಂಕಂಸನತಿಧೈರ್ಯ | ದೆತ್ತರಮದವಡಗಿದುದು ||೧೩೨||

ಬಳಿಕಬಳಸಿನಿಂದಸಾಸಿರ್ವರುಮಲ್ಲ | ರೊಳಗೊಬ್ಬರುಳಿಯದೆಬಂದು ||
ಏಲಯುಭೈರವನಂತೆನಿಂದಹರಿಯ ಜೇನ | ಹುಳುಮುತ್ತುವಮಾಳ್ಕೆಯೊಳು ||೧೩೩||

ಮುತ್ತಿಹಿಡಿಯಲುನೋಡಜಸಿರದೊತನುವಂ | ತೊತ್ತಿಹೊಸೆದುಕೆಲಬರನು ||
ಹತ್ತಿಯುಹಿಸಿಮಾತೆ ಹಿಸಿದುಕೆಲಂಬರ | ತೊತ್ತಳತುಳಿದುಕೆಲರನು ||೧೩೪||

ಒದೆದುಕೆಲರನೊಕ್ಕಲಿಕ್ಕಿಕೆಲಂಬರ | ವಿದಿದುಕೆಲರಗುದ್ದಿಕೆಲವ ||
ಕುದಿದುಕೆಲರಕೊಂದನಾನೋಡುವಕಂಸ | ನೆದೆಹವ್ವನೆಪಾರುಮಂತೆ ||೧೩೫||

ಕೆಪ್ಪೆಯಕಟ್ಟಿ ಕೆಲಂಬರ ನುರೆಬಿಗಿ | ಯಪ್ಪಿ ಕೆಲರಕಾಲ್ವಿಡಿದು ||
ಅಪ್ಪಳಿಸುತ ಕೆಲಬರ ಕಂಸನೃಪನೆದೆ | ಹೆಪ್ಪಳಿಮಾತೆ ಮರ್ದಿಸಿದ ||೧೩೬||

ಗುದ್ದಿಕೆಲರಗೂಡಿಕೆಡೆನಂತೆ ಕೆಲಬರ | ನುದ್ದಿಯೊರಸಿಕೆಲಬರನು ||
ಉದ್ದಕೆಹಾಕಿಕೆಲಂಬರನಾಹರಿ | ಬದ್ದಿಕ್ಕಿದನುಮಿಳ್ಳುವಿಗೆ ||೧೩೭||

ಕುಟ್ಟಿಕೆಲರನುಸುಕಿತಿದು ಕೆಲರದೆಸೆ | ಗಿಟ್ಟುಕೆಲರನವನಿಯೊಳು ||
ವೆಟ್ಟಿಕೆಲರಕೊಂದಾರಂಗದೊಳಗೆವೆಂದೆ | ಯೊಟ್ಟಿಹೆಮ್ಮಾರಿಯಂದದೊಳು ||೧೩೮||

ಇರೆಕಾಣುತುರಿದುಕೆಡುವದೀವಿಗೆಯಂ | ತುರುತರಮಪ್ಪಕೋಪದೊಳು ||
ತರಹರಿಸದೆಕಂಸಭೂಪತಿತನ್ನದು | ರ್ಧರತರಮಪ್ಪಸೇನೆಯನು ||೧೩೯||

ತಲೆಗೊಳ್ಳಿತಡೆಯದೆಸುತಕೈವೀಸಲು | ನೆಲನೆಬೆನೆಲೆಯಾದಂತೆ ||
ಬಲಮೆಲ್ಲಮೇಲ್ವಾಯಲುಕಂಡು ಪಸುದೇವ | ಬಲದೇವರಂದಿದಿರಾಗೆ ||೧೪೦||

ಆದಸುಕಂಡಾಕಂಸನತಿಕೋಪದಿಂದೇಳ್ವ | ಪದದೊಳಗಾಕೇಶವನು ||
ಆಧಟನವೊಪ್ಪೋರ್ವಜಟ್ಟಿಯಕಾಲ್ವಿಡಿದುಬೀಸಿ| ಯೊದಗಿಯವನಕಾಲನಿಡಲು ||೧೪೧||

ಧರೆಗೆಜೀಳ್ದಾ ಕಂಸನಕಂಡು ಕೋಪದಿ | ಪರಿದುಬಂದುಕಾಲಹಿಡಿದು ||
ಅರಸನೀನೇಕಿಂತಿರ್ದಪೆಯೆನ್ನ ಸೋ | ದರರನೆಲ್ಲರಕೊಂದೆಯಲ್ಲ ||೧೪೨||

ಮತ್ತೆನ್ನ ಹಸುಳೆವರೆಯಮೊದಲಾಗಿ ಕ | ರುತ್ತುನಿನ್ನಾರಕ್ಕಸಿಯರು ||
ಮೊತ್ತದಿಂದಕೊಲಲೆಣಿಸಿದದೋಷಿಯೆ | ನುತ್ತೊಂದುಪಾಸರೆಯೊಳಗೆ ||೧೪೩||

ಪಸರಿಸಲವನಿಯೊಳಗೆ ಖಂಡವರುಣಾಂಬು | ದೆಸೆದೆಸೆಯನು ಬಣ್ಣವಿಡಲು ||
ಮುಸಕದಿನಾಹರಿಯಾಕಂಸನನೆತ್ತಿ | ಯಸಗಹೊಯ್ಲಿಂಕೊಂದನಾಗ ||೧೪೪||

ಅಕಲಂಕವಿಕ್ರಮಾನ್ವಿತನತಿಕೋಪಾಂ | ತಕನುದ್ಧತಸತ್ವಯುತನು ||
ಪ್ರಕಟಿತನಾಹರಿಯೆಸೆದನು ಸತ್ಕವಿ | ನಿಕರಮಾಕಂದಕೋಕಿಲನು ||೧೪೫||

ಇದು ಜಿನಪದಸರಸಿಜ ಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿಜಿನೇಶಸಂಗತಿಯೊಳ | ಗೊದವಿದಾಶ್ವಾಸಪೋಡಶವು ||೧೪೬||

ಹದಿನಾರನೆಯ ಸಂಧಿ ಸಂಪೂರ್ಣಂ

೧೭. ದ್ವಾರಾವತಿ ನಿರ್ಮಾಣ ಸಂಧಿ

ಶ್ರೀಮದಮರಪತಿ ಮೌಲಿಕೀಲಿತಪಾದ | ತಾಮರಸದ್ವಯನಜಗೆ ||
ಕಾಮಿತಮದೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತೆರಗುವೆನು ||೧||

ಅತ್ಯಲುವಸುದೇವಬಲಭದ್ರರುಗಳು ಕ | ರುತ್ತುತಮಗೆ ಮಾರ್ಮಲೆಪ ||
ಮೊತ್ತದಬಲವನೆಲ್ಲವಕೊಂದಾ ಪುರು | ಷೋತ್ತಮನೊಡಗೂಡಿದರು ||೨||

ಅಭಯಘೋಷಣೆಯಮಾಡಿಸಿ ಮತ್ತಲ್ಲಿರ್ದ | ಸಭೆಯನೆಲ್ಲವನು ಸಂತೈಸಿ ||
ತ್ರಿಭುವನವೀರನನಿಪಂಜರದೊಳಿರ್ದ | ವಿಭುವುಗ್ರಸೇನನಬರಿಸಿ ||೩||

ಅಕುಸೆನಶಬವನು ಸಂಸಾರಿಸಿ | ಯಾಕಾಂತೆಜೀವಂಜಸೆಯ ||
ಏಕಡೆಗೈದದಂದದಿಕಾಪಿಟ್ಟಾ | ಲೋಕಾಗ್ರಣಿಗಳಲ್ಲಿರಲು ||೪||

ದುರುಳಕಂಸನನಿಜಸಚರು ಪಲ್ಲವದೇಶ | ದರಸುಗಳಸುರವಲ್ಲಭರು ||
ಉರುಬಲಯುತವುರಮುರುಮುಷ್ಟಿಕೈಟಭಾರಿಷ್ಟ | ನರಕಾಸುರರೆಂಬವರು ||೫||

ಒದವಿದಬಲಸಹಿತಲ್ಲಿಗೆ ನಡೆತರ | ಲದನಾ ಕೇಶವನರಿದು ||
ಇದಿರ್ವಂದಾಬಲವನುಸಂಹರಿಸಿ ಮ | ತ್ತಧಟಿಂದನರನುಕೊಂದು ||೬||

ಮುರನಗದೆಯ ಮಧುವಿನತೇರನರಕಾ | ಸುರನಖಡ್ಗವಕೈಟಭನ ||
ಉರುಕೇತುವನರಿಷ್ಟನಸುರಗೆಯಕೊಂಡು | ಹರುಷದಿಮಧುರೆಗೈದಿದರು ||೭||

ಅನಿತರೊಳಾಮಧುವಿನನಿಜಸುತ ಭೂ | ಜನನುತನಾಹಿರಣ್ಯಾಕ್ಷ ||
ತನಗಿಂದನೆರೆಕಿರಿಯಳು ರೇವತಿಯೆಂಬ | ವನರುಹದಳಲೋಚನೆಯನು ||೮||

ಬಲರಾಮಗೆಕೊಟ್ಟು ಮತ್ತವರನುಕಂಡು | ಬಳಿಕನಿಶ್ಚಿಂತದಿನಿರಲು ||
ಬಲಯುತರಾತಮ್ಮ ಶೌರೀಪುರವರ | ಕಲಸದೆವೋಪೆವೆಂದೆಣಿಸಿ ||೯||

ಉಗ್ರಸೇನನನುಕರೆಸಿ ತನ್ನ ತನುಜಾತ | ರಗ್ರಗಣ್ಯರುಸಹಮಾಗಿ ||
ವ್ಯಗ್ರದಿಂದಲಿಮಧುರೆಯವೊರಮಟ್ಟು ಸೃ | ಪಾಗ್ರೇಶವಸುದೇವನೈದಿ ||೧೦||

ಶೌರೀಪುರಕಾನಂದದಿವೊಕ್ಕಾ | ವಾರಿಧಿವಿಜಯಭೂವರನ ||
ಚಾರುಚರಣಕಾತನುಜಾತರುಗೂಡಿ | ಭೀರುತೆಯಿಂದೆದಗಿದನು ||೧೧||

ಆವುನ್ಯದೇವತೆನೆನೆದಲ್ಲಿಗೆಯ್ತಂ | ದಾಪಾರ್ಥಿವರಿಗವಾಯ ||
ಈಪರಿಯಿಂದಲ್ಲದೆಹೋಗದೆಂದಾ | ಭೂಪರವರುಬಿಟ್ಟುಪೋದ ||೩೮||
ಬೀಡಿನಬಳಿಯೊಳು ಪಲವುಕುಂಡಂಗಳ | ಮಾಡಿಕವುರುಹೊಗೆಯುರಿಯ ||
ಕೂಡಿಯೇಳಿಸಿಯೆಕ್ಕೆಯಿಂದಾ ಯೆಡೆಯೆಡೆ | ಯೂಡುವದಾದಿಯರಾಗಿ ||೩೯||
ಇರಲಲ್ಲಿಗಾಕಾಲವಯನೆತ್ತಿಬರುತಾ | ಪರಿಯಕಂಡಾಜರತಿಯರ ||
ಸೆದಿಂತೇಕೆಶೋಕಂಗೆಯ್ವರೆನಲವ | ರೊರೆದರವರೊಳಿಂತೆಂದು ||೪೦||
ರತತ್ರಿಖಂಡನಮಂಡಲಪತಿಯೊಳೆಮ | ಗಿರದೆನಿಷ್ಕುರವೈರಮಾಯ್ತು ||
ವಿನ್ನು ನಮಗಿಲ್ಲವೆಂದು ಬೆದರಿಯಾ | ಹರಿವಂಶದಭೂವರರು ||೪೧||
ಗಳನುತೋಡಿಸಿ ಮತ್ತಾಳುರಿ | ಗೊಂಡದೊಳಗೆ ಭಯದಿಂದ ||
ವಿಬಿದ್ದು ಸತ್ತರವರನೆತ್ತಿ | ಕೊಂಡಾಡಿಸಿದ ದಾದಿಯರು ||೪೨||
ಇಮಮತೆಯಿನಾ | ವೀಕುಂಡದತಡಿಯೊಳಗೆ ||
ರ್ಪೆವೆನೆ ಮು | ತ್ತಾಕಾಲವಯಸ್ಯಪಕೇಳಿ ||೪೩||
ಲಿಲ್ಲಿಯ್ಯನೀಧರದಡವಿಯೈಳು ||
ಕೇಳುತಪೆ ||೪೪||
ಗಿಯಲ್ಲಿಂದ ||
ದನು ||೪೫||
ಯುಂಡಾದ ||
ಗಿಯವನಿರಲಿತ್ತ ||೪೬||
ಡುತಪಶ್ಚಿಮಕಾಗಿ ||
ಾಡಣತಡಿಯೊಳುನಿಂದು ||೪೭||
ಧನಸುಮತದಿಂದ ||
ಳುಲ್ಲಸದಿಂದಿರಲಾಗ ||೪೮||
ಾ | ಶ್ವರನಲ್ಲಿಯುದಯಂಗೆಯ್ವ ||
ನು | ಸುರಪತಿಬೋಧದಿನರಿದು ||೪೯||
ವನು | ಧರಣೀತಳಕಿಳಿತಂದು ||
ದಿರಿಕಂಡಾ | ಹರಿಹರುಷದೊಳಿರಲಾಗ ||೫೦||

ಶರಧಿಗೆಲಂಘಿಸಿ ಯಿರಾರುಯೋಜನ | ಪರಿಯಂತರೇರಿಯತೆರದಿ ||
ಭರದಿಂನಾಲ್ದೆಸೆವರಿಯಲು ಮತ್ತಾ | ಧರಣಿಯಚ್ಚರಿವಡುವಂತೆ ||೫೧||

ಶರನಿಧಿತೆರಪಾಗಲಾಗಸದಿಂ ಪೂ | ನಲಸುರಿಯಿಸಿ ತನ್ನರೂಪ ||
ಹರಿಸದಿನಾನ್ಯೆಗನುದೇವ ತೋರಿಯಾ | ದರದಿಂದಾವಿಷ್ಣುವನು ||೫೨||

ಭರದಿವ್ಯೂಜಿಸಿಯವನಾಸಗ್ಗಕೆಪೋಗೆ | ಸುರಪನಬೆಸದಿಕುಬೇರ ||
ಇರದಲ್ಲಿಗೈದಿಯುತ್ತಮಮಪ್ಪನಗರಿಯ | ವಿರಚಿಸಿದನುಶೋಭೆಯಿಂದ ||೫೩||

ಅನಗರಿಯುಸುತ್ತುವಳೆಯದೊಳಗೆಯು | ದ್ಯಾನವ ವಿರಚಿಸಿಬಳಿಕ ||
ಮಾನಿತಮಣಿರಂಜಿತಪ್ರಾಕಾರವ | ಸಾಸುತಾಗದಿನಸುಗೈದು ||೫೪||

ಶತಮುಖನೆಸೆವ ನಗರಿಯಾಜಲನಿಧಿ | ಯತಿನಿರ್ಮಲಾಂಬುವಿನೊಳಗೆ ||
ಪ್ರತಿಫಲಿಸಿದುದೆಂಬಂದದಿ ಯತ್ಯು | ನ್ನತವೆಶ್ಮ ಪುರವನುರಚಿಸಿ ||೫೫||

ಜಲಧಿವಿಜಯನೃಪತಿಗೆ ಮಧ್ಯದೊಳಗೆಡ | ಒಲದೊಳು ಬಲಕೇಶವರಿಗೆ ||
ಬಲಯುತ ವಸುದೇವನಾದಿಯನೃಪರಿಗೆ | ಕೆಲದೊಳು ಗೃಹಗಳರಚಿಸಿ ||೫೬

ಅಲ್ಲಲ್ಲಿಯವರನಿರಿಸಿಯಬ್ಧಿವಿಜಯಭೂ | ವಲ್ಲಭನನುಮತದಿಂದ ||
ಸಲ್ಲೀಲೆಯಿಂದ ಪಟ್ಟವಕಟ್ಟಿದನಾ | ಫುಲ್ಲನಾಭಂಗಾಧನದ ||

ಹೊನ್ನ ನುಳೆಯನವರಂಗಣದೊಳಗ | ತ್ಯುನ್ನತಮಪ್ಪಂತೆಕರೆದು ||
ತನ್ನ ನೆಲೆಗೆವೈಶ್ರವಣನು ಪೋಗೆಸಂ | ಪನ್ನರು ಸುಖದಿನೊಪ್ಪಿದರು

ಈಪರಿಯನು ವಿಜಯಾರ್ಧಗಿರಿಯರಥ | ನೂಪುರಚಕ್ರವಾಳದೊಳು ||
ಭೂಪಸುಕೇತುಖಚರನರಿದತಿಹ | ರ್ಷೋದ್ರೇತಮಾನಸನಾಗಿ

ಅತ್ಯಂತವಿಭವದೊಳೆಯ್ತಂದು ಭುವನ | ಸ್ತುತ್ಯೈವಿಲಾಸಾನ್ವಿತೆಯ ||
ಸತ್ಯಭಾಮೆಯೆಮದುವೆಯಮಾಡಿದನು ಕೃತ | ಕೃತ್ಯ ಕಮಲಲೋಚನಗೆ

ಅವನಿತಾಮಣಿಸತ್ಯಭಾಮೆಯೊಳಂ | ದಾ ವಾಸುದೇವಸುಕೂಡಿ ||
ಭಾವಜಕೇಳಿಯೊಳೋಲಾಡಿಸುಖಸಂಕ | ಥಾವಿನೋದದೊಳಿರುರಲು

ಒಂದುದಿವಸನೀರದಪಥದಿಂದೆ | ಯ್ತಂದು ನಾರದನಾಬಳಿಗೆ ||
ಬಂದುದನರಿದು ಮುಕುಂದನೇಳ್ದತಿಪ್ರಮದ | ದಿಂದನಮಿಸಿ ಕೈಮುಗಿದು

ಏನುಕಾರಣಜಿಜಯಂಗೈದಿರೆನಲಾ | ಭೂನಾಥಗಿಂತುಸುರಿದನು ||೫೧೫||
ಮಾನಿತಮಪ್ಪವಿದರ್ಭವೆಂಬೊಂದಭಿ | ಧಾನದನಾಡಮಧ್ಯದೊಳ

||೧೧೬||

ಕುಂಡಿನಪುರಮಿಹುದದಕೆ ವಿಶ್ವಾವಸು | ಮಂಡಳೀಶ್ವರನಿಹನವನ ||
ಪೆಂಡತಿಲಕ್ಷ್ಮೀ ಮತಿಯೆಂಬಳಿಹಳೀದು | ಮಂಡಲವದನೆಯಂತವರ್ಗೆ ||೬೪||

ಪಿರಿಯತನುಜರುಗ್ಮಿಣಿನಿಂಕಿರಿಯಳು | ಸರಸೀರುಹಾಯತನೇತ್ರೆ ||
ತರುಣೀಮಣಿರುಗ್ಮಿಣಿಯೆಂಬ ಪೆಸರಿನ | ಗರುವೆಸಂಭವಿಸಿಯೊಪ್ಪಿದಳು ||೬೫||

ಮದನಮೋಹನಶರಮದನ ಮದನಬಾಣ | ಮದನಮನ್ಮಥನಾರಾಚ ||
ಮದನವಶೀಕರಣೋನ್ನತಮಾರ್ಗಣ | ಮದನಸಂತಾಪಾಸ್ತ್ರಮವಳು ||೬೬||

ಇಂತಿಸೆವಾರುಗ್ಮಿಣಿಯನು ಜವಭೂ | ಕಾಂತನು ತನ್ನ ಕುಮಾರ ||
ಅಂತಕನಿಭಕೋಪಶಿಶುಪಾಲನೃಪತಿಗೆ | ಸಂತಸದಿಂ ಬೇಡಿಬಂದು ||೬೭||

ಇಂದಾಪೊಳಲಪೊರಗೆಬಿಟ್ಟಹರೆಯಂ | ಬೊಂದು ನುಡಿಯಕೇಳುತವೆ ||
ಇಂದೀವರನಾಭನಾರದನನುಭಕ್ತಿ | ಯಿಂದವಂದಿಸಿ ಬೀಳ್ಕೊಟ್ಟು ||೬೮||

ಬಲದೇವಗರುಪಿಸಾತ್ಯಕಿಯರ್ಜುನರನು | ಬಳಿಕ ಕರೆಸಿ ನಿಜಪುರವ ||
ತಳುಮಾಡದೆ ಪೊರಮಟ್ಟಿಬಿದನಾ | ಜಲಜಾತೋದರನಂದು ||೬೯||

ಕುಂಡಿನಪುರದ ಸದಿಯತೀರಕೈದಿಯು | ದ್ದಂಡರು ನಾಲ್ವರುನಿಂದು ||
ಡರಾಜೆಯಕಡೆಪಟ್ಟಿರ್ದ ಶಿಶುಪಾಲ | ಗುಡುಗಲಿಯಪಾಳೆಯವ ||೭೦||

ಘನಂಜಯನಾಸಾತ್ಯಕಿಯರು | ಜಲರುಹನಾಭಗೆಯರುಪಿ ||
ಯಾವಿಶ್ವಾವಸುಭೂಪನ | ಹೊಳಲನಿರದೆ ಪೊಕ್ಕರಾಗ ||೭೧||

ರುವೊಕ್ಕರುಹಂಗಭವಂದಿಸಿ | ಮರಳಿ ಮನೆಗೆಹೋಗುತಿರ್ಪ ||
ೀಮಣಿ ರುಗ್ಮಿಣಿದೇವಿಯನಾ | ನರನು ಸಾತ್ಯಕಿಯರುಕಂಡು ||೭೨||

ನರ ಬೆದರಿಸಿ ಕನ್ನೆಯನು ಮ | ತ್ತಾಪೆಗಲೊಳಗಿಕ್ಕಿಕೊಂಡು ||
ಜನಮಂಜುವೊಲು ಸಿಹ್ಮನಾದಮ | ನಾಪನಾರ್ಥನು ಮಾಡುತಾಗ ||೭೩||

ಅದವರನಂತಕಮುಖಕಿಕ್ಕುತ | ವಿದಿತವಿಕ್ರಮಯುತರವರು ||
ಸದಿ ನಡೆತಂದಾಪದ್ಮನಾಭಗೆ | ಸುದತಿಯ ತಂದೊಪ್ಪಿಸಿದರು ||೭೪||

ಕೇಳ್ದಾವಿಶ್ವಾವಸುಭೂಪಾಲ | ನೊದವಿಸಿ ತನ್ನಸೈನ್ಯವನು ||
ಪೊರಮಡಲಾಸಮಯದೊಳು | ನ್ಮದಯುತನಾಶಿಶುಪಾಲ ||೭೫||

ಕೂಡಿಕೊಂಡು ತಜ್ಜನಕನ | ತ್ಯುನ್ನತವಿಕ್ರಮಯುತನು ||
ರಲು ನಡೆತರುತಿ | ರ್ಪನ್ನಿಗಮಾಕೇಶವನ ||೭೬||

ಬಲಮೆಲ್ಲಪಿಂತನೆಬಂದುಕೂಡಲು ಕಂಡು | ಬಲಕೇಶವರುಸೌಜನಿಕ್ಕಿ ||
ನಿಲಲುಕಂಡಾಯಮನಾ ಶಿಶುಪಾಲಕ | ಕಲಿವಿಶ್ವಾವಸುನೃಪರು ||೭೭||

ಕಡುಮಸಕದಿತಮ್ಮಸೇನೆಗೆ ಕೈವೀಸ | ಲೊಡನಾಹರಿಯಬಲವನು ||
ತಡಮಿಲ್ಲದೆ ತಾಗಿಯೋರೋರ್ವರೊಳು ಕಡು | ವಿಡಿದುಸಳಂಚಿದರಾಗ ||೭೮||

ಆ ನಾರಾಯಣಬಲ ಶಿಶುಪಾಲನ | ಸೇನೆಯನೋಯಿಸೆ ಕಂಡು ||
ತಾನತಿಕೋಪದಿ ತನ್ನ ಪಟ್ಟದ ಮದ | ದಾನೆಯನೇರಿಮುಂಬರಿದು ||೭೯||

ಮುರಮಥನನಮುಟ್ಟಿಬಂದೆಲವೋ ನಂ | ಗರದಗೊಡವೆನಿಸಗೇಕೆ ||
ಹರಿದಾಡಿಹಳ್ಳಿಯೊಳಗೆ ದನಗಳಕಾಯ್ವ | ಪರಿಯಲ್ಲವೊ ಗೋಪಾಲ ||೮೦||

ಎಂದುಮೂದಲಿಸಿದ ಶಿಶುಪಾಲನಕಂಡು | ಇಂದೀವರನಾಭನಗುತ ||
ನಿಂದಿರೆಕೆಲದೊಳಿರ್ದರ್ಜುನನೀವು ನಿಂ | ದಂದಮಿದೇನುಕಾರಣವು ||೮೧||

ಎನಲಾಹರಿಯಿಂತೆಂದನೀಶಿಶುಪಾಲ | ಜನನಮಪ್ಪಂದುಹಣೆಯೊಳು ||
ಮಿನುಗುವದಿಟ್ಟಿಸಹಿತ ಹುಟ್ಟಲೊಡನಾ | ಜನಕನೋರ್ವಶಕುನಿಗನ ||೮೨||

ಕೇಳಿದೊಡನಿಂತೆಂದನುವಿತ್ತೀ | ಬಾಲನಾವನಮೊಗನೋಡೆ ||
ಭಾಳಲೋಚನವಡಗುವುದವನಿಂದಿವ | ಕಾಲನಾಲಯಕೆಯ್ದುವನು ||೮೩||

ಎಂದಮಾತನುಕೇಳಿಯಾಶಿಶುವಿನತಾಯಿ | ತಂದೆಗಳಾಬಾಲಕನ ||
ಅಂಬೆತ್ತಿಕೊಂಡೆಲ್ಲಾ ಪುರಪುರಕೈದಿ | ಬಂದಲ್ಲಲ್ಲಿಯನೃಪರ್ಗೆ ||೮೪||

ತೋರುತನನ್ನಲ್ಲಿಗೆಯ್ದಾರಲಾದಿಟ್ಟಿ | ಹಾರಲು ತಂದೆತಾಯಿಗಳು ||
ನೀರನಮಗೆ ಪುತ್ರಭಿಕ್ಷವೀಯೆಂದು ಬಾ | ಯಾರಿಪಲುಂಬುತಮಿರಲು ||೮೫||

ಅವರವೈನ್ಯವನೋಡಿ ನೂರಪರಾಧವ | ನಿವನೊಳುಸೈರಿಪೆನೆಂದು ||
ಸವಿನಯದಿಂದನುಡಿದೆನದುಕಾರಣ | ಮಿವನನುಡಿಗೆಸೈರಿಸಿದೆನು ||೮೬||

ಎಂದಾನರನೊಳುನುಡಿವುತಿರ್ದಾ ಗೋ | ವಿಂದನನಾಶಿಶುಪಾಲ ||
ಒಂದಿದಬಹುಕೋಪದಿ ನೂರುಬಯ್ಗಳ | ನಂದುಬಯ್ವುತ್ತಿಚ್ಛನಾಗ ||೮೭||

ಆ ಶಿಶುಪಾಲಕುಮಾರಕನಾರ್ದೆ | ಚಾಡ್ದಶರಸಂಘಾತವನು ||
ಕೇಶವನಂಬೊಂದರಿಂದ ಕಡಿದುಮೆ | ತ್ತಾಶಿರವನುಪರಿದೆಚ್ಚ ||

ಅರ್ಜುನನತ್ಯಯವನಜೀವವನು ವಿ | ಸರ್ಜಿಸಿದನುಕಡುವಂನಿದು ||
ಊರ್ಜಿತನಾಬಲವಿಶ್ವಾವಸುವನು | ನಿರ್ಜೀವವಮಾಡಿದನು

ಇಂತಾದಸಮರಸವಾಪ್ತಿಯೊಳಾವಿ | ಕ್ರಾಂತರಭಯಘೋಷಣೆಯ ||
ಸಂತಸದಿಂಹೊಯ್ಸಿಯಾರುಗ್ಮಿಣನನು | ಸಂತೈಸಿಪುರದೊಳಗಿರಿಸಿ ||೯೦||

ದ್ವಾರಾವತಿಗೆ ಮಗುಳಿಬಂದುಮುದದಿಂ | ದಾರುಗ್ಮಿಣಿದೇವಿಯನು ||
ಊರಮುಂದೊಂದುಪಂಟಪದೊಳು ದೇವತಾ | ಕಾರದಸಿಂಗರದೊಡಿಸಿ ||೯೧||

ಇರಿಸಲಲ್ಲಿಗೆಸತ್ಯಭಾಮೆಯಚ್ಯುತನು ತಂ | ದರಮಗಳನುನೋಳ್ಪೆನೆಂದು ||
ಬರುತಾಕೃತಕದೇವತೆಯನರ್ಚಿಸುವಾ | ಪರಿಚಾರಿಕೆಯರಕಂಡು ||೯೨||

ಆವದೇವತೆಯಿವಳೆನೆ ಬೇಡಿದುದನೀವ | ಳೀವನದೇವತೆಯೆನಲು ||
ಆವಧುವಿದನು ನೋಡುವೆನೆಂದಾದೇವ | ತಾವಾಸಕೆನಡೆತಂದು ||೯೩||

ನೆಲೆಯದೇವತೆಯೆಂದೊಸೆದರ್ಚಿಸಿ ಕರ | ತಳವಮುಗಿದು ಹಣೆಗಿಟ್ಟು ||
ಎಲೆದೇವಿಯಾಗತಂದವಳಿಗೆಯಚ್ಯುತ | ನೊಲವಿಲ್ಲದಂತುಮಾಡಿದೊಡೆ ||೯೪||

ನಿನಗೆಪಲವುತೆರನಪ್ಪಪೂಜೆಯಮಾಳ್ಪೆ | ನೆನುತಿರಲಾಸಮಯದೊಳು ||
ವನಮಾಲಿಬಂದುನಗುತ ಸತ್ಯಭಾಮೆ ನೀ | ನನುಮಾನಿಸದೆ ರುಗ್ಮಿಣಿಗೆ ||೯೫||

ವಿನಮಿತೆಯಾಗುವ್ರದುಚಿತವೆಯೆನೆಕೇಳಿ | ಕನಲಿಕೆಳದಿಯರುಗೂಡಿ ||
ವನಿತೆರುಗ್ಮಿಣಿಯಮೇಲ್ವಾಯ್ದುಶೃಂಗಾರವ | ನಿನಿಸಿಲ್ಲದೆಸುಲಿಯುತಿರೆ ||೯೬||

ಪಿಂದಣಜನ್ಮದೊಳಗೆಮಾಡಿದಪುಣ್ಯ | ದಿಂದರುಗ್ಮಿಣಿಯುಡತೊಡವು ||
ಒಂದಿನಿಸಿಲ್ಲದೆಸೆಳೆವುಕಲಿರೆ ಮುನ್ನಿ | ನಂದದಿವೆಯ್ಯೋಳಗಿರಲು ||೯೭||

ಅದನುಕಂಡುಶಂಕಿಸಿ ಸತ್ಯಭಾಮೆ ಮ | ತ್ತೊದವಿದಕೋಪದಿತನ್ನ ||
ಸದನಕೆಪೋಗಲಚ್ಯುತನತಿವಿಸ್ಮಯ | ಹೃದಯನಾಗಿರುಗ್ಮಿಣಿಯ ||೯೮||

ಮೃದುಸದತಳಕೆವಂದಿಸುತಮನಕ್ಷತ | ದೊದವಸುಪರಿಹರಮಾಡಿ ||
ವಿದಿತಮಪ್ಪಾದ್ವಾರಾವತಿಯನುಪೊಕ್ಕ | ಸದಮಲಮಪ್ಪಲಗ್ನದೊಳು ||೯೯||

ಕಟ್ಟಿಲವಿಂಮದುವೆಯನಿಂದಾಕೆಗೆ | ಪಟ್ಟವನಾಕೇಶವನು ||
ಕಟ್ಟಿಸುಖದೊಳಿರಲೊಂದುದಿವಸವೆಲ | ರ್ವಟ್ಟಿಯಿಂದಿಳಿದುನಾರದನು ||೧೦೦||

ಹರಿಯಕಂಡಲೆವಭುವಿದ್ಯಾಧರಗಿರಿ | ವರದುತ್ತರಶ್ರೇಣಿಯೊಳು ||
ಸಿರಿಮೆರಂಜಿಪ ಜಂಬೂಪುರಮಿಹುದಲ್ಲಿ | ಗರಸುಜಾಂಬವನೆಂಬವನು ||೧೦೧||

ತೆ ಜಂಬೂಷಣೆಯೆಂಬಮಾನಿನಿಯಿರ್ಪ | ಳವರ್ಗೆಸುತನು ಜಂಬುಕುವರ ||
ಕಿರಿಯಳು ಜಂಬಾವತಿಯೆಂಬ | ಯುವತೀಮಣಿಯೊಪ್ಪಿದಳು ||೧೦೨||

ಆ ಜಲಜಾಕ್ಷಿಯು ವಿದ್ಯಾಧರದೇಶ | ರಾಜನತಾಧಿಪರಿಲ್ಲ ||
ಓಜೆಯಿಂದಲಿಬೀಡಲುಕೊಡದಿರ್ದಪ | ನಾಜಾಂಬವಖೇಚರನು ||೧೦೩||
ಅವಳಿಗೆತಕ್ಕವನೀಸು ನಿನಗೆತಕ್ಕ | ಳವಳೆಂದಾನಾರದನು ||
ಪವನಪಥಕೆಪೋಗಲಂತದನಾಕೇ | ಶವನೇಕಕುಂಡಲಗರುಪಿ ||೧೦೪||
ಬಲವನೆಲ್ಲವಕೂಡಿ ಬಡಗದೆಸೆಗೆನಡೆ | ದಲಘುವಿಕ್ರಮಿಗಳಾತುರದಿ ||
ಅಲಸದೆ ನಡೆತಂದಾವಿಜಯಾರ್ಧಾ | ಚಲದಕೆಳಗೆಬೀಡಬಡಿಸಿ ||೧೦೫||
ಭೂಮಿಚರರು ತಾವಪ್ಪುದರಿಂದಮು | ತ್ತಮಹೀಧರದುಪರಿಮಕೆ ||
ತಾವೆಯ್ದೆ ಬಾರದೆಂದಾಪೀತಾಂಬರ | ನಾಮರುದಿನಶುಚಿಯಾಗಿ ||೧೦೬||
ಉತ್ಪತವಿಧಿಯೊಳು ದರ್ಭಶಯನಮಿರ | ಲನ್ನೆಗಮಾಕೇಶವನ ||
ಮುನ್ನಿನಜನ್ಮದಗ್ರಜಯಕ್ಷಿಳನೆಂಬ | ಸನ್ನುತನತಿಪುಣ್ಯಫಲದ ||೧೦೭||
ಒಳ್ಪುವಡೆದುಸಖಿವಾವ ಸಹಸ್ರಾರ | ಕಲ್ಪದೊಳೊಗೆದಲ್ಲಿಂದ ||
ಅಲ್ಪೇತರಮೋಹದಿಂದಾವರ್ಧಿಯ | ತಲ್ಪದನುಜನೆಡೆಗೆಯ್ದಿ ||೧೦೮||
ಸನುಮಾನದಿಸಿಹ್ಮವಾಹಿನಿ ಗರುಡವಾ | ಹಿನಿಯೆಂಬೆರೆಡುರಥವನು ||
ಜನನುತರಾಮಕೇಶವರ್ಗಿತ್ತುಬಳಿಕಾ | ಅನಿಮಿಷನತಿಮುದದಿಂದ ||೧೦೯||
ಆರಾರಿಗೆ ಶಕ್ಯಮಲ್ಲದತೆರದಿಂ | ಕ್ಷೀಪವಾರಾಶಿಯರಚಿಸಿ ||
ದಾರುಣಮಪ್ಪಮಹೋರಗಶಯ್ಯೆಯೊ | ಳಾರಾಮಹರಿಗಳನಿರಿಸಿ ||೧೧೦||
ಈವಿಧದಿನಿಮ್ಮಕಾರ್ಯವಾಗುವುದೆಂ | ದಾವಾಸವನವರ್ಗುಸುರಿ ||
ದೇವಲೋಕಕೆಪೋಗಲಿತ್ತಲುಬಲವಾಸು | ದೇವರಲ್ಲಿಯೆನಾಲ್ಕುಮಾಸ ||೧೧೧||
ಇರೆಮತ್ತೆದೆಸಿಬೆಸಿಬೆಸಿಯೆನುತತ್ಯಾ | ದರದಿವಿದ್ಯಾದೇವತೆಗಳು ||
ಬರಶಾಗಲವನುಕೈಕೊಂಡಾಬಲಭದ್ರ | ಮುರರಿಪುಗಳುಮುದದಿಂದ ||೧೧೨||
ಪ್ರೀತಿಯಿಂದವುತಂದಪುಷ್ಪಕಗಳನೇರಿ | ಯಾತುರದಿಂದಾಗಿರಿಯ ||
ಆ ತೆಂಕಣತಪ್ಪಲೊಳಗಿರ್ಪಕಿನ್ನರ | ಗೀತವೆಸರಪುರಕೈದಿ ||೧೧೩||
ಅಲ್ಲಿತಮ್ಮಯ್ಯನು ವಸುದೇವನಚಿತ್ತ | ವಲ್ಲಭೆಶಾಲ್ಮಲಿದತ್ತೆ ||
ಚಲ್ಲೆಗಣ್ಗಳಚದುರೆಯುಮಗಧ್ರುವನೆಂಬ | ಬಲ್ಲಿದನಾಸುಕುಮಾರ ||೧೧೪||
ಒಂದುಕೂಡಲುಭಕ್ತಿಯಿಂದಾಬಲಗೋ | ವಿಂದರಣ್ಣನಪದಕೆರಗಿ ||
ಇಂದುನಿಮ್ಮನುಕಾಣ್ಬೆವೆಂಬಾತುರದಿಂ | ಬಂದೆವೆಂದಾನೃಪವರರು ||೧೧೫||
ನೀತಿಸಂಯುತರಪ್ಪಖೇಚರರನುಮ | ತ್ತಾತರುಣಿಯಬೀಡಿಳಿಪೆ ||
ಆತುರದಿಂದೈದಿ ಜಂಬೂಪುರದವಿ | ಖ್ಯಾತಜಾಂಬವನಕಂಡವರು ||೧೧೬||

ದ್ವಾರಾವತಿಯಧಿಪತಿನಾರಾಯಣ | ಗಾರೈಯದೆನಿಮ್ಮತನುಜೆ ||
ನಾರೀಮಣಿಯನುಕೊಡಿಯೆಂದು ಬೀಡಿದೊ | ಡಾರಾಜನವರೊಳಿಂತೆಂದ ||೧೧೭||
ಒಳ್ಳಿತೊಳ್ಳಿತುಮದವಾರಣದೊಳಗಾಡು | ಕೊಳ್ಳುಕೊಡೆಯಮಾಳ್ಪದೆಂದು ||
ಪೊಳ್ಳುನುಡಿಯಿದೇಕಪೋಗೆಂದವರನು | ತಳ್ಳಿಸಲವರೈತಂದು ||೧೧೮||
ಉತ್ತಮಸತ್ವರುಧ್ರುವಬಲನಾಪುರು | ಷೋತ್ತಮರೊಳಗದನುಸುರೆ ||
ಮತ್ತವರಾಶ್ರೇಣಿಯಜಂಬೂಪುರ | ಕೆತ್ತಿಬಂದುಪೌಜನಿಡಲು ||೧೧೯||
ಅದನರಿದಾಜಾಂಬವಖೇಚರೇಶ್ವರ | ನಧಟಿಂತನ್ನಸೇನೆಯನು ||
ಪದಪಿಂಕೂಡಿತತ್ಪುರವನು ಪೊರಮ | ಟ್ಟದಿರದೆಪೌಜನಿಕ್ಕಿದನು ||೧೨೦||
ಅನಿತರೊಳಾಒಲಹರಿಗಳಪಿಂತಿಕ್ಕಿ | ಏಸುತವಿಕ್ರಮಿಧ್ರುವಕುನರ ||
ಕನಲಿಕೃತಾಂತನಂದದಿನಾಖಚರನ | ಘನಬಲಕಿದಿರಾಗಿನಡೆದು ||೧೨೧||
ಆಜಿರಂಗದೊಳಾಧ್ರುವಸುಕುಮಾರಕ | ನಾಜಾಂಬವನನೆಲಕಿಕ್ಕಿ ||
ಆ ಜಂಭಾವತಿಯನುತಂದುಕೊಟ್ಟನಂ | ದಾಜಲಜಾತೋದರಗೆ ||೧೨೨||
ಇಂತುಜಂಭಾವತಿಯನುಕೊಂಡಾಕೈಟ | ಭಾಂತಕನಾನಿಜಪುರಕೆ ||
ಸಂತಸದಿಂಬಂದು ಮದುವೆಯನಿಂದನ | ತ್ಯಂತವೈಭವದೊಳಗಂದು ||೧೨೩||
ಮತ್ತೊಂದುದಿನಬಂದುನಾರದನೆಲೆ ಪುರು | ಷೋತ್ತಮಗಿರಿನಗರವನು ||
ಒತ್ತಿಯಾಳ್ವನುಜ್ಯೇಷ್ಠವರ್ಧನನೆಂಬವ | ಗುತ್ತಮೆಜ್ಯೇಷ್ಠಾವತಿಗೆ ||೧೨೪||
ಸಂಜನಿಸಿದಳು ಸುಸೀಮೆಯೆಂಬೋರ್ವಳು | ಕಂಜಾಕ್ಷಿನಿಸಗನರೂಪೆ ||
ರಂಜಿಪಳೆಂದುನಾರದಪೋಗಲಾಮಧು | ಭಂಜನನಾಪುರಕೈದಿ ||೧೨೫||
ಆಹವಮುಖದಿನಾಕುವರಿಯತಂದು ವಿ | ವಾಹವಿಧಿಯೊಳಿರ್ದುಬಳಿಕ ||
ಈಹದದಿಂಪಲಬರುರಾಜಸುತೆಯರ | ನಾಹವಿತುದುಕೂಡಿದನು ||೧೨೬||
ಆವಿಭುವಿಗೆ ಸತ್ಯಭಾವೆರುಗ್ಮಿಣಿ ಜಂ | ಭಾವತಿದೇವಿಸುಸೀಮೆ ||
ಕೋವಿದೆಲಕ್ಷ್ಮಣೆಗಾಂಧಾರಿಗೌರಿ ಪ | ದ್ಮಾವತಿಸತಿಯರೊಪ್ಪಿದರು ||೧೨೭||
ಜಸವೆಣ್ಣಿಂಬದೂತಿಯವಚನವಕೇಳಿ | ಮುಸುಕಿದಕಿವೇಟದಿಂದ ||
ದೆಸೆವೆಣ್ಗಳೈತಂದವೊಲೇಣ್ಬರಬಲೆಯು | ರೆಸೆದಿರ್ದರಾನರಹರಿಗೆ ||೧೨೮||
ಇದುಜಿನಪದಸರಸಿಜ ಮದಮಧುಕವ | ಚದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗಿದುಪದಿನೇಳಾಶ್ವಾಸ ||೧೨೯||

ಹದಿನೇಳನೆಯ ಸಂಧಿ ಸಂಪೂರ್ಣಂ

೧೪. ಮನ್ಮಥೋದಯಸಂಧಿ

ಶ್ರೀಮದವರಪತಿಮೌಲಿಕೀಲಿತವಾದ | ತಾಮರಸದ್ವಯನಜಗೆ ||
ಕಾಮುಮದೇಭಹರಿಗೆ ನೇಮಿಜಿನಪತಿ | ಗಾಮೋದವೆತ್ತೆರಗುವೆನು ||೧||

ದ್ವಾರಾವತಿಪುರದೊಳಗಿಂದ್ರವಿಭವದಿ | ನಾರಾಯಣಸುಖದಿಂದ ||
ಭೂರಿಭೂಭುಜರಮಧ್ಯದೊಳೊಪ್ಪುವಕಂ | ಠೀರವಪೀಠದೊಳಿರ್ದು ||೨||

ತನ್ನ ವೆರಸುತೋಳಬಾಳಿಗೆಹುದುಗಾದ | ಕನ್ನಡಿಯೊಗದಕಾಂತೆಯರ ||
ಚೆನ್ನೆಯರನುತನ್ನೊಲಗಶಾಲೆಗೆ | ಯುನ್ನತಮಪ್ಪನೇಹದೊಳು ||೩||

ಕರಸಲೊಡನೆಮುಂದೆರುಗ್ಮಿಣಿಬಂದಾ | ಹರಿಯಬಲದಭಾಗೆಯೊಳು ||
ಇರೆಮತ್ಸತ್ಯಭಾಮಾದೇವಿಬಂದುರು | ತರಕೋಪದಿನಿಂದಿರಲು ||೪||

ಅದನುಕಂಡಾವಿಷ್ಣುವೆಲೆಬಾಲೆನೀನೇ | ಕಿದಿರೊಳಿರ್ದಪೆಯ್ದೆನಲು ||
ಮದವತಿಬಾರದಿರಲು ರುಗ್ಮಿಣಿದೇವಿ | ಯದನರಿದಿಂತೆಂದಳಾಗ ||೫||

ಭಾಮಿನಿಯರಿಗೆ ಬಗೆಯುಲಾವುರುಷನ | ವಾಮಭಾಗವೆಮುಖ್ಯವೆಂದು ||
ಕೋಮಲೆರುಗ್ಮಿಣಿಯಾಪತಿಯೆಡಗಡೆ | ಪ್ರೇಮದಿಬಂದುನಿಂದಿರಲು ||೬||

ಅವರಿನಿದುಗೋವಿಂದನುಡಿದನೆಲೆ | ಯುವತಿಯರಿರನಿಮ್ಮೊಳಗೆ ||
ಕುವರಸನಾವಳೋರ್ವಳು ಮುಂಪೆತ್ತವ | ಳವಳೆಯಗ್ಗಳಮೆನಲಾಗ ||೭||

ಆವಾತಿಗವರೊಡಬಡೆಬಳಿಕಿಂತೆಂದ | ನೀಮುವೊದಲುಪೆತ್ತಮಗನ ||
ಆಮದುವೆಯೊಳುಪಿಂದುಳಿದವಳಳಕವ | ನೇಮೆಟ್ಟಿಮಾಯಬೇಕವಳು ||೮||

ಎನಲವರದನೆಕೈಕೊಂಡುತಂತಮ್ಮಯ | ಮನೆಗೆವೋಗಲುಮಾಧವನು ||
ವನಿತಾಮಣಿಗಳೊಳಗೆರತಿಕೇಳಿಯೊ | ಳನುದಿನಸುಖಿಯಿಸುತಿರಲು ||೯||

ಒಂದುದಿವಸರುಗ್ಮಿಣಿ ಋತುಮತಿಯಾಗಿ | ಮಿಂದುಬಿಳಿಯತೊಡವಿಟ್ಟು ||
ಕಂದರ್ಪನಕೀರ್ತಿಕಾಂತೆಯಂದದೊಳುಮು | ಕುಂದನಸೊಳ್ಗೃತಂದು ||೧೦||

ಹಂಸತೂಳದತಲ್ಪದೊಳಗೊರಗಿದರಾಜ | ಹಂಸನವೊರೆಗೈದಿದಳು ||
ಹಂಸಗಮನೆಹಂಸಿಪುಳಿನತಳದರಾಜ | ಹಂಸನಬಳಿಗೈದುವಂತೆ ||೧೧||

ಭಾಮೆರುಗ್ಮಿಣಿಯರಾಜೀವೋದರನು | ದ್ದಾಮರಾಗದೊಳೊಡವೆರೆದ ||
ಪ್ರೇಮವನೇನೆಂಬೆನುಕಾಮುಗೆ ಜನ್ಮ | ಭೂಮಿತಾನಾದುದರಿಂದ ||೧೨||

ಸುರತಸುಖಾವಸಾನದೊಳಾದನಿದ್ರೆಯೊ | ಳಿರುತಬೆಳಗುಜಾವದೊಳು ||
ಸಿರಿಸಿಂಗಮಿಾನುಮುನ್ನೀರುವಿಮಾನವ | ತರುಣಿಕನಸಿನೊಳುಕಂಡು ||೧೩||

ಹರಿಸದಿನೆಳತ್ಕಾಕನಸಿನಫಲವಭೂ | ವರಪೇಳಲನುರಾಗದೊಳು ||
ಇರೆತಪ್ಪುಣಿಯನಡುವಿನಬಡತನವೋಗಿ | ವರಭುವನವನೋಪ್ಪೆನೆಂಬ ||೧೪||

ಉರುತರಮಪ್ಪಿಚ್ಛೆಯಾಗಲುಪೇಂದ್ರನಾ | ದರದಿಂದರ್ಭಶಯ್ಯೆಯೊಳು ||
ಇರಲವಳೊಡಲಬಾಲಕನಸುಕೃತದುರು | ತರಫಲದೇಳ್ಗೆಯಿಂದಾಗ ||೧೫||

ಸುರಪತಿಯಟ್ಟಿದಕಾಮವಿಮಾನವ | ನಿರದೇರಿಯಾದಂಪತಿಗಳು ||
ನರಲೋಕಮನೆಲ್ಲವನೋಡಿಮಗುಳಾ | ದ್ದುತಕೆಬಂದುಸುಖಮಿರಲು ||೧೬||

ಬಳಿಕಾಸತ್ಯಭಾಮಾದೇವಿಗೆಗರ್ಭ | ಮೊಳೆತುಬಳೆವುತಿರೆಕಂಡು ||
ಜಲಜಾತೋದರನತ್ಯಂತಹರುಷವ | ತಳೆದು ಸುಖದೊಳಿರುತಿರಲು ||೧೭||

ಅಂಗನೆರುಗ್ಮಿಣಿಯಂಗದಕಾಮನ | ನಂಗತೆಯನುಪರಿಹರಿಸಿ ||
ಅಂಗವಡೆದುಬಳೆವಂದದಿನಾಶಿಶು | ತಿಂಗಳೊಂಬತ್ತನುಕಳೆದು ||೧೮||

ಅತ್ಯಂತಶುಭತರವಹಲಗ್ನದೊಳುಕೃತ | ಕೃತ್ಯೆಸುಶೀಲಸಂಪನ್ನೆ ||
ಸತ್ಯವಂತೆಯಬಸಿರಿಂಭೂಭುವನ | ಸ್ತುತ್ಯನುಸಂಜನಿಸಿದನು ||೧೯||

ಅಂತದನಚ್ಯುತನರಿದೊಸಗೆಯಮಾಡಿ | ಪಂತರದೊಳುಸತ್ಯಭಾಮೆ ||
ಸಂತಸದಿಂದೋರ್ವಸುತನನುಹಡೆದು ನಿ | ಶ್ಚಿಂತದಿಸುಖಮಿರಲತ್ತ ||೨೦||

ಆರುಗ್ಮಿಣಿಯನಂದನನ ಪೂರ್ವಜನ್ಮದ | ವೈರಿಯೋರ್ವಜ್ಯೋತಿಷ್ಕ ||
ಕ್ರೂರಮಾನಸಧೂಮಕೇತುವೆಂಬವನಾ | ಮಾರುತಮಾರ್ಗದಿಂದಿಳಿದು ||೨೧||

ಪಸುಳೆನೇಸರನುಪಿಡಿವರಾಹುವಂತೆ ಕ | ಕ್ಕಸದಿಂದತಿರಂಜಿಸುವ ||
ಸಿಸುವನೆತ್ತಿಕೊಂಡತಿಭರದಿಂದಾ | ಗಸಕೆನೆಗೆಯೆಬಳಿಕಿತ್ತ ||೨೨||

ಸೋವಿಲೊಳಿರ್ದಮಗುವಕಾಣದಾಸತಿ | ಯೆವ್ವೆನುಕೆಟ್ಟೆನಾನೆನುತ ||
ಆವಸುಧೆಗೆ ಹಂಮಳಿಸಿಯುರುಳಿಶೋ | ಕಾವೇಶದೊಳಗಿರುತಿರಲು ||೨೩||

ಅಂತದನಚ್ಯುತನರಿದುಬಂದಾ ನಿಜ | ಕಾಂತೆಯನಿರದೆ ಸಂತೈಸಿ ||
ಇಂತಿದಕೇಸುಬೇವಸವೆನ್ನ ಸುತನು ದಿ | ಗಂತದೊಳಾವೆಡೆಯಿರಲಿ ||೨೪||

ಕಿನ್ನರಭೂಚರರಾವಿದ್ಯಾಧರ | ಪನ್ನಗರೊಳಗೆಲ್ಲಿರಲಿ ||
ಚೆನ್ನೆಕೇಳೀಕ್ಷ್ಣಣದೊಳು ತಾರದೊಡೆವು | ತ್ತಿನ್ನಿರವೇಕೆಂಬಾಗ ||೨೫||

ಹರಕೇಳಾನಿನ್ನ ಕುವರನುವಿದ್ಯಾ | ಧರದೇಶದೊಳುನೆರೆಬಳೆದು ||
ಉರುಭುಜಬಲನಾಗಿ ನಿನ್ನಲ್ಲಿಗೀರೆಂಟು | ವರುಷಕೆಮಗುಳುವನೆಂದು ||೨೬||

ದೇವವಚನಮಾಗಸದೊಳಾಗಲು ವಾಸು | ದೇವನೊಸೆದುರುಗ್ಮಿಣಿಯ ||
ಓವಿಸಂತೈಸಿನಿಶ್ಚಿಂತಮಿರಲುಋುಕ್ಷ | ದೇವನತ್ತಲಾಶಿಶುವ ||೨೭||

ಎತ್ತಿಕೊಂಡಾಗಸದೊಳುಮುನಿಸಿಂದ ಬ | ರುತ್ತಿಲವೋಯೆನ್ನ ಹಗೆಯೆ ||
ಸತ್ತೆಯಲಾಯೆನ್ನ ಕೈಯಿಂದ ಪರಿದುಕೊಂ | ಬುತ್ತಮಸತ್ತ್ವದಾರು ||೨೮||

ಮುನ್ನಿಸಭವದೊಳಗೆನ್ನ ಸತಿಯ ನೊ | ಯ್ದನ್ನಯಕಾರನೆಕೇಳು ||
ನಿನ್ನನೀಗಳಿಸ್ನಳಿನ್ನವಮಾಡುವೊ | ಡೆನ್ನನುಬಾರಿಪರುಂಟೆ ||೨೯||

ಎಸುತಾಪಸುಳೆಯನುದೆಮೂದಲಿಸುತ | ಘನಪಥದೊಳುಧೂಮಕೇತು ||
ಮುನಿಸಬಲಿದುಬರುತಿಳೆಯನೀಕ್ಷಿಸುತೊಂದು | ಘನತರಮಪ್ಪಡವಿಯೊಳು ||೩೦||

ವ್ಯಂತರಿಗಳಕೃತಕದಿಮತ್ತದರ | ಭ್ಯಂತರದೊಳುಶಿಲೆಯೆರಡು ||
ತಂತಮ್ಮೊಳುತಾಕಿಪಳಚುವುದನುಕಂ | ಡಿಂತೆಂದನಾ ಧೂಮಕೇತು ||೩೧||

ಮಿಗೆಹೋರುವೀಕಲ್ಗಳ ಮಧ್ಯದೊಳಗೀ | ಹಗೆಯಹಾಕಲುಸಾವುದೆಂದು ||
ಬಗೆದುಮತ್ತದರೊಳಗಾಹಗೆಯನುಹಾಕಿ | ಗಗನಕೊಗೆದನವನಿತ್ಥ ||೩೨||

ಅಗಂಡುಮಗುವಿನ ಪುಣ್ಯಪ್ರಭಾವದಿ | ನಾಗುಂಡುಗಳು ತಮ್ಮೊಳಗೆ ||
ತಾಗದೆಬೆರಗುವಟ್ಟಿರಲಾವೇಳೆಯೊ | ಳಾಗಸವಟ್ಟಿಯೊಳೊಸೆದು ||೩೩||

ವಿಸುತವಿಜಯಶಿಖರಿಯ ಜಲತಟದೊಳು | ಘನಕೂಟವೆಂಬಪಟ್ಟಣದ ||
ಜನಪತಿಕಾಳಶಂಬರನೆಂಬನು ತನ್ನ | ವನಿತೆಕಾಂಚನಮಾಲೆಗೂಡಿ ||೩೪||

ಬರುತಿರಲಾಚರಮಾಂಗನಮೇಲಾ | ಸುರುಚಿರಮಪ್ಪವಿಮಾನ ||
ಪರಿಯದೆನಿಲಲಿಂತಿದೇನೆಂದಾಖೇ | ಚರನಾಗಸದಿಂದಿಳಿದು ||೩೫||

ಆಕಲ್ಗಳೆರಡರಮಧ್ಯದೊಳಗೆ ಪೊಳೆ | ವಾಕುವರನಕಾಣುತವೆ ||
ಏಕಾರಣಮಿಂತಿದೆಂದುವಿಸ್ಮಯಮಾಗು | ತಾಕಾಳಶಂಬರನ್ನಪತಿ ||೩೬||

ಆವನಂಗಸಂಗತಮಾಗಿರ್ದ ಶುಭಲಕ್ಷ | ಣವಕಂಡಿಂತು ತಿಳಿದನು ||
ಅವನಿಪಾಲಕನನಂದನನಿವನನು ಪೂರ್ವ | ಭವದವೈರಿಹಾಕಿಹೋದ ||೩೭||

ಪರಿಯೆಂದಾಮಗುವನು ತೆಗೆದಾಖೇ | ಚರನು ತನ್ನೆದೆಯೊಳಗಿಟ್ಟು ||
ಮರುತಮಾರ್ಗಕೆಪೋಗಿಯಾವಿಮಾನದೊಳಿರ್ದ | ತರುಣಿಕನಕಮಾಲೆಯೊಡನೆ ||

ಬಾಲಕನನುಕಂಡಾಸುಪ್ರಪಂಚವ | ಪೇಳಿಯಿವನಸಾಕೆನಲು ||
ಬಾಲೆಪಿಂತಣಭವಬದ್ಧದಿಶಿಶುವನ | ಮೇಲತಿಕರುಣವಂಕುರಿಸಿ ||೪೯||

ಕಡುಬಡವನುಕಡವರವಕಂಡಂದದಿ | ಸಡಗರವೆತ್ತಾಸುದತಿ ||
ನುಡಿದಳಿಂತೆಂದುವಲ್ಲಭನಿನ್ನಮತ್ತಿನ | ಮಡದಿಯಣುಗರಿರ್ದಂತೆ ||೪೦||

ಈನಂದನನಸಾಕಿದೊಡೇನುಫಲವೆನ | ಲಾನುಡಿಗಾಖೇಚರನು ||
ಮಾನಿತಮಪ್ಪಕೊರಲಕಂಠಿಕೆಯನು | ತಾನಂದುಕಟ್ಟಿದನವಗೆ ||೪೧||

ಇವನೇಯುವರಾಜನೆಂದುನುಡಿಯಲಾ | ಯುವತಿಗೆಮೊಲೆವಾಲುಸುರಿಯೆ ||
ಸವಿನಯದಿಂದೂಡಿಸಿತಮ್ಮನಗರಿಗೆ | ಯವರಮುದದಿನ್ಪೈದಿದರು ||೪೨||

ನಂದನದೊಳಗಿರ್ದುಗೂಢಗರ್ಭದಿನಾ | ಸುಂದರಿಕಾಂಚನಮಾಲೆ ||
ಕಂದನಪಡೆದಳೆನುತಪುರಕೊಸಗೆಯ | ನಂದಟ್ಟಿದನುಖೇಚರನು ||೪೩||

ಪುರಜನಮತಿಮುದದಿಂದಿದಿರ್ಗೊಳಲಾ | ಸುರಪತಿವೈಭವದಿಂದ ||
ಅರಮನೆಗೈತಂದು ಶುಭಲಗ್ನದೊಳಗಾ | ತರುಣಗೆಜಾತಕರ್ಮವನು ||೪೪||

ದಶಮದಿವಸದೊಳುಮಾಡಿಬಳಿಕಬಾಲ | ಶಶಿಯಂದದಿಥಳಥಳಿಪ ||
ಶಿಶುವಿಗೆಪ್ರದ್ಯುಮ್ನನೆಂಬ ನಾಮವನಾ | ಕುಶಲನಿಟ್ಟನುಮಮತೆಯೊಳು ||೪೫||

ಬಳಿಕಬಾಸೊಳುಬಾಲಭಾನುಬೆಳೆವವೊಲು | ಬೆಳೆದಕ್ಷರಾದಿವಿದ್ಯೆಯನು ||
ಉಳಿಯದೆಕಲಿತೀರುಂಜವ್ವನವನು | ತಳೆದತಿತೇಜವಡೆದನು ||೪೬||

ಮರಕತಮಣಿವರ್ಣಸಮಚತುರಸ್ರಬಂ | ಧುರತರವೃಷಭನಾರಾಚ ||
ಉರುಶಕ್ತಿಯುತನಾದೇಯಸೌಂದರ್ಯನು | ಚರಮಶರೀರಿಯೊಪ್ಪಿದನು ||೪೭||

ಸ್ಮರನನೂಹಿಸಿಬುಧರುತ್ತಮವುರುಷರ | ನಿರದೆವರ್ಣಿಪರುಪ್ರತ್ಯಕ್ಷ ||
ಸ್ಮರನನಿನ್ನಾರೊಳೂಹಿಸುವೆನವನಸುಂ | ದರತೆಗವನೆಸಕ್ಕನಮನು ||೪೮||

ಇಂತೆಸೆವುತ್ತಮರೂಪನುತಳೆದಾ | ಕಂತುಕುಮಾರಚಂದ್ರಮನು ||
ಸಂತಸದಿಂಹಿಮವದ್ಗಿರಿಶಿಖರಕೆ | ತಾಂತಳರ್ದತಿಶುಚಿಯಾಗಿ ||೪೯||

ಸಿದ್ಧಕೂಟಕೆಪೋಗಿಷಣ್ಮಾಸಪರಿಯಂತ | ರುದ್ಧತಮಪ್ಪವಿದ್ಯೆಯನು ||
ಶುದ್ಧಚಿತ್ತದಿಸಿದ್ಧಿಮಾಡಿತತ್ಪುರಕೆ ಪ್ರ | ಸಿದ್ಧನಾಗಿಮಗುಳಿದನು ||೫೦||

ಅಜನಪತಿಕಾಳಶಂಬರಗೋರ್ವಗ್ನಿ | ರಾಜನೆಂಬವನುಮಾರ್ಮಲೆತು ||
ತೇಜೋಧಿಕನಾಗಿರಲದನರಿದಾ | ರಾಜನಲ್ಲಿಗೆಪೋಗಲೆಣಿಸಿ ||೫೧||

ಅದನರಿದಾಸ್ಮರನಾತಂದೆಯೆಡೆಗೈದಿ | ಪದಕೆನಮಿಸಿಯಾಬಿಸನ ||
ಆದಿರದೆಬೇಡಿಪಡೆದುಬಹುಬಲಗೂಡಿ | ಯಧಟಿಂದಾಬಳಿಗೈದಿ ||೫೨||

ಅಹವಲಂಪಟನಾ ನಗರಿಯಮುಂದೆ | ಮೋಹರಮಾಗಿನಿಂದಿರಲು ||
ಆಹದನರಿದಗ್ನಿರಾಜನುಸೇನಾ | ವ್ಯೂಹಸಹಿತನಡೆತಂದು ||೫೩||

ಇದಿರೊಡ್ಡಿಕಾಣುತ್ಪವನಬಲವನಾ | ಮದನಕುಮಾರನಸೇನೆ ||
ಹುದುಗಿತಳ್ಳಿರಿವುತ್ತಿರಲದಕಂಡಾ | ವಿದಿತವಿಕ್ರಮಿಯಗ್ನಿರಾಜ ||೫೪||

ಬಲವನೆಲ್ಲವಪಿಂದಿಕ್ಕಿ ಮುಂದಕೆಸಡೆ | ದಲರ್ದಿಲ್ಲನಸೇನೆಯನು ||
ತಲೆಬಾಲಗೆಡಿಸುತ್ತಿರೆಕಂಡಾ ಕ | ಗ್ಗಲಿಯವನಿದಿರಾಗಲಾಗ ||೫೫||

ವಿದ್ಯಾಬಾಣಗಳಿಂದೆಸಲಾಪ್ರತಿ | ವಿದ್ಯೆಯಿಂದವನು ಖಂಡಿಸುತ ||
ಸ್ಪರ್ದ್ಯಮ್ನನೆಚ್ಚನಾತನತೇರುಬಿಲ್ಲುಮ | ಭೇದ್ಯಮಪ್ಪಾಕವಚವನು ||೫೬||

ವಿರಥನಮಾಡಿ ಬಳಿಕ್ಕಗ್ನಿರಾಜನ | ಭರದಿಪಿಡಿದು ಕಟ್ಟಿಬಳಿಕ ||
ವರವಿಜಯಾನಕಮೆಸೆಯಲಾತನನಿಜ | ಪುರಕೆಯ್ದಿಯಮಿತವಸ್ತುವನು ||೫೭||

ಕರಿತುರಗಾದಿಯುತ್ತಮಮಪ್ಪರತ್ನವ | ತರಿಸಿಯಲ್ಲಿಂಪೊರಮಟ್ಟು ||
ತ್ವರಿತದಿನಾಮೇಘಕೂಟನಗರಿಗಾ | ಸ್ಮರಕುಮಾರಕನೆಯ್ತರಲು ||೫೮||

ಇದನರಿದಾಕಾಳಶಂಬರನಿದಿರ್ವಂದು | ಪದಕೆರಗಿದಪಂಚಶರನ ||
ಪಡೆದಮರ್ದಪ್ಪಿ ಹರಸಿನಿಜಪುರಕತಿ | ಮುದದಿಂದೊಳಹೊಗಿಸಿದನು ||೫೯||

ಪೊಳಲಪೊಗುವಸಮಯದೊಳು ಸಂತಸದಿಂದ | ಬಳಸಿದಬಾಸವಟ್ಟಿಗರ ||
ಬಳಗದನಡುವೆಸೆದನುಕಂತು ಕಲ್ಪಜ | ಕುಲದನಡುವಣೆಂದ್ರನಂತೆ ||೬೦||

ಪಟ್ಟದನಿಜಮದಗಜಮಸ್ತಕವನೇರಿ | ಯಿಟ್ಟಣಿಸಿದನೃಪವರರ ||
ನಟ್ಟನಡುವೆಒರ್ವಾನನೆವಿಲ್ಲನ | ಪಟ್ಟಣವೆಯ್ದಿನೋಡಿದುದು ||೬೧||

ಎತ್ತನೋಡಿದೊಡತ್ತಲೆಡವರಿಯದೆ ಸುತ್ತು | ಮುತ್ತಿನೋಡುವ ಮಡದಿಯರ ||
ಚಿತ್ತದೊಳಗೆನಿಲಲಾಕಂತುವಂದಿಂದ | ಚಿತ್ತಜವೆಸರಹಡೆದನು ||೬೨||

ಈಪರಿವಿದಿತವಿಲಾಸವಡೆದ ಪುಷ್ಪ | ಚಾಪನನರಮನೆಹೊಗಿಸಿ ||
ಆಪರಿವೃಢಕಾಳಶಂಬರನುತ್ಸಾ | ಹೋಪೇತಮಾನಸನಾಗಿ ||೬೩||

ಉತ್ತಮಮಪ್ಪಮುಹೂರ್ತದೊಳತಿ ಮುದ । ವೆತ್ತು ಮಹಾವಿಭವದೊಳು ॥
ಚಿತ್ತಭವಗೆಯುವರಾಜಪದವನೊಸೆ । ದಿತ್ತಪೆಸೆಂದಿವದೆಣಿಸಿ ॥೬೪॥

ಪದಿನಾಲ್ಕುನದಿಯಪಜ್ಜಳಿಪುದಕಪತೀವ । ಮುದದಿಂದಮಜ್ಜನಗೊಳಿಸಿ ॥
ಸದಮಲಮಪ್ಪಸಕಲಶೃಂಗಾರವ । ನುದಿತಯಶಗೆ ಮಾಡಿಸಿದನು ॥೬೫॥

ಹಾರಮಕುಟಕುಂಡಲ ಕೇಯೂರಾದಿ । ಚಾರುವಿಭೂಷಣಮಿಟ್ಟು ॥
ಪೂರಕುಮಾರನೆಸೆದನೀಕ್ಷಿಪರಕ್ಷಿ । ಬೋರೈಸುವಮಾಳ್ಕೆಯೊಳು ॥೬೬॥

ಮರಕತವರ್ಣಮದನನೇರಿದಮುತ್ತಿ । ನುರುಸಿಹ್ಮಪೀಠಮೊಪ್ಪಿದುದು ॥
ಹರಿಸದಿಬುಧಬಿಂಬವನೆತ್ತಿ ತೆತ್ತಿದ । ವರಪಥುಮಂಡಲದಂತೆ ॥೬೭॥

ಇಂತುಸಿಹ್ಮಾಸನದುಪರಿಯೊಳೆಸೆವಾ । ಕಂತುಕುಮಾರಕುಂಜರನ ॥
ಸಂತಸದಿಂಕಾಂಚನಮಾಲೆಕಂಠಿಕೆ । ಯಂತಂದುಕೊರಲೊಳಿಕ್ಕಿದಳು ॥೬೮॥

ಮುತ್ತಿನಹಾರವಿಕ್ಕುವಸಮಯದೊಳಾ । ಚಿತ್ತಜನಾಸ್ಯವೊಪ್ಪಿದುದು ॥
ಸುತ್ತಿದಪರಿವೇಷದಮಧ್ಯದೊಳು ಕಾಂತಿ । ವೆತ್ತಕಲಾಧರನಂತೆ ॥೬೯॥

ಈತೆರವಿಂದವಿಲಾಸಮನಿತದಾಂ । ತಾತುಳಿಲಾಳಂಗಜನ ॥
ರೀತಿಯನೋಡಿಪಿಟ್ಟಳು ತಾನವಗೆನಿಜ । ಮಾತೆಯೆಂದೆಂಬ ಭಾವವಸು ॥೭೦॥

ಅವನಮುಖಾಂಬುಜಮವನಕ್ಷಿಕುವಲಯ । ವವನಬಾಯ್ದೆರೆ ಬಂದುಗೆಯೊಳು ॥
ಅವಳಲೋಚನಮೆಂಬ ಜವಳಿದುಂಬಿಗಳತಿ । ಲವಲವಿಕೆಯೊಳೆರಗಿದುವು ॥೭೧॥

ಅವನಲಲಿತಲಾವಣ್ಯಾಂಬುವಿನೊಳ । ಗವನಾಸ್ಯಚಂದ್ರಬಿಂಬದೊಳು ॥
ಅವಳಲೋಚನವಂಬರದಚಕೋರಿಯ । ಹವಣಿನೊಳೆರಗಿದುವಾಗ ॥೭೨॥

ಬಿಂಬಾಧರೆಬಿಸರುಹಮುಖಿಯಾಮೊಗ । ದುಂಬಿದತುರುಗೆವೆಗಣ್ಣ ॥
ಬೊಂಬೆಗಳಂಗಜನಂಗದೊಳಗೆ ಹಣೆ । ಗೊಂಬಂದದಿನೋಡಿದಳು ॥೭೩॥

ಹೊಲ್ಲದದೃಷ್ಟಿಯೊಳಗೆ ತನುಜನನೋಡ । ಸಲ್ಲದೆಂಬಾ ಭಾವವಸು ॥
ಅಲ್ಲವಮಾಡಿಯಾತುರದಿ ನೋಡಿದಳಾ । ಫುಲ್ಲಾಕ್ಷಿಯಾ ಪುಲ್ಲಶರನ ॥೭೪॥

ನಡುಗುವ ಮೈನವಿರೇಳುಗೆವೈವರ್ಣ । ವಡರಿದವೊಗವೇಳ್ವಬೆಮರು ॥
ಕಡುಬೆರಗಾದ ಭಾವದಿನಾಬಂಧಕಿ । ನಡೆನೋಡಿದಳಂಗಜನ ॥೭೫॥

ಇಂತುನೋಡಿ ಮೊರೆಧರ್ಮವೆಂದೆಂಬುದ । ನೆಂತಾನುಭಾವಿಸದವಳು ॥
ಸಂತಸವಡಿಸಲಾರದೆಚಿತ್ತವನಾ । ಕಾಂತೆಶಯ್ಯಾಗೃಹಕೆಯ್ದಿ ॥೭೬॥

ಮಗನೆಂಬಭಾವವಬಿಟ್ಟು ತಾನವಸೊಳು | ಮಿಗಿಲಾಗಿ ಕೂಡುವಿಚ್ಛೆಯನು ||
ಬಗೆದಾಬಂಧಕಿತನ್ನ ಮೆಲ್ಲೆದೆಯನು | ಮುಗುಳ್ನಂಬಿಗೆ ಮಾರುಗೊಟ್ಟು ||೭೭||

ಇದರಿಂನಾರಕಗತಿಯೆಂಬುದರಿಯದೆ | ಇದರಿಂ ಪಿರಿದಪಕೀರ್ತಿ ||
ಒದಗುವುದೆಂಬುದನರಿಯದೆ ಮೊರೆಗೆಡು | ವುದನೆಬಗೆದು ಭಾವಮೊಳು ||೭೮||

ಎಲ್ಲಿಯಸುರಲೋಕವೆಲ್ಲಿಯಮುಕ್ತಿ ಮ | ತ್ತೆಲ್ಲಿಯಸಚ್ಚಾರಿತ್ರ ||
ಎಲ್ಲಿಯಮೊರೆಧರ್ಮ ತಾನೆಣಿಸಿದಸೌಖ್ಯ | ವಲ್ಲದೆಂದೆಣಿಸಿಮತ್ತವಳು ||೭೯||

ಸವತಿಯರರಿದರೆಸಿನವಾಗದು ಮೇ | ಲವನಿಪನಿನಿಸುಕೇಳಿದೊಡೆ ||
ಹವಣಿಗೆ ಸಲ್ಲದೆಂದೆಣಿಕೆಯನೆಣಿಸದೆ | ಯುವತಿಕಾತುರಚಿತ್ತೆಯಾಗಿ ||೮೦||

ಮನ್ನಣೆಗೆಟ್ಟು ಮಾನಾಪಹರಣಮಾಗಿ | ಯುನ್ನತಮಪ್ಪೆನ್ನ ಬದುಕು ||
ತನ್ನ ತಾನೇಹೋಹುದಿಂತಿದನರಿದೊಡೆಂ | ದೆನ್ನ ದೆಕೆಟ್ಟೆಣಿಸಿದಳು ||೮೧||

ಲಜ್ಜೆದೊರೆದು ಲೆಕ್ಕವಮಾಡದತಿದೂರು | ದುರ್ಜನವಹುದೆಂಬುದಕೆ ||
ಬಿಜ್ಜರವನುಮಾಡದೆ ತನ್ನ ತನುವನು | ಸಜ್ಜುಕಸರಗೊಪ್ಪಿಸಿದಳು ||೮೨||

ಮಾಸಂಕದಮಡದಿಯರು ಮನೆಯೊಳುಂ | ಟೋಸರಿಸದೆ ಗುಜ್ಜುಗುರುಕು ||
ಆಸುದತಿಯರಿಂದಹುದೆಂಬುದನುವು | ದಾಸೀನವಮಾಡುತವಳು ||೮೩||

ತನುಜನೊಡನೆಕೂಡುವೆನೆಂಬಾದುಷ್ಟೆ | ಮನದೆಗೊಂಡತಿರಹದೊಳು ||
ಘನಮಾಗಿಬೆಂದು ಬಳಿಕತಾಪಜ್ವರ | ತನುವಿಡಿಯಲು ಬಂದೊರಗಿ ||೮೪||

ಭಾವಕಿಬಲುಮೊಲೆಗಳ ಸಂಗಳಮೇಲೆ | ಬಾವನ್ನ ವಿಡೆಭರದೊಳಗೆ ||
ಆವಿರಹಾವಸ್ಥೆಯ ಜೀವಸದಬೀಗೆ | ಯಾವುಗೆಗಿಚ್ಛಾದುದೊಳಗೆ ||೮೫||

ಕಡುನೀರೆಯಕರಜರಣಪಲ್ಲವವನು | ನಡುವೆಂಬನವವಲ್ಲರಿಯನು ||
ಬಡಬಾಸೆಯೆಂಬತಮಾಲಲತಿಕೆಯನು | ಅಡಸಿತುವಿರಹಾನಲನು ||೮೬||

ಹಿಡಿದುಸುಟ್ಟಿತು ವಿರಹಾಗ್ನಿಕಂಜಾಕ್ಷಿಯ | ತೊಡೆಯಕಂಬದ ತೋಳತೊಲೆಯ ||
ನಡುವೆನ್ನೆಂಬಮುಚ್ಚಳ ಹೊಸಹಲಗೆಯ | ಒಡಲೆಂಬೊಲುಮೆಯಮನೆಯ ||೮೭||

ಸ್ಮರರಾಹುವಡಸಿದುದಾಮೃಗನೇತ್ರೆಯ | ವರವಟಫಲನಿಭಾಧರೆಯ ||
ಸುರುಚಿರಪೀಯೂಷೋಪಮವಾಣಿಯ | ಪರಿಪೂರ್ಣಚಂದ್ರಾನನೆಯ ||೮೮||

ಹೆಳವಮಾವಿನಹಣ್ಣ ಬಯಸಿಬರಿದೆಹೋದ | ಕುಳಿಗೊಂಬಂತಾಕುಲಟೆ ||
ಸುಲಲಿತಸತ್ಯಗುಣಾಭರಣಗೆ ಮನ | ದೆಳಸಿಹೊರಳುತಿರಲತ್ತ ||೮೯||

ದಿವಿಜೇಂದ್ರವಿಭವದಿನಾಖೇಚರಭೂ | ಧವನತಿಮುಮತೆಯೊಳಿತ್ತ ||
ಯುವರಾಜಪದವಿಯೊಳಗೆ ನೆರೆನಿಂದಾ | ಭುವನಭುಂಭುಕನಂಗಜನು ||೧೦||

ಬಳಿಕಗ್ನಿರಾಜನ ಬಂಧನವನುಬಿಟ್ಟು | ಕಳುಹಿತನ್ನಾತಂದೆಗಿರದೆ ||
ಅಳುಕದರಸುಗಳತಂದಾತನಪದ | ತಳಕೆಮುಗ್ಗಿಸಿ ಸುಖಮಿರಲು ||೧೧||

ಆತನಕೀರ್ತಿಯಾತನತೇಜವಾತನ | ನೀತಿಯಾತನಲಾವಣ್ಯ ||
ಆತನಚೆಲ್ವಾತನಚಾತುರ್ಯದ | ರೀತಿಯನೋಡಿ ಪೈರಿಸದೆ ||೧೨||

ಮುಳಿಸಿಂದಾಕಾಳಶಂಬರನುಳಿದ ಮ | ಕ್ಕಳುವಜ್ರದಾಡಾದಿಗಳು ||
ಮಲಮಾನಸರೈವರು ಬಂದಾಸ್ಮರ | ನೊಳುಕಪಟಸ್ನೇಹದೊಳು ||೧೩||

ಇಂತಪ್ಪಮರುಕದಗ್ಗಜರುಂಟೇಯೆಂ | ಬಂತೊಡಗೂಡಿಮತ್ತವನ ||
ಎಂತಾನುಪರಿಯೊಳು ಕೊಲ್ವವೇಳೆಯತಾ | ವಂತರಿಸದೆ ನೋಡುತಿರಲು ||೧೪||

ಇತ್ತಮನ್ಮಥಸಕೂಟವಹಾರಿಯಾಪಾತ | ಕಿತ್ತಿತನ್ನಂಗವನಿರದೆ ||
ಹತ್ತಿದಪಸ್ಥಾಂತರದೊಳು ನಿಗೆಹೊರ | ಳುತ್ತಿರ್ದಳತಿಗೂಢಮಾಗಿ ||೧೫||

ಇದುಜಿನಪದಸರಸಿಜ ಪದಮಧುಕರ | ಚದುರಮಂಗರಸನಚಿಸಿದ ||
ಮದನಾರಿನೇಮಿಜಿನೇಶಸದ್ಗತಿಯೊಳ | ಗಿದು ಪದಿನೆಂಟಾಶ್ವಾಸ ||೧೬||

ಹದಿನೆಂಟನೆಯ ಸಂಧಿ ಸಂಪೂರ್ಣಂ

೧೯. ಕಾಂಚನಮಾಲೆಯ ವಿರಹವರ್ಣನಾ ಸಂಧಿ

ಅಂಗಜವಿಜಯಮುಕ್ತ್ಯಂಗನೆಯಧಿಪಭು | ಜಂಗೇಶವಂದಿತಚರಣ ||
ಮಂಗಳಮೂರ್ತಿನೇಮಿಶನಪದಯುಗ | ಲಂಗಳಿಗೊಲಿದಿರಗುವೆನು ||೧||

ವಿರಹವೇದನೆಯಿಂದಾದಾಜ್ವರವನು | ಪಿರಿದಪ್ಪರೋಗದಿನಾದ ||
ಜ್ವರವೆಂಬಮಾತನು ಜನಜನಿತವಮಾಡು | ತ್ತಿರಲಾ ಕಾಂಚನಮಾಲೆ ||೨||

ನನೆಯಸರಳನೀರನಾವಾರ್ತೆಯನೋರ್ವ | ವನಿತೆಯಮುಖದಿಂದಕೇಳಿ ||
ಮನದೊಳುಪರುಕವತಾಳಿ ವಿಚಾರಿಪೆ | ನೆನುತವಳಿಡೆಗೆಯ್ದುತವೆ ||೩||

ಎಲೆತಾಯೆನಿನಗೇಕೀದಾಹಜ್ವರ | ತಲೆದೋರಿತಿದನುಸುರೆಂದು ||
ಮಲುಮಲುಮರುಗಿಮನೋಭವಬಿಸಗೊಳೆ | ಕುಲಟೆಯಿಂತೆಂದಾಡಿದಳು ||೪||

ಪಥ್ಯವಲ್ಲದಭೋಜನದಿಂದೆನಗೆ ವಾ | ಣತ್ಯಾಗಮಪ್ಪಂದದೊಳು ||
ಅತ್ಯಂತದಾಹಜ್ವರಮಾಯಿತೆಸುತಮ | ಸತ್ಯವಚನಮನಾಡುತವೆ ||೫||

ಇತ್ತಬಂದೆನ್ನ ಮೈಯನುಮುಟ್ಟಿನೋಡೆನ | ಲೊತ್ತಿಗೆ ಬಂದುನಿಂದಿರಲು ||
ಉತ್ತಮಚಿತ್ತಚಿತ್ತಜನಹಸ್ತವತಾ | ನೊತ್ತಿ ಪಿಡಿದುಕೈಯಿಂದ ||೬||

ತರಳನಯನೆ ತನ್ನ ಘನಕುಚಮಧ್ಯದೊ | ಳಿರಿಸಿಯವನಹಸ್ತವನು ||
ಒರೆದಳಿಂತೆಂದು ಮದನಕೇಳುನಿನ್ನಿಂದ | ದೊರಕಿತುಪರಿತಾಪವೆನಗೆ ||೭||

ನಿನ್ನ ಸುರತದಿಂದಲ್ಲದೆ ಬದುಕೆನು | ಇನ್ನು ಸಂಶಯಮಾಡಬೇಡ ||
ಚೆನ್ನಿಗಕೇಳೆಂಬಾ ನುಡಿಯನುಕೇಳಿ | ಯುನ್ನತಗುಣಭೂಷಣನು ||೮||

ಗರಳಮನುಗುಳ್ವುರಗನಘಟದೊಳುಕೈಯ | ನಿರಿಸಿಬೆದರಿತೆಗೆವಂತೆ ||
ದುರುಳೆಯಕುಚಕುಂಭಯುಗಮಧ್ಯದಿಂದಾ | ಸುರುಚಿರಗುಣಿಕೈಯತೆಗೆದು ||೯||

ಮುಂಗಾರಮೊಳಗುಗೇಳಿದ ರಾಜಹಂಸನ | ಭಂಗಿಯಪೊಲುಬೆದರಿದನು ||
ಸಿಂಗವಸುಳೆನಡುವಿನಜಾರೆಯನುಡಿ | ಗಂಗಜರಾಜಕುಂಜರನು ||೧೦||

ಈಯಂದದಿಬೆಜ್ಜರಗೊಂಡು ನುಡಿದನಿಂ | ತಾಯಿನಿವಿಲ್ಲಬಲ್ಲಹೆನು ||
ತಾಯಿಕೇಳು ತನುಜನಕೂಡಿಂತೆ | ನ್ಯಾಯದ ನುಡಿಯೆನುಡಿವರೆ ||೧೧||

ತಾಯಿಗೆತಪ್ಪಿಮೋಹಿಸಿದೊಡೆ ಲೋಕಕ | ನ್ಯಾಯವಲ್ಲವೆ ಕಂಡಪರು ||
ಚೀಯೆನ್ನರೆಯದಕೊಡಬಟ್ಟವರಭೂಮಿ | ಬಾಯಿದೆರೆದುಸುಂಗದಿಹುದೆ ||೧೨||

ಕೊರತೆಗಂಜದೆಕೊಕ್ಕರಿಸದೆ ಪಾಪಕ್ಕೆ | ಮೊರೆಗೆಟ್ಟು ನಡೆವೆನೆಂಬರನು ||
ಮರೆದುತೆರೆದುಮಾತನಾಡುವವರಬಾಯಿ | ದೆರೆಯೊಳು ಹುಳುಹುಟ್ಟದಿಹುದೆ ||

ಕೊಂಡೆತ್ತಿಯಾಡಿದತನುವತಳ್ಕೈಸಿ ತಾ | ನುಂಡಮೊಲೆಯನೊತ್ತಿಪಿಡಿದು ||
ಪೆಂಡಿರಂದದಿತಾಯಭಾವಿಸಿದೊಡೆ ಭೂ | ಮಂಡಲಹೊರಹಾಕದಿಹುದೆ ||೧೪||

ಒಂದುದೋಷವನುಕಂಡೊಡೆ ನಿಜಸತಿಯಾಮೊ | ದಿಂದುಮೊದಲುನೀನೆನಗೆ ||
ನೊಂದುಹಡೆದತಾಯಸಮವೆಂದು ನುಡಿದುದ | ರಿಂದನಾಡುಗರೊಲ್ಲರವಳ ||೧೫||

ಆರೊಬ್ಬರುಪೆಣ್ಣತಹೆನೆಂದುನೋಡಿ ವಿ | ಚಾರಿಸುವೆಡೆಯೊಳುತಮಗೆ ||
ದೂರದನಂಟಿಂದುಮೊರೆಧರ್ಮವಲ್ಲೆನೆ | ತಾರರವಳನದರಿಂದ ||೧೬||

ಪ್ರತ್ಯಕ್ಷ ಪೆತ್ತತಾಯಿಗೆ ಮೋಹಿಸಿದೊಡೆ | ಸತ್ಯಹೊರತುಸಾವಡಿಸಿ ||
ಅತ್ಯಂತದುಃಖಮನಸುದಿನಮಿರದುಂಬ | ನಿತ್ಯನಿಗೋದಕೆಯ್ದುವರು ||೧೭||

ಅನಿತರಿಂದೆಲೆತಾಯೆ ನಿನ್ನ ಸೋಂಕುವುದೆನ | ಗನುಚಿತವೆನೆಕೇಳುಮದನ ||
ಜನನಿನಾನಿನಗಲ್ಲನಿನ್ನ ನಗುರ್ವಿಪ | ವನದತಸ್ಕರಶಿಲೆಯಲ್ಲಿ ||೧೮||

ಕಂಡಾಕಾಳಶಂಬರಸತಿಕರುಣದಿ | ಕೊಂಡುಬಂದೆನಗೀಯಲಾನು ||
ಗಂಡುಗಳರಸನಿನ್ನ ನುಮತುಕದಿ ಮನ | ಗೊಂಡುಸಾಕಿದೆನದರಿಂದ ||೧೯||

ನೀನೆನ್ನ ಮಗನಲ್ಲವೆಂಬ ಪ್ರತ್ಯಕ್ಷವ | ನಾನುಕೋರುವೆನೆಂತೆನಲು ||
ಈನೃಪಕಾಳಶಂಬರಖಚರನ ಸಂ | ತಾನದೊಳಗೆಪುಟ್ಟಿದವರ್ಗೆ ||೨೦||

ಸುಲಲಿತವಹಪ್ರಜ್ಞಪ್ತಿವೆಸರವಿದ್ಯೆ | ಫಲಿಯಿಸೆದದರಿಂದತಮ್ಮ ||
ಒಲವಿನಸತಿಯರವಶಮಾಡಿಯಿರಿಸುವ | ರಲರ್ವಿಲ್ಲಬಲ್ಲಹಕೇಳು ||೨೧||

ಎನ್ನ ಕೈವಶವಾಗಿದೆ ನಿನಗೀವೆನೀ | ನನ್ನಿಗನಾದೊಡಾವಿದ್ಯೆ ||
ನಿನ್ನ ಸೇರುವುದು ನೀನೆನ್ನ ನಂದನನಾಗೆ | ನಿನ್ನ ಸೇರದುನಿಶ್ಚಯದಿ ||೨೨||

ನೀನೆನ್ನ ಮಗನಹುದಲ್ಲವೆಂಬುದಕಿದು | ತಾನೆ ಪ್ರತ್ಯಕ್ಷವೆಂದೆನಲು ||
ತಾನಾವಿದ್ಯಾರ್ಥಿಯಾದುದರಿಂದಾ | ಮಾನನಿಯತಿವೇಗದೊಳು ||೨೩||

ಭೂನುತಮಪ್ಪಾವಿದ್ಯೆಯನೆಲೆತಾಯೆ | ನೀನೆನಗೀವುದೆಂದೆನಲು ||
ಆಸುಡಿಗಾತನೊಡಂಬಟ್ಟನೆಂದಾ | ಮಾನನಿಯತಿವೇಗದೊಳು ||೨೪||

ಆನಂದವಡೆದಾವಿದ್ಯಾಮಂತ್ರವ | ತಾನುಪದೇಶವಮಾಡಿ ||
ಈಸಗದುಪರಿಮದಿಂದ್ರದಿಕ್ಕಿನೊಳತಿ | ಮಾನಿತಮಯವನು ಪಡೆದ ||೨೫||

ಸಿದ್ಧಕೂಟಕೆವೋಗಿ ಮತ್ತೀವಿದ್ಯೆಯ | ಸಾಧ್ಯವಮಾಡುವುದೆನಲು ||
ಉದ್ಧತಸತ್ವನಲ್ಲಿಗೆವೋಗಿ ಮಂತ್ರವ | ಸಿದ್ಧಮಾಡುತ್ತಿರಲತ್ತ ||೨೬||

ಉಣಲುಡುವುದನು ಮರೆದುಮೈಗುಂದಿ ಪೂ | ಗಣೆಯನೆಂದಿಗೆಬರ್ಪನೆಂದು ||
ಎಣಿಕೆಮನದೊಳುಜೀವನವಾದ ಜಲಜೇ | ಕ್ಷಣೆಯಿಡೆಗೋರ್ವಭಿಜಾತೆ ||೨೭||

ಆವಳಂಗವನಾವರಿಸಿದತಾಪದ | ವಿವರವನರಿವೆನೆಂದೆನುತ ||
ಸವಿನಯದಿಂದೆಯ್ದಲಿತ್ತಬಾರೆಂದಾ | ಯುವತಿ ಕರೆದುಕುಳ್ಳಿರಿಸಲು ||೨೮||

ಬೇರುವೆರಸಿಬಿಸಿಲೊಳು ಕೀಳ್ತಲತೆಯಂತೆ | ನಾರಿನಿನ್ನಂಗವಿದೇನು ||
ಕಾರಣದಿಂಕಂದಿಕುಂದಿತೆಂದೆಂಬವಿ | ಚಾರವರಿಯಬಾರದೆನಗೆ ||೨೯||

ಮುಗುದೆನಿನ್ನಯಮಿನುಗುವ ಮುದ್ದುಮೊಗಮಾ | ಸೊಗಸಿನೊಳಿರದೆಸಂಜನಿಸಿ ||
ಪೊಗರಡಗಿದಚಂದ್ರಬಿಂಬದಂತೊಪ್ಪುವ | ಬಗೆಯರಿಯಲು ಬಾರದೆನಗೆ ||೩೦||

ಎನಲಿಂತೆಂದಳವಳು ದಾಹಜ್ವರ | ಜನಿಸಿದಕಾರಣದಿಂದ ||
ಮನದನ್ನೆಕೇಳೆನ್ನೀನಿಜತನು | ವನುಗೆಟ್ಟಿತೆನೆಸುನಗುತ ||೩೧||

ಈಡಾಹಜ್ವರವನು ನಿಮಿಷದೊಳೀ | ಡಾಡುವೆ ನೋಡುನೋಡೆಂದು ||
ತೀಡಿದಳವಳುಮೈಯೊಳುಪೊಸಪನಿನೀರು | ಗೂಡಿದನವಚಂದನವ ||೩೨||

ಅದು ಸುಣ್ಣಕಲ್ಲಪುತ್ತಳಿಯೊಳು ಸೂಸಿದ | ಸದಮಲಜಲಧಾರೆಯಾದ ||
ಹದಗಂಡವಳೆಂದಳಿದುಡಾಹಜ್ವರ | ಮುದಯಮಲ್ಲೆಲೆಲಲಿತಾಂಗಿ ||೩೩||

ಡಾಹಜ್ವರಮಲ್ಲೆಲೆತಂಗಿ ನಿನ್ನೀ | ದೇಹಸೂಜನೆಯೊಂದಿರವು ||
ಮೋಹರಿಸಿದವಿರಹಜ್ವರಮಾಗಿದೆ | ಊಹಿಸಿನೋಡಿದೊಡೆನಗೆ ||೩೪||

ಮುಚ್ಚುಮರೆಯಿದೇಕೆನಗೀವಿರಹದ | ಕಿಚ್ಚನಿರೀಕ್ಷಿಸಿನೋಡೆ ||
ಅಚ್ಚೊತ್ತಿದಂತಿದೆ ನಿನ್ನಮೈಯೊಳು ಪಡಿ | ಪುಚ್ಚವೇಕಿದಸುಸುರಬಲೆ ||೩೫||

ತಂದೆಯಿಂದ ತಾಯಿಂದ ಮೋಹದ ಗಂಡ | ನಿಂದ ಬಿನ್ನೊಡಹುಟ್ಟಿನಿಂದ ||
ಸಂದನೇಹದ ಸಖಿಯರೆವೆಗ್ಗಳವದ | ರಿಂದ ಕಮಲದಳನಯನೆ ||೩೬||

ಕಾಣಿಸೆನಗೆಕರೆಮರೆ ಬೇಡಬೇಡವೆ | ನ್ನಾಣೆ ನಿನ್ನಿರವನೆಂದೆಂಬ ||
ಪ್ರಾಣಸಖಿಯಕೈಯಿಂದ ಜೆನ್ನಾಗಿ ಪ್ರ | ಮಾಣಮಾಡಿಸಿಕೊಂಡುಬಳಿಕ ||೩೭||

ಮದನಕುಮಾರನಮಧುರಾಕಾರವ | ನೊದವಿನೋಡಿದಕಾರಣದಿ ||
ಚದುರೆಕೇಳು ನನ್ನೀಮೈಯೊಳಗಿರ | ದೊದವಿತು ಕಡುವಿರಹಾಗ್ನಿ ||೩೮||

ಎನೆಕೈಯಚಿಟುಕನೊತ್ತುತ ಕೆಟ್ಟೆನೆವ್ವೆನೆಂ | ದೆನುತ ನುಡಿದಳಾಕೆಳದಿ ||
ಮನುಜೇಶನ ಮಡದಿಯರೊಳು ನೀನೆಸ | ಜ್ಜನಸಲುಗೆಯರಾಣಿವಾಸ ||೩೯||

ಕುಲಜಾತಿರೂಪಯೌವನಸರ್ವವಿದ್ಯಾ | ಕಲೆಯೊಳು ನಿನಗೆವೆಗ್ಗಳದ ||
ಲಲನೆಯರೀಮನೆಯೊಳು ನಿನ್ನ ಗಂಡಗೆ | ಪಲಬರುಂಟವರಿರ್ದಂತೆ ||೪೦||

ನಿನಗೆಲ್ಲರರಿಕೆಯೊಳೆರವಿಲ್ಲದೆ ತನ್ನ | ತನುಮನವನುಮಾಡುಗೊಟ್ಟು ||
ಘನತರವಹವೆಜನುಮಾನಪಟ್ಟವನಾ | ಜನಪತಿಕೊಡಲದರಿಂದ ||೪೧||

ಗಂಡನಲೇಸಾವಳಮೈಯೊಳು ನೆಲೆ | ಗೊಂಡಿಹುದವಳನಾಮನೆಯ ||
ಹೆಂಡಿರೆಲ್ಲರುಕಂಡೊಡೆ ಕಣ್ಣೊಳುಹೊತ್ತು | ಕೊಂಡಿಹರತಿಕಕ್ಕಸದೊಳು ||೪೨||

ತವಗೆ ಮುನ್ನಿನಪಾಪದಿಂಗಂಡನಿಂದಾಯಿ | ತವಮನ್ನಣೆಯೆಂಬುದನು ||
ವಿವರಿಸದೆಮ್ಮನ್ನೆಲ್ಲರ ಬಾಳುಗೆಡಿಸುವ | ಳಿವಳೆಂಬರಾನವತಿಯರು ||೪೩||

ಆವಳುಮಾಡಿದ ಪುಣ್ಯಾದಫಲದಿಂದೋಪ | ನವಳಕೈವಶವಾಗಲದಕೆ ||
ಆವಳಾತಗೊಲುಮೆಮದ್ದನು ತಿನಿಸಿದಳೆಂದು | ತಮತಮಗೆಲ್ಲರಾಡುವರು ||೪೪||

ಎಂದಿಗಿವಳು ದೋಷಿಯಹಳೊ ಇವಳಿಗಾಜ್ಞೆ | ಯೆಂದೊದಗುವುದೊ ಮುತ್ತೈಮಗೆ ||
ಚಂದದಬದುಕೆಂದಿಗಹುದೊಯೆನುತ ಚಿಂತೆ | ಯಿಂದಿರ್ಪರಾಮನೆಯವರು ||೪೫||

ಅನಿತರಿಂದಾನಲ್ಲೆ ಮಾತೆಗೊಂದಾನೊಂ | ದಿನಿಸೊದವಿದದೋಷವನು ||
ಜನಜನಿತವಮಾಡಿಕೆತ್ತಿಕೆರಟೆಗೊಂಡು | ಕೊನೆಯುವಿಹರೆಸವತಿಯರು ||೪೬||

ಎನಲೆಂದಳೆಲೆಸಖಿ ನಾನುಮಾಡುವ ಜಾರ | ತನವನೀಯರಮನೆಯವರು ||
ಇನಿಸರಿದೊಡೆನನಗೇತರದೀಜಾಣ್ಮೆ | ಯೆನಳವಳಿಂತೆಂದಳಾಗ ||೪೭||

ಅರಿಯಬಾರದು ನಮ್ಮಕಳವನೆಂದೇ ಮೈ| ಮರೆದುಮಾಡುವ ಜಾರತನದ ||
ತೆರನನವಳಮೈಯೊಳೊಗೆದಚೇಷ್ಟೆಯೆಕಣ್ಣಾ | ದೆರಪುಮಾಡದೆ ಸುಮ್ಮನಿಹುದೆ ||
ಮನೆಯವರಾರರಿಯರು ನಮ್ಮಾಜಾರ | ತನವನೆಂದೆಸಗಿದಕಳವು ||
ಅನುಮಾನಿಗಳು ನಮ್ಮಾಜಾತಿಯಿಂಜನ | ಜನಿತವಾಗದೆ ಸುಮ್ಮನಿಹುದೆ ||೪೯||

ಶಶಿಯರನಿಯಮಾಡಿರವಿಯ ಶಶಿಯಮಾಡಿ | ಮಿಸುನಿಯಕರ್ಬೊನ್ನಮಾಡಿ ||
ಪಿಸುಣರುಹ್ಯೋರಿಸುವರು ನಿನ್ನ ವಿರಹವ | ನಸಿಯಳಿಕಾಣಿಸಬೇಡ ||೫೦||

ಅಂತದರಿಂ ನಿನ್ನೀಕಾರ್ಯಮನಿ | ನ್ನಂತರಂಗದೊಳಿರಿಸ್ಪುವುದು ||
ಎಂತಾಸುಮತವಲ್ಲೆಂಬಕೆಳದಿಯೊಳ | ಗಿಂತೆಂದಾಡಿದಳವಳು ||೫೧||

ನೀನೆಸಗೆಂದುದತ್ಯುತ್ತಮವೆಲೆಸಖಿ | ಯೇನಾದೊಡೇನೊಮನ್ಮಥನ ||
ಮಾನಿತಮಪ್ಪಂಗವೆಸರೆವನೆಯಾಯಿ | ತೀನೇತ್ರಪುತ್ರಿಕೆಗಳಿಗೆ ||೫೨||

ಪೊಡವಿಗತ್ಯಾಶ್ಚರ್ಯವೆಂದೆನಿವಾತನ | ಕಡುಸೊಗಯಿಪರೂಪವನು ||
ನೋಡೆನೋಡಿಬಿಡುವುದರಿಂದೀಯಸುವನು | ಬಿಡುವುದುಲೇಸಬಲೆಯರ್ಗೆ ||೫೩||

ಸ್ಮರನಿವಗೆಣೆಯೆಂಬಾಕಿವಿಪೇಟಕೆ | ಪರಿತಾಪಗೊಂಬಬಲೆಯರು ||
ಸ್ಮರನರೂಪನು ಪ್ರತ್ಯಕ್ಷನಿರೀಕ್ಷಿಸಿ | ಪರಿಹರಿಸಲುಜೀವಿಪರೆ ||೫೪||

ಎನಲೆಂದಳವಳು ಕಾಂಚನಮಾಲೆಗೆ ನೀ | ನಿನಿತುಬಯಸಿಜಾಯಾರೆ ||
ಮನಸಿಜನವ ಮೊರೆಗೆಟ್ಟಚರಿತ್ರವ | ಕನಸಿನೊಳೆಣಿಸುವುದಿಲ್ಲ ||೫೫||

ಮಾತುಹೊದ್ದಿದ ಪರಸತಿಯನಿವಳು ಹೆತ್ತ | ಮಾತೆಯೆಂದುಶಪಥವನು ||
ನೀತಿವಿದರು ಮಾಡಿಯೊಡಬಡಿಸುವರು ಮ | ಹೀತಳವನುಮದಿರಾಕ್ಷಿ ||೫೬||

ಅನಿತರಿಂದ ಪ್ರತ್ಯಕ್ಷತನಗೆ ಹೆತ್ತ | ಜನನಿನೀನಾದಕಾರಣದಿ ||
ಮನವನಿನ್ನೊಳಗಿಕ್ಕುವನಲ್ಲ ಮನಸಿಜ | ನೆನೆ ಬಳಿಕಿಂತೆಂದಳವಳು ||೫೭||

ಹರಿಹರವಿಧಿ ಮೊದಲಾದರನೆಲ್ಲನ | ನಿರದೆಚ್ಚು ನೆರೆಮೊರೆಗೆಡಿಪ ||
ಅರಲುಬನುತನ್ನ ತಾಮೊರೆಗೆಡನೆಂಬ | ಪರಿಯನದಾರುಮೆಚ್ಚುವರು ||೫೮||

ಅದರಿಂದವನೆನ್ನ ರೂಪನಿರೀಕ್ಷಿಸಿ | ಯೆದೆಗೆಟ್ಟುಮೋಹಿಸದಿಹನೆ ||
ಇದಕೆಸಂಶಯಬೇಡಬೇಡವೆಂದೆಂಬಾ | ಮದವತಿಗಿಂತೆಂದಳವಳು ||೫೯||

ಪ್ರಣುತಸುತ್ತಮಪರತತ್ತ್ವವಿಚಾರ ಸ | ದ್ಗುಣಿಚರಮಾಂಗನಂಗಜನು ||
ಬಣಗೆನಿನಗೆಕೈವಶನಪ್ಪನೆಂಬಗು | ಡ್ಡಣಿಕೆಯನೆಣಿಸಿಹುಚ್ಚಹರೆ ||೬೦||

ನಾನವಲೋಕಿನಿಯೆಂಬದೇವತೆ ಯೆನ್ನ | ನಾನಸೆವಿಲ್ಲಬಲ್ಲಹನು ||
ನಾನಾತೆರದಂಕೆಜಂಕೆಯಬುದ್ಧಿಯ | ನಾನದೆತಿಳಿಯಪೇಳೆಂದು ||೬೧||

ಅನ್ಯಾಯಕಾತಿನಿನ್ನೆಡೆಗೀಸಮಯದೊ | ಳೆನ್ನನಟ್ಟಿದನದರಿಂದ ||
ನಿನ್ನ ಸಖಿಯರೂಪಕೈಕೊಂಡು ಬಂದೆನಾ | ನುನ್ನತಮಪ್ಪಬುದ್ಧಿಯನು ||೬೨||

ಆವಾವತೆರದಿ ಕಾಣಿಸಿಪೇಳ್ವೊಡೆ ನೀನು | ಭಾವಿಸಿತಿಲ್ಲದರಿಂದ ||
ಓವದೆನಿನಗೆ ಕೇಡೊದಗುವುದೆಂದಾ | ದೇವಿಪಡೆದಳವ್ಯಥೆಯ ||೬೩||

ಅನಿತರೊಳತ್ಯಲನನ್ಯಜನಾಜನ | ವಿನುತಮಪ್ಪಾವಿದ್ಯೆಯನು ||
ಮನದೆಗೊಂಡುಸಾಧಿಸಿಯಾತಿಖಿಯು | ಜಿನಭವನಕೆ ನಡೆತಂದು ||೬೪||

ಕರಕಮಲಂಗಳಮುಗಿದಾಭವನವು | ಸುರುಮುದದಿಂಮೂರುಸೂಳು ||
ತಿರುಗಿವಿನಯವಿನುತನಾಗಿಯಸಘನ | ಚರಣಾರುಣಪಂಕಜಕೆ ||೬೫||

ಜ್ಞಾನಾಂಬುಧಿಚಂದ್ರರೆಂಬ ಮುನಿಯಕಂಡು | ಸಾನುರಾಗದೊಳಡಿಗೆರಗಿ ||
ತಾನಾರಮಗನೆಂಬ ವಿವರವಕೇಳಿ ಮ | ತ್ತಾನಗರಿಗೆ ನಡೆತರಲು ||೬೬||

ಅಂತದಸರಿದು ಕಾಂಚನಮಾಲೆಮತಿಗೆಟ್ಟು | ಕಂತುವನೊಲಿಸುವೆನೆಂಬ ||
ಭ್ರಾಂತಿಯಿಂ ಸರ್ವಾಭರಣಭೂಷಿತೆಯಾಗಿ | ಸಂತೋಷದಚಿತ್ತದಿಂದ ||೬೭||

ಸುಲಲಿತಗುಣನಿಸುಮನೋಮಾರ್ಗಣನಿರ್ದ | ನಿಲಯಕಿರದೆನಡೆತಂದು ||
ತಳುವದೆ ನೀಬೇಡಿದಿಚ್ಛೆಯನಿತ್ತಿಸು | ಉಳುಹುನೀನೆನ್ನ ಜೀವನವು ||೬೮||

ಮನಸಿಜನಿನ್ನಮಾರ್ಗಣಿಗಳುಬಂದೆನ್ನ | ತನುವತಟ್ಟುರ್ಚಿವೇದನೆಯ ||
ಘನಮಾಡುತಲಿವೆಯುಳಿಯದಂತದರಿಂ | ಮನದೆಗೊಂಡೆನ್ನೊಳುಕೂಡು ||೬೯||

ಎಂದುನುಡಿದಕುಲಟೆಯನುಡಿಯನುಕೇಳಿ | ತಂದುಕಿವಿಗೆ ಕರಯುಗವ ||
ಮುಂದೇತರಸತ್ಯಗುಣಭೂಷಣನಿಂ | ತೆಂದನುತ್ತಮಮಪ್ಪನುಡಿಯ ||೭೦||

ಪರಸತಿಯಗರ್ಹಟಿಸಿದ ಮನುಷ್ಯರ್ಗೆ | ಸಿರಿಹಾರಿಯಾಯುಷ್ಯವತತು ||
ಉಪಮತರಮಪ್ಪವಿಕ್ರಮಬೀತುಕುಂಭೀ | ನರಕವಹುದುನಿಶ್ಚಯದಿ ||೭೧||

ಪಾದರಕೆಂದುಪೆಣ್ಣಳನೊಲವಿಂನೋಡಿ | ಯಾದರದಿಂನುಡಿಸಿದೊಡೆ ||
ಭೂದೇವತೆಪೇಸುವಳು ಸತ್ಕೊಡವರನಿ | ಗೋದಮನಿರದ್ವೈದುವರು ||೭೨||

ಗಂಡರುಕಂಡೊಡಿವಿದುಕಾಲಕಟ್ಟಿ ಭೂ | ಮಂಡಲಕೆಳೆದುಹಾಕುವರು ||
ದಂಡವಕೊಂಬನೃಪತಿಯುದವಿಂಪರ | ವೆಂಡಿರಿಗೆಳಸಲುಬಹುದೆ ||೭೩||

ಬೇಡಜನನಿಯರಿದೊಡೆ ಘನಘಟಿತವ | ಮಾಡುವ ಮನದಮಚ್ಚರದ ||
ಗಾಡಿಕಾತಿಯರುಂಟದರಿಂದೀಮಾತ | ನಾಡುವೆನೆಂದೆಂಪೆಣಿಕೆ ||೭೪||

ತನುಜರಾಗಲಿ ತನ್ನೊಡಹುಟ್ಟಾಗಲಿ | ಇನಿತುದೋಷಮನವರೊಳಗೆ ||
ಕನಸುಮನಸಿನೊಳು ಕಂಡುಸೈರಿಸುವರೆ | ಜನನಿಕೇಳಭಿಮಾನಿಗಳು ||೭೫||

ಅರಸರಿದೊಡೆಯಾಜ್ಞೆಯನುರೆಮೂಡದೆ | ತರಹರಿಸುವನಲ್ಲವದರಿಂ ||
ಹರಣದಮೇಲಣ ಸರಸವೆಂದೆಂಬಾ | ಅರಲಂಬಗಿರತೆಂದಳವಳು ||೭೬||

ಒಂದುಸಮಯದೊಲ್ಮೆಗರೊಳು ಸಮಸುಖ | ದಿಂದಕೂಡಿದಕೂಟದಿನಿತು ||
ಮುಂದಣಭವದಸಗ್ಗದಸಾಸಿರಸುಖ | ದಂದವಲ್ಲವೆಮೋಹಿಗಳಿಗೆ ||೭೭||

ಕಡುಮೋಹಿವೆಣ್ಗಳೆದೆಯಮೇಲಳಿದಾ | ಉಡುಪತಿಮಂಡಲದೊಡಲ ||
ಒಡೆದುಮೋಹನಮುಕ್ಕಿವಡೆವರೊಲ್ಮೆಗರೆಂಬ | ನುಡಿವಾಗಮವಕೇಳ್ದರಿಯ ||೭೮||

ಆವಭಾವದೊಳಳಿದವರ್ಗಾಗತಿಯಹು | ದೋಷದೆಂದುಸುರ್ವುದಾಗಮವು ||
ಈವಿಧದಿಂದಳಿದವರಾಮೋಹನ | ಕೈವಲ್ಯವನೆಯ್ದುವರು ||೭೯||

ಅತಿರೂಪಧಿಕಲಾವಣ್ಯಯೌವನರಸಿ | ಕತೆವೆತ್ತೊಲುಮೆಗಾತಿಯರು ||
ಮತಿಯಿತ್ತುಮೇಲಿಕ್ಕುವುದದುತಾನೆಯು | ನ್ನತಮೋಹಮುಕ್ಕಿಜೀವರಿಗೆ ||೮೦||

ದೇಹಪಡಿದು ದೇಹವಳಿದಿಹಪರಮುಕ್ಕಿ | ಯೂಹಿಸೆಮೋಹಿಗಪ್ಪಂತೆ ||
ದೇಹವಳಿದು ಪರಮುಕ್ತಿವಡೆವ ಮುಕ್ತಿ | ಮೋಹಿಗಿಹದ ಸುಖವುಂಟೆ ||೮೧||

ಅಂತದರಿಂಮೋಹಿಗಳಿಮ್ಮೃಸರಿ | ವಂತರವರಮಾರ್ಗವನು ||
ಭ್ರಾಂತಿಂಬಿಟ್ಟೊಡವರಿಗಿಹಪರಗತಿ | ಯಿಂತಾನುಬಿಟ್ಟುಪಾರುವುದು ||೮೨||

ಎಡಹಿಹಡೆದಚಿಂತಾರತ್ನವನು ಕೈ | ಬಿಡುವೆಗ್ಗರಂದವಡೆವರು ||
ಕಡುನೀರೆಯರುತಮ್ಮತಾಮೆಯೊಲಿದುಬಂದೊ | ಡೊಡಗೂಡದೆಬಿಡುವವರು ||೮೩||

ಎಂದವಳೇಸುಪರಿಯೊಳೊಡಬಡಿಸಲು | ಸಂದೇಹವಬಿಡುಜನನಿ ||
ಮುಂದಣಗತಿಯುಕೆಡಿಸಿಕೊಂಬೆನೆನಾ | ನೆಂದವನೇಳ್ವವೇಳೆಯೊಳು ||೮೪||

ಎನ್ನ ಕೈಯಿಂದಬಲ್ವಿದ್ಯೆಯನೀಸಿಕೊಂ | ಡಿನ್ನು ಸುಮ್ಮನೆನೀನಿಹುದು ||
ನನ್ನಿಯೆಪೇಳೆಂಬಜಾರೆಗೆ ಸಮ್ಮ | ಣೋನ್ನತನಿಂತೆಂದನಾಗ ||೮೫||

ಎಲೆತಾಯೆನಿನ್ನವಿದ್ಯೆಯನು ಬೇಡಿದೆನೈಸೆ | ಯೊಲಿವೆನೆಂದೆನೆನಾನುನಿನಗೆ ||
ನೆಲಹೊರದೀಮಾತಿಗಾನೆಷಡಂಟೊಡೆ | ಫಲಿಸುವುದೇಯಿವಿದ್ಯೆ ||೮೬||

ಎಂದುಸುಡಿದು ನಾನೀಪಾಪ್ಯೆಯೆಡೆಯೊಳು | ನಿಂದೊಡೆ ದೋಷವೆಯ್ದುವುದು ||
ಎಂದೆಂದಿಗೆನ್ನಿತಲೆಗೆಹರಲೆಬಪ್ಪು | ದೆಂದವನೇಳ್ವವೇಳೆಯೊಳು ||೮೭||

ಕಾಣತುಕಣ್ಣಮೋಹಿಗಳೆಂಬರಮಾತ | ನೇಣನಯನೆಯುಂಟುಮಾಡಿ ||
ಪ್ರಾಣವನುಳುಹೆಂದು ಬಂದುಹಿಡಿದಳಾ | ಬಾಣಪಂಚಕನಸೆರಗನು ||೮೮||

ಬಿಡುಬಿಡುಬೇಡ ಬೀಡಾಡಿತನದಿಬಂದು | ಹಿಡಿದಸೆರಗನೆಂದೆನುತ ||
ನುಡಿದುನಿಜ್ಜಾಡಿಸಿನಿಲ್ಲದಲ್ಲಿಂವೊರ | ಮಡಲಡಿಯಿಡುವೆನೆಂಬಾಗ ||೮೯||

ನಡೆಯಬಾರದತೆರದಿಂದಕಾಲ್ಗಳಹಿತಿ | ದಡಿಗೆರಗಿದವಾಣ್ಪೆಯನು ||
ಕೆಡಿಕನಾಗರುಸುತ್ತಿದಕಾಲನೊದರ್ದಂತೆ | ಜಡಿದೊದರಿದನಾಕುನರ ||೯೦||

ಒದರಿದಸರವಸಕಾಬಂಧಿಸಿದನುಡಿ | ಕೆದರಿದುದಾಬಂಧಕಿಯು ||
ಒದವಿಮಡಿಲುಗಟ್ಟಿದಪಕೀರ್ತಿವಲ್ಲರಿ | ಹೊದರುಗೆದರುವಂದದೊಳು ||೯೧||

ಬಳೆಗಳೊಡೆದುಬಲುಮಣಿಯುಮುತ್ತಿನಹಾರ | ದೆಳೆಕಿತ್ತುಸಡಿಲಿಕೀಲುಗಳು ||
ಕಳೆದುಕಂಕಣವುರುಳ್ವುದಕಂಡುಕೆಕ್ಕಳ | ಗೆಳಲಿಯೆದೆಯತಟ್ಟಿಕೊಂಡು ||೯೨||

ಸೈರಿಸುನಿಸಗೆತಕ್ಕುದಮಾಳ್ಪೆನೆಂದುಕು | ಮಾರಚಂದ್ರನನೇರಲಿಳಿಯ ||
ಆರಾಹುಗಣ್ಣಿಂದೀಕ್ಷಿಸಿಬಳಿಕಾ | ಜಾರೆಪಂಥವಮಾಡಿಕೊಂಡು ||೯೩||

ಎನ್ನ ವಂಚಿಸಿಯೆನ್ನ ವಿದ್ಯೆಯನೀಸಿಕೊಂ | ಡೆನ್ನನಶಾಶ್ವತವಮಾಡಿ ||
ಮನ್ನಣೆಗೆಡಿಸಿದೆಯಲ್ಲನಿನಗೆನಾ | ನಿನ್ನುತಕ್ಕುದನೆಣಿಸುವೆನು ||೯೪||

ಎಲವೊ ನಿನ್ನ ಸುಗೊಳ್ಳದೊಡಾಸುಹೊತ್ತವು | ವೊಲೆಯೆಯೆಕ್ಕೆಯಕಾಯ್ಗಳೆಂದು||
ಕುಲಟೆನುಡಿಯಲುತೇಗೆಯ್ವಿಮೆಂದಾ | ಫಲದಂಕನುವೋದನಿತ್ತ ||೯೫||

ವಿತಹವೇಧನೆಯಿಂದಾದಾಕಿಚ್ಚಿನೊ | ಳುರುತರಕೋಪಾನಲನು ||
ಬಿರಸಲಿಮ್ಮಡಿಗಿಚ್ಚಿನಿಂದವಳಾಪುಷ್ಪ | ಶರಗೆಯವಾಯವನೆಣಿಸಿ ||೯೬||

ಹಾರವಹರಿದು ಕೇಶವಕೆದರಿಸಿಸೀಳಿ | ಸೀರೆಯುನಾಬಳೆಯೊಡೆದು ||
ಜಾರಾಕಾರವಕನ್ನಡಿಪಂದದಿ | ಜಾರೆಬರೆದುಕೊಂಡುಮೆಯ್ಯ ||೯೭||

ಈ ತೆರದಿಂತನ್ನ ತನುವಕೆಡಿಸಿಕೊಂಡು | ಪಾತಕಿಮನೆಯೊಳಗಿರ್ದು ||
ಮಾತೇಸವನಕೊಲಿಸದೊಡೆನನಗಿ | ನ್ನೇತರಬಾಳುವೆಯೆಂದು ||೯೮||

ಇರಲಲ್ಲಿಗೆ ಕಾಳಶಂಬರಖಗಪತಿ | ಬರುತೇನುಕಾರಣದಿಂದ ||
ಗರುವೆನಿನ್ನಯಕೋಮಲತನುಕೊರಗಿದ | ಪರಿಯನೆನ್ನೊಳುತಿಳಿವಂತು ||೯೯||

ಒರೆಯೆನಲಾಸುಡಿಗೇಳಿಗದ್ದಕಾ | ಧನೆಯಾಗಿಸುಡಿದಳಿಂತೆಂದು ||
ಪಿರಿದುವಿಚಾರದಿನಾವಿನಿದತ | ಸ್ಮರಶಿಲೆಯೆಡೆಯೊಳುಬೀಳ್ದ ||೧೦೦||

ನರಿನಾಯಿತಿಂದು ಸಾವವನನೀನೆನಗಿತ್ತೊ | ಡೆರವಿಲ್ಲದಾತ್ಮನಂದನನ ||
ಸರಿಯೆಂದುನಾನುರಕ್ಷಿಸೆಹೆಜ್ಜೆಬೆಳೆದೆನ್ನ | ಗರುವಿಕೆಯುನುಡಿನೋಡಿ ||೧೦೧||

ಹಸುವಿನಬಸಿರಬಂದಾಕರುಬಲಿದಾ | ಹಸುವಿನಮೇಲ್ವಾಯ್ವಂತೆ ||
ಒಸೆದೆನ್ನ ಮೇಲ್ವಾಯಲುಬಂದೊಡೊಲ್ಲದೆ | ಯುಸುರ್ದೆನಾನವಗಿಂತುಟೆಂದು ||

ಬೇಡಮಗನೆಹೆತ್ತತಾಯನುಕಣ್ಣಿಟ್ಟು | ನೋಡಿವೋಹಿಸುಯಿಹಪರಕೆ ||
ಕೇಡನೆಣಿಸಿನನ್ನನೀನಾಣ್ಣುಡಿಗೀಡು | ಮಾಡುವೆನೆಂಬಪ್ಪಬುದ್ಧಿ ||೧೦೩||

ಪಟ್ಟಕೆಸಲುವಮಕ್ಕಳನೆಲ್ಲರಕೈ | ಬಿಟ್ಟುಡೊಡ್ಡಿತುಮಾಡಿನಿನಗೆ||
ಮುಟ್ಟಿದವೋಹದಿಯುವರಾಜಪದವಿಯು | ಕಟ್ಟಿದೆನದುಕಾರಣದಿ ||೧೦೪||

ತಂದೆಯುಮಹಿಮಾನಿಕೆಯುಸುರಕ್ಷಿಪ | ನಂದನರಿದನೆಣಿಸಿದೊಡೆ ||
ನೊಂದುಹಡೆದತಾಯೇರಕ್ಕಸಿಯಾ | ದಂದವಲ್ಲವೆಯುದರಿಂದ ||೧೦೫||

ಹೆತ್ತಮಗನೆನೀನೆನ್ನ ವೋಹಿಸುವು | ದುತ್ತಮಿಕೆಯೆ ಬೇಡವೆನಲು ||
ಒತ್ತಿಹಿಡಿದುಸೀರೆಯಸೀಳಿಕುರುಳ್ಗಳ | ಕಿತ್ತುಕೆಡಹಿಯೆನ್ನ ಮೈಯ ||೧೦೬||

ಹರಿದುಹಾರಪನೀವೊಲೆಗಳಮೇಗಣ | ಸೆಡಗನುಗಿದುನಾನುಟ್ಟ ||
ನಿರಿಯತೆಗೆವಸಮಯದೊಳಯ್ಯಯ್ಯೊ | ಮೊರೆಯೊಮೊರೆಯೊಯೆನುತಾನು ||

ಕೊರಚಿದೊಡೆನ್ನ ನುಬಿಟ್ಟೋಡಿದನಾ | ದುರುದುಂಬಿಯತಿಪಾತಕನು ||
ಬರಿದೆನ್ನ ಭಂಗವಕೆಡಿಸಿದನಿಂತಪ್ಪ | ಕೊರತೆಯನಾಹೊತ್ತುಕೊಂಡು ||೧೦೮||

ಇನ್ನಾವಮೋರೆಯೊಳೀವುನೆಯೊಳುಮು | ತ್ತೆನ್ನ ಸರಿಯುಸವತಿಯರ ||
ಮುನ್ನಿನಗದದಿಯೊತ್ತರಿಸಿಯುಣಕವಾಡಿ | ಮನ್ನಣೆಯಿಂದನಿನ್ನೂಡನೆ ||೧೦೯||

ಬಾಳುವುದಿನ್ನೆನಗೇಕೆಂದಾಚಾಂ | ಡಾಳಿನುಡಿದನುಡಿಗಳನು ||
ಕೇಳಿವೊಳಗುಗೇಳಿದನಿಹ್ಮದಂದದಿ | ತಾಳಿಪರಿದುಕೋಪವನು ||೧೧೦||

ನಾರಿಯಕೌಟಿಲ್ಯವನಿಜವೆಂದುವಿ | ಚಾರಹೀನನಾನೃಪತಿ ||
ಆರೈಯದವನನೀಗಲೆಕೊಲಿಸುವೆನೆಂ | ದಾರಾಜಗೃಹದಿಂದಬಂದು ||೧೧೧||

ಉಕ್ಕುವಕೋಪದಿ ವಜ್ರದಾಡಾದಿಯು | ಮಕ್ಕಳನೈವರಕರಸಿ ||
ಮಿಕ್ಕಪಾತಕಿಯಾಪ್ರದ್ಯುಮ್ನನನೆಲ | ಕೆಕ್ಕಿಬೇಗದಿನೀವೆನಲು ||೧೧೨||

ಸುಮ್ಮನೆಕುಣಿನವರಿಗೆಹರೆಯನುಹುಯ್ಯೆ | ಸುಮ್ಮಾನವೇಳುವಂದದೊಳು ||
ತಮ್ಮತಾವೇಕೊಲಲೆಂದಿರ್ದವರಿಗೆ | ತಮ್ಮಯ್ಯನುಬೆಸಸಿದೊಡೆ ||೧೧೩||

ಕರಮೊಳ್ಳಿತೆಂದು ತಂದೆಯಬೀಳ್ಕೊಂಡಾ | ಅರಲಸರಲನೀರನೊಳು ||
ಪಿರಿದಪ್ಪವಂಚನೆಯಿಂನ್ನೀಹವನಾ | ದರವೆಂಒಂದದಿಮಾಡಿ ||೧೧೪||

ಮುಂದಕುತ್ತಮವಿದ್ಯೆಯನಾವುಪಡೆಯಬೇ | ಕೆಂದುಬಳಿಕ್ಕೊಡಂಬಡಿಸಿ ||
ಅಂಪಾಕೃತಕಮಾಸಸರಾಪುರವರ | ದಿಂದವಿಮಾನವನೇರಿ ||೧೧೫||

ಆ ವಿಜಯಾದ್ರಿಯಸಿದ್ಧಕೂಟಮನೈದಿ | ದೇವರದೇವನಕಂಡು ||
ಭಾವಶುದ್ಧಿಯೊಳುಭಜಿಸಿಬಳಿಕೆಂದರು | ಪೂವಿನಬಿಲ್ಲಬಲ್ಲಹಗೆ ||೧೬||

ಬಿತ್ತರಮೆನೆರಂಜಿಪಸಿದ್ಧಕೂಟದ | ತುತ್ತತುದಿಯೊಳಗುರ್ವಿಸುವ ||
ಉತ್ತಮವಸ್ತುವನೊಂದುಪನ್ನಗರಕ್ಷಿ | ಸುತ್ತಿರ್ದುದಲ್ಲಿಗೆವೋಗಿ ||೧೧೭||

ಅದನದಿರದೆವೊಯ್ಯಲಾವಸ್ತುಬರ್ದುದೆಂ | ದದರಬಳಿಗೆವಜ್ರದಾಡ ||
ಮೊದಲಾನ-ವೋಗುವೆನೆಂಬಾಮಾತನುಕೇಳಿ | ಮದನಕುಮಾರನುನಗುತ ||೧೧೮||

ಇದನುವೊಗುವೆನಾನೆಂದುಹೋಗಲ್ಕಾ | ಅಧಟನಕಂಡಲ್ಲಿರ್ಪ ||
ವಿದಿತವಿಷೋರಗನುರಿಭುಗಿಭುಗಿಲೆನ | ಲೊದವಿದಕರ್ವೊಗೆಗೂಡಿ ||೧೧೯||

ಕಡೆಗಾಲದರುದ್ರನಿಟ್ಟಾಭರಣದ | ಕೆಡಿಕನಪ್ಪಾವಿಷೋರಗನು ||
ಕಡುಮುನಿಸಿಂಬರ್ಪವೊಲುಬರಿದಾಬಲು | ಗಡಿಯನಮೇಲ್ವಾಯ್ದುದಾಗ ||೧೨೦||

ಬಾಲಭಾನುವನುಂಗುವೆನೆಂದೈದುವ | ಕಾಳರಾಹುವಿನಂದದೊಳು ||
ಲಲಿತಾಂಗನನಾದುಷ್ಟಫಣಿಪತಿ | ಮೇಲುವಾಯಲೊಡನವನು ||೧೨೧||

ಪನ್ನತವಜ್ರೋಪಮಬಾಹುದಂಡದಿ | ಪನ್ನಗನನುಪ್ಪೊಯ್ಯಲಾಗ ||
ಉನ್ನತಿಕೆಯಪಾಂಗಳಿದುಬಳಿಕ್ಕಾ | ತನ್ನದಿವ್ಯರೂಪುದೋರಿ ||೧೨೨||

ಕಾಮಚಂಡಾಳಿನಿಸಮವಿದ್ಯೆಯತಿವಿದ್ಯೆ | ಸಾಮಜವೈರಿವಿಷ್ಟರವ ||
ಚಾಮರದಿವ್ಯಾತಪತ್ರಪನಧಿಕಸು | ಶ್ರೇಮದಿಕೊಟ್ಟಿಂತುನುಡಿದ ||೧೨೩||

ಮುನ್ನೋರ್ವಗಗನೇಚರನೀವಸ್ತುವ | ನೆನ್ನ ಕೈಲೆಡೆಯಸಿಕೊಟ್ಟು ||
ಉನ್ನತಮಪ್ಪತಪಕ್ಕಿರದೊಯ್ವು | ತ್ತೆನ್ನೊಳಗಿಂತುನುಡಿದನು ||೧೨೪||

ಉರಗರೂಪವನಾಂತು ನೀನೀಬಳಿಯೊಳ | ಗಿರಲು ನಿನ್ನಲ್ಲಿಗೆಬಂದು ||
ಭರದಿಂನಿನ್ನ ಪೊಯ್ದವಗೀವಸ್ತುವ | ನುರುಮುದದಿಂದೀವುದೆನುತ ||೧೨೫||

ನುಡಿದನಂತದುಕಾರಣದಿಂದೀರೂವು | ವಡೆದಿರ್ದನಂತದರಿಂದ ||
ಕಡುಗಲಿನೀನವಧರಿಸೆನಲಾದೇವ | ನೊಡನವನಿಂತಾಡಿದನು ||೧೨೬||

ನಾನಾವಾಗ ನೆನೆಯುಲೊಡನೆಯು ೂಂದು | ನೀನೀವಸ್ತುಸಂತತಿಯ ||
ಸಾನಂದದಿತಂದೀವುದೆಂದಲ್ಲಿಂ | ದಾನನೆಗಣೆಯನೆಯ್ತರಲು ||೧೨೭||

ಅದನುಕಂಡಾವಜ್ರದಾಡಾದಿಗಳು ಜೋದ್ಯ | ಹೃದಯದಲ್ಲಿಂಮುಂದಕೆಯ್ದಿ ||
ಕೆದರುವಕಿಡಿಯೊಳು ವುರಿಧಗಧಗಿಪಕೆಂ | ಡದಕುಂಡಪನೊಂದತೋರೆ ||೧೨೮||

ಫುಲ್ಲಮಾರ್ಗಣನಡೆವುತ್ತಿರಲಾವ್ಮರಿ | ಯೆಲ್ಲವಡಗಿತಣ್ಣನಾಗೆ ||
ಅಲ್ಲಿಂದಗ್ನಿಕುಮಾರನುವೊರಮಟ್ಟು | ಸಲ್ಲೀಲೆಯಿಂ ಮತ್ತವಗೆ ||೧೩೯||

ನನೆದಂತಾಗುವ ದಿವ್ಯಾಂಬರವನು | ಮಿನುಗುವ ರತ್ನಭೂಷಣವ ||
ಅನುರಾಗದಿಂಕೊಡಲವಕ್ಕೆಕೊಂಡಾ | ನನಿಗಣೆಯನು ನಡೆತರಲು ||೧೩೦||

ರೋಷಾವೇಶದಿನೊಂದೆಡೆಯೊಳು ಮೇಷ | ಪಾಷಾಣಗಳುಮಿಗೆಹೋರಿ ||
ಭೀಷಣವನುತೋರುತಿರಲಲ್ಲಿಗಾನಿ | ರ್ದೋಷಿಯಹೊಗಿಸಿದರವರು ||೧೩೧||

ಸಿಡಿಲುಸಿಡಿಲುತಾಗುವಂತೆ ವಜ್ರದಗುಂ | ಡಡಸಿವಜ್ರಪಹಾಯ್ವಂತೆ ||
ಪೊಡವಿಯದಿರಲಾಕಲ್ಲತಗರುಗ | ಳ್ಕಡುಪಿಂದಹಾಯ್ದಾಡುತಿರಲು ||೧೩೨||

ಮತ್ತೆಹೊಕ್ಕಾಮೇಷಪಾಷಾಣಯುಗಲವ | ನೊತ್ತಿಹಿಡಿದುನಿಲಿಸಿದೊಡೆ ||
ಚಿತ್ತಶುದ್ಧಿಯೊಳಿತ್ತನಾಮೇಷಾಸುರ | ಸುತ್ತಮಮಕರಕುಂಡಲವ ||೧೩೩||

ಆಕೌಟಿಲ್ಯಮಾನಸರು ಮುಂದಕೆಬಂದು | ಭೀಕರಮಪ್ಪತಾಣವನು ||
ಆಕಾಮುಗೆ ಬೇರೆಬೇರೆತೋರಿದೊಡವ | ನೇಕಾಂಗದಿನೊಳಹೊಕ್ಕು ||೧೩೪||

ಸೂಕರಗಿರಿಯಭೀಕರಮಪ್ಪಗುಹೆಹೊಕ್ಕು | ಸೂಕರಾಸುರನೊಸೆದಿತ್ತ ||
ಲೋಕವೂರಣಮೆಂಬಜಯಘೋಷಶಂಖವ | ಸ್ವೀಕಾರವಮಾಡಿಮಗುಳ್ದು ||

ಕಾಳಗುಹೆಯವೊಕ್ಕು ಭೀಳಕಾಳಾಸುರ | ಕಾಳದಂಡಮೆಂಬಗದೆಯ ||
ಲೀಲೆಯಿಂದೀಯಲಂತದಕೈಕೊಂಡ್ಯೆ | ಗೋಲನುಮುಂದಕೆಬಂದು ||೧೩೫||

ಬಲಿಮುಖಗಿರಿಯಕೋಡುಂಗಲ್ಲನಿರದೇರಿ | ಬಲಿಮುಖಾಮರನೊಸೆದಿತ್ತ ||
ಸುಲಲಿತಮಣಿಮಯಮಪ್ಪಕಿರೀಟವ | ನಲರ್ಗಣೆಯನುಕೈಕೊಂಡು ||೧೩೬||

ಮಲ್ಲಗಿರಿಯಗುಹೆಯೊಳಗಗುರ್ವಿಸುತಿರ್ಪ | ಮಲ್ಲಾಸುರನುಚೇಟಕವ ||
ಸಲ್ಲೀಲೆಯಿಂಕೊಡಲದನು ಕೈಕೊಂಡಲ | ರ್ವಿಲ್ಲನುಮುಂದಕೆಬಂದು ||೧೩೭||

ಉರಗಗುಹೆಯಹೊಕ್ಕುರಗರಾಕ್ಷಸನನು | ಪಿರಿದುಬೆಚ್ಚಿಸಿಯವನಿತ್ತ ||
ಸುರುಚಿರಕಾಮವಿಮಾನವಪಡೆದಾ | ಸುರಭಿಶರನುಮಗುಳಿದನು ||೧೩೮||

ಪಿರಿದುಮಗುರ್ವಿಸುವಾಕಚ್ಛಪಂಬಗ | ಹ್ವರದೊಳಗದಿರದೆಹೊಕ್ಕು ||
ತುರಗಾಸುರನನಂಜಿಸಿಯವನಿತ್ತಾ | ತುರಗರತ್ನವಕೈಕೊಂಡು ||೧೩೯||

ಗಜಮುಖವೆಂಬ ಹೆಸರಗುಹೆಯೊಳಹೊಕ್ಕು | ಗಜರಾಕ್ಷಸನಮೇಲ್ವಾಯ್ದು ||
ತ್ರಿಜಗದ್ಭಕ್ಷಣಮೆಂಬನಾಮದಮದ | ಗಜರತ್ನವಕೈಕೊಂಡು ||೧೪೦||

ಬಳಿಕೊಂದ.ಭೀಕರತರಮಪ್ಪಕಾಸಾರ | ದೊಳಹೊಕ್ಕು ಮತ್ತಲ್ಲಿರ್ಪ ||
ಜಲದನುಜನಬೆದರಿಸಿ ಕಾಮಚಕ್ರಮ | ತಳೆದಂಗಜನೆಯ್ತಂದು ||೧೪೨||

ಭೀಮವೆನಿಪನಕ್ಷ್ಮವೆಂಬದರಿಯಹೊಕ್ಕು | ಭೀಮಾಸುರನಮೇಲ್ವಾಯ್ದು ||
ಕಾಮಧೇನುವಕೈಕೊಂಡಲ್ಲಿಂದು | ದ್ದಾಮವಿಕ್ರಮಿವೊರಮಟ್ಟು ||೧೪೩||

ರಥಪರಿವೃಢಮೆಂಬಗಿರಿಯೇರಿಪೆಣರಿಸಿ | ರಥರಾಕ್ಷಸನೊಸೆದೀಯೆ ||
ಪೃಥುವೀರ್ಯನು ಮಕರಧ್ವಜಯುತಪುಷ್ಪ | ರಥಮನಿರದೆಕೈಕೊಂಡು ||೧೪೪||

ದೋರ್ವಲದಿಂದ ಬಲಾಹಕಗುಹೆಯೊಳ | ಗುರ್ವಿಸಿತನ್ನವೇಲ್ವಾಯ್ದ ||
ಪೇರ್ವುಲಿಯನುತಿವಿದದುಕೊಟ್ಟಪೂಗಣೆ | ಗರ್ವುವಿಲ್ಲನು ಕೊಂಡುಮಗುಳ್ದು ||

ಪದಿತಕದಂಬವದನವೆಂಬಕೂಪಮ | ನದಿರದೆಹೊಕ್ಕು ಮತ್ತಲ್ಲಿ ||
ಕದನವಿಜಯವೆಂಬ ನಾಗಪಾಶಮನಾ | ಸದಮಲಗುಣಿ ಕೈಕೊಂಡು ||೧೪೬||

ಉರ್ವಿಯಿಂದಾಕಾಶಕೆ ಕೀಲುಗೊಟ್ಟಂತಿ | ರುರ್ವಿಬೆಳೆದವೈಜಯಂತ ||
ಪರ್ವತವನು ಹತ್ತಿಯಾಕೋಡುಗಲ್ಲೊಳ | ಗೋರ್ವರಾಕ್ಷಸನನುಕಂಡು ||೧೪೭||

ಇದಿರಾಗಿ ಬಂದುಘರ್ಜಿಸಿ ತಾಸುಹಿಡಿದಿರ್ದ | ಗದೆಯನೆಗಹಿವೊಯ್ಯಲಾಗ ||
ಅದನೆಡಗೈಯೊಳಗಾಂತು ಸುಲಿದುಕೊಂ | ಡದರಿಂದವನ ಸದೆಬಡಿಯೆ ||೧೪೮||

ಅನಿತರೊಳವನಾರೂಪನುಡುಗಿ ತನ್ನ | ಮನುಜರೂಪವತಾಧರಿಸಿ ||
ಅನುರಾಗದಿನಿಂತೆಂದುನುಡಿದನಾ | ನನೆಯಸರಲನೀರನೊಡನೆ ||೧೪೯||

ವಿಜಯಾರ್ಧಾಚಲವೆಂಬೀಶಿಖರಿಯ | ವಿಜಯನಗರಿಗಧಿರಾಜ ||
ಅಜಿತಂಜಯನೆಂಬಖೇಚರನಾತಗೆ | ನಿಜಸತಿಶಚಿಯೆಂಬಳಿಹಳು ||೧೫೦||

ಅಮಿಥುನದಗರ್ಭದೊಳು ಜನಿಯಿಸಿದೆನು | ಹೇಮಾಂಗದನೆಂದೆಂಬ ||
ನಾಮದಮಗನಾನೆನ್ನಂತರದೊಳು | ದ್ದಾಮರೂಪಮನಿರದಾಂತು ||೧೫೧||

ರತಿಯೆಂಬರಮಣಿಪುಟ್ಟಿದಳವಳವಯವ | ದತಿಶೋಭೆಯನೀಕ್ಷಿಸುವೊಡೆ ||
ಅತನುಕುಮಾರಚಂದ್ರಮಕೇಳುಕಣ್ಗಳು | ಶತಸಾಸಿರವಾಗಬೇಕು ||೧೫೨||

ಅವಳಡಿಗಂಬುಜಕುಸುಮಮಾಂಗಲ್ಯ | ಮವಳಮುಖಕೆ ಶಶಿಶಲ್ಯ ||
ಅವಳಕ್ಷಿಗಿಂದೀವರವತಿನಿರ್ಮಾಲ್ಯ | ವವಳರೂಪಜಗೆ ಕೌಶಲ್ಯ ||೧೫೩||

ಅವಳೆಡಗಡೆಗೆಯವಳಬಲಗಡೆಪಡಿ | ಯವಳಮಿಸುಪಬಲಗಡೆಗೆ ||
ಅವಳೆಡಗಡೆಸರಿಯಲ್ಲದಿನ್ನೊಬ್ಬರ | ಹವಣಿಸಲಹಪತಿಗಳವೆ ||೧೫೪||

ಈತೆರಬಂದೊಪ್ಪವಹುದೆಂದ್ನನು | ಜಾತಿಜವ್ವನವೇರೆಕಂಡು ||
ಭೂತಳದೊಳಗೀಸತಿಗಸುರೂಪಾದ | ಜಾತಿಪುರುಷರತ್ನ ಮುಂಟೆ ||೧೫೫||

ಎಂದೆಮ್ಮಪಿತೃವೋರ್ವಶಕುನಿಗನನುಕೇಳ | ಲಂದವನಿಂತುನುಡಿದನು ||
ಇಂದುಮಂಡಲನಿಭಮುಖಿಗೂಡಿ ನಿನ್ನಗ್ರ | ನಂದನಹೇಮಾಂಗದನು ||೧೫೬||

ವೈಜಯಂತಪರ್ವತದತುದಿಯೊಳು ವಿ | ರಾಜಿಪಕೋಡುಗಲ್ಲೊಳಗೆ ||
ಭೂಜನಕತಿಪೊಸತೆನಿಪರಕ್ಕಸರೂಪ | ನಾಜವನಂದದಿಧರಿಸಿ ||೧೫೭||

ಇರಲಲ್ಲಿಗೆಬಂದನನನಂಜಿಸಿದಾ | ಪುರುಷರತ್ನವೆನಿನ್ನ ಸುತೆಗೆ ||
ವರನಾಗುವನೆನಲವನ ನುಡಿಯುಕೇಳಿ | ಹರುಷವನೆಮ್ಮಜನಕನು ||೧೫೮||

ಈತಂಗಸಹಿತೆನ್ನ ನೀಪರ್ವತಾಗ್ರಕೆ | ಪ್ರೀತಿಯಿಂದವಕಳುಹಿದೊಡೆ ||
ಈತೆರನಪ್ಪರೂಪವನು ಧರಿಸಿ ವಿ | ಖ್ಯಾತಕೇಳಿರ್ದೆನಾನಿಲ್ಲಿ ||೧೫೯||

ಆಶಕ್ಯನಿಗಸೊರೆದುದಿನಧಟನೀ | ನೀಸಮಯದೊಳೆಯ್ತಂದು ||
ಓರಿಸದೆಯೆನ್ನ ನುಗೆಲ್ದೆಯಲಾ | ಕಾಸಿಗತನದಿನಂತದರಿಂ ||೧೬೦||

ಎನ್ನಸುಜಾತೆರತಿಯಕ್ಕೈಕೊಳ್ಳೆಂದು | ತನ್ನಪಿಂಗಡೆನಿಂದಿರ್ದ ||
ರನ್ನದರಮಣಿಯಂತೆಸೆವರತಿಯನಾ | ಉನ್ನತಗುಣಿಗೆತೋರಿದನು ||೧೬೧||

ಪೊಸಮುಸುನಿಯಂತಾಮುದವೊಗದವಳನು | ಎಸೆವಬಂದುಗೆದುಟಿಯುಳನು ||
ಮಿಸುಪಲತಿಗೆವಣ್ಣದವಜ್ಜೆಯವಳನು | ಒಸೆದುನೋಡಿದನಂಗಜನು ||೧೬೨||

ನಿರಿಗುರುಳ್ಗಳನವನೀಲಾಂಬಕಿಯನು | ಮರಿಯಂಚೆಸಜೆಯಮುಗ್ಧೆಯನು ||
ನೆರೆವೆರೆಮೊಗದೇರುಜವ್ವನೆಯನು | ಎರಕದಿನೋಡಿದನನನು ||೧೬೩||

ಹರುಷದಿರಾಜವನಂತನೀಕ್ಷಿಸಿದನು | ತರುಣಕೋಕಿಲವಾಣಿಯನು ||
ಸುರುಚಿರಸುರಭಿಲತಾಕೋಮಲೆಯನು | ನರನಪಲ್ಲವಪಾಣಿಯನು ||೧೬೪||

ಚಾರುಜಕೋರವಿಲೋಲಲೋಚನೆಯನು | ಕೈರವಕುಸುಮಗಂಧಿಯನು ||
ಮಾರಕುಮಾರಚಂದ್ರನುನೋಡಿದನುಮನ | ವಾರೆಕಣ್ಬೆಟ್ಟುಕಾತರವಿ ||೧೬೫||

ತೊರೆದಕಾತರದೇಳಿಗೆಯನುಮನಸಿಂದ | ಉರವಣಿಸಿದಸೋಲದಿಂದ ||
ಅರಲಂಬನರೂಪವನುರುಮುದದಿಂದ | ಗರುವನೆನೋಡಿದಳೊಲಪಿಂದ ||೧೬೬||

ಸಮದೃಷ್ಟಿಸಮಕಾತರಸಮಸಾತ್ವಿಕ | ಸಮನಿಸಿತಾಯಿವರ್ವರಿಗೆ ||
ಸಮರೂಪಸಮಯೌವನಸಮಲಾವಣ್ಯ | ಸವಸಂದಕಾರಣದಿಂದ ||೧೬೭||

ಇಂತುತನ್ನ ನುಸಲೆಸೋಲಿಸಿಸೋಡುವ | ಕಾಂತೆಯನವಳಗ್ಗಜಸೊಳು ||
ಸಂತಸದಿಂನಾನುಕರೆಯಲಟ್ಟುವಪರಿ | ಯುಂತರಮಿರಲಿನಿಮ್ಮಲ್ಲಿ ||೧೬೮||

ಎಂದುನುಡಿದುನುಂದಕೆಯ್ದಿಸಾಸಿರಮುಖ | ದಿಂದಗುರ್ವಿಪಹುತ್ಪಹೊಕ್ಕು ||
ಅಂದವಡೆದಕಾಮಮುದ್ರಿಕೆಯನುಕೊಂಡು | ಬಂದನಂಗಜನಳ್ಳಿಯಿಂದ ||೧೬೯||

ಈವಿಧನಿಂಬಂದವನಕಂಡಿಂತೆಂದ | ರಾವಜ್ರದಾಜಾದಿಗಳು ||
ನಾವೊಂದಮಾಡೆತಾನೊಂದಾದುದುಪುಣ್ಯ | ದೈವಡಬಲಮುಂಟಿವಗೆ ||೧೭೦||

ಎಂದುಮನದೊಳಿಣಿಸುತಕಾಮನೊಳಿಂ | ತೆಂದರುಯಿಲೆನಿಕ್ಕಮಾಂಕ ||
ಹಿಂದಣಭವದೊಳುನೀನೆಸಗಿದಪುಣ್ಯ | ದಿಂದಿವುನಿನಗೆಸೇರಿದುವು ||೧೭೧||

ಎಂದು ಕಪಟವಿನಯವನುಸುರ್ದಾತ | ನ್ಮೊಂದಾಗಿ ನಿಜಪುರವರದ ||
ಮುಂದಣಬನದ ಪುರಾಣಕೂಪಕಕ್ಕಾ | ಕಂದರ್ಪನಕೊಂಡುಬಂದು ||೧೭೨||

ಇದರೊಳಗುತ್ತಮವಸ್ತುಸಂತತಿಯಿವೆ | ಯಿದನು ಹೊಕ್ಕೊಡೆ ಸಾಧ್ಯವಹುದು ||
ಇದುನಿಶ್ಚಯಮೆಸಲವರ ಡಂಬಕವನು | ಮದನಕುಮಾರಕನರಿದು ||೧೭೩||

ರೂಪಪರಾವರ್ತನುದ್ಯೋಯಿಂತನ್ನ | ರೂಪನುನಿರ್ಮಿಸಿಬಳಿಕ ||
ಕೂಪವಹೊಗಿಸಿಯದೃಶ್ಯದಿನಾಪುಷ್ಪ | ಚಾಪನಿರೀಕ್ಷಿಸುತಿರಲು ||೧೭೪||

ಇವನು ಬಾಪಯಹೊಕ್ಕನಿದುಲೇಸಾಯಿತೆಂ | ದವರತಿಭರವಸದಿಂದ ||
ಪವಣಿಲ್ಲದಪಾಷಾಣಮನದರೊಳ | ಗವಿರಳಮಾಗಿ ಸೂಸಿದರು ||೧೭೫||

ಸತ್ಯನು ಹಗೆನಮಗಿನ್ನು ಲೇಸಾಯಿತೆ | ನುತ್ತಪರುಸುರ್ವವೇಳೆಯೊಳು ||
ಉತ್ತಮಸತ್ತ್ವನದೃಶ್ಯತೆಯನುಬಿಟ್ಟು | ಮತ್ತನವರು ಕೋಪದಿಂದ ||೧೭೬||

ಪಿಡಿದುಪನ್ನಗಪಾಶದಿಂ ಪೆಡಗೈಗಟ್ಟಿ | ಕುಡುವಿಲ್ಲನಿಡಲದನರಿದು ||
ಕಡುಕೋಪದಿಂ ಕಾಳಶಂಬರನಾತನ್ನ | ಪಡೆಯಸೆಲ್ಲವಕೂಡಿಕೊಂಡು ||೧೭೭||

ಪೊಳಲನಿವದೆ ಪೊರಮಟ್ಟುಬರಲುಕಂಡು | ತುಳಿಲಾಳಾಮನಸಿಜನು ||
ಘಳಿಲನವನಬಲಕಿಮ್ಮಡಿ ವಿದ್ಯಾ | ಬಲವನಿರ್ಮಿಸಿಸೌಜನಿಕ್ಕಿ ||೧೭೮||

ನಿಲಲನಿತರೊಳಂಬರದಿಂನಾರದ | ನಲಘುವೇಗದಿನಿಳಿತಂದು ||
ಇಳೆಯಾಧಿಪರ್ವರಮಧ್ಯದೊಳುನಿಂದು | ನೆಲೆಯನುಡಿಯನಿಂತುನುಡಿದ ||೧೭೯||

ಪರಿಕಿಸದಾಪೆಂಡಿರಮಾತನೆಲೆಖೇ | ಚರಪತಿನಿಮ್ಮನಿವ್ಮೊಳಗೆ ||
ಪಿರಿದುಹೋರಟೆಮಾಡಲಪಕೀರ್ತಿವಲ್ಲರಿ | ಧರೆಯೊಳುಪಸರಿಸದಿಹುದೆ ||೧೮೦||

ಎಂಬ ನಾರದನುಡಿಯನು ಕೇಳಿಯಾಕಾಳ | ಶಂಬರಖಚ್ಚರೇಶ್ವರನು ||
ಶಂಬರಾರಿಯಕೂಡಣಕಲಹವನು ಏ | ಡಂಬಿಸಿನಿಂದಿರಲಾಗ ||೧೮೧||

ಬಳಿಕಿಂತೆಂದುನುಡಿದನಾನಾರದ | ನಿಳೆಯಾಧೀಶ್ವರಕೇಳು ||
ಜಲಧಿಮಧ್ಯದೊಳಾದ್ವಾರಾವತಿಯೆಂಬ | ಪೊಳಲೊಪ್ಪವಿಡಿದಿಹುದಲ್ಲಿ ||೧೮೨||

ಭರತತ್ರಿಖಂಡಮನಾಳಲೆಂದಿರ್ದಾ | ಮುರನ್ವೈರಿಯ ನಿಜವನಿತೆ ||
ತರುಣೀಮಣಿ ರುಗ್ಮಿಣಿದೇವಿಯವರೀ | ರ್ವರಸುತನೀಪುಷ್ಪಚಾಪ ||೧೮೩||

ಇವನುದಯಿಸಿದವೇಳೆಯೊಳೀತನಪೂರ್ವ | ಭವದವೈರಿಯೋರ್ವದನುಜ ||
ಇವನನೆತ್ತಿಕೊಂಡಾಕಾಶಕೆಪೋಗ | ಲವರತಿದುಃಖದೊಳಿರಲು ||೧೮೪||

ಇಂದಿಗೆ ಹದಿನಾರುಸಂವತ್ಸರಕೆ ನಿಮ್ಮ | ನಂದನಬರ್ಪನಿಂತಿದಕೆ ||
ಸಂದೇಹಬೇಡೆಂದು ದೇವವಚನಮಾಗ | ಲಂದವರತಿಸುಖಮಿರ್ದು ||೧೮೫||

ಇಂದು ನಾನಲ್ಲಿಗೆಪೋಗಲು ಸಸಗಪ | ರೆಂದರೆಲೇಮುನಿಸಮ್ಮ ||
ನಂದನನಲ್ಲಿರ್ದಪನಿದನಾರೈಯಿ | ಮೆಂದುನನ್ನನು ಕಳುಹಿದರು ||೧೮೬||

ದೇವಗಿರಿಯ ಪೂರ್ವವಿದೇಶದ ಪುಷ್ಪ | ಳಾವತಿಯೆಂಬದೇಶದೊಳು ||
ಭೂವಿಶ್ರುತ ಪುಂಡರೀಕಿಣಿಯೊಳು ಜಿನ | ದೇವಶ್ರೀವಂದರರೆಂಬ ||೧೮೭||

ಅರುಹನಸಮವಸರಣಕೆಯ್ದಿ ಮೂಗಣ | ಧರಬಂದಾಧೂಮಕೇತು ||
ಭರದಿಂದೊಯ್ದುಮುಂತಾಗಿಯೆಲೆಖೇ | ಚರಪತಿನೀನೆತ್ತಿತಂದು ||೧೮೮||

ಸಲಹಲುಚೆನ್ನಾಗಿ ಬೆಳೆದುದನತ್ಯಂತ | ಬಲನಾದುದನೀಗನಿನ್ನ ||
ಲಲನೆಯಮಾಯಮನಿಜಮೆಂದುಯುದ್ಧಮ | ನಲಸದೆನೀಸುಮಾಳ್ಪುದನು ||೧೮೯||

ತಿಳಿಯಲುಕೇಳಿಯಾಗಣಧರರುಗಳಡಿ | ದಳಕೆನಮಿಸಿಬಂದೆನೀಗ ||
ಕಳುಹುಬೇಗದಿನೀತನತಂದೆತಾಯ್ಗಳ | ಬಳಿಗೆಂದುನಾರದನುಸುರೆ ||೧೯೦||

ಆನುಡಿಯನುಕೇಳಿಯಾಕಾಂಚನಮಾಲೆ | ನಾನಿದನೆನಗದೆನೆಂದು ||
ತಾನುರೆಲಜ್ಜೆತೆಯಾಗಿ ವೈರಾಗ್ಯದಿ | ಜೈನದೀಕ್ಷೆಯಧರಿಸಿದಳು ||೧೯೧||

ಆ ವಜ್ರದಾಡಾದಿಗಳಕಟ್ಟನು ಕಾಮ | ದೇವಬಿಡಲು ನಾರದನು ||
ಆ ವಿಭುಕಾಳಶಂಬರಖಚರನನಾ | ನಾವಿಧದಿಂದೊಡಬಡಿಸಿ ||೧೯೨||

ಕಾಮುವಿಮಾನವನೇರಿಯಾನಂದದಿ | ನಾಮನಸಿಜನಾರದರು ||
ತಾಮೂರ್ವರು ದಕ್ಷಿಣಾಶಾಮುಖಕೆನ | ಭೋಮಾರ್ಗದಿನೆಯ್ದಿದರು ||೧೯೩||

ನಾರದನಿಂತಾನೆಯ್ತಪ್ಪಕೆಳಗಣ | ಧಾರಿಣಿಯೊಳ್ಪಶೋಭಿಸುವ ||
ಆರಾಜ್ಯವನಾರಾಜಧಾನಿಯ ತಳ | ನಾರೈವುತಬರುತಿರ್ದ ||೧೯೪||

ಪಸುಳೆದಳಿರತೋರಣದಿಂಗುಡಿಯಿಂ | ದೊಸಗೆವರೆಯದಸಿಯಿಂದ ||
ಎಸೆವುತಿರ್ದೊಂದುಪುರವಕಂಡೀಪೂರ | ಪೆಸರೇನೆಂದು ಮನ್ಮಥನು ||೧೯೫||

ನಾರದನನು ಕೇಳಲಿಂತೆಂದನೆಲೆಸುಕು | ಮಾರನಿಮ್ಮಾವಾಶುಳನು ||
ಕೌರವಭೂಪಾಲನ ಹಸ್ತಿನಮೆಂಬ | ರಾರಾಜಿಸರಾಜಧಾನಿ ||೧೯೬||

ಮತ್ತೀಕುರುಭೂಪಾಲನಸಿಜಸತಿ | ಯುತ್ತಮೆಜಲಧಿಯೆಂಬೋರ್ವ ||
ವೃತ್ತಪಯೋಧರೆಗುದಧಿಯೆಂಬವಳು | ಪ್ರತ್ತಿಯಾಗಿ ನೆರೆಬೆಳೆಯೆ ||೧೯೭||

ಈರೆಂಟುವರುಷಕ್ಕೆ ನೀಸುಜಂದಾಗ ಮ | ತ್ತಾರಮಣಿಯತಪ್ಪೆನೆಂದು ||
ನಾರಾಯಣನಿರೆ ನೀನೆಯ್ದುವುದತಿ | ದೂರವಾಗಲದರಿಂದ ||೧೯೮||

ಮತ್ತೀಕುವರಿಯನಿಮ್ಮಯ್ಯನಾಪುರು | ಷೋತ್ತಮ ತನ್ನಗ್ರವನಿತೆ ||
ಮತ್ತಪಾಸನೆಸತ್ಯಭಾಮಾವಲ್ಲಭೆ | ಪೆತ್ತಾಭಾನುವೆಂಬವಗೆ ||೧೯೯||

ತರಲೆನಲಾವೊನೆಗೆಯವಾದ್ಯದಧ್ವನಿ | ಯರಲಸರಲಕೇಳ್ದಿನ್ನ ||
ವರವಾತೆಯಾರುಗ್ಮಿಣಿದೇವಿಯನಿರಿ | ಗುರುಳ್ಗಳನಾಸತ್ಯಭಾಮೆ ||೨೦೦||

ಮಗನಮದುವೆಯೊಳು ಮೊಲೆನೀರಿನೊಳುಮೆಟ್ಟಿ | ನಿಗೆಹರುಷದಿನಿಲಯಬೀಕು ||
ಮುಗುಳ್ಗಣ್ಣಯನಕೇಳೆಬಾಮಾತಿಗೆ | ಯೊಗಮಿಗೆ ಕೋಪವತಾಳಿ ||೨೦೧||

ಬಳಿಕಿಂಕುನುಡಿದನೆಲೇಮುನಿನೀನಿಲ್ಲಿ | ತಳುವಾಡು ನಾನೀಪುರಕೆ ||
ಇಳಿದಾಲಲನೆಯನೀಕ್ಷಿಪೆನೆಂದಾ | ತುಳಿಲಾಳಾಪುರಕಿಳಿದು ||೨೦೨||

ಮುತ್ತನಾವಿದನಾಗಿವೋಗಿ ಕೌರವಭೂ | ಪೋತ್ತಂಸನರಾಜಗೃಹದ ||
ಬಿತ್ತರಮಪ್ಪ ಬಾಗಿಲ್ವಾಡದೊಳುನಿಂದು | ಮತ್ತವರೊಳಗಿಂತುನುಡಿದ ||೨೦೩||

ಪುರುಷೋತ್ತಮನಮನೆಯನಾವಿದನುನಾನು | ಕುರುಭೂಪನಕುವರಿಯನು ||
ಹರುಷದಿಸಿಂಗರಿಸೆಂದೆನ್ನಕಳುಹಿದ | ನರಸೆಗರುಪಿಯಿಂತಿವನು ||೨೦೪||

ಎಂದುಬೌವಾರಕರೊಳುಪೇಳಲವರಾ | ಅಂದಮನರಸೆಗರುಪಲು ||
ಆಂದಾತನನೊಳಹೊಗಿಸಲಲ್ಲಿಗೆಮುದ | ದಿಂದಕಂಡಾಕುವರಿಯನು ||೨೦೫||

ನರಲೋಕದನಾರಿಯರು ತನ್ನಂಗುಟ | ಕೊರೆಯಲ್ಲವೆಂದು ಲೆಕ್ಕಿಸದ ||
ಗರುವೆಯುಂಗುಟದುಗುರ್ಗಳಿಗೆ ಮಿಂಚಿಕ್ಕಿದ | ನರಲಾಬನತಿನಿನ್ನಾಣದೊಳು ||

ಕರ್ವುವಿಲ್ಲಿನಕಡುಜೆಲ್ವನೇಳಿಪಕುಡು | ವುರ್ವುಗಳನುತಿದ್ದಿದನು ||
ಕರ್ವುವಿಲ್ಲನುನೋಡುತನವಯೌವನ | ಗರ್ವದುರ್ಗಾರೂಢೆಯನು ||೨೦೬||

ಪಂಚಶರವಮೊನೆಗೆಯ್ದೊಪ್ಪವಿಡುವಂತೆ | ಪಂಚಶರನುನಡೆನೋಡಿ ||
ಸಂಜಲಾಕ್ಷಿಯಕೈಯುಗುರಮೊನೆಯತಿದ್ದಿ | ವಿಂಚಿಕ್ಕಿದನುಬಿನ್ನಣದಿ ||೨೦೭||

ಮಡದಿಮಣಿಯಮಿಸುಪಂಗೋಪಾಂಗದೊ | ಳೆಡೆವರಿಯದೆಸಿಲುಕಿದುವು ||
ಕಡುನೀರನಕಣ್ಗಳಬೊಂಬೆಗಳುಪೊಧ | ಮಡಲಡಿಯಿಡುವುದಮರೆದು ||೨೦೯||

ಲೀಲೆಯಿಗಬುನಿಟ್ಟಿಪತನ್ನ ಕಣ್ಗಳ | ಕಾಲುವಳಿಯೊಳತಾಮನವು ||
ಮೇಲಿಕ್ಕಿಸೋಲಾತ್ಮಕೆಯನೆತ್ತಿಕೊಂಡಲ | ರ್ಗೋಲನಾಗನಕೆಪಾರಿದನು ||೨೧೦||

ನಾರದನಿರ್ದಪೂವಾನಕೆತರಲವ | ಳಾರೈದವನಡಿಗೆರಗೆ ||
ಆರಮಣೀವಮಣಿಯನುರುಗ್ಮಿಣಿಯಕು | ಮಾರಗೆಮದುವೆಯಾಗೆಂದು ||೨೧೧||

ಹರಸಲಿಂತೆಂದಳುಮೊದಲೆನ್ನ ನಾತಗೆ | ಯುರುವುದದಿಂದೀವೆವೆಂದು ||
ವರಮಾತಾಪಿತೃಗಳನುಡಿವುತ್ತಿಂದು | ವರಮಿರ್ದೀಗಮತ್ತೆನ್ನ ||೨೧೨||

ಅವನಬರವಕಾಣದೆಸತ್ಯಭಾಮೆಯ | ಕುವರನುಘಾನುವೆಂಬವಗೆ ||
ತವಕದಿಕೊಡಬೆನುತಿರ್ದರೆನ್ನಯಪೂರ್ವ | ಭವದಪಾಪದಫಲದಿಂದ ||೨೧೩||

ಜೆನ್ನಿಗಜಿತ್ತೋದ್ಭವನಲ್ಲದೆನನ | ಗನ್ನಿಗನೆಂತೆಳಸುವರು ||
ಇನ್ನೀವಿಧಿಗೇನನಣಿಸುವೆನೆಂದತಿ | ಭಿನ್ನಮಾಸನೆಯಾಗಿಬಳಿಕ ||೨೧೪||

ಈವೃದ್ಧನಾವಿದನೆನ್ನನುಕೊಂಡುಬಂ | ದೀವಿಧಿಯತಿಲೇಸಾಯ್ತು ||
ಕಾವನಲ್ಲದೆನನಗನ್ಯವಿಲ್ಲೆಂದಾ | ಭಾವೆಭೂತಳಕುರುಳಿದಳು ||೨೧೫||

ಈಪರಿಯಿಂಬೀಳಲೆತ್ತಿಕೊಂಡಾಪುಷ್ಪ | ಚಾಪನಿರದೆತಂದುತನ್ನ ||
ರೂಪುದೋರಲುಕಂಡಾನಾರದಮುನಿ | ಯಾಪೆಣ್ಣೊಳಿಂತುನುಡಿದನು ||೨೧೬||

ಉದಧಿಕುಮಾರಿನಿರೀಕ್ಷಿಸುನೀಮುನ್ನ | ಮದುವೆಯಾಗುವೆನೆಂದಿರ್ದ ||
ಮದನಕುಮಾರಕನಾನೆನಲಾಮುಗ್ಧೆ | ಮುದದಿಂದನಡೆನೋಡಿದಳು ||೨೧೭||

ಅವನಿತಾರತ್ನದಕಣ್ಗಳಕಾಂತಿ | ತೀವಿತನ್ನಂಗವನಡರೆ ||
ಪೂವಿನೆಬಿಲ್ಲಬಲ್ಲಹನೊಪ್ಪಿದನಾ | ಬಾವನ್ನದಬೊಂಬೆಯಂತೆ ||೨೧೮||

ವಟಪಕ್ವಫಲರುಚಿರಾಧರೆಯೂನಿ | ಷ್ಕುಟಿಲಕುಮಾರಚಂದ್ರಮನ ||
ಚಟುಲಚಕೋರಲೋಚನಪುತ್ರಿಕೆಗಳು | ಚಟಗೊಂಬಂತೆನೋಡಿದಳು ||೨೧೯||

ವರಜಕ್ರವಾಕಮಿಥುನಸನ್ನಿಭಸ್ತನೆ | ಸರಸಿಜದಳಲೋಚನವನು ||
ಉರುಮುದದಿಂದತೆರೆದುನೋಡಿದಳಾ | ಹರಕುಲಗಗನಭಾಸ್ಕರನ ||೨೨೦||

ಇದುಜಿನಪದಸರಸಿಜಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗೊದವಿರಂಜಿಸೆನವದಶಕ ||೨೨೧||

ಹತ್ತೊಂಬತ್ತನೆಯ ಸಂಧಿ ಸಂಪೂರ್ಣಂ

೨೦. ಮನ್ಮಥನ ವಿವಾಹವರ್ಣನಾ ಸಂಧಿ

ಶ್ರೀಮದಪರಪತಿಮೌಲಿಕೀಲಿತಪಾದ | ತಾಮರಸದ್ವಯನಜಗೆ ||
ಕಾಮಮದೇಭಹರಿಗೆನೇಮಿಜಿನಪತಿ | ಗಾಮೋದವೆತ್ತರಗುವೆನು ||೧||

ಅನಿತರೊಳಾನಾರದನಕೈಯಿಂದಾ | ವನಿತೆಯನಾಕಂತುಕಳುಹೆ ||
ಮನದೆಗೊಂಡಾಪುರಕಿಳಿದುಸುಯೋಧನ | ಮನುಜೇಶಗಿಂತೆಂದುನುಡಿದ ||೨||

ಈನಾರಿಯನೋರ್ವಖೇಚರನೆತ್ತಿಕೊಂ | ಡಾನಭದೊಳುವೋಗುತಿರಲು ||
ನಾನಾಪರಿಯೊಡಂಬಡಿಸಿಬಿಡಿಸಿತಂದೆ | ನಾನಾತನಕೈಯಿಂದ ||೩||

ಎಂದುನುಡಿದುಸುಕುಮಾರಿಯನಿರಿಸಿಯ | ಲ್ಲಿಂದಮರುತಮಾರ್ಗಕೈದಿ ||
ಕಂದರ್ಪನೊಡನಾಪುಷ್ಪಕದೊಳಗಾ | ನಂದದಿಂದಲಿಬರುತಿರಲು ||೪||

ಇತ್ತಲುಕೌರವನೃಪನಾಸುತೆಗೂಡಿ | ಮೊತ್ತದರಸುಗಳುತನ್ನ ||
ಸುತ್ತಿಬರುತ್ತಿರಲಾದ್ವಾರಾವತಿ | ಯತ್ತಲಾಗಿಸಡೆತಂದ ||೫||

ಅದನುಕಂಡಾಪಡೆಯಾವರಾಯನದೆಂದು | ಮದನನುಕೇಳೆನಾರದನು ||
ಇದಕೌರವಬಲಮಿದರೊಳುಪಾಂಡವ | ರಧಟರುತಾವೆಲ್ಲಗೂಡಿ ||೬||

ದ್ವಾರಾವತಿಪುರವರಕಾವುದಧಿಕು | ಮಾರಿಯಕೊಂಡುತ್ಸವದಿ ||
ನಾರಾಯಣನಲ್ಲಿಗೆವೋದಪರೆನ | ಲಾರಾಜಸುತನಿಂತನುಡಿದ ||೭||

ನಾರದಮುನಿಪತಿಕೇಳೀಯಧಟರ | ನಾರೈವೆನೆಂದುಮತ್ತವನ ||
ಮಾರುತಮಾರ್ಗದೊಳಿರಿಸಿಯಲ್ಲಿಂದಾ | ಧಾರಿಣಿತಳಕಿಳಿತಂದು ||೮||

ಬಲ್ಲಿದರವರುನಡೆವದಾರಿಯಮುಂದೆ | ಬಿಲ್ಲಂಬುವಿಡಿದೋರ್ವವೃದ್ಧ ||
ಭಿಲ್ಲನಂದವನುಧರಿಸಿಬಲೆಯನುಹೆಗ | ಲಲ್ಲಿಹಾಕಿಕೊಂಡುಬಂದು ||೯||

ಎನಗೆಸುಂಕವತೆತ್ತಲ್ಲದೆನೀವುಸು | ಮ್ಮನೆಮುಂದಕೆಹೋಗಲಿಲ್ಲ ||
ಜನಪಜನಾರ್ದನನೆನ್ನನಿಲ್ಲಿರಿಸಿದ | ನೆನುತಮುಂಗಡೆನಡೆವವರ ||೧೦||

ನಿಲ್ಲಿನೀಮೆಲ್ಲರೆನುತತಡೆಯಲುಬಳಿ | ಕಲ್ಲಿವೋಪವರೆಲ್ಲನಗುತ ||
ನಿಲ್ಲದೆವೋಗುತಿರಲುಕಂಡಾಕನ್ನ | ಬಿಲ್ಲಿಂದವರನಡ್ಡನಿಲಿಸಿ ||೧೧||

ಆರಾರುಬಲ್ಲಿದರೈತಂದುನೂಕಲು | ದಾವಿಯೊಳಗೆಯಡ್ಡನಿಂದು ||
ಹೋರುತಲಿರಲಲ್ಲಿಗೆಭೀಮಾರ್ಜುನ | ವೀರರುತಾಮೈತಂದು ||೧೨||

ನೂಕಲೊಡನೆಕೈಕಾಲೆತ್ತದಂದದಿ | ನಾಸ್ಯತ್ರಿಮವನಚರನು ||
ಲೋಕೈಕವೀರರನರಸುತಂಬಿಸೆಕಂ | ಡಾಕುರುಒಲದನಾಯಕರು ||೧೩||

ಇರಿಯಿರಿಕೊಲ್ಲಿ ಕೊಲ್ಲೆಂದುಬಂದಿದಿರಾಗೆ | ಹೆರಸಾರಿನಿಂದಾಬಲಕೆ ||
ನೆರೆಮಿಗಿಲಾದಮಾಯಾಸೇನೆಯನಾ | ದುರುದುಂಬಿನಿರ್ಮಿಸಿಸಲು ||೧೪||

ಅದನೋಡಿಯಿದುಚೋದ್ಯಮೆಂದಾಭೀಷ್ಮರಿಂ | ತಿದನಾವುಗೆಲಬಾರದೆಂದು ||
ಪದುಳದಿಬಂದಾಮಾಯದಬ್ಬೇಡನೊ | ಳೊದವಿನುಡಿದನಿಂತೆಂದು ||೧೫||

ನೀನೇಕೆಸಮ್ಮತಡೆದೆಯೆಲೆಬೇಡನೀ | ನೇನಬ್ಬೇಡುವೆಹೇಳೆನಲು ||
ಈನಿಮ್ಮರಸಿನಮಗಳನುಸುಂಕವ | ನಾನದೆಕೊಡಿನೀವೆನಲು ||೧೬||

ಆಮಾತುಗೇಳಿನಿನ್ನಾಸುಂಕವನುನಿ | ನ್ನಾ ಮುರವೈರಿಯಮುಂದೆ ||
ಪ್ರೇಮದಿಕೊಡುವೆನೆಂದೊಡಬಡಿಸಲ್ಕು | ದ್ದಾಮನಂತದುಲೇಸೆಂದು ||೧೭||

ಆಕೃತಕದವಾಹಿನಿಯಹಿಂಗಿಸಿಬಳಿ | ಕಾಕೀಲಣೆಯೊಳಗಿರ್ದ ||
ಆಕಲಿಭೀಮಾರ್ಜುನರಬಿಟ್ಟಲ್ಲಿಂ | ದಾಕಾಶಕೆಪಾರಿದನು ||೧೮||

ಬಳಿಕಾಬಾಂಬಟ್ಟೆಯೊಳ್ಕೈತಂದು-ಕಂ | ಗೊಳಿಪಾದ್ವಾರಾವತಿಯ ||
ತೊಳಗುವವನದನೆಸಿನದೊಳಗಾಮುನಿ | ತಿಲಕನನಿರಿಸಿತಾನಿಳಿದು ||೧೯||

ಉನ್ನತಬಲವನಿರ್ಮಿಸಿಯಾಕುರುಪತಿ | ತನ್ನಮಗಳಕೂಡಿಕೊಂಡು ||
ಮುನ್ನಟ್ಟಿದಾಭೀಷ್ಮರಾರೂಪವತಾನು | ಜೆನಿನ್ನಾಗಿಧರಿಯಿಸಿಕೊಂಡು ||೨೦||

ಕಡುನೀರೆಸತ್ಯಭಾಮೆಯವನದೊಳುಬಿಟ್ಟು | ಕೆಡಿಸಿಯಾವನವನಾರೂಪ ||
ಉಡುಗಿವಿಕಟದೇಹದಮುನಿರೂಪವ | ಪಡೆದಾಕೆಯಮನೆಗೈದಿ ||೨೧||

ಆಗೃಹದೊತ್ತಿನಕೊಳದುದಕಸೇನುತ | ನ್ನಾಗುಂಡಿಗೆಯೊಳೆಲ್ಲವನು ||
ಬೇಗದಿತುಂಬಲಲ್ಲಿರ್ದವರಿವಭೂತ | ವಾಗಲೆವೇಳ್ಕುಮೆಂದೆನಲು ||೨೨||

ನಡುಗೇರಿಗೆಬಂದುನಿಮ್ಮನೀರಸುನೀವು | ತಡೆಯಿವೆಂದಾಗುಂಡಿಗೆಯ ||
ಅಡಿಮೇಲುಮಾಡಿದೊಡಾನೀರುಹೊಳೆಯಂತೆ | ಘುಡಿಘುಡಿಸುತಪರಿತರಲು ||೨೩||

ಪೊಳಲಜನಗಳೆಲ್ಲವೋಡಿಮನೆಗೆಪೋಗೆ | ಬಳಿಕಾರೂಪವಬಿಸುಟು ||
ತಳೆದುವಿಕಟಕುಬ್ಜರೂಪವನಾಬೀದಿ | ಯೊಳಗೆಬರುತ್ತಿರೆಕಂಡು ||೨೪||

ಸಗವಿಯನಾರಿಯರಾರೂಪವಕಂಡು | ನಗಲುಮತ್ತವರೊಳುಲೆಲರ ||
ಮೊಗದೊಳುಗಡ್ಡವಿಾಸೆಯಕೆಲಬರಮೂ | ಗುಗಳನಾನೆಯಸೊಂಡಿಲಂತೆ ||೨೫||

ಕೆಲರಮೊಲೆಯುಮಾರುಮಾರುದ್ದವಮಾಡಿ | ನಲಿವುತಬಂದಾರೂಪ ||
ತೊಲಗಿಸಿಮತೊೋರ್ವಪಾರ್ವನರೂಪವ | ನಲರ್ವಿಲ್ಲನುಕೈಕೊಂಡು ||೨೬||

ಆಶಶಿಮುಖಿಸತ್ಯಭಾಮೆಯಬಳಿಗೆಬಂ | ದಾಶೀರ್ವಾದವಮಾಡಿ ||
ದೇಶಾಂತರಿನಾನುಹಸಿದುಬಂದೆನುಮೃ | ಷ್ಟಾಶನವಾಗಬೇಕೆನಲು ||೨೭||

ಕರಮೊಳ್ಳಿತಂತೀಮಾಡೆಂದಾಸತಿ | ಹರುಷದಿಮುಂದೆಕುಳ್ಳಿರಿಸಿ ||
ತರಿಸಿಯುತ್ತಮಪಂಚಭಕ್ಷ್ಯವನಿಕ್ಕಿಸ | ಲಿರದುಂಡುಮತ್ತೆಬೇಡಿದೊಡೆ ||೨೮||

ಎನಿತೆನಿತಶನವನಿಕ್ಕಿಸಲಂತದ | ನನಿತನಿತುಣುತಿರೆಕಂಡು ||
ವನಿತೆಯಿಂತೆಂದಳಿವಸುಸರವೇಷಪ | ನನುಕರಿಸಿದ ರಾಕ್ಷಸನು ||೨೯||

ಎನೆನೀನುಕೊಟ್ಟಶನವನೀನೆಕೊಳ್ಳೆಂ | ದೆನುತವೋಯೆಂದುವೋಕರಿಸೆ ||
ಮನೆಯಂಗಣವನಾಕಾರಿದಬಲುಗೂಳು | ಘನವಾಗಿತೀವಲುಕಂಡು ||೩೦||

ಅಲ್ಲಿಂದಾಸತ್ಯಭಾಮೆಗೃಹಕ್ಕೋಡ | ಲುಲ್ಲಸದಿಂದಾರೂಪ ||
ನಿಲ್ಲದೆಬಿಸುಟೋರ್ವಪನ್ನೊಂದನೆಯ ನೆಲೆ | ಯಲ್ಲಿಬಿಡದೆಯಾಚರಿಪ ||೩೧||

ಶಾಶ್ರವಕರೂಪವಧರಿಸಿರುಗ್ಮಿಣಿದೇವಿ | ಯಾವಾಸಕೆನಡೆತರಲು ||
ಭಾವಶುದ್ಧಿಯೊಳುಪ್ಪರಿಗೆಯಿಂದಿಳಿತಂ | ದಾವನದುಹದಳನೇತ್ರೆ ||೩೨||

ಸಾತಿಶಯದಭಕ್ತಿಯಿಂಮನಗೈದಿಸಿ | ವೀತರಾಗಾಸನವಿತ್ತು ||
ಪ್ರೀತಿಯಿಂದುತ್ತಮಮಪಾಹಾರವ | ನಾತಗೆಕೊಡೆದಣಿಯುಂಡು ||೩೩||

ದಕ್ಕಿಸಲಾರದೆಯಾಮುನಿಯಾಕೂಳ | ಕಕ್ಕಲುಕಂಡಾಸುದತಿ ||
ಧಿಕ್ಕನೆತನ್ನ ಕೈಯಿಂದಾತುಕೊಂಡುಬ | ಳಿಕ್ಕುರೆಮನದೊಳುಮರುಗಿ ||೩೪||

ಇವರದೇಹಕೆತಕ್ಕಲಘುವಪ್ಪನ್ನವ | ಹವಣನರಿತುನಾನುಕುಡದೆ ||
ಸವಿಯುಳ್ಳಭಕ್ಷ್ಯವನಿಕ್ಕಿದೆನಾನೆಂದು | ಯುವತೀವ-ಣೆಯಳಲುತಿರೆ ||೩೫||

ಆ ನಿಜಜನನಿರುಗ್ಮಿಣಿದೇವಿಯುದೊಂದ | ನೂನಗುಣಕೆಮಿಗೆಮೆಚ್ಚಿ ||
ಆನಾರದಸತನ್ನ ವಿದ್ಯೆಯಿಂಕರೆಯಿಸೆ | ಲಾನಭದಿಂವಿಳಿತರಲು ||೩೬||

ಆವನಕಂಡಾರುಗ್ಮಿಣಿದೇವಿಯುದಿರೇ | ಳ್ದವನತಿಯಾಗಿಯಾಸನವ ||
ಸುನಯದಿಂದಿತ್ತುಬಳಿಕಂದಳೆನ್ನಾತ್ಮ | ಭವನನರಸಿತಹೆನೆಂದು ||೩೭||

ಸುಮ್ಮನೆಬಂದಿರೆಂದಾಗದ್ದುದಕಂತೆ | ಯುಮ್ಮಳಿಸಿದೊಡಾರೂಪ ||
ಸುಮ್ಮಾನದಿಂದಬಿಸುಟುನಿಜರೂಪನು | ಕಮ್ಮಗಣೆಯತೋರಿದನು ||೩೮||

ಎಲೆದೇವಿನೀಸರಸುವನಿನ್ನ ಸುಕುಮಾತ | ಸಲರ್ವಿಲ್ಲನಿವನುನೋಡೆಂದು ||
ಉಲಿಯಲುನಾರದಸದಕೇಳಿಶಶಿಗಂಡ | ಜಲನಿಧಿಯಂತೆಬೆರ್ಚಿದಳು ||೩೯||

ಅತ್ಯಂತಭಕ್ತಿಯಿನುತ್ತಮರತ್ನದ | ಚೈತ್ಯಬಿಂಬಕಾಣ್ಕೆಯಿತ್ತು ||
ಸತ್ಯಭೂಷಣರುಗ್ಮಿಣಿಯಪಾಪಕೆಕೃತ | ಕೃತ್ಯನಿರದೆಯೆತಗಿದನ ||೪೦||

ತನ್ನ ಕಾಲುಗುರ್ವೆಳಗಿನೊಳುರತೀಶನ | ರನ್ನದಮಕುಟಮರೀಚಿ ||
ಭಿನ್ನವಿಲ್ಲದೆಕಲಸಲುಸದ್ಗುಣಸಂ | ಪನ್ನೆತಲೆಯಪಿಡಿದೆತ್ತಿ ||೪೧||

ಹರಸಿಬಳಿಕ್ಕತಿಹರುಷಾಂಬುವಿನಿಂ | ಸ್ಮರಕುಮಾರಕನದೇಹವನು ||
ಪಿರಿದಾಗಿಮಜ್ಜನಬೊಗಿಸಿಮತ್ತಮರ್ದಪ್ಪಿ | ತರುಣಿತೊಡೆಯಮೇಲರಿಸಿ ||೪೨||

ಗಲ್ಲನಹಿಡಿದುಮುದ್ದಿಸಿನೋಡುತಿರಲುಮ | ತ್ತಲ್ಲಿಂದಲಘುಪಪ್ಪರಕೆ ||
ಸಲ್ಲೀಲೆಯಿಂದಿಳಿದತಿಭಕ್ತಿಯೊಳಾ | ಫುಲ್ಲಶರನುಕುಳ್ಳಿರಲು ||೪೩||

ಆಸಮಯದೊಳಾಕೆಯೊಳಾನಾರದ | ನಾಸುಮನೋಮಾರ್ಗಣನ ||
ಓಸರಿಸಪೇತಂದಪವರಪನೆಲ್ಲವ | ನಾಸತಿಯೊಳುಪೇಳಿದನು ||೪೪||

ಬಳಿಕಿಂತೆಂದಳೆಲೇಮಗನೇನಿ | ನ್ನೆಳವಿಯಮುದ್ದಾಟವನು ||
ಎಳಸಿನೋಡುವಭಾಗ್ಯವೆನಗಿಲ್ಲವಾಯ್ತಂ | ದಳಲುತಿರಲುಕುಸುಮಾಸ್ತ್ರ ||೪೫||

ಬಾಲಕನಾಗಿನೆರೆವಪರಿಯಂತರ | ಬಾಲಕೇಳಿಯನೆಲ್ಲವನು ||
ಲೀಲಾನಿಧಿತೋರಲುಕಡುಹರುಷನ | ತಾಳಿರುಗ್ಮಿಣಿಸುಖಪುರಲು ||೪೬||

ಅನಿತರೊಳಾಸತ್ಯಭಾಮಾವಲ್ಲಭೆ | ಯನುಜರಿಯರುಬರ್ಪುದನು ||
ಮನಸಿಜಕಂಡಿವರಾರೆನೆಕೇಳ್ದಾ | ಜನನಿಯಿಂತೆಂದಾಡಿದಳು ||೪೭||

ಇಪರೆನ್ನ ಸೋಲದಮಂಡೆಯಕುರುಳನು | ತವಕದಿಬೀಳ್ವವರೆನಲು ||
ಅವರುಬಾರದಮುನ್ನಲಾಕಾಮನಾಪೂ | ಧವನರೂಪವನಿರದಾಂತು ||೪೮||

ಇರಲವರೈತಂದುಕೃತಕಗೋವಿಂದಗೆ | ಭರದಿಂದಕರಗಳಮುಗಿದು ||
ತರುಣಿರುಗ್ಮಿಣಿಗಿಂತೆಂದರೆಲೇದೇವಿ | ತುರಿಹದಿನೀವಂದುನುಡಿದ ||೪೯||

ನುಡಿವಳಿಯೊಳಗಾದಸೋಲವನೀಗೆ | ಮ್ಮೊಡತಿಬೇಡಿದಳೆಂದೆಂಬ ||
ನುಡಿಗೇಳಿಯಾಕೃತಕಾಂಬುಜನಾಭನು | ಕಡುಮುನಿಸಿಂದೇಳ್ದುಬಂದು ||೫೦||

ಅವರಳಕವಕೊಯ್ದವರಕೈಯೊಳುಕೊ | ಟ್ಟವರನುವೋಗ್ತಿನೀಮೆನಲು ||
ಅವರುಬಂದಾಸತ್ಯಭಾಮೆಯೊಡನೆಯಾ | ವಿವಧನನೆಲ್ಲವನುಸುರೆ ||೫೧||

ಉನ್ನತಮಪ್ಪಕೋಪದಿಹರಿಯೆಡೆಗೈದಿ | ಚೆನ್ನು ಮಾಡಿದೆಕಾರ್ಯವನು ||
ಮುನ್ನನಿನ್ನಯಮುಂದೆನುಡಿದಾಭಾಷೆಗೆ | ತನ್ನ ಕರುಳಬೇಡಿದೊಡೆ ||೫೨||

ಎನ್ನವರಳಕವಕೊಯ್ದುಬಳಿಕನೀ | ವೆನ್ನಬಳಿಗೆಕಳುಹುವುದು ||
ನನ್ನಿಯಿನಿವಗೆನಲಾಸುಡಿಯನುಕೇಳಿ | ಚೆನ್ನೆನಾನಲ್ಲಿರ್ದುದಿಲ್ಲ ||೫೩||

ಎನುತವಸ್ಮಯಮೂಸನನಾಗಿಹರಿತ | ನ್ನನುಚರರನುಕಳುಹಿದೊಡೆ ||
ಇನಿಸುವೇಗದೊಳೈದಿರುಗ್ಮಿಣಿದೇವಿಗೆ | ವಿನಯದಿಕರಗಳಮುಗಿದು ||೫೪||

ದೇವಿನಿಮ್ಮಕುರುಳನುಸತ್ಯಭಾಮೆಗೆ | ಈವುದೆಂಬಾನುಡಿಗೇಳಿ ||
ಭಾವಜಬಂದವರನುತಲೆಕೆಳಗಾಗಿ | ಯೋಪದೆಕಟ್ಟಿನೇರಿದನು ||೫೫||

ಅದನುಕೇಳಿಯಚ್ಯುತನತಿಕೋಪದಿ | ಕದನಕಠೋರಮಾನಸನು ||
ಅಧಟನಗ್ರಜಬಲರಾಮನಕಳುಹಲು | ಪದುಳದಿನಲ್ಲಿಗೈತರಲು ||೫೬||

ಕಂಡಿವನಾರುಜನನಿಯೆನಿಕಸುಪುಕೋ | ದಂಡಕೇಳರಿಗಜಘಟೆಗೆ ||
ಗಂಡುಸಿಂಗನುಮೆನಿಸುವಬಲದೇವನು | ದ್ದಂಡನಿನ್ನಾಪಿರಿಯಯ್ಯ ||೫೭||

ಎನೆಕೇಳಿಯೆಲೆತಾಯೆನಿನ್ನ ಮಗನದೊಂದು | ಘನತರವಹವಿಕ್ರಮವನು ||
ಮನದೆಗೊಂಡುನೋಡೆಂದುಸಿಂಗದಾಸನ | ನನುವಂಗಿತಳೆದೆದ್ದುಬಂದು ||೫೮||

ಬಲ್ಲಿದಬಲರಾಮನನುಂಗಿಕರಮೂಡ | ದಲ್ಲಿಗೆನಗೆದುಕುಳ್ಳಿರಲು ||
ನಿಲ್ಲದಚ್ಚರಿವಟ್ಟಪುರಪರಿಜನತತಿ | ಮೆಲ್ಲನುಲಿದುನೋಡುತಿರಲು ||೫೯||

ಅಮಜೆಹರ್ಮ್ಯದತುದಿಯಿಂದಾಬಲ | ರಾಮನನುಗುಳಿಯಲ್ಲಿಂದ ||
ಆಮನಸಿಜನಾರೂಪವನುಡಿಗಿಮ | ತ್ತಾತ್ಮಮಾತೃವೆಡೆಗೈದಲಿತ್ತ ||೬೦||

ಹರಿಕೇಳಿಪರಿದುಕೋಪವತಾಳಿನಡೆತರು | ತಿರಲಾಸಮಯದೊಳವನ ||
ವರಮಂತ್ರಿಗಳುಬಂದುಮುಂದೆಕೈಮುಗಿದುಭೂ | ವರಕೇಳೀಮೊಯದವನು ||೬೧||

ಸಾಮಾನ್ಯನಲ್ಲನಾತಪಲಂಪಟಬಲ | ರಾಮನನುಂಗಿಯುಗುಳ್ದ ||
ಭೀಮಾಕಾರದಸಿಂಗದಂತಾದು | ದ್ದಾಮಸತ್ತ್ವನುಮದರಿಂದ ||೬೨||

ಬಲವನೆಲ್ಲವಕೂಡಿಯಿದಿರೊಡ್ಡಿಯವನನಾ | ನಿಲಯದಿಂದಪೊರಮಡಿಸಿ ||
ಬಲುಹಾಗಿಬೆದರಿಸಿತಗುಳಬೀಕೆನಲಾ | ನಳಿನನಾಭನುಮೊಡಂಬಟ್ಟು ||೬೩||

ಬಲವಬರಿಸಿಕೌರವಭೀಮಪಾರ್ಥನು । ಕಲಿಭೀಷ್ಮರುಮೊದಲಾಗಿ ॥
ನಿಲಿತನ್ನೊಳುಕದನೋತ್ಸುಕನಾಕೃಷ್ಣ । ನಲೆನೆಲೆಯೊಳುಪೌಜನಿಕ್ಕಿ ॥೬೪॥
ದೂತತಕರೆದುರುಗ್ಮಿಣಿಯಮನಸೊಳಿ । ರ್ದಾತನಕರೆಯಮೆಂದೆನಲು ॥
ಆತುರದಿಂಬಂದುಕರೆಯಲುಕೇಳ್ದುಮ । ತ್ತಾತಾಯಬಳಿಯಿಂಬಂದು ॥೬೫॥
ವಿಾನಪತಾಕನಜ್ಯತನಸೇನೆಗೆಪ್ರತಿ । ಸೇನೆಯನಾವಿದ್ಯೆಯಿಂದ ॥
ತಾನಿಮ್ಮಡಿಯಾಗಿನಿರ್ಮಿಸಿಹೊಯಿಸಿದ । ನಾನಾತೆರದಪರೆಯನು ॥೬೬॥
ಮಾಯಾಬಲವಕಂಡಾಹರಿಕೈವೀಸ । ಲಾಯಾದವಬಲವೆಲ್ಲ ॥
ಛಾಯಾಯುದ್ಧಮಗೆಯ್ವಂದಿಮ । ತ್ತಾಯಾಸಬಡುತಿರಲಾಗ ॥೬೭॥
ಅತಿಕೋಪದಿಂವಿಷ್ಣುತನ್ನ ಬೆಂಗಡೆನಿಂ । ದತಿರಥರುಗಳನುಕಳುಹೆ ॥
ಅತನುಕುಮಾರನುರಗಪಾಶದಿಂದ । ಪ್ರತಿಮರಕಟ್ಟಲಂತದನು ॥೬೮॥
ಕಂಡಾಕೈಟಭರಿಪುಕೌರವರು । ದ್ದಂಡಪಾಂಡವರನುಕಳುಹೆ ॥
ಚಂಡಕೋಪದಿನವಶ್ಯಾರಲಿಕ್ಷ್ಮಕೋ । ದಂಡಕುವರವಿದ್ಯೆಯಿಂದ ॥೬೯॥
ಮರವಿಬ್ಬಂದದಿತಂಜಿಸಿನಿಲಿಸಲು । ಮುರವಿಪುವಂತದಕಂಡು ॥
ಪಿರಿದುಕೋಪದೊಳಿದಿರಾಗುವನಿತರೊಳು । ಭರದಿಂದಾನಾರದನು ॥೭೦॥
ಆಂಬರಮಂಡಲದಿಂದಿಳಿದುಪೀ । ತಾಂಬರನಿನ್ನ ಕುಮಾರ ॥
ಶಂಬರಮರ್ದನನಿವನತಂದೆನುನಾ । ನೆಂಬಲೇಸಿನಮಾತುಗೇಳಿ ॥೭೧॥
ಎಂತುತಂದಿರೆಸಲಾನಾರದನಾ । ದ್ಯಂತಮಾಗಿಪೇಳೆಕೇಳಿ ॥
ಸಂತಸದಿಂತಾಸೇನೆದರಭವಮು । ರಾಂತಕನಿಳಿತರುತಿರಲು ॥೭೨॥
ಆದನುಕಂಡಲರಾಬನಿದಿರಾಗಿನಡೆತಂ । ದೊದವಿದಭಯಭಕ್ತಿಯಿಂದ ॥
ಆಧರದೇವನಂಬುಜನಾಭನನಿಜ । ಪದಕೆಮುಡಿಯಮಡಗಿದನು ॥೭೩॥
ಇಂತೆರಗಿದನುಕುಮಾರಮಾರನನುಮು । ರಾಂತಕತಲೆವಿಡಿದೆತ್ತಿ ॥
ಸಂತಸದಿಂದಹರಸಿತನ್ನ ಮೈಯೊಡೆ । ವಂತೆಬಿಗಿದುತಳ್ಕೈಸಿ ॥೭೪॥
ಕಾಳಾಗರುಭೂಜಮನಮರ್ದಪ್ಪಿದ । ಮಾಲತಿಯೆಳೆಲತೆಯಂತೆ ॥
ನೀಲಾಗನತಳ್ಕೆಯೊಳುಪಸುವರ್ಣ್ಣದೈ । ಗೋಲನತನುವೊಪ್ಪಿದುದು ॥೭೫॥
ಇಂತಮರ್ದಪ್ಪಿಮುದಾಶ್ಯಗಳಿಂಶ್ರೀ । ಕಾಂತನೊಸೆದುಮೈದೊಳೆಯೆ ॥
ಕಂತುಕುಮಾರನುವಿದ್ಯಾಸೇನೆಯ । ಸಂತತಿಯನುಪರಿಹರಿಸಿ ॥೭೬॥

ಮೊದಲುಕೀಲಿಸಿದವೀರತಕೀಲಣೆಯಬಿಟ್ಟು | ಮುದದಿನಾರದನನುಮತದಿ ||
ಉದಧಿವಿಜಯುಮೊದಲಾದಹೆತ್ಯಯ್ಯರ್ಗೆ | ಸದುವಿನಯದೊಳರಗಿದನು ||೭೭||

ಉತ್ತಮರವರುಹರಸಿದಬಳಿಕವಿಷ್ಣು | ಚಿತ್ತಜನಸುಮಂದಿರಕೆ ||
ಎತ್ತರಮಪ್ಪವೈಭವದಿಂದತಿಮುದ | ವೆತ್ತುಕರೆದುತಂದನಾಗ ||೭೮||

ಕಂಠೀರವಾಸನದೊಳಗೆಕುಳ್ಳಿರಿಸಿವೈ | ಕುಂಠಸಲರಮಾರ್ಗಣಗೆ ||
ಕಂಠಿಕೆಯುಸುಯುವರಾಜಪದವಿಗೆಂದು | ಕಂಠದೊಳಗೆ ಕಟ್ಟಿದನು ||೭೯||

ಆಲಗ್ನದೊಳಗಾಸ್ಮರಗೆಕೌರವಭೂ | ಪಾಲನಣುಗೆಯುದಧಿಯನು ||
ಲೀಲೆಯಿಂದಮದುವೆಯಮಾಡಲೆಂದಾ | ವ್ಯಾಲಶಯನನುಜ್ಜುಜಗಿಸಲು ||೮೦||

ಸದುವಿನಯದೊಳುಕ್ಕೈಮುಗಿದಾಜನಕಗೆ | ಪದುಳದಿನುಡಿದನಿಂತೆಂದು ||
ಮೊದಲುನಾನಾವಿಜಯಾರ್ಧಗಿರಿಯತುತ್ತ | ತುದಿಯೊಳುಬಹುವಸ್ತುಗಳನು||೮೧||

ಸಾಧಿಪಸಮಯದೊಳಗೆವಶಮಾದಬಿ | ಜ್ಜಾದರರಾಜಕುವರಿಯ ||
ಆದಿವಿವಾಹವಳದೆಂದೊಡಾವಿಷ್ಣು | ವಾದೊಡವರಕರೆಸೆನಲು ||೮೨||

ಸ್ಮರಿಸಿವಿದ್ಯೆಯನುಬರಿಸಿಯಾಕಾಳಶಂ | ಬರವಜ್ರದಾಡಾದಿಗಳನು ||
ತರುಣೀಮಣಿರತಿಯನುಮುಂಪಡೆದಾ | ವುರುತರಮಪ್ಪವಸ್ತುವನು ||೮೩||

ತ್ವರಿತದಿಕರಸಿತತ್ಪುರದನಂದನದೊಳ | ಗಿರಿಸಿಯರುಪಲತಾಕ್ಷ್ಮಣದೊಳು ||
ಮುರರಿಪುವಿದಿರ್ಗೊಳುತಾದ್ವಾರಾವತಿ | ಗುರುವಿಭವದೊಳೆಯ್ದಿಸಿದನು ||೮೪||

ಅಸಮಾಸರೂಪವತಿಯನಾರತಿಯನು | ಕುಸುಮಾಸ್ತ್ರಗೆಮದುವೆಯನು ||
ಒಸಗೆಮರುಳುಗೊಂಡಂದದಿಮಾಡಿದ | ನೆಸಕದವೈಭವದಿಂದ ||೮೫||

ಸುತಿಸುವೆನೆಂದುಬಾಯ್ದೆರೆಯಲುವಾಚ | ಸ್ಪತಿಗೆಬಾರದೆಂದೆನಿಪ ||
ಅತಿರೂಪವತಿರತಿದೇವಿಯನಾವಿಷ್ಣು | ವತನುಗೆಮದುವೆಮಾಡಿದನು ||೮೬||

ತದನಂತರದೊಳುಕೌರವನೃಪಸುತೆ | ಯುದಧಿಯನತಿರೂಪವತಿಯ ||
ಸದಮಲಶಶಿಮಂಡಲನಿಭವದನೆಯ | ಮದನಗೆಮದುವೆಮಾಡಿದನು ||೮೭||

ಮತ್ತೀತೆರದಿಧರಾಧೀಶ್ವರರುತಂ | ದಿತ್ತವರಣುಗೆಯರುಗಳ ||
ಉತ್ತಮರೂಪವತಿಯರನೂರೇಣ್ಬರ | ಚಿತ್ತಜಕ್ಕೆಗೂಡಿದನು ||೮೮||

ಆದರಹಸಿತಾನನೆಯರೊಳಧಿಕವಿ | ನೋದದಿನಿಲಲಂಗಜನು ||
ವಾದವಿರುಗ್ಮಿಣಿದೇವಿತನಗೆಗೆಲು | ವಾದುದಕಾಕುಂತಳವನು ||೮೯||

ಅತ್ಯಾತುರದಿಂದತರಹೇಳಿತನ್ನ ಸು | ಭೃತ್ಯರಕಳುಹಲಂತವರು ||
ಸತ್ಯಭಾಮಾದೇವಿಯಬೇಡಿದೊಡವ | ಳತ್ಯಂತನಿಷ್ಠುರೆಯಾಗಿ ||೯೦||

ಅನ್ನಿಗನಂಬರರಾಜತನುಜನನು | ತನ್ನನಂದನನೆಂದುಬರಿಸಿ ||
ಉನ್ನತಿಕೆಯಮೆರೆದೊಡೆನಾನುಕೊಡುವೆನೆ | ನನ್ನ ಮಂಡೆಯಕುಂತಳವನು ||೯೧||

ಎನಲಾಮಾತನವರುವೋಗಿಪೇಳಲು | ವನಮಾಲಿಯಾನಾರದನ ||
ನನೆಗಣೆಯನಸುಪ್ರಪಂಚಮನೆಲ್ಲವ | ನಿನಿಸುಳಿಯದೆಪೇಳೆಂದು ||೯೨||

ಕಳುಹಲವನುಸತ್ಯಭಾಮಾದೇವಿಯ | ನಿಲಯಕೆವೋಗಿಕುಳ್ಳಿರ್ದು ||
ತುಳಿಲಾಳಾಮನಸಿಜನಪ್ರಪಂಚಮ | ತಿಳಿಯಪೇಳಿದನಿಂತೆಂದು ||೯೩||

ಈಮೇರುವಿನವೂರ್ವವಿದೇಹಕೆವೋಗಿ | ಶ್ರೀಮಂದರತೀರ್ಥಕರಿಗೆ ||
ಪ್ರೇಮದಿಂದೆರಗಿಮತ್ತಾಗಣಧರರಿಂ | ದಾಮಾರನಿರ್ಪತಾಣವನು ||೯೪||

ಮತ್ತಮವನಜನಾಮ್ಯಂತರದಿರವನು | ಬಿತ್ತರಮಾಗಿಕೇಳಿದೆನು ||
ವೃತ್ತಪಯೋಧರೆಯದನುಸುರುವೆನೇಕ | ಚಿತ್ತದಿಕೇಳುಪೇಳುವೆನು ||೯೫||

ಎನುತೀಭರತಾರ್ಯಾಖಂಡದಜನ | ವಿನುತಮಗಧದೇಶದೊಳು ||
ಘನಶೋಭೆವಡೆದಶಾಲಿಗ್ರಾಮವುಂಟಲ್ಲಿ | ವನಿತೆಯಗ್ನಿಲೆಯೆಂಬಳೊಡನೆ ||೯೬||

ಸೋಮಶರ್ಮನೆಂಬಪಾರ್ವನುಕೂಡಿಹ | ನಾಮಿಥುನದಗರ್ಭಕೊಗೆದ ||
ಪ್ರೇಮರಸುತರಗ್ನಿಭೂತಿಮಾರುತಭೂತಿ | ನಾಮದವರುನೆರೆಬೆಳೆದು ||೯೭||

ಇರಲೊಂದುಪಗಲಾಪುರದನಂದನಕೋರ್ವ | ವರಮುನಿಬರಲವರೊಡನೆ ||
ಉರುತರಮಪ್ಪವಿಥ್ಯಾಗಮಗರ್ವದಿ | ಭರದಿನವರುವಾದಮಾಡಿ ||೯೮||

ಅವರವಚೋವಜ್ರಪಾತದಿಂತಮ್ಮಾ | ಪವಿಧವಿದ್ಯಾಗರ್ವವೆಂಬ ||
ಅವನೀಧರಸುಚ್ಚುರಿಯಾಗಲಾಗಸಂ | ಭವಿಸಿದಕಡುಲಜ್ಜೆಯಿಂದ ||೯೯||

ಮುನಿಸಿಂದಕೂರಸಿಗೊಂಡಾಯಿರುಳೊಳು | ಮುನಿಯಕೊಲುವೆನೆಂದುಪೋಗೆ ||
ವನವರಕ್ಷಿಸುವಕನಕಯಕ್ಷನೆಂಬೋರ್ವ | ನಿನಿಸುಕೋಪದಿನೆಯ್ತಂದು ||೧೦೦||

ವಿವಿಧೋಪಸರ್ಗಮನೆಸಗುತಮಿರಲುಮ | ತ್ತವರದಕಾನದೆಬೆದರಿ ||
ನವಗೀವುದನುದಾನವನೆಂದತಾಮುನಿ | ಗವನತರಾಗಿಬಿದ್ದಿರಲು ||೧೦೧||

ನಿಮ್ಮಕುಮಾರ್ಗವಬಿಟ್ಟುಸದ್ಧರ್ಮವ | ನೆಮ್ಮಿದೊಡಲ್ಲದೆನಾನು ||
ನುಮ್ಮನೆಬಿಡೆನೆಂದಾಯಕ್ಷನುಸುರಲು | ಹಮ್ಮಸುಳಿದುಬೇಗದೊಳು ||೧೦೨||

ಆಯಕ್ಷನುಸುರ್ದಂತಾವಾವಕಭೂತಿ | ವಾಯುಭೂತಿಗಳುಸುವ್ರತವ ||
ಆಯತಿಯಿಂದಧರಿಸಿತಮ್ಮಾಲಯ | ಕೊಯ್ಯೂರದಿಂಬರಲಾಗ ||೧೦೩||

ಜನನೀಜನಕರಾವಾರತೆಯನುಕೇಳಿ | ತನುಜರಿರಾವೈದಿಕದ ||
ವಿನುತಮಾರ್ಗವಬಿಟ್ಟುಸವಣರಧರ್ಮವ | ನನುಕರಿಪುದುಮತವಲ್ಲ ||೧೦೪||

ಎಸುತನಿಗ್ರಹಿಸಿನುಡಿದನುಡಿಯನುವಿಾರಿ | ಜಿನಮಾರ್ಗದೊಳೋಸರಿಸದೆ ||
ಅನಲಭೂತಿಯುವಾಯುಭೂತಿಗಳನುದಿನ | ಮನದೆಗೊಂಡುನೆರೆನೆಗಳಿ ||೧೦೫||

ಅಧರ್ಮದಫಲದಿಂದವರಳಿದಾ | ಸೌಧರ್ಮಕಲ್ಪದೊಳೊಗೆದು ||
ಸಾಧಾರಣವಲ್ಲದಸುಖವುಂಡುಸ | ಮೂಧಿಮುಖದಿನೆಯ್ದಂದು ||೧೦೬||

ಇಲ್ಲಿಯಕೌಶಲವಿಷಯದಸಾಕೇತ | ದಲ್ಲಿಯರಿಂಜಯನೆಂಬ ||
ಬಲ್ಲಿದನೃಪನಿಹನವಸರಾಜಶ್ರೇಷ್ಠಿ | ಸಲ್ಲಲಿತನುಜಿನದಾಸ ||೧೦೭||

ಶ್ರೀವಪ್ಪೆಯೆಂಬಸುದತಿಗೂಡಿಸುಖಸಂಕ | ಥಾಪನೋದದೊಳಿರುತಿರಲು ||
ಆವಹ್ನಿಭೂತಿಯನಿಲಭೂತಿಚರದೇವ | ರಾವೈಶ್ಯವಿಘುನಕೆಜನಿಸೆ ||೧೦೮||

ಒಸೆದುಪೂರ್ಣಭದ್ರವಾಣಿಭದ್ರನುಮೆಂಬ | ಹೆಸರಿನವರುಕೊಡಲವರು ||
ವಿಸುಗುವಸತ್ಕಲೆಗೂಡಿಬೆಳೆದುಹೊಚ್ಚ | ಹೊಸಜವ್ವನವೇರಿದರು ||೧೦೯||

ಈಪರಿಯಿಂದಿರ್ದೊಂದುಪಗಲುಮ | ತ್ತಾಪುರವರದನಂದನಕೆ ||
ಪಾಪರಹಿತನೋರ್ವಮುನಿಬರಲಲ್ಲಿಯ | ಭೂಪನುತಮ್ಮಜನಕನು ||೧೧೦||

ಬಂದುಬಳಿಕಧರ್ಮಾಧರ್ಮವನುಮನ | ದಂದುಕೇಳಿದೀಕ್ಷೆಗೊಳಲು ||
ಅಂದಾಪೂರ್ಣಭದ್ರನುವಾಣಿಭದ್ರರು | ದಂದುಗವನುಪರಿಹರಿಸಿ ||೧೧೧||

ಉತ್ತಮದೀಕ್ಷೆಯಹಡೆದದರೊಳಗೇಕ | ಚಿತ್ತದಿನಡೆದುಮತ್ತಳಿದು ||
ಮೊತ್ತಮೊದಲಸಗ್ಗದೊಳುಜನಿಯಿಸಿಸಂ | ಪತ್ತಹಡೆದುಸುಖವುಂಡು ||೧೧೨||

ಮತ್ತಲ್ಲಿಯೇಕಸಮುದ್ರೋಪಮದಾಯು | ಒತ್ತುವನ್ನಬರಲ್ಲಿರ್ದು ||
ಸತ್ತುಬಂದೀಕುರುಧರಣೀಮಂಡಲ | ದುತ್ತಮಹಸ್ತಿನಪುರದ ||೧೧೩||

ಅಧಿಪತಿವಿಶ್ವಭೂಪಗೆಯಾಪಟ್ಟದ | ವಧುರೂಪವತಿಯೆಂಬವಳ್ಗೆ ||
ಮಧುಕೈಟಭರೆಂಬಸುತರಾಗಿಜನಿಯಿಸಿ | ಯಧಿಕಲಾವಣ್ಯವಹಡೆದು ||೧೧೪||

ಬೆಳೆದುಜವ್ವನವೇರಲಾವಿಶ್ವಭೂಪತಿ | ಬಳಿಕಮಕ್ಕಳಿಗೆರಾಜ್ಯವನು ||
ತಳುವದೆಕೊಟ್ಟುತ್ತಮಜಿನದೀಕ್ಷೆಯ | ತಳೆದೊಪ್ಪಿದನುಮತ್ತತ್ತ ||೧೧೫||

ಅಧಿರಾಜಯುವರಾಜಪದದೊಳುನಿಂದಾ | ಮಧುಕೈಟಭರಿರಲತ್ತ ||
ಮಧುರಾನಗರಿಯೊಳಗೆವೀರಸೇನನೆಂ | ಬಧಿಪನರಸುಗೆಯ್ಯುತಿಹನು ||೧೧೬||

ಆವೀರಸೇನನೃಪಾಲಕನಾಮಧು | ಭೂವನಿತಾವಲ್ಲಭನೊಳು ||
ತೀವಿದನೇಹದೊಳಿರ್ದುಚಂದ್ರಾಭೆಯೆಂ | ಬಾವನಿತೆಯಕೈಯಿಂದ ||೧೧೭||

ಘನತರಮಪ್ಪವಸ್ತ್ರವನುಪಸಾಯನ | ವನುಕೊಟ್ಟುಕಳುಹಿಮತ್ತವಳ ||
ಮಿನುಗುವಲಾವಣ್ಯವನೋಡಿಯಾಮಧು | ಜನನಾಥನವಳಿಗೆಸೋಲ್ತ ||೧೧೮||

ಅವಳನುಮನೆಯಿಂಪೊರಮಡಲೀಯದೆ | ಯವಿವೇಕಿನೆರೆಕೂಡಿರ್ಪ ||
ವಿಪತವರಿದುವೀರಸೇನನಾಮಧುಭೂ | ಧವನಿಂದತನ್ನವಲ್ಲಭೆಯ ||೧೧೯||

ತರಿಸಿಕೊಂಬುದಕೆಯಶಕ್ತನಾದುದರಿಂ | ಮರುಳಾಗಿಯಾಯಿಭವುತಕೆ ||
ಬರಲಲ್ಲಿಯಜನಮರಸಿಸಕೃತ್ಯಕೆ | ಪಿರಿದಾಗಿನಗುವುದಕೇಳಿ ||೧೨೦||

ಪರದಾರಹರಣದದುರ್ಯಶಕಂತಃ | ಕರಣದೊಳಾಮಧುನೃಪತಿ ||
ಪಿರಿದುಕೊಕ್ಕರಿಸುತಿರ್ದೊಂದುದಿನದೊಳಾ | ಪುರವರದುದ್ಯಾನವನಕೆ ||೧೨೧||

ವಿಮಲವಾಹನರೆಂಬಕೇವಲಿಗಳುಬರೆ | ಸಮತೆಯಿಂದಾಮಧುನೃಪತಿ ||
ಮಮತೆಯಿನಾತ್ಮೀಯಸುತಗೆರಾಜ್ಯವನಿತ್ತು | ರಮಣೀಯಮಪ್ಪದೀಕ್ಷೆಯನು೧೨೨|

ಅನುಜಾತನಾಕೈಟಭಗೂಡಿಧರಿಯಿಸಿ | ವನದೆಗೊಂಡದರೊಳುನಡೆದು ||
ತನುವನುಬಿಸುಟುಮಹಾಶುಕ್ರಕಲ್ಪದೊ | ಳನಿಮಿಷಪತಿಯಾದನಿತ್ತ ||೧೨೩||

ರುದ್ರಮಪ್ಪಾಯೋಗದೊಳುಕೈಟಭಯೋ | ಗೀಂದ್ರನೆಗಳಿಯಾದಿವದ ||
ಇಂದ್ರಗೆಭವಬದ್ಧಸ್ನೇಹದಿಂದಪ್ಪ | ತೀಂದ್ರನಾಗಿಜನಿಯಿಸಿದ ||೧೨೪||

ಉರುಮುದದಿಂದಪ್ಪತೀಂದ್ರವೆರಸಿಮಧು | ಚರದಿವಿಜಾಧೀಶ್ವರನು ||
ಎರಡೆಂಟುಸಾಗರೋಪಮದಾಯುತವೆವನ್ನ | ಸುರದೆಸುಖವನನುಭವಿಸಿ ||೧೨೫||

ಗೋವಿಂದಗೆರುಗ್ಮಿಣಿಗಾಮಧುಚರ | ದೇವೇಂದ್ರಸಲ್ಲಿಂಬಂದು ||
ತೀವಿದನವಲಾವಣ್ಯಸಾಯತನಪ್ಪ | ಪೂವಿಲ್ಲನಾಗಿಪುಟ್ಟಿದನು ||೧೨೬||

ಅತ್ತಲುವೀರಸೇನನುತನ್ನ ಸುದತಿಗೆ | ಚಿತ್ತವಿಟ್ಟುಮರಳಾಗಿ ||
ಸತ್ತುಭವಾಂಬುಧಿಯೊಳುತೊಳಲುತಮಿ | ರ್ದೆತ್ತಾನುಮುಪಶಮದಿಂದ ||೧೨೭||

ಹಡೆದುಮನುಷ್ಯಜನ್ಮವಪಂಚಾಗ್ನಿಯ | ನಡುವೆತಪಂಗೈದುಬಳಿಕ ||
ಮಡಿದುಧೂಮಕೇತುವೆಂಬಹೆಸರನಾಂತು | ವುಡುಲೋಕದೊಳುಸಂಜನಿಸಿ |೧೨೮|

ಮಾರುತಮಾರ್ಗದೊಳಗೆಬರುತಿರಲುಮ | ತ್ಕಾರುಗ್ಮಿಣಿಯಮಗ್ಗಲೊಳು ||
ಮಾರಕುಮಾರನಿರಲುಕಂಡಾಯೆಡೆ | ಭೋರನೆಸಡೆತರುತಿರ್ಪ ||೧೨೯||

ತನ್ನ ವಿಮಾನನಿಲಲುನೆಲಕಿಳಿದಾ | ಚೆನ್ನಿಗನನುಕಂಡುಬಳಿಕ ||
ಮುನ್ನಿನಹಗೆಯೆಂಬರಿದೆತ್ತಿಕೊಂಡೊ | ಯ್ದುನ್ನತಮಾದಡವಿಯೊಳು ||೧೩೦||

ಹಾಕಿವೋಗಲು ಕಾಳಶಂಬರಕೊಂಡೊಯ್ದು | ಸಾಕಲುಜವ್ವನವಡೆದ ||
ಆಕಾವಸಕಂಡಂದಿನ ಚಂದ್ರಾಭೆ | ಬೇಕಾದಭವದೊಳುತೊಳಲಿ ||೧೩೧||

ಕಾಳಶಂಬರಖಚರೇಶಗೆ ಕಾಂಚನ | ಮಾಲೆಯೆಂಬಾಸ್ಥಳಾಗಿ ||
ಆಲಲಿತಾಂಗಗಂದಿಸಬದ್ಧಮೋಹದಿ | ಮೇಲಿಕ್ಕಿ ಮರುಳಾದಳತ್ತ ||೧೩೨||

ಮತ್ತಾತ್ಕೈಟಭಚರದೇವನೀಪುರು | ಷೋತ್ತಮಗಾಸಗ್ಗದಿಂದ ||
ಸತ್ಕುಬಂದಿಂದಿಗಾರನೆಯತಿಂಗಳಿಗು | ತ್ಪತ್ತಿಯಾಗುವನೆಲೆಯಬಲೆ ||೧೩೩||

ಎನುತನಾರದನು ತಿಳಿಯಪೇಳಲಾಮಾತ | ಮನದೆಗೊಂಡಾಸತ್ಯಭಾಮೆ ||
ಅನಿತಪೊಳಗೆಯಳಕವನು ರುಗ್ಮಿಣಿದೇವಿ | ಯನುಜರರಿಗೆ ಕೊಳ್ಳಿಮೆನಲು ||೧೩೪||

ಇಂತೆಂದು ನುಡಿದರವರು ರುಗ್ಮಿಣಿದೇವಿ | ಕುಂತಳವನು ಬೇಡಿದೊಡೆ ||
ಅಂತರಸದೆ ಕೊಡಬಂದರೆ ಪಿಡಿಯದೆ | ಪಿಂಡಕೆತಿರುಗಿನೀವೆಂದು ||೧೩೫||

ನವಗಾಜ್ಞಾಪಿಸಿಕಳುಹಿದಳದರಿಂ | ಯುವತಿ ನಾವಿವನೊಲ್ಲೆವೆಂದು ||
ಅವರು ತಿರುಗಿಬಂದಾರುಗ್ಮಿಣಿಗಾ | ವಿವರವೆಲ್ಲವನುಸುರಿದರು ||೧೩೬||

ಅದನುಕೇಳಿ ರುಗ್ಮಿಣಿದೇವಿಯತಿಸೆ | ಮ್ಮದವಹಡೆದು ತನ್ನತನುಜ ||
ಮದನಕುಮಾರನಸುಕೃತದೊದವನೋಡಿ | ಪದುಳವಿರ್ದಳುಸುಖದೊಳಗೆ ||೧೩೭||

ತುಂಗವಿಕ್ರಮನಸುಹೃದ್ಭೂಭುಜಮಾ | ತಂಗಮೃಗಾಧೀಶ್ವರನು ||
ಮಂಗಲಗುಣಭೂಷಣನೊಪ್ಪಿದನಾ | ಶೃಂಗಾರರಸಪೂರಿತನು ||೧೩೮||

ಇದು ಜಿನಪದಸರಸಿಜ ಮದಮಧುಕರ | ಚದುರಮಂಗರಸ ರಚಿಸಿದ ||
ಮದನಾರಿ ಸೇಮಬಿನೇಶ ಸಂಗತಿಯೊಳ | ಗೊದವಿದಾಶ್ವಾಸವಿಪ್ಪತ್ತು ||೧೩೯||

ಇಪ್ಪತ್ತನೆಯ ಸಂಧಿ ಸಂಪೂರ್ಣಂ

೨೧. ಮದನವಿದರ್ಭೆಯರ ವಿವಾಹವರ್ಣನಾನಂದಿ.

———:o:———

ಅಂಗಜವಿಜಯಮುಕ್ಯಂಗನೆಯಧಿಪಭು | ಜಾಗೇಶವಂದಿತಜಚರಣ ||
ಮಂಗಲಮೂರ್ತಿನೇವಿಶನಪದಯುಗ | ಲಂಗಳಿಗೊಲಿದೆರಗುವೆನು ||೧||

ಇಂದಿಗಾರನೆಯತಿಂಗಳರಾತ್ರಿಗೆ ಸಗ್ಗ | ದಿಂದಂಗಜಕುಮಾರಕನ ||
ಪಿಂದಣಭವದನುಜಾತನುಬಂದು ಮು | ಕುಂದಗೆ ಮಗನಾಗುವನು ||೨||

ಎನುತನುಡಿದ ನಾರದನನುಡಿಯಕೇಳಿ | ಮನದೆಗೊಂಡು ಸತ್ಯಭಾಮೆ ||
ವನಜೋದರನಬಳಿಗೆ ಬಂದುತಾನಂ | ದಿನ ಸೂಳನು ಬೇಡಹಪೆದು ||೩||

ಮಗುಳಿಪುನೆಗೆಬರಲಂತದನರಿದಾ | ಮುಗುಳ್ನಗೆಯನುತನ್ನ ಕೈಯ ||
ಸೊಗಯಿಪ ಕಾಮಮುದ್ರಿಕೆಯನು ತಂದಾ | ಸುಗುಣೆ ಜಂಭಾವತಿಗೀಯೆ ||೪||

ಆದನವಳಂಗುಲಿಯೊಳಗಿಟ್ಟಾದಿನ | ವೊದಗುವಪರಿಯಂತರಿರ್ದು ||
ಮದವತಿ ಸತ್ಯಭಾಮೆಯದೊಂದುರೂಪವ | ಪದಪಿನಿಂದವೆಕ್ಕೈಕೊಂಡು ||೫||

ಆಂದಿನರಾತ್ರಿಯೊಳಗೆ ವೊದಲೇಗೋ | ವಿಂದನಸೊಳ್ಳೆಯ್ತಂದು ||
ಮಂದಗಮನೆನಿಲೆ ಸತ್ಯಭಾಮೆಯೆಶಪ್ಪ | ದೆಂದು ರತಿಯೊಳಿರಲಾಗ ||೬||

ಪಿರಿದುಸಿಂಗರದೊಟ್ಟು ಸತ್ಯಭಾಮಾದೇವಿ | ಭರದಿನೋಪನಸೂಳಿಗೆಂದು ||
ಇಳಿಕೆಯ್ದುರಂಜಿಸಿದುವುಕೋಮಲಾಂಗಿಯ | ಅಳಿಗುರುಳುಗಳನಿಕಾಯ ||೨೦೫||

ಎಸೆವಪರಂಜಿಯತಗಡಬಣ್ಣಿಗೆಯನು | ಮಿಸುಪಸಂಪಗೆಯಧಾತುವನು ||
ಪೊಸಪುಷ್ಯರಾಗರತ್ನದಕಡುರುಚಿಯನು | ಅಸಿಯಳಂಗವಹೋಲಿಸುವೆನು ||೨೦೬||

ಸರಸತಿಪಿಡಿದುಬಾಜಿಪಕಿನ್ನರಿಯೋ | ಸ್ಮರಧನುವನಜೇವೊಡೆಯೋ ||
ವರವನಸತಿಯದೀಸದಕೋಗಿಲೆಯೋ | ಗರುವೆಯುವಳನುನ್ನಿಡಿಯೋ ||೨೦೬||
ಅರಲಂಬನಡರ್ವಸೊಕ್ಕಾನೆಯನಡೆಯನು | ಅರಸಂಚೆಯಗಮನವನು ||
ಪರಿಪೂರ್ಣಪದ್ಮಮಂಡಲದನದ್ಗತಿಯನು | ಸರಿವಾಳ್ವೆನವಳಯಾಸವನು ||೨೦೭||
ಪಡೆಯೆಜವ್ವನಮನಪಳುಕಾವನಾಬಿದಿ | ಮೃಡಮುರಿಪುಗಳವೀಲೆ ||
ತೊಡರನಿಕ್ಕಿದನದುಂದಾಕೆಗೆರೂಪು | ಗೆಡೆಯಾಗಿಕಣ್ಗೊಪ್ಪಿದುದು ||೨೦೮||
ಅರಸಕೇಳವನಾಯುಧಶಾಲೆಯೊಳೊಂ | ದುರುತರಕಾಳದಂಡವನು ||
ಪಿರಿದುಗೆಲುವದಿವ್ಯಧನುವುದಮಿಸಿತದ | ನರಸುಮುದದಿಪೂಜೆಗೆಯ್ದು ||೨೦೯||
ಇರಲಲ್ಲಿಗವಧಿಬೋಧನುಮುನಿಪತಿಯೋರ್ವ | ಬರಲಾತಗೆಪೊಡಮಟ್ಟು ||
ಕರಪವುಗಿದುಕೇಳ್ದನೆನ್ನೀತನುಜೆಗೆ | ವರನಾಂಪನಾಗುವನೆಂದು ||೨೧೦||
ಎನಲಿಂತೆಂದರೆಲೇನೃಪವರನಿನ್ನ | ಮನೆಯೊಳೊಗೆದಕಾರ್ಮುಕವ ||
ಇನಿಸುವೇಗದೊಳೇರಿಸಿಗಗನದೊಳುತಿ | ರ್ಪನೆಭರದಿಂಭ್ರಮಿಯಿಸುವ ||೨೧೧||
ಜಂತ್ರದಜಲಚರವನುಭೂವರಶಳ | ತಂತ್ರಮೆಲ್ಲವುಪೊಗಳ್ವಂತೆ |
ಮಂತ್ರಾಸ್ತ್ರದಿಂಚೆಚ್ಚರ್ಜುನಸೇನಾ | ಸಂತ್ರಾಸಕನೆಪತಿಯಹನು ||೨೧೨||
ಎಂದುನುಡಿಯಲೀಕಾರ್ಯಧನಂಜಯ | ನಿಂದಲ್ಲಜೆಯಾಗದವಗೆ ||
ನಂದನೆನಲ್ಲಳಾಗುವಳಿದುನಿಶ್ಚಯ | ಮೆಂದಾನೃಪವರನಿರಲು ||೨೧೪||
ಲಾಕ್ಷಾಲಯಜೊಳಗಾವಾಂಡವರಾ | ಯಕ್ಷಯಮಾಡದವಾರ್ತೆಯನು ||
ಆಕ್ಷೆಪತಿಕೇಳಿದುಖಿಸಿಯೋರ್ವಮು | ಮುಕ್ಷುಗೆರೆಗಃತಿತುನುಡಿದ ||೨೧೫||
ದಿವ್ಯಾವಧಿಬೋಧನಕೇಳುಸಜ್ಜನ | ಸೇನ್ಯಮುವಾ ಪಾಂಡವರು ||
ಪವ್ಯಾವಾಸನನುನ ಡಲುಸತ್ಯವಾರ್ತೆತಾ | ನವ್ಯನಹಿತವಾದುದೀಗ ||೨೧೬||
ನಿರುತಪೊಯಾವಾರತೆಯೆನಲಾಮುನಿ | ಯೊರೆದನಿಂತೆಂದುಪಾಂಡವರು ||
ಚರವಾಂಗಡವರಿಗೆಕೇಡಿಲ್ಲಾ ಸ್ವಯಂ | ವರಮಂಟಪಕೊದಗುವರು ||೨೧೭||
ಜನನಾಥರೆಲ್ಲರರ್ದಂದದಿನಾಥ | ಲ್ಲನನಾಜಾತ್ರಮನೆಸುವ ||
ಮನುಜೇಶನಿನ್ನ ಮಗಳುದ್ರೌಪದಿಜ | ವನಿತೆಯಸ್ವಳನಲಬಿವೋಗು ||೨೧೮||
ಎನಲಾನೃಪವರನಾಸ್ವಯಂವರವನು | ಮನಗೊಂಡುಮಾಡಿಸಿಬಳಿಕ ||
ಮನುಜಾಧೀಶರಸೆಲ್ಲರನಲ್ಲಿಗೆ | ವಿನಯಮೊದವೆಕರೆಸಿದನು ||೨೧೯||

ಎಂದಾವಾರ್ತೆಯಸೂರೆದಾವಾರ್ವನ | ಸಂದಾಸ್ಯಪರುಬೀಳ್ಕೊಟ್ಟು ||
ಅಂದವಡೆದವಾಂಚಾಲನಪುರಕಾ | ಸಂದದಿನಡೆತಂದರಾಗ ||೨೨೦||

ಅಸಿತರೊಳಾಪಗಲಳಿಯಲಕ್ಕಾಮರು | ದಿನದುದಯದೊಳುಮುನ್ನೆದ ||
ಜನಪತಿಗಳನು ಸ್ವಯಂವರಕಾದ್ಯುಪ | ದನಸಜಿವರುಬರಿಸಿದರು ||೨೨೧||

ನಾನಾರತ್ನದಚೌಪಳಿಗೆಯೊಳಾ | ಭೂನಾಥರನುಕುಳ್ಳಿರಿಸಿ ||
ಮಾಸಿನಿಯನು ಸಿಂಗರಿಸಿಯೆಂದುಮ್ಮಪದಮು | ಹೀನಾಥನುನಿರಿಸಲು ||೨೨೨||

ಅತನನತಿದೃಢವಪೆತನ್ನಾತನು | ಜಾತೆಗೆಣ್ಣೆಯನೊತ್ತಿಸಿದಳು ||
ಪ್ರೀತಿಯಿಂದಂಗಭವನಪುಷ್ಪಬಾಣಕ್ಕೆ | ಪಿತುಜಾನಪಮುಕ್ಕುವಂತೆ ||೨೨೩||

ಸುರಲತಿಕೆಗೆನವವಿಪ್ರೋದಕವನು | ಸುರನಾರಿಯರೆರೆವಂತೆ ||
ಪುರುಷಮೊದವೆನುಜ್ಜನಂಬೊಗಿಸಿದರಾ | ಅರಮುಗಳ್ಗಾಕೆಳದಿಯರು ||೨೨೪||

ಪುಳಿನತಳವಬಳಸಿದನೀರತೆರೆಯಂತೆ | ಲಲನೆಯಗುರುಸಿತಂಬವೊಳು ||
ಕೆಳದಿಯರುಗಳುಟಸಿದಮುಗುಲದಸಿರಿ | ತೊಳತೊಳತೊಳಗಿದುಪಪಳ್ಗ ||೨೨೫||

ತೊಳಪಚಂದ್ರಸತುಡುಕಿದರಾಮುನಿಸಂತೆ | ಯುಲಘುಕಬರಿಯೊಪ್ಪಿದುದು ||
ನಳಿನನಸಳಿನೇರುದಂತೆಕಣ್ಗೆಸೆದುದು | ತಿಲಕವಮಳವದನದೊಳು ||೨೨೬||

ತಿಲಕಸುಮವಪೇರ್ದನೀರ್ಪನಿಯೆನೆಕ | ಣ್ಗೊಳಿಸಿತುನಾಸಾಭರಣ ||
ಲಲನೆನಿನ್ನೊಲೆಲೆಕೊಲೆಯಾಗಲಿಯೆಂದು | ಕುಲಶದೋಲೆಯನಿಟ್ಟರವಳ್ಗ |೨೨೭|
ಮನಸಿಜದೇವಾಭಿಷೇಕಕೆಕಲಶಾ | ರ್ಜನೆಯನುಮಾಡುವಂದದೊಳು ||
ಘನಕುಚದೊಳ್ನವಮೌಕ್ತಿಕಮಾಲೆಯ | ನನುಗೊಳಿಸಿದರಾಸತಿಗೆ ||೨೨೮||

ಮನಸಿಜರಾಜನಮಂತ್ರದೇವತೆಯೋ | ನನೆಗಣೆಯನಪಟ್ಟವಧುವೋ ||
ವನಜೋದರನಣುಗನಜಯಸತಿಯೋ | ಯೆನಿಸತಿಕಣ್ಗೊಳಿಸಿದಳು ||೨೨೯||

ಇಂತುಕೈಗೆಯ್ದೊಡನಾಡಿದಸಖಿಯರ | ಸಂತತಿತನ್ನೊಡನೆಯ್ದಿ ||
ಕಾಂತೆಯಂದಣವೇರಿಯಾಸ್ವಯಂವರಕತಿ | ಸಂತಸದಿಂದೆಯ್ದಿದಳು ||೨೩೦||

ಅಡಪಡಸಕೆಕುಂಚಕರಗಕನ್ನಡಿ ಕೌ | ಳುಡೆಪಾವುಗೆಗದ್ದುಗೆಯ ||
ಮಡದಿಯರೆಡಬಲವನು ಸುತ್ತಿಬರಲಾ | ಕಡುನೀರೆಸಡೆತಂದಳಾಗ ||೨೩೧||

ಬಟ್ಟದುಷುಂಜಿನಜೆಲ್ವಭಾಮಿನಿಯರು | ನಿಟ್ಟಿಸಳ್ಗಣ್ಣನೀರೆಯರು ||
ಇಟ್ಟಿಡೆಮೊಲೆಯೇರುಂಜವ್ವನೆಯರು | ಕಟ್ಟೊಲವಿಂದೆಯ್ದಿದರು ||೨೩೨||

ಮುಡಿಯುಟ್ಟು ವೈಗೆಮಲಯಜಾತಮನಿಟ್ಟು | ಮುಡಿಯೊಳು ಮಲ್ಲಿಗೆಯಿಟ್ಟು ||
ಪಿಡುವುತ್ತಿನತೋರಮಣಿಯತೊಡವನಿಟ್ಟು | ನಡೆದರಾಳಿಯುರಳವಟ್ಟು ||೨೩೩||

ಸ್ಮರವೀರಲಕ್ಷ್ಮಿಯಂದದಿಮಾಣಿಕಸತೊಟ್ಟು | ಸರಸಕುಂಕುಮವನಪ್ಪಿಟ್ಟು ||
ಅರುಣಾಂಬರವುಟ್ಟಡಿಗಲತಿಗೆಯಿಟ್ಟು | ಬರುತಿರ್ದರವರಡಿಯಿಟ್ಟು ||೨೩೪||

ತೊಟ್ಟನೀಲದಕಾಳ್ತಟ್ಟಿಯನಿರಿವಿಡಿ | ದುಟ್ಟುಕಸ್ತೂರಿಯತೀಡಿ ||
ನಟ್ಟಿರುಳ್ಪೆಣ್ಗಂದನೊಳು ಕೆಲಬರಡಿ | ಯಿಟ್ಟರಬಲೆಯೊಡಗೂಡಿ ||೨೩೫||

ಅಂಗಜನಜೈತ್ರಸುಪರಂಜಿಜೊಂಪೆಯ | ಭಂಗಿಯಪ್ಪೊಲಪ್ಪೊಂದೊಡಿಗೆಯ ||
ಶೃಂಗಾರದ ಹಳದಿಯಪಟ್ಟೆಯುಡಿಗೆಯು | ತ್ಪಂಗಕುಜೆಯರೆಯಿ ದರು ||೨೩೬||

ನಡೆವನಂದನದಂದದಿಪಸುರ್ವಟ್ಟಿಯ | ನುಡೆಯುಟ್ಟುನುರಕತಮಣಿಯ ||
ತೊಡವಿಟ್ಟ ಮುಂದಿದುಕತ್ತುರಿವೊಂಬಾಳೆಯ | ನಡೆದರಾಳಿಯುರಾಬಳಿಯ||೨೩೭||

ಬಗಸೆಗಂಗಳ ಬಡಸಡುವಿನಬಲೆಯರು | ನಗೆಗಣ್ಣನಾರಿಯರು ||
ಮುಗುಳುಮೊಲೆಯಮುದ್ದುಪೊಗದಮಾನಿನಿಯರು | ಮುಂಗಳುಮುಂದೆಯ್ದಿದರು

ತೊಳಗುವತುರ ಗೆಪೆಗಣ್ಣತರುಣಿಯರು | ಬಳಲುಮುಡಿಯಭಾಮಿನಿಯರು ||
ನಳನಳಿಸುವನಳಿತೋಳಜಪ್ಪೆನೆಯುರು | ಲಲನೆಯಮುಂದೆಯ್ದಿದರು ||೨೩೯||

ಕಡೆಗಣ್ಣಿಂದ ಕಾಮುಕರಬೀಳಲ್ವೊಯ್ದು | ನಡೆಯೊಳಂಚೆಯನುರೆಜರಿದು ||
ನುಡಿಯುರುಗಳ ಬಳಗವೆಯ್ತಂದುದು | ಕಡುನೀರೆಯಬಳಿವಿಡಿದು ||೨೪೦||

ಸೋರುಮುಡಿಯಸೋಗೆ ಮುಡಿಯಮುಗುಳ್ಮುಡಿ | ಯೋರೆವುಡಿಯಬಲ್ಮುಡಿಯ||
ತೋರಮುಡಿಯ ತೊಳಗುನಸಿರಿಮುಡಿಗಳ | ನಾರಿಯರೆಯ್ತಂದರಾಗ ||೨೪೧||

ನಗೆಗಣ್ಣನನೆಯಂಬುಗಣ್ಣ ತಾಮರೆಗಣ್ಣ | ಬಗಸೆಗಣ್ಣೆಳವಾಳೆಗಣ್ಣ ||
ಮಿಗವರಿಗಣ್ಣ ಮಿಾಟುಂಜವ್ವನೆಯರು | ಬಗೆಗೊಳುವಂತೆಯ್ದಿದರು ||೨೪೨||

ಬಣ್ಣದ ಟಿಯಬಾದುಗೆಯಲರ್ದುಟಿಯಾಲ | ಮಣ್ಣದುಟಿಯತೊಂಡೆದುಟಿಯ ||
ಸಣ್ಣಜೆಂದಳಿರುದುಟಿಯ ಹೆರೆದುಟಿಯೆಳೆ | ವೆಣ್ಣತಿಂತಿಣಿಬಂದುದಾಗ ||೨೪೩||

ಕುಂದಕುಟ್ಮಳರದಸಂಗಳನವಕುರು | ವಿಂದಮಾಣಿಕ್ಯದಂತಗಳ ||
ಅಂದವಪೆದವಾಡಿಮದುತಂಗಳ | ಸುಂದರಿಯರು ಬಂದರಾಗ ||೨೪೪||

ಮುಕುರಮುಖದ ಮುದ್ದುಮುಖದವಿರಾಜಿತ | ವಿಕಸಿತಾಂಭೋರುಹವುಖದ ||
ಅಕಲಂಕಚಂದ್ರಮುಖದ ಮುಗ್ಧಸತಿಯರ | ಸಿಕರವೆಯ್ದಿದುದವಳೊಡನೆ ||೨೪೫||

ಕಳಶಕುಚದ ಕಾಂಚನಕಂಚಾತಕು | ಟ್ಮಳಿತಕುಚದ ಕುಂಭಕುಚದ ||
ತೊಳಪಕರಂಡಕುಚದ ಕೋಮಲೆಯರು | ಲಲನೆಯಮುಂದೆಯ್ದಿದರು ||೨೪೬||

ಬಡನಡುವಿನಒಳ್ಳಿ ನಡುವಿನುಂಗುರವಿಡಿ | ನಡುವಿನಸಂದೇಹವಡೆದ ||
ನಡುವಿನಸಿಯು ನಡುವಿನಸಣ್ಣನಡುವಿನ | ಮಡದಿಯರೆಯ್ತಂದರಾಗ ||೨೪೭||

ಪೊಂಬಾಳೆಪೊಡೆಯ ಪೊಣ್ಮವಮೋಹನಮಲ್ಲ | ಗಂಭದೊಡೆಯನುಣ್ಡೊಡೆಯ ||
ಇಂಬುವಡೆವಮರಿಯಾನೆಗೈದೊಡೆಗಳ | ಬಿಂಬಾಧರೆಯರೆಯ್ದಿದರು ||೨೪೮||

ತಳಿರ್ವಜ್ಜಿಗಳ ತಾವರವಜ್ಜಿಗಳ ಕ | ಣ್ಗೊಳಿಪಲತಗೆವಜ್ಜಿಗಳ ||
ಪೊಳೆವಪವಳವಾವುಗೆವಜ್ಜಿಗಳನವ | ಲಲನೆಯರೆಯ್ತಂದರಾಗ ||೨೪೯||

ಪಂಚಶರನಸಿಟ್ಟಗಜಬರುತಿದೆ ಮುಂದೆ | ಸಂಚಲಚಿತ್ತರಲ್ಲಿಂದ ||
ವ ಂಚಿಕೆತೊಲಗಿಯೆಂದು ಬಿಡುಮುಗ್ಗಡಿಸುವ | ಕಂಚುಕಿಯರುಕಣ್ಗೆಸೆದರು ||೨೫೦||

ಈತೆರದಿಂದ ಸ್ವಯಂವರಸದನ | ಕ್ಕಾತರಳಾಕ್ಷಿಯೆಯ್ತರಲು ||
ಭೂತಳೇಶರುಮಪಸಗ್ರಹ ವಡೆದಂತೆ | ಯಾತನಮರೆದು ನೋಡಿದರು ||೨೫೧||

ಆಗಳವಳಿನ್ನ ಮರೆಯೊಳುಸಿಂದಾ | ಪೂಗೋಲ್ಗಳಿಂದ ಮನ್ಮಥನು ||
ಭೂಗಧಿನಾಥಕುವಾರಕರೆಲ್ಲರ | ಲಾಗುಗೆಡಿಸಿಪೇಳಲೆಚ್ಚ ||೨೫೨||

ಆಸಮಯದೊಳು ಪಾಂಡವರಮೆಲ್ಲನೆಬಂದು | ಭೂಸುರರೆಡೆಹೊಕ್ಕಿರಲು ||
ಭಾಸುರಮೂರ್ತಿಗಳವರಲಕ್ಷ್ಮಣಕೆ ಮ | ತ್ತಾಸಭೆಪಡೆದುದಚ್ಚರಿಯ ||೨೫೩||

ಆಲಲಿತಾಂಗರಿಂತಿರಲು ಸ್ವಯಂವರ | ಶಾಲೆಯೊಳರ್ಜನೆಗೆಯ್ದು ||
ಕಾಲದಂಡವುನೇಳಿಸುವಂದವಡೆದಾ | ಭೀಳಕೋದಂಡಮೊಪ್ಪಿದುದು ||೨೫೪||

ಅದರಮೇಗಡೆಜಂತ್ರದ ಝಷಮುರಲಾ | ಸುದತಿಯನೇಹದಕೆಳದಿ ||
ಚದುರೆಸುಂದರಿಯೆಂಬಳು ಪೆರಳೆತ್ತಿ ಸಂ | ಮದದಿನಿಂತೆಂದುನುಡಿದಳು ||೨೫೫||

ಇವನುಕೌರವನಿವನಂಗಾಧೀಶ್ವರ | ನಿವನುತೆಲುಗನಿವಮುಗಧ ||
ಇವನುಕನ್ನಡಿಗನಿವನುಕೇರಳನು ಮ | ತ್ತಿವನುಕೊಂಕಣನಿವತಿವುಳ ||೨೫೬||

ಇವನುಕಳಿಂಗನಿವನು ಮಾಳವನು ಮ | ತ್ತಿವನುಸಿಂಧುಜನಿವಗೌಳ ||
ಇವನುಕನ್ನೋಜಿಯಿವನು ಕಾಶ್ಮೀರ ಮ | ತ್ತಿವನುಸೌರಾಷ್ಟ್ರಾಧಿನಾಥ ||೨೫೭||

ಎನುತಕೌರವ ಮೊದಲಾದವಸೀಶರ | ಘನತರಮಪ್ಪಜೆಲ್ವಿಕೆಯ ||
ಅನುರಾಗದಿಂ ಪೇಳುತ್ತಿರಲಾನುಡಿ | ವನಿತೆಯಕಿವಿವೊಕ್ಕುದಿಲ್ಲ ||೨೫೮||

ಪಾರ್ಥನರೇಂದ್ರ ಚಂದ್ರಮನಸ್ಸ ಹೃದಯ | ಸ್ವಾರ್ಥಪ್ರಲ್ಲನೆ ಮತ್ಸ್ಯಳಿದ ||
ಪಾರ್ಥಿವರೆಸ್ಸ ಕಣ್ಬಗೆ ವೊಗರೇಸುಸೆ | ಮರ್ಥರಾದೊಡವೆನುತವಳು ||೨೫೯||

ಮನಜಗೆಗೊಂಡುನೋಡದೆ ತಲೆವಾಗಿರ | ಲನಿತರೊಳಗೆ ಪಡಿಯರರು ||
ಮನುಜೇಶರ್ಗೆಂದರೆಲೆ ಭೂಪರಿರಾ | ವನಿತೆ ಬೇಕಾದೊಡೆನಿಮಗೆ ||೨೬೦||

ಈನಭದೊಳು ನೆರೆತಿರ್ಪನೆತಿರುಗುವ | ಮಾನಮನುಗುವೆಡಗಣ್ಣ |
ಈನೀರನೆಳಲನೀಕ್ಷಿಸಿ ಯಿಂಧನುವಿಡಿ | ದಾನದೆಸುವುದೆನಲಾಗ ||೨೬೧||

ಜನುಡಿಗೇಳಿ ಕೆಲರುದುರುದುಂಬಿ ಮ | ಹೀನಾಥನಂದನರುಗಳು ||
ಸಾನಂದದಿನೆಗಳ್ದರುಗ್ರತೆಗಳ್ಚಿ | ಮಾನವಡಗಿತಿರುಗಿದರು ||೨೬೨||

ಅರೆಬರದನುಬಲವಂದುಜಾರಿದರುಮ | ತ್ತರೆಬರುವಷ್ಟಿಜಾರಿದರು ||
ಅರೆಬರುಪಿಡಿದುನೆಗಹಲಾರದಾದರು | ಪಿರಿದುಮಗುರ್ವಿಪಥನುವ ||೨೬೩||

ಅದನುಕಂಡಾಕರ್ಣವನಲ್ಲಿಂದೆಳ್ದ | ಪದವುಮಿಗಲುಬಲವಂದು ||
ಅಧಟಿಂದೆತ್ತಿಮಗುಳ್ದನಾಧನುವಿಗೆ | ಹೆದೆಯನೇರಿಸಲಳವಡದೆ ||೨೬೪||

ಪಿರಿದಾಗಿನಾಣ್ಚಿಕುಳ್ಳಿರ್ದರಸನಕಂ | ಡುರುಬಲಯುತನಿನಸುತನು ||
ಭರದಿಂದೆತ್ತಿಯಾಧನುವಿನಕೊಪ್ಪಿಗೆ | ತಿರುವನೇರಿಸಿನಿಂದುಬಳಿಕ ||೨೬೫||

ಆಧನುವನುತೂನಲ್ಕಾರವೆಯಂ | ಗಾಧೀಶತಿರುಗೆಲಜ್ಜೆಯೊಳು ||
ಭೂಧವದ್ರುಪದನೀಕ್ಷಿಸಿಯಾನ್ಯಪರೆಲ್ಲ | ಸಾಧಾರಣವೆಂದುಬಗೆದು ||೨೬೬||

ಭೂಸುರಸಭೆಯೊಳಗೀಬಿಲ್ಲನೆಶ್ಚವ | ಸಾಸಿಗರುಂಟಾದರೇಳಿ ||
ಓಸರಿಸದೆಯೆಂದುಸಾರಿಸಲದಕೇಳಿ | ಯಾಸಭೆಯಿಂತಾಡಿದುದು ||೨೬೭||

ಸತ್ರದಮನೆಯೊಳುಕುಳ್ಳಿರ್ದವಿಸ್ತೀರ್ಣ | ಪತ್ರಭಾಜನವಭೋಜನಕೆ ||
ಪಾತ್ರವಲ್ಲದೆಮತ್ಸ್ಯರಾಜಪುತ್ರಿಗೆ | ಪಾತ್ರವೆಬಡಬ್ರಾಹ್ಮಣರು ||೨೬೮||

ಸಣ್ಣಗಳಮೆಯೋಗರತೊಗರಿಯುತೋಯೆ | ಬೆಣ್ಣೆಗಾಸಿದತುಪ್ಪವೆರೆದು ||
ಅಣ್ಣಂದಿರುಣಬನ್ನಿಯೆಸಬೇಕಲ್ಲದೆ | ಹೆಣ್ಣಿಗೆಂದೆಮ್ಮಕರೆವರೆ ||೨೬೯||

ತುಯ್ಯಲುತುಪ್ಪವಬಡಿಸಿಬಳಿಕನಮ್ಮ | ಕೈಯಪರಿಯನೀಕ್ಷಿಸದೆ ||
ಅಯ್ಯಯ್ಯೋನಮಗುಸುರುವರೇಬಲು | ಗೈಯರಿಗಾಗದಬೆಸನ ||೨೭೦||

ಈತೆರದಿಂದುಸುರ್ವಾಬ್ರಾಹ್ಮಣರಾ | ಪಾತುಗೇಳಿನಸುನಗುತ ||
ನೀತಿನಿಪುಣಸಿರುಪಮಸತ್ಯನಿಧಿಯಮ | ಜಾತಸತಿಪ್ರೀತಿಯಿಂದ ||೨೭೧||

ಪೂರ್ವಿನಸನ್ನೆಯಿಂದೀಕ್ಷಿಸಲರಿದಾ | ದೋರ್ವಲಶಾಲಿಫಲ್ಗುನನು ||
ಪಾರ್ವರಸಭೆಯಿಂದಾರೂಪಿನೊಳೆ | ಳ್ದುರ್ವೀಶರೆಲ್ಲನೋಳ್ಪಂತೆ ||೨೭೨||

ಬಿಟ್ಟೆಸೆಗಂಟುಕಿವಿಯೊಳಿಟ್ಟಕುಂಡಲ | ಉಟ್ಟದೋತ್ರವುವುಳ್ಳಿಗಡ್ಡ ||
ಮುಟ್ಟಿಬೆರಲದರ್ಘ್ಯಯಿಂಕೃತಕದ್ವಿಜ | ನಿಟ್ಟಣಿಸಿದಸಭೆಯಿಂದ ||೨೭೩||

ಮೆಲ್ಲನೆಳ್ತಬಪ್ಪಾಗಲಲ್ಲಿರ್ದವ | ರೆಲ್ಲರವನಕಾಣುತವೆ ||
ಸಲ್ಲಳಿಯುಸಿದಯ್ಯಗಳೇನೀವೆಂದು | ಮೆಲ್ಲಸುಲಿವುತಿರ್ದರಿಂತು ||೨೭೪||

ಒಡ್ಡಿಸಿದಿಡ್ಡಲಿಗೆಯಮುಂದೆಕುಳ್ಳಿರ್ದು | ಗಡ್ಡಮಿಾಸೆಯನೀವಿಕೊಳುತ ||
ಅಡ್ಡಾಡಿಕಿಲ್ಲದುಂಬುಪಕಾರ್ಯವಬಿಟ್ಟು | ದೊಡ್ಡಕಾರ್ಯವನೆಸೆಸಿದಿರಿ ||೨೭೫||

ಸುತ್ತಿದಮೈಯಯಜ್ಞೋಪವೀತದಗಂಟು | ಪೊತ್ತಿಹರಿವಸೂಕ್ಷ್ಮೆಯೊಳು ||
ತುತ್ತನೆತ್ತಲುಬಲ್ಲಕೈಯಲಬಾಜಿಲ್ಲ | ನೆತ್ತಲೇಳ್ವುದುಹಸನಾಯ್ತು ||೨೭೬||

ಭೂರಿಭೋಜನದಬ್ರಾಹ್ಮಣುಮಟ್ಟಿಗೊಂಬಂ | ತಾರೋಗಣೆಯಮಾಳ್ಪದನು ||
ದೂರೀಕೃತಮಾಡಿಯೊನೃಪತಸುಜೆಗೆ | ಹಾರೈಸುವುದೊಳ್ಳಿತಾಯ್ತು ||೨೭೭||

ನಾರಿಗೆಮೋಹಿಸಿಯಾಬಲ್ಲಕೊಪ್ಪಿಗೆ | ನಾರಿಯನಿಟ್ಟುಜಂತ್ರವನು ||
ನಾರಾಚದಿನೆಸಲೆಂಬೀಕಜ್ಜನಿ | ನ್ನಾರೊಳುಸಂಭಮಿಸುವುದು ||೨೭೮||

ಹೊಟ್ಟೆಹರಿವತೆರದಿಂದುಂಬೂಟನ | ಬಿಟ್ಟಾಬಿಂಜಾಧರೆಯ ||
ನಟ್ಟನೊಲಿಸಿಕೊಂಬೆನೆಂದೇಳುವಖೂಳ | ದಿಟ್ಟನೀನಲ್ಲದಿನ್ನಾರು ||೨೭೯||

ಎಂದಾನೋಟಕಜನಮುಲಯುತ್ತಿರ | ಲಂದಾವೀರಕಿರೀಟಿ ||
ಕಂದರ್ಪನೆವಟುವೇಷವನೆರೆತಾ | ಳ್ದಂದದಿನಡೆತಂದನಾಗ ||೨೮೦||

ಈರೀತಿಯೊಳುಬಂದಾದಿವ್ಯಚಾಪನ | ನೇರಂಡದಂಡವಿಡಿದು ||
ಆರೈಯದೆತ್ತುವಂದದಿನೆತ್ತಿಗೊಲೆಯಿತ್ತು | ನಾರಾಚವನಲ್ಲಿಹೂಡಿ ||೨೮೧||

ಕೌರವಕರ್ಣದುಶ್ಶಾಸನರಾದಿಯ | ಭೂರಮಣರಜೋದ್ಯವಜೆಯೆ ||
ನೀರನೆಳಲಸೋಡಿಯಾಜಾತ್ರದಮಿಾನ | ನಾರಣರಂಗರಸಿಕನು ||೨೮೨||

ಎಡದಕಡೆಯಕಣ್ಣಸಟ್ಟನಡುವೆಯುಂಬು | ನಡುವಂದದಿನೆಜ್ಜೆಮಗುಳ್ದು ||
ನಡೆತಂದಾಪಾರ್ವರೆಡೆಯಿರ್ದಗ್ರಜ | ನಡಿಗೆಸಮಿಸಿಕುಳ್ಳಿರಲು ||೨೮೩||

ಬ್ರಹ್ಮದೇವರುಬಾಲೆಗೆಬಗೆಯಿತಾ | ಬ್ರಹ್ಮಲೋಕನಿನಿಳಿತಂದು ||
ಬ್ರಹ್ಮಚಾರಿವೇಷವನಾನಬೊಡೀ | ಬ್ರಾಹ್ಮಣಗೀಜೆಲುವುಂಟೆ ||೨೮೪||

ಎನುತೆಲ್ಲರುನಿಂಗೆ ಕೊಂಡಾಡಿತಿರಲಲ್ಲಿ | ಜನತಾಧಿಪನಿಕುರುಂಬ ||
ಮನದೊಳುನೆರೆನಾಣ್ಚುಪತಿರದಿಂದಾ | ವನಿತಾಮಣಿನಡೆತಂದು ||೨೮೫||

ಬಿಲ್ಲಿದನಾಪಾರ್ಥನಾಸಭೆಯೊಳುತನ್ನ | ಬಿಲ್ಲಬಿನ್ನಣವತೋರಿದೊಡೆ ||
ಪುಲ್ಲಾಕ್ಷಿಯೊಳಾಪುಲ್ಲಶರನುತನ್ನ | ಬಿಲ್ಲಬಿನ್ನಣತೋರಿದನು ||೨೮೬||

ನನೆಯುಸರಕ್ಕೆತನ್ನಯತಸಮನವನು | ವನಿತಾಮಣಿಮಾರುಗೊಟ್ಟು ||
ಮನುಜಮುಂದಾರಮಧ್ಯಮಪಾಂಡವನಬಳಿ | ಗನುನಯುಟಿಂಸಡೆತರಲು ||೨೮೭||

ರತಿಭಾವತಿರಂಭೆಗೆಣೆಯುರಮಣಿಯನು | ಸತಿಯುರಕುಲಕೆರತ್ನವನು ||
ಪತಿಶಯವಡೆದಮೋಹನಪುತ್ರಿಕೆಯನು | ಮತಿಯಿತ್ತುನಡೆನೋಡಿದನು ||೨೮೮||

ಆಕೆಯುನಂಗಮಂಜಿಯಮತಾಕೆಯು | ನಾಕಾಪಲಯಲೋಚನೆಯು ||
ಲೋಕಾರ್ಚ್ಯರ್ಯವಿಲಾಸಾಸ್ತಿತಿಯನಂ | ದಾಕಂತುನಿಭನೋಡಿದನು ||೨೮೯||

ಇಂತುನೋಡುವನರನಾಥಚಾಪ್ಯನನಾ | ಕಾಂತಾಮಣಿತನ್ನತನುವ ||
ಕಾಂತುಕಣಿಗೆಗುರಿಮಾಡಿತುರುಗಿದೆವೆ | ನುಂತೆಗೆಯುವೆನೋಡಿದಳು ||೨೯೦||

ಮತ್ತಾಸೀರೆಕಣ್ಮನದೊಳಪನರೂಪ | ನೆತ್ತಿಕೊಂಡಾಬಲುಹೊರೆಯ ||
ಹೊತ್ತುನಿತ್ತುನಿಸಲಾರದೆನಡೆಪಂದದಿ | ಮೆತ್ತಮೆತ್ತನೆನಡೆತಂದು ||೨೯೧||

ಅಂಗಜನೋಹನಶರನಾಸತಿತನ್ನ | ಮುಂಗೈಗವನಕೊರಳ್ಗೆ ||
ಸಂಗೊಳಿಸುವಮಾಳ್ಕೆಯೊಳುಮಾಲೆಯನುನು | ನಂಗೊಳಿಸೂಡಿದಳಾಗ ||೨೯೨||

ಮುಖ್ಯಮಪಾಂಡವನಾಬಿಲ್ಲನಾಸಿಹ್ಮ | ಮುಖ್ಯಯರೂಪಪಕ್ರಮದಿ ||
ಸಾಖ್ಯವಮಾಡಲುಳಿದನೃಪತಿಕಿಲ | ಜ್ಞಾಧ್ಯಾನದೊಳಿರ್ದಾಗ ||೨೯೩||

ಒಸಗೆವರೆಗಳಣ್ಮಿದ್ರುಪದನಾಗಳೆಮನ | ಮೊಸೆದವನೆಡೆಗೆಯ್ತಂದು ||
ಅಸಮಾನಸತ್ವಕಿರೀಟಿಯುಕಂಡುಸಂ | ತಸಗಡಲೊಳಗಾಳಿದನು ||೨೯೪||

ಭಾವಿಸಿಧರ್ಮಜಭೀಮನಕುಲಸಹ | ದೇವರೆಂಬುದನುರೆತಿಳಿದು ||
ಓವದೆಯುವರವರಿಗೆತಕ್ಕವಿನಯುವ | ನಾವಸುಧಾಪತಿಮಾಡಿ ||೨೯೫||

ಆಪಾಂಡವರತಾಯಿಕೊಂತಿಯತನ್ನಾತ್ಮ | ಭವೆಪೆಣ್ಮಣಿದ್ರೌಪದಿಯನು ||
ಸವಿನಯದಿಂತೀರೀರಿಸಿನಗರಿಗೆ | ತವಕದಿಕೊಂಡೊಯ್ವಾಗ ||೨೯೬||

ಅನಿರೆನೆರೆದವನಿಪರಿರೆಬಡವಾರ್ವ | ಗಾನಾರಿಯನಾದ್ರುಪದ ||
ತಾನೀಯಬಹುದೆಯೆನುತಕೌರವಧರ | ಣೀನಾಥನುರುಕೋಪದಿಂದ ||೨೯೭||

ಸಮರಸನನ್ನಾ ಹಭೇರಿಯುದನಿಗೆಯ್ಸಿತ | ನ್ನ ಮಿತಸೇನೆಯಕೂಡಲಾಗ ||
ಕ್ರಮವಿದಲ್ಲವೆನ್ನ ದೆನೆರೆದಿರ್ದಭೂ | ರಮಣರೆಲ್ಲರುಕೂಡಿದರು ||೨೯೮||

ಪ್ರಳಯವಾರಿಧಿಯುಂತೆಸಡೆತಪ್ಪಾಬಹು | ಬಲವಕಂಡಾವೂರಹೊಗುವ ||
ಒಲಯುತವಾಂಡವರಾದ್ರುಪದನುತಮ್ಮ | ಪೊಳಲಪೊಗದೆತಿರುಗಿದ ||೨೯೯||

ಅನರನಾಭೀಮಸೇನನಿರಜಿಧರ್ಮ | ಸೂನುಸಕು ಸಹದೇನ ||
ಭೂನುತದ್ರುಪದನೃಷ್ಟದ್ಯುಮ್ನರನುಮ | ತ್ತಾನಗರಿಯಮುಂದಿರಿಸಿ ||೩೦೦||

ತೀರನದಿರದೇರಿಗಾಂಡೀಪವನುಸರ | ನಾರಾಧಿರೋದ್ಗಾರಿಯನು ||
ಮಾರುತಿಪಿಡಿದುಕೌರವಬಲಜಲಧಿಯ | ನಾರಯ್ಯುದೆಹೊಕ್ಕುಬಳಿಕ ||೩೦೧||

ಹೆಸರುಕುರುಹನರಿಯಲುಬಾರದಂತಾ | ಅಸಮಬಲವನೆಲ್ಲವನು ||
ಮಸಗಿಕೊಲುತ್ತಿರಲಾಸೇನೆಸಮಗಿದು | ಸುಸರಮಲ್ಲೆಂದೋಡುತಿರಲು ||೩೦೨||

ಸುದತಿಯಬಯಸಿಬಂದಣ್ಣಂದಿರೊಳಗೆಮ | ಗಿದಿರಾಗುವನಿಲ್ಲೆಂದು ||
ಅಧಟರವರುಕೈದುಗೊಳ್ಳದೆನಿಂದಿರ | ಲದಸುಬೆದರಿಕಾಲ್ಪೆಗೆವ ||೩೦೩||

ಆಕುರುಸೇನೆಯನಾಯಕರುಗಳುಮ | ತ್ತಾಕಲಿಗಳವೊಗನೋಡಿ ||
ಏಕಾಂಗವೀರರವರುಭೀಮಸರನಾಗ | ಬೇಕೆಂದುಪಿರಿದುನಿಶ್ಚಯಿಸಿ ||೩೦೪||

ಪರತಂದಾಕೌರವಭೀಷ್ಮರಾಬಿಲ್ಲ | ಗುರುವಿದುರ್ಕಳೊಳೊರೆಯೆ||
ನಿರುತಸೊಯಿ ದುವುಸಿಂಹೋಯೆಂದುಸುವಿನೇಕ | ಚರರಕಳುಹಲವರರಿದು ||೩೦೫||

ತಿರುಗಿಬಂದವರುಕೌಂತೇಯರೆಂಬುದಸವ | ರೊಟೆಯಲೊಡನೆಭೀಷ್ಮವಿದುರ ||
ಗುರುಕೃಪರೆಯ್ತರೆವಾಂಡವರವರಕಂ | ಡುರುಭಕ್ತಿಯಿಂಸತರಾಗೆ ||೩೦೬||

ಮುರಳಿಮುರಳಿಹರಕೆಯುನಿತ್ತುಮತಾ | ದರದಿಭೀಷ್ಮರುಧರ್ಮಸುತಗೆ ||
ಒರೆದರುನೀವೆಂತುಜೀವಿಸಿಪೋದಿರಿ | ಯುರಗಿನಕರವಾಡದಿಂದ ||೩೦೭||

ಎಂದುನುಡಿಯೆಜತುಗೃಹದಿದೈವಾಧೀನ | ದಿಂದನಾವುಪೊರಮಟ್ಟ ||
ಒಂದೆವೆನುತತಮಗಾದತೆರನನಾ | ತಂದೆಗೆಬಿನ್ನವಿಸಿದನು ||೩೦೮||

ಮಗನೆಸದೈವರಕೆಡಿಸಲಾರ್ಪರೆಪ | ನ್ನಗನರದಸುಜಾಮರರು ||
ಜಗತೀತಳದೊಳೆನುತನುಡಿಯಲ್ಯಾ | ನುಗಣಿಧರ್ಮಜನಾನುತಿಯ ||೩೦೯||

ಅವಧಾರಿಸಿಕೈಮುಗಿದೆಂದನಾಕೌ | ರವನಿಂನಮಗೆಯಪಾಯ ||
ಸವನಿಸಿತಿಲ್ಲಭಾವಿಸಲುಮತ್ತಾಬಾಧೆ | ನವಗೆಕರ್ತಾಯತಮೆನಲು ||೩೧೦||

ತನುಜನಿನ್ನಯಸಮತೆಯನಂತುಟಿಂತಟಿಂ | ದೆನಬಹುದೇಯದರಿಂದ ||
ಮನದೆಗೊಂಡೆನ್ನನುಡಿಯನಪಥಾರಿಪ್ಪ | ದೆನಲುಧರ್ಮಜನಿಂತುನುಡಿದ ||೩೧೧||

ಗುರುವಚನವನುಲ್ಲಂಘಿಸುನೆನೆಯೆಂ | ದುತುಭಕ್ತಿಯಿಂಕೈಕೊಳಲು ||
ಸುರಸಿಂಧುಜನೆಂದನುನಿಮ್ಮರಾಜ್ಯದೊ | ಳಿರಿಯೆ ಂನೊಡೊಡಬಟ್ಟರವರು ||೩೧೨||

ಮತ್ಸ್ಯವರಲ್ಲಿಂದತಿರುಗಿಬಂದಾವಿಕ್ಕ | ; ಪೋತ್ತಂಸರವೃತ್ತಕವನು ||
ಪತ್ತ್ರರಮಾಗಿನುಡಿಯೆಕುರುಭೂಪತಿ | ಗೊತ್ತರವೊತ್ತಿದಂತಾಗೆ ||೩೧೩||

ಅವೇಳೆಯೊಳುಕರ್ಣನಾಭೀಷ್ಮರಾಪ್ತಾಂಡು | ಭೂವರರೇಳ್ಗೆಯವ್ಮಾತ ||
ಓವದೆನುಡಿಯಲಂತದಕೇಳಿಮನಮೊಳು | ತೀವಿದಕಡುಮುನಿಸಿಂದ ||೩೧೪||

ಇಂತೆಂದನೆಲೆಯಜ್ಞಾಪಾಂಡುನಂದನ | ರ್ಗೆಂತಾನುವೀರವೊದವಲು ||
ಅಂತಕಸದೃಶಪರಾಕ್ರಮಿಕುರುಭೂ | ಕಾಂತನೆವಾಸಟಿಯುಹರೆ ||೩೧೫||

ಏಕಾಂಗವೀರರೆನಿಪನಾಯಕರುಮ | ನೇಕರಿವಸಸೇನೆಗುಂಟು ||
ಲೋಕೈಕವೀರನಿವನುಕುಧುಭೂವರ | ಗಾಕೌಂತೇಯರುಳರಿಯೆ ||೩೧೬||

ಎಂದುಕತೋರವಜಸವನುಡಿದರವಿ | ನಂದನಗಾಬಾಂದೊರೆಯು ||
ಕಂದನಿಂತೆಂದನು ಸೋದರರೊಳುತನ್ನ | ದೊಂದುನತ್ತ್ವತೋರುವುದು ||೩೧೭||

ಅರಸುತನದನೀತಿಯಲ್ಲಮವನನೀ | ಧರೆಕೊಪದಂತದರಿಂದ ||
ಅರೆನಾಡನಾಪಾಂಡವರ್ಗತ್ತುಬಾಳ್ವುದು | ನಿರುತವೆಂದಿವೊದಲಾದ ||೩೧೮||

ನಾನಾತೆರನೊಡಂಬಡಿಕೆಗಳಿಪಮ | ಹೀನಾಥನನೊಡಂಬಡಿಸಿ ||
ಸಾನಂದವಿಂಪೆಯ್ದಿಸಿದನಪಸನುಮ | ತಾನಾಗನಗರೀವರಕೆ ||೩೧೯||

ಆಗುರುಮೊದಲಾದಮಿತ್ರವರ್ಗವನುಸ | ರಾಗದಿಂದನೆಕೂಡಿಕೊಂಡು ||
ಆಗಂಡುಗಲಿಗಳುಜೆರಸಿದ್ರುಪದಪುರ | ಕಾಗಾಂಗೇಯನೆಯ್ದಿದನು ||೩೨೦||

ಬಳಿಕವನಂಜಯುಗಾವೌ್ರಪಿಯಕ | ನ್ಯೊಳಿಪಂತೆನುಡುವೆಯುಮಾಡಿ ||
ಬಳುವಳಿಯುನುದ್ರುಪದನುಕೊಡಲಲ್ಲಿಂದ | ತಳುವದೆಪೊರಮಟ್ಟರಾಗ ||೩೨೧||

ಅಪಾಂಚಾಲಪತಿಯುಜೀಳ್ಕೊಂಡುನು | ತ್ತಾಪಾಂಡವರುಸಮೇತ ||
ಅಪುರದಿಂದಮರೇಂದ್ರವೈಭವದಿಗಂ | ಗಾಪುತ್ರನುನಡೆತಂದು ||೩೨೨||

ಸೊಗಯಿಸುವಿದ್ರುಪ್ರಸ್ಥವೆಸರಮೊಂದು | ನಗರಿಗೆಸುಫಲಗ್ನದೊಳು ||
ಹೊಗಿಸಿದೂತರನಟ್ಟಿಕೌರವನುಮರು | ವಗಲಿಗಲ್ಲಿಗೆಕರೆಸುತವೆ ||೩೨೩||

ಅಂತಕಸುತಗಾರರಾಜ್ಯಪಟ್ಟವಕಟ್ಟಿ | ಯಂತವರಾವುರದಿಂದ ||
ಸಂತಸದೊಳುಪೊರಮಟ್ಟುಹಸ್ತಿನಪುರ | ವಂತವಕದಿಪೊಕ್ಕರಾಗ ||೩೨೪||

ಅಧರ್ಮನಂದನನಸುಪಮಸಕಲಕ | ಲಾಧರನವಶಾಂತಮೂರ್ತಿ ||
ಆಧರಣಿಯನೇಕಚಟ್ಟತ್ರದಿಂದಮ | ಗಾಧಸದ್ಗುಣಿರಕ್ಷಿಸುತ ||೩೨೫||

ಮೊದಲುಸುದುವೆಯಾದಧಾನ್ಯರಾಜನಸುತೆ | ಸದಮಲಶತಿನಿಭವದನೆ ||
ಚದುರೆಕುಸುಮಪಾಲೆಯಕರೆಸಿದನುರು | ಮುದದಿಂದನಳತಂದೆಸಹಿತ ||೩೨೬||

ಬಳಿಕವಿಂಧ್ಯಕನಾಚಂಡವಾಹನಸುತ | ಡಳಿಕರುತಪಾತ್ಮಜೆಯರು ||
ಲಲಿತಲತಾಂಗಿಯರಸುತಂದುಶುಭಲಗ್ನ | ದೊಳಗಾಪದಿಮೂರ್ವರನು ||೩೨೭||

ಉತ್ತಮಲಗ್ನದೊಳತಿವಿಭವದಿಂದೂ | ಪೋತ್ತಂಸನಧರ್ಮನಂದನಗೆ ||
ಇತ್ತುಬಳಿಕನಿಗೆಸಂತಸದಿಂತನ್ಮ | ಪತ್ತನಕ್ಕೆದಿದರಿತ್ತ ||೩೨೮||

ಕುಸುಮಪಾಲೆಗೆಯುಗ್ಮಮಹಿಷಿಯಪಟ್ಟವ | ನೊಸೆದಿತ್ತುಸುಖಮಿರುತಿರಲು ||
ಅಸದೃಶವೀರಮಾರುತಿಗೆಹಿಡಿಂಬೆಯು | ನಸಿಯುಳನಾಸಿಹ್ಮಘೋಷ ||೩೨೯||

ಪಿತ್ಕರಮಪ್ಪವೈಭವನದಿಂದವೆತಂ | ದಿತ್ತತಿಸಮ್ಮದದಿಂದ ||
ಉತ್ತಮವಸ್ತುವನಿತ್ತಣುಗೆಗೆತನ್ನ | ಪತ್ತನಕೆರದ್ದೈದಿದನು ||೩೩೦||

ಬಳಿಕನಕುಲನಯವೇವರ್ಗೆಕೆಲಭೂಪ | ರೆಳಸಿತಂತಮ್ಮಣುಗೆಯುಗ ||
ಸುಲಲಿತಾಂಗಿಯರಸುತಾದುಸುತನವನು | ತಳೆದುಮಸುವೆಯುಮಾಡಿದರು ||೩೩೧||

ನಿಃಸ್ಪಂಜಕಧರ್ಮನಂದನನಾತಿಲ | ಕಪ್ರಸ್ಪಕಣೆಯುಪ್ರಸ್ಥ ||
ಅಪ್ರತಿಯೆನಿಪನಾಗಪ್ರಸ್ಥಪಾಕನ | ಕಪ್ರಸ್ಥಮೆಂಬನಾಲ್ವಳಲ ||೩೩೨||

ಆ ವಾಯುಪುತ್ರಕಿರೀಟಿನಕುಲನಹ | ದೇವರ್ಗೆಕೂಡಲಿಂತವರು ||
ಆವೂರುಗಳನೈದಿಯಿತಿವನುದವಿಂದವನು | ಹೀವಲಯಮನಾಳುತಿರಲು ||೩೩೩||

ಧರೆಯೊಳಗುಳ್ಳರಸುಗಳುತಮ್ಮೊಳಗುಳ್ಳ | ಸುರುಚಿರವಪ್ಪವಸ್ತುವನು ||
ವರಸುತೆಯರನುಕಾಣ್ಕೆಯನಿತ್ತುಕಾಂತೇ | ಯರಕಂಡುಸುಖಮಿರುತಿಹರು ||೩೩೪||

ವಿತರಣವಿಕ್ರಮಯುತಪಾಂಡವಭೂ | ಪತಿಗಳಮಿನುಗುವಕೀರ್ತಿ ||
ಅತಿತೇಜದಿಂಮೊಡಗೂಡಿಪರಿದುವಾ | ಕ್ಷಿತಿತಿರಪಿಲ್ಲದಂದದೊಳು ||೩೩೫||

ತನ್ನಾಜ್ಞೆಯಿಂದನಾಲ್ವರುತಮ್ಮಂದಿರ | ನುನ್ನತಸತ್ವಸಂಯುತರ ||
ಚೆನ್ನಾಗಿಧರ್ಮನಂದನನುನಿಲಿಸಿಕೊಂಡು ಸನ್ನುತಕೀರ್ತಿವಡೆದನು ||೩೩೬||

ಧೀರತೆಯೊಳುಸತ್ಯದೊಳುಶುಚಿತನದೊಳು | ದಾರತೆಯೊಳುವಿಕ್ರಮದೊಳು ||
ಚಾರಿತ್ರದೊಳಗಿವನೇಯೆಂದುಪೊಗಳ್ವುದು | ಧಾರಿಣಿಯಾಧರ್ಮಸುತನ ||೩೩೭||

ಏಕವಚನಸುಪ್ರತಿಷ್ಠಾಚಾರ್ಯನ | ನೇಕಕಲಾಕೋವಿದನು ||
ಲೋಕಪೂಜಿತನಂತಕಸುತನೆಸೆದನಿ | ಳಾಕಾಂತಕುಲಶೇಖರನು ||೩೩೮||

ಇದುಜಿನಪದಸರಸಿಜಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗಿದು ತೃಯೋವಿಂಶಾಶ್ವಾಸ ||೩೩೯||

ಇಪ್ಪತ್ತಮೂರನೆಯ ಸಂಧಿ ಸಂಪೂರ್ಣಂ

೨೪. ಪಾಂಡವರ ವನವಾಸ ಸಂಧಿ.

———:೦:———

ಶ್ರೀವಾಸುದೇವಪತಿಮೌಳಿಕೀಲಿತಪಾದ | ತಾಮರಸದ್ವಯಾಸಜಗೆ ||
ಕಾಮಿತಮದೇಭಹರಿಗೆನೇನಿಜಿಸಪತಿ | ಗಾಮೋದವೆತ್ತೆರಗುವೆನು ||೧||

ಅಂತಕನಂದನನೋರ್ವನೆಚಿವಸನು | ಸಂತಸದಿಂದವೆಕರೆದು ||
ಇಂತೀವಾರ್ತೆಯನಾದ್ವಾರಾವತಿ | ಗಂತರವನುಮಾಡದೆಯ್ದಿ ||೨||

ಹರಿವಂಶದವರೊಳುಪೇಳೆಂದುಕಳುಹಲು | ಭರದಿಂದವಸೆಯ್ದಂದು ||
ಹರಿಬಲದೇವಾದಿಗಳಿಗೆವಾಂಡವ | ರವವನೆಲ್ಲವಪೇಳಲೊಡನೆ ||೩||

ಮಣಿಗಣಭೂಷಣಗಳನೀಯಲುಮನ | ದಣಿವಹಡೆದುಬರಲವನು ||
ಕಣೆಯಪ್ರಸ್ಥಪುರದೊಳರ್ಜುನನೊಂದು | ಕ್ಷಣವಗಲದೆದೌ್ರಪದಿಯೊಳು ||೪||

ಅತಿಸುಖದಿಂದೊಡಗೂಡಿರ್ದುದ್ವಾರಾ | ವತಿಯೊಳುವಸುದೇವಸೃಪಗೆ ||
ಅತಿರೂಪವತಿನೀಲಾಂಜನೆಗೊಗೆದಸ | ಸ್ನುಷಗುಣವತಿಸುಭದ್ರೆಯನು ||೫||

ಕುರುಪತಿಬೇಡಿದೊಡವರುಕೊಡದವಾರ್ತೆ | ಹರೆಯಲುಕೇಳಿಯಾಕೆಯನು ||
ಹರುಷದಿಂತನಗೀವುದೆಂದಲ್ಲಿಗೆಸಚಿ | ವರರನುಕಳುಹಿಕಿರೀಟಿ ||೬||

ಅವರೆಯ್ದಿಯಾವಾರತೆಯನುಸುರೆಕೇ | ಶವಕೇಳಿಕರಮೊಳ್ಳಿತೆಂದು ||
ಸನಿನಯದಿಂಕೊಡುವೆವುಬರಹೇಳೆನೆ | ದನಿಜೇಂದ್ರಸುತನಲ್ಲಿಗೆಯ್ದೆ ||೭||

ವಸುದೇವವಾಸುದೇವರುಶುಭಲಗ್ನದೊ | ಳಸಮಾನರೂಪವತಿಯನು ||
ಒಸೆದುಮದುವೆಯುಮಾಡಲುಕೆಲವಿನಮರ್ದು | ರಸಿಕರದೇವನರ್ಜುನನು ||೮||

ಗರುವೆಸುಭದ್ರೆಸಹಿತಕಣೆಯಪ್ರಸ್ಥ | ಪುರಕೆಯ್ದಿರಲಂತವರ್ಗೆ ||
ಸ್ಮರನಿಭನಭಿಮನ್ಯುವೆಸರಗರಿಮನೋರ್ವ | ವರಸುತನುದ್ಭವಿಸಿದನು ||೯||

ಅಸ್ತ್ರೀಪುರುಷರ್ಗೆಮುದವೆತ್ತುಬೆಳೆದಾ | ಶಾಸ್ತ್ರಸಂಗೀತಸುಚಿತ್ರ
ಶಸ್ತ್ರವಿದ್ಯೆಗಳನೆಲ್ಲವನುಕಲಿಶುಕಮು | ಮಾಸ್ತ್ರನಂದದೊಳೊಪ್ಪಿದನು ||೧೦||

ಉತ್ತಮನಭಿಮನ್ಯುವನುಕರೆಸಿಪುರು | ಷೋತ್ತಮತನ್ನ ಸುತೆಯನು ||
ಮತ್ತಯೌವನಸೌಂದರಿಯೆಂಬಳಸೊಸೆ | ದಿತ್ತುಮನ್ನಿಸಿಯವರೊಡನೆ ||೧೧||

ಹರಿಸದಿನಾಕಣೆಯಪ್ಪಸ್ಥವುಕಾ | ಹರಿಬಂದಾನರನೊಡನೆ ||
ಪರಮುಸ್ನೇಹದಿಕೆಲದಿನಮಿರಶಾ | ಕುರುಪತಿಯಂತದಸರಿದು ||೧೨||

ಸುಂತ್ಯಶಾಲೆಗೆಬಂದುತನಗಾಪ್ಪರೆನಿಸುವ | ಮಂತ್ರಿಗಳನುಕೂಡಿಕೊಂಡು ||
ಸುಂತ್ಯಾಲೋಚನೆಯನುಮಾಡಿದನುಕು | ತಂತ್ರಮುಂದಣಕಾರ್ಯವನು ||೧೩||

ಪಿರಿದಾದುದುದಾಯಿಗಪಾಂಡವರೈ | ಸಿರಿಯದರಿಂದಮುಂದೆನಮಗೆ ||
ಧರಣಿಗಧಿಪತನಮಿಲ್ಲೆಂದನೃಪನೊಳಿಂ | ತೊರೆದನುಶಕುನಿಕೈಮುಗಿದು ||೧೪||

ಸುಂತಣಪೇಕ್ಷೆಮಹಿಪಜೂಜಿನೊಳಗೆ | ಅಂತಕಸುತನತಿವೋಹಿ ||
ಅಂತದುದಿನಾಳವಾಸಗಿಗಳನುಪಾ | ಯೂಂತರದಿಂದವೆಸಮೆದು ||೧೫||

ಬರಸಿಯಾತನನೊಂದೊಸಗೆಯನೆವದಿನಾ | ದರದಿನಿರಿಸಿಕೊಂಡುಬಳಿಕ ||
ಹರಿಸದಿನೆತ್ತಮನಾಡಲೆನುತಮೊಗ | ದಿಳುಗಿಸಿಕೊಂಡುಕುಳ್ಳಿರಿಸಿ ||೧೬||

ಆಡಿಜೂಜನುನಾಡುಬೀಡನೆಲ್ಲವಗೆಲ್ದು | ಕಾಡೊಳುಹೊಗಿಸುವವಿಡಕೆ ||
ಬೇಡನಂದೆಗಪೆಂದುಶಕ ನಿನೃಪಗೆಮಾತ | ನಾಡೆಯಂತದನವಧರಿಸಿ ||೧೭||

ಅತಿಗುಪ್ತದಿಂದಾಳವಾಸಗಿಗಳನಾ | ಕೃತಕಿಮಾಡಿಸಿಯೊಂದುದಿವಸ ||
ಅತಿಶಯಮಪ್ಪೊಸಗೆಯನೆವದಿಂಸಿಂಧು | ಸುತನವಂಚಿಸಿಧರ್ಮಸುತನ ||೧೮||

ಪ್ರೇಮದಿಕರೆಯಟ್ಟಲನುಜರುಗೂಡಿಯು | ದ್ದಾಮವೈಭವದಿನೈತರಲು ||
ಆಮನುನಿಭನಸದಿರ್ಗೊಂಡಾಕುರು | ಭೂವಿಶಾಶನೈಯ್ದಿಸಿಧರವ ||೧೯||

ವಿನಯೋಪಚಾರದಿಂದಿರಿಸಿಕೊಂಡೊಸಗೆಯು | ನನುವಾಗಿಮಾಡಿಸಿಬಳಿಕ ||
ಅನಿಮಿಷಪತಿಯವಿಭವದಿಂದಿರ್ದೊಂದು | ದಿನದೊಳಗೋಲಗಮಿರಲು ||೨೦||

ಅರಸುಗಳವರೀರ್ವರಿದಿರೊಳುನೆತ್ತಮ | ನಿರದೀರ್ವರಕೈಯಿಂದ ||
ಪಿರಿದುರಚನೆಯೊಳಾಡಿಸುತಿರಲದನಾ | ತುರದಿಧರ್ಮಜನೋಡುತಿರಲು ||೨೧||

ಕುರುಪತಿಯೋರ್ವಗೆಧರ್ಮಜನೋರ್ವಗೆ | ಹರುಷದಿಮೇಲುದಾಯವನು ||
ಒರೆವ್ರತಲಿರೆ ಕಲದೊಳಗಿದಶಕುನಿಯಿಂ | ತಿರದುಸುರ್ದನುಭೂಪರಿರಾ ||೨೨||

ಹೊತ್ತುಹೋಗುವುದಕ್ಕೆಸೆಲವೆವಡಾಟವ | ನೆತ್ತಮನಾಡಿನೀವೆಂದು ||
ಒತ್ತೊಂಬದಿಪೇಳೆಕುರುಪತಿಯಾಸ | ತ್ಯೋತ್ತಂಸನಮೊಗಸೋಡೆ ||೨೩||

ಅಂತಾಪೊಡಾಡುವಬನ್ನಿನೀವೆಸಲುಕೈ | ತಾಂತಸುತನುಮನಮೊಳಗೆ ||
ಇಂತೆಣಿಸಿದನಿದಕಾರದವನುರಣ | ಕೆಂತೊದಗುವನಾನೃಪನು ||೨೪||

ಎಂದುನೆರೆಯದೊರೆಗಳುಹಳೆವರುತಪ್ಪ | ದೆಂದೀಗಜೂಜಿಂದಪಾಪ ||
ಬಂದೊಡೆಬರಲೆಸುತವೆಯಾಡಲುಮನ | ದಂದಸುಧರ್ಮಸಂದನನು ||೨೫||

ಇಳೆಯಾಧಿಪರಮನವನರಿದಾನೆತ್ತ | ವಲಗೆಯಶಕುನಿತಂದಿರಿಸಿ ||
ನಿಲಿಸಿಸಾರಿಯನುಹಾಸಗಿಯನೀಯಲುಕ್ಕೈಗೆ | ಚಲದಂಕರಂದಾಡಿದರು ||೨೬||

ಎರಡುಮೂರಾಟವನಾಡಿದಬಳಿಕಿಂತು | ಟೊರೆವನುಶಕುನಿಭೂವರಗೆ ||
ವರಎತ್ತವಿಾಯೊಂದಾಟಕ್ಕೆಪತ್ತುಸಾ | ಸಿರಮೆನಲೊಡಬಟ್ಟರಾಗ ||೨೭||

ತನ್ನ ವಂಶವನೊರಸುವವೊಲುಕೃತಸಂ | ಪನ್ನನುನಾಳವಾಸಗಿಯು ||
ತನ್ನ ವೆರಡುಕರದಿಂದಲೊರಸಿಕಡು | ಬಿನ್ನಾಣದಿಂದಾಡಿಸಿದನು ||೨೮||

ಕೆಲವುಪಲಗೆಗಳಡಾಳಕತನದಿಂ | ಗೆಲುವನಾತಗೆಕೊಟ್ಟುಬಳಿಕ ||
ಕೆಲವುಪಲಗೆಯುಗೆಲಿದುಧರ್ಮತನುಜಗೆ | ಫಲವನೆದೆಯೊಳುಪುಟ್ಟಿಸಿದ ||೨೯||

ಹಿರಿದುಹಲಗೆಯಾಡಿಧರ್ಮಸುತನಕರಿ | ತುರಗಸಾಮಜಪದಾತಿಯನು ||
ತರತರದಿಂಗೆಲೆಕಂಡುಕನಲಾ | ಮರುತಸಂಡನನಿಂತುನುಡಿದ ||೩೦||

ಸಂಚಿನಹಾಸಂಗಿಯನುಮಾಡಿಯಣ್ಣನ | ವಂಚಿಸಿನೆತ್ತವನಾಡಿ ||
ಮುಂಚೆಗೆಲವಕೊಟ್ಟುಬಳಕಿಂತುಟಾಡುವ | ವಂಚನೆಯದುಲೇಸುಲೇಸು ||೩೧||

ಹಲಗೆಯಮಾಡಿಧುರಾವನಿಯನುನಿನ್ನ | ಕುಲವೆಂಬಬಹುಚಾರಿಗಳನು ||
ನಿಲಿಸಿಯೆನ್ನಿಗದೆಯೆಂಬಹಾಸಂಗಿಯಿಂ | ನೆಲಕುರುಳಿಸದೆಬಿಡುವೆನೇ ||೩೨||

ಎನೆದುರ್ಯೋಧನನಾಕೈಪೆಸರವನು | ಮನಗೊಳದಿರೆಕಾರ್ಯವಶದಿ ||
ಅನಿಲಸುತನಕಣ್ಣಸನ್ನೆಯಿಂದಾಧರ್ಮ | ತನುಜಸಡಕಕಿಕ್ಕೆದನು ||೩೩||

ಅದನರಿದಾಭೀಷ್ಮನಾವಿದುರಸುಕಡು | ಬೆದರಿಹೀನರಮಾಳ್ಕೆಯೊಳು ||
ಸದಮಲರೀಜೂದನಾಡುವರೇಯೆನ | ಲದಕೆಧರ್ಮಜನಿಂತುನುಡಿದ ||೩೪||

ಎನ್ನೀಸೋಲವನಿನ್ನೊಂದುಪರಿಯೊಳು | ಚೆನ್ನಾಗಿಯೆತಿರುಗಿಸುವೆ ||
ಇನ್ನು ನೀವಡ್ಡಬರಲುಬೇಡವೆಂದುಗು | ಣೋನ್ನತನವರ್ಗೆಕೈಮುಗಿದು ||೩೫||

ಮರುಮಾತುಗುಡದಂತೆಮಾತನಾಡಲ್ಕಿ | ತೊರೆಯಣುಗನುಸಹಿತಂದು ||
ಅರಗುಲಿಕೌರವನಾಡುವಜೂದಿನ | ತೆರನನುಧೃತರಾಷ್ಟ್ರಗುಸುರೆ ||೩೬||

ಬಳಿಕಿಂತೆಂದನುಬವರದೊಳನಿಲಜಗದೆ | ಗೊಳಲುಕಿರೀಟಿಗಾಂಡಿಪವ ||
ತಳೆಯಲುನಿತ್ತರಿಸಲ್ಕಾರ್ಪರೆಬಿದಿ | ಜಲಜೋದರಮಹೇಶ್ವರರು ||೩೭||

ಎಂದುಮುಂದಾಕೆನಿಯಣುಗನುವಿದುರನು | ಮುಂದಿಕೌರವಗೆಕೇಡಪ್ಪ ||
ಆಂದಮನುಸುರಿನೀನೀಗನಡೆದುನಿನ್ನ | ನಂದನಗತಿಬುದ್ಧಿವೇಳಿ ||೩೮||

ಜೂದನಿಲಿಸಿಮುಂಜೆಗೆಲಿದವನೆಲ್ಲವ | ನಾದೈವಜ್ಞಧರ್ಮಜಗೆ ||
ನಾದರದಿಂದಕೊಡಿಸಿಬಪ್ಪುದೆಂದಾ | ಮೇದಿನಿಯೆರೆಯನಬಳಿಗೆ ||೩೯||

ಧೃತರಾಷ್ಟ್ರನನುಕಳುಹಲವನೆಯ್ತಂ | ದತಿಬುದ್ಧಿಯಪೇಳಿತನ್ನ ||
ಸುತನತಿಳುಹಲಾರದೆಮಗುಳಲುಧರ್ಮ | ಸುತನಿತ್ತಲತಿಜಲದಿಂದ ||೪೦||

ಮುತ್ತೈದಂತಾರಸುವಸ್ತುವಾಹನಗಳ | ಮೊತ್ತವನೆಲ್ಲವಸೋಲ್ತು ||
ಚಿತ್ತರಮಪ್ಪದೇಶಕೆವೊಡ್ಡಮೆಂದಾ | ನೆತ್ತದಸಾರಿಯಹೂಡೆ ||೪೧||

ಕುರುಪತಿಪೇಡೆಂದುಹಾನಂಗಿವಿಡಿದಾ | ಸುರಸಿಂಧುಜನಕ್ಕೆಬಿಡಿಸಿ ||
ಸಿರಿದುಕೋಪದಿಭೀಮಾರ್ಜುನರಾಕುರು | ಧರಣಿಪಗಿಂತುನುಡಿದರು ||೪೨||

ಜನಪತಿಕೇಳೀಕಾರ್ಯವನೆಣಿಪುದು | ನಿನಗೆಸಹಜನಂದದಿಂದ ||
ಮನನಿಷ್ಠನೀವೊಡ್ಡವನಿಲಿಸುವುದಿಲ್ಲ | ವನಿತರಿಂದಸಧಿಯನುಸುರು ||೪೩||

ಎನಲನಧಿಯನೀವೇಪೇಳಿಪೆನೆಧರ್ಮ | ತನಯನುನಾವಾಡಲಿಲ್ಲ ||
ಇನಿತುವರುಷವೆಂಬುದುನೀವೇಪೇಳಿ | ಮೆನೆಕುರುಪತಿಯನುಮತದಿ ||೪೪||

ಈರಾರುವರ್ಷವನದೊಳಿರ್ದುದೇಶವ | ನಾರಜೆಬಳಿಕೊಂದುವರ್ಷ ||
ಆರರಿಯದಪೊಲಿರಲುಜೇಕೆಂದಾ | ಧೀರಗೆಗೆಶಕುನಿಮಾತಾಡೆ ||೪೫||

ಆಸುಡಿಗಾಧರ್ಮನಂದನನೊಡಬ | ಟ್ಟಾನಾಡುಪೀಡೆಲ್ಲವನು ||
ಆಸವೆಯಾಡಿಸೋಲವನುರೆಪಡೆದುದು- | ಮ್ಮಾನದಿನುನೆಗೆದ್ದುವೋಗೆ ||೪೬||

ಹರುಷದಿನಾಗಸುಯೋಧನತಾಗೆ | ಲ್ಬುರುತರಸಪ್ತಾಂಗವನು ||
ಎರೆದುಜರರನಟ್ಟಲುಧರ್ಮನಂದನ | ನುರುಭಂಗದಿಂದೊಪ್ಪಿಸಿದನು ||೪೭||

ಚಪೇಳೆಯೊಳುಭೀಮಾರ್ಜುನರತಿಕೋ | ಪಾವೇಶಮಾನಸರಾಗಿ ||
ಓವದೆತಂತಮ್ಮಕೈದಿಗೆಕೈನೀಡ | ಲಾಪಭುವವರನುನೋಡೆ ||೪೮||

ಗಾರುಡಿಗನವೊಗನನುಕಂಡಪಷಮಕಾ | ಳೋರಗನಡುಗುವಂದದೊಳು ||
ಧೀರಲಲಿತರಣ್ಣನಾಜ್ಞೆಗಡಗಿದರು | ವೀರವಾರುತಿಪಲುಗುನರು ||೪೯||

ಬಳಿಕತಮ್ಮಸಪ್ತಾಂಗರಾಜ್ಯಮನಿನಿ | ಸುಳಿಯದೊಪ್ಪಿಸಿಕೌರವಗೆ ||
ತುಳಿಲಾಳ್ಗಳವರಲ್ಲಿರದತಿಮುದದಿಂ | ಪೊಳಲನುಪೊರಮಟ್ಟರಾಗ ||೫೦||

ಪುರವನವರುಪೊರಮಡುವಾಗಲಾಭೀಷ್ಮ | ಗುರುಮೊದಲಾದಿಷ್ಟರುಗಳು ||
ಕುರುಪತಿಯಿಜೆಗೆಯ್ದಿ ಬೇಡನೀಮಂಗೆಲ್ಬ | ಧರೆಯುಸವರಿಗೊಪ್ಪಿಸುವುದು ||೫೧||

ಎನಲಾಸುಡಿಗೆಕೆವುಡುಗೇಳ್ದರಂತಿರ | ಲನಿತರೊಳಪವತಿಸೊಂದು ||
ಮಸುನಿಭಪಾಂಡವರೆಡೆಗೆಯ್ದಲವರತಿ | ವಿಸಯುದಿನವರಡಿಗೆರಗಿ ||೫೨||

ಕಡೆಗಣ್ಗಳಿಂದುಃಖಾಶ್ರುತೊರೆದುಬೀಳೆ | ನುಡಿದರೆಲೇಮಕ್ಕಳಿರಾ ||
ಅಡವಿಯೊಳಿರ್ಪವರ್ಗಾವೆಂತುಪರಕೆಯು | ಕೊಡುನೆವೆಂದುಮ್ಮಳಿಸಿದರು ||೫೩||

ನಿಮ್ಮಾಶೀರ್ವಾದವೆಪಾಲಿಸುವುದು | ನಮ್ಮನಾದರಿಪುದಿನ್ನೀಕೆ ||
ಉಮ್ಮಳಬೇಡನಾವೆಮ್ಮನನ್ನಿಯನಿನ್ನು | ಸಮ್ಮದದಿಂರಕ್ಷಿಸುವೆವು ||೫೪||

ಎನಲವರವರಸಾಹಸಸತ್ಯಸಂಪದ | ವಿನಯುಧೀರೋದಾತ್ತತೆಗೆ ||
ಮನದೊಳುಮೆಚ್ಚಿಮರುಕದಿಂದಬೀಳ್ಕೊಂಡು | ಘನದುಃಖದಿತಿರುಗಿದರು ||೫೫||

ಇತ್ತಲಿಂದ್ರಪ್ರಸ್ಥಪುರವರಕಾಸದ್ಗ | ೞೋತ್ತಂಸರುಪೋಗಿಬಳಿಕ ||
ಮೊತ್ತದನೃಪರುಬೆಂಬಳಿಯೊಳೆಯ್ದಲುಕಂಡು | ಮತ್ತಲ್ಲಿನಿಸುಹೊತ್ತಿರದೆ ||೫೬||

ಸದುಳದಿನಲ್ಲಿಂಪೊರಮಟ್ಟುಗಂಗಾ | ನದಿಯನಿರದೆದಾಂಟಿಬಂದು ||
ಮುದದಿಂದೊಂದುಮಹಾವಟವಿಟಪಿಯ | ಮೊದಲೊಳುಬೀಡಸುಬಿಡಿಸಿ ||೫೭||

ಬಳಿವಳಿಬಂದಬಂಧುಗಳನಾಮಂತಮಂ | ಡಳಿಕದುರ್ಗಾಧಿನಾಥರನು ||
ಅಲಘುವಿನಯುಪಚಸಗಳಿಂಬೀಳ್ಕೊಟ್ಟು | ತಳುವಿದರಲ್ಲಿಯಾಪಗಲು ||೫೮||

ಆ ಮರುದಿನಕೌಂತೇಯರುತಂತಮ್ಮ | ಪ್ರೇಮದಪೆಂಡವಾಸವನು ||
ಆ ಮಾತೃಪಿತೃಗಳಬಳಿಗಟ್ಟಿಪಾಂಚಾಲ | ಭೂಮಿಪಾಶಸಸುಕುಮಾರಿ ||೫೯||

ಹರುಷದಿನವರಪೆಂಬಳಿಯೊಳುಬರಲಾ | ವರಮಾತೆಕೊಂತಿಸಮೇತ ||
ಭರದಿನಂತಕದೆಸೆಗಾಗಿನಡೆದುಬಂದು | ಪಿರಿಯದೊಂದುವನಕೆಯ್ದಿ ||೬೦||

ವಿದಿತಶತಶೃಂಗವೆಂಬೊಂದುಶೈಲದ | ಮೊದಲೊಳುಮಿಗೆರಂಚಿಸುವ ||
ಬದರೀವನವನುಸಾರ್ದಲ್ಲಿಯತಿಸಂ | ಮದವಿಂದಿರುತಿರ್ದರಾಗ ||೬೧||

ಕೌರವನೊಳುಕೌಂತೇಯರುಜೂದಾಡಿ | ಧಾರಿಣಿಯೆಲ್ಲವಸೋಲ್ತು ||
ಆರಣ್ಯವಹೊಕ್ಕಿರ್ದುದನಾಬಲ | ನಾರಾಯಣರುಕೇಳುತವೆ ||೬೨||

ಧುರಧೀರನತಿಜತುರಕಲಾಪರಿಪೂರ್ಣ | ನುರುಶಕ್ತಿಯುತಕೃಷ್ಣನೆಂಬ ||
ಅರಸುಮಗನಕರೆದಾಪಾಂಡವರಬಳಿ | ಗಿರದೆಯ್ದಿಯಾವನದೊಳಗೆ ||೬೩||

ಪರಬಾಧೆಯವರಿಗಿಲ್ಲದವೊಲುನೀನನ | ವರತವಿರೆಂದುಬೀಳ್ಕೊಡಲು ||
ಭರವಿಂದಾವನಕೆಯ್ದಿಯಾಕೃಷ್ಣನು | ವರಗುಣಿಧರ್ಮಜನೆರಗ ||೬೪||
ತಾನೆಯ್ದಿದಕಾರ್ಯವಬಿನ್ನವಿಸಿಯೂ | ಕಾಸೊಳಗವನಿಚ್ಚವಿರಲು |
ಮಾನನಿಧಿಗಳಲ್ಲಿಕೆಲದಿನವಿರಲೊಂ | ದಾನೊಂದುದಿನದುದಯದೊಳು ||೬೫||
ಧೀರನರ್ಜುನನುವಿನೋದದವಿಪಿನವ | ಹಾಂತರ್ಧದಿಂದವೆಕೆಲವು ||
ದೂತಬರುತ್ತಿಂದ್ರಕೀಲಪೆಬರ್ದ್ಯಯ | ನಾರೈದುನಿಂದುನೋಡಿದನು ||೬೬||
ಸುರಭಿಯುಂದದೊಳುಪಯೋಧರಕಾವಾಸ | ನ ತರುಂಗಿಣಿಯುಂದದೊಳು ||
ಸುರುಚಿರತರತಪಸಾಯುತಪಾಗಿರಿ | ವನವಂತಿಕಣ್ಗೆರಂಜಿಸಿತು ||೬೭||
ವೃಷಭೇಶನಂತುರುತರಶೃಂಗಾನ್ವಿತ | ವಿಷನ ಲೋಚನನಂತೆ ||
ವಿಷಶೈದ್ಯಾಭಿವಿಷ್ಣುವಿನುತಕೈನಾಗ | ದ್ವಿಷಭಾಸ ರಮಾಶಿಖರಿ ||೬೮||
ಭೂಭೃದ್ಗುಣದಿಭುಜಂಗಾವಾಸದಿ | ಶೋಭಿಪವನಚರತತಿಯಿಂ ||
ಭೂಭುಜರನುವಿಧುವನಾವಾರಾಶಿಯು | ನಾಭೂಸರಗೆಲ್ದುದಾಗ ||೬೯||
ಪವಣಿಲ್ಲದೆಯುಗ್ರಖಗವಿಗಸಂತತಿ | ತವೆಕೊಂಬುಳ್ಳಿಗದಿಂದ ||
ಅವನೀಧರನುತಿಘೋಕರಮಾದುದು | ಜವನಿರ್ಪ ರ್ಗದಂದದೊಳು ||೭೦||
ಅಘಟನವಸುಬಿನದದಿನಾಶೈಲವ | ತುದಿಯನೊ ಸುವೆನೆಂದುಬರ್ಪ ||
ಪದದೊಳುಪಡಗೈಗಟ್ಟಿಜೋಲುತ್ತೊಂದು | ಬಿ ರಕೊನೆಯೊಳೋರ್ವನಿರಲು ||
ಗಗನೇಚರನಿವನಿವನೀಯೆಡೆಯೊಳು | ಪಗೆನ ಕಟ್ಟಿದವೆಂದು ||
ಬಗೆಯುಗಾಂಡೀವಕ್ಕೆಶರವಿಟ್ಟುಕಿವಿನರ | ತೆಗೆದ ಕಲಾಮಾಣ್ಯದಿಂವೆಸಲು ||೭೨||
ಖಂಡಿಸೆಯಾಬಲ್ವಿದಿರಹಿಂಡಿಲು ಭೂ | ಮಂಡ ಕುರುಳ್ವವೇಳೆಯೊಳು ||
ಚಂಡವಿಕ್ರಮವೇತಂಡಶುಂಡಾಲದೋ | ರ್ದಂ ಕದಿಪಿಡಿದೆತ್ತಿದನು ||೭೩||
ಮತ್ತಾತನಪೆಡಗಟ್ಟನುಬಿಡಲಾ | ವುತ್ತಮಸಭ್ವನಿಪದಕೆ ||
ಉತ್ತಮಾಂಗವನೆಲೆಗೊಳಿಸಿಯೆನ್ನ ಸುವನೀ | ನಿಶ್ಚಯಲಾಗುಣವಣಿಯೆ ||೭೪||
ಎಂದಖಚರಗಂತೆಂದವನುನಿನಗೀ | ಯಂದವನೆ ದರಾರು ||
ಎಂದಕೆರೀಟಿಗೆಸುಡಿದನುತನಗಾದ | ದಂದುಗಮನುಕೈಮುಗಿದು ||೭೫||
ಬಲಯುತಕೇಳೀವಿಜಯಾದ್ರಿಯಂಬರ | ತಿಲಕ ಮೆಂಬಪಟ್ಟಣದ ||
ಇಂದ್ರಯಾಧ ನೆಂದ್ರರಥನಾನೀರು | ಗ್ಗಳಮಪ್ಪ ಶರಣೇಧರದೊಳು ||೭೬||

ಆಗಣಿತವಪ್ಪವಿದ್ಯೆಯಸಾಧಿಸಲ್ಕೀ | ಪಗಲೊಳುಬರೆಬೆಂಬಳಿಯೊಳು ||
ಪಗೆವನೋರ್ವನುಮೇಘರಥನೆಂಬಪೆಸರಿನ | ಗಗನಚರನುಬಂದೆನ್ನ ||೭೭||

ಮೋಸದಿಕಟ್ಟಿಪೋದನುನನ್ನೀಸಾವು | ಸಾಸಿಗನಿನ್ನ ಕರುಣದಿ ||
ಓಸರವಾದುದೆಸುತಬಳಿಕಿಂತೆಂದ | ನಾಸುಜನೋತ್ಸಂಗನೊಳು ||೭೮||

ನಾಸಿಲ್ಲಿಸಾಧಿಸಬಂದವಿದ್ಯಂಗಳ | ನೀನೇಸಾಧಿಸೆಂದೊಸೆದು ||
ಆಸರಗಾಪದ್ಯಾಪಂತ್ಯಂಗಳ | ತಾನಿತ್ತಾಭಿಂದ್ರರಥನು ||೭೯||

ಉರುತರನುಪ್ಪೇಗಿರಿಶಿಖರದೊಳಿರ್ದ | ಪುರುಜಿನಭವನದಮುಂದೆ ||
ವರಯುಕ್ತಿಯಾವಾಸವೊಂದುಂಟಲ್ಲಿಗೆ | ನಿರುತದಿಪೋಗಿಕುಳ್ಳಿರ್ದು ||೭೦||

ಈವಿದ್ಯೆಯುತ್ಪನ್ನಮುಚ್ಚರಿಸಿಮೊಡೆಸು | ತ್ತಾದೇವತೆಗಳೊದಗುವುವು ||
ಸಾದರದಿಂವಿನಯಗೂಡಿಯಾಯೆಡೆ | ಗಾದಿಟ್ಟನುನಡೆತಂದು ||೭೧||

ದೇವರದೇವಗೆವಂದಿಸಿಯಾಯತ್ನ | ದೇವಯಾವಾಸಕೆಬಂದು ||
ಸಾವಧಾನದೊಳುಕುಳ್ಳಿರ್ದು ಜಪಿಸಿಡನು | ಪಾವನತರವಂತ್ಯಗಳನು ||೭೨||

ವೈರಿಭಾಜನಿಲೋಕಮದಪಧ್ವಂಸಿನಿರು | ನೋರಥಸಿದ್ಧಿಯೆಂದೆಂಬ ||
ಸಾರಮಪ್ಪಾದೇವತೆಗಳು ಮೊದಲಾಗಿ | ಸೇರಪಾರ್ಥನೆಬೆಸಸೆನುತ ||೭೩||

ಮೂವತ್ತುಪದ್ಯಾದೇವತೆಗಳುಬಂ | ದಾವಿಧ ವಿನಮುಂದೆನಿಲಲು ||
ಸಾವಧಾನದಿಕೈಕೊಂಡುಪೂಜಿಸುತಿ | ರ್ದಾವೇಳೆಯೊಳಾಯೆಡೆಗೆ ||೭೪||

ಆ ವಿದ್ಯಾಧರನನುಮುನ್ನ ಕಟ್ಟಿಪೋ | ದಾವೈರಿಬರುತಿರೆಕಂಡು ||
ಈವಾಹಿನಿಗೂಡಿಬರ್ಪವನಾರೆಂ | ದಾವೀರನರ್ಜುನಕೇಳೆ ||೭೫||

ಮೊದಲೆನ್ನನಿಲ್ಲಿಬಂಧಿಸಿಪೋಗಿಬಳಿಕೆನ | ಗೊದವಿದಬನ್ನವತನ್ನ ||
ಸುದತಿಯರಿಗೆತೋರುವೆನೆಂದವರುಗೂಡಿ | ಮುದದಿಂದಬಹುಬಲಸಹಿತ ||೭೬||

ಬಂದನೆಂದಿಂದ್ರರಥನುಪೇಳುತಿರಲಿಳಿ | ತಂದಲ್ಲಿವಿಭ್ದವೇಣುವನು ||
ದಂದಶೂಕನಪಾಶದಿತಾನುಕಟ್ಟಿದು | ದೊಂದುಕಟ್ಟನುಸರಿಪಡಿಸಿ ||೭೭||

ಹರುಷದಿನಿರ್ದಿಂದ್ರರಥನನುಬಾಲಭಾ | ಸ್ಕರನನಂದದಿನಿಂದಿರ್ದ ||
ನರನನುನೋಡಿವಿಸ್ಮಯಮಾನಸನಾಗಿ | ಮುರವಟ್ಟನಿಂದಿರಲಾಗ ||೭೮||

ಎಲೆಮೇಘರಥಮೋಸದೊಳೀಖಗನನೀ | ನೆಲೆಯೊಳುಕಟ್ಟಿನೀಪೋಗಿ ||
ಲಲನೆಯರಿಗೆತೋರ್ಪೆನೆಂದುಮಗುಳ್ವುದು | ಕುಲಹೀನರಮತವೈಸೆ ||೭೯||

ಎನಲುಕಡಂಗಿಮತ್ತಾಮೇಘರಥತನ್ನ | ಧನುಗೊಂಡುನರರಸೊಳಿದಿರ್ದೆ ||
ಅನಿತಸೊಳವನಪಿಂತಿಕ್ಕಿಖಚರಸೇನೆ | ಘನತರವಹಕೋಪದಿಂದ ||೧೦||

ಇದಿರಾಗಲುಕಂಡುದಿವ್ಯಶರದಿನಾ | ಅಧಟನಬಲವನೆಲ್ಲವನು ||
ಒದವಿನೆಯಂತಕರಾಜನಸಿಜಪುರ | ಕದನುಕಂಡಾಮೇಘರಥನು ||೧೧

ಪೊಡೆವಸಿಡಿಲ್ಗಿದಿರಾಗುವಹರಿಯಂತೆ | ಜಡಿವುತತನ್ನಖಡ್ಗವನು ||
ಕಡುಮುನಿಸಿಂದಿದಿರಾಗಲುವನಕ್ಕೆದ | ಕಡಿದನಮೊಂದುಬಾರ್ಗಣದಿ ||೧೨||

ಬಳಿಕವನಕ್ಕಂತಕೋಪದಿವಿದ್ಯಾ | ಬಲವನಿರ್ಮಿಸಿಯೆದಿರೊಡ್ಡೆ ||
ಬಲವಂತನೊಂದುಬಾಣದಿನಾವಿದ್ಯಾ | ಬಲವನೆಲ್ಲವನೋಡಿಸಿದನು ||೧೩||

ಅದನುಕಂಡವನುಬೆದಬಾಪಾರ್ಥನ | ಗಿದಿರಾಗದಾಗಸಕೊಗೆದು ||
ಪೆದರಿಕಾಲ್ದೆಗೆವುತಲಿವಲಿಂದ್ರರಥನಿಂ | ತಿದುತನಗವನರವೆಂದು ||೧೪||

ಗಗನಕೆಸೆಗೆದಾಪಗೆವನಪೆಂಬಳಿ | ಯೊಗೆದುಸಿಡಿದುಪೆಡಗಟ್ಟ ||
ಬಿಗಿದುಘೂತಕಕೆಳೆತಂದೊಪ್ಪಿಸಿದನಾ | ಅಗಣಿತಮಹಿಮನಸಮುಂದೆ ||೧೫||

ಕಟ್ಟುವಡೆದುಬಂದುನಿಂದಾಖಚರನ | ನಿಟ್ಟಿಸಿಯಾಧನಂಜಯನು ||
ಕಟ್ಟುಸ್ಮೃಳದಿನಿಂದ್ರರಥನಕ್ಕೈಯಿಂದಾ | ಕಟ್ಟಬಿಡಿಸುತಿಂತುನುಡಿದ ||೧೬||

ಎಲೆಮೇಘರಥಕೇಳಿಂದುವೊದಲುನೀ | ಯಲಘುವಿಕ್ರಮಿಯಿಂದ್ರರಥಗೆ ||
ಅಲಸದೆಬಿಸಿಯುದ್ದೆಂದುರೆಸಿಯುಸಿ | ಕಲಿಪಾರ್ಥನಾತನಕಳುಪೆ ||೧೭||

ಬಳಿಕಿಂದ್ರರಥನಾಯಿಂದ್ರಕುಮಾರಗೆ | ತುಳಿಲ್ಗೆಯ್ದುಂತುನುಡಿದನು ||
ಅಲಘುವಿಕ್ರಮಿಬಿಜಯಂಮಾಡುವುದೆನ್ನ | ಪೊಳಲಿಗೆಂಪೊತ್ತಂಬದಿಂದ ||೧೮||

ವರಮಣಿಪುಷ್ಪಕದೊಳಗೇರಿಸಿತನ್ನ | ಪುರಕುರುಮುದದಿಕೊಂಡೊಯ್ದ ||
ಉರುವಿನಯದೊಳುಪಚರಮಾಡಿತನ್ನನೂ | ವ್ಯರುತನುಜಾತರಕರೆದು ||೧೯||

ನೀವಿಪಾತಗಾಳ್ವೆನನಾಗಿರಿಮೆಂದುನಿ | ಯಾಮಿಸಲಪರೊಲವಿಂದ ||
ಅಮಹಿಮಗೆಸಾಧ್ಯವಪಡಾಡಿಕೊಟ್ಟು | ದ್ದಾವವಿದ್ಯಾವಿತತಿಯನು ||೧೦೦||

ಇಂತಾವೊಳಲೊಳುಮಾಸತ್ಯಯಮಿರ್ದು | ಸಂತಸದಿಂದಾನರನು ||
ಅಂತಕಸುತನಲ್ಲಿಗೆಯ್ದಲೆಂದಾಖಗ | ಕಾಂತಗೆನಿರವಿಸಲವನು ||೧೦೧||

ಉತ್ತಮರತ್ನಭೂಷಣವಸ್ತ್ರದಿಂದಸ್ಯ | ಪೋತ್ತಂಸನಪೂಜೆಗೆಯ್ದು ||
ಪೆತ್ತರಮಪ್ಪವಿಮಾನಮನೇರಿಸಿ | ಮತ್ತಾಸುತರೊಡಗೂಡಿ ||೧೦೨||

ಪದುಳದಿಂದಂ ಪವಮಾನಮಾರ್ಗವಿಬಂದು | ಬದರೀವನದೊಳಗಿರ್ಪಹೆ ||
ಆಧಟರದೇವನರ್ಜುನನುಕೊಂತಿಯನಿಜ | ಪದಕೆಪಣೆಯಚಾಚಿದನು ||೧೦೩||

ಬಳಿಕಧರ್ಮಜವಾಯುಸುತರ್ಗೆಪಂದಿಸಿತನ | ಗಲಘುಭಕ್ತಿಯೊಳಂಘ್ರಿಯುಗಕೆ ||
ಬಳಿಕಮನಿಟ್ಟಸಕುಲಸಹದೇವರ | ನೆಳಸಿಹರಸಿಕುಳ್ಳಿರಲು ||೧೦೪||

ಅತಿಭಕ್ತಿಯೊಳಾಯಿಂದ್ರರಥನುಯಮ | ಸುತಭೀಮಮೊದಲಾದವರಿಗೆ ||
ಸತನಾಗಿಯುಚಿತಾಸನದೊಳುಕುಳ್ಳಿರ್ದು | ಕ್ಷಿತಿಪಸೊಳಿಂತಾಡಿದನು ||೧೦೫||

ತನಗೆಸರನುಗೆಯ್ದುಜೀವೋಪಕಾರವ | ನನುರಾಗದಿಂಪೇಳಿಬಳಿಕ ||
ವಿಸುಶವಿಕ್ರಮಯುತರೀನೂರ್ವರುತನ್ನ | ತನುಜರಿವರಕೈಯಿಂದ ||೧೦೬||

ಸೇವೆಗೊಂಡಿರ್ಪುದೆನ.ತಪ್ರಾರ್ಥಿಸಿಪೇಳಿ | ಯಾವಿಭುವಿನಸನ್ನಿಧಿಯೊಳು ||
ಆ ವಿದ್ಯಾಧರನಾಸುಕುಮಾರರ | ಭಾವಶುದ್ಧಿಯೊಳಲ್ಲಿರಿಸಿ ||೧೦೭||

ಬಳಿಕಬಲ್ಲಿದರಬೀಳ್ಕೊಂಡುನಭೋಮಂ | ಡಲಮೊಳಗಾಯಿಂದ್ರರಥನು ||
ತಳುವದೆಯ್ದುವಸಮಯದೊಳಿತ್ತಲವನೀ | ಲಲನೇಶನಾಕೌರವನು ||೧೦೮||

ನಸವಾಸದೊಳುಕಂದಮೂಲಪತ್ರದಿತಮ್ಮ | ತನುವನಿರದೆಚೆನ್ನಾಗಿ ||
ದಿನಚರಿಹೊರೆವಪಾಂಡವರಿಗೆನಸ್ನೀ | ಘನತರಮಪ್ಪೈಸಿರಿಯ ||೧೦೯||

ಚೆನ್ನಾಗಿತೋರಲುಬೇಕೆಂದುಬಗೆದಾ | ತನ್ನಬಲವನೆಲ್ಲಗೂಡಿ ||
ಸನ್ನುತರವರಿರ್ದಬದರೀವನಕೆಯ್ದಿ | ಗನ್ನಕಾರನುಬೀಡುಬಿಡಲು ||೧೧೦||

ಮರುತಮಾರ್ಗದೊಳುಪೋಪಾಯಿಂದ್ರರಥನಾ | ಕುರುಪತಿಬನಕೆಯ್ತಂದ ||
ಇರವಪ್ರಜ್ಞಪ್ತಿವಿದ್ಯೆಯಿಸರಿದತಿನಿ | ಷ್ಠುರತರಮಾನಸನಾಗಿ ||೧೧೧||

ಈತನುತ್ತಮಪಾಂಡವರಗಹಿತನನ | ಗೀತಪರನುನಾನಿವಗೆ ||
ಮಾತೇನುಕೇಡನೆಣಿಸಬೇಕೆಂದು ವಿ | ಖ್ಯಾತನಲ್ಲಿಂದಿಳಿತಂದು ||೧೧೨||

ಉರುತರಕೋಪದಿನವನಸಭೆಯಹೊಕ್ಕ | ಕುರುಪತಿದುಶ್ಶಾಸನರ ||
ಧರದಿಪಿಡಿದುಕಟ್ಟುವಾಗಲಲ್ಲಿರ್ದಾ | ದುರಗಲಿಗಳುಮಾರ್ಮಸಗಿ ||೧೧೩||

ಅಸಿಗೊಳಲವರನೆಲ್ಲರವಿದ್ಯೆಯಿಂದತಂ | ಬಿಸಿಲೆಪ್ಪದಿಂಹಸಗೆಯ್ದ ||
ರಸಚಿತ್ರದಂತೆಕೀಲಿಸಬಲುಗಟ್ಟನು | ಬ್ಬಸಮಾಗುವಂದದಿಕಟ್ಟಿ ||೧೧೪||

ಆಗಸಕೊಗೆದುಬಳಿಕ್ಕವಿವಾನದ | ವೇಗಡೆಯೊಳುಹಾಕಿಕೊಂಡು ||
ಭೂಗಧಿಪರಕೊಂಡಾಖಚರನುವೋಗು | ವಾಗಲಿತ್ತಾಬೀಡಿನೊಳಗೆ ||೧೧೫||

ಯಮಾರಿನೃಪರಕೊಂಡುಪೋದುದೆಂ | ದೆಲ್ಲರುಪಂಬಕ್ಕಿಯಂತೆ ||
ನೆಬಾಯ್ವಿಡುತಿರೆಯುರಸಸಪಟ್ಟ | ವಲ್ಲಭೆಯರುಕೆಟ್ಟೆವೆಸುತ ||೧೧೬||

ಕೃಪಕರ್ಣವಿಕರ್ಣಶಕುನಿಶಲ್ಯ | ಸುರಸಿಂಧುಸುತಸಿಂಧುನೃಪತಿ ||
ಸುತಮೊದಲಾದವೀರಭಟರಮುಂದೆ | ಹೊರಳಿಶೋಕವಮಾಡುತಿರಲು ||

ಸತ್ಯನಿಧಿಪಾಂಡವರಹುಂಗಿಸಲು ಬಂ | ದುದುಕಾರಣಕುರುಪತಿಗೆ ||
ಭುತಮಾವಾಪತ್ತುಸಂಜನಿಯಿಸಿ | ತಿದನಾವುಮಾಣಿಸಲರಿದು ||೧೧೭||

ದವರೆಲ್ಲಸುಡಿಯೆಭಾಸುಮತಿಕೇಳಿ | ಯೊಂದಾಗಿರಾಜಸತಿಯರ ||
ಣಿಬರೆಧರ್ಮರಾಯನಬಳಿಗೆ | ಯ್ತಂದಾತನಮುಂದೆಬಿಳ್ದು ||೧೧೮||

ಷಭಿಕ್ಷವನೀವುದೆಂದುಕೋಮಲಪದ | ಸರಸಿಜವನುಕಟ್ಟಿಕೊಂಡು ||
ಳುತಲಿರಲಿದೆಲ್ಲಿಯದೆಂದಾಸತಿ | ಗೊರೆಯಲಿಂತೆಂದುಸುರಿದಳು ||೧೧೯||

ತೆಂದರಿಯೆನಲರ್ವಟ್ಟಿಯಿಂದೋರ್ವ | ನಂತಕನಂತಿಳಿತಂದು ||
ತೇಯರಾಹಗೆನೀನಲ್ಲವೆಯೆನು | ತಂತರಿಸದೆಕೋಪದಿಂದ ||೧೨೧||

ಕರಿಕ್ಷಕೆನಿಜಪತಿಯನುಕೊಂಡೊಯ್ದ | ನಂತರಿಸದೆತರಿಸೆಂದು ||
ತಕಾರ್ಪಣ್ಯದಿಬಿನ್ನವಿಸಲಾಕ್ಷ | ಅಂತಕಸುತಕರುಣದೊಳು ||೧೨೨||

ತಮೊಗವನೋಡಿನಿನ್ನಾತನಿಂದೀ | ಪರಿಯಾಯಿತಿಂತಿದನೀನೆ ||
ಹರಿಸೆನೆಕೆಲದೊಳಗಿರ್ದಮಾರುತಿ | ಯೊರೆದನಿಂತೆಂದಣ್ಣನೊಳು ||೧೨೩||

ವುಕೊಲುವೆವೆಂಬಹಗೆಯುಮನ್ನಿಗರಿಂ | ಸಾವಹಡೆದುಹೋಗುವುದು ||
ರಕೇಳತಿಹಿತವೆಮಗಲ್ಲವೆಯೆನ | ಲಾವಿಭುವಿಂತೆಂದನಾಗ ||೧೨೪||

ಗಳಮೊರೆಗೇಳಿಸುಮ್ಮನಿರ್ಪುದುನೃಪ | ರಂಗವಲ್ಲಂತದರಿಂದ ||
ಗಿಸಬೇಕಾತನನೋವನೆನುತು | ತ್ತುಂಗಸದ್ಗುಣಿಭೀಮಗುಸುರೆ ||೧೨೫||

ಒಳಗವರುನೂರ್ವರು ನಾವೈವರು | ಪರಬಾಧೆಯಾರಿಗೆಸಗಲು ||
ತದಿನಾವುನೂರೈವರದರಿನಿದ | ಪರಿಹರಿಪುದುಮತವೆಂದು ||೧೨೬||

ಯಲದನುಕೇಳಿನರನೋಲೆಯುನೊಂದು | ಶರದಿಂದಬರೆದುಮತ್ತೊಂದು ||
ಳೊಳುಕಟ್ಟಿಖೇಚರನೇರಿಪೋಪಾ | ವರಪುಷ್ಪಕಮನೆಚ್ಚನಾಗ ||೧೨೭||

ಷುನಾವಮಾನವತಾಗಲೊಡನೆವ | ತ್ತಾಯಿಂದ್ರರಥನದನೋಡಿ ||
ಲರ್ವಟ್ಟಿಯಿಂದಪೆಯಿಳಿದವರಿ | ರ್ದಾಯೆಡೆಗಿರದೆಯ್ತಂದು ||೧೨೮||

ಪದುಳದಿಂದಾಧರ್ಮತನುಜಾತನಮೃದು | ಪದಮೂಲದೊಳುಕಟ್ಟುವೆರಸಿ ||
ಮದಯುತರವರನಿರಿಸಿಯಿಂದ್ರರಥನಾ | ಮರುತಮಾರ್ಗಕೆಪೋದನಿತ್ತ ||೧೨೯||

ನರನತಿಕರುಣದಿನಾಕಟ್ಟಸುಬಿಡ | ಲುರುಲಜ್ಜೆಯಿಂಕೌರವನು ||
ಶಿರವಬಾಗಿರೆಕಂಡಿಂತುಸುಡಿದನಾ | ದರದಿಂದೆಲೆಕುರುರಾಯ ||೧೩೦||

ಬಿಜಯಂಗೆಯ್ಯರಿನಿಮಗೇಕೆಮನಕ್ಷತ | ನಿಜಪುರಕೆನೆಪಲ್ಮುರಿದ ||
ಗಜದಂತಿಕುರುಪತಿಯೆಳ್ಬಾಗಪೋಗಲು | ಸುಜನರಿತ್ತಲುನಸದೊಳಗೆ ||೧೩೧||

ಇರಲುಧರ್ಮ್ಮಜನಸೆತ್ಯಕೆಮೆಚ್ಚಿಬಂದತಿ | ಹರುಷದಿವನದೇವತೆಯರು ||
ವರರತ್ನ ಭೂಷಣಾಂಬರದಿಸರ್ಜನೆಗೆಯ್ದು | ಹರಸಿಸೇಸೆಯನಿಟ್ಟರಾಗ ||೧೩೨||

ಭಯರಹಿತರುಭಾವೋದ್ಭವದೈಶರು | ಲಯರುದ್ರಸಿಗ್ಗಕೋಪಯುತರು ||
ಜಯಚಾಯಾವಲ್ಲಭರೊಪ್ಪಿದರಾ | ಸಯಗುಣಮಣಿಭೂಷಿತರು ||೧೩೩||

ಇದುಜಿನಪದಸರಸಿಜಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶನಚರಿತೆಯೊ | ಳಿದುಚತುರ್ವಿಂಶತಿಸಂಧಿ ||೧೩೪||

ಇಪ್ಪತ್ತನಾಲ್ಕನೆಯ ಸಂಧಿ ಸಂಪೂರ್ಣಂ

೨೫. ದ್ರೌಪದಿಯಂ ಕಳ್ದೊಯ್ದ ಸಂಧಿ

ಬಲವಿಷ್ಣುವಮೌಲಿಕೀಲಿತರತ್ನ ರಂಜಿತ | ಕಲಧೌತಪೀಠಶೋಭಿತನ ||
ಕಲಿಲವಿಜಯನೇಮಿಜಿನಪತಿಪದವೆನ | ಗೊಲಿದೀವುದುಮುಕ್ತಿಸುಖವ ||೧||

ಅತಿಮುದದಿಂದಾಪಾಂಡವರಾವು | ದ್ಧತವನದೊಳುಸುಖಮಿರಲು ||
ಕ್ಷಿತಿಸುತಫಲ್ಗುನಸಂಗನೆಗಾದೌ | ಪದಿಗೆಗರ್ಭೋದಯಮಾಯ್ತು ||೨||

ಅಗರ್ಭದೊಳುಕಾಂಚನಕಂಬ ತದ | ವೂಗಳನೀಕ್ಷಿಸುವಿಚ್ಛೆ ||
ಅಗಲುಂತದನುವಲ್ಲಭಗೊರೆಯುಲುಕಡು | ರಾಗದಿನೇರಿಪುಷ್ಪಕವ ||೩||

ಆವೆಣ್ಗಳದಸಿಸಹಿತಮಾಕನಕ | ದ್ವೀಪಕೆಮರುತಪೂರ್ಗದೊಳು ||
ಆ ಪೂರ್ಣಶಶಿರೋಹಿಣಿಗೂಡಿಬರ್ಪಂ | ತಾಪಾರ್ಥನಂದೆಯ್ದಿದನು ||೪||

ಬಳಿಕಾದ್ವೀಪಕಳಿದುಫಲಭಾರದಿ | ನಿಳಿಗೆರಗಿದಪಾಪರದ ||
ನೆಲಲೊಳಬಲೆಯನಿದಿಸಿಕನಕಾಬ್ಜದ | ಕೊಳದಕಡೆಗೆವೋಗಲಿತ್ತ ||೫||

ಎರಡನೆಯೆಸೆವದೀವಿಯಮೂಡಣಮಂ | ದರದಭರತಭೂತಳದ ||
ಕರಮೊಪ್ಪುವಜಯಾವ್ಯಿಯರಥನೂ | ಪುರಚಕ್ರವಾಳಪರ್ವತದ ||೬||

ನರಪತಿಪದ್ಮನೆಂಬನನಾದ್ವೀಪದ | ಧರತಿಖಂಡಾಧಿನಾಥ ||
ಧುರಧೀರಶಂಖನೆಂಬಾವಾಸುದೇವನೂ | ವರನಸೋದರದಮೈದುನನು ||೭||

ಅಸುರಾಗದಿಂದಮಾನಸಮಸಡರ್ದಾ | ಅಸಿಲಪಥದೊಳೆಯ್ದುತಿರಲು ||
ಅನಿತರೊಳಾವಿಮಾನವುಕೀಲಿಸಿನಿಲೆ | ವನಿತೆಯಿದರ್ದಾಸನದೊಳು ||೮||

ಏಕಿಸ್ಮೀವಿಮಾನವುಕೀಲಸಿತೆಂ | ದಾಕಾಶದಿಂನೆಲಕಿಳಿದು ||
ಆಕಮಲಾಕ್ಷಿಯನಾವಿಧುವದನೆಯ | ನಾಕಳಶೋಪಮಕುಚೆಯ ||೯||

ಆಕೋಕಿಲಾಲಾಪೆಯನಾಜೆಲುವೆಯ | ನಾಕುವಲಯಗಂಧಿಯನು ||
ಆಕಾಂತಾಮಣಿಯನುಕಂಡುವಿರಹ | ವ್ಯಾಕುಲನಾಜೇಚರನು ||೧೦||

ವನದೇವತೆಯೊವಾಸವಸವಘುವೊದುಗ್ಧ | ವನಧಿಯಣುಗೆಯೊಮನ್ಮಥನ ||
ವನಿತೆಯೊಬಿದಿಯಸತಿಯೊಶಚಿಯರಸಿಯೊ | ಯೆನುತಪದ್ಮಜನೀಕ್ಷಿಸುತ ||೧೧||

ಆವಲೋಕಿನಿಯೆಂಬವಿದ್ಯೆಯಕರೆದುಮ | ತ್ತಿವಳಕೊಂಡೊಯ್ವುವಾಯುವನು ||
ತವಕದಿಂದುಸುರಿಸಲಾದೇವತೆಯಿಂ | ತವನೊಳುಮಾತನಾಡಿದುದು ||೧೨||

ಗರುವೆಯಿವಳುಸಾಮಾನ್ಯನಸತಿಯಲ್ಲ | ಭರತತ್ರಿಖಂಡಾಧಿನಾಥ ||
ಪುರುಷೋತ್ತಮನಮೈದುನಧರ್ಮಜಾನುಜ | ಪರಮಾಂಗನರ್ಜುನನರಸಿ ||೧೩||

ಮುಳಿದೊಡೆಮಹಿಯನಾಗಸಕೆಯಾಗಸವನೀ | ಯಿಳೆಗೆಯ್ದಿಸಿತರಬಲ್ಲ ||
ಬಲಯುತನವನಣ್ಣಭೀಮನಂತದರಿಂ | ಲಲನೆನಿನಗೆಸಾಧ್ಯಮಲ್ಲ ||೧೪||

ಅಂದವಿಚಾರದಿಸೀತೆಯನೊಯ್ದುದ | ರಿಂದತಿಬಲವಾವಣನು ||
ಹೊಂದಿನಾರಕನಾಗಿಜನಿಸಿದನೆಂಬುದ | ನಿಂದುನೀಬಲ್ಲವನಾಗಿ ||೧೫||

ಪರಮಪತಿವ್ರತೆಯಿವಳನೀನೊಯ್ವುದು | ನಿರುತವೆಬೇಡನೆಂದೆನಲು ||
ಪಿರಿದಾಗಿನನಗೆಭೀತಿಯಹೋರಬೇಡತಿ | ಭರದಿಕೊಂಡೊಯ್ವುವಾಯುವನು ||೧೬||

ಒರೆಯೆನಲಾಕಾಂಚನಕಂಜಾತವ | ತರಹೋದಾಫಲ್ಗುನನ ||
ವರರೂಪಧರಿಸಿಯಿವಳನೊಯ್ವುದೆನಲಾ | ತುರದಿಂದಾರೂಪನಾಂತು ||೧೭||

ಧರಣೀತಳಕಿಳಿತಂದುಕೃತಕಸರ | ೀರುಹಮನವಳಕೈಗಿತ್ತು ||
ತರಹರಮಿಲ್ಲಿಬೀಡೇಳೆಂದಾಕಾ | ತರಿಯಾಕೆಯುಕೈವಿಡಿದು ||೧೮||

ಇಂದುಶೇಖರಿಯನುಪಿಡಿದುನಾರುವರಾಹು | ವಂದದೊಳಾಖೇಚರನು ||
ಚೆಂದಳಿರ್ದುಟಿಚೆನ್ನೆಯನಿರದೆತ್ತಿಕೊಂ | ಡಂದಾಗಸಕೆಲಂಘಿಸಿದ ||೧೯||

ಕನ್ನವಿಮಾನದೊಳಿರಿಸಿಕೊಂಡೊಯ್ವಾ | ಗನ್ನಕಾರನಚೇಷ್ಟೆಗಂಡು ||
ಸನ್ನುತಪರವಿದ್ಯಾಛೇದಿನಿಯೆಂಬ | ರನ್ನದುಂಗುರವಮುಟ್ಟಿಸಲು ||೨೦||

ಕೃತಕಾಂಗವಳಿದುನಿಂದಖಗನನಿ | ಜಾಕಾರವನೋಡುತವಳ'||
ಕಣ್ಗಳಮುಚ್ಚಿದಳುಕಮಲಿನಿದೋ | ಷಾಕರನನುಕಾಡಂತೆ ||೨೧||

ತೆರೆದಿಂಕಣ್ಮುಚ್ಚಲಬಲೆಯಿ | ನ್ನೇ ೀಕೆಬಿಡುಸಂಶಯವ ||
ಒತುನೋಡೆನ್ನನೆನಲುನೋಡದೆಬಿಡು | ವಾತನಿಂತಾಡಿದಳವಳು ||೨೨||

ಎಲವೊಪಾತ್ಮನೆಗೆವೊಗುವನಾಯಂ ೨ | ನಲಸದೆನಾನೋರ್ವಳಿಪ್ಪ ||
ನೆಲೆಗೆಬಂದೆನ್ನನುಕಳ್ದುಕೊಂಡೊಯ ಮು | ಕಲಿತನವೇಮನುಜರಿಗೆ ||೨೩||

ಎಸುತವನೊಳುನುಡಿದಾನಂತಕಸ ನಸಿಲಚರುಗಳನುಜಾತ ||
ಮನುಜಮಂದಾರಪಾರ್ಥನಸತಿದ ನ | ತನುಜೆದ್ರೌಪದಿಯೆನ್ನನಿವನು ||೨೪||

ಚೋರತನದಿತಂದಪಾತಕನನುಚೇಜ | ಚೋರುಗಸಂರಸಂತಿಯೊಳು ||
ಆರೊಬ್ಬರಳುಕಿಸಿಯೆನ್ನೀಸೆದೆಯನು | ಕಾರುಣ್ಯಮಾನಸರಾಗಿ ||೨೫||
ಬಿಡಿಸುವವೀರರುಂಟೇಯೆಂದುಶೋಕಿಪ | ಮಡದಿಯಮೊರೆಯನುಕೇಳಿ ||
ನಡುಬಾನೊಳೆಡೆಯಾಡುವಬಿಜ್ಜಾದರ | ಕಡುಗಲಗಳೊಳ್ಕಲಬರು ||೨೬||
ಬಧಿರರಂದದಿಕೇಳದಿಮುಷನುಚಿತಮೆಂ | ದಿನರಾಗಲೊಡನಾಪದ್ಮ ||
ಅಧಟಿಂದತಿಯುದ್ದಂಗೆಯ್ದುನರನು | ಬೆದರಿಸಿದನುಸಿಯುಷನೊಳು ||೨೭||
ಈತೆರದಿಂಜೇಜದರತನೋಡಿಸಿದಾ | ಪಾತಕಿಯಿಂತವಸುಕಂದು ||
ಆತರಳಾಕ್ಷ್ಮಿಯೆನಗೆಶರಣಿಲ್ಲೆಂದು | ಘೂರ್ಣಕಲ್ಲಿಂದುಮುಳಿ ||೨೮||
ಶರಣಾಗುವೀರಫಲ್ಗುನದೇವಯೆನುತುನು | ರ್ದಿರವೆನೀಳ್ವಜನಾಳನು ||
ವರಪರ್ಣಾಲಘುವೆಂಬಗ್ಗಯುಧೈಯಿಂದ | ತರಿಸಿಪಮಾನದೊಳಿರಿಸಿ ||೨೯||
ಚೆಸಾಗಿನೀನೊತಂಬಟ್ಟಲ್ಲದೆನಾನು | ನಿನ್ನಮ್ಮಸೋಂಕುವೆನಿಲ್ಲ ||
ಇನ್ನುನೀನಿಂತೆಣಿಸಲುಜೇಡವೆನಲುಗು | ಣೋನ್ನತೆಯಿಂತೆಂದಳಾಗ ||೩೦||
ಎತಾನುಬೀಸೆನ್ನಮುಟ್ಟಿದೆಯಾಡೊಡೆ | ಕಿತ್ತಿಡುವೆನುನಾಲಗೆಯು ||
ಮತ್ತೆನ್ನಪತಿನಿನ್ನತನುಯಂಜೀವವ | ನೊತ್ತಿಕೀಳದೆನುಮ್ಮಸಿಹುಸೆ ||೩೧||
ಎನುತನುಡಿದಪರುನುಡಿಗೇಳಿಯಾಳ | ನಿಸಿಸಮುಟ್ಟಿದೌ ದ್ರೌಪದಿಯ ||
ಅಸಿಲವೇಗದಿನಿಜನಗುರಗೆಯ್ದಿಸಿತನ್ನ | ಮನೆಯೊಳುಕಾಪಲಸಿರಿಸಿ ||೩೨||
ಆರಥನೂಪುರಚಕ್ರವಾಳಕೆಮ | ತ್ತಾರುಜಾರದನೂಳ್ಕೆಯೊಳು ||
ಸೇರಿಸಿದನುಪಬ್ರಮಖರ್ವರವನು | ಘೂರ್ಣಿಸಿದಾಸಂರ್ಭತದಿ ||೩೩||
ಅಪುರವನಕೆಪಲವುದೇವತೆಗಳ | ಕಾಪಸಲಿಸಿಯಾಟಳನು ||
ಆಸಗಳೊಳುತನ್ನಯಭಾವಶಂಖನು | ಪೀಪಾಲಕವಾನುದೇವ ||೩೪||
ಅಲ್ಲಿಯತೀರ್ಥೇಶನಸಮವಸೃತಿ | ಗುಲ್ಲಾಸದಿಂಪೋಗಲವನು ||
ನಿಲ್ಲದೆತಾನವಸೊಡನೆಯ್ದನಿತ್ತಲು | ಪುಲ್ಲಾಕ್ಷಿದ್ರೌಪದಿದೇವಿ ||೩೫||
ಇನಿಯನಮೊಗಗಾಣ್ಬನ್ನೆವರೆನಗನ | ಶನಮೊಂದುಭಾಷೆಯುಮಾಪ್ಪ ||
ಅನಿತರೊಳಾಮನೆದೈವಗಳತ್ಯವು | ಜನಿಸಿಬದ್ದಡವಗಲುಳ್ಕು ||೩೬||
ಅದನುಕಂಡಾದುಷ್ಟನತಂದೆತಾಯಿಗ | ಳದಿರುತಒಂದವಳೊಡನೆ ||
ನದಮಲಚರಿತೆಪತಿವ್ರತೆನಿನ್ನೀ | ಹೃದಯದೊಳಗೆಚಿಂತೆಜೇಡ ||೩೭||

ಭೂವಿನುತನುನಿನ್ನ ಪತಿಯಿರ್ದಲ್ಲಿಗೆ | ಓವದೆನಿನ್ನನೆಯ್ದಿಪೆವು ||
ಈವಚನವನುಸಂಬೆಂದುಕೈಮುಗಿದಿ | ರ್ವಾವೇಳೆಯೊಳುಫಲ್ಗುನನು ||೩೮||

ಅತ್ಯಲುತ್ತುಮಕನಕಾಬ್ಜವತಂದಾ | ಮತ್ತಗಜೋಪಮಗಮನೆ ||
ಚಿತ್ತವಲ್ಲಭೆದ್ರೌಪದಿಯನುಕಾಣದೆ | ಒತ್ತರವೊತ್ತಿದಂತಾಗಿ ||೩೯||

ಒಳಿಕಲ್ಲಿಬಳಸಿದಲತೆವನೆತಾವರೆ | ಗೊಳಪೂಗಿಡುಗಳೊಳರಿ ||
ಲಲನೆಯಕಾಣದೆಕಳವಳಿಸಿದನು | ಮ್ಮಳಿಕೆಯನಾಫಲ್ಗುನನು ||೪೦||

ನಸುಮೂರ್ಛೆವೋಗಿತನ್ನಿಂತಾನೆಳ್ದೆ | ನ್ನಸಿಯಳಕೊಂಜೊಯ್ದವನು ||
ಅಸುರನೊಸುರನೊಖೇಚರನೊಪನ್ನಗನೋ | ವಸುಧಾಚರನೊಮತ್ಪವನ ||೪೧||

ವಿವಿಜೋರಗನರಲೋಕದೊಳಾವೆಡೆ | ಯನಳಿರಲಲ್ಲಿಗೆವೋಗಿ ||
ತವಕದಿನವನತಲೆಯುಸೆಂಡೊಯ್ದೆನ್ನ | ಯುವತಿಯುತರೆಂಡುವೆನೆ ||೪೨||

ಎನುತತಿಕೋಪಾರೂಢಪಾನಸನಿ | ರ್ಪನಿತರೊಳಾಪದ್ಮನಾಭ ||
ಜನನುತೆಪಾಂಚಾಲಿಯನುಕೊಂಡೊಯ್ವಾಗ | ಘನತರಯುದ್ಧವಮಾಡಿ ||೪೩||

ಗೆಲವನುಹಡೆಯದೆಬಂದಖೇಚರನೋರ್ವ | ನಲಘುವಿಕ್ರಮಯೆಡೆಗೆಯ್ದಿ ||
ಲಲನೆಯನಾಪದ್ಮನಾಭನುಕೊಂಡೊಯ್ದ | ನೆಲೆಯುನುಸುತಲದನರಿದು ||೪೪||

ತನ್ನವಿದ್ಯೆಯಿನಾತಮಣಿಯಿರ್ದೆಡೆಯನು | ಚೆನ್ನಾಗಿಯರಿದುನಿಶ್ಚಯಿಸಿ ||
ಉನ್ನತಸಕ್ಯಮಿಯಾಧರ್ಮತನುಜನ | ಸನ್ನಿಧಿಗಾರದೆಯ್ದುತವೆ ||೪೫||

ಲಲನಾಮಣಿವೋದವೃತ್ತಾಂತವವೇಳೆ | ಯಲಘುವಿಕ್ರಮಯನಿಲಜನು ||
ಮುಳಿಯಲುನಿಲಿಸಿತಾಪೂರ್ವಾರಣ್ಣನಪದ | ತಳಕೆನಮಿಸಿಂಬೇಳ್ಕೊಂಡು ||೪೬||

ಚಾರುವಿಚಿತ್ರವಿಮಾನವನಡವರ್ಚಾ | ದ್ವಾರಾವತಿಪುರಕೆಯ್ದಿ ||
ನಾರಿಯನಾಖಳನೊಯ್ದತೆರನಬಲ | ನಾರಾಯಣನೊಳಗಾಗುರುವೆ ||೪೭||

ಅನಾರ್ತೆಯಂಕೇಳಿಕಡುಮುಳಿದಾಬಲ | ದೇವವಾಸುದೇವರುಗಳು ||
ಆವಾಯುಸುತನನೊಡನೆವಿಮಾನವ | ತಾವೇರಿಯಸಿಲವಾರ್ಗದೊಳು ||೪೮||

ಜಂಬೂದ್ವೀಪವೊರಮಟ್ಟಲನ | ಣಾಂಬುಧಿಯನುದಾಂಟುತದರ ||
ಮುಂಬಳಸಿದಧಾತಕಿಖಂಡದಮೂಡ | ಣಿಂಬುವಡೆದಮೇರುಗಿರಿಯ ||೪೯||

ಕಾಲನದಿಕ್ಕಿನಭರತದವಿಜಯಾರ್ಧ | ಶೈಲದತೆಂಕಣತಟದ ||
ಮೇಲೆವಿರಾಜಿಸರಥನೂಪುರಚಕ್ರ | ವಾಳಪಟ್ಟಣಮನೆಯ್ದಿದರು ||೫೦||

ಆವೊರವಳಲೊಳುಬಲಕೇಶವರುಮ | ತ್ತಾಪಾರ್ಥನೊಡಗೂಡಿನಿಂದು ||
ಆಪವನಜನಕಳುಹೆಗದೆವಿಡಿದತಿ | ಕೋಪದಿನಲ್ಲಿಗೆಯ್ತಂದು ||೫೧||

ಪುರವನವನುನೆರೆಕವಿಸಿದವಜ್ರಖ | ರ್ವರವನುದ್ಧತಗದೆಯಿಂದ ||
ಭರದಿವೊಡೆಯಲದುಡಡಿಗೊಂಡಮಣ್ಣಬ | ಗ್ಗರೆಯನೊಡೆದತೆರನಾಯ್ತು ||೫೨||

ಕಡೆಗಾಲದಕಾರ್ಮುಗಿಲೊಡ್ಡಿನಬರ | ಸಿಡಿಲೆರಗಿದಮಾಕ್ಕೆಬೊಳು ||
ಕಡುಗಲಿಭೀಮಗದಾಘಾತದದನಿ | ಯಡಸಿತುಸಕಲದಿಕ್ತಟವ ||೫೩||

ಆವಜ್ರಮಯಖರ್ಪರವನೆಬಿಡವಿಲ್ಲ | ದೋನದೆಕಾಯ್ದುಕೊಂಡಿರ್ದ ||
ದೇವತೆಗಳುಸಿಹ್ಮನಾದವಕೇಳ್ದಗ | ಜಾನಳಿಯಂತೆಬೆಜ್ಜುತವೆ ||೫೪||

ಎಲ್ಲಿಯಮಾರಿಯೆಲ್ಲಿಯಮಿಳ್ತುವೆಸುತಾ | ಕಲ್ಲುತಾಗಿದನೆಲ್ಲಿಯಂತೆ ||
ಚೆಲ್ಲಿಪಿಲ್ಲಿಯಾಗುವಂತೋಡಿದುವಲ್ಲಿ | ನಿಲ್ಲದೆದನೆದೆನೆಗಾಗಿ ||೫೫||

ಲಾಳಮುಂಡಿಗೆಗಳಕಿಳ್ತುಬಾಗಿಲಕಾವ | ಲಾಳಡ್ಡವಾದರಬಡಿದು ||
ಕಾಲಯಮನೆಬಿಂದಾಪಟ್ಟಣವನು | ಕೋಳುಗೊಂಡಂತೆಯ್ದಿದನು ||೫೬||

ಅರರಿಯದತೆರದಿಂನಿಮ್ಮರಾಜಾ | ಗಾರವವೊಗುವನಾನಲ್ಲ ||
ಸೂರರುಂಟಾದೊಡಿದಿರುಬನ್ನಿಮೆಂದಾ | ವೀರಮಾರುತಿನಡೆತರಲು ||೫೭||

ಅರಸಿಲ್ಲದೂರನಿವನುಹೊಕ್ಕುವೊರಮಡೆ | ಸಿರಿದುಕೊರತೆಯಹುದೆಂದು ||
ಪುರಪರಿಜನನೆಲ್ಲಸುತ್ತಮುತ್ತಿದುದಾ | ಗಿರಿಯಮುತ್ತಿದಮಂಜಿನಂತೆ ||೫೮||

ಇಡಿಯಿಡಿಯೆಸೆಯೆಸೆತಿವಿಕಿನಿತರಿತರಿ | ಬಡಿಬಡಿಕೊಲ್ಲುಕೊಲ್ಲೆಂದು ||
ಪಿಡಿಗುಂಜಂಬಿಟ್ಟಬಾಳುಬಲ್ಪಡಿಗೊಂ | ಡಡಸಿಮುತ್ತಿದರುಮತ್ತವನ ||೫೯||

ಅಂತವರೆಲ್ಲಹುತ್ತಿರಕೆಯ್ದುವಪರಿ | ಯಂತರತಾಸುಮ್ಮನಿರ್ದ ||
ಅಂತರಿಸದೆತದ್ಗದೆಯನುಕುಮಿತಕೈ | ತಾಂತನಿಡುತತಕ್ಷಣದೊಳು ||೬೦||

ಅರೆಬರನೊರಸಿಸೊರಬನೊರಸುವವೊಲ | ಆರೆಬರಿಡಿದೀಡಾಡಿ ||
ಅರೆಬರನವನಿಯೊಳಪ್ಪಳಿಸುತಕೊಂದ | ಸರಸಂಕತನದಿಂದವನು ||೬೧||

ಆನೆಕುದುರೆತೇರಾಳಾದಿಯಬಲು | ಸೇನೆಯೆಲ್ಲವುಬಂದುಮುಸುಕೆ ||
ತಾನದನಿನಿಸುಲೆಕ್ಕಿಸದೆಕೊಂದಿಕ್ಕಿದ | ನಾನೆಲಸೋಕರಿಪಂತೆ ||೬೨||

ತೇರಿಂತೇರನಶ್ವದಿನಶ್ವವಮದ | ವಾರಣದಿಂವಾರಣವನು ||
ಕೂರಾಳಿಂಕೂರಾಳನಿಟ್ಟಿಟ್ಟಾ | ಧೀರಮಾರುತಿಕೊಂದನಾಗ ||೬೩||

ಬೆಳ್ಳಿರಲೆಯಹಿಂಡಬೆದರಿಸಿಪರ್ಬುಲಿ | ಬಳ್ಳಿನನೆಗೆವೋಗುವಂತೆ ||
ತಳ್ಳಿಂಕಗೊಳಿಸಿತತ್ಸರವರಾಜಾಲಯ | ಕುಲ್ಲಸದಿಂದೆಯ್ದಿದನು ||೬೪||

ಅದನುಕಂಡಾಪಡಕಣದಾಳ್ಗಳಾರರಾಜ | ನದನದರಣಮಂಡಲಕೆ ||
ಒದಗಿತುತ್ಸುರುಬಾಗಿಸಿಂದುಬಾಗಿಲನಿಕ್ಕ | ಲಧಟನನಿಲನಂದನನು ||೬೫||

ಜನಸೊಕ್ಕಲಿಕ್ಕಿದಂದದಿನಿರದಾಭಟ | ನಿವಹವೆಲ್ಲವಸಲಕಿಕ್ಕಿ ||
ತನಕಟ್ಟುಬಾಗಿಲನೊಡ್ಡುಕೆಡಹಿಸ | ತ್ತವನಿಸಗೃಹಕೆಯ್ದಿದನು ||೬೬||

ಸೂರುಲೋಕದಗಂಡನರ್ಜುನದೇವನ | ನೀರೆಯಾವೆಸೆಯಿರ್ದಪಳೊ ||
ತೋರಿತೋದದೊಡೆಕೂಲುವೆನೆಂದಾಗಾಡಿ | ಕಾದನೆಲ್ಲರಸಂಬಿಸುತ ||೬೭||

ಎಕ್ಕಟಿಯೊಳಗಿರ್ದಪಾಕಪಯಸುಕಂ | ಡಕ್ಕಜೋಗದೊಳೇಳಿನಲು ||
ದಿಕ್ಕನೆಪೊರಮಟ್ಟಸಂಶಯವುರಕ್ಕೈಯೊ | ಳಿಕ್ಕಿದಮಣಿಮುಟ್ಟಿಕೆಯನು ||೬೮||

ಸದವಿದಾಷ್ಟೇದಿನಿಯನುಮುಟ್ಟಿಸೆ | ಗರುವೆಯವನನಿಜರೂಪು ||
ಸಿರುತನುವಾಗಿರೆವಾಯುಮಿಲ್ಲೆರಸುತಾಸತಿ | ಧರದಿಂದಪಿತಸಬರಲು ||೬೯||

ಜಾಗಲಕಾಪಿನಘಟಸಂತತಿಬಂದು | ತಾಗಲಣ್ಮಿಪೆರಸಾರೆ ||
ಆ ಗಂಡುಗಲರಾಜ್ಯಶ್ರಿಗೆನಜೆತ | ಪ್ಪಾಗಲರ್ದಾಗದಿರಾಗೆ ||೭೦||

ಒಡಿಗೆಯಿಂದ.ದುರ್ಯನೆಲ್ಲಿಯಕಾಯಂನನಿ | ಕಡುಗಲಿಕೈಯೆತ್ತಿಪೊಯ್ದೆ ||
ಕೆಡೆಯಲವರುಬವಸುಂಡುಡರ್ಪನೆತೇಗಿ | ಯೊಡಲತಡಹಿಕೊಳ್ಳತಿರ್ದ ||೭೧||

ಪೆಡಿರೊಳಾಟಸಂಧವನಲ ಆಂಗಣ | ಗಂಡಿಗರವಕೊಂದಕೊಲೆಯು ||
ಕಂಡುಬೆದರುದೂರದೊಳಿರ್ದರಾ ಆಂಬ | ಕಂಡಕಾಗೆಯತೆರನಾಗಿ ||೭೨||

ಪಾಡುವಿಗನಪಟ್ಟಣದೊಳುತಿಸಗಿದಿ | ರಾದರನುರೆಯಂಬಿಸುತ ||
ಬೀದಿಯುಸಿಂಗದಂದದೊಳೆಯ್ದಿದನುಎ | ನೋದಪಿಕ್ಕಮಿಳೇಮಸೇನ ||೭೩||

ಬೆಂಗೊಟ್ಟುಬೆದರಿಬಾಗಿಲನಿಕ್ಕಿಮನೆಮನೆ | ಯಂಗಣಕೋಡಿದರಾಗ ||
ಅಂಗಡಿಯಾನೆಯಂದದಿಮೆಲ್ಲನೆಯ್ದುವ | ಭಂಗಸಕಾಣ ತಿರ್ದಪರು ||೭೪||

ಬಳಿಕಾಕಳವಳವನುಕಂಡುಮೈಗಲಿ | ಗಳುದುರುದುಂಬಿಕಲಿಗಳು ||
ಅಳಿಗಲಿಗಳುವ್ಯಮಗಲಿಗಳೆಲ್ಲರಭೀಮ | ನುಳಯದೆನೆಲಕಿಕ್ಕಿದನು ||೭೫||

ಕಂಡುಭೀತಿಯೊಳೀತನುಕಡೆಗಾಲದ | ಖಂಡಪರಶುವೊಬ್ಬೈರವನೋ ||
ದಂಡಧರನೊನಾವಿಂತಪ್ಪವೀರನ | ಕಂಡುದಿಲ್ಲೆನುತಿರಲವರು ||೭೬||

ಎಲೆಪುರಜನದೇಪರಸ್ತ್ರೀಯನುಕಳ್ವಾ | ಖಳನನೆನಗೆತೋರ್ಪಿಸಿದೊಡೆ ||
ನೆಲದೊಳುನೆರವುವೆನೆನುತಗದೆಯತೂಗು | ತಲಸಿಕೆಯಿಂನಡೆತಂದು ||೭೭||

ಮುಂಸೆನಾದುಸಿಯನುನಡೆಯಿಸಿತಾನಾ | ಪಿಂದೆನಡೆದುತತ್ಪುರದ ||
ಇಂದಿರದೆಸೆಯೊಳುನಿಂದಿರ್ದಬಲಗೋ | ವಿಂದಫಲ್ಗುನರಕೂಡಿದನು ||೭೮||

ಅದ್ಯುಪದಾತ್ಮಜೆಬಲಗೋವಿಂದರ | ಪಾದಕೆರಗಿಪರಕೆಯನು ||
ಸಾದರದಿಂದತಳೆದುಬಂದುಸಿಂದಳಾ | ಕಾದಲನಡೆದಭಾಗದೊಳು ||೭೯||

ಜಂಬೂದ್ವೀಪದಿಂದಾವಿಲ್ಲಗೆಬಂದ | ರೆಂಬವಾರತಿಯೆಸ್ಪೆಸೆಯ ||
ತುಂಬಬೇಕೆನುತಶಂಖವನೂದಿದನಾ | ಅಂಬುರುಹೋದರನಾಗ ||೮೦||

ಅದಿರತವನಿಯಾಗಸದಿಂಮಡುತತಿ | ಯುದುರಿದುವಾಶಾದಂತಿ ||
ಬೆದರಿದುವಾವಾಸುದೇವನುಘರಟಂ | ದೊದರಿಯೂದಿದಶಂಖರವಕೆ ||೮೧||

ಅಘಟನಾಸಮಸರಣಮಂಟಪದೊಳಿ | ರ್ದಘಟನಲ್ಲಿಯಮಾವಾಸುದೇವ||
ಇದುತಾನೆಲ್ಲಿಯದೆಂದುಕೇಳಿದನಾ | ಪದಿತಜೋಧರುಗಣಧರರ ||೮೨||

ಭೂಪತಿಕೇಳಲಂತೆಂದರುಜಂಬೂ | ದ್ವೀಪದಭರತಾರ್ಧಜಕ್ಕೆ ||
ಶ್ರೀಪುರುಷೋತ್ತಮನವನವೈದುಸನತಿ | ಕೋಪತೈತಾತಫಲ್ಗುನನು ||೮೩||

ಚರಮಾಂಗನವನವಲ್ಲಭೆದ್ರೌಪದಿಯೆಂಬ | ತರುಣಿಯಿನ್ನವೈದುಸನು ||
ದುರುಳತನದಿನಂಚಿಸಿತಂದುಸಿಬಪುರ | ವರದೊಳುಸೆರೆಯುಸಿಕ್ಕಿದನು ||೮೪||

ಅದನರಿದಾವೆಂಬಳಿಂದನದಾ | ಸುದತಿಯನಲ್ಲಿಂದತಂದು ||
ಪದಪಿಂಪೂದಿದಶಂಖಸ್ವರವೆನಿಸ | ಲದಕೆಳೆಯಾಶಂಖಜಕ್ಕೆ ||೮೫||

ಅಸಮವಸೈತಿಯುಧಪಗೆವಂದಿಸಿ | ಯೋಸರಿಸವೆನಿಸೆತಂದು ||
ಅಸುರಮಪ್ಪಕೋಪದೊಳೂರಿಗೈದಿನು | ಹಾಸೇನೆಯನೆಲ್ಲಕೂಡಿ ||೮೬||

ಸಂಗರರಂಗಕೆನಡೆವಸಮಯದೊಳ | ಗಂಗೀಕರಾಮಂತ್ರಿಗಳ ||
ಜಂಗುಳಿನೆರೆದುಬಂದಿಂತೆಂದರಿಮರ್ದನ | ರಂಗಪೆಶಂಖಜಕ್ಕೇತ ||೮೭||

ಅಪಚಾರದಿಂಸಿನ್ನವೈದುಸನಾಪರ | ಯುವತಿಯವಂಚಿಸಿತಂದು ||
ಭವನದೊಳಿಡೆಸೆರೆಯನುಪಿಂತನಬಂದು | ತವಕದಿಂದಾಬಲ್ಲಿದರು ||೮೮||

ತಮ್ಮಸೊಮ್ಮನುತಾಮೊಯ್ಯಲೇತಕೆನಿಸ |ಗುಮ್ಮಳಮಾವುಜ್ಜುಗವು ||
ಸಮ್ಮತವಲ್ಲೆಂದುಪಲವುಬುದ್ಧಿಯಪೇಳಿ | ಸುಮ್ಮನಿರಿಸೆಯಾನೃಪನ ||೮೯||

ತಾಮಾಬಳಿಯಿಂಬಂದೂರಮುಂದಿರ್ದು | ರಾಮಕೇಶವಭೀಮನರರ ||
ತಾಮರೆವಜ್ಜೆಗೆರಗಿಕೈಮುಗಿದುನು | ಪ್ರೇಮದಿನಿಂತೆಂದರಾಗ ||೯೦||

ಕಡುಗಲಿತನದಿಂದಿಲ್ಲಿಗೆಬಂದುನಿ | ಮ್ಮೊಡವೆಯತಂದುನೀವಿಲ್ಲಿ ||
ತಡವುದಕೇನುಕಾರಣಮೆಂದುಪಲತೆರ | ದೊಡಬಡಿಕೆಯುಮಾತನಾಡೆ ||೯೧||

ಆಮಾತನವಧಾರಿಸಿರಾಮಕೇಶವ | ಭೀಮಾರ್ಜುನರುಪುಷ್ಪಕವನು ||
ಕೋಮಲೆಯಾದ್ರೌಪದಿಗೂಡಿಯುರ್ದುನು | ಪ್ರೇಮದಿತಿರುಗಿದರಾಗ ||೯೨||

ಬದರೀವನವೊಕ್ಕುಧರ್ಮಜನನುಕಂ | ಡಧಟರುಭೀಮಕಿರೀಟಿ ||
ಸದಮಲಚರಿತೆವಾಂಚಾಲಿಯುನಲ್ಲಿನ | ಮ್ಮದದಿಬಲಾಚ್ಯುತರಿರಿಸಿ ||೯೩||

ಕೊಂತಿಮಹಾದೇವಿಯನೊಡಗೊಂಡತಿ | ಸಂತೋಷದಿನಿಜಪುರಕೆ ||
ಅಂತರಿಕ್ಷಪಥದೊಳುವೋದರಿತ್ತಲು | ಕೌಂತೇಯರಾವಿಪಿನದೊಳು ||೯೪||

ನಿಜದೇಶನಿಜರಾಜಧಾನಿನಿಜಾಲಯ | ನಿಜಬಂಧುಜನದಮಧ್ಯದೊಳು ||
ನಿಜಸುಖದೊಳಗಿರ್ದಂದದಿನಿರ್ದರು | ನಿಜಭುಜಬಲಶಾಲಿಗಳು ||೯೫||

ಈರೀತಿಯಿಂದವಧಿಯುತಾವುಕೈಕೊಂ | ಡೀರರಾರುವತ್ಸರಕಳೆಯೆ ||
ಧೀರೋದಾತ್ತರಲ್ಲಿಂಪೋಪಕಾರ್ಯಮು | ನಾರೈದಾವ್ರೌಪದಿಯುನು ||೯೬||

ಆಪಾಂಚಾಲನಬಳಿಗೆಯ್ದಿನಿತಾ | ವಾಪಳುವನುಪೊರಮಟ್ಟು ||
ಆಪೂರ್ವಮುಖವಾಗಿನಡೆದು ಕಣ್ಗೊಪ್ಪುವ | ಶ್ರೀಪರ್ವತವಸಾರಿದರು ||೯೭||

ಹರುಷದಿಕೆಲದಿನಮರ್ದಲ್ಲಿಕಾಂಚೀ | ಪುರಕೈದಿಕೆಲಪಗಲಿರ್ದು ||
ವರುಣದಿಶಾಮುಖವಾಗಿನಡೆದುಬಂ | ದುರುಕರ್ಣಾಟಕಕೆಯ್ದಿ ||೯೮||

ಆವಿಷಯದೊಳುರಂಜಿಸುಪವಿರಾಟಮ | ಹೀವಲ್ಲಭಪುರಕೆಯ್ದಿ ||
ಆವೂರಸನ್ನಿಧಿಯೊಳಗರ್ಗುವಿಸುವಮ | ಹಾವಿಪಿನದಮಧ್ಯದೊಳು ||೯೯||

ಕಡುದೊಡ್ಡಿತಪ್ಪಬನ್ನಿಯುಮರದೊಳುತಾವು | ಪಡೆದದಿವ್ಯಾಸ್ತ್ರಂಗಳನು ||
ಮಡಗಿವಿದ್ಯಾದೇವತೆಗಳನವಕೆಕಾಪ | ನಿಡುತಲ್ಲಿಂಬಂದರಾಗ ||೧೦೦||

ರೂಪಪರಾವರ್ತನವಿದ್ಯೆಯಿಂನಿಜ | ರೂಪವಪಲ್ಲಟಮಾಡಿ ||
ರೂಪಮನ್ಮಥಧರ್ಮಜನುಧರಾಮರ | ರೂಪನುಕೈಕೊಂಡುಬಳಿಕ ||೧೦೧||

ಕ್ಷ್ಮೋಣಿಯೊಳಿಂತಪ್ಪವಾರ್ತನರೂಪನು | ಕಾಣಿವೆನುತಪುರಜನವು ||
ಮಾಣದೆನಿಂದುನೋಡುತ್ತಿರಲವನುವು | ರಾಣಭಟ್ಟವೆಸರಾಂತು ||೧೦೨||

ಇಂತುನಡೆದುಬಂದಾವುಹೀಪತಿಯಸ | ಭ್ರಾಂತರಾಳವವೊಕ್ಕವಗೆ ||
ಸಂತಸದಿಂದಕ್ಷತೆಯುಸಿಟ್ಟಾಸತ್ಯ | ವಂತನುಹರಸಿಕುಳ್ಳಿರ್ದು ||೧೦೩||

ಬಳಿಕಮುಪನ್ಯಾಸಮನಲ್ಲಿಯುಬುಧ | ರೆಳಸಿಕೇಳ್ವಂತುಚ್ಚರಿಸಲು ||
ಇಳೆಯಾಧಿಪನೆಚ್ಚಿಯವಗೆಜೀವಿತವವೆ | ಗ್ಗಳಮಾಡಿನಿಲಿಸೆಮತ್ತಿತ್ತ ||೧೦೪||

ಮಾರುತ್ತಿಯಾವುಹೀಪತಿಯುಕಾಣಲುನೀ | ನಾರೆನಲಾನುಸುವ್ವಾರ ||
ಧಾರಿಣಿಯೊಳುಮಲ್ಲಯುದ್ಧದೊಳೆನಗಿದಿ | ರಾರಿಲ್ಲವೆಂದಲ್ಲಿನಿಲಲು ||೧೦೫||

ಮತ್ತೆಕಿರೀಟಿನಟ್ಟುವನಾನಕುಲನ | ತ್ಯುತ್ತಮಹಯಶಿಕ್ಷಕನು ||
ಮೊತ್ತದಹಟ್ಟಿಯತುರುವಿಗಧ್ಯಕ್ಷಗು | ಣೋತ್ತಂಸನಾಸಹದೇವ ||೧೦೬||

ಇಂತೀರೂಪವಕೈಕೊಂಡಾಭೂ | ಕಾಂತನಸಮ್ಮುಖವಾಗಿ ||
ತಂತಮ್ಮತೆರನನೇಳಲುಕೇಳಿಯವರನಿ | ಶ್ಚಿಂತದಿನಿರಿದನವನು ||೧೦೭||

ಇಂತುವೈಗರೆದಾಮತ್ಸ್ಯನಗರಿಯೊಳು | ಕೌಂತೇಯನಿರಲೊಂದುದಿವಸ ||
ಅಂತಕನೇಯಂದವಡೆದೆಯ್ದಿದನೋಯೆಂ | ಬಂತೋರ್ವನತಿಬಲಯುತನು ||೧೦೮||

ಬಲ್ಲಿದನವನುವಿಷಮಖರ್ಪರನೆಂಬ | ಮಲ್ಲನಾಪುರವಸಿಕೆಯ್ದಿ ,
ಉಲ್ಲಾಸದಿಂದಕೀಚಕನೆಂಬವನಮುಖ | ದಲ್ಲಿವಿರಾಟನಕಂಡು ||೧೦೯||

ಮಲ್ಲಗಾಳಿಗದೊಳಗೆನಗಾದಿರಾಗುವ | ಬಲ್ಲಿದರನುತುದುನಿಲಿಸು ||
ನಿಲ್ಲದೆನಲುಬಾಣಸಿಗವೇಷವನಾಂತ | ಗೆಲ್ಲಕಾರನುಭೀಮಸೇನ ||೧೧೦||

ಎಲವೋವಿಷಮಖರ್ಪರನಿನ್ನೊಳಗುಳ್ಳ | ಬಲುಹನೆನ್ನೊಳುತೋರೆನಲು ||
ನೆಲೆದಾಣ್ಮನುರುಮುದದಿಂಮಲ್ಲರಂಗವ | ನೆಲೆಮಾಡಿಸಿಕುಳ್ಳಿರಲು ||೧೧೧||

ಇದಿರಾದಜಗಜಟ್ಟಿಯಕಂಡುಕೋಪದಿ | ನಧಟರದೇವಸುವ್ವಾರ ||
ಮದದಂತಿಯನುಮರ್ದಿಸಿಪ್ಪಮದಂದದಿ | ನವಿರದೆನೆಲಕಿಕ್ಕಿದನು ||೧೧೨||

ಅದನುಕಂಡಾವುತ್ಸ್ಯನೃಪನಮೈದುನನತಿ | ಮದಯುತನಾಕೀಚಕನು ||
ಪುದಿದಕೋಪದೊಳಿದಿರಾಗಿಖಡ್ಗವಪಿಡಿ | ದೊದಬರಲುಪವನಜನು ||೧೧೩||

ಅವನಖಡ್ಗವನುಸೆಳೆದುಹಾಕಿಕಾಲ್ವಿಡಿ | ದವನೀತಳದೊಳಪ್ಪಳಿಸಿ ||
ಜವನದಾಡೆಯೊಳಿಕ್ಕಲಾನೃಪತಿಯಸಭೆ | ಯವಧರಿಸಿದುದುವಿಸ್ಮಯವ ||೧೧೪||

ಅಂತಾವುದನುಕಂಡಾವುತ್ಸ್ಯನೃಪತಿಯಿಂ | ತೆಂದನೆಲೇಬಾಣಸಿಯೆ ||
ಭ್ರಾಂತಕೀಚಕನುಜಟ್ಟಿಗೆಸಲುವಾಗಿತ | ನ್ನಿಂತಾನೆಯಳಿದುಹೋದುದಕೆ ||೧೧೫||

ನಿನ್ನ ಮನದೊಳೆಣಿಕೆಯುಮಾಡಬೇಡೆಂದು | ಮನ್ನಿಸಿಕಳುಹಲೆಯ್ತಂದು ||
ನನ್ನಿ ಕಾರರುಪಾಂಡವರುಮೈಗರೆದಿರ | ಲನ್ನೆಗಮಿತ್ತಕ್ಕೊರವಗೆ ||೧೧೬||
ಅವಧಿಯಿಪ್ಪಾರಾರುಸಂವತ್ಸರಮಾಪಾಂ | ಪಾಂಡವರಿಗೆಪರಿಪೂರ್ಣಮಾಯ್ತು ||
ಅವರಿರ್ದಜ್ಞಾತವಾಸದನೆಲೆಯನು | ಪವರಿಸದವಿಚಾರದಿಂದ ||೧೧೭||
ಇಂತುಮೆಲ್ಲನೆಮಾಡಿಕೊಂಡಿಹರೇಭೂ | ಕಾಂತಕೇಳೆನುತಾಶಕುನಿ||
ಮುಂತಣವನುಮಾಡಲುದಕೇಳಿಯಾಭೀಷ್ಮ | ರಂತೆಂದರಿಳೆಯವಲ್ಲಭಗೆ ||೧೧೮||
ಎಲೆಮಗನೇಕೇಳವರವಧಿಯದಿನ | ಸಲೆಸಂದಿತಂತದರಿಂದಾ ||
ಕಲಿಗಳಕರೆಸಿಯವರನಾಡುಬೀಡುಮ | ನೊಲಿದೀವುದುಚಿತವುನಿನಗೆ ||೧೧೯||
ಅಲ್ಲದಿರ್ದೊಡೆಕಾರ್ಯತಪ್ಪುವುದೆನಲಾ | ಸೊಲ್ಲಗೆಕೋಪಾಗ್ನಿಯೊಗೆದು ||
ಪೊಲ್ಲವುನಿನಿನಿಂದಿಂತೆಂದನೀವಾತ | ಗೆಲ್ಲನಪಾರ್ಥಸುತಪಿರಿ ||೧೨೦||
ಎನುತೆಂದನೆನ್ನೀಕರ್ಣನೋರ್ವಗೆಲೋಕ | ದನಿಮುಷದನುಜಪನ್ನಗರು ||
ಮೊನೆಯೊಳಗಿದಿರಾಗಲಣ್ಮರದರಿನೆನ್ನ | ಘನತರಮಪ್ಪಸೇನೆಯೊಳು ||೧೨೧||
ಹರಿಹರವಿಧಿಗಳ್ಗೆ ಹರುಷತೋಳುವೆಪೆಂಪು | ದೊರೆಗಳುನಿಮ್ಮರಿಕೆಯೊಳು ||
ಧರೆಹೊರದಂತಶಿರಧರುಮಹಾರಥ | ರಿರಲೆನಗೇಕೆಪುಚಾಡ ||೧೨೨||
ಎಂದುಕ್ಕಾರವತನ್ನ ಗರ್ವವನುಸುರಲು | ಮುಂದಾಕೆನಿಯನಂದನನು ||
ಮುಂದಣಕಾರ್ಯವನೀನೇನೋಡಿಕೊ | ಳ್ಳೆಂದುಮನೆಗೆಪೋಗಲತ್ತ ||೧೨೩||
ಒಳಿಕಪಿಚಾರಪರಂಪರದೂತರು | ಗಳನುಕರೆಸಿಪಾಂಡವರು ||
ಹಳುವಿನೊಳಗೆಹನ್ನೆರಡುವರುಷಮಿರ್ದು | ಬಳಿಕಲ್ಲಿಗೆಯ್ದಿದರವರು ||೧೨೪||
ತಿಳಿದುಬೇಗದಿಬನ್ನಿಮೆಂದುಕಳುಹಲವ | ರಲಸದೆಬಂದೆಲ್ಲೆಜೆಯೊಳು ||
ತೊಳಲಿಯರಸಿವರದೊಳುವಿರಾಟನ | ಪೊಳಲೊಳಗವರೊಂದುವರುಷ ||೧೨೫||
ಸತ್ಯನುಸುದ್ಧರಿಸಲುಮೈಗರೆದರ | ಸತ್ಯಂತಪವರದಿಸರಿದು ||
ಭೃತ್ಯರರಸಿಬಂದುಪೇಳೆಕರೆಸಿದನು | ಕೃತ್ಯಾಧಿಕಾರಿಶಕುನಿಯ ||೧೨೬||
ಬಳಿಕೆಂದನಾಪಾಂಡವರುವಿರಾಟನ | ಪೊಳಲೊಳಗಿರ್ದಸಂಶಯುವ ||
ತಿಳಿವುದಕಾವುದುಪಾಯಮೆಂದಾಭೂ | ಲಲನೇಶನುಕೇಳಲವನು ||೧೨೭||
ಪೆರತಿಲ್ಲಮತ್ಸ್ಯಮಹೀಶನನಗಿರಿಯ | ಹೊರಗೆಹರಿದುಮೇವುತಿರ್ಪ ||
ತುರುವನುನಾವುಹಿಡಿಯಲುಸೈರಿವುದಿಲ್ಲ | ನೆರೆಗಲಿಗಳುಪಾಂಡವರು ||೧೨೮||

ಈಮೈಯೊಳಗಲ್ಲದವರಕಾಣುವುದಿಲ್ಲ | ಭೂಮಿಶಾಶ್ವತಕೇಳೆಸಲು ||
ಆಮಾತನವಧಾರಿಸಿಬೇಗತನ್ನ | ದ್ರಾಮಸೇನೆಯಸೆಲ್ಲಬರಿಸಿ ||೧೮೯||
ಬಳಿಕತ್ರಿಗರ್ತಾಧೀಶಸುಶರ್ಮನ | ಗ್ಗಳಿಕವಡೆದಂಥಿಕರನು ||
ತಳುವದೀರೇಳುನಾಸಿರವನುವತಮಾಡಿ | ಕಳುಹಲವರುಬೇಗಬೆಂಬಿ ||೧೯೦||
ಆನಗರಿಯತೆಂಕಣದಿಕ್ಕಿನೊಳಗಿರ್ದ | ಕಾನೂಳುನೇವತರುವನು ||
ಆನಲಂತಾವಾರ್ತೆಯಕೇಳಿಮುಶ್ಯಮ | ಹೀನಾಥಕಕ್ಕಳಗೆಳಲಿ ||೧೯೧||
ಉತ್ತರನಸುನಗರಿಯೊಳುಕಾವಲನಿಕ್ಕಿ | ಮತ್ತೊಂದಿನಸುತಡೆಯದೆ ||
ಮೊತ್ತದಚತುರಂಗವಾಹನಿಯುದಿರದೆ | ಸುತ್ತಿತನ್ನೊಡನೈದಿಬರಲು ||೧೯೨||
ಅನಿತರೊಳಿತ್ತಲಾತಕಸೂನುಬಂದುತ | ನ್ನನುಜರೊಳಿಂತುನುಡಿದನು ||
ಕುನಯದಿಂದಾಕೌರವಕೊಟ್ಟವಧಿಯು | ದಿನನಿಂದುಪರಿಪೂರ್ಣವಾಯ್ತು ||೧೯೩||
ನಾವಿರ್ದುಡನುಕಾಣಿಸಿಕೊಳ್ಳಬೇಕೆಂ | ದೀಪ್ರಾತುರುನಸೆಲ್ಲವನು ||
ಓಪದೆಬಂದುಪಿಡಿದರಿದನುರೆಯುರಿ | ದಾಪಿರಲತಿದೋಷವಹುದು ||೧೯೪||
ಎಂದುಘಲ್ಗುನನನಿರಿಸಿತಾನಾವಾಯು | ನಂದನನನುಕೂಡಿಕೊಂಡು ||
ಬಂದು ಏರಾಟಸೈನಿಕರನುಬೇಗದಿ | ಪಿಂದಿಕ್ಕಿಬರಲನಿಲಜನು ||೧೯೫||
ಗದೆಗೊಂಡುಗಡಿತಡೆಯಿಲ್ಲದೆಬಂದನಿ | ನದಿರಪೆಕುರುಸೈನಿಕದ ||
ಇದಿರಾದವರನೆಲ್ಲರಬಡಿದಾಕಾಲ | ನುದರಪೋಷಣವಮಾಡಿದನು ||೧೯೬||
ಬಳಿಕಿದಿರಾದಸುಶರ್ಮನಪೆಡಗಟ್ಟಿ | ನುಳಿಯದೆಕಟ್ಟಿತರ್ತ್ರಜಗೆ ||
ಅಲಘುವಿಕ್ರಮಿತಂದೊಪ್ಪಿಸಲಾಕುರು | ಬಲವೆಲ್ಲನಂಜುಕೋಡಿದುದು ||೧೯೭||
ಧರ್ಮತನುಜನಾವರ್ಮವಬಿಸುಟಿಸು | ಶರ್ಮನಬಿಟ್ಟುಕಳುಹಲು ||
ಪೇರ್ಮೆಯಿನಾಮತ್ಸ್ಯನೃಪತಿತಿರುಗಲಿತ್ತ | ದುರ್ಮಂತ್ರಿಯಾಕುರುಸೇನೆ ||೧೯೮||
ಆಮರುದಿನವಿಳೆಬೆನಶೆಯಾದುದವಿ | ನಾಮತ್ಸ್ಯಪುರವೆಡಗಡೆಯ ||
ಸೀಮೆಯೊಳಗೆಮೇವಕುರುಗಳೆಲ್ಲವ | ನಾಮಪಲ್ಲಡೆಬಂದುಪಿಡಿಯೆ ||೧೯೯||
ಓಲಗಮೊಳಗಿರ್ದಮತ್ಸ್ಯನೃಪತಿಗೆ ಗೋ | ಪಾಲಕನೋರ್ವನುಬಂದು ||
ಆಲಿಸಿನೋಡಚಾರದಬಲವೆಮ್ಮಗೋ | ಜಾಲವಬಂದುಪಿಡಿದುದು ||೨೦೦||
ಕರುಬೇರೆತಾಯಿಬೇರಾದಹಿಂಡನುಕಂಡು | ತರುಗಾವಲವರುಬೇಡೆಸಲು ||
ಅರಗುಲಿತನದಿನವತಲೆವೊಯ್ದುವೈ | ಮರೆದುನಿಂದವೆಸಲಾಗ ||೨೦೧||

ಎತ್ತರವಾದಕೋಪದಿಗದ್ದು ಗೆವೊಯ್ದು | ಮತ್ತವನೇಳ್ವವೇಳೆಯೊಳು ||
ಉತ್ತರನೆಳ್ದು ಕೈಮುಗಿದೀತುರುಗಳ | ವೊತ್ತವನಾತಿರುಗಿಸೆನು ||೧೪೩||

ಎನುತಾವುತ್ತರನಾನಿಜಜನಕಗೆ | ಘನತರಮಪ್ಪಪಂಥವನು ||
ಅನುವಾಗಿಸುಡಿದುಪಬ್ಬಣವನುವೊತಮಡು | ವನಿತರೊಳಾಪಾಂಡವರು ||೧೪೪||

ತಂತಮ್ಮ ಗದೆದಿವ್ಯಕೋದಂಡಕೂರ್ವಾಳು | ಕೊಂತಂಗಳಾದಿಯಾಯುಧವ ||
ಸಂತಸದಿಂದಾಬನ್ನಿ ಯಮರದಿಂ | ದಂತರಿಸದೆತಂದರಾಗ ||೧೪೪||

ಅನಿತರೊಳಾವುತ್ತರತನ್ನ ಸೇನೆಯ | ನನುವಾಗಿವೋಹರಮಾಡಿ ||
ವನನಿಧಿಯಂತೆಘೂರ್ಣಿಪ ಕುರುಸೇನೆಯ | ವೊಸೆಯೊಳಗೀಕ್ಷಿಸಿನೋಡಿ ||೧೪೫||

ಶಿರಮನಳ್ಳಾಡಿಮನಸುಗುಂದಿನಿಂದಿರ | ಲನಿಲಜನಾಘಬ್ಧನು ||
ಪಿರಿದುಕೋಪದೊಳೊಂದೊಂದುರಥವನೇರಿ | ಕುರುಬಲಕಿದಿರಾದರಂದು ||೧೪೬||

ಒಡೆದುದಜಾಂಡವಾಗಸೆಬೆಳೆಗುರುಳ್ದುದು | ಕೆಡೆದುದುವಾಸವಶಿಖರಿ ||
ಸಿಡಿದುದುಭೂತಳವೆಂಬಂತೆಧನುವಜೇ | ವಡೆಯಲುಕಲಿಪಾರ್ಥನಾಗ ||೧೪೭||

ಶರವೊಂದರಿಂದಸಾಸಿರರಥಪತ್ತುಸಾ | ಸಿರಗಜಲಕ್ಷ ಕುದುರೆಯು ||
ನರರನುಪತ್ತುಲಕ್ಷವನಾನೆಲದೊಳು | ನೆರೆದನಾಯಿಂದ್ರಸೂನು ||೧೪೮||

ಕಡೆಯಕಾಲದೊಳೆರಗುವಬರಸಿಡಿಲಂತೆ | ಘಡುಘಡಿಸುತಲನಿಲಜನು ||
ಕಡುಮುನಿಸಿಂಪೊಡೆಯಲುಪೊಡವಿಗೆಬೀಳ್ದು | ನೆಡೆಯಿಲ್ಲದಾಕುರುಸೇನೆ ||೧೪೯||

ಪರಿವನೆತ್ತರವೊನಲಿಂಪಡಲಿಟ್ಟಂ | ತುರುಳ್ವಶಬಾನೀಕದಿಂದ ||
ಧುರಧರೆಯುತಿಫೀಕರವಾದುದತಿರಥ | ರುರವಣೆಯಿಂದಿದಿರಾಗೆ ||೧೫೦||

ಅವನಿಯಿದಾಗಸಮಿದುದಿಕ್ಕೆಂಬಾ | ವಿವರವುರಿಯಬಾರದಂತೆ ||
ದಿವಿಜತನೂಭವನಿರಡೆಚ್ಚ ನಾರಾಚ | ನಿವಹಕವಿದುದರಿಬಲವ ||೧೫೧||

ಶತಶರಧಿಯೊಳುಮುಳುಗಿಯತಿರಥರುನಿ | ತ್ತಿನಿಲಾರದೆಚಾರಿದರು ||
ಕುರುಬಲವವನೆಸುಗೆಗೆಮುಗಿಲನಿಲಸ | ಭರಕೋಡುವಂತೋಡಿದುದು ||೧೫೨||

ತೆಟ್ಟೆತೆಟ್ಟೆಯೊಳೋಡುವಕುರುಸೈನಿಕ | ಕೆಟ್ಟುದನೋಡಿಗೊಳ್ಳೆಂದು ||
ದಿಟ್ಟರವನುನಗುತವೆತುರುಗಳನುಹಿ | ಮ್ಮೆಟ್ಟಿಸಿದರುಬೇಗದೊಳು ||೧೫೩||

ಕ.ರುಬಲವೆಂಬಮಹಾವಿಪಿನಕ್ಕಾ | ಮರುತಾತ್ಮಜ ಧನಂಜಯರು ||
ಮರುತಧನಂಜಯರಾತಾದರೆಂದರೆ | ಬರುಮಿಗೆಕೊಂಡಾಡಿದರು ||೧೫೪||

ಇವರುನಿಶ್ಚಯದಿಂದಪಾಂಡವರೆಂಬುದ | ನಿವರಿಸಿಯಾಕ ರುಸೇನೆ ||
ತವಕದಿಹಿಮ್ಮೆಟ್ಟಿತಮ್ಮನಗರಿಗೆಯ್ದಿ | ಯವನಿಪಗರುಹಿದರ್ತ್ತ ||೧೫೫||

ಅಳುರುಬಲವನೋಡಿಸಿದಪಾಂಡವರೀ | ಲೋಕೈಕವೀರರೆಂಬುದಕೆ ||
ಅಕರ್ಣಾಟಾಧಿಪತಿಮತ್ಸ್ಯರಾಜನ | ನೇಕಹರ್ಷಚಿತ್ತನಾಗಿ ||೧೫೬||

ಬಂದುಧರ್ಮಜಗೆವಂದಿಸಿಯುಳಿದವರ್ಗಾ | ನಂದದಿನೆರಗಿಕೈಮುಗಿದು ||
ನಿಂದೀತೆರದಿಬಿನ್ನೆ ೃಸಿದನಾಗುಣ | ವೈಂದಾರಕಸತ್ಯನಿಧಿಯೆ ||೧೫೭||

ಆಳಿಗಾಳಾಗಿನೀವತಿಪೀನವೇಷವ | ತಾಳಿಯೆನ್ನೊಳುಜೀವಿಸಿದುದು ||
ಕಾಲದಗುಣವೈಸೆಯೆನುತವಿರಾಟಭೂ | ಪಾಲಕನತಿನೊಂದುನುಡಿದು ||೧೫೮||

ಪುರದೊಳಗಷ್ಟಶೋಭೆಯಪಾಡಿಸಿಮುದ | ಕರಿಯಮೆತ್ತಕದೊಳಗವರ ||
ಹರಿಸದಿನೇರಿಸಿರಾಜಗೃಹಕೆವಜ್ರ | ಧರಪಥವದಿನಡೆತಂದು ||೧೫೯||

ರಾಜವದನಯರಿಕ್ಕೆಲದೊಳುಜಮರವ | ನೋಜೆಯಿಗಲುಧಾಳಿಸಲು ||
ರಾಜೇಂದ್ರಚೂಡಾಮಣಿಧರ್ಮಜನಸ್ಯಗ | ರಾಜಪೀಠದೊಳುಕುಳ್ಳಿರಿಸಿ ||೧೬೦||

ಪುಂಡಳಿಕರುಮನ್ನೆಯರುಸಾಮಂತರು | ದಂಡನಾಯಕರೊಡಗೂಡಿ ||
ಚಂಡವಿಕ್ರಮಿಗಳನೋಲೈಸಿದನುಭೂ | ಮಂಡಲೇಶ್ವರನುವಿರಾಟ ||೧೬೧||

ಇಂತುವಿರಾಟನಪುರದೊಳಗಾಗುಣ | ವಂತವಿಪ್ಪಾಸುದ್ದಿಗೇಳಿ ||
ತಂತಮ್ಮತನುಜೆಯರೊಡಗೂಡಿನೆಲಹೊದ | ದಂತಪ್ಪಸೈನಿಕಸಹಿತ ||೧೬೨||

ಅತಿಮುದದಿಂಧಾನ್ಯರಾಜವಿಂಧ್ಯಕಭೂ | ಪತಿಚಂಡವಾಹನರೇಂದ್ರ ||
ನುತಸಹ್ಮಘೋಷಣಪಾಂಚಾಳಪೃಥ್ವೀ | ಪತಿಯಾದಿಯರಸರೈದಿದರು ||೧೬೩||

ಬಳಿಕಾಯಿಂದ್ರರಥಾಂಬರಚರತನ್ನ | ಬಲಪನೆಲ್ಲನಕೂಡಿಕೊಂಡು ||
ತುಳಿಲಾಳ್ಗಳುತನ್ನ ನೂರ್ವರುಸುತ | ರೆಳಸಬಳಸಿಬಂದನಾಗ ||೧೬೪||

ಪುತ್ರಾಮತ್ಸ್ಯಸೈನ್ಯಪನಸಿಜಸಖನುಗು | ಣೋತ್ತಂಸನಾಪಾಂಡ್ಯನೃಪತಿ ||
ಉತ್ತಮರೂಪಾನ್ವಿತೆಸಿಜಸುತೆಯು | ನ್ಮತ್ತಗಜೋಪಮಗಮನೆ ||೧೬೫||

ಲಲಿತಾಲಗಿಯೆಂಬಳನಾಫಲ್ಗುನಗಿತ್ತು | ಬಳಿಕತನ್ನರುಬಲಸಹಿತ ||
ಬಳಿವಳಿಯಾಗಿತಾನೇಬಂದತಿಸುಖ | ದೊಳುಕೂಡಿಯೋಲೈಸುತಿರಲು ||೧೬೬||

ಮತ್ತಿಕೆಲವುಪೃಥ್ವೀಪಾಲಕರುತ | ಮ್ಮುತ್ತಮವುಷ್ಪಸುತೆಯುತ ||
ಇತ್ತುಸುಖದಿನೋಲೈಸುತಿರಲುಮ | ತ್ತಿತ್ತಯಾದವಪುರದಿಂದ ||೧೬೭||

ಹರಿಸವಿನಶ್ಯಕನೆಂಬನೃಪತಿಬಂದು | ಚರಣಕಮಲಯುಗಕೆರಗಿ ||
ಒಲೆದನಿಂತೆಂದೆಲೆಧರ್ಮತನುಜಕೇಳು | ಮುರರಿಪುತಮ್ಮಪಟ್ಟಣಕೆ ||೧೬೮||

ಸ್ವಾಮಿಯನೊಡಗೊಂಡುಬರಹೇಳಿಯೆನ್ನನು | ಪ್ರೇಮದಿಕಳುಹಿದನೆನಲು ||
ಅವನಾತನವಧಾರಿಸಿಯಾದವರನು | ಪ್ರೇಮಕುಶಲವಾರ್ತೆಗೇಳಿ ||೧೬೯||

ಬಳಿಕೆಂದನಿಂತುಸುರಿವಪರ್ವಕಾಲ | ಕಳೆದಂತರವೊಳುಬಂದು ||
ಕಲಿನವಿಜಯನೇಮಿಜಿನಗೆವಂದಿಪೆಂದು | ಕಳುಹಿದನಾಶಕ್ಯಕನ ||೧೭೦||

ಇಂತುಕಳುಹಿಸುಖದೊಳಗಿರಲಾಶ್ರೀ | ಕಾಂತನಪುರದೊಳಗಿರ್ದ ||
ಕೊಂತಿಯೊಂದಾನೊಂದುದಿನದೊಳುವಿದುರನ | ಸಂತಸದಿಂನೋಡಲೆಂದು ||೧೭೧||

ತ್ವರಿತವಿಪೊರವಟ್ಟಬರಲೊಂದುವಿಸಿನಾಂ | ತರದೊಳಗೋರ್ವಮುನೀಶ ||
ಇರೆಕಂಡುಚರಣಕಮಲಕೆವಂದಿಸಿಯಿಂ | ತೊರೆದಳೆಲೇಜತಿರಾಯ ||೧೭೨||

ಸೊಗಯಿಸುವೆನ್ನ ಜವ್ವನದೊಳುಮುಂಪೆತ್ತ | ಮಗನಮಂದಸಿಸೊಳಗಿಟ್ಟು ||
ಜಗುನೆಯೊಳಗೆಬಿಟ್ಟೆನವನಬಾಳುವೆಯನು | ಜಗೆಗೊಂಡುನಿರವಿಪುದೆನಲು ||೧೭೩||

ನೀಮುನ್ನ ಹಡೆದಮಗನುಬಲಯುತನಾಗಿ | ಭೂವಿನಾಶ್ವರಕೌರವನ ||
ಪ್ರೇಮದಿನೊಡನುಂಡೊಡನುಟ್ಟುಬೆಳೆದನಿ | ಸ್ನೇಮನವನುಕರ್ಣನೆನಲು ||೧೭೪||

ಅವಾತನವಧಾರಿಸಿಹರ್ಷಿತೆಯಾಗಿ | ಯಾಮುನಿಪನಬೀಳ್ಕೊಂಡ- ||
ಸಾಮಜಪುರಕೆಯ್ದಿನಿದುರನಮನೆಗೆಸು | ಪ್ರೇಮದಿನಾಕೊಂತಿಬಂದು ||೧೭೫||

ಸಾನಂದದೊಳಿರಲೊಂದುದಿನದೊಳಾ | ಕಾನೀನನಬಳಿಗೆಯ್ದೆ ||
ಘನುತನವನಿವಿರೆಳ್ದವಳಡಿಗೆಸು | ಮ್ಮಾನದಿನವನತನಾದ ||೧೭೬||

ಒಸೆದುನ್ನತಾಸನವಿತ್ತುಮುಗಿದುಕೈಯ | ಬೆಸನಾವುದುಪೇಳಿಮೆನಲು ||
ಹೊಸತುರೆಯದೊಳಾನುಮುಂಪೆತ್ತಜೊಚ್ಚಿಲ | ಸಿಸುನಿನ್ನನಾಜಗುನೆಯೊಳು ||
ಬಿಟ್ಟೆನಂತದರಿಂನಿನ್ನನೋಡುವೆನೆಂಬ | ಕಟ್ಟುಮ್ಮಳದಿಬಂದೆನೆನಲು ||
ದಿಟ್ಟನದಕ್ಕಾಜ್ವಾಲಾಮಾಲಿನಿ | ಕೊಟ್ಟವುರಿಯಪಸ್ತ್ರವನು ||೧೭೭||

ಧರದಿಂದಹೊದಿಯಿಸಲೊಡನಾಪೀತಾಂ | ಬರವೆಳೆದಳಿರಂತಾಗೆ ||
ಸುರುಚಿರಪುಷ್ಪತಮಾಲಲತಿಕೆಯೆನೆ | ಸುದತಿಕಣ್ಗೊಪ್ಪವಡೆದಳು ||೧೭೮||

ಇರೆಕಂಡಿಸಸುತನಾಕೊಂತಿದೇವಿಯು | ಚರಣಕೆರಗಿಕೈಮುಗಿಯೆ ||
ತೊರೆಯಲುಮೊಲೆಹಸರ್ತಾಂಬುದಿಟ್ಟಿಗಳೊಳು | ಸುರಿಯಲುಬಿಗಿಯಪ್ಪಿದಳು ||

ಈತರದಿಂಬಿಗಿಯಪ್ಪಿಬಳಿಕತನು | ಜಾತನೊಳಿಂತಾಡಿದಳು ||
ಪ್ರೀತಿಯಿಂದೋಲೈಸಿಕೊಂಡಿರುನಿನ್ನನು | ಜಾತರಕೈಯಿಂದೆಸಲು ||೧೪೧||

ಜನಸಿಬಿನ್ನಪಕೌರವೇಶನಬಿಡುವುದು | ಕನಸುಮನಸಿನೊಳಗಿಲ್ಲ ||
ಅನಿತರಿಂದಾನುಡಿಬೇಡೆಂದಾಡಿದ | ತನಯಗಿಂತೆಂದಾಡಿದಳು ||೧೪೨||

ತನುಜನೀಪಡೆದದಿವ್ಯಾಸ್ತ್ರಂಗಳನಿ | ನ್ನನುಜರಮೇಲೆಸಬೇಡ ||
ಎನಲಂತೀಗೆಯ್ವೆನೆನ್ನಕಥನವನೀ | ವಿನಿಸವರೊಳಗಾಡಬೇಡ ||೧೪೩||

ಎಂದುಚಿತ್ರಾಂಬರಮಣಿಭೂಷಣತತಿ | ಯಿಂದವೂಜಿಸಿವಿನಮಿಸಿದ ||
ಕಂದನಬೀಳ್ಕೊಂಡಾದ್ವಾರಾವತಿ | ಗಂದೆಯ್ದಿಸುಖವಿರಲಿತ್ತ ||೧೪೪||

ಅಂತಕಸೂನುಮತ್ತಾವಪರ್ವಾಕಾ | ಲಾಂತರದೊಳಗಲ್ಲಿಂದ ||
ಸಂತಸದಿಂಪೊರಮಟ್ಟಾಲಕ್ಷ್ಮೀ | ಕಾಂತನಪುರಕೆಯ್ತಂದು ||೧೪೫||

ಒಡನೆಯ್ತಂದವಿರಾಟಮಹೀಶನ | ಕಡುನೇಹದಿಂಬೀಳ್ಕೊಟ್ಟು ||
ನಡೆತಪ್ಪಾಪಾಂಡವರವಾರತೆಗೇಳಿ | ಸಪಗರದಿಂದಕೇಶವನು ||೧೪೬||

ಪೊಳಲೊಳಗಷ್ಟಶೋಭೆಯನುಮಾಡಿಸಿಹರಿ | ಕುಲದರಸುಗಳೆಲ್ಲಸಹಿತ ||
ತಳುವದಿದಿರುಬಂದುಹರ್ಷದಿನಾಪುರ | ದೊಳಹೊಗಿಸಿದನುವಾಂತವರ ||೧೪೭||

ಇಂತುಬಂದಾಕಾಂತೇಯುರುಘುನಸೈಕ | ಕಾಂತಗೆನೇಮಾಶ್ವರಗೆ ||
ಸಂತಸದಿಂದನಮಿಸಿಯನರೊಳುನಿ | ಶ್ಚಿಂತದಿಸುಖಮಿರ್ದರಲ್ಲಿ ||೧೪೮||

ಭೂಜನವಿನುತಗುಣಾಲಂಕೃತಸುರ | ಭೂಜೋಪಮದಾನಯುತರು ||
ರಾಜೀವಸಖಸಮತೇಜರೆಸೆದರಾ | ರಾಜಾನ್ವಯಶೇಖರರು ||೧೪೯||

ಇದುವಿನಪದಸರಸಿಜಮದಮಧುಕರ | ಚದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗೊದವಿದಿಪ್ಪತ್ತೈದಾಶ್ವಾಸ ||೧೯೦||

ಇಪ್ಪತ್ತೈದನೆಯ ಸಂಧಿ ಸಂಪೂರ್ಣಂ

೨೬. ಜರಾಸಂಧನು ಕೃಷ್ಣನಮೇಲೆ ದಂಡೆತ್ತಿ ನಡೆದ ಸಂಧಿ

:o:

ಉರ್ವಿಕೊರ್ದಿದಸರ್ವಕರ್ಮಭಟರಗರ್ವ | ಪರ್ವತಕಶನಿಯೆನಿಸಿದ ||
ಸರ್ವಗೀರ್ವಾಣವಂದಿತನೇಮಿಜಿನಪಗೆ | ಸರ್ವಾಂಗವಿನಮಿತನಯೆಸು ||೧||

ನಾರಾಯಣನಾಪಾಂಡವರೊಡಗೂಡಿ | ಭೂರಿಭೋಗಾನ್ವಿತನಾಗಿ ||
ಧಾರಿಣಿಯನುಪರಿಪಾಲಿಸುತಿರಲಾ | ದ್ವಾರಾವತಿಗೊಂದುದಿವಸ ||೨||

ಹಡಗಿನಹರದನೋರ್ವಸುತತ್ಪುರಕಾ | ಹಡಗುಬಂದುಸೇರಲಾಗ ||
ಸಡಗರದಿಂದಾತಡಿಯೊಳುಬೀಡನು | ಬಿಡಿಸಿಪೊಳಲಪೊಕ್ಕನಾಗ ||೩||

ಅನಿಮಿಷಪತಿಯಮರಾವತಿಗೆಣೆಯಾಗಿ | ಲೆನಿಪಾದ್ವಾರಾವತಿಯ ||
ಮನಗೊಂಡುನಡೆನೋಡುತಿಂತಪ್ಪಪುರವಿಾ | ಮನುಜಲೋಕದೊಳಿಲ್ಲವೆಂದು ||೪||

ಪಿರಿದುಕೊಂಡಾಡುತಬಂದುಗೊಂದಣಗೊಂಡು | ಧರಣೀಶಗೃಹದಬಾಗಿಲೊಳು ||
ಅರಸಿನಸಮಯಗಾಣದೆನಿಂದಪರಭೂ | ವರರನೀಕ್ಷಿಸುತೊಳಹೊಕ್ಕು ||೫||

ಅಪ್ರತಿಹಾರಪುರಸ್ಸರನಾವೈ | ಶ್ಯಪ್ರಭುತಾನಡೆತಂದು ||
ಅಪ್ರತಿವಡೆದಾಸ್ಥಾನಕ್ಕೆಹರಿಪಂ | ಶಪ್ರಭುವಿಷ್ಣುವಕಂಡು ||೬||

ತರುಣತರಣಿಮಂಡಲದಮರೀಚಿಯಾ | ವರಿಸಿದಂಜನಗಿರಿಯಂತೆ ||
ಅರುಣರತ್ನಾಂಚಿತಭೂಷಣಪೀತಾಂ | ಬರನಿರೆಭಯಭಕ್ತಿಯಿಂದ ||೭||

ವಿನಮಿತನಾಗಿಯಪೂರ್ವವಸ್ತುವನುತಂ | ದನುನಯದಿಂಕಾಣ್ಕೆಯಾಯೆ ||
ವಿನಯದೊಳುಚಿತಾಸನದೊಳಿರಿಸಿಮತ್ತೆ | ನನುಮಾನದಿಂಮಾತನಾಡಿ ||೮||

ಪ್ರಿಯದಿಂತರಿಸಿಯತ್ಯುತ್ತಮರತ್ನಸಂ | ಚಯಮನನರ್ಘ್ಯವೆಂದೆನಿಸಿ ||
ನಯನಾನಂದಮನೀವವನಿತ್ತನು | ನಯದಿಂಬೀಳ್ಕೊಡಲವನು ||೯||

ಅನಗರಿಯೊಳುಕೆಲವುದಿನಮಿರ್ದುಮ | ನೋನುರಾಗದಿಪೊರಮಟ್ಟು ||
ಮಾನಿತಮಾದಮಾಗಧನಪುರಕೆವೈಶ್ಯ | ತಾನತಿವಿಭವದಿಂಬಂದು ||೧೦||

ಆರಾಜಗೃಹದಶೋಭೆಯನೀಕ್ಷಿಸುತಮ | ತ್ತಾರಾಜಚಕ್ರೇಶ್ವರನ ||
ಆರಾಜಭವನದಮುಂದೆಸಂದಣಿಗೊಂ | ಡಾರಾಜನಿವಹವಕಂಡು ||೧೧||

ಕಡುಪಿರಿದಚ್ಚರಿವಡೆದಾವೈಶ್ಯನು | ಪಡಿಯರರುಗಳಮುಖದೊಳು ||
ಸಡಗರದಿಂದಾಜಕ್ಕೇಶನೋಲಗ | ದೆಡೆಗೆಯ್ದಿ ಸಾಷ್ಟಾಂಗವೆರಗಿ ||೧೨||

ಮುನ್ನ ಮುರಾರಿಶನಗೆವ್ರಡುಗೊರೆಯಿತ್ತ | ರನ್ನ ವಕಾಣ್ಕೆಯನೀಯೆ ||
ಉನ್ನತವ-ತಿಯವನೋಡಿಯಚ್ಚರಿವಟ್ಟು | ತನ್ನತಲೆಯುತೂಗಿದನು ||೧೩||

ಈನಯವಿನಾಗುಣವಿನಾಜಾತಿಯಿನಾಕಾಂತಿ | ಯಾನಾಕದೊಳಗುದಯಿಸಿದ ||
ಮಾನಿತವಿನಯವಿಸ್ಪನೂಣಿತ್ಯಕಲ್ಲದೆ | ಯಿನಾನಿಂದವಕುದಯಿಸದು ||೧೪||

ಅದರಿಂದೀರತ್ನ ಮಾವೆಡೆಯೊಳುನಿನ | ಗೊದವಿದವೆಂದುವೈಶ್ಯನು ||
ಚದುರನವನುನಯನಿಂ ೀಳಲಾಭ್ರಾಂತ | ಹೃದಯನಿಂತೆಂದಾಡಿದನು ||೧೫||

ನೀರನಿಧಿಯಮಧ್ಯದೊಳುರಂಜಿಸುವಾ | ದ್ವಾರವತಿಯೊಳುನೇಮಿಶ ||
ವಾರಿಧಿವಿಜಯಬಲಾಚ್ಯುತವಸುದೇವ | ಮೂರಕುಮಾರರೆಂಬವರು ||೧೬||

ಶೂರರುಶುಭಮತಿಗಳುಶುಚಿಗಳುಗಂ | ಭೀರರುತ್ತಮರೂಪಯುತರು ||
ಧೀರೋದಾತ್ತರವರುನನಗೊಲಿದಿತ್ತ | ಚಾರುಮಣಿಗಳುಚಕ್ಕೇಶಾ ||೧೭||

ಎಂದುನುಡಿಯೆಬೂದಿಮರಸಿದಕೆಂಡವ | ತಂದುಹುಲ್ಲಿಂದಹತ್ತಿಸಿದ ||
ಅಂದದಿನರಸನಮನದಮುನಿಸುವೈಶ್ಯ | ನಿಂದಮೊಗದೊಳುದಯಿಸಿತು ||೧೮||

ಮೊದಲುತಾವೆಸಗದಿರದೆದ್ರೋಹಿಗಳಾಗಿ | ಬೆದರಿಯಾದವರುಕೊಂಡದೊಳು ||
ಹುದುಗಿಬೀಳ್ದಳಿದರೆಂದಾಡಿದವರನುಡಿ | ಯದುಬಕ್ಕಬಯಶತಾಯ್ತಾಗ ||೧೯||

ಎಂದುತುಂಬುರಗೊಳ್ಳಿಯಂದದಿಳಿಟಿಳಿಟಿ | ಲೆಂದುಕಣ್ಗಳಸೋಗೆಯೊಳು ||
ಒಂದಿದಕೆಂಪಿನಿಂದಾಜಕ್ಕಪತಿಯಿಂ | ತೆಂದುಪೆಬ್ಬೆಯನಾಡಿದನು ||೨೦||

ಎನಗಿದಿರಾಗಲಣ್ಮದೆತಾವುಹೊಕ್ಕಾ | ವನಧಿಯೆಲ್ಲವನುತುಳುಂಕಿ ||
ಇನಿಸುತಡೆಯದೆಲ್ಲರತಲೆಗೊಳ್ಳದೊ | ಡೆನಗಿವುಎಸೆಯಲ್ಲೆಸುತ ||೨೧||

ಹರದಗೆಹಿರಿದುಡುಗೊರೆಯಿತ್ತುಬೀಳ್ಕೊಟ್ಟು | ಕರೆಸಿಸೇನಾನಾಯಕನ ||
ಉರುತರಮಪ್ಪಬಲವನೆಲ್ಲವನುಸಂ | ವರಿಸಹೇಳಲುಬಳಿಕಿತ್ತ ||೨೨||

ದ್ವಾರಾವತಿನಗರೀವರದೊಳುಬಲ | ನಾರಾಯಣರುಧರ್ಮಸೂನು ||
ಮಾರುತಿಪಾರ್ಥನಕುಲಸಹದೇವರೊ | ಳಾರೈದುಮಂತಣಮಿರ್ದು ||೨೩||

ಜೂದಿಂದವಂಚಿಸಿನೀವಾಳುತಿರ್ದಾ | ಮೇದಿನಿಯನುಕೌರವನು ||
ಆದರಿಸದೆಕೊಂಡುನಿಮ್ಮಹೃದಯಕೆವಿ | ಷಾದವತಂದನೆಂದೆನಲು ||೨೪||

ಅಂತಕನಣುಗನಿಂತೆಂದನುಸೋದರ | ರೆಂತಾನುಗೈದಪೊಲ್ಲಮೆಯ ||
ಅಂತರಂಗಕೆತಹುದನುಚಿತವೆನಲುಮು | ರಾಂತಕನಿಂತನುಡಿದನು ||೨೫||

ಜನನುತಜವನ ತನುಜನಿನ್ನ ಸತ್ಯಕೆ | ಮನುಮುನಿಗಳುಪಾಸಟಿಯೇ ||
ಎನುತಮತ್ತಿಂತೆಂದನಿನ್ನೊ ಮ್ಮೆಕೌರವ | ಗನುನಯದಿಂಪಾಂಡವರೊಳು ||೨೬||

ಮುನಿಸಬೇಡವರರಾಜ್ಯವನವರಿಗೆಕೊಟ್ಟು | ವಿನಯವಿಕೂಡಿಕೊಂಡಿಹುದು ||
ಅನುಮತವಿಂದನುಜರರನಟ್ಟುವೆನೆಂ | ದೆನಲಾಧರ್ಮನಂದನನು ||೨೭||

ಅತಿಮೂರ್ಖನಾಕುರುಪತಿಯತಿಳುಹುಲ್ಲ | ಚತುರನನೀತಿಸೈದ್ಧನು ||
ಮತಿಯುತನಪ್ಪಮಾನಸನನಟ್ಟುವುದನು | ಮತವೆಂಬಮಾತನುಕೇಳಿ ||೨೮||

ಅಮುರರಿಪುತನಗತಿಸಜ್ಜನನು | ದ್ದಾಮಗುಣಾನ್ವಿತನೆನಿಪ ||
ಹರಿಕರಿಪರ್ದುಪನ್ನಗಹೆಬ್ಬುಲಿಹುಲ್ಲೆ | ಶರಭಶೀರುಂಡಪಕ್ಷಿಗಳು ||
ಪರಮನಪರಮೋಪಶಾಂತತೆಯನುನೋಡಿ | ನಿರುತದಿನಿಂದಿರುತಿಹವು ||೧೦೨||

ಅಗಣಿತಮಹಿಮನಿಂದಿರಲತ್ಯಲಾಗಿರಿ | ನಗರಾಧಿಪತಿವರದತ್ತ ||
ಬಗೆಯೊಳಿಗೆದವೈರಾಗ್ಯದಿತೊರೆದಾ | ಯುಗಲಪರಿಗ್ರಹಗಳನು ||೧೦೩||

ಅಂಗಜಮರ್ದನನಲ್ಲಿಗೆಬಂದುಮ | ನಂಗೊಳಿಪಾದೀಕ್ಷೆಯನು ||
ಅಂಗೀಕರಿಸಿತಪಂಗೆಯ್ಯುತಿರ್ದನು | ಹಿಂಗದಮನದುಪಶಮದಿ ||೧೦೪||

ಮತ್ತಾನೇಮಾಶಚ್ಚದ್ಮಸ್ಥಕಾಲಮೈ | ವತ್ತಾರುವಾಸರಕಳೆಯೆ ||
ಒತ್ತಿನೊಳಿರ್ದೊಂದುಬಿದಿರಮೂಲದೊಳೇಕ | ಚಿತ್ತದಿದೆಟ್ಟಿಯನಿರಿಸಿ ||೧೦೫||

ಸಾನುಭಾವದಿನಿಂದುತೀವ್ರಮಪ್ಪಘಮೆಂಬ | ಕಾನನವೆಲ್ಲವನಿರದೆ ||
ಧ್ಯಾನವಾವಕನಿಂದಸುಡಲುಕೇವಲಬೋಧ | ವಾಸದೆಸಾಜನಿಯಿಸಿತು ||೧೦೬||

ಜನಿತರೊಳಾಗಸದಿಂಪೂಸಪನಿ | ಪನಿತುದುದೇವದುಂದುಭಿಯು ||
ಧ್ವನಿಯುಣ್ಮೆತುದೇವೇಂದ್ರನಸಿಹ್ಮಾ | ಸನಮೋವದೆಕಂಪಿಸಿದುದು ||೧೦೭||

ಆದನುಕಂಡಾಸಗ್ಗದರಸುಚಿನೇಶಗೆ | ಸದಮಲಸಮವಸರಣವ ||
ಪದಪಿಂಸಮೆಯೆಂದುವೈಶ್ರವಣನಸುಸ | ಮ್ಮದದಿಂಬೀಳ್ಕೊಟ್ಟುಬಳಿಕ ||೧೦೮||

ದನುಜದಿವಿಜಯಕ್ಷಪನ್ನಗರೆಲ್ಲರು | ಮನದೆಗೊಂಡುತಂತಮ್ಮ ||
ಘನತರಮಪ್ಪನಾನಾವಿಧದಾವಾ | ಹನವೇರಿತಸ್ಫೊಡನೆಯ್ದೆ ||೧೦೯||

ಧರಣೀತಳದಿಂದಂಬರಕೈಸಾ | ಸಿರಬಿಲ್ಲಂತರವೊಗೆದ ||
ಆರುಹಗೆತನ್ನ ಬೆಸದಿಸುನ್ನವಿತ್ತೀ | ಶ್ವರವಿರಚಿಸೆರಂಜಿಸುವ ||೧೧೦||

ಅನಘನನಪವರ್ಗಲಕ್ಷ್ಮಿಯಮಾಂಗಲ್ಯ | ಕನುಗೆಯ್ದುಮಣಿಮಂಟಪವೊ ||
ಎನೆಕಡುರಂಜಿಪಸಮವಸರಣಕಾ | ಅನಿಮಿಷಪತಿಬಂದನಾಗ ||೧೧೧||

ಇಂತುಬಂದದರಮಧ್ಯದಗಂಧಕುಟಿಯನು | ಸಂತಸದಿಂದೊಳಹೊಕ್ಕು ||
ಅಂತರಿಸದೆಮೂರುಸೂಳ್ವರಬಲವಂದು | ಕಂತುಮದಾಪಹರಣಗೆ ||೧೧೨||

ಅಷ್ಟಮಹಾಪ್ರಾತಿಹಾರ್ಯಗನಂತಚ | ತುಷ್ಟಯವಿನುತಾತ್ಮನಿಗೆ ||
ದುಷ್ಟದುರಿತದೂರೀಕೃತನರ್ಹಗೆ | ಸಾಷ್ಟಾಂಗವಿನಮಿತನಾಗಿ ||೧೧೩||

ಜಲಗಂಧಾಕ್ಷತೆನವ್ಯಕುಸುಮಚರು | ಜಲಜಲಿಸುವದೀಪಧೂಪ ||
ಫಲದಿಂದರ್ಚಿಸಿರತ್ನಪಾತ್ರೆಯೊಳುಕ | ಣ್ಮೊಳಿಪಂತರ್ಘ್ಯಮನೆತ್ತಿ ||೧೧೪||

ಮತ್ತೆಪಲವುದಿವ್ಯಸ್ತೋತ್ರಮನೇಕ | ಚಿತ್ತದಿಂದಲಿತುತಿಗೆಯ್ದು ||
ಉತ್ತಮಮಪ್ಪಚಿತಾಸನದೊಳುದೇ | ವೋತ್ತಂಸನುಕುಳ್ಳಿರಲು ||೧೧೫||

ಗರುಡಗಂಧರ್ವರಾಕ್ಷಸಯಕ್ಷವಿದ್ಯಾ | ಧರಕಿನ್ನರಕಿಂಪುರುಷ ||
ಉರಗಾಧೀಶರೆಲ್ಲರುನಿಜಬಲಗೂಡಿ | ಯುರುಭಕ್ತಿಯೊಳೋಲೈಸೆ ||೧೧೬||

ಹರಿವಂಶದರಸುಮಕ್ಕಳನೆಲ್ಲರಕೂಡಿ | ನೆರೆದಖೇಚರಭೂಚರರು ||
ಬಿರಸಿಬಲಾಚ್ಯುತರಾಸಮವಸೃತಿ | ಗುರುಮುದದಿಂದೆಯ್ತಂದು ||೧೧೭||

ಮಾನಿತಮಾದಮಾನಸ್ತಂಭವಕಂಡು | ನಾನಾರಾಜಚಿಹ್ನವನು ||
ಆನದಿರಿಸಿಮುಂದಕೆನಡೆದಪ್ಪತಿ | ಮಾನಲಲಿತಭಕ್ತಿಯಿಂದ ||೧೧೪||

ಭಾಸುರತರಸೋಪಾನಮನೊಸೆದೇರಿ | ಯಾಸಮವಸೃತಿಗೆಯ್ದಿ ||
ಓಸರಿಸದೆಗಂಧಕುಟಿಯೊಳಗಡೆಹೊಕ್ಕು | ಆಸರ್ವೇಶನಕಂಡು ||೧೧೫||

ಮೂಮೆತಿರಿದುಸಾಷ್ಟಾಂಗನಮಿತರಾಗಿ | ಯಾಮಾನವಕೋಷ್ಟದೊಳು ||
ಪ್ರೇಮದಿಂದಕೈಮುಗಿದುಕುಳ್ಳಿರ್ದುಮ | ತಾತ್ಮಮಹಿಮನರೂಪವನು ||೧೧೦||

ಬಳಿಕೆವೆನ್ನೊಯ್ಯದೆತೆರೆದತೆರಪುಗಣ್ಣಂ | ಬಳಲುವಂದದಿನೆರೆನೋಡಿ ||
ಅಲಘುತರಪ್ರಿಯದಿಂಕೆಲಪೊತ್ತಿರ್ದು | ಪೊಳಲನೆಯಿದ್ದರುಮತ್ತಿತ್ತ ||೧೧೧||

ವರದತ್ತಮುನಿಪತಿಸಮವಸರಣಕೆಯ್ದಿ | ಯರುಹಗೆರಗಿದಾಕ್ಷಣದೊಳು ||
ಸುರುಚಿರಮಪ್ಪಸುಜ್ಞಾನಮೊಗೆದುಗಣ | ಧರಸಂಪದವನೆಯ್ದಿದನು ||೧೧೨||

ಬಳಿಕಬಲಾರಿಕೈಮುಗಿದೆಂದನೆಲೆದೇವ | ಇಳೆಯೊಳುಧರ್ಮಾಮೃತದ ||
ಮಳೆಗರೆಯಿಸಬೇಕೆಸಲೊಡಬಟ್ಟಾ | ಗಳೆಯಲ್ಲಿಂಮುಂದಕೆಯ್ದಿ ||೧೧೩||

ಕಡುವಂಜಿಪಧರ್ಮಚಕ್ರಸಮಸ್ಥಿತ | ನಡೆದುನೆಲಕೆಸುಳಿಕ್ಷಣವನು ||
ಹಡೆಯಿಸುತಾರ್ಯಾಖಂಡದಜನಪದ | ಕಡರಿಸಿದಸುಧರ್ಮವನು ||೧೧೪||

ಭವ್ಯಜನಾಂಬುಜವನಭಾನುಒಲರಿಪು | ಸೇವ್ಯಸಪಾರಮಹಿಮನು ||
ದಿವ್ಯವಚನಸಮುಪೇತನೆಸೆದನಾ | ಅವ್ಯಯಸುಖದಾಯಕನು ||೧೧೫||

ಇದುಜಿನಪದನರಸಿಜಮದವ.ಧುಕರ | ಚದುರಮಂಗರಸನರಚಿಸಿದ |
ಮದನಾರಿನೇಮಿಜಿನೇಶಸಂಗತಿಯೊಳ | ಗಿದುದ್ವಾತ್ರಿಂಶದಾಶ್ವಾಸ ||೧೧೬||

ಮೂವತ್ತೆರಡನೆಯ ಸಂಧಿ ಸಂಪೂರ್ಣಂ

೩೩. ಕೃಷ್ಣನ ಸ್ತ್ರೀಯರ ಭವಾವಳಿಸಂಧಿ

ಸುತ್ತಿದಕರ್ಮಭಟರನೇನೆಯಗೆಲ್ದು | ಮುಕ್ತಿಸಾಮ್ರಾಜ್ಯಸಂಪದಕೆ ||
ಕರ್ತುವಾಗಿಹನೇಮಜಿನರಡಿದಾವರೆ | ಗುತ್ತಮಾಂಗವಮಡಗುವೆನು ||೧||

ಭರತತ್ರಿಖಂಡಮನೆಲ್ಲಮನಾಬಲ | ಪುರುಷೋತ್ತಮರತಿಬಲದಿ ||
ಉರುಮುದದೊಳುಪಲವರುಸಪಾಲನೆಗೆಯ್ವ | ತ್ತಿರಲೊಂದಾಸೊಂದುದಿನದ ||೨||

ಧಾರಿಣಿಯೊಳುಕಡುದಯೆಯಿಂಧರ್ಮಾ | ಸಾರವನೆಲ್ಲಪಸೂಸಿ ||
ದ್ವಾರಾವತಿಯರೇವತಿಯೆಂಬವನಕಾ | ಮಾರನುಥನನೆಯ್ದಿದನು ||೩||

ಸುರದುಂದುಭಿಯುಸ್ವರಸಕೇಳಿಯಾಬಲ | ಹರಿನೊಡಲಾದಯಾದವರು ||
ಹರುಷದಿತಂತಮ್ಮಸತಿಯರುವೆರಸಬಂ | ದುರುಭಕ್ತಿಯೊಳಿರವೆರಗಿ ||೪||

ಸುತಿಗೆಯ್ದುಮನುಜಕೋಷ್ಠದೊಳುಕುಳ್ಳಿರ್ದಸ | ನ್ನುತಮಪ್ಪತತ್ತ್ವರೂಪಸನು||
ಮತಿಯಿತ್ತುಕೇಳಿಬಳಿಕಘನಹರುಷದಿಂ | ಯುತರಾಗಿರ್ಪವೇಳೆಯೊಳು ||೫||

ವರದತ್ತಗಣಧರಗರ್ಜಾದೇವಕಿದೇವಿ | ಕರವನುಮಿವುತೆಲೆಗುರುವೆ ||
ವರಮುನಿರಾಜರರುವರುಜರಿಗೆಗೆಂದು | ಬರಲುಮತ್ತವರಸುಕಂಡು ||೬||

ಪಿರಿದಪ್ಪನೇಹಮದೇಕಾಯಿತೆನಲಾ | ವರಮುನಿಯಿಂತೆಂದನಾಗ ||
ತರುಣೀನುಮಣಿಕೇಳುನೀಸಂದುಮಧುರಾ | ಪುರದೊಳುಹೆತ್ತಸಂದನರು ||೭||

ಚರವಾಂಗರವರುನೈಗಮುದೇವನತ್ಯಾ | ದರದಿಂನೊಯ್ದಿಡಿಯುಲ್ಲಿ ||
ನಿರುತನಿಬೆದಿದುನಿರ್ಣೀಗವಿದೀಕ್ಷೆಯ | ಧರಿಸಿಬಂದವರದಿಂದ ||೮||

ನಿನಗವರೊಳುನೇಹವೊವರುದುದೆನಿಕಡು | ಮನದೆಗೊಂಡಾಸತಿಯಿರಲು ||
ಅಸುನಯದಿಂಸತ್ಯಭಾಮೆತನಸ್ಸಾಮು | ನ್ನಿಸಭವದಿರವಕೇಳಿದಳು ||೯||

ಇಂತುಕೇಳಲುಪೇಳ್ದಸುಶೀತಳಜಿನ | ಸಂತಾನಾವಸಾನದೊಳು ||
ಅಂತಾಸತುಧರ್ಮವಾಕಾಲದೊಳುಶೋಭೆ | ಯಂತಾಳಿಭದ್ರಿಳಮೆಂಬ ||೧೦||

ಪುರ : ಭೂತಿಶವರ್ಮಾಭಿಧಾನದಭೂ | ಸುರಗೆಕಮಲೆಯೆಂಬಸತಿಗೆ ||
ವರಸುತಮುಂಡಶಳಾಯನನೆಂಬವ | ನುರುತರಧೂರ್ತಮಾನಸನು ||೧೧||

ಬಳೆದುಕುಶಾಸ್ತ್ರಂಗಳನಿತದರಿದಾ | ಪೊಳಲೊಳುಘನರಥನೆಂಬ ||
ಇಳೆಯಾಧಿಪತಿವೊಡಲಾದಾಪುರಜನ | ಗಳನುತಸಗೆವಶಮಾಡಿ ||೧೨

ಅಲ್ಲದಚರಿತಮನೊಳ್ಕಿತಿದವರಿಗೆ | ನಿಲ್ಲದೆಯುಪದೇಶಗೆಯ್ದು ||
ಸಲ್ಲೀಲೆಯಿಂಸಪ್ತವ್ಯಸನದಿನಡೆ | ದಲ್ಲಿವುಣ್ಮಳಿಗೊಂಡುಬಳಿಕ ||೧೩||

ನರಕಾವನಿಯೋಳರೊಳಗುದಯಿಸಿಮತ್ತೆ | ತಿರಿಯಗ್ಗತಿಯಲ್ಲಿಜನಿಸಿ ||
ತಿರುಗಿಬಂದೊಂದಾರಣ್ಯದೊಳಗೆನಿ | ಷ್ಠುರಸಪ್ಪವನಚರನಾಗಿ ||೧೪||

ಕಾಲವಿಸರನಾಂತಿರುತೊಂದುದಿನದೊಳು | ಕಾಲಲಬ್ಧಿವಶದಿಂದ ||
ಆಲೋಕಸಗೆಯೊ್ದೀರ್ವಮುನೀಶನ | ಕಾಲಮೇಗಡೆಹಣೆಯಿಟ್ಟು ||೧೫||

ಅವನತನಾಗಲೀತಸುಭವ್ಯನೆಂಬುದ | ನವಧಿಬೋಧದಿನೆರೆಯರಿದು ||
ನವಿನಯುದಿಂಸುವ್ರತಪಪಾಲಿಸಲವ | ನವಧಾರಿಸಿಯುದರೊಳಗೆ ||೧೬||

ಪ್ರೀತಿಯಿಂದಲಿನಡೆದಳಿದುವಿಜಯುಗಿರಿ | ಯಾತಂಕಣಳಕಾಪುರದ ||
ಭೂತಳಪತಿವಿದ್ಯಾಬಲನವಗೆಸ | ಜ್ಯೋತಿರ್ಮಾಲೆಯೆಂಬವಳ್ಗೆ ||೧೭||

ಹರಿಬಲನೆಂಬತನುಜನಾಗಿಭೂತಳ | ಕರಸಾಗಿರ್ದೊಂದುದಿವಸ ||
ವರಮುನಿಗಳಕಂಡುಪರಮವೈರಾಗ್ಯದಿ | ಧರಿಸಿದನಮಲವೀಕ್ಷೆಯನು ||೧೮||

ಅದರೊಳುನೆಗಳಿಯಳಿದುಸೌಧರ್ಮದೊ | ಳುದಯಿಸಿಯಲ್ಲಿಂಬಂದು ||
ಸುದತೀಮಣಿಸತ್ಯಭಾಮೆನೀನಾದೈ | ಸದಮಲಸುವ್ರತಫಲದಿ ||೧೯||

ಎನಲವಳತಿಹರುಷವತಾಳಿಕುಳ್ಕಿರ | ಲನಿತರೊಳಗೆಕೈಮುಗಿದು ||
ಮುನಿಪನನಾರುಗ್ಮಿಣಿದೇವಿತನ್ನಮು | ನ್ನಿನಜನ್ಮವಕೇಳಿದಳು ||೨೦||

ಮಗಧದೇಶದೊಳುಲಕ್ಷ್ಮೀಪುರಮೆಂಬುದು | ಸೊಗಯಿಪುದದರೊಳಗಿರ್ಪ ||
ಸಿಗಮಸಂಯುತಸೋಮಶರ್ಮನಸಿಜಸತಿ | ಮುಗುಧೆತಾಜಿಸುತೊಂದುದಿವಸ ||೨೧

ಭಾಸುರಮಣಿದೊಡವಿಟ್ಟುಕನ್ನಡಿನೋಡು | ವಾಸಮಯದೊಳಾಯಿಡೆಗೆ ||
ಆಸಮಾಧಿಗುಪ್ತಮುನಿಪತಿಚರಿಗೆಗೆ | ಮಾಸೋಪವಾಸಾಂತದೊಳು ||೨೨||

ಬರುತಿರೆಗಿಡಿಗಿಡಿಜಂತ್ರದಂತೆಸೆವಾ | ವರಮುನಿಯಂಗದನೆಳಲು ||
ಇರದಾಕನ್ನಡಿಯೊಳುಬೀಳಲಾವ್ವಿಜ | ತರುಣಿಯಿದೇನೆಂದುನೋಡಿ ||೨೩||

ಕಡುಬೆದರ್ದಾಬಾಯಿಗೆಬಂದಂವದಿ | ಕೆಡೆಸುಡಿದಲ್ಲಿಂತಗುಳಿ ||
ಸಡಗರದಿಂದಿರಲೌದುಂಬರಕುಷ್ಠ | ವೊಡಲೊಳಗಂಕುರಮಾಯ್ತು ||೨೪||

ಒಳಿಕಹುಳಿತುನಾತುಕೊಳತುಸತ್ಕಾತನ್ನ | ನಿಳಯದೊಳಗೆಯಿ.ಲಿಯೂಗಿ ||
ಕೊಳೆವಾವುಸಂದಿವ.ಊಗಿಲಿಬಿಕ್ಕುಪೆಣ್ಣಾಯಿ | ಬೆಳುಗತ್ತಿಯಾಗಿಸಂಜನಿಸಿ ||೨೫||

ಘೋರದುಃಖವನುಂಡುಸಕ್ಕುಕಾಳಿಂದೀ | ತೀರದಮಂದಿರವೆಂಬ ||
ಊರೊಳುಮತ್ಸ್ಯನೆಂಬಾವಾಗುಲಿಗಂಗೆ | ನಾರಿಮಂಡೂಕಿಯೆಂಬವಳ್ಗೆ ||೨೬||

ಪೂತಿಗುಧ್ನಿಯೆಂಬವಗಳಾಗಿಬಳೆದುವು | ತತ್ಕಾತಾದೆತಾಯ್ಗಳುಸಾಯೆ ||
ಆತನುಗಂಧಕೆಹೇಸಿಯಾವೂರವ | ರಾತುರದಿಂಪೊರಮಡಿಸೆ ||೨೭||

ಜಗುನೆಯತಡಿಗೆಯ್ತಂದಲ್ಲಿರ್ದಂ | ಬಿಗರೊಡನಾಪರುಗೋಲ ||
ತೆಗೆವುತ್ತಮಿರಲೊಂದ.ದಿನವ.ಪರಾಶ್ಚಿಗೆ | ಪಗಲೆರೆಯನುಪುಗಲೊಡನೆ ||೨೮||

ಹಿಂದೆಲಕ್ಷ್ಮೀಮತಿಯಾಗಿಕನ್ನಡಿಸೋಡು | ವಂದುತನ್ನಾಬಿಗಡಿಗೆ ||
ಬಂದಸಮಾಧಿಗುಪ್ಪರುಮತ್ಕಾಕಾ | ಳಿಂದಿಯತಡಿಯೊಳುನಿಲಲು ||೨೯||

ಅಪೂತಿಗಂಧಿನಿತನ್ನಮುನ್ನಿಸಕ | ಮೋಪಶಮದಿನೆಯ್ತಂದು ||
ತಾಪಸಪತಿಯಕಟಂಕಟಿಯಾಗಿರ್ದ | ರೂಪುಗಂಡುಕರುಣದೊಳು ||೩೦||

ಒಡವರೊಳಗೆಕಡುಬಡವನಿಂತಿವನುಡ | ಹಡೆಯುನೆಸುತಸಾರಕೆಯ್ದಿ ||
ಕಡುಸನ್ನಿವಿಡಿದುಬೀಸುವಬಿರುಗಾಳಿಯು | ಕಡೆಯೊಳುಹುರಿಗೋಲನಿಲಿಸಿ ||೩೧||

ಶೀತಪವನಸ್ಪರ್ಶಸರ್ಗವಪಿಂಗಿಸಿ | ಪೂತಿಗಂಧಿನಿಕಾದಿರಲು ||
ತಪಸಿನೋದಯಮಾಗಲುಕಣ್ದೆರೆ | ದಾತಾಪಸಕೈಯೆತ್ತಿ ||೩೨||

ಅವಧಿಬೋಧದಿಲಕ್ಷ್ಮೀಮತಿಯೆಂಬುದ | ನರಿತಳಮರಿದತಿಮುದದಿ ||
ಅವಳೊಳಿಂತೆಂದರೆಲೇಪೂತಿಗುಧ್ನಿ | ನವಯೌವನಮದದಿಂದ ||೩೩||

ಅಂದುಭೂಸ್ಥಿರಸವಲ್ಲಭೆಯಾಗಿಕಡುಮುನಿ | ಸಿಂದೆಮ್ಮಬೈದುದರಿಂದ ||
ಸಂದಣಿಸಿದದುಃಖಮನುಂಡೆಯೆಸುತಪ | ಶ್ಚಂದಭವಮನಿತಮೊಯೆ ||೩೪||

ಅರಿದುತನ್ನಾಮುನ್ನಿಸಭವವನುಮನ | ದೆರಕದಿನಾಮುನಿಪತಿಗೆ ||
ಎರಗಿದಪೂತಿಗಂಧಿಗೆಸುವ್ರತವಮುನಿ | ಯೆರೆಯನಿತ್ತುಪೋಗಲಿತ್ತ ||೩೫||

ಒಂದುರಮಪ್ಪಾಸುವ್ರತವನುಪೂತಿ | ಗಂಧಿಕಣ್ಗಳನುರೆಹಡೆದ ||
ಅಂಧನಂದಧಿಪಾಲಿಸುವಕಾಲದೊಳುಪ | ಸುಂಧರೆಯೆಂಬಕಂತಿಯರು ||೩೬||

ಬರಲವರೊಡವೋಗಿಯಾರಾಜಗೃಹಪುರ | ವರದಸಿದ್ಧಶಿಲೆಯೆಂಬ ||
ಗಿರಿಯಗುಹೆಯೊಳಾಕಂತಿಕೆಯರುಕೊ | ಟ್ಟರುನೋಂಪಿಯನೋನುತಿರಲು ||೩೭||

ಬಳಿಕಸಮಾಧಿಗುಪ್ತವ್ರತಿರಾಜರು | ತಳರಲಲ್ಲಿಗೆತತ್ಪುರದ ||
ಇಳೆಯಧಿಪನಮಗಳಾಶ್ರೀಮತಿಯೆಂಬ | ಲಲನೆಬಂದಾಮುನಿಗೆರಗಿ ||೩೮||

ತನ್ನ ಜನ್ಮಪಕೇಳಿಯಾಪೂತಿಗಂಧಿನಿ | ಮುನ್ನಲಕ್ಷ್ಮೀಮತಿತನಗೆ ||
ಮುನ್ನಣೆಯಾಳಿಯಾದುದರಿಂದನೇಹದಿ | ತನ್ನ ಮನೆಗೆಕೊಂಡುಬಂದು ||೩೯||

ಜಿನಗುಣಸಂಪತ್ತಿಪೊದಲಾದನೋಂಪಿಯ | ನನುನಯದಿಂದಕೊಡಿಸಲು ||
ವಿನಯದಿನೋಸುತಮಿರಲೊಂದಾನೊಂದು | ದಿನದೊಳಗಾಕಂತಿಯ ದು ||೪೦||

ಸರಸಮಪ್ಪನ್ನ ಮನೀಯಲುತನಗಂದು | ನಿರಶನಮಾದುದರಿಂದ ||
ಧರಿಸದೆಬಿಸುಡಲಂತದನಲ್ಲಿಯಿರುಪೆಗ | ಳಿರದೆಪಲವುಸಂಜನಿಸಿ ||೪೧||

ಮರಣವಡೆಯಲಾಪಾಪಜೆನ್ನ ನೆಹತ್ತಿ | ಬರೆಕೆಲದಿವಸದಮೇಲೆ ||
ಗುರುಸನ್ನಿಧಿಯೊಳುಸನ್ಯಸನದಿಸತ್ತು | ಸುರುಚಿರಸೌಖ್ಯಮನೀವ ||೪೨||

ಪದಿನಾರನೆಯಸಗ್ಗದದೇವೇಂದ್ರಗೆ | ಸುದತಿಯಾಗಿಭೋಗವನು ||
ಪದಪಿಂಭೋಗಿಸಿಯಲ್ಲಿಂದಿಳಿದೀ | ಜದುರೆರುಗ್ಮಿಣಿನೀನಾದೆ ||೪೩||

ಆಂದುನೀನುಬಿಟ್ಟಾಸರಸಾನ್ನದೊ | ಳೊಂದಿಜನಿಸಿದಿರುಪೆಗಳು ||
ಹೊಂದಿದಪಾಪದಿಸಿನ್ನ ಜನಕನಿನ್ನ | ಮುಂದೆಯಳಿವದುಃಖಮಾಯ್ತು ||೪೪||

ಎನುತಾಗಣಧರರೊಸೆದುನಿರೂಪಿಸೆ | ಮನದೆಗೊಂಡಾಸತಿಯಿರಲು ||
ಅನಿತರೊಳಾಜಂಭಾವತಿತನ್ನ ಮು | ನ್ನಿನಜನ್ಮವಪಿಸಿಗೊಳಲು ||೪೫||

ದೇವಗಿರಿಯಸೀತಾಶ್ರೋತಸ್ವಿನಿ | ಯಾವಾಸವದಿಕ್ಕಿನೊಳು ||
ತೀವಿದಶೋಭೆಯಪುಷ್ಕಲಾವತಿಯೆಂ | ಬಾವಿಷಯದನಡುವೆಸೆವ ||೪೬||

ವೀತಶೋಕಪುರದೊಳುವೈಶ್ಯನೋರ್ವವಿ | ಖ್ಯಾತನುದಮನಕನೆಂಬ ||
ಆತನಸತಿದೇವಮತಿಯೆಂಬಳವರ್ಗೆವಿ | ನೂತವಿಮಲೆಯೆಂದೆಂಬ ||೪೭||

ತನುಜೆಸಂಭವಿಸಿಬೆಳೆಯಲಾಪುರದೊಳು | ವಿನುತಸುಮಿತ್ರನೆಂಬವಗೆ ||
ವಿನಯದಿಮದುವೆಯುಮಾಡಲವನುಕೆಲ | ದಿನಮವಳೊಳುಸುಖಮಿರ್ದು ||೪೮||

ಮರಣವಡೆಯಲಾವಿಮಲೆವಿಮಲಮಪ್ಪ | ಚರಿತದೊಳೆಸಗಿಸುವ್ರತವ ||
ಧರಿಸಿಮರಣಮುಖದೊಳಗನಿಮಿಷಮೆಂಬ | ಪುರದವಸದಮಧ್ಯದೊಳು ||೪೯||

ವನದೇವತೆಯಾಗಿಚೌಸೀತಿಸಾಸಿರ | ದನಿತುವರುಷನೆರೆಬಾಳ್ದು ||
ತನುವವಿಸರ್ಜಿಸಿಮುಂಪೇಳ್ದವಿಷಯದ | ಜನಸುತವಿಜಯನಗರಿಯ ||೫೦||

ಪರದನುಮಧುಸೇನನೆಂಬವಗಾತನ | ಗರಣಿಬಂಧುಮತಿಯೊಂಬ ||
ತರಳಲೋಚನೆಗೆಸಲಯಸೇನೆಯೆಂಬೋರ್ವ | ಪರಸುತೆಯಾಗಿಜವ್ವನವ ||೫೧||

ತಳೆದಾಶ್ರೀಪಂಚಮಿಯುಪವಾಸದೊ | ಳಳಿದುಕುಬೇರದಿಕ್ಪತಿಗೆ ||
ಲಲನೆಯಾಗಿಪಂಚಪಲ್ಯೋಪಮಕಾಲ | ಕಳೆಯಲಲ್ಲಿಂದೆಯ್ತಂದು ||೫೨||

ನಿರುಪಮಮೆನಿಸಿಮುಂಪೇಳ್ದಾವಿಷಯದ | ಸುರಮಂಜರಪುಂಡರೀಕಿಣಿಯ ||
ವರವೈಶ್ಯನಪಜ್ರಸೇನನಾತನಸಿಜ | ಕರುಣಿಸುಭದ್ರೆಯಿಂತವರ್ಗೆ ||೫೩||

ಸುತೆಯಾಗಿಸುಮತಿನೆಸರನಾಂತುಬೆಳೆದುಸು | ವ್ರತೆಯುರೆಂಬಾಕಂತಿಯರಿಗೆ ||
ಅತಿರುಚಿವಡೆದಮೃತಾನ್ನದಾನವನುಸ | ನ್ನುತಶಕ್ತಿಯಿಂಮಾಡಿಬಳಿಕ ||೫೪||

ಲಲಿತರತ್ನಾವಳಿಯೆಂಬನೋಂಪಿಯುನೋಂ | ತಳೆದುಪೋಗಿಯೈದನೆಯ ||
ವಿಲಸಿತಮಪ್ಪತ್ಸಲ್ಪದವೇವೆಂದ್ರಗೆ | ಲಲನೆಯಾಗಿಸುಖಮುರ್ದು ||೫೫||

ಪದಿಮೂರುಪಲ್ಯೋಪಮದಾಜೀವಿತಾಂ | ತ್ಯದೊಳೀಧರೆಗೆಯ್ತಂದು ||
ಸುದತೀಮಣಿಜಂಭಾವತಿಯಾದೆಯೆಂ | ದುದಿತಪೋಧನುನಿರವಿಸಲು ||೫೬||

ಅನಿತರೊಳಬ್ಜೋಪಮಹಸ್ತವಮುಗಿ | ದನಿಮಿಷನೇತ್ರೆಸುಸೀಮೆ ||
ಅನಘಕೇಳೆನ್ನ ಜನ್ಮವಬೆಸಸೆಸಲತಿ | ವಿನಯದೊಳಿಂತುಸುರಿದನು ||೫೭||

ವಂಧಾತಕಿಖಂಡದಮೂಡಣಮಂ | ದರದಸೀತೆಯಬಲಗಡೆಯ ||
ಧರಣಿಯಮಂಗಲಾವತಿಯೆಂಬವಿಷಯದೊ | ಳುರುತರಶೋಭೆಯನಾಂತ ||೫೮||

ವರರತ್ನಸಂಚಯಪುರಮಿರ್ದುದನಾ | ಶ್ವರಸುಪಶ್ವಸೇನವನ ||
ಪರಮರೂಪರುರಣಗಂಗದೊಳಗೆಯಮು | ಪುರಕೆಯ್ದಿಸಲವಸಬಲೆ ||೫೯||

ಸುಂದರಿಯೆಂಬವಳಾವಲ್ಲಭನದುಃಖ | ದಿಂದಕುಶುಕ್ಷಣೆವೊಕ್ಕ ||
ಹೊಂದಿಬಳಿಕಪಜಯಾರ್ಧಗಿರಿಯೊಳಿರ್ದು | ದೊಂನುವಸದಮಧ್ಯದೊಳು ||೬೦||

ವಾಸವ್ಯಂತರದೇವತೆಯಾಗಿಮ | ನೋನುರಾಗವಿಬರ್ದುಬಳಿಕ ||
ಆನದೆಸತ್ಪಾತ್ರಾಪಪದಫಲದಿಂ | ನಾನಾಭವದೊಳುಬಂದು ||೬೧||

ಜಂಬೂದ್ವೀಪದಭರತಾವನಿಯೊಳ | ಗಿಂಬಾದಶಾಲಿಗ್ರಾಮ ||
ಎಂಬಲ್ಲಿಯಕ್ಷ್ವಾಂಕನೆಂಬಪರದನನಿ | ತಂಬಿನಿಯಾದೇವಸೇನೆ ||೬೨||

ಅವರೊಳೊಗೆದುಯಕ್ಷ್ಮಿಯೆಂಬಪೆಸರನಾಲ್ತು | ನವಯೌವನೆಯಾಗಿಬಳಿಕ ||
ಸವಿನಯದಿಂಜಿನಸಮತವಧರಿಸಿಯೊಂದು | ದಿನದೊಳುಮುನಿಪನೋರ್ವಂಗೆ ||೬೩||

ನಿರವದ್ಯಾಹಾರಮನಿತ್ತು ಬಳಿಕಾ | ಪುರದವನಕೆಪೋಗಲಲ್ಲಿ ||
ಉರಗದಷ್ಟಮಾಗಿಸತ್ಕಲ್ಲಿಂಬಂದು | ಸುರುಚಿರಮಪ್ಪೀನೆಲವ ||೬೪||

ಆವಾಸವಗಿರಿಯಾಸೀತೆಯುದಕ್ಷಿ | ಣಾವನಿಯಾನಾಡಿನೊಳಗೆ ||
ಭೂವಿಶ್ರುತಪುಷ್ಕಲಾವತಿಪೆಸರ್ವಡೆ | ದಾನಿಷುಮುದವ೯ಧ್ಯದೊಳು ||೬೫||

ಊರುಪುಂಡರೀಕಿನಿಯೊಳಗೆಯುಶೋಕನೆಂ | ಬರಸಿಗೆಸೋಮಶ್ರೀಗೆ ||
ವರಸುತೆಯಾಗಿಲಕ್ಷ್ಮೀಕಾಂತೆವೆಸರಾಂತು | ಪಿರಿದುಚೆಲ್ವಿಕೆಯಸುಧರಿಸಿ ||೬೬||

ಜನನುತಮಪ್ಪಜನ್ಮವನೇರಿದೀಕ್ಷೆಯ | ನನುರಾಗದಿಕೈಕೊಂಡು ||
ತನುವನಿಳುಹಮಾಹೇಂದ್ರಕಲ್ಪದದೇವ | ಗಿನಿಯಳಾಗಿಸಂಜನಿಸಿ ||೬೭||

ಪನ್ನೊಂದುಪಲ್ಯೋಪಮಕಾಲಜೀವಿಸಿ | ಭಿನ್ನವನಾಡಿದೇಹವನು ||
ಸನ್ನುತರೂಪೆಸುಸೀವೆ-ನೀನಾವೈ | ಮುನ್ನೆಸಗಿದಪುಣ್ಯದಿಂದ ||೬೮||

ಎನಲಾಗಳೆಲಕ್ಷ್ಮಣೆಕೈಮುಗಿದೆಲೆ | ಮುನಿಪತಿಯೆನ್ನ ಜನ್ಮವನು ||
ಸನುಮಾನದಿಂದನಿಗೂಪಿಸಿಯೆಸಲತಿ | ವಿನಯದೊಳಿಂತೆಂದನರು ||೬೯||

ವಸುಧಾತಳವಿಖ್ಯಾತೊಳುಸೀತೆಯಿಂದರಾ | ಜಿಸುವತಿಂಕಣತಡಿಯೊಳಗೆ ||
ಎಸೆವಕಚ್ಛಕಾವತಿಯೆಂಬನಾಡೊಳು | ವಿಸುಗುವಂಷ್ಟಪಟ್ಟಣದ ||೭೦||

ಅರಸುಸುಷೇಣನೆಂಬವನತಿರೋಗದಿ | ಮರಣವನೆಯ್ದೆಮತ್ತವನ ||
ವರಮಾತೆವಸುಮತಿಯೆಂಬಳವಸಮೇಲೆ | ಕರಿಕರೆಗೊಂಡಾರ್ತದಿಂದ ||೭೧||

ತನುವನುಳಿದುವಿಂಧ್ಯಾಟವಿಯೊಳಗೋರ್ವ | ವನಚರವಲ್ಲಭೆಯಾಗಿ ||
ಜನಿಸಿಯಲ್ಲಿಗೆಬಂದಾಚಾರಣರಿಂ | ವಿನುತಚರಿತ್ರಮನಾಂತು ||೭೨||

ಮುವ್ವಾಗಿಸತ್ಕಾಪಿಷ್ಟದಸುರಪಗೆ | ಯೊಪ್ಪುವನರ್ತಕಿಯಾಗಿ ||
ಇಪ್ಪತ್ತುಪಲ್ಯೋಪಮಾಯುಸ್ಸ್ಥಿತಿಯನು | ತಪ್ಪದುಂಡಲ್ಲಿಂಬಂದು ||೭೩||

ಈಕ್ಷ್ವಾಕುತಿಯೊಳುರಂಜಿಪರಜತಾದ್ರಿಯ | ದಕ್ಷಿಣದೆಸೆಯಶ್ರೇಣಿಯೊಳು ||
ಲಕ್ಷ್ಮಣವಡೆದಸುಧಾಮನಗರವನು | ರಕ್ಷಿಪನಾಮಾಹೇಂದ್ರ ||೭೪||

ಆಸ್ಥಪವರಗೆವಸುಂಧರೆಯೆಂಬೋರ್ವ | ಮಾನಿನಿಗುದಯಂಗೆಯ್ದು ||
ಘನಸುತೆಯಾಗಿಕಾಂಚನಮಾಲೆಯೆಂಬಭಿ | ಧಾನಮನಾಂತೊಪ್ಪುವಡೆದು ||೭೫||

ಹರಿವಾಹನನೆಂಬರಸಗೆಯಾಸ್ವಯಂ | ವರದೊಳುವಲ್ಲಭೆಯಾಗಿ ||
ಇರುತವುಕ್ತಾವಳಿಯೆಂಬನೋಂಪಿಯನಾ | ದರದಿಂಹರಿದಾಗಿನೋರಂತು ||೭೬||

ಗತಜೀವಿಯಾಗಿಮೂರನೆಯಸೆಗ್ಗದಸುರ | ಪತಿಗೆಪಟ್ಟದಸತಿಯಾಗಿ ||
ಅತಿಮುದವಿನವಪಲ್ಯೋಪಮಾಯು | ಸ್ಥಿತಿಯೊಳಗಲ್ಲಿಂಬಂದು ||೭೭||

ಸುಪ್ರಭೆಯೆಂಬಪೊಳಲಶಂಬರವೆಸ | ರಪ್ರಭುವಿಗೆಶ್ರೀಮತಿಗೆ ||
ಸುಪ್ರೇಮೆದಸುಕುಮಾರಿಲಕ್ಷ್ಮಣೆಯಿಂ | ಬಪ್ರಮದಾಮಣಿಯಾದೆ ||೭೮||

ಎಸೆಗಾಧಾರಿತನ್ನಯಜನ್ಮವಬೆಸ | ಸೆನೆನಿರವಿಸವಿಂತೆಂದು ||
ವನಜಾಕ್ಷಿನೀನೀಯಾರ್ಯಾಖಂಡವ | ನಿನುತಕಾಶಲಜನಪದದ ||೭೯||

ಸಾಕೇತನಗರಿಯೊಳಗೆರುದ್ರನೆಂಬಮ | ಹೀಕಾಂತನಾತನಸುದತಿ ||
ಲೋಕೈಕರೂಪೆಸನಶ್ರೀಯೆಂಬೋರ್ವ | ಳಾಕೆನಿತ್ಯಕೃತ್ಯನಾಗಿ ||೮೦||

ವರಮುನಿಗಳಿಗಾಹಾರದಾನವವಾಡಿ | ದುರುಸುಕೃತದಫಲವಿಂದ ||
ಮರಣವಹಡೆದುತ್ತಮಸುಖವೀಪವು | ತ್ತರಕುರುಧರೆಯೊಳಗೊಗೆದು ||೮೧||

ಮುರರಪಲ್ಯೋಪಮಾಯುಷ್ಯಸುಖಮನುಂಡು | ಜಾರಿಸಿತನುವಸಲ್ಲಿಂದ ||
ಪಾರಿಜೋಯಿಸರವಲ್ಲಭನಾಚಂದ್ರಗೆ | ನೀರೆರೋಹಿಣಿದೇವಿಯಾಗಿ ||೮೨||

ಅಲ್ಲಿಂಬಂದೀಭರತದವಿಜಯಾರ್ಧ | ದಲ್ಲಿಯತೆಂಕಣತಟದ ||
ಸೆಲ್ಲಲಿತಾಂಬುದವಲ್ಲಭನಗರಿಯ | ನುಲ್ಲಾಸದಿಂರಕ್ಷಿಸುವನು ||೮೩||

ವಿದ್ಯುತ್ಪ್ರಭನೆಂಬಖೇಚರರಾಜಗೆ | ವಿದ್ಯುನ್ಮಾಲೆಗೆಜನಿಸಿ ||
ವಿದ್ಯಾಕಲೆಗಳನರಿದುರೂಪಿಂದಾ | ಪ್ರದ್ಯುಮ್ನಸತಿಗೆಣೆಯೆನಿಸಿ ||೮೪||

ಕರಮೆಸೆವಾಸುರೂಪೆಯನಿತ್ಯಾಲೋಕ | ಪುರದಮಹೇಂದ್ರವಿಕ್ರಮಗೆ ||
ಉರುಮುದದಿಂಕುಡೆಸಲೆಸುಖವಿರ್ದಾ | ವರದಂಪತಿಗಳೊಂದುದಿವಸ ||೮೫||

ದೇವಗಿರಿಗೆವ್ಹೋಗಿದೇವನಪೂಜಿಸು | ವಾವೇಳೆಗೆಯ್ದೆಚಾರಣರು ||
ಸಾವಧಾನದಿಧರ್ಮಾಧರ್ಮವನುಪೇಳ | ಲಾವೈರಾಗ್ಯಸಂಭವಿಸಿ ||೮೬||

ಓಪನೊಡನೆದೀಕ್ಷೆಯಕೊಂಡಳಿದುಸು | ರೂಪೆಸಗ್ಗದೊಳುಸಂಜನಿಸಿ ||
ಆಪಂಚಪಲ್ಯೋಪಮಕಾಲಬೀವಿಸಿ | ಯಾಪಂಚತ್ವಮನೆಯ್ದಿ ||೮೭||

ಗಾಂಧಾರವಿಷಯದಭೋಗಾವತಿಯೆಂಬ | ಬಾಧುರಪುರದಿಂದ್ರರಥಗೆ ||
ಬಂಧೂಕಾಧರೆಮೇರುಮತಿಗೆನೀನು | ಗಾಂಧಾರಿಯೆಂಬವಳಾದೈ ||೮೮||

ಎಂದುನಿರೂಪಿಸೆಗೌರಿಯೆಂಬವಳಿಂ | ತೆಂದಳುಜತಿರಾಯನನ್ನ ||
ಹಿಂದಣಭವವಪೇಳೆನಲವರೊಸೆದಿಂ | ತೆಂದರೆಲೇಕೋಮಲಾಂಗಿ ||೮೯||

ಈಮಹಿಯೊಳಗೊಪ್ಪುವನಾಗಪುರದೊಳು | ಹೇಮಾಭನೆಂಬಭೂವರಗೆ ||
ಸೋಮವದನೆಸರಸತಿಯೆಂಬಸತಿಸು | ಪ್ರೇಮದಿನಿರ್ದೊಂದುದಿವಸ ||೯೦||

ಸುಗುಣಿಯಶೋಧರರೆಂಬವಧಿಜ್ಞಾ | ನಿಗಳೊಳುಪೂರ್ವಜನ್ಮವನು ||
ಬಗೆಸಂದುಕೇಳಿಜಾತಿಸ್ಮರೆಯಾಗಿಮೇ | ಲೊಗೆದಚಿಂತೆಯೊಳಿರಲಾಗ ||೯೧||

ಹೇಮಾಭನೆಲೆಸತಿಚಿಂತೆಯೇಕೆಂದುಸು | ಪ್ರೇಮದಿಕೇಳಲಿಂತೆಂದು ||
ಆಮಾನಿನಿಪೇಳ್ದಳುತನ್ನ ಮುನ್ನಿನ | ದ್ದಾಮವಾಪ್ಪಾಜನ್ಮದಿರವ ||೯೨||

ವರಧಾತಕಿಖಂಡದಮೂಡಣಮಂ | ದರದೊಪ್ಪವಿದೇಹದೊಳು ||
ಸುರಚಿರಕುಮುದಾವತಿವಿಷಯದಭೋಗ | ಪುರದವಿಜಯಸೇನನಂಬ ||೯೩||

ಪರದಗೆಜಯಸೇನೆಯೆಂಬವಲ್ಲಭೆಯಾಗಿ | ವರಮುನಿಗಳಿಗೆಭಿಕ್ಷೆಯನು ||
ನಿರವಧಿಯಾಗಿಮಾಡಿಸಿನುರಣಂಗೆಯ್ದ | ಕ್ಕರಭೂಮಿಯೊಳುಸಂಜನಿಸಿ ||೯೪||

ಪದಪಿಂಮೂರುಪಲ್ಯೋಪಮಕಾಲದ | ಮದದಸುಖಮನನುಭವಿಸಿ ||
ಒದವಿದಮರಣದಿನಾಧರಣೀಂದ್ರಗೆ | ಸುದತಿಯಾಗಿಸಂಜನಿಸಿ ||೯೫||

ತ್ರಿತಯಪಳಿತಕಾಲಜೀವಿಸಿಯಂತಲ್ಲಿ | ಹತಮಾಗಿಭೂಪತಿನಿನಗೆ ||
ಸತಿಯಾದೆನೆನಲುವೈರಾಗ್ಯಮೊದವಯೋರ್ವ | ಯತಿನಾಥನಬಳಿಗೆಯ್ದಿ ||೯೬||

ಹೇಮಾಭನೃಪತಿಯಣುವ್ರತವನುಕೊಳ | ಲಾಮಾನಿನಿಸರಸತಿಯೂ ||
ಪ್ರೇಮದಿನಾವ್ರತವನುಕೊಂಡುಬಳಿಕತ | ನ್ನಾಮೈಯ್ಯಭಾರವನಿಂಪಿ ||೯೭||

ಮೊದಲಸಗ್ಗದೊಳುನಿರ್ಜರೆಯಾಗಿನಿಜಿಸಿ | ಸದಮಲಸುಖಮಂಡುಬಳಿಕ ||
ಒದವಿದಮರಣದೊಳೀನೆಲದೊಳುಸಂ | ಪದವೆತ್ತಪತ್ಸದೇಶದೊಳು ||೯೮||

ಕರಮೊಪ್ಪುವಕೌಶಂಬೀನಗರಿಯ | ವರವೈಶ್ಯಸುಮತಿಯೆಂಬವಗೆ ||
ಗರುವೆಸುಭದ್ರೆಗೆಧರ್ಮಿಳೆಯೆಂಬೋರ್ವ | ವರಸಂದನೆಯಾಗಿಜನಿಸಿ ||೯೯||

ಬೆಳೆದುಬಳಿಕಜಿನಗುಣಸಂಪತ್ತಿಯೆಂ | ಬಲಘುಸೋಂಪಿಯನುರೆಸೋಂತು ||
ಇಳುಹಿದೇಹಮನಚ್ಯುತಕಲ್ಪದಧಿಪಗೆ | ಲಲನಾಮಣಿಯಾಗಿಜನಿಸಿ ||೧೦೦||

ಪದಿಮೂರುಪಲ್ಯೋಪಮಾಯುಷ್ಯಮಲ್ಲಿ | ರ್ದೊದವಿದಮರಣಮುಖದೊಳು ||
ವಿದಿತಮೆನಿಸುವಾವನಿತಾಖಂಡದ | ಗ್ಗದಪೀತಶೋಕಪಟ್ಟಣದ ||೧೦೧||

ಭೂತಳಪತಿಮೇರುಚಂದ್ರನಸತಿವಿ | ಖ್ಯಾತೆಚಂದ್ರಪ್ರಭೆಯವರ್ಗೆ ||
ನೀತಿನಿಪುಣೆಗೌರಿಯೆಂಬಮೆಸರತನು | ಜಾತೆನೀನಾದೆಯೆಂದೆನಲು ||೧೦೨||

ಅನುರಾಗಮನಾಂತಾಪೆಣ್ಮಣಿಯಿರ | ಲನಿತರೊಳೆಳ್ದು ಕೈವುಗಿದು ||
ಜನಸೆನ್ನು ತಪದ್ಮಾವತಿತನ್ನ ಮು | ನ್ನಿನಜನ್ಮವಕೇಳಿದಳು ||೧೦೩||

ಮುನಿಪತಿಯಿಂತೆಂದನಿಲ್ಲಿಯಭರತಾ | ವನಿಯವಿನಿಶಖಂಡದೊಳು ||
ಮಿಸುಗುವವಂತಿವಿಷಯದುಜ್ಜಯಿನಿಯ | ಜನಪತಿವಿಜಯಸೇನಂಗೆ ||೧೦೪||

ಅಸದೃಶರೂಪಾನ್ವಿತೆಯಪರಾಜಿತೆ | ಗೆಸೆವನಯಶ್ರೀಯೆಂಬ ||
ಬಿಸರುಹದಳಲೋಚನೆಬಂಬಾಧರೆ | ಯೆಸಳ್ವಂದುಗೆವಾಯ್ದರೆಯು ||೧೦೫||

ವರಸಂದನೆಯಾಗಿಹಸ್ತಿಸೀರುಷಮೆಂಬ | ಪುರಪತಿಹರಿಷೇಣನೃಪಗೆ ||
ಹರುಷದಿಕೊಡಲಲ್ಲಿಯತಿಸುಖವಿಂಬಾಳು | ತಿರಲೊಂದಾನೊಂದುಪಗಲು ||೧೦೬||

ನಿರವದ್ಯಾಹಾರಮನೋರ್ವಯತಿಪತಿ | ಗುರುಭಕ್ತಿಯಿಂಕೊಟ್ಟಫಲದಿ ||
ಮರಣವಹಡೆದುಬಳಿಕಹೈಮವತಮೆಂಬ | ಕುರುಭೂಮಿಯೊಳುಸಂಜನಿಸಿ ||೧೦೭||

ಅಲ್ಲಿಯಳಿದುಚಂದ್ರಮಗೆರೋಹಿಣಿಯೆಂಬ | ನಲ್ಲಳಾಗಿಬಹುದಿವಸ ||
ಸಲ್ಲೀಲೆಯಿಂಸಲೆಸುಖಮುಂಡಳಿದುಬಂ | ದಿಲ್ಲಿಮಗಧದೇಶದೊಳು ||೧೦೮||

ಕರಮೊಪ್ಪುವಶಾಲ್ಮಲಿಗ್ರಾಮದೊಳೋರ್ವ | ಪರದನುವಿಜಯನೆಂಬವಗೆ ||
ವರಸತಿದೇಯಿಲೆಯೆಂಬವಳಿಗೆಸುರು | ಚಿರರೂಪೆಪದ್ಮೆಯೆಂಬೋರ್ವ ||೧೦೯||

ಸುತೆಯಾಗಿಬಳೆದುಹೆಸರನರಿಯದತರು | ತತಿಯಫಲಮನೊಲ್ಲೆನೆಂದು ||
ಯತಿಪತಿವರಧರ್ಮರಿಂವ್ರತವನುಕೊಂಡು | ಸತತಸಂತೋಷದೊಳಿರಲು ||೧೧೦||

ಅಶಾಲ್ಮಲಿಗ್ರಾಮವನೋರ್ವಶಬರಾ | ಧೀಶನತ್ಯಾಗ್ರಹದಿಂದ ||
ನಾಶವಮಾಡೆಬಿದರಿಯೊಂದುವಿಪಿನಪ್ರ | ದೇಶಮನಾಪುರಜನವು ||೧೧೧||

ಅಸವಸದಿಂಸಾರಿಹಸಿದೊಡಲಿಂದಾ | ಹೆಸರರಿಯದತರುಫಲವ ||
ಎಸೆದುಮೆಲುತ್ತಿರಲಾಪದ್ಮೆತಾಧರಿ | ಯಿಸಿದಾವ್ರತವನುನೆನೆದು ||೧೧೨||

ಆಹೆಸರರಿಯದಮರದಹಣ್ಗಳಮೆಲ್ಲ | ದಾಹಸುವನುಸೈರಿಸದೆ ||
ದೇಹವನುಳಿದುಭೋಗಾವನಿಯೊಳುಪುಟ್ಟಿ | ಯೂಹಿಸಬಾರದಸುಖನ ||೧೧೩||

ಸಲೆಯುಂಡಳಿದುಬಂದಾಸ್ವಯಂಪ್ರಭಮೆಂಬ | ನೆಲದಸ್ವಯಂಪ್ರಭಾಮರಗೆ ||
ಒಲವಿನಸುದತಿಸ್ವಯಂಪ್ರಭೆಯಾಗಿನಿ | ರ್ಮಲತರಸೌಖ್ಯಮನುಂಡು ||೧೧೪||

ಅಲ್ಲಿಂಬಂದೀಭರತಾರ್ಯಖಂಡ | ದಲ್ಲಿಜಯಂತೀಪುರದ ||
ಬಲ್ಲಹನಾಶ್ರೀಧರನೆಂಬವನಸಿಜ | ವಲ್ಲಭೆಲಕ್ಷ್ಮೀಮತಿಗೆ ||೧೧೫||

ಏಮಲೆಯೆಂಬಸುತೆಯಾಗಿಛದ್ಮಳವೆಂಬ | ರಮಣೀಯಮಪ್ಪಪಟ್ಟಣದ ||
ರಮಣನಂಬುದನಾದಾವನಿಪಾಲಗೆ | ರಮಣಿಯಾಗಿಬಾಳುತಿರ್ದು ||೧೧೬||

ಒಂದುದಿವಸವರಧರ್ಮರಂಬಾಮುನಿ | ವೃಂದಾರಕನಸನ್ನಿಧಿಗೆ ||
ಬಂದುಧರ್ಮಾಧರ್ಮವನುಕೇಳಿನಿರ್ವೇಗ | ದಿಂದದೀಕ್ಷೆಯಕೈಕೊಂಡು ||೧೧೭||

ಬಳಿಕಾಚಾಮ್ಲವರ್ಧನನೋಂಪಿಯನೋಂ | ತಳಿದುಸಗ್ಗದವಾಸವಗೆ ||
ಲಲನೆಯಾಗಿಸೌಖ್ಯಮನುಂಡಿಪ್ಪತ್ತು | ಪಳಿತೋಪಮಕಾಲಬದುಕಿ ||೧೧೮||

ಮರಣಮುಖದಿನೀಯರಿಷ್ಟನಗರಿಯಭೂ | ವರಸುಕನಕವರ್ಮನೃಪನ ||
ವರವಧುವಾಶ್ರೀಮತಿಗೆಪದ್ಮಾವತಿ | ಯುರುರೂಪವತಿಯಾಗಿಜನಿಸಿ ||೧೧೯||

ವನಜೋದರಗೆವಲ್ಲಭೆಯಾದವಳುನೀ | ನೆನಲತಿಹರುಷವತಾಳಿ ||
ವನಜಾನನೆಯಾಗಣಧರಮೃದುಪದ | ವನಜಮೂಲಕೆಮುಗ್ದಳು ||೧೨೦||

ವಿನಯದೊಳಿಂತುಬಿಸಜನಾಭನನಿಜ | ವನಿತೆಯುರೆಂಬ್ಬರಭವವ ||
ಮನದೆಗೊಂಬಮಾಳ್ಕೆಯೊಳುಪೇಳಿದನಾ | ಮುನಿಕುಲಗಗನಭಾಸ್ಕರನು ||೧೨೧||

ಇದುಜಿನಪದಸರಸಿಜಮದಮಧುಕರ | ಪದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗಿದುತ್ರ್ಯಸ್ತ್ರಿಂಶದಾಶ್ವಾಸ ||೧೨೨||

ಮೂವತ್ತಮೂರನೆಯ ಸಂಧಿ ಸಂಪೂರ್ಣಂ.

೩೪. ಮದನನಿರ್ವೇಗ ದ್ವಾರಾವತೀದಹನ ಸಂಧಿ

ಸುಮತಕುಮತಸಿತಾಸಿತಪದ್ಮಕುಮುದ | ಕ್ಕೊಮ್ಮೆವಿಕಾಸಮ್ಲಾನತೆಯ ||
ಮಮತೆಯಿಂದಮಾಡುವ ನೇಮಿರವಿಯೆನ್ನ | ಸುಮನದತಮವಪಿಂಗಿಸುಗೆ ||೧||

ಸುರನರಫಣಿಯುಕ್ಷರಾಕ್ಷಸವಿದ್ಯಾ | ಧರಕಿನ್ನರಕಿಂಪುರುಷ ||
ಗರುಡಗಾಂಧರ್ವರೋಲೈಸುತಭೀತಿಯೊ | ಳಿರೆರಂಜಿಪಾಜಿನಪತಿಗೆ ||೨||

ಬಳಿಕೇಕಕುಂಡಲನೆಳ್ದುಮುಗಿದುಕರ | ನಳಿನವನಳಿಕದೊಳಿಟ್ಟ ||
ಕಲಿನವಿಜಯುಬೆಸಸೀಜಲಭಂಡಾರ | ದೊಳಗಮರೇಂದ್ರನಿರ್ಮಿಸಿದ ||೩||

ದ್ವಾರಾವತಿನಗರಿಗೆಯಿದರಕ್ಷಿಪ | ನಾರಾಯಣನರಪತಿಗೆ ||
ಭೂರಿಭೂಭುಜರಿಂದೋಲೈಸುವೀಸಿರಿ | ಯಿಂರೀತಿಯಿಂಚಿರವಿಹುದೇ ||೪||

ಎನಲಾಕೇವಲಬೋಧನಿಂತೆಂದನು | ವಸರಾಶಿಯಮಧ್ಯದೊಳು ||
ಅನಿಮಿಷಪುರಕೆಣೆಯೆನಿಪಾನಗರಿಯ | ವನಮಾಲಿಯಕೇಡಿನಿರವ ||೫||

ಕಳ್ಳಿಂದೀದೀಪಾಯನನಿಕ್ಕುವ | ದಳ್ಳುರಿಯಿಂದೆಲೆನೃಪತಿ ||
ಫುಲ್ಲನಾಭನುನೀಪೂರ್ವರುಳಿಯಲಲ್ಲಿ | ಯುಳ್ಳವರೆಲ್ಲರುಗೂಡಿ ||೬||

ಈರಾರುವರುಷವೆಂಬುದಿಗುರಿವುದಾ | ದ್ವಾರಾವತಿಪುರವರವು ||
ವೀರಜರತ್ಕುಮಾರಕನಂಬಿನಿಂದಾ | ನಾರಾಯಣಗೆ ಸಾವಹುದು ||೭||

ಎನಲುಯಾದವಭೂಪಾಲರನಂತತಿ | ಯನುಕರಿಸಲುವಿಸ್ಮಯವ ||
ಮನುನಿಭಚರಿತರೋಹಿಣಿಯುಗ್ರನಂದನ | ನೆನಯದೊಳಿಂತೆಂದನಾಗ ||೮||

ಭವರಹಿತನೆನಮ್ಮಾರ್ವರನುಂದಣ | ಭವದವಸ್ಥೆಯಪೇಳ್ವುದೆನಲು ||
ಅವರೆಂದರೀಕೃಷ್ಣನಳಿದುವಾಳುಕವೆಂಬ | ವಿವಿಧದುಃಖಮನಿರದೀಪ ||೯||

ನರಕದೊಳೊಗೆದೇಳ್ವಾಗರೋಪಮದಾಯು | ಪರಿಪೂರ್ಣಮಪ್ಪನ್ನಮಿರ್ದು ||
ಮರಣವಹಡೆದುತ್ಪರ್ಣಕಾಲದೊ | ಳಿರದೆತೀರ್ಥಂಕರಸಹನು ||೧೦||

ನೀನೀಕೃಷ್ಣನಸಾವಿನದುಃಖದಿ | ಜೈನದೀಕ್ಷೆಯನುರೆಧರಿಸಿ ||
ಸಾನುಭಾವದೊಳಂಗವಬಿಟ್ಟೈದನೆ | ಯಾನಾಕದೊಳುಸಂಜನಿಸಿ ||೧೧||

ಅಲ್ಲಿಯಳಿದುಕೃಷ್ಣತೀರ್ಥಂಕರಂತರ | ದಲ್ಲೀನೆಲದೊಳುನೀನು ||
ಎಲ್ಲಾಕರ್ಮವಕೆಡಿಸಿತೀರ್ಥಂಕರ | ವಲ್ಲಭನಾಗುವೆಯೆನಲು ||೧೨||

ಇನ್ನುಭವಾಂಬುಧಿಯಿಂದೆಯ್ದಲತ್ಯಾ | ಸನ್ನ ಸರ್ವೇಶನವಚನ |
ರನ್ನದದೀವಿಗೆಯೆಂದಾಕೃಷ್ಣನ | ತ್ಯುನ್ನತಹರುಷವತಾಳಿ ||೧೩||

ಯಾದವರೆಲ್ಲರುಕೂಡಿಜಿನೇಶನ | ಪಾದಕೆರಗಿಬೀಳ್ಕೊಂಡು ||
ಸಾದರದಿಂದ್ವಾರಾವತಿಗಾದಾ | ವೋದರನಿರದೆಯ್ದಿದನು ||೧೪||

ಅಂದಾದೀಪಾಯನನೀಪುರವೆ | ನ್ನಿಂದಕೆಡುವುದಕ್ಕೇನು ||
ಎಂದುನಿರ್ವೇಗದಿಜಿನದೀಕ್ಷೆಯತರಿ | ಸಂದುಧರಿಸಿವೋದನಿತ್ತ ||೧೫||

ಎನ್ನ ಗ್ರಜನಕೊಲ್ವೀಬಾಣವೇಕೆಂದು | ಮುನ್ನೀರೊಳಗದಹಾಕಿ ||
ತನ್ನ ನೆಲೆಯಬಿಟ್ಟುಬೇಡವಳ್ಳಿಗೆವೋದ | ನುನ್ನತನಾಜರತ್ನುವರ ||೧೬||

ಪುರುಷೋತ್ತಮನಾಪುರವರಸೊಳಗುಳ್ಳ | ಸುರೆಯನೆಲ್ಲವ ನಿಶ್ಶೇಷ ||
ಭರದಿಂದೂರಮುಂದಣಕಲ್ಲುಡೊಣೆಯೊ | ಳ್ಸುರಿಯಿಸಿ ಸುಖವಿರುತಿರ್ದ ||೧೭||

ಶರಧಿಮಧ್ಯದೊಳುಪುರಂದರನಿರ್ಮಿತ | ಪುರಮಿಂತಿದಕ್ಕೇಡಹುದು ||
ನಿರುತಕಂಡಾಮನುಜರಬಾಳ್ವೆಯದುಸು | ಸ್ಥಿರಮುಹುದೇಯೆಂದುಬಗೆದು ||೧೮||

ಇನ್ನು ಸಂಸಾರದಪಂಬಲುಬೇಡೆಂದು | ಚೆನ್ನಿಗನಾಚಿತ್ಕಭವನು ||
ತನ್ನ ಜನನಿರುಗ್ಮಿಣಿದೇವಿಯಪದ | ನನ್ನಿಧಿಗಿರದೈತರಲು ||೧೯||

ಏನಣ್ಣಪರಿಚಾರಕರೊರ್ವರಿಲ್ಲದೆ | ಹೀಸರಂತೇಕಾಕಿಯಾಗಿ ||
ನೀನೋರ್ವನೆಬಂದಬಗೆಲೇಸಾಯ್ತೆನ | ಲಾನುಡಿಗಿಂತೆಂದನಾಗ ||೨೦||

ದೇವಿಬಿನ್ನಪವಿಾಜೀವನನಾದಯಿಂ | ದೀವಿಧದಿಂದೋರ್ವನಾಗಿ ||
ಓವದೆತಿರುಗುವನದುನಿಶ್ಚಯಮೆಂಬ | ಭಾವಮನರುಪಲೆಯ್ದಿದೆನು ||೨೧||

ಎನಲಿವಜರಮಾಂಗನುವೈರಾಗ್ಯದ | ಮನದಿಂದೆಯ್ದಿದನೆಂದು ||
ವನಿತಾಮಣಿಹೃದಯದೊಳಕ್ಕಿಯಾನಿಜ | ತನುಜಗಿಂತೆಂದಾಡಿದಳು ||೨೨||

ಧೀರಲಲಿತನವಗೇರುಂಜವ್ವನ | ತೀರದೆಂಬಾನುಡಿಗೇಳಿ ||
ಘೋರಮಪ್ಪೀಸಂಸಾರವಸಲೆದುಃಖ | ತೀರಿದೊಡದುತೀರುವುದು ||೨೩||

ಎಂದುಮತ್ತಿಂತೆಂದನಾನೇಮಿಾಶ್ವರ | ನಂದದಬೆವಸಾಯವನು ||
ಮುಂದುವರಿದುಮಾಡುವೆನೆನ್ನ ಮೇಲಣ | ದೊಂದುಮುಮತೆಬೇಡನಿನಗೆ ||೨೪||

ಎಂದೊಡೆಲೇತನುಜಾತನಿನ್ನ ನುಬಿಡು | ವಂದವೆನಗೆತೀರದೆನಲು ||
ಮುಂದುವರಿದುಜವಸೊಯ್ವಾಗಬಿಡದಿ | ರ್ದಂದನಿಮಗೆಸದುನಿಪುದೇ ||೨೫||

ಇಂತೆಂದಾನಿಜಸುತನನುಡಿಯಕೇಳಿ | ಚಿಂತೆಯಿಂದಾನಿಜಜನನಿ ||
ಅಂತರಿಸದೆ ಮೂರ್ಛೆಗೆಸಲೆಕಂಡಾ | ಕಂತುತೀತಳದಿನೆಚ್ಚರಿಸಿ ||೨೬||

ಎಲೆತಾಯೆನಿನ್ನ ಸಂಸಾರದದುಃಖದ | ಬಲುಹನೇವಿಶ್ವರನಿಂದ ||
ಸಲೆಕೇಳಿಯಿಂತಪ್ಪದುರ್ವಿಚಾರವನೀನು | ನೆಲೆಗೊಳಿಪುದುಮತವಲ್ಲ ||೨೭||

ಎಂದುಯುಕ್ತಾಯುಕ್ತಿಯಿಂನಿಜಜನನಿಯ | ನಂದೊಡಂಬಡಿಸಲುಕೇಳಿ ||
ಇಂದುವದನೆಸಿದ್ಧರಸಸೋಂಕಿದಲೋಹ | ದಂದದಿನತಿಶುದ್ಧಿಯಾಗಿ ||೨೮||

ಎಲೆನಿರ್ಮಲಾಂಗನೀನೆಸಗಿದುಜ್ಜುಗದ | ಗ್ಗಳಿಕೆಯೆನಗೆಕರ್ತವ್ಯ ||
ನೆಲೆಯಿದನೀನೀಗಲರಿವೆಯೆನಲುಕೇಳಿ | ಗೆಲವಹಡೆದಚಿತ್ತದಿಂದ ||೨೯||

ಮದನಕುಮಾರಮಾತೆಯಬೀಳ್ಕೊಂಬಾ | ಪದದೊಳುರತಿವೈದರ್ಭೆ ||
ಉದಧಿಕುಮಾರಿಯರತಿಭರದಿಂಬಂ | ದೊದವಿನುಡಿದರಿಂತೆಂದು ||೩೦||

ಅಕಟಕಟಾ ಅಸುಗೀಶನಮ್ಮೊಳಗಪ್ಪ | ಸಕಲಭೋಗವನೆಡೆಯಿಡದೆ ||
ಅಕಲಂಕನಾಗಿಭೋಗಿಸದೆಬೀಳ್ಕೊಡೆವಾ | ತಕವುನಿನಗೆಸಂಭವಿಸದೆ ||೩೧||

ಮಳೆಯಮುಗಿಲನೋಡಿಮನೆಯೊಳಿರ್ದುದಕವ | ತುಳುಕುವಕಡುಹೆಡ್ಡರಂತೆ ||
ಕುಲಗೆಟ್ಟಸಪಣರನುಡಿಗೇಳಿನಮ್ಮನಿಂ | ತಿಳಿಗೆಯ್ವೆನೆಂದೆಣಿಸುವರೆ ||೩೨||

ಕಡುನೇಹದಿಂನಡೆನೋಳ್ಪಕಾಮಿನಿಯರ | ಕಡೆಗಣ್ಣಳಕಾಂತಿಯೆಂಬ ||
ತೊಡವಕೊಡೆದುಬಗೆಗೆಟ್ಟಬೋಳರದೊಂದು | ನುಡಿಗೇಳಿಮರುಳಾದೆಯಲ್ಲ ||೩೩||

ಸತ್ಯುಸಗ್ಗದಸತಿಯರನುಕೂಡುವೆನೆಂಬ | ಬತ್ತಲೆಗರಮಾತುಕೇಳಿ ||
ಉತ್ತಮರೂಪವತಿಯರ ಭೋಗಂಗಳ | ನೊತ್ತರಿಸುವೆನೆನಬಹುದೆ ||೩೪||

ಕಂಡಮಾತ್ರದೊಳುಕೈವಲ್ಯಸುಖವನೀವ | ಪೆಂಡವಾಸವನುರೆತೊರೆದು ||
ಮಂಡೆಹರಿಕರಮಾತನುಕೇಳ್ವುದಕೆಮನ | ಗೊಂಡೆಯಲಾಜೀವಿತೇಶ ||೩೫||

ಹಸಿದುಹಸಿದುಮುಸುಕೆದಪಿತ್ತೋದ್ರೇಕದಿ | ಹುಸಿದುನುಡಿವಕ್ಷಪಣಕರ ||
ಹಸಗೆಟ್ಟನುಡಿಗೆಮ್ಮೊಳಪ್ಪೀಸೌಖ್ಯಮ | ನಸಮಾಸ್ತ್ರಕೇಳ್ವೆಡಂಬಿಪರೆ ||೩೬||

ಸೂತಕಮಿಲ್ಲದಸುದತಿಯರೊಳುಸುಖ | ಮೇತರದೆಂಬಬಲ್ಲವರ ||
ಮಾತುಗೇಳನೆಪುಷ್ಪವತಿಯರಾಗದಸಗ್ಗ | ದಾತರುಣಿಯರ್ಗಿಳಸುವರೆ ||೩೭||

ಮಾರುಡೆಯಿಲ್ಲಮಜ್ಜನಮಿನಿಸಿಲ್ಲಕ | ಪೂರಹೀಳೆಯಗೊಳಲಿಲ್ಲ ||
ಆರೋಗಣೆಯಿಲ್ಲದಾಮಿಟಿಮಿಟಿಸಗ್ಗ | ದಾತನ್ವಿಯರಿಗೆಳಸುವರೆ ||೩೮||

ಕರುಣಮಿಲ್ಲದೆಕಡುನಂಬಿದವರನಾ | ದರಿಸದೆನಿರ್ವೇಗವೊದವಿ ||
ಪರಿಹರಿಸುವುದುಚಿತವೆಪ್ರಾಣನಾಥಾ | ಪರಮದಯಾವಲೋಲನಿಧಿಯೆ ||೩೯||

ಚಿಕ್ಕ ಹರೆಯದಚಿನ್ನ ದಬೊಂಬೆಯಂದದ | ಜೊಕ್ಕಳಿಕೆಯಚೆಲ್ವುವಡೆದ ||
ಉಕ್ಕುವಜವ್ವನೆಯರತೊರೆವುದಕೆತಂ | ದಿಕ್ಕಿದೆಯಾನಿನ್ನ ಮನವ ||೪೦||

ಚೆಲುವರದೇವನಿನ್ನೊಲವೆಜೀವನವಾಗಿ | ಸಲೆಬಾಳುವೊಲುವೆ ಗಾತಿಯರ ||
ತೊಲಗಿದೆಯಾದೊಡೆನಿನ್ನ ಬೆಂಬಳಿಯೊಳು | ತೊಲಗುವುದಸುನಿನ್ನಾಣೆ ||೪೧||

ಒಂದುಜೀವಕೆದೇಹವೆರಡಾಗಿಸಲೆಬಾಳು | ವಂದದಮುಗ್ಧಾಂಗನೆಯರ ||
ಇಂದುನೀಬಿಟ್ಟುತೊಲಗಲಿನ್ನು ಜೀವಿಸು | ವಂದವಾವುದುತಿಳುಪೆಮಗೆ ||೪೨||

ಭಾವಿಸೆಪಂಚಮಹಾಪಾತಕದೊಳು | ಸ್ತ್ರೀವಧೆಯೇವೆಗ್ಗಳವು ||
ಭಾವಜ್ಞನೀನಗಲಿದಸಮಯಕ್ಕೆಮ್ಮ | ಸಾವುನಿಶ್ಚಯಮದರಿಂದ ||೪೩||

ಪರರಜೀವಕೆಬಾಧೆವಡಿಸಲುಸಪ್ತಮ | ಸರಕವೆಂಬಾಸಮಯವನು ||
ನಿರುತದಿನಂಬಿಯಿಂತಿದನೆಣಿಸುವರೇ | ಸರಸಗುಣಾಲಂಕಾರ ||೪೪||

ತರುಣಿಮನದೊಳುತವರೂರವಿಡಂಬಿಸಿ | ಪಿರಿದುನಚ್ಚಿರ್ದರನೆಮ್ಮ ||
ಪರಿಹರಿಸಿದೊಡೆಪಾತಕಸಂಭವಿಸದೆ | ವರಗುಣಮಣಿಭೂಷಣನೆ ||೪೫||

ಹರಿಗೋಲನೇರಿಸಿನಡೆತಂದುತುಂಬಿದ | ತೊರೆಯನಡುವೆಸಟ್ಟುಗವ ||
ಹರಿದುಹಾಕುವರಂದವಸೆಣಿಸುವರೇ | ನೆರೆನಂಬಿದಮಾನಿನಿಯರ ||೪೬||

ಪ್ರಾಯವೆಂಬುದುಪರಿಮಲವಲರೊಳಗಿ | ರ್ಪಾಯಿರವಿಾದೇಹಿಗಳಿಗೆ ||
ಕಾಯಜಕೇಳಿಂತಿದನುತೊರೆವುದ | ನ್ಯಾಯವಲ್ಲವೆಬಲ್ಲವರಿಗೆ ||೪೭||

ನಂಬಿದಬಲೆಯರನೆಮ್ಮನುನೀನುವಿ | ಡಂಬಿಸಿಕೊಲುವುದುಚಿತವೆ ||
ಎಂಬಸುದತಿಯರೊಳಿಂತುನುಡಿದನಾ | ಶಂಬರಮದಮರ್ದನನು ||೪೮||

ಎಲೆಸತಿಯರಿರಾನೀವುನುಡಿದಮಾತು | ನೆಲೆನಿಮ್ಮಕಣ್ಗಳಮುಂದೆ ||
ಬಲನಾರಾಯಣರೀರ್ವರುಳಿಯೆನಮ್ಮ | ಕುಲಜರನೀನಗರಿಯನು ||೪೯||

ಈರಾರುವರುಷಕ್ಕೆವುರಿಹತ್ತಿಬಳಿಕೀ | ವಾರಿಧಿಕೊಂಬುದೆಂಬುದನು ||
ಕಾರುಣ್ಯನಿಧಿನೇಮಿಜಿನಪತಿನುಡಿದುದ | ನಾರೈದಿಂತಪ್ಪನುಡಿಯ ||೫೦||

ನುಡಿಯಬಹುದೆಯೆಂದಿವುಮೊದಲಾದನು | ಣ್ಣು ಡಿಯಿಂದ್ಧಾಮಡದಿಯರ ||
ತಡೆಯದೆತಿಳುಹಿಬಲಾಚ್ಯುತರನುವೊಡಂ | ಬಡಿಸಿಬಳಿಕಬೀಳ್ಕೊಂಡು ||೫೧||

ಪದುಳದಿಶಂಭುಕುಮಾರಕನಾರತಿ | ಯುದಧಿವಿದರ್ಭಾದೇವಿ ||
ಮೊದಲಾದಸುದತಿಯರರುಸಾಸಿರವೊಡ | ನದಿರದೆಬೆಂಬಿಡದೆಯ್ದೆ ||೫೨||

ಸಮವಸರಣಕೆಯ್ದಿ ಯಾಜಿನಪನಪದ | ಕಮಲಕರಗಿದೀಕ್ಷೆಗೊಂಬ ||
ಸಮಯಕ್ಕಾರುಗ್ಮಿಣಿಸತ್ಯಭಾಮಾ | ರಮಣೀಮಣಿಯಾದಿಯಾದ ||೫೩||

ಕಮಲೋದರನಪಟ್ಟದಸತಿಯರುಗೂಡಿ | ಸಮವಸರಣಕೆಯ್ತಂದು ||
ಕ್ರಮದಿಂದೀಕ್ಷೆಗೊಂಬಾವೇಳೆಯೊಳು | ತ್ತಮಗುಣಿಶರಧಿಏಜಯನು ||೫೪||

ವಸುದೇವಪರಿಯಂತರತನ್ನ ನುಜರಾ | ವಸುದೇವನಹಲಧರನ ||
ವಸುಧೀಶವಾಸುದೇವನಸುಕುಮಾರಕ | ರಸಮುದ್ರರುಮೊದಲಾದ ||೫೫||

ಹರಿವಂಶದಸುಕುಮಾರರೆಲ್ಲರುಗೂಡಿ | ಉರುತರವೈರಾಗ್ಯದಿಂದ ||
ಭರದಿಂಸಮವಸರಣಕೆಯ್ದಿದೀಕ್ಷೆಯ | ಧರಿಸಿದರಿಳೆವೊಗಳ್ವಂತೆ ||೫೬||

ಶಿವದೇವಿಯಾಹರಿವಂಶದರಾಯರ | ಯುವತಿಯರೆಲ್ಲರುಸಹಿತ ||
ಸಪನಯದಿಂದಲ್ಲಿಗೆಯ್ತಂದುದೀಕ್ಷೆಯ | ನವಧರಿಸಿದಳತಿಭರದಿ ||೫೭||

ಇಂತಿವರೆಲ್ಲರುದೀಕ್ಷೆಯನಾಂತುನಿ | ಶ್ಚಿಂತದಿವಿಮಲಸಂಯಮವ ||
ಅಂತರಿಸದೆಪಾಲಿಸಿಬಳಿಕಾಜೀವಿ | ತಾಂತ್ಯದೊಳೂಗೆದುಶಂತಮ್ಮ ||೫೮||

ಪರಿಣಾಮಾನುಸಾರಿಗಳಾದಾಸ್ವರ್ಗ | ವುರುಸಿವರ್ಣಪದವನು ||
ಇರದೆಪಡೆದರಿತ್ಬಲದೇವನಾಮುರ | ಹರಸಮೇಲಣಮಮತೆಯೊಳು ||೫೯||

ಅಂದುತಪಕೆಪೋದದೀಪಾಯನಮುನಿ | ಮುಂದಣಧಿಕಮಾಸವನು ||
ನಿಂದುಏಚಾರಿಸದೆಯ್ತಂದನಾವಿಧಿ | ಯಂದವಮಿಾರುವರಾರು ||೬೦||

ಈಯಂದದಿಂಬಂದಾಸಗರಿಯಮುಂದೆ | ಯೊಯ್ಯಾರದಿಂಕೈಯಿಕ್ಕಿ ||
ಆಯತಿಪುಂಗವನಾದಿತ್ಯಪ್ರತಿಮಾ | ಯೋಗದೊಳಗೆನಿಂದಿರಲು ||೬೧||

ಆನಗರಿಯೊಳಿಪರಾಜಕುಮಾರಕ | ರಾನಬೇಂಟೆಗೆವೋಗಿಮಗುಳ್ದು ||
ಸಾನಂದದಿಬರುತಾಬಿಸಿಲಳುರೆಮ | ತ್ತಾನೀರಕ್ಕೆಯೊಳಾಗ ||೬೨||

ಕಲ್ಲಡೊಣೆಗಳೊಳುಮುನ್ನ ಹೊಯ್ದಾಕ | ಳ್ಳಿಲ್ಲಮೊಣಗಿಮಳೆಯಿಂದ ||
ಅಲ್ಲಿತೀಪದನೀರಾಗರೆಯದಮನ | ದಲ್ಲಿನೀರೆಂದೇಬಗೆದು ||೬೩||

ಭರದಿಂದೊಡವಂದವರುಕುಡಿದುಸೊಕ್ಕಿ | ಬರುತಿವಿರೊಳುಸಂದಿರ್ದ ||
ವರಮುನಿದೀಪಾಯನನರೂಪವಕಂಡು | ಪಿರಿದುಕೋಪಾಟೋಪದಿಂದ ||೬೪||

ಈಸವಣನಕಂಡಶಕುನಚಿನಾಬೇಂಟೆ | ಯೋಸರಿಸಿತುನಮಗೆಂದು ||
ಆಸಂಯಮಿಯಾಪಾದಮಸ್ಕವರ | ಹೇಸದೆಬಲುಗುಂಡುಗಳ ||೬೫||

ಹೊರಡಬಾರದತೆರದಿಂಹೂಳಿಯಾಪುರ | ವರಕೆಯ್ದಲಾಮುನಿಪತಿಗೆ ||
ಪಿರಿದಪ್ಪಕೋಪವಂಕುರಿಸಲದನುಕೇಳಿ | ಭರದಿಂದಬಲಕೇಶವರು ||೬೬||

ಬರುತಾಹೂಣಿದಕಲ್ಲನಿವಾರಿಸಿ | ವರಸಂಯಮಿಯಕೋಪವನು ||
ಪರಿಹರವನುಮಾಡಬೇಕೆಂದುಪದಯುಗ | ಕುರುಭೀತಿಯಿಂಬೀಳಲಾಗ ||೬೭||

ಅರಸುಗಳಿರನೀಮಿಾರ್ವರುಳಿವಿರೆಂದು | ಬೆರಳನೆರಡನೆತ್ತಿತೋರಿ ||
ಪಿರಿದಾಗಿಕಂಠಗತಪ್ರಾಣನಾಗಲು | ಪುರಕರಸುಗಳೆಯ್ದಲಿತ್ತ ||೬೮||

ಆಯತಿಯಿಂಸೌಧರ್ಮಕಲ್ಪಕೆಕಟ್ಟಿ | ದಾಯುಷ್ಯವೆಲ್ಲವುತೀರಿ ||
ಆಯತಿಯತಿಮುನಿಸಿಂದುಡುಭವನದೊ | ಳಾಯುಷ್ಯಾವಸಾನದೊಳು ||೬೯||

ಘೋರೆನೆವುರಿವುರಿವುಗ್ರನಂತಗ್ನಿಕು | ಮಾರನಾಗಿಸಂಜನಿಸಿ ||
ದ್ವಾರಾವತಿಪುರವರದಿನಿಂತಾದೆನೆಂ | ದಾರೈಯದಲ್ಲಿಂದಿಳಿದು ||೭೦||

ನಿಲ್ಲದೆಬಂದಾಕೇರಿಕೇರಿಯನಿರ | ದೆಲ್ಲವನಿಶ್ಯೇಷಮಾಗಿ ||
ಪೊಲ್ಲದಮುನಿಸಿಂದುರುಪಿದನಾದೇವ | ಗೆಲ್ಲಿಯದಯೆಮುನಿಸೊದವೆ ||೭೧||

ಪದಿನೆಂಟುಪರಿಯಪಾರಿಷದನಂಗಳು | ಹುದುಗಿದಕೇರಿಯೆಲ್ಲವನು ||
ಅದುಮೊದಲಿದುಕಡೆಯೆನ್ನದೊಂದೇಸೂಳೊ | ಳೊದವಿಸುಟ್ಟನುಕೋಪದಿಂದ ||

ಹೊತ್ತುತಹೊಗೆವುತ್ತಕತ್ತುತಕವರುತ | ಸುತ್ತುವರಿದುಪುರವರದ ||
ಮೊತ್ತದಮನೆಯನೆಲ್ಲವನರೆಗಳಿಗೆಯೊ | ಳೊತ್ತಿಹಿಡಿದುದಾಕಿಚ್ಚ ||೭೩||

ತೆಗೆತೆಗೆವೃತ್ತಮವಸ್ತುವಿತಾನವ | ತೆಗೆತೆಗೆಗಜವಾಜಿಗಳನು ||
ತೆಗೆತೆಗೆಬಾಲವೃದ್ಧರನೆಂಬಕಳಕಳ | ಮೊಗೆಯಿತ್ತೆಲ್ಲಿನೋಡಿದರು ||೭೪||

ಹಿರಿಹಿರಿಮನೆಯಮೇಲಣಹುಲ್ಲಹುಯಿಹುಯಿ | ಹರವಿಹರವಿಯೊಳುನೀರ ||
ಉರಿವೆಡೆವಳಿಯಮನೆಯುಮುರಿಮುರಿಯೆಂಬ | ನರವುಣ್ಮೆತೆಲ್ಲಿನೋಡಿದರು ||೭೫||

ಮಾಳಿಗೆಯೋಡುಬಿಲ್ಲೆಯಮನೆಕಲ್ಲದೇ | ವಾಲಯವಿಟ್ಟಿಗೆವೆಸದ ||
ಶಾಲೆಗಳೆಲ್ಲಪುಲ್ಮನೆಗೆಮುಂಚುರಿದುವು | ಹೇಳಲೇಸದರದ್ಭುತವನು ||೭೬||

ಮುನಕದಿಭೋರ್ಭೋರೆಂದುರೌದ್ರಸ್ವರ | ವೆಸಗಲಂಬುಧಿಘೂರ್ಣಿಪಂತೆ ||
ದೆಸೆದೆಸೆಗಾಸುಟ್ಟುರೆಗಾಳಿಬೀಸಲು | ಪಸರಿಸಿತಗ್ನಿಯಾಪುರವ ||೭೭||

ಕಂಜನಾಭನಪುರವರವನುಸುಡುವಧ | ನಂಜಯಗತಿಬಲವಾಗಿ ||
ಭಂಜಿಸಿದುದರಿಂದಾವಾಯುವಿಗೆಪ್ಪ | ಭಂಜನವೆಸರಂದಾಯ್ತು ||೭೮||

ತೊಟ್ಟನೆಮನೆಮನೆಯೊಳವರಿಯಲುಕಿಚ್ಚು | ಕೆಟ್ಟವಿನ್ನೆವ್ವೆವೆಂದೆಸುತ ||
ತೊಟ್ಟಿಲಶಿಶುಗಳಮೇಲೆಮುಸುಕಿಬಿಳ್ದ | ಬಿಟ್ಟರಸುವಬಾಣತಿಯರು ||೭೯||

ನಡೆಯಲಾತದಗರ್ಭಿಣಿಯರಬಸುರುಗ | ಳೊಡೆದುಹಾರುವಹಸುಳೆಗಳು ||
ಸಿಡಿಮಿಡಿಗೊಂಡುಸಿಲ್ಕಿದಬಳಿಯಿಂವೊರ | ಮಡದುರಿದರುವೃದ್ಧರುಗಳು ||೭೦||

ಉರಿಯೊಳುಸಿಲುಕಿದೊಲವಿನೋಪರಕಂಡು | ಹರಿದಾಲಿಂಗನಗೆಯ್ದು ||
ಕರಗಿದರಾಮನೆಯನುಹೊಕ್ಕುನೇಹದ | ತರುಣಿಯರಾಕಿಚ್ಚನೊಳಗೆ ||೭೧||

ಜಿಸಗೃಹದೊಳುಜೀವನದಿಂಬೇರ್ಕೆಯ್ದು | ತನುವನುರಿವಕಿಚ್ಚನೊಳಗೆ ||
ನೆನೆದುತಮ್ಮಿಂದತಮ್ಮಿಂಗವಬಿಸುಟಲ್ಲಿ | ಮುನಿಗಳೆಯ್ದಿದರುಸದ್ಗತಿಯ ||೭೨||

ಅಂಗಡಿಯಿಂಬೀದಿಗೆಬೀದಿಗಳಿಂ | ದಂಗಣಕಂ ಅಂಗಣದಿಂ ||
ಹಿಂಗದೆಮನೆಗೆಯ್ದಲೀಸದೆನಗರಜ | ನಂಗಳನುರಿಯುರುಪಿದುದು ||೭೩||

ಈವಿಧದಿಂಭುವನವನುಸುಡುವೆನೆಂ | ಬಾವಿವರವನುರೆತೋರ್ಪ ||
ಅವುಗ್ರನಕಣ್ಣುರಿಯಂತಾಶಿಖಿ | ಯಾವರಿಸಿದುದಾಪುರವ ||೭೪||

ಆಯೆಡೆಯಿಯಾಯೆಡೆಯೆನ್ನದೆಪುರದೊಳ | ಗಾವರಿಸಿದಕಿಚ್ಚನಲ್ಲಿ ||
ಜೀವವರನುತೆಗೆವವರಿಲ್ಲಬೆಂದವ | ರ್ಗೋಪದಯ್ಯೋಯೆಂಬರಿಲ್ಲ ||೭೫||

ವರನವರತ್ನವಿರಾಜಿತಮಪ್ಪಗೋ | ಪುರಗಳನಡರಿದಕಿಚ್ಚು ||
ಕರವೊಪ್ಪುವರೋಹಣಾದ್ರಿಯನಾಕಾ | ಡುರಿಹಬ್ಬಿದತೆರನಾಯ್ತು ||೭೬||

ಮರಕತಮಣಿಗಂಬದಮದನಿಕೆಗಿಟ್ಟ | ಹರಿನೀಲಮಾಣಿಕ್ಯಗಳು ||
ಸರಿವಳಿಯಿಂದುರಿದುವುಮುತ್ತುಗದೆಳೆ | ವರದವೊಗ್ಗಿಗಳೆಂಬಂತೆ ||೭೭||

ಕರುಮಾಡದಿಂದ್ರನೀಲದಮಣಿಗುರುಜೇರಿ | ಹರಿದುಹೊಳೆವಕೇಸುರಿಗಳು ||
ಪಿರಿದೆಸೆದುವುಕಾರ್ಮುಗಿಲೊಡ್ಡಿನೊಳುಕೆಂಪು | ವೆರೆದವಿದ್ಯುಲ್ಲತೆಯಂತೆ ||೭೮||

ಪಳುಕಿನಪಜ್ಜಳಿಸುವಕುಲಿಶದವಚ್ಚು | ಚ್ಚುಳುವಲಗೆಯಪೊಳಿಗೆಗಳು ||
ಫಳಿಲನುರಿದುಕರಗಿದುವಾಕವ್ಯೂರ | ವಳುಕುಗಳುರಿಗಂಡಂತೆ ||೭೯||

ನುರಕತರತ್ನ ಮಂಟಪದೊಳುಹೊಂಗಿಡಿ | ವೆರಸಿದುರಿಯನಾಲಗೆಗಳು ||
ಪರಿದುವಶೋಕಲತಾಗೃಹದೊಳುಪುಷ್ಪ | ವೆರಸಿಯೊಪ್ಪುವತಳಿರಂತೆ ||೯೦||

ಭಿತ್ತಿಯಮೇಲೆತೆತ್ತಿಸಿದಮಾಣಿಕ್ಯದ | ಪುತ್ತಳಿಗಳನುಸಪ್ತಾರ್ಚಿ ||
ಹತ್ತಿತುತನ್ನಾ ಸ್ವಾಹಾಸುದತಿಯ | ನೊತ್ತಿತಳ್ಕೈಸುವಂದದೊಳು ||೯೧||

ವರವಿದ್ರುಮರಂಜಿತಮಂದಿರದೊಳಾ | ವರಿದವಂದಿನಕೇಸುರಿಗಳು ||
ಉರುಗೆಂಡದಮನೆಗಾವುರಿಬಿರ್ದುಣ | ಲುರುಮುದದಿಂಬಂದತೆರದಿ ||೯೨||

ಹಿತ್ತಿಲವನದಮಧ್ಯದಸರಸಿಯನುರಿ | ಹತ್ತಿದುದಂತಕನೆಂಬ ||
ಉತ್ತಮವಿಧಿಯದೀಕ್ಷಿತಸಹೋಮದಕಿಚ್ಚು | ಹೊತ್ತಿಹೊಗೆವಮಾಳ್ಕೆಯೊಳು ||

ಈರೀತಿಯಿಂದರಮನೆಯುರಿದದರೊಳು | ಪೂರಿಸಿದಬಲಾಜನವು ||
ಈರೆಂಟುಸಾಸಿರವೆಲ್ಲವಳಿದುದಾ | ಕ್ರೂರಕರ್ಮದಫಲವಿಂದ ||೯೪||

ಮಗ್ನ ಮಾನಸನಾದಮಧುವಿಧ್ವಂಸಗೆ | ಭಗ್ನ ಮಾದುದುಭಾಗ್ಯದೇಳ್ಗೆ ||
ಅಗ್ನಿ ಪುರುಷಗುದ್ಭವಮಾದಾವುದ | ರಾಗ್ನಿಗೀಡಾಯ್ತಾನಗರಿ ||೯೫||

ಸ್ತ್ರೀಜನದೊಳುಶಿಶುಗಳೊಳುಪುರುಷರೊಳು | ವಾಜಿವಾರಣಪಶುಪಕ್ಷಿ ||
ರಾಜಿಯೊಳಿನಿಸುಳಿಯದೆಬೆಂದುದೀರಾರು | ಯೋಜನದಾಪುರದೊಳಗೆ ||೯೬||

ಅಲ್ಲಕಲ್ಲೋಲವಾಗುವತೆರದಿಂ ಪುರ | ವೆಲ್ಲವನಾಶಿಖಿಸುಡಲು ||
ಪುಲ್ಲನಾಭನುತಾನಿದುದೇವತಾಕೃತ | ವಲ್ಲದೆಪರತಲ್ಲವೆಂದು ||೯೭||

ವಿದಿತಮವ್ಯಾಚಕ್ರರತ್ನ ಮನೆನೆಯಲಂ | ತದುಮೊದಲಾದರತ್ನ ಗಳು ||
ಪದುಳದಿನವರಕ ಕಾವಲದೇವತೆಗಳಾ | ಪದದೊಳದೃಶ್ಯರೆವಡೆಯೆ ||೯೮||

ಇಂತಿದುನಮ್ಮ ಮುನ್ನಿಸಪಾಪಫಲವೆಂದು | ಚಿಂತಾತುರಚಿತ್ತನಾಗಿ ||
ದಂತಸಖಾವಳಿಮುರಿದಮೃಗಾಧಿಪ | ನಂತೆಮುರಾಂತಕನಿರಲು ||೯೯||

ಬಣ್ಣಿಸೆಬಲ್ಲಿದಬಲರಾಮನೆತ್ತುವ | ತಣ್ಣೀರಾಪುರದುರಿಗೆ ||
ಎಣ್ಣಿಯಾದುದುಮಾರುವರಾರಾವಿಧಿ | ಹಣ್ಣಿದತೇರುತೆಕ್ಕೆಯನು ||೧೦೦||

ಭರದಿಂದಾಬಲಭದ್ರನಿಕ್ಕುವನೀ | ರಿರದುಕ್ಕುವತುಪ್ಪದೊಳಗೆ ||
ಸುರಿವನೀರಂತಾದುದೇನೆಂಬೆನಾವಿಧಿ | ಯಿರದೆಮಾಡುವಮಾಟವನು ||೧೦೧||

ಅರೇವತಿಪತಿಕಂಡಿಂತಿದುದುರ್ನಿ | ವಾರಣಮೆಂದುಕೇಶವನ ||
ಅರಕ್ಕಗಂಬಳವೊಂದುಸಹಿತಮಾ | ಪೂರನಿರದೆಪೊರಮಡಿಸಿ ||೧೦೨||

ಶರಧಿಯತೀರದೊಳಗೆನಿಂದಾಪುರ | ವರಮುರಿವುದವಿಸ್ಮಯದಿ ||
ಅರಸುಗಳೀರ್ವರುನಿಂದುನೋಡಿದರಂ | ದುರಿವುರಿವಾನಗರಿಯನು ||೧೦೩||

ಕಡೆವಕಡಲೊಳುದಿಸಿದವಿಷದುರಿಹೊಗೆ | ವಿಡಿದಾಕಡೆಗೋಲಾಗೆ ||
ಕಡುರಂಜಿಪಮೇರುಗಿರಿಯೆಸಲಬುಧಿಯ | ನಡುವಣೂರಗ್ನಿಯೊಪ್ಪಿದುದು ||೧೦೪||

ಕಾಲಾಗ್ನಿರುದ್ರನಂಗದೊಳಿರ್ಪಗ್ನಿ | ಜ್ವಾಲೆರಸಾತಳದಿಂದ ||
ಭೂಲೋಕಕುಚ್ಚಳಿಸಿದನೂಳ್ಕೆಯೊಳಾ | ಭೀಳಮಾಯ್ತಾಪುರದಗ್ನಿ ||೧೦೫||

ಕ್ಷಾರಜಲವನಿರದುಂಡುಬಿಗುರ್ತಾ | ವಾರಿಧಿಯಿಂಸುರನದಿಯ ||
ನೀರುಣಲೇಳ್ವವಡಬಶಿಖಿಯೆನೆಕೃಷ್ಣ | ನೂರಗ್ನಿಯೆಳ್ದುದಂಬರಕೆ ||೧೦೬||

ಪರಿದುಪಾತಾಳಲೋಕವಸುಟ್ಟುಮೇಲಣ | ಮರುತಮಾರ್ಗವಜುಂಬಿಸುತ ||
ಪುರವರವನುಸುಡುವಗ್ನಿಯೊಪ್ಪಿದುದಂದಿ | ನುರುಲಿಂಗವೆಂಬವೂಳ್ಕೆಯೊಳು ||೧೦೭||

ಇರುಪೆಯಗೂಡಿಗಿಕ್ಕಿದಕಿಚ್ಚಿನಂತಿಡಿ | ಕೆರಿದುತುಂಬಿದರಾಜಧಾನಿ ||
ಅರಗುಲಿಯುಸುರನಿಕ್ಕಿದಬಲುಗಿಚ್ಚಿನಿಂ | ನೆರೆಬೆಂದುದರೆಗಳಿಗೆಯೊಳು ||೧೦೮||

ನೀರಜನಾಭನಕೃತಕರ್ಮವಶದಿಂ | ದಾರಕ್ಕಸನಿಟ್ಟಕಿಚ್ಚು ||
ದ್ವಾರಾವತಿಯಜನಂಗಳನಾಜವ | ನೂರೌತಣವಮಾಡಿದುದು ||೧೦೯||

ರುದ್ರನಳಿಕಾಂಬಕದಗ್ನಿಯಾಮೂ | ರೂರನುಂಡುಂದಿಂದಪೊದಲು ||
ಆರೈದುಪವಾಸಮಿರ್ದಾವಿಷ್ಣುವಿ | ನೂರಪಾರಣೆಯುಮಾಡಿದುದು ||೧೧೦||

ಪಿಂಡೀಕೃತಮಾಡಿಪಿಡಿದುಪುರಮನಾ | ದಂಡಧರನುಶಿಖಿಮುಖದಿ ||
ಉಂಡಬಾಯಂತೊಳೆವಂದದಿನಾನೀರು | ಕೊಂಡುದುನಿವಿಷಮಾತ್ರದೊಳು ||

ಪಿರಿದುಪುರವಸುಟ್ಟಪಾತಕವನುಪರಿ | ಹರಿಸುವೆನಿಂತುಟೆಂದೆನುತ ||
ಶರಧಿಸ್ನಾನಮಗೆಯ್ದಂತಾ ಅಗ್ನಿ | ಯಿರದಡಗಿದುದಬುಧಿಯೊಳು ||೧೧೨||

ಅಂದುರಾಮಾವತಾರವಿನೆನ್ನ ಕಿರಿದಿಗೆ | ತಂದೆಯಲ್ಲಾಯೆಂದುಮುನಿದು ||
ಬಂದುಸುಂಗಿದುದೆನೆಜಲನಿಧಿಯತಿಭರ | ದಿಂದಸುಂಗಿದುದಾಪುರವ ||೧೧೩||

ಮಚ್ಚರದಿಂಮಾಮಸೆಗಿಯುಸುರನಿಟ್ಟ | ಕಿಚ್ಚುವೊಂದರೆಗಳಿಗೆಯೊಳು ||
ಒಚ್ಚತವುಳಿಯದಂದದೊಳಾಪುರವನು | ಬಚ್ಚಬಯಲಮಾಡಿದುದು ||೧೧೪||

ಈರೀತಿಯಿಂನಿಜಪುರಮಗ್ನಿಯೊಳುಬೆಂದು | ನೀರೊಳುನೆರೆದುದಕಂಡು ||
ಅರಾಜರೀರ್ವರಲ್ಲಿಂತೆಂಕಕಡೆವೋದ | ದಾರಿವಿಡಿದುಬಂದರಾಗ ||೧೧೫||

ಬಲಯುತಭಟರಥಹರಿಕರಿವಿದ್ಯಾ | ಬಲದೇವಬಲದಮಧ್ಯದೊಳು ||
ಸೆಲೆವಿಭವದಿಬರ್ಪವರೇಕಾಂಗದಿ | ನೆಲದೊಳೈದಿದರಘವಶದಿ ||೧೧೬||

ಓಸರಮಿಲ್ಲದೋಲೈಸಲುಪದಿನಾರು | ಸಾಸಿರಮಕುಟವರ್ಧನರು ||
ಭಾಸಿಪವಿಭವದೊಳೈತರ್ಪವರಿಂತು | ದೇಶಿಗತನದೊಳೆಯ್ದಿದರು ||೧೧೭||

ಮುಸುಕಿದಮಂಡಳಿಕರಮಧ್ಯದೊಳುರಂ | ಚಿಸುವರನ್ನದಸತ್ತಿಗೆಯ ||
ಮಿಸುಪತಣ್ಣಿಳಲೊಳಗೆಯ್ದುವರೀಕಾಯ್ವ | ಬಿಸಿಲೊಳುಬರ್ಪಂತಾಯ್ತು ||೧೧೮||

ಹರಲೊತ್ತಿಹದುಗುವಹಜ್ಜೆಮೇಲಣಬಿಸಿ | ಲುರಿಗೆಸೆಡೆವತನುಶ್ರುತಿಕೆ ||
ಸುರಿವಬೆಮರುಸೂಸುವಸೇದೆಯಿಂದಾ | ನರನಾಥರೆಯ್ತಂದರಾಗ ||೧೧೯||

ಈರೀತಿಯಿಂಬಲಹರಿಗಳ್ಪೆತಂದೊಂದು | ಭೀರುತೆಯನುಹುಟ್ಟಿಸುವ ||
ಆರಣ್ಯವಹೊಕ್ಕೊಂದುಮಾಕಂದಮ | ಹೀರುಹವನುಸಾರಿದರು ||೧೨೦||

ಅಲ್ಲಿಹಸಿದಫುಲ್ಲನಾಭಸಕಂಡುನೀ | ನಿಲ್ಲಿರುನಿನಗಶನವನು ||
ನಿಲ್ಲದೆತಪ್ಪೆನೆನುತತಳರಿದನತಿ | ಬಲ್ಲಿದನಾಒಲದೇವ ||೧೨೧||

ಲೋಕೈಕಬಾಹುಬಲಾನ್ವಿತನುರುಭ | ದ್ರಾಕಾರನಮಳಸ್ವರೂಪ ||
ಆಕಾಂತಾರಮಧ್ಯದೊಳಿರದೆಯ್ದಿದ | ನೇಕಕುಂಡಲನತಿಭರದಿ ||೧೨೨||

ಅತಿವೇಗದಿಂದೆಯ್ತಂದಾಕುರುಭೂ | ಪತಿಯಮೊಮ್ಮಗಕುಯವರನು ||
ಪ್ರತಿಪಾಲಿಸುವಧನದಕುಶ್ಮೆಯೆಂಬು | ನ್ನತಿಕೆಯಪುರಕೆಯ್ದಿದನು ||೧೨೩||

ದ್ವಾರಾವತಿಯುರಿದುದಕಂಡಾಬಲ | ನಾರಾಯಣರೀರ್ವರುಳಿಯೆ ||
ಆವೂರೊಳಗೆಲ್ಲರುಸತ್ತರೆಂದೆಂಬಾ | ವಾರತೆಯನುಕೇಳುತವೆ ||೧೨೪||

ಆರಯ್ದೆಕಡುಹರ್ಷದಿಂದಾದುರ್ವಿ | ಚಾರಿಮಾಡಿಸಿದನೋಕುಳಿಯ ||
ಆರವಿಯನುರಾಹುಗ್ರಹಿಸಿದೊಡೊಳ್ಳೆ | ನೀರೊಳುತಲೆಯೆತ್ತುವಂತೆ ||೧೨೫||

ಅಂತದನೀಕ್ಷಿಸುತಾಬಲದೇವನ | ತ್ಯಂತದುಃಖಾನ್ವಿತನಾಗಿ ||
ಪಿಂತಣಪಿರಿದಪ್ಪದುಷ್ಕೃತಫಲವೆನು | ಗಿಂತಾಯ್ತೆಂದೆಣಿಸುತವೆ ||೧೨೬||

ನಾಗದತ್ತನೆಂಬಪರದನಂಗಡಿಗಾಗಿ | ಪೋಗಿತನ್ನೇಕಕುಂಡಲವ ||
ರಾಗದಿನಿತ್ತುಕಲಸುಗೂಳನೀಸಿಕೊಂ | ಡಾಗರಿಮನುತಿರುಗಿದನು ||೧೨೭||

ಭೂಲೋಕವನುಪಾಲಿಸುವಪರಾಕ್ರಮ | ಶಾಲಿಯಚ್ಯುತಸಗ್ರಜನು ||
ಶ್ರೀಲೀಸುಕಾಲವತದಿಕುಂಡಲವನು | ಕೂಳಿಗೆಮಾರುವುತಾಯ್ತು ||೧೨೮||

ಅನೃಪವರನಾಕಾರಕೆವಿಸ್ಮಯ | ಮಾನಸನಾನಾಗದತ್ತ ॥
ಭೂನುತಮಪ್ಪೀರತ್ನ ಕುಂಡಲಮಿದ | ನಾನುಧರಿಸಲಳವಲ್ಲೆ ॥೧೨೯॥

ಎಂದಾಳುಯವರಗಾಕುಂಡಲವನು | ತಂದುಕೊಡಲುಕಂಡವನು ॥
ಮುಂದೇತರವಿಸ್ಮಯನಾಗುತಿಂತಿದ | ತಂದುಕೊಟ್ಟವನಾರೆನಲು ॥೧೩೦॥

ಭುವನೈಕರೂಪನುತ್ತಮಲಕ್ಷ್ಮಣಾನ್ವಿತ | ಪ್ರವಿಮಲತರಲಲಿತಾಂಗ ॥
ತವಕದಿನೋರ್ವಕಾರಣಪುರುಷನುಬಂದು | ನವರತ್ನ ಕುಂಡಲವಿತ್ತ ॥೧೩೧॥

ಕಲಸುಗೂಳನುಕೊಂಡುಪೋದನೆಂಬುದಕೇಳಿ | ನೆಲೆಯಿದುಮತ್ತೋರ್ವನಲ್ಲ ॥
ಬಲರಾಮನೆಂದೇಯನುಮಾನದಿಂದರಿ | ದಲಘುತರಕ್ರೋಧದಿಂದ ॥೧೩೨॥

ಅಂದುಪಾಂಡವರನೇಳಿಸಿನಮ್ಮ ವಂಶವೆಂ | ಬೊಂದುಮಹಾರಣ್ಯವನು ॥
ದಂದಹ್ಯಮಾನವುಪ್ಪಂದದಿನುರುಹಿಸಿ | ಕೊಂದುನಿಶ್ಶೇಷಂಗೆಯ್ದಾ ॥೧೩೩॥

ಪಗೆಯೆನಗೊಳಗಾದನೆಂದುಬಗೆದುತ | ನ್ನಗಣಿತಮಪ್ಪಸೈನ್ಯವನು ॥
ಮಿಗೆಮುನಿಸಿಂಕೂಡಿಕೊಂಡುಬಂದಾಸಾ | ಸಿಗನೆಯ್ದುವೆಡೆಗೆಯ್ತರಲು ॥೧೩೪॥

ತೀವಿದಬಲವನುಕಂಡುಹರಿಯಪುಣ್ಯ | ದೇವತೆಗಳಿರೀಕೂಳ ॥
ಓವದೆಯಾನಿಮೆಂದಾಕಾಶಕಿಡಲದು | ಭೂವಲಯಕೆಬೀಳಲಾಗ ॥೧೩೫॥

ಎನ್ನಸುಕೃತದೇವತೆಗಳಿರಾನೀವೀ | ಯನ್ನಮನಾನಿಮೆಂದೆನಲು ॥
ಜೆನ್ನಾಗಿಯವುಬಂದಾತುರಕ್ಷಿಸುತಿ | ರ್ಪನ್ನೆಗಮಾರಿಪುಸೇನೆ ॥೧೩೬॥

ಮುಸುಕಲುಕಂಡುಮುನಿದುಮಿಗವಿಂಡಸು | ಹಸಿದಹೆಬ್ಬುಲಿಹೊಗುವಂತೆ ॥
ಅಸಮಪರಾಕ್ರಮಿಯಾದುರ್ಬಲವನು | ಕುಸುರಿದರಿದುಕೊಂದನಾಗ ॥೧೩೭॥

ಕರಿಯಿಂಕರಿಯನಶ್ವಗಳಿಂದಶ್ವವ | ನುರುರಥದಿಂರಥಗಳನು ॥
ನರರಿಂನರರನೋವದೆಬಡಿದಾನಿ | ಷ್ಠುರವಿಕ್ರಮಿಕೊಂದನಾಗ ॥೧೩೮॥

ಬಲ್ಲಾಣಬಾಳೆಯವನವಹೊಕ್ಕಂದದಿ | ಬಲ್ಲಿದನಾರಿಪುಬಲವ ॥
ಎಲ್ಲವಕೊಲಲಾಕುಯವರನತಿನೊಂ | ದಲ್ಲಿಂದೋಡಿದನಿಶ್ಯ ॥೧೩೯॥

ಬಲಯುತನಾಕಲಸೋಗರವನುಕೊಂ | ಡಲಸದೆಬಂದುದೂರದೊಳು ॥
ನೆಲದೊಳಗೊರಗಿದಮುರರಿಪುವನುಕಂ | ಡಲಘುದುಃಖಾನ್ವಿತನಾಗಿ ॥೧೪೦॥

ಎಲೆತಮ್ಮ ರತ್ನ ರಂಜಿತನವಶಯ್ಯಾ | ತಳದೊಳುಮಣಿದೀಪಗಳು ॥
ಜ್ವಲಿಯಿಸುತಿರೆಮಾಣಿಕಮಂಚದಮೇಲೆ | ಮಲಗುವಗೀವಿಧಿಯಾಯ್ತ ॥೧೪೧॥

ಧವಲಾತಪತ್ರದತಣ್ಣೆಳಲೊಳಗಾ । ಧವಳಾಕ್ಷಿಯರುಢಾಳಿಸುವ ॥
ಧವಳಚಾಮರಗಳಿಸೆಸೆವೀಯುದುಕುಲ । ದವಗಿಂದೀವಿಧಿಯಾಯ್ತೊ ॥೧೪೨॥

ಮೇದಿನಿಯೊಳಗುಳ್ಳರಸುಮಕ್ಕಳುನಿನ್ನ । ಪಾದಮೂಲಕೆಮುಗ್ಗುತಿರಲು ॥
ಸಾದರದಿಂದಿರ್ಪಮುರವೈರಿಯೇಕಾಕಿ । ಯಾಪಿಯಲಾಕರ್ಮವಶದಿ ॥೧೪೩॥

ಎಂದುರೆಪಲುಬುತಕಣ್ಣಕಡೆಗೆನೀರ । ತಂದುತಮ್ಮನಬಳಿಗೆಯ್ದಿ ॥
ಒಂದಿದಮರುಕದಿಕುಳ್ಳಿರ್ದುಕುಯುವರ । ಸಂದಣಿಸಿದಸೇನೆವೆರಸಿ ॥೧೪೪॥

ಬಂದುತಾಗಲುತಾನಾಬಲವನುಬಡಿ । ದಂದಮನುಸುರಲುಕೇಳಿ ॥
ಇಂದೀವರನಾಭಸಧೈರ್ಯವಾಯಿದೆ । ಯಿಂದಹವ್ವನೆಹಾರಿದುದು ॥೧೪೫॥

ಇಲ್ಲಿನಾವಿರ್ದುದೆಲೇಯಣ್ಣಕಾರಿಯ । ಮಲ್ಲೆಂಬಸುಡಿಯನುಕೇಳಿ ॥
ಬಲ್ಲಾಳಂದೆಸಗಿದಪಾಪವಶದಿಂ । ಹುಲ್ಲಾಳಾದನೆಂದೆನುತ ॥೧೪೬॥

ಅಕಟಕಟಾಪಾಪವಿಧಿಯೆಭುವನಗುಂ । ಭುಕನಚಳಿತನಪ್ರತಿಮನು ॥
ಅಕಲಂಕವಿಕ್ರಮಾಸ್ವತನೀತೆರದಿಂ । ಚಕಿತಹೃದಯನಾದನಲ್ಲ ॥೧೪೭॥

ಎಂದಾತನುಚಿಂತಿಸುತಾಹರಿಗೂಡಿ । ಮುಂದಕೆತೆರಳಿಯಲ್ಲಿಂದ ॥
ಗೊಂದಣಗೊಂಡುಕೊಳ್ಮಿಗಗಳ್ತೀವಿದ । ಮಂದೇತರೋಲ್ವಣಮಾದ ॥೧೪೮॥

ಕೌಶಂಬಿಯೆಂಬಮಹಾವಿಪಿನದೊಳೊಂದು । ಕೊಶಡೂರಮೆಯ್ತಂದು ॥
ಆಸಕ್ತಿಯಿಂದೊಂದುವಟಭೂಜಕಾರಾಮ । ಕೇಶವರಿರದೆಯ್ತಂದು ॥೧೪೯॥

ಪಿರಿದಾದುದುನೀರಳ್ಕೆಯೆಸಲುಹಲ । ಧರನಾನೆಳಲೊಳೊರಗಿದ ॥
ಹರಿಗಾರಕ್ತಕಂಬಳವಹೊದಿಸಿನೀರ । ತರಲೆನುತೈದಿದನಿತ್ತ ॥೧೫೦॥

ಅಂದಾನೇಮಿಶಸವಚನಕೆಭರ । ದಿಂದಜರತ್ಕುಮಾರಕನು ॥
ತಂದುಜಲಧಿಯೊಳುಹಾಕಿದಬಾಣವ । ನೊಂದುಮಿಸುನುಂಗಲದನು ॥೧೫೧॥

ಜಾಲಗಾರನೋರ್ವಹಿಡಿದದರೊಡಲನು । ಸೀಳಿಯಾಬಾಣವತೆಗೆದು ॥
ಲೀಲೆಯಿಂದಕಾಣ್ಕೆಯನೀಯೆವಿಕ್ರಮ । ಶಾಲಿಜರತ್ಕುಮಾರಕನು ॥೧೫೨॥

ಹರುಷದಿನಾಸರಲನುಕೊಂಡುವಿಪಿನಾಂ । ತರದೊಳುತೊಳಲುತಬಂದು
ಮರದಡಿಯೊಳಗೊಂದುಕಾಲೊಳುಕಾಲಿಟ್ಟು । ಹರಿಯಾರಕ್ತಗಂಬಳವ ॥೧೫೩॥

ಮುಸುಕಿಟ್ಟುಮಲಗಿರೆಪಲವಣ್ಣದಿಂದಂ । ಬಿಸುವಮೃಗಮಿದೆಂದುಬಗೆದು ॥
ಎಸಲಾಕಣಿಕೃಷ್ಣನಕಮಲಾಂಕಿತ । ಮಿಸುಪಮೆಲ್ಲಡಿಯತಾಗಿದುದು ॥೧೫೪॥

ಆವೆಲ್ಲಡಿಯನುತಾಗಿಮೇಗಡೆಗಾಗಿ | ಯಾಮಾರ್ಗಣಮ್ಮೂಡಲೊಡನೆ ||
ದಾಮೋದರನೆಳ್ದು ಕಿತ್ತುಮತ್ತದನು | ದ್ದಾಮಕೋಪದೊಳಿರಲಾಗ ||೧೫೫||

ಶರದಿಂದಾಮೃಗವಳಿಯಿತೆನುತಕಡು | ಭರದಿಂದಲ್ಲಿಗೆಯ್ತಂದು ||
ಹರಿಯನುಕಂಡಕಟಾಕೆಟ್ಟೆನಣ್ಣಾ | ಪಿರಿದುಪಾತಕಿನಾನೆಂದು ||೧೫೬||

ಧರೆಯೊಳಗುರುಳಿಶೋಕಂಗೆಯ್ವುತಿರಲಾ | ಮುರರಿಪುವಿಂತಿದೇನೆಂದು ||
ಒರೆಯೆಜರತ್ಕುಮಾರಕನಳುತಿಂತೆಂದ | ನರಸನಿನ್ನನುಮೃಗಮೆಂದು ||೧೫೭||

ಊಹಿಸಿಪಾಪಕರ್ಮದಿಯೆಚ್ಚೆನೆಂದೀ | ದ್ರೋಹಿಯನಿಕ್ಕಾಜ್ಞೆಗೆಂದು ||
ಹಾಹಾಕ್ರಂದನಮಂಮಾಡುತ್ತಿರ | ಲಾಹರಿಯಿಂತೆಂದನಾಗ ||೧೫೮||

ವನಧಿಯಜೀವನವನುಪಡಬಾನಲ | ವೆನಿತೆನಿತನುಹೀರಿದೊಡೆ ||
ಮುನಿಯದವನಧಿಯಂದದಿವನಜೋದರ | ನಿನಿಸುಮುನಿಯದಿಂತನುಚಿತ ||೧೫೯||

ಏಕೆಯನುಜನೀನವಿವೇಕಿಯಲ್ಲಾ | ಲೋಕೈಕಪತಿನೇಮಿನಾಥ ||
ಅಕೇವಲಬೋಧನಾಡಿದುದುಳಿವುದೆ | ಸಾಕುಮಾಣಾದುಃಖವನು ||೧೬೦||

ನೀನಿಲ್ಲಿತಳುಮಾಡೆಬಲರಾಮನೆಯ್ತಂ | ದೀನನ್ನ ಘಾಯವಕಂಡು ||
ತಾನತಿಕೋಪದಿನಿನ್ನನುಕೊಲ್ಲದೆ | ಯಾನುವನಲ್ಲದರಿಂದ ||೧೬೧||

ಇಲ್ಲಿಂದವೋಗೆನಲಾತನುವೋಗಲು | ಫುಲ್ಲಾಕ್ಷ್ಣನಾಕಂಬಳವನು ||
ನಿಲ್ಲದೆಹೊದೆದೆನ್ನ ನೆಚ್ಚವನನುಜಾತ | ನಲ್ಲದನ್ನಿಗನಾದೊಡವನ ||೧೬೨||

ಕೊಲ್ಲದೆಮಾಣೆನೆಂಬಾರೌದ್ರಧ್ಯಾನ | ದಲ್ಲಿಗತಜೀವನಾಗಿ ||
ಪೊಲ್ಲಮಪ್ಪಾಮೂರನೆಯನರಕಬಿಲ | ದಲ್ಲಿಸಂಜನಿಸಿದನಿತ್ತ ||೧೬೩||

ಹಲಧರನುದಕವನರಸಿತೊಳಲ್ದೊಂದು | ಕೊಳನಕಂಡದರೊಳುಹೊಕ್ಕು ||
ಜಲರುಹಪತ್ರದಘಟಿಕೆಯೊಳಾನಿ | ರ್ಮಲಜಲವನುತೀವಿಕೊಂಡು ||೧೬೪||

ಅನುಜನಲ್ಲಿಗೆಬಂದುನಿಜನಿದ್ರೆಗೈದಪ | ನೆನುತತಿಕರುಣಹೃದಯನು ||
ಇನಿಸುಪೊತ್ತುಕುಳ್ಳಿರಲಚ್ಯುತನಪದ | ವನಜವನೊಣಮುತ್ತುತಿರಲು ||೧೬೫||

ಎಲ್ಲಿಯದೀನೊಣಮೆಂದುಪಜ್ಞೆಯನೋಡ | ಲಲ್ಲಿಯಘಾಯವಕಂಡು ||
ತಲ್ಲಣದಿಂದನುಚಾತನಮೊಗವನು | ಮೆಲ್ಲನೆತೆಗೆದುನೋಡಿದನು ||೧೬೬||

ಗತಜೀವನಾಗೆಹಾಹಾಯೆಂದುಮೂರ್ಛಾ | ಗತನಾಗಿನೆಲದೊಳುಬಿಳ್ದ ||
ಅತಿಬಲನೆಂತಾನುವೆಚ್ಚಳ್ತನೋಡಿಯ | ಚ್ಯುತನಿನಗೀವಿಧಿಯಾಯ್ತೆ ||೧೬೭||

ಹಾಕಟ್ಟೆಹಾಕೆಟ್ಟೆನೆಂದುದುಃಖಾಗ್ನಿಯೊ | ಳಾಕೋಪಾಗ್ನಿಯಕೂಡಿ ||
ಲೋಕೈಕವಿಕ್ರಮನಿನ್ನನುನಿದ್ರೆಯೊ ! ಳೀಕಾಲನೆಚ್ಚಿ ಪೋದವನ ||೧೬೮||

ಕೊಲ್ಲದೆಬಿಡೆನೆನುತಾಭೀಮಾಟವಿ | ಯಲ್ಲಿರ್ದುದೊಂದುಹೆಮ್ಮರನ ||
ನಿಲ್ಲದೆಕಿತ್ತುಪೆಗಲೊಳಿಟ್ಟುಭರದಿಂ | ದಲ್ಲಿಂಮುಂದಕ್ಕೆನಡೆದು ||೧೬೯||

ಆಕಾನನದೆಂಟುದೆಸೆಯೊಳಗಾಕಡೆ | ಯಾಕಡೆಯೆನ್ನದೆತೊಳಲಿ ||
ಆಕೋಪಾಂತಕನಾದ್ರೌಪಿಯಕಾಣ | ದಾಕೃಷ್ಣನೆಡೆಗೈದಿದನು ||೧೭೦||

ಅಂತುಬಂದಾಹೆಣನನುತಳ್ಕೈಸಿಮು | ರಾಂತಕಮಗಧವಿಧ್ವಂಸಿ ||
ಕಂತುಜನಕಕಂಸಕೋಳಾಹಳನಿನ | ಗಿಂತೀಸಾವೊದವಿದುದೇ ||೧೭೧||

ಹಾಹಾಹರಿಕುಲಗಗನಭಾಸ್ಕರನೇ | ಹಾಹಾಹರಿವಂಶತಿಲಕ ||
ಹಾಹಾಹರಿವಂಶವನಧಿಶಶಾಂಕ | ಹಾಹಾಯೆನ್ನನುಜಾತ ||೧೭೨||

ಹಾಹಾನೃಪಕುಲಚೂಡಾಮಣಿಯೇ | ಹಾಹಾಮನುಜಮಂದಾರ ||
ಹಾಹಾರಿಪುನೃಪವಿಪಿನಕುಠಾರ | ಹಾಹಾಯೆನ್ನನುಜಾತ ||೧೭೩||

ಆತೊಟ್ಟಿಲಶಿಶುವಾಗಿವೊಲೆಯುಕಚ್ಚಿ | ಪೂತಿನಿಯನುವನುಹೀರಿ ||
ಖ್ಯಾತಿಪಡೆದನಿನ್ನಾ ಪುಣ್ಯದಫಲ | ಬೀತುದಲ್ಲಾ ಬಿಸಜಾಕ್ಷ ||೧೭೪||

ಬಿಟ್ಟಕೆಗರಿಮೂಡಿದವೊಲುರೂಪಳ | ವಟ್ಟರಗಿದಕಾಕನನು ||
ರಟ್ಟೆಮುರಿದವೊಲುವೊಡೆದನಿನ್ನೆಳವಿಯ | ದಿಟ್ಟತನಮದೇನತಾಯ್ಕೋ ||೧೭೫||

ನಾರಸೀಳುವತೆರದಿಂಸೀಳಿಬಿಸುಟುಕಿ | ಶೌರಾಸುರನಮರ್ದಿಸಿದ ||
ತೋರಿಹತೋಳಬಲುಮೆಯೇನಾದುದೋ | ವೀರನಾರಾಯಣನಿನ್ನ ||೧೭೬||

ಬೆಂಡಿನಬಂಡಿಯನೊದೆವಂತಾವು | ದ್ದಂಡಶಕಟರಾಕ್ಷಸನ ||
ದಿಂಡುಗೆಡಹಿಕೊಂದನಿನ್ನೆಳವರೆಯದ | ಗಂಡುತನಮದೇನಾಯ್ಕೋ ||೧೭೭||

ರಾಸಭರಾಕ್ಷಸನನುಪಮಶಕ್ತಿಯ | ನೋಸರಿಸದೆನೆಗ್ಗಿಮುರಿದ ||
ಸಾಸಿಗತನವೇನಾಯಿತೊಪದಿನಾರು | ಸಾಸಿರಗೋಪಿಯರರಸಾ ||೧೭೮||

ಕತ್ತರಿಯಂತೆಯಿರುಂಕಿಕೊಲಲ್ಬಂದ | ಮತ್ತಿಯಹೆಮ್ಮರಗಳನು ||
ಕಿತ್ತುಹಾಕಿದನಿನ್ನ ಬಾಲಕಾಲದಬಲು | ಪೆತ್ತವೋದುದೊಕಂಸಾರಿ ||೧೭೯||

ತಾಳವೃಕ್ಷವಕಿತ್ತಾಕೃಟಭನಕೈಯ | ನಾಳೋಚಿಸದೆಮುರದಿಟ್ಟ ||
ಕಾಳಿಗನಾಗಸಹತಿಸಿದನಿನ್ನ ಏ | ಶಾಲವಿಕ್ರಮವೇನಾಯ್ಕೋ ||೧೮೦||

ಅಸುರರಹತಿಸಿಯದ್ರಿಯನೆತ್ತಿ ಫಣಿಪನ | ನ್ನೊಸೆದೇರಿಯೇರಿಸಿಧನುವ ||
ಉಸುರೇರಿಸಿಶಂಖವನುಮ್ಮಳರಕೊಂ | ದೆಸಕವೇನಾಯ್ತೊಮುರಾರಿ ||೧೪೧||

ಆರಡಿಕಾರನೆನಿಪಕಂಸನಕಟ್ಟು | ಕೂರಿನಮಧುಕೈಟಭರ ||
ಗಾರುಮಾಡಿಕೊಂದನಿನ್ನ ಬಲುಮೆಯೆಲ್ಲಿ | ಸೂರೆಹೋದುದೊಸಿರಿಯರಸಾ ||೧೪೨||

ಅಂದುಮಗಧನಿಟ್ಟಾಜಕ್ಕಮಿಗೆಬಲ | ವಂದುದುಹರಿಕೇಳುನಿನ್ನ ||
ಇಂದೀಹೀನಮಾನಸನೆಚ್ಚ ಕೊಳೆಯಂಬು | ಕೊಂದುದಲಾಕರ್ಮವಶದಿ ||೧೪೩||

ಚಕ್ರಸಹಿತಪರಚಕ್ರವೆಲ್ಲವನುಪ | ಕಾಕ್ರಮದಿಂಸಾಧ್ಯಮಾಡಿ ||
ಶಕ್ರಾನುಜನಾಗಿಸಂಪದವಡೆದೀ | ಚಕ್ರಿಗಿಂತೀವಿಧಿಯಾಯ್ತೀ ||೧೪೪||

ನಾನಾದೇಶದನರನಾಥರನಿರ | ದಾನದೆಯೆರಗಿಸಿಕೊಂಬ ||
ಶ್ರೀನಾರೀಪತಿನಿನ್ನ ಮೆಲ್ಲಡಿಗಳ | ನೀನೊಣಮುತ್ತುವಂತಾಯ್ತು ||೧೪೫||

ಪಸುಳೆವರೆಯದಿಂದಿಳೆಯಚ್ಯುತನೆಂದು | ಪಸರಿಸಿದನ್ವರ್ಥನಾಮ ||
ಪುಸಿಯಾಯಿತಲ್ಲಾ ಕ್ರೂರಕೃತಾಂತನ | ದೆಸೆಯಿಂನಿನಗೆಮುರಾರಿ ||೧೪೬||

ಕ್ರೂರಕೃತಾಂತಗೆಭಸ್ಮಕವೆಂದೆಂಬ | ರೋಗಮುದಯಮಾಗದೊಡೆ ||
ಈರಾರುಗಾವುದತುಂಬಿದನಿನ್ನೂರ | ನಾರೋಗಣೆಯಮಾಡುವನೆ ||೧೪೭||

ಸ್ಥಿರಮಲ್ಲಮಾತನುವೀವನೆಯಿಂತಾಯ್ತೆ | ಸಿರಿಯೆಂಬಾಶ್ರುತವಚನ ||
ನಿರುತದಿದೈಷ್ಟಾಸುಭೂತವಿಂದೆನಗಾ | ಯ್ತುರವಿಂದನಾಭನಿನ್ನಿಂದ ||೧೪೮||

ಸಣ್ಣದುಪ್ಪಳವಂಚೆಯಹಾಸನಮೇಲೆ | ಬಣ್ಣದುಟಿಯುಬಾಲೆಯರೊಳು ||
ತಣ್ಣನೆತಣಿದೊರಗುವನೀರಗೆಹುಡಿ | ಮಣ್ಣೊಳುಮಲಗುವಂತಾಯ್ತೀ ||೧೪೯||

ಎಂದಾಬಲಭದ್ರನುನಾನಾಪರಿ | ಯಿಂದಸಿರಿದುಶೋಕಗೆಯ್ದು ||
ಒಂದಿದದುಃಖದಿವಿತಿಗೆಟ್ಟುಮರುಳಾಗಿ | ಮುಂದುಗೊಂಡಾಮರುಕದೊಳು ||

ಹರಿನೀಲಗಿರಿಯತಾರಾಜಲವೆತ್ತುವ | ದೊರೆಯೆನೆಕೃಷ್ಣನಂಗವನು ||
ಸುರುಚಿರಮೂರ್ತಿಹಲಾಯುಧನೆತ್ತಿಕಂ | ಧರದೊಳುಧರಿಸಿತಿರುಗಿದ ||೧೫೧||

ಕಡುಸೊಗಯಿಸುವಕಲಾಭೃದ್ಬಿಂಬದ | ನಡುಮಣಕರೆಯೆಂಬಂತೆ ||
ಪೊಡೆಯಲರನತನುರುಚಿಬಲರಾಮನ | ಪೆಡತಲೆಯೊಳಗೊಪ್ಪಿದುದು ||೧೫೨||

ಘನಾಳರುಗಳೋಲಗಶಾಲೆಗೆಯ್ತಂದು | ನಾನಾವಿಧದಿಶೃಂಗರಿಸಿ ||
ಅನತರಾಗಿವೆಂದೆಸುತಾಜ್ಞಾಪಿಸು | ತಾನಂದುಭೃಮಿಯಿಸುತಿಹನು ||೧೫೩||

ಅಡಪಯುಮಿಗಗಳಿರಾಯೆನ್ನ ಪೆಗಲೇರಿ | ಕಡುಮುನಿದೆನ್ನ ಸುಜಾತ ||
ನುಡಿಜುನೆನ್ನೊಳುನೀಮಾತನಮುನಿಸನು | ಬಿಡಿಸಿಯೆಸುತಗಳಪ್ಪುವಸು ||೧೯೪||

ಈತೆರದಿಂಬಲರಾಮಸುತನ್ನನು | ಜಾತನಶಬವಷಣ್ಮಾಸ ||
ಪ್ರೀತಿಯಿಂದಮರುಳಾಗಿಪೆಗಲೊಳಿಟ್ಟು | ಭೂತಳದೊಳುತಿರುಗುತಿರೆ ||೧೯೫||

ಸುರಲೋಕದಿಂಸಿದಾರ್ಥನೆಂದೆಂಬೋರ್ವ | ಸುರಗೂಡಿನೈಗಮದೇವ ||
ಧರೆಗಿಳಿದಾಬಲನೆಯ್ದುವದಾರಿಯೊ | ಳಿರದೆವಿಗುರ್ವಣಿಯಿಂದ ||೧೯೬||

ಅರೆಯೊಳಗಡಿಮೇಲಾಗಿಜಾಳೆಯಬಿತ್ತಿ | ದರೆಗುಂಬದಿಂನೀರತಂದು ||
ಎರೆವುತಿರಲುಕಂಡುಬಲರಾಮನಿಂತೆಂದ | ನೆರೆಹುಚ್ಚುಗಳಿರನೀವೇಕೆ ||೧೯೭||

ಅಲ್ಲದಕೃತ್ಯಮನೆಸಗುವಿರೆನೆಪೆಗ | ಲಲ್ಲಿಹೆಣನಹೊತ್ತಿಹುದು ||
ಅಲ್ಲದಕೃತ್ಯಮಲ್ಲವೆಯೆನಲಾಬಲ | ವೊಲ್ಲಮುನಿಸಿನಿಂತೆಂದ ||೧೯೮||

ಎನ್ನ ಸುಜಾತನಿಳಾಚಕ್ರೇಶ್ವರ | ನುನ್ನತಪುರುಷೋತ್ತಮನು ||
ಮುನ್ನೊಡದೆಪೆಣನೆಂದುಮಾತಾಡುವು | ದನ್ಯಾಯವಲ್ಲವೆಪೇಳಿ ||೧೯೯||

ಎಂದುನಿರ್ಘಟಿಸಲವರಲ್ಲಿಂಪೋಗಿ | ಮುಂದೊಂದೆಡೆಗೆಯ್ತಂದು ||
ಒಂದು ಕುಡಿಕೆಯೊಳುನೀರಕಡೆವುತ | ಲ್ಲಿಂದಮಳಲಹಿಳಿಯುತಿರೆ ||೨೦೦||

ಮುನ್ನಿನಂತೆಬಲನವರೊಳುನುಡಿಯಲು | ನಿನ್ನನೀನರಿಯದೆನಮ್ಮ ||
ಚೆನ್ನಾಗಿನುಡಿದೆಹೆಣನಹೊತ್ತೆಯೆನಲುನಂ | ಪನ್ನನದಕೆಬಗೆಗೊಂಡು ||೨೦೧||

ಮೋಹಾಂಧಕಾರತೊಲಗೆಪೆಗಲೊಳಗಿ | ರ್ದಾಹರಿಸತ್ತನೆಂಬುದನು ||
ಊಹಿಸಿಯರಿದುನೆಲಕ್ಕಿಳುಹಿದನಾ | ಸಾಹಸಿಯಾಬಲರಾಮ ||೨೦೨||

ಈತನಗಲ್ಲೆಯೊಳೆನಗೆವಿವೇಕಮ | ತೀತಮಾಯ್ತಂತದರಿಂದ ||
ಮಾತೇನಧಿಕಭವಾಂಬುಧಿಯನುಹೊ | ಕ್ಕೇತಕಲ್ಲದೆಕೆಡುತಿರ್ದೆ ||೨೦೩||

ಎಂದುಚಿಂತಿಸುತಿರಲಾಸಗ್ಗಿಗರುತಮ್ಮ | ದೊಂದುರೂಪವತೋರುತವೆ ||
ಅಂದುತಾಮೈದಿದಂದವಪೇಳಿಸುಗುಣನಿ | ನ್ನಂದಮನೀನೆನೋಡೆನುತ ||೨೦೪||

ಇವುಮೊದಲಾದಯುಕ್ತಾಯುಕ್ತಿಯನುಪೇಳಿ | ಯವನಿಪನನುಬೀಳ್ಕೊಂಡು ||
ದಿವಿಜರಮರಲೋಕಕೆವೋಗಲಿತ್ತಕೇ | ಶವಸಶಬವಸುಡಲೆಂದು ||೨೦೫||

ತುಂಗಿಯೆಂಬಾಗಿರಿವರಕೆಯ್ದಲಾಗಗ | ನಾಂಗಣದೊಳಗಿಂದುಗೂಡಿ ||
ಏಂಗದಮೋಹದೊಳಿಪ್ಪತ್ತುಬಾರಿಯು | ಸಂಗನನೀಸುಟ್ಟೆಯಲ್ಲ ||೨೦೬||

ಎಂಡಶರೀರವಚನಮಾಗಲುಬಿಸ | ವಂದವಡೆದುಭ್ಭಲರಾಮ ||
ಚಂದನದಿಂಧನದಿಂದಮುಕುಂದನ | ನಂದುಸಂಸ್ಕಾರಮಾಡಿದನು ||೨೦೭||

ತದನಂತರದೊಳಗಾನಗಕೀರ್ವರು | ಸದಮಲಚಾರಣರುಗಳು ||
ಮುದದಿಂದಬರಲವರ್ಗಿರದಭಿವಂದಿಸಿ | ಪದುಳದಿದೀಕ್ಷೆಯಧರಿಸಿ ||೨೦೮||

ಉತ್ತಮಮಪ್ರಾತಪದೊಳಗಾಸಂಯ | ಮೋತ್ತಂಸನಾರಾಮಯೋಗಿ ||
ಚಿತ್ತಶುದ್ಧಿಯೊಳುನೆಗಳಿಸನ್ನ್ಯಸನದಿ | ಮತ್ತಾದೇಹವನುಳುಹಿ ||೨೦೯||

ಸುರುಚಿರತರಸುಖಮಾವೈದನೆಯಾ | ಸುರಲೋಕದೊಳುಸಂಜನಿಸಿ ||
ನಿರುತಮಪ್ಪಾಸೌಖ್ಯವನುಣುತಾಹಲ | ಧರನಿರ್ದನತಿಹರುಷದೊಳು ||೨೧೦||

ದಿವಿಜಸತಿಯರಿಂದಿವ್ಯಸುಖಮನನು | ಭವಿಸುತ್ತನಿಶ್ಚಿಂತನಾಗಿ ||
ದಿವಿಜಲೋಕವಪರಿಪಾಲಿಸುತಿರ್ದನು | ದಿವಿಜೇಂದ್ರಕುಲಶೇಖರನು ||೨೧೧||

ಇದುಜಿನಪದಸರಸಿಜವ-ದಮಧುಕರ | ಚದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗಿದುಚತುಸ್ತ್ರಿಂಶದಾಶ್ವಾಸ ||೨೧೨||

ಮೂವತ್ತನಾಲ್ಕನೆಯ ಸಂಧಿ ಸಂಪೂರ್ಣಂ

೩೫. ಮೋಕ್ಷಪ್ರಾಪ್ತಿ ಸಂಧಿ

ಸುರನರಫಣಿಪತಿಮೌಲಿಕೀಲಿತರತ್ನ | ಕಿರಣರಂಜಿತಪಾದನಖನ ||
ನಿರವಧಿಯಹಸಿರಿಯೆರಡಕೆರೆಯನೇಮಿ | ಚರಣಕಮಲಕೆರಗುವೆನು ||೧||

ಬಲ್ಲಿದಮೋಹಮಲ್ಲನಹಲ್ಲಮುರಿದತಿ | ಬಲ್ಲಿದನಾಪುಷ್ಪಶರನ ||
ಬಿಲ್ಲಮುರಿದುಪಂಚಶರವಳೆದನೇಮಿ | ವಲ್ಲಭನಡಿಗೆರಗುವೆನು ||೨||

ದ್ವಾರಾವತಿಪುರವರಮೆಲ್ಲಮುರಿದಾ | ನೀರೊಳುನೆರೆದುಹೋದುದನು ||
ನಾರಾಯಣನಳಿದುದುಮುಂತಾದಾ | ವಾರತೆಯೆಲ್ಲವಕೇಳಿ ||೩||

ಕುರುಜಾಂಗಣವಿಷಯಾಧೀಶಪಾಂಡವ | ರುರುತರಚಿಂತೆಯತಾಳಿ ||
ವರಸುತನಭಿಮನ್ಯುಕುವರಂಗಾವು | ತ್ತರೆಗೆಪುಟ್ಟಿದನಂದನನು ||೪||

ಸ್ಮರನಿಭರೂಪಪರೋಕ್ಷಿತನೆಂಬಗೆ | ಧರಣೀಭಾರವೆಲ್ಲವನು ||
ಇರದಿತ್ತುನಿಜಸತಿಯರುಪಲಬರುಭೂ | ವರರುಬೆಂಬಳಿಯೊಳುಬರಲು ||೫||

ಉತ್ತರದೆಸೆಯಪಲ್ಲವದೇಶದೊಳಿ | ರ್ದುತ್ತಮನೇಮಿಶ್ವರನ ||
ಹತ್ತಿರಕೆಯ್ದಿಸಮವಸರಣವಹೊಕ್ಕು | ಮತ್ತಾಜಿನಪತಿಗೆರಗಿ ||೬||

ತದನಂತರದೊಳುವರದತ್ತಗಣಧರ | ಪದಪದ್ಮಕಳಿಶಿಶುವಾಗಿ ||
ಮುದದಿಂಧರ್ಮನಂದನನುತವಾ್ಮಪೂ | ರ್ವದಭವವನುಬಿಸಗೊಳಲು ||೭||

ಕೇಳವನೀಪತಿಯಿಭರತದೊಳುವಿ | ಶಾಲಮಾದಂಗದೇಶದೊಳು ||
ಭೂಲಲನೆಯಮುಖದಂತೆರಂಜಿಸುವಶಂ | ಡಾಲವೆಸರನಗರಿಯೊಳು ||೮||

ಸೋಮಕುಲೋದ್ಭವಘನರಥನೃಪಗೆಮ | ಹಾಮಂತ್ರಿಸೋಮನೆಂಬವಗೆ ||
ಸೋಮೆಗೆಜನಿಸಿದರಾಸೋಮದತ್ತನು | ಸೋಮಿಲನಾಸೋಮಭೂತಿ ||೯||

ಬಳೆದುಜವ್ವನವೇರಲಾನಿಜಜನಕನು | ಬಳಿಕತನ್ನಾಮ್ಮೆಯುದುನನು ||
ಲಲಿತಾಂಗನಗ್ನಿಭೂತಿಗೆಯಗ್ನಿಲೆಯೆಂಬ | ಲಲನೆಗೆಭಂಜನಿಯಿಸಿದ ||೧೦||

ಭೂನುತಹೇಮಶ್ರೀಮಿತ್ರಶ್ರೀ | ಯಾನಾಗಶ್ರೀಯೆಂಬ ||
ಮಾನಿನಿಯರನಾಮೂವರುತನುಜರ್ಗೆ | ಸಾನುರಾಗದಿಶಂದುಕೊಟ್ಟು ||೧೧||

ಉರುಮುದದಿಂದಿರಲಾವೂರಬನಕೋರ್ವ | ವರಮುನಿಬರೆಕೇಳುತವೆ ||
ಧರಣಿಪಮೇಘರಥನುಸೋಮಮಂತ್ರೀಶ | ವೆರಸಿತಾನಾಬಳಿಗೆಯ್ದಿ ||೧೨||

ವಿಮಲಮಪ್ಪಾಧರ್ಮವಕೇಳಿನಿಜಸುತ | ವಿಮಲವಾಹನಗೆಪಟ್ಟವನು ||
ಮಮತೆಯಿಂದವೆಕಟ್ಟಿಸೋಮಸಚಿವಗೂಡಿ | ಯಮಲದೀಕ್ಷೆಯನಾಂತನಿತ್ತ ||೧೩

ಆಮಂಡಳಿಕವಿಮಲವಾಹನಗಾ | ಸೋಮದತ್ತನುಸೋಮಿಲನು ||
ಸೋಮಭೂತಿಗಳುಮೂವರುತನ್ನ ವಿಶ್ವಾಸ | ಭೂಮಿಗಳಾಗಿರುತಿರಲು ||೧೪||

ಅಸುರಾಗದಿಂದವಿಮಲವಾಹನನೊಂದು | ದಿಸದವಸಂತಮಾಸದೊಳು ||
ವನಕೆಪೋಗಲುಸೋಮದತ್ತಮಹಾಮಂತ್ರಿ | ತನಗೊಂದುಕಾರ್ಯಕಾರಣದಿ ||
ಮನೆಯೊಳುಳಿದುಸೋಮಿಲಸೋಮಭೂತಿಯೆಂ | ಬನುಜರೀರ್ವರುಕೂಡಿತನ್ನ ||
ವನಿತೆಧನಶ್ರೀಯಾಸೋಮಿಲನಂ | ಗನೆವಿತ್ರಶ್ರೀಯರನು ||೧೬||

ಕಳುಹಿದೊಡಿತ್ತಕಿರಿಯಸೋಮಭೂತಿಯು | ಲಲನೆನಾಗಶ್ರೀತನ್ನ ||
ವಿಲಸಿತಮಪ್ಪಶೃಂಗಾರಕೆಸಲವಾಗಿ | ತಳುಮಾಡಲಾಸಮಯದೊಳು ||೧೭||

ಮಾಸೋಪವಾಸದಪಾರಣೆಗೆಂದೋರ್ವ | ನಾಸಂಯಮಿನಡೆತರಲು ||
ಆಸೋಮದತ್ತನವರನುನಿಲಿಸಿನಿಜ | ವಾಸಕೆತಂದುಕುಳ್ಳಿರಿಸೆ ||೧೮||

ಆಗಲವನಿಪಾಲನಚರರೆಯ್ತಂದು | ಬೇಗದಿಕರೆಯಲುಬೆದರಿ ||
ನಾಗಶ್ರೀಯೆಂಬನಾದುನಿಗೆಂದನೀ | ನೀಗಳಿವರ್ಗೆಭಿಕ್ಷೆಯನು ||೧೯||

ಹಸನಾಗಿಯನುನಯದಿಂಮಾಡಿಸೆಸುತತಾ | ನಸವಸದಿಂಪೋಗಲಿತ್ತ ||
ಒಸೆದುನಾನುನಂದನಕೆಪೋಪುದನುಮಾ | ಣಿಸಬಂದನೀಪಾಪಿಯೆಂದು ||೨೦||

ಮುನಿಸಿಂದುರಿದುವಿಷನುವಿಷಭಕ್ಷ್ಯಮು | ನನುಮಾಡಿಬಡ್ಡಿಸಲಾಗ ||
ಮುನಿಪನವನುಮೆದ್ದುಸತ್ಕಮುಕ್ಕಿಯನೆರೆ | ಮನೆಯೊಳುಜನಿಸಿದನಿತ್ತ ||೨೧||

ಸೋಮದತ್ತನುತನ್ನ ನಾದುನಿಯೆಸಗಿದು | ದ್ದಾಮಪಾತಕಕಿರದಳ್ಕಿ ||
ಸೋಮಿಲಸೋಮಭೂತಿಯಕೂಡಿಕೊಂಡುಸು | ಪ್ರೇಮದಿತಪಪತಾಳಿದನು ||೨೨||

ಪದೆದುಧನಶ್ರೀಮಿತ್ರಶ್ರೀಯೆಂಬ | ಸುದತಿಯರಾದೀಕ್ಷೆಯನು ||
ಒದಪಿಸಿಯವರೊಳುತಪಗೆಯ್ದೊಗೆದರು | ಪದಿನಾರನೆಯಸಗ್ಗದೊಳು ||೨೩||

ಸೋಮದತ್ತಚರದಿವಿಜನುಮೊದಲಾದ | ತಾಮೈವರುಸಗ್ಗಿಗರು ||
ಪ್ರೇಮದಿಕೂಡಿಸುಖದೊಳಿರಲಿತ್ತಲು | ಭೂಮಿಪವಿಮಲವಾಹನನು ||೨೪||

ಯತಿಯಸುಹತಿಸಿದಳೀಪಾತಕಿಯೆಂ | ದತಿಕೋಪದಿನಾಜ್ಞೆಗೆಯ್ಸಿ ||
ಕೃತಕಿನಾಗಶ್ರೀಸತ್ಕೃದನೆಯು | ನ್ನತಿಕೆಯದುಃಖಮನೀವ ||೨೫||

ನರಕಭೂಮಿಯಲಿಸಂಜನಿಯಿಸಿಪದಿನೇಳು | ವರಸಾಗರೋಪಮಕಾಲ ||
ನಿರುತದಿಬದುಕಿಮತ್ತಲ್ಲಿಂದಳಿದೀ | ಯುರುತರತಿರ್ಯ್ಯಗ್ಗತಿಯೊಳು ||೨೬||

ನಾನಾರೂಪಸಂತಾನದೊಳೊಗೆದುಮ | ತ್ತೀನಾನುಕರ್ಮೋಪಶಮದಿ ||
ಈನೆಲದಂಗದೇಶದನಡುವಣಚಂ | ಪಾನಗರೀವರದಲ್ಲಿ ||೨೭||

ಮಾತಂಗಿಯಾಗಿಜನಿಸಿಕರ್ಮವಶದಿಂ | ದಾತಂದೆತಾಯಿಗಳಳಿಯೆ ||
ಪ್ರೀತಿಯಿಂದರಕ್ಷಿಪರಿಲ್ಲದೆತಾ | ನೇತಿರಿದುಂಡುಜೀವಿಸುತ ||೨೮||

ಒಂದುದಿವಸದೊಳವಧಿಬೋಧಮುನಿಗಳು | ಬಂದಿರಲಾಪುರದರಸು ||
ವಂದಿಸಿಸುವ್ರತವನುಕೊಂಡುಪೋಗಲಾ | ಅಂದಮುನರಿದುಮಾತಂಗಿ ||೨೯||

ತಾನಾಮುನಿಕುಲತಿಲಕನಲ್ಲಿಗೆಬಂ | ದಾನತಿಯಾಗಿಕೈಮುಗಿದು ||
ಅನೃಪತಿಗೆಕೊಟ್ಪಂತಪ್ಪವರನೀ | ವಾಸದೆನನಗೀವುದೆನಲು ||೩೦||

ಮುನಿಪತಿಮಧುಮಾಂಸನಿನಗೆಬೇಡೆಂದತಿ | ವಿನಯದಿಕೊಡಲುಮಾತಂಗಿ ||
ಮನದೆಗೊಂಡುಧರಿಸಿಯದನಿಳಿಪದೇ | ತನುಭಾರವಪರಿಹರಿಸಿ ||೩೧||

ಪರಿರಂಜಿಪಾಪುರದೊಳುಬಂಧುವೆಂಬೋರ್ವ | ಪರದಗೆಧನದೆಯೆಂಬೋರ್ವ ||
ತರುಣಿಗೆತಚ್ಚಾಂಡಾಲಿತನುಜೆಯಾಗಿ | ಧರಿಯಿಸಿಸುಕುಮಾರಿವೆಸರ ||೩೨||

ಪಿರಿದಪ್ಪದುರ್ಗಂಧಯುತೆಯಾಗಿರಲಾ | ಪುರದೊಳುಧನದೇವನೆಂಬ ||
ಪರದಗಾತನನಿಜಸುದತಿಯಶೋದತ್ತೆ | ಗುರುತರರೂಪವನಾಂತ ||೩೩||

ಜಿನದೇವಜಿನದತ್ತರೆಂಬತನುಜರಾಗೆ | ಯನುರಾಗದಿನಾಜನಕ ||
ಜಿನದೇವಗೆಯಾಸುಕುಮಾರಿಯತರ | ಲನುಗೆಯ್ಯಲವಳಂಗದೊಳು ||೩೪||

ಪಿರಿದಪ್ಪದುರ್ಗಂಧಕೆಪೇಸಿಜಿನದೇವ | ನಿರದಾಂತುನಿರ್ವೇಗವನು ||
ಉರುತರಮಪ್ಪುತ್ತಮದೀಕ್ಷೆಯನಾ | ದರದಿಂಕೈಕೊಂಡನಿತ್ತ ||೩೫||

ಜಿನದತ್ತಗಾಸುಕುಮಾರಿಯತರಲಾ | ವನಿತೆಯದುರ್ಗಂಧಕಿರದೆ ||
ಘನಮಾಗಿಹೇಸಿಮತ್ತವನಾಕೆಯಮ್ಮೈಯ | ಕನಸಿನೊಳಗುಮುಟ್ಟದಿರಲು ||೩೬||

ಅತಿಲಜ್ಜಿತೆಯಾಗಿರಲೊಂದುದಿವಸಸು | ವ್ರತದಿಂಒಯತಿಪತಿಬರಲು ||
ನತೆಯಾಗಿಕರವಮುಗಿದುತನ್ನ ಭವಸಂ | ತತಿಯನುಬೆಸಗೊಂಡುತಿಳಿದು ||೩೭||

ನಾಗಶ್ರೀತಾನಾದಂದುನಿಜಪತಿ | ಯಾಗಿದರ್ಹಾಸೋಮಭೂತಿ ||
ರಾಗದಿನಚ್ಯುತಕಲ್ಪದೊಳಿರ್ದುದ | ನಾಗಲರಿದೆಯತಿಯಿಂದ ||೩೮||

ಮನಮಿಟ್ಟವಗೆಮುದದಿಜಿನದೀಕ್ಷೆಯ | ನನುಮಾನಿಸದೆಕೊಂಡುಬಳಿಕ ||
ತನುವಸುಳಿದುಸೋಮಭೂತಿಚರರಾಮರ | ಗಿನಿಯಳಾಗಿಸಂಜನಿಸಿ ||೩೯||

ಪ್ರೇಮದಿನಿರೆಸೋಮದತ್ತಸೋಮಿಲನಾ | ಸೋಮಭೂತಿಚರರಾಮರರು ||
ಹೇಮಶ್ರೀಮಿತ್ರಶ್ರೀಚರರಿನು | ತಾಮರರೈವರಲ್ಲಿಂದ ||೪೦||

ತನುವಪಿಡಂಬಿಸಿಯಾಪಾಂಡುರಾಜಗೆ | ತನುಜರಾದವರುನೀವೀಗ ||
ಜನನುತೆಯಾಸುಕುಮಾರಿಚರರಾಮರಿ | ಯನುರಾಗದಿಂಫಲ್ಗುನಗೆ ||೪೧||

ನಲ್ಲಳುಪಾಂಚಾಳಿಯಾದಳೆಂದಾಮುನಿ | ವಲ್ಲಭಸೂರೆಯಲುಕೇಳಿ ||
ಬಲ್ಲಿದಪಾಂಡವರರಸುಮಕ್ಕಳುಗೂಡಿ | ನಿಲ್ಲದೆನಿರ್ವೇಗದಿಂದ ||೪೨||

ಸದಮಲಸುಯಮವಡೆಯೆಜನನಿಕೊಂತಿ | ಚದುರೆಪಾಂಚಾಳಿಸುಭದ್ರೆ ||
ಮೊದಲಾದಪಾಂಡವರಬಲೆಯರೆಲ್ಲರು | ಪದುಳದಿದೀಕ್ಷೆವಡೆದರು ||೪೩||

ಇಂತುಪಾಂಡವರೈವರುದೀಕ್ಷೆವಡೆದ | ತ್ಯಂತಾಚಾರದಿನೆಗಳಿ ||
ಅಂತರಂಗಶುದ್ಧರಾಗಿಯವಧಿಬೋಧ | ಮಂತಾಳಿಬಳಿಕೊಂದುಪಗಲು ||೪೪||

ನೇತ್ರಕ್ಷ್ಯಸಂದಮನಿರದೀವಾ | ಶತ್ರುಂಜಯವೆಸರಾಂತ ||
ಧಾತ್ರೀಧರಮನಡರಿಯಾಲೋಕಪ | ವಿತ್ರರುಕೈಯಿಕ್ಕೆಸಿಲಲು ||೪೫||

ಅದನರಿದಾಕೌರವನಮೊಮ್ಮಗನಪ್ಪ | ಮದಯುತನಾಕುಯವರನು ||
ಬೆದರದೆಘೋರದುರಿತವೀರಭಟನುರೆ | ಪದಪಿಂದಲ್ಲಿಗೆಯ್ತಂದು ||೪೬||

ಕಂಡುಮುನಿದುಸಮ್ಮಪಿತರುಪಿತಾಮಹ | ಮಂಡಳಿಯೆಲ್ಲವನಿರದೆ ||
ಚಂಡಕೋಪದಿನೆಲದೊಳಗೆನೆರಪಿಯು | ದ್ದಂಡಶನದಿಭೂತಳಕೆ ||೪೭||

ಅರಸುಗಳಾಗಿಬತ್ತಲೆಯಿರ್ದುದುಚಿತವೆ | ಸುರುಚಿರಮಪ್ಪಭೂಷಣವ ||
ಧರಿಯಿಸಿನೀಮೆಂದುಕರ್ಬೊನ್ನಿನಿಂದಾ | ಭರಣಗಳನುಹಸಗೆಯ್ಸಿ ||೪೮||

ಮತ್ತವನುರಿಗೆಂಡದಿಂಬಿಸಿಮಾಡಿಸಿ | ತತ್ತತ್ಸ್ಥಾನಕೆತೊಡಿಸಿ ||
ಉತ್ತಮರಿಗೆಸಿಹ್ಮಪೀಠಬೇಕೆಂದುಕ | ರುತ್ತುಲೋಹದಗದ್ದುಗೆಯನು ||೪೯||

ಪರಿದಳುರ್ವಂದದಿಕಾಸಿಮತ್ತಲ್ಲಿಕು | ಳ್ಳಿರಿಸಿಕಾಸಿದಕಾಂಡನದ ||
ಉರುತರಮಪ್ಪಪಟ್ಟವನೊಸಲೊಳುಕಟ್ಟಿ | ಕರಗಿದಲೋಹದರಸನ ||೫೦||

ಪರನಿರ್ವಾಣರಾಜ್ಯಾಭಿಷೇಕವಮಾಳ್ಪ । ಪರಿಯೆನೆಮಜ್ಜನಗೆಯ್ಸಿ ॥
ಧರೆಯೆಲ್ಲಬೆದರುವಂದದಿನುಪಸರ್ಗಮ । ದುರುಳನವನುಮಾಡುತಿರಲು ॥೫೧॥

ಉರಿಯುಪಸರ್ಗನೊಳುಪಶಾಂತರಸವೂರ । ವರಮುನಿತನುಗಳೊಪ್ಪಿದುವು ॥
ಅರುಣಾಂಭೋಜಕುಸುಮತೀವಿದಸರ । ಸೀರುಹಾಕರದಂದದೊಳು ॥೫೨॥

ಅತಿಶಾಂತತೆಯಿನಿಂತಿಪ್ಪಧರ್ಮಜವಾಯು । ಸುತಫಲುಗುನಮುನಿವರರ್ಗೆ ॥
ಅತಿಶಯಮಪ್ಪಶುಕ್ಲಧ್ಯಾನವಿರದುತು । ಪತಿಯಾಯಿತತಿವೇಗದೊಳು ॥೫೩॥

ಅನಿತರೊಳಮರದುಂದುಭಿಮೊಳಗಲುಸಿಹ್ಮ । ನಿನದವಕ್ಕೇಳ್ದಭದಂತೆ ॥
ಘನಮಾಗಿಬೆದರಿಕಾಲ್ದೆಗೆದೋಡಿದನುದು । ರ್ಜನಕುಯವರಬಳಿಕಿತ್ತ ॥೫೪॥

ಅನಿಮಿಷಲೋಕವೆಲ್ಲವುಕೂಡಿಬಂದತಿ । ವಿನಯದಿಂದವರಕೊಂಡಾಡಿ ॥
ಘನತರಮಾಗಿಪೂಜಿಸಿಪಲತುತಿಗೆಯ್ದು । ವಿನತರಾಗಿಪೋದರಿತ್ತ ॥೫೫॥

ಒರ್ವೊದಲೊಳುಕೌಂತೇಯರುಮೂವರು । ಕರ್ಮಸಂತಾನಮೆಲ್ಲವನು ॥
ನಿರ್ಮೂಲನಮಾಡಿಯೊಡನೆಕೂಡಿದರಾ । ನಿರ್ಮಲಮಪ್ಪಮುಕ್ತಿಯನು ॥೫೬॥

ಮತ್ತೆನಕುಲಸಹದೇವಮುನೀಂದ್ರರು । ಚಿತ್ತಶುದ್ಧಿಯೊಳಂಗವಳಿದು ॥
ಉತ್ತಮಮಪ್ಪಸರ್ವಾರ್ಥಸಿದ್ಧಿಯೊಳು । ತ್ಪತ್ತಿಯಾದರುಧರೆಪೊಗಳೆ ॥೫೭॥

ಶ್ರೀಮದಮರಪತಿಮಕುಟರಂಚಿತರತ್ನ । ಧಾಮಾಂಘ್ರಿಯುಗಪಂಕಜಾತ ॥
ಸೋಮಾರ್ಕಕೋಟಿಕಿರಣಸಂಕಾಶನು । ದ್ದಾಮನೇಮಿತೀರ್ಥಕರನು ॥೫೮॥

ವಿಲಸಿತಮಪ್ಪಮುಕ್ಕೊಡೆಸಿಹ್ಮಪೀಠವೂ । ಮಳೆಭಾವಳಯವಶೋಕ ॥
ಮೊಳಗುವದೇವದುಂದುಭಿದಿವ್ಯಭಾಷೆಕಂ । ಗೊಳಿಪಚಾಮರಮೊಪ್ಪುತಿರಲು॥೫೯॥

ವರದತ್ತಗಣಧರರುಗಳಾದಿಯಗಣ । ಧರರೇಕಾದಶಸಂಖೆಯೆ ॥
ನಿರುಪಮರುಗಳುಚತುಶ್ಶತಮಾಪೂರ್ವ । ಧರರುವಿರಾಜಿಸುತಿರಲು ॥೬೦॥

ಭಾಸುರತರಮಪ್ಪಶಿಕ್ಷಕರೆರಡರು । ಸಾಸಿರಮವಧಿಬೋಧಕರು ॥
ಸಾಸಿರದೈವತ್ತುಮತಾತ್ಮಲೆಕ್ಕದ । ಭಾಸುರನುತಕೇವಲಿಗಳು ॥೬೧॥

ಉರುವಿಕ್ರಿಯಋದ್ಧಿಸಂಪನ್ನರುಸಾ । ಸಿರದನೂರ್ವರುರಂಜಿಸಲು ॥
ಸರಸಮನಃಪರ್ಯಾಯಜ್ಞಾನಿಗ । ಳಿರಲೊಂಬೈನೂರ್ವರುಗಳು ॥೬೨॥

ಮತ್ತೆಧಾತ್ರೀಮತಿಗಳುಮೊದಲಾದನಾ । ಲ್ವತ್ತುಸಾಸಿರಕಂತಿಕೆಯರು ॥
ಉತ್ತಮರೇಕಲಕ್ಷಶ್ರಾವಕರುಶ್ರಾವ । ಕಿತ್ತಿಯರಾಮೂರುಲಕ್ಷ ॥೬೩॥

ಇನಿನಾಲ್ಕು ತೆರದವರರುಲೆಕ್ಕವಿಲ್ಲದ | ತಿರ್ಯಗ್ಜಾತಿನಿಕಾಯ ||
ಬೆರಸುದ್ವಾದಶಗಣಕ್ಕೆಯವೋಘವಾ | ಕ್ಸರುಚಿರಸುಧೆಯುಮಳಿಯನು ||೬೪||

ಅತಿಶಯುಮಪ್ಪಭವ್ಯಕ್ಷೇತ್ರಜೊಳು | ನ್ನತಿಕೆಯಿಂಕರೆವುತವಿರ್ದು ||
ಶತಮಖಶತವಂದಿತಪೂಜ್ಯನಾಜಿನ | ಪತಿತಂಗಳಾಯುಷ್ಯಮುರಲು ||೬೫||

ವರ್ಜಿಸಿಯಾಸನುವಸೃತಿಯುಸುಭೂಮಿ | ಗೂರ್ಜಿತವಾಗಿರಂಜಿಸುವ ||
ಊರ್ಜಯಂತಪರ್ವತದಲ್ಲಿ ಸೊಗಯಿಪ | ನಿರ್ಜಂತುಕಪ್ರದೇಶದೊಳು ||೬೬||

ತನ್ನೊಡನೈನೂರಮೂವತ್ತಸಂಖ್ಯೆಯ | ಮನ್ನಣೆಯೋಗಿಗಳಿರಲು ||
ಸನ್ನುತನಾಷಾಢಶುದ್ಧಸಪ್ತಮಿಯಾ | ನುನ್ನೀಸರಹೊತ್ತಿನೊಳು ||೬೭||

ವಾಸವದಿಜ್ಮುಖವಾಗುತಪಲ್ಯಂ | ಕಾಸನಸುದಿತಯೋಗದೊಳು ||
ಓಸರಿಸದೆಕುಳ್ಳಿರ್ದುಮುಕುತಿಯೆಂ | ಬಾಸತಿಯೊಳುಮನವಿಟ್ಟ ||೬೮||

ಪ್ಪಣುತೋದ್ದಂಡಕವಾಟಭುವನವೂ | ರಣಜೆಂಬಸದ್ವಿಧಿಯಿಂದ ||
ಗಣನೆಯಿಲ್ಲದಘಾತಿಕರ್ಮವೆಲ್ಲವನಾ | ಕ್ಷಣದೊಳುನಿರ್ಮೂಲಮಾಡಿ ||೬೯||

ಸುರುಚಿರತರತನುವಾಮಂಜಿಸಂದವಿ | ಹಯಿಮಲಮೃತಸಲ್ಲಭೆಯು ||
ನಿರುತಮನಂತಚತುಷ್ಟಯಾತ್ಮಕನೊಡ | ವೆರೆದನುನೇಮಿಜಿನೇಶ ||೭೦||

ಭೂರಿನಿರ್ಜರಲೋಕವಿರಮೊಡವರಲಾ | ಚಾರುನಿರ್ವಾಣಪೂಜೆಯನು ||
ಪೂರಿಸಿದನುಶಕ್ರನಾಜಿನಸುಮತ | ಕ್ಷೀರವಾರಾಶಿಚಂದ್ರಮನು ||೭೧||

ಶ್ರೀರಮಣೇಪತಿಭಕ್ತವಿಜಯಭೂ | ನಾರೀಧವನಗ್ರಸೂನು ||
ಧೀರಮಂಗರಸನೊರೆದನಾಸುಮತ | ಕ್ಷೀರವಾರಾಶಿಚಂದ್ರಮನು ||೭೨||

ಧಾರಿಣಿಯೊಳುಮೆರೆವಂತೆನೇಮಿನಾಶನ | ಚಾರುಚರಿತವಚೆನ್ನಾಗಿ ||
ಪೂರಿಸಿದನುಮಂಗರಸನುಜಿನಸುಮತ | ಕ್ಷೀರವಾರಾಶಿಚಂದ್ರಮನು ||೭೩||

ಚಾರುಚರಿತ್ರಸುಚಕ್ರಪ್ರಭೇಂದ್ರವ | ಕಾರುಣ್ಯದಶಿಷ್ಯನಾಗಿ ||
ಧೀರಮಂಗರಸನೊರೆದನಿದನುಸುಮತ | ಕ್ಷೀರವಾರಾಶಿಚಂದ್ರಮನು ||೭೪||

ಅಕ್ಷಯಚರಮಶುಕ್ಲಧ್ಯಾನದಿಕರ್ಮ | ದಕ್ಕೊಳ್ಪೀಹಣಿಯನೆರೆಗೆಲಿದು ||
ಅಕ್ಷಯಮೋಕ್ಷಪತ್ತನವಸೂರೆಯುಗೊಂಡ | ನಕ್ಷಯಾತ್ಮಕನೇಮಿಜಿನನು ||೭೫||

ಊರ್ಜಯಸರ್ವಭವ್ಯರಿಗಾಗೀವರ್ಣಿ | ಸರ್ವಭವ್ಯರಿಗತಿಮುದನಿಂ ||
ಸರ್ವಸುಖಾತ್ಮಕವೆನಿಸುವಶೀಶುದ್ಧ | ನಿರ್ವಾಣಪದವಿಯನೀಗೆ ||೭೬||

ಇಂತಿದಸೋದುವಪೇಳ ವಕೇ[illegible] ಸುಂತಿಜನೆನಜನಗಳು ||
ಮುಂತೆಪಡೆವರ್ಹಂದೇಂದ್ರಪದವಮುಕ್ತಿ | ಕಾಂತೆಗೆಪ್ಪಲ್ಲಭರಹರು ||೭೭||
ಇದುಜಿನಪದಸರಸಿಜಮದಮಧುಕರ | ಜದುರಮಂಗರಸರಚಿಸಿದ ||
ಮದನಾರಿನೇಮಿಜಿನೇಶಸಂಗತಿಯೊಳ | ಗಿದುಮೂವತ್ತೈದಾಶ್ವಾಸ ||೭೮||

ಮೂವತ್ತೈದನೆಯ ಸಂಧಿ ಸಂಪೂರ್ಣಂ

ಇಂತು ನೇಮಿಜಿನೇಶ ಸಂಗತಿಯು
ಸಮಾಪ್ತವಾದುದು.

ಶುದ್ಧಾಶುದ್ಧಪತ್ರಿಕೆ

(ಕಥಾಸಾರಾಂಶದಲ್ಲಿ)

ಪುಟ	ಪಙ್ತಿ	ಅಶುದ್ಧ	ಶುದ್ಧ
5	15	ಹಣ್ಣಸು	ಹಣ್ಣನ್ನು
7	18	ಹೊಕ್ಕಿ	ಹೊಕ್ಕು
37	16	ಕೆಳಿ	ಕೇಳಿ
38	9	ಹೊಕ್ಕೆನು	ಹೊಗೆನು
71	26	ಶಾರ್ಙ್	ಶಾರ್ಙ
82	19	ಮನಥೋದಯ	ಮನ್ಮಥೋದಯ
83	27	ಸಮಾಧಾನಪಡಿಸಿ	ಸಮಾಧಾನಪಟ್ಟು
85	12	ಖಚಿತವಾಗಿರಲ	ಖಚಿತವಾಗಿರಲು
10೪	9	ತೆರೆದ	ತೆರದ
,,	16	ಮೇಲಿಸಿ	ಮೇಲಿರಿಸಿ
116	26	ಇಚ್ಛಾಪುರರವನ್ನು	ಇಚ್ಛಾಪುರವನ್ನು
144	28	ಬಿಲ್ಲುಗಳು	ಅಂಬುಗಳು
166	8	ಹೇಸಿಸುತ್ತಿದ್ದ	ಹೇಸುತ್ತಿದ್ದ

(ಮೂಲಗ್ರಂಥದಲ್ಲಿ)

ಪುಟ	ಪದ್ಯ	ಅಶುದ್ಧ	ಶುದ್ಧ
6	56	ವತ್ಸಕಾವತಿವಿಷಯ	ವತ್ಸಕಾವತೀವಿಷಯ
9	86	ಲಾಶಾತ್ರಶ	ಲಾಶಾತ್ರಸೆ
14	49	ಬೆ | ಬೆಳ್ಳಿರಲೆಗೆ	ಬೆ | ಳ್ಳಿರಲೆಗೆ
18	98	ಕಾಯ್ಗಳನು	ಕಾಯ್ಗಳನು
19	108	ಹಸುವಿಂದ	ಹಸುವಿಂದ
22	15	ದಮಳು	ದಮಳ
,,	21	ಅದರ	ಅದರ
28	96	ದೇವಿಯ | ಮುಟ್ಟಿದ	ದೇವಿಗೆ | ಪುಟ್ಟಿದ

ಪುಟ	ಪದ್ಯ	ಅಶುದ್ಧ	ಶುದ್ಧ
49	16	ನಲವಿಂದತಿ	ನಲವಿಂರತಿ
58	67	ಉಡಲಿಲ್ಲು ಣವಿಲ್ಲದ	ಉಡಲಿಲ್ಲುಣಲಿಲ್ಲದ
64	18	ಕೂರಸಿಗಳನೆದೆಗೆಡರು	ಕೂರಸಿಗಳಿನೆದೆಗೆಡರು
65	29	ಗೀಡಾದುದಿಲ್ಲ	ಗೀಡಾದುದೆಲ್ಲ
67	57	ಸ್ಥಿತಿಗಳಸುವನಲ್ಲ	ಸ್ಥಿತಿಗೆಳಸುವನಲ್ಲ
71	103	ನೆಲ್ಲರರಿಯು	ನೆಲ್ಲರರಿಯೆ
72	118	ಯೊಂದಿದುದತಿ	ಯೊಂದಿದನತಿ
73	137	ವಂದಕೆ	ಮುಂದಕೆ
74	143	ಕರುಹದಿ	ಹರುಷದಿ
,,	149	ಜಿತಶ್ರುಭೂವರ	ಜಿತಶತ್ರುಭೂವರ
86	43	ಯುದಿಯದತೆರ	ಯುದಯಿಪತೆರ
97	182	ಹದಗೊಡೆದಾ	ಹಡಗೊಡೆದಾ
114	55	ನಮುಗಿದೆಂದೆನುತ	ನಮಗಿದೆಂದೆನುತ
115	74	ತಲಪುವಂಟ್ಟಿ	ತಲವಮುಟ್ಟಿ
124	81	ಬೀರಿತೋಡಿತು	ಬಿರಿತೋಡಿತು
126	109	ಪತೃ	ಪಿತೃ
128	4	ಸ | ಲ್ಲಲಲಿತಾಂಗ	ಸ | ಲ್ಲಲಿತಾಂಗ
131	44	ಆವನ	ಅವನ
133	70	ದೊಳಗಡೆಯಾಡುವರು	ದೊಳಗೆಡೆಯಾಡುವರು
135	90	ನಂದನೆಗಡುವಲಿ	ನಂದನೆಗುಡುವಲಿ
136	9	ಮದೆಂಪೇತ	ಮದೋಪೇತ
,,	11	ವಿಸ್ಮುತ	ವಿಶ್ರುತ
138	28	ಮುಕ್ತಡೆಡೆಗೆಯ್ದಿ	ಮುಕ್ತರೆಡೆಗೆಯ್ದಿ
145	128	ವರದ	ಪರದ
154	92	ಕೂಡದೊಳಗಣ	ಕೊಡದೊಳಗಣ
156	119	ಬಿಗಿಒಗಿಯಪ್ಪಿ	ಬಿಗಿಬಿಗಿಯಪ್ಪಿ
161	30	ದುರಳಿಸಿ	ದುರುಳಿಸಿ

ಪುಟ	ಪದ್ಯ	ಅಶುದ್ಧ	ಶುದ್ಧ
162	39	ಪೂತಚಿನಮಂದಿರ	ಪೂತಚಿನಮಂದಿತ
164	68	ಒಂದಾಕಂಸಗೆ	ಬಂದಾಕಂಸಗೆ
175	61	ದೊಳಿರುತಲು	ದೊಳಿರುತಿರಲು
186	66	ಬೋರೈಸುವ	ತೋರೈಸುವ
187	78	ಭಾವವೊಳು	ಭಾವದೊಳು
191	28	ದಿಂದೆಯ್ದುಲಿತ್ತ	ದಿಂದೆಯ್ದುಲಿತ್ತ
192	47	ಯೆನಳವಳಿಂತೆಂದ	ಯೆನಲವಳಿಂತೆಂದ
205	217	ನಾನೆನಲಾ	ನಿವನೆನಲಾ
214	97	ಪ್ರೇಮರಸುತ	ಪ್ರೇಮದಸುತ
216	127	ಮರಳಾಗಿ	ಮರುಳಾಗಿ
219	14	ಪೃಧ್ವಿ	ಪೃಥ್ವಿ
219	23	ಅನನಯದಿಂ	ಅನುನಯದಿಂ
220	37	ಸದಮುಲತರ	ಸದಮಲತರ
228	5	ಶೌಂದರ್ಯ	ಸೌಂದರ್ಯ
231	48	ರತ್ನ ಕುಂಟದೊಳು	ರತ್ನ ಕೂಟದೊಳು
232	58	ರೊಪ್ಪಿದಳವಳ್ಗೆ	ರೊಪ್ಪಿದರವಳ್ಗೆ
234	78	ವಯೋಧರೆ.	ಪಯೋಧರೆ
240	158	ಸುರಸೋರಗೆ	ಸುರರೋರಗೆ
,,	166	ನಿರುಪವಬೋಧ	ನಿರುಪಮಬೋಧ
241	5	ಅನುರಾದಿಂದೀ	ಅನುರಾಗದಿಂದೀ
,,	11	ನೃಪ	ಕೃಪ
243	35	ಒಳಿಕ	ಬಳಿಕ
244	47	ಎಕ್ಕಮರಸ | ವುಕ್ಕೆವ	ಎಕ್ಕಮರಸ | ದುಕ್ಕೆವ
247	88	ಟಿಟ್ಟುಜಡೆಯು	ಬಿಟ್ಟು ಜಡೆಯು
248	96	ಕೊಡುನೆಂದಿರೆ	ಕೊಡುನೆನೆಂದಿರೆ
253	165	ನಾ | ಡಿಟ್ಟಿದೆರೆದು	ನಾ | ದಿಟ್ಟಿದೆರೆದು
254	169	ಪುಲಮಾನಿಸ	ಪುಲುಮಾನಿಸ

ಪುಟ	ಪದ್ಯ	ಅಶುದ್ಧ	ಶುದ್ಧ
256	206	ಅಸಿಯಳಂಗವ	ಅಸಿಯಳಂಗಕೆ
257	215	ಮು | ಮುಕ್ಕುಗೆರೆಗು	ಮು | ಮುಕ್ಕುಗೆರಗು
258	222	ಭೂನಾಧರನು	ಭೂನಾಥರನು
259	243	ಬಣ್ಣಿಡಟಿಯ	ಬಣ್ಣಿದುಟಿಯ
261	261	ಮಿನುಗುವೆಡೆಗಣ್ಣ	ಮಿನುಗುವೆಡಗಣ್ಣ
264	304	ಭೀಮನರನಾಗ	ಭೀಮನರರಾಗ
268	6	ಸಚಿ | ವರನು	ಸಚಿ | ವರನು
269	17	ಹೊಗಿಸುವವಿದಕೆ	ಹೊಗಿಸುವೆವಿದಕೆ
281	35	ನೆಯ್ದಿನಿತ್ತಲು	ನೆಯ್ದಲಿತ್ತಲು
287	112	ನೆಲೆದಾಣ್ಮ	ನೆಲದಾಣ್ಮ
291	155	ಕರುಸೇನೆ	ಕುರುಸೇನೆ
294	1	ಕೃಷನಮೇಲೆ	ಕೃಷ್ಣನಮೇಲೆ
300	77	ಪಾಂಡರಾಹರಿ	ಪಾಂಡವರಾಹರಿ
307	12	ಧ್ವಜಂಸಿಧುಭೂ |	ಧ್ವಜಸಿಂಧುಭೂ |
310	54	ತುರುಗಗಳು	ತುರಗಗಳು
318	61	ವಾದವನಿಂ	ವಾಡವನಿಂ
362	71	ಕೆಲವೋ	ಕೇಳಿಲವೋ
368	25	ಸುರರೆಲ್ಲವರ್ಗಾಣನಾದ	ಸುರರೆಲ್ಲರ್ಗಾಣ್ಮನಾದ
369	27	ಗಿರಿಗೆಯ್ದು	ಗಿರಿಗೆಯ್ದಿ
379	36	ಅಂಧಂದದಿ	ಅಂಧಳಂದದಿ
385	104	ವವಂತಿವಿಷಯ	ವವಂತೀವಿಷಯ
393	79	ಕೆಟ್ಟೆವಿನ್ನೆವ್ವೆ	ಕೆಟ್ಟೆವಿನ್ನೇವೆ